ಕನ್ನಡ ವಕ್ರೋಕ್ತಿ ಜೀವಿತ



ಡಾ. ಆರ್. ಲಕ್ಷ್ಮೀನಾರಾಯಣ

ಕನ್ನಡ ವಕ್ರೋಕ್ತಿ ಜೀವಿತ

೨೦೦೪ರ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

ಹಾಗೂ

೨೦೦೭ರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ

"ಸುವರ್ಣ ಕರ್ನಾಟಕ ಆಚರಣೆಯ ಸಂದರ್ಭದಲ್ಲಿ
ಸಾರ್ವಜನಿಕ ಗ್ರಂಥಾಲಯ ಇಲಾಖೆಯ ವಿಶೇಷ ಯೋಜನೆಯಡಿ
ಖರೀದಿಸಿದ ಪುಸ್ತಕ"

ಡಾ. ಆರ್. ಲಕ್ಷ್ಮೀನಾರಾಯಣ

ಸಂವಹನ

12/1A, ಈವನಿಂಗ್ ಬಜಾರ್ ಹಿಂಭಾಗ
ಶಿವರಾಂಪೇಟೆ, ಮೈಸೂರು - 570 001

KANNADA VAKROKTI JIVITA - (Kannada Translation of Kuntaka's Vakrokti Jivita) by Dr. R. Laxminarayana, Joint Director, Department of Collegiate Education, (Rtd.) Govt. of Karnataka ; Published by Samvahana, 12/1A, Behind Evening Bazaar, Shivarampet, Mysore - 570 001.

Pages : xxxx+460

ಪ್ರಥಮ ಆವೃತ್ತಿ : ೨೦೦೪

ದ್ವಿತೀಯ ಪರಿಷ್ಕೃತ ಆವೃತ್ತಿ : ೨೦೦೬

ತೃತೀಯ ಆವೃತ್ತಿ : ೨೦೧೦

Price : Rs. 375/-

ಬೆಲೆ : ಮುನ್ನೂರ ಎಪ್ಪತ್ತೈದು ರೂಪಾಯಿ ಮಾತ್ರ

ಮುಖಪುಟ ವಿನ್ಯಾಸ : ಶ್ರೀ ರಫೀಕ್ ಉಪ್ಪಿನಂಗಡಿ

ಮುದ್ರಕರು :
ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್
೧೨/೧, ಈವನಿಂಗ್ ಬಜಾರ್ ಹಿಂಭಾಗ
ಶಿವರಾಂಪೇಟೆ, ಮೈಸೂರು - ೫೭೦ ೦೦೧
ದೂರವಾಣಿ : ೨೪೭೬೦೧೯

ಅರ್ಪಣೆ

ಕಾಳಿದಾಸ, ಭಾಸ, ಭವಭೂತಿ, ಹರ್ಷ, ಹಾಲ ಮೊದಲಾದ ಖ್ಯಾತ
ಸಂಸ್ಕೃತ ಹಾಗೂ ಪ್ರಾಕೃತ ಕವಿಗಳ ಸಮಗ್ರ ಕೃತಿಗಳನ್ನು
ಕನ್ನಡಕ್ಕೆ ತರುವುದರ ಮೂಲಕ ಕನ್ನಡವನ್ನು
ಶ್ರೀಮಂತಗೊಳಿಸಿರುವ ನನ್ನ ವಿದ್ಯಾಗುರುಗಳು

ಡಾ. ಎಸ್. ವಿ. ಪರಮೇಶ್ವರಭಟ್ಟರು

ಹಾಗೂ

ಸಂಸ್ಕೃತ ಅಲಂಕಾರಶಾಸ್ತ್ರದ ಉದ್ಧಕೃತಿಗಳನ್ನು ಕನ್ನಡಕ್ಕೆ ತರುವುದರ
ಮೂಲಕ ಕನ್ನಡ ಕಾವ್ಯ ಮೀಮಾಂಸಾ ಕ್ಷೇತ್ರವನ್ನು ಶ್ರೀಮಂತಗೊಳಿಸಿರುವ

ಡಾ. ಕೆ. ಕೃಷ್ಣಮೂರ್ತಿ ಅವರು

ಈ ಹಿರಿಯ ಚೇತನಗಳ ದಿವ್ಯಸ್ಮೃತಿಗೆ ಪ್ರೀತಿ, ಗೌರವ ಪುರಸ್ಸರವಾಗಿ
ಈ ಗ್ರಂಥ ಅರ್ಪಿತವಾಗಿದೆ.

ಕೃತಜ್ಞತೆಯ ಮಾತುಗಳು

ನಾಡಿನ ಖ್ಯಾತ ಕವಿ ಹಾಗೂ ವಿಮರ್ಶಕರಾದ ಡಾ. ಜಿ.ಎಸ್. ಶಿವರುದ್ರಪ್ಪನವರು ಹತ್ತಾರು ಕೆಲಸಗಳ ನಡುವೆಯೂ ಬಿಡುವು ಮಾಡಿಕೊಂಡು, ತಮ್ಮ ಅಮೂಲ್ಯವಾದ ಸಮಯವನ್ನು ನನಗಾಗಿ ವ್ಯಯಿಸಿ ಇದರ ಅಧ್ಯಯನಕ್ಕೆ ಅಗತ್ಯವಾದ ಭೂಮಿಕಾ ರೂಪದ ಅತ್ಯಮೂಲ್ಯವಾದ ಬೆನ್ನುಡಿಯನ್ನು ಬರೆದುಕೊಟ್ಟು ಈ ಗ್ರಂಥದ ಗೌರವವನ್ನು ಹೆಚ್ಚಿಸಿರುವುದೇ ಅಲ್ಲದೆ ನನ್ನ ಬಗ್ಗೆ ಮೆಚ್ಚುಗೆಯ ಮಾತುಗಳನ್ನು ಆಡುವುದರ ಮೂಲಕ ಆಶೀರ್ವದಿಸಿದ್ದಾರೆ. ಈ ಹಿರಿಯ ನಾಡೋಜರಿಗೆ ನಾನು ಅತ್ಯಂತ ಆಭಾರಿಯಾಗಿದ್ದೇನೆ.

ಇದಕ್ಕೊಂದು ಮುನ್ನುಡಿಯನ್ನು ಬರೆದು ಕೊಡಬೇಕೆಂದು ಖ್ಯಾತ ಸಂಸ್ಕೃತ ವಿದ್ವಾಂಸರಾದ ಡಾ. ಶ್ರೀರಾಮಭಟ್ಟರನ್ನು ಕೇಳಿದಾಗ ಕೂಡಲೇ ಒಪ್ಪಿ, ಸ್ವತಃ ಬರಹಗಾರರಾದ ಅವರು ತಮ್ಮ ವಿದ್ವತ್ತಿನ ಅಮೂಲ್ಯವಾದ ಸಮಯವನ್ನು ನನಗಾಗಿ ಮೀಸಲಿರಿಸಿ ಇದಕ್ಕೊಂದು ವಿಸ್ತೃತವೂ ಅಧ್ಯಯನ ಪೂರ್ಣವೂ ಆದ ಮುನ್ನುಡಿಯನ್ನು ಒದಗಿಸಿದ್ದಾರೆ. ಅದಕ್ಕಾಗಿ ಮಾನ್ಯ ಡಾ. ಶ್ರೀರಾಮಭಟ್ ಅವರಿಗೆ ನಾನು ಅತ್ಯಂತ ಕೃತಜ್ಞನಾಗಿದ್ದೇನೆ.

ಇನ್ನು ಈ ಗ್ರಂಥದ ಪ್ರಕಟಣೆಯಲ್ಲಿ ಅನೇಕರು ನನಗೆ ನೆರವಾಗಿದ್ದಾರೆ. ಅವರಲ್ಲಿ ನಾನು ಮೊದಲು ನೆನೆಯಬೇಕಾದ್ದು ಮಾನಸ ಗಂಗೋತ್ರಿಯಲ್ಲಿ ಕನ್ನಡ ರೀಡರ್ ಆಗಿರುವ ನನ್ನ ಶಿಷ್ಯ ಮಿತ್ರ ಡಾ. ಜಿ.ಆರ್. ತಿಪ್ಪೇಸ್ವಾಮಿ ಹಾಗೂ ಮಂಡ್ಯದ ಸ್ನಾತಕೋತ್ತರ ಕೇಂದ್ರದಲ್ಲಿ ಕನ್ನಡ ರೀಡರ್ ಆಗಿರುವ ಮಾನ್ಯ ಮಿತ್ರ ಡಾ. ಕೃಷ್ಣಮೂರ್ತಿ ಹನೂರು ಅವರನ್ನು. ಡಾ. ತಿಪ್ಪೇಸ್ವಾಮಿಯವರು ಪ್ರಕಾಶಕರ ಪರಿಚಯ ಮಾಡಿಸಿದ್ದೇ ಅಲ್ಲದೇ ಅಚ್ಚಾದ ಫಾರಂಗಳನ್ನು ಪ್ರೂಫ್‌ಗೆ ಕಳಿಸಿ ಕೊಡುವುದರಿಂದ ಹಿಡಿದು ಪ್ರಕಟಣೆಯ ಎಲ್ಲ ಹಂತಗಳಲ್ಲಿ ತೀವ್ರ ಮುತುವರ್ಜಿ ವಹಿಸಿ, ನನಗೆ ನೆರವಾಗಿದ್ದಾರೆ. ಈ ಮಿತ್ರರಿಬ್ಬರ ಉಪಕಾರವನ್ನು "ಅದೇತರೊಳ್ ನೀಗುವೆನೋ" ಎಂದಷ್ಟೇ ಹೇಳಬಹುದು. ಇದರ ಪ್ರಕಟಣೆಯ ಬಗ್ಗೆ ಮೊದಲಿನಿಂದ ಆಸ್ಥೆ ತೋರಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಉಪನಿರ್ದೇಶಕ ರಾಗಿರುವ ನನ್ನ ಪ್ರಿಯಮಿತ್ರ ಶ್ರೀ ಟಿ. ಎಸ್. ದಕ್ಷಿಣಾಮೂರ್ತಿಯವರಿಗೆ ನಾನು ತುಂಬ ಕೃತಜ್ಞ. ಹಾಗೆಯೇ ಈ ಪುಸ್ತಕದ ಪ್ರಕಟಣೆ ಎಲ್ಲಿಗೆ ಬಂತೆಂದು ಆಗಾಗ್ಗೆ ವಿಚಾರಿಸುತ್ತ ನನ್ನ ಉತ್ಸಾಹ ಕುಗ್ಗದ ಹಾಗೆ ನೋಡಿಕೊಂಡ ಆತ್ಮೀಯ ಮಿತ್ರ ಪ್ರೊ. ನೊ. ಸಂ. ತಿಮ್ಮೇಗೌಡರಿಗೆ, ಗುರುಗಳಾದ ಡಾ. ಪಿ. ವಿ. ನಾರಾಯಣ ಅವರಿಗೆ, ಪ್ರೊ. ಬಿ. ವೈ. ಲಲಿತಾಂಬ ಅವರಿಗೆ, ಮತ್ತು ಇದರ ಕರಡು ತಿದ್ದುವಲ್ಲಿ ನೆರವಾದ ನಮ್ಮ ಕಾಲೇಜಿನ ಕನ್ನಡ ವಿಭಾಗದ ಪ್ರೊ. ವಸಂತಕುಮಾರಿ ಹಾಗೂ ಶ್ರೀಮತಿ ಎನ್. ಆರ್. ಲಲಿತಾಂಬ ಅವರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಇದರ ಸೂಚಿಕೆ ತಯಾರಿಸುವಲ್ಲಿ ನೆರವಾದ ನನ್ನ ಮಗಳು ಪ್ರತಿಭಾಳ ನೆರವನ್ನು ಇಲ್ಲಿ ನೆನೆಯುತ್ತೇನೆ. ಅಂದವಾದ ಮುಖಪುಟವನ್ನು ವಿನ್ಯಾಸಗೊಳಿಸಿದ ಶ್ರೀ ರಫೀಕ್ ಉಪ್ಪಿನಂಗಡಿ ಅವರಿಗೆ ನಾನು ಆಭಾರಿ.

ಇಷ್ಟೊಂದು ಬೃಹತ್ ಗಾತ್ರದ ಶಾಸ್ತ್ರ ಗ್ರಂಥವನ್ನು ಈ ಕಾಲದಲ್ಲಿ ಪ್ರಕಟಿಸುವ ಧೈರ್ಯ ತೋರಿ, ಅಪಾರ ಶ್ರಮ, ತಾಳ್ಮೆ ವಹಿಸಿ, ಇಷ್ಟೊಂದು ಅಂದವಾಗಿ ಮುದ್ರಿಸಿಕೊಟ್ಟಿರುವ ಸಂವಹನ ಪ್ರಕಾಶನದ ಶ್ರೀ ಡಿ.ಎನ್. ಲೋಕಪ್ಪನವರು ಹಾಗೂ ಅವರ ಸಿಬ್ಬಂದಿ ವರ್ಗಕ್ಕೆ ನಾನು ಎಷ್ಟು ಕೃತಜ್ಞತೆ ಸಲ್ಲಿದರೂ ಸಾಲದು.

ಆರ್. ಲಕ್ಷ್ಮೀನಾರಾಯಣ

ಎರಡು ಮಾತು

ಇದು 'ಕನ್ನಡ ವಕ್ರೋಕ್ತಿ ಜೀವಿತ'ದ ಎರಡನೇ ಮುದ್ರಣ! ಇಷ್ಟು ಬೇಗ ಅದೂ ಒಂದು ಶಾಸ್ತ್ರಗ್ರಂಥಕ್ಕೆ ಮರು ಮುದ್ರಣದ ಭಾಗ್ಯ ಪ್ರಾಪ್ತವಾಗುತ್ತದೆಂದು ನಾನು ಕನಸಿನಲ್ಲೂ ಎಣಿಸಿರಲಿಲ್ಲ. ಅದೆಲ್ಲ ಸಾಧ್ಯವಾಗಿರುವುದು ಇದರ ಬಗ್ಗೆ ಅಕ್ಕರೆ ಆಸ್ಥೆ ತೋರಿಸಿದ ವಿದ್ವತ್ ಬಂಧುಗಳಿಂದಾಗಿ. ಅವರೆಲ್ಲರಿಗೆ ನನ್ನ ಹೃತ್ಪೂರ್ವಕ ನಮನಗಳು. ಈ ಕೃತಿಯನ್ನು ಪ್ರಕಟಿಸಬೇಕೆಂದು ನಾನು ಹಸ್ತ ಪ್ರತಿಯನ್ನು ಹಿಡಿದುಕೊಂಡು ಯಾರ್‍ಯಾರ ಬಾಗಿಲು ತಟ್ಟಲಿಲ್ಲ! ಹಂಪಿಯ ಕನ್ನಡ ವಿಶ್ವವಿದ್ಯಾಲಯ, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಸಾಹಿತ್ಯಪರಿಷತ್ ಈ ಮೂರು ಮಹಾಸಂಸ್ಥೆಗಳು ತಾರಮ್ಮಯ್ಯ ಆಡಿಸಿದುವು. ಇದು ಖ್ಯಾತನಲ್ಲದ ಲೇಖಕ ಕನ್ನಡದಲ್ಲಿ ಎದುರಿಸಬೇಕಾಗಿ ಬಂದಿರುವ ಪರಿಸ್ಥಿತಿ. ಆಗ ನನ್ನ ನೆರವಿಗೆ ನಿಂತವರು ಪ್ರಿಯ ಮಿತ್ರ ಡಾ. ಕೃಷ್ಣಮೂರ್ತಿ ಹನೂರು ಮತ್ತು ಡಾ. ಜಿ. ಆರ್. ತಿಪ್ಪೇಸ್ವಾಮಿ. ಸಂವಹನ ಪ್ರಕಾಶನದ ಶ್ರೀ ಲೋಕಪ್ಪನವರ ಪರಿಚಯ ಮಾಡಿಸಿ ಈ ಪುಸ್ತಕ ಪ್ರಕಟವಾಗುವಂತೆ ಮಾಡಿದರು. ಪ್ರಕಟವಾದದ್ದೇ ಸಹೃದಯ ವಿದ್ವಜ್ಜನರ ಮೆಚ್ಚುಗೆ ಗಳಿಸಿತು. ಕರ್ನಾಟಕ ಸಾಹಿತ್ಯ ಅಕಾಡೆಮಿ ಸೃಜನೇತರ ಅನುವಾದಕ್ಕೆಂದು ನೀಡುವ ವಾರ್ಷಿಕ ಪ್ರಶಸ್ತಿಯನ್ನು ನೀಡಿ (2004) ಗೌರವಿಸಿತು. ಸಂಸ್ಕೃತ ಎಂ.ಎ. - ಪಠ್ಯಕ್ರಮದಲ್ಲಿ ವಕ್ರೋಕ್ತಿ ಒಂದು ಅಧ್ಯಯನ ವಿಷಯವಾದ್ದರಿಂದ ಮೊದಲ ಮುದ್ರಣದ ಪ್ರತಿಗಳೆಲ್ಲ ಮುಗಿದು ಇದೀಗ ಮರುಮುದ್ರಣಕ್ಕೆ ಅವಕಾಶವಾಗಿರುವುದು ನನಗೆ ಅತೀವ ಸಂತಸ ತಂದಿದೆ ಎಂದಿನಂತೆ ಸಂವಹನ ಪ್ರಕಾಶನದ ಶ್ರೀ ಲೋಕಪ್ಪನವರೇ ಇದನ್ನು ಪ್ರಕಟಿಸಿದ್ದಾರೆ. ಅವರಿಗೆ ನನ್ನ ಧನ್ಯವಾದಗಳು.

ಈ ಮುದ್ರಣದಲ್ಲಿ ಹೆಚ್ಚು ವ್ಯತ್ಯಾಸಗಳನ್ನೇನೂ ಮಾಡಿಲ್ಲ. ಮುದ್ರಣ ದೋಷಗಳೆಲ್ಲವನ್ನೂ ಸರಿಪಡಿಸಲಾಗಿದೆ. ಅಲ್ಲಲ್ಲಿ ಕೆಲವು ಕಡೆ ಲಕ್ಷ್ಯ ಪದ್ಯಗಳ ಕನ್ನಡಾನುವಾದವನ್ನು ಕಿಂಚಿನ್ಮಾತ್ರ ಪರಿಷ್ಕರಿಸಿದ್ದೇನೆ. ಇದರಲ್ಲಿ ಬರುವ ಪಾರಿಭಾಷಿಕ ಶಬ್ದಗಳ ಒಂದು ಸಂಚಿಕೆಯನ್ನು ನೀಡಿರುವುದು ಈ ಮುದ್ರಣದ ವಿಶೇಷ. ಇದರ ಅಗತ್ಯದ ಕಡೆಗೆ ನನ್ನ ಗಮನ ಸೆಳೆದ ಡಾ. ಶ್ರೀರಾಮಭಟ್ ಅವರಿಗೆ ನಾನು ಋಣಿಯಾಗಿದ್ದೇನೆ.

26-5-2006 ಆರ್. ಲಕ್ಷ್ಮೀನಾರಾಯಣ

ಧಾರವಾಡ

ಮುನ್ನುಡಿ

ಕುಂತಕನನ್ನು ಕನ್ನಡಕ್ಕೆ ತರುವ ಮೊದಲ ಪ್ರಯತ್ನ ಇದಾಗಿದೆ. ಕಾವ್ಯ ಮೀಮಾಂಸೆಗೆ ಸಂಬಂಧಿಸಿದ ಬರವಣಿಗೆಗಳಿಂದಾಗಿ ಕನ್ನಡಕ್ಕೆ ಕುಂತಕನು ಆಗಲೇ ಪರಿಚಿತನಾಗಿದ್ದಾನೆ. ಆದರೆ ಕುಂತಕನ ಸುಪ್ರಸಿದ್ಧ ಕೃತಿಯಾದ 'ವಕ್ರೋಕ್ತಿ ಜೀವಿತ' ಇಡಿಯಾಗಿ ಕನ್ನಡಕ್ಕೆ ಅನುವಾದಗೊಳ್ಳುತ್ತಿರುವುದು ಇದೇ ಮೊದಲು. ಸಂಸ್ಕೃತದ ಮಹತ್ವದ ಕಾವ್ಯಮೀಮಾಂಸಾ ಗ್ರಂಥಗಳನ್ನು ಇಡಿಯಾಗಿ ಅನುವಾದ ಮಾಡಿದ ಶ್ರೇಯಸ್ಸು ಕೆ. ಕೃಷ್ಣಮೂರ್ತಿಯವರದು. ಈ ಸಾಹಸಿ ವಿದ್ವಾಂಸ ಅದೇಕೋ, ಮಹತ್ವದ್ದೇ ಆದ ಕುಂತಕನ 'ವಕ್ರೋಕ್ತಿ ಜೀವಿತ'ವನ್ನು ಕನ್ನಡಕ್ಕೆ ತಂದಿರಲಿಲ್ಲ. ಈ ಅರಕೆಯನ್ನು ಈಗ ಮಿತ್ರರಾದ ಆರ್. ಲಕ್ಷ್ಮೀನಾರಾಯಣ ತುಂಬಿಕೊಟ್ಟಿದ್ದಾರೆ. ಪ್ರಸ್ತುತ ಅನುವಾದವನ್ನು ಕೃಷ್ಣಮೂರ್ತಿಯವರ ಅನುವಾದಗಳೊಂದಿಗೆ ಹೋಲಿಸುವುದಕ್ಕಾಗಿ ಅದನ್ನಿಲ್ಲಿ ಪ್ರಸ್ತಾಪಿಸುತ್ತಿಲ್ಲ. ಕೃಷ್ಣಮೂರ್ತಿಯವರು ಬಿಟ್ಟುಹೋದ ಸಾಹಸ ಪರಂಪರೆಯನ್ನು ಮುಂದುವರೆಸಿದ ಪ್ರಯತ್ನಕ್ಕೆ ಮೆಚ್ಚುಗೆ ಸೂಚಿಸುವುದು ಪ್ರಕೃತದ ಉದ್ದೇಶ. ಸದ್ಯಕ್ಕೆ ತುಂಬ ಅಗತ್ಯವೆನಿಸಿದ ಕುಂತಕನ ವಿಚಾರಗಳನ್ನು ಯಥಾವತ್ತಾಗಿ ಕನ್ನಡಕ್ಕೆ ಕರೆತಂದ ಲಕ್ಷ್ಮೀನಾರಾಯಣ ಅವರು ಸರ್ವಥಾ ಅಭಿನಂದನೀಯರು.

ವಕ್ರೋಕ್ತಿಯೆ ಕಾವ್ಯದ ಜೀವಿತವೆಂದು ಕೃತಿಯ ಶೀರ್ಷಿಕೆಯ ಮೂಲಕ ಸೂಚಿಸುವ ಕುಂತಕ ತನ್ನ ಪೂರ್ವಸೂರಿಗಳು ನೀಡಿದ ಪರಿಕಲ್ಪನೆಯನ್ನು ಮರು ಚಿಂತನೆಗೆ ಒಳಗುಮಾಡಿ, ಪರಿಷ್ಕರಿಸಿ, ವಿಸ್ತರಿಸಿ ಪ್ರತಿಪಾದಿಸಿದವನು. ವಕ್ರೋಕ್ತಿಯ ಕುರಿತಾದ ಚಿಂತನೆ ಕುಂತಕನಿಗೂ ಹಿಂದೆ ಇದ್ದ ಭಾಮಹ, ದಂಡಿ, ವಾಮನರಲ್ಲಿ ಕಾಣಿಸಿಕೊಂಡಿದೆ. ಇವರಲ್ಲಿ ಪ್ರಾಚೀನತಮನಾದ ಭಾಮಹನಲ್ಲಿ ಮೊದಲಿಗೆ ವಕ್ರೋಕ್ತಿಯ ಪರಿಕಲ್ಪನೆ ಉಲ್ಲೇಖಗೊಂಡಿದೆ. ಆದರೆ ಸ್ಪಷ್ಟವಾಗಿಲ್ಲ. ಕಾರಣ ಭಾಮಹನಲ್ಲಿ ವಕ್ರೋಕ್ತಿಯ ಪರಿಕಲ್ಪನೆಯ ನಿರ್ವಚನವಾಗಲೀ ವಿಸ್ತೃತ ಚರ್ಚೆಯಾಗಲೀ ಇಲ್ಲ. ಒಟ್ಟಿನಲ್ಲಿ 'ಲೋಕರೂಢಿಯ ಮಾತಿನ ಬಗೆಗಿಂತ ಕಾವ್ಯ ಭಾಷೆಯ ಬಗೆ ಬೇರಾಗುವ ಪರಿ ಯಾವುದು' ಎನ್ನುವುದು ಕಾವ್ಯಮೀಮಾಂಸೆ ಎದುರಿಸುವ ಮೊದಲ ಪ್ರಶ್ನೆ. ಈ ಪ್ರಶ್ನೆಗೆ ಪ್ರಾಯಃ ಉತ್ತರ ವಕ್ರೋಕ್ತಿ ಎನ್ನುವಲ್ಲಿದೆ. ಆಕರ್ಷಕವಾಗಿ, ಮನಮುಟ್ಟುವಂತೆ ಪರಿವರ್ತಿಸಲಾದ ಮಾತು ವಕ್ರೋಕ್ತಿ. ಮನಮುಟ್ಟುವಂತಿರುವ ಭಾಷೆ ಮತ್ತು ಆಲೋಚನೆ ಅಲಂಕಾರಗಳಿಗೆ ಮೂಲ. ಅದಿಲ್ಲದೆ ಯಾವ ಅಲಂಕಾರವೂ ಇಲ್ಲ. ಈ ಬಗೆಯ, ಭಾಮಹನ ಮಾತುಗಳಲ್ಲಿ ವಕ್ರತೆಯ ಹೊಳಹು ಇದೆ. ಸಹಜ ರೀತಿಯ

ಸ್ವಭಾವೋಕ್ತಿಗೆ ಕಾವ್ಯವಾಗುವ ಅರ್ಹತೆ ಇಲ್ಲ ಎನ್ನುವುದು ಭಾಮಹನ ಅಭಿಮತ. ಆತ ಸ್ವಭಾವೋಕ್ತಿಯನ್ನು ಅಲಂಕಾರವೆಂದು ಪರಿಗಣಿಸಲಿಲ್ಲ. ವಕ್ರತೆ ಇರುವಂಥದು ಮಾತ್ರ ಅಲಂಕಾರ. ಎಲ್ಲ ಅಲಂಕಾರಗಳಲ್ಲಿ ಅಂತರ್ಗಾಮಿಯಾಗಿರುವ ವಕ್ರತೆ ಕವಿತೆಯ ಆವಶ್ಯಕ ಮೂಲಾಂಶವನ್ನು ರೂಪಿಸುವಂಥದು; ಒಂದು ಬಗೆಯಲ್ಲಿ ಅದು ಅಭಿವ್ಯಕ್ತಿಯ ಸ್ವರೂಪ - 'ಸೈಷಾ ಸರ್ವೈವ ವಕ್ರೋಕ್ತಿಃ'...

ದಂಡಿಯ ನಿಲುವು ಇದಕ್ಕೆ ವಿರುದ್ಧವಾದದ್ದು. ಅವನಲ್ಲಿ ಸ್ವಭಾವೋಕ್ತಿ 'ಆದ್ಯಾ ಅಲಂಕೃತಿಃ'. ದಂಡಿಯ ಅಭಿಪ್ರಾಯದಲ್ಲಿ ಒಬ್ಬ ನೈಜ ಕಲಾಪ್ರಜ್ಞೆಯ ಕವಿಯು ಲೋಕರೂಢಿಯ, ದಿನನಿತ್ಯದ ವ್ಯವಹಾರದ ಮಾತನ್ನೂ ಸಾಮಾನ್ಯರಂತೆ ನೋಡದೆ ವಿಶಿಷ್ಟವಾಗಿ ಗ್ರಹಿಸುವವನು. ಅದನ್ನೂ ಮನದಲ್ಲಿ ಅಚ್ಚೊತ್ತುವಂತೆ, ಹೊಸ ಹೊಳಪಿನಿಂದ ಎಸೆಯುವಂತೆ ಪ್ರಯೋಗಿಸಬಲ್ಲ. ಆದ್ದರಿಂದ ಸ್ವಭಾವೋಕ್ತಿಯೂ ಅಲಂಕಾರವೇ. ಇದರರ್ಥ ದಂಡಿಯು ವಕ್ರತೆಯನ್ನು ನಿರಾಕರಿಸುವನೆಂದಲ್ಲ. ವಕ್ರತೆ ಇತರ ಅಲಂಕಾರಗಳಲ್ಲಿ ಸಾಮಾನ್ಯ ಅಂಶವೆಂದು ದಂಡಿಯೂ ಭಾಮಹನ ನಿಲುವಿಗೆ ಸಹಮತವನ್ನು ತೋರುತ್ತಾನೆ. ಆದರೆ 'ಶ್ಲೇಷಃ ಸರ್ವಾಸು ಪುಷ್ಣಾತಿ ಪ್ರಾಯೋ ವಕ್ರೋಕ್ತಿಷು ಶ್ರಿಯಮ್' ಎನ್ನುವ ಮೂಲಕ ವಕ್ರೋಕ್ತಿಯ ಪುಷ್ಟಿಗೆ ಶ್ಲೇಷದ ಅಗತ್ಯವನ್ನು ಪ್ರತಿಪಾದಿಸುತ್ತಾನೆ. ಹೀಗೆ ವಕ್ರೋಕ್ತಿಗೆ ಶ್ಲೇಷ ಸಂಕೀರ್ಣತೆಯನ್ನು ಹೇಳುವ ಮೂಲಕ ವಕ್ರೋಕ್ತಿಯ ವ್ಯಾಪ್ತಿ ಅಲ್ಲಿ ಮಿತಗೊಳ್ಳುತ್ತದೆ. ತಾತ್ವಿಕವಾಗಿ ಭಾಮಹನನ್ನು ಒಪ್ಪಿದರೂ, ದಂಡಿಯದು ಕೊಂಚ ಭಿನ್ನ ದನಿ ಎನಿಸುತ್ತದೆ.

ವಾಮನನು ಸಂಪೂರ್ಣ ಭಿನ್ನ ಬಗೆಯಲ್ಲಿ 'ವಕ್ರೋಕ್ತಿ'ಯನ್ನು ಅರ್ಥೈಸಿದ್ದಾನೆ. ವಕ್ರೋಕ್ತಿಯು ಒಂದು ನಿರ್ದಿಷ್ಟ ಅಲಂಕಾರ ಮಾತ್ರ ಎಂದು ಮೊದಲಿಗೆ ಪ್ರತಿಪಾದಿಸಿದವನು ವಾಮನ. ಅವನ ದೃಷ್ಟಿಯಲ್ಲಿ ಇದೊಂದು ಅರ್ಥಾಲಂಕಾರ ಅಷ್ಟೆ. ಸಾದೃಶ್ಯ ಮೂಲವಾಗಿ ಇರುವ ಲಕ್ಷಣಾವೃತ್ತಿಯನ್ನೊಳಗೊಂಡ ಉಕ್ತಿ ಪ್ರಕಾರವೆ ವಕ್ರೋಕ್ತಿ. ಇದು ಆಲಂಕಾರಿಕ ಉಕ್ತಿ ವೈಚಿತ್ರ್ಯ ಮಾತ್ರವೇ ಎಂದಾದ್ದರಿಂದ ದಂಡಿ-ಭಾಮಹರ ವಕ್ರೋಕ್ತಿ ಪರಿಕಲ್ಪನೆಗಿಂತ ಬೇರೆಯೇ ಆಯಿತು. ಒಂದು ಬಗೆಯಲ್ಲಿ ಇದು ಆನಂದವರ್ಧನನ 'ಅವಿವಕ್ಷಿತ ವಾಚ್ಯ ವ್ಯಂಗ್ಯ'ಕ್ಕೂ ಮಮ್ಮಟನ 'ಲಕ್ಷಣಾಮೂಲ ಗೂಢವ್ಯಂಗ್ಯ ಪ್ರಧಾನ ಧ್ವನಿ'ಗೂ ಹತ್ತಿರವಾದದ್ದು. ಸರಿಸುಮಾರು ಇದೇ ನಿಲುವಿನಲ್ಲಿ ಹೊರಟ ರುದ್ರಟನು ಶಬ್ದಾಲಂಕಾರದಲ್ಲೂ ವಕ್ರೋಕ್ತಿಯನ್ನು ವಿಸ್ತರಿಸುವ ಮೂಲಕ ಇದನ್ನು ನಿರ್ದಿಷ್ಟ ಅಲಂಕಾರ ಮಾತ್ರವಾಗಿ ನೆಲೆಗೊಳಿಸಿದ. ಮುಂದಿನ ಲಾಕ್ಷಣಿಕರು ಈ ವಿಷಯದಲ್ಲಿ ರುದ್ರಟನನ್ನೇ ಹೆಚ್ಚಾಗಿ ಅನುಸರಿಸಿದರು. ಒಟ್ಟಿನಲ್ಲಿ ಒಂದರ್ಥದಲ್ಲಿ ಹೇಳಿದ ಮಾತನ್ನೇ ಇನ್ನೊಂದರ್ಥದಲ್ಲಿ ಗ್ರಹಿಸುವಂತೆ ಶ್ಲೇಷೆ ಅಥವಾ ಕಾಕುಬಳಕೆಯಾದರೆ, ಅಂಥ ಉಕ್ತಿ ಪ್ರಕಾರ 'ವಕ್ರೋಕ್ತಿ' ಎಂದಾಯಿತು.

ಈ ಹಿನ್ನೆಲೆಯಲ್ಲಿ ಕುಂತಕನ ನಿಲುವು ಮತ್ತು ಪ್ರತಿಪಾದನೆ ತುಂಬ ಮಹತ್ವದ್ದೆನಿಸುತ್ತದೆ.

ವಿಸ್ತೃತ ನೆಲೆಯಲ್ಲಿ ಭಾಮಹನ ವಕ್ರೋಕ್ತಿ ಪರಿಕಲ್ಪನೆಯನ್ನು ಚರ್ಚಿಸಿದ ಕೃತಿ 'ವಕ್ರೋಕ್ತಿ ಜೀವಿತ'. ವಕ್ರೋಕ್ತಿಯ ಅಂತರಂಗ ಬಹಿರಂಗಗಳನ್ನು ಪೂರ್ಣ ಪ್ರಮಾಣದಲ್ಲಿ ವಿಕಾಸಗೊಳಿಸಿ ಹೊಸ ಬೆಳಕನ್ನು ನೀಡಿದ್ದು ಈ ಕೃತಿಯ ವೈಶಿಷ್ಟ್ಯ. 'ಲೋಕೋತ್ತರ ಚಮತ್ಕಾರಕಾರಿ ವೈಚಿತ್ರ್ಯಸಿದ್ಧಿ' ತನ್ನ ಕೃತಿಯ ಉದ್ದೇಶವೆಂದು ಕುಂತಕ ಹೇಳುತ್ತಾನೆ. ಇದು ವಕ್ರತೆಯ ನಿರ್ವಚನವೆಂದು ಹೇಳಬಹುದು. ಲೋಕಸಾಮಾನ್ಯವಲ್ಲದ ಹೊಳಹು-ಹೊಳಪನ್ನು ಉಂಟುಮಾಡುವ ವೈಚಿತ್ರ್ಯವೆ ವಕ್ರತೆ. ಇಲ್ಲಿ ಲೋಕೋತ್ತರ ಎನ್ನುವುದು ಅಲೌಕಿಕ ಅಥವಾ ದೈವಿಕ ಅಲ್ಲ. ಸ್ವಾರ್ಥದೂರ ವಾದದ್ದು, ಅಸಾಧಾರಣವಾದದ್ದು ಅಥವಾ ಲೋಕಸಾಧಾರಣವಲ್ಲದ್ದು ಎಂದರ್ಥ. ಚಮತ್ಕಾರಕಾರಿ ಎನ್ನುವುದು ಹೊಸ ಹೊಳಹು-ಹೊಳಪು ನೀಡುವ ವಾಕ್‌ಸೃಷ್ಟಿ ಕ್ರಿಯೆ. ಇಂಥ ಕವಿಮಾನಸ ಕ್ರಿಯೆ ಅಭಿವ್ಯಕ್ತಗೊಳ್ಳುವ ಪರಿ ಬೇರೆ ಬಗೆಯದೇ ಆಗಿರುತ್ತದೆ. ಈ ಬೇರೆ ಬಗೆಯೇ 'ವೈಚಿತ್ರ್ಯ'. ಇದಕ್ಕೆ ಇನ್ನೊಂದು ಹೆಸರು ವಕ್ರತೆ. ನೇರ ಅಲ್ಲದ್ದು ವಕ್ರತೆಯೇ ವಿನಾ ಹೀನಾರ್ಥದಲ್ಲಿ ಅಲ್ಲ. ಇತಿಹಾಸ, ವಿಜ್ಞಾನ (ಶಾಸ್ತ್ರ)ಗಳ ಅಭಿವ್ಯಕ್ತಿಗೆ ಅರ್ಥ ಸಂವಹನವೇ ಗುರಿಯಾದ್ದರಿಂದ ಆ ಮಾತು 'ನೇರ'ವಾಗಿರುತ್ತದೆ. ಜ್ಞಾನ-ರಂಜನೆ, ಆನಂದ-ಅನುಭವಗಳನ್ನು ಒಟ್ಟಿಗೆ ನೀಡುವ ಕವಿಕರ್ಮಕ್ಕೆ ಅರ್ಥಸಂವಹನವೊಂದೇ ಗುರಿ ಅಲ್ಲ ಅನ್ನುವುದು ಸ್ಪಷ್ಟ. ಅದಕ್ಕಾಗಿ ಕವಿಯ ಮಾತು 'ನೇರ'ವಾಗದೆ, ನೇರವಲ್ಲದ ನಾನಾ ಬಗೆಯ ದಾರಿಯನ್ನು (ವೈಚಿತ್ರ್ಯ-ವಕ್ರತೆಯನ್ನು) ಬಳಸುತ್ತದೆ. ಕುಂತಕನು ಪರ್ಯಾಯ ಪದಗಳಾಗಿ ಸಮಾನ ನೆಲೆಯಲ್ಲಿ ಬಳಸಿದ 'ವೈಚಿತ್ರ್ಯ-ವಕ್ರತೆ' ಎನ್ನುವ ಪದಗಳನ್ನು ಬೇರೆ ಪದಗಳಿಂದ ಅನುವಾದಿಸಲಾಗದು. ಇವುಗಳ ಆಂತರ್ಯವನ್ನು ಕುಂತಕನ ವಿಶ್ಲೇಷಣೆಯಿಂದಲೇ ಅರಿಯಬೇಕಾಗಿದೆ. (ಅಭಿನವಗುಪ್ತ ಮಹಿಮಭಟ್ಟ ಮುಂತಾದವರಲ್ಲೂ ಈ ಕುರಿತ ವಿವರಣೆ ಇದೆ). 'ವೈಚಿತ್ರ್ಯ-ವಕ್ರತೆ'ಗಳನ್ನು ನಿರ್ವಚಿಸುವ ಕುಂತಕನ ಮಾತುಗಳು ಹೀಗಿವೆ. 'ಶಾಸ್ತ್ರಾದಿ ಪ್ರಸಿದ್ಧ ಶಬ್ದಾರ್ಥೋಪನಿಬಂಧ ವ್ಯತಿರೇಕಿ', 'ಪ್ರಸಿದ್ಧ ಪ್ರಸ್ಥಾನ ವ್ಯತಿರೇಕಿ', 'ಅತಿಕ್ರಾಂತ ಪ್ರಸಿದ್ದ ವ್ಯವಹಾರ ಸರಣಿ'. ಇಲ್ಲಿನ ವ್ಯತಿರೇಕಿ ಮತ್ತು ಅತಿಕ್ರಾಂತ ಪದಗಳು ಕಾವ್ಯದ ಅಭಿವ್ಯಕ್ತಿ ಇತರ ಅಭಿವ್ಯಕ್ತಿ ಪ್ರಕಾರಗಳಿಗಿಂತ ಬೇರೆಯೇ ಆಗಿರುತ್ತದೆಂದು ಸ್ಪಷ್ಟಪಡಿಸುತ್ತವೆ.

ಇತಿಹಾಸ, ಶಾಸ್ತ್ರ(ವಿಜ್ಞಾನ), ಕಾನೂನು, ವ್ಯವಹಾರ, ಆಡಳಿತ ಮುಂತಾದವುಗಳೆಲ್ಲವೂ ಭಾಷಿಕ ಅಭಿವ್ಯಕ್ತಿಯನ್ನು ಆಧರಿಸಿವೆ-ಕಾವ್ಯದಂತೆಯೇ. ಆದರೂ ಕಾವ್ಯದ ಅಭಿವ್ಯಕ್ತಿಯಲ್ಲಿ ಕವಿ ಮನದ ಕಲ್ಪನಾ ಶಕ್ತಿಯೇ ಮೂಲಾಧಾರವಾದ್ದರಿಂದ ಅದು ಇತರ ಶಾಸ್ತ್ರಾದಿ ಭಾಷಿಕ ಅಭಿವ್ಯಕ್ತಿಗಿಂತ ಬೇರೆಯಾಗಿರುತ್ತದೆ. ಇಂಥ ಬೇರೆ ಬಗೆ ಎನಿಸುವ ವೈಚಿತ್ರ್ಯ-ವಕ್ರತೆಗಳೇ ಕಾವ್ಯದ ಜೀವಿತ ಎನ್ನುವುದು ಕುಂತಕನ ಸಿದ್ಧಾಂತ. ಕವಿ ಪ್ರತಿಭೆ ಎರಡು ನೆಲೆಗಳಲ್ಲಿ ಕೆಲಸ ಮಾಡುತ್ತದೆ ಎಂದು ಸೂಚಿಸಿರುವುದು ಕುಂತಕನ ವಿಶೇಷತೆ. ಕಾವ್ಯಕರ್ಮದ ಸಮಗ್ರತೆಯ ಬಗ್ಗೆ ಆತನಿಗಿದ್ದ ಅರಿವು ಇದರಿಂದ ಸ್ಪಷ್ಟವಾಗುತ್ತದೆ. ವಸ್ತು-ಆಲೋಚನೆಗಳ ನೆಲೆ ಒಂದು;

ಅದಕ್ಕೊಗ್ಗುವ ಮಾತು ಇನ್ನೊಂದು. ಅರ್ಥದ ನೆಲೆ ಮತ್ತು ಅಭಿವ್ಯಕ್ತಿಯ ನೆಲೆ. ಇವೆರಡರಲ್ಲಿ ಯಾವುದೊಂದೇ ನೆಲೆಯಲ್ಲಿ ಕಾವ್ಯಸೃಷ್ಟಿ ಆಗಲಾರದು. "ನ ಶಬ್ದಸ್ಯೈವ ರಮಣೀಯತಾ ವಿಶಿಷ್ಟಸ್ಯ ಕೇವಲಸ್ಯ ಕಾವ್ಯತ್ವಂ, ನಾಪಿ ಅರ್ಥಸ್ಯ." ಪ್ರತಿಭೆಯ ವೈಚಿತ್ರ್ಯವೂ ವಕ್ರೋಕ್ತಿಯಾಗಿ ಪರಿಣಮಿಸುವುದು ಕಾವ್ಯದ ಸಮಗ್ರ ಸಾರತಮ ಅಂಶ. ಅದಕ್ಕಾಗಿ ಕುಂತಕನು ಕಾವ್ಯ ಪ್ರಕ್ರಿಯೆಯನ್ನು 'ವಕ್ರ ಕವಿ ವ್ಯಾಪಾರ' ಅಥವಾ 'ಕವಿ ವ್ಯಾಪಾರ ವಕ್ರತ್ವ'ವೆಂದು ಗುರುತಿಸುತ್ತಾನೆ. ಅಲ್ಲಿಗೆ ವಕ್ರತೆ ಎನ್ನುವುದು ಕೇವಲ ಉಕ್ತಿಯ ವಕ್ರತೆ, ಉಕ್ತಿ ಚಮತ್ಕಾರ, ವಾಕ್ ಚಾತುರ್ಯ ಮಾತ್ರವಲ್ಲ. ಕವಿತ್ವ ವ್ಯಕ್ತಿ ವಿಶಿಷ್ಟತೆಯನ್ನು ಪ್ರತಿನಿಧಿಸುವ ಸಂಗತಿ. ಅದನ್ನು 'ವೈದಗ್ಧ್ಯಭಂಗಿ ಭಣಿತಿ' ಎಂದು ವ್ಯಾಖ್ಯಾಸಿ, 'ವೈದಗ್ಧ್ಯ' ಎಂದರೆ 'ಕವಿಕೌಶಲ' ಎಂದೂ ಸ್ಪಷ್ಟಪಡಿಸಿದ್ದಾನೆ. ಕಾವ್ಯದ ಸೌಂದರ್ಯ ಅದರ ಭಾಷಿಕ ರೂಪಿನಲ್ಲಿದೆ. ಆ ರೂಪವನ್ನು ಕೊಡುವವನು ಕವಿ. ವಸ್ತುವಿಗೆ ಇರುವ ಸೊಬಗು ವಸ್ತುವಕ್ರತೆ. ಅದು ಸಹೃದಯ ಸಂವೇದ್ಯವಾಗುವಂತೆ ಕವಿ ಭಾಷಿಕ ರೂಪ ನೀಡಬೇಕಾಗುತ್ತದೆ. ಆದ್ದರಿಂದ ಕವಿ ಕೌಶಲ ಅಂದರೆ ಕವಿ ವ್ಯಾಪಾರ ವಕ್ರತೆ ಪ್ರಮುಖವಾದದ್ದು. ಅದು ವ್ಯಕ್ತವಾಗುವ 'ವಕ್ರೋಕ್ತಿ' ಕಾವ್ಯದ ಕೇಂದ್ರಬಿಂದು. ಅದರ ವ್ಯಾಪಾಕತೆಯನ್ನು ವರ್ಣ, ಪದ, ವಾಕ್ಯ, ಪ್ರಕರಣ, ಪ್ರಬಂಧಗಳ ನೆಲೆಯಲ್ಲಿ ಕುಂತಕ ನಿರೂಪಿಸಿದ್ದಾನೆ. ಒಟ್ಟಾರೆ "ಪಾತ್ರಸ್ವಭಾವ, ಕವಿ ಸ್ವಭಾವಗಳಿಗೂ ಪ್ರತಿಭಾ ವ್ಯಾಪಾರಕ್ಕೂ ಇವನು ಕೊಟ್ಟಿರುವ ಪ್ರಾಮುಖ್ಯವು ಪಾಶ್ಚಾತ್ಯ ಕಾವ್ಯ ವಿಮರ್ಶಕರ ನೆನಪನ್ನು ತರುತ್ತದೆ" ಎನ್ನುವ ತೀ. ನಂ. ಶ್ರೀ ಅವರ ಮಾತು ಯಥಾರ್ಥವಾಗಿದೆ.

ಕುಂತಕನದು ಸ್ವತಂತ್ರ ಪ್ರಸ್ಥಾನವಲ್ಲ; ಭಾಮಹನಿಂದ ಬೆಳಕಿಗೆ ಬಂದ ಅಲಂಕಾರ ಪ್ರಸ್ಥಾನದ ವಿಸ್ತೃತ ರೂಪ. ವಕ್ರೋಕ್ತಿ ಸಿದ್ಧಾಂತದ ಮಂಡನೆಯ ಮೂಲಕ ಅಲಂಕಾರ ಪ್ರಸ್ಥಾನವನ್ನೂ, ತನ್ನ ಪ್ರಾಚೀನರ ಕಾವ್ಯ ಚರ್ಚೆಯನ್ನೂ ಹೊಸ ದಿಕ್ಕಿಗೆ ಒಯ್ದ ಕುಂತಕನು ರಸ, ಧ್ವನಿ ಮುಂತಾಗಿ ಇತರ ಸಿದ್ಧಾಂತಗಳನ್ನು ನಿರಾಕರಿಸದೆ, ವಕ್ರೋಕ್ತಿಯಲ್ಲೇ ಅಂತರ್ಗತ ಮಾಡಿಕೊಳ್ಳುವ ಮೂಲಕ' 'ಅಂತರ್ಭಾವವಾದಿ' ಎನಿಸಿದ್ದಾನೆ. ಕುಂತಕನು ನೀಡಿದ ನಿದರ್ಶನಗಳನ್ನು ಅವಲೋಕಿಸಿದಾಗ ಆತನ ವಿಶಾಲ ಓದು, ಸಾಹಿತ್ಯಕ ಜಾಣ್ಮೆ, ವಿಮರ್ಶಾತ್ಮಕ ಒಳನೋಟ ಅರಿವಿಗೆ ಬರುತ್ತದೆ. ಶ್ರೇಷ್ಠ ಕವಿಗಳ ಪದ್ಯಗಳಲ್ಲಿನ ದೋಷಗಳನ್ನೂ ವಿಮರ್ಶಿಸಲು ಆತ ಹಿಂಜರಿದಿಲ್ಲ. ಅವನ ಗುಣ ಪಕ್ಷಪಾತವೂ ಅಷ್ಟೇ ದೊಡ್ಡದು. ಈ ಕೃತಿಯ ಹಲವು ಭಾಗಗಳು ಆನ್ವಯಿಕ ವಿಮರ್ಶೆಯ ಆಧುನಿಕ ಕ್ರಮವನ್ನು ನೆನಪಿಗೆ ತರುತ್ತವೆ. ಇತರ ಸಿದ್ಧಾಂತಕಾರರ ಚಿಂತನೆಗಳ ವಿಶ್ಲೇಷಣೆಯಲ್ಲಿ ಆತ ತೋರುವ ನಿಷ್ಪಕ್ಷಪಾತ ಗಮನಾರ್ಹವಾದುದೆ. ಆತನ ಸಮಕಾಲೀನನಾದ ಆನಂದವರ್ಧನನ ಸಿದ್ಧಾಂತದಲ್ಲಿ ಆತನಿಗಿರುವ ಮೆಚ್ಚುಗೆ-ಗೌರವಗಳಿಂದಾಗಿ ಕಾವ್ಯ ಲಕ್ಷಣ ಪರಿಧಿಯಲ್ಲಿದ್ದ ಕೆಲವು ಸಮಸ್ಯೆಗಳಿಗೆ ತುಂಬ ಜೀವಂತವಾಗಿ ಪ್ರತಿಕ್ರಯಿಸುವುದು ಸಾಧ್ಯವಾಯಿತು. ರಸ ಮತ್ತು ಧ್ವನಿಯ ತಿಳಿವಳಿಕೆಯನ್ನು ವಕ್ರೋಕ್ತಿಯಲ್ಲಿ ಅಳವಡಿಸಿಕೊಳ್ಳುವುದೂ ಸಾಧ್ಯವಾಯಿತು. ಭಾಮಹನಿಂದಲೇ

ಪ್ರೇರಣೆ ಪಡೆದಿದ್ದರೂ ಆತನ ಎಲ್ಲ ನಿರ್ಣಯಗಳಿಗೂ ಕುಂತಕ ಅಡಿಯಾಳಾಗಲಿಲ್ಲ. ಭಾಮಹನ ದೀಪಕ ಪ್ರಕಾರಗಳನ್ನು ಟೀಕಿಸಿರುವುದು ಇದಕ್ಕೆ ಸಾಕ್ಷಿ. ದಂಡಿಯ ಸ್ವಭಾವೋಕ್ತಿ ಸಿದ್ಧಾಂತವನ್ನು, ವಕ್ರೋಕ್ತಿ ಸಿದ್ಧಾಂತದ ಕುಂತಕ ಇಡಿಯಾಗಿ ಒಪ್ಪದೆ ಕವಿ ಸ್ವಭಾವದ ಉಕ್ತಿಯನ್ನು ಸ್ವಭಾವೋಕ್ತಿಯೆಂದು ಮರು ಮಂಡನೆ ಮಾಡುವ ಕ್ರಮ ಆತನ ನಿರ್ಣಯ ಸ್ವಾತಂತ್ರ್ಯದ ದ್ಯೋತಕ.

ವಕ್ರತೆಯ ಅಡಿಯಲ್ಲಿ ಆಲೋಚನೆ-ಅಭಿವ್ಯಕ್ತಿಗಳನ್ನು ಒಟ್ಟಿಗೆ ಚಿಂತಿಸಿದ, ಚರ್ಚಿಸಿದ ಕುಂತಕನ ಕೃತಿಯನ್ನು ಕನ್ನಡಕ್ಕೆ ತಂದದ್ದು ತುಂಬ ಸಕಾಲಿಕವಾಗಿದೆ. ಪ್ರೊ. ಆರ್. ಲಕ್ಷ್ಮೀನಾರಾಯಣ ಅವರು ವಹಿಸಿದ ಶ್ರಮ ಕಾಳಜಿ ಸಾರ್ಥಕವಾದದ್ದೆಂದೇ ಹೇಳಬೇಕು. ಈ ಕೃತಿಯನ್ನು ಇಡಿಯಾಗಿ ಅನುವಾದಿಸುವ ಮೂಲಕ ಕನ್ನಡಕ್ಕೆ ಬಹು ದೊಡ್ಡ ಚರ್ಚೆಯನ್ನು ಕರೆತಂದಂತಾಗಿದೆ. ಕಾವ್ಯಾಭಿವ್ಯಕ್ತಿ ಕಲಾತ್ಮಕತೆಯನ್ನು ಕಳೆದುಕೊಳ್ಳುತ್ತಿರುವ ಸಂದರ್ಭದಲ್ಲಿ 'ವಕ್ರೋಕ್ತಿಜೀವಿತ'ದಂಥ ಕೃತಿಯನ್ನು ಆಹ್ವಾನಿಸಿಕೊಳ್ಳುವುದು ತುಂಬ ಔಚಿತ್ಯಪೂರ್ಣ. ಅನುವಾದದ ಯಶಸ್ಸು, ಸಾರ್ಥಕತೆ ಇದರೊಂದಿಗಿದೆ.

ಪದಕ್ಕೆ ಪದ ಇಡದ ಅನುವಾದ ಇದಾದರೂ, ಮೂಲದ ಯಾವ ವಾಕ್ಯವನ್ನೂ, ಸಂಗತಿಯನ್ನೂ ಮರೆಗೆ ಸರಿಸದ ಕ್ರಮ ಪ್ರಶಂಸನೀಯ. ಅನುವಾದ ಮೂಲದ ಶೈಲಿಯನ್ನು ಕಳೆದುಕೊಳ್ಳುವುದು ಅನಿವಾರ್ಯ. ಸಂಸ್ಕೃತದ್ದು ಇಡಿಯಾಗುವ ಶೈಲಿ. ಸಮಾಸ ಗುಂಫನದ ವಾಕ್ಯ ಸರಣಿ ಅಲ್ಲಿ ಸಹಜ. ಬಿಡಿ ಬಿಡಿಯಾಗುವುದು ಕನ್ನಡದ ಶೈಲಿಯ ಜಾಯಮಾನ. ಬಿಡಿ ಬಿಡಿಯಾದ ಪದಗಳಿಂದ ಅತಿಹ್ರಸ್ವವೂ ಅಲ್ಲದ ಅತಿ ದೀರ್ಘವೂ ಅಲ್ಲದ ಮಧ್ಯಮ ಮಾರ್ಗ ಕನ್ನಡಕ್ಕೆ ಸಹಜವಾದದ್ದು. ಮೂಲದಲ್ಲಿ ಹರಳುಗಟ್ಟಿದ ಚಿಂತನೆಯನ್ನು ಬಿಡಿಬಿಡಿಯಾದ ವಾಕ್ಯಸರಣಿಯಿಂದ ನಿರೂಪಿಸಿಕೊಟ್ಟಿರುವುದು ಕನ್ನಡದ ಓದುಗರಿಗೆ ತುಂಬ ಉಪಯುಕ್ತ ವಾಗುವಂತಿದೆ. ಆದರೂ ಕೆಲವೆಡೆ ಪರಿಭಾಷೆಗಳ ಅಂತರಾರ್ಥವನ್ನು ಸೂಕ್ತ ನಿದರ್ಶನಗಳೊಂದಿಗೆ ನೀಡುವುದು ಕನ್ನಡ ಓದಿನ ಸಂದರ್ಭದಲ್ಲಿ ಅಪೇಕ್ಷಿತವೆನಿಸುತ್ತದೆ.

ಕನ್ನಡವು ಇಂಗ್ಲೀಷ್ ಕಾವ್ಯಶಾಸ್ತ್ರದ ಸಂಪರ್ಕದಿಂದಾಗಿ ಹಳೆಯ ಪದಗಳಿಂದಲೇ ಹೊಸ ಪರಿಭಾಷೆಯನ್ನು ನಿರ್ಮಿಸಿಕೊಂಡಿದೆ. 'ಪ್ರತಿಮೆ' (poetic image) ಅಂಥವುಗಳಲ್ಲೊಂದು. ಸಂಸ್ಕೃತದಲ್ಲಿ ಪ್ರತಿಮಾ ಪದ ಬಳಕೆಯಲ್ಲಿದ್ದರೂ ಈ ಮೇಲಿನ ಅರ್ಥದಲ್ಲಿಲ್ಲ. ಪರಿಭಾಷೆಯಾಗಿ ಅದೊಂದು ಅಲಂಕಾರ ಮಾತ್ರ. ಹೀಗಿರುವಾಗ 'ತತ್ಪ್ರತಿಮಂ' ಎನ್ನುವ ಮೂಲದ ವಾಕ್ಯಭಾಗವನ್ನು 'ಪ್ರತಿಮೆಗಳ ಮಟ್ಟಕ್ಕೆ ಸರಿಸಮನಾಗಿ ನಿಲ್ಲಬಹುದಾದಂಥ...' (ಪು. ೧೭) ಎಂದು ಮುಂತಾಗಿ ಅನುವಾದಿಸಿರುವುದು ತುಸುಮಟ್ಟಿಗೆ ತಪ್ಪು ಕಲ್ಪನೆಗೆ ಅವಕಾಶ ನೀಡಬಹುದಾಗಿದೆ. ಕನ್ನಡದ ಸಂದರ್ಭದಲ್ಲಿ 'ಪ್ರತಿಮೆ'ಗೆ ಇರುವ ಪರಿಕಲ್ಪನೆ ಸಂಸ್ಕೃತದ ಸಂದರ್ಭದಲ್ಲಿ ಇಲ್ಲ. ಮೂಲದಲ್ಲಿ 'ತತ್ಪ್ರತಿಮಂ' ಎಂದರೆ 'ಅದನ್ನು ಹೋಲುವ, ಅದಕ್ಕೆ ಸಮನಾದ' ಎಂದಷ್ಟೇ ಅರ್ಥ.

ನಿದರ್ಶನ ಪದ್ಯಗಳನ್ನು Free verse ರೂಪದಲ್ಲಿ ಅನುವಾದಿಸಿರುವುದು ಸರಳವೂ, ಸುಲಲಿತವೂ ಆಗಿದೆ ಎನ್ನುವುದು ನಿಜ. ಪದ್ಯದ ಅರ್ಥವನ್ನು ಶ್ರಮವಿಲ್ಲದೆ ತಿಳಿಯುವಲ್ಲೂ ಅದು ಸಹಾಯಕವಾಗಿದೆ. ಇಲ್ಲಿರುವ ಮುಖ್ಯ ಪ್ರಶ್ನೆಯೆಂದರೆ ಕೃತಿಕಾರನ ಲಕ್ಷಣಕ್ಕೆ ಲಕ್ಷ್ಯವಾಗುವ ಸಂದರ್ಭದಲ್ಲಿ ಇಂಥ ಅನುವಾದ ಎಷ್ಟರಮಟ್ಟಿಗೆ ಸಮರ್ಪಕವಾಗಬಲ್ಲದು ಎನ್ನುವುದು. ವಕ್ರೋಕ್ತಿಯ ವಿಭಿನ್ನ ನೆಲೆಗಳಿಗೆ ಲಕ್ಷ್ಯವಾಗಬೇಕಾದ ಸಂದರ್ಭದಲ್ಲಿ ಪದ್ಯವೊಂದರ ಅರ್ಥ ಎಷ್ಟು ಪ್ರಸಕ್ತವಾಗುತ್ತದೆ ಎನ್ನುವ ಸಂದೇಹ ಇದ್ದೇ ಇದೆ. ತೀನಂಶ್ರೀ ಅವರು ಸಂವಾದಿಯಾದ ಕನ್ನಡ ಪದ್ಯಗಳನ್ನು ಆಯ್ದುಕೊಡುವುದಕ್ಕೆ ಇದೂ ಕಾರಣವಾಗಿರಬಹುದೆ? ಇಂಥ ಸಮಸ್ಯೆಗಳನ್ನು ಎದುರಿಸುತ್ತಲೇ ಅನುವಾದ ಕಾರ್ಯ ಸಾಗುವುದು ಅನಿವಾರ್ಯ. ಮಿತ್ರರಾದ ಲಕ್ಷ್ಮೀನಾರಾಯಣ ಅವರು ಇನ್ನುಳಿದ ಸಂಸ್ಕೃತದ ಕಾವ್ಯಮೀಮಾಂಸಾ ಕೃತಿಗಳನ್ನೂ ಅನುವಾದಿಸುವಂತಾಗಲೆಂದು ಆಶಿಸುವೆನು.

ಇ-2465, ಸ್ನೇಹ
ಸಹಕಾರ ನಗರ, ಬೆಂಗಳೂರು - 92

ಶ್ರೀರಾಮ ಭಟ್ಟ

ಪ್ರಸ್ತಾವನೆ

ವಕ್ರೋಕ್ತಿಯನ್ನು ಕಾವ್ಯದ ಜೀವಿತ ಎಂದು ಘೋಷಿಸುವ ಮೂಲಕ ಭಾರತೀಯ ಕಾವ್ಯ ಮೀಮಾಂಸೆಯಲ್ಲಿ ಒಂದು ವಿಶಿಷ್ಟ ದನಿಯಾದವನು ಕುಂತಕ. ಅಷ್ಟೇ ಅಲ್ಲ, ಅದನ್ನೇ ಒಂದು ಪ್ರಸ್ಥಾನದ ರೂಪದಲ್ಲಿ ರೂಪಿಸಿದವನು. ಅದುವರೆಗಿನ ಪ್ರಮುಖ ಕಾವ್ಯ ಸಿದ್ಧಾಂತಗಳನ್ನೆಲ್ಲ ಹೊಸ ದೃಷ್ಟಿಕೋನದಿಂದ ಕಂಡು ಹೊಸ ರೀತಿಯಲ್ಲಿ ವ್ಯಾಖ್ಯಾನಿಸಿದ ಸಾಹಸಿ ಮತ್ತು ಮೇಧಾವಿ. ಕಲಾಕೃತಿಗಳನ್ನು ತನ್ನ ನೂತನ ಸಿದ್ಧಾಂತದ ಒರೆಗಲ್ಲಿನ ಮೇಲೆ ತಿಕ್ಕಿ ನೋಡಿ ಕವಿ ಮತ್ತು ಕಾವ್ಯಗಳ ಮೂಲ್ಯಾಂಕನ ಮಾಡುವ ರೀತಿಯಲ್ಲಂತೂ ಒಂದು ಮೈಲಿಗಲ್ಲೆನಿಸಿ, ತನ್ಮೂಲಕ ಸಾಹಿತ್ಯ ವಿಮರ್ಶೆಗೆ ಹೊಸ ಆಯಾಮ ನೀಡಿದವನು. ಇಂಥ ಆಚಾರ್ಯನ ಕಾಲ, ದೇಶ, ಕೃತಿಗಳ ಬಗೆಗೆ ಸ್ಥೂಲವಾಗಿ ವಿಚಾರಿಸಬಹುದು.

ನಮ್ಮ ದೇಶದ ಬಹುತೇಕ ಕವಿಗಳಂತೆ ಅತಿ ವಿನಯದಿಂದಲೋ ಏನೋ ತನ್ನ ಕೃತಿಯಲ್ಲಿ ಎಲ್ಲಿಯೂ ತನ್ನ ಸ್ವಂತ ವಿಚಾರಗಳ ಬಗ್ಗೆ ಏನೂ ಹೇಳಿಕೊಂಡಿಲ್ಲ. ಅದು ಅವನ ಕೃತಿಯಲ್ಲಿ ಸಿಗಬಹುದಾದ ಆಂತರಿಕ ಸಾಕ್ಷ್ಯಗಳು, ಇತರೆ ಕೃತಿಗಳು ಮತ್ತು ಕವಿಗಳನ್ನೇ ಅವಲಂಬಿಸಿದೆ.

ಕುಂತಕನ ಕಾಲವನ್ನು ನಿರ್ಣಯಿಸುವಲ್ಲಿ ಅವನು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಪ್ರಸ್ತಾಪಿಸುವ ಕವಿಗಳು ಮುಖ್ಯರಾಗುತ್ತಾರೆ. ಕಾಳಿದಾಸ, ಬಾಣ, ಭವಭೂತಿ ಮುಂತಾದ ಕವಿಗಳ ಹೆಸರುಗಳನ್ನು ಉಲ್ಲೇಖಿಸುತ್ತಾನಾದ್ದರಿಂದ, ಕುಂತಕನು ಈ ಕವಿಗಳ ತರುವಾಯದಲ್ಲಿ ಅಂದರೆ 7-8ನೇ ಶತಮಾನದ ನಂತರ ಜೀವಿಸಿರಬೇಕೆಂಬುದು ನಿಶ್ಚಿತ.

ಕುಂತಕನು ಆನಂದವರ್ಧನ, ರಾಜಶೇಖರ ಇವರ ಹೆಸರುಗಳನ್ನು ಹೇಳದಿದ್ದರೂ, ಅವರ ಕೃತಿಗಳಿಂದ ಧಾರಾಳವಾಗಿ ಉದ್ಧರಿಸಿದ್ದಾನೆ. ಆನಂದವರ್ಧನನ್ನು ಕುರಿತು 'ಅಭಿಯುಕ್ತತರೈಃ' ಎಂದು ಗೌರವವಾಚಿ ಶಬ್ದವನ್ನು ಬಳಸಿದ್ದಾನೆ. 'ಪ್ರತೀಯಮಾನ'ವನ್ನು ಕುರಿತ ಧ್ವನ್ಯಾಲೋಕದ ಈ ಶ್ಲೋಕವನ್ನು ತನ್ನ ಕೃತಿಯಲ್ಲಿ ಉದ್ಧರಿಸಿದ್ದಾನೆ.

ಪ್ರತೀಯಮಾನಂ ಪುನರನ್ಯದೇವ ವಸ್ತ್ವಸ್ತಿ ವಾಣೀಷು ಮಹಾಕವೀನಾಂ
ಯತ್ತತ್ಪ್ರಸಿದ್ಧಾವಯವಾತಿರಿಕ್ತಂ ವಿಭಾತಿ ಲಾವಣ್ಯಮಿವಾಂಗನಾಸು

[ಧ್ವನ್ಯಾ - 1-4]

ಅಲ್ಲದೆ, ಧ್ವನ್ಯಾಲೋಕದಲ್ಲಿ ಉದ್ಧೃತವಾಗಿರುವ ಆನಂದವರ್ಧನನ 'ವಿಷಮ ಬಾಣಲೀಲೆ' ಎಂಬ ಪ್ರಾಕೃತ ಗ್ರಂಥದ ಈ ಶ್ಲೋಕವನ್ನು ಕುಂತಕನು, ತನ್ನ ಗ್ರಂಥದ ಎರಡನೇ ಉನ್ಮೇಷದ

26ನೇ ಉದಾಹರಣೆಯಾಗಿ ಉದ್ಧರಿಸಿದ್ದಾನೆ.

> ತದಾ ಜಾಯಂತೇ ಗುಣಾ ಯದಾತೇ ಸಹೃದಯೈರ್ಗೃಹ್ಯಂತೇ
> ರವಿಕಿರಣಾನುಗೃಹೀತಾನಿ ಭವಂತಿ ಕಮಲಾನಿ ಕಮಲಾನಿ
>
> (ಪ್ರಾಕೃತ ಶ್ಲೋಕದ ಸಂಸ್ಕೃತ ಛಾಯೆ)

ರಸವದಲಂಕಾರವನ್ನು ಖಂಡಿಸುವಾಗ, ಅಲ್ಲಿಂದಲೇ ಇನ್ನೊಂದು ಕಾರಿಕೆ ಮತ್ತು ಅದರ ವೃತ್ತಿಯಲ್ಲಿ ಉದ್ಧೃತವಾಗಿರುವ "ಕ್ಷಿಪ್ತೋ ಹಸ್ತಾವಲಂಬಿನಃ" ಹಾಗೂ 'ಕಿಂ ಹಾಸ್ಯೇನ' ಈ ಉದಾಹರಣೆಗಳನ್ನೂ ಉದ್ಧರಿಸಿದ್ದಾನೆ. ಇವರಿಂದ ಕುಂತಕನು ಆನಂದವರ್ಧನನ ತರುವಾಯದವನು ಎಂಬುದು ನಿಶ್ಚಿತ.

ಆನಂದವರ್ಧನನು ಕಾಶ್ಮೀರದ ರಾಜ ಅವಂತಿವರ್ಮನ ಕಾಲದಲ್ಲಿದ್ದನೆಂದು ರಾಜ ತರಂಗಿಣಿಯಲ್ಲಿ ಸ್ಪಷ್ಟವಾಗಿ ಉಕ್ತವಾಗಿದೆ. ಈ ಅವಂತಿವರ್ಮನು 857ರಿಂದ 884ರವರೆಗೆ ಕಾಶ್ಮೀರವನ್ನು ಆಳಿದವನು. ಆದ್ದರಿಂದ ಆನಂದವರ್ಧನನು 9ನೇ ಶತಮಾನದ ಉತ್ತರಾರ್ಧದವನು.

ಕುಂತಕನು ರಾಜಶೇಖರನ ಕೃತಿಗಳಾದ ಕರ್ಪೂರ ಮಂಜರಿ, ವಿದ್ಧಶಾಲಭಂಜಿಕಾ, ಬಾಲರಾಮಾಯಣ ಮುಂತಾದ ಕೃತಿಗಳಿಂದಲೂ ಉದ್ಧರಿಸಿ ಕೊಟ್ಟಿದ್ದಾನೆ ಮತ್ತು ರಾಜಶೇಖರನ ಹೆಸರನ್ನು ಭವಭೂತಿಯ ಜೊತೆಯಲ್ಲಿ "ಭವಭೂತಿ ರಾಜಶೇಖರ ವಿರಚಿತೇಷು ಬಂಧ ಸೌಂದರ್ಯ ಸುಭಗೇಷು" ಎಂದು ಸ್ಪಷ್ಟವಾಗಿ ಉಲ್ಲೇಖಿಸಿದ್ದಾನೆ. ರಾಜಶೇಖರನು ಕೂಡಾ ಆನಂದವರ್ಧನನ ಹೆಸರನ್ನು ಹೇಳುವುದರಿಂದ, ಆನಂದವರ್ಧನನಿಗಿಂತ ಅವನು ಈಚಿನವನು ಎಂಬುದು ನಿಶ್ಚಿತ. ರಾಜಶೇಖರನು ತಾನು ಮಹೇಂದ್ರ ಪಾಲಕನೆಂಬ ರಾಜನಿಗೆ ಗುರುವಾಗಿದ್ದೆನೆಂದು ಹೇಳುತ್ತಾನೆ. 'ಸಿಯಾಡೋಣಿ' ಶಾಸನದ ಪ್ರಕಾರ ಮಹೇಂದ್ರ ಪಾಲನ ಕಾಲ 903-907. 'ಅಸ್ನೀ' ಶಿಲಾಶಾಸನದಲ್ಲಿ ಹೇಳಲಾಗಿರುವ ಮಹೀಪಾಲನು ಮಹೇಂದ್ರಪಾಲನ ಮಗ, ರಾಜಶೇಖರನು ಬಾಲಭಾರತದಲ್ಲಿ ಉಲ್ಲೇಖಿಸಿರುವ ಮಹೀಪಾಲನು ಇವನೇ ಎಂದು ಫ್ಲೀಟರು ತೋರಿಸಿಕೊಟ್ಟಿದ್ದಾರೆ 'ಸಿಯಾಡೋಣಿ' ಶಾಸನದ ಪ್ರಕಾರ ಮಹೀಪಾಲನ ಕಾಲ 917. ಆದ್ದರಿಂದ ರಾಜಶೇಖರನು ಮಹೀಪಾಲನು ಆಳುತ್ತಿದ್ದ 903ರ ಹೊತ್ತಿಗೆ 40 ವರ್ಷದವನಿದ್ದಿರಬೇಕೆಂದು ಭಾವಿಸಿದರೂ ಅವನ ಕಾಲ 860ರ ನಂತರ 930ರ ಮುಂಚೆ ಎಂದಿಟ್ಟುಕೊಳ್ಳಬಹುದು.*[1] ಹಾಗಾಗಿ ಕುಂತಕನ ಕಾಲದ ಕೆಳಗಿನ ಗಡುವನ್ನು 920-925 ಎಂದಿಟ್ಟುಕೊಳ್ಳಬಹುದು.

ವ್ಯಕ್ತಿ ವಿವೇಕಕಾರನಾದ ಮಹಿಮಭಟ್ಟನು, ತನ್ನ ಗ್ರಂಥದಲ್ಲಿ ಕುಂತಕನನ್ನು ತೀವ್ರವಾಗಿ ಖಂಡಿಸಿದ್ದಾನೆ. ಅವನು ಕುಂತಕನ ಹೆಸರನ್ನು ಸ್ಪಷ್ಟವಾಗಿ ಪ್ರಸ್ತಾಪಿಸುತ್ತಾನೆ.

---

*1. ರಾಧೇಶ್ಯಾಮ್ ಮಿಶ್ರ ಹಿಂದೀ ವಕ್ರೋಕ್ತಿ ಜೀವಿತದ ಪೀಠಿಕೆ ಪುಟ - 9

ಕಾವ್ಯ ಕಾಂಚನ ಕಷಾಶ್ಮ ಮಾನಿನಾ ಕುಂತಕೇನ ನಿಜಕಾವ್ಯ ಲಕ್ಷ್ಮಣಿ. |
ಯಸ್ಯಸರ್ವ ನಿರವದ್ಯತೋದಿತಾ ಶ್ಲೋಕ ಏವ ಸ ನಿದರ್ಶಿತೋ ಮಯಾ ||

ಮಹಿಮಭಟ್ಟನ ಕಾಲ 11ನೇ ಶತಮಾನ. ಆದ್ದರಿಂದ ಕುಂತಕನು 11ನೇ ಶತಮಾನಕ್ಕಿಂತ ಹಿಂದಿನವನೆಂಬುದರಲ್ಲಿ ಸಂಶಯವಿಲ್ಲ.

ಆದರೆ ಎಷ್ಟು ಹಿಂದಿನವನೆಂದು ಗೊತ್ತುಪಡಿಸುವಾಗ ಅಭಿನವ ಗುಪ್ತನ ಕಾಲವನ್ನಾಧರಿಸಿ ನಿರ್ಣಯಿಸಲಾಗುತ್ತದೆ. ಕುಂತಕನೇ ಅಭಿನವ ಗುಪ್ತನಿಗಿಂತ ಹಿಂದಿನವನು ಎಂಬುದು ಡಾ. ಲಾಹಿರಿ ಮುಖರ್ಜಿಯವರ ವಾದ. ಅಲ್ಲದೆ ವಕ್ರೋಕ್ತಿಯ ಬಗೆಗಿನ ಅಭಿನವನ ಉಕ್ತಿಗಳು ಕುತಂಕನವೇ ಎಂಬುದು ಹಾಗೂ ಕುಂತಕನ ವಕ್ರೋಕ್ತಿ ಭರತನು ಹೇಳುವ ಲಕ್ಷಣವೇ ಎಂದು ಅಭಿನವನು ಗುರುತಿಸುತ್ತಾನೆನ್ನುತ್ತಾರೆ.[2] ಪ್ರಥಮ ಉನ್ಮೇಷದ (56)ನೇ ಉದಾಹರಣೆ 'ಮೈಥಿಲಿ ತಸ್ಯದಾರಾಃ' ಎಂಬುದರ ಲಿಂಗ ವೈಚಿತ್ರ್ಯ ವಕ್ರತೆಯನ್ನು ವರ್ಣಿಸುತ್ತ, ಕುಂತಕನು ವೃತ್ತಿಯಲ್ಲಿ

> **"ಅನ್ಯದಪಿ ಲಿಂಗ ವೈಚಿತ್ರ್ಯ ವಕ್ರತ್ವಂ" - ಯತ್ರಾನೇಕ ಲಿಂಗ ಸಂಭವೇಽಪಿ ಸೌಕುಮಾರ್ಯಾತ್ ಕವಿಭಿಃ ಸ್ತ್ರೀಲಿಂಗಮೇವ ಪ್ರಯುಜ್ಯತೇ ನಾಮ್ಯೆವ ಸ್ತ್ರೀತಿ ಪೇಶಲಮ್ ಇತಿ ಕೃತ್ವಾ - ಎಂದು ಹೇಳಿ "ಏತಾಂ ಪಶ್ಯಪುರಸ್ತಟೀಮ್"[3]**

ಎಂಬ ಉದಾಹರಣೆ ನೀಡಿದ್ದಾನೆ

ಎರಡನೇ ಉನ್ಮೇಷದಲ್ಲಿ ಇದೇ ಲಿಂಗವೈಚಿತ್ರ್ಯ ವಕ್ರತೆಯನ್ನು ವರ್ಣಿಸುತ್ತ -

> **ಸತಿ ಲಿಂಗಾಂತರೇ ಯತ್ರ ಸ್ತ್ರೀಲಿಂಗಂ ಚ ಪ್ರಯುಜ್ಯತೇ**
> **ಶೋಭಾ ನಿಷ್ಪತ್ತಯೇ ಯಸ್ಮಾನ್ನಾಮ್ಯೆವ ಸ್ತ್ರೀತಿಪೇಶಲಮ್[4]**

ಎಂದು ಹೇಳಿ ಇದಕ್ಕೆ ಉದಾಹರಣೆಯಾಗಿ - 'ತಟೀ ತಾರಂ ತಾಮ್ಯತಿ' - ಶ್ಲೋಕವನ್ನು ಉದಾಹರಣೆಯಾಗಿ ನೀಡಿದ್ದಾನೆ.

ಸಮಾನ ವಾಚಕಗಳಲ್ಲಿ ಯಾವುದಾದರೊಂದರ ಸೌಂದರ್ಯ ಪ್ರತಿಪಾದನೆ ಮಾಡುತ್ತ ಅಭಿನವನು -

---

2. The terms and expressions used by Abhinava are undoubtedly those of Kuntaka and this makes it highly probable that the Vakrokti Jivita appeared earlier than Abhinava Bharathi and Abhinava quite consciously identified Lakshana (Bharata) with Kuntaka's vakrokti.–
Concept of Riti and Guna - p - 17
ಶ್ರೀ ರಾಧೇಶ್ಯಾಮ್ ಮಿಶ್ರರ ಹಿಂದೀ ವಕ್ರೋಕ್ತಿ ಜೀವಿತದ ಪೀಠಿಕೆಯಿಂದ ಉದ್ಧೃತ - ಪುಟ 10
3. ಡಾ. ಕೆ. ಕೃಷ್ಣಮೂರ್ತಿ (ಸಂ) ವಕ್ರೋಕ್ತಿ ಜೀವಿತ ಪು. 31-32
4. ಡಾ. ಕೆ. ಕೃಷ್ಣಮೂರ್ತಿ (ಸಂ.) ಅದೇ ಪು. 2-22 ಪು. 106

'ತಟೀತಾರಂತಾಮ್ಯತಿ ಇತ್ಯತ್ರ ತಟ ಶಬ್ದಸ್ಯ ಪುಂಸ್ತ್ವ
ನಪುಂಸಕತ್ವೇ ಅನಾದೃತ್ಯ ಸ್ತ್ರೀತ್ವಮೇವಾಶ್ರಿತಂ
ಸಹೃದಯೈಃ ಸ್ತ್ರೀತಿ ನಾಮಾಪಿ ಮಧುರಮ್' ಇತಿ ಕೃತ್ವಾ

ಎಂದು ಹೇಳಿದ್ದಾನೆ.

ಇದರಿಂದ ಕುಂತಕನು, ಅಭಿನವ ಗುಪ್ತನಿಗಿಂತ ಮುಂಚೆಯೇ ಇದ್ದವನೆಂದು ಹೊರಪಡುತ್ತದೆ.[5]

ಡಾ. ಕೆ. ಕೃಷ್ಣಮೂರ್ತಿಯವರೂ, ಕುಂತಕನ ಸಿದ್ಧಾಂತದ ಪರಿಚಯವಿಲ್ಲದಿದ್ದರೆ, ಅಭಿನವನು ವಕ್ರೋಕ್ತಿಯನ್ನು 'ಕವಿ ವ್ಯಾಪಾರ ಸಂಘಟನೆ' ಎಂದು ವ್ಯಾಖ್ಯಾನಿಸುತ್ತಿರಲಿಲ್ಲ ಎಂದು ಹೇಳಿ ಕುಂತಕನು ಬಹುಶಃ ಅಭಿನವನ ಕಿರಿಯ ಸಮಕಾಲೀನನಾಗಿದ್ದಿರಬೇಕೆಂಬ ತಮ್ಮ ಮೊದಲಿನ ಹೇಳಿಕೆಯನ್ನು ಬದಲಾಯಿಸಿ "Perhaps an elder contemporary of Abhinava gupta" ಎಂದು ಅಭಿಪ್ರಾಯಪಟ್ಟಿದ್ದಾರೆ.[6]

ಹಾಗಾದರೆ, ಕುಂತಕನು ಅಭಿನವನಿಗಿಂತ ಎಷ್ಟು ಹಿಂದೆ ಜೀವಿಸಿದ್ದಿರಬಹುದು ?

ಡಾ. ಕಾಂತಿಚಂದ್ರ ಪಾಂಡೇಯ ಅವರು, ತಮ್ಮ "ಅಭಿನವಗುಪ್ತ" ಎಂಬ ಸಂಶೋಧನ ಗ್ರಂಥದಲ್ಲಿ ಅಭಿನವಗುಪ್ತನು, 990ರಿಂದ 1014-15ರ ಅವಧಿಯಲ್ಲಿ ತನ್ನ ಗ್ರಂಥ ರಚಿಸಿರಬಹುದೆನ್ನುತ್ತಾರೆ. ಬಹುಶಃ ಅವನು 950-60ರ ನಡುವೆ ಹುಟ್ಟಿದ್ದಿರಬೇಕೆಂದು ತೀರ್ಮಾನಿಸುತ್ತಾರೆ. ಕುಂತಕನು ಈ ಕಾಲಾವಧಿಗಿಂತ 25-30 ವರ್ಷದ ಹಿಂದೆ ಇದ್ದಿರಬೇಕೆಂದು ಊಹಿಸಬಹುದು. ಅಂದರೆ ಕ್ರಿ. ಶ. 950ರ ಸುಮಾರಿನಲ್ಲಿ ವಕ್ರೋಕ್ತಿ ಜೀವಿತ ರಚಿತವಾಗಿದ್ದಿರಬೇಕು.[7] ಡಾ. ಕೆ. ಕೃಷ್ಣಮೂರ್ತಿಯವರೂ ಇದೇ ಅವಧಿ ಕುಂತಕನ ಕೃತಿ ರಚನಾ ಕಾಲವಾಗಿದ್ದಿರಬೇಕೆನ್ನುತ್ತಾರೆ.[8]

ಕೃತಿಯ ಹೆಸರು

ವಕ್ರೋಕ್ತಿ ಜೀವಿತದ ಜೊತೆ ಜೊತೆಯಲ್ಲೇ 'ಕಾವ್ಯಾಲಂಕಾರ' ಎಂಬುದನ್ನೂ ಶೀರ್ಷಿಕೆಯ ರೂಪದಲ್ಲಿ ವರ್ಣಿಸಿರುವುದುಂಟು. ಇದರಿಂದ ಕುಂತಕನ ಗ್ರಂಥದ ಹೆಸರು ಯಾವುದಿದ್ದಿರಬೇಕೆಂಬ ಗೊಂದಲವೇಳುವುದು ಸಹಜ. ಭಾಮಹ, ಉದ್ಭಟ, ರುದ್ರಟರ ಗ್ರಂಥಗಳಿಗೂ ಕಾವ್ಯಾಲಂಕಾರವೆಂಬ ಹೆಸರೇ ಇದೆ. ಡಾ. ಕೆ. ಕೃಷ್ಣಮೂರ್ತಿಯವರು ಈ ಬಗ್ಗೆ ಅತ್ಯಂತ ಸಮರ್ಪಕವಾದ ನಿರ್ಣಯಕ್ಕೆ ಬಂದಿದ್ದಾರೆ - "It appears that Kavyalankara was

---

5. ಶ್ರೀ ರಾಧೇಶ್ಯಾಮ್ ಮಿಶ್ರ ಅವರ ಹಿಂದೀ ವಕ್ರೋಕ್ತಿ ಜೀವಿತದ ಪೀಠಿಕಾ ಭಾಗದಿಂದ ಉದ್ಧೃತ (ಪುಟ 11)
6. ಡಾ. ಕೆ. ಕೃಷ್ಣಮೂರ್ತಿ ವಕ್ರೋಕ್ತಿ ಜೀವಿತ ಪುಟ xx
7. ರಾಧೇಶ್ಯಾಮ್‌ಮಿಶ್ರ ಹಿಂದೀ ವಕ್ರೋಕ್ತಿ ಜೀವಿತ ಪುಟ 14
8. ವಕ್ರೋಕ್ತಿ ಜೀವಿತ ಡಾ. ಕೆ. ಕೃಷ್ಣಮೂರ್ತಿ ಪುಟ xiv

the general title of all the works on poetics and specific title could be different. We may be pretty certain that Vakrokti Jivita was the specific title given to the work by the author[9]

ಅಲ್ಲದೆ ಪ್ರತಿಯೊಂದು ಉನ್ಮೇಷದ ಮುಕ್ತಾಯ ವಾಕ್ಯದಲ್ಲಿ "ರಾಜಾನಕ ಕುಂತಕ ವಿರಚಿತೇ ವಕ್ರೋಕ್ತಿ ಜೀವಿತೇ ಕಾವ್ಯಾಲಂಕಾರೇ" ಎಂದು ಸ್ಪಷ್ಟವಾಗಿ ಹೇಳಿದೆ. ಆದ್ದರಿಂದ ಅಲಂಕಾರದ ವಿಷಯವನ್ನು ಪ್ರತಿಪಾದಿಸುವ 'ವಕ್ರೋಕ್ತಿ ಜೀವಿತ' ಎಂದೇ ಅರ್ಥ. ಮುಂದಿನ ಆಲಂಕಾರಿಕರೆಲ್ಲರೂ ಇದನ್ನು ವಕ್ರೋಕ್ತಿ ಜೀವಿತ ಎಂದೇ ಹೆಸರಿಸುತ್ತಾರೆ ಮತ್ತು ಕೃತಿಕಾರನನ್ನು ವಕ್ರೋಕ್ತಿಜೀವಿತಕಾರ ಎಂದು ಹೇಳುತ್ತಾರೆ ಹಾಗಾಗಿ ಅಲಂಕಾರದ ವಿವೇಚನೆಯನ್ನು ವಸ್ತುವಾಗುಳ್ಳ ಈ ಗ್ರಂಥದ ಹೆಸರು "ವಕ್ರೋಕ್ತಿ ಜೀವಿತ" ಎಂಬುದೇ ಸರಿ.

ಗ್ರಂಥಕಾರನ ಹೆಸರು :

ಮದ್ರಾಸ್‌ನಲ್ಲಿ ದೊರೆತ ಕೆಲವು ಹಸ್ತ ಪ್ರತಿಗಳಲ್ಲಿ ವಕ್ರೋಕ್ತಿ ಜೀವಿತದ ಕರ್ತೃ-ಕುಂತಲಕ ಎಂದಿರುವುದು ಕಂಡುಬರುತ್ತದೆ ಎಂದು ಡಾ. ಕೆ. ಕೃಷ್ಣಮೂರ್ತಿಯವರು ಉಲ್ಲೇಖಿಸುತ್ತಾರೆ. ರಘುವಂಶದ ಮೇಲಿನ ವ್ಯಾಖ್ಯಾನ ಗ್ರಂಥದಲ್ಲಿ ಅರುಣಗಿರಿನಾಥನು "ಕುಂತಲಕ" ಎಂದು ಹೇಳಿದ್ದರೆ ಅದೇ ಅರುಣಗಿರಿನಾಥನು 'ಕುಮಾರ ಸಂಭವದ' ವ್ಯಾಖ್ಯಾನದಲ್ಲಿ "ಉಕ್ತಂ ಚ ಕುಂತಕೇನ" ಎಂದು ಸ್ಪಷ್ಟವಾಗಿ ಹೇಳಿದ್ದಾನೆ. ಜೈಸಲ್‌ಮೇರ್ ಪ್ರತಿಯಲ್ಲಿ ಕುಂತಕ ಎಂದೇ ಇರುವುದಾಗಿ ತಿಳಿದು ಬರುತ್ತದೆ. ಅಲ್ಲದೆ ಮಹಿಮಭಟ್ಟನನ್ನೂ ಒಳಗೊಂಡಂತೆ ಎಲ್ಲ ಆಲಂಕಾರಿಕರೂ ವಕ್ರೋಕ್ತಿ ಜೀವಿತಕಾರನ ಹೆಸರಾಗಿ 'ಕುಂತಕ' ಎಂಬುದನ್ನೇ ಉಲ್ಲೇಖಿಸುತ್ತಾರೆ. ಹಾಗಾಗಿ ಕುಂತಕ ಎಂಬುದೇ ಸರಿ. 'ಕುಂತಲಕ' ಎಂಬುದನ್ನು ಕೈ ಬಿಡಬಹುದು.

ಕುಂತಕನ ದೇಶ ವಿವಾದಗ್ರಸ್ತ ವಿಷಯವಾಗಿ ಉಳಿದಿಲ್ಲ. ಆನಂದವರ್ಧನ, ಅಭಿನವ ಗುಪ್ತ ಮಮ್ಮಟ ಮುಂತಾದವರಿಗೆ ಹೇಗೋ ಹಾಗೆಯೇ ಪ್ರತ್ಯಭಿಜ್ಞಾ ದರ್ಶನಕ್ಕೆ ಹೆಸರಾದ ಕಾಶ್ಮೀರವೇ ಕುಂತಕನ ದೇಶವೂ ಹೌದು.

ಪ್ರತ್ಯಭಿಜ್ಞಾದರ್ಶನ

ಪ್ರತ್ಯಭಿಜ್ಞೆ ಎಂದರೆ ಸ್ಮರಣೆ ಎಂದರ್ಥ. ಪ್ರತ್ಯಕ್ಷಾನುಭವ ಮತ್ತು ಶುದ್ಧಸ್ಮೃತಿಗಳ ಐಕ್ಯತೆಯನ್ನೂ ಕಂಡುಕೊಳ್ಳುವುದರಲ್ಲಿ ಅದರ ವಿಶಿಷ್ಟತೆ ಇದೆ.* ವ್ಯಕ್ತಿಗೆ ಆತ್ಮಜ್ಞಾನವನ್ನು ಪಡೆದುಕೊಳ್ಳುವಲ್ಲಿ ನೆರವು ನೀಡುತ್ತದೆ ಮತ್ತು ಅಜ್ಞಾನದ ಪರದೆಯನ್ನು ಸರಿಸಿ ಹಾಕುವ

9. ಡಾ. ಕೆ. ಕೃಷ್ಣಮೂರ್ತಿ ವಕ್ರೋಕ್ತಿ ಜೀವಿತ - ಪು. xiv

* ಜಿ.ಟಿ. ದೇಶಪಾಂಡೆ ಅಭಿನವಗುಪ್ತ. ಪು. - 32 ಅನುವಾದ ಶ್ರೀ ಎನ್. ಬಾಲಸುಬ್ರಹ್ಮಣ್ಯ

ಮೂಲಕ ಆತ್ಮಜ್ಞಾನದ ಗುರಿಸಾಧನೆಯ ಮಾರ್ಗಗಳನ್ನು ಯೋಜಿಸುತ್ತದೆ. ಜೀವಾತ್ಮನೂ ಪರಮಾತ್ಮನೂ ಒಂದೇ. ಆದರೆ ಆ ಐಕ್ಯದ ಅರಿವಾಗುವವರೆಗೆ ನಾವು ಐಕ್ಯತೆಯ ಆನಂದವನ್ನು ಸವಿಯಲಾರೆವು. ಆ ಅಂಶವನ್ನು ನಾವು ಅರಿತುಕೊಳ್ಳುವಂತೆ ಮಾಡುವುದೇ ಪ್ರತ್ಯಭಿಜ್ಞಾ ದರ್ಶನದ ಗುರಿ.

ಪ್ರತ್ಯಭಿಜ್ಞಾದರ್ಶನದಲ್ಲಿ ಸರ್ವಾತ್ಮಕವಾದ ವಿಶ್ವಚೈತನ್ಯ ಸ್ವರೂಪಿಯನ್ನು ಮಹೇಶ್ವರ ಎಂದು ಕರೆಯಲಾಗಿದೆ. ಹಾಗೂ ಆ ಶಿವನನ್ನು ಏಕಮಾತ್ರ ಪರಮತತ್ತ್ವವೆಂದು ಸಾರುತ್ತ ಈ ಇಡೀ ಬ್ರಹ್ಮಾಂಡದ ರಚನೆ ಅವನ ಶಕ್ತಿಯ ಪರಿಸ್ಪಂದದಿಂದ ಆಗಿದೆ ಎಂದು ಹೇಳಲಾಗುತ್ತದೆ. ಈ ಪರಿಸ್ಪಂದವೇ ಅವನ ಉಪಕರಣ. ಅದ್ವೈತ ಶಿವನು ಅನೇಕವಾಗಿ ತೋರಿ ಬರುವುದೇ ಸ್ಪಂದ. ಪ್ರತ್ಯಭಿಜ್ಞಾದರ್ಶನದಲ್ಲಿ ಪರಶಿವನ ಅದ್ವೈತತೆ ಸ್ಥಾಪಿಸಲು ಜಗತ್ತನ್ನು ಸ್ಪಂದರೂಪವೆಂದು ಹೇಳಿದೆ. ಒಬ್ಬನೇ ಶಿವನಿಂದ ಮೂಡಿಬಂದ ಜಗತ್ತಿನ ವಿಭಿನ್ನ ವೈಚಿತ್ರ್ಯತೆಯ ಆಭಾಸ-ಮಯೂರಾಂಡರಸನ್ಯಾಯದಂತೆ. ಶಿವ ಅಥವಾ ವಿಶ್ವಚೈತನ್ಯವು ಶಕ್ತಿಗಳ ಮೂಲಕ ತನ್ನನ್ನು ಅಭಿವ್ಯಕ್ತಗೊಳಿಸಿಕೊಳ್ಳುತ್ತದೆ. ಶೈವ ಚಿಂತನೆಯ ಪ್ರಕಾರ ಶಕ್ತಿ ಮತ್ತು ಅದನ್ನು ಹೊಂದಿರುವವರು ಅಭಿನ್ನ. 'ಶಕ್ತಿ ಶಕ್ತಿಮತೋರಭೇದಾತ್' ಎಂದು ಮಾರ್ಗ ವಿವೇಚನೆಯ ಸಂದರ್ಭದಲ್ಲಿ ಹೇಳಿಯೇ ಇದ್ದಾನೆ. ಗ್ರಂಥಾರಂಭದಲ್ಲಿ ಬರುವ ಶಿವಸ್ತುತಿಯಲ್ಲಿ ಶಿವ ಮತ್ತು ಶಕ್ತಿಯ ಈ ಅಭಿನ್ನತೆಯನ್ನು ಕುಂತಕ ಸಾರಿ ಹೇಳಿದ್ದಾನೆ.

> **ಜಗತ್ತ್ರಿತಯ ವೈಚಿತ್ರ್ಯಚಿತ್ರಕರ್ಮವಿಧಾಯಿನಮ್**
> **ಶಿವಂ ಶಕ್ತಿ ಪರಿಸ್ಪಂದ ಮಾತ್ರೋಪಕರಣಂ ನುಮಃ**

ತನ್ನ ಐಮೂ ಶಕ್ತಿಗಳ ಮೂಲಕ ಪರಶಿವನು ಈ ಜಗತ್ತನ್ನು ಪರಿಸ್ಫುರಣಗೊಳಿಸುತ್ತಾನೆ. ಅಂದರೆ ಶಿವನಿಗೆ ತಾನು ಅನೇಕವಾಗಬೇಕೆನಿಸಿದಾಗ ಅವನ ಶಕ್ತಿಯಲ್ಲಿ ಸ್ಪಂದನ ಕ್ರಿಯೆ ಉಂಟಾಗುತ್ತದೆ. ಶಕ್ತಿಯ ಈ ಪರಿಸ್ಪಂದವೇ ವಾಸ್ತವವಾಗಿ ಜಗತ್ತು. ಜಗತ್ತಿನ - 'ಸತ್ತೆ' ಚಲನ (ಸ್ಪಂದ) ರೂಪವೇ ಆಗಿದೆ ಮತ್ತು ಈ ಸ್ಪಂದ ಶಕ್ತಿಯ ಸ್ವರೂಪವೇ ಆಗಿದೆ. ಶಿವ ಮತ್ತು ಶಕ್ತಿ ಅಭಿನ್ನವೆಂದು ಆಗಲೇ ಮನವರಿಕೆ ಮಾಡಿಕೊಡಲಾಗಿದೆ. ಹಾಗಾಗಿ ಜಗತ್ತು ಪರಶಿವನಿಂದ ಬೇರೆಯಾದ್ದಲ್ಲ. ಅದು ಅದ್ವೈತ. ಅದ್ವೈತ ಶಿವನು ಅನೇಕವಾಗಿ ತೋರಿಬರುವುದೆ ಸ್ಪಂದ. ಈ ರೀತಿಯಲ್ಲಿ ಪ್ರತ್ಯಭಿಜ್ಞಾ ದರ್ಶನದಲ್ಲಿ ಪರಶಿವನ ಅದ್ವೈತತೆಯನ್ನು ಸ್ಥಾಪಿಸಲು ಜಗತ್ತನ್ನು ಸ್ಪಂದ ರೂಪವೆಂದು ಹೇಳಲಾಗಿದೆ. ಹೆಚ್ಚು ಕಡಿಮೆ ಕುಂತಕನ ಸಮಕಾಲೀನನೇ ಆಗಿದ್ದ ಅಭಿನವ ಗುಪ್ತನೂ ಪ್ರತ್ಯಭಿಜ್ಞಾದರ್ಶನದ ಅನುಯಾಯಿ. ಅಷ್ಟೇ ಅಲ್ಲ; ತಂತ್ರಾಲೋಕವೆಂಬ ಹೆಸರಾಂತ ಪ್ರತ್ಯಭಿಜ್ಞಾದರ್ಶನದ ಸಿದ್ಧಾಂತ ಗ್ರಂಥವನ್ನು ಬರೆದ ಪ್ರಸಿದ್ಧ ಆಚಾರ್ಯನೆಂಬುದನ್ನು ಈ ಸಂದರ್ಭದಲ್ಲಿ ನೆನೆಯಬಹುದು.

[ಪ್ರತ್ಯಭಿಜ್ಞಾದರ್ಶನದ ಬಗೆಗಿನ ಈ ಕೆಲವು ವಿಚಾರಗಳನ್ನು ರಾಧೇಶ್ಯಾಮ್‌ಮಿಶ್ರರ ಹಿಂದೀ ವಕ್ರೋಕ್ತಿ ಜೀವಿತದಿಂದ ಸಂಗ್ರಹಿಸಿದೆ]

ಗ್ರಂಥಾಂತರಂಗ

ವಕ್ರೋಕ್ತಿ ಜೀವಿತ ಕೃತಿಯು (1) ಕಾರಿಕಾ ಭಾಗ (2) ವೃತ್ತಿ ಭಾಗ ಹಾಗೂ (3) ಲಕ್ಷ್ಯ ಭಾಗಗಳೆಂಬ ಮೂರು ಭಾಗಗಳನ್ನು ಒಳಗೊಂಡಿದೆ. ಇದರ ಜೊತೆಗೆ ಕಾರಿಕೆಗಳಿಗೆ ಪೂರಕವಾಗುವಂಥ- ಅಂತರಶ್ಲೋಕಗಳೆಂಬುವು ಅಲ್ಲಲ್ಲಿ ಬರುತ್ತವೆ. ಕಾರಿಕೆ ಮತ್ತು ವೃತ್ತಿಗಳನ್ನು ರಚಿಸಿದವನು ಒಬ್ಬನೇ ವ್ಯಕ್ತಿ ಎಂಬುದೇ ಸಾಮಾನ್ಯ ಗ್ರಹಿಕೆ.

ಮೇಲುನೋಟಕ್ಕೆ ಅಪೂರ್ಣವೆಂಬಂತೆ ಕಂಡು ಬರುವ ಈ ಗ್ರಂಥವು ಈಗಿರುವುದಕ್ಕಿಂತ ಹೆಚ್ಚು ಮುಂದುವರಿದಂತೆ ಕಾಣುವುದಿಲ್ಲ. ಅದಕ್ಕೆ ಮುಖ್ಯ ಕಾರಣವೆಂದರೆ, ವಕ್ರತೆಯ ಪ್ರಭೇದಗಳೆಂದು ಮೊದಲಿಗೆ ಹೆಸರಿಸಲಾಗಿರುವುದೆಲ್ಲವನ್ನೂ ಸಕಲ ವ್ಯಾಖ್ಯಾನ ವಿವರಣೆಗಳೊಂದಿಗೆ ನಾಲ್ಕು ಉನ್ಮೇಷಗಳಲ್ಲಿ ನಿರೂಪಿಸಲಾಗಿದೆ. ನಾಲ್ಕೂ ಉನ್ಮೇಷಗಳೂ ಸೇರಿ ಒಟ್ಟಾರೆ 183 ಕಾರಿಕೆಗಳು ಮತ್ತು 433 ಉದಾಹೃತ ಭಾಗಗಳಿಂದ ಕೂಡಿ ವಿಸ್ತಾರವಾಗಿದೆ. ಐವತ್ತೆಂಟು ಕಾರಿಕೆಗಳಿಂದ ಕೂಡಿರುವ ಮೊದಲ ಉನ್ಮೇಷದಲ್ಲಿ ತನ್ನ ಗ್ರಂಥದ ಪ್ರತಿಪಾದ್ಯ ವಿಷಯಕ್ಕೆ ಅಗತ್ಯವಾದ ಪ್ರವೇಶದೊಂದಿಗೆ ಕಾವ್ಯ ಪ್ರಯೋಜನ ಹಾಗೂ ಆರು ವಿಧವಾದ ವಕ್ರತೆಗಳ ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಡಲಾಗಿದೆ. ಕಾವ್ಯ ಪ್ರಯೋಜನದ ವಿಷಯ, ಕಾವ್ಯ ಲಕ್ಷಣ, ಶಬ್ದ, ಅರ್ಥ ಮತ್ತು ಸಾಹಿತ್ಯದ ವಿಸ್ತೃತ ವ್ಯಾಖ್ಯೆ, ಸ್ವಭಾವೋಕ್ತಿಯ ವಿಚಾರ ಹಾಗೂ ಆರು ವಿಧವಾದ ವಕ್ರತೆಗಳ ಸಾಮಾನ್ಯ ಪರಿಚಯ ಇತ್ಯಾದಿಗಳನ್ನು ಮಾಡಲಾಗಿದೆ. ಕಾವ್ಯದಲ್ಲಿ ಬಂಧದ ವಿಷಯ ಹಾಗೂ ಮೂರೂ ಮಾರ್ಗಗಳ ವಿವೇಚನೆ ಮಾಡಿದ್ದಾನೆ. ಕುಂತಕನ ಗ್ರಂಥದ ಬಹು ಮುಖ್ಯ ವೈಶಿಷ್ಟ್ಯಗಳಲ್ಲಿ ಒಂದು, ಈ ಮಾರ್ಗ ಮತ್ತು ಅವುಗಳ ಅವಿಭಾಜ್ಯ ಅಂಗವಾದ ಗುಣವಿವೇಚನೆ. ತನಗಿಂತ ಹಿಂದಿನ ವಾಮನಾದಿಗಳ ದೇಶಾಧಾರಿತ ರೀತಿಗಳನ್ನು ಖಂಡಿಸಿ, ಮಾರ್ಗಗಳು ಕವಿ ಸ್ವಭಾವಾನುಸಾರಿ ಎಂದು ಪ್ರತಿಪಾದಿಸುವುದರ ಮೂಲಕ ಒಂದು ಕ್ರಾಂತಿಕಾರಕವಾದ ಹೆಜ್ಜೆಯನ್ನು ಹಾಕಿದ್ದಾನೆ. ಓಜ, ಪ್ರಸಾದ, ಮಾಧುರ್ಯಾದಿ ಗುಣಗಳಲ್ಲದೆ, ಲಾವಣ್ಯ, ಔಚಿತ್ಯ ಸೌಭಾಗ್ಯ ಮತ್ತು ಅಭಿಜಾತ್ಯಗಳೆಂಬ ನೂತನ ಗುಣಗಳನ್ನು ಕಲ್ಪಿಸಿ, ಅವುಗಳನ್ನು ವಿವರಿಸಲಾಗಿದೆ. ಸುಕುಮಾರ ಮತ್ತು ವಿಚಿತ್ರ ಮಾರ್ಗಗಳೆರಡರಲ್ಲೂ ಬಳಕೆಯಾಗುವ ಗುಣಗಳು, ಮಾಧುರ್ಯ, ಪ್ರಸಾದ, ಲಾವಣ್ಯ ಮತ್ತು ಅಭಿಜಾತ್ಯಗಳೆಂಬ ಗುಣಗಳೇ ಆದರೂ ಅವುಗಳು ಎರಡಕ್ಕೂ ಬೇರೆ ಬೇರೆ. ಔಚಿತ್ಯ ಮತ್ತು ಸೌಭಾಗ್ಯಗಳೆಂಬ ಗುಣಗಳು ಮಾತ್ರ ಮೂರೂ ಮಾರ್ಗಗಳಲ್ಲಿ ಪ್ರಮುಖ ಸ್ಥಾನ ಹೊಂದಿವೆ. ಹೀಗೆ ಗುಣಗಳು ಮತ್ತು ಅವುಗಳ ಲಕ್ಷಣ ನಿರೂಪಣೆ ವಿಸ್ತಾರವಾಗಿ ಬಂದಿದೆ.

ಮೊದಲ ಉನ್ಮೇಷದಲ್ಲಿ ಸ್ಥೂಲವಾಗಿ ಪರಿಚಯಿಸಲಾದ ಆರು ಪ್ರಕಾರದ ವಕ್ರತೆಗಳ ವಿಸ್ತಾರವಾದ ವಿವೇಚನೆಯೇ ಎರಡು, ಮೂರು ಮತ್ತು ನಾಲ್ಕನೇ ಉನ್ಮೇಷಗಳ ವಿಷಯ. ಒಟ್ಟು 35 ಕಾರಿಕೆಗಳನ್ನು ಒಳಗೊಂಡಿರುವ ಎರಡನೆಯ ಉನ್ಮೇಷದಲ್ಲಿ ಮೂರು ಬಗೆಯ

ವಕ್ರತೆಗಳನ್ನು ನಿರೂಪಿಸಲಾಗಿದೆ. ಅವುಗಳೆಂದರೆ ವರ್ಣವಿನ್ಯಾಸ ವಕ್ರತೆ, ಪದ ಪೂರ್ವಾರ್ಧ ವಕ್ರತೆ ಹಾಗೂ ಅವುಗಳ ಅಂತಃಪ್ರಭೇದಗಳು (ರೂಢಿ, ಪರ್ಯಾಯ, ಉಪಚಾರ, ವಿಶೇಷಣ, ಸಂವೃತಿ ಮತ್ತು ವೃತ್ತಿ ವೈಚಿತ್ರ್ಯ ವಕ್ರತೆಗಳು) ಧಾತು ವೈಚಿತ್ರ್ಯ ವಕ್ರತೆಗಳು ಹಾಗೂ ಪದಪರಾರ್ಧ ವಕ್ರತೆ. ವರ್ಣ ವಿನ್ಯಾಸ ವಕ್ರತೆಯೆಂಬುದು ಅಲಂಕಾರ ಪ್ರಸ್ಥಾನದಲ್ಲಿ ಮೊದಲಿನಿಂದ ಗುರುತಿಸಲಾದ ಅನುಪ್ರಾಸ ಮತ್ತು ಶಬ್ದಾಲಂಕಾರವೇ ಆಗಿದೆ. ಕೃದ್ವಾದಿ ಪ್ರತ್ಯಯಗಳು, ಪದದ ಭಾಗವೇ ಆಗುವಂಥ ಮುಮಾದಿ ಆಗಮಗಳ ವಕ್ರತೆ, ಭಾವ ವಕ್ರತೆ, ಲಿಂಗ ವಕ್ರತೆ ಮತ್ತು ಕ್ರಿಯಾ ವೈಚಿತ್ರ್ಯ ವಕ್ರತೆಗಳನ್ನು ಪದಪೂರ್ವಾರ್ಧ ವಕ್ರತೆಯಲ್ಲೇ ಸಮಾವೇಶಗೊಳಿಸಿದ್ದಾನೆ. ಪದ ಪೂರ್ವಾರ್ಧ ವಕ್ರತೆಯ ಐದು ಪ್ರಭೇದಗಳು ಮತ್ತು ಇವು ಸೇರಿ ಹನ್ನೊಂದು ಪ್ರಭೇದಗಳಾಗುತ್ತವೆ. ಮೂರನೇ ಪ್ರಭೇದವಾದ ಪ್ರತ್ಯಯ ವಕ್ರತೆ ಅಥವಾ ಪದ ಉತ್ತರಾರ್ಧ ವಕ್ರತೆಯಲ್ಲಿ ಕಾಲ, ಕಾರಕ, ಸಂಖ್ಯಾ, ಪುರುಷ, ಉಪಗ್ರಹ ಮತ್ತು ಪ್ರತ್ಯಯಮಾಲಾ ಎಂಬ ವಕ್ರತೆಗಳ ವ್ಯಾಖ್ಯಾನ ಮತ್ತು ಉದಾಹರಣೆಗಳ ಜೊತೆಗೆ ಉಪಸರ್ಗ ಮತ್ತು ನಿಪಾತ ವಕ್ರತೆಗಳನ್ನು ವಿವರಿಸಲಾಗಿದೆ.

ಕೊನೆಯಲ್ಲಿ ಈ ಹಲವಾರು ವಕ್ರತಾ ಪ್ರಭೇದಗಳ ಸಂಕರದಿಂದ ಉಂಟಾಗುವ ಸಂಕರ ವಕ್ರತೆಯನ್ನು ವಿವರಿಸಲಾಗಿದೆ.

ಇಡೀ ಮೂರನೇ ಉನ್ಮೇಷ ಪೂರ್ತಿಯಾಗಿ ವಾಕ್ಯ ವಕ್ರತೆಗೆ ಮೀಸಲಾಗಿದೆ. ಈ ವಾಕ್ಯ ವಕ್ರತೆಯಲ್ಲಿ ಎಲ್ಲ ಅಲಂಕಾರಗಳೂ ಸಮಾವೇಶವಾಗುತ್ತವೆ ಎಂದು ಕುಂತಕನ ಅಭಿಪ್ರಾಯ. ಅದರಿಂದಾಗಿ ಇದು ಹೆಚ್ಚು ವ್ಯಾಪಕತೆಯನ್ನು ಪಡೆದುಕೊಂಡಿದೆ. ವಿಸ್ತಾರದ ದೃಷ್ಟಿಯಿಂದಂತೂ ವಕ್ರೋಕ್ತಿ ಜೀವಿತದಲ್ಲೇ ಅತ್ಯಂತ ದೊಡ್ಡ ಅಧ್ಯಾಯ ಇದು. ಅಲಂಕಾರಗಳನ್ನು ವಿವೇಚಿಸುವ ಸಂದರ್ಭದಲ್ಲೇ ಅವನು ತೋರಿಸುವ ಹೊಸ ದೃಷ್ಟಿಕೋನ ಉಲ್ಲೇಖಾರ್ಹ. ಭಾಮಹನಿಂದ ಮೊದಲುಗೊಂಡು ಅಲ್ಲಿಯವರೆಗಿನ ಅಲಂಕಾರಿಕರೆಲ್ಲ ಹೊಸ ಹೊಸ ಅಲಂಕಾರಗಳನ್ನು ಸೇರಿಸುತ್ತ ಅಲಂಕಾರಗಳ ಸಂಖ್ಯೆಯನ್ನು ಹೆಚ್ಚಿಸುತ್ತ ಹೋದ ಸಂದರ್ಭದಲ್ಲಿ; ಅವುಗಳ ಸಂಖ್ಯಾ ಬಾಹುಳ್ಯವನ್ನು ತಗ್ಗಿಸಿ, ಅವುಗಳ ಸಂಖ್ಯೆಯನ್ನು ಮಿತಗೊಳಿಸಲು ಯತ್ನಿಸಿದ್ದಾನೆ. ಹಿಂದಿನ ಭಾಮಹಾದಿಗಳು ಹೇಳಿದ ಅನೇಕ ಅಲಂಕಾರಗಳ ವಿವೇಚನೆಯು ದೋಷಪೂರ್ಣವೆಂದೋ, ಅಪರ್ಯಾಪ್ತವೆಂದೋ ಹೇಳಿ ಹೊಸ ರೀತಿಯಲ್ಲಿ ವಿವೇಚಿಸಿದ್ದಾನೆ. ಮತ್ತೆ ಕೆಲವನ್ನು ಇತರೆ ಅಲಂಕಾರಗಳಲ್ಲಿ ಸಮಾವೇಶಗೊಳಿಸುವ ಮೂಲಕ ಅವುಗಳ ಸಂಖ್ಯೆಯನ್ನು ತಗ್ಗಿಸಿದ್ದಾನೆ.

ಮೂರನೇ ಉನ್ಮೇಷದ ಬಹಳಷ್ಟು ಕಾರಿಕೆಗಳು, ಎಸ್. ಕೆ. ಡೇ, ಆಚಾರ್ಯ ವಿಶ್ವೇಶ್ವರ (ನಗೇಂದ್ರ - ಪ್ರಧಾನ ಸಂಪಾದಕ) ಮತ್ತು ರಾಧೇಶ್ಯಾಮ್ ಮಿಶ್ರರಿಂದ ಸಂಪಾದಿತವಾದ ವಕ್ರೋಕ್ತಿ ಜೀವಿತದ ಹಿಂದೀ ಅನುವಾದಿತ ಪ್ರತಿಗಳಲ್ಲಿ ಕಂಡುಬರುವುದಿಲ್ಲ. ಈಗ ಅಚ್ಚಾಗಿರುವಂಥವುಗಳಲ್ಲಿ ಅನೇಕವು ಗ್ರಂಥಪಾತದಿಂದ ಕೂಡಿದ್ದು ಅಪೂರ್ಣವಾಗಿವೆ. ವೃತ್ತಿಭಾಗ ಹಾಗೂ ಲಕ್ಷ್ಯ ಭಾಗಗಳಲ್ಲೂ ಹೆಚ್ಚಿನ ಕೊರತೆಗಳು ಉಳಿದು ಬಿಟ್ಟಿದ್ದುವು. ಆದರೆ ಡಾ. ಕೆ. ಕೃಷ್ಣಮೂರ್ತಿಯವರು ಹೊಸದಾಗಿ ಜೈಸಲ್‌ಮೇರ್ ಪ್ರತಿಯನ್ನು ದೊರಕಿಸಿಕೊಂಡು

ಅತ್ಯಂತ ಶಾಸ್ತ್ರೀಯವಾಗಿ ಸಂಪಾದಿಸಿರುವ ಕೃತಿಯಲ್ಲಿ ಮೇಲೆ ಹೆಸರಿಸಲಾದ ಮೂರು ಸಂಪಾದಿತ ಕೃತಿಗಳಲ್ಲಿದ್ದ ಕೊರತೆಗಳನ್ನು ತುಂಬಿಸಿಕೊಡಲಾಗಿದೆ. ಸುಮಾರು 20ರಷ್ಟು ಕಾರಿಕೆಗಳು ಹೆಚ್ಚಾಗಿ ಸೇರ್ಪಡೆಯಾಗಿ ಒಟ್ಟು 64 ಕಾರಿಕೆಗಳು ಇದರಲ್ಲಿವೆ.

ವಾಕ್ಯ ವಕ್ರತೆಯ ಜೊತೆ ಜೊತೆಯಲ್ಲೇ ವಸ್ತು ವಕ್ರತೆಯನ್ನೂ ವಿವರಿಸಿದ್ದಾನೆ. ವಸ್ತುವಿನಲ್ಲಿ ಸಹಜ ಅಥವಾ ಆಹಾರ್ಯ ಎಂದು ಎರಡು ಪ್ರಕಾರಗಳು. ಮತ್ತೆ ವಸ್ತುಗಳಲ್ಲಿ ಚೇತನ ಮತ್ತು ಜಡ ಹಾಗೂ ಚೇತನದಲ್ಲಿ ಪ್ರಧಾನ ಚೇತನ ಮತ್ತು ಗೌಣ ಚೇತನ ಎಂದು ವಿಭಜನೆ ಸಾಗುತ್ತದೆ. ಮನುಷ್ಯ ಮತ್ತು ಅವನಿಗಿಂತ ಉನ್ನತ ಶ್ರೇಣಿಯವರು ಪ್ರಧಾನ ಚೇತನ, ಪಶು, ಪಕ್ಷಿ ಇತ್ಯಾದಿಗಳು ಗೌಣ ಚೇತನಗಳು.

ಮೂರನೇ ಉನ್ಮೇಷದಲ್ಲಿ ವಾಕ್ಯ ವಕ್ರತೆಯಲ್ಲಿ ಮುಖ್ಯವಾಗಿ ಚರ್ಚಿತವಾಗಿರುವುದು ಅಲಂಕಾರಗಳು. ರಸವದಲಂಕಾರದ ವಿವೇಚನೆಗೆ ತೊಡಗಿ, ಭಾಮಹ ಉದ್ಭಟರ ವಿವೇಚನೆಯನ್ನು ಒಪ್ಪದೆ, ರಸವತ್ ಒಂದು ಅಲಂಕಾರವಲ್ಲ, ಅಲಂಕಾರ್ಯ ಎನ್ನುತ್ತಾನೆ. ಹಾಗೆಯೇ ಪ್ರೇಯಸ್ ಊರ್ಜಸ್ವಿ, ಉದಾತ್ತ ಮತ್ತು ಸಮಾಹಿತಗಳು ಕೂಡ ಅಲಂಕಾರವಲ್ಲ ಎಂದು ಸಾಧಿಸುತ್ತಾನೆ. ಅನಂತರ ರಸವತ್ ಅಲಂಕಾರವನ್ನು ತನ್ನದೇ ಆದ ದೃಷ್ಟಿಯಿಂದ ವಿವೇಚಿಸಿ ಅದು ಸಕಲಾಲಂಕಾರ ಪ್ರಾಣ ಸ್ವರೂಪ ಎನ್ನುತ್ತಾನೆ. ಜೊತೆಗೆ ರಸದೊಂದಿಗೇ ಇದ್ದು ಕಾವ್ಯದಲ್ಲೆಲ್ಲಾ ರಸವು ವ್ಯಾಪ್ತವಾಗುವಂತೆ ಮಾಡುತ್ತದೆ ಎಂದು ಹೇಳುತ್ತಾನೆ. ಅಲಂಕಾರಗಳ ವಿಷಯಕ್ಕೂ ಅವನ ನಿಲುವು ಸುನಿಶ್ಚಿತ. ಕೇವಲ ಉಪಮಾ, ರೂಪಕ, ದೀಪಕ, ಉತ್ಪ್ರೇಕ್ಷೆ, ವ್ಯತಿರೇಕ, ಶ್ಲೇಷ, ಅರ್ಥಾಂತರ ನ್ಯಾಸ, ಆಕ್ಷೇಪ, ವಿಭಾವನಾ, ಪರ್ಯಾಯೋಕ್ತ, ಅಪ್ರಸ್ತುತ ಪ್ರಶಂಸೆ, ಸಸಂದೇಹ, ಅತಿಶಯೋಕ್ತಿ, ವಿರೋಧ, ಅಪಹ್ನುತಿ, ಸಂಸೃಷ್ಟಿ, ಸಂಕರ, ಸಹೋಕ್ತಿ ಇಷ್ಟು ಅಲಂಕಾರಗಳನ್ನು ಮಾತ್ರವೇ ಅವನು ಒಪ್ಪುವುದು; ಉಳಿದವನ್ನೆಲ್ಲಾ ಒಂದಲ್ಲ ಒಂದು ಅಲಂಕಾರದಲ್ಲಿ ಸಮಾವೇಶಗೊಳಿಸಿದ್ದಾನೆ.

ಉಳಿದ ಉನ್ಮೇಷಗಳಿಗಿಂತ ಗಾತ್ರದಲ್ಲಿ ಚಿಕ್ಕದಾದ ನಾಲ್ಕನೇ ಉನ್ಮೇಷ ಕೇವಲ 26 ಕಾರಿಕೆಗಳನ್ನೊಳಗೊಂಡಿದೆ. ಪ್ರಕರಣ ವಕ್ರತೆ, ಪ್ರಬಂಧ ವಕ್ರತೆಗಳನ್ನು ಇದರಲ್ಲಿ ವಿಶ್ಲೇಷಿಸಿದ್ದಾನೆ. ಒಟ್ಟಾರೆ ಪ್ರಕರಣ ವಕ್ರತೆಯಲ್ಲಿ ಒಂಬತ್ತು ಹಾಗೂ ಪ್ರಬಂಧ ವಕ್ರತೆಯಲ್ಲಿ ಆರು ಒಳ ಪ್ರಭೇದಗಳನ್ನು ಗುರುತಿಸಿ ಅವುಗಳನ್ನು ಉದಾಹರಣೆಗಳ ಸಮೇತ ಚರ್ಚಿಸಿದ್ದಾನೆ.

ವಕ್ರೋಕ್ತಿ ಜೀವಿತದ ಅಪೂರ್ವತೆ ಇರುವುದೆಲ್ಲಾ ಅದು ತನ್ನ ವಾದಗಳನ್ನು, ಸಿದ್ಧಾಂತಗಳನ್ನು ಸಮರ್ಥಿಸಲು ನೀಡುವ ವಿಪುಲವಾದ ಲಕ್ಷ್ಯಪದ್ಯಗಳಲ್ಲಿ. ಈ ಪ್ರಯೋಗಗಳ ಹಾಸು ಬೀಸು ತುಂಬ ದೊಡ್ಡದು. ಸುಮಾರು 340 ಪ್ರಯೋಗಗಳನ್ನು ವಿಸ್ತಾರವಾದ ಸಂಸ್ಕೃತ ಸಾಹಿತ್ಯ ಭಂಡಾರದಿಂದ ಆಯ್ದುಕೊಡಲಾಗಿದೆ. ಇವುಗಳನ್ನು ವಿಶ್ಲೇಷಿಸುವ ರೀತಿಯೂ ಕುಂತಕನಿಗೇ ವಿಶಿಷ್ಟವಾದ್ದು. ಈ ವಿಚಾರದಲ್ಲಿ ಅವನನ್ನು ಮೀರಿಸುವ ಬೇರೊಬ್ಬ ಆಲಂಕಾರಿಕನಿಲ್ಲವೆಂದೇ ಹೇಳಬೇಕು. ಈ ಬಗ್ಗೆ ಮುಂದೆ ಚರ್ಚಿಸಲಾಗುವುದು. ನಾಲ್ಕನೇ ಉನ್ಮೇಷದಲ್ಲಂತೂ ಪ್ರಕರಣ ಮತ್ತು ಪ್ರಬಂಧ ವಕ್ರತೆಗೆ ವಿಪುಲವಾಗಿ ಉದಾಹರಣೆಗಳನ್ನು ಕಾಳಿದಾಸ, ಭವಭೂತಿ,

ವಿಶಾಖದತ್ತ, ಮಾಘ, ಮುಂತಾದ ಕವಿಗಳ ಉದ್ಧೃ ಕೃತಿಗಳ ಜೊತೆಗೇ, ಉದಾತ್ತರಾಘವ, ಅಭಿಜ್ಞಾನ ಜಾನಕಿ, ಪುಷ್ಪದೂಷಿತಕ, ತಾಪಸ ವತ್ಸರಾಜ ಮೊದಲಾದ ಅಷ್ಟೇನೂ ಖ್ಯಾತವಲ್ಲದ ಕೃತಿಗಳಿಂದಲೂ ನೀಡಿದ್ದಾನೆ.

ಕುಂತಕನ ವಕ್ರೋಕ್ತಿ ತತ್ತ್ವ

ಕುಂತಕನು ವಕ್ರೋಕ್ತಿಯನ್ನು ಕಾವ್ಯದ ಜೀವಿತವೆಂದು ಪ್ರತಿಪಾದಿಸಿದನೆಬುದು ವೇದ್ಯವೇ ಇದೆ. ತನ್ನ ಮೌಲಿಕ ಪ್ರತಿಭೆ ಮತ್ತು ಪ್ರಖರ ಮೇಧಾಶಕ್ತಿಯಿಂದ ಕಾವ್ಯದ ಮೂಲ ಸಿದ್ಧಾಂತಗಳನ್ನು ಪೂರ್ತಿ ವಿನೂತನ ರೀತಿಯಲ್ಲಿ ವ್ಯಾಖ್ಯಾನಿಸುವ ಮೂಲಕ ಕಾವ್ಯತತ್ತ್ವ ವಿವೇಚನೆಗೆ ಒಂದು ಹೊಸ ತಿರುವು ನೀಡಿದ. ಕಾವ್ಯದ ಅಂತಃಸತ್ವವನ್ನು ಅಖಂಡ ದೃಷ್ಟಿಯಿಂದ ಸೆರೆಹಿಡಿಯುವ ಪ್ರಯತ್ನವನ್ನು ಈ ನೂತನ ಪರಿಭಾಷೆಯ ಮೂಲಕ ಮಾಡಿರುವುದು ತಿಳಿಯುತ್ತದೆ.

ವಕ್ರೋಕ್ತಿಯ ಆರು ಪ್ರಮುಖ ಪ್ರಭೇದಗಳು ಹಾಗೂ ಇಪ್ಪತ್ತೊಂದು ಉಪ ಪ್ರಭೇದಗಳಲ್ಲಿ ಕಾವ್ಯಾಂಗಗಳು ಹಾಗೂ ಕಾವ್ಯ ತತ್ತ್ವಗಳನ್ನೆಲ್ಲ ಹೆಚ್ಚು ಕಡಿಮೆ ಸಮಾವೇಶಗೊಳಿಸಿದ್ದಾನೆ. ಕುಂತಕನ ಸಿದ್ಧಾಂತದ ಬಹು ಮುಖ್ಯ ಆಧಾರ ಉಕ್ತಿ ವಕ್ರತೆ ಅರ್ಥಾತ್ ವಿಚ್ಛಿತ್ತಿ. ಅವನ ಗ್ರಂಥದ ಉದ್ದೇಶವೇ ಲೋಕೋತ್ತರವಾದ ಚಮತ್ಕಾರವನ್ನುಂಟು ಮಾಡಬಲ್ಲ ವೈಚಿತ್ರ್ಯದ ಸಿದ್ಧಿ.

> **ಲೋಕೋತ್ತರ ಚಮತ್ಕಾರಕಾರಿ ವೈಚಿತ್ರ್ಯಸಿದ್ಧಯೇ**
> **ಕಾವ್ಯಸ್ಯಾಯಮಲಂಕಾರಃ ಕೋಽಪ್ಯಪೂರ್ವೋ ವಿಧೀಯತೇ**[10] **[1-2]**

ವಕ್ರೋಕ್ತಿಯ ಸತ್ವ ಅಡಗಿರುವುದೇ ಅಸಾಮಾನ್ಯವಾದ ವೈಚಿತ್ರ್ಯದ ಸಿದ್ಧಿಗಾಗಿ ಎಂಬ ಮಾತಿನಲ್ಲಿ. ಭಾಮಹನು ಶಬ್ದಾರ್ಥ ಸಹಿತವಾದ್ದು ಕಾವ್ಯ ಎಂದ. ಕುಂತಕನು ಅದು ಅಷ್ಟೇ ಅಲ್ಲ; ಶಬ್ದಾರ್ಥ ಸಹಿತವಾದ ಈ ಉಕ್ತಿ ನೇರವಾದದ್ದಲ್ಲ, ವಕ್ರವಾದ್ದು ಎಂದು ಹೇಳಿದ. ಅಲ್ಲದೆ ವಕ್ರವಾದ ಈ ಶಬ್ದಾರ್ಥಗಳು ಬಂಧವೊಂದರಲ್ಲಿ ವ್ಯವಸ್ಥಿತಗೊಂಡಂಥವು. ಅಂದರೆ ವಕ್ರಕವಿವ್ಯಾಪಾರದಿಂದ ಕೂಡಿದ ಬಂಧವೊಂದರಲ್ಲಿ ವ್ಯವಸ್ಥಿತಗೊಂಡು ರಸಿಕರಿಗೆ ಆಹ್ಲಾದವನ್ನುಂಟು ಮಾಡುವ ಶಬ್ದ ಮತ್ತು ಅರ್ಥಗಳೇ ಕಾವ್ಯ.

> **ಶಬ್ದಾರ್ಥೌ ಸಹಿತೌ ವಕ್ರಕವಿವ್ಯಾಪಾರ ಶಾಲಿನಿ |**
> **ಬಂಧೇ ವ್ಯವಸ್ಥಿತೌ ಕಾವ್ಯಂ ತದ್ವಿದಾಹ್ಲಾದ ಕಾರಿಣಿ ||**[11] **[ವ. ಜೀ. 7ನೇ ಕಾರಿಕೆ]**

ವಕ್ರೋಕ್ತಿ ಎಂಬುದಾದರೂ ವಿದಗ್ಧತೆಯಿಂದ ಕೂಡಿದ ಮಾತಿನ ಒಂದು ಭಂಗಿ - "ವೈದಗ್ಧ್ಯ ಭಂಗೀ ಭಣಿತಿರುಚ್ಯತೇ"

---

10. ಇದೇ ಗ್ರಂಥ [ಕ. ವ. ಜೀ] ಪು. 4
11. ಕ. ವ. ಜೀ. ಪು. 9

ಕಾವ್ಯದ ಶಬ್ದ ಮತ್ತು ಅರ್ಥಗಳು ಅಲಂಕಾರ್ಯಗಳು. ವಿದಗ್ಧತೆಯಿಂದ ಕೂಡಿದ ಮಾತಿನ ಒಂದು ಭಂಗಿಯೆನಿಸಿದ ವಕ್ರೋಕ್ತಿಯೇ ಅಲಂಕಾರ.

'ವೈದಗ್ಧ್ಯ' ಎಂದರೆ ಕುಶಲಕವಿ ವ್ಯಾಪಾರ. ಅರ್ಥಾತ್ ಪ್ರತಿಭಾವಂತನಾದ ಕವಿಯ ಕಾವ್ಯ ನಿರ್ಮಾಣ ಕೌಶಲ. ಭಂಗಿ ಎಂದರೆ ಚಮತ್ಕಾರ, ಚಾರುತ್ವ ಅಥವಾ ವಿಚ್ಛಿತ್ತಿ ಹಾಗೂ ಭಣಿತಿ ಎಂದರೆ ಕಥನ ಶೈಲಿ, ಹೇಳುವ ರೀತಿ, ವಾಣಿ ಅಥವಾ ಉಕ್ತಿ.

ವೃತ್ತಿಯಲ್ಲಿ ಮತ್ತೂ ವಿವರಿಸುತ್ತಾನೆ. ಅವನ ಪ್ರಕಾರ ವಕ್ರೋಕ್ತಿಯ ಪರಿಭಾಷೆ

1) ಪ್ರಸಿದ್ಧಾಭಿಧಾನ ವ್ಯತಿರೇಕಿಣೀ

2) ವಿಚಿತ್ರೈವ ಅಭಿಧಾ

3) ವೈದಗ್ಧ್ಯ ಭಂಗೀ ಭಣಿತಿ

[1-10ನೇ ಕಾರಿಕೆಯ ವೃತ್ತಿ]

ಈಗಾಗಲೇ ಪ್ರಸಿದ್ಧವೂ, ಚಿರಪರಿಚಿತವೂ ಆದ ಮಾತಿನ ಬಳಕೆಗಿಂತ ಬೇರೆಯಾದ, ಕಾವ್ಯಕ್ಕೇ ವಿಶಿಷ್ಟವಾದ, ವಿಚಿತ್ರ ರೀತಿಯ ಕಾಂತಿಯಿಂದ ಕೂಡಿದ ಭಾಷೆಯೇ ವಕ್ರೋಕ್ತಿ. ವಿದಗ್ಧಪೂರ್ಣವಾದ ಮಾತಿನ ಭಂಗಿ. ಇಲ್ಲಿ ಪ್ರಸಿದ್ಧ ಎಂದರೆ ಶಾಸ್ತ್ರಾದಿಗಳಲ್ಲಿ ಹಾಗೂ ವ್ಯವಹಾರದ ಬಳಕೆಯಲ್ಲಿ ಪ್ರಸಿದ್ಧವಾದ ಭಾಷೆಗಿಂತ ಬೇರೆಯಾದ್ದು. ವೃತ್ತಿಯಲ್ಲಿ ಶಾಸ್ತ್ರಾದಿ ಪ್ರಸಿದ್ಧ ಶಬ್ದಾರ್ಥೋಪನಿಬಂಧ ವ್ಯತಿರೇಕಿಣಿ - ಎಂದು ಹೇಳಿದೆ. ಹಾಗಾಗಿ ಅದು ವೈದಗ್ಧ್ಯ ಭಂಗೀ ಭಣಿತಿ' - ಕವಿ ಪ್ರತಿಭಾಕೌಶಲವನ್ನಾಧರಿಸಿದ ರೀತಿ.

ಈ ಗುಣಗಳ ಜೊತೆಗೆ ವಕ್ರೋಕ್ತಿ ಸಾರ್ಥಕವೆನಿಸಬೇಕಾದರೆ ಪಡೆದಿರಲೇಬೇಕಾದ ಗುಣ - ತದ್ವಿದಾಹ್ಲಾದಕಾರಿತ್ವ. ಓದುಗ ಅಥವಾ ಸಹೃದಯರ ಮನಸ್ಸಿಗೆ ಮುದ ನೀಡುವ ಸಾಮರ್ಥ್ಯ. ಅಂದರೆ ವಕ್ರೋಕ್ತಿಯ ಅಂತಿಮಲಕ್ಷ್ಯ ಸಹೃದಯರ ಮನಃ ಸಂತೋಷ.

ಶಬ್ದ ಮತ್ತು ಅರ್ಥಗಳು ಅಲಂಕಾರ್ಯಗಳಾಗಿ ಪ್ರತ್ಯೇಕ ಅಸ್ತಿತ್ವವನ್ನುಳಿಸಿಕೊಳ್ಳುತ್ತವೆ ಹಾಗೂ ಅವೆರಡಕ್ಕಿಂತ ಬೇರೆಯದೇ ಆದ ವಕ್ರತೆಯಿಂದ ಅಲಂಕೃತಗೊಳ್ಳುತ್ತವೆ. ವಕ್ರೋಕ್ತಿಯು ಎಲ್ಲ ಅಲಂಕಾರಗಳಿಗೂ ಸಾಮಾನ್ಯವಾದ್ದು ಎಂಬ ಅರ್ಥ ಬರುವ ಈ ಮಾತನ್ನು ಹೇಳುತ್ತಾನೆ - "ವಕ್ರೋಕ್ತಿಃ ಸಕಲಾಲಂಕಾರ ಸಾಮಾನ್ಯಂ ವಿಷಯೋ ಗೋಚರೋ ಯಸ್ಯ ತಥೋಕ್ತಂ"

ವಕ್ರೋಕ್ತಿ ಎಂದರೆ ಕವಿ ತನ್ನ ವಿಶಿಷ್ಟ ಪ್ರತಿಭಾಶಕ್ತಿಯಿಂದ ಪಡೆಯುವ ಲೋಕೋತ್ತರವಾದ ಸೌಂದರ್ಯಾನುಭವ ಎಂಬ ಅರ್ಥವನ್ನು ಪಡೆದುಕೊಳ್ಳುತ್ತದೆ. ಸಾಲಂಕೃತ ಶಬ್ದಾರ್ಥೌ ಎಂದಾಗಲೇ 'ಶಬ್ದಾರ್ಥೌ ಸಹಿತೌ ಕಾವ್ಯಂ' ಎಂಬ ಭಾಮಹನ ಪ್ರಸಿದ್ಧ ವಾಕ್ಯಕ್ಕೆ ಪೂರ್ಣತೆ ಬರುವುದು.

ವಕ್ರೋಕ್ತಿಯಲ್ಲಿ ಸಕಲಾಲಂಕಾರಗಳೂ ಸಮಾವೇಶಗೊಳ್ಳುತ್ತವೆ ಮಾತ್ರವಲ್ಲ; ಧ್ವನಿ ರಸಗಳನ್ನೂ ಅಡಕ ಮಾಡಿಕೊಳ್ಳುವ ಮಟ್ಟಿಗೆ ವ್ಯಾಪಕವಾದ ಅರ್ಥವನ್ನು ಕೊಡಲು ಕುಂತಕನು ಯತ್ನಿಸಿದ್ದಾನೆ.

ವಕ್ರೋಕ್ತಿಯು ಕಾವ್ಯದ ಜೀವಿತ ಸರ್ವಸ್ವ ಎಂದು ಸ್ಥಾಪಿಸಿ, ಅದು ಕಾವ್ಯದಲ್ಲಿ ಆರು ವಿಧಗಳಲ್ಲಿ

ಕಾಣಿಸಿಕೊಳ್ಳುತ್ತದೆ ಎಂದು ಹೇಳಿದ. ಕಾವ್ಯದ ವಿವಿಧ ಅಂಗಗಳಾದ ವರ್ಣ, ಪದ, ವಾಕ್ಯ, ಪ್ರಕರಣ ಮತ್ತು ಪ್ರಬಂಧಗಳಲ್ಲಿ ಇದು ಅಭಿವ್ಯಕ್ತಿಯನ್ನು ಪಡೆದುಕೊಳ್ಳುತ್ತದೆ. ಕಾವ್ಯದ ಕನಿಷ್ಠತಮ ಘಟಕವಾದ ವರ್ಣದಿಂದ ತೊಡಗಿ, ಮಹತ್ತಮ ಘಟಕವಾದ ಪ್ರಕರಣ ಪ್ರಬಂಧಗಳವರೆಗೂ ಇದರ ಚಾಚು ಇದೆ. ಇದು ಆನಂದವರ್ಧನನ ವರ್ಣಧ್ವನಿ, ಪದಧ್ವನಿ, ವಾಕ್ಯಧ್ವನಿ ಮತ್ತು ಪ್ರಬಂಧ ಧ್ವನಿಗಳನ್ನ ಕೂಡಲೇ ನಮ್ಮ ನೆನಪಿಗೆ ತರುತ್ತದೆ. ಹಾಗೂ ಅದು ಸಹಜ ಕೂಡ.

ಕುಂತಕನ ಅಭಿಪ್ರಾಯದಲ್ಲಿ ಅಲಂಕಾರವೆಂಬುದು ಹೊರಗಿನಿಂದ ಹೇರಿದ್ದಲ್ಲ. ಆದ್ದರಿಂದ ಅಲಂಕಾರ ಮತ್ತು ಅಲಂಕಾರ್ಯ ಎಂದು ಹೇಳುವುದು ಔಪಚಾರಿಕ ಮತ್ತು ವಿಶ್ಲೇಷಣೆಯ ಅನುಕೂಲಕ್ಕಾಗಿ. ಅವೆರಡೂ ಸೇರಿಯೇ ಕಾವ್ಯ. ಕಾವ್ಯ ಯಾವಾಗಲೂ ಅಲಂಕೃತವೇ.

> **ಅಲಂಕೃತಿರಲಂಕಾರ್ಯಮಪೋದ್ಧೃತ್ಯ ವಿವೇಚ್ಯತೇ**
> **ತದುಪಾಯತಯಾ ತತ್ತ್ವಂ ಸಾಲಂಕಾರಸ್ಯ ಕಾವ್ಯತಾ**[12]

[ವ. ಜೀ. 1-6]

"ಅಲಂಕರಣ ಮತ್ತು ಅಲಂಕಾರ್ಯಗಳೆರಡನ್ನೂ ಬೇರೆ ಬೇರೆಯಾಗಿಯೇ ವಿವೇಚಿಸಲಾಗುವುದು. ನಮ್ಮ ಅಂತಿಮ ಉದ್ದೇಶ ಸಾಧಿಸಲು ಇರುವ ಆತ್ಯಂತಿಕ ಮಾರ್ಗ ಅದೊಂದೇ. ನಿಜವಾದ ಸಂಗತಿ ಏನೆಂದರೆ ಕಾವ್ಯವು ಯಾವಾಗಲೂ ಸಾಲಂಕಾರವೇ. ಅಂದರೆ ಅಲಂಕರಣ ಮತ್ತು ಅಲಂಕಾರ್ಯಗಳು ಸೇರಿಯೇ ಕಾವ್ಯವಾಗುತ್ತದೆ". 'ವಿಚಿತ್ರೈವ ಅಭಿಧಾ' ಎಂದು ಹೇಳುತ್ತಾನೆ. ವೈಚಿತ್ರ್ಯವೆಂದರೇನೆಂದು 42ನೇ ಕಾರಿಕೆಯಲ್ಲಿ ಹೀಗೆ ವ್ಯಾಖ್ಯಾನಿಸಿದ್ದಾನೆ. "ವಕ್ರೋಕ್ತಿಯ ವೈಚಿತ್ರ್ಯವೇ ಪ್ರಾಣವಾಗಿರುವ ಮಾರ್ಗ ಈ 'ವಿಚಿತ್ರ' ಎಂಬ ಹೆಸರಿನ ಮಾರ್ಗ. ಅದರೊಳಗೆ ಯಾವಾಗಲೂ ಯಾವುದೋ ಒಂದು ಅತಿಶಯೋಕ್ತಿಯ ಸಂಚಾರವಿರುತ್ತದೆ"[12a]

ವಕ್ರೋಕ್ತಿಯ ವೈಚಿತ್ರ್ಯದಲ್ಲಿರುವುದು ಮೂಲತಃ ಅತಿಶಯವೇ ಎಂದು ಕುಂತಕನ ಅಭಿಪ್ರಾಯ. ಅತಿಶಯವನ್ನು ವಿವರಿಸುತ್ತ ಮೂರನೇ ಉನ್ಮೇಷದಲ್ಲಿ -

> **ಉಚ್ಯತೇಽತಿಶಯೋಕ್ತಿಃ ಸಾ ಸರ್ವಾಲಂಕಾರ ಜೀವಿತಮ್**
> **ಯಸ್ಯಾಮತಿಶಯಃ ಕೋಽಪಿ ವಿಚ್ಛಿತ್ಯಾ ಪ್ರತಿಪಾದ್ಯತೇ**
> **ವರ್ಣನೀಯಸ್ಯ ಧರ್ಮಾಣಾಂ ತದ್ವಿದಾಹ್ಲಾದದಾಯಿನಾಮ್**[13]

[ವ. ಜೀ. 33-ನೇ ಕಾರಿಕೆ, ತೃತೀಯ ಉನ್ಮೇಷ]

ಅತಿಶಯೋಕ್ತಿ ಎಲ್ಲ ಅಲಂಕಾರಗಳ ಜೀವಿತ ಸರ್ವಸ್ವ. ಸಹೃದಯರಿಗೆ ಆಹ್ಲಾದವನ್ನುಂಟು ಮಾಡುವ ಹಾಗೂ ವರ್ಣನೀಯ ಪದಾರ್ಥಗಳ ಸೌಂದರ್ಯ ಧರ್ಮಗಳನ್ನು ವೈವಿಧ್ಯಪೂರ್ಣವಾದ ರೀತಿಯಲ್ಲಿ ಪ್ರತಿಪಾದಿಸುವುದನ್ನು ಅತಿಶಯೋಕ್ತಿ ಎನ್ನಲಾಗುತ್ತದೆ. ವೃತ್ತಿಯಲ್ಲಿ ಇದನ್ನು ಇನ್ನಷ್ಟು

12. ನೋಡಿ ಇದೇ ಗ್ರಂಥ (ಕ. ವ. ಜೀ) ಪುಟ. 8
12a. ಕ. ವ. ಜೀ. ಪುಟ. 81
13. ಕ. ವ. ಜೀ. ಪು. 227.

ಚರ್ಚಿಸುತ್ತ ಯಾವುದರಲ್ಲಿ ಪ್ರಸಿದ್ಧವಾದ ಲೋಕರೂಢಿಯ ವ್ಯವಹಾರಗಳ ಅಭಿವ್ಯಕ್ತಿಯ ರೀತಿಯನ್ನು ಸಂಪೂರ್ಣವಾಗಿ ಮೀರುತ್ತ ಲೋಕೋತ್ತರವಾದೊಂದು ಪರಾಕಾಷ್ಠೆಯನ್ನು ಸಾಧಿಸಲಾಗುತ್ತದೋ ಅದೇ ಅತಿಶಯೋಕ್ತಿ. ಇದನ್ನು ವೈದಗ್ಧ್ಯಪೂರ್ಣ ಭಂಗಿಯ ಮೂಲಕ ಪ್ರತಿಪಾದಿಸಲಾಗುವುದು ಎನ್ನುತ್ತಾನೆ.

ಹೀಗೆ ವಕ್ರೋಕ್ತಿಗೆ ಕಾವ್ಯಾಭಿವ್ಯಕ್ತಿಯ ಸ್ವರೂಪದ ವಿಸ್ತೃತ ರೂಪವನ್ನು ನೀಡುವ ಪ್ರಯತ್ನ ನಡೆಸಿದ್ದಾನೆ. ವಕ್ರೋಕ್ತಿಯ ಮೂಲ ಪರಿಕಲ್ಪನೆಯನ್ನು ಭಾಮಹನಿಂದ ಸ್ವೀಕರಿಸಿದನಾದರೂ, ಅದನ್ನು ತನ್ನದೇ ಆದ ಚಿಂತನೆಗಳಿಂದ ಪರಿಪುಷ್ಟಗೊಳಿಸಿ ಅದಕ್ಕೊಂದು ವಿಸ್ತಾರವೂ ಸಮಗ್ರವೂ ಆದ ರೂಪವನ್ನು ತಂದುಕೊಟ್ಟಿದ್ದಾನೆ. ಅದನ್ನು ಲಾಹಿರಿಯವರು ಹೀಗೆ ಗುರುತಿಸಿದ್ದಾರೆ–

"Kuntaka elaborately expounds Bhamaha's theory of Vakrokti; but his vakrokti comprises under its wide scope almost all the poetic elements and not the alankara alone.[14]

ಅಂದರೆ ಬಿಡಿ ಬಿಡಿಯಾಗಿ ಈ ಹಿಂದೆ ಚರ್ಚಿತವಾಗಿದ್ದ, ಅಲಂಕಾರ, ರೀತಿ, ಗುಣ, ಮಾರ್ಗ, ಸಂಘಟನೆ, ರಸ, ಮೊದಲಾದುವನ್ನೆಲ್ಲ ಒಟ್ಟಾರೆಯಾಗಿ ನೋಡಿ, ಈ ಎಲ್ಲ ತತ್ತ್ವಗಳನ್ನೂ ಬಂಧವೊಂದರಲ್ಲಿ ಅಳವಡಿಸಿ ಕಾವ್ಯಸೌಂದರ್ಯದ ತಾತ್ವಿಕತೆಯನ್ನು ಒಂದು ಸಿದ್ಧಾಂತದ ಮೂಲಕ ಮೊದಲಿಗೆ ರೂಪಿಸಿದವನು ಆನಂದವರ್ಧನ. ಕುಂತಕನ ಸಾಧನೆಯನ್ನು ಈ ಹಿನ್ನೆಲೆಯಲ್ಲೇ ನೋಡಬೇಕಾಗುತ್ತದೆ. ಕುಂತಕನು 'ಧ್ವನಿ'ಯನ್ನು ತಿರಸ್ಕರಿಸುವುದಿಲ್ಲ. ಧ್ವನಿಕಾರನನ್ನು ಬಹಳ ಗೌರವದಿದ ನೆನೆಯುತ್ತಾನೆ. ಧ್ವನಿಯ ತಿರುಳನ್ನು ಚೆನ್ನಾಗಿ ಗ್ರಹಿಸಿರುವುದೇ ಅಲ್ಲದೆ ಧ್ವನಿ, ಪ್ರತೀಯಮಾನ ಎಂಬ ಶಬ್ದಗಳನ್ನು ಬಳಸಿರುವನಾದರೂ ಕವಿಪ್ರತಿಭೆ ಕೆಲಸ ಮಾಡುವ ರೀತಿಯನ್ನು ವಿವರಿಸುವಲ್ಲಿ ಅದು ಪರ್ಯಾಪ್ತವಲ್ಲವೆಂದು ಭಾವಿಸಿದಂತೆ ತೋರುತ್ತದೆ. ಕಾರಣ ಆನಂದವರ್ಧನನು ಧ್ವನಿಯೊಂದನ್ನೇ ಮಾನದಂಡವನ್ನಾಗಿಟ್ಟುಕೊಂಡು ಕಾವ್ಯದಲ್ಲಿ ತರ, ತಮಗಳನ್ನು ಗುರುತಿಸುತ್ತಾನೆ. ಧ್ವನಿಕಾವ್ಯ ಅತ್ಯಂತ ಶ್ರೇಷ್ಠ, ಗುಣೀಭೂತ ವ್ಯಂಗ್ಯ ಅದಕ್ಕಿಂತ ಕೆಳಗಿನ ಮಟ್ಟದ್ದು ಹಾಗೂ ಚಿತ್ರ ಕಾವ್ಯ ಇವೆರಡಕ್ಕಿಂತಲೂ ಕೆಳಗಿನ ಹಂತದ್ದು ಎಂದು. ಅಂದರೆ ಧ್ವನಿಗೆ ಸಿಕ್ಕಿರುವ ಪ್ರಾಧಾನ್ಯ ಅಥವಾ ಅಪ್ರಾಧಾನ್ಯತೆಯ ಮೇಲೆ ಕಾವ್ಯದ ತರತಮಗಳನ್ನು ನಿರ್ಧರಿಸಲಾಗುತ್ತದೆ. ಕಾವ್ಯವನ್ನು ಈ ರೀತಿ ಪೃಥಕ್ಕರಿಸುವುದದರ ಬಗ್ಗೆ ಕುಂತಕನ ವಿರೋಧವಿದೆ. ಅವನ ಪ್ರಕಾರ ಯಾವುದು ಕಾವ್ಯ ಅಥವಾ ಯಾವುದು ಕಾವ್ಯವಲ್ಲ ಎಂಬ ಬಗ್ಗೆ ಮಾತ್ರ ಹೇಳಬಹುದು. ಸಹೃದಯನಿಗೆ ಹಿಡಿಸುವಂಥದ್ದು ಶ್ರೇಷ್ಠ ಕಾವ್ಯ; ಹಾಗೆ ಹಿಡಿಸದ್ದು ಕಾವ್ಯವಲ್ಲ. "ಕುಂತಕನ ದೃಷ್ಟಿಯಲ್ಲಿ ಕಾವ್ಯ ಸಹೃದಯನಿಗೆ ಪ್ರಿಯವಾಗಲು ಒಂದೇ ಮಾರ್ಗವಲ್ಲ; ಅನೇಕ ಮಾರ್ಗಗಳಿರುತ್ತವೆ"[15] ಹಾಗೆ ಕಾವ್ಯಗಳೆಲ್ಲ ಒಂದೇ ಮಟ್ಟಿಗೆ ಇರಬೇಕೆಂದು ನಿರೀಕ್ಷಿಸುವುದೇ ಸರಿಯಲ್ಲ. "ಆದ್ದರಿಂದ ಕುಂತಕನ ದೃಷ್ಟಿಯಲ್ಲಿ ಕವಿ ಪ್ರತಿಭೆ ಅಭಿವ್ಯಕ್ತವಾಗಲು ಇರುವ ಹಲವಾರು

---

14. Lahiri - Conscepts of riti and vakrokti - vakrokti - p - 113

15-16. ಡಾ. ಕೆ. ಕೃಷ್ಣಮೂರ್ತಿ - Studies in Indian Aerthectics and criticism - page 190

ಮಾರ್ಗಗಳಲ್ಲಿ ಧ್ವನಿಯೂ ಒಂದು. ಬದಲಿಗೆ ಅದೊಂದೇ ಅಲ್ಲ"[16] ಹಾಗಾಗಿ ಆನಂದವರ್ಧನನು ತೆರೆದು ತೋರಿರುವ ವಿಸ್ತಾರವಾದ ಧ್ವನಿ ಪ್ರಪಂಚವೇನಿದೆ, ಅದು ಬಹುಮಟ್ಟಿಗೆ ಗುಣ ಮತ್ತು ಅಲಂಕಾರಗಳ ಹಾಗೆ ಕವಿಕರ್ಮದ ಹಲವಾರು ಸಾಧ್ಯತೆಗಳಲ್ಲಿ ಒಂದು ಅಂಶ ಅಷ್ಟೇ. ಇಡೀ ಕವಿಕರ್ಮದ ಅಪಾರ ವ್ಯಾಪಾರಕ್ಕೆ ಕುಂತಕನು ಕೊಟ್ಟ ಹೆಸರು ವಕ್ರೋಕ್ತಿ ಅಥವಾ ಕಲಾತ್ಮಕ ಅಭಿವ್ಯಕ್ತಿ. "ವಕ್ರೋಕ್ತಿಯನ್ನು ಮೊದಲು ಪ್ರತಿಪಾದಿಸಿದ ಭಾಮಹನು ಎಲ್ಲ ಅಲಂಕಾರಗಳ ಹಿಂದಿರುವ ತತ್ತ್ವ ಎಂಬ ವಿಸ್ತೃತ ಅರ್ಥದಲ್ಲಿ 'ವಕ್ರೋಕ್ತಿ' ಶಬ್ದವನ್ನು ಬಳಸಿರುವನಾದರೂ ಧ್ವನಿಯ ಎಲ್ಲ ಪ್ರಭೇದಗಳನ್ನೂ ಒಳಗೊಳ್ಳುವ ಹಾಗೆ ಹಾಗೂ ರಸ ಮತ್ತು ಕಾವ್ಯಮಾರ್ಗ ಸಂಬಂಧಿ ಗುಣಗಳ ಎಲ್ಲ ಸಾಧ್ಯತೆಗಳನ್ನು ಒಳಗೊಳ್ಳುವ ರೀತಿಯಲ್ಲಿ ವಕ್ರೋಕ್ತಿ ಶಬ್ದವನ್ನು ಬಳಸಿ ಅದಕ್ಕೆ ಮಹತ್ವದ ಸ್ಥಾನವನ್ನು ತಂದು ಕೊಟ್ಟವನು ಕುಂತಕನೇ"[17]

ಈ ವಕ್ರೋಕ್ತಿ ಕಾವ್ಯ ಭಾಷೆಯ ಸೌಂದರ್ಯಕ್ಕಿರುವ ಹೆಸರು. ವಿಚ್ಛಿತ್ತಿ, ವೈಚಿತ್ರ್ಯ ಇವೆಲ್ಲ ಅದರ ಪರ್ಯಾಯಗಳು. ಧ್ವನಿಯ ವಿವಿಧ ಪ್ರಭೇದಗಳನ್ನು ವಕ್ರೋಕ್ತಿಯ ವಿಶಾಲ ಕಕ್ಷೆಯಲ್ಲಿ ಅಳವಡಿಸಲು ಅವನು ಅನುಸರಿಸಿದ್ದು ಆನಂದ ವರ್ಧನನ ಮಾರ್ಗವನ್ನೇ. ವರ್ಣ, ಪ್ರತ್ಯಯ, ಪದ, ವಾಕ್ಯ, ಪ್ರಕರಣ ಮತ್ತು ಪ್ರಬಂಧಗಳು ಧ್ವನಿಯ ವ್ಯಂಜಕಗಳಾಗುವ ವಿಧಾನವನ್ನು ಹೇಗೂ ಆನಂದವರ್ಧನನು ಕಂಡುಕೊಂಡಿದ್ದನು. ವಕ್ರೋಕ್ತಿಯ ಪ್ರಭೇದಗಳನ್ನು ಹೇಳಲು ಕುಂತಕನು ಇದನ್ನೇ ಅನುಸರಿಸಿದ್ದರೂ, ಅದಕ್ಕೆ ಇನ್ನಷ್ಟು ವ್ಯಾಪಕತ್ವ ನೀಡಲು ಯತ್ನಿಸಿದ್ದಾನೆ. ಆನಂದವರ್ಧನನಲ್ಲಿ ವಸ್ತು ಅಲಂಕಾರ ರಸಾದಿಗಳು ವ್ಯಂಜಕಗಳಾದರೆ, ಕುಂತಕನಲ್ಲಿ ಶಬ್ದಾಲಂಕಾರಗಳೆಲ್ಲವೂ ವರ್ಣವಿನ್ಯಾಸ ವಕ್ರತೆಯಲ್ಲಿ ಅಳವಡುತ್ತವೆ. ಅರ್ಥಾಲಂಕಾರಗಳು, ಮಾರ್ಗ ಹಾಗೂ ಗುಣಗಳೆಲ್ಲವೂ ವಾಕ್ಯವಕ್ರತೆಯಲ್ಲಿ ಅಳವಡುತ್ತವೆ. ವ್ಯಾಕರಣದ ಪ್ರತ್ಯಯ, ಉಪಸರ್ಗಗಳೆಲ್ಲವೂ ಪದಪೂರ್ವಾರ್ಧ ಮತ್ತು ಪದ ಪರಾರ್ಧದಲ್ಲಿ ಸೇರ್ಪಡೆಯಾಗುತ್ತವೆ. ಕಾವ್ಯವಸ್ತು, ವರ್ಣನಾ ಸೌಂದರ್ಯ, ಪಾತ್ರಪೋಷಣೆ, ನವೀನ ಸೃಷ್ಟಿ ಏನಾದರೂ ಇದ್ದರೆ ಅದು; ಸಂಧಿ, ಸಂಧ್ಯಂಗಗಳು ಔಚಿತ್ಯ ಇವೆಲ್ಲ ಪ್ರಕರಣ ವಕ್ರತೆಯಲ್ಲಿ ಸೇರುತ್ತವೆ. ಒಟ್ಟು ಕೃತಿಯ ಸೌಂದರ್ಯ, ವಿಶೇಷತೆಗಳು ಪ್ರಬಂಧ ವಕ್ರತೆಯಲ್ಲಿ ಸೇರುತ್ತವೆ.

ಕಾವ್ಯಗಳಿಗೆ ಧ್ವನಿಯನ್ನು ಅನ್ವಯಿಸುವ ವ್ಯತಿಕರದಲ್ಲಿ ಯಾವುದು ಪ್ರಧಾನ, ಯಾವುದು ಗೌಣ, ಯಾವುದು ಅಲಂಕಾರ, ಯಾವುದು ಅಲಂಕಾರ್ಯ ಎಂಬ ರೀತಿಯ ವರ್ಗೀಕರಣದ ಪ್ರಸಕ್ತಿ ಎದುರಾಗುತ್ತದೆ. ರಸವೇ ಕಾವ್ಯದ ಸರ್ವಸ್ವ. (ರಸಪಾರಮ್ಯ) ಎಂಬ ಸಿದ್ಧಾಂತದ ಪರಿಣಾಮವಾದವು ಈ ವಿಭಜನೆಗಳು. "ಆದರೆ ಕಾವ್ಯದ ಶ್ರೇಷ್ಠತೆಯ ಒರೆಗಲ್ಲು (ಅಳತೆಗೋಲು) ರಸವೇ ಆಗಬೇಕಾಗಿಲ್ಲ ಎಂಬುದು ಕುಂತಕನ ನಿಲುವು"[18] ಕೆಲವು ಕಾವ್ಯ ಭಾಗಗಳು ಶಬ್ದಾಲಂಕಾರದ ಸೊಗಸಿನಿಂದ ನಮ್ಮನ್ನು ಸೆರೆಹಿಡಿದರೆ, ಇನ್ನು ಕೆಲವು ಭಾಗಗಳು, ಪ್ರತ್ಯಯ, ಉಪಸರ್ಗ ಇತ್ಯಾದಿಗಳ ಬಳಕೆಯಲ್ಲಿ ವ್ಯಕ್ತವಾಗುವ ಕವಿ ಕೌಶಲದಿಂದಾಗಿ ಅಷ್ಟೇ ಸುಂದರವೆನಿಸಬಹುದು. ಇನ್ನು ಕೆಲವು

17. ಅಲ್ಲೇ - ಪುಟ 191

18. ಅಲ್ಲೇ

ಅರ್ಥಾಲಂಕಾರಗಳ, ಮಾರ್ಗ ಅಥವಾ ಗುಣಗಳ ಸೌಂದರ್ಯದಿಂದಾಗಿ ರುಚಿಸಬಹುದು. ಕಲಾಕೃತಿಯ ವಸ್ತು, ಪಾತ್ರಗಳು ಹಾಗೂ ಕೃತಿ ಸಮಸ್ತವನ್ನೂ ಆನಂದಿಸುವ ಸಂದರ್ಭದಲ್ಲಿ ಪ್ರಧಾನ, ಗೌಣ ರಸಗಳ ಪ್ರಸಕ್ತಿ ಬರಬಹುದು. "ಹೀಗಾಗಿ ವಕ್ರತೆಯ ಪ್ರತಿಯೊಂದು ಬಗೆಯೂ ನೂತನ ರೀತಿಯಲ್ಲಿ ಕೃತಿಯ ಪ್ರತಿಯೊಂದೂ ಅಂದರೆ ವಸ್ತು, ಅಲಂಕಾರ ರಸ ಗುಣ, ರೀತಿ ಅಥವಾ ಮಾರ್ಗಗಳನ್ನು ಒಳಗೊಳ್ಳುತ್ತದೆ.[19] "ಶಬ್ದಾರ್ಥೌ ಸಹಿತೌ ವಕ್ರ ಕವಿ ವ್ಯಾಪಾರ ಶಾಲಿನಿ" ಎನ್ನುವಾಗ ಕಾವ್ಯ ಮತ್ತು ಕಾವ್ಯ ಸೌಂದರ್ಯವೆನ್ನುವುದು ಅಖಂಡವೇ ಹೊರತು ಖಂಡವಲ್ಲ ಎಂಬುದು ಕುಂತಕನ ವಕ್ರೋಕ್ತಿ ತತ್ತ್ವದ ಪ್ರಮುಖ ಆಶಯ. ಕಾವ್ಯ ಅಥವಾ ಸಾಹಿತ್ಯವೆಂದರೆ ವಸ್ತು ಮತ್ತು ರೀತಿಗಳ (Content and form) ಅವಿಭಾಜ್ಯ ಸಮಸ್ತವಾಗಿದೆ ಎಂಬುದು ಅವನು ತನ್ನ ಸಿದ್ಧಾಂತದ ಮೂಲಕ ಸಾಧಿಸ ಹೊರಟಿರುವುದು. ಕಾವ್ಯ ಮೂಲತಃ ಕವಿಯ ಸೃಜನಶೀಲ ಕ್ರಿಯೆ ಎಂದು ಭಾವಿಸಿದ್ದರಿಂದ, ಪ್ರತಿಭಾ ವ್ಯಾಪಾರದ ವಿಶ್ಲೇಷಣೆ ಮುಖ್ಯವೆನಿಸಿ ಅದರತ್ತ ಕುಂತಕನು ಆದ್ಯ ಗಮನ ಕೊಟ್ಟ.

ಡಾ. ಕೆ. ಕೃಷ್ಣಮೂರ್ತಿಯವರ ದೃಷ್ಟಿಯಲ್ಲಿ ಸಂಸ್ಕೃತ ಕಾವ್ಯಮೀಮಾಂಸೆಗೆ ಕುಂತಕನ ಅತ್ಯಂತ ಮಹತ್ವದ ಕೊಡುಗೆ ಎಂದರೆ ರಸವು ಅಲಂಕಾರ್ಯ ಎಂಬ ಅವನ ವಿಚಾರ[20]. ಕಾವ್ಯದಲ್ಲಿ ಮೂರ್ತರೂಪ ತಾಳುವ ವಸ್ತು ಎಂದಿದ್ದರೂ ಅಲಂಕಾರ್ಯವೇ ಹೊರತು, ಅಲಂಕಾರವಲ್ಲ. ಕಾವ್ಯಪರಿಕರಗಳೆಲ್ಲವನ್ನೂ ವಸ್ತು ಅಥವಾ ವಸ್ತುನಿಷ್ಠ ಅಂಶ ಹಾಗೂ ರಸಾದಿ ಅಥವಾ ವ್ಯಕ್ತಿನಿಷ್ಠ ಅಂಶಗಳೆಂದು ಗುರುತಿಸಬಹುದು. ಇವೆರಡನ್ನೂ ಪ್ರಕರ್ಷಗೊಳಿಸಿ, ಅಲಂಕಾರ ಗುಣ, ಇತ್ಯಾದಿಗಳ ಬಳಕೆಯಿಂದ ಎದ್ದು ಕಾಣುವಂತೆ ಮಾಡಬಹುದು. "ಕುಂತಕನ ಈ ನವ ವಿಶ್ಲೇಷಣೆಯಿಂದಾಗಿ ಧ್ವನ್ಯಾಲೋಕದಲ್ಲಿ ರಸವದಲಂಕಾರಕ್ಕೆ ಪ್ರಾಪ್ತವಾಗಿರುವ ಸ್ವಯಂ ವಿರೋಧಿ ಸ್ವರೂಪ ಇಲ್ಲಿ ಇಲ್ಲವಾಗಿದೆ"[21] ಅದು ಉಪಮಾ ಅಥವಾ ರೂಪಕಗಳ ಹಾಗೆಯೇ ಮತ್ತೊಂದು ಅಲಂಕಾರ. ಕವಿ ವಿವಕ್ಷಿತ ರಸವನ್ನು ಉದ್ದೀಪನಗೊಳಿಸುತ್ತದೆ. ಕಾವ್ಯಪರಿಕರಗಳೆಲ್ಲವೂ ಕವಿವಿವಕ್ಷಿತ ವಸ್ತು ಮತ್ತು ರಸಾದಿಗಳ ಸಂಯುಕ್ತವಾದ್ದರಿಂದ ಅದು ಗೈರುಹಾಜರಾಗುವ ಪ್ರಶ್ನೆಯೇ ಇಲ್ಲ. ಕಾರಣ, ಸೌಂದರ್ಯವನ್ನು ಸಂವಹನ ಮಾಡುವ ಯುಕ್ತ ಅಭಿವ್ಯಕ್ತಿಯನ್ನು ಕಂಡುಕೊಳ್ಳುವಲ್ಲಿ ಕವಿಯ ಕಲೆಯು ಯಶಸ್ವಿಯಾಗಿದೆ. ಏನನ್ನು ಅಭಿವ್ಯಕ್ತಿಸಬೇಕು ಎಂಬುದು ವಸ್ತು ಮತ್ತು ರಸವಾದರೆ, ಹೇಗೆ ಅದು ಅಭಿವ್ಯಕ್ತವಾಗಬೇಕೆಂಬುದು ವಕ್ರೋಕ್ತಿ ಅಥವಾ ಅಲಂಕಾರ. "ಹೀಗೆ ಕುಂತಕನು ಧೈರ್ಯವಾಗಿ ಚಿಂತಿಸುತ್ತ ಧ್ವನಿಕಾರನಿಗಿಂತ ಮುಂದುವರಿದು, ರಸವು ಯಾವಾಗಲೂ ಧ್ವನಿತವೋ ಅಲ್ಲವೋ ಎಂಬ ಪ್ರಶ್ನೆಯನ್ನೇ ಎತ್ತದೆ ವಸ್ತು ಮತ್ತು ಅಲಂಕಾರಗಳು ಅನಿವಾರ್ಯವಾಗಿ ಜೊತೆ ಜೊತೆಯಲ್ಲೇ ಇರುವುದನ್ನು ದೃಢಪಡಿಸುತ್ತಾನೆ."[22]

---

19. ಅಲ್ಲೇ , ಪು. 192
20. ಅಲ್ಲೇ , ಪು. 193
21. ಅಲ್ಲೇ , ಪು. 193
22. ಅಲ್ಲೇ , ಪು. 193

ವಕ್ರೋಕ್ತಿ ಎಲ್ಲ ಅಲಂಕಾರಗಳಿಗೂ ಸಮಾನವಾದ್ದು ಎಂದು ಹೇಳುವ ಸಂದರ್ಭದಲ್ಲೇ ಸ್ವಭಾವೋಕ್ತಿಯ ವಿಚಾರವನ್ನು ಎತ್ತಿಕೊಂಡು ಕೂಲಂಕಷವಾಗಿ ವಿಚಾರ ಮಾಡುತ್ತಾನೆ. ಈ ವಿಷಯದಲ್ಲಿ ಅವನ ವಿಚಾರ ಸರಣಿ ಸಂಸ್ಕೃತ ಕಾವ್ಯ ಮೀಮಾಂಸೆಯಲ್ಲಿ ಅದುವರೆಗಿನ ಬಹುತೇಕ ಆಚಾರ್ಯರ ವಾದಗಳಿಗೆ ವಿರುದ್ಧವಾಗಿಯೇ ಇದೆ. ಭಾಮಹನನ್ನು ಬಿಟ್ಟರೆ ಬಹುಮಟ್ಟಿಗೆ ಎಲ್ಲ ಆಲಂಕಾರಿಕರೂ ಅದನ್ನು ಅಲಂಕಾರ ಎಂದೇ ಹೇಳುತ್ತಾರೆ. ಭಾಮಹನದೂ ಅದೇ ಅಭಿಪ್ರಾಯ ಎಂದು ಕೆಲವರು, ಹಾಗಲ್ಲ ಅದು ಅಲಂಕಾರವಲ್ಲ ಎಂದು ಅವನ ಅಭಿಪ್ರಾಯ ಎಂದು ಇನ್ನು ಕೆಲವರು ವಿಮರ್ಶಕರ ವಿಚಾರ. ಆದರೆ ಕುಂತಕನು ಇದನ್ನು ಧೈರ್ಯವಾಗಿ ಪ್ರಶ್ನಿಸಿ, ತನ್ನ ಗ್ರಂಥದ 11ರಿಂದ 14ರವರೆಗಿನ 4 ಕಾರಿಕೆಗಳಲ್ಲಿ ಸ್ವಭಾವೋಕ್ತಿ ಒಂದು ಅಲಂಕಾರವಲ್ಲ ಎಂದು ಅತ್ಯಂತ ಖಚಿತವಾಗಿ ಪ್ರತಿಪಾದಿಸಿದ್ದಾನೆ.

ಅಲಂಕಾರ ಕೃತಾಂ ಯೇಷಾಂ ಸ್ವಭಾವೋಕ್ತಿರಲಂಕೃತಿಃ ||
ಅಲಂಕಾರ್ಯತಯಾ ತೇಷಾಂ ಕಿಮದನ್ಯದವತಿಷ್ಠತೇ ||[23]

ಸ್ವಭಾವೋಕ್ತಿ ಒಂದು ಅಲಂಕಾರ ಎಂದು ಹೇಳುವವರಿಗೆ ಅವನು ಕೇಳುವ ಪ್ರಶ್ನೆ - ಅಲಂಕಾರ್ಯರೂಪದಲ್ಲಿ ಬಾಕಿ ಉಳಿದಿರುವುದಾದರೂ ಏನು ?

ಅಲ್ಲದೆ ಸ್ವಭಾವೋಕ್ತಿ ಎಂದರೆ ಸಹಜವಾಗಿ ಇದ್ದುದಿದ್ದಂತೆ ವಸ್ತುಗಳ ಸ್ವಭಾವ ಎಂದು ಹೇಳಿ ಅವುಗಳು ಅಲಂಕಾರಗಳೂ ಹೌದು ಎಂದಾದರೆ, ಆಗ ಅಂಥ ಅಲಂಕಾರದ ವ್ಯಾಪ್ತಿಗೆ ಬಾರದೆ ಇರುವುದು ಯಾವುದೂ ಉಳಿದಿರುವುದಿಲ್ಲ. ಅಲ್ಲದೆ ಸ್ವಭಾವೋಕ್ತಿಯೇ ಅಲಂಕಾರ ಎಂದಾದರೆ ಅಲಂಕೃತಗೊಳ್ಳಬೇಕಾದ ಶರೀರ ಯಾವುದು ?

ಶರೀರಂ ಚೇದಲಂಕಾರಃ ಕಿಮಲಂಕುರುತೇಽಪರಮ್
ಆತ್ಮೈವನಾತ್ಮನಃ ಸ್ಕಂಧಂ ಕ್ವಚಿದಪ್ಯಧಿರೋಹತಿ[24] **[ವ. ಜೀ. 1-13]**

ಒಂದು ವೇಳೆ ಶರೀರವೇ ಅಲಂಕಾರವೆಂದಾದರೆ, ಅದು ಬೇರೆ ಯಾವುದನ್ನು ಅಲಂಕೃತಗೊಳಿಸಬೇಕು ? ಯಾರೇ ಆಗಲಿ ಎಂದೂ ತನ್ನ ಹೆಗಲ ಮೇಲೆ ತಾನೇ ಹತ್ತುವುದು ಸಾಧ್ಯವಿಲ್ಲ. ಡಾ. ಕೃಷ್ಣಮೂರ್ತಿಯವರು ಕುಂತಕನ ಈ ಮಾತನ್ನು ಅನುಮೋದಿಸುತ್ತ ಇದುವರೆಗೂ ಇದಕ್ಕೆ ಯಾರೂ ಸರಿಯಾದ ಉತ್ತರವನ್ನೇ ನೀಡಿಲ್ಲವೆನ್ನುತ್ತಾರೆ. - "In the whole field of sanskrit poetics, kuntaka is the only theorist who calls a spade a spade, and asks us how can you stand on your own shoulder ? As for as I know, no straight answer has been forth comming up to date in the field up sanskrit criticism.[25]

---

23. ಕ. ವ. ಜೀ - ಪುಟ 11
24. ಕ. ವ. ಜೀ. ಪುಟ. 33
25. ಡಾ. ಕೆ. ಕೃಷ್ಣಮೂರ್ತಿ Studies in Indian Aerthectics and critism - p. 194

ಕುಂತಕನ ಅತ್ಯಂತ ಕ್ರಾಂತಿಕಾರಕವೆನ್ನಬಹುದಾದ ವಿಚಾರವೆಂದರೆ - ಮಾರ್ಗಗಳು ಮತ್ತು ಗುಣಗಳನ್ನು ಕುರಿತಾದ ಅವನ ವಿಚಾರಗಳು ಹಾಗೂ ಅಲಂಕಾರಗಳ ಬಗೆಗಿನ ಅವನ ನಿಲುವುಗಳು. ಹೀಗೆ ಮಾಡುವ ಮೂಲಕ, ಪ್ರಾಚೀನರ ಗುಣ ಮತ್ತು ಮಾರ್ಗ ವಿವೇಚನೆಗೆ ಅವನೊಂದು ಹೊಸ ತಿರುವು ನೀಡಿದ. ಹಿದಿನವರ ವೈದರ್ಭೀ, ಗೌಡೀ, ಪಾಂಚಾಲೀ, ಲಾಟೀಯಾ ಇತ್ಯಾದಿ ಭೌಗೋಳಿಕ ಅಥವಾ ಪ್ರಾದೇಶಿಕ ವಿಭಜನೆಯನ್ನು ನಿರಾಕರಿಸಿ, ರೀತಿ ಅಥವಾ ಮಾರ್ಗಗಳು ಕವಿ ಮನೋಧರ್ಮಕ್ಕನುಗುಣವಾಗಿ ರೂಪುಗೊಳ್ಳುತ್ತವೆಂದು ಹೇಳಿದ್ದು ಬಹಳ ಮುಖ್ಯ ಸಂಗತಿ. ಕವಿಯ ಕರ್ಮವಾದ ಕಾವ್ಯ ಅವನ ಸ್ವಭಾವಕ್ಕೆ ತಕ್ಕಂತೆ ರೂಪುಗೊಳ್ಳುತ್ತದೆಂದು ಹೇಳುವ ಮೂಲಕ ಅದುವರೆಗಿನ ರೀತಿ ಮಾರ್ಗ ವಿವೇಚನೆಗೆ ಹೊಸ ದಿಕ್ಕು ನೀಡಿದ. ಸುಕುಮಾರ, ಮಧ್ಯಮ ಮತ್ತು ವಿಚಿತ್ರ ಎಂದು ಮೂರು ಬಗೆಯಾಗಿ ವಿಂಗಡಿಸಿ, ಆ ಯಾವ ಮಾರ್ಗವೂ ತನಗೆ ತಾನೇ ಶ್ರೇಷ್ಠವೂ ಅಲ್ಲ; ಕನಿಷ್ಠವೂ ಅಲ್ಲ ಎಂದು ಸಾರಿದ. ಮಾರ್ಗಗಳು ಪರಸ್ಪರ ಭಿನ್ನವೇ ಆದರೂ ಸಹೃದಯರಿಗೆ ಸಂತೋಷ ಉಂಟುಮಾಡುವಲ್ಲಿ ಮೂರೂ ಸಾರ್ಥಕ ಎಂದು ಘೋಷಿಸಿದ. ಎಷ್ಟು ಜನ ಕವಿಗಳೋ ಅಷ್ಟು ಮಾರ್ಗಗಳಿವೆ ಎಂಬ ಈತನ ದೃಷ್ಟಿ 'ಶೀಲದಂತೆ ಶೈಲಿ' ಎಂಬ ವಿಚಾರಕ್ಕೆ ನಮ್ಮನ್ನು ಮುಟ್ಟಿಸುತ್ತದೆ. ಇದಕ್ಕೆ ಪೂರಕವಾದ ಈತನ ಗುಣವಿವೇಚನೆ ಕೂಡ ಹಿಂದಿನವರಿಗಿಂತ ಭಿನ್ನವಷ್ಟೇ ಅಲ್ಲ; ಸಮಂಜಸವಾಗಿದೆ. ಹಿಂದಿನವರ ಪ್ರಕಾರ ಗುಣಗಳು ಹತ್ತು. ವೈದರ್ಭಿ ಎಲ್ಲ ಹತ್ತು ಗುಣಗಳನ್ನು ಹೊಂದಿರುವುದರಿಂದ ಅದು ಶ್ರೇಷ್ಠ. ಅದೇ ಗೌಡಿ ಮೊದಲಾದುವು ಕೆಲವು ಗುಣಗಳನ್ನು ಮಾತ್ರ ಹೊಂದಿರುವುದರಿಂದ ಅಷ್ಟೊಂದು ಶ್ರೇಷ್ಠವಲ್ಲ. ಕುಂತಕನು ಇದನ್ನು ತೊಡೆದು ಹಾಕಿ ಈ ಮೂರು ಮಾರ್ಗಗಳಲ್ಲಿ ಒಂದು ಹೆಚ್ಚು ಒಂದು ಕಡಿಮೆ ಎಂದಿಲ್ಲ. ಪ್ರತಿಭೋದ್ಭವವಾಯಿತೆಂದರೆ ಎಲ್ಲವೂ ಹೆಚ್ಚು ಅಥವಾ ಶ್ರೇಷ್ಠ ಹಾಗಲ್ಲದಿದ್ದರೆ ಎಲ್ಲವೂ ಸುಮಾರೇ. ಈ ಮಾರ್ಗಗಳು ಸಮರ್ಥವಾಗಿ ಮೂಡಿಬಂದಾಗ ಅವು ಎಲ್ಲ ಗುಣಗಳಿಂದ ಕೂಡಿರುತ್ತವೆ. ಅದು ಕವಿ ಕೌಶಲವನ್ನಾಧರಿಸಿದ್ದು ಗುಣಗಳ ಸ್ವರೂಪವೂ ಆಯಾ ಮಾರ್ಗಕ್ಕೆ ತಕ್ಕಂತೆ ಬೇರೆ ಬೇರೆಯಾಗುತ್ತದೆ. ಹಿಂದಿನವರು ಹೇಳಿಕೊಂಡು ಬಂದ ಹತ್ತು ಗುಣಗಳನ್ನೇ ಹೇಳಿ, ತನ್ನದೇ ರೀತಿಯಲ್ಲಿ ಕೆಲವು ಗುಣಗಳನ್ನು ಹೆಸರಿಸಿದ. ಮಾಧುರ್ಯ, ಪ್ರಸಾದ, ಲಾವಣ್ಯ, ಅಭಿಜಾತ್ಯ, ಔಚಿತ್ಯ ಮತ್ತು ಸೌಭಾಗ್ಯ. ಮೊದಲ ನಾಲ್ಕು ಆಯಾ ಮಾರ್ಗಕ್ಕೆ ತಕ್ಕಂತೆ ಬೇರೆ ಬೇರೆ ಸ್ವರೂಪವನ್ನು ತಾಳುತ್ತವೆ. ಔಚಿತ್ಯ ಮತ್ತು ಸೌಭಾಗ್ಯವೆಂಬ ಎರಡು ಗುಣಗಳು ಎಲ್ಲ ಮಾರ್ಗಗಳಿಗೂ ಒಂದೇ ಸಮನೆ ಅನ್ವಯಿಸುತ್ತವೆ. ಒಟ್ಟಾರೆಯಾಗಿ ಹೇಳಬೇಕೆಂದರೆ ಕವಿ ಸ್ವಭಾವ ಮತ್ತು ಸಾಮರ್ಥ್ಯಕ್ಕೆ ತಕ್ಕಂತೆ ಮಾರ್ಗ ರೂಪುಗೊಳ್ಳುತ್ತದೆ.

ಅಲಂಕಾರಗಳನ್ನು ಕುರಿತಾದ ಅವನ ವಿಚಾರ ಸರಣಿಯೂ ಇಷ್ಟೇ ಪ್ರಗತಿಪರವಾದ್ದು. ಆನಂದವರ್ಧನನ್ನು ಹೊರತು ಪಡಿಸಿದರೆ, ಆಲಂಕಾರಿಕರಿಂದ ಆಲಂಕಾರಿಕರಿಗೆ ಅಲಂಕಾರಗಳ ಸಂಖ್ಯೆಯನ್ನು ಹಿಗ್ಗಿಸುತ್ತ ಹೋದವರೇ ಎಲ್ಲರೂ. ಆದರೆ ಆನಂದವರ್ಧನನೇ ಮೊತ್ತ ಮೊದಲಿಗೆ ಅಲಂಕಾರಗಳ ಸ್ಥಾನವನ್ನು ಗುರುತಿಸುವ ಸೂತ್ರ ರೂಪಿಸಿದವನು. ಧ್ವನಿತ

ವಾದಾಗ ಅಲಂಕಾರಗಳಿಗೆ ಎಲ್ಲಿಲ್ಲದ ಸೌಂದರ್ಯ ಪ್ರಾಪ್ತವಾಗುತ್ತದೆ ಎಂದು ಹೇಳಿದ. "ಅನಂತಾ ಹಿ ವಾಗ್ವಿಕಲ್ಪಾಃ ತತ್‌ಪ್ರಕಾರ ಏವ ಅಲಂಕಾರಾಃ" ಎಂಬ ಮಾತು ಅವನಿಂದ ಚಾಲನೆಗೆ ಬಂದಿತು. ಆದರೆ ಕುಂತಕನು ತನ್ನ ವಕ್ರೋಕ್ತಿ ತತ್ತ್ವದ ಮೂಲಕ ಅಲಂಕಾರ ಗಳನ್ನು ನೋಡುವ ದೃಷ್ಟಿಕೋನವನ್ನೇ ಬದಲಿಸಿದ. ಅಷ್ಟೇ ಅಲ್ಲ; ಅವುಗಳಿಗೆ ನೂತನ ಕಾಂತಿಯನ್ನು ತಂದುಕೊಟ್ಟ. ಕುಂತಕನ ವೈಶಿಷ್ಟ್ಯವೆಂದರೆ ಅಲಂಕಾರವನ್ನೂ ಒಳಗೊಂಡಂತೆ ಕಾವ್ಯದ ವಿವಿಧ ಪರಿಕರಗಳೆಲ್ಲವನ್ನೂ ಒಳಗೊಳ್ಳುವ ವ್ಯಾಪಕ ತತ್ತ್ವದ ರೂಪದಲ್ಲಿ ವಕ್ರೋಕ್ತಿ ತತ್ತ್ವವನ್ನು ರೂಪಿಸಿರುವುದು. ಕಾವ್ಯ ಯಾವಾಗಲೂ ಅಲಂಕಾರ ಸಹಿತವಾಗಿಯೇ ಮೂಡಿ ಬರುತ್ತದೆ. ಅಲಂಕಾರ, ಅಲಂಕಾರ್ಯ ಎಂದು ಪೃಥಕ್ಕರಿಸಿ ವಿವೇಚಿಸುವುದು ಅದನ್ನು ಅರ್ಥೈಸಿಕೊಳ್ಳುವ ಸಲುವಾಗಿ ಅಷ್ಟೆ-ಪ್ರಕೃತಿ ಪ್ರತ್ಯಯ ಎಂದು ಬೇರೆ ಬೇರೆಯಾಗಿ ವಿಭಜಿಸಿದಂತೆ ಎಂಬ ಅವನ ವಿಚಾರವನ್ನು ಆಗಲೇ ಪ್ರಸ್ತಾಪಿಸಿದೆ.

ಕಾವ್ಯಕ್ಕೆ ಅಲಂಕಾರ ಸೇರುತ್ತದೆ ಎಂದು ಹೇಳುವುದೇ ಸರಿಯಾದ್ದಲ್ಲ. ಅಲಂಕೃತ ಶಬ್ದ ಮತ್ತು ಅರ್ಥಗಳ ಸಮಷ್ಟಿರೂಪವೇ ಕಾವ್ಯ. ಅಲಂಕಾರ ಕಾವ್ಯದ ಉಪಕರಣವಾಗಲಿ ಅದರ ಒಂದು ಅಂಗವೆಂದಾಗಲಿ ಅಲ್ಲ. ಅಲಂಕಾರ, ಶಬ್ದ, ಅರ್ಥಗಳಿಂದ ಬೇರ್ಪಡಿಸಲಾರದಷ್ಟು ಮಟ್ಟಿಗೆ ಬೆರೆತುಕೊಂಡು ಬಿಟ್ಟಿರುತ್ತದೆ. ಶಬ್ದಾರ್ಥಗಳು ಅಲಂಕಾರ್ಯವಾದರೆ; ವಕ್ರೋಕ್ತಿ ಅದರ ಅಲಂಕಾರ ಎಂದು ಹೇಳುವ ಈ ಕಾರಿಕೆ ಪ್ರಸಿದ್ಧವಾಗಿದೆ.

> ಉಭಾವೇತಾವಲಂಕಾರ್ಯೌ ತಯೋಃ ಪುನರಲಂಕೃತಿಃ|
> ವಕ್ರೋಕ್ತಿರೇವ ವೈದಗ್ಧ್ಯಭಂಗೀ ಭಣಿತಿರುಚ್ಯತೇ [ಮಾ. ಜಿ. 1-10][27]

ಕುಂತಕನು ಅಲಂಕಾರಗಳೆಂದರೆ ತನಗೆ ತಾನೇ ಸುಂದರವಾಗಿರುವ ಕಾವ್ಯ ವಸ್ತುವಿನ ಸೌಂದರ್ಯಾತಿಶಯದ ರೂವಾರಿಗಳು ಎಂದು ಪರಿಗಣಿಸಬೇಕಾಗುತ್ತದೆಂದು ಸಾರುತ್ತಾನೆ. ಈ ದೃಷ್ಟಿಕೋನದಿಂದಲೇ ವಾಕ್ಯವಕ್ರತೆಯ ಅಡಿಯಲ್ಲಿ ದೀಪಕ, ರೂಪಕ, ಉತ್ಪ್ರೇಕ್ಷೆ, ಅಪ್ರಸ್ತುತ ಪ್ರಶಂಸೆ, ಪರ್ಯಾಯೋಕ್ತ, ಅತಿಶಯೋಕ್ತಿ, ತುಲ್ಯಯೋಗಿತಾ, ಅನನ್ವಯ, ಪರಿವೃತ್ತಿ, ವ್ಯತಿರೇಕ, ಸಹೋಕ್ತಿ, ದೃಷ್ಟಾಂತ, ಅರ್ಥಾಂತರ ನ್ಯಾಸ, ಆಕ್ಷೇಪ, ವಿಭಾವನಾ, ಸಸಂದೇಹ ಅಪಹ್ನುತಿಯೇ ಮೊದಲಾದ 20 ಅಲಂಕಾರಗಳನ್ನು ಮಾತ್ರ ಒಪ್ಪಿ ಅವನ್ನು ಸೋದಾಹರಣವಾಗಿ ವಿವರಿಸಿದ್ದಾನೆ. ಉಳಿದ ಅಲಂಕಾರಗಳನ್ನು ಈ ಮುಖ್ಯ ಅಲಂಕಾರಗಳಲ್ಲಿ ಸಮಾವೇಶಗೊಳ್ಳುತ್ತವೆಂದು ಹೇಳುವ ಮೂಲಕ, ಮೊದಲಿಗೆ ಅಲಂಕಾರಶಾಸ್ತ್ರದ ಇತಿಹಾಸದಲ್ಲಿ ಅಲಂಕಾರಗಳ ಸಂಖ್ಯಾ ಬಾಹುಳ್ಯಕ್ಕೆ ತಡೆ ಒಡ್ಡಿದ್ದಾನೆ.

ಒಟ್ಟಾರೆ ಕುಂತಕನು ವಕ್ರೋಕ್ತಿ ತತ್ತ್ವದ ವ್ಯಾಪ್ತಿಯಲ್ಲಿ ಕಾವ್ಯಾಭಿವ್ಯಕ್ತಿಗೆ ಸೊಗಸುಂಟು ಮಾಡುವ ಸಕಲಾಂಶಗಳನ್ನೂ ಅಳವಡಿಸುವ ಪ್ರಯತ್ನ ಮಾಡಿದ್ದಾನೆ.

---

26. ಕ. ವ. ಜೀ - ಪುಟ 8
27. ಕ. ವ. ಜೀ ಪುಟ 30

ಕುಂತಕನ ವಿಮರ್ಶಾ ವಿಚಕ್ಷಣತೆ

ಕುಂತಕನ ಮಹತ್ವವಿರುವುದೆಲ್ಲಾ ವಕ್ರೋಕ್ತಿ ತತ್ತ್ವದ ಅನ್ವಯಿಕ ವಿಧಾನದಲ್ಲಿ. ಇಡೀ ಸಂಸ್ಕೃತ ಅಲಂಕಾರಶಾಸ್ತ್ರದ ಚರಿತ್ರೆಯಲ್ಲೇ ಕುಂತಕನಷ್ಟು ಒಳನೋಟಗಳಿಂದ ಕೂಡಿದ ಕಾವ್ಯ ವಿಶ್ಲೇಷಣೆಯನ್ನು ನೀಡಿದವರು ಬೇರೊಬ್ಬರಿಲ್ಲ. ಡಾ. ಕೆ. ಕೃಷ್ಣಮೂರ್ತಿಯವರು ಹೇಳುವುದೆಂದರೆ ಧ್ವನ್ಯಾಲೋಕದಲ್ಲಿ ಕೂಡ ಧ್ವನಿ ಸಿದ್ಧಾಂತವನ್ನು ಸ್ಥಾಪಿಸಲು ನೀಡಲಾಗಿರುವ ಪುಟಗಳ ಸಂಖ್ಯೆಗೆ ಹೋಲಿಸಿದರೆ, ಕಾವ್ಯ ವಿಶ್ಲೇಷಣೆಗೆ ನೀಡಲಾಗಿರುವ ಪುಟಗಳು ಪರಿಮಿತವೆಂದೇ ಹೇಳಬೇಕು* ಆದರೆ ವಕ್ರೋಕ್ತಿಜೀವಿತದಲ್ಲಿ ಹೆಜ್ಜೆಹೆಜ್ಜೆಗೆ ಸಂಸ್ಕೃತ ಸಾಹಿತ್ಯದ ರಸವತ್ತಾದ ಹಾಗೂ ಸಾರವತ್ತಾದ ಕಾವ್ಯ ಭಾಗಗಳ ಹೃದ್ಯವಾದ, ಒಳನೋಟಗಳಿಂದ ಕೂಡಿದ ವಿಶ್ಲೇಷಣಾತ್ಮಕವಾದ ವಿಮರ್ಶೆ ಕಂಡುಬರುತ್ತದೆ. ವರ್ಣ, ಪದ, ಪ್ರತ್ಯಯ, ಸಂಧಿ, ಸಮಾಸ, ವಾಕ್ಯ ಹಾಗೂ ಪ್ರಕರಣಗಳಲ್ಲಿ ಕಂಡುಬರುವ ಸೌಂದರ್ಯವನ್ನು ವಿವರವಾದ ವಿಶ್ಲೇಷಣೆಗೆ ಒಳಪಡಿಸಿದ್ದಾನೆ. ವಿಸ್ತಾರವಾದ ಸಂಸ್ಕೃತ ಸಾಹಿತ್ಯಭಂಡಾರವನ್ನು ತಮ್ಮ ಅನರ್ಘ್ಯ ಕೃತಿ ರತ್ನಗಳಿಂದ ಶ್ರೀಮಂತಗೊಳಿಸಿರುವ ಕಾಳಿದಾಸ, ಭವಭೂತಿ, ಭಾರವಿ, ಮಾಘ, ಭಟ್ಟ ನಾರಾಯಣರಂಥ ಖ್ಯಾತ ನಾಮರ ಕೃತಿಗಳನ್ನಷ್ಟೇ ಅಲ್ಲದೆ ಅಭಿಜ್ಞಾನ ಜಾನಕಿ, ಪುಷ್ಪದೂಷಿತಕದಂಥ ಅಷ್ಟೇನೂ ಖ್ಯಾತವಲ್ಲದ ಕೃತಿಗಳಿಂದಲೂ ಆಯ್ದ ಭಾಗಗಳ ರಸವಿಮರ್ಶೆ ಮಾಡುತ್ತಾನೆ. ಇಂಥ ಆಯ್ದ ಲಕ್ಷ್ಯಗಳೇ 340 ಕ್ಕಿಂತ ಹೆಚ್ಚಿವೆ. ಅವನು ಆಯ್ದುಕೊಳ್ಳುವ ಭಾಗಗಳೂ ಅಷ್ಟೇ ಹೃದ್ಯವೂ ಸ್ವಾರಸ್ಯವೂ ಆಗಿರುತ್ತವೆ. ಕಾವ್ಯವೊಂದರಲ್ಲಿ ನಿಹಿತವಾಗಿರುವ ಸೌಂದರ್ಯವನ್ನು ತೆರೆದು ತೋರುತ್ತಲೇ ಅದೇ ಕಾವ್ಯದಲ್ಲಿ ಕಂಡು ಬರುವ ದೋಷಗಳನ್ನೂ ಮನಗಾಣಿಸುತ್ತಾನೆ. ಎಂಥ ಹೆಸರಾಂತ ಕವಿಯೂ ಅವನ ವಿಮರ್ಶೆಯ ಹರಿತ ವಾಕ್ಕುಗಳಿಂದ ಪಾರಾಗಿಲ್ಲ. ಉದಾಹರಣೆಗೆ ಕಾಳಿದಾಸನ ಕುಮಾರ ಸಂಭವದ ಈ ಎರಡು ಸಂದರ್ಭಗಳನ್ನು ಅವನು ವಿಮರ್ಶೆಗೊಳಪಡಿಸಿರುವ ರೀತಿಯನ್ನು ನೋಡಬಹುದು.

ಶಿವನೇ ತನ್ನ ಪತಿಯಾಗಬೇಕೆಂದು ಹಂಬಲಿಸಿ, ಅದಕ್ಕಾಗಿ ವ್ರತಾಚರಣೆ ಕೈಕೊಂಡಿದ್ದ ಪಾರ್ವತಿಯ ಸಮೀಪಕ್ಕೆ ಬಂದು ಕಪಟವಟು ಹೀಗೆ ಹೇಳುತ್ತಾನೆ.

ದ್ವಯಂಗತಂ ಸಂಪ್ರತಿ ಶೋಚನೀಯತಾಂ
ಸಮಾಗಮ ಪ್ರಾರ್ಥನಯಾ ಕಪಾಲಿನಃ|
ಕಲಾ ಚ ಕಾತಿಮತೀ ಕಲಾವತಸ್ತ್ವ—
ಮಸ್ಯ ಲೋಕಸ್ಯ ಚ ನೇತ್ರ ಕೌಮುದೀ

ಆ ಕಪಾಲಿಯ ಸಮಾಗಮಕೆಳಸಿ
ಶೋಕಕೀಡಾದರಿಂದಿರ್ವರಹುದು

---

* Dr. K. Krishnamurthy : Studies in Indian Aesthetics and Criticism, Page - 195

ಆ ಕಾಂತಿಮತಿ ಕಲಾವಂತನೊಂದು ಕಲೆ
ಮತ್ತೀ ಜಗದ ಕಂಗಳಿಗೆ ಬೆಳುದಿಂಗಳಹ ನೀನು

[ಕ. ವ. ಜೀ - ಪುಟ 23]

ಈ ಪದ್ಯದಲ್ಲಿ 'ಪರಮೇಶ್ವರ' ಶಬ್ದಕ್ಕೆ ಪರ್ಯಾಯವಾಚಕಗಳಾಗಿ ಸಹಸ್ರಾರು ಶಬ್ದಗಳಿದ್ದಾಗ್ಯೂ ಬೀಭತ್ಸರಸದ ಆಲಂಬನ ವಿಭಾವವಾಗಿ 'ಕಪಾಲಿನಃ' ಎಂಬ ಶಬ್ದವನ್ನು ಪ್ರಯೋಗಿಸಿರುವುದರಿಂದ, ಅದು "ಜುಗುಪ್ಸಾ" ಸ್ಥಾಯೀ ಭಾವಕ್ಕೆ ಪೋಷಕವಾಗಿ ಬಂದು ಸುಂದರ ವಾಚಕ ವಕ್ರತೆಗೆ ಕಾರಣವಾಗಿದೆ. ಅಲ್ಲದೆ ಸಂಪ್ರತಿ (ಈಗ, ಇಂದು) ಹಾಗೂ ದ್ವಯಂ (ಇರ್ವರು) ಶಬ್ದಗಳು ಅತಿ ರಮಣೀಯವಾಗಿವೆ. ಕಾರಣ ಅವು ಉಪಹಾಸದ ಭಾವವನ್ನು ಸಹಜಾಗಿಯೇ ತಂದುಕೊಡುತ್ತವೆ. ಇದುವರೆಗೆ ಕೇವಲ ಚಂದ್ರನೊಬ್ಬ ದುರ್ವ್ಯಸನದಿಂದ ದೂಷಿತನಾಗಿದ್ದ. ಈಗ ಅವನ ದುಸ್ಸಾಹಸದಲ್ಲಿ ಅವನಿಗೆ ಬೆಂಬಲಳಾಗಿ ನಿಂತು ನೀನೂ ಶೋಚನೀಯ–ಳಾಗಿದ್ದೀಯೆ. 'ಪ್ರಾರ್ಥನಯಾ' (ಎಳಸು) ಎಂಬ ಶಬ್ದವೂ ಅತ್ಯಂತ ರಮಣೀಯವಾಗಿಯೇ ಇದೆ. ಕಾರಣ ಈ ಸಮಾಗಮ ಒಂದು ವೇಳೆ ಕಾಕತಾಳೀಯವೇ ಆಗಿದ್ದರೆ ಅದನ್ನು ಆಕ್ಷೇಪಿಸುವಂತಿರಲಿಲ್ಲ. ಆದರೆ ಅಂಥ ಸಮಾಗಮಕ್ಕಾಗಿ ಪ್ರಾರ್ಥಿಸುವುದು ಕಲಂಕಕಾರಿಣಿಯಾಗಿದೆ. ಈ ಪ್ರಾರ್ಥನೆ ಅತ್ಯಂತ ಉಚ್ಚಕುಲದವರಲ್ಲಿ ಸಾರ್ವಜನಿಕ ಹಗರಣಕ್ಕೆ ಅವಕಾಶವಾಗಿ ಕಲಂಕಕಾರಿಣಿಯಾಗಿದೆ. ಸಂಯುಕ್ತ ವಾಚಕವಾದ 'ಚ' ಎಂಬುದು ಎರಡು ಸಲ (ಸಾ-ಚ ತ್ವಂ-ಚ) ಬಳಕೆಯಾಗಿದೆ. ಒಂದರೊಡನೊಂದು ಪರಸ್ಪರ ಸ್ಪರ್ಧಿಸುತ್ತಿವೆಯೇನೋ ಎಂಬಂತಿರುವ ಚಂದ್ರಕಳೆ ಮತ್ತು ಪಾರ್ವತಿಯ ಲಾವಣ್ಯಾತಿಶಯದ ಪ್ರತಿಪಾದನೆಗಾಗಿ ಇವುಗಳ ಪ್ರಯೋಗವಾಗಿರುವಂತಿದೆ. 'ಕಲಾವತಃ' ಮತ್ತು 'ಕಾಂತಿಮತಿ' ಈ ಶಬ್ದಗಳ ಮತ್ವರ್ಥೀಯ ಪ್ರತ್ಯಯಗಳ (ಷಷ್ಠೀ ವಿಭಕ್ತಿ) ಮೂಲಕ ಚಂದ್ರ ಮತ್ತು ಅವನ ಕಳೆಗಳ ಪ್ರಶಂಸೆಯೇ ಪ್ರತೀತವಾಗುತ್ತದೆ. ಹೀಗೆ ಈ ಶ್ಲೋಕದಲ್ಲಿ ಬಳಕೆಯಾಗಿರುವ ಪ್ರತಿಯೊಂದು ಶಬ್ದದ ಬದಲಿಗೆ ಬೇರೊಂದು ಪರ್ಯಾಯವನ್ನು ಬಳಸಿದರೂ ಅದು ಕವಿಯ ವಿವಕ್ಷಿತ ಅರ್ಥವನ್ನು ಅಭಿವ್ಯಕ್ತಿಸುವಲ್ಲಿ ಅಸಮರ್ಥವಾಗುತ್ತದೆ. ಆ ಕಾರಣಕ್ಕಾಗಿ ಚಮತ್ಕಾರ ರಹಿತವೂ ಆಗುತ್ತದೆ. ಕಾವ್ಯದಲ್ಲಿ ಅನೌಚಿತ್ಯ ಹೇಗಾಗುತ್ತದೆಂಬುದಕ್ಕೆ ಕುಮಾರ ಸಂಭವದ ಈ ಉದಾಹರಣೆ ನೀಡಿ ಅದನ್ನು ವ್ಯಾಖ್ಯಾನಿಸುವ ರೀತಿ ಹೀಗಿದೆ.

ಕಾಮೇಕ ಪತ್ನೀಂ ವ್ರತ ದುಃಖಶೀಲಾಂ
ಲೋಲಂ ಮನಶ್ಚಾರುತಯಾ ಪ್ರವಿಷ್ಟಾಂ|
ನಿತಂಬಿನೀಮಿಚ್ಛಸಿ ಮುಕ್ತಲಜ್ಜಾಂ
ಕಂಠೇಸ್ವಯಂ ಗ್ರಾಹನಿಷಕ್ತ ಬಾಹುಂ [ಕು. ಸಂ. - III -7]

ಹದಿಬದೆಯ ಧರ್ಮದಾಚರಣೆಯಿಂದೆ
ದುಃಖ ಸಹಿಸುವ ದೃಢವ್ರತಿ ಯಾವಳಾದರು

ತನ್ನ ಅನುಪಮದ ಚೆಲುವಿಂದೆ
ನಿನ್ನೀ ಚಲಚಿತ್ತವನು ಹೊಕ್ಕಿರೆ ಹೇಳು ನೀನು
ತನ್ನೆಲ್ಲ ಲಜ್ಜೆಯನುಳಿದು ಆ ವ್ರತಿ
ತನ್ನಿಚ್ಛೆಯಿಂದೆ ಓಡುತ್ತ ಬಂದು
ನಿನ್ನ ಕೊರಳಪ್ಪುವಂತೆಸಗುವೆನು ನಾನು [ಕ. ವ. ಜೀ - 1-125 ಪು. 112]

"ಈ ಇಡೀ ಕಥನವೇ ಸದಾಚಾರ ವಿಹೀನವಾಗಿದೆ. ಸ್ವರ್ಗದ ಅಧಿಪತಿಯಾಗಿ ಪ್ರತಿಷ್ಠಿತನಾಗಿಯೂ ಈ ರೀತಿಯ ಪರಸ್ತ್ರೀಯ ಸತೀತ್ವದ ಅಪಹರಣದಂಥ ಅಶ್ಲೀಲದ ದುಃಸಾಹಸಕ್ಕೆ ಮನವೊಲಿಸಬಹುದಾದವನೆಂಬ ರೀತಿಯಲ್ಲಿ ಇಂದ್ರನ ಬಗ್ಗೆ ಕಾಮನು ಹೇಳಿರುವ ಈ ಮಾತುಗಳು ಅತ್ಯಂತ ಅನೌಚಿತ್ಯದಿಂದ ಕೂಡಿವೆ. ಸಹಜವೂ, ಸುಕುಮಾರವೂ ಆದ ಸೂಕ್ತಿಗಳ ಸೌಂದರ್ಯದಿಂದ ಕೂಡಿದ ಕಾವ್ಯಗಳನ್ನು ರಚಿಸಿದ ಕವಿಯಾದ ಕಾರಣಕ್ಕೆ ಕಾಳಿದಾಸನನ್ನು ಇಂಥ ಸೂಕ್ಷ್ಮ ವಿಮರ್ಶೆಗೆ ಒಳಪಡಿಸುತ್ತಿದ್ದೇನೆಯೇ ಹೊರತು, ಕೇವಲ ಕಾವ್ಯ ರಚನೆಯ ಕೃತಕ ಕೌಶಲಗಳನ್ನಳವಡಿಸಿಕೊಂಡು ಪ್ರಶಂಸಾರ್ಹರೆನಿಸಿಕೊಂಡ ಕವಿಗಳನ್ನಲ್ಲ. ಅಂಥವರ ಬಗ್ಗೆ ನಾನು ತಲೆಕೆಡಿಸಿಕೊಳ್ಳುವುದಿಲ್ಲ" ಔಚಿತ್ಯಪೂರ್ಣ ಅಭಿವ್ಯಕ್ತಿಯೇ ವಾಕ್ಯದ ಜೀವಳ. ವಾಕ್ಯದ ಯಾವ ಅಂಶದಲ್ಲಾದರೂ ಔಚಿತ್ಯವಿಲ್ಲವೆಂದಾದರೆ ಸಹೃದಯರ ಆಹ್ಲಾದಕ್ಕೆ ಹಾನಿ ಉಂಟಾಗುತ್ತದೆಂದು ಹೇಳುತ್ತ ರಘುವಂಶದ ಈ ಪದ್ಯವನ್ನು ಉದಾಹರಣೆಯಾಗಿ ನೀಡಿ ಹೀಗೆ ವಿಮರ್ಶಿಸುತ್ತಾನೆ.

ಪುರಂ ನಿಷಾದಾಧಿಪತೇಸ್ತದೇತ -
ದ್ಯಸ್ಮಿನ್ಮಯಾ ಮೌಲಿಮಣಿಂ ವಿಹಾಯ|
ಜಟಾಸು ಬದ್ಧಾಸ್ವರುದತ್ಸುಮಂತ್ರಃ
ಕೈಕೇಯಿ ಕಾಮಾಃ ಫಲಿತಾಸ್ತವೇತಿ

ಇದು ನಿಷಾದ ರಾಜನ ಅದೇ ನಗರಿ
ಇಲ್ಲಿಯೇ ನಾನು ಮೌಳಿಮಣಿಯನು ತೊರೆದು
ಜಟೆಯ ಹೆಣೆದುದ ಕಂಡು
ಸಾರಥಿ ಸುಮಂತ್ರ "ಓ ಕೈಕೆ ಫಲಿಸಿದುದು
ನಿನ್ನಳಿಯಾಸೆ" ಎಂದೆನುತೆ ರೋದಿಸಿದನು. [ಕ. ವ. ಜೀ - ಪು - 110]

ಮಹಾಪುರುಷರ ಅಮೂಲ್ಯ ಗುಣಗಳ ಭಂಡಾರದಿಂದ ಕೂಡಿದಂಥ ವ್ಯಕ್ತಿಯ ರೂಪದಲ್ಲಿ (ಅಂದರೆ ಆದರ್ಶ ಧೀರೋದಾತ್ತ ನಾಯಕ) ವರ್ಣಿಸಲ್ಪಡಬೇಕಾದ ರಘುಪತಿ ಶ್ರೀರಾಮಚಂದ್ರನು "ಓ ಕೈಕೆ ಫಲಿಸಿದುದು ನಿನ್ನಳಿಯಾಸೆ" ಎಂಬಂಥ ತುಚ್ಛವಾದ ಮಾತುಗಳನ್ನು ನೆನಪಿಸಿಕೊಳ್ಳುವುದಷ್ಟೇ ಅಲ್ಲ; ಅಷ್ಟೆಲ್ಲ ಮಾತುಗಳನ್ನು ಬಾಯಿಂದ ಹೇಳಿಯೂ ಬಿಡುವುದು ಅನೌಚಿತ್ಯದ ಪರಮಾವಧಿ. ಪ್ರಬಂಧ ಕಾವ್ಯದಲ್ಲೂ ಯಾವುದಾದರೊಂದು ಪ್ರಕರಣದ ಒಂದು ಅಂಶ ದೋಷಪೂರ್ಣವಾಗಿದ್ದು, ಔಚಿತ್ಯರಹಿತವಾಗಿದ್ದರೂ, ಒಂದು ವಸ್ತ್ರ ತುದಿಯಲ್ಲಿ ಮಾತ್ರ

ಸುಟ್ಟಿದ್ದರೂ ಇಡೀ ವಸ್ತ್ರವೇ ಹೇಗೆ ದೂಷಿತವಾಗುತ್ತದೋ ಅದೇ ರೀತಿ ಇಡೀ ಕಾವ್ಯವೇ ದೂಷಿತವಾಗುತ್ತದೆ ಎನ್ನುತ್ತಾನೆ. ಇದೇ ರೀತಿಯ ಅನೌಚಿತ್ಯಕ್ಕೆ ರಘುವಂಶದಲ್ಲೇ ಉದಾಹರಣೆ ನಮಗೆ ಸಿಂಹ ದಿಲೀಪರ ಸಂವಾದ ಪ್ರಕರಣದಲ್ಲಿ ಸಿಗುತ್ತದೆ ಎಂದು ಹೇಳಿ, ಅದನ್ನು ತೀಕ್ಷ್ಣವಾಗಿ ವಿಮರ್ಶಿಸುತ್ತಾನೆ [ಕ. ವ. ಜೀ-ಪು. 110-11] ಇದರಿಂದ ಕುಂತಕನ ರುಚಿದೃಷ್ಟಿ ಎಷ್ಟು ಉನ್ನತವಾದದ್ದೆಂದು ತಿಳಿಯುತ್ತದೆ ಹಾಗೂ ಶುದ್ಧತೆಯ ವಿಷಯದಲ್ಲಿ ಮತ್ತು ಔಚಿತ್ಯದ ಬಗ್ಗೆ ಅವನು ಎಷ್ಟು ನಿಷ್ಠುರನೆಂಬುದನ್ನು ಇದು ಮನಗಾಣಿಸುತ್ತದೆ.

ಒಂದು ಶಬ್ದ, ಒಂದು ಪದ, ಒಂದು ಪ್ರತ್ಯಯ, ಒಂದು ವಚನ, ಇವುಗಳಿಂದ ಕಾವ್ಯ ಭಾಗಕ್ಕೆ ಯಾವ ರೀತಿಯ ಸ್ವಾರಸ್ಯ ಒದಗುತ್ತದೆಂಬುದನ್ನು ಅವನು ವಿಶ್ಲೇಷಿಸುವ ಪರಿಯೇ ಬೆರಗು ಹುಟ್ಟಿಸುತ್ತದೆ. ಕಾವ್ಯದ ಒಳಹೊಕ್ಕು ಕವಿಯ ಅಂತರಂಗವನ್ನೇ ತೆರೆದು ತೋರುವ ರೀತಿಯಲ್ಲಿ ಅವನು ವಿಶ್ಲೇಷಿಸುವುದನ್ನು ನೋಡಿದಾಗ ಅವನೊಬ್ಬ ಮಹಾನ್ ಸಹೃದಯಿ ಎಂಬುದು ಮನದಟ್ಟಾಗುತ್ತದೆ. ಅಷ್ಟೇ ಅಲ್ಲ; ಗುಣಕ್ಕೂ ದೋಷಕ್ಕೂ ಒಬ್ಬನೇ ಕವಿಯಿಂದ ಕೆಲವು ಸಲ ಒಂದೇ ಕೃತಿಯಿಂದ ಉದಾಹರಿಸಿ ಒಳನೋಟದಿಂದ ವಿಶ್ಲೇಷಿಸಿರುವುದನ್ನು ನೋಡಿದರೆ ಟಿ. ಎಸ್. ಇಲಿಯಟ್‌ನ ವಿಮರ್ಶೆ ಕುರಿತ ಈ ಮಾತಿಗೆ ಅದು ಹೇಳಿ ಮಾಡಿಸಿದ ನಿದರ್ಶನ ಎನಿಸದಿರದು : "Honest crisicism and sensitive appreciation is directed not upon the poet, but upon the poetry"[28]

ಹೀಗೆ ಯಾವುದೇ ಪೂರ್ವಗ್ರಹದಿಂದ ಕಲುಷಿತವಲ್ಲದ ನಿರ್ಲಿಪ್ತವಾದ ಮನಸ್ಸಿನಿಂದ ರಸಾಸ್ವಾದನೆ ಮಾಡಿ ತನಗಾದಂಥ ಅನುಭವಗಳನ್ನು ಪ್ರಾಂಜಲವಾಗಿ ಹೇಳುವ ಮುಕ್ತ ಮನಸ್ಸು ಮತ್ತು ಧೈರ್ಯ ಜೊತೆಗೆ ಓದುಗರ ಅಭಿರುಚಿ ಸಂಸ್ಕರಣೆಯ ಮಹತ್ತರ ಹೊಣೆಯನ್ನು ನಿರ್ವಹಿಸುವುದನ್ನು ಕಂಡಾಗ, ಅದೇ ಇಲಿಯಟ್‌ನ ಈ ಮಾತೂ ನೆನಪಾಗುತ್ತದೆ : Critisism on the other hand, must always profess an end in view which roughly speaking appears to be elucidation of works of art and correction of taste[29]

ಮೇಘದೂತದ 'ಭರ್ತುರ್ಮಿತ್ರಂ ಪ್ರಿಯಮವಿಧವೇ' ಎಂದು [1-32] ಪ್ರಾರಂಭವಾಗುವ ಪದ್ಯವನ್ನು ವ್ಯಾಖ್ಯಾನಿಸಿ ಅದರ ಸ್ವಾರಸ್ಯವನ್ನು ಹೊರಗೆಡಹುವ ರೀತಿ ಅದ್ಭುತವಾಗಿದೆ. [ಕ. ವ. ಜೀ. ಪು. 28] ರಘುವಂಶದ ರಘು-ಕೌತ್ಸರ ಪ್ರಸಂಗ [ಕ. ವ. ಜೀ - 350], ಶಾಕುಂತಲದ ದೂರ್ವಾಸ ಶಾಪ ಪ್ರಸಂಗ [ಕ. ವ. ಜೀ 352-54] ಮುದ್ರಾರಾಕ್ಷಸದಲ್ಲಿ ರಾಕ್ಷಸನನ್ನು ಕೈವಶ ಮಾಡಿಕೊಳ್ಳುವ ಸಂದರ್ಭ [ಕ. ವ. ಜೀ 379-80] ಇವುಗಳನ್ನೆಲ್ಲ ಪ್ರಕರಣ ವಕ್ರತೆಗೆ ಉದಾಹರಣೆಯಾಗಿ ನೀಡಿ ವಿವರವಾಗಿ ವಿಶ್ಲೇಷಿಸುತ್ತಾನೆ. ಅದರಲ್ಲೂ ದೂರ್ವಾಸ ಶಾಪ ಪ್ರಸಂಗದ [352-54] ಸೃಷ್ಟಿಯಿಂದ ನಾಟಕಕ್ಕೆ ಪ್ರಾಪ್ತವಾಗಿರುವ ಸ್ವಾರಸ್ಯವನ್ನು ಮನಗಾಣಿಸುವ ರೀತಿಯನ್ನು ಓದಿಯೇ ಸವಿಯಬೇಕು, ಅದೇ ರೀತಿ ತಾಪಸವತ್ಸರಾಜ ನಾಟಕ [ಪು. 361-65]

---

28. Eliot. T. S. Selected essays p. 17 (1951)
29. T. S. Eliot - Selected essays - p - 24

ಹಾಗೂ ಪುಷ್ಪದೂಷಿತ ನಾಟಕಗಳನ್ನು ವಿಶ್ಲೇಷಣೆ ಮಾಡುವ ರೀತಿ ಅತ್ಯಪೂರ್ವವಾಗಿದೆ. ಸಾಮಾನ್ಯವಾಗಿ ಲಕ್ಷಣ ಗ್ರಂಥಗಳಲ್ಲಿ ಶಾಸ್ತ್ರಕಾರರು ಲಕ್ಷಣಗಳನ್ನು ಸೂತ್ರೀಕರಿಸಿ ಅವಕ್ಕೆ ಲಕ್ಷ್ಯಗಳನ್ನು ನೀಡುವಷ್ಟಕ್ಕೆ ವಿರಮಿಸುವುದೇ ಹೆಚ್ಚು. ಕೆಲವೊಮ್ಮೆ ತಾವೇ ಲಕ್ಷ್ಯಗಳನ್ನು ಹೊಸೆದು ಹಾಕಿರುವುದೂ ಉಂಟು ! ಅಂಥವರ ನಡುವೆ ಪ್ರಮುಖವೂ ಸ್ವಾರಸ್ಯವೂ ಆದ ಕಾವ್ಯ ಭಾಗಗಳನ್ನು ಆಯ್ದು ಉದಾಹರಿಸುವಷ್ಟಕ್ಕೇ ನಿಲ್ಲದೆ. ಅವುಗಳನ್ನು ವಿವರ ವಿವರವಾಗಿ ವ್ಯಾಖ್ಯಾನಿಸಿ ಕವಿಯ ಶಕ್ತಿ, ಸಾಮರ್ಥ್ಯ, ಹಾಗೂ ಲೋಪ ದೋಷಗಳನ್ನು ಕುರಿತಂತೆ ವಿಮರ್ಶಿಸುವುದನ್ನು ಕಂಡಾಗ ಬೆರಗು ಮೂಡುತ್ತದೆ.

ಉತ್ತರ ರಾಮ ಚರಿತೆ, ವೇಣೀಸಂಹಾರ ಇವುಗಳಲ್ಲಿ ಅವುಗಳಿಗೆ ಆಧಾರವಾದ ರಾಮಾಯಣ ಮತ್ತು ಮಹಾಭಾರತಗಳ ಪ್ರಧಾನ ರಸಕ್ಕಿಂತ ಭಿನ್ನವಾಗಿ ಬೇರೊಂದು ರಸದ ಚಿತ್ರಣ ತಂದು ಪ್ರಬಂಧ ವಕ್ರತೆಗೆ ಆಸ್ಪದ ಮಾಡಿಕೊಟ್ಟಿರುವ ಕವಿ ಪ್ರತಿಭೆಯನ್ನು ಶ್ಲಾಘಿಸಿದ್ದಾನೆ. ದುರಂತದಲ್ಲಿ ಪರ್ಯವಸಾನವಾಗುವ ಮೂಲಕ ಕರುಣರಸಕ್ಕೆ ಎಡೆ ಮಾಡಿಕೊಟ್ಟಿರುವ ಮೂಲ ರಾಮಾಯಣದ ರೀತಿಯ ಅಂತ್ಯವನ್ನು ಮಾರ್ಪಾಟು ಮಾಡಿ, ಉತ್ತರ ರಾಮಚರಿತೆಯಲ್ಲಿ ಭವಭೂತಿಯು ಸೀತಾರಾಮರ ಪುನರ್ಮಿಲನಕ್ಕೆಡೆ ಮಾಡಿಕೊಡುವ ಮೂಲಕ ಸಂಯೋಗ ಶೃಂಗಾರದಲ್ಲಿ ಕೃತಿಯನ್ನು ಕೊನೆಗೊಳಿಸಿರುವುದು, [ಪು. 388] ಲೌಕಿಕ ಬದುಕಿನ ನಿರರ್ಥಕತೆಯನ್ನು ಸಾರುವ ಶಾಂತರಸ ಪ್ರಧಾನವಾದ ಮಹಾಭಾರತದ ವಿಧಾನವನ್ನು ತಿರಸ್ಕರಿಸಿ, ಅದರ ಜಾಗದಲ್ಲಿ ಪಾಂಡವರ ಕಥೆಗೆ ಚೆನ್ನಾಗಿ ಹೊಂದಿಕೆಯಾಗುವ ವೀರ ಮತ್ತು ಅದ್ಭುತ ರಸಗಳಿಗೆ ವೇಣೀಸಂಹಾರದಲ್ಲಿ ಭಟ್ಟನಾರಾಯಣನು ಎಡೆಮಾಡಿಕೊಟ್ಟಿರುವುದು [ಪು. 388] ಇವುಗಳನ್ನು ಪ್ರಬಂಧ ವಕ್ರತೆಯ ಪರಿಗಳೆಂದು ವಿಶ್ಲೇಷಿಸಿದ್ದಾನೆ. ಇಲ್ಲೆಲ್ಲಾ ಕುಂತಕನ ಕಲಾಪ್ರೌಢಿಮೆ, ಮಂಥನದ ಗಾಢತೆ ಅನುಭವಕ್ಕೆ ಬರುತ್ತದೆ. ನಾಲ್ಕನೇ ಉನ್ಮೇಷದಲ್ಲಂತೂ ಅವನ ವಿಮರ್ಶಾ ವಿವೇಕ, ಪುಟ ಪುಟದಲ್ಲೂ ಉಜ್ವಲವಾಗಿ ಪ್ರಕಟಗೊಳ್ಳುತ್ತಾ ಹೋಗುವುದನ್ನು ಕಾಣಬಹುದು. ಹಲವಾರು ಅಭಿಜಾತ ಕೃತಿಗಳು, ಕೃತಿಭಾಗಗಳು ಬಿಡಿ ಪದ್ಯಗಳು - ಇವೆಲ್ಲವೂ ಅವನ ನಿಶಿತ ವಿಮರ್ಶೆ ಮತ್ತು ಸೂಕ್ಷ್ಮ ವಿಶ್ಲೇಷಣೆಯ ಮೂಸೆಯಲ್ಲಿ ಹಾಯ್ದು ನೂತನ ಅರ್ಥವಂತಿಕೆಯನ್ನು ಪಡೆದುಕೊಳ್ಳುತ್ತ ಹೋಗುವುದನ್ನು ಕಾಣಬಹುದು. ಆನಂದವರ್ಧನನಲ್ಲಿ ಸುಳುಹುದೋರಿದ ಈ ಪ್ರಾಯೋಗಿಕ ವಿಮರ್ಶೆಯ. ಸ್ರೋತ ಕುಂತಕನಲ್ಲಿ ಕಡಲುವರಿದಿರುವುದನ್ನು ಕಾಣುತ್ತೇವೆ. ಈ ಕಾರಣದಿಂದಲೇ ಡಾ. ಕೆ. ಕೃಷ್ಣಮೂರ್ತಿಯವರು "In the whole range of sanskrit poetical thory. We do not have any one who can be termed a practical literary critic in the modern sense of the term except kuntaka"[30] ಎಂದೂ ಈ ವಿಷಯದಲ್ಲಿ ಅವನನ್ನು ಸರಿಗಟ್ಟುವವರು ಬೇರೊಬ್ಬರಿಲ್ಲ

30.Dr. K. Krishnamurthy : Vakrokti Jivita, Kuntaka Page xxxv

ಎಂದು ನೀಡಿರುವ ಈ ತೀರ್ಪು ನಿರ್ಣಾಯಕ ವೆನಿಸದಿರದು - Kuntaka may not be as great a philosopher as Anandavaradhana ; he may not be as good a logician as Bhamaha, as Fervent a dialectician as Mahima Bhatta, but as a Literary critic in the true sense of the term, Kuntaka stands unrivalled[31].

ಗ್ರಂಥ ಪಾಠದ ಬಗ್ಗೆ

ಭಾರತೀಯ ಕಾವ್ಯಮೀಮಾಂಸೆಯಲ್ಲಿ ಇಷ್ಟೊಂದು ಮಹತ್ವಪೂರ್ಣವಾದ ಈ ಉದ್ಗ್ರಂಥವು 1923ರಲ್ಲಷ್ಟೆ ಮೊದಲ ಬಾರಿಗೆ ಡಾ. ಎಸ್. ಕೆ. ಡೇ ಅವರ ಸಂಪಾದಕತ್ವದಲ್ಲಿ ಮೊದಲ ಎರಡು ಅಧ್ಯಾಯಗಳೊಂದಿಗೆ ಅಪೂರ್ಣರೂಪದಲ್ಲಿ ಪ್ರಕಟವಾಯಿತು. ಅನಂತರ 1928ರಲ್ಲಿ ಡಾ. ಡೇ. ಅವರಿಂದಲೇ ಸಂಪಾದಿತವಾಗಿ ನಾಲ್ಕು ಅಧ್ಯಾಯಗಳಿಂದ ಕೂಡಿದ ಪರಿಷ್ಕೃತ ಹಾಗೂ ವಿಸ್ತೃತ ರೂಪದಲ್ಲಿ ಹೊರಬಂದಿತು. ಆದರೆ ಅದರಲ್ಲಿ ಮೂರನೆಯ ಅಧ್ಯಾಯದ ಸ್ವಲ್ಪ ಮತ್ತು ನಾಲ್ಕನೇ ಅಧ್ಯಾಯದವರೆಗಿನ ಸಾರವನ್ನೊಳಗೊಂಡಿತ್ತು. ಇದೇ ಗ್ರಂಥದ ಮೂರನೇ ಮುದ್ರಣ (ಕೆ. ಎಲ್. ಮುಖೋಪಾಧ್ಯಾಯ ಅವರದು) 1961ರಲ್ಲಿ ಬಂದರೂ ಅದೂ 1928ರ ಯಥಾವತ್ತಾದ ಮುದ್ರಣವಷ್ಟೇ ಆಗಿತ್ತು. 1955ರಲ್ಲಿ ಡಾ. ನಗೇಂದ್ರ ಅವರ ಸಂಪಾದಕತ್ವದಲ್ಲಿ, ಅವರ ವಿಸ್ತಾರವಾದ ಭೂಮಿಕೆಯೊಂದಿಗೆ ಆಚಾರ್ಯ ವಿಶ್ವೇಶ್ವರ ಅವರ ಹಿಂದಿ ಅನುವಾದ ಮತ್ತು ಟಿಪ್ಪಣಿಗಳೊಂದಿಗೆ ದೆಹಲಿ ವಿಶ್ವ ವಿದ್ಯಾಲಯದಿಂದ ಪ್ರಕಟವಾಯಿತು. ಇದರಲ್ಲೂ ಮೂರು ಮತ್ತು ನಾಲ್ಕನೇ ಉನ್ಮೇಷಗಳ ಸಂಪಾದನೆಗೆ ಊಹಾತ್ಮಕ ಪರಿಷ್ಕಾರಣವೇ ಗತಿಯಾಗಿದೆ. ಮೂರು ಮತ್ತು ನಾಲ್ಕನೇ ಉನ್ಮೇಷಗಳಲ್ಲಿ ಹಿಂದಿನ ಮುದ್ರಣಗಳ ಕೊರತೆ ಮತ್ತು ದೋಷಗಳು ಹಾಗೆಯೇ ಉಳಿದುಕೊಂಡವು. 1967ರಲ್ಲಿ ರಾಧೇಶ್ಯಾಮ್ ಮಿಶ್ರ ಅವರು ಸಂಪಾದಿಸಿದ ಹಾಗೂ ಹಿಂದಿ ಅನುವಾದ ಮತ್ತು ಟಿಪ್ಪಣಿಯಿಂದ ಕೂಡಿದ ಗ್ರಂಥ ಚೌಕಾಂಬಾ ಗ್ರಂಥ ಮಾಲೆಯಿಂದ ಪ್ರಕಟವಾಯಿತು. ಇದರಲ್ಲೂ ಈ ಹಿಂದಿನ ಗ್ರಂಥಗಳಲ್ಲಿ ಉಳಿದು ಹೋಗಿದ್ದ ದೋಷಗಳು ಕೊರತೆಗಳು ಹಾಗೆಯೇ ಉಳಿದಿದ್ದುವು. 1977ರಲ್ಲಿ ಡಾ. ಕೆ. ಕೃಷ್ಣಮೂರ್ತಿಯವರು ಮದ್ರಾಸ್‌ನ ಅಡ್ಯಾರ್ ಗ್ರಂಥ ಭಂಡಾರದಿಂದ ದೊರಕಿಸಿಕೊಂಡ ಪ್ರತಿ ಮತ್ತು ಜೈಸಲ್‌ಮೇರ್ ಪ್ರತಿಗಳ ನೆರವಿನಿಂದ ಹಾಗೂ ಊಹಾತ್ಮಕ ಪರಿಷ್ಕರಣಗಳನ್ನಳವಡಿಸಿ ಕೊಂಡು ಬಹುಮಟ್ಟಿಗೆ ಪ್ರಮಾಣಭೂತವೆನಿಸಿದ, ನಾಲ್ಕು ಉನ್ಮೇಷಗಳಿಂದ ಕೂಡಿದ ವಕ್ರೋಕ್ತಿಜೀವಿತವನ್ನು ಸಂಪಾದಿಸಿ ಇಂಗ್ಲಿಷ್ ಅನುವಾದದೊಂದಿಗೆ ಕರ್ನಾಟಕ ವಿಶ್ವವಿದ್ಯಾಲಯದ ವತಿಯಿಂದ ಪ್ರಕಟಿಸಿದರು. ಡಾ. ಕೃಷ್ಣಮೂರ್ತಿಯವರು ಅಪಾರ ಶ್ರಮವಹಿಸಿ ಸಂಪಾದಿಸಿರುವ ಈ ಕೃತಿ

---

31. ಅಲ್ಲೇ ಪು. xxxvi

ಅವರೇ ಹೇಳಿರುವಂತೆ "Hence I have laboured to give in this edition not only a complete and pure text of the Vakrokti Jivita, as for as possible to day; but also a complete English translation of the same."*[32]

ಅನುವಾದದ ಬಗ್ಗೆ

ಇಷ್ಟೊಂದು ಪ್ರಖ್ಯಾತವಾದ ಈ ಉದ್ಗ್ರಂಥ ಇದುವರೆಗೆ ಕನ್ನಡಕ್ಕೆ ಅನುವಾದವಾಗಿರಲಿಲ್ಲ. ಸಂಸ್ಕೃತದ ಅಲಂಕಾರಶಾಸ್ತ್ರದ ಬಹುಮುಖ್ಯ ಗ್ರಂಥಗಳನ್ನೆಲ್ಲ ಸೊಗಸಾಗಿ ಕನ್ನಡಿಸಿ ಕನ್ನಡದ ಕಾವ್ಯಮೀಮಾಂಸಾ ಕ್ಷೇತ್ರವನ್ನು ಶ್ರೀಮಂತಗೊಳಿಸಿರುವ ಡಾ. ಕೆ. ಕೃಷ್ಣಮೂರ್ತಿಯವರು ಏಕೋ ಏನೋ ಇದನ್ನು ಕನ್ನಡಕ್ಕೆ ಅನುವಾದಿಸದೆ ಇಂಗ್ಲಿಷ್‌ಗೆ ಅತ್ಯಂತ ಸೊಗಸಾಗಿ ಅನುವಾದಿಸಿ ಕೊಟ್ಟಿದ್ದಾರೆ. ಅದನ್ನು ಓದುವುದೇ ಒಂದು ಸಂತೋಷ. ವಕ್ರೋಕ್ತಿ ಜೀವಿತವನ್ನು ಓದುತ್ತ ಹೋದಂತೆ ಇಂಥ ಮಹತ್ವದ ಗ್ರಂಥವನ್ನು ಕನ್ನಡಕ್ಕೆ ಅನುವಾದಿಸಬೇಕೆಂಬ ಉತ್ಸಾಹ ಮೂಡಿತು. ನನ್ನ ಸಾಧಾರಣವಾದ ಸಂಸ್ಕೃತ ಭಾಷಾಜ್ಞಾನ ನನಗೆ ಕಿಂಚಿತ್ ಅಧೈರ್ಯವನ್ನುಂಟು ಮಾಡಿದರೂ ಆಸಕ್ತಿ, ಅಭಿರುಚಿ ಮತ್ತು ಶ್ರದ್ಧೆಗಳ ಒತ್ತಾಸೆಯಿಂದ ಹಾಗೂ ಹಿಂದಿ ಮತ್ತು ಇಂಗ್ಲಿಷ್ ಅನುವಾದಗಳ ನೆರವಿನಿಂದ ಓದುತ್ತ ಹೋದಂತೆ ಕನ್ನಡದ ಬಗೆಗಿನ ನನ್ನ ಪ್ರೀತಿ ಹಾಗೂ ಇದರ ಅಪೂರ್ವತೆಗಳು ಈ ಗ್ರಂಥವನ್ನು ಕನ್ನಡಕ್ಕೆ ಅನುವಾದಿಸಲೇಬೇಕೆಂಬ ವಾಂಛೆಯನ್ನು ನನ್ನಲ್ಲಿ ಬಲವಾಗಿ ಮೂಡಿಸಿದುವು. ಅದರ ಪರಿಣಾಮವೇ ನಿಮ್ಮ ಕಣ್ಮುಂದಿರುವ ಈ ಅನುವಾದ. ಇದನ್ನು ಅನುವಾದಿಸಲು ನಾನು ಬಹುಮಟ್ಟಿಗೆ ಆಧರಿಸಿರುವುದು ಅದರಲ್ಲೂ ಮುಖ್ಯವಾಗಿ ಮೂರು ಮತ್ತು ನಾಲ್ಕನೆಯ ಉನ್ಮೇಷಗಳಿಗೆ ಡಾ. ಕೆ. ಕೃಷ್ಣಮೂರ್ತಿಯವರ ಪಾಠವನ್ನು. ಕಾರಣ 1, 2ನೇ ಉನ್ಮೇಷಗಳ ಪಾಠ ಎಲ್ಲದರಲ್ಲೂ ಬಹುಮಟ್ಟಿಗೆ ಒಂದೇ ಆಗಿದೆ. ಬಹುಮಟ್ಟಿಗೆ ಎಂಬುದರ ಅರ್ಥ ಕೆಲವು ಕಡೆ ಡಾ. ನಗೇಂದ್ರ ಹಾಗೂ ರಾಧೇಶ್ಯಾಮ್ ಮಿಶ್ರರ ಸಂಪಾದನೆಯನ್ನು ಅನುಸರಿಸಲಾಗಿದೆ. ಇನ್ನು ಮೂಲ ಗ್ರಂಥವನ್ನು ಅರ್ಥೈಸಿಕೊಳ್ಳುವಲ್ಲಿ ಹಿಂದಿ ಹಾಗೂ ಇಂಗ್ಲಿಷ್ ಅನುವಾದಗಳಿಂದ ಅಪಾರವಾದ ನೆರವು ಪಡೆದಿದ್ದೇನೆ. ಇದಕ್ಕಾಗಿ ಅದರ ಕರ್ತೃಗಳಿಗೆ ನಾನು ತುಂಬಾ ಋಣಿಯಾಗಿದ್ದೇನೆ. ಡಾ. ಕೆ. ಕೃಷ್ಣಮೂರ್ತಿಯವರೇ ಮಾಡಿದ್ದರೆ ಇದಕ್ಕಿಂತಲೂ ಆ ಅನುವಾದ ಖಂಡಿತವಾಗಿಯೂ ಸೊಗಸಾಗಿರುತ್ತಿತ್ತು. ಆದರೆ ಆ ಕೊರತೆಯನ್ನು ಸ್ವಲ್ಪ ಮಟ್ಟಿಗಾದರೂ ನನ್ನ ಈ ಅನುವಾದ ತುಂಬಿಕೊಡುವಂತಾದರೆ ನನ್ನ ಶ್ರಮ ಸಾರ್ಥಕ.

ಇದರಲ್ಲಿ ಮೂಲಕಾರಿಕೆಗಳು ಹಾಗೂ ಲಕ್ಷ್ಯ ಪದ್ಯಗಳನ್ನು ಕನ್ನಡ ಲಿಪಿಯಲ್ಲಿ ನೀಡಿದ್ದೇನೆ. ಸುಮಾರು 338 ಲಕ್ಷ್ಯಪದ್ಯಗಳನ್ನು ಮುಕ್ತ ಛಂದದಲ್ಲಿ ಅನುವಾದಿಸಿದ್ದೇನೆ. ಮೂರು ಪದ್ಯಗಳನ್ನು

---

32. Dr. K. Krishnamurthi : Vakrokti Jivita of Kuntaka : page xii

ಮಾತ್ರ ಕಂದ ಪದ್ಯಗಳಲ್ಲಿ ಅನುವಾದಿಸಿದ್ದೇನೆ. ಅನಂತರ ಇದು ಬೇಕಿಲ್ಲವೆಂದು ತೀರ್ಮಾನಿಸಿ ಮುಕ್ತ ಛಂದದಲ್ಲಿಯೇ ಅನುವಾದಿಸಿದ್ದೇನೆ. ಸಂಸ್ಕೃತದಿಂದ ಕಾವ್ಯ ನಾಟಕ ಹಾಗೂ ಶಾಸ್ತ್ರ ಗ್ರಂಥಗಳನ್ನು ಈ ಮುಂಚೆಯೇ ಕನ್ನಡಕ್ಕೆ ಅನುವಾದಿಸಿ ಆ ಕ್ಷೇತ್ರದಲ್ಲಿ ಸೀಮಾಪುರುಷರೆನಿಸಿರುವ ಅಭಿನವ ಕಾಳಿದಾಸ ಬಸವಪ್ಪ ಶಾಸ್ತ್ರಿಗಳು, ಡಾ. ಎಸ್. ವಿ. ಪರಮೇಶ್ವರ ಭಟ್ಟರು ಹಾಗೂ ಡಾ. ಕೆ. ಕೃಷ್ಣಮೂರ್ತಿಯವರ ಮೇಲಿರುವ ನನ್ನ ಗೌರವವನ್ನು ಸೂಚಿಸುವ ಸಲುವಾಗಿ ಹಾಗೂ ಈ ಮಹತ್ವದ ಗ್ರಂಥದಲ್ಲಿ ಆ ಹಿರಿಯರ ಹೆಸರೂ ಸೇರಬೇಕೆಂಬ ಉದ್ದೇಶದಿಂದ ಶ್ರೀ ಬಸವಪ್ಪ ಶಾಸ್ತ್ರಿಗಳ ಹಾಗೂ ಡಾ. ಎಸ್. ವಿ. ಪರಮೇಶ್ವರ ಭಟ್ಟರ ತಲಾ ಒಂದೊಂದು ಅನುವಾದಿತ ಪದ್ಯ ಮತ್ತು ಡಾ. ಕೆ. ಕೃಷ್ಣಮೂರ್ತಿಯವರ ಎರಡು ಅನುವಾದಿತ ಪದ್ಯಗಳನ್ನು ಇದರಲ್ಲಿ ಬಳಸಿಕೊಂಡಿದ್ದೇನೆ. ಇಲ್ಲಿ ಅನುವಾದವೆಂದರೆ ನಾನು ಅಕ್ಷರಶಃ ಅನುವಾದಕ್ಕೆಡೆಕೊಡದೆ ಮೂಲ ಕೃತಿಯನ್ನು ಸಾರ್ಥಕವಾಗಿ ಅರ್ಥೈಸುವ ಕಡೆಗೆ ಮುಖ್ಯವಾಗಿ ಮನಸ್ಸು ಕೊಟ್ಟದ್ದರಿಂದ ಅಲ್ಲಲ್ಲಿ, ಸಂಕೋಚ, ವಿಸ್ತಾರಗಳಾಗಿವೆ. ಸಂಸ್ಕೃತದ ಹರಳುಗಟ್ಟಿಸಿದಂಥ ವಾಕ್ಯ ರಚನೆಯ ಸಂದರ್ಭದಲ್ಲಿ ಇದು ಅನಿವಾರ್ಯ ಹಾಗೂ ಅಗತ್ಯ ಕೂಡ. ಇದರ ತೀರ್ಪು ಓದುಗರಿಗೇ ಒಟ್ಟದ್ದು.

ಮೂರನೆಯ ಮುದ್ರಣಕ್ಕೆ

ಇದು ಕನ್ನಡ ವಕ್ರೋಕ್ತಿ ಜೀವಿತದ ಮೂರನೇ ಮುದ್ರಣ! ಪ್ರಕಟವಾದ ಆರು ವರ್ಷಗಳಲ್ಲಿ ಮೂರು ಮುದ್ರಣಗಳನ್ನು ಕಾಣುವ ಸೌಭಾಗ್ಯ ಈ ಕೃತಿಯದಾಗಿದೆ. ಈ ಮೂರನೆಯ ಮುದ್ರಣಕ್ಕೆ ಅವಕಾಶವಾದದ್ದೊಂದು ವಿಶೇಷ ಸಂದರ್ಭ. ಕೇಂದ್ರ ಸಾಹಿತ್ಯ ಅಕಾಡೆಮಿಯ 2007ರ ಅನುವಾದ ಪ್ರಶಸ್ತಿ ಇದಕ್ಕೆ ದೊರಕಿತೆಂದು ತಿಳಿಸಲು ಅತ್ಯಂತ ಸಂತಸವಾಗುತ್ತದೆ. ಸಹಜವಾಗಿಯೇ ಇದು ನನಗೆ ಅತೀವ ಸಂಭ್ರಮವನ್ನೂ ಸಾರ್ಥಕತೆಯನ್ನೂ ತಂದ ಸಂದರ್ಭ. ಈ ಕೃತಿಯನ್ನು ಈ ಪ್ರತಿಷ್ಠಿತ ಪ್ರಶಸ್ತಿಗೆ ಆಯ್ಕೆಮಾಡಿದ ಆಯ್ಕೆ ಸಮಿತಿಯ ವಿದ್ವಜ್ಜನರಿಗೆ ಅವರ ಗುಣಪಕ್ಷಪಾತಕ್ಕಾಗಿ ನಾನು ಅತ್ಯಂತ ಋಣಿಯಾಗಿದ್ದೇನೆ. ಹೀಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗೆ ಭಾಜನವಾದ ಈ ಕೃತಿಯನ್ನು ಸಗಟು ಖರೀದಿ ಮಾಡುವ ತೀರ್ಮಾನವನ್ನು ಕರ್ನಾಟಕ ಗ್ರಂಥಾಲಯ ಇಲಾಖೆ ಕೈಗೊಂಡಿದ್ದರಿಂದಾಗಿ ಮೂರನೇ ಮುದ್ರಣದ ಯೋಗ ಇದಕ್ಕೆ ಪ್ರಾಪ್ತವಾಗಿದೆ. ಇದಕ್ಕಾಗಿ ನಾನು ಕರ್ನಾಟಕ ಗ್ರಂಥಾಲಯ ನಿರ್ದೇಶನಾಲಯದ ನಿರ್ದೇಶಕರಿಗೆ ಮತ್ತು ಆಯ್ಕೆ ಸಮಿತಿ ಸದಸ್ಯರಿಗೆ ಕೃತಜ್ಞನಾಗಿದ್ದೇನೆ.

ಹೆಚ್ಚು ಕಾಲಾವಕಾಶವಿಲ್ಲದ್ದರಿಂದಾಗಿ ಇದರಲ್ಲಿ ಹೆಚ್ಚಿನ ಪರಿಷ್ಕರಣೆಗಳನ್ನು ಮಾಡಲು ಹೋಗಿಲ್ಲ.

ಎಂದಿನಂತೆ, ಸಂವಹನ ಪ್ರಕಾಶನದ ಲೋಕಪ್ಪನವರೇ ಇದನ್ನು ಸಕಾಲದಲ್ಲಿ ತುಂಬ ಸೊಗಸಾಗಿ ಮುದ್ರಣ ಮಾಡಿದ್ದಾರೆ. ಅದಕ್ಕಾಗಿ ಅವರಿಗೆ ನಾನು ಆಭಾರಿಯಾಗಿದ್ದೇನೆ.

5-6-2010 **ಆರ್. ಲಕ್ಷ್ಮೀನಾರಾಯಣ**

ಬೆಂಗಳೂರು

ಕನ್ನಡ ವಕ್ರೋಕ್ತಿ ಜೀವಿತ

ಕನ್ನಡ ವಕ್ರೋಕ್ತಿ ಜೀವಿತ

ಮೊದಲನೆಯ ಉನ್ಮೇಷ

ಜಗತ್ತ್ರಿತಯ ವೈಚಿತ್ರ್ಯ ಚಿತ್ರಕರ್ಮವಿಧಾಯಿನಮ್ |
ಶಿವಂ ಶಕ್ತಿ ಪರಿಸ್ಪಂದ ಮಾತ್ರೋಪಕರಣಂ ನುಮಃ [೧]*

ಶಕ್ತಿ ಪರಿಸ್ಪಂದ ಮೆಂಬುಪಕರಣ ಮಾತ್ರದಿಂದಲೆ
ಭುವನತ್ರಯ ವೈಚಿತ್ರ್ಯವೆನುವಂಥ
ಚಿತ್ರ ರಚನೆಯ ಗೈವ ಮಹಾಕುಶಲಕರ್ಮಿಗೆ
ಆ ಶಿವಗೆ ನನ್ನಯ ನಮನ

ಯಥಾತತ್ತ್ವಂ ವಿವೇಚ್ಯಂತೇ ಭಾವಾಸ್ತ್ರೈ ಲೋಕ್ಯವರ್ತಿನಃ
ಯದಿ ತನ್ನಾದ್ಭುತಂ ನಾಮ ದೈವ ರಕ್ತಾ ಹಿ ಕಿಂಶುಕಾಃ [೨]

ಮೂರೂ ಲೋಕಗಳಲ್ಲಿ ಇರುವ ವಸ್ತುಗಳನ್ನು ಅವುಗಳು ಇರುವಂತೆಯೇ ವಿವೇಚಿಸಿದರೆ ಅದರಲ್ಲೇನೂ ಅದ್ಭುತವಿರುವುದಿಲ್ಲ. ಸ್ವಭಾವತಃ ರಕ್ತ ವರ್ಣದ ಹೂಗಳಿಂದ ಕೂಡಿರುವ ಮುತ್ತುಗದ ಮರ ಹೇಗೆ ಅದ್ಭುತವಲ್ಲವೋ ಹಾಗೆ.

---

*ಮೇಲಿನ ಶ್ಲೋಕದಲ್ಲಿ ಕುಂತಕನು ಪರಶಿವನನ್ನು ಸ್ತುತಿಸಿದ್ದಾನೆ. ಕುಂತಕನು ಕಾಶ್ಮೀರದವನು ಮತ್ತು ಕಾಶ್ಮೀರದ ಪ್ರತ್ಯಭಿಜ್ಞಾದರ್ಶನದ ಅನುಯಾಯಿ. ಮೇಲಿನ ಶ್ಲೋಕದಲ್ಲಿ ಶೈವಾಗಮಕ್ಕೆ (ಪ್ರತ್ಯಭಿಜ್ಞಾದರ್ಶನ) ಸಂಬಂಧಿಸಿದ ಶಿವ ಶಕ್ತಿ, ಪರಿಸ್ಪಂದ ಮತ್ತು ಜಗತ್ತುಗಳನ್ನು ಪ್ರಸ್ತಾಪಿಸಿದ್ದಾನೆ. ಈ ಗ್ರಂಥದಲ್ಲಂತೂ ಸ್ಪಂದ ಮತ್ತು ಪರಿಸ್ಪಂದ ಶಬ್ದಗಳು ಮತ್ತೆ ಮತ್ತೆ ಬರುತ್ತವೆ. ಆದ್ದರಿಂದ ಪ್ರತ್ಯಭಿಜ್ಞಾದರ್ಶನದಲ್ಲಿ ಇವುಗಳ ಅರ್ಥವೇನೆಂದು ತಿಳಿಯುವುದು ಅಗತ್ಯ. ಪ್ರತ್ಯಭಿಜ್ಞಾದರ್ಶನದ ಮೇರೆಗೆ ಅದ್ವಯನೂ, ನಿರಾಕಾರನೂ, ಸಚ್ಚಿದಾನಂದ ಸ್ವರೂಪಿಯೂ ಆದ ಪರಶಿವನೇ ಏಕೈಕ ಪರಮ ತತ್ತ್ವ.ಇಂದ್ರಿಯ ಗಮ್ಯವಾದ ಈ ಜಗದ್ವೈಚಿತ್ರ್ಯ ವನ್ನು ಅವನು ತನ್ನ ಶಕ್ತಿಯಿಂದ ಸೃಷ್ಟಿಸುತ್ತಾನೆ. ಅವನ ಶಕ್ತಿಗಳು ಅನಂತವೇ ಆದರೂ ಅವನು ನಿಂತಿರುವುದು ಐದು ಶಕ್ತಿಗಳ ಮೇಲೆ. ಶಕ್ತಿ ಮತ್ತು ಶಕ್ತಿ ಸ್ವರೂಪಿ ಶಿವ ಬೇರೆ ಬೇರೆ ಅಲ್ಲ. ಅಗ್ನಿ ಮತ್ತು ಅಗ್ನಿಯ ಗುಣವಾದ ದಾಹಕತ್ವ ಹೇಗೆ ಭಿನ್ನವಲ್ಲವೋ ಹಾಗೆ. ಪರಶಿವನು ಈ ಐದು ಶಕ್ತಿಗಳಿಂದಲೇ ಜಗತ್ತನ್ನು ಸ್ಫುರಣಗೊಳಿಸುತ್ತಾನೆ. ಯಾವಾಗ ಅವನ ಮನಸ್ಸಿನಲ್ಲಿ ಒಂದರಿಂದ ಅನೇಕವಾಗಬೇಕೆಂಬ ಇಚ್ಛೆ ಮೂಡುತ್ತದೋ ಆಗ ಅವನ ಶಕ್ತಿಯಲ್ಲಿ ಸ್ಪಂದನ ಉಂಟಾಗುತ್ತದೆ. ಹೀಗೆ ಸ್ಫುರಣೆ ಅಥವಾ ಚಲನೆ ಉಂಟಾಗುವುದೇ ಸ್ಪಂದ. ಈ ಸ್ಪಂದ ಶಕ್ತಿಯಿಂದ ಬೇರೆ ಅಲ್ಲ. ಕಾರಣ ಸ್ಪಂದವೇ ಅವನ ಸ್ವಭಾವ, ಸ್ವರೂಪ ಮತ್ತು ಧರ್ಮ.

ಸ್ವಮನೀಷಿಕಯೈವಾಥ ತತ್ತ್ವಂ ತೇಷಾಂ ಯಥಾರುಚಿ|
ಸ್ಥಾಪ್ಯತೇ ಪ್ರೌಢಿಮಾತ್ರಂ ತತ್ಪರಮಾರ್ಥೋ ನ ತಾದೃಶಃ [೩]

ಚಿಂತಕರು ಮೂರೂ ಲೋಕಗಳಲ್ಲಿರುವ ವಸ್ತುಗಳ ಸ್ವರೂಪಕ್ಕೆ ಸಂಬಂಧಿಸಿದಂತೆ ತಮ್ಮ ಬುದ್ಧಿಗೆ ತೋಚಿದಂತೆ ಸ್ವೇಚ್ಛೆಯಿಂದ ತಮ್ಮದೇ ಆದ ನಿರ್ಣಯಕ್ಕೆ ಬರಬಹುದು. ಹಾಗಾದರೆ ಅದು ಅವರ ಪ್ರೌಢಿಮೆ (ಚಾತುರ್ಯ)ಯಾಗುತ್ತದೆ. ಅಷ್ಟೇ. ಯಾವುದೇ ವಸ್ತುವಿನ ಸತ್ಯ ಅಂಥ ಚಾತುರ್ಯಕ್ಕೆ ಸಗ್ಗುವಂತಿರುವುದಿಲ್ಲ.

ಇತ್ಯಸತ್ತರ್ಕ ಸಂದರ್ಭೇ ಸ್ವತಂತ್ರೇಽಪ್ಯಕೃತಾದರಃ |
ಸಾಹಿತ್ಯಾರ್ಥ ಸುಧಾಸಿಂಧೋಃ ಸಾರಮುನ್ಮೀಲಯಾಮ್ಯಹಂ" [೪]

ಇಂಥ ಮಿಥ್ಯಾತರ್ಕಗಳಿಂದ ಹೊರಹೊಮ್ಮುವ ಸ್ವಚ್ಛಂದ ವಾಗ್ಜಾಲಗಳಿಂದ ಅಸಂತುಷ್ಟನಾಗಿ ನಾನೀಗ ಸಾಹಿತ್ಯದ ಅರ್ಥವೆಂಬ ಅಮೃತಸಾಗರದ ಸಾರವನ್ನು ಮೊದಲ ಬಾರಿಗೆ ಹೊರತರುವೆನು.

ಯೇನ ದ್ವಿತಯಮಪ್ಯೇತತ್ತತ್ತ್ವ ನಿರ್ಮಿತಿ ಲಕ್ಷಣಮ್|
ತದ್ವಿದಾಮದ್ಭುತಾಮೋದ ಚಮತ್ಕಾರಂ ವಿಧಾಸ್ಯತಿ (೫)

ತತ್ತ್ವ ಮತ್ತು ನಿರ್ಮಿತಿ ಲಕ್ಷಣಗಳೆಂಬ ಎರಡು ಅಂಶಗಳಿಗೆ ಸಂಬಂಧಿಸಿದಂತೆ ಈ ನನ್ನ ಗ್ರಂಥವು ಸಾಹಿತ್ಯ ಮರ್ಮಜ್ಞರಿಗೆ (ರಸಿಕರಿಗೆ) ಅದ್ಭುತ ಆನಂದ ಹಾಗೂ ಚಮತ್ಕಾರಗಳನ್ನುಂಟು ಮಾಡುವಂಥದಾಗಿರುತ್ತದೆ.

ಗ್ರಂಥಾರಂಭದಲ್ಲಿ ಇಷ್ಟ ದೇವತೆಯನ್ನು ವಂದಿಸುವುದು ಪ್ರಸಿದ್ಧ ಸಂಪ್ರದಾಯ. ಅದರಂತೆ ಈ ಮಂಗಳಾಚರಣೆ

"ಪ್ರತ್ಯಬಿಜ್ಞಾ ಹೃದಯ"ದಲ್ಲಿ "ಪರಾಶಕ್ತಿ ರೂಪಾ ಚಿತಿರೇವ ಭಗವತೀ ಶಕ್ತಿಃ ಶಿವಭಟ್ಟಾರಕಾಭಿನ್ನಾ ತತ್ತದಂತ ಜಗದಾತ್ಮನಾ ಸ್ಫುರತೀತಿ" ಎಂದು ಹೇಳಿದೆ. ಶಕ್ತಿ ಮತ್ತು ಶಿವ ಅಭಿನ್ನರು. ಹಾಗೆಯೇ ಸ್ಪಂದ (ಜಗತ್ತು) ಮತ್ತು ಶಕ್ತಿ ಅಭಿನ್ನರು. ಹಾಗಾಗಿ ಶಿವ ಮತ್ತು ಜಗತ್ತು ಅಭಿನ್ನ. ಆದ್ದರಿಂದ ಶೈವಾಗಮವು ಕೇವಲ ಪರಶಿವನ ಅದ್ವೈತ ಸತ್ತೆಯನ್ನು ಒಪ್ಪುತ್ತದೆ. "ಮಯೂರಾಂಡರಸ ನ್ಯಾಯ"ದಂತೆ ಜಗದ್ವೈಚಿತ್ರ್ಯದ ಹೊಳಹು ಇದರಲ್ಲಿದೆ. ನವಿಲಿನ ಮೊಟ್ಟೆಯಲ್ಲಿರುವ ರಸದಲ್ಲಿ ಮುಂದೆ ನವಿಲಿಗೆ ಮೂಡಬಹುದಾದ ಗರಿಗಳ ವರ್ಣವೈಭವ ಸುಪ್ತರೂಪದಲ್ಲಿ ಅಡಗಿರುವಂತೆ. ಹೀಗಾಗಿ ಮೂರು ಲೋಕಗಳ ಚಿತ್ರಶಾಲೆಯ ಸೃಷ್ಟಿಕರ್ತ ಶಿವನೇ. ಮತ್ತು ಚಿತ್ರಶಾಲೆಯ ನಿರ್ಮಿತಿಗೆ ಅವನ ಶಕ್ತಿಯ ಪರಿಸ್ಪಂದವೇ ಉಪಕರಣ. ಅವನಿಗೆ ಇತರೆ ಉಪಕರಣದ ಅಗತ್ಯವಿಲ್ಲ. ಆದ್ದರಿಂದಲೇ "ಶಕ್ತಿ ಪರಿಸ್ಪಂದ ಮಾತ್ರೋಪಕರಣ" ಎಂದು ಹೇಳಿರುವುದು. ಸ್ಪಂದವೆಂಬುದು ಶಕ್ತಿಯ ಸ್ವಭಾವ, ಧರ್ಮ, ವ್ಯಾಪಾರ, ಸ್ವರೂಪ, ವಿಲಾಸ ಮತ್ತು ಸ್ಫುರಣೆಗೆ ಪರ್ಯಾಯವಾಗಿ ಬಳಕೆಯಾಗಿದೆ. ಈ ದೃಗ್ಗೋಚರ ಜಗತ್ತಿನ ರೂಪ ವೈಚಿತ್ರ್ಯ ಶಕ್ತಿಯ ಪರಿಸ್ಪಂದವೇ ಆಗಿದೆ.

["ಈ ಟಿಪ್ಪಣಿಯನ್ನು ಮಾತ್ರ ಹಿಂದೀ ವಕ್ರೋಕ್ತಿ ಜೀವಿತದಿಂದ ಸಂಗ್ರಹಿಸಿ ಅನುವಾದಿಸಿ ಉದ್ಧೃತಗೊಳಿಸಿದೆ.]

(ರಾಧೇಶ್ಯಾಮ್ ಮಿಶ್ರ) - ಪುಟ - 1 - 3)

ವಂದೇ ಕವೀಂದ್ರ ವಕ್ತ್ರೇಂದು ಲಾಸ್ಯಮಂದಿರ ನರ್ತಕೀಂ|
ದೇವೀಂ ಸೂಕ್ತಿ ಪರಿಸ್ಪಂದ ಸುಂದರಾಭಿನಯೋಜ್ವಲಾಂ(1) 1

ಕವೀಂದ್ರರ ಮುಖಚಂದ್ರ ರಂಗಮಂದಿರದೊಳ್
ನಲವಿಂ ಕುಶಲೋಕ್ತಿರೂಪದ ಸುಂದರ
ಭಾವಾಭಿನಯ ಕೌಶಲಂಗಳಿಂ ನರ್ತಿಪ
ನಟೀಮಣಿಗೆ ವಾಗ್ದೇವಿಗೆ ವಂದಿಸುವೆನು ನಾನು -1

[ಕವಿ ಶ್ರೇಷ್ಠರ ಮುಖಚಂದ್ರವೆಂಬ ರಂಗಮಂದಿರದಲ್ಲಿ ಕುಶಲವಾದ ಉಕ್ತಿಗಳ ರೂಪದ ಸಾತ್ವಿಕಾದಿ ಸುಂದರ ಭಾವಾಭಿನಯ ಕೌಶಲಗಳಿಂದ ನರ್ತಿಸುತ್ತಿರುವ ಉಜ್ವಲ ನಟಿಯಾದ ಶಾರದೆಗೆ ನಾನು ನಮಸ್ಕರಿಸುತ್ತೇನೆ]

ಇಲ್ಲಿ ಸ್ತುತಿಗೆ ವಸ್ತುವಾಗಿರುವವಳು ದೇವತೆ. ಈ ದೇವತೆಯನ್ನು ನರ್ತಕಿಯೊಂದಿಗೆ ಅಭೇದ ಕಲ್ಪನೆ ಮಾಡಲಾಗಿದೆ. ನರ್ತಕಿಯು ನರ್ತಿಸುವ ವೇದಿಕೆಯೆಂದರೆ ಚಂದ್ರನ ಉಜ್ವಲ ಕಾಂತಿಗೆ ಎಣೆಯೆನಿಸಿದ ಕವಿ ಶ್ರೇಷ್ಠರ ಮುಖಗಳೇ ಹೊರತು ಬೇರೆ ಅಲ್ಲ. ಅಂದರೆ ಆ ಕವಿಶ್ರೇಷ್ಠರ ಮುಖಚಂದ್ರವೇ ನೃತ್ಯಮಂದಿರ. ನರ್ತಕಿಯು ಸೂಕ್ಷ್ಮಾತಿ ಸೂಕ್ಷ್ಮ, ಸುಕುಮಾರ, ಸಾತ್ವಿಕಾದಿ ಭಾವಗಳ ಅಭಿನಯ ಮಾಡುತ್ತಿದ್ದಾಳೆ. ಈ ಭಾವಗಳಾದರೋ ಕವಿಗಳ ಸುಂದರ ಸೂಕ್ತಿಗಳೇ ಹೊರತು ಬೇರೆ ಅಲ್ಲ. ಇವು ನರ್ತಕಿಯ ಸೌಂದರ್ಯಕ್ಕೆ ಕಳೆಗೊಡುತ್ತಿವೆ ಹಾಗೂ ನೃತ್ಯ ಕೌಶಲ್ಯವು ಎಲ್ಲರಿಗೂ ಹೇಗೆ ಹಿಡಿಸುತ್ತಿದೆ ಎಂಬುದನ್ನು ವ್ಯಂಜಿಸುತ್ತಿವೆ. ಇದಿಷ್ಟು ಇದರ ವಾಕ್ಯಾರ್ಥವಾಯಿತು. ಇದರ ತಾತ್ಪರ್ಯಾರ್ಥವೆಂದರೆ ಈಗ ಕಣ್ಣಮುಂದಿರುವ ಗ್ರಂಥದ ವಿಷಯವೆಂದರೆ ಕಾವ್ಯ ಮತ್ತು ಅಲಂಕರಣ. ಇದರ ಅಧಿಷ್ಠಾತ್ರಿ ದೇವತೆ ಯಾರೆಂದರೆ ರಮಣೀಯವೂ ಮನೋಹರವೂ ಆದ ವಾಣಿಯ ಮೂರ್ತಸ್ವರೂಪವೇ ಆದ ವಾಗ್ದೇವಿ. ಆ ವಾಗ್ದೇವಿಗೆ ನನ್ನ ನಮಸ್ಕಾರಗಳು.

ಈ ರೀತಿಯಲ್ಲಿ ಸರಸ್ವತಿಯ ಸ್ತುತಿ ಮಾಡಿ, ಗ್ರಂಥಕರ್ತನು ಕೃತಿಯ ಮುಖ್ಯ ಅಂಶಗಳಾದ ಗ್ರಂಥದ ಹೆಸರು, ವಸ್ತು ಮತ್ತು ಪ್ರಯೋಜನಗಳನ್ನು ಕುರಿತು ಹೇಳುತ್ತಾನೆ.

[ಟಿಪ್ಪಣಿ : ಬಾವಿ, ಕೆರೆ ಕಟ್ಟಡಗಳನ್ನು ನಿರ್ಮಿಸುವುದಕ್ಕೆ ಪೂರ್ವಭಾವಿಯಾಗಿ, ಅದರ ಉದ್ದ ಅಗಲಗಳನ್ನು ನಿರ್ಧರಿಸುವ ಸಲುವಾಗಿ ನೀಲ ನಕ್ಷೆಯೊಂದನ್ನು ತಯಾರಿಸಿ, ಅದರ ಆಳ, ಅಗಲ, ವಿಸ್ತಾರಗಳನ್ನು ನಿಶ್ಚಿತಗೊಳಿಸಲಾಗುತ್ತದೆ. ಅದೇ ರೀತಿ ಗ್ರಂಥದ ಪ್ರತಿಪಾದ್ಯ ವಿಷಯವನ್ನು ಸೂಚಿಸುವ ಸಲುವಾಗಿ ಗ್ರಂಥ ಕರ್ತೃ ಅದರ ಅನುಬಂಧ ಚತುಷ್ಟಯಗಳನ್ನು ಪ್ರಸ್ತುತಪಡಿಸುತ್ತಾನೆ. ಹಾಗೆಂದು ಗ್ರಂಥಕಾರನ ಅಭಿಮತ]

ವಾಚೋ ವಿಷಯ ನೈಯತ್ಯಮುತ್ಪಾದಯಿತು ಮುಚ್ಯತೇ
ಆದಿವಾಕ್ಯೇಽಭಿಧಾನಾದಿ ನಿರ್ಮಿತೇರ್ಮಾನ ಸೂತ್ರವತ್ [೬]

ಕಟ್ಟಡ ನಿರ್ಮಾಣದಲ್ಲಿ ಅಳತೆಯ ಕಡ್ಡಿಯಿಂದ ನೀಲ ನಕ್ಷೆಯನ್ನು ತಯಾರಿಸುವಂತೆ ಮಾತುಗಳನ್ನು ವಿಷಯದ ಪರಿಧಿಯಲ್ಲಿ ನಿಯಂತ್ರಿಸುವ ಸಲುವಾಗಿ ಅಭಿಧಾನವೇ ಮೊದಲಾದ ಅನುಬಂಧ ಚತುಷ್ಟಯಗಳನ್ನು ಹೇಳಲಾಗುತ್ತದೆ.

ಇದು ಅಂತರ ಶ್ಲೋಕ

ಲೋಕೋತ್ತ ರ ಚಮತ್ಕಾ ರಕಾರಿ ವೈ ಚಿತ್ರ್ಯ ಸಿದ್ಧ ಯೇ|
ಕಾವ್ಯಸ್ಯಾ ಯಮಲಂಕಾರಃ ಕೋಽ ಪ್ಯಪೂರ್ವೋ ವಿಧೀಯತೇ [2]

ಲೋಕೋತ್ತರವಾದ ಚಮತ್ಕಾರವನ್ನು ಉಂಟುಮಾಡಬಲ್ಲ ವೈಚಿತ್ರ್ಯದ ಸಿದ್ಧಿಗಾಗಿ ಅಪೂರ್ವವೆನಿಸಿದ ಹಾಗೂ ಕಾವ್ಯಕ್ಕೆ ಅಲಂಕಾರ ಪ್ರಾಯವಾದ ಈ ಗ್ರಂಥವನ್ನು ರಚಿಸಲಾಗಿದೆ.

ತಾನೊಂದು ಅಲಂಕರಣವನ್ನು ನಿರ್ಮಿಸುತ್ತಿರುವುದಾಗಿ ಗ್ರಂಥಕರ್ತೃ ಹೇಳುತ್ತಿದ್ದಾನೆ. ಅಲಂಕರಣ ಯಾವುದಕ್ಕೆಂದರೆ ಕಾವ್ಯಕ್ಕೆ. ಮೂಲತಃ ಕಾವ್ಯ ಕವಿಯ ವ್ಯಾಪಾರ (ಕವಿ ಕರ್ಮ). ಇಂಥ ಅಸಂಖ್ಯಾತ ಅಲಂಕಾರ ಗ್ರಂಥಗಳು ಈಗಾಗಲೇ ರಚಿತವಾಗಿವೆಯಲ್ಲ; ಇನ್ನೊಂದು ಗ್ರಂಥದ ರಚನೆಯ ಆವಶ್ಯಕತೆ ಏನಿತ್ತು ಎನ್ನಬಹುದು. ಇದು ಈ ಹಿಂದಿನ ಗ್ರಂಥಗಳಲ್ಲಿಲ್ಲದ, ಅವುಗಳಿಗಿಂತ ವಿಭಿನ್ನವಾದ ಅಪೂರ್ವವಸ್ತುವನ್ನೊಳಗೊಂಡಿರುವಂಥದು. ಅಲ್ಲದೆ ಈ ಅಲಂಕಾರ ಗ್ರಂಥದ ಅಪೂರ್ವತೆ ಎನ್ನುವುದು, ಆ ಪ್ರಾಚೀನ ಗ್ರಂಥಗಳಲ್ಲಿ ಉತ್ಕೃಷ್ಟ ಗ್ರಂಥಗಳಿಗೆ ಎಷ್ಟರಮಟ್ಟಿಗೆ ಅನ್ವಯಿಸುತ್ತದೋ ನಿಕೃಷ್ಟ ಕೃತಿಗಳಿಗೂ ಅಷ್ಟೇಮಟ್ಟಿಗೆ ಅನ್ವಯಿಸುತ್ತದೆ. ಅದರಿಂದಲೇ ಇದರ ಕರ್ತೃ ಗ್ರಂಥದ ಉತ್ಕೃಷ್ಟತೆಯನ್ನು ಸೂಚಿಸುವ 'ಲೋಕೋತ್ತರ' ಎಂಬ ವಿಶೇಷಣವನ್ನು ಬಳಸಿದ್ದಾನೆ.

ಗ್ರಂಥ ರಚನೆಯ ಉದ್ದೇಶವನ್ನು - "ಲೋಕೋತ್ತರವಾದ ಚಮತ್ಕಾರವನ್ನುಂಟುಮಾಡಬಲ್ಲ ವೈಚಿತ್ರ್ಯದ ಸಿದ್ಧಿಗಾಗಿ" - ಎಂಬ ಮಾತಿನಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಅರ್ಥಾತ್ ಅಸಾಮಾನ್ಯವಾದ ಆಹ್ಲಾದವನ್ನು ಉಂಟುಮಾಡಬಲ್ಲ ವೈಚಿತ್ರ್ಯದ ಸಿದ್ಧಿಗಾಗಿ ಎಂದು. ನೂರಾರು ಅಲಂಕಾರ ಗ್ರಂಥಗಳು ಆಲಂಕಾರಿಕರಿಂದ ರಚಿತವಾಗಿದ್ದರೂ ಯಾವೊಂದು ಗ್ರಂಥದಲ್ಲೂ ಈ ಉದ್ದೇಶವನ್ನು ಸಾಧಿಸಲಾಗಿಲ್ಲ.

ಶರೀರದ ಶೋಭೆಯನ್ನು ಹೆಚ್ಚಿಸುತ್ತವಾದ್ದರಿಂದ, ಬಳೆಯೇ ಮೊದಲಾದ ಒಡವೆಗಳಿಗೆ ಮೂಲತಃ ಅಲಂಕಾರ ಎಂಬ ಶಬ್ದ ಬಳಕೆಯಾಗುತ್ತಿದೆ. ಕಾವ್ಯ ಶೋಭೆಯನ್ನು ಉಂಟುಮಾಡುವ ಕಾರಣದಿಂದಾಗಿ, ಉಪಮಾ ರೂಪಕ ಇತ್ಯಾದಿ ಕಾವ್ಯಾಲಂಕಾರಗಳಿಗೂ ರೂಪಕ ಸಾದೃಶ್ಯದಿಂದ ಅಲಂಕಾರ ಎಂಬ ಶಬ್ದ ಬಳಕೆಗೆ ಬಂದಿತು. ಅದೇ ಸಾದೃಶ್ಯದಿಂದ ಗುಣಗಳಿಗೂ ಅದನ್ನು ಅನ್ವಯಿಸಲಾಯಿತು. ಅದೇ ಮಾದರಿಯನ್ನನುಸರಿಸಿ, ಗುಣ, ಅಲಂಕಾರಗಳನ್ನು ಪ್ರತಿಪಾದಿಸುವ ಕೃತಿಗೂ ಈ ಶಬ್ದ ಬಳಕೆಗೆ ಬಂದಿತು. ಶಬ್ದ ಮತ್ತು ಅರ್ಥಗಳೆರಡೂ ಯಾವಾಗಲೂ ಜೊತೆಜೊತೆಯಲ್ಲೇ ಸಾಗುವುದರಿಂದ ಅವೆರಡನ್ನೂ ಒಂದೇ ಎಂದು ಪರಿಗಣಿಸಲಾಗುತ್ತದೆ.

ಉದಾಹರಣೆಗೆ "ಹಸು" ಎಂಬುದು ಒಂದು ಶಬ್ದವೂ ಹೌದು, ಹಾಗೆಯೇ ಅದು ಒಂದು ಗೊತ್ತಾದ ಪ್ರಾಣಿಯೂ ಹೌದು.

ಇದರ ಆಶಯವೆಂದರೆ, ಈ ಗ್ರಂಥವನ್ನು "ಅಲಂಕಾರ"ವೆಂದು ಕರೆಯಲಾಗುವುದು. (ಗ್ರಂಥದ ಹೆಸರು 'ಅಲಂಕಾರ') ಉಪಮಾ, ರೂಪಕಾದಿಗಳು ಇದರ ಪ್ರತಿಪಾದ್ಯ ವಿಷಯ. ಮೇಲೆ ಹೇಳಲಾದ ಲೋಕೋತ್ತರವಾದ ವೈಚಿತ್ರ್ಯ ಸಿದ್ಧಿ ಇದರ ಪ್ರಯೋಜನ.

ಕಾವ್ಯಾಲಂಕಾರ ಗ್ರಂಥ ಸೋದ್ದಿಶ್ಯವೆಂದು ಸಾಧಿಸಿ ತೋರಿಸಲಾಗಿದ್ದರೂ, ಅಲಂಕಾರದಿಂದ ಶೋಭಿತವಾಗಲಿರುವ ಕಾವ್ಯಕ್ಕೊಂದು ಉದ್ದೇಶವಿಲ್ಲದಿದ್ದರೆ, ಆಗ ಆ ಅಲಂಕಾರ ಗ್ರಂಥವೂ ಉದ್ದೇಶರಹಿತವೇ ಆಗಿಬಿಡುತ್ತದೆ. ಅದರಿಂದಾಗಿಯೇ ಗ್ರಂಥ ಕರ್ತೃ ಹೇಳುತ್ತಾನೆ:

ಧರ್ಮಾದಿ ಸಾಧನೋಪಾಯ: ಸುಕುಮಾರ ಕ್ರಮೋದಿತಃ|
ಕಾವ್ಯ ಬಂಧೋಽಭಿಜಾತಾನಾಂ ಹೃದಯಾಹ್ಲಾದಕಾರಕಃ [(3)]

ಸುಕುಮಾರ ಕ್ರಮದಲ್ಲಿ ರಚಿತವಾದ ಮಹಾಕಾವ್ಯವು, ಧರ್ಮ, ಅರ್ಥ, ಕಾಮ ಮೋಕ್ಷವೇ ಮೊದಲಾದ ಪುರುಷಾರ್ಥಗಳನ್ನು ಸಾಧಿಸುವ ಸಾಧನವಾಗಿರುವುದಷ್ಟೇ ಅಲ್ಲ; ಅಭಿಜಾತ ವ್ಯಕ್ತಿಗಳ ಹೃದಯಕ್ಕೆ ಆಹ್ಲಾದವನ್ನುಂಟುಮಾಡುವಂಥದೂ ಆಗಿರುತ್ತದೆ.

ಕಾವ್ಯ ಬಂಧವು ಅಭಿಜಾತ ವ್ಯಕ್ತಿಗಳಿಗೆ ಹೃದಯಾಹ್ಲಾದಕರವಾಗಿರುತ್ತದೆ. ಅಂದರೆ ಚಿತ್ತದಲ್ಲಿ ಆನಂದವನ್ನು ಉಂಟುಮಾಡುವಂಥದು. ಇಲ್ಲಿ ಹೇಳಲಾದ ಕಾವ್ಯ ಬಂಧಗಳೆಂದರೆ, ಸರ್ಗಗಳಿಂದ ಕೂಡಿದ ಮಹಾ ಕಾವ್ಯಗಳೆಂದು ಅರ್ಥ. ಅಭಿಜಾತ ವ್ಯಕ್ತಿಗಳೆಂದರೆ ರಾಜಕುಮಾರರೇ ಮೊದಲಾದವರು. ಧರ್ಮ, ಅರ್ಥ ಕಾಮ, ಮೋಕ್ಷಾದಿ ಪುರುಷಾರ್ಥಗಳಲ್ಲಿ ಶಿಕ್ಷಣ ಪಡೆದ ಇವರು ಆಳುವ ಮತ್ತು ವಿಜಯ ಸಂಪಾದಿಸುವ ಇಚ್ಛೆಯುಳ್ಳವರಾಗಿದ್ದು, ಕ್ಲೇಶಗಳಿಗೆ ಹೆದರುವ ಸುಕುಮಾರ ಸ್ವಭಾವದವರಾಗಿರುತ್ತಾರೆ. ಹಾಗಾದರೂ ಕಾವ್ಯವು ಅಂಥ ಕುಲೀನರಾದ ರಾಜಪುತ್ರರಿಗೆ ಆಹ್ಲಾದದ ಸಾಧನವಾಗಿದ್ದರೆ ಅದು ಅವರ ಪಾಲಿಗೆ ಕೇವಲ ಆಟಿಕೆಯಾಗಿಬಿಡಬಹುದು. [ಅಂದರೆ ಕಾವ್ಯ ಬಂಧವು ಕೇವಲ ರಾಜಪುತ್ರಾದಿಗಳಿಗ ಆಹ್ಲಾದವನ್ನುಂಟು ಮಾಡುವಂಥದಷ್ಟೇ ಆದರೆ, ಅದರಿಂದ ಬೇರೆ ಯಾವುದೇ ಪ್ರಯೋಜನವಿಲ್ಲವೆಂದಾದರೆ, ಅದು ಆಟಿಕೆಯಾದಂತೆಯೇ ಆಯಿತು. ಕಾರಣ ಆಹ್ಲಾದ ಕತ್ವ ಅದರಲ್ಲೂ ಇರುತ್ತದೆ). ಅಂಥ ಒಂದು ಅನಿಶ್ಚಯತೆಯನ್ನು ನಿವಾರಿಸುವ ಸಲುವಾಗಿ ಗ್ರಂಥ ಕರ್ತೃಕವು ಕಾವ್ಯವು ಧರ್ಮವೇ ಮೊದಲಾದ ಪುರುಷಾರ್ಥಗಳ ಸಾಧಕವೂ ಹೌದೆಂದು ಒತ್ತಿ ಹೇಳುತ್ತಾನೆ. ಒಪ್ಪಿತವಾಗಿರುವ ಜೀವನ ಮೌಲ್ಯಗಳೆಂದರೆ ಚತುರ್ವಿಧ ಪುರುಷಾರ್ಥಗಳಾದ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ. ಈ ಚತುರ್ವರ್ಗಗಳನ್ನು ಸಾಧಿಸುವ ಫಲಪ್ರದವಾದ ಸಾಧನ ಕಾವ್ಯ.

ಹಾಗಾದರೆ, ಇದೇ ಮೌಲ್ಯಗಳ ಪ್ರಾಪ್ತಿಗಾಗಿ ಇದೇ ಪುರುಷಾರ್ಥಗಳ ಸಾಧಕಗಳಾದ ಇತರೆ ಶಾಸ್ತ್ರಗಳನ್ನು ಅಧ್ಯಯನ ಮಾಡುವುದರಲ್ಲಿ ಏನು ತಪ್ಪು ಎಂದು ಕೇಳಬಹುದು. ಕಾವ್ಯ ಬಂಧವು ಸೌಂದರ್ಯದ ಕಡೆಗೊಂದು ಕಣ್ಣಿಟ್ಟು ಸುಕುಮಾರ ಕ್ರಮದಲ್ಲಿ ರಚಿತವಾಗಿರುವಂಥದೆಂದು

ಹೇಳಿರುವ ಮಾತು ಇದಕ್ಕೆ ಉತ್ತರವಾಗಬಲ್ಲುದು. ಸುಕುಮಾರಕ್ರಮವೆಂದರೆ ಸುಂದರವಾದ, ಸಹೃದಯ, ಹೃದಯಾಪಹಾರಿಯಾದ ಅಂದರೆ ಸಹೃದಯರಿಗೆ ಅಪ್ಯಾಯಮಾನವಾದ ಕ್ರಮ ಅಥವಾ ರೀತಿ ಎಂದರ್ಥ. ಅಭಿಜಾತವ್ಯಕ್ತಿಗಳಾದ ರಾಜಕುಮಾರರೇ ಮೊದಲಾದವರಿಗೆ, ಏಕಕಾಲದಲ್ಲಿ ಉಪದೇಶನೀಡಬಲ್ಲುದಷ್ಟೇ ಅಲ್ಲದೆ ಆಹ್ಲಾದಕಾರಿಯೂ ಆಗುವುದರಿಂದ ಕಾವ್ಯ ಬಂಧವು ಸ್ವಾಗತಾರ್ಹ ಸಾಧನವಾಗುತ್ತದೆ. ಅದೇ ಶಾಸ್ತ್ರಾದಿಗಳಲ್ಲಿ ಧರ್ಮಾರ್ಥಾದಿ (ನೀತಿ) ಉಪದೇಶಗಳನ್ನು ನೇರವಾಗಿ ಅಪ್ಯಾಯಮಾನವಲ್ಲದ ರೀತಿಯಲ್ಲಿ ನಿರೂಪಿಸಿರುವ ಕಾರಣದಿಂದಾಗಿ, ಸುಕುಮಾರ ಮತಿಗಳೂ, ಕ್ಲೇಶ ಭೀರುಗಳೂ ಆದ ರಾಜಪುತ್ರಾದಿಗಳಿಗೆ, ಅದನ್ನು ಗ್ರಹಿಸುವುದು ಕಷ್ಟವಾಗುತ್ತದೆ. ಆದ್ದರಿಂದ ಶಾಸ್ತ್ರಗಳಲ್ಲಿ ಹೇಳಲಾದ ಅಂಥ ಉಪದೇಶಗಳು (ನೀತಿ) ನಿರರ್ಥಕವೇ ಸರಿ.

ರಾಜಕುಮಾರರು ಆಗರ್ಭಶ್ರೀಮಂತರಾಗಿ ಜನಿಸಿ, ಅತ್ಯುನ್ನತ ಅಧಿಕಾರಕ್ಕೇರಿ ಸಮಸ್ತ ವ್ಯವಹಾರಗಳ ಆಡಳಿತದ ಸಕಲ ಹೊಣೆಗಾರಿಕೆಯನ್ನೂ ಪಡೆದುಕೊಂಡು ಬಿಡುತ್ತಾರೆಂಬುದು ವಿದಿತವೇ ಇದೆ. ಅಲ್ಲದೆ ಸರಿಯಾದ ರೀತಿಯಲ್ಲಿ, ಉಪದೇಶವನ್ನು ಹೊಂದದೆ ಇದ್ದಾಗ, ಯಾವುದೇ ಹಿಂಜರಿಕೆ ಇಲ್ಲದೆ ಸ್ವೇಚ್ಛಾ ಮಾರ್ಗವನ್ನು ಹಿಡಿಯುತ್ತಾರೆ. ಹಾಗೆ ಸ್ವಚ್ಛಂದರಾಗಿ ಸ್ಥಾಪಿತ ಸಕಲ ಸತ್ಸಂಪ್ರದಾಯಗಳನ್ನು ಬುಡಮೇಲುಗೊಳಿಸಿ ಅವ್ಯವಸ್ಥೆಗೆ ಕಾರಣರಾಗ ಬಹುದು. ಆದ್ದರಿಂದ ಕವಿಗಳು, ಇದನ್ನು ತಪ್ಪಿಸುವ ಸಲುವಾಗಿ, ರಾಜಕುಮಾರರಿಗೆ ಆದರ್ಶವೆನಿಸಬಹುದಾದ ಉತ್ತಮ ಚಾರಿತ್ರ್ಯದ, ಆಗಿಹೋದ.... ರಾಜರುಗಳ ಚರಿತ್ರೆಯನ್ನು ವಸ್ತುವಾಗಿ ಉಳ್ಳ ಕಾವ್ಯಗಳನ್ನು, ಅವರ ಉಪದೇಶದ ಸಲುವಾಗಿ ರಚಿಸಿರುವುದು ಕಂಡುಬರುತ್ತದೆ.

ಈ ರೀತಿ ಯಾವುದೇ ಶಾಸ್ತ್ರಾದಿಗಳಿಗಿಂತ ಬೇರೆಯೇ ಆದ ಪ್ರಕೃಷ್ಟ ಗುಣಗಳಿಂದ ಕೂಡಿದ ಪ್ರಯೋಜನವನ್ನು ಕಾವ್ಯಹೊಂದಿದೆ. ಪುರುಷಾರ್ಥಗಳ ಸಿದ್ಧಿಗೆ ಸಂಬಂಧಿಸಿದ ಪ್ರಯೋಜನದ ವಿಷಯ ಹಾಗಿರಲಿ, ಕಾವ್ಯವು ಸ್ವಾಮಿ ಸೇವಕ, ಸ್ನೇಹಿತ ಇವರೆಲ್ಲರ ನಡುವೆ ಪರಸ್ಪರ ಸಾಮಾಜಿಕ ಸಂಬಂಧ ಸಾಧ್ಯವಾಗುವಂತೆ ಮಾಡುವ ಪ್ರಯೋಜನವನ್ನು ಹೊಂದಿದೆ. ಇದು ಕಾವ್ಯದಿಂದಲ್ಲದೆ ಸಾಧ್ಯವಾಗದು.

ವ್ಯವಹಾರ ಪರಿಸ್ಪಂದ ಸೌಂದರ್ಯ ವ್ಯವಹಾರಿಭಿಃ
ಸತ್ಕಾವ್ಯಾಧಿಗಮಾದೇವ ನೂತನೌಚಿತ್ಯಮಾಪ್ಯತೇ ||4||

ಲೋಕವ್ಯವಹಾರದಲ್ಲಿ ತೊಡಗಿರುವ ಜನರು, ನೂತನೌಚಿತ್ಯದಿಂದ ಕೂಡಿದ ಲೋಕ ವ್ಯಾಪಾರದ ಸೌಂದರ್ಯವನ್ನು ಸತ್ಕಾವ್ಯ ಪರಿಜ್ಞಾನದಿಂದ ಮಾತ್ರ ಸವಿಯಬಲ್ಲರು.

ವ್ಯವಹಾರವೆಂದರೆ ಜನರ ದಿನನಿತ್ಯದ ಕಾರ್ಯಚಟುವಟಿಕೆಗಳು ಮತ್ತು ದೈನಂದಿನ ಕಾರ್ಯಪ್ರಪಂಚ. ಆ ಲೋಕ ವ್ಯಾಪಾರದ ಸೌಂದರ್ಯವೆಂಬುದು ಸತ್ಕಾವ್ಯದಲ್ಲಿ ಮಾತ್ರ ಕಾಣಸಿಗುವಂಥದು. ಆದ್ದರಿಂದ ಲೋಕವೃತ್ತದ ಸೌಂದರ್ಯವನ್ನು ಸವಿಯುವ ಆಸಕ್ತಿಯುಳ್ಳ

ಜನರು ಕಾವ್ಯ ಪರಿಜ್ಞಾನದಿಂದ ಮಾತ್ರ ಅದನ್ನು ಪಡೆಯಬಹುದು; ಬೇರೆ ಯಾವುದೇ ಸಾಧನದಿಂದ ಪಡೆಯಲಾರರು. ಆ ಸೌಂದರ್ಯದ ಸ್ವರೂಪವಾದರೂ ಎಂಥದು? ನೂತನ ಔಚಿತ್ಯದಿಂದ ಕೂಡಿರುವಂಥದು. ಅರ್ಥಾತ್ ವಾಸ್ತವವಾದದ್ದು; ವಿಶಿಷ್ಟವಾದ ಪ್ರತಿಭಾಪೂರ್ಣ ಔಚಿತ್ಯವನ್ನು ಪಡೆದುಕೊಂಡು ಕಲಾತ್ಮಕ ಪ್ರಭೆಯಲ್ಲಿ ಕಾಣಿಸಿಕೊಳ್ಳುತ್ತದೆ. ಇನ್ನೂ ಸರಿಯಾಗಿ ಹೇಳಬೇಕೆಂದರೆ ರಾಜಮಹಾರಾಜರು ಕಾವ್ಯನಾಯಕರಾಗಿದ್ದು ಅವರ ವ್ಯವಹಾರಗಳ ವರ್ಣನೆ ಇರುತ್ತದೆಂದಾದರೆ, ರಾಜನ ಸಹವರ್ತಿಗಳಾದ ಪ್ರಧಾನಿಯೇ ಮೊದಲಾದವರೆಲ್ಲರೂ ಉತ್ತಮ ನಡವಳಿಕೆ ಮತ್ತು ಆದರ್ಶ ಚಾರಿತ್ರ್ಯಗಳ ಮಾದರಿ ವ್ಯಕ್ತಿಗಳು ಎನ್ನುವ ಹಾಗೆ ಚಿತ್ರಿತವಾಗಿಬಿಡುತ್ತಾರೆ. ಅದು ಎಷ್ಟರ ಮಟ್ಟಿಗೆ ಎಂದರೆ ಅಂಥ ಕಾವ್ಯವನ್ನು ಅಧ್ಯಯನ ಮಾಡಿದ ಸಹೃದಯನು ಜೀವನದ ವಿವಿಧ ಸ್ತರಗಳಿಗೆ ಯುಕ್ತವೆನಿಸಿದ ನಡವಳಿಕೆಯ ಅತಿ ಶ್ರೇಷ್ಠ ಮಟ್ಟದ ಪರಿಜ್ಞಾನವನ್ನು ಖಂಡಿತ ಪಡೆಯುತ್ತಾನೆ. ಅದು ಅವನಿಗೆ ಬದುಕಿನ ಶ್ಲಾಘ್ಯ ಫಲವನ್ನು ತಂದುಕೊಡುತ್ತದೆ.

ವ್ಯುತ್ಪತ್ತಿಯ ಪ್ರಸಕ್ತಿ ಇರುವುದರಿಂದ ಕಾವ್ಯದ ಪ್ರಯೋಜನಗಳಾಗಿ ಹೇಳಲಾದ ಚತುರ್ವಿಧ ಪುರುಷಾರ್ಥಗಳು ಕಾಲಾಂತರದಲ್ಲಿ ಪರೋಕ್ಷವಾಗಿ ಪಾರಂಪರಿಕ ರೂಪದಲ್ಲಿ ಲಭಿಸತಕ್ಕವು. ಹಾಗಾಗಿ ಗ್ರಂಥ ಕರ್ತೃವು, ಸುಂದರವಾದ ಕಾವ್ಯಾಸ್ವಾದನೆಯ ಜೊತೆ ಜೊತೆಯಲ್ಲೇ ಸಹೃದಯರು ಪಡೆಯುವ ಇನ್ನೊಂದು ಪ್ರಯೋಜನವನ್ನು ಪ್ರಸ್ತಾಪಿಸುತ್ತಾನೆ.

ಚತುರ್ವರ್ಗ ಫಲಾಸ್ವಾದಮಪ್ಯತಿಕ್ರಮ್ಯ ತದ್ವಿದಾಮ್ |
ಕಾವ್ಯಾಮೃತರಸೇನಾಂತಶ್ಚಮತ್ಕಾರೋ ವಿತನ್ಯತೇ [5]

ಧರ್ಮ, ಅರ್ಥ, ಕಾಮ ಮೋಕ್ಷಾದಿ ಚತುರ್ವಿಧ ಪುರುಷಾರ್ಥಗಳ ಫಲಾಸ್ವಾದವನ್ನೂ ಮೀರಿದ ಆನಂದ, ಸಹೃದಯನ ಹೃದಯದಲ್ಲಿ ಕಾವ್ಯಾಮೃತ ರಸಾಸ್ವಾದದಿಂದ ಉಂಟಾಗುತ್ತದೆ.

"ಚಮತ್ಕಾರೋ ವಿತನ್ಯತೇ" ಎಂಬ ಮಾತಿನ ಅರ್ಥ, ರಸಾಸ್ವಾದ ರೂಪದ ಅಲೌಕಿಕ ಆನಂದ ವಿಸ್ತಾರವಾಗುತ್ತದೆ, ಪುನಃ ಪುನಃ ಉಂಟಾಗುತ್ತದೆ ಎಂದು. ಯಾವುದರಿಂದ ಎಂದರೆ ರಸಾಸ್ವಾದದಿಂದ. ರೂಪಕದ ಮೂಲಕ ಕಾವ್ಯವನ್ನು ಅಮೃತವೆಂದು ಹೇಳಲಾಗಿದೆ. ಅದರ ಆಸ್ವಾದನೆಯೇ ಅನುಭವವೆಂದು ಹೇಳಲಾಗಿದೆ. ಈ ಆಹ್ಲಾದ ಅಥವಾ ಆನಂದವೆಂಬುದು ಹೃದಯದಲ್ಲಿ ಅನುಭವಿಸಬಹುದಾದಂಥದು. ಅದೂ ಕಾವ್ಯಾಸ್ವಾದನ ಮಾಡಬಲ್ಲಂಥವರು ಮಾತ್ರ. ಇದರಿಂದ ಬರುವ ಆನಂದವಾದರೋ ಚತುರ್ವರ್ಗ ಫಲಾಸ್ವಾದಗಳಿಂದ ಬರಬಹುದಾದ್ದಕ್ಕಿಂತ ಮಿಗಿಲಾದ್ದು. ಅಂದರೆ ಕಾವ್ಯಾಸ್ವಾದದಿಂದ ಬರುವ ಆನಂದಾನುಭವದ ಮುಂದೆ ಅದು ನಗಣ್ಯ. ಇದರ ಮಥಿತಾರ್ಥವೆಂದರೆ, ಧರ್ಮಾದಿ ಚತುರ್ವಿಧ ಪುರುಷಾರ್ಥಗಳಿಂದ ಬರುವ ಪ್ರಯೋಜನವೇನಿದೆ, ಅದು ಸಕಲ ಶಾಸ್ತ್ರಗಳಿಂದ ಲಭ್ಯವಾಗುವ ಪ್ರಯೋಜನವೆಂದು ಪ್ರಸಿದ್ಧವಾಗಿದೆ. ಈ ಲೌಕಿಕ ಪ್ರಯೋಜನ ಕೂಡ ಕಾವ್ಯಾಮೃತದ ಆಸ್ವಾದನೆಯಿಂದ ಪ್ರಾಪ್ತವಾಗುವ ಅಸೀಮ ಆನಂದಕ್ಕೆ ಯಾವ ರೀತಿಯಲ್ಲೂ ಹೋಲಿಕೆಯಲ್ಲ. ಉಚ್ಚರಿಸಲು

ಕ್ಲಿಷ್ಟಕರವೂ, ಅರ್ಥಮಾಡಿಕೊಳ್ಳಲು ಗಹನವೂ ದುರ್ಜ್ಞೇಯವೂ ಹಾಗೂ ಕೇಳಲು ಕಿವಿಗೆ ಕಠೋರವೂ ಆದ ದೋಷಗಳಿಂದ ಕೂಡಿರುವ ಶಾಸ್ತ್ರಾದಿಗಳ ಅಧ್ಯಯನವು ದುಸ್ಸಹ ಹಾಗೂ ಮನಸ್ಸಿಗೆ ಕ್ಲೇಶಕರ. ತತ್‌ಕ್ಷಣದಲ್ಲಿಯೇ ಅಲೌಕಿಕ ಆನಂದವನ್ನುಂಟು ಮಾಡುವ ಕಾವ್ಯಗಳೊಂದಿಗೆ ಇಂಥ ಶಾಸ್ತ್ರಾದಿಗಳು ಹೇಗೆ ತಾನೆ ಸ್ಪರ್ಧಿಸಿಯಾವು? ಸ್ಪರ್ಧಿಸಲಾರವೆಂಬುದು ಸ್ಪಷ್ಟವೇ ಇದೇ.

ಈ ಸುಂದರವಾದ ಶ್ಲೋಕದಲ್ಲಿ ಅದನ್ನು ಕಟ್ಟಿಕೊಡಲಾಗಿದೆ.

ಕಟು ಕೌಷಧವಚ್ಛಾಸ್ತ್ರಮ ವಿದ್ಯಾವ್ಯಾಧಿನಾಶನಮ್
ಆಹ್ಲಾದ್ಯಮೃತವತ್ಕಾವ್ಯಮ ವಿವೇಕ ಗದಾ ಪಹಮ್ ||೭||

ಶಾಸ್ತ್ರವು, ಕಹಿಯಾದ ಔಷಧಿಯ ಹಾಗೆ ಅವಿದ್ಯೆ (ಅಜ್ಞಾನ)ಯೆಂಬ ರೋಗವನ್ನು ನಾಶಮಾಡುತ್ತದೆ. ಕಾವ್ಯವು ಆಹ್ಲಾದವೆಂಬ ಅಮೃತದ ಹಾಗೆ ಅದೇ ಅಜ್ಞಾನ (ಅವಿವೇಕ)ವೆಂಬ ರೋಗವನ್ನು ನಾಶಮಾಡುತ್ತದೆ.

ಆಯತ್ಯಾಂ ಚ ತದಾತ್ವೇ ಚ ರಸನಿಸ್ಯಂದ ಸುಂದರಮ್
ಯೇನ ಸಂಪದ್ಯತೇ ಕಾವ್ಯಂ ತದಿದಾನೀಂ ವಿಚಾರ್ಯತೇ ||೮||

ಯಾವ ತತ್ವದಿಂದಾಗಿ ಕಾವ್ಯವು ಅಧ್ಯಯನ ಕಾಲದಲ್ಲೂ ಅನಂತರದಲ್ಲೂ ತನ್ನ ರಸಸ್ಯಂದತೆಯಿಂದ ರಮಣೀಯವೆನಿಸುತ್ತದೆಯೋ ಆ ತತ್ವವನ್ನು ಈ ಗ್ರಂಥದಲ್ಲಿ ವಿವೇಚಿಸಲಾಗುವುದು.

ಇವೆರಡೂ ಅಂತರ ಶ್ಲೋಕಗಳು

ಅಲಂಕೃತಿರಲಂಕಾರ್ಯಮಪೋದ್ಧೃತ್ಯ ವಿವೇಚ್ಯತೇ|
ತದುಪಾಯತಯಾ ತತ್ತ್ವಂ ಸಾಲಂಕಾರಸ್ಯ ಕಾವ್ಯತಾ||6||

"ಅಲಂಕರಣ" ಮತ್ತು "ಅಲಂಕಾರ್ಯ"ಗಳೆರಡನ್ನೂ ಬೇರೆ ಬೇರೆಯಾಗಿಯೇ ವಿವೇಚಿಸಲಾಗುವುದು. ನಮ್ಮ ಅಂತಿಮ ಉದ್ದೇಶವನ್ನು ಸಾಧಿಸಲು ಇರುವ ಆತ್ಯಂತಿಕ ಮಾರ್ಗ ಅದೊಂದೇ. ವಸ್ತು ಸಂಗತಿ ಏನೆಂದರೆ, ಕಾವ್ಯವು ಯಾವಾಗಲೂ ಸಾಲಂಕಾರವೇ. ಅಂದರೆ ಅಲಂಕರಣ ಮತ್ತು ಅಲಂಕಾರ್ಯಗಳು ಸೇರಿಯೇ ಕಾವ್ಯವಾಗುತ್ತದೆ.

ಅಲಂಕೃತಿ ಅಥವಾ ಅಲಂಕರಣವೆನ್ನುವುದು ಶೃಂಗಾರಗೊಳಿಸುವ ಕ್ರಿಯೆಗೆ ಸಂಬಂಧಿಸಿದ್ದು. ಅಲಂಕಾರವೆಂದರೆ ಯಾವುದರ ಮೂಲಕ ಅಲಂಕೃತಗೊಳಿಸಲಾಗುವುದೋ ಆ ಭಾಷಾ ಮಾಧ್ಯಮ. ಅಲಂಕಾರ್ಯವೆಂದರೆ ಯಾವುದನ್ನು ಅಲಂಕರಣಗೊಳಿಸಲಾಗುತ್ತದೆಯೋ ಆ ವಿಷಯ ಅಥವಾ ವಸ್ತು. ಇವರೆಡರ ಅಂದರೆ ಅಲಂಕಾರ ಹಾಗೂ ಅಲಂಕರಣೀಯಗಳಾದ (ಅಲಂಕಾರ್ಯ) ವಾಚಕರೂಪ ಮತ್ತು ವಾಚ್ಯರೂಪ (ಶಬ್ದ ಮತ್ತು ಅರ್ಥ)ಗಳು ಇವೆರಡನ್ನು ಇಲ್ಲಿ ವಿವೇಚಿಸಲಾಗುವುದು. ಅದಕ್ಕೆ ಅನುಸರಿಸುವ ಮಾರ್ಗವೆಂದರೆ, ಅವುಗಳ ಸಾಮಾನ್ಯ ಮತ್ತು ವಿಶೇಷ ಲಕ್ಷಣಗಳನ್ನು ನಿರೂಪಿಸುವುದರ ಮೂಲಕ. ಅವರೆಡೂ ಪರಸ್ಪರ ಅವಿಭಾಜ್ಯ ಘಟಕವೇ ಆದರೂ, ಒಂದು ಲಕ್ಷಣ ನಿರೂಪಣೆಯ ಸಲುವಾಗಿ ಅವೆರಡನ್ನೂ ಪ್ರತ್ಯೇಕವಾಗಿಯೇ

ಪರಿಗಣಿಸುವುದು ಅವಶ್ಯಕ. ಒಟ್ಟಾರೆ ಕಾವ್ಯದ ಸ್ವರೂಪವನ್ನು ಅಲಂಕರಣ ಮತ್ತು ಅಲಂಕಾರ್ಯಗಳ ಮುಖೇನ ಅರ್ಥೈಸಲಾಗುವುದು. ಯಾರಿಗೇ ಆಗಲಿ ಕಾವ್ಯ ಶಿಕ್ಷಣವನ್ನು ನೀಡುವಲ್ಲಿ ಈ ರೀತಿಯ ಪೃಥಕ್ಕರಣೆ ಬಹಳ ಮಟ್ಟಿಗೆ ಸಹಾಯಕವಾಗುತ್ತದೆ. ಹಾಗೆ ನೋಡಿದರೆ ಇತರೆ ಶಾಸ್ತ್ರಗಳಲ್ಲಿಯೂ, ಶಾಸ್ತ್ರ ಶಿಕ್ಷಣದ ಉದ್ದೇಶವನ್ನು ಈಡೇರಿಸುವ ಸಲುವಾಗಿ ಹೀಗೆ ಕೃತಕವಾಗಿ ವಿಭಜಿಸಿ ತೋರಿಸುವುದು ಸರ್ವೇ ಸಾಮಾನ್ಯವಾದ ರೂಢಿ. ಉದಾಹರಣೆಗೆ ವ್ಯಾಕರಣದಲ್ಲಿ ಇಡೀ ಪದವನ್ನು ಪ್ರಕೃತಿ ಮತ್ತು ಪ್ರತ್ಯಯ ಎಂದು ಹಾಗೂ ವಾಕ್ಯದಲ್ಲಿ ಸೇರಿರುವ ಪದಗಳನ್ನು ಬೇರೆ ಬೇರೆಯಾಗಿ ಬಿಡಿಸಲಾಗುತ್ತದೆ.

ಹೀಗೆ ಅಲಂಕರಣ ಮತ್ತು ಅಲಂಕಾರ್ಯ ಎಂದು ವಿಭಜಿಸುವುದು ಮಿಥ್ಯೆ ಎನ್ನುವುದಾದರೆ ಸತ್ಯ ಯಾವುದು? ಸತ್ಯ ಇದು. ಅಲಂಕಾರಯುಕ್ತವಾದದ್ದೇ ಕಾವ್ಯ. ಅರ್ಥಾತ್ ವಾಸ್ತವವಾಗಿ ಕವಿಯ ಕರ್ಮವಾದ ಕಾವ್ಯವು ಅಲಂಕಾರ್ಯ ಮತ್ತು ಅಲಂಕರಣಗಳ ಅವಿಭಾಜ್ಯ ಸಮಸ್ತವೇ ಆಗಿದೆ. ಆದ್ದರಿಂದ ಕಾವ್ಯವೆಂದರೆ ಅಲಂಕೃತಗೊಂಡದ್ದೆಂದೇ ಅರ್ಥ. ಈಗಾಗಲೇ ಇರುವ ಕಾವ್ಯಕ್ಕೆ ಅಲಂಕಾರಗಳನ್ನು ಪೇರಿಸುತ್ತ ಹೋಗುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಅಲಂಕಾರಯುಕ್ತವಾದದ್ದೇ ಕಾವ್ಯ ಎಂದೇನೋ, ಕಾವ್ಯದ ಸ್ವರೂಪವನ್ನು ಸ್ವಲ್ಪ ಅನಿಶ್ಚಿತ ರೀತಿಯಲ್ಲಿ ಹೇಳಿದ್ದಾಯಿತು. ಆದರೆ ಸರಿಯಾದ ರೀತಿಯಲ್ಲಿ ಅದರ ಸ್ವರೂಪವನ್ನು ಇನ್ನೂ ನಿಷ್ಕರ್ಷಪಡಿಸಲಾಗಿಲ್ಲ. ಆದ್ದರಿಂದ ಕಾವ್ಯವೆಂಬ ಹೆಸರಿಗೆ ಯೋಗ್ಯವಾದುದು ಯಾವುದು ಎಂಬುದನ್ನು ಈ ಸೂತ್ರವು ವಿಶದವಾಗಿ ವಿವರಿಸುತ್ತದೆ. ಕಾವ್ಯವೆಂದರೇನೆಂಬುದನ್ನು ಸಂಪೂರ್ಣವಾಗಿ ಸೂತ್ರೀಕರಿಸುವ ಈ ಶ್ಲೋಕ.

ಶಬ್ದಾರ್ಥೌ ಸಹಿತೌ ವಕ್ರಕವಿವ್ಯಾಪಾರಶಾಲಿನಿ|
ಬಂಧೇ ವ್ಯವಸ್ಥಿತೌ ಕಾವ್ಯಂ ತದ್ವಿದಾಹ್ಲಾದಕಾರಿಣಿ ||7||

ವಕ್ರಕವಿವ್ಯಾಪಾರದಿಂದ ಕೂಡಿದ ಬಂಧವೊಂದರಲ್ಲಿ ವ್ಯವಸ್ಥಿತಗೊಂಡು ರಸಿಕರಿಗೆ ಆಹ್ಲಾದವನ್ನುಂಟು ಮಾಡುವ ಶಬ್ದ ಮತ್ತು ಅರ್ಥಗಳೇ ಕಾವ್ಯ. [7]

ಶಬ್ದ ಮತ್ತು ಅರ್ಥಗಳೆರಡೂ ಒಟ್ಟಾಗಿ ಕೂಡಿಕೊಂಡಿರುವುದೇ ಕಾವ್ಯ. ಅರ್ಥಾತ್ ವಾಚಕ ಮತ್ತು ವಾಚ್ಯಗಳೆರಡೂ ಕೂಡಿಕೊಂಡೇ ಕಾವ್ಯವಾಗುವುದು. ಅವು ಎರಡು ಆದರೂ ಅವು ಒಂದಾಗುತ್ತವೆ ಎಂಬುದು ಒಂದು ವಿಚಿತ್ರವೇ ಸರಿ. ಆದ್ದರಿಂದ ಕವಿಕೌಶಲದಿಂದ ನಿರ್ಮಿತವಾದ ಅತಿಶಯ ಸೌಂದರ್ಯದಿಂದ ಕೂಡಿದ ಶಬ್ದವೇ ಕಾವ್ಯ ಎಂಬ ಕೆಲವರ ದೃಷ್ಟಿ ಹಾಗೂ ತನ್ನ ರಚನಾ ವೈಚಿತ್ರ್ಯದಿಂದ ಆಹ್ಲಾದವನ್ನುಂಟು ಮಾಡಬಲ್ಲ ಅರ್ಥವೇ ಕಾವ್ಯ ಎಂಬ ಇನ್ನು ಕೆಲವರ ದೃಷ್ಟಿ ಎರಡೂ ದೃಷ್ಟಿಗಳು ತಿರಸ್ಕೃತವಾಗುತ್ತವೆ. ಹಾಗಾಗಿ ಪ್ರತಿ ಎಳ್ಳುಕಾಳಿನಲ್ಲಿ ಎಣ್ಣೆ ಇರುವಂತೆ ರಸಿಕರಿಗೆ ಆಹ್ಲಾದವನ್ನುಂಟುಮಾಡುವ ಗುಣ ಶಬ್ದ ಮತ್ತು ಅರ್ಥಗಳೆರಡರಲ್ಲೂ ಪ್ರತ್ಯೇಕವಾಗಿ ಇರುತ್ತದೆ. ಯಾವುದೇ ಒಂದರಲ್ಲಿ ಮಾತ್ರ ವಿಶೇಷವಾಗಿ ಇರುವಂಥದಲ್ಲ, ಉದಾಹರಣೆಗೆ ಈ ಪದ್ಯ

ಭಣ ತರುಣಿ ರಮಣ ಮಂದಿರಮಾನಂದ ಸ್ಯಂದಿ ಸುಂದರೇಂದು ಮುಖಿ|
ಯದಿ ಸಲ್ಲೀಲೋಲ್ಲಾಪಿನಿ ಗಚ್ಛಸಿ ತತ್‌ಕಿಂ ತ್ವದೀಯಂ ಮೇ [೯]

ಅಣಣು ರಣನ್ಮಣಿ ಮೇಖಲಮವಿರತ ಶಿಂಜಾಣ ಮಂಜು ಮಂಜೀರಮ್|
ಪರಿಸರಣ ಮರುಣ ಚರಣೇ ರಣರಣಕಮಕಾರಣಂ ಕುರುತೇ [೧೦]

ತರುಣಿ ಹೇಳೆಲೆ ನೀನು
ಆನಂದ ಸೂಸುವ ಚೆಲುವ ಚಂದ್ರಮುಖಿಯೆ
ಸವಿನುಡಿಯ ಓ ಬಾಲೆ
ಹೇಳು ನೀನು
ನಿನ್ನ ನಲ್ಲನ ಮನೆಗೆ
ನೀ ತೆರಳುತಿರಲಂದು
ನನ್ನ ಲಕ್ಷ್ಯವನೇಕೆ ತಾನದು
ಸೆಳೆಯಬೇಕು?
ಅರುಣ ಚರಣದ ಓ ಬೆಡಗಿ
ಹೇಳೆಲೆ ನೀನು
ನೀ ಬಳುಕಿ ನಡೆವಾಗ್ಗೆ
ಅನುರಣೇಸುತಿರುವೀ ನಿನ್ನ
ರನ್ನದೊಡ್ಯಾಣವು
ನಿನ್ನ ಕಾಲಂದುಗೆಯ ಕಿಂಕಿಣಿಯ
ಕ್ವಣಿತದಿಂಚರವದುವು
ನನ್ನನೇತಕೆ ಕಾರಣವದಿನಿತಿಲ್ಲದೆಯೆ
ಆಕುಲಗೊಳಿಸಬೇಕು? [೯ ಮತ್ತು ೧೦]

ಈ ರಚನೆಯಲ್ಲಿ ಪ್ರತಿಭಾ ದಾರಿದ್ರ್ಯದಿಂದ ಕೂಡಿದ ಹಾಗೂ ಭಾಷೆಯ ಕುಶಲ ಬಳಕೆಯಲ್ಲಿ ತೀರ ದುರ್ಬಲನಾದ ಕವಿಯೊಬ್ಬನ ಕೇವಲ ಅನುಪ್ರಾಸಪ್ರಿಯತೆ ವ್ಯಕ್ತವಾಗಿದೆ. ಇದರಲ್ಲಿ ಅರ್ಥವೈಚಿತ್ರ್ಯದ ಲವಲೇಶವೂ ಇಲ್ಲ.

ತಾರುಣ್ಯದಿಂದ ತುಂಬಿ ತುಳುಕುತ್ತಿರುವ ಲಾವಣ್ಯವತಿಯೊಬ್ಬಳನ್ನು ಪ್ರೇಮಿಸುತ್ತಿರುವ ವ್ಯಕ್ತಿಯೊಬ್ಬ ಅವಳನ್ನು ಸಂಬೋಧಿಸುತ್ತ ಹೇಳುತ್ತಾನೆ - "ನೀನು ನಿನ್ನ ಇನಿಯನ ಮನೆಗೆ ತೆರಳಿದರೆ, ಅದು ನಿಷ್ಕಾರಣವಾಗಿ ನನ್ನನ್ನೇಕೆ ವ್ಯಾಕುಲಗೊಳಿಸಬೇಕು?" - ಎಂದು. ಇದು ಅತ್ಯಂತ ಗ್ರಾಮ್ಯೋಕ್ತಿ. ಹಾಗೆ ನೋಡಿದರೆ ಅದು ಕೇವಲ ಅಕಾರಣವೇನಲ್ಲ. ಅವನ ಹಾಗೂ ಅವನ ಪ್ರೇಮದ ವಿಷಯಕ್ಕೆ ಅವಳು ತೋರಿದ ತೀವ್ರ ಅಲಕ್ಷ್ಯ ಅವನ ವೇದನೆಗೆ ಕಾರಣವಾಯಿತು. ಮತ್ತು ಅವಳಲ್ಲಿ ಅನುರಕ್ತಗೊಂಡ ಅವನ ಅಂತರಂಗದಲ್ಲಿ ಅವಳ ವಿಷಯಕ್ಕೆ ಉಂಟಾದ ವಿರಹವ್ಯಾಕುಲತೆಯಿಂದ ಕೂಡಿದ ಆಶಂಕೆ ಹಾಗೂ ಕಾತರತೆ ಅವನು ವ್ಯಾಕುಲಗೊಳ್ಳಲು

ಕಾರಣವಾಯಿತು.

ಒಂದು ವೇಳೆ ಅದರ ಉದ್ದೇಶಿತ ಅರ್ಥ - "ನೀನು ಹೋಗಲೇಬೇಕಿದ್ದರೆ, ನನ್ನೊಂದಿಗೆ ಹೋದರೆ ಏನು ಕಷ್ಟ" ಎಂದಿದ್ದರೆ, ಆ ಗ್ರಾಮ್ಯತೆ ಇನ್ನೂ ಅಧಿಕವಾಗುತ್ತಿತ್ತು. ದೈವವನ್ನು ಕುರಿತ ಬಗೆ ಬಗೆಯ ಸಂಬೋಧನೆಗಳಿಂದ ತುಂಬಿರುವ ಋಷಿಪ್ರಣೀತ ಸ್ತೋತ್ರಗೀತೆಗಳ ಹಾಗೆ ಇರುವ ಸಂಬೋಧನೆಯ ಈ ಉಕ್ತಿಗಳು ಕಾವ್ಯಮರ್ಮಜ್ಞರಿಗೆ ಯಾವುದೇ ರೀತಿಯ ಆಹ್ಲಾದವನ್ನುಂಟುಮಾಡುವುದಿಲ್ಲ. ಆದ್ದರಿಂದ ಇದು ವ್ಯರ್ಥ.

ಶೋಭಾತಿಶಯವಿಲ್ಲದಿರುವ ಯಾವುದೇ ವಸ್ತು ಕಾವ್ಯವೆಂದು ಕರೆಸಿಕೊಳ್ಳುವ ಅರ್ಹತೆಯನ್ನು ಹೊಂದಿರುವುದಿಲ್ಲ. ಉದಾ :

ಪ್ರಕಾಶಸ್ವಾಭಾವ್ಯಂ ವಿದಧತಿ ನ ಭಾವಾಸ್ತಮಸಿ ಯ
ತ್ತಥಾ ನೈತೇ ತೇ ಸ್ಯುರ್ಯದಿ ಕಿಲ ತಥಾ ಯತ್ರನ ಕಥಮ್
ಗುಣಾಧ್ಯಾಸಾಭ್ಯಾಸ ವ್ಯಸನ ದೃಢದೀಕ್ಷಾ ಗುರುಗುಣೋ
ರವಿವ್ಯಾಪಾರೋಽಯಂ ಕಿಮಥ ಸದೃಶಂ ತಸ್ಯ ಮಹಸಃ [೧೧]

ಕತ್ತಲೆಯೊಳು ವಸ್ತುಗಳು ಸ್ವಭಾವದಿಂದೆ
ಸ್ವಯಂದೀಪಕಗಳಲ್ಲ
ಅಂತಿರ್ದೊಡವು ಕತ್ತಲೆಯೊಳು ತಮ್ಮ ತಾವ್ ಬೆಳಗಬೇಕಿತ್ತು
ಸದಾ ಸಮಸ್ತ ವಸ್ತುಗಳನನಾವರಣಗೊಳಿಸುವುದೊಂದೆ
ದೃಢ ದೀಕ್ಷೆಯೆನಿಸಿರ್ಪಾ ರವಿಗೆ
ಸಮಸ್ತ ವಸ್ತುಗಳ ಬೆಳಗುವುದೆ
ವ್ಯಾಪಾರವೆನಿಸಿರ್ಪ ಆ ಅಂಥ
ಜ್ಯೋತಿರಾಶಿಗೆ ಸಮನುಂಟೆ? -೧೧

ಈ ಪದ್ಯದಲ್ಲಿ ಒಣ ತರ್ಕಗಳಲ್ಲೇ ಮುಳುಗಿ ಹೋದ ಮನಸ್ಸಿನ ಕವಿಯೊಬ್ಬನು ತನ್ನ ಪ್ರತಿಭೆಯಿಂದ ಪ್ರತೀತವಾದ ವಸ್ತುವನ್ನು ಪದ್ಯಬದ್ಧಗೊಳಿಸಲು ಹೆಣಗಿದ್ದಾನೆ. ತನ್ನ ಭಾವನೆಗಳನ್ನು ಅಭಿವ್ಯಕ್ತಿಸಲು ಅವನ ಭಾಷೆ ತೀರಾ ಅಸಮರ್ಥವಾಗಿದೆ. ಕವಿ ಅಳವಡಿಸಿಕೊಂಡಿರುವ ಭಾಷೆಯಲ್ಲಿ ಶಬ್ದವಕ್ರತೆಯ ಲವಲೇಶವೂ ಇಲ್ಲ. ತರ್ಕ ವಾಕ್ಯಗಳ ಶಯ್ಯೆಯೇ ಈ ಶ್ಲೋಕದ ಶರೀರವಾಗಿದೆ. ಕತ್ತಲೆಯ ಹೊರತು ಬೇರೆ ವಸ್ತುಗಳು ಸ್ವಯಂ ದೀಪಕತ್ವವನ್ನು ಹೊಂದಿರುವುದಿಲ್ಲ ಎಂಬುದು 'ಸಾಧ್ಯ'ವಾಕ್ಯವಾದರೆ, ಕಾರಣ ಕತ್ತಲೆಯಲ್ಲಿ ಅವು ಹೊಳೆಯುವುದಿಲ್ಲ ಎಂಬುದು "ಹೇತು" ವಾಕ್ಯವಾಗುತ್ತದೆ.

ಹಾಗಾದರೆ ದೃಷ್ಟಾಂತವನ್ನೇಕೆ ಕೊಡಲಿಲ್ಲ ಎಂದು ಕೇಳಬಹುದು. (ಕಾರಣ, ಸಾಧ್ಯವಾಕ್ಯದಲ್ಲಿ ದೃಷ್ಟಾಂತವನ್ನು ನೀಡಬೇಕಾಗಿತ್ತು) ಅದಕ್ಕೆ ಕುಂತಕನ ಉತ್ತರ-ಸಹೃದಯರು ಅದನ್ನು ಸುಲಭವಾಗಿ ತಿಳಿಯಬಹುದಾಗಿದೆ- ಕಾರಣ ಕಾವ್ಯ ರಚಿಸುವ ಸಂದರ್ಭದಲ್ಲಿ ಆ ತಾರ್ಕಿಕ ಕವಿಯ ಮನಸ್ಸಿನಲ್ಲಿ

ತರ್ಕ ನ್ಯಾಯವೇ ಹೊಳೆದಿತ್ತು ಮತ್ತು ಹಾಗೆ ಹೇಳಿದೆ ಕೂಡ

ತದ್ಭಾವ ಹೇತು ಭಾವೌ ಹಿ ದೃಷ್ಟಾಂತೇ ತದವೇದಿನಃ|
ಸ್ಥಾಪ್ಯೇತೇ ವಿದುಷಾಂ ವಾಚ್ಯೋ ಹೇತುರೇವ ಹಿ ಕೇವಲ; [೧೨]

ದೃಷ್ಟಾಂತದಲ್ಲಿ ಅನುಮೇಯ ಮತ್ತು ಹೇತುಗಳನ್ನು ಅದನ್ನು ಅರಿಯದವರ ತಿಳುವಳಿಕೆಗಾಗಿ ಸ್ಪಷ್ಟವಾಗಿ ಹೇಳಲಾಗುತ್ತದೆ. ಆದರೆ ವಿದ್ವಾಂಸರಿಗೆ 'ಹೇತು'ವನ್ನು ಮಾತ್ರ ಹೇಳಲಾಗುತ್ತದೆ. ಅಲ್ಲದೆ ಇಲ್ಲಿ ಪ್ರಯುಕ್ತವಾಗಿರುವ ಶಬ್ದರೂಪಗಳು ಕ್ರಮಬದ್ಧವಾಗಿಲ್ಲ. 'ವಿದಧತಿ' ಎಂಬ ಪದದೊಂದಿಗೆ ಸೇರಿಕೊಂಡಿರುವ 'ವಿ' ಉಪಸರ್ಗವು ಮಾಡು (ಕರೋತಿ) ಎನ್ನುವ ಅರ್ಥವನ್ನು ಹೊಂದಿದೆ. ಆದರೆ ಪ್ರಕಾಶ ಸ್ವಾಭಾವ್ಯಂ ವಿದಧತಿ ನ (ವಸುಗಳು ಬೆಳಗುವ ಸ್ವಭಾವವನ್ನು ತೋರುವುದಿಲ್ಲ) ಎಂಬ ವಾಕ್ಯದಲ್ಲಿ ಆ ಅರ್ಥವು ಎಷ್ಟು ಮಾತ್ರಕ್ಕೂ ಹೊಂದಿಕೆಯಾಗುವುದಿಲ್ಲ. 'ಪ್ರಕಾಶ ಸ್ವಾಭಾವ್ಯ' ಎಂಬ ಶಬ್ದಪ್ರಯೋಗ ಕೂಡ ಅಪರಿಷ್ಕೃತವೇ. ಪ್ರಕಾಶವು ಯಾರ ಸ್ವಭಾವವಾಗಿದೆಯೋ ಅವನು ಪ್ರಕಾಶ ಸ್ವಭಾವ ಎಂದು ಮಾಡಿದಾಗ, ಸಂಸ್ಕೃತ ವ್ಯಾಕರಣ ನಿಯಮದ ಮೇರೆಗೆ ಅದಕ್ಕೆ ಭಾವನಾಮ ರೂಪ ಕೊಟ್ಟಾಗ ಅದು ಪ್ರಾಕಾಶ 'ಸ್ವಾಭಾವ್ಯ' ಎಂಬ ರೂಪವನ್ನು ಪಡೆದುಕೊಳ್ಳುತ್ತದೆ. 'ಸ್ವಭಾವ' ಎಂಬ ಶಬ್ದದ ಭಾವನಾಮರೂಪ 'ಸ್ವಾಭಾವ್ಯ' ಎಂದಾಗುತ್ತದೆ. 'ಪ್ರಾಕಾಶ' ಎಂದು ಮಾಡದಿದ್ದರೆ ಈಗಾಗಲೇ ಭಾವನಾಮ ರೂಪದಲ್ಲಿರುವ ಪದದಿಂದಲೇ ಮತ್ತೊಂದು ಭಾವನಾಮರೂಪ ಶಬ್ದ ಸೃಷ್ಟಿಸಬೇಕಾಗುತ್ತದೆ. ಇದು ಪ್ರಯೋಗದಲ್ಲಿರುವಂಥದಲ್ಲ.

ಮೇಲಿನ ಶ್ಲೋಕದ ತೃತೀಯ ಚರಣದಲ್ಲಿ ಪ್ರಯುಕ್ತವಾಗಿರುವ ಅತಿ ದೀರ್ಘ ಸಮಾಸಘಟಿತ ಪದವು (ಗುಣಾಢ್ಯಾಸಾಭ್ಯಾಸವ್ಯಸನ) ಅತ್ಯಂತ ಕ್ಲಿಷ್ಟಕರವೂ ಕಾವ್ಯ ತತ್ತ್ವಜ್ಞರಿಗೆ ಆಹ್ಲಾದಕರ ವಲ್ಲದುದೂ ಆಗಿದೆ. ಕೊನೆಯ ಚರಣದಲ್ಲಿರುವ 'ರವಿ ವ್ಯಾಪಾರ' ಎಂಬ ಸಮಾಸ ಶಬ್ದದಲ್ಲಿ "ವ್ಯಾಪಾರ" ಎಂಬ ಶಬ್ದದ ಮೇಲೆಯೇ ಹೆಚ್ಚು ಒತ್ತುಬಿದ್ದು 'ರವಿ' ಶಬ್ದ ಪ್ರಧಾನವೇ ಎಂಬುದು ಕವಿಯ ಅಭಿಮತವಾಗಿದ್ದರೂ ಅದನ್ನು ಗೌಣಗೊಳಿಸಿರುವುದನ್ನು ತಪ್ಪಿಸಲಾಗಿಲ್ಲ. "ರವೇ: ವ್ಯಾಪಾರ": ಎಂದು ಸಮಾಸ ಮಾಡದೆ ಹಾಗೆಯೇ ಇಟ್ಟಿದ್ದರೆ, ಆಗ ಛಂದೋಭಂಗವೂ ಆಗುತ್ತಿರ ಲಿಲ್ಲ; ರವಿ ಶಬ್ದದ ಪ್ರಾಧಾನ್ಯವೂ ಉಳಿಯುತ್ತಿತ್ತು. ಹೀಗೆಂದು ಕುಂತಕನ ಅಭಿಮತ. (ಮೇಲೆ ಹೇಳಿದ ದೋಷಗಳ ಕಾರಣದಿಂದಾಗಿ ಶೋಭಾತಿಶಯ ಶೂನ್ಯವಾಗಿ ಈ ಶ್ಲೋಕ ಕಾವ್ಯವಾಗಿಲ್ಲ)

ಅಲಂಕಾರ ಶೂನ್ಯವಾದ ಕೇವಲ ವಸ್ತುವೊಂದೇ ಕಾವ್ಯ ರಸಿಕನಿಗೆ ಆನಂದ ಉಂಟು ಮಾಡಲು ಸಾಧ್ಯವೆ ಎಂಬ ಪ್ರಶ್ನೆಗೆ ಉತ್ತರಿಸಬೇಕಾಗಿದೆ. ವಾಸ್ತವದಲ್ಲಿ ಈ ಆಕ್ಷೇಪದಲ್ಲಿ ಹುರುಳಿಲ್ಲ. ಕಾರಣ, ಇಲ್ಲಿ ಕವಿಯ ಮನಸ್ಸಿನಲ್ಲಿ ಅಪ್ರಸ್ತುತ ಪ್ರಶಂಸೆ ಎಂಬ ಅಲಂಕಾರ ಸುಳುಹುದೋರಿದೆ. ಎಲ್ಲಕ್ಕಿಂತ ಮುಖ್ಯವಾಗಿ ಒತ್ತಿ ಹೇಳಬೇಕಾದ್ದೆಂದರೆ, ಕವಿಯ ಮನಸ್ಸಿನಲ್ಲಿ ಪ್ರತಿಭಾ ವ್ಯಾಪಾರದಿಂದ ಒಂದು ಅರ್ಥ ಮೊದಲು ಕಾಣಿಸಿಕೊಂಡಾಗ, ಆಗ ತಾನೆ ಗಣಿಯಿಂದ ತೆಗೆದ ಮಣಿ ಹೇಗೆ

ಒಂದು ಪಾಶಾಣ ಶಕಲದಂತೆ (ಕಲ್ಲಿನ ಚೂರು) ತೋರುವುದೋ ಹಾಗೆ ಇರುತ್ತದೆ. ಅದು ವಿದಗ್ಧನಾದ ಕವಿಯ ವಕ್ರೋಕ್ತಿಯಲ್ಲಿ ರೂಪುಗೊಂಡಾಗ ಸಾಣೆಗೆ ಕೊಟ್ಟು ಬಿಡಿಸಿದ ಅಮೂಲ್ಯ ವಜ್ರದ ಹಾಗೆ ಹೊಳಪು ಗೂಡಿ ರಮಣೀಯವಾಗುತ್ತದೆ ಮತ್ತು ಕಾವ್ಯರಸಿಕರಿಗೆ ಆಹ್ಲಾದ ಉಂಟುಮಾಡುವಂಥದಾಗುತ್ತದೆ. ಇದೇ ಕಾರಣದಿಂದಲೇ ವಸ್ತು ಅದೇ ಆದರೂ ಕಾವ್ಯ ಕಲೆಯಲ್ಲಿ ಈಗಾಗಲೇ ಪರಿಣತನೆನಿಸಿದ ಕವಿಗೂ ಹೊಸಬನಿಗೂ ಅವರ ರಚನೆಗಳಲ್ಲಿ ಅಗಾಧ ಅಂತರವಿರುವುದು ಕಂಡು ಬರುತ್ತದೆ. ಈ ಕೆಳಗಿನ ಎರಡು ಶ್ಲೋಕಗಳು ಈ ಬಗೆಯ ಅಂತರವನ್ನು ಚೆನ್ನಾಗಿ ಮನವರಿಕೆ ಮಾಡಿಕೊಡುತ್ತವೆ.

ಮಾನಿನೀಜನ ವಿಲೋಚನ ಪಾತಾ–
ನುಷ್ಣ ಬಾಷ್ಪ ಕಲುಷಾನನು ಗೃಹ್ಣನ್|
ಮಂದಮಂದ ಮುದಿತಃ ಪ್ರಯಯೌ ಖಂ
ಭೀತ ಭೀತ ಇವಶೀತ ಮಯೂಖಃ [೧೩]

ಮಾನಿನಿಯರ ಕಣ್ಗಳಿಂದೊ
ಡನೊಡನುಗುವ ತಪ್ತಾಶ್ರುಜಲದೆ ಕಲುಷಿತಮಾ
ದಾನೋಟಕೆ ಸಿಲುಕುತೆ ಭೀ
ತನವೋಲ್ ತಂಗದಿರನು ಮೆಲು ಮೆಲನುದಯಿಸಿದಂ

ಕ್ರಮಾದೇಕ ದ್ವಿತ್ರಿ ಪ್ರಭೃತಿ ಪರಿಪಾಟೀಃ ಪ್ರಕಟಯನ್
ಕಲಾಃ ಸ್ವೈರಂ ಸ್ವೈರಂ ನವಕಮಲ ಕಂದಾಂಕುರ ರುಚಃ|
ಪುರಂಧ್ರೀಣಾಂ ಪ್ರೇಯೋ ವಿರಹ ದಹನೋದ್ದೀಪಿತ ದೃಶಾಂ
ಕಟಾಕ್ಷೇಭ್ಯೋ ಬಿಭ್ಯನ್ನಿಭೃತ ಇವ ಚಂದ್ರೋಽಭ್ಯುದಯತೇ|| [೧೪]

ಪ್ರಿಯರ ವಿರಹದಲಿ ಉರಿವ ಕಣ್ಗಳ
ನೋಟದ ನಾರಿಯರ
ಕಡೆಗಣ್ಣ ನೋಟಕೆ ಹೆದರಿದ ಚಂದಿರನು
ಕಮಲ ಪುಷ್ಪದ ಗೆಡ್ಡೆಯ
ಅಂಕುರಗಳೊ ಎನೆ
ಹೊಳೆಯುವ ತನ್ನಯ ಕಲೆಗಳನು
ಒಂದೆರಡು ಮೂರೆಂದು ಒಂದೊಂದಾಗಿಯೆ
ತೆರೆದು ತೋರುತಲಿ
ಅತಿ ವಿನೀತನಂತೆಯೆ ಉದಿಸುತಿಹನದೋ||೧೪||

ಈ ಎರಡೂ ಪದ್ಯಗಳಲ್ಲಿ ಕಂಡು ಬರುವ ಅಂತರವು ಸಹೃದಯರ ಹೃದಯ ಸಂವೇದನೆಗೆ ನಿಲುಕುವ ಕಾರಣ ಇನ್ನಾವ ವಿವರಣೆಯೂ ಬೇಕಿಲ್ಲ.

ಆದ್ದರಿಂದ ರಮಣೀಯತೆಯಿಂದ ವಿಶಿಷ್ಟವಾದ ಕೇವಲ ಶಬ್ದವಾಗಲಿ ಅಥವಾ ಕೇವಲ ಅರ್ಥವಾಗಲಿ ನಿಜವಾದ ಕಾವ್ಯವೆನಿಸುವುದಿಲ್ಲ. (ಅರ್ಥಾತ್ ಅವೆರಡೂ ಕೂಡಿಯೇ ಕಾವ್ಯವಾಗುತ್ತದೆ)

ಆದ್ದರಿಂದಲೇ ಈ ಮಾತು ಬಂದಿದೆ -

ರೂಪಕಾದಿರಲಂಕಾರಸ್ತಸ್ಯಾನ್ಯೈರ್ಬಹುಧೋದಿತಃ
ನ ಕಾಂತಮಪಿ ನಿರ್ಭೂಷಂ ವಿಭಾತಿ ವನಿತಾಮುಖಮ್ ||೧೫|| ೧೫

ಕಾವ್ಯಕ್ಕೆ 'ರೂಪಕ'ವೇ ಮೊದಲಾದವು ಅಲಂಕಾರಗಳೆಂದು ಕೆಲವರು ಹಲವಾರು ಪರಿಗಳಿಂದ ಹೇಳಿದ್ದಾರೆ. ಹೆಣ್ಣಿನ ಮುಖವು ಚೆನ್ನಾಗಿದ್ದರೂ ಒಡವೆಗಳೊಂದೂ ಇಲ್ಲದಿದ್ದರೆ ಶೋಭಿಸುವುದಿಲ್ಲ*

ರೂಪಕಾದಿಮಲಂಕಾರಂ ಬಾಹ್ಯಮಾಚಕ್ಷತೇ ಪರೇ|
ಸುಪಾಂ ತಿ ಜಾಂ ಚ ವ್ಯುತ್ಪತ್ತಿಂ ವಾಚಾಂ ವಾಂಛಂತ್ಯಲಂಕೃತಿಮ್||೧೬||

ರೂಪಕವೇ ಮೊದಲಾದುವು ಕಾವ್ಯದ ಬಾಹ್ಯ ಅಲಂಕಾರಗಳೆಂದು ಇತರರು ಹೇಳುತ್ತಾರೆ. ಇವರು ನಾಮ ವಿಭಕ್ತಿಗಳ ಮತ್ತು ಧಾತು ರೂಪಗಳ ವ್ಯಾಕರಣ ಶುದ್ಧಿಯನ್ನೇ ಮಾತುಗಳಿಗೆ ಅಲಂಕಾರವೆಂದು ಭಾವಿಸುತ್ತಾರೆ*

ತದೇತದಾಹುಃ ಸೌಶಬ್ದ್ಯಂ ನಾರ್ಥವ್ಯುತ್ಪತ್ತಿರೀದೃಶೀ
ಶಬ್ದಾಭಿಧೇಯಾಲಂಕಾರ ಭೇದಾದಿಷ್ಟಂ ದ್ವಯಂ ತು ನಃ ||೧೭||

ಇದನ್ನು (ವ್ಯಾಕರಣ ಶುದ್ಧಿಯನ್ನು) ಶಬ್ದಸೌಷ್ಠವವೆನ್ನುವರು. ಅರ್ಥದ ಸೊಗಸು ಇಂತಹುದಲ್ಲ; ನಮಗೆ ಒಪ್ಪಿಗೆಯಾದ ಅಲಂಕಾರವು ಶಬ್ದಾಲಂಕಾರ, ಅರ್ಥಾಲಂಕಾರ ಎಂದು ಇಬ್ಬಗೆಯಾಗಿದೆ.*

ಆದ್ದರಿಂದ ಶಬ್ದ ಮತ್ತು ಅರ್ಥಗಳೆರಡೂ ಒಟ್ಟಾಗಿ ಸೇರಿಯೇ ಕಾವ್ಯವಾಗುತ್ತದೆ ಎಂಬುದು ಸುನಿಶ್ಚಿತವಾಯಿತು. ಇದು ಸ್ಥಾಪಿತವಾದ ಮೇಲೆ ಶಬ್ದ ಅಥವಾ ಅರ್ಥ ಇವೆರಡರಲ್ಲಿ ಯಾವುದಾದರೊಂದರಲ್ಲಿ ಕಿಂಚಿತ್‌ನ್ಯೂನತೆ ಇದ್ದರೂ ಅದಕ್ಕೆ 'ಕಾವ್ಯ' ಎಂಬ ಮಾತು ಅನ್ವಯಿಸಿಬಿಡಬಹುದು (ಅದು ಅನುಚಿತ ಮತ್ತು ಅಭಿಪ್ರೇತವಲ್ಲ). ಹಾಗಾಗದಿರಲೆಂದೇ "ಸಹಿತೌ" ಎಂಬ ಮಾತನ್ನು ಬಳಸಿರುವುದು. ಅದರ ಉದ್ದೇಶ ಶಬ್ದ ಮತ್ತು ಅರ್ಥಗಳೆರಡೂ ಒಟ್ಟಾಗಿ ಸೇರಿಯೇ ಕಾವ್ಯವಾಗುತ್ತದೆ ಎನ್ನುವುದು. ಸಹಿತ ಭಾವದಿಂದಲೇ 'ಸಾಹಿತ್ಯ' (ಕಾವ್ಯ) ಸಿದ್ಧವಾಗುತ್ತದೆ.

ವಾಚ್ಯವಾಚಕ ಸಂಬಂಧ ಯಾವಾಗಲೂ ಇರುವುದರಿಂದ ಈ ಎರಡರಲ್ಲಿ (ಶಬ್ದ ಮತ್ತು ಅರ್ಥ) ಯಾವಾಗಲೂ ಸಹಿತಭಾವಕ್ಕೆ ಭಂಗಬರುವುದಿಲ್ಲವಲ್ಲವೆ ಎಂದು ಕೇಳಬಹುದು. ಅದು ನಿಜ. ಆದರೆ ಇಲ್ಲಿ ಹೇಳಲಾಗಿರುವ "ಸಹಿತತ್ವ" ವಿಶಿಷ್ಟ ಬಗೆಯದು. ಆ "ವಿಶಿಷ್ಟತೆ" ಯಾವುವೆಂದರೆ ವಿಚಿತ್ರ ಗುಣ ಮತ್ತು ಅಲಂಕಾರಗಳ ಸಂಪತ್ತಿನಿಂದ ಕೂಡಿದ ವಕ್ರತೆಗಳು ಒಂದರೊಡನೊಂದು ಪರಸ್ಪರ ಅತ್ಯುನ್ನತವಾಗಿ ಸ್ಪರ್ಧಿಸುತ್ತಿರುವ ಸಂದರ್ಭದ್ದು.

* ಭಾಮಹನ ಕಾವ್ಯಾಲಂಕಾರ - 1, 13 - 15 (ಕನ್ನಡ ಅನು. ಡಾ. ಕೆ. ಕೃಷ್ಣಮೂರ್ತಿ ಪುಟ 7-8)

ಸಮ ಸರ್ವಗುಣೌ ಸಂತೌ ಸುಹೃದಾವಿವ ಸಂಗತೌ|
ಪರಸ್ಪರಸ್ಯ ಶೋಭಾಯೈ ಶಬ್ದಾರ್ಥೌ ಭವತೋ ಯಥಾ ||೧೮||

ಸರ್ವಗುಣಗಳಲ್ಲಿ ಸಮನಾಗಿರುವ ಜೀವದ ಗೆಳೆಯರಿಬ್ಬರು ಪರಸ್ಪರ ಹೊಂದಿಕೊಂಡಿರುವಂತೆ (ಮಾಧುರ್ಯಾದಿ) ಸಮಸ್ತ ಗುಣಗಳಲ್ಲಿ ಸಮಾನವಾಗಿರುವ ಶಬ್ದ ಮತ್ತು ಅರ್ಥಗಳೆರಡೂ ಒಂದು ಮತ್ತೊಂದನ್ನು ಸುಂದರಗೊಳಿಸಲು ಪರಸ್ಪರ ಒಟ್ಟಾಗಿ ಸೇರುತ್ತವೆ [೧೮-]

ಉದಾಹರಣೆಗೆ

[ತತೋಽರುಣ ಪರಿಸ್ಪಂದ ಮಂದೀಕೃತ ವಪುಃ ಶಶೀ|
ದಧ್ರೇ ಕಾಮ ಪರಿಕ್ಷಾಮ ಕಾಮಿನೀ ಗಂಡಪಾಂಡುತಾಮ್ ||೧೯||

ಅರುಣನ ಸಂಚರಣದಿಂದೆ
ಉರುಮಂದ ಪ್ರಭೆಯನಾಂತ ರಜನೀನಾಥಂ
ಸ್ಮರತಾಪದೆ ಕಡುನವೆದಿಹ
ತರುಣಿಯ ಕಪೋಲದ ತೆರದೆ ಪಾಂಡುರನಾದಂ ||೧೯||

ಈ ವರ್ಣನೆಯಲ್ಲಿ ಅರುಣನ ಸಂಚರಣದಿಂದ ಕಾಂತಿಹೀನನಾದ ಚಂದ್ರನನ್ನು, ಕಾಮನ ದೆಸೆಯಿಂದಾಗಿ ಕ್ಷೀಣಶರೀರಳಾದ ಕಾಮಿನಿಯ ಪಾಂಡುರ ಕಪೋಲಕ್ಕೆ ಹೋಲಿಸುತ್ತ ಅವರಿಬ್ಬರ ಬಿಳುಪಿನ ಪರಸ್ಪರ ಸಮಾನತೆಯನ್ನು ಒತ್ತಿ ಹೇಳಲಾಗಿದೆ. ಹೀಗೆ ಮಾಡಿದ್ದರಿಂದ ಅರ್ಥಾಂಲಂಕಾರದ (ಉಪಮಾಲಂಕಾರದ) ಪರಿಪೋಷಣೆಯಾಗಿ ಅಧಿಕ ಸೌಂದರ್ಯಕ್ಕೆ ಕಾರಣವಾಗಿದೆ. ಜೊತೆಯಲ್ಲೇ ಮುಂದೆ ಹೇಳಲಾಗುವ ವರ್ಣ ವಿನ್ಯಾಸ ವಕ್ರತಾರೂಪದ ಶಬ್ದಾಲಂಕಾರವೂ ಅತ್ಯಂತ ರಮಣೀಯವೆನಿಸಿದೆ (ಇತರೆ ಆಲಂಕಾರಿಕರ ಪ್ರಕಾರ ಇದು ಅನುಪ್ರಾಸಾಲಂಕಾರ). - ವರ್ಣ ವಿನ್ಯಾಸ ಶೋಭೆಯಿಂದಾಗಿ ಉಂಟಾಗಿರುವ ಲಾವಣ್ಯಗುಣ ಸಂಪತ್ತಂತೂ ಇದ್ದೇ ಇದೆ.

[ಇದು ಗುಣ, ಶಬ್ದಾಲಂಕಾರ, ಮತ್ತು ಅರ್ಥಾಲಂಕಾರ ಎಲ್ಲವೂ ಪರಸ್ಪರ ಸ್ಪರ್ದೆಯಲ್ಲಿ ತೊಡಗಿರುವ ಶಬ್ದಾರ್ಥ ಸಹಿತತ್ವದ ಸೂಚಕ. ಹಾಗಾಗಿ ಕುಂತಕನ ದೃಷ್ಟಿಯಲ್ಲಿ ಇದು ಸುಂದರ ಕಾವ್ಯಕ್ಕೆ ಉದಾಹರಣೆಯೆನಿಸಿದೆ]

ಇನ್ನೊಂದು ಉದಾಹರಣೆ

[ಲೀಲಾಏ ಕುವಲಅಂ ಕುವಲಅಂ ವ ಸೀಸೇ ಸಮುವ್ವಹಂತೇಣ|
ಸೇಸೇಣ ಸೇಸಪುರಿಸಾಣಂ ಪುರಿಸಆರೋ ಸಮುವ್ವಸಿ ಓ] [ಪ್ರಾಕೃತ]
ಲೀಲಯಾ ಕುವಲಯಂ ಕುವಲಯಮಿವ ಶೀರ್ಷೇ ಸಮುದ್ವಹತಾ
ಶೇಷೇಣ ಶೇಷ ಪುರುಷಾಣಾಂ ಪುರುಷಕಾರಃ ಸಮುದ್ವಸಿತಃ[೨೦] [ಸಂಸ್ಕೃತ ಛಾಯೆ]

[ಗಾಹಾರಯಣಕೋಸದಲ್ಲಿ ಉದ್ಧೃತ]

ಕುವಲಯನು ತಾನಿದೆಂಬೊಲು
ಕುವಲಯಮಂ ಶಿರದೊಳ್ ಸಲ್ಲೀಲೆಯಿನೆನೆ ತಾ

ಳ್ದುವ ಶೇಷನ ನೋಡೆ ಆಶೇ
ಷವೆನಿಸಿದ ಪುರುಷರ ಪೌರುಷಮನೇಳಿಸುವನ್

ಈ ಪದ್ಯದಲ್ಲಿ ಅಪ್ರಸ್ತುತ ಪ್ರಶಂಸೆ ಮತ್ತು ಉಪಮಾದಿ ಅಲಂಕಾರಗಳ ವೈಚಿತ್ರ್ಯದಿಂದ ಉತ್ಪನ್ನವಾದ ಹಾಗೂ ನಿರಾಯಾಸದಿಂದ ರಚಿತವಾಗಿರುವ ಸಮರ್ಪಕವೂ ಸುಭಗವೂ ಆದ ಯಮಕ ಮತ್ತು ಅನುಪ್ರಾಸಾದಿ ಶಬ್ದಾಲಂಕಾರಗಳ ಕಾವ್ಯಸೌಂದರ್ಯವು ವಿಶಿಷ್ಟ ರೀತಿಯಲ್ಲಿ ಸಹೃದಯರಿಗೆ ಆಹ್ಲಾದವನ್ನುಂಟುಮಾಡುತ್ತದೆ.

ಕಾರಿಕೆಯಲ್ಲಿ (ಶಬ್ದಾರ್ಥೌಸಹಿತೌ...) ದ್ವಿವಚನವನ್ನು ಬಳಸಿರುವುದು, ಶಬ್ದ ಮತ್ತು ಅರ್ಥಗಳ ಜಾತಿಗತ ದ್ವಿತ್ವವನ್ನು ಹೇಳುವುದಕ್ಕಾಗಿ. [ವ್ಯಕ್ತಿಗತ ಅರ್ಥಾತ್ ಒಂದೇ ಪದದಲ್ಲಿರುವ ಶಬ್ದ ಮತ್ತು ಅರ್ಥದ ಸಹಿತತ್ವ ಅಲ್ಲ. ವಾಕ್ಯದಲ್ಲಿ ಪ್ರಯುಕ್ತವಾದ ಅನೇಕ ಶಬ್ದ ಮತ್ತು ಅರ್ಥದ ಸಹಿತತ್ವ ಇರಬೇಕು] ಒಂದೇ ಅರ್ಥಪೂರ್ಣ ಶಬ್ದವೂ ಕಾವ್ಯವಾಗಬೇಕಾಗುತ್ತದೆ. ಆದ್ದರಿಂದಲೇ ಗ್ರಂಥ ಕರ್ತೃ "ಬಂಧೇ ವ್ಯವಸ್ಥಿತೌ" ಎಂದು ಹೇಳಿರುವುದು [ಬಂಧದಲ್ಲಿ ವ್ಯವಸ್ಥಿತಗೊಂಡ ಶಬ್ದ ಮತ್ತು ಅರ್ಥಗಳು ಸೇರಿ ಕಾವ್ಯವಾಗುತ್ತವೆ ಎಂದು ವಿಶೇಷ ಒತ್ತು ಕೊಟ್ಟು ಹೇಳಿರುವುದು]. ಬಂಧವೆಂದರೆ ವಾಕ್ಯಗಳ ವಿನ್ಯಾಸ. ಅದರಲ್ಲಿ ವ್ಯವಸ್ಥಿತಗೊಂಡದ್ದು ಎಂದರೆ ವಿಶೇಷ ಲಾವಾಣ್ಯಾದಿ ಗುಣಾಲಂಕಾರಗಳ ರಚನೆಯ ರೂಪದಲ್ಲಿ ನೆಲೆ ನಿಂತದ್ದು. ಕಾರಿಕೆಯಲ್ಲಿ ಹೇಳಲಾಗಿರುವ 'ಸಹಿತೌ' ಎಂಬ ಮಾತಿನ ಅಭೀಷ್ಟವಾದರೂ ಒಂದು ಶಬ್ದಕ್ಕೂ ಮತ್ತೊಂದು ಶಬ್ದಕ್ಕೂ ಹಾಗೂ ಒಂದು ಅರ್ಥಕ್ಕೂ ಮತ್ತೊಂದು ಅರ್ಥಕ್ಕೂ ಇರುವ ಪರಸ್ಪರ ಹೊಂದಾಣಿಕೆ ಎಂಬುದೇ ಆಗಿದೆ. ಸೌಂದರ್ಯಕ್ಕೆ ಸಂಬಂಧಿಸಿದಂತೆ ಪರಸ್ಪರ ಸ್ಪರ್ಧೆಯೇ ಅದರ ರೀತಿ. ಮೇಲೆ ಹೇಳಿದ ರೀತಿಯಲ್ಲಿ ಒಂದು ಶಬ್ದಕ್ಕೂ ಇನ್ನೊಂದು ಶಬ್ದಕ್ಕೂ ಹಾಗೂ ಒಂದು ಅರ್ಥಕ್ಕೂ ಇನ್ನೊಂದು ಅರ್ಥಕ್ಕೂ ಪರಸ್ಪರ ಸ್ಪರ್ಧೆಯಿಂದ ಕೂಡಿದ ಸಾಮರಸ್ಯ ಇಲ್ಲದೆ ಹೋದಲ್ಲಿ ಅದು ಕಾವ್ಯರಸಿಕರಿಗೆ ಆಹ್ಲಾದವುಂಟು ಮಾಡುವಲ್ಲಿ ಸಾರ್ಥಕವಾಗುವುದಿಲ್ಲ. ಉದಾಹರಣೆಗೆ ಭವಭೂತಿಯ 'ಮಾಲತೀಮಾಧವ' ನಾಟಕದಲ್ಲಿ ಮಾಧವನು ಕಾಪಾಲಿಕನಿಗೆ ಹೇಳುತ್ತಾನೆ.

ಅಸಾರಂ ಸಂಸಾರಂ ಪರಿಮುಷಿತ ರತ್ನಂ ತ್ರಿಭುವನಂ
ನಿರಾಲೋಕಂ ಲೋಕಂ ಮರಣಶರಣಂ ಬಾಂಧವ ಜನಂ|
ಅದರ್ಪಂ ಕಂದರ್ಪಂ ಜನನಯನ ನಿರ್ಮಾಣಮಫಲಂ
ಜಗಜ್ಜೀರ್ಣಾರಣ್ಯಂ ಕಥಮಸಿ ವಿಧಾತುಂ ವ್ಯವಸಿತಃ[೨೧]

[ಮಾಲತೀಮಾಧವ 5-30]

ಈ ಹೀನ ಕೃತ್ಯವನು ನೀ ಗೈದೆಯಾದೊಡೆ
ಬದುಕಿಗಿನ್ನಿರದು ಜೀವಂತಿಕೆ
ವಿಶ್ವವಾಗುವುದಲ್ತೆ ಅಮೂಲ್ಯ ರತ್ನಹೀನ

ಲೋಕಕ್ಕೆ ಆಲೋಕವಿನ್ನಿಲ್ಲವು.
ಬಂಧುಗಳಿಗಾದರೋ ಮರಣವೊಂದೇ ಶರಣು
ಕಂದರ್ಪನಾಗುವನು ದರ್ಪ ಹೀನ
ಜನರ ಕಣ್ಣಿದ್ದು ನಿಷ್ಫಲವು
ಜಗವಾಗುವುದಲ್ತೆ ನಿರ್ಜೀವ ಕಾನನವು [೨೧]

ಭವಭೂತಿಯ ಮಾಲತೀ ಮಾಧವ ನಾಟಕದಿಂದ ಇದನ್ನು ತೆಗೆದುಕೊಳ್ಳಲಾಗಿದೆ. ಯುವತಿಯೊಬ್ಬಳನ್ನು (ಮಾಲತಿ) ವಧಿಸಲು ಸಿದ್ಧನಾಗಿ ನಿಂತಿರುವ ಕಾಪಾಲಿಕನನ್ನು ಕುರಿತು, ನಾಯಕನು ಈ ಮಾತುಗಳನ್ನು ಹೇಳುತ್ತಾನೆ. ಈಕೆ ಇನ್ನಿಲ್ಲವಾದರೆ, ಜೀವನವು ಜೀವಂತಿಕೆ ಕಳೆದುಕೊಂಡು ನಿಸ್ಸಾರವಾದಂತೆ. ವಿಶ್ವದ ಅಮೂಲ್ಯ ರತ್ನವು ಕಳುವಾದಂತೆ. ಮಾನವ ಲೋಕವು ವಿಶ್ವಮೋಹಕ ದೃಶ್ಯದಿಂದ ವರ್ಜಿತವಾದಂತೆ. ಜಗತ್ತಿನ ಜನಗಳೆಲ್ಲರ ಕಣ್ಣಿನ ಸೃಷ್ಟಿಯೇ ವ್ಯರ್ಥವಾದಂತೆ. ವಿಶ್ವ ವಿಜಯಿಯೆಂಬ ದರ್ಪದಿಂದ ಬೀಗುವ ಮನ್ಮಥನ ದರ್ಪನಾಶವಾದಂತೆ. ಇಡೀ ಪ್ರಪಂಚವೆಲ್ಲವೂ - ಹಾಳುಬಿದ್ದ ಅರಣ್ಯದಂತೆ ಹೀನವಾಗುವುದು. ಆದ್ದರಿಂದ ಇಂಥ ಅನರ್ಥಕಾರಿ ಹೀನ ಕೃತ್ಯವನ್ನು ಮಾಡಲೇಕೆ ಹೊರಟಿರುವೆ? - ಎಂದು

ಇಡೀ ಪದ್ಯವನ್ನು ಅನೇಕ ಸಣ್ಣ ಸಣ್ಣ ವಾಕ್ಯ ಘಟಕಗಳಿಂದ ಕೂಡಿದ ಒಂದು ದೀರ್ಘ ವಾಕ್ಯವಾಗಿ ಪರಿಗಣಿಸಬಹುದು. ಪ್ರತಿಯೊಂದು ವಾಕ್ಯ ಘಟಕವೂ, ಲೋಕವೆಲ್ಲವೂ ಅಸೂಯೆ ಪಡುವಷ್ಟು ಸುಂದರಿಯೂ ಕೀರ್ತಿಶಾಲಿಯೂ ಆದ ನಾಯಿಕೆ ಮಾಲತಿಯ ಸೌಂದರ್ಯವನ್ನು ಪ್ರತಿಪಾದಿಸುವಲ್ಲಿ ಇನ್ನೊಂದರೊಡನೆ ಸ್ಪರ್ಧಿಸುತ್ತಿರುವಂತಿದೆ. ಹಾಗಾಗಿ ಅವೆಲ್ಲವೂ ಅತ್ಯಂತ ರಮಣೀಯ ರಚನೆಗಳೆನಿಸಿ, ಒಟ್ಟು ಕಾವ್ಯದ ಶೋಭೆಯನ್ನು ಪೋಷಿಸುತ್ತಿವೆ. "ಮರಣ ಶರಣಂ ಬಾಂಧವ ಜನಂ" (ಬಂಧುಗಳಿಗಾದರೂ ಮರಣವೊಂದೇ ಶರಣು) ಎಂಬ ವಾಕ್ಯ ಘಟಕವೊಂದು ಮಾತ್ರ, ಇತರೆ ವಾಕ್ಯಗಳ ಜೊತೆ ನಿಲ್ಲಲಾರದು ಮತ್ತು ಪದ್ಯದ ಸೌಂದರ್ಯವನ್ನು ಹೆಚ್ಚಿಸುವಲ್ಲಿ ಇತರೆ ವಾಕ್ಯಗಳೊಂದಿಗೆ ಎಷ್ಟು ಮಾತ್ರಕ್ಕೂ ಸ್ಪರ್ಧಿಸಲಾರದು. ಆದ ಕಾರಣ ಅದು ವಿದ್ವದ್ರಸಿಕರಿಗೆ ಆಹ್ಲಾದಕಾರಿಯಲ್ಲ. ಕವಿಯ ಸೃಜನಶೀಲ ಪ್ರತಿಭೆಯಿಂದ ರಮಣೀಯವೆನಿಸಿದ ಹಲವಾರು ಪ್ರತಿಮೆಗಳು (ಚಿತ್ರಗಳು) ವಿಚಾರವೊಂದನ್ನು ಹರಳು ಗಟ್ಟಿಸುವ ರೂಪದಲ್ಲಿ ಹೊರಹೊಮ್ಮಿ ಒಂದು ವಾಕ್ಯರೂಪವನ್ನು ತಾಳುವಾಗ, ಕಾವ್ಯದ ಛಂದೋರೂಪ ಇನ್ನೊಂದು ಅಥವಾ ಹಲವು ಪ್ರತಿಮೆಗಳ ಮಟ್ಟಕ್ಕೆ ಸರಿಸಮನಾಗಿ ನಿಲ್ಲಬಹುದಾದಂಥ ಪ್ರತಿಮೆಯನ್ನು ಪಡೆಯುವ ಸಲುವಾಗಿ ಬುದ್ಧಿಯು ಪ್ರತಿಭೆಯನ್ನು ಪ್ರಚೋದಿಸಬೇಕಾಗುತ್ತದೆ. ಇಡೀ ಶ್ಲೋಕದಲ್ಲಿ ಇತರೆ ವಾಕ್ಯ ಘಟಕಗಳೊಂದಿಗೆ ಹೆಗಲೆಣೆಯಾಗಿ ನಿಲ್ಲಬಲ್ಲ ರೀತಿಯಲ್ಲಿ 'ಮರಣ ಶರಣಂ...' ಇದನ್ನು ಪರಿಷ್ಕರಿಸುವುದೇನೂ ಕಷ್ಟವಲ್ಲ - 'ವಿಧಿಮಪಿ ವಿಪನ್ನಾದ್ಭುತ ವಿಧಿಮ್' ಎಂಬಂತೆ (ಅರ್ಥಾತ್ - "ತನ್ನದ್ಭುತ ನಿರ್ಮಿತಿಯ ಮೃತಿಯಿಂ ಬೊಮ್ಮನುಂ ಬಿನ್ನನಾದನು")

ಮೊದಲು, ಪ್ರತಿಭೆಯ ಉನ್ನತ ಸ್ತರದಲ್ಲಿ ನಿರ್ಮಿಸಿದಷ್ಟೇ ರಮಣೀಯವಾದ ಪ್ರತಿಮೆಗಳನ್ನು ಇನ್ನು ನಿರ್ಮಿಸಲು ಸಾಧ್ಯವಿಲ್ಲ ಎನಿಸಿದಾಗ ಕವಿಗಳು, ತಮ್ಮ ಕವನಗಳಿಗೆ ಸುಕುಮಾರ ತರವಾದ

ಅಪೂರ್ವ ಸೌಂದರ್ಯ ಛಾಯೆಗಳನ್ನು ಕಲ್ಪಿಸುವುದರಲ್ಲಿ ತೊಡಗುತ್ತಾರೆ.

ಉದಾ :

ರುದ್ರಾದ್ರೇಸ್ತುಲನಂ ಸ್ವಕಂಠವಿಪಿನೋಚ್ಛೇದೋ ಹರೇರ್ವಾಸನಂ
ಕಾರಾವೇಶ್ಮನಿ ಪುಷ್ಪಕಾಪ ಹರಣಂ [೨೨]

[ಬಾಲರಾಮಾಯಣ 1-51]

ವರಕೈಲಾಸ ಪರ್ವತವ
ತನ್ನ ಕೈಗಳಿಂದೆತ್ತಿದುದು
ತನ್ನದೇ ದಶಶಿರವನವ ತುಂಡರಿಸಿದುದು
ದೇವರಾಜನನು ಸೆರೆಯಿಟ್ಟುದು
ಕುಬೇರನ ಪುಷ್ಪಕವನು ಅಪಹರಿಸಿದುದು (೨೨)

ಈ ರೀತಿ (ರಾವಣನ ಪರಾಕ್ರಮವನ್ನು ವರ್ಣಿಸುತ್ತ) ಸೃಜನಶೀಲ ಕ್ಷಣದಲ್ಲಿ ಪ್ರತಿಭಾಪೂರ್ಣ ಪ್ರತಿಮೆಗಳನ್ನು ಚಿತ್ರಿಸಿದ ನಂತರ, ಅದಕ್ಕೆ ಅನುರೂಪವಾದ ಅದೇ ಮಟ್ಟದ ಇನ್ನೊಂದು ಪ್ರತಿಮೆಯನ್ನು ಸೇರಿಸುವುದು ಅಸಂಭವವೆಂದು ತೋರಿದ್ದರಿಂದ "ಯಸ್ಯೈದೃಶಾಃ ಕೇಲಯ:" (ಇವೆಲ್ಲ ಯಾರಿಗೆ ಕೇವಲ ಕ್ರೀಡೆಗಳೋ) ಎಂಬ ಚಮತ್ಕಾರಕಾರಿ ರಚನೆಯನ್ನು ಮಾಡಿ ಅದಕ್ಕೆ ಬೇರೊಂದೇ ಆದ ಅಪೂರ್ವ ಶೋಭೆಯನ್ನು ತಂದು ಕೊಟ್ಟಿದ್ದಾನೆ.

ಇನ್ನೊಂದು ಉದಾಹರಣೆ:

ತದ್ವಕ್ತ್ರೇಂದು ವಿಲೋಕನೇನ ದಿವಸೋ ನೀತಃ ಪ್ರದೋಷಸ್ತಥಾ
ತದ್‌ಗೋಷ್ಠ್ಯೈವ ನಿಶಾಪಿ ಮನ್ಮಥ ಕೃತೋತ್ಸಾಹೈಸ್ತದಂಗಾರ್ಪಣೈಃ
ತಾಂ ಸಂಪ್ರತ್ಯಪಿ ಮಾರ್ಗದತ್ತ ನಯನಾಂ ದ್ರಷ್ಟುಂ ಪ್ರವೃತ್ತಸ್ಯ ಮೇ
ಬದ್ಧೋತ್ಕಂಠಮಿದಂ ಮನಃ ಕಿಮ್ [೨೩]
ಅವಳ ವದನೇಂದುವನೆ ನೋಡುವುದರಲಿ ಹಗಲು
ಸಾಗಿದುದು, ಸಂಜೆ ಮತ್ತವಳೊಂದಿಗೆ
ಕೇಳಿಯಲಿ, ನಿಶೆಕೂಡಮನ್ಮಥೋತ್ಸಾಹದೊಳು
ಮೈಗೆ ಮೈಯೊಪ್ಪಿಸುವ ಸಂಭ್ರಮದಲಿ
ಮತ್ತೀಗಳಿದೊ ನಟ್ಟನಯನದಲಿ ಹಾದಿಯನು
ಕಾದಿರುವಳನೆ ಕಾಣ ಹೊರಟ ನನಗೆ
ಏತಕಿನ್ನೂ ಚಿತ್ತ ತುಡಿಯುತಿದೆ?

[ಭಾರತೀಯ ಕಾವ್ಯಮೀಮಾಂಸೆ - ಪುಟ 174
- ತೀನಂಶ್ರೀ - 3ನೇ ಮುದ್ರಣ 68

ಹೀಗೆ ಈ ಸ್ಥಿತಿಯಲ್ಲಿರುವ (ನನ್ನ ನಿರೀಕ್ಷೆಯಲ್ಲಿ ಹಾದಿಯಲ್ಲೇ ಕಣ್ಣಿಟ್ಟು ಕಾದಿರುವ)

ಅವಳನ್ನು ಕಾಣಲು ಹೊರಟಿರುವ ನನ್ನ ಮನ ಏಕಿನ್ನೂ ತುಡಿಯುತಿದೆ" - ಎಂದು ಕವಿಯ ಆಲೋಚನೆ ಸಕಾರಣವಾಗಿಯೇ ಇಲ್ಲಿಗೆ (ವಾಕ್ಯದ ಕೊನೆಗೆ) ಮುಗಿಯಬೇಕು. ಕವಿ ಪ್ರತಿಭೆಯ ಹೊಳಹಿನಿಂದ ಅಲ್ಲಿಗೇ ನಿಲ್ಲದೆ, - "ಅಲ್ಲದಿರೆ ಪ್ರೇಮದುತ್ಸವವೆಲ್ಲ ಮುಗಿದಿಲ್ಲವೊ?" ಎಂಬ ವಾಕ್ಯ ವಿನ್ಯಾಸಗೊಂಡಿದೆ. ಇದರಿಂದ ಬೇರೊಂದೇ ರೀತಿಯಲ್ಲಿ ತನ್ನಲ್ಲೇ ಪೂರ್ಣವಾಗಿದ್ದ ಆಲೋಚನೆಗೆ ಹೊಸ ಜೀವ ಬಂದಂತಾಗಿದೆ.

ಮೇಲಿನ ಎರಡೂ ಉದಾಹರಣೆಗಳಲ್ಲಿ ಉತ್ಕೃಷ್ಟ ರೀತಿಯಲ್ಲಿ ಹೊಂದಿಕೆಯಾಗುವಂತೆ, ಎರಡು ವಿಚಾರಗಳನ್ನು ಅಳವಡಿಸಿ, ವಾಕ್ಯ ವಿನ್ಯಾಸಗೊಳಿಸಲಾಗಿದ್ದರೂ, ಕವಿ ಪ್ರತಿಭೆಯ ಪ್ರೌಢಿಮೆಯದೇ ಮೇಲ್ಮೈಯಾಗಿರುವುದನ್ನು ಕಾಣಬಹುದು.

"ಅಸಾರಂ ಸಂಸಾರಂ".... ಪದ್ಯದಲ್ಲಿ ಅರ್ಥದಲ್ಲಿ ಸಹಿತತ್ವ ಇಲ್ಲದೆ ಇರುವುದರ ಉದಾಹರಣೆಯನ್ನು ಕಂಡೆವು. ಇದೀಗ ಶಬ್ದಗಳಲ್ಲಿ ಸಹಿತತ್ವ (ಸಾಮರಸ್ಯ) ಗೈರು ಹಾಜರಾಗಿರುವುದನ್ನು ನೋಡೋಣ.

ಚಾರುತಾ ವಪುರಭೂಷಯದಾಸಾಂ ತಾಮನೂನ ನವಯೌವನಯೋಗಃ|
ತಂ ಪುನರ್ಮಕರ ಕೇತನಲಕ್ಷ್ಮೀಸ್ತಾಂ ಮದೋ ದಯಿತಸಂಗಮಭೂಷಃ [೨೪]

ಚೆಲುವು ತನುವನು ಸಿಂಗರಿಸಿರಲು
ಚೆಲುವ ನವಯೌವನವು
ಅದನು ಮದನ ಸಂಪದವು
ಆ ಮದನ ಸಂಪದವ
ಪ್ರಿಯನ ಸಂಗಮ ಭೂಷಣ ಮದವು [ಸಿಂಗರಿಸಿತು]೨೪

"ಪ್ರಿಯತಮನ ಸಂಗಮವು ಅದನ್ನು (ಮದನ ಶ್ರೀಯನ್ನು) ಸಿಂಗರಿಸಿತು" ಎಂದು ಹೇಳುವ ಜಾಗದಲ್ಲಿ ಕವಿಯು "ಪ್ರಿಯತಮನ ಸಂಗಮ ಭೂಷಣಮದವು" ಸಿಂಗರಿಸಿತು ಎಂದು ಹೇಳಿದ್ದಾನೆ ಮದ ಎಂಥದು ಎಂದರೆ, ಪ್ರಿಯತಮನ ಸಂಗಮವೇ ಯಾವುದಕ್ಕೆ ಭೂಷಣವಾಗಿದೆಯೋ ಅಂಥ "ಮದ" ಎಂದು. ಇಲ್ಲಿ 'ಪ್ರಿಯತಮನ ಸಂಗಮ ಭೂಷಣ ಮದ' ಎಂಬ ಸಮಾಸ ಪದದಲ್ಲಿ ಪ್ರಿಯತಮನ ಸಂಗಮ ಎಂಬುದು ಅಡಗಿ ಹಿನ್ನೆಲೆಗೆ ಸರಿದಿದೆ. ಈ ರೀತಿ ಪ್ರಾಧಾನ್ಯ ಸಿಗಬೇಕಾಗಿದ್ದ ಶಬ್ದವೊಂದು ಸಮಾಸದಲ್ಲಿ ಅಡಗಿ ಹೋಗಿ ಗೌಣಸ್ಥಾನಕ್ಕೆ ಸರಿದುಹೋಗುವುದು, ಕಾವ್ಯರಸಿಕರಿಗೆ ಆಹ್ಲಾದಕಾರಿಯಲ್ಲ. ಅಲ್ಲದೆ ಕಾವ್ಯಕ್ಕೆ ಶೋಭೆಯನ್ನು ತಂದು ಕೊಡಬೇಕೆಂಬ ಉದ್ದೇಶದಿಂದ ಕವಿ ಅಳವಡಿಸಿದ್ದ ದೀಪಕಾಲಂಕಾರವು, ರಚನಾ ನಿರ್ವಹಣ ಕಾಲದಲ್ಲಿ ಕೊನೆಕೊನೆಗೆ ಛಿದ್ರಗೊಂಡಿದೆ. ಶಬ್ದಪ್ರಯೋಗದಲ್ಲಿ ಕ್ರಮಭಂಗವಾಗಿರುವುದು ನಿಶ್ಚಿತವಾಗಿಯೂ ರಸಿಕರಿಗೆ ಅತೃಪ್ತಿಯನ್ನುಂಟು ಮಾಡುತ್ತದೆ. ಇದಕ್ಕಿಂತ ಸುಲಭವಾದ ಪಾಠವೆಂದರೆ "ದಯಿತಾ ಸಂಗತಿರೇನಂ" ಎಂಬ ಸಮಾಸರಹಿತ ಪಾಠ.

ಈ ಎರಡೂ ಉದಾಹರಣೆಗಳಲ್ಲಿ (21,24) ಅರ್ಥವೊಂದನ್ನೇ ಪ್ರತ್ಯೇಕವಾಗಿ

ತೆಗೆದುಕೊಂಡಾಗ, ಇನ್ನೊಂದು ಅರ್ಥದೊಂದಿಗೆ, ಅದೇ ರೀತಿ, ಶಬ್ದವೊಂದನ್ನೇ ಪ್ರತ್ಯೇಕವಾಗಿ ತೆಗೆದುಕೊಂಡಾಗ ಇನ್ನೊಂದು ಶಬ್ದದೊಂದಿಗೆ ಸಹಿತತ್ವವನ್ನು (ಸಾಮರಸ್ಯವನ್ನು) ಸಾಧಿಸುವಲ್ಲಿ ಹೇಗೆ ಯಶಸ್ವಿಯಾಗದೆ ಹೋಗಬಹುದೆಂಬುದನ್ನು ನೋಡಿದೆವು. ಹಾಗೆ ನೋಡಿದರೆ ಶಬ್ದ ಮತ್ತು ಅರ್ಥಗಳೆರಡೂ ಒಂದರೊಡನೊಂದು ಮಿಳಿತವಾಗಿರುವುದರಿಂದ, ಒಂದರಲ್ಲಿ (ಶಬ್ದ ಅಥವಾ ಅರ್ಥ) ಸಹಿತತ್ವದ ಅಭಾವವಿದೆ ಎಂದಾದರೆ ಇನ್ನೊಂದರಲ್ಲೂ (ಶಬ್ದ ಅಥವಾ ಅರ್ಥ) ಸಹಿತತ್ವದ ಅಭಾವವಿರುತ್ತದೆಂದೇ ಅರ್ಥ. ಹಾಗಾಗಿ ಅರ್ಥವೊಂದು ತನಗೆ ತಾನೇ ಎಷ್ಟೇ ಪ್ರಖರತೆಯಿಂದ ಕೂಡಿದ್ದರೂ, ಅಷ್ಟೇ ಸಮರ್ಥವಾದ ಶಬ್ದದಲ್ಲಿ ಅಳವಡದಿದ್ದರೆ, ಮೃತಪ್ರಾಯವೇ ಆಗುತ್ತದೆ. ಅದೇ ರೀತಿ ಶಬ್ದವೊಂದು ವಾಕ್ಯೋಪಯೋಗಿಯಾದ ಅರ್ಥದ ಅಭಾವದಲ್ಲಿ ಅಪ್ರಸ್ತುತವಾದುದನ್ನು ಅಭಿವ್ಯಕ್ತಿಸುತ್ತದೆಂದಾದರೆ ಅದನ್ನು ವಾಕ್ಯದ (ಕಾವ್ಯದ) ವ್ಯಾಧಿ ಎಂದೇ ಪರಿಗಣಿಸಬೇಕಾಗುತ್ತದೆ. ಇದನ್ನು ಹೆಚ್ಚು ಲಂಬಿಸುವ ಅಗತ್ಯವಿಲ್ಲ. ಪ್ರಕೃತ ವಿಷಯಕ್ಕೆ ಬರೋಣ. ಯಾವ ರೀತಿಯ ಬಂಧದಲ್ಲಿ ಸಹಿತತ್ವದಿಂದ ಕೂಡಿದ ಶಬ್ದ ಮತ್ತು ಅರ್ಥಗಳು ಕಾವ್ಯವಾಗುತ್ತವೆ? ವಕ್ರಕವಿವ್ಯಾಪಾರದಿಂದ ಶೋಭಿತವಾದ ಬಂಧದಲ್ಲಿ. ವಕ್ರ ಎಂದರೆ ಶಾಸ್ತ್ರಾದಿಗಳಲ್ಲಿ ಪ್ರಸಿದ್ಧವಾದ ಶಬ್ದ ಮತ್ತು ಅರ್ಥಗಳ ಉಪನಿಬಂಧನಕ್ಕೆ ವಿರುದ್ಧವಾದ, ಅಂದರೆ ಶಾಸ್ತ್ರಾದಿಗಳ ಶಬ್ದಾರ್ಥಗಳ ವ್ಯಾಪ್ತಿಗಿಂತ ಭಿನ್ನವಾದ, ಆರು ಬಗೆಯ ವಕ್ರತೆಗಳಿಂದ ಕೂಡಿರುವ ವಿಶಿಷ್ಟ ಕಾವ್ಯವ್ಯಾಪಾರ. ಇದರಿಂದ ಕಾವ್ಯಶೈಲಿಗೆ ಎಲ್ಲಿಲ್ಲದ ಸೌಂದರ್ಯ ಪ್ರಾಪ್ತವಾಗುತ್ತದೆ. ಈಗಾಗಲೇ ಚಿರಪರಿಚಿತವಾದ ಶಾಸ್ತ್ರಾದಿಗಳ ಭಾಷೆಗಿಂತ ಭಿನ್ನವಾದ ಭಾಷಾಪ್ರಯೋಗವಷ್ಟೇ ಕಾವ್ಯದ ವಿಶಿಷ್ಟ ಗುಣವೆಂದು ಸೂತ್ರೀಕರಿಸಲಾಗದು. ಕಾರಣ ಅದು ಅತಿವ್ಯಾಪ್ತಿಯದಾಗುತ್ತದೆ. ಆಗ ಕಷ್ಟಪಟ್ಟು ಎಳೆದು ತಂದ ಕಲ್ಪನೆಗಳಿಂದ ಕೂಡಿದ ಬಂಧದಲ್ಲಿ ಸೇರಿಕೊಂಡ ಶಬ್ದ ಮತ್ತು ಅರ್ಥಗಳೂ ಕಾವ್ಯದ ವ್ಯಾಪ್ತಿಯಲ್ಲಿ ಬಂದು ಬಿಡಬಹುದು.

ಅದನ್ನು ತಪ್ಪಿಸುವ ಸಲುವಾಗಿ ಗ್ರಂಥ ಕರ್ತೃ ಅದಕ್ಕೆ ಇನ್ನೊಂದು ಅರ್ಹತೆಯನ್ನು ಜೋಡಿಸುತ್ತಾನೆ. ಅದೆಂದರೆ ಕಾವ್ಯ ರಸಿಕರಿಗೆ ಆಹ್ಲಾದವನ್ನುಂಟು ಮಾಡಬಲ್ಲಂಥ ಬಂಧ ಎಂದು. ಕಾವ್ಯಮರ್ಮಜ್ಞರಿಗೆ ಆನಂದವನ್ನುಂಟು ಮಾಡಬಲ್ಲಂಥ ಬಂಧದಲ್ಲಿ ವ್ಯವಸ್ಥಿತಗೊಂಡ ಶಬ್ದಾರ್ಥಗಳು ಯಶಸ್ವೀ ಕಾವ್ಯ ಶೈಲಿಯ ದ್ಯೋತಕ. ವಕ್ರತೆಯ ಸ್ವರೂಪ, ಅದರ ಪ್ರಕಾರ ಮತ್ತು ಕಾವ್ಯರಸಿಕರಿಗೆ ಆಹ್ಲಾದವನ್ನುಂಟು ಮಾಡುವ ಅದರ ಸಾಮರ್ಥ್ಯ ಇದೆಲ್ಲವನ್ನೂ ಈ ಕೃತಿಯಲ್ಲಿ ಯಥಾ ಸಂದರ್ಭ ವಿವರಿಸಲಾಗುವುದು.

ಕಾವ್ಯದ ಸಾಮಾನ್ಯ ಲಕ್ಷಣ ನಿರೂಪಣೆಯ ನಂತರ ಅದರ ವಿಶೇಷ ಲಕ್ಷಣವನ್ನು ನಿರೂಪಿಸಲಾಗುವುದು. ಮೊತ್ತ ಮೊದಲಿಗೆ ಶಬ್ದ ಮತ್ತು ಅರ್ಥದ ಸ್ವರೂಪವನ್ನು ನಿರೂಪಿಸಲಾಗುವುದು -

ವಾಚ್ಯೋಽರ್ಥೋ ವಾಚಕಃ ಶಬ್ದಃ ಪ್ರಸಿದ್ಧ ಮಿತಿ ಯದ್ಯಪಿ
ತಥಾಪಿ ಕಾವ್ಯಮಾರ್ಗೇಽಸ್ಮಿನ್ ಪರಮಾರ್ಥೋಽಯ ಮೇತಯೋಃ [8]

ವಾಚ್ಯವೇ 'ಅರ್ಥ' ಹಾಗೂ ವಾಚಕವೇ 'ಶಬ್ದ'. ವ್ಯಕ್ತವಾದದ್ದು ವಾಚ್ಯ ಮತ್ತು ವ್ಯಕ್ತ ಮಾಡುವಂಥದು ಶಬ್ದ ಎಂಬುದು ಪ್ರಸಿದ್ಧವೇ ಆದರೂ, ಕಾವ್ಯಮಾರ್ಗದಲ್ಲಿ ಅವುಗಳ ನಿಜಸ್ವರೂಪವು ಈ ಮುಂದಿನಂತೆ ಇರುತ್ತದೆ - [8]

'ಶಬ್ದ' ಮತ್ತು 'ಅರ್ಥ' ಎಂಬ ಪದಗಳ ಸಾಮಾನ್ಯ ಅರ್ಥ ಎಲ್ಲರಿಗೂ ತಿಳಿದೇ ಇದೆ. ಯಾವುದು ವಾಚಕವೋ ಅದು ಶಬ್ದ ಹಾಗೂ ಯಾವುದು ವಾಚ್ಯವೋ ಅದು ಅರ್ಥ. 'ದ್ಯೋತಕ' ಮತ್ತು 'ವ್ಯಂಜಕ'ಗಳು ಕೂಡ ತಮ್ಮದೇ ಆದ ಲಕ್ಷಣ ಹೊಂದಿದ್ದು, ಅವನ್ನು ಶಬ್ದವೆಂದು ಹೇಳಬಹುದಲ್ಲ. ಹಾಗಾದಾಗ ಕೇವಲ 'ವಾಚಕ'ವನ್ನು ಮಾತ್ರ ಶಬ್ದವೆಂದು ಮೇಲಿನ ಲಕ್ಷಣದಲ್ಲಿ ಹೇಳಿದ್ದರೂ, ಇದು ಅವ್ಯಾಪ್ತಿ ದೋಷವಾಗುವುದಿಲ್ಲವೆ ಎಂದು ಯಾರಾದರೂ ಆಕ್ಷೇಪವೆತ್ತಿದರೆ ಅದಕ್ಕೆ ನಮ್ಮ ಸಮಾಧಾನ; ಅವರೆಡನ್ನೂ ಇಲ್ಲಿ ಶಬ್ದವೆಂದು ಹೇಳದೆ ಇರುವುದರಿಂದ ಅವ್ಯಾಪ್ತಿ ದೋಷಕ್ಕೇನೂ ಒಳಗಾಗುವುದಿಲ್ಲ. ಕಾರಣ ಅರ್ಥಪ್ರತೀತಿಯ ರೂಪ ಸಾಮಾನ್ಯದ ಕಾರಣದಿಂದಾಗಿ ಲಕ್ಷಣ ಅಥವಾ ಗೌಣೀವೃತ್ತಿಯಂದ ಇವೆರಡೂ ವಾಚಕವೇ ಆಗುತ್ತವೆ. ದ್ಯೋತ್ಯ ಮತ್ತು ವ್ಯಂಗ್ಯಗಳಲ್ಲಿ ಜ್ಞೇಯತ್ವ (ಪ್ರತ್ಯೇಯತ್ವ)ವು ಎರಡಕ್ಕೂ ಸಾಮಾನ್ಯವಾದ ಕಾರಣ ವ್ಯವಹಾರದಲ್ಲಿ ವಾಚ್ಯತ್ವವೇ ಆಗುತ್ತದೆ. ಈ ಲೌಕಿಕ ಜಗತ್ತಿನಲ್ಲಿ ಶಬ್ದ ಮತ್ತು ಅರ್ಥಗಳ ಲಕ್ಷಣವು ವಾಚಕ ಮತ್ತು ವಾಚ್ಯ ಎಂಬುದಾಗಿ ಪ್ರಸಿದ್ಧವೇ ಆದರೂ ಅಲೌಕಿಕವಾದ ಕಾವ್ಯ ಜಗತ್ತಿನಲ್ಲಿ ಆ ಲಕ್ಷಣ ಅಷ್ಟು ಪ್ರಯೋಜನಕಾರಿಯಾಗಲಾರದು. ಆದ್ದರಿಂದ ಕಾವ್ಯ ಪ್ರಪಂಚದಲ್ಲಿ ಅವುಗಳ ಪರಮಾರ್ಥವನ್ನು ಈ ಮುಂದಿನ ಶ್ಲೋಕದಲ್ಲಿ ಹೇಳಿರುವಂತೆ ಸ್ಪಷ್ಟಪಡಿಸುವ ಅಗತ್ಯವಿದೆ.

ಶಬ್ದೋ ವಿವಕ್ಷಿತಾರ್ಥೈಕವಾಚಕೋಽನ್ಯೇಷು ಸತ್ಸ್ವಪಿ|
ಅರ್ಥಃ ಸಹೃದಯಾಹ್ಲಾದಕಾರಿ ಸ್ವಸ್ಪಂದಸುಂದರಃ [9]

ತನ್ನ ಮುಂದಿರುವ ಹಲವು ಅನ್ಯ ಪರ್ಯಾಯಗಳಲ್ಲಿ, ಕವಿಯ ವಿವಕ್ಷಿತ ಅರ್ಥವನ್ನು ಸಂಪೂರ್ಣವಾಗಿ ಅಭಿವ್ಯಕ್ತಿಸಬಲ್ಲ ಅನನ್ಯ ವಾಚಕವೊಂದು ಮಾತ್ರ ಶಬ್ದವೆನಿಸುತ್ತದೆ. ಹಾಗೂ ಸಹೃದಯರ ಹೃದಯಕ್ಕೆ ಆಹ್ಲಾದವನ್ನುಂಟು ಮಾಡಬಲ್ಲ ಸಹಜ ಸೌಂದರ್ಯದಿಂದ ಕೂಡಿರುವುದೇ ಅರ್ಥ [9]

ಕಾವ್ಯದಲ್ಲಿ ಕವಿಗೆ ಲಭ್ಯವಿರುವ ಸಮುಚಿತ ಸಾಮಗ್ರಿ ಸಮಸ್ತವೂ ಶಬ್ದವೆನಿಸುತ್ತದೆ. ಕವಿಯ ವಿವಕ್ಷಿತ ಅರ್ಥವನ್ನು ಅಭಿವ್ಯಕ್ತಿಸುವ ಏಕೈಕ ವಾಚಕವೇ ಅದು. ಅರ್ಥಾತ್ ಕವಿಯ ಉದ್ದೇಶಿತ ಅರ್ಥವನ್ನು ಅಭಿವ್ಯಕ್ತಿಸುವ ವಿಶಿಷ್ಟ ವಾಚಕ. ಎಷ್ಟು ವಿಶಿಷ್ಟವೆಂದರೆ, ಇನ್ನಾವುದೇ ಶಬ್ದ ಅದಕ್ಕೆ ಪರ್ಯಾಯವಲ್ಲ. ಮೇಲ್ ತೋರಿಕೆಗೆ ಅದೇ ಅರ್ಥವನ್ನು ಕೊಡುವ ಅಸಂಖ್ಯ ಅಭಿವ್ಯಕ್ತಿಗಳಿರಬಹುದು (ವಾಚಕಗಳು). ಆದರೆ, ಕವಿಯ ವಿವಕ್ಷಿತ ಅರ್ಥವನ್ನು ಸಂಪೂರ್ಣವಾಗಿ ಅಭಿವ್ಯಕ್ತಿಸುವ ಸಾಮರ್ಥ್ಯ ಆ ಪರ್ಯಾಯ ವಾಚಕಗಳಲ್ಲಿ ಯಾವುದೊಂದಕ್ಕೂ ಅಥವಾ ಅವೆಲ್ಲಕ್ಕೂ ಇರುವುದಿಲ್ಲ. ಹಾಗೂ ಸಾಮಾನ್ಯ ರೂಪದ ಅರ್ಥವು ವಿವಕ್ಷಿತವಾಗಿದ್ದಾಗ, ಸಾಮಾನ್ಯ

ರೂಪದ ಅರ್ಥವನ್ನು ಕೊಡಬಲ್ಲ ಶಬ್ದವನ್ನೇ ಪ್ರಯೋಗಿಸಬೇಕು. ಹಾಗಲ್ಲದೆ, ಅದರ ಸ್ಥಾನದಲ್ಲಿ ನಾವು ವಿಶೇಷ ರೂಪದ ಅರ್ಥನೀಡಬಲ್ಲ ಶಬ್ದವನ್ನು ಪ್ರಯೋಗಿಸಿದರೆ ಆ ಶಬ್ದ ಉದ್ದಿಷ್ಟ ಅರ್ಥದ ವಾಚಕವಾಗುವುದಿಲ್ಲ. ಹೇಗೆಂದರೆ (ಉದಾ)

ಕಲ್ಲೋಲವೇಲ್ಲಿತ ದೃಷತ್ ಪರುಷ ಪ್ರಹಾರೈ
ರತ್ನಾನ್ಯಮೂನಿ ಮಕರಾಕರ ಮಾsವಮಂಸ್ಥಾಃ
ಕಿಂ ಕೌಸ್ತುಭೇನ ಭವತೋ ವಿಹಿತೋ ನ ನಾಮ
ಯಾಂಚಾ ಪ್ರಸಾರಿತ ಕರಃ ಪುರುಷೋತ್ತಮೋsಪಿ [೨೫]

[ಭಲ್ಲಟಶತಕ - 62]

ಅಲೆಗಳು ತಳ್ಳಿದ ಕಲ್ಲುಗಳ ಅತಿ ಕಠಿಣವೆನಿಪ
ಹೊಡೆತದಿಂದ ನಿನ್ನೊಳಿರುವ ರತ್ನಗಳನು
ಅವಮಾನಿಸದಿರು ಎಲೆ ಜಲಧಿಯೆ!
ಕೌಸ್ತುಭದಾ ರತ್ನವೊಂದೆ!
ಆ ಪುರುಷೋತ್ತಮನನ್ನು ಕೂಡ|
ಭಿಕ್ಷೆಗಾಗಿ ನಿನ್ನ ಮುಂದೆ ಕೈಯ
ಚಾಚುವಂತೆ ಮಾಡಲಿಲ್ಲವೆ?

ಸಾಗರವನ್ನು ಸಕಲ ರತ್ನಗಳ ಆಗರವೆಂದು ಹೊಗಳುವ ಸಂದರ್ಭದಲ್ಲಿ ರತ್ನಸಾಮಾನ್ಯಗಳ ಉತ್ಕರ್ಷದಿಂದ ಪದ್ಯ ಆರಂಭವಾಗಿದೆ. ಆದರೆ "ಕೌಸ್ತುಭೇನ" ಎಂದು ಹೇಳಿ ಆ ಒಂದು ರತ್ನ ವಿಶೇಷದ ಉತ್ಕರ್ಷದ ಮೂಲಕ ಉಪಸಂಹಾರ ಮಾಡಲಾಗಿದೆ. ಹೀಗೆ ಪ್ರಾರಂಭ ಮತ್ತು ಉಪಸಂಹಾರಗಳಲ್ಲಿರುವ ವೈಷಮ್ಯವು (ಅಂದರೆ ವಿಚಾರ ಮತ್ತು ಅಭಿವ್ಯಕ್ತಿಗಳಲ್ಲಿರುವ ಅಸಾಂಗತ್ಯ) ಕಾವ್ಯದ ಶೋಭೆಯನ್ನು ಕುಂದಿಸಿದೆ.

ಇಲ್ಲಿ ಉಂಟಾಗಿರುವ ಪ್ರಕ್ರಮಭಂಗದೋಷವು ಕಾವ್ಯದ ಶೋಭೆಗೆ ಕುಂದುಕವಾಗಿದೆ. ಅಲ್ಲದೆ ವಿಶೇಷವೊಂದರಲ್ಲಿ ಕಂಡು ಬರಬಹುದಾದ ಉತ್ಕೃಷ್ಟತೆಯು ಸರ್ವ ಸಾಮಾನ್ಯಕ್ಕೂ ಅನ್ವಯಿಸುತ್ತದೆಂದು ಹೇಳಲಾಗದು.

ವಾಜಿವಾರಣ ಲೋಹಾನಾಂ ಕಾಷ್ಠ ಪಾಷಾಣ ವಾಸಸಾಮ್
ನಾರೀ ಪುರುಷತೋಯಾನಾಮಂತರಂ ಮಹದಂತರಮ್ [೨೬]

ಆನೆ, ಅಶ್ವ, ಲೋಹ
ಮರ, ವಸ್ತ್ರ, ಕಲ್ಲು
ನರ-ನಾರಿ-ನೀರು ಗಳಲಿರುವ ಅಂತರವು
ಮಹದಂತರವೆ ದಿಟ (೨೬)

ಆದ್ದರಿಂದ ಮೇಲೆ ಹೇಳಿರುವಂಥ ಸಂದರ್ಭಗಳಲ್ಲಿ (ಎಲ್ಲಿ ಸಾ ಮಾನ್ಯದ ಉತ್ಕರ್ಷವನ್ನು

ಹೇಳುವ ಉದ್ದೇಶವಿದೆಯೋ ಅಲ್ಲಿ) ಸಾಮಾನ್ಯವನ್ನು ಸೂಚಿಸುವ ಶಬ್ದವೊಂದೇ ಸಹೃದಯರ ಹೃದಯುವನ್ನು ಗೆಲ್ಲುತ್ತದೆ. ಮೇಲಿನ ಉದಾಹರಣೆಯಲ್ಲಿ (೨೫) [ಏಕೇನ ಕಿಂ ನ ವಿಹಿತೋ ಭವತಃ ಸ ನಾಮ] (ಅವುಗಳಲೊಂದು ರತ್ನವು....") ಎಂಬ ಪಾಠಾಂತರವು ಬಹು ಸುಲಭವಾಗಿಯೇ ಲಭ್ಯವಿದೆ.

ಆದರೆ ಎಲ್ಲಿ ಕವಿಗಳಿಗೆ ವಸ್ತುವನ್ನು ವಿಶೇಷ ರೂಪದಲ್ಲಿ ಪ್ರತಿಪಾದಿಸುವ ಅಗತ್ಯವಿದೆಯೋ ಅಲ್ಲಿ ವಿಶಿಷ್ಟವಾದ ಯುಕ್ತ ಶಬ್ದವನ್ನೇ ಅಳವಡಿಸುತ್ತಾರೆ. ಉದಾ :

ದ್ವಯಂ ಗತಂ ಸಂಪ್ರತಿ ಶೋಚನೀಯತಾಂ
ಸಮಾಗಮ ಪ್ರಾರ್ಥನಯಾ ಕಪಾಲಿನಃ|
ಕಲಾ ಚ ಸಾ ಕಾಂತಿಮತೀ ಕಲಾವತ -
ಸ್ತ್ವ ಮಸ್ಯ ಚ ಲೋಕಸ್ಯ ಚ ನೇತ್ರ ಕೌಮುದೀ [೨೭]

[ಕುಮಾರ ಸಂಭವ 5-71]

ಆ ಕಪಾಲಿಯ ಸಮಾಗಮಕೆಳಸಿಹರೊಳು
ಶೋಕಕೀಡಾದರಿಂದಿರ್ವರಹುದು
ಆ ಕಾಂತಿಮತಿ ಕಲಾವಂತನೊಂದು ಕಲೆ
ಮತ್ತೀ ಜಗದ ಕಣ್ಣಳಿಗೆ ಬೆಳುದಿಂಗಳಹ ನೀನು! [೨೭]

ಈ ಪದ್ಯದಲ್ಲಿ 'ಪರಮೇಶ್ವರ' ಶಬ್ದಕ್ಕೆ ಪರ್ಯಾಯವಾಚಕಗಳಾಗಿ ಸಹಸ್ರಾರು ಶಬ್ದಗಿಳಿದ್ದಾಗ್ಯೂ ಬೀಭತ್ಸ ರಸದ ಆಲಂಬನ ವಿಭಾವವಾಗಿ ಕಪಾಲಿನಃ ಎಂಬ ಶಬ್ದವನ್ನು ಪ್ರಯೋಗಿಸಿರುವುದರಿಂದ ಅದು 'ಜುಗುಪ್ಸಾ' ಸ್ಥಾಯೀ ಭಾವಕ್ಕೆ ಪೋಷಕವಾಗಿ ಬಂದು ಸುಂದರ ವಾಚಕ ವಕ್ರತೆಗೆ ಕಾರಣವಾಗಿದೆ. ಅಲ್ಲದೆ 'ಸಂಪ್ರತಿ' (ಈಗ) ಹಾಗೂ 'ದ್ವಯಂ' (ಇರ್ವರು) ಶಬ್ದಗಳು ಅತಿರಮಣೀಯವಾಗಿವೆ. ಕಾರಣ ಅವು ಉಪಹಾಸದ ಭಾವವನ್ನು ಸಹಜವಾಗಿಯೇ ತಂದುಕೊಡುತ್ತವೆ. ಇದುವರೆಗೆ ಕೇವಲ ಚಂದ್ರನೊಬ್ಬ ದುರ್ವ್ಯಸನದಿಂದ ದೂಷಿತನಾಗಿ ಶೋಚನೀಯನಾಗಿದ್ದ. ಈಗ ಅವನ ದುಸ್ಸಾಹಸದಲ್ಲಿ ಅವನಿಗೆ ಬೆಂಬಲಳಾಗಿ ನಿಂತು ನೀನೂ ಶೋಚನೀಯಳಾಗಿ ಉಪಹಾಸಕ್ಕೊಳಗಾಗಿದ್ದೀಯೆ. 'ಪ್ರಾರ್ಥನಯಾ' (ಎಳಸು) ಎಂಬ ಶಬ್ದವೂ ಅತ್ಯಂತ ರಮಣೀಯವಾಗಿಯೇ ಇದೆ. ಕಾರಣ ಈ ಸಮಾಗಮ ಒಂದು ವೇಳೆ ಕಾಕತಾಳೀಯವೇ ಆಗಿದ್ದರೆ ಅದನ್ನು ಆಕ್ಷೇಪಿಸುವಂತಿರಲಿಲ್ಲ. ಆದರೆ ಅಂಥ ಸಮಾಗಮಕ್ಕಾಗಿ ಪ್ರಾರ್ಥಿಸುವುದು ಕಲಂಕಕಾರಿಣಿಯಾಗಿದೆ. ಈ ಪ್ರಾರ್ಥನೆ ಅತ್ಯಂತ ಉಚ್ಚಕುಲದವರಲ್ಲಿ ಸಾರ್ವಜನಿಕ ಹಗರಣಕ್ಕವಕಾಶವಾಗಿ ಕಲಂಕಕಾರಿಣಿಯಾಗಿದೆ. ಸಂಯುಕ್ತ ವಾಚಕವಾದ 'ಚ' ಎಂಬುದು ಎರಡು ಸಲ (ಸಾ-ಚ-ತ್ವಂ-ಚ) ಬಳಕೆಯಾಗಿದೆ. ಒಂದರೊಡನೊಂದು ಪರಸ್ಪರ ಸ್ಪರ್ಧಿಸುತ್ತಿವೆಯೇನೋ ಎಂಬಂತಿರುವ ಚಂದ್ರಕಳೆ ಮತ್ತು ಪಾರ್ವತಿಯರ ಲಾವಣ್ಯಾತಿಶಯದ ಪ್ರತಿಪಾದನೆಗಾಗಿ ಇವುಗಳ ಪ್ರಯೋಗವಾಗಿರುವಂತಿದೆ. 'ಕಲಾವತಃ' ಮತ್ತು 'ಕಾಂತಿಮತಿ' ಈ

ಶಬ್ದಗಳ ಮತ್ವರ್ಥೀಯ ಪ್ರತ್ಯಯ (ಷಷ್ಠೀ ವಿಭಕ್ತಿ)ಗಳ ಮೂಲಕ ಚಂದ್ರ ಮತ್ತು ಅವನ ಕಳೆಗಳ ಪ್ರಶಂಸೆಯೇ ಪ್ರತೀತವಾಗುತ್ತಿದೆ. ಹೀಗೆ ಈ ಶ್ಲೋಕದಲ್ಲಿ ಬಳಕೆಯಾಗಿರುವ ಪ್ರತಿಯೊಂದು ಶಬ್ದದ ಬದಲಿಗೆ ಬೇರೊಂದು ಪರ್ಯಾಯ ಶಬ್ದವನ್ನು ಬಳಸಿದರೂ ಅದು ಕವಿಯ ವಿವಕ್ಷಿತ ಅರ್ಥವನ್ನು ಅಭಿವ್ಯಕ್ತಿಸುವಲ್ಲಿ ಅಸಮರ್ಥವಾಗುತ್ತದೆ. ಆ ಕಾರಣಕ್ಕಾಗಿ ಚಮತ್ಕಾರ ರಹಿತವೂ ಆಗುತ್ತದೆ. ಆದ್ದರಿಂದ ಕವಿಯ ವಿವಕ್ಷಿತ ವಿಶೇಷ ಅರ್ಥವನ್ನು ಅಭಿವ್ಯಕ್ತಿಸುವ ಸಾಮರ್ಥ್ಯವನ್ನು ಹೊಂದಿರುವುದೇ ವಾಚಕತ್ವದ ಲಕ್ಷಣ. ಹಾಗೆ ನೋಡಿದರೆ, ಕವಿ ಪ್ರತಿಭೆಯಲ್ಲಿ ಆ ಕ್ಷಣದಲ್ಲಿಯೇ ಹೊಳೆದ ಒಂದು ಸ್ವೋಪಜ್ಞ ಕಲ್ಪನೆಯ ಸ್ಪರ್ಶದಿಂದಾಗಿ, ವಸ್ತುಗಳು ಹೊಸ ಜೀವ ತಳೆಯುತ್ತವೆ, ಅಥವಾ ವಿಷಯವನ್ನು ಅತ್ಯಂತ ರೋಚಕವಾಗಿ ಪ್ರಸ್ತುತಪಡಿಸಬೇಕಾಗಿರುವ ಪ್ರಬಲವಾದೊಂದು ಉತ್ಕರ್ಷದಿಂದ ವಸ್ತುವಿನ ನಿಜ ಸ್ವರೂಪವು ಮರೆಯಾಗಿ ಬಿಡುತ್ತದೆ. ಕವಿಯ ಕಾವ್ಯೋದ್ದೇಶಕ್ಕೆ ಅಭಿವ್ಯಕ್ತಿ ಪ್ರಕ್ರಿಯೆಯು ಯಾವತ್ತೂ ಅಧೀನವೆಂಬುದು ತಿಳಿದೇ ಇದೆ. ಅರ್ಥ ವಿಶೇಷವೊಂದನ್ನು ಅಭಿವ್ಯಕ್ತಿಸಲು ಸಮರ್ಥವಾದ ವಾಚಕ ಪ್ರತಿರೂಪವೊಂದು ದೊರೆತಾಗಲೇ ಸಹೃದಯರ ಹೃದಯಕ್ಕೆ ಆಹ್ಲಾದವುಂಟಾಗುವುದು.
ಉದಾ :

ಸಂರಂಭಃ ಕರಿಕೀಟ ಮೇಘ ಶಕಲೋದ್ದೇಶೇನ ಸಿಂಹಸ್ಯ ಯಃ|
ಸರ್ವಸ್ಯೈವ ಸ ಜಾತಿಮಾತ್ರ ವಿಹಿತೋ ಹೇವಾಕಲೇಶಃ ಕಿಲ|
ಇತ್ಯಾಶಾದ್ವಿರದಕ್ಷಯಾಂಬುದ ಘಟಾಬಂಧೇಪ್ಯಸಂರಬ್ಧವಾನ್
ಯೋऽಸೌ ಕುತ್ರ ಚಮತ್ಕೃತೇರತಿಶಯಂ ಯಾತ್ವಂಬಿಕಾ ಕೇಸರೀ||೨೮||

ನನಗಾದರೋ ಬರಿ ಮೋಡದ ತುಣುಕೋ
ಅಲ್ಲದಿರೆ ಬರಿಯ ಕೀಟವೊ
ಎಂದೆನಿಪ ಆನೆಯ ಕಂಡು ಕೆರಳುವುದದು
ಸಕಲ ಸಿಂಹ ಜಾತಿ ಮಾತ್ರಕೆ ಸ್ವಭಾವ ಸಹಜ
ಇಂತಾಲೋಚಿಸಿ ತಾಯಿ ಅಂಬಿಕೆಯ
ಕೇಸರಿಯಾದರೊ
ದಿಗ್ಗಜಗಳ ಮತ್ತಾಪ್ರಳಯ ಮೇಘ ಸಮೂಹವ
ಕಂಡೂ ಕೆರಳದೆ ಇದೆ ಚೋದ್ಯ!
ಇಂತಿರೆ ತೋರುವುದಾದರು ಎಂತದು
ನಿಜ ಕೌಶಲದತಿಶಯವ? - (೨೮)

ಮೇಲಿನ ಪದ್ಯದಲ್ಲಿ ಆನೆಗಳನ್ನು ಕೀಟಗಳೆಂದು ಕರೆವ ನೆಪದಿಂದ ತಿರಸ್ಕಾರವನ್ನು ಹಾಗೂ ಮೋಡಗಳನ್ನು ತುಣುಕು (ಶಕಲ)ಗಳೆಂದು ಹೆಸರಿಸುವ ಮೂಲಕ ಅನಾದರವನ್ನು ಸೂಚಿಸಲಾಗಿದೆ. ಸಕಲ ಎಂಬ ಶಬ್ದವು (ಸರ್ವಸ್ಯ) ಸಿಂಹ ಜಾತಿಗೆ ಸೇರಿದ ಯಾವೊಂದು ತುಚ್ಛ ಪ್ರಾಣಿಯಾದರೂ ಆದೀತು ಎಂಬುದನ್ನು ಸೂಚಿಸುತ್ತಿದೆ. ಈ 'ಜಾತಿ'ಗೆ 'ಮಾತ್ರ' ಎಂಬ ವಿಶೇಷಣವನ್ನು ಲಗತ್ತಿಸುವ

ಮೂಲಕ ಒಂದೊಂದರ ಪ್ರತಿಷ್ಠೆಯನ್ನು ಕಡೆಗಣಿಸಲಾಗಿದೆ. 'ಲೇಶ' ಎಂಬ ಶಬ್ದವನ್ನು 'ಹೇವಾಕ'ಗೆ ವಿಶೇಷಣವಾಗಿಸಿ, ಸಿಂಹಗಳ ಅಲ್ಪತೆಯನ್ನು ಒತ್ತಿ ಹೇಳುತ್ತ ಕವಿಯ ವಿವಕ್ಷಿತ ಅರ್ಥವನ್ನು ಬಲಪಡಿಸುತ್ತದೆ. 'ಮೇಘ ಸಮೂಹ' (ಘಟಾಬಂಧ) ಎಂಬ ಶಬ್ದವು ಪ್ರಸ್ತುತದ ಅಂಬಿಕಾಕೇಸರಿಯ ಮಹತ್ವವನ್ನು ಪ್ರತಿಪಾದಿಸುತ್ತ "ಲಕ್ಷ್ಯ"ದ ಬೃಹತ್ತನ್ನು ಸಮರ್ಥವಾಗಿ ಅಭಿವ್ಯಕ್ತಿಸುತ್ತದೆ.

ಇದಕ್ಕೆ ಪ್ರತಿಯಾಗಿ ಅರ್ಥ ವಿಶೇಷವೊಂದನ್ನು ಪ್ರತಿಪಾದಿಸಬೇಕಾದ ಸೂಕ್ತ ಶಬ್ದ (ವಾಚಕ ಪ್ರತಿರೂಪ)ದ ಅನುಪಸ್ಥಿತಿಯಲ್ಲಿ ಸೌಂದರ್ಯಹಾನಿಯಾಗುವುದು ನಿಶ್ಚಿತ.

ಉದಾಹರಣೆಗೆ :

ಯತ್ರಾನುಲ್ಲಿಖಿತಾಖ್ಯಮೇವ ನಿಖಿಲಂ ನಿರ್ಮಾಣಮೇತದ್ವಿಧೇ-
ರುತ್ಕರ್ಷ ಪ್ರತಿಯೋಗಿ ಕಲ್ಪನಮಪಿ ನ್ಯಕ್ಕಾರ ಕೋಟಿಃ ಪರಾ|
ಯಾತಾಃ ಪ್ರಾಣಭೃತಾ ಮನೋರಥಗತೀರುಲ್ಲಂಘ್ಯ ಯತ್ಸಂಪದ -
ಸ್ತಸ್ಯಾ ಭಾಸಮಣೀಕೃತಾಶ್ಮಸು ಮಣೇರಶ್ಮತ್ವಮೇವೋ ಚಿತಮ್ [೨೯]

ಯಾವ ಚಿಂತಾಮಣಿಯು ಇರುತಿರೆ
ಬ್ರಹ್ಮಸೃಷ್ಟಿಯ ಹೆಸರಿಸಲಾಗದೊ
ಯಾರ ಉತ್ಕರ್ಷಕ್ಕೆ ಸಮನೆನಿಸಿದುಪಮೆಯ
ಕಲ್ಪಿಸುವುದದುವೆ
ಮಹದಪಮಾನವಲ್ಲದೆ ಬೇರಲ್ಲವೊ
ಯಾರ ಸಂಪದವದುವೆ ಜನರ
ಮನೋರಥಕಿಂತ ಮಿಗಿಲೊ
ಯಾರ ಹೊಳಪಿನ ಪ್ರತಿಬಿಂಬದಲಿ
ಕಲ್ಲ ಹರಳುಗಳೆಲ್ಲ ಚಿಂತಾಮಣಿಯೆ ಅಪ್ಪುವೋ
ಆ ಅಂಥ ಅಮೂಲ್ಯ ಚಿಂತಾಮಣಿಯು
ಎಂದಿಗು ಮಣಿಯ ಗಣನೆಗೆ ಬರದೊಲು
ಕಲ್ಲಹರಳೊಳೆ ಮಾನ್ಯವಾಗಲಿ [29]

ಮೇಲಿನ ಉದಾಹರಣೆಯಲ್ಲಿ 'ಆಭಾಸ' ಶಬ್ದವು ಅರ್ಥವ್ಯಕ್ತಿಗೆ "ಮಾತ್ರ" ಎಂಬ ವಿಶೇಷಣವನ್ನಪೇಕ್ಷಿಸುತ್ತಿದೆಯಾಗಿ ಅಪೂರ್ಣವೇ ಆಗಿದೆ. ಆದ್ದರಿಂದ ಇದರ ಜಾಗದಲ್ಲಿ "ಛಾಯಾಮಾತ್ರ" (ಛಾಯಾಮಾತ್ರ ಮಣೀಕೃತಾಶ್ಮಸು) ಎಂಬ ಬೇರೊಂದು ಪಾಠವನ್ನು ಅಳವಡಿಸಿಕೊಳ್ಳುವುದೇ ಉಚಿತ.

[ಛಾಯಾಮಾತ್ರದಿಂದ ಕಲ್ಲನ್ನು ಮಣಿಯನ್ನಾಗಿ ಪರಿವರ್ತಿಸಬಲ್ಲ ಆ ಚಿಂತಾಮಣಿಯು ಕಲ್ಲಹರಳಾಗಿರುವುದೇ ಉಚಿತ]

ಇದೆಲ್ಲವೂ ಶಬ್ದ ವಕ್ರತೆಯ ವಿವಿಧ ಪ್ರಕಾರಗಳ ಸ್ವರೂಪವನ್ನು ನಿರೂಪಿಸುವ ಸಮಯದಲ್ಲಿ

ಪ್ರತಿಪದದಲ್ಲೂ ವ್ಯಕ್ತವಾಗುವುದು. ಹಾಗಾಗಿ ಅದನ್ನು ಇಲ್ಲಿ ವಿಸ್ತೃತವಾಗಿ ವಿವರಿಸಿಲ್ಲ.

[ಇದುವರೆಗೆ ಕಾವ್ಯದಲ್ಲಿ ಶಬ್ದದ ಸ್ವರೂಪವು ಹೇಗಿರುತ್ತದೆಂದು ನಿರೂಪಿಸಿದ ಬಳಿಕ ಅರ್ಥದ ಸ್ವರೂಪದ ವಿವೇಚನೆಗೆ ತೊಡಗುತ್ತಾನೆ]

'ವಾಚ್ಯ' ರೂಪ "ಅರ್ಥ"ದ ವಿಶಿಷ್ಟ ಲಕ್ಷಣವೇನು? ಕಾವ್ಯದಲ್ಲಿ ಸಹೃದಯರಿಗೆ ಆಹ್ಲಾದವನ್ನುಂಟುಮಾಡಬಲ್ಲುದು, ತನ್ನ ಸ್ವಭಾವದಿಂದ ಸುಂದರವಾದ್ದು "ಅರ್ಥ". ಇಲ್ಲಿ ಹೇಳಲಾದ ಸಹೃದಯರೆಂದರೆ ಕಾವ್ಯ ಸೌಂದರ್ಯಕ್ಕೆ ಸ್ಪಂದಿಸುವವರು. ತನ್ನ ಆತ್ಮೀಯ ಸ್ವಭಾವದಿಂದ ಸುಂದರವೂ ಸುಕುಮಾರವೂ ಆಗಿದ್ದು ನವನವವಾದ ಸೌಂದರ್ಯದಿಂದ ಸಹೃದಯರನ್ನು ಆಹ್ಲಾದಗೊಳಿಸುವಂಥದೇ ಕಾವ್ಯದಲ್ಲಿ ಅರ್ಥದ ಸ್ವರೂಪ. ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ, ವಸ್ತುವೊಂದು ತನ್ನ ಅನೇಕ ಪ್ರಕಾರವಾದ ಧರ್ಮದಿಂದ ಕೂಡಿದ್ದರೂ, ಕವಿಯು ಅವುಗಳಲ್ಲಿ ಸಹೃದಯರನ್ನು ಆಹ್ಲಾದಗೊಳಿಸಬಲ್ಲಂಥ ಒಂದನ್ನು ಮಾತ್ರ ಆಯ್ಕೆ ಮಾಡಿಕೊಳ್ಳುತ್ತಾನೆ. ಕಾವ್ಯ ರಚನಾ ಸಂದರ್ಭದಲ್ಲಿ ವ್ಯಕ್ತಿಯೊಬ್ಬನ ಸ್ವಭಾವ ಮಹತ್ವವನ್ನು ವರ್ಣಿಸುವಲ್ಲಿ ಅಥವಾ ರಸಪರಿಪೋಷಣೆಯ ವಿಧಾನದಲ್ಲಿ ಸಹೃದಯರಿಗೆ ಆನಂದವನ್ನುಂಟು ಮಾಡಬಲ್ಲ ಅದರ ಸಾಮರ್ಥ್ಯವು ವ್ಯಕ್ತವಾಗುತ್ತದೆ. ಉದಾ :

ದಂಷ್ಟ್ರಾಪಿಷ್ಟೇಷು ಸದ್ಯಃ ಶಿಖರಿಷು ನ ಕೃತಃ ಸ್ಕಂಧ ಕಂಡೂ ವಿನೋದ :
ಸಿಂಧುಷ್ವಂಗಾವಗಾಹಃ ಖುರಕುಹರಗಲತ್ತುಚ್ಛತೋಯೇಷು ನಾಪ್ತ:|
ಲಬ್ಧಾಃ ಪಾತಾಲಪಂಕೇನ ಲುಠನರತಯಃ ಪೋತ್ರ ಮಾತ್ರೋಪಯುಕ್ತೇ
ಯೇನೋದ್ಧಾರೇ ಧರಿತ್ರ್ಯಾಃ ಸ ಜಯತಿ ವಿಭುತಾ ವಿಘ್ನಿತೇಚ್ಛೋವರಾಹಃ [೩೦]

ದಾನವಹೃತ ಮೇದಿನಿಯನು
ಮೇಲೆತ್ತುವ ಸಮಯದೊಳು
ಪರ್ವತದ ಶಿಖರಗಳು ತನ್ನ ದಾಡೆಗಳಿಂದ
ಪಿಷ್ಟವಾದುದರಿಂದ ಹೆಗಲ ಕಂಡೂತಿ ಸುಖವ
ಹೊಂದದಾದ.
ಖುರಪುಟದ ಮಟ್ಟವನು ಮೀರದಿಹ
ಸಾಗರದ ಅಲ್ಪಜಲದೊಳಗೆ
ಅವಗಾಹದಾನಂದ ಹೊಂದದಾದ.
ಮೈಗೆ ಬಳಿದು ಕೊಳ್ಳನಿತೆ ಪಾತಾಳ
ಕೆಸರಿನೊಳು ಹೊರಳುವಾಮೋದ ಹೊಂದದಾದ.
ತನ್ನೊಂದು ವಿಭುತೆಯಿಂ ವಾಂಛಿತಗಳು
ವಿಫಲವಾದಾ ಮಹಾವರಾಹನೆ ನಿಜಕು ವಿಜಯಿ

(ಸದೂಕ್ತಿ ಕರ್ಣಾಮೃತ 191]

ಸ್ವಭಾವ ಸಹಜಗುಣಗಳ ಪ್ರದರ್ಶನಕ್ಕೆ ಅವಕಾಶವಿಲ್ಲದಿರುವ ಸಂದರ್ಭವನ್ನು ಸೃಷ್ಟಿಸುವ

ಮೂಲಕ ಈ ಪದ್ಯದಲ್ಲಿ ಕವಿಯು ವಸ್ತುಸೌಂದರ್ಯವನ್ನು ಮೆರೆದಿದ್ದಾನೆ. ಈ ವಿಶಿಷ್ಟ ಸಾಧನದ ಮೂಲಕ, ತನ್ನ ಕಾವ್ಯ ವಸ್ತುವಾದ ವ್ಯಕ್ತಿ ಸ್ವಭಾವವನ್ನು ಅತ್ಯಂತ ಉಲ್ಲಾಸ ದಾಯಕವೂ ಸಹೃದಯರಿಗೆ ಆನಂದದಾಯಕವೂ ಆಗುವಂತೆ ಮಾಡುತ್ತಾನೆ. ಇನ್ನೊಂದು ಉದಾಹರಣೆ :

ತಾಮಭ್ಯಗಚ್ಛದ್ರುದಿತಾನುಸಾರೀ
ಮುನಿಃ ಕುಶೇಧ್ಮಾಹರಣಾಯ ಯಾತಃ|
ನಿಷಾದ ವಿದ್ಧಾಂಡಜ ದರ್ಶನೋತ್ಥ:
ಶ್ಲೋಕತ್ವಮಾಪದ್ಯತ ಯಸ್ಯ ಶೋಕಃ [೩೧] 	[ರಘುವಂಶ - 14-70]

ಬೇಡನೊಬ್ಬನ ಬಾಣದ ಹೊಡೆತಕೆ
ಸಿಲುಕಿದ ಕ್ರೌಂಚವ ಕಂಡು
ಯಾರ ಶೋಕವು ಶ್ಲೋಕ ರೂಪವನು ತಾಳಿತೊ
ಆ ಮುನಿ ಕುಶೆ ಸಮಿತ್ತುಗಳ
ತರುವ ನಿಮಿತ್ತದಿ ಹೊರಟು
ಅಳುವಿನ ದನಿಯನು ಅನುಸರಿಸಿಯೆ
ಆಕೆಯ ಸನಿಹಕೆ ಸಾಗಿದನು [೩೧]

ಈ ಪದ್ಯದಲ್ಲಿ ಸೀತೆಯ ಸಮೀಪಕ್ಕೆ ಸಾಗಿದ ಆ ಮುನಿ ಯಾರು? ಎಂಬ ಪ್ರಶ್ನೆಗೆ, "ವಾಲ್ಮೀಕಿ" ಎಂಬ ಹೆಸರನ್ನು [ಅಂಕಿತನಾಮ ಪರ್ಯಾಯ ಪದ] ಹೇಳಿದ್ದರೆ ಸಾಕಾಗಿತ್ತು. ಆದರೆ ಕವಿ ಹಾಗೆ ಮುನಿಯ ಹೆಸರನ್ನು ಹೇಳದೆ ಬೇಡನೊಬ್ಬನ ಬಾಣದಿಂದ ಹತವಾದ ಕ್ರೌಂಚ ಪಕ್ಷಿಯನ್ನು ಕಂಡ ಕೂಡಲೇ ಕರಗಿದ ಮುನಿಯ ಕರುಣಾಪೂರ್ಣ ಹೃದಯದಲ್ಲಿ ಪಕ್ಷಿಯ ವಿಷಯಕ್ಕೆ ಉತ್ಪನ್ನವಾದ ಶೋಕವೇ ಶ್ಲೋಕ ರೂಪವನ್ನು ತಾಳಿತೆಂಬ ಚಿತ್ರವನ್ನು ನೀಡಿದ್ದಾನೆ. ಈ ಪ್ರಸಂಗವನ್ನು ಪ್ರಸ್ತಾಪಿಸುವ ಮೂಲಕ ಕವಿ ಇಲ್ಲಿ ಜನಕರಾಜ ಪುತ್ರಿಯನ್ನು ಅಂಥ ಕರುಣಾ ಜನಕ ಸ್ಥಿತಿಯಲ್ಲಿ ಕಂಡ ಮುನಿಯ ಅಂತಃಕರಣದ ಮಾರ್ದವತೆಯನ್ನು ಸಹೃದಯರು ಕಂಡುಕೊಳ್ಳಲು ವಿಪುಲ ಅವಕಾಶ ಒದಗಿಸಿದ್ದಾನೆ. ಕರುಣ ರಸಪರಿ ಪೋಷಣೆಯ ಮೂಲಕ ಸಹೃದಯರಿಗೆ ಆಹ್ಲಾದವನ್ನುಂಟು ಮಾಡುವುದೇ ಕವಿಯ ಅಭೀಷ್ಟವೂ ಆಗಿದೆ.

ಇನ್ನೊಂದು ಉದಾಹರಣೆ :

ಭರ್ತುರ್ಮಿತ್ರಂ ಪ್ರಿಯಮವಿಧವೇ ವಿದ್ಧಿ ಮಾಮಂಬುವಾಹಂ
ತತ್ಸಂದೇಶಾದ್ಧೃದಯ ನಿಹಿತಾದಾಗತಂ ತ್ವತ್ಸಮೀಪಮ್|
ಯೋ ವೃಂದಾನಿ ತ್ವರಯತಿ ಪಥಿ ಶ್ರಾಮ್ಯತಾಂ ಪ್ರೋಷಿತಾನಾಮ್
ಮಂದ್ರ ಸ್ನಿಗ್ಧೈರ್ಧ್ವ ನಿಭಿರಬಲಾವೇಣಿಮೋಕ್ಷೋತ್ಸುಕಾನಿ [೩೭]

[ಮೇಘದೂತ - 96]

ನಿನ್ನ ನಲ್ಲನ ಪ್ರಿಯ ಮಿತ್ರನೆನಿಸಿದ
ಅಂಬುವಾಹನ ಎಂದು
ನನ್ನ ನೀ ತಿಳಿಯೆಲೌ ಅವಿಧವೆ!
ಅವನ ಸಂದೇಶವನು ಹೃದಯದಲಿ
ನೆರೆತಾಳ್ದು ಬಂದಿರುವೆ ನಾ ನಿನ್ನ ಬಳಿಗೆ
ತಮ್ಮ ಪ್ರಿಯ ಅಬಲೆಯರ ಜಡೆಮುಡಿಯ
ಬಿಡಿಸಲುತ್ಸುಕರಾಗಿ ಹಾದಿಯಲಿ ಬಳಲಿ
ವಿಶ್ರಾಂತಿಗೈದಿರುವ ಪಯಣಿಗ ವೃಂದವನು
ಮೃದು ಮಧುರ ಮೊಳಗುಗಳ ಘೋಷದಿಂ
ತ್ವರೆಗೊಳಿಸುವಾ ಮೇಘ ನಾನು! [೩೨]

ಮಹಾಕವಿ ಕಾಳಿದಾಸನ ಮೇಘದೂತದಲ್ಲಿ ತನ್ನ ನಲ್ಲ ಯಕ್ಷನಿಂದ ದೂರದ ಅಲಕಾವತಿಯಲ್ಲಿರುವ ಯಕ್ಷಿಯ ಬಳಿಗೆ ಸಂದೇಶ ಹೊತ್ತು ಹೋದ ಮೇಘ ಅವಳನ್ನು ಸಂಬೋಧಿಸಿ ಆಡುವ ಮಾತುಗಳು ಇವು. ಈ ಪದ್ಯದಲ್ಲಿ ಮೊದಲಿಗೇ ಕಂಡುಬರುವ "ಅವಿಧವೆ" ಎಂಬ ಮಹತ್ವಪೂರ್ಣ ಸಂಬೋಧನೆಯೇ ಅವಳಲ್ಲಿ ಆಶ್ವಾಸನೆಯನ್ನು ಉಂಟು ಮಾಡುವಂಥದಾಗಿದೆ. (ನಿನ್ನ ಪತಿ ಜೀವಂತವಾಗಿದ್ದಾನೆ, ನೀನು ಮುತ್ತೈದೆ ಎಂಬ ಭರವಸೆಯನ್ನುಂಟು ಮಾಡುವಂಥದು) ನನ್ನನ್ನು ನಿನ್ನ ಪತಿಯ ಮಿತ್ರನೆಂದು ತಿಳಿ' ಎಂಬ ಮಾತು ಅವನ ಪ್ರತಿಷ್ಠೆ ಗೌರವಗಳನ್ನು ಅಭಿವ್ಯಕ್ತಿಸುತ್ತದೆ. ಅದೂ ಸಾಧಾರಣ ಮಿತ್ರನಲ್ಲ, "ಪ್ರಿಯಮಿತ್ರ" ಎಂಬ ಮಾತು, ನಂಬುಗೆಯ ಸಂದೇಶವನ್ನು ಹೊತ್ತು ತಂದಿದ್ದಾನೆಂಬುದರ ದ್ಯೋತಕ. ಹೀಗೆ ಅವಳಿಗೆ ಆಶ್ವಾಸನೆ ಉಂಟುಮಾಡಿ ಪತಿಯ ಪ್ರಿಯಮಿತ್ರನಾದ ತನ್ನ ಕಡೆಗೆ ಅವಳು ಮೊಗ ಕೊಡುವಂತೆ ಮಾಡಿ, ಅವಳಿಗೆ ನೀಡಬೇಕಾಗಿರುವ ಸಂದೇಶವನ್ನು ನೀಡಲುದ್ಯುಕ್ತನಾಗುತ್ತಾನೆ. "ಹೃದಯದಲಿ ನೆರೆತಾಳ್ದು" ಎಂಬ ಮಾತು ಅವನ ಸಂದೇಶವನ್ನು ಅತ್ಯಂತ ಜೋಕೆಯಿಂದ, (ಬೇರೆಯವರಿಗೆ ಸುಳಿವು ಕೊಡದಂತೆ) ತಂದಿರುವುದರ ಸಂಕೇತ.

ಇಂಥ ವ್ಯವಹಾರಗಳಲ್ಲಿ ಇನ್ನಷ್ಟು ಚತುರನಾದ ಬೇರೆಯಾರಾದರೂ ವ್ಯಕ್ತಿಗೆ ಈ ಕೆಲಸವನ್ನು ಒಪ್ಪಿಸಲಿಲ್ಲವೇಕೆ ಎಂದು ಯಾರಾದರೂ ಶಂಕೆ ವ್ಯಕ್ತಪಡಿಸಿದರೆ, ಅದಕ್ಕೆ ಅವನ ಸಮಾಧಾನ, ಈ ವಿಷಯದಲ್ಲಿ ತನ್ನೊಬ್ಬನಿಗೇ ವಿಶಿಷ್ಟವಾದ ಕೌಶಲವಿದೆ ಎಂದು. ತಾನು 'ಅಂಬುವಾಹ'ನಾಗಿರುವುದರಿಂದ (ನೀರನ್ನು ಹೊತ್ತೊಯ್ಯುವುದು) 'ವಹನ' ಮಾಡುವುದು (ಹೊತ್ತೊಯ್ಯುವುದು) ತನ್ನೊಂದು ಗುಣ ವಿಶೇಷ. ಅಂದರೆ ತಾನು ಸಂದೇಶವಹನ ಕಾರ್ಯವನ್ನಾದರೂ ಮಾಡಬಲ್ಲೆ ಎಂಬುದರ ದ್ಯೋತಕ. ಮಾರ್ಗದಲ್ಲಿ ಆಯಾಸಗೊಂಡು ವಿಶ್ರಾಂತಿ ತೆಗೆದುಕೊಳ್ಳುತ್ತಿರುವ ಪ್ರಯಾಣಿಕರ ವೃಂದವನ್ನು ಬೇಗ ಹೋಗಲನುವಾಗುವಂತೆ ತ್ವರೆಗೊಳಿಸುತ್ತಾನಂತೆ. 'ವೃಂದಾನಿ' ಎಂಬ ಬಹುವಚನ ಶಬ್ದ ಅವನು ಈ ಉಪಕಾರದ ಕೆಲಸವನ್ನು ಹಲವು ಬಾರಿ ಮಾಡಿ ಇದರಲ್ಲಿ ಅಭ್ಯಸ್ತನು ಎಂಬುದರ ದ್ಯೋತಕ. ಅದೂ ಎಂಥ ಮೊಳಗು? ಮೃದು ಮಧುರವಾದ

ಮೊಳಗಿನಿಂದ. ಅಂದರೆ ಚತುರನಾದ ದೂತನಿಗೆ ಇರಬೇಕಾದ ಮಾಧುರ್ಯ ಗುಣದಿಂದ ಕೂಡಿದ ರಮಣೀಯ ಶಬ್ದಗಳ ಮೂಲಕ. 'ಮಾರ್ಗದಲ್ಲಿ' ಎಂಬ ಮಾತು ತನಗೆ ಯಾವ ರೀತಿಯಲ್ಲೂ ಸಂಬಂಧಿಸದೆ ಇರುವವರಿಗೂ ತನ್ನ ಸಹಾಯ ಸಲ್ಲಿಸುವುದು ತನ್ನ ಸ್ವಭಾವ ಧರ್ಮವೇ ಆಗಿದೆ ಎಂಬುದನ್ನು ಸೂಚಿಸುತ್ತದೆ. ಅಂದಮೇಲೆ ತನ್ನ ಆತ್ಮೀಯ ಸ್ನೇಹಿತನೊಬ್ಬನು ತನಗೊಪ್ಪಿಸಿರುವ ಸಂದೇಶವನ್ನು ಅವನ ಸ್ನೇಹದ ಸಲುವಾಗಿ ಇನ್ನಷ್ಟು ಎಚ್ಚರಿಕೆಯಿಂದಲೇ ಮಾಡುತ್ತೇನಲ್ಲವೆ? ಎಂಬುದರ ಸೂಚನೆ.

ಅದೂ ಎಂಥ ವೃಂದವನ್ನು? ಅಬಲೆಯರ ಜಡೆಮುಡಿಯನ್ನು ಬಿಡಿಸಲು ಉತ್ಸುಕರಾಗಿರುವವರನ್ನು. [ವಿರಹಿಣಿಯರ ಗಂಡಂದಿರು ದೂರ ದೇಶಕ್ಕೆ ಪ್ರವಾಸ ಹೋದಾಗ ಅಲಂಕರಿಸಿಕೊಳ್ಳುವುದಿಲ್ಲ. ಆಗ ಮುಡಿಯನ್ನು ಗಂಟು ಕಟ್ಟಿರುತ್ತಾರೆ. ಪ್ರಿಯರು ಹಿಂತಿರುಗಿದಾಗ ಮುಡಿಬಿಚ್ಚಿ ಅಲಂಕರಿಸಿಕೊಳ್ಳುತ್ತಾರೆ. ಹಾಗಾಗಿ ಪ್ರವಾಸದಲ್ಲಿರುವ ಪಯಣಿಗ ವೃಂದವನ್ನು ಅಬಲೆಯರ ಜಡೆಮುಡಿ ಕೆದರಲು ಉತ್ಸುಕರಾಗಿದ್ದವರು ಎಂದು ಹೇಳಲಾಗಿದೆ). 'ಅಬಲೆಯರು' 'ಶಬ್ದದ ಮೂಲಕ ತಮ್ಮ ಪ್ರಿಯರ ಅಗಲಿಕೆಯನ್ನು ಸಹಿಸಲಾರದ ಪ್ರೇಯಸಿಯರ ಅಸಾಮರ್ಥ್ಯವನ್ನು ಹೇಳಲಾಗಿದೆ. 'ಅವರ ಜಡೆಮುಡಿಯ ಬಿಡಿಸಲುತ್ಸುಕರಾಗಿ' ಎಂಬ ಮಾತು ಆ ಪಯಣಿಗರಿಗೆ ತಮ್ಮ ಪ್ರಿಯತಮೆಯರ ವಿಷಯಕ್ಕಿರುವ ಅನುರಾಗ ಭಾವವನ್ನು ಹೇಳುತ್ತದೆ. ಇದರ ವಾಕ್ಯಾರ್ಥವೆಂದರೆ ಪರಸ್ಪರರು ತೀವ್ರವಾಗಿ ಪ್ರೀತಿಸುತ್ತಿದ್ದರೂ ದೈವ ಯೋಗದಿಂದ (ವಿಧಿಯ ವೈಪರೀತ್ಯದಿಂದ) ವಿರಹ ಪೀಡಿತರಾಗಿರುವ ಪ್ರೇಮಿಗಳಿಗೆ ಸಮಾಗಮ ಸೌಖ್ಯವನ್ನುಂಟು ಮಾಡಿ ನನ್ನ ಸೌಹಾರ್ದವನ್ನು ತೋರುವುದು ನಾನೇ ಇಚ್ಛೆಪಟ್ಟು ಆರಿಸಿಕೊಂಡ ವ್ರತವಾಗಿದೆ. ಕವಿ ಇಲ್ಲಿ ಸಂಯೋಜಿಸಿರುವ ವಸ್ತು ಸೌಂದರ್ಯವೇನಿದೆ ಅದು (ಮೇಘ ದೂತತ್ವ) "ಮೇಘದೂತ" ಕಾವ್ಯದ ಮೇಘದೂತತ್ವದಲ್ಲಿ ಪರಮಾರ್ಥವೇ ಆಗಿದೆ. ಅದೇ ಕಾರಣದಿಂದ ಸಹೃದಯ ಹೃದಯಾಹ್ಲಾದಕರವಾಗಿದೆ.

ಇದಕ್ಕೆ ವಿರುದ್ಧ ಉದಾಹರಣೆಯಾಗಿ ರಸ ವಿಷಯದಲ್ಲಿ ಕವಿಯ ಔದಾಸೀನ್ಯದಿಂದ ಸೌಂದರ್ಯ ಲುಪ್ತವಾಗುವುದಕ್ಕೆ

ಸದ್ಯಃ ಪುರೀಪರಿಸರೇಽಪಿ ಶಿರೀಷಮೃದ್ವೀ
ಗತ್ವಾ ಜವಾತ್ ತ್ರಿಚತುರಾಣಿಪದಾನಿ ಸೀತಾ
ಗಂತವ್ಯಮದ್ಯ ಕಿಯದಿತ್ಯಸಕೃದ್ ಬ್ರುವಾಣಾ
ರಾಮಾಶ್ರುಣಃ ಕೃತವತೀ ಪ್ರಥಮಾವತಾರಮ್ [೩೩]

ಶಿರೀಷ ಕೋಮಲೆ ವೈದೇಹಿಯು
ಅಯೋಧ್ಯೆಯ ಪುರಪರಿಸರದಲ್ಲಿಯೆ
ನಾಲ್ಕಾರಡಿಯನು ವೇಗದಿ ಕ್ರಮಿಸಿ
ಸಾಗುವ ದೂರವು ಇನ್ನೆಷ್ಟಿರುವುದು ಈಗ

ಎಂದು ತಿರುತಿರುಗಿಯು ಕೇಳುತೆ
ಶ್ರೀರಾಮನ ಕಣ್ಣಲಿ ಮೊದಲಿಗೆ
ನೀರನು ಚಿಮ್ಮಿಸಿದಳು ತಾನು (೩೩)

[ಬಾಲರಾಮಾಯಣ 6-34]

ಇಲ್ಲಿ ಕವಿ ರಾಮನ ಸಂಗಡ ಕಾಡಿಗೆ ಹೊರಟಿರುವ ಸೀತೆಯ ಸುಕುಮಾರತೆಯನ್ನು ವರ್ಣಿಸುತ್ತಿದ್ದಾನೆ. ಇಲ್ಲಿ ತಿರುತಿರುಗಿ (ಅಸಕೃತ್ - ಕ್ಷಣಕ್ಷಣಕ್ಕೂ) ಈಗ ಸಾಗುವ ದೂರವು ಇನ್ನೆಷ್ಟಿರುವುದು" - ಎಂಬ ರೀತಿಯ ಸೀತೆಯ ಮಾತು ಅವಳ ಸ್ವಭಾವ ಮಹತಿಯನ್ನು ಪ್ರಕಟಿಸುವಂಥದಲ್ಲ. ರಸಪರಿಪೋಷಣೆಯನ್ನೂ ಮಾಡುವುದಿಲ್ಲ. ಕಾರಣ ಸೀತೆ ಕಾಡಿಗೆ ಹೊರಟಿದ್ದು ಸ್ವಯಿಚ್ಛೆಯಿಂದ ಕೂಡಿದುದಲ್ಲದೆ ಸಹಜ ಔಚಿತ್ಯದಿಂದ ಕೂಡಿದ್ದೂ ಆಗಿತ್ತು. ಅತ್ಯಂತ ಸುಕುಮಾರ ಶರೀರೆಯಾದ ಕಾರಣದಿಂದ ಇಂಥ ಒಂದು ಯೋಚನೆ ಅವಳ ಮನಸ್ಸಿನಲ್ಲಿ ಮೂಡಿದ್ದರೂ, ಅದನ್ನು ಅವಳು ಮಾತಿನ ಮೂಲಕ ವ್ಯಕ್ತಪಡಿಸಿದಳೆಂಬುದನ್ನು ಯಾವ ಸಹೃದಯನೂ ಊಹಿಸಲೂ ಆರ. ಅಲ್ಲದೆ ರಾಮನ ಕಣ್ಣಿನಿಂದ ಮೊದಲ ಬಾರಿಗೆ ಕಣ್ಣೀರು ಚಿಮ್ಮಲು ಸೀತೆ ಮತ್ತೆ ಮತ್ತೆ ಸಾಗುವ ದೂರ ಇನ್ನೆಷ್ಟಿರುವುದು" ಎಂದು ಹೇಳಬೇಕಾಯಿತು ಎಂಬ ಮಾತೂ ಇಲ್ಲಿ ಸಂಗತವೆನಿಸುವುದಿಲ್ಲ. ಕಾರಣ ಸೀತೆಯ ಬಾಯಿಂದ ಒಂದು ಸಲಕ್ಕೆ ಆ ಮಾತನ್ನು ಕೇಳಿದ ಕೂಡಲೇ ರಾಮನು ಕಣ್ಣೀರು ಹಾಕಿರಲು ಸಾಕು. ಹಾಗಾಗಿ ಪದ್ಯದ ಭಾವ ಅತ್ಯಂತ ರಮಣೀಯವಾಗಿದ್ದರೂ, ಕವಿ ಕಿಂಚಿತ್ ಎಚ್ಚರ ತಪ್ಪಿದ್ದರಿಂದ ಹಾಳಾಗಿದೆ. ಆದ್ದರಿಂದ ಇಲ್ಲಿ 'ಅಸಕೃತ್' (ತಿರುತಿರುಗಿಯು) ಎಂಬ ಪಾಠದ ಬದಲಿಗೆ "ಅವಶವರ್" (ನಿರುದ್ದೇಶಪೂರ್ವಕವಾಗಿ) ಎಂಬ ಪಾಠವನ್ನು ಇಟ್ಟುಕೊಳ್ಳಬೇಕು.

ಆದ್ದರಿಂದ ಈ ರೀತಿಯಲ್ಲಿ ವಿಶಿಷ್ಟವಾದ ಶಬ್ದ ಮತ್ತು ಅರ್ಥಗಳ ಅನಿವಾರ್ಯ ಅನ್ಯೋನ್ಯ ಸಂಬಂಧವೇ ಕಾವ್ಯ ಎಂಬ ವ್ಯಾಖ್ಯೆ ಉಪಾದೇಯವಾದುದು. ಆದ್ದರಿಂದ ನೇಯಾರ್ಥ, ಅಪಾರ್ಥ, ಇತ್ಯಾದಿ ಕಾವ್ಯದೋಷಗಳು ತನಗೆ ತಾನೆ ನಿವಾರಣೆಯಾಗಿ ಬಿಡುತ್ತವಾದ್ದರಿಂದ ಪ್ರತ್ಯೇಕವಾಗಿ ಹೇಳುವ ಅಗತ್ಯವಿಲ್ಲ.

[ಹೀಗೆ ಕಾವ್ಯದಲ್ಲಿ ಶಬ್ದ ಮತ್ತು ಅರ್ಥಗಳ ಲೋಕ ಪ್ರಸಿದ್ಧವಾದ ಸ್ವರೂಪಕ್ಕಿಂತ ಭಿನ್ನವಾದ ಇತರೆ ವಿಶಿಷ್ಟ ಸ್ವರೂಪವನ್ನು ಹೇಳಿದ ನಂತರ, ಅದಷ್ಟೇ ಕಾವ್ಯಕ್ಕೆ ಸಾಕಾಗುವುದಿಲ್ಲ; ಅನ್ಯ ವೈಚಿತ್ರ್ಯದಿಂದ ಕೂಡಿದ ಶಬ್ದ ಮತ್ತು ಅರ್ಥಗಳೂ ಕಾವ್ಯಕ್ಕೆ ಅಗತ್ಯ ಎಂಬುದನ್ನು ಹೇಳುತ್ತಾನೆ]-

ಉಭಾವೇತಾವಲಂಕಾರ್ಯೌ ತಯೋಃ ಪುನರಲಂಕೃತಿಃ
ವಕ್ರೋಕ್ತಿರೇವ ವೈದಗ್ಧ್ಯ ಭಂಗೀ ಭಣಿತಿರುಚ್ಯತೇ(10)

ಇವರೆಡೂ ಅಲಂಕಾರ್ಯಗಳು (ಶಬ್ದ ಮತ್ತು ಅರ್ಥ). ವಕ್ರೋಕ್ತಿ ಎಂದು ಕರೆಯಲ್ಪಡುವ ವಿದಗ್ಧತೆಯಿಂದ ಕೂಡಿದ ಮಾತಿನ ಒಂದು ಭಂಗಿಯೇ ಈ ಶಬ್ದ ಮತ್ತು ಅರ್ಥಗಳ ಅಲಂಕಾರ [10]

ಇವೆರಡೂ ಎಂದರೆ ಶಬ್ದ ಮತ್ತು ಅರ್ಥಗಳೆರಡೂ ಅಲಂಕಾರ್ಯಗಳು. ಅರ್ಥಾತ್ ಶೋಭಾತಿಶಯವನ್ನು ಉಂಟುಮಾಡುವ ಅಲಂಕಾರದೊಂದಿಗೆ ಜೋಡಿಸಬಹುದಾದವು. ಹಾಗಾದರೆ ಅವುಗಳ ಅಲಂಕಾರವಾವುದು? ಎಂದು ಕೇಳಬಹುದು. ಅವುಗಳು (ಶಬ್ದ ಅರ್ಥ) ಸಂಖ್ಯೆಯಲ್ಲಿ ಎರಡಾದರೂ, ಎರಡರ ಅಲಂಕಾರ ಒಂದೇ ಎಂಬುದೇ ಉತ್ತರ.

ಅವೆರಡಕ್ಕೂ ಸಾಮಾನ್ಯವಾದ ಅಲಂಕಾರ ಯಾವುದು ಹಾಗಾದರೆ? ವಕ್ರೋಕ್ತಿಯೇ ಆ ಅಲಂಕಾರ. ಈಗಾಗಲೇ ಚಿರಪರಿಚಿತವಾದ, ಪ್ರಸಿದ್ಧವಾದ ಮಾತಿನ ಬಳಕೆಗಿಂತ ಭಿನ್ನವಾದ, ಕಾವ್ಯಕ್ಕೆ ವಿಶಿಷ್ಟವಾದ, ವಿಚಿತ್ರ ಪ್ರಕಾರದ ಹಾಗೂ ಕಾಂತಿಯುಕ್ತವಾದ ಭಾಷೆಯೇ ವಕ್ರೋಕ್ತಿ. ಯಾವ ರೀತಿಯದು ಎಂದರೆ, ವಿದಗ್ಧ ಪೂರ್ಣವಾದ ಮಾತಿನ ಭಂಗಿ. ವಿದಗ್ಧತೆಯ ಭಾವ. ಕವಿ ಕರ್ಮಕೌಶಲ್ಯದ ಭಂಗಿಯೇ ಅದು. ಅಂದರೆ ವಕ್ರೋಕ್ತಿಯೇ ಅಲಂಕಾರ. ಮಹಾಕವಿಯ ಭಾಷೆ ಪಡೆದುಕೊಳ್ಳಬಹುದಾದ ಕಲಾತ್ಮಕ ಭಂಗಿ [ವಕ್ರತೆ]ಯೇ ಅದು. ಇದರ ಮಥಿತಾರ್ಥವೆಂದರೆ, ಶಬ್ದ ಮತ್ತು ಅರ್ಥಗಳೆರಡೂ ಕಾವ್ಯದಲ್ಲಿ ತಮ್ಮ ಪ್ರತ್ಯೇಕ ಅಸ್ತಿತ್ವವನ್ನುಳಿಸಿಕೊಂಡು ಅವೆರಡಕ್ಕಿಂತಲೂ ಬೇರೆಯದೇ ಆದದ್ದೊಂದರಿಂದ ಅಲಂಕೃತಗೊಳ್ಳುತ್ತವೆ. ವಾಸ್ತವ ಸಂಗತಿಯೆಂದರೆ ಶಬ್ದಗಳು ಮತ್ತು ಅರ್ಥಗಳು ಪಡೆದುಕೊಳ್ಳಬಹುದಾದ ವಕ್ರತೆಯಿಂದಲೇ ಕಾವ್ಯದ ಉಕ್ತಿ ಸಿದ್ಧವಾಗುವುದು. ಈ ಅರ್ಥದಲ್ಲಿ ಕಾವ್ಯ ರಚನಾ ಪ್ರಕ್ರಿಯೆಯೇ ನಿಜವಾದ ಅಲಂಕೃತಿ. ಕಾರಣ ಅದೇ ಅತ್ಯಂತ ಶೋಭಾತಿಶಯಕಾರಿ ಯಾಗಿರವುದರಿಂದ. ವಕ್ರತೆಯ ವ್ಯಾಖ್ಯಾನ ಸಂದರ್ಭದಲ್ಲಿ ಇದರ ಬಗ್ಗೆ ಇನ್ನಷ್ಟು ಗಮನಹರಿಸಲಾಗುವುದು.

'ವಕ್ರೋಕ್ತಿಯೊಂದೇ ಅಲಂಕಾರ' ಎಂಬ ತಮ್ಮ ವಿಚಾರವು ಈಗಾಗಲೇ ಎಲ್ಲರೂ ಸಾಮಾನ್ಯವಾಗಿ ಅಂಗೀಕರಿಸಿರುವ ತತ್ವಕ್ಕೆ ತದ್ವಿರುದ್ಧವಾಗಿದೆ. ಕಾರಣ ಪ್ರಾಚೀನ ಆಲಂಕಾರಿಕರು, ವಕ್ರೋಕ್ತಿಯ ಜೊತೆಜೊತೆಯಲ್ಲೇ ಸ್ವಭಾವೋಕ್ತಿಯನ್ನೂ ಅಲಂಕಾರವೆಂದು ಸ್ಪಷ್ಟವಾಗಿ ಅಂಗೀಕರಿಸಿದ್ದರು. ಕಾರಣ ಅದು ಅತ್ಯಂತ ರಮಣೀಯವೂ ಹೌದು ಎಂದು ಯಾರಾದರೂ ಆಕ್ಷೇಪಿಸಬಹುದು. ಈ ಆಕ್ಷೇಪವನ್ನು ಬಲವಾಗಿ ನಿರಾಕರಿಸುತ್ತಾನೆ.

ಅಲಂಕಾರ ಕೃತಾಂ ಯೇಷಾಮ್ ಸ್ವಭಾವೋಕ್ತಿ ರಲಂಕೃತಿ:|
ಅಲಂಕಾರ್ಯತಯಾ ತೇಷಾಮ್ ಕಿಮನ್ಯದವತಿಷ್ಠ ತೇ || [11]

ಅಲಂಕಾರ ಗ್ರಂಥಗಳನ್ನು ರಚಿಸಿರುವ ಯಾವ ಪ್ರಾಚೀನ ಆಲಂಕಾರಿಕರು, "ಸ್ವಭಾವೋಕ್ತಿಯು ಅಲಂಕಾರ" ಎಂದು ಹೇಳುತ್ತಾರೋ ಅವರಿಗೆ ಅಲಂಕಾರ್ಯ ರೂಪದಲ್ಲಿ ಬಾಕಿ ಉಳಿದಿರುವುದಾದರೂ ಏನು [11]

ಸ್ವಭಾವೋಕ್ತಿಯು ಅಲಂಕಾರವೆಂದು ಹೇಳುವ ಆಲಂಕಾರಿಕರು (ದಂಡಿ ಮೊದಲಾದವರು ಎಂದರ್ಥ) ಯಾರಿದ್ದಾರೆ ಅವರು ಯೋಚಿಸುವ ತೊಂದರೆಯನ್ನು ತೆಗೆದುಕೊಳ್ಳದ ಸುಕುಮಾರ ಮತಿಗಳಾದ್ದರಿಂದ ತಮ್ಮ ಮಾತಿನಲ್ಲಿರುವ ವೈರುಧ್ಯವನ್ನು ಗಮನಿಸಿಲ್ಲ. ಸ್ವಭಾವೋಕ್ತಿ ಎಂದರೆ,

ವಸ್ತುಗಳು ಲೋಕದಲ್ಲಿರುವಂತೆ ಅವುಗಳ ಸ್ವಭಾವ ಧರ್ಮದ ನಿರೂಪಣೆ. ಸ್ವಭಾವೋಕ್ತಿಯ ಅರ್ಥ ಯಾವುದೇ ವಕ್ರತೆ ಇಲ್ಲದೆ (ತಿರಿಚದೆ, ಕೊಂಕಿಲ್ಲದೆ) ಸಹಜವಾಗಿ ಇದ್ದುದಿದ್ದಂತೆ ವಸ್ತುಗಳ ಸ್ವಭಾವ ಎಂದು ಹೇಳಿ, ಅವುಗಳು ಅಲಂಕಾರಗಳೂ ಹೌದು ಎನ್ನುವುದಾದರೆ, ಆಗ ನಾವು ಒಂದು ಅಸಾಧ್ಯವಾದ ಸನ್ನಿವೇಶದಲ್ಲಿ ಸಿಕ್ಕಿ ಹಾಕಿಕೊಳ್ಳುತ್ತೇವೆ. ಆಗ ಅಂಥ ಅಲಂಕಾರದ ವ್ಯಾಪ್ತಿಗೆ ಬರದೆ ಇರುವುದು ಯಾವುದೂ ಉಳಿದಿರುವುದಿಲ್ಲ. ಹಾಗೂ ಅದರ ವಲಯದ ಹೊರಗೆ ಅಲಂಕೃತಗೊಳಿಸುವಂಥ ವಸ್ತುವೇ ಉಳಿದಿರುವುದಿಲ್ಲ.

ಈಗಾಗಾಲೇ (1-6) ಅಲಂಕಾರ ಯುಕ್ತ ಶಬ್ದ ಮತ್ತು ಅರ್ಥಗಳು ಒಟ್ಟಾಗಿ ಸೇರಿಯೇ ಕಾವ್ಯವಾಗುತ್ತವೆ ಎಂದು ಸ್ಥಾಪಿಸಿರುವುದರಿಂದ, ಈಗ ಸ್ವಭಾವೋಕ್ತಿ ಅಲಂಕಾರವೆಂದಾದರೆ, ಅಲಂಕಾರ್ಯ ಯಾವುದು ಎಂದು ಏಕೆ ಒತ್ತಿ ಹೇಳಲಾಗುತ್ತಿದೆ? ಸತ್ಯ ಸಂಗತಿ ಏನೆಂದರೆ ಹಿಂದೆ ಕೈಗೊಳ್ಳಲಾಗದ ತೀರ್ಮಾನ ಒಟ್ಟಾರೆ ವಾಸ್ತವ ಸ್ಥಿತಿಗೆ ಅನ್ವಯಿಸುತ್ತದೆ ಹಾಗೂ ಅದನ್ನು ಶಬ್ದ, ಅರ್ಥ ಅಥವಾ ವಾಚ್ಯವಾಚಕ ಎಂದು ಬೇರೆ ಬೇರೆಯಾಗಿ ವಿಭಜಿಸಿ ಹೇಳುವುದು ಅನುಕೂಲಕ್ಕೋಸ್ಕರ ಅಷ್ಟೇ, ವ್ಯಾಕರಣದಲ್ಲಿ ವಾಕ್ಯವನ್ನು ವರ್ಣ, ಪದ, ಎಂದು ವಿಭಜಿಸುವಂತೆ. ಇದೇ ವಿಚಾರವನ್ನು ಬೇರೆ ರೀತಿಯಲ್ಲಿ ಹೀಗೆ ಹೇಳಬಹುದು.

ಸ್ವಭಾವ ವ್ಯತಿರೇಕೇಣ ವಕ್ತುಮೇವ ನ ಯುಜ್ಯತೇ
ವಸ್ತು ತದ್ರಹಿತಂ ಯಸ್ಮಾನ್ನಿರೂಪಾಖ್ಯಂ ಪ್ರಸಜ್ಯತೇ[12]

ಸ್ವಭಾವದ ಹೊರತಾಗಿ ಯಾವುದಾದರೊಂದನ್ನು ಹೇಳಲು ಸಾಧ್ಯವೇ ಇಲ್ಲ. ಸ್ವಭಾವ ರಹಿತವಾಗಿ ವಸ್ತುವಿನ ಅಸ್ತಿತ್ವ ಸಾಧ್ಯವೇ ಇಲ್ಲ. [ಸ್ವಭಾವ ವರ್ಜಿತ ವಸ್ತುವೆಂದರೆ ಅದೊಂದು ಹೆಸರಿಲ್ಲದ್ದು]

ಸ್ವಭಾವದ ಹೊರತಾಗಿ ಯಾವುದಾದರೊಂದು ವಸ್ತುವಿನ ಬಗ್ಗೆ ಏನನ್ನೂ ಖಚಿತವಾಗಿ ಹೇಳಲು ಸಾಧ್ಯವಿಲ್ಲ. ವಸ್ತು ವಾಚ್ಯರೂಪದ್ದೇ ಆಗಿರುತ್ತದೆ. (ಇಲ್ಲಿ ವಸ್ತುವೆಂದರೆ, ಕವಿ ಹೇಳಬೇಕಾಗಿರುವುದೇ ಹೊರತು ಬೇರೆ ಅಲ್ಲ.) ಏಕೆ ಏನನ್ನೂ ಹೇಳಲು ಸಾಧ್ಯವಿಲ್ಲ? ಸ್ವಭಾವ ರಹಿತವಾದ್ದರಿಂದ ವಸ್ತು ನಿರೂಪಾಖ್ಯವಾಗುತ್ತದೆ. ಸ್ವಭಾವ ರಹಿತ ವಸ್ತುವೆಂದರೆ, ವಾಸ್ತವ ಅಸ್ತಿತ್ವದಲ್ಲಿ ಇಲ್ಲದಿರುವ ವಿಚಾರವೆಂದೇ ಅರ್ಥ. ಅಂಥ ಒಂದು ಅವಾಸ್ತವವನ್ನು ಮಾತಿನ ಮೂಲಕ ಅಭಿವ್ಯಕ್ತಿಸಲು ಸಾಧ್ಯವಿಲ್ಲ. ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ, ಯಾವುದು ಸಂಪೂರ್ಣವಾಗಿ ಅಸ್ತಿತ್ವದಲ್ಲಿಯೇ ಇಲ್ಲವೋ ಅದನ್ನು ವಿವರಿಸಲು ಸಾಧ್ಯವಿಲ್ಲ. ಸಂಸ್ಕೃತದಲ್ಲಿ ಸ್ವಭಾವ ಶಬ್ದದ ವ್ಯುತ್ಪತ್ತಿ, ಯಾವುದರಿಂದ ತನ್ನ ಸ್ವರೂಪದ ಅಭಿವ್ಯಕ್ತಿ ಮತ್ತು ಪರಿಜ್ಞಾನ ಉಂಟಾಗುತ್ತದೋ ಅದು ಸ್ವಭಾವ. ವಸ್ತುವಿನ ಸ್ವಭಾವವೆಂದರೆ, ಅದರ ಅಭಿವ್ಯಕ್ತಿ ಮತ್ತು ಸೂಚನೆಯಲ್ಲದೆ, ಬೇರೆ ಅಲ್ಲ. ಆದ್ದರಿಂದ ವಸ್ತು ಯಾವುದಾದರೂ ಆಗಿರಲಿ, ಮಾತಿನ ಮೂಲಕ ಅದರ ಪರಿಜ್ಞಾನ ಮತ್ತು ಅಭಿವ್ಯಕ್ತಿ ಎರಡೂ ಕೇವಲ ಅದರ ಸ್ವಭಾವವನ್ನವಲಂಬಿಸಿದೆ. ಅದಿಲ್ಲದ ವಸ್ತು ಎಂದರೆ, (ಸ್ವಭಾವ ರಹಿತ) ಮೊಲದ ಕೋಡಿನಂತೆ ಅದೊಂದು ಅಸತ್‌ಕಲ್ಪ (ಭ್ರಾಂತು)

ಹಾಗೂ ಶಬ್ದ ಮತ್ತು ಜ್ಞಾನಗಳಿಂದ ಅಗೋಚರವಾದ್ದು. (ಸ್ವಭಾವ ಹೀನ ವಸ್ತುವಿನ ಜ್ಞಾನ ಇರುವುದಾಗಲಿ ಶಬ್ದದ ಮೂಲಕ ವ್ಯಕ್ತಪಡಿಸಲಾಗಲಿ ಸಾಧ್ಯವಿಲ್ಲ). ಹಾಗಾಗಿ ಸ್ವಭಾವವು ಎಲ್ಲ ರೀತಿಯ ಮಾತಿನ ಅನಿವಾರ್ಯಘಟಕವಾಗಿ ಇರುತ್ತದೆ. ಸ್ವಭಾವಯುಕ್ತ ವಸ್ತುವೇ ಎಂದೆಂದಿಗೂ ಅಭಿಧೇಯ ಪದವಿಗೆ ಅರ್ಹವೆನಿಸುತ್ತದೆ. ಗಾಡಿ ಹೊಡೆಯುವವರ ಭಾಷೆಯೂ ಸ್ವಭಾವೋಕ್ತಿಯಿಂದ ಕೂಡಿರುವ ಕಾರಣದಿಂದಾಗಿ ಅಲಂಕಾರಯುಕ್ತ ಭಾಷೆಯೆಂದು ಮಾನ್ಯ ಮಾಡಲ್ಪಡಬೇಕಾಗುತ್ತದೆ.

ಈಗ ಈ ಕುರಿತು ಇನ್ನೊಂದು ವಾದ :

ಶರೀರಂ ಚೇದಲಂಕಾರಃ ಕಿಮಲಂಕುರುತೇಽ ಪರಮ್|
ಆತ್ಮೈವ ನಾತ್ಮ ನಃ ಸ್ಕಂಧಂ ಕ್ವಚಿದಪ್ಯಧಿರೋಹತಿ [13] [13]

ಒಂದು ವೇಳೆ ಶರೀರವೇ ಅಲಂಕಾರವೆಂದಾದರೆ, ಅದು ಅಲಂಕರಣಗೊಳಿಸುವ ಅನ್ಯ ಅಲಂಕಾರ್ಯ ಯಾವುದು? (ಅಂದರೆ ಅಲಂಕೃತಗೊಳಿಸುವುದು ಯಾವುದನ್ನು) ಯಾರೇ ಆಗಲಿ ಎಂದೂ ತನ್ನ ಹೆಗಲ ಮೇಲೆ ತಾನೇ ಹತ್ತುವುದು ಸಾಧ್ಯವಿಲ್ಲ. - [13]

ವರ್ಣಿತ ವಸ್ತು ಯಾವುದೇ ಆಗಲಿ, ಅದರ ಸ್ವಭಾವವನ್ನೇ ವರ್ಣ್ಯ ಶರೀರವೆಂದು ಪರಿಗಣಿಸಬೇಕಾಗುತ್ತದೆ. ಶರೀರವನ್ನೇ ಅಲಂಕಾರವೆಂದು ಪರಿಗಣಿಸಿದಾಗ ಅದು ಅಲಂಕರಿಸಬೇಕಾದ ಅದಕ್ಕಿಂತ ಭಿನ್ನವಾದದ್ದು ಯಾವುದು? ಒಂದು ವೇಳೆ ಅದು (ಸ್ವಭಾವೋಕ್ತಿ) ತನ್ನನ್ನೇ ಅಲಂಕರಿಸುತ್ತದೆಂದು ಹೇಳಿದರೆ, ಅದು ಯುಕ್ತಿ ಸಂಗತವಲ್ಲ. ಕಾರಣ ಅದು ಅಸಾಧ್ಯ. ಕಾರಣ ತನ್ನ ಹೆಗಲ ಮೇಲೆ ಯಾರೂ ತಾನೇ ಹತ್ತುವುದಿಲ್ಲ. ಅರ್ಥಾತ್, ಶರೀರವೇ ಶರೀರದ ಹೆಗಲ ಮೇಲೆ ಹತ್ತುವುದಿಲ್ಲ; ತನ್ನಲ್ಲಿಯೇ ಕ್ರಿಯಾ ವಿರೋಧವಿರುವುದರಿಂದ. ಕದಲದೆ ಸ್ಥಿರವಾಗಿ ನಿಂತಿರುವುದು ಮತ್ತು ಹತ್ತುವುದು ಈ ಎರಡೂ ಚಟುವಟಿಕೆಗಳು ಪರಸ್ಪರ ವಿರುದ್ಧವಾದವು. ವಾದದ ಸಲುವಾಗಿ ಅಂಥ ವಿವರಣೆಯನ್ನು (ಸ್ವಭಾವೋಕ್ತಿ ಒಂದು ಅಲಂಕಾರವೆಂಬ ವಾದವನ್ನು) ಒಪ್ಪಿದರೂ ಈಗ ಇದನ್ನು ಕೇಳಬೇಕಾಗಿದೆ.

ಭೂಷಣತ್ವೇ ಸ್ವಭಾವಸ್ಯ ವಿಹಿತೇ ಭೂಷಣಾಂತರೇ|
ಭೇದಾವ ಬೋಧಃ ಪ್ರಕಟಸ್ತ ಯೋರಪ್ರಕಟೋಽ ಥವಾ [14] 14

ಸ್ವಭಾವೋಕ್ತಿಯನ್ನು ಅಲಂಕಾರವೆಂದು ಒಪ್ಪಿಕೊಂಡಿದ್ದಾದರೆ, ಉಪಮಾ ರೂಪಕ ಮೊದಲಾದ ಇತರೆ ಅಲಂಕಾರದ ರಚನೆಯೂ ಸೇರಿಬಿಟ್ಟರೆ, ಆಗ ಸ್ವಭಾವೋಕ್ತಿಗೂ ಆ ಬೇರೆ ಅಲಂಕಾರಕ್ಕೂ ಇರುವ ಭೇದವು ಸ್ಪಷ್ಟವಾಗಿ ತಿಳಿಯುತ್ತದೆಯೇ ಅಥವಾ ಇಲ್ಲವೆ? ಎಂಬ ಪ್ರಶ್ನೆ ಉದ್ಭವಿಸುತ್ತದೆ. [14]

ಸ್ಪಷ್ಟೇ ಸರ್ವತ್ರ ಸಂಸೃಷ್ಟಿರಸ್ಪಷ್ಟೇ ಸಂಕರಸ್ತ ತಃ
ಅಲಂಕಾರಾಂತರಾಣಾಂ ಚ ವಿಷಯೋ ನಾವಶಿಷ್ಯತೆ [15] [15]

ಸ್ವಭಾವೋಕ್ತಿ ಮತ್ತು ಇತರೆ ಅಲಂಕಾರಕ್ಕೂ ಭೇದವು ಸ್ಪಷ್ಟವಾಗಿ ತಿಳಿಯುವಂತಿದ್ದರೆ ಎಲ್ಲೆಡೆಯೂ ಸಂಸೃಷ್ಟಿ ಅಲಂಕಾರವೇ ಇರಬೇಕು. ಹಾಗೂ ಒಂದು ವೇಳೆ ಇವರೆಡರಲ್ಲೂ ಭೇದವು ಸ್ಪಷವಾಗಿ ತಿಳಿಯುವಂತಿರದಿದ್ದರೆ, ಎಲ್ಲೆಡೆಯೂ ಸಂಕರ ಅಲಂಕಾರವೇ ಇರಬೇಕು. ಇತರೆ ಅಲಂಕಾರಗಳಿಗೆ ಎಡೆಯೇ ಇಲ್ಲ [15]

ಸ್ವಭಾವೋಕ್ತಿಯೇ ಒಂದು ಅಲಂಕಾರವೆಂದಾದಾಗ ಅದನ್ನು ಇನ್ನೊಂದು ಅಲಂಕಾರದಿಂದ ಅಲಂಕರಿಸಿದರೆ ಆಗ ಎರಡು ಸಾಧ್ಯತೆಗಳು ಕಂಡುಬರುತ್ತವೆ. (ಸ್ವಭಾವವೇ ಅಲಂಕಾರವೆಂದಾದಾಗ) ಸ್ವಭಾವೋಕ್ತಿಗೂ, ಹೊಸದಾಗಿ ಹೇರಿದ ಆ ಇನ್ನೊಂದು ಅಲಂಕಾರಕ್ಕೂ ಇರುವ ಭೇದ ಅತ್ಯಂತ ಸ್ಪಷ್ಟವಾಗಿ ಗೋಚರವಾಗುತ್ತದೆ. ಅಥವಾ (ಸ್ಪಷ್ಟವಾಗಿ) ಗೋಚರವಾಗುವುದಿಲ್ಲ. ಸ್ವಭಾವೋಕ್ತಿಗೂ, ಇನ್ನೊಂದು ಅಲಂಕಾರಕ್ಕೂ ಇರುವ ಭೇದ ಸ್ಪಷ್ಟವಾಗಿ ಗೊತ್ತಾಗುತ್ತದೆಂದಾರೆ ಎಲ್ಲ ಕಡೆಯೂ ಕವಿ ವಾಕ್ಯದಲ್ಲೆಲ್ಲಾ ಸಂಸೃಷ್ಟಿ ಅಲಂಕಾರವೊಂದೇ ಕಂಡುಬರುತ್ತದೆ. ಒಂದು ವೇಳೆ ಅವರೆಡಕ್ಕೂ ಇರುವ ಭೇದವು ಅಸ್ಪಷ್ಟವಾಗಿ ಗೋಚರಿಸುತ್ತದೆ ಎಂದಾದಾಗ, ಎಲ್ಲೆಡೆಯೂ ಸಂಕರ ಅಲಂಕಾರವೊಂದೇ ಕಂಡುಬರಬೇಕು. ಅದರಿಂದ ಆಗುವ ತೊಂದರೆಯಾದರೂ ಏನು ಎಂದು ಯಾರಾದರೂ ಕೇಳಬಹುದು. ಹಾಗಾದಾಗ, ಉಪಮಾದಿ ಅಲಂಕಾರಗಳಿಗೆ ಎಡೆಯೇ ಇಲ್ಲದಂತಾಗುವುದು ಎಂಬುದೇ ಉತ್ತರ. ಅದರರ್ಥ ಅವೆಲ್ಲವೂ ಅರ್ಥರಹಿತವಾಗುತ್ತವೆ. ಅವುಗಳ ಲಕ್ಷಣ ನಿರೂಪಣೆಯೇ ವ್ಯರ್ಥವಾಗುತ್ತದೆ. ಒಂದು ವೇಳೆ, ಸಂಸೃಷ್ಟಿ ಅಲಂಕಾರ ಮತ್ತು ಸಂಕರ ಅಲಂಕಾರಗಳನ್ನೇ ಉಪಮಾದಿ ಅಲಂಕಾರಗಳ ಕ್ಷೇತ್ರಗಳೆಂದು ಪರಿಗಣಿಸೋಣವೆಂದರೆ, ಅದು ಅರ್ಥವಿಲ್ಲದ್ದು. ಕಾರಣ ಪ್ರಾಚೀನ ಆಲಂಕಾರಿಕರು ಅಂಥ ಒಂದು ಸಾಧ್ಯತೆಯನ್ನು ಯಾವತ್ತೂ ಒಪ್ಪಿಲ್ಲ. ಹಾಗಾಗಿ ಈ ಇಡೀ ಚರ್ಚೆಯೇ ಆಕಾಶ ಚರ್ವಣದಂತೆ (ಇದು ಇಲ್ಲಿಗೆ ಸಾಕು)

ಈಗ ಪ್ರಸ್ತುತ ವಿಷಯಕ್ಕೆ ಬರೋಣ. ಕವಿಪ್ರತಿಭೆಯ ಬಗೆಗಿನ ಆಕರ್ಷಣೆಯ ಪರಿಣಾಮವಾಗಿ ಮಾತ್ರ ಯಾವುದಾದರೊಂದು ವಸ್ತು ಕವಿ ವ್ಯಾಪಾರ ವಿಷಯಕ್ಕೆ (ವರ್ಣನೆಗೆ) ಪ್ರವೇಶ ಪಡೆದುಕೊಳ್ಳುತ್ತದೆಂಬುದನ್ನು ನಿರ್ವಿವಾದವಾಗಿ ಅಂಗೀಕರಿಸಬೇಕು. ಕಾವ್ಯ ಶರೀರವೆಂದೇ ಪರಿಗಣಿಸಲರ್ಹವಾದ ವಸ್ತುವಿನ ಸ್ವಭಾವವೇ ಸಹೃದಯರಿಗೆ ಆಹ್ಲಾದವನ್ನುಂಟುಮಾಡುವಂಥದು. ಕಾವ್ಯದ ಶರೀರವೆನಿಸಿಕೊಂಡ ಇದು (ಸ್ವಭಾವ) ಕವಿ ನಿರ್ಮಿತವಾದ, ಅಲಂಕಾರದಿಂದ ಅಲಂಕರಿಸಲ್ಪಡಬೇಕಾಗುತ್ತದೆ. ಆದ್ದರಿಂದಲೇ ಈ ಹಿಂದೆಯೇ ನಾವು "ಸಹೃದಯರ ಹೃದಯಕ್ಕೆ ಆಹ್ಲಾದವನ್ನುಂಟುಮಾಡಬಲ್ಲ ಸಹಜ ಸೌಂದರ್ಯದಿಂದ ಕೂಡಿರುವುದೇ "ಅರ್ಥ" ಎಂದು, "ಅರ್ಥ ಸಹೃದಯ .....1/9) ಇವೆರಡೂ (ಶಬ್ದ ಮತ್ತುಅರ್ಥಗಳು) ಅಲಂಕಾರ್ಯಗಳೆಂದು (ಉಭಾವೇತದಲಂಕಾರ್ಯೌ ....1/10) ಪ್ರತಿಪಾದಿಸಿರುವುದು.

"ಶಬ್ದಾರ್ಥೌಸಹಿತೌ ...." ಎಂಬ ಕಾವ್ಯಲಕ್ಷಣದಲ್ಲಿನ 'ಶಬ್ದ' ಮತ್ತು "ಅರ್ಥ"ಗಳ ಸಂಪೂರ್ಣ ಮಹತ್ವವನ್ನು ಪ್ರತಿಪಾದಿಸಿದ್ದಾಯಿತು ಇದೀಗ ಆ ಲಕ್ಷಣ ಸೂತ್ರದಲ್ಲಿನ "ಸಹಿತೌ"

ಎಂಬ ಪದವನ್ನು ವಿಸ್ತಾರವಾಗಿ ವ್ಯಾಖ್ಯಾನಿಸಲಾಗುವುದು.

ಶಬ್ದಾರ್ಥೌ ಸಹಿತಾವೇವ ಪ್ರತೀತೌ ಸ್ಫುರತಃ ಸದಾ
ಸಹಿತಾವಿತಿ ತಾವೇವ ಕಿಮಪೂರ್ವಂ ವಿಧೀಯತೇ|| [16]

ಶಬ್ದ ಮತ್ತು ಅರ್ಥಗಳೆರಡೂ ಯಾವಾಗ ಜೊತೆಗೂಡಿಯೇ ಕಾವ್ಯರೂಪದಲ್ಲಿ ಅನುಭವಕ್ಕೆ ಬರುತ್ತವೆ ಎಂಬುದು ಅತ್ಯಂತ ಸ್ಪಷ್ಟವೇ ಇರುವಾಗ ಅವೆರಡೂ ಜೊತೆಗೂಡಿಯೇ ಇರುತ್ತವೆ ಎಂದು ಹೇಳಿದ್ದರಿಂದ ಅಪೂರ್ವವಾದ ಮಾತನ್ನೇನು ಹೇಳಿದಂತಾಯಿತು? [16]

ನಮ್ಮ ಪೂರ್ವಪಕ್ಷದವರು -ಶಬ್ದ ಮತ್ತು ಅರ್ಥಗಳೆರಡೂ ಅರ್ಥಾತ್ ಅಭಿಧಾನ (ವಾಚಕ) ಮತ್ತು ಅಭಿಧೇಯ (ವಾಚ್ಯ)ಗಳೆರಡೂ ಯಾವಾಗಲೂ ಜೊತೆಗೂಡಿಯೇ ಇರುತ್ತವೆ ಮತ್ತು ಅವಿಯುಕ್ತವಾಗಿಯೇ ನಮ್ಮ ಅನುಭವಕ್ಕೆ ಬರುತ್ತವೆ. (ಬುದ್ಧಿಗೆ ಪ್ರತೀತವಾಗುತ್ತವೆ) ಹಾಗಿದ್ದ ಮೇಲೆ ಅವೆರಡೂ ಜೊತೆಯಾಗಿಯೇ ಕಂಡುಬರುತ್ತವೆ ಎಂದು ಹೇಳಿದ್ದರಿಂದ ಹೊಸದೇನನ್ನು ಹೇಳಿದಂತಾಯಿತು? ಅಂದರೆ ಹೊಸದೇನನ್ನೂ ಪ್ರತಿಪಾದಿಸುತ್ತಿಲ್ಲ; ಈಗಾಗಲೇ ಸಿದ್ಧವಾಗಿರುವ ವಿಷಯವನ್ನೇ ಮತ್ತೆ ಪ್ರತಿಪಾದಿಸಿದಂತಾಯಿತು (ಪಿಷ್ಟಪೇಷಣ). ಶಬ್ದ ಮತ್ತು ಅರ್ಥಗಳ ಸಹಿತತ್ವ ನಿಸರ್ಗಸಿದ್ಧವಾದುದು. ಆದ್ದರಿಂದ ವಿವೇಕ ಉಳ್ಳ ಯಾವನೇ ಒಬ್ಬ ಮನುಷ್ಯ ಸ್ವತಃ ಸಿದ್ಧವಾದ ಸತ್ಯವನ್ನು ವಿಶೇಷ ಮಹತ್ವವಿಲ್ಲದೆ ಪುನರುಚ್ಚರಿಸುವ ಕಷ್ಟವನ್ನು ತೆಗೆದುಕೊಳ್ಳುವುದಿಲ್ಲ– ಎಂಬ ಆಕ್ಷೇಪವೆತ್ತಬಹುದು.

ಇದೊಂದು ನಿಜಕ್ಕೂ ಯುಕ್ತವಾದ ಆಕ್ಷೇಪಣೆ. ಆದರೆ ಇಲ್ಲಿ ಕಾವ್ಯದಲ್ಲಿ ನಾವು ಶಬ್ದ ಮತ್ತು ಅರ್ಥಗಳ ವಾಚ್ಯ-ವಾಚಕ ರೂಪದ ನಿತ್ಯ ಮತ್ತು ಪ್ರಸಿದ್ಧವಾದ ಸಂಬಂಧವನ್ನು ಪ್ರಸ್ತಾಪಿಸುತ್ತಿಲ್ಲ. ವಾಚ್ಯ-ವಾಚಕ ರೂಪದ ನಿತ್ಯ ರಚನಾದಿಗಳಾದ 'ಗಾಂಕುಟಾದಿ' ವಾಕ್ಯಗಳು ಮತ್ತು ಗಾಡಿ ಇತ್ಯಾದಿಗಳನ್ನು ಓಡಿಸುವವರ ಅಸಂಬದ್ಧ ಮಾತುಗಳೇ ಮೊದಲಾದುವೆಲ್ಲವನ್ನು "ಸಾಹಿತ್ಯ" ಎಂದು ಹೇಳಬೇಕಾಗುತ್ತದೆ.

ಇಂಥ ಸಂದರ್ಭದಲ್ಲಿ ಪದ (ವ್ಯಾಕರಣ) ವಾಕ್ಯ (ಮೀಮಾಂಸೆ) ಮತ್ತು ಪ್ರಮಾಣ (ನ್ಯಾಯಶಾಸ್ತ್ರ)ಗಳಿಗಿಂತ ಭಿನ್ನವಾದ ಯಾವುದೋ ಒಂದು ತತ್ತ್ವ ಸಾಹಿತ್ಯವೆನಿಸಬೇಕು. ಆ ರೀತಿಯ ವಿಭಜನೆ ಸಾಧ್ಯವಿಲ್ಲ. ಪೂರ್ವಪಕ್ಷದವರು ಹೀಗೆ ಪ್ರಶ್ನಿಸಬಹುದು - "ಪದಾದಿಗಿಂತ ಭಿನ್ನವಾಗಿ ಸಾಹಿತ್ಯವೆಂದು ಕರೆಯಲ್ಪಡುವ ಬರವಣಿಗೆ ಏನಿದೆ ಅದು ಅತ್ಯಂತ ಪ್ರಸಿದ್ಧವೇ. ಅಂದ ಮೇಲೆ ಅದೇ ವಿಷಯ ಕುರಿತು ಹೇಳುತ್ತಿದ್ದರೆ ಪುನರಾವೃತ್ತಿಯ ಆರೋಪಕ್ಕೆ ನೀವು ಒಳಗಾಗುವುದಿಲ್ಲವೆ?" ಎಂದು. ಅಂದರೆ ಅದರ ಚರ್ಚೆ ಪಿಷ್ಟ - ಪೇಷಣ)

ಇಂದು ಯಾವುದನ್ನು ನಾವು ಸಾಹಿತ್ಯವೆಂದು ಕರೆಯುತ್ತೇವೆಯೋ ಅದು ಕಾವ್ಯಮೀಮಾಂಸೆಯ ಚರಿತ್ರೆಯುದ್ದಕ್ಕೂ ಅದೇ ಹೆಸರಿನಿಂದಲೇ ಪ್ರಸಿದ್ಧವಾಗಿದೆ. ಇಷ್ಟು ದೀರ್ಘಕಾಲದವರೆಗೂ ಈ ಸಾಹಿತ್ಯವೆಂಬ ಪರಿಕಲ್ಪನೆ ತನಗೆ ತಾನೇ ಅತ್ಯಂತ ರಮಣೀಯವೆಂದೂ, ಕಾವ್ಯ ಕೌಶಲದ ಪರಾಕಾಷ್ಠೆಯೆಂದೂ ಹೆಸರಾಗಿದ್ದರೂ, ಇಲ್ಲಿಯವರೆಗೂ ಯಾವೊಬ್ಬ ವಿದ್ವಾಂಸನೂ ಈ

ಪರಿಕಲ್ಪನೆಯ ವಾಸ್ತವ ಸ್ವರೂಪವನ್ನು ಹೀಗೆ ಎಂದು ಕಿಂಚಿತ್ತಾದರೂ ವಿವೇಚಿಸಿಲ್ಲ. ಆದ್ದರಿಂದ ಕಾವ್ಯದ ಅಧಿದೇವಿಯಾದ ಸರಸ್ವತಿಯ ಹೃದಯ ಕಮಲದಲ್ಲಿರುವ ಮಕರಂದದ ಬಿಂದುಗಳ ಹಾಗೆ ಎಲ್ಲ ಶ್ರೇಷ್ಠ ಕವಿಗಳ ವಾಣಿಯಲ್ಲಿ ಹುದುಗಿರುವ ಈ ಸಾಹಿತ್ಯದ ಪರಿಕಲ್ಪನೆಯ ಅತಿ ಮನೋಹರ ಸಾರಸತ್ವವನ್ನು ಸಹೃದಯರೆಂಬ ದುಂಬಿಗಳ ಆಮೋದದ ಸಲುವಾಗಿ ತೆರೆದಿಡೋಣ.

ಸಾಹಿತ್ಯಮನಯೋಃ ಶೋಭಾಶಾಲಿತಾಮ್ ಪ್ರತಿ ಕಾಪ್ಯಸೌ|
ಅನ್ಯೂನಾನತಿರಿಕ್ತತ್ವಮನೋ ಹಾರಿಣ್ಯವಸ್ಥಿತಿಃ [17]

ಕಾವ್ಯ ಶೋಭೆಗೆ ಸಂಬಂಧಿಸಿದಂತೆ, ಸಾಹಿತ್ಯ ಅಥವಾ ಶಬ್ದ ಮತ್ತು ಅರ್ಥಗಳ ಸುಸಾಂಗತ್ಯವೆಂದರೆ ಅದೊಂದು ವಿಶಿಷ್ಟ ಬಗೆಯ ಕವಿ ಪ್ರಯೋಗ. ಕವಿಯ ಇಡೀ ರಚನೆಯನ್ನು ಶೋಭಾಯುಕ್ತವಾಗುವಂತೆ ಮಾಡಲು ಅಗತ್ಯವಾದ ನ್ಯೂನವೂ ಅಲ್ಲದ ಅತಿಯೂ ಅಲ್ಲದ ನಿಷ್ಕೃಷ್ಟವಾದ ಶಬ್ದ ಮತ್ತು ಅರ್ಥಗಳನ್ನು ಅಳವಡಿಸಿಕೊಂಡ ವಿಶಿಷ್ಟ ಬಗೆಯ ಕವಿ ಪ್ರಯೋಗ [17]

ಶಬ್ದ ಮತ್ತು ಅರ್ಥಗಳ ಸಹಿತತೆಯೇ ಸಾಹಿತ್ಯ. ಸಹೃದಯರಿಗೆ ಅಲೌಕಿಕ ಆನಂದವುಂಟು ಮಾಡುವಂಥದು ಈ ಶಬ್ದ ಮತ್ತು ಅರ್ಥಗಳ ಒಂದು ಅದ್ಭುತವಾದ ವಿನ್ಯಾಸಭಂಗಿ. ಆ ವಿನ್ಯಾಸ ಭಂಗಿಗಳಾದರೂ ಎಂಥವು? ಕವಿಯ ಇಡೀ ರಚನೆಯನ್ನು ಸುಂದರಗೊಳಿಸಲು ಅಗತ್ಯವಾದ; ನ್ಯೂನವೂ ಅಲ್ಲದ ಅತಿಯೂ ಅಲ್ಲದ ನಿಷ್ಕೃಷ್ಟವಾದ ಶಬ್ದ ಮತ್ತು ಅರ್ಥಗಳನ್ನು ಅಳವಡಿಸಿಕೊಂಡ ವಿಶಿಷ್ಟ ಬಗೆಯ ವಿನ್ಯಾಸ ಭಂಗಿ" ಎಂಬ ಮಾತನ್ನು ಸೇರಿಸುವುದರ ಉದ್ದೇಶ ಎರಡೂ ಸಹೃದಯನಿಗೆ ಆಹ್ಲಾದ ಉಂಟುಮಾಡುವಲ್ಲಿ ಪರಸ್ಪರ ಸ್ಪರ್ಧಿಸುತ್ತಿವೆ ಎಂಬುದನ್ನು ಸೂಚಿಸಲು. ಎರಡರಲ್ಲಿ ಯಾವುದೊಂದರಲ್ಲೂ ಉತ್ಕರ್ಷವಾಗಲಿ (ಆಧಿಕ್ಯ) ಅಥವಾ ನ್ಯೂನತೆ (ನಿಕರ್ಷ)ಯಾಗಲಿ ಇರುವುದಿಲ್ಲ.

ಹಾಗಾದರೆ (ಪೂರ್ವಪಕ್ಷ) ಆ ರೀತಿಯ ನ್ಯೂನಾಧಿಕ್ಯರಹಿತ ಸಾಮ್ಯತೆ ನಿಕೃಷ್ಟವಾದ ಶಬ್ದ ಮತ್ತು ಅರ್ಥಗಳೆರಡರ ವಿಷಯದಲ್ಲೂ ಇರಬಹುದಲ್ಲ; (ಆದ್ದರಿಂದ ಅದನ್ನೂ ಕೂಡ ಸಾಹಿತ್ಯವೆಂದೇ ಹೇಳಬಹುದಲ್ಲ) ಎಂದು ಕೇಳಬುಹುದು. ಇಲ್ಲ ಅದು ಸಂಭವವಿಲ್ಲ. ಆದ್ದರಿಂದಲೇ ಶೋಭಾ ಶಾಲಿತೆಯ ಸಲುವಾಗಿ ಎಂದು ಸ್ಪಷ್ಟವಾಗಿ ಹೇಳಿರುವುದು. ಶೋಭೆ ಎಂದರೆ ಸೌಂದರ್ಯ. ಸೌಂದರ್ಯದಿಂದ ಯಾವುದು ಪ್ರಶಂಸಿಸಲ್ಪಡುತ್ತದೋ ಅದು ಶೋಭಾಶಾಲಿತಾ (ಸೌಂದರ್ಯ ಶ್ಲಾಘ್ಯತೆಯ ಸಲುವಾಗಿ). ಇದೇ ಸೌಂದರ್ಯ ಶ್ಲಾಘ್ಯತೆಯೇ ಸಹೃದಯರನ್ನು ಆಹ್ಲಾದಗೊಳಿಸುವುದು. ಅವುಗಳ ಸ್ಪರ್ಧೆಯಿಂದಾಗಿ 'ಸಾಹಿತ್ಯ'ವೆನಿಸುತ್ತದೆ. ಶಬ್ದ ಮತ್ತು ಅರ್ಥಗಳನ್ನು ಅವುಗಳ ಅತ್ಯಂತ ಯುಕ್ತ ಮತ್ತು ಆಕರ್ಷಕ ರೀತಿಯಲ್ಲಿ ಬಳಸುವುದೇ ಸಾಹಿತ್ಯ. 'ಸಾಹಿತ್ಯ' ಶಬ್ದದ ಇನ್ನೊಂದು ಉದ್ದೇಶಿತ ಅರ್ಥ ಒಂದು ಶಬ್ದಕ್ಕೂ ಇನ್ನೊಂದು ಶಬ್ದಕ್ಕೂ ಇರುವ ಹಾಗೂ ಒಂದು ಅರ್ಥಕ್ಕೂ ಇನ್ನೊಂದು ಅರ್ಥಕ್ಕೂ ಇರುವ ಪರಸ್ಪರ ಸಂಬಂಧವೆಂದು. ಈ ಕಾವ್ಯಲಕ್ಷಣದಲ್ಲಿ ವಾಕ್ಯವು ಒಂದು ಸಂಪೂರ್ಣ ಘಟಕವೆಂದೂ, ವಾಕ್ಯ ಮುಕ್ತಾಯದಲ್ಲಿಯೇ ಅದರ ಅರ್ಥವೂ ಕೊನೆಗೊಳ್ಳುವುದೆಂದೂ ಈಗಾಗಲೇ ನೋಡಿದ್ದೇವೆ.

ಇದರ ಮೇಲೆ ಪೂರ್ವಪಕ್ಷದವರು, ಶಬ್ದಕ್ಕೆ ಇನ್ನೊಂದು ಶಬ್ದದೊಂದಿಗೆ ಮತ್ತು ಅರ್ಥಕ್ಕೆ ಇನ್ನೊಂದು ಅರ್ಥದೊಂದಿಗೆ ಮಾತ್ರ "ಸಾಹಿತ್ಯ" (ಸಹಿತತ್ವ) ಉಂಟಾಗುತ್ತದೆಂದು ಏಕೆ ಹೇಳಬೇಕು, ಶಬ್ದಕ್ಕೆ ಇನ್ನೊಂದು ಅರ್ಥದೊಂದಿಗೆ ಹಾಗೂ ಅರ್ಥಕ್ಕೆ ಇನ್ನೊಂದು ಶಬ್ದದೊಂದಿಗೆ ಏಕೆ 'ಸಾಹಿತ್ಯ' (ಸಹಿತತ್ವ) ಉಂಟಾಗಬಾರದು? ಎಂದು ಕೇಳುತ್ತಾರೆ. ಅದಕ್ಕೆ ಉತ್ತರ - ಅದು ಸಾಧ್ಯವಿಲ್ಲ, ಕಾರಣ ಈ ರೀತಿಯ ಕ್ರಮ ವಿಪರ್ಯದಿಂದ ಯಾವುದೇ ಪ್ರಯೋಜನವಾಗಲಿ ಸರಿಯಾದ ಅನ್ವಯವಾಗಲಿ ಸಿದ್ಧಿಸುವುದಿಲ್ಲ. ಆದ್ದರಿಂದ ಶಬ್ದ ಮತ್ತು ಅರ್ಥಗಳು ತಮ್ಮ ಸೌಂದರ್ಯ ಸಂಪತ್ತಿಯಲ್ಲಿ ಒಂದರೊಡನೊಂದು ಸ್ಪರ್ಧಿಸುತ್ತಿರುವ; ಸಹೃದಯರ ಹೃದಯಕ್ಕೆ ಆಹ್ಲಾದವನ್ನುಂಟುಮಾಡುವ, ಕವಿಯ ಅಲೌಕಿಕ ವಾಕ್ಯ ವಿನ್ಯಾಸ ಸಂಪತ್ತು ಮಾತ್ರ ಸಾಹಿತ್ಯವೆಂದು ಕರೆಸಿಕೊಳ್ಳುವ ಯೋಗ್ಯತೆ ಪಡೆದುಕೊಳ್ಳುತ್ತದೆ.

ಮಾರ್ಗಾನುಗುಣ್ಯ ಸುಭಗೋ ಮಾಧುರ್ಯಾದಿಗುಣೋದಯಃ
ಅಲಂಕರಣ ವಿನ್ಯಾಸೋ ವಕ್ರತಾತಿಶಯಾನ್ವಿತಃ [೩೪]

ಸುಕುಮಾರವೇ ಮೊದಲಾದ ಕಾವ್ಯಮಾರ್ಗಗಳಿಗೆ ಅನುರೂಪವಾದ ರಮಣೀಯ, ಮಾಧುರ್ಯವೇ ಮೊದಲಾದ ಗುಣಗಳಿಂದ ಕೂಡಿದ ಹಾಗೂ ಅತಿಶಯ ವಕ್ರತೆ (ವಕ್ರತಾತಿಶಯ) ಯಿಂದ ಕೂಡಿದ ಅಲಂಕರಣ ವಿನ್ಯಾಸಗಳು, ಹಾಗೂ

ವೃತ್ತ್ಯೌಚಿತ್ಯ ಮನೋಹಾರಿ ರಸಾನಾಂ ಪರಿಪೋಷಣಂ
ಸ್ಪರ್ಧಯಾ ವಿದ್ಯತೇ ಯತ್ರ ಯಥಾಸ್ವಮುಭಯೋರಪಿ [೩೫]

ಕೈಶಿಕೀ, ಭಾರತಿ ಇತ್ಯಾದಿ ವೃತ್ತಿಗಳಿಗೆ ಉಚಿತವಾದ ಮನೋಹಾರಿಯಾದ ರಸಗಳ ಪರಿಪೋಷಣೆ ಇವೆಲ್ಲವೂ ಸ್ಪರ್ಧಾತ್ಮಕ ರೂಪದಲ್ಲಿ ಶಬ್ದ ಮತ್ತು ಅರ್ಥಗಳೆರಡರಲ್ಲೂ ಇರುವಲ್ಲಿ - 35

ಸಾ ಕಾವ್ಯವಸ್ಥಿತಿಸ್ತದ್ವಿದಾಹ್ಲಾದೈಕ ನಿಬಂಧನಮ್
ಪದಾದಿವಾಕ್ ಪರಿಸ್ಪಂದ ಸಾರಃ ಸಾಹಿತ್ಯಮುಚ್ಯತೇ [೩೬]

ಕಾವ್ಯ ತತ್ವಜ್ಞರಿಗೆ ಆನಂದವನ್ನುಂಟು ಮಾಡುವ, ಸ್ವಭಾವದಿಂದ ರಮಣೀಯವಾದ ಹಾಗೂ ಪದ, ವಾಕ್ಯ ಪ್ರಮಾಣಾದಿ ವಾಣಿಯ ವಿಲಾಸಗಳ ಸಾರಭೂತ ತತ್ತ್ವವೇ ಸಾಹಿತ್ಯವೆನಿಸುತ್ತದೆ [೩೬]

ಪದ (ವ್ಯಾಕರಣಶಾಸ್ತ್ರ), ವಾಕ್ಯ (ಮೀಮಾಂಸಾಶಾಸ್ತ್ರ), ಪ್ರಮಾಣ (ನ್ಯಾಯಶಾಸ್ತ್ರ) ಮತ್ತು ಸಾಹಿತ್ಯ ಎಂಬ ಈ ನಾಲ್ಕು ಪ್ರತಿವಾಕ್ಯ ರಚನೆಯಲ್ಲೂ ಉಪಯೋಗವಾಗುತ್ತವೆ. ಉದಾಹರಣೆಗೆ 'ಗ'ಕಾರ 'ಔ'ಕಾರ ಮತ್ತು ವಿಸರ್ಗದಿಂದ ಕೂಡಿದ ಈ ಪದದ (ಗೌ:) ಅಕ್ಷರ ಸಂಯೋಜನೆ (ಕಾಗುಣಿತ)ಯನ್ನು ವ್ಯಾಕರಣ ನಮಗೆ ಕಲಿಸುತ್ತದೆ ಹಾಗೂ ಅದು ಇರುವ ವಾಕ್ಯದಲ್ಲಿನ ಪ್ರಾತಿಪದಿಕಾರ್ಥ ಪಂಚಕ [ಪ್ರಾತಿಪದಿಕಾರ್ಥ, ಲಿಂಗ, ಪರಿಮಾಣ, ವಚನ ಮತ್ತು ಕಾರಕ] ಹಾಗೂ ಆಖ್ಯಾತ ಪದಾರ್ಥಷಟ್ಕಗಳ [ಕರ್ತೃ, ಕರ್ಮ, ಕಾಲ, ಪುರುಷ, ವಚನ ಮತ್ತು ಭಾವ] ಮೌಲಿಕ ಸಂಬಂಧಗಳನ್ನು ಸೂಚಿಸುತ್ತದೆ. ವಾಕ್ಯದಲ್ಲಿ ಸೇರಿರುವ ಪದಗಳ ಪರಸ್ಪರ ಅನ್ವಯ ಲಕ್ಷಣ ಸಂಬಂಧವನ್ನು ನಿಗದಿಗೊಳಿಸಿದ ನಂತರ, ಅದರ

ವಾಕ್ಯಾರ್ಥ, ತಾತ್ಪರ್ಯ, ಹೀಗೆಂದು ಗೊತ್ತು ಹಚ್ಚುವಲ್ಲಿ ಮೀಮಾಂಸಾಶಾಸ್ತ್ರ (ವಾಕ್ಯ ವಿಚಾರ ನಿರೂಪಿಸುವ ಶಾಸ್ತ್ರ) ನೆರವಿಗೆ ಬರುತ್ತದೆ. ಪ್ರತ್ಯಕ್ಷ, ಅನುಮಾನವೇ ಮೊದಲಾದ ಪ್ರಮಾಣಗಳ ಮೂಲಕ ಈ ಪದ ಅಥವಾ ವಾಕ್ಯದ ಅರ್ಥ ಸಮೀಚೀನವಾಗಿದೆ ಎಂದು ಹೇಳಿ, ವಾಕ್ಯದ ಯುಕ್ತಿ ಯುಕ್ತತೆಯ ಪ್ರಮಾಣದ ಮೂಲಕ ವಿವೇಚಿಸುವುದು ನ್ಯಾಯಶಾಸ್ತ್ರದ ಪ್ರಯೋಜನ. ಅಂತಿಮವಾಗಿ ಸಾಹಿತ್ಯವು ಅಲ್ಲಿ ಕಂಡುಬರುವ, ಸಹೃದಯರ ಹೃದಯವನ್ನಪಹರಿಸಿ ಅವರ ಸಂತೋಷಕ್ಕೆ ಕಾರಣವಾದ ಸೌಂದರ್ಯಾಂಶಗಳನ್ನು ವಿವರಿಸುವಲ್ಲಿ ಪ್ರಯೋಜನಕಾರಿಯಾಗುತ್ತದೆ. ಈ ಪದ, ವಾಕ್ಯ, ಪ್ರಮಾಣ ಮತ್ತು ಸಾಹಿತ್ಯಗಳಿಗೆ ಒಂದೊಂದಕ್ಕೂ ತನ್ನ ಕ್ಷೇತ್ರದಲ್ಲಿ ಪ್ರಾಧಾನ್ಯ ಹಾಗೂ ಆ ಕ್ಷೇತ್ರದ ಹೊರಗೆ ಗೌಣಸ್ಥಾನವಿರುವುದಾದರೂ, ಸಕಲ ವಾಗ್ವ್ಯಾಪಾರದ ಸೌಂದರ್ಯದ ಪ್ರಾಣಸ್ವರೂಪವೆನಿಸಿರುವ ಕವಿವ್ಯಾಪಾರ ಅಥವಾ ಸಾಹಿತ್ಯವು ವಸ್ತುತಃ ಎಲ್ಲೆಡೆ ಸರ್ವಾತಿಶಯದ್ದೆನಿಸಿದೆ. ಅನ್ಯವಾಕ್ಯ ಸಂದರ್ಭಗಳಲ್ಲಿ ಗೌಣರೀತಿಯಲ್ಲಿ ಇದರ ಪ್ರವೇಶವಾದರೂ ಸಾಕು, ತನ್ನ ಪರಿಮಳದ ಶೂನ್ಯತೆ ಉಂಟಾಯಿತೆಂದರೆ, ಆಗ ರಮಣೀಯತೆಯ ಅಭಾವ ಉಂಟಾಗುತ್ತದೆ. ಆಗ ವಾಕ್ಯರಚನೆ ಶೋಭಾಹೀನವಾಗಿ ವ್ಯರ್ಥವೆನಿಸುತ್ತದೆ. ಸಾಹಿತ್ಯಶಾಸ್ತ್ರವು ಇತರೆ ಶಾಸ್ತ್ರಾದಿಗಳಿಗಿಂತ ಯಾವ ರೀತಿಯಲ್ಲಿ ಶ್ರೇಷ್ಠವೂ ಉಪಯುಕ್ತವೂ ಆದ ಪ್ರಯೋಜನವನ್ನು ಹೊಂದಿದೆ ಹಾಗೂ ಇತರೆ ಶಾಸ್ತ್ರಗಳ ವಸ್ತುವೆನಿಸಿದ ಚತುರ್ವಿಧ ಪುರುಷಾರ್ಥಗಳಿಗಿಂತ ಮಿಗಿಲಾದ ಪ್ರಯೋಜನವನ್ನು ಅದು ಹೇಗೆ ನೀಡುತ್ತದೆ ಎಂಬುದನ್ನು ಈಗಾಗಲೇ ಹೇಳಲಾಗಿದೆ (2/3,5)

ಅಪರ್ಯಾಲೋಚಿತೇಽಪ್ಯರ್ಥೇ ಬಂಧ ಸೌಂದರ್ಯಸಂಪದಾ
ಗೀತವತ್ ಹೃದಯಾಹ್ಲಾದಂ ತದ್ವಿದಾಂ ವಿದಧಾತಿ ಯತ್ [೩೭]

ಅರ್ಥವನ್ನು ಪರ್ಯಾಲೋಚಿಸದೆ ಇದ್ದರೂ ವಾಕ್ಯ ವಿನ್ಯಾಸದ ಸೌಂದರ್ಯ ಸಂಪತ್ತಿಯಿಂದ, ಇಂಪಾದ ಸಂಗೀತದ ಹಾಗೆ ಸಹೃದಯರ ಹೃದಯಕ್ಕೆ ಸಂತೋಷವನ್ನುಂಟು ಮಾಡುವಂಥದು ಯಾವುದೊ (ಅದನ್ನು ಕುರಿತು) - ೩೭

ವಾಚ್ಯಾವಬೋಧ ನಿಷ್ಪತ್ತೌ ಪದ ವಾಕ್ಯಾರ್ಥ ಜೀವಿತಮ್|
ಯತ್ಕಿಮಪ್ಯರ್ಪಯತ್ಯಂತಃ ಪಾನಕಾ ಸ್ವಾದವತ್ಸತಾಮ್ [೩೮]

ವಾಚ್ಯಾರ್ಥದ ಜ್ಞಾನ ಉಂಟಾದ ನಂತರ, ಪದ ಮತ್ತು ವಾಕ್ಯಾರ್ಥಗಳ ವ್ಯತ್ಯಾಸವಿಲ್ಲದೆ, ಪಾನಕದ ಆಸ್ವಾದದ ಹಾಗೆ ಯಾವುದು ಸಹೃದಯರಿಗೆ ಸಂಪೂರ್ಣವಾಗಿ ವೇದ್ಯವಾಗುತ್ತದೋ [ಅದನ್ನು ಕುರಿತು]

ಶರೀರಮ್ ಜೀವಿತೇನೇವ ಸ್ಫುರಿತೇನೇವ ಜೀವಿತಮ್
ವಿನಾ ನಿರ್ಜೀವತಾಮ್ ಯೇನ ಯಾತಿಕಾವ್ಯಂ ವಿಪಶ್ಚಿತಾಮ್ [೩೯]

ಜೀವವಿಲ್ಲದಿದ್ದರೆ ದೇಹ ಹೇಗೋ, ಸ್ಪಂದನವಿಲ್ಲದಿದ್ದರೆ ಜೀವ ಹೇಗೋ ಹಾಗೆಯೇ ಯಾವುದು

ಇಲ್ಲದಿದ್ದರೆ ಕಾವ್ಯವು ವಿದ್ವಾಂಸರ ಪಾಲಿಗೆ ನಿರ್ಜೀವವೆನಿಸುತ್ತದೋ [ಅದನ್ನು] [೩೯]

ಯಸ್ಮಾತ್‌ಕಿಮಪಿ ಸೌಭಾಗ್ಯಮ್ ತದ್ವಿದಾಮೇವ ಗೋಚರಮ್
ಸರಸ್ವತೀ ಸಮುಭ್ಯೇತಿ ತದಿದಾನೀಂ ವಿಚಾರ್ಯತೇ [೪೦]

ಯಾವುದರ ದೆಸೆಯಿಂದಾಗಿ ಕಾವ್ಯತತ್ವಜ್ಞರಿಗೆ ಮಾತ್ರ ಗೋಚರವಾಗಬಹುದಾದ ಅತ್ಯಪೂರ್ವ ರಮಣೀಯತೆಯಿಂದ ಕೂಡಿದ ಕವಿವಾಣಿ ಹೊರಹೊಮ್ಮುತ್ತದೋ ಅದನ್ನು ಕುರಿತು ಈಗ ವಿಚಾರಿಸಲಾಗುವುದು.

ಈ ನಾಲ್ಕೂ ಅಂತರಶ್ಲೋಕಗಳು

ಹೀಗೆ ಕಾವ್ಯ ಲಕ್ಷಣ ಸೂತ್ರವಾದ "ಶಬ್ದಾರ್ಥಸಹಿತೌ"ನಲ್ಲಿರುವ "ಸಹಿತೌ" ಎಂಬ ಪದವನ್ನು ವ್ಯಾಖ್ಯಾನಿಸಿ ಈಗ ಕವಿವ್ಯಾಪಾರ ವಕ್ರತ್ವವನ್ನು ವಿವರವಾಗಿ ವ್ಯಾಖ್ಯಾನಿಸಲಾಗುವುದು.

ಕವಿವ್ಯಾಪಾರ ವಕ್ರತ್ವ ಪ್ರಕಾರಾ: ಸಂಭವತಿ ಷಟ್|
ಪ್ರತ್ಯೇಕಂ ಬಹವೋ ಭೇದಾಸ್ತೇಷಾಂ ವಿಚ್ಛಿತ್ತಿ ಶೋಭಿನಃ[18]

ಕವಿ ವ್ಯಾಪಾರ ವಕ್ರತ್ವವು ಆರು ಬಗೆ. ಆ ಆರೂ ಪ್ರಕಾರಗಳಲ್ಲಿ ಪ್ರತಿಯೊಂದೂ ವೈಚಿತ್ರ್ಯದ ಭಂಗಿಯಿಂದ ಶೋಭಿಸುವ ಅನೇಕ ಉಪಭೇದಗಳನ್ನೊಳಗೊಂಡಿರುತ್ತದೆ (18)

ಕವಿಗಳ ವ್ಯಾಪಾರವು ಕವಿ ವ್ಯಾಪಾರ [ಸೃಜನಶೀಲ ಕವಿಯ ಕ್ರಿಯಾ ವ್ಯಾಪಾರ ಅಂತಿಮವಾಗಿ ಅವನ ಕಾವ್ಯವೇ.] ಅದು ಕಾವ್ಯಕ್ರಿಯಾರೂಪಿಯಾದುದು. ಅದರ ವಕ್ರತೆ ಎಂಬುದು (ಲೋಕ ಅಥವಾ ಶಾಸ್ತ್ರಾದಿಗಳಲ್ಲಿ) ಇತರೆ ಪ್ರಸಿದ್ಧ ಪ್ರಸ್ಥಾನ ಗಳಿಂದ ಭಿನ್ನವಾದ ವೈಚಿತ್ರ್ಯ. ಅದರ ಪ್ರಭೇದಗಳು ಪ್ರಧಾನವಾಗಿ ಆರು. ಪ್ರಮುಖವಾಗಿ ಇರುವ ಭೇದಗಳು ಇಷ್ಟೇ. ಅವುಗಳಲ್ಲಿ ಪ್ರತಿಯೊಂದಕ್ಕೂ ಅನೇಕ ಭೇದ ವಿಶೇಷಣಗಳಿರುತ್ತವೆ. ಹೇಗೆ? ವೈಚಿತ್ರ್ಯ ಶೋಭಿ ಅಥವಾ ವಿಚಿತ್ರತೆಯಿಂದ ಕೂಡಿದ ಭಂಗಿಯಿಂದ ಶೋಭಿತವಾದವು ಗಳಾಗಿರುತ್ತವೆ. ಅದನ್ನೇ ಇಲ್ಲಿ ತೋರಿಸಲಾಗಿದೆ.

ವರ್ಣವಿನ್ಯಾಸ ವಕ್ರತ್ವಂ ಪದಪೂರ್ವಾರ್ಧವಕ್ರತಾ
ವಕ್ರತಾಯಾಃ ಪರೋಽಪ್ಯಸ್ತಿ ಪ್ರಕಾರ: ಪ್ರತ್ಯಯಾಶ್ರಯಃ(19)

1. ವರ್ಣವಿನ್ಯಾಸ ವಕ್ರತೆ 2. ಪದಪೂರ್ವಾರ್ಧ ವಕ್ರತೆ ಮತ್ತು 3. ಪ್ರತ್ಯಯಾಶ್ರಿತ ವಕ್ರತೆ ಎಂಬುವೇ ಆ ಮೂರು ಪ್ರಭೇದಗಳು, (19)

ವರ್ಣಗಳ ವಿನ್ಯಾಸವೇ ವರ್ಣವಿನ್ಯಾಸ ವಕ್ರತೆ. ಅರ್ಥಾತ್ ಅಕ್ಷರಗಳನ್ನು ವಿಶಿಷ್ಟ ಕ್ರಮದಲ್ಲಿ ಅಳವಡಿಸುವುದೇ ವರ್ಣವಿನ್ಯಾಸ. ಅದರ ವಕ್ರತೆ. ಅಥವಾ ವಕ್ರಭಾವ. ಅಂದರೆ ವರ್ಣಗಳ ರಚನಾ ವಿಶೇಷದಿಂದ ಉಂಟಾದ, ಶಬ್ದಶೋಭೆಯ ಅತಿಶಯ. ಶಬ್ದಗಳನ್ನು ಅವುಗಳ ನಾದ ಪರಿಣಾಮದತ್ತ ದೃಷ್ಟಿಯಿಟ್ಟು ಅಳವಡಿಸುವರೀತಿ. ಸಾಂಪ್ರದಾಯಿಕ ವಿಧಾನದ ಮೂಲಕ

ಸಾಧಿಸಲಾದ ಸೌಂದರ್ಯಕ್ಕಿಂತಲೂ, ಈ ರೀತಿ ಶಬ್ದಗಳನ್ನು ಕಲಾತ್ಮಕವಾಗಿ ಅಳವಡಿಸಿದ್ದರಿಂದ ಉಂಟಾಗುವ ಸೌಂದರ್ಯ ಅತ್ಯಂತ ಉತ್ಕೃಷ್ಟವಾದ್ದು. ಕಾವ್ಯ ತತ್ವಜ್ಞರ ಸಂತೋಷವನ್ನು ಹೆಚ್ಚಿಸುವ ಶಬ್ದಶೋಭಾತಿಶಯ ವಿದು ಉದಾ:

ಪ್ರಥಮಮರುಣಚ್ಛಾಯಸ್ತಾವತ್ತತಃ ಕನಕ ಪ್ರಭ–
ಸ್ತದನು ವಿರಹೋತ್ತಾಮ್ಯತ್ತನ್ವೀ ಕಪೋಲತಲದ್ಯುತಿಃ|
ಪ್ರಸರತಿ ತತೋ ಧ್ವಾಂತಧ್ವಂಸಕ್ಷಮಃ ಕ್ಷಣದಾಮುಖೇ
ಸರಸಬಿಸಿನೀ ಕಂದಚ್ಛೇದ ಚ್ಛವಿ ರ್ಮೃಗ ಲಾಂಛನಃ (೪೧).

ನಿಶೆಯ ಆರಂಭದೊಳು ಅರುಣ ವರ್ಣವನು
ಬಳಿಕ ಬಂಗಾರ ಬಣ್ಣವನು
ಅನಂತರದೊಳು ಪ್ರಿಯವಿರಹದಲಿ
ನವೆದ ಕೃಶಾಂಗಿಯ ಕೆನ್ನೆಯೊಲು ಬಿಳಿಚುತ್ತ
ತದನಂತರದೊಳು ಬೇರು ಕಡಿದ
ಸರಸ ಕಮಲಿನಿಯ ಕಾಂಡದ ಹಾಗೆ
ಬಿಳುಪಾದ ಚಂದಿರನು ಕತ್ತಲೆಯ ತೊಲಗಿಸುತೆ
ಇನಿಸಿನಿಸೆ ಉದಿಸುತಿಹನದೊ - [೪೧] - [ಸುಭಾಷಿತಾವಲಿ-2004]

ಇದು ವರ್ಣ ವಿನ್ಯಾಸ ವಕ್ರತೆಯ ಉತ್ಕೃಷ್ಟ ಉದಾಹರಣೆ. ಈ ಪದ್ಯದಲ್ಲಿ ಕೇವಲ ವರ್ಣಗಳ ವಿಶೇಷ ರೀತಿಯ ರಚನೆಯಿಂದ ಉಂಟಾಗುವ ಶಬ್ದಸೌಂದರ್ಯವನ್ನು ಅತ್ಯಂತ ಉತ್ಕೃಷ್ಟವಾದ ರೀತಿಯಲ್ಲಿ ಅರಳಿಸಿದ್ದಾನೆ. ಇದೇ ವರ್ಣ ವಿನ್ಯಾಸ ವಕ್ರತೆಯು ಪ್ರಾಚೀನ ಆಲಂಕಾರಿಕರಲ್ಲಿ "ಅನುಪ್ರಾಸ" ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಇದರ ವಿವಿಧ ಪ್ರಭೇದಗಳ ಸ್ವರೂಪವನ್ನು ಮುಂದೆ ಲಕ್ಷಣ ನಿರೂಪಣೆಯ ಸಂದರ್ಭದಲ್ಲಿ ನಿರೂಪಿಸಲಾಗುವುದು.

ಈಗ ಕವಿ ವ್ಯಾಪಾರ ವಕ್ರತೆಯ ಮತ್ತೊಂದು ಪ್ರಭೇದವನ್ನು ನೋಡೋಣ. ಪದ ಪೂರ್ವಾರ್ಧ ವಕ್ರತೆ ಎಂದರೆ (ಸುಬಂತ ಅಥವಾ ತಿಙಂತ) ಪ್ರಾತಿಪದಿಕ ಅಥವಾ ಧಾತು ರೂಪದಲ್ಲಿ ಕಂಡು ಬರುವ ವಕ್ರತೆ ಅಥವಾ ವಕ್ರಭಾವ. ಅಂದರೆ ಕವಿಯ ರಚನಾವೈಚಿತ್ರ್ಯ. ಇದರಲ್ಲಿ ಅನೇಕ ಭೇದಗಳಿವೆ. ಸಂದರ್ಭದ ಅನುಕೂಲಕ್ಕೆ ತಕ್ಕಂತೆ ದೈನಂದಿನ ಬಳಕೆಯಲ್ಲಿರುವ ಶಬ್ದವೇ ವಾಚ್ಯರೂಪದ ಪ್ರಸಿದ್ಧ ಧರ್ಮಕ್ಕಿಂತ ಭಿನ್ನವಾದ ಧರ್ಮದ ಅಧ್ಯಾರೋಪದ ಆಧಾರದ ಮೇಲೆ ಯೋಜಿಸಿದಾಗ ಪದ ಪೂರ್ವಾರ್ಧ ವಕ್ರತೆಯ ಪ್ರಥಮ ಪ್ರಭೇದವೆನಿಸುತ್ತದೆ.

"ರಾಮೋಽಸ್ಮಿ ಸರ್ವಂ ಸಹೇ" [೪೨]

"ನಾನು ರಾಮ. ಎಲ್ಲವನ್ನೂ ಸಹಿಸಬಲ್ಲೆ [೪೨]

ಈ ವಾಕ್ಯದಲ್ಲಿ ಪ್ರಯೋಗವಾಗಿರುವ 'ರಾಮ' ಶಬ್ದದಲ್ಲಿ ಪದ ಪೂರ್ವಾರ್ಧ ವಕ್ರತೆ ಇದೆ. ಕಾರಣ ಇಲ್ಲಿ ಬಳಕೆಯಾಗಿರುವ 'ರಾಮ' ಶಬ್ದ ತನ್ನ ಪ್ರಸಿದ್ಧ ವಾಚ್ಯಾರ್ಥವಾದ "ದಶರಥ

ಪುತ್ರ" ಕ್ಕಿಂತ ಭಿನ್ನವಾಗಿ ಅತ್ಯಧಿಕವಾದ ದುಃಖ ಸಹಿಸುವವನು ಎಂಬ ಶಬ್ದಗುಣದ ಆಧಾರದ ಮೇಲೆ ಬಳಕೆಯಾಗಿದೆ. ಹಾಗಾಗಿ ಇಲ್ಲಿ ಕವಿ ವಿರಚಿತ ವಾಕ್ಯದಲ್ಲಿ ಒಂದು ಅಪೂರ್ವ ಚಮತ್ಕಾರ ಉಂಟಾಗಿದೆ. ಹಾಗೆ ಚಮತ್ಕಾರ ಉಂಟಾಗಿರುವುದು ಪ್ರಾತಿಪದಿಕದ ಪೂರ್ವಾರ್ಧವಾದ 'ರಾಮ' ಶಬ್ದದ ಬಳಕೆಯಿಂದಲೇ. ಆದ್ದರಿಂದ ಇದು ಪದಪೂರ್ವಾರ್ಧ ವಕ್ರತೆಯ ಮೊದಲ ಪ್ರಭೇದ.

ಈಗ ಪದಪೂರ್ವಾರ್ಧ ವಕ್ರತೆಯ ದ್ವಿತೀಯ ಪ್ರಭೇದವನ್ನು ನೋಡೋಣ. ಇದರಲ್ಲಿ 'ನಾಮ'ಪದದ ವಾಚ್ಯ ರೂಪದ ಪ್ರಸಿದ್ಧವಾದ ಧರ್ಮದ ಅಲೌಕಿಕವೂ ಅತಿಶಯವೂ ಆದ ಗುಣವನ್ನು ಆಧರಿಸಿ ಕವಿ ಪ್ರಯೋಗಿಸುತ್ತಾನೆ (ಹಾಗೆ ಪ್ರಯೋಗಿಸಿದಾಗ ಪದ ಪೂರ್ವಾರ್ಧ ವಕ್ರತೆಯ ಎರಡನೇ ಪ್ರಭೇದ ಉಂಟಾಗುತ್ತದೆ)

ಉದಾ:

ರಾಮೋಽಸೌ ಭುವನೇಷು ವಿಕ್ರಮಗುಣೈಃ ಪ್ರಾಪ್ತಃ ಪ್ರಸಿದ್ಧಿಂ ಪರಾ–
ಮಸ್ಮದ್ಭಾಗ್ಯ ವಿಪರ್ಯಯಾದ್ಯದಿ ಪರಂ ದೇವೋ ನ ಜಾನಾತಿ ತಮ್|
ವಂದೀವೈಷ ಯಶಾಂಸಿ ಗಾಯತಿ ಮರುದ್ಯಸ್ಯೈಕ ಬಾಣಾಹ–
ಶ್ರೇಣೀಭೂತವಿಶಾಲ ತಾಲ ವಿವರೋದ್ಗೀರ್ಣೈಃ ಸ್ವರೈಃ ಸಪ್ತಭಿಃ [೪೩]

ಮೂರು ಲೋಕಗಳಲಿ ತನ್ನ ಶೌರ್ಯಗುಣದೆ
ಪ್ರಸಿದ್ಧ ನೀ ರಾಮನು
ನಮ್ಮೊಂದು ದೌರ್ಭಾಗ್ಯದಿಂ ದೇವ
ನೀನವನನರಿಯೆ
ಒಂದೆ ರಾಮ ಬಾಣವು ತಾಕಿ
ಕೆಳಗೆ ಬಿದ್ದ ಒಂದೆ ಸಾಲೊಳಿದ್ದೇಳು
ತಾಳೆ ಮರಗಳೇಳು ರಂಧ್ರಗಳಿಂದೆ
ವಂದಿಯಂದದೊಳಾ ವಾಯುದೇವನು ತಾನು
ಅವನ ಯಶೋ ಗೀತೆಯನು
ಸಪ್ತ ಸ್ವರದಲಿ ಹಾಡುತಿಹನು. [೪೩]

[ಈ ಪದ್ಯ ಕಾವ್ಯಪ್ರಕಾಶದ 4ನೇ ಉಲ್ಲಾಸದಲ್ಲಿ ಉದ್ಧೃತವಾಗಿದೆ. ಅದರ ಟೀಕಾಕಾರ ಮಾಣಿಕ್ಯ ಚಂದ್ರನು 'ರಾಘುವಾ ನಂದ' ಎಂಬ ಈಗ ದೊರಕದೆ ಇರುವ ನಾಟಕದ ಪದ್ಯವೆಂದು ಹೇಳಿ, ಈ ಮಾತುಗಳು ಕುಂಭಕರ್ಣನವು ಎಂದು ಹೇಳಿದ್ದಾನೆ. 'ಚಂದ್ರಿಕಾ'ಕಾರನು ವಿಭೀಷಣನು ರಾವಣನಿಗೆ ಹೇಳಿದ ಮಾತುಗಳಿವು ಎಂದು ಹೇಳುತ್ತಾನೆ. ವಾಸ್ತವವಾಗಿ ಇವು ವಿಭೀಷಣನ ಮಾತುಗಳಿರ ಬೇಕೆಂದೇ ತೋರುತ್ತವೆ.]*

ಈ ಶ್ಲೋಕದಲ್ಲಿ 'ರಾಮ' ಎಂಬ ನಾಮಪದವು ಅಲೌಕಿಕ ಶೌರ್ಯಾದಿ ಧರ್ಮದ

---

*ರಾಧೇಶ್ಯಾಮಶರ್ಮಾ ಅವರ ಹಿಂದೀ ವಕ್ರೋಕ್ತಿ ಜೀವಿತದ 65ನೇ ಪುಟದಿಂದ ಈ ಟಿಪ್ಪಣಿಯನ್ನು ಆಯ್ದು ಅನುವಾದಿಸಿ ಕೊಡಲಾಗಿದೆ.

ಅಧ್ಯಾರೋಪದಿಂದ ಉಂಟಾದ ವಕ್ರತೆಯನ್ನು ಪ್ರತಿಪಾದಿಸುತ್ತಿದೆ.

(ಪದ ಪೂರ್ವಾರ್ಧ ವಕ್ರತೆಯ ಈ ಎರಡೂ ಪ್ರಕಾರಗಳ ಉದಾಹರಣೆಯಲ್ಲಿ ಆಚಾರ್ಯಕುಂತಕನು 'ರಾಮ' ಶಬ್ದದಲ್ಲಿ ಕಂಡು ಬರುವ ವಕ್ರತೆಯನ್ನು ತೋರಿಸಿದ್ದಾನೆ. ಆದರೆ ಅವೆರಡರಲ್ಲೂ ಮೌಲಿಕ ವ್ಯತ್ಯಾಸವಿದೆ. ಮೊದಲ ಪ್ರಕಾರದಲ್ಲಿ ರೂಢಿಗತವಾದ ಶಬ್ದದ ವಾಚ್ಯ ರೂಪಕ್ಕಿಂತ ಭಿನ್ನವಾದ ಧರ್ಮದ ಅತಿಶಯತೆಯ ಅಧ್ಯಾರೋಪವನ್ನು ಆಧರಿಸಿ ರೂಢಿಯ ಶಬ್ದದ ಬಳಕೆ ಮಾಡಲಾಗುತ್ತದೆ. ಎರಡನೇ ಪ್ರಕಾರದಲ್ಲಿ ನಾಮಪದದ (ಅಂಕಿತ ನಾಮ) ವಾಚ್ಯ ರೂಪಕ್ಕಿಂತ ಪ್ರಸಿದ್ಧ ಧರ್ಮದ ಅಲೌಕಿಕ ಅತಿಶಯತ್ವದ ಅಧ್ಯಾರೋಪವನ್ನು ಆಧರಿಸಿ ನಾಮ ಪದವನ್ನು ಪ್ರಯೋಗಿಸಲಾಗಿದೆ. ಪರ್ಯಾಯ ವಕ್ರತೆ ಎಂಬುದು ಪದ ಪೂರ್ವಾರ್ಧ ವಕ್ರತೆಯದೇ ಆದ ಒಂದು ಪ್ರಭೇದ. ಅನೇಕ ಸಮಾನ ಪರ್ಯಾಯ ಪದಗಳಿದ್ದರೂ ಆ ಸಂದರ್ಭಕ್ಕೆ ವಿಶೇಷ ರೀತಿಯಲ್ಲಿ ಉಚಿತವಾದ ಪದವನ್ನು ಮಾತ್ರ ಆಯ್ಕೆ ಮಾಡಲಾಗುತ್ತದೆ.

ಉದಾ:

> **ವಾಮಂ ಕಜ್ಜಲವದ್ವಿಲೋಚನ ಮುರೋ ರೋಹದ್ವಿಸಾರಿಸ್ತನಂ**
> **ಮಧ್ಯಂ ಕ್ಷಾಮಮಕಾಂಡ ಏವ ವಿಪುಲ ಭೋಗಾ ನಿತಂಬಸ್ಥಲೀ**
> **ಸದ್ಯಃ ಪ್ರೋದ್ಗತ ವಿಸ್ಮಯೈರಿತಿ ಗಣೈರಾಲೋಕ್ಯ ಮಾನಂ ಮುಹುಃ**
> **ಪಾಯಾದ್ವಃ ಪ್ರಥಮಂ ವಪುಃ ಸ್ಮರ ರಿಪೋರ್ಮಿಶ್ರೀ ಭವತ್ಕಾಂತಯಾ** [೪೪]

> "ಕಾಡಿಗೆಯು ವಾಮನೇತ್ರಕೆ ಹತ್ತಿದೆ
> ಉಬ್ಬುತಿಹ ಪೆರ್ಮೊಲೆಯಿಂದ
> ಎಡದ ವಕ್ಷಸ್ಥಲವು ವಿಸ್ತೃತವಾಗಿದೆ
> ಇದ್ದಕಿದ್ದೊಲೆ ನಡು ಅಸಿದಾಗಿ ವಿಪುಲ
> ಭೋಗ್ಯವೆನಿಸಿದ ನಿತಂಬವದು ಬಿತ್ತರಗೊಂಡಿದೆ"
> ಎಂದೆನುತೆ ಮನಸಿಜಾರಿಯ ಮೈ
> ತನ್ನ ನಲ್ಲೆಯನು ಕೂಡಿದುದ ಮೊದಲಿಗೆ ಕಾಣುತಲೆ
> ತಿರು ತಿರುಗಿಯು ವಿಸ್ಮಯವ ತಾಳಿದುವು ಗಣಗಳು
> ರಕ್ಷಿಸಲಿ ನಿಮ್ಮನದುವು [೪೪]

ಈ ಪದ್ಯದಲ್ಲಿ ಶಿವ-ಪಾರ್ವತಿಯರ ಪ್ರಥಮ ಸಂಯೋಗದ ವರ್ಣನೆಯನ್ನು ಮಾಡಲಾಗಿದೆ. ಇಲ್ಲಿ ಶಿವನಿಗೆ ಪರ್ಯಾಯವಾಗಿ ಶಂಕರ, ಶಶಿಧರ, ಮಹೇಶ್ವರ, ಮಹಾದೇವ, ಇತ್ಯಾದಿ ಅನೇಕ ಪರ್ಯಾಯ ವಾಚಕ ಶಬ್ದಗಳಿದ್ದರೂ ಸ್ಮರರಿಪು (ಮನಸಿಜಾರಿ) ಎಂಬ ಪರ್ಯಾಯ ಶಬ್ದ ಅತ್ಯಂತ ವಿಶಿಷ್ಟ ಬಗೆಯ ವಕ್ರತೆಯನ್ನು ಉನ್ಮೀಲಿತಗೊಳಿಸುತ್ತದೆ. ಕಾರಣ ಕಾಮದೇವನ ಶತ್ರುವಿನ ಶರೀರದೊಂದಿಗೆ ಅವನ ನಲ್ಲೆಯ ಸಂಯೋಗವೆಂಬುದು ಊಹೆಗೂ ನಿಲುಕದ್ದು (ಅದು ಎಂದಿಗೂ ಸಾಧ್ಯವಿಲ್ಲದಾದ್ದರಿಂದ). ಆದ್ದರಿಂದಲೇ ಶಿವನ ಗಣಗಳು ಆಶ್ಚರ್ಯ ಚಕಿತರಾದದ್ದು ಅತ್ಯಂತ ಯುಕ್ತವಾಗಿಯೇ ಇದೆ. ಅಲ್ಲದೆ ಶಿವ ಪಾರ್ವತಿಯರ ಅಸಂಭವ

ಸಂಯೋಗವನ್ನು ಪುನಃ ಪುನಃ ಕಂಡಿದ್ದರೆ ಆಶ್ಚರ್ಯ ಜನಕ ವಾಗುತ್ತಿರಲಿಲ್ಲ, ಕೂಡಲೇ ವಿಸ್ಮಯವನ್ನು ತಾಳಿದರೆಂಬುದು, 'ಮೊದಲಿಗೆ' (ಪ್ರಥಮಮ್) ಎಂಬ ಪದ ಪ್ರಯೋಗದಿಂದ ಸಾರ್ಥಕವಾಗಿದೆ.

ಈ ಪರ್ಯಾಯ ವಕ್ರತ್ವವು, ವಾಚ್ಯದ ಮೂಲಕ ಸಂಭವ ವಾಗಲು ಸಾಧ್ಯವಿಲ್ಲದ ಇನ್ನೊಂದು ಧರ್ಮದ ಆಧಾರದ ಮೇಲೆ ನಿಂತವುಗಳಲ್ಲೂ ಕಂಡು ಬರುತ್ತದೆ.

"ಅಂಗರಾಜ ಸೇನಾಪತೇ ರಾಜವಲ್ಲಭ ರಕ್ಷೈನಂ ಭೀಮಾದ್ ದುಃಶಾಸನಮ್ ಇತಿ"
[೪೫]

ಓ ಅಂಗರಾಜ ! ಸೇನಾಪತಿ ! ಪ್ರಭುವಿನ ಪ್ರೀತಿಪಾತ್ರನೆ ! ಈ ದುಶ್ಯಾಸನನನ್ನು ಭೀಮನಿಂದ ರಕ್ಷಿಸು." [೪೫]

ಭಟ್ಟ ನಾರಾಯಣನ ವೇಣೀಸಂಹಾರ ನಾಟಕದಲ್ಲಿ ಭೀಮನು ಕರ್ಣನನ್ನು ಉದ್ದೇಶಿಸಿ ಉಪಹಾಸ ಮಾಡುತ್ತ ಹೀಗೆ ಹೇಳುತ್ತಾನೆ.

ಇಲ್ಲಿ ಕರ್ಣನಿಗೆ ಪರ್ಯಾಯವಾಗಿ ಬಳಸಿರುವ ಮೂರೂ ಪರ್ಯಾಯ ವಾಚಕಗಳು ಇಲ್ಲಿ ಉಪಹಾಸಕ್ಕೆ ವಸ್ತುವಾದ ಕರ್ಣನ ಅಕಿಂಚನತ್ವ (ಅಸಾಮರ್ಥ್ಯ - ದುರ್ಯೋಧನನನ್ನು ರಕ್ಷಿಸುವಲ್ಲಿ)-ವನ್ನೇ ಸಾರುತ್ತಿವೆ. ಅದರಿಂದಾಗಿಯೇ ಅವನಿಗೂ "ರಕ್ಷಿಸು" ಎಂದು ಸವಾಲು ಹಾಕಿದ್ದಾನೆ.

ಪದ ಪೂರ್ವಾರ್ಧ ವಕ್ರತೆಯಲ್ಲಿ ಉಪಚಾರ ವಕ್ರತೆ ಎಂಬ ಇನ್ನೊಂದು ಭೇದವಿದೆ ಇದರಲ್ಲಿ ಅಮೂರ್ತವಸ್ತುವನ್ನು ಮೂರ್ತ ದ್ರವ್ಯವೆಂಬ ಹೆಸರಿನ ಶಬ್ದದ ಮೂಲಕ, ಸಾದೃಶ್ಯದ (ಉಪಚಾರ) ಆಧಾರದ ಮೇಲೆ ವಿವರಿಸಲಾಗುತ್ತದೆ. ಉದಾ:

(1) ನಿಷ್ಕಾರಣಂ ನಿಕಾರ ಕಣಿಕಾಪಿ ಮನಸ್ವಿನಾಮ್ ಮಾನಸಮಾಯಾಸಯತಿ
"ಅಕಾರಣ ಮಾನ ಹಾನಿಯ ಕಣವು ಕೂಡ ಸ್ವಾಭಿಮಾನಿ ಪುರುಷರ ಪೀಡಿಪುದು"

(ಕಾರಣವೇ ಇಲ್ಲದೆ ಉಂಟಾಗುವ ಅಣು ಮಾತ್ರ (ಕಣ) ಮಾನ ಹಾನಿಯೂ ಸ್ವಾಭಿಮಾನಿಯಾದ ಪುರುಷರ ಮನಸ್ಸಿಗೆ ವೇದನೆಯನ್ನುಂಟು ಮಾಡುತ್ತದೆ.)

(2) "ಹಸ್ತಾಪ ಚೇಯಂ ಯಶಃ"
"ಕೈಯಲ್ಲಿ ಹಿಡಿದಿಡ ಬಹುದಾದ ಯಶಸ್ಸು"

'ಕಣಿಕಾ' ಎಂಬ ಶಬ್ದ ಮೂಲತಃ ಆಕೃತಿಯಲ್ಲಿ ಅತ್ಯಂತ ಸಣ್ಣದಾದ ಮೂರ್ತ ವಸ್ತುವೊಂದನ್ನು ಸೂಚಿಸುವಂಥದು. ಆದರೆ ಅಲ್ಪತೆಯ ರೂಪ ಸಾಮ್ಯವನ್ನು ಆಧರಿಸಿದ 'ಉಪಚಾರ'ದಿಂದಾಗಿ 'ಮಾನ ಹಾನಿ' ಯಂಥ ಅಮೂರ್ತ ವಿಷಯಕ್ಕೂ ಅದನ್ನು ಅನ್ವಯಿಸಲಾಗಿದೆ. (ಸಾದೃಶ್ಯ ಮೂಲ ಲಕ್ಷಣದ ಮೂಲಕ). ಕಾವ್ಯ ಮರ್ಮಜ್ಞರಿಗೆ ಆಹ್ಲಾದವನ್ನುಂಟು ಮಾಡುವುದರಿಂದಾಗಿ ಇಲ್ಲಿ ವಕ್ರತೆಗೆ ಪುಷ್ಟಿ ಒದಗುತ್ತದೆ.

ಎರಡನೇ ಉದಾಹರಣೆಯಲ್ಲಿ -ಹಸ್ತಾಪಚೇಯಮ್'- (ಅರ್ಥಾತ್ ಕೈಗಳ ಮೂಲಕ ಒಟ್ಟು

ಗೂಡಿಸಬಹುದಾದ್ದು).

ಹೂಗಳಂಥ ಮೂರ್ತ ವಸ್ತುಗಳನ್ನು ಒಟ್ಟುಗೂಡಿಸುವಲ್ಲಿ ಅನ್ವಯವಾಗುವ ಸಂಹತತ್ವವನ್ನು ಸಾಮಾನ್ಯ ಉಪಚಾರದ (ಸಾದೃಶ್ಯದ) ಆಧಾರದ ಮೇಲೆ ಅಮೂರ್ತ ವಿಷಯವಾದ ಯಶಸ್ಸಿಗೂ ಅನ್ವಯಿಸಿದ್ದರಿಂದಾಗಿ ಇಲ್ಲಿ ವಕ್ರತೆ ಉಂಟಾಗಿದೆ. ಅದೇ ರೀತಿ ತರಂಗಿತತ್ವವೇ ಮೊದಲಾದ ಧರ್ಮವನ್ನು ಪ್ರತಿಪಾದಿಸುವ ಕಾರಣದಿಂದ 'ದ್ರವ' ರೂಪ ವಸ್ತುವಿನ ವಾಚಕ ಶಬ್ದವು ಸಾದೃಶ್ಯ ಮಾತ್ರದ ಬಲದಿಂದ ಮೂರ್ತವಸ್ತುವಿನ ವಾಚಕ ಶಬ್ದದ ರೂಪದಲ್ಲಿ ಪ್ರಯೋಗವಾಗುತ್ತಿರುವುದು ಕಾವ್ಯಸಂಪ್ರದಾಯದಲ್ಲಿ ಈಗಾಗಲೇ ಪ್ರಸಿದ್ಧ.

"ಶ್ವಾಸೋತ್ಕಂಪ ತರಂಗಿಣಿ ಸ್ತನತಟೇ" (೪೬) (ಸುಭಾಷಿತ ರತ್ನಕೋಶ 737,

'ಶ್ವಾಸದ, ಉತ್ಕಂಪನದಿಂದ ತರಂಗಿತಗೊಳ್ಳುತ್ತಿರುವ ಸ್ತನತಟದ ಮೇಲೆ' (೪೬)

[ಇಲ್ಲಿ ಕವಿ ಸ್ತನ ಪ್ರದೇಶವನ್ನು ಶ್ವಾಸದಿಂದ ಉಂಟಾದ ಕಂಪನದಿಂದ ತರಂಗಿತವಾಯಿತೆಂದು ಹೇಳಿದ್ದಾನೆ. ವಾಸ್ತವವಾಗಿ ತರಂಗಿತಗೊಳ್ಳುವುದು ದ್ರವ ಪದಾರ್ಥದ ಧರ್ಮ. ಆದರೆ ಸ್ತನ ಪ್ರದೇಶ ದ್ರವ ಪದಾರ್ಥವಲ್ಲ ; ಮೂರ್ತ ವಸ್ತು. ಆದರೆ ಕವಿ ಇಲ್ಲಿ ಕೇವಲ ಕಂಪನದ ಸಾಮ್ಯದಿಂದಾಗಿ ಸ್ತನ ಪ್ರದೇಶವು ತರಂಗಿತಗೊಳ್ಳುತ್ತಿದೆ ಎಂದು ಹೇಳುವ ಮೂಲಕ ಅಪೂರ್ವ ಚಮತ್ಕಾರವನ್ನು ಸೃಷ್ಟಿಸಿದ್ದಾನೆ. ಇದರಿಂದ ಕಾವ್ಯ ರಸಿಕರಿಗೆ ಒಂದು ಅಲೌಕಿಕ ಆನಂದದ ಅನುಭವವಾಗುತ್ತದೆ. ಆದ್ದರಿಂದ ಇದನ್ನು ಉಪಚಾರ ವಕ್ರತೆಯೆಂದು ಪರಿಗಣಿಸಲಾಗುವುದು. (ರಾಧೇಶ್ಯಾಮ್ ಮಿಶ್ರ-ವಕ್ರೋಕ್ತಿ ಜೀವಿತಮ್ 69)]

ಕೆಲವೊಮ್ಮೆ ದ್ರವರೂಪದ ಅರ್ಥವನ್ನು ಸೂಚಿಸುವ ಶಬ್ದವು ಅಮೂರ್ತ ವಸ್ತುವನ್ನು ಸೂಚಿಸುವ ವಾಚಕ ರೂಪದಲ್ಲಿ ಪ್ರಯೋಗವಾಗಿರುವುದುಂಟು.

ಏಕಾಂ ಕಾಮಪಿ ಕಾಲವಿಪ್ರುಷಮಮೀ ಶೌರ್ಯೋಷ್ಮಕಂಡೂವ್ಯಯ-
ವ್ಯಗ್ರಾಃ ಸ್ಯುಶ್ಚಿರ ವಿಸ್ಮೃತಾಮರ ಚಮೂ ಡಿಂಬಾಹವಾ ಬಾಹವಃ (೪೭)

ಚಿರ ಕಾಲದಿಂ ದೇವಸೇನೆಯ ಕೂಡೆ
ಸಮರ ಕ್ರೀಡೆಯನು ಮರೆತ ನನ್ನೀ,
ಬಾಹು ದಂಡಗಳಿವು 'ಕ್ಷಣಬಿಂದು'ವಾದರೂ
ತಮ್ಮ ಶೌರ್ಯ ಕಂಡೂತಿಯನು ನೀಗಿಕೊಳಲಿ. (೪೭)

(ಈ ಮಾತುಗಳನ್ನು ಬಹುಶಃ ರಾಮನನ್ನು ಉದ್ದೇಶಿಸಿ ರಾವಣ ಹೇಳುತ್ತಾನೆ) ಇಲ್ಲಿ 'ದ್ರವ' ಪದಾರ್ಥದ ವಾಚಕವಾದ 'ವಿಪ್ರುಷ' ಶಬ್ದವನ್ನು ಕವಿ-ಕೇವಲ ಅಲ್ಪತೆಯ ಸಾದೃಶ್ಯಕ್ಕಾಗಿ ಅಮೂರ್ತ ಪದಾರ್ಥವಾದ 'ಕಾಲ'ದ ವಾಚಕವಾಗಿ ಪ್ರಯೋಗ ಮಾಡಿದ್ದಾನೆ. ಇದರಿಂದಾಗಿ ಈ ವಾಕ್ಯದಲ್ಲಿ ಅಪೂರ್ವವಾದ ಚಮತ್ಕಾರ ಉಂಟಾಗಿದೆ. ಆದ್ದರಿಂದ ಇದು ಕೂಡಾ ಉಪಚಾರ ವಕ್ರತೆಗೆ ನಿದರ್ಶನವಾಯಿತು. ಹೀಗೆ ಮೇಲಿನ ಎರಡೂ ಉದಾಹರಣೆಗಳಲ್ಲಿ ತರಂಗಿಣಿ ಮತ್ತು

"ವಿಪೃಷ" ಶಬ್ದಗಳು ಉಪಚಾರ ವಕ್ರತೆಗೆ ಕಾರಣವಾಗಿವೆ.

ವಿಶೇಷಣ ವಕ್ರತ್ವ ಎಂಬ ಪದ ಪೂರ್ವಾರ್ಧ ವಕ್ರತೆಯ ಇನ್ನೊಂದು ಐದನೆಯ ಪ್ರಕಾರವಿದೆ. ಇದರಲ್ಲಿ ವಿಶೇಷಣದ ಮಹತ್ವದಿಂದಾಗಿಯೇ ಕಾವ್ಯ ರಸಿಕರಿಗೆ ಆಹ್ಲಾದವನ್ನುಂಟು ಮಾಡಬಲ್ಲ ವಕ್ರತೆ ಅಭಿವ್ಯಕ್ತವಾಗುತ್ತದೆ. ಉದಾ:

ದಾಹೋಽಂಭಃ ಪ್ರಸೃತಿಂಪಚಃ ಪ್ರಚಯವಾನ್ ಬಾಷ್ಪಃ ಪ್ರಣಾಲೋಚಿತಃ
ಶ್ವಾಸಾಃ ಪ್ರೇಂಖ್ಯಿತದೀ ಪ್ರದೀಪ ಲತಿಕಾಃ ಪಾಂಡಿಮ್ನಿ ಮಗ್ನಂ ವಪುಃ
ಕಿಂಚಾನ್ಯತ್ಕಥಯಾಮಿ ರಾತ್ರಿಮಖಿಲಾಂ ತ್ವದ್ವರ್ತ್ಮ ವಾತಾಯನೇ
ಹಸ್ತಚ್ಛತ್ರ ವಿರುದ್ಧ ಚಂದ್ರಮ ಹಸ್ತಸ್ಯಾಃ ಸ್ಥಿತಿರ್ವರ್ತತೇ (೪೮)

(ವಿದ್ಧ ಸಾಲಭಂಜಿಕಾ -2-21)

ಅಪಾರ ಜಲವ ಕುದಿಸಬಲ್ಲುದು
ಅವಳ ವಿರಹಾನಲವು
ಕಣ್ಣೀರ ಧಾರೆಯಾದರೋ
ಪರಿಕಾಲ್ಗಳಲಿ ಪರಿವಷ್ಟು ಅಗಾಧ
ಉರಿವ ದೀಪದ ಕುಡಿಗಳನು
ಅಲುಗಾಡಿಸಲು ಶಕ್ತವು
ಅವಳ ನಿಟ್ಟುಸಿರುಗಳು
ಅವಳ ತನುವೆಲ್ಲ ಪಾಂಡುರಮಯವು
ಮತ್ತೇನ ಹೇಳಲಿ ನಾನು?
ನೀ ಬರುವ ದಾರಿಯೆಡೆ ಕಣ್ಣ ನಟ್ಟು
ಕೈಯ ಕೊಡೆಯಿಂದೆ ಚಂದ್ರಿಕೆಯ ಮರೆಮಾಡಿ
ಇರುಳೆಲ್ಲ ಕಿಟಕಿ ಬಳಿ ಕುಳಿತು ಕಳೆಯುವಳು (೪೮)

ಇಲ್ಲಿ ಪ್ರಯುಕ್ತವಾಗಿರುವ 'ದಾಹ' (ವಿರಹಾನಲ) ಬಾಷ್ಪ (ಕಣ್ಣೀರ ಧಾರೆ) ಶ್ವಾಸ (ನಿಟ್ಟುಸಿರು), ಹಾಗೂ ವಪು (ತನು) ಇತ್ಯಾದಿ ಶಬ್ದಗಳಷ್ಟರಿಂದಲೇ ಯಾವುದೇ ರೀತಿಯ ವೈಚಿತ್ರ್ಯವೂ ಹೊರಹೊಮ್ಮುವುದಿಲ್ಲ. ಪ್ರತಿಶಬ್ದದೊಂದಿಗೆ ಸೇರಿರುವ ವಿಶೇಷಣಗಳ ಮಹತ್ವದಿಂದಾಗಿ ಅನಿರ್ವಚನೀಯವಾದ ವಕ್ರತ್ವ ಪ್ರತೀತಿ ಉಂಟಾಗಿದೆ. ಈಗ ಇನ್ನೊಂದು ಉದಾಹರಣೆ

ವ್ರೀಡಾಯೋಗಾನ್ನತ ವದನಯಾ ಸನ್ನಿಧಾನೇ ಗುರೂಣಾಮ್
ಬದ್ಧೋತ್ಕಂಪಸ್ತನಕಲಶಯಾ ಮನ್ಯುಮಂತರ್ನಿಯಮ್ಯ|
ತಿಷ್ಠೇತ್ಯುಕ್ತಂ ಕಿಮಿವ ನ ತಯಾ ಯತ್ಸಮುತ್‌ಸೃಜ್ಯ ಬಾಷ್ಪಂ
ಮಯ್ಯಾಸಕ್ತಶ್ಚಕಿತ ಹರಿಣೀ ಹಾರಿ ನೇತ್ರ ತ್ರಿಭಾಗಃ (೪೯)

(ಶಾರ್ಙ್ಗಧರ ಪದ್ಧತಿ-3464. ಧ್ವನ್ಯಾಲೋಕ-116)

ನಾಣಭರದಿಂದಾಕೆ ಗುರುಜನರ ಸನ್ನಿಧಿಯೊಳು
ಮೊಗಬಾಗಿ ನಿಂತಿರಲು
ಶೋಕವನು ಹುದುಗಿಸುತೆ ತನ್ನಂತರಂಗದೊಳು
ಏರಿಳಿವ ಕುಂಭಕುಚಗಳ ಆತರುಣಿ
ಕಣ್ಣನೀರನು ಮಿಡಿದು ಚಕಿತ ಹರಿಣಿಯ ತೆರದಿ
ನನ್ನೆಡೆಗೆ ಬೀರಿದ ಕಡೆಗಣ್ಣ ಕುಡಿನೋಟವೊಂದರೊಳೆ
ನನಗೆ ನಿಲ್ಲೆಂದು ಹೇಳಲಿಲ್ಲವೆ ತಾನು? (೪೯)

(ಯುವಕನೊಬ್ಬನು ತನ್ನ ಮಿತ್ರನೊಂದಿಗೆ ತಾನು ಪರಸ್ಥಳಕ್ಕೆ ಪ್ರಯಾಣ ಹೊರಟ ಸಂದರ್ಭವನ್ನು ಕುರಿತು ಹೇಳುತ್ತಿದ್ದಾನೆ)

"ಕಡೆಗಣ್ಣಕುಡಿನೋಟ" (ನೇತ್ರ ತ್ರಿಭಾಗಃ) ಎಂಬ ಮಾತಿಗೆ ಚಕಿತಗೊಂಡ ಹರಿಣಿಯ ಕಣ್ಣ ಸಾದೃಶ್ಯವನ್ನು -ಅದರಲ್ಲೂ ಗುರು ಜನರ ಸಾನ್ನಿಧ್ಯದಿಂದಾಗಿ ದಿಗ್ಭ್ರಾಂತಳಾದ ಚೆಲುವೆಯು ಇನ್ನಷ್ಟು ಚೆಲುವಾಗಿ ಕಾಣುತ್ತಿದ್ದಳೆಂದು ಸೂಚಿಸುವ "ಚಕಿತ ಹರಿಣೀ ಹಾರಿ" ಎಂಬ ಕ್ರಿಯಾ ವಿಶೇಷಣವು ಅತಿಶಯ ಸೌಂದರ್ಯವನ್ನು ತಂದು ಕೊಟ್ಟಿದೆ.

ಇನ್ನು ಮುಂದೆ ಪದ ಪೂರ್ವಾರ್ಧ ವಕ್ರತೆಯ ಮುಂದಿನ (ಆರನೆಯ) ಪ್ರಭೇದವಾದ ಸಂವೃತಿ ವಕ್ರತೆಯನ್ನು ಪ್ರಸ್ತುತ ಪಡಿಸಲಾಗುವುದು. ಇದರಲ್ಲಿ ಸಂದರ್ಭದ ಅನುಕೂಲಕ್ಕೆ ತಕ್ಕಂತೆ ಪದಾರ್ಥವೊಂದರ ಸ್ವರೂಪವು, ಪ್ರಸ್ತಾವಕ್ಕೆ ಅನುಗುಣವಾಗಿ ವಿಶೇಷ ಉತ್ಕರ್ಷದಿಂದಲೋ ಅವನತಿಯಿಂದಲೋ ಕೂಡಿದ್ದು ನೇರವಾಗಿ ಸ್ಪಷ್ಟವಾಗಿ ವ್ಯಕ್ತಪಡಿಸಲು ಸಾಧ್ಯವೇ ಇಲ್ಲವೆಂಬಂಥದ್ದನ್ನು ಸಂವೃತಿ ಸಾಮರ್ಥ್ಯವುಳ್ಳ (ಅಡಗಿಸಿಡಬಲ್ಲ) ಉಪಯುಕ್ತ ಶಬ್ದದ ಮೂಲಕ ಉತ್ಕೃಷ್ಟವಾಗಿ ಅಭಿವ್ಯಕ್ತಿಸಬಹುದು. ಇದನ್ನು ಸಂವೃತಿ ವಕ್ರತೆ ಎಂದು ಕರೆಯಲಾಗುತ್ತದೆ ಉದಾ:

"ಸೋಽಯಂ ದಂಭ ಧೃತವ್ರತಃ ಪ್ರಿಯತಮೇ ಕರ್ತುಂ ಕಿಮಪ್ಯುದ್ಯತಃ (೫೦)

(ತಾಪಸ ವತ್ಸರಾಜ)

ಹೇ ಪ್ರಿಯತಮೆ! ಈ ಮಿಥ್ಯಾ ಪ್ರತಿಜ್ಞಾವ್ರತಿ ಮತ್ತೇನನೋ ಮಾಡಲು ಹೊರಟಿಹನು. (೫೦)

ಮೇಲಿನ ವಾಕ್ಯ 'ತಾಪಸ ವತ್ಸರಾಜ ಚರಿತ' ಎಂಬ ಸಂಸ್ಕೃತ ನಾಟಕದಿಂದ ಉದ್ಧೃತವಾದ್ದು. ವಾಸವದತ್ತೆ ಲಾವಾಣಕಾಗ್ನಿಯಲ್ಲಿ ಸುಟ್ಟು ಹೋದಳೆಂಬ ವಾರ್ತೆಯಿಂದ ಉದಯನನ ಹೃದಯ ಅತ್ಯಂತ ದುಃಖತಪ್ತವಾಗಿದೆ. ವಾಸವದತ್ತೆಯನ್ನು ಪಡೆಯುವ ಪ್ರಲೋಭನೆಗೆ ಒಳಗಾಗಿ, ಪದ್ಮಾವತಿಯೊಂದಿಗೆ ವಿವಾಹ ಮಾಡಿಕೊಳ್ಳುವ ಇಚ್ಛೆಯುಳ್ಳವನಾಗಿದ್ದಾನೆ. ಆದರೆ ಇದನ್ನು ಅತ್ಯಂತ ಹೀನ ಕೃತ್ಯವೆಂದು ಭಾವಿಸಿರುವುದರಿಂದ, ಪದ್ಮಾವತಿಯನ್ನು ಮದುವೆಯಾಗುವಂಥ ಮಹಾಪಾತಕದ ನಿಂದನೀಯ ಕೃತ್ಯವನ್ನು ಮಾಡಲು ಹೊರಟಿದ್ದೇನೆ ಎಂದು ಹೇಳಬೇಕಾಗಿದೆ. ಅದನ್ನು ಹೀಗೆಯೇ ಹೇಳಿದ್ದರೆ ಅದು ಹೆಸರಿಸಲೂ ಆಗದಂಥ ಗ್ರಾಮ್ಯವೂ ಅನುಚಿತವೂ ಆಗುತ್ತಿಸ್ತು. ಆದರೆ ಆ ನಿಂದನೀಯತೆಯ ಭಾವವನ್ನು ಪ್ರಕಟವಾಗಿ ಹೇಳದೆ ಅಡಗಿಸಿ ಹೇಳಲು

"ಮತ್ತೇನನೋ" (ಕಿಮಪಿ) ಎಂಬ ಸಮರ್ಥ ಸರ್ವನಾಮ ಪದವನ್ನು ಪ್ರಯೋಗಿಸಲಾಗಿದೆ. ಆ ಪದ ಪ್ರಯೋಗದ ಮೂಲಕ ಈ ಎಲ್ಲ ಮಾತುಗಳೂ ಸ್ಪಷ್ಟವಾಗಿ ವ್ಯಂಜಿತವಾಗುತ್ತವೆ. ಈ ರೀತಿ ಕವಿಯ ಕೌಶಲ ಇಲ್ಲಿ ಹೇಳಬಾರದ ಮಾತನ್ನು ಮುಚ್ಚಿಡುತ್ತಾ ಅದನ್ನು ಅತ್ಯಂತ ಸಭ್ಯವಾದ ರೀತಿಯಿಂದ ಸಹೃದಯರ ಹೃದಯಕ್ಕೆ ನಾಟುವಂತೆ ಹೇಳುವಲ್ಲಿ ಸಾರ್ಥಕವಾಗಿದೆ. ಆದ್ದರಿಂದ ಇದು ಸಂವೃತಿ ವಕ್ರತೆ.

ಈಗ ಇನ್ನೊಂದು ಉದಾಹರಣೆ

ನಿದ್ರಾನಿಮೀಲಿತ ದೃಶೋ ಮದಮಂಥರಾಯಾ
ನಾಪ್ಯರ್ಥವಂತಿ ನ ಚ ಯಾನಿ ನಿರರ್ಥಕಾನಿ|
ಅದ್ಯಾಪಿ ಮೇ ವರತನೋರ್ಮಧುರಾಣಿ ತಸ್ಯಾ-
ಸ್ತಾನ್ಯಕ್ಷರಾಣಿ ಹೃದಯೇ ಕಿಮ ಪಿ ಧ್ವನಂತಿ. (೫೧)
(ಚೌರ ಪಂಚಾಶಿಕಾ-ಲೋಚನ-ಸಂ-6)

ನಿದ್ರೆಯಲಿ ಕಂಗಳನು ಮುಚ್ಚಿದವಳ
ಮದಾಲಸೆಯಾದ ಆ ನನ್ನ ಮೋಹನಾಂಗಿಯ
ಮಧುರ ವಾಣಿಗಳವು ಅರ್ಥಪೂರ್ಣವು ಅಲ್ಲ
ಮತ್ತೆನಿರರ್ಥಕವು ಅಲ್ಲದಿದ್ದರು
ಈಗಲೂ ಹೃದಯದೊಳಗೇನನೋ ಧ್ವನಿಸುತಿಹವು ! (೫೧)

ಇಲ್ಲಿ 'ಏನನೋ' (ಕಿಮಪಿ) ಎಂಬ ಶಬ್ದ ಪ್ರಿಯತಮೆಯ ಆ ಮಧುರವಾದ ಮಾತುಗಳನ್ನು ಆಲಿಸಿದ್ದರಿಂದ ಹೃದಯಕ್ಕೆ ಉಂಟಾದ, ಅನುಭವೈಕ ಗೋಚರವಾದ, ಅವರ್ಣನೀಯವಾದ ಆನಂದವನ್ನು ಸೂಚಿಸುತ್ತಿದೆ. 'ಅವು' (ತಾನಿ) ಎಂಬ ಶಬ್ದ ಅಂಥ ವಿಶಿಷ್ಟ ಅನುಭವಗಳ ಮೂಲಕ ಸ್ಮರಣೆಗೆ ತಂದುಕೊಳ್ಳಬಹುದಾದ ಮಾತುಗಳನ್ನು ಸಂಕೇತಿಸುತ್ತಿದೆ. "ಅರ್ಥಪೂರ್ಣವು ಅಲ್ಲ" (ನಾಪ್ಯರ್ಥವಂತಿ) ಎಂಬ ಪದಗಳು, ಆ ಮಾತುಗಳು ಸ್ವಾನುಭವಕ್ಕೆ ಮಾತ್ರ ವೇದ್ಯವಾಗುವಂಥವು; ಹಾಗಾಗಿ ವರ್ಣನೆಗೆ ಅತೀತವಾದುವು ಎಂಬುದನ್ನು ಸೂಚಿಸುತ್ತಿವೆ. "ನಿರರ್ಥಕವು ಅಲ್ಲ" (ನ ಚ ಯಾನಿ ನಿರರ್ಥಕಾನಿ) ಎಂಬ ವಿಶೇಷಣ, ಆ ಮಧುರವಾಣಿಗಳು, ಅಲೌಕಿಕ ಆನಂದವನ್ನುಂಟು ಮಾಡುವಂಥವಾದ್ದರಿಂದ, ಅವುಗಳ ಅರ್ಥಹೀನತೆಯಂಥ ದೋಷವನ್ನು ನಿವಾರಿಸುತ್ತದೆ. ಈ ಮೂರು ವಿಶೇಷಣಗಳ ಬಳಕೆಯಲ್ಲಿ ವಿಶೇಷಣ ವಕ್ರತೆ ಪ್ರತೀತವಾಗುತ್ತದೆ.

ಪದ ಪೂರ್ವಾರ್ಧ ವಕ್ರತೆಯ ಇನ್ನೊಂದು ಪ್ರಭೇದ (7ನೆಯದು) (ವೃತ್ತಿ ವೈಚಿತ್ರ್ಯ ವಕ್ರತೆ) ಸಾಧ್ಯವಿದೆ. ಇದರಲ್ಲಿಯ ಸಮಾಸ, ತದ್ಧಿತ ಮತ್ತು ತಿಙಂತ ಇತ್ಯಾದಿ ವೃತ್ತಿ ಸಾಧ್ಯತೆಗಳಲ್ಲಿ ಕವಿಗಳು ಮೊದಲಿಂದ ರಚಿಸುತ್ತ ಬಂದಿರುವುದು ವಿಚಿತ್ರ ಚಮತ್ಕಾರ ಉಂಟು ಮಾಡುವ ಕೆಲವನ್ನು ಮಾತ್ರ. ಉದಾ:

ಮಧ್ಯೇಂsಕುರಂ ಪಲ್ಲವಾಃ (೫೨)

"ಅಂಕುರಗಳ ಮಧ್ಯದಲಿ ಪಲ್ಲವಗಳಿಹವು" (೫೨)

ಇನ್ನೊಂದು ಉದಾಹರಣೆ

''ಪಾಂಡಿಮ್ನಿ ಮಗ್ನಂ ವಪುಃ (೫೩)

ಶರೀರ ಮುಳುಗಿಹುದು ಪಾಂಡುರತೆಯಲಿ (೫೩)

1. ಇಲ್ಲಿ "ಅಂಕು ರಾಣಾಂ ಮಧ್ಯೆ-ಇತಿ-ಮಧ್ಯೇಂಕುರಂ" ಎಂದು ಅವ್ಯಯೀಭಾವ ಸಮಾಸದ ಪ್ರಯೋಗದಿಂದ ಕವಿ ಒಂದು ಅಪೂರ್ವ ಚಮತ್ಕಾರವನ್ನು ನಿರ್ಮಿಸಿದ್ದಾನೆ. ಅಂಕುರ ಮಧ್ಯೆ ಎಂದು ತತ್ಪುರುಷ ಸಮಾಸ ಮಾಡಬಹುದಾದರೂ ಅದರಲ್ಲಿ ಅಂಥ ಚಮತ್ಕಾರವಿರುವುದಿಲ್ಲ.
2. ಇಲ್ಲಿ "ಪಾಂಡಿಮ್ನಿ" ಯ ಜಾಗದಲ್ಲಿ 'ಪಾಂಡುತಾಯಾಂ'ಎಂದು ಬೇರೆ ಶಬ್ದ ಪ್ರಯೋಗಿಸಬಹುದಾಗಿತ್ತು. ಆದರೆ 'ಇಮಾನಿಚ್' ಪ್ರತ್ಯಯಾಂತ 'ಪಾಂಡು' ಶಬ್ದದ ಪ್ರಯೋಗದ ಮೂಲಕ ಒಂದು ಅಲೌಕಿಕ ಚಮತ್ಕಾರವನ್ನುಂಟು ಮಾಡಿದ್ದಾನೆ. ಹಾಗಾಗಿ ಈ ಎರಡೂ ಉದಾಹರಣೆಗಳಲ್ಲಿ ಚಮತ್ಕಾರಕ್ಕೆ ಕಾರಣವಾಗಿರುವುದು ಸಮಾಸ ವೃತ್ತಿ. ಆದ್ದರಿಂದ ಇದು ವೃತ್ತಿ ವೈಚಿತ್ರ್ಯ ವಕ್ರತೆಯಾಗುತ್ತದೆ.

ಇನ್ನೊಂದು ಉದಾಹರಣೆ

ಸುಧಾವಿಸರ ನಿಷ್ಯಂದ ಸಮುಲ್ಲಾಸ ವಿಧಾಯಿನಿ
ಹಿಮಧಾಮಾನಿ ಖಂಡೇsಪಿ ನ ಜನೋ ನೋನ್ಮನಾಯತೇ (೫೪)

ತನ್ನ ಅಮೃತ ರಸ ಪ್ರವಾಹದೆ
ಜನರನುಲ್ಲಸಗೊಳಿಸುವಾ ಹಿಮ ಕಿರಣನು
ಖಂಡರೂಪದೆ ಉದಿತನಾದರು ಸರಿಯೆ
ಉತ್ಕಂಠ ಗೊಳ್ಳದಿರುವವನಾರು? (೫೪)

ಪದ ಪೂರ್ವಾರ್ಧ ವಕ್ರತೆಯ ಇನ್ನೊಂದು (8ನೆಯ) ಪ್ರಭೇದವೆಂದರೆ ಲಿಂಗ ವೈಚಿತ್ರ್ಯ ವಕ್ರತೆ ಎಂಬುದು. ಭಿನ್ನ ಲಿಂಗಗಳಿಂದ ಕೂಡಿದ ಶಬ್ದಗಳನ್ನು ಒಂದು ಚಮತ್ಕಾರದ ಸಲುವಾಗಿ ಸಮಾನಾಧಿಕರಣದಲ್ಲಿ ಒಟ್ಟುಗೂಡಿಸಲಾಗುತ್ತದೆ. (ಸಾಮಾನ್ಯ ಭಾವಕ್ಕಾಗಿ) ಉದಾ:

ಇತ್ಥಂ ಜಡೇ ಜಗತಿ ಕೋ ನು ಬೃಹತ್ಪ್ರಮಾಣ–
ಕರ್ಣಃ ಕರೀ ನನು ಭವೇದ್ ಧ್ವನಿತಸ್ಯಪಾತ್ರಮ್ (೫೫)

(ಸುಭಾಷಿತಾವಳಿ 628)

ಈಜಡ ಜಗತ್ತಿನಲಿ
ಬೃಹದಾಕೃತಿಯ ಕಿವಿಗಳು

ಮತ್ತು ಸೊಂಡಿಲನುಳ್ಳ
ಕರಿಗಿಂತ ನನ್ನ ಧ್ವನಿ ಕೇಳಲು ಪಾತ್ರವದಿನ್ನಾವುದು (೫೫)

ಈ ಪದ್ಯದಲ್ಲಿ "ಬೃಹತ್ಪ್ರಮಾಣ ಕರ್ಣಃ ಕರೀ" (ಇದು ಪುಲ್ಲಿಂಗ) ಯೊಂದಿಗೆ ಸಮಾನಾಧಿಕರಣದ ಪುಲ್ಲಿಂಗ ಶಬ್ದ ಇರಬೇಕಿತ್ತು. ಆದರೆ ಕುಶಲ ಕವಿ ಪುಲ್ಲಿಂಗ ಶಬ್ದದ ಪ್ರಯೋಗ ಮಾಡದೆ ಸಮಾನಾಧಿಕರಣ್ಯದಿಂದ ನಪುಂಸಕ ಲಿಂಗದ 'ಧ್ವನಿತಸ್ಯ ಪಾತ್ರಮ್' ಶಬ್ದವನ್ನು ಪ್ರಯೋಗಿಸಿ ಸಹೃದಯರಿಗೆ ವಿಶೇಷ ರೀತಿಯ ಚಮತ್ಕಾರನನ್ನು ನಿರ್ಮಿಸಿದ್ದಾನೆ. ಆದ್ದರಿಂದ ಇದು ಲಿಂಗವೈಚಿತ್ರ್ಯದಲ್ಲಿ ಬರುತ್ತದೆ. ಅದೇ ರೀತಿ

ಮೈಥಿಲೀ ತಸ್ಯ ದಾರಾಃ (೫೬)

ಮೈಥಿಲೀ ಅವನ ಭಾರ್ಯೆ. (೫೬)

ಇಲ್ಲಿ 'ಮೈಥಿಲಿ' ಶಬ್ದದೊಂದಿಗೆ ಸಮಾನಾಧಿಕರಣದಲ್ಲಿ ಸ್ತ್ರೀಲಿಂಗ ಶಬ್ದವೇ ಬರಬೇಕಿತ್ತು. ಆದರೆ ಕವಿ ಕುಶಲತೆಯಿಂದ ಪತ್ನೀ ಎಂಬ ಅರ್ಥದಲ್ಲಿ ಪುಲ್ಲಿಂಗದ 'ದಾರಾ' ಶಬ್ದವನ್ನು ಸಮಾನಾಧಿಕರಣದಲ್ಲಿ ಪ್ರಯೋಗಿಸಿದ್ದಾನೆ. ಇದೊಂದು ಅಲೌಕಿಕ ಚಮತ್ಕಾರಗಳ ಸೃಷ್ಟಿ [illegible]ಸಾಗಾಗಿ ಇದೂ ಲಿಂಗ ವೈಚಿತ್ರ್ಯ ವಕ್ರತೆ ಎನಿಸುತ್ತದೆ.

ಲಿಂಗ ವೈಚಿತ್ರ್ಯ ವಕ್ರತೆಯ ಇನ್ನೊಂದು ಪ್ರಭೇದ ಸಾಧ್ಯ. ವಿಭಿನ್ನ ಲಿಂಗಗಳ ಸಂಭಾವ್ಯತೆ ಸಾಧ್ಯವಾಗಬಹುದಾದರೂ ಸ್ತ್ರೀ ಲಿಂಗದ ಹೆಸರೇ ಸುಂದರವಾದ್ದು ಎಂಬ ಕಾರಣಕ್ಕಾಗಿ ಕವಿಗಳು ಸುಕುಮಾರವೆಂಬುದರಿಂದ ಸ್ತ್ರೀಲಿಂಗ ಶಬ್ದವನ್ನೇ ಆರಿಸಿಕೊಂಡು ಪ್ರಯೋಗಿಸುತ್ತಾರೆ. ಅಂಥ ಸಂದರ್ಭದಲ್ಲೂ ಲಿಂಗ ವೈಚಿತ್ರ್ಯ ವಕ್ರತೆ ಉಂಟಾಗುತ್ತದೆ. ಉದಾ:

ಏತಾಂ ಪಶ್ಯ ಪುರಸ್ತಟೀಮ್ ಇತಿ (೫೭)

ಮುಂದಿರುವ ಈ ತಟಿಯ ನೋಡು (೫೭)

ಇಲ್ಲಿ 'ದಡ'ವನ್ನು ಹೇಳುವ 'ತಟ' ಶಬ್ದವನ್ನು ಮೂರೂ ಲಿಂಗಗಳಲ್ಲಿ ಪ್ರಯೋಗಿಸಬಹುದಿತ್ತು. ಆದರೆ ಕವಿ ಕೇವಲ ಸುಕುಮಾರತೆಯನ್ನು ಧ್ವನಿಸುವುದಕ್ಕಾಗಿ ಇಲ್ಲಿ ಸ್ತ್ರೀ ಲಿಂಗ ಶಬ್ದವಾದ 'ತಟೀ' ಶಬ್ದವನ್ನು ಪ್ರಯೋಗಿಸಿದ್ದಾನೆ. ಇಲ್ಲಿ ಉಂಟಾಗಿರುವ ಲಿಂಗ ವೈಚಿತ್ರ್ಯ ವಕ್ರತೆಯು ಸಹೃದಯರಿಗೆ ಆಹ್ಲಾದವನ್ನುಂಟು ಮಾಡುತ್ತದೆ.

(ಇಲ್ಲಿಯವರೆಗೆ ಪದ ಪೂರ್ವಾರ್ಧ ವಕ್ರತೆಯೊಳಗೆ ಪ್ರಾತಿಪದಿಕದ ವಕ್ರತೆಯ ಎಂಟು ಪ್ರಮುಖ ಪ್ರಭೇದಗಳನ್ನು ಪ್ರತಿಪಾದಿಸಿ ಈಗ ಧಾತು ವಕ್ರತೆಯ ಒಳ ಪ್ರಭೇದಗಳನ್ನು ಪ್ರತಿಪಾದಿಸಲಾಗುತ್ತದೆ)

ಪದ ಪೂರ್ವಾರ್ಧ ವಕ್ರತೆಯಲ್ಲಿ ಪೂರ್ವಾರ್ಧ ಧಾತುವಿನ "ಕ್ರಿಯಾ ವೈಚಿತ್ರ್ಯ ವಕ್ರತೆ" ಎಂಬ ವಕ್ರತೆಯ ಇನ್ನೊಂದು ಒಳ ಪ್ರಭೇದವೂ ಇದೆ. ಕ್ರಿಯಾ ವೈಚಿತ್ರ್ಯ ಪ್ರತಿಪಾದನೆಯ ದೃಷ್ಟಿಯಿಂದ ಚತುರ ಕವಿಗಳು ಭಣಿತಿಯ ಭಂಗಿಯಲ್ಲಿ ವಿದಗ್ಧತೆಯಿಂದ ಕೂಡಿದ ರಮಣೀಯ ಪ್ರಯೋಗಗಳನ್ನು ಯೋಜಿಸುತ್ತಾರೆ. ಅಲ್ಲಿ ಕ್ರಿಯಾ ವೈಚಿತ್ರ್ಯದ ನಾನಾ ರೀತಿಯ ವಿಚ್ಛಿತ್ತಿಗಳ

ಮೂಲಕ ವೈವಿಧ್ಯಮಯ ಪ್ರಯೋಗಗಳು ಕಂಡು ಬರುತ್ತವೆ.

ಉದಾ:

ರತಿಕೇಲಿ ಹೃತ ನಿವಸನ ಕರಕಿಸಲಯ ರುದ್ಧ ನಯನ ಯುಗಲಸ್ಯ
ರುದ್ರಸ್ಯ ತೃತೀಯ ನಯನಂ ಪಾರ್ವತೀ ಪರಿಚುಂಬಿತಂ ಜಯತಿ (೫೮)*

ರತಿಕೇಳಿಯೊಳುಮೆಯನು
ನಗ್ನಗೊಳಿಸಲಾ ಶಿವನು
ಕರಪಲ್ಲವದಿಂದವನ ಕಣ್ಣೆರಡನು ಮುಚ್ಚುತೆ
ಮೂರನೆ ಕಣ್ಣನು ಗಿರಿಜೆ
ಒಡನೆಯೆ ಚುಂಬಿಸಿದಳದು ಗೆಲಲಿ (೫೮) (ಗಾಥಾ ಸಪ್ತಸತಿ-455)

ಈ ಶ್ಲೋಕದಲ್ಲಿ ದೇವಿಯಿಂದ ಮುಚ್ಚಲ್ಪಟ್ಟ ಉಳಿದೆರಡು ಕಣ್ಣುಗಳ ಜೊತೆಯಲ್ಲೇ ರುದ್ರನ ಮೂರನೇ ಕಣ್ಣು ಮುಚ್ಚಲ್ಪಟ್ಟರೂ, ಆ ಎರಡು ಕಣ್ಣುಗಳ ಹಾಗೆ ಅದೂ ಒಂದು ಕಣ್ಣೇ ಆದರೂ, ಆ ಮೂರನೇ ಕಣ್ಣು ದೇವಿಯ ಚುಂಬನದಿಂದ ಮುಚ್ಚಲ್ಪಟ್ಟ ಕಾರಣ ಅದು ಸರ್ವೋತ್ಕೃಷ್ಟವಾಗಿ ಗೆಲ್ಲುತ್ತದೆ. ಶ್ಲೋಕದಲ್ಲಿ "ಅದು ಗೆಲ್ಲಲಿ" (ಜಯತಿ) ಎಂಬ ಕ್ರಿಯಾಪದ ಸಹೃದಯರ ಅನುಭವಕ್ಕೆ ಬರುವ ಅನಿರ್ವಚನೀಯವಾದ ವೈಚಿತ್ರ್ಯವನ್ನು ಸ್ಫುರಿಸುವ ಸಾಮರ್ಥ್ಯ ಹೊಂದಿದೆ.

ಸ್ವೇಚ್ಛಾ ಕೇಸರಿಣಃ ಸ್ವಚ್ಛ ಸ್ವಚ್ಛಾಯಾಯಾಸಿತೇಂದವಃ
ತ್ರಾಯಂತಾಂ ವೋ ಮಧು ರಿಪೋಃ ಪ್ರಪನ್ನಾರ್ತಿಚ್ಛಿದೋ ನಖಾಃ (೫೯)

ತನ್ನಿಚ್ಛೆಯಿಂದಲಿ ಹರಿಯಾಕೃತಿಯನು
ತಳೆದಾ ಮಧುರಿಪುವಿನ ನಖಗಳು ಕೇವಲಮೆ?
ತಮ್ಮುಜ್ವಲ ತೇಜದೆ ತಂಗದಿರನ ಮಸುಳಿಸುವ
ಮತ್ತಾ ಶರಣಾರ್ತರ ಕಷ್ಟಗಳನು ತುಂಡರಿಸುವ
ನಖಗಳು ನಿರುತದಿ ಪೊರೆಯಲಿ ನಿಮ್ಮ (೫೯) (ಧ್ವನ್ಯಾಲೋಕ–)

ಈ ಶ್ಲೋಕದಲ್ಲಿ ಕವಿ ಉಗುರುಗಳ ಲೋಕ ಪ್ರಸಿದ್ಧ ಗುಣವಾದ ಛೇದನ ವ್ಯಾಪಾರ (ಕತ್ತರಿಸುವ ಕ್ರಿಯೆ) ಕ್ಕಿಂತ, ಭಿನ್ನವಾದ ಭಕ್ತಾದಿಗಳ ವಿಪತ್ತುಗಳನ್ನು ತುಂಡರಿಸುವ ಅಪೂರ್ವವಾದ ಕ್ರಿಯೆಯನ್ನು ಯೋಜಿಸಿದ್ದಾನೆ. ಹಾಗಾಗಿ ಇಲ್ಲಿ ಅತಿಶಯ ಚಮತ್ಕಾರದ ಕ್ರಿಯಾ ವೈಚಿತ್ರ್ಯ ಅಳವಟ್ಟಿದೆ.

ಇನ್ನೊಂದು ಉದಾಹರಣೆ:

---

* ರಇಕೇಲಿಹಿ ಅಣಿಅಂಸಣಕರ ಕಿಸಲಅ ರುದ್ಧಣ ಅಣಜುಅಲಸ್ಯ
ರುದ್ದಸ್ಸ ತಇ ಅಣಅಣಂ ಪವ್ವಇ ಪರಿಚುಂಬಿಅಂ ಜ ಅಇ (ಪ್ರಾಕೃತ)

ಸ ದಹತು ದುರಿತಂ ಶಾಂಭವೋ ವಃ ಶರಾಗ್ನಿ : (೬೦)

(ಅಮರುಶತಕ-2)

"ಶಂಭುವಿನ ಶರಾಗ್ನಿಯು ನಿಮ್ಮ ಪಾಪಗಳನು ಸುಡಲಿ" (೬೦)

ಹಿಂದಿನ ಉದಾಹರಣೆಯ ಹಾಗೆ, ಇದರಲ್ಲೂ ಕ್ರಿಯಾಪದವು ಅತಿಶಯ ವೈಚಿತ್ರ್ಯದಿಂದ ಕೂಡಿದೆ.

(ಲೋಕದಲ್ಲಿ ಕಾಷ್ಠವೇ ಮೊದಲಾದ ಮೂರ್ತ ವಸ್ತುಗಳನ್ನು ಅಗ್ನಿ ದಹಿಸುವುದು ತಿಳಿದೇ ಇದೆ. ಆದರೆ ಈ ಶ್ಲೋಕಖಂಡದಲ್ಲಿ ಅದಕ್ಕಿಂತ ಭಿನ್ನವಾದ ಪಾಪವೆಂಬ ಅಮೂರ್ತ ವಸ್ತುವಿನ ದಹನ ಕ್ರಿಯೆಯ ಪ್ರತಿಪಾದನೆ ಮಾಡಿರುವುದರಿಂದ ಇಲ್ಲಿ ಕ್ರಿಯಾ ವೈಚಿತ್ರ್ಯ ವಕ್ರತೆ ಇದೆ)

ಮೂರನೇ ಉದಾಹರಣೆ

ಕಣ್ಣುಪ್ಪಲದಲಮಿಲಿ ಅಅಲೋ ಅಣೇಹಿಂ ಹೇಲಾ ಲೋಲಣ ಮಾಣೆ ಅಣ ಅಣೇಹಿಂ
ಲೀಲಇ ಲೀಲಾವಇಹಿ ಣೆ ರುದ್ಧಾವೋ ಸಿಥಿಲಿಅಚಾವೋ ಜಅಇ ಮಅರದ್ಧವೋ
(೬ ೧) (ಪ್ರಾಕೃತ)

ಕರ್ಣೋತ್ಪಲದಲಮಿಲಿತ ಲೋಚನೈರ್ಹೇಲಾ ಲೋಲನ ಮಾನಿತನಯನಾಭಿ:
ಲೀಲಯಾ ಲೀಲಾವತೀಭಿರ್ನಿರುದ್ಧ: ಶಿಥಿಲೀಕೃತ ಚಾಪೋ ಜಯತಿ ಮಕರ ಧ್ವಜಃ

ಲೀಲೆಯಿಂದಲಿ ಕಣ್ಗಳ ಕೆಳಗಾಗಿಸಿ
ಕರ್ಣಗಳೆಡೆಯೊಳು ಧರಿಸಿದ
ಉತ್ಪಲ ದಳದೆಡೆ ನೋಟವ
ಹರಿಸಿದ ವಿಲಾಸಿನಿಯರ ಕತದೆ
ಚಾಪವ ಸಡಿಲು ಗೊಳಿಸಿದ
ಮನಸಿಜನದೆ ಮಹಗೆಲುವು (೬೧)

ಈ ಪದ್ಯದಲ್ಲಿ ವಿಳಾಸಿನಿಯರ ನೋಟ ಮಾತ್ರದಿಂದಲೇ ಮನ್ಮಥನ ಶರ ಸಂಧಾನ ಕಾರ್ಯವು ನಿಂತಿತು ಎಂದು ವರ್ಣಿಸಲಾಗಿದೆ. ವಾಸ್ತವವಾಗಿ ತನ್ನ ಬಿಲ್ಲನ್ನು ಸಡಿಲು ಗೊಳಿಸಿದ ಮನ್ಮಥನ ಈ ಕೃತ್ಯ ಅವನ ವಿಜಯವೆಂದೇ ಲೆಕ್ಕ. ಯಾರ ಮೂಲಕ ಮನ್ಮಥನಿಗೆ ಅಂಥ ಉತ್ಕೃಷ್ಟ ಜಯ ಸಾಧ್ಯವಾಯಿತೋ ಅಂಥ ವಿಲಾಸವತಿಯರ ಕೀರ್ತಿಯ ಬಗ್ಗೆ ಹೇಳುವುದಕ್ಕಿನ್ನೇನಿದೆ?

ಅಂದರೆ ಇದರ ಅಭಿಪ್ರಾಯ-ಚೇತನ ಸ್ವರೂಪಿಯಾದ ಮನ್ಮಥನು ಮೂರೂ ಲೋಕಗಳ ಮೇಲೆ ವಿಜಯ ಸಾಧಿಸಬೇಕೆಂಬ "ನನ್ನ ಉದ್ದೇಶವು ಈ ವಿಲಾಸವತಿಯರಿಂದಲೇ ಈಡೇರುತ್ತಿದೆ"-ಎಂದು ಯೋಚಿಸಿ, ಸುಂದರಿಯರ ಲೋಚನ ವಿಲಾಸದ ಜಯ ಶಾಲಿತ್ವದ ಸಾಮರ್ಥ್ಯವನ್ನು ಪರ್ಯಾಲೋಚಿಸಿಯೇ ತನ್ನ ಶರ ಸಂಧಾನಕ್ಕೆ ಮುಕ್ತಾಯ ಹಾಡಿದ, ವಿಲಾಸವತಿಯರ ಸಹಾಯದ ಉತ್ಕರ್ಷದ ಅತಿಶಯತೆಯು, ಕವಿಯ ಮನಸ್ಸಿನಲ್ಲಿ ಪರಿಸ್ಫುರಿತ ಗೊಂಡಿತ್ತು. 'ಜಯತಿ' ಎಂಬ ಕ್ರಿಯಾಪದವು, ಕಾರಣದ ಕರ್ತೃತ್ವವನ್ನು ಹೊರಡಿಸಲು ಶಕ್ತವಾಗಿ ಬಳಕೆಯಾಗಿದೆ ಹಾಗಾಗಿ

ಇಲ್ಲಿ ಬಳಕೆಯಾಗಿರುವ ಕ್ರಿಯಾ ವೈಚಿತ್ರ್ಯವು ಸಹೃದಯರಿಗೆ ಆಹ್ಲಾದಕಾರಿಯಾಗಿ ಪ್ರತೀತವಾಗುತ್ತದೆ.

ನಾಲ್ಕನೇ ಉದಾಹರಣೆ.

ತಾನ್ಯಕ್ಷರಾಣಿ ಹೃದಯೇ ಕಿಮಪಿ ಧ್ವನಂತಿ. (೬೨)

ಆ ಅಕ್ಷರಗಳು ಹೃದಯದೊಳೇನನೋ ಧ್ವನಿಸುತಿವೆ. (೬೨)

ಇಲ್ಲಿ "ಹೇಳು ಎನ್ನುವ ಅರ್ಥದಲ್ಲಿ 'ಜಲ್ಪಂತಿ', 'ವದಂತಿ' ಇತ್ಯಾದಿ ಶಬ್ದಗಳಾವುದನ್ನೂ ಬಳಸದೆ, 'ಧ್ವನಂತಿ' ಎಂದು ಬಳಸಿದ್ದಾನೆ ಇದರಲ್ಲಿ ಕವಿಯ ಉದ್ದೇಶ. ಮಾತಿನಲ್ಲಿ ಹೇಳಲು ಸಾಧ್ಯವಾಗದೆ ಇರುವ ಭಾವಗಳನ್ನು ವಿಚ್ಛಿತ್ತಿಯ ವಿಧಾನದಲ್ಲಿ ಧ್ವನಿಸುತ್ತಿವೆ ಎಂದು ಹೇಳುವುದು. ಇದರಿಂದ ವಾಕ್ಯಕ್ಕೊಂದು ಅಪೂರ್ವ ಚಮತ್ಕಾರ ಉಂಟಾಗಿದೆ.

ವಕ್ರತೆಯಲ್ಲಿ ಪ್ರತ್ಯಯಾಶ್ರಯ ವಕ್ರತೆ ಎಂಬ ಪ್ರಭೇದವೊಂದಿದೆ. ಪ್ರತ್ಯಯಾಶ್ರಯ ವಕ್ರತೆಯು ಸುಬಂತ, ತಿಙಂತ (ನಾಮ ಕ್ರಿಯಾ) ಪ್ರತ್ಯಯದ ಆಶ್ರಯವನ್ನು ಹೊಂದಿರುವಂಥದು. ಯಾವ ರೀತಿಯ ಪ್ರತ್ಯಯದ ಆಶ್ರಯವನ್ನು ಹೊಂದಿರುತ್ತದೋ ಆ ಹೆಸರಿನಿಂದ ಅದನ್ನು ಕರೆಯಲಾಗುವುದು. ಸಂಖ್ಯಾ ವೈಚಿತ್ರ್ಯದಿಂದ ಕೂಡಿರುವಂಥದು, ಕಾರಕ ವೈಚಿತ್ರ್ಯದಿಂದ ಕೂಡಿರುವಂಥದು, ಪುರುಷ ವೈಚಿತ್ರ್ಯದಿಂದ ಕೂಡಿರುವಂಥದು-ಹೀಗೆ

ಇದರಲ್ಲಿ ಸಂಖ್ಯಾ ವೈಚಿತ್ರ್ಯದಿಂದ ಉತ್ಪನ್ನವಾದ ಪ್ರಭೇದವು ಯಾವಾಗ ಉಂಟಾಗುತ್ತದೆಂದರೆ, ಕಾವ್ಯಬಂಧದ ಶೋಭೆಗಾಗಿ ಏಕವಚನ, ದ್ವಿವಚನ, ಅಥವಾ ಬಹುವಚನಗಳು ವೈಶಿಷ್ಟ್ಯಪೂರ್ಣವಾಗಿ ಬಳಕೆಯಾದಾಗ.

ಉದಾ:

ಮೈಥಿಲೀ ತಸ್ಯ ದಾರಾಃ (೬೩)

'ಮೈಥಿಲಿಯು ಆತನ ಪತ್ನಿ ಮಡದಿ" (೬೩)

ಈ ಉದಾಹರಣೆಯಲ್ಲಿ 'ಮೈಥಿಲಿ' ಶಬ್ದ ಏಕವಚನದಲ್ಲಿದೆ. ಹಾಗೂ 'ದಾರಾ' (ಸಂಸ್ಕೃತ) ಶಬ್ದ ನಿತ್ಯ ಬಹುವಚನ ಹಾಗೂ ಪುಲ್ಲಿಂಗ. ಆದರೆ ಕವಿ 'ಮೈಥಿಲಿ' ಶಬ್ದದ ವಿಶಿಷ್ಟತೆಯನ್ನು ಸೂಚಿಸುವಸಲುವಾಗಿ 'ದಾರಾ' ಶಬ್ದವನ್ನೇ 'ಸಮಾನಾಧಿಕರಣ' ರೂಪದಲ್ಲಿ ಪ್ರಯೋಗಿಸಿ, ವಾಕ್ಯದಲ್ಲಿ ಒಂದು ಅಪೂರ್ವ ಚಮತ್ಕಾರವನ್ನುಂಟು ಮಾಡಿದ್ದಾನೆ. ಆದ್ದರಿಂದ ಇಲ್ಲಿ ಏಕವಚನದೊಂದಿಗೆ, ಬಹುವಚನವನ್ನು ಪ್ರಯೋಗಿಸಿರುವುದರಿಂದ ಸಂಖ್ಯಾ ವೈಚಿತ್ರ್ಯದಿಂದ ಉಂಟಾದ ವಕ್ರತೆ ಇದೆ.

ಇನ್ನೊಂದು ಉದಾಹರಣೆ :

ಫುಲ್ಲೇಂದೀವರ ಕಾನನಾನಿ ನಯನೇ ಪಾಣಿ ಸರೋಜಾಕರಾಃ (೬೪)

ಅವಳ ಕಂಗಳೆರಡೂ ಅರಳಿದ ಕಮಲವನಗಳು.
ಕೈಗಳಾದರೊ ಕಮಲಾಕರಗಳು. (೬೪) (ತಾಪಸ ವತ್ಸರಾಜ)

ಇಲ್ಲಿ ಕುಶಲ ಕವಿ ಪ್ರಯೋಗಿಸಿರುವ ' ನಯನ' ಮತ್ತು 'ಪಾಣಿ', ಶಬ್ದಗಳು ದ್ವಿವಚನದಲ್ಲಿದ್ದು ಅವುಗಳ ಉಪಮಾನ ರೂಪವಾದ 'ಫುಲ್ಲೇಂದೀವರ ಕಾನನಾನಿ' ಮತ್ತು 'ಸರೋಜಾಕರಾಃ' ಶಬ್ದಗಳು ಬಹುವಚನದಲ್ಲಿವೆ. ಆದರೆ ಈ ದ್ವಿವಚನ ಹಾಗೂ ಬಹುವಚನದ ಶಬ್ದಗಳು ಸಮಾನಾಧಿಕರಣ (ಅಂದರೆ ಒಂದೇ ವಿಭಕ್ತಿ) ದಲ್ಲಿ ಪ್ರಯೋಗವಾಗಿರುವುದರಿಂದ ಸಹೃದಯರಿಗೆ ಆಹ್ಲಾದವನ್ನುಂಟು ಮಾಡುವಂಥದಾಗಿದೆ. ಇಲ್ಲಿ ಸಂಖ್ಯಾ ವೈಚಿತ್ರ್ಯದಿಂದ ಪ್ರತ್ಯಯಾಶ್ರಿತ ವಕ್ರತೆ ಉಂಟಾಗಿದೆ.

ಈಗ ಪ್ರತ್ಯಯಾಶ್ರಿತ ವಕ್ರತೆಯ ಇನ್ನೊಂದು ಪ್ರಭೇದವನ್ನು ನಿರೂಪಿಸಲಾಗುತ್ತದೆ.

ಅಚೇತನ ಪದಾರ್ಥಗಳಲ್ಲೂ ಚೇತನಾರೋಪಣೆ ಮಾಡಿ, ಚೇತನ ವಸ್ತುಗಳ ಹಾಗೆಯೇ ವಿಭಿನ್ನ ಕ್ರಿಯೆಗಳನ್ನು ಮಾಡುವ ಸಾಮರ್ಥ್ಯವನ್ನು ತೋರುತ್ತ ಕವಿ ಕರ್ತೃವೇ ಮೊದಲಾದ ರೂಪಗಳಲ್ಲಿ, ಕರ್ತೃಕಾರಕವೇ ಮೊದಲಾದ ಕಾರಕಗಳ ಪ್ರಯೋಗದ ಮೂಲಕ ವ್ಯಕ್ತಪಡಿಸುವ ಸಂದರ್ಭಗಳಲ್ಲಿ ಕಾರಕ ವೈಚಿತ್ರ್ಯದಿಂದ ಕೂಡಿದ ಪ್ರತ್ಯಯ ವಕ್ರತೆ ಕಂಡು ಬರುತ್ತದೆ

ಉದಾ:

ಸ್ತನದ್ವಂದ್ವಂ ಮಂದಂ ಸ್ನಪಯತಿ ಬಲಾದ್ಬಾಷ್ಪನಿವಹೋ
ಹಠಾದಂತಃಕಂಠಂ ಲುಠತಿ ಸರಸಃ ಪಂಚಮ ರವಃ
ಶರಜ್ಜ್ಯೋತ್ಸ್ನಾ ಪಾಂಡುಃ ಪತತಿ ಚ ಕಪೋಲಃ ಕರತಲೇ
ನ ಜಾನೀಮಸ್ತಸ್ಯಾ ಕ ಇವ ಹಿ ವಿಕಾರವ್ಯತಿಕರಃ (೬೫)

ಸ್ತನಗಳೆರಡನು ನಿಧ ನಿಧಾನಕೆ
ಬಹುವಾಗಿ ನೆನೆಸುತಿರೆ ಕಣ್ಣೀರ ಧಾರೆ
ಅವಳ ಪಂಚಮದ ಇನಿದನಿಯು
ಕಂಠದೊಳೆ ತಡೆದಿರಲು
ಶರದದ ಬೆಳುದಿಂಗಳ ಹಾಗೆ
ಬಿಳಿದೆನಿಸಿದ ಕಪೋಲವದು ಕರತಲಕೆ ಇಳಿಯುತಿರೆ
ಅವಳ ಅಂತರಂಗದ ವ್ಯಥೆಯ ವ್ಯತಿಕರವ
ನಾವೆತ್ತ ಬಲ್ಲೆವು (೬೫)

ಕಣ್ಣೀರ ಧಾರೆಯುಂಥ (ಬಾಷ್ಪನಿವಹ) ಅಚೇತನ ವಸ್ತುವಿಗೆ ಚೇತನತ್ವದ ಆರೋಪವನ್ನು ಕವಿ ಮಾಡಿ ಇಲ್ಲಿ ಕರ್ತೃತ್ವವನ್ನು ಯೋಜಿಸಿದ್ದಾನೆ. (ಅರ್ಥಾತ್ ನೆನೆಸುತಿರೆ ' (ಸ್ನಪಯತಿ) ಕ್ರಿಯಾಪದದ ಕರ್ತೃವಿನ ರೂಪದಲ್ಲಿ, 'ತಡೆದಿದೆ' ಕ್ರಿಯಾಪದದ ಕರ್ತೃವಿನ ರೂಪದಲ್ಲಿ 'ಪಂಚಮದ ಇನಿದನಿ' ಹಾಗೂ 'ಇಳಿಯುತಿರೆ' ಕ್ರಿಯಾಪದದ ಕರ್ತೃವಿನ ರೂಪದಲ್ಲಿ 'ಕಪೋಲ' ಹೀಗೆ ಅಚೇತನಗಳಿಗೆ ಚೇತನತ್ವದ ಆರೋಪ ಮಾಡಲಾಗಿದೆ). ಇದರಿಂದ ಒಂದು ಅಪೂರ್ವ ಚಮತ್ಕಾರ

ಉಂಟಾಗಿದೆ. ವಿರಹದ ವ್ಯಥೆಯಿಂದ ಅವಳು ವಿವಶಳಾಗಿ, ತಾನೇ ಏನನ್ನೂ ಮಾಡಲು ಅಸಮರ್ಥಳಾಗಿರುವುದರಿಂದ ಕಪೋಲ, ಕಣ್ಣೀರಧಾರೆ, ಮೊದಲಾದ ಅಚೇತನ ಪದಾರ್ಥಗಳ ವರ್ತನೆ ಹೀಗಿದೆ. ಅಲ್ಲದೆ ಕಪೋಲವೇ ಮೊದಲಾದ ಅವಳ ಅಂಗಾಂಗಗಳ ಬಹಿರಂಗ ಅವಸ್ಥೆಯಂತೂ ಕಣ್ಣಿಗೆ ಕಾಣುತ್ತಿದೆ. ಆದರೆ ಅವಳಿಗೆ ಮಾತ್ರ ಅನುಭವಕ್ಕೆ ಬರುವಂಥ ಅವಳ ಅಂತರಂಗದ ವ್ಯಥೆಯ ಅವಸ್ಥೆಯನ್ನು ನಾವು ಅರಿಯಲಾರೆವು. ಇದರ ಇನ್ನೊಂದು ಉದಾಹರಣೆ-ರಾಜಶೇಖರನ ಬಾಲ ರಾಮಾಯಣ ನಾಟಕದ ಎರಡನೇ ಅಂಕದಲ್ಲಿ ಪರಶುರಾಮನನ್ನು ಕುರಿತು ರಾವಣ ಹೇಳುವ ಈ ಮಾತುಗಳು.

ಚಾಪಾಚಾರ್ಯಸ್ತ್ರಿಪುರ ವಿಜಯೀ ಕಾರ್ತಿಕೇಯೋ ವಿಜೇಯಃ
ಶಸ್ತ್ರವ್ಯಸ್ತಃ ಸದನ ಮುದಧಿರ್ಭೂರಿಯಂ ಹಂತಕಾರಃ
ಅಸ್ತ್ಯೇವೈತತ್ ಕಿಮು ಕೃತವತಾ ರೇಣುಕಾ ಕಂಠ ಬಾಧಾಂ
ಬದ್ಧಸ್ಪರ್ಧಸ್ತವ ಪರಶುನಾ ಲಜ್ಜತೇ ಚಂದ್ರಹಾಸಃ (೬೬)

ತ್ರಿಪುರಾಸುರರ ಗೆದ್ದ ಆ ಶಿವನು
ನಿನ್ನ ಬಿಲ್ಲೋಜನೆಂಬುದ ಬಲ್ಲೆ ನಾನು
ಬಲ್ಲೆನಾ ಕಾರ್ತಿಕೇಯನು ನಿನ್ನಿಂದ
ಸೋಲುಂಡ ಶತ್ರುವೆಂಬುದನು
ನಿನ್ನ ಪರಶುವಿನಿಂದ ಹಿಂದೆ ಸರಿದ
ಸಾಗರವೆ ನಿನ್ನ ಸದನವೆಂಬುದದು ದಿಟವು
ಈ ಭೂಮಿಯಾದರೋ ನೀನಿತ್ತ ಔದಾರ್ಯಭಿಕ್ಷೆ
ಇದೆಲ್ಲ ನಿಜವೆ ಆದರು, ರೇಣುಕೆಯ ಕಂಠವನು
ಕತ್ತರಿಸಿದೀ ನಿನ್ನ ಪರಶುವಿನೊಡನೆ ಸ್ಪರ್ಧಿಸಲು
ನಾಚುವುದು ನನ್ನ ಚಂದ್ರಹಾಸ! (೬೬) (ಬಾಲ ರಾಮಾಯಣ 2-37),

ಹಿಂದಿನ ಉದಾಹರಣೆಯಂತೆಯೇ, ಇಲ್ಲಿಯೂ "ಲಜ್ಜತೇ ಚಂದ್ರಹಾಸಃ" (ನಾಚುವುದು-ಚಂದ್ರಹಾಸಃ) ಎಂಬ ರಚನೆಯ ಮೂಲಕ ಕಾರಕದ ವೈಚಿತ್ರ್ಯವನ್ನು ಪ್ರತಿಪಾದಿಸಲಾಗಿದೆ. (ಅ ಚೇತನ ಪದಾರ್ಥವಾದ 'ಚಂದ್ರಹಾಸ' (ಖಡ್ಗ) ದಲ್ಲಿ ಚೇತನಾರೋಪಣೆ ಮಾಡಿ, 'ನಾಚುವುದು' (ಲಜ್ಜತೇ) ಎಂಬ ಕ್ರಿಯಾಪದದ ಕರ್ತೃವಿನ ರೂಪದಲ್ಲಿ ಪ್ರಯೋಗಿಸುವ ಮೂಲಕ.

ಹೀಗೆ ಕಾರಕ ವೈಚಿತ್ರ್ಯದಿಂದುಂಟಾದ ಪ್ರತ್ಯಯ ವಕ್ರತೆಯನ್ನು ವ್ಯಾಖ್ಯಾನಿಸಿ, ಪುರುಷ ವೈಚಿತ್ರ್ಯವಿಹಿತ ವಕ್ರತೆಯನ್ನು ಪ್ರತಿಪಾದಿಸುತ್ತಿದ್ದಾನೆ.

ಎಲ್ಲಿ ಕವಿಗಳು ಕಾವ್ಯದಲ್ಲಿ ವೈಚಿತ್ರ್ಯವನ್ನು ತರುವ ಸಲುವಾಗಿ ಮಧ್ಯಮ ಪುರುಷ (ಯುಷ್ಮದ್) ಅಥವಾ ಉತ್ತಮ ಪುರುಷ (ಅಸ್ಮದ್) ವನ್ನು ಪ್ರಯೋಗಿಸುವ ಬದಲು ಪ್ರಥಮ ಪುರುಷ (ಕೇವಲ ಪ್ರಾತಿಪದಿಕ ಶಬ್ದ) ವನ್ನು ಮಾತ್ರ ಪ್ರಯೋಗಿಸುತ್ತಾರೋ ಅಲ್ಲಿ ಪುರುಷ ವೈಚಿತ್ರ್ಯ ವಕ್ರತೆ ಕಂಡು ಬರುತ್ತದೆ.

ಉದಾ:

ಅಸ್ಮದ್ ಭಾಗ್ಯವಿಪರ್ಯಯಾದ್ಯದಿ ಪರಂದೇವೋ ನ ಜಾನಾತಿ ತಮ್ (೬೭)

ಎಮ್ಮ ದೌರ್ಭಾಗ್ಯವಶದೆ ಪ್ರಭುವು ಅವನಾರೆಂದು ಅರಿಯದಿರೆ (೬೭)

ಇಲ್ಲಿ "ನಿಮಗೆ ತಿಳಿದಿಲ್ಲ" (ತ್ವಂ ನ ಜಾನಾಸಿ) ಎಂದು ಮಧ್ಯಮ ಪುರುಷ ಪ್ರಯೋಗದ ಬದಲು ಪ್ರಭುವು ಅವನಾರೆಂದು ಅರಿಯದಿರೆ ಎಂದು ಪ್ರಥಮ ಪುರುಷ ಪ್ರಯೋಗಿಸಿ, ಕವಿ ಕಾವ್ಯದಲ್ಲೊಂದು ಅಪೂರ್ವರಮಣೀಯತೆಯನ್ನು ತಂದಿದ್ದಾನೆ.

ಇದೇ ರೀತಿ, ಮಧ್ಯಮ ಮತ್ತು ಉತ್ತಮ ಪುರುಷಗಳ ಸ್ಥಾನದಲ್ಲಿ, ಕ್ರಿಯಾಪದಗಳ ಬದಲಿಗೆ ಕೇವಲ ಪ್ರಾತಿಪದಿಕವನ್ನು (ನಾಮ ಪ್ರಕೃತಿ) ಮಾತ್ರ ಪ್ರಯೋಗಿಸಿರುವುದುಂಟು.

ಅಯಂ ಜನಃ ಪ್ರಷ್ಟುಮನಾಸ್ತಪೋಧನೇ
ನ ಚೇದ್ರಹಸ್ಯಂ ಪ್ರತಿವಕ್ತುಮರ್ಹಸಿ (೬೮)

ಓ ತಪೋಧನಳೆ |
ನಿನ್ನೊಳೀತನೊಂದನು ಪ್ರಶ್ನಿಸಲಿಚ್ಛಿಪನು
ರಹಸ್ಯವಲ್ಲದಿರೆ ಅದಕುತ್ತರವ ನೀಡು ನೀನು| (೬೮)

ಕುಮಾರ ಸಂಭವದ 5ನೇ ಸರ್ಗದಲ್ಲಿ ತಪಸ್ಸಿನಲ್ಲಿ ತೊಡಗಿದ್ದ ಪಾರ್ವತಿಯನ್ನು ವಟು ವೇಷಧಾರಿ ಶಿವನು ಅವಳ ತಪಸ್ಸಿಗೆ ಕಾರಣವೇನೆಂದು ಕೇಳುತ್ತ ಮೇಲಿನ ಮಾತುಗಳನ್ನು ಹೇಳುತ್ತಾನೆ. ಇಲ್ಲಿ 'ನಾನು' ಪ್ರಶ್ನಿಸಲಿಚ್ಛಿಸಿದ್ದೇನೆ ಎಂದು ಉತ್ತಮ ಪುರುಷ ಪ್ರಯೋಗವನ್ನು ಬಿಟ್ಟು, ತಟಸ್ಥತೆಯ ದ್ಯೋತಕವಾಗಿ 'ಈತ' ಎಂಬ ಪ್ರಯೋಗ ಮಾಡಲಾಗಿದೆ. ಹೀಗೆ ಈ ವಾಕ್ಯದಲ್ಲಿ ಕ್ರಿಯಾಪದ ರಹಿತವಾದ ಕೇವಲ ಪ್ರಾತಿಪದಿಕದ ಪ್ರಯೋಗದ ಮೂಲಕ ವೈಚಿತ್ರ್ಯ ಸಿದ್ಧಿಸಿದೆ.

ಈಗ ಇನ್ನೊಂದು ಉದಾಹರಣೆ:

ಸೋಽಯಂ ದಂಭ ಧೃತ ವ್ರತಃ (೬೯)

ಆ ಮಿಥ್ಯಾ ಪ್ರತಿಜ್ಞಾವ್ರತಿ ಇವನು! (೬೯) [ತಾಪಸವತ್ಸರಾಜ]

ಪದ್ಮಾವತಿಯನ್ನು ವಿವಾಹವಾಗಲು ಸಿದ್ಧನಾಗಿರುವ ವತ್ಸರಾಜ ಉದಯನನು, ಬೆಂಕಿಯಲ್ಲಿ ಸುಟ್ಟು ಹೋದ ವಾಸವದತ್ತೆಯನ್ನು ಸಂಬೋಧಿಸುತ್ತ ಮೇಲೆ ಹೇಳಿದಂತೆ ಹೇಳುತ್ತಾನೆ.

ಈ ವಾಕ್ಯದಲ್ಲಿ, 'ಆ ನಾನು' ಎಂದು ಹೇಳದೆ, "ಆ ಇವನು" ಎಂದು ಪ್ರಯೋಗಿಸಿ ಒಂದು ಅಪೂರ್ವಚಮತ್ಕಾರವನ್ನು ಉಂಟು ಮಾಡಿದ್ದಾನೆ.

ಹೀಗೆ ಉದಾಹರಣೆಯ ಸಲುವಾಗಿ ವಕ್ರತೆಯ ಕೆಲವು ಪ್ರಭೇದಗಳನ್ನು ವಿವರಿಸಿದ್ದಾಯಿತು. ಮಹಾ ಕವಿಗಳ ಕಾವ್ಯಗಳಲ್ಲಿ ಇದರ ಸಾವಿರಾರು ಪ್ರಭೇದಗಳು ಸಾಧ್ಯ. ಅವನ್ನು ಸಹೃದಯರು ತಾವೇ ಮಹಾಕವಿಗಳ ಕಾವ್ಯಗಳಲ್ಲಿ ಕಂಡುಕೊಳ್ಳಬಹುದು.

ಹೀಗೆ ವಾಕ್ಯದ ಅಂಗಗಳಾದ ಪದಗಳ ವಕ್ರತೆಯ ಬಗ್ಗೆ ಪ್ರತಿಯೊಂದನ್ನೂ, ವರ್ಣವೇ

ಮೊದಲಾದ ಅಂಗಗಳ ಮಾಧ್ಯಮದ ಮೂಲಕ ಎಷ್ಟು ಸಾಧ್ಯವೋ ಅಷ್ಟು ವ್ಯಾಖ್ಯಾನಿಸಿ, ಪದ ಸಮುದಾಯ ರೂಪವಾದ ವಾಕ್ಯದ ವಕ್ರತೆಯ ಬಗ್ಗೆ ಈಗ ವ್ಯಾಖ್ಯಾನಿಸುತ್ತೇನೆ.

ವಾಕ್ಯಸ್ಯ ವಕ್ರಭಾವೋಽನ್ಯೋ ಭಿದ್ಯತೇ ಯಃ ಸಹಸ್ರಧಾ
ಯತ್ರಾಲಂಕಾರ ವರ್ಗೋಽಸೌ ಸರ್ವೋಽಪ್ಯಂತರ್ಭವಿಷ್ಯತಿ (20)

ಪದ ಸಮುದಾಯ ರೂಪದ ವಾಕ್ಯ ವಕ್ರತೆ ಎಂಬುದು ಸಾವಿರಾರು ರೀತಿಯ ವೈವಿಧ್ಯಗಳಿಂದ ಕೂಡಿರುವಂಥದು. ಅದರಲ್ಲಿ ಇಡೀ ಅಲಂಕಾರ ಸಮುದಾಯವೇ ಅಡಗಿದೆ. (20)

ವಾಕ್ಯದ ವಕ್ರತೆ ಎಂಬುದು ಒಂದು ಭಿನ್ನವಾದ ವಕ್ರತೆಯೇ. ಅವ್ಯಯ, ಕಾರಕ ಹಾಗೂ ವಿಶೇಷಣಗಳಿಂದ ಕೂಡಿದ ಕ್ರಿಯಾಪದ (ಆಖ್ಯಾತ) ವಾಕ್ಯವೆನಿಸುತ್ತದೆ. ಮತ್ತು ಹೀಗೆ ಪ್ರತೀತವಾಗುವುದು ಶ್ಲೋಕಾದಿಗಳ ಭಂಗಿ ಭಣಿತಿ ವೈಚಿತ್ರ್ಯ. ಈಗಾಗಲೇ ಹಿಂದೆ ವಿವರಿಸಲಾದ ವಿವಿಧ ವಕ್ರತೆಗಳಿಗಿಂತ ಭಿನ್ನವಾದ, ಇಡೀ ಶ್ಲೋಕಕ್ಕೇ ಅನ್ವಯಿಸುವ ವಕ್ರತೆಯೂ ಸಾಧ್ಯ-

ಉದಾ:

ಉಪಸ್ಥಿತಾಂ ಪೂರ್ವಮಪಾಸ್ಯ ಲಕ್ಷ್ಮೀಂ ವನಂ ಮಯಾ ಸಾರ್ಧಮಸಿ ಪ್ರಪನ್ನಃ
ತ್ವಾಮಾಶ್ರಯಂ ಪ್ರಾಪ್ಯ ತಯಾ ನು ಕೋಪಾತ್ಸೋಢಾಸ್ಮಿ ನ ತ್ವದ್ಭವನೇ ವಸಂತೀ (೭೦)
(ರಘುವಂಶ 14-60)

ಒಡನಿದ್ದ ಲಕ್ಷ್ಮಿಯನು ತೊರೆದು
ತೆರಳಿದ್ದೆ ನನ್ನೊಡನೆ ವನಕೆ ನೀನಂದು
ಮರಳಿ ನಿನ್ನನು ಪಡೆದ ಆ ಅಸೂಯೆ
ನಿನ್ನ ಭವನದೊಳು ನನ್ನಿರವ ಸಹಿಸಳಿಂದು (೭೦) (ರಘುವಂಶ-14-60)

ಕಾಳಿದಾಸನ ರಘುವಂಶದಲ್ಲಿ ಶ್ರೀರಾಮನಿಂದ ಪರಿತ್ಯಕ್ತಳಾದ ಸೀತೆ, ಕರುಣಾಕ್ರಾಂತ ಹೃದಯಳಾಗಿ, ತನ್ನನ್ನು ಕಾಡಿನಲ್ಲಿ ಬಿಟ್ಟು ಅಯೋಧ್ಯೆಗೆ ತೆರಳುತ್ತಿರುವ ಲಕ್ಷ್ಮಣನ ಮೂಲಕ ರಾಮನಿಗೆ ಸಂದೇಶವೊಂದನ್ನು ಕಳುಹಿಸುತ್ತಿರುವ ಸಂದರ್ಭ ಇದು.

ಹಿಂದೆ, ನಿನ್ನ ಸೇವೆಗಾಗಿ ತುದಿಗಾಲಲ್ಲಿ ನಿಂತಿದ್ದ (ರಾಜ್ಯ) ಲಕ್ಷ್ಮಿಯನ್ನು ಪರಿತ್ಯಜಿಸಿ, ನನ್ನೊಡನೆ ಕಾಡಿಗೆ ತೆರಳಲು ಸಿದ್ಧನಾಗಿದ್ದ ನೀನು ಇಂದು ನನಗೆ ಹೀಗೆ ಮಾಡುವುದನ್ನು (ನನ್ನನ್ನು ತ್ಯಜಿಸುವುದು) ಕನಸಿನಲ್ಲಿ ಕೂಡಾ (ಸಂಭವವೆಂದು) ಊಹಿಸಲಾಗದು. ಆ ದೇವಿಯು ಅದೇ ಕೋಪದಿಂದ ಸ್ತ್ರೀ ಸ್ವಭಾವಕ್ಕೆ ಸಹಜವಾದ ಸವತಿ ಮಾತ್ಸರ್ಯದಿಂದ ನಿನ್ನ ಮನೆಯಲ್ಲಿ ನಾನು ಇರುವುದನ್ನು ಸಹಿಸದಾದಳು. (ಪರಿಣಾಮ ನನ್ನನ್ನು ಮನೆಯಿಂದ ಹೊರಗಟ್ಟಲಾಯಿತು).

ಈ ಮಾತಿನ ಅಭಿಪ್ರಾಯ-ವನವಾಸ ಪ್ರಾಪ್ತವಾಗಿದ್ದ ಅಂಥ ವಿಪತ್ತಿನ ಸಮಯದಲ್ಲಿಯೂ ನಿನ್ನ ಕೃಪೆಗೆ ಪಾತ್ರಳಾಗಿದ್ದು, ಇದೀಗ ಸಾಮ್ರಾಜ್ಯ ಲಭಿಸಿರುವ ಈ ಸಮಯದಲ್ಲಿ (ವಿಪತ್ತು ಕೊನೆಯಾಗಿರುವಾಗ) ವಿನಾಕಾರಣ ನಿನ್ನಿಂದ ಪರಿತ್ಯಕ್ತಳಾಗಿ ಬಿಡುವಷ್ಟು ತಿರಸ್ಕಾರಕ್ಕೆ ಗುರಿಯಾಗಿದ್ದೇನೆ.ಇದು ಉಚಿತವೋ ಅನುಚಿತವೋ ಎಂಬುದನ್ನು, ನ್ಯಾಯಾನ್ಯಾಯ

ವಿವೇಚನೆಯನ್ನು ತಿಳಿದಿರುವ ನೀನೇ ವಿಚಾರಿಸಿ ನೋಡು. (ಅರ್ಥಾತ್ ನೀನು ಸರ್ವಥಾ ಅನೌಚಿತ್ಯ ಮಾಡಿದ್ದೀಯೆ ಎಂದರ್ಥ). ಹೀಗೆ ಈ ಉದಾಹರಣೆಯಲ್ಲಿ ಇಡೀ ವಾಕ್ಯದ ಅರ್ಥವನ್ನು ತಿಳಿದ ಮೇಲೆ ಒಂದು ಅಪೂರ್ವ ಚಮತ್ಕಾರ ಉಂಟಾಗಿರುವುದು ತಿಳಿದು ಬರುತ್ತದೆ. ಹಾಗಾಗಿ ಇಲ್ಲಿ ವಾಕ್ಯ ವಕ್ರತೆ ಇದೆ.

ಇಲ್ಲಿ ಕಂಡು ಬರುವ ವಕ್ರತೆ ಸಹಸ್ರ ವಿಧಗಳಲ್ಲಿ ಅಭಿವ್ಯಕ್ತವಾಗುವಂಥದು. ಇಲ್ಲಿ ಪ್ರಯೋಗವಾಗಿರುವ 'ಸಹಸ್ರ' ಎಂಬ ಶಬ್ದ ಅಧಿಕ ಸಂಖ್ಯೆಯನ್ನು ಸೂಚಿಸಲು ಬಳಕೆಯಾಗಿದೆಯೇ ಹೊರತು, ನಿಶ್ಚಿತ ಅರ್ಥವನ್ನಲ್ಲ. ಸಹಸ್ರದಲ ಎಂಬಂತೆ (ಈ ಶಬ್ದ 'ಕಮಲ' ಎಂಬ ಅರ್ಥದ ವಾಚಕ.). ಅದರಲ್ಲಿ ನೂರೇ ದಳಗಳು ಇರುತ್ತವೆ ಎಂದಲ್ಲ. ಆದರೆ ಸಹಸ್ರ ಎಂಬ ಸಂಖ್ಯೆಯ ಮೂಲಕ, ಸಂಖ್ಯೆ ಅಧಿಕವಾದದ್ದು ಎಂಬ ತಿಳಿವನ್ನು ಉಂಟು ಮಾಡುತ್ತ ಕಮಲದಲ್ಲಿ ಅನೇಕ ದಳಗಳಿರುತ್ತವೆ ಎಂದು ಸೂಚಿಸಿದೆ. ಕವಿ ಪ್ರತಿಭೆಯ ವಿಧಗಳು ಅನಂತವಾದ್ದರಿಂದ, ಇಂತಿಷ್ಟೇ ವಿಧ ಎಂದು ನಿಶ್ಚಿತವಾಗಿ ಹೇಳಲಾಗುವುದಿಲ್ಲ. ಇಷ್ಟಾಗಿಯೂ, ಯಾರಾದರೂ ಇದು ವಾಕ್ಯದ ಅನೇಕ ಅರ್ಥಗಳಿಂದ ಕೂಡಿದ ವಕ್ರತೆ ಹೇಗಾಗುತ್ತದೆಂದು ತಿಳಿಯುವುದಿಲ್ಲ ಎಂದು ಸಂದೇಹ ವ್ಯಕ್ತಪಡಿಸಿದರೆ, ಇಡೀ ಅಲಂಕಾರ ಸಮುದಾಯವೇ ಅದರಲ್ಲಿ ಅಡಗಿದೆ ಎಂದು ಹೇಳಬೇಕಾಗುತ್ತದೆ. ಕಾವ್ಯ ಸಂಪ್ರದಾಯದಲ್ಲಿ ಈಗಾಗಲೇ ಪ್ರಸಿದ್ಧವಾಗಿರುವ ಉಪಮಾದಿ ಅಲಂಕಾರಗಳೆಲ್ಲವೂ ಅದರಲ್ಲಿ ಸೇರುತ್ತವೆ. ಅಥವಾ ಅವು ಭಿನ್ನವಾಗಿ ನಿಲ್ಲುವುದಿಲ್ಲ. ಅವೆಲ್ಲವೂ ಉಪಮೆಯ ಪರ್ಯಾಯ ರೂಪಗಳ ರೀತಿಯಲ್ಲಿ ಬೇರೆ ಬೇರೆ ಹೆಸರುಗಳನ್ನು ಪಡೆದುಕೊಳ್ಳುತ್ತವೆ. ಮುಂದಿನ ಅಧ್ಯಾಯದಲ್ಲಿ ವ್ಯಾಖ್ಯಾನ (ಲಕ್ಷಣ) ಮತ್ತು ಉದಾಹರಣೆಗಳೊಂದಿಗೆ ಅಲಂಕಾರ ಸಮುದಾಯವನ್ನು ವಿವರಿಸಲಾಗುವುದು.

ವಾಕ್ಯ ವಕ್ರತೆಯನ್ನು ವ್ಯಾಖ್ಯಾನಿಸಿದ್ದಾಯಿತು. ವಾಕ್ಯದ ಸಮುದಾಯ ರೂಪ 'ಪ್ರಕರಣ' ಹಾಗೂ ಅಂಥ ಪ್ರಕರಣಗಳ ಸಮೂಹ ರೂಪವಾದ ಪ್ರಬಂಧದ ವಕ್ರತೆಯನ್ನು ವ್ಯಾಖ್ಯಾನಿಸಲಾಗುವುದು.

ವಕ್ರಭಾವಃ ಪ್ರಕರಣೇ ಪ್ರಬಂಧೇವಾಸ್ತಿ ಯಾದೃಶಃ
ಉಚ್ಯತೇ ಸಹಜಾಹಾರ್ಯಸೌಕುಮಾರ್ಯಮನೋಹರಃ (21)

ಪ್ರಬಂಧ ಅಥವಾ ಪ್ರಕರಣ ವಕ್ರತೆಯನ್ನು ಸಹಜ (ಸ್ವಾಭಾವಿಕ) ; ಹಾಗೂ ಉತ್ಪಾದಿತ (ಆಹಾರ್ಯ) ಎಂಬ ಎರಡು ನೆಲೆಗಳಲ್ಲಿ (ಶೀರ್ಷಿಕೆಗಳಡಿ) ವಿಚಾರ ಮಾಡಬಹುದು. ಈ ಎರಡೂ ರೀತಿಯ ವಕ್ರತೆಗಳು ಮನೋಹರತೆಯನ್ನುಂಟು ಮಾಡುತ್ತವೆ. (21).

ಕೃತಿಯ ಯಾವುದೇ ಪ್ರಕರಣದಲ್ಲಿ ಕಂಡು ಬರುವ ವಕ್ರತೆಯನ್ನು ಹಾಗೂ ಇಡೀ ಪ್ರಬಂಧದ ವಕ್ರತೆಯನ್ನು ಕುರಿತ ಚರ್ಚೆಯನ್ನು ಇದೀಗ ತೆಗೆದುಕೊಳ್ಳಬಹುದು. ಅದು ಸ್ವಾಭಾವಿಕ ಮತ್ತು ಕೃತಕ ಅಥವಾ ಉತ್ಪಾದಿತ ಎಂಬ ಎರಡು ರೀತಿಯ ವಕ್ರತೆಯಿಂದ ಆಹ್ಲಾದವನ್ನುಂಟುಮಾಡುತ್ತದೆ. ವಕ್ರಭಾವ ಅರ್ಥಾತ್ ವಿನ್ಯಾಸದ ವೈಚಿತ್ರ್ಯ ಎಂಬುದು ಪ್ರಬಂಧದ ಒಂದು ಭಾಗವಾದ

ಪ್ರಕರಣದಲ್ಲಿ ಇರುವಂಥದಾಗಿರಬಹುದು, ಅಥವಾ ಪ್ರಬಂಧ ಅರ್ಥಾತ್ ನಾಟಕ ಇತ್ಯಾದಿಗಳಲ್ಲಿ ಕಂಡು ಬರುವಂಥದಾಗಿರಬಹುದು. ಸಹಜ ಅರ್ಥಾತ್ ಸ್ವಾಭಾವಿಕ ಹಾಗೂ ವ್ಯುತ್ಪತ್ತಿಯ ಮೂಲಕ ಮೂಡಿದ್ದು ಮನೋಹರವಾಗಿರುವಂಥದು.

ಪ್ರಕರಣ ವಕ್ರತೆಗೆ ಉದಾಹರಣೆಯಾಗಿ-ವಾಲ್ಮೀಕಿ ರಾಮಾಯಣದಲ್ಲಿ ಮಾಯಾ ಮೃಗದ ರೂಪದಲ್ಲಿದ್ದ (ಮಾಣಿಕ್ಯ ಮೃಗ) ಮಾರೀಚನನ್ನು ಹಿಡಿತರಲು ಹಿಂಬಾಲಿಸಿ ಹೋದ ರಾಮಚಂದ್ರನ ಕರುಣಾ ಕ್ರಂದನದ ದನಿಯನ್ನು ಕೇಳಿ ಅತ್ಯಂತ ಕಾತರಗೊಂಡ (ಅಧೀರಳಾದ) ಜನಕ ರಾಜ ಪುತ್ರಿ ಸೀತೆ, ತನ್ನ ಪ್ರಾಣ ರಕ್ಷಣೆಯ ಗೊಡವೆಯಿಲ್ಲದೆ, ರಾಮನ ಪ್ರಾಣರಕ್ಷಣೆಯ ಸಲುವಾಗಿ ಲಕ್ಷ್ಮಣನನ್ನು ಭರ್ತ್ಸನೆ ಮಾಡಿ ಕಳಿಸಿಕೊಟ್ಟಿದ್ದಳು.

ನಿಜಕ್ಕೂ ಇದು ಅತ್ಯಂತ ಅನುಚಿತವಾದ್ದು. ಕಾರಣ, ತನ್ನ ಅನುಚರನೇ ತನ್ನ ಬಳಿಯಿದ್ದಾಗ, ಯಜಮಾನನು ತಾನೇ ಆ ರೀತಿಯಲ್ಲಿ ಮಾಯಾ ಮೃಗದ ಬೆನ್ನಟ್ಟಿ ಹೋಗುವ ಸಂಭವವಿರುವುದಿಲ್ಲ. ಆದ್ದರಿಂದ ರಾಮಾಯಣದಲ್ಲಿ ಕಲ್ಪಿಸಿರುವ ಈ ಪ್ರಸಂಗ ಸರ್ವಥಾ ಅನುಚಿತವಾದ್ದು. ಅಲ್ಲದೆ ರಾಮಾಯಣದಲ್ಲಿ ರಾಮನನ್ನು ಸರ್ವಾತಿಶಯ ಚಾರಿತ್ರದ (ಅತ್ಯಂತ ಶೌರ್ಯದ) ವ್ಯಕ್ತಿಯನ್ನಾಗಿ ವರ್ಣಿಸಿರುವಾಗ, ಅಂಥವನ ತಮ್ಮನಿಂದ ಅವನ ಪ್ರಾಣರಕ್ಷಣೆ ಸಾಧ್ಯವೆಂದು ಹೇಳುವುದು ಇನ್ನೂ ಅನುಚಿತ. ಇದೆಲ್ಲವನ್ನೂ ಪರ್ಯಾಲೋಚಿಸಿ, ಉದಾತ್ತ ರಾಘವ ನಾಟಕದ ಕರ್ತೃ ಈ ಪ್ರಕರಣವನ್ನು ಅತ್ಯಂತ ಕೌಶಲದಿಂದ, (ವಿದಗ್ಧತೆಯಿಂದ-) ಪರಿವರ್ತನೆ ಮಾಡಿದ್ದಾನೆ. ಮಾಯಾ ಮೃಗವನ್ನು ಬೆನ್ನಟ್ಟಿ ಹೊಡೆಯಲು ಹೋದವನು ಲಕ್ಷ್ಮಣ, ಹಾಗೂ ಅವನ ಕರುಣಾ ಕ್ರಂದನ ದನಿ ಕೇಳಿ, ಕಾತರಗೊಂಡ ಸೀತೆ ಅವನ ಪ್ರಾಣ ರಕ್ಷಣೆಗಾಗಿ ರಾಮನನ್ನು ಕಳಿಸಿದ್ದಳು-ಎಂಬುದೇ ಆ ಪರಿವರ್ತನೆ. ಹೀಗೆ ರಾಮಾಯಣದಲ್ಲಿ ಈ ಪ್ರಕರಣವನ್ನು ಹೀಗೆ ಪರಿವರ್ತನೆ ಮಾಡಿಕೊಂಡು ಪುನಃ ಸಂಯೋಜಿಸಿ ಸಹೃದಯರಿಗೆ ಹೃದಯಾಹ್ಲಾದ ಕರವಾಗುವಂತೆ ಮಾಡಿರುವುದೇ ಇಲ್ಲಿಯ ವಕ್ರತೆ.

ಅದೇ ರೀತಿ ಭಾರವಿಯ 'ಕಿರಾತಾರ್ಜುನೀಯ'ದಲ್ಲಿ ಕಿರಾತನ (ಶಂಕರನಿಂದ ಕಳಿಸಲ್ಪಟ್ಟವನು) ಮಾತುಗಳಲ್ಲಿ ವಾಚ್ಯವಾಗಿ ಕೇವಲ ತನ್ನ ಬಾಣಗಳನ್ನು ಮಾತ್ರ ಕೊಡಬೇಕೆಂದು ಕೇಳುವುದಷ್ಟನ್ನೇ ಯೋಜಿಸಿದ್ದಾನೆ. ವಾಸ್ತವವಾಗಿ ಅವರಿಬ್ಬರ (ಅರ್ಜುನ ಮತ್ತು ಕಿರಾತರ) ಮಾತುಕತೆಗಳ ಮಥಿತಾರ್ಥವನ್ನು ಸರಿಯಾಗಿಯೇ ಗ್ರಹಿಸಿದ ಅರ್ಜುನನಿಗೆ ಕಿರಾತನ ಮಾತಿನ ಅರ್ಥ ಯುದ್ಧಕ್ಕಾಗಿ ಆಹ್ವಾನವೆಂದು ತಿಳಿಯುತ್ತದೆ.

ಅಲ್ಲಿ ಹೀಗೆ ಹೇಳಲಾಗಿದೆ

> ಪ್ರಯುಜ್ಯ ಸಾಮಾಚರಿತಂ ವಿಲೋಭನಂ ಭಯಂ ವಿಭೇದಾಯ ಧಿಯಃ ಪ್ರದರ್ಶಿತಮ್
> ತಥಾಭಿಯುಕ್ತಂ ಚ ಶಿಲೀಮುಖಾರ್ಥಿನಾ ಯಥೇತರ ನ್ಯಾಯ್ಯಮಿವಾವ ಭಾಸತೇ (೭೧)

ಸಾಮವನು ಮೊದಲಲಿ ಮತ್ತೆ ಪ್ರಲೋಭನೆಯ
ಬಳಿಕ ಭಯವನು ಬಿತ್ತಿ ಎನ್ನ ಮನ
ಭೇದಿಸಲು ಹೊರಟಿರುವೆ ನೀನು

ಈಶರವ ನನದೆಂದು ಸಾಧಿಸುವ ನಿನ್ನ ಪರಸೆಯಿದು
ಅನ್ಯಾಯವೆ ನ್ಯಾಯದ ತೆರ ಕಾಂಬಂತೆ ಇಹುದು! (೭೧)

ಇನ್ನು ಪ್ರಬಂಧ ವಕ್ರತೆಯನ್ನು ಕುರಿತು ವಿಚಾರಿಸಬಹುದು.

ಯಾರೇ ಮಹಾಕವಿಗಳು ರಾಮಾಯಣವನ್ನು ಆಧರಿಸಿ ರಚಿಸಿದ ನಾಟಕವೇ ಮೊದಲಾದ ಪ್ರಬಂಧ ಕೃತಿಗಳಲ್ಲಿ ಪ್ರಾರಂಭಕ್ಕೇ ಐದು ವಿಧವಾದ ವಕ್ರತೆಗಳಿಂದ ಕೂಡಿದ (ವರ್ಣವಿನ್ಯಾಸ ವಕ್ರತೆ, ಪದ ಪೂರ್ವಾರ್ಧ ವಕ್ರತೆ, ಪ್ರತ್ಯಯಾಶ್ರಯ ವಕ್ರತೆ, ವಾಕ್ಯ ವಕ್ರತೆ, ಮತ್ತು ಪ್ರಕರಣ ವಕ್ರತೆ) ಸಾಮಗ್ರಿ ಸಮುದಾಯದಿಂದ ಸಹೃದಯರ ಹೃದಯಕ್ಕೆ ಆನಂದವುಂಟಾಗುವಂತೆ ಮಹಾಪುರುಷನ ಚಾರಿತ್ರವನ್ನು ಆಕರ್ಷಕವಾಗಿ ಬಣ್ಣಿಸಿರುವುದು ಕಂಡು ಬರುತ್ತದೆ. ಆದರೆ, ಅಂತಿಮವಾಗಿ ಅದು ವಿಧಿ, ನಿಷೇಧಾತ್ಮಕ ರೂಪವಾದ ಧರ್ಮೋಪದೇಶವೇ ಆಗಿರುತ್ತದೆ. ಉದಾ. ರಾಮನ ಹಾಗೆ ಇರಬೇಕೇ ಹೊರತು ರಾವಣನ ಹಾಗೆ ಅಲ್ಲ.

ಅದೇ ರೀತಿ ತಾಪಸ ವತ್ಸರಾಜ ನಾಟಕದಲ್ಲಿ, ಕುಸುಮ ಸದೃಶ ಕೋಮಲ ಹೃದಯದ ಹಾಗೂ ಸರಸ ವಿನೋದಗಳಲ್ಲಿ ಸಂತೋಷವನ್ನು ಕಂಡು ಕೊಳ್ಳುವಷ್ಟರಲ್ಲೇ ಆಸಕ್ತಿಯುಳ್ಳ ನಾಯಕನ (ವತ್ಸರಾಜ-ಉದಯನ) ಚರಿತ್ರ ವರ್ಣನೆಯನ್ನು ವಸ್ತುವಾಗಿರಿಸಿಕೊಳ್ಳಲಾಗಿದೆ. ಆದರೆ ವಾಸ್ತವವಾಗಿ, ವಿಪತ್ತಿನ ಸಾಗರದ ಆಳದಲ್ಲಿ ಮುಳುಗಿ ಹೋಗಿರುವ ತಮ್ಮ ಮಹಾರಾಜನನ್ನು, ಆ ರೀತಿಯ ವ್ಯವಹಾರಗಳಲ್ಲಿ ನಿಪುಣರಾದ ಅಮಾತ್ಯರು ಒಂದಲ್ಲ ಒಂದು ಉಪಾಯದಿಂದ ಪಾರುಗಾಣಿಸಬೇಕೆಂಬುದೇ ಇಲ್ಲಿಯ ಉಪದೇಶ. ಈ ಅಂಶವನ್ನು, ಲಕ್ಷಣದ ವ್ಯಾಖ್ಯಾನ ಮಾಡುವ ಸಮಯದಲ್ಲಿ ಸ್ಪಷ್ಟ ಪಡಿಸಲಾಗುವುದು.

ಈ ರೀತಿ ಕವಿ ವ್ಯಾಪಾರ ವಕ್ರತೆಯ ಆರು ಬಗೆಯ ವಕ್ರತೆಗಳನ್ನು, ಕೇವಲ ಅವುಗಳ ಹೆಸರುಗಳನ್ನಷ್ಟೇ ಉಲ್ಲೇಖಿಸಿ, ವ್ಯಾಖ್ಯಾನಿಸಲಾಯಿತು ಅವುಗಳ ಲಕ್ಷಣ ನಿರೂಪಣೆಯ ಸಂದರ್ಭದಲ್ಲಿ ವಿಸ್ತಾರವಾಗಿ ಅವುಗಳನ್ನು ವ್ಯಾಖ್ಯಾನಿಸಲಾಗುವುದು.

ಹೀಗೆ "ಶಬ್ದಾರ್ಥೌಸಹಿತೌ" ಇತ್ಯಾದಿ ಕಾವ್ಯಲಕ್ಷಣಗಳಲ್ಲಿ ಪ್ರಯೋಗವಾಗಿರುವ "ಶಬ್ದಾರ್ಥೌ" "ಸಹಿತೌ" ಹಾಗೂ ವಕ್ರ ಕವಿ ವ್ಯಾಪಾರ' ಶಬ್ದಗಳ ವ್ಯಾಖ್ಯಾನ ಮಾಡಿದ ನಂತರ ಅದೇ ಕ್ರಮದಲ್ಲಿ ಮುಂದಿನದಾದ 'ಬಂಧ' ಪದವನ್ನು ವ್ಯಾಖ್ಯಾನಿಸಲಾಗುವುದು.

ವಾಚ್ಯವಾಚಕ ಸೌಭಾಗ್ಯ ಲಾವಣ್ಯ ಪರಿಪೋಷಕಃ
ವ್ಯಾಪಾರ ಶಾಲೀ ವಾಕ್ಯಸ್ಯ ವಿನ್ಯಾಸೋ ಬಂಧ ಉಚ್ಯತೇ (22)

ಅರ್ಥ ಮತ್ತು ಶಬ್ದಗಳ ಸೌಭಾಗ್ಯ ಮತ್ತು ಲಾವಣ್ಯ ಗುಣಗಳ ಪರಿಪೋಷಣೆ ಮಾಡುವ (ಕವಿ) ವ್ಯಾಪಾರದಿಂದ ಶೋಭಿತವಾಗುವ ವಾಕ್ಯದ ವಿಶಿಷ್ಟ ಸಂಘಟನೆಯನ್ನೇ ಬಂಧ ಎಂದು ಕರೆಯಲಾಗುತ್ತದೆ. (22)

ವಿನ್ಯಾಸ ಅರ್ಥಾತ್ ವಿಶಿಷ್ಟ ರೀತಿಯ ವರ್ಣಗಳ ಮತ್ತು ಪದಗಳ ನ್ಯಾಸ ರೂಪವಾದ ಸಂಘಟನೆ ಏನಿದೆ ಅದೇ ಕಾವ್ಯ ಕರ್ಮ ರೂಪವಾದ ವ್ಯಾಪಾರದಿಂದ ಶೋಭಿತನಾಗುವ 'ಬಂಧ'

ಎನಿಸುತ್ತದೆ. ವ್ಯಾಪಾರದ ಅರ್ಥ ಇಲ್ಲಿ ಕಾವ್ಯ ಕ್ರಿಯೆ. ಕಾವ್ಯ ಕ್ರಿಯೆಯಿಂದ ಯಾವುದು ಪ್ರಶಂಸಿಸಲ್ಪಡುವುದೋ ಅದು ವ್ಯಾಪಾರ ಶಾಲಿ. ಯಾವುದರ ವಿನ್ಯಾಸ ಎಂದರೆ ವಾಕ್ಯ ಅರ್ಥಾತ್ ಶ್ಲೋ ಕಾದಿಗಳ ವಿನ್ಯಾಸನೇ. ಯಾವ ರೀತಿಯ ವಿನ್ಯಾಸ? ವಾಚ್ಯ ಮತ್ತು ವಾಚಕಗಳ ಸೌಭಾಗ್ಯ ಮತ್ತು ಲಾವಣ್ಯಗಳನ್ನು ಪರಿಪುಷ್ಟಗೊಳಿಸುವಂಥ ವಿನ್ಯಾಸ. ಅಂದರೆ ಅರ್ಥ (ವಾಚ್ಯ) ಮತ್ತು ಶಬ್ದ (ವಾಚಕ) ಗಳ ಲಕ್ಷಣಗಳೆಂದು ಹೇಳಲಾಗುವ ಸೌಭಾಗ್ಯ ಮತ್ತು ಲಾವಣ್ಯಗಳೆಂಬ ಎರಡು ಗುಣಗಳನ್ನು ಪುಷ್ಟಿಗೊಳಿಸುವಂಥದ್ದು ಎಂದರ್ಥ. 'ಸೌಭಾಗ್ಯ' ಎಂಬುದು (ಚಲನಶೀಲ) ಪ್ರತಿಭೆಯ ಫಲಸ್ವರೂಪ (Inner charm) ವಾದ್ದು ಮತ್ತು ಹೃದಯಕ್ಕೆ ಸಂತೋಷವನ್ನುಂಟು ಮಾಡುವಂಥದು. ಲಾವಣ್ಯ (outer charm) ಎಂಬುದು ಸಂಘಟನೆಯ ಸೌಂದರ್ಯ. ಇವೆರಡನ್ನೂ ಪರಿಪುಷ್ಟಗೊಳಿಸುವಂಥದಕ್ಕೆ 'ಬಂಧ' ವೆಂದು ಹೆಸರು ಉದಾ:

ದತ್ವಾ ವಾಮಕರಂ ನಿತಂಬಫಲಕೇ ಲೀಲಾವಲನ್ಮಧ್ಯಯಾ
ಪ್ರೋತ್ತುಂಗಸ್ತನಮಂಸ ಚುಂಬಿಚಿಬುಕಂ ಕೃತ್ವಾ ತಯಾ ಮಾಂ ಪ್ರತಿ
ಪ್ರಾಂತ ಪ್ರೋತನ ವೇಂದ್ರ ನೀಲಮಣಿ ಮನ್ಮುಕ್ತಾವಲೀವಿಭ್ರಮಾಃ
ಸಾಸೂಯಂ ಪ್ರಹಿತಾಃ ಸ್ಮರ ಜ್ವರ ಮುಚೋ ದ್ವಿತ್ರಾಃ ಕಟಾಕ್ಷಚ್ಛಟಾಃ (೭೨)

(ಕಿರಾತಾರ್ಜುನೀಯ-14-7)

ವಿಲಾಸದೆ ಕಟಿಯ ತಿರುಗಿಸುತೆ
ಘನ ನಿತಂಬದ ಮೇಲೆ ತನ್ನಯ ವಾಮ ಹಸ್ತವನಿಟ್ಟು
ಉನ್ನತ ಕುಚಯುಗವನುಬ್ಬಿಸುತೆ
ಮುದ್ದಾದ ಗಲ್ಲವನು ಭುಜಕೆ ತಾಗಿಸುತೆ
ಅಂಚಿನಲಿ ಇಳಿಬಿಟ್ಟ ಇಂದ್ರನೀಲದ ಮಣಿಯ
ಮುತ್ತಿನ ಹಾರದೊಂದು ಛವಿಯ
ಕಡೆಗಣ್ಣನೋಟವನು
ಮದನಜ್ವರ ವನುಜ್ಜೀವಿಸುವಂಥದನು
ನನ್ನತ್ತ ಬೀರಿದಳೋಪಳಸೂಯೆಯಿಂದೆ. (೭೨)

ಇದರಲ್ಲಿ, ಸಹೃದಯರ ಹೃದಯಕ್ಕೆ ಆನಂದವನ್ನುಂಟು ಮಾಡುವ, ಸಮಗ್ರ ಕವಿ ಕೌಶಲದಿಂದ ಸಾಧಿತವಾಗುವ ಸೌಭಾಗ್ಯ ಗುಣ, ಹಾಗೂ ಕೇವಲ ಕೆಲವೇ ವರ್ಣಗಳ ವಿಶೇಷ ರಚನೆಯ ವೈಚಿತ್ರ್ಯದಿಂದ ಹೊರ ಹೊಮ್ಮಿದ, ಪದಗಳ ಸಂಯೋಜನೆಯಿಂದ ಪ್ರಾಪ್ತವಾಗುವ 'ಲಾವಣ್ಯ' ಗುಣವನ್ನು ಅತ್ಯಧಿಕವಾಗಿ ಪರಿಪುಷ್ಟ ಗೊಳಿಸಲಾಗಿದೆ.

ಈ ರೀತಿ ಬಂಧದ ಸ್ವರೂಪವನ್ನು ತಿಳಿಸಿಕೊಟ್ಟು ಈಗ ಕಾವ್ಯವು ಸಹೃದಯರಿಗೆ ಉಂಟುಮಾಡುವ ಆಹ್ಲಾದದ ಸ್ವರೂಪವನ್ನು ವಿವರಿಸಲಾಗುವುದು.

ವಾಚ್ಯ ವಾಚಕ ವಕ್ರೋಕ್ತಿ ತ್ರಿತಯಾತಿಶಯೋತ್ತರಮ್
ತದ್ವಿದಾಹ್ಲಾದ ಕಾರಿತ್ವಂ ಕಿಮಪ್ಯಾಮೋದ ಸುಂದರಮ್(23)

ಸಹೃದಯರಿಗೆ ಆಹ್ಲಾದವನ್ನುಂಟು ಮಾಡುವ ಗುಣವೆಂಬುದು ಇದುವರೆಗೆ ವಿವರಿಸಲಾದ ಅರ್ಥ (ವಾಚ್ಯ), ಶಬ್ದ (ವಾಚಕ) ಮತ್ತು ವಕ್ರೋಕ್ತಿ ಇವು ಮೂರಕ್ಕಿಂತಲೂ ಭಿನ್ನವಾದ ಅತಿಶಯತೆಯಿಂದ ಕೂಡಿದ್ದು ಮತ್ತು ಅದು ಯಾವುದೋ ಒಂದು ಅನುಭವೈಕ ಗಮ್ಯವಾದ, ವಿಶಿಷ್ಟ ಸೌಂದರ್ಯದಿಂದ ಕೂಡಿದ್ದು, ಸಾರ್ಥಕವಾದ ಆಮೋದವನ್ನುಂಟು ಮಾಡುವಂಥದು. (23)

ಕಾವ್ಯಕ್ಕೆ ಸಹೃದಯರಿಗೆ ಆಹ್ಲಾದವನ್ನುಂಟು ಮಾಡುವ ಶಕ್ತಿಯಿದೆ. ಆ ಆಹ್ಲಾದವೆನ್ನುವುದು ವಾಚ್ಯ, (ಅರ್ಥ-ವಸ್ತು) ವಾಚಕ (ಶಬ್ದ-ಭಾಷೆ)ಮತ್ತು ವಕ್ರೋಕ್ತಿ (ಅಲಂಕರಣ) ಇವು ಮೂರರ ಅತಿಶಯಕ್ಕಿಂತ ಭಿನ್ನವಾದ್ದು.

(ಅಂದರೆ ಆಹ್ಲಾದದ ಸ್ವರೂಪ ಇವು ಮೂರಕ್ಕಿಂತಲೂ ಲೋಕೋತ್ತರವೂ ಅತಿಶಯವೂ ಆದದ್ದು.) ಇವು ಮೂರೂ ನಿರ್ವಿವಾದವಾಗಿ ಅತಿಶಯವಾದವೇ.

ಆದರೆ ಕಾವ್ಯದಿಂದ ಸಹೃದಯರಿಗೆ ಪ್ರಾಪ್ತವಾಗುವ ಆನಂದದ ಸ್ವರೂಪ ಇವು ಮೂರಕ್ಕಿಂತಲೂ ಅತಿಶಯವೂ ಲೋಕೋತ್ತರವೂ ಆದದ್ದು. ವಿಶಿಷ್ಟವಾದ ನಿರರ್ಥಕವಲ್ಲದ ರಮ್ಯತೆಯನ್ನು ಹೊಂದಿದೆ. ವಿಶಿಷ್ಟವಾದ್ದು -ಯಾವ ಅರ್ಥದಲ್ಲಿ ಎಂದರೆ ಸಹೃದಯರಿಗೆ ಮಾತ್ರ ಹೃದಯ ಸಂವೇದ್ಯವಾಗುವಂಥದು. ಸುಕುಮಾರ ವಸ್ತುವಿನ ಧರ್ಮವಾದ 'ರಂಜಕತೆ'ಯ ಹಾಗೆ ಸಹೃದಯರ ಹೃದಯ ಸಂವೇದನೆಗೆ ನಿಲುಕುವಂಥದು.

ಉದಾ:

ಹಂಸಾನಾಂ ನಿನದೇಷು ಯ್ಯೆಃ ಕವಲಿತೈರಾಸಜ್ಯತೇ ಕೂಜತಾ–
ಮನ್ಯಃ ಕೋಽಪಿ ಕಷಾಯ ಕಂಠಲುಠನಾದಾಘರ್ಘರೋವಿಭ್ರಮಃ
ತೇ ಸಂಪ್ರತ್ಯಕಠೋರ ವಾರಣ ವಧೂದಂತಾಂಕುರಸ್ಪರ್ಧಿನೋ
ನಿರ್ಯಾತಾಃ ಕಮಲಾಕರೇಷು ಬಿಸಿನೀಕಂದಾಗ್ರಿಮ ಗ್ರಂಥಯಃ (೭೩)

(ಧ್ವನ್ಯಾಲೋಕ ಪುಟ 254)

ಕಮಲದ ಬೇರಿನ ಗ್ರಂಥಿಗಳನುಂಡ
ಹಂಸ ಪಕ್ಷಿಗಳ ಮಧುರ ಕಂಠದೊಳು
ಮೂಡುವುದೊಂದಪೂರ್ವ ಗರ್ಗರದ ವಿಭ್ರಮವು.
ಕರಿಣಿಗಳ ಕೋಮಲ ದಂತಾಂಕುರಗಳೊಡನೆ
ಹುರುಡಿಸುವ ಇಂಥ ತಾವರೆಯ
ಹೊಸ ಚಿಗುರುಗಳು ಹೊಮ್ಮಿಹವು ಸರಸಿಯಲಿ ಇಂದು (೭೩)

ಇಲ್ಲಿ ವಾಚ್ಯ, ವಾಚಕ ಮತ್ತು ವಕ್ರೋಕ್ತಿ ಈ ಮೂರೂ ಇದ್ದರೂ, ಈ ಮೂರರಲ್ಲಿ ಯಾವುದೊಂದನ್ನೇ ಆಗಲಿ ಕವಿಯು ಪ್ರಾಧಾನ್ಯ ವಹಿಸಿ ರಚಿಸಿದ್ದಾನೆಂದು ಹೇಳಲು ಸಾಧ್ಯವಿಲ್ಲ. ಇಷ್ಟಾದರೂ ಕವಿಯು ಪ್ರತಿಭಾ ವೈಚಿತ್ರ್ಯವಶನಾಗಿ ಕಾವ್ಯ ರಸಿಕರಿಗೆ ಆಹ್ಲಾದ ವುಂಟಾಗುವಂತೆ ಮಾಡಿದ್ದಾನೆ.

ಇದುವರೆಗೆ ನಾನು ಉದಾಹರಿಸಿದ ಎಲ್ಲ ಉದಾಹರಣೆಗಳಲ್ಲೂ ಉತ್ತಮ ಕಾವ್ಯವೆನಿಸಿಕೊಳ್ಳಲು ಬೇಕಾದ ಎಲ್ಲ ಲಕ್ಷಣಗಳನ್ನು ತೋರಿಸಲು ಸಾಧ್ಯವಾಗಬಹುದಾದರೂ, ನಮ್ಮ ಪ್ರತಿಕ್ರಿಯೆಗಳು ಕಾವ್ಯದ ಸರ್ವೋತ್ಕೃಷ್ಟ ಸೌಂದರ್ಯವನ್ನು ಗಣನೆಗೆ ತಂದುಕೊಂಡು ಮಾಡಿದವು. ಸಹೃದಯರು ಗ್ರಂಥದ ಉದ್ದಕ್ಕೂ ಇದನ್ನು ನೆನೆಯಬೇಕು.

[ಹೀಗೆ ಕಾವ್ಯದ ಸಾಮಾನ್ಯ ಲಕ್ಷಣವನ್ನು ವಿವರಿಸಿದ್ದಾದ ಮೇಲೆ, ಕಾವ್ಯದ ವಿಶೇಷ ಲಕ್ಷಣವನ್ನು ಹೇಳುವ ಮುಖಾಂತರ ಮೂರು ಮಾರ್ಗಭೇದ ನಿಬಂಧನೆಗಳ ವಿಷಯವನ್ನು ಹೇಳುತ್ತಾನೆ].

ಸಂತಿ ತತ್ರ ತ್ರಯೋಮಾರ್ಗಾಃ ಕವಿಪ್ರಸ್ಥಾನ ಹೇತವಃ
ಸುಕುಮಾರೋ ವಿಚಿತ್ರಶ್ಚ ಮಧ್ಯಮಶ್ಚೋಭಯಾತ್ಮಕಃ (24)

ಕಾವ್ಯದಲ್ಲಿ ಕವಿ ಪ್ರಸ್ಥಾನಕ್ಕೆ ಕಾರಣಗಳಾದ ಮೂರು ಮಾರ್ಗಗಳಿವೆ. ಅವುಗಳೆಂದರೆ ಸುಕುಮಾರ 2. ವಿಚಿತ್ರ ಮತ್ತು 3. ಉಭಯಾತ್ಮಕವಾದ ಮಧ್ಯಮ ಎಂದು. (24)

ಕಾವ್ಯದಲ್ಲಿ ಕವಿಗಳು ಅನುಸರಿಸುತ್ತಿರುವ ಮಾರ್ಗಗಳು, ಅಥವಾ ಪಂಥಗಳು (ಶೈಲಿ) ಮೂರು. ವೈದಿಕ ಸ್ವರಗಳ ಹಾಗೆ ಅವು ಎರಡಾಗಲಿ ನಾಲ್ಕಾಗಲಿ ಅಲ್ಲ; ಕಾವ್ಯ ತಜ್ಞರು ಮಾನ್ಯ ಮಾಡಿರುವ ಮಾರ್ಗಗಳು ಮೂರು ಮಾತ್ರ. ಅವು ಕವಿಗಳ ವಿವಿಧ ಪ್ರಸ್ಥಾನ ಪ್ರವರ್ತನೆಗೆ ಕಾರಣವಾದಂಥವು. ಕವಿಗಳಲ್ಲಿ ಸೃಜನ ಪ್ರಕ್ರಿಯೆಯ ಪ್ರವರ್ತನೆ ಮಾಡುವಂಥವು. ಅಷ್ಟೇ ಅಲ್ಲ, ಕಾವ್ಯನಿರ್ಮಿತಿಗೇ ಕಾರಣ ಭೂತವಾದಂಥವು. ಅವುಗಳೆಂದರೆ-ಸುಕುಮಾರಮಾರ್ಗ ವಿಚಿತ್ರ ಮಾರ್ಗ ಮತ್ತು ಮಧ್ಯಮ ಮಾರ್ಗ. ಮಧ್ಯಮ ಮಾರ್ಗವೆಂಬುದು ಉಭಯಾತ್ಮಕವಾದುದು. ಅರ್ಥಾತ್ ಈಗ ತಾನೆ ಹೇಳಿದ ಸುಕುಮಾರ ಮಾರ್ಗ ಮತ್ತು ವಿಚಿತ್ರ ಮಾರ್ಗ-ಈ ಎರಡರ ಗುಣಲಕ್ಷಣಗಳನ್ನು ಹೊಂದಿದೆ. ಎರಡೂ ಮಾರ್ಗಗಳ ಸೌಂದರ್ಯ ಛಾಯೆಯನ್ನು ಅದು ಒಳಗೊಳ್ಳುತ್ತದೆ ಅವುಗಳ ಲಕ್ಷಣಗಳನ್ನು ನಿರೂಪಿಸುವ ಸಂದರ್ಭದಲ್ಲಿ ಅವುಗಳ ಸ್ವರೂಪವನ್ನು ವಿವರಿಸಲಾಗುವುದು.

ಈ ವಿಷಯಕ್ಕೆ ಸಂಬಂಧಿಸಿದಂತೆ ಅನೇಕ ವಿಧವಾದ ವಿವಾದಾತ್ಮಕ ಅಭಿಪ್ರಾಯಗಳಿವೆ. ಕಾರಣ ಪ್ರಾಚೀನ ಆಲಂಕಾರಿಕರು (ವಾಮನ, ರಾಜಶೇಖರ ಮೊದಲಾದವರು) ವಿದರ್ಭ (ಗೌಡ) ಇತ್ಯಾದಿ ದೇಶ ವಿಶೇಷಗಳ ಆಧಾರದ ಮೇಲೆ, ವೈದರ್ಭಿ (ಗೌಡೀ, ಪಾಂಚಾಲಿ) ಯೇ ಮೊದಲಾದ ಮೂರು 'ರೀತಿ'ಗಳನ್ನು ಪುರಸ್ಕರಿಸಿದ್ದಾರೆ. ಗುಣದ (quality, ವೈಚಿತ್ರ್ಯ) ಆಧಾರದ ಮೇಲೆ ಅವರು ಅವುಗಳಲ್ಲಿ ಉತ್ತಮ ಅಧಮ ಮತ್ತು ಮಧ್ಯಮ ಎಂದು ಮೂರು ವಿಧಗಳನ್ನು ಸ್ವೀಕರಿಸಿದ್ದಾರೆ. ಇನ್ನು ಕೆಲವು ಆಲಂಕಾರಿಕರು (ದಂಡಿ ಮೊದಲಾದವರು) ವೈದರ್ಭಿ ಮತ್ತು ಗೌಡೀ ಎಂಬ ಎರಡೇ ಮಾರ್ಗಗಳನ್ನು ಹೆಸರಿಸಿದ್ದಾರೆ. ಈ ಎರಡೂ ದೃಷ್ಟಿ ಕೋನಗಳು (ವಾಮನ ರಾಜಶೇಖರ, ದಂಡಿ) ಯುಕ್ತಿಯುಕ್ತವಲ್ಲ. ಕಾರಣ, ದೇಶದ ಭೌಗೋಳಿಕ ಪ್ರದೇಶಗಳ ಆಧಾರದ ಮೇಲೆ ರೀತಿ ಭೇದಗಳನ್ನು ಮಾಡುತ್ತ ಹೋದರೆ, ಅವಕ್ಕೆ ಕೊನೆಯೇ ಇರುವುದಿಲ್ಲ;

ಭೌಗೋಳಿಕ ಪ್ರದೇಶಗಳು ಅಸಂಖ್ಯಾತವಾದ್ದರಿಂದ. ಅಲ್ಲದೆ, ಸೋದರ ಮಾವನ ಮಗಳೊಂದಿಗೆ ಮದುವೆ ಎಂದು ನಿರ್ದಿಷ್ಟವಾಗಿ ಹೇಳುವಂತೆ ವಿಶಿಷ್ಟ ರೀತಿಯ ಕಾವ್ಯ ರಚನೆಯು ಒಂದು ವಿಶಿಷ್ಟ ದೇಶ ಧರ್ಮಾನುಸಾರಿ ಎಂದು ಸ್ಥಾಪಿಸಲು ಸಾಧ್ಯವಿಲ್ಲ. ದೇಶ ಧರ್ಮವು ಹಿರಿಯರ ಆಚಾರ ಪರಂಪರೆಯನ್ನು ಮಾತ್ರ ಆಧರಿಸುತ್ತದೆಯಾಗಿ, ಅನುಷ್ಠಾನದ ಮಿತಿಗಳನ್ನು ಮೀರುವುದಿಲ್ಲ. ಆದರೆ ಯಾವುದೇ ಒಂದು ವಿಶಿಷ್ಟ ಬಗೆಯ ಕಾವ್ಯ ರಚನೆಯು ಕಾವ್ಯ ನಿರ್ಮಾಣಕ್ಕೆ ಕಾರಣವಾದ ಶಕ್ತಿಯೇ (ಸೃಜನ) ಮೊದಲಾದ ಸಾಕಲ್ಯಗಳನ್ನು ಅಪೇಕ್ಷಿಸುವುದರಿಂದ, ಮನಸ್ಸಿಗೆ ಬಂದರೆ ಯಾವಾಗ ಎಂದರೆ ಆಗ ಸಾಧ್ಯವಾಗುವುದಿಲ್ಲ.

ದಾಕ್ಷಿಣಾತ್ಯರ ಗೀತ ವಿಷಯಕವಾದ-ಸುಸ್ವರತೆಯಿಂದ ಕೂಡಿದ ಧ್ವನಿ ರಮಣೀಯತೆಯ ಹಾಗೆ ಕಾವ್ಯ ಸೃಷ್ಟಿಯು ಸ್ವಾಭಾವಿಕವಾದೊಂದು ಕಾಂತಿಯಿಂದ ಕೂಡಿರುತ್ತದೆ ಎಂದು ಕಂಠೋಕ್ತವಾಗಿ ಹೇಳಲು ಸಾಧ್ಯವಿಲ್ಲ. ಕಾರಣ, ಅದು ಅಷ್ಟು ಸ್ವಾಭಾವಿಕವಾಗಿದ್ದಿದ್ದರೆ. ಪ್ರತಿಯೊಬ್ಬರಿಗೂ ಆ ರೀತಿಯ ಕಾವ್ಯ ರಚನೆಯು ಸಾಧ್ಯವಾಗಬೇಕಿತ್ತು. ಶಕ್ತಿಯು ಸಹಜವಾಗಿಯೇ ಇರುವಂಥದೆಂದು ಗಣನೆಗೆ ತೆಗೆದುಕೊಂಡರೂ, ಪರಿಶ್ರಮ ಪೂರ್ವಕವಾಗಿ ಗಳಿಸಿಕೊಳ್ಳಬೇಕಾದ ವ್ಯುತ್ಪತ್ತಿಯೇ ಮೊದಲಾದ ಕಾವ್ಯ ಕಾರಣ ಸಂಪತ್ತಿಯು ಯಾವುದೇ ಒಂದು ವಿಶಿಷ್ಟ ಭೌಗೋಳಿಕ ಪ್ರದೇಶಕ್ಕೆ ಸೀಮಿತವಾದ್ದಲ್ಲ. ಅವೆರಡಕ್ಕೂ ಯಾವುದೇ ಅನಿವಾರ್ಯ ಸಂಬಂಧವಿಲ್ಲ. ಅದು (ವ್ಯುತ್ಪತ್ತಿ) ಯಾವುದೋ ಒಂದು ಪ್ರದೇಶದಲ್ಲಿ ಕೆಲವೊಂದು ವೇಳೆ ಕಂಡು ಬರದೆಯೂ ಇರಬಹುದು; ಆ ಪ್ರದೇಶದ ಹೊರಗೆ ಬೇರೆಲ್ಲೋ ಇರಲೂಬಹುದು. ಆದ್ದರಿಂದ ದೇಶಭೇದದ ಆಧಾರದ ಮೇಲೆ ರೀತಿಭೇದ ಮಾಡುವುದು ಸರಿಯಲ್ಲ.

ಅಲ್ಲದೆ ರೀತಿಗಳನ್ನು ಉತ್ತಮ ಮಧ್ಯಮ ಮತ್ತು ಅಧಮ ಎಂದು ಮೂರು ವಿಧವಾಗಿ ವಿಂಗಡಿಸುವುದೂ ಸರಿಯಲ್ಲ. ಕಾವ್ಯ ಲಕ್ಷಣಕಾರ (ಆಲಂಕಾರಿಕ) ರಿಂದ ನಾವು ನಿರೀಕ್ಷಿಸುವುದು ಸಹೃದಯರಿಗೆ ಆಹ್ಲಾದಕಾರಿಯಾಗುವ ರೀತಿಯಲ್ಲಿ ಕಾವ್ಯ ವ್ಯಾಖ್ಯಾನವನ್ನು. ಮಧ್ಯಮ ಮತ್ತು ಅಧಮ ಕಾವ್ಯ ರೀತಿಗಳು, ಸಹೃದಯರಿಗೆ ಆಹ್ಲಾದವನ್ನುಂಟು ಮಾಡುವ ವಿಷಯದಲ್ಲಿ ವೈದರ್ಭಿಗೆ ಸಮನಾದ ಸೌಂದರ್ಯವನ್ನು ಹೊಂದಿಲ್ಲದೆ ಇರುವ ಕಾರಣ, ಅವುಗಳ ಉಪದೇಶ, ಆಸ್ವಾದನೆ ವ್ಯರ್ಥ. (ಅವುಗಳನ್ನು ನಿವಾರಿಸುವ ಸಲುವಾಗಿಯೇ, ಮಧ್ಯಮ ಅಧಮ ರೀತಿಗಳನ್ನು ವಿವರಿಸಲಾಗಿದೆ ಎಂದು ಹೇಳುವ ವಾದವೂ ಯುಕ್ತಿ ಸಂಗತವಲ್ಲ. ಇವುಗಳ ಪ್ರವರ್ತಕರಿಗೇ ಈ ವಾದ ಸರಿಕಂಡಿಲ್ಲ. ಕಾವ್ಯ ರಚನೆಯೆಂಬುದು, ದರಿದ್ರನ ದಾನದ ಹಾಗೆ ಅಥವಾ ಅಗತಿಕ ಗತಿ ನ್ಯಾಯ (ಚಲಿಸಲು ತೀರಾ ಅಸಮರ್ಥನಾದವನು ಎಷ್ಟು ದೂರ ನಡೆದರೆ ಅಷ್ಟೇ ಸಾಕು) ದಂತೆ, ಹೇಗಾದರೂ ಸರಿ, ಇರುವಷ್ಟು ಸಾಮಗ್ರಿ ಮಾತ್ರದಿಂದಲೇ ನಡೆದು ಬಿಡುವಂಥದಲ್ಲ. (ಅರ್ಥಾತ್ ಕಾವ್ಯರಚನೆ ಉತ್ತಮವಾದ್ದೇ ಆಗಿರಬೇಕು. ಆದ್ದರಿಂದ ಉತ್ತಮ ಮಧ್ಯಮ ಮತ್ತು ಅಧಮ ಎಂದು ರೀತಿಗಳನ್ನು ವಿಭಜಿಸುವುದು ಸರಿಯಲ್ಲ). ಆಲಂಕಾರಿಕರು ಒಂದು ವೇಳೆ ಮೂರು ರೀತಿಗಳನ್ನು ಹೆಸರಿನಿಂದ ನಿರ್ವಚಿಸುವ ಸಲುವಾಗಿ ಹೀಗೆ ದೇಶವಿಶೇಷವನ್ನು

ಆಶ್ರಯಿಸಲಾಗಿದೆ ಎಂದು ವಾದಿಸಿದರೆ ಅದಕ್ಕೆ ನಮ್ಮ ಆಕ್ಷೇಪಣೆ ಇಲ್ಲ. ಎರಡು ವಿಧವಾದ ಮಾರ್ಗಗಳನ್ನು ಮುಂದಿಟ್ಟವರಿಗೂ (ದಂಡಿ ಇತ್ಯಾದಿ) ಇದೇ ದೋಷಗಳು ಅನ್ವಯಿಸುತ್ತವೆ. ಆದ್ದರಿಂದ ಹೀಗೆ ನೀರಸ ವಸ್ತುವಿನಿಂದ ರಸ ತೆಗೆವ ಈ ವ್ಯರ್ಥ ಚರ್ಚೆ ಇನ್ನು ಸಾಕು.

ಕವಿಗಳ ಸ್ವಭಾವಗಳಲ್ಲಿರುವ ಭೇದಗಳನ್ನು ಆಧಾರವಾಗಿಟ್ಟು ಕೊಂಡು ಕಾವ್ಯ ಮಾರ್ಗದ ಭೇದಗಳನ್ನು ಗುರುತಿಸುವುದು ಸಮಂಜಸವಾಗುತ್ತದೆ. ಸುಕುಮಾರ ಸ್ವಭಾವದ ಕವಿಯ ಸಹಜ ಪ್ರತಿಭೆಯೂ ಹೀಗೆಯೇ ಸುಕುಮಾರವೇ ಆಗಿರುತ್ತದೆ. ಕಾರಣ ಸೃಜನಶೀಲ ವ್ಯಕ್ತಿ ಸೃಜನ ಪ್ರತಿಭೆ ಎರಡೂ ಅಂತಿಮವಾಗಿ ಅಭಿನ್ನವಾಗಿರುವುದರಿಂದ. ಇಂಥ ಸುಕುಮಾರ ಸ್ವಭಾವದ ಕವಿಯನ್ನು ಸುಕುಮಾರ ಪ್ರತಿಭೆಯು ಅದಕ್ಕೆ ತಗುವಂಥ ಸುಕುಮಾರವೂ ರಮಣೀಯವೂ ಆದ ವ್ಯುತ್ಪತ್ತಿಯನ್ನು ಯೋಜಿಸಿಕೊಳ್ಳುತ್ತದೆ. ಸೃಜನಶೀಲ ಪ್ರತಿಭೆ ಮತ್ತು ವ್ಯುತ್ಪತ್ತಿಗಳೆರಡೂ ಸುಕುಮಾರ ಮಾರ್ಗದಲ್ಲೇ ಕವಿ ಅಭ್ಯಾಸದಲ್ಲಿ ತೊಡಗುವಂತೆ ಮಾಡುತ್ತವೆ. ಅದೇ ರೀತಿ ಸುಕುಮಾರ ಮಾರ್ಗಕ್ಕೆ ವಿರುದ್ಧವಾದ ವಿಚಿತ್ರ ಸ್ವಭಾವವನ್ನೂ, ನಾವು ಪ್ರಸ್ತಾಪಿಸಿರುವ "ಸಹೃದಯರಿಗೆ ಅಹ್ಲಾದ ಉಂಟು ಮಾಡುವುದೇ ಕಾವ್ಯ"-ಎಂಬ ಸೂತ್ರದ ಹಿನ್ನೆಲೆಯಲ್ಲಿ ರಮಣೀಯವೆಂದೇ ಪರಿಗಣಿಸ ಬೇಕಾಗುತ್ತದೆ. ಆ ಕವಿಯ ಸ್ವಭಾವಕ್ಕನುಗುಣವಾಗಿ ಒಂದು "ವಿಚಿತ್ರ ಪ್ರತಿಭೆಯೇ ಅವನಲ್ಲಿ ಅರಳುತ್ತದೆ. ಅಲ್ಲದೆ ಆ ವಿಚಿತ್ರ ಪ್ರತಿಭೆಯ (ಶಕ್ತಿ) ಮೂಲಕ, ವಿದಗ್ಧತೆಯಿಂದ ಕೂಡಿ ಬಂಧುರವಾದ ವ್ಯುತ್ಪತ್ತಿಯನ್ನು ಅಳವಡಿಸಿಕೊಳ್ಳುತ್ತದೆ. ಮತ್ತು 'ಆ ವಿಚಿತ್ರ' ಪ್ರತಿಭೆ ಮತ್ತು 'ವಿಚಿತ್ರ' ವ್ಯುತ್ಪತ್ತಿಗಳಿಂದಾಗಿ ಸಂಸ್ಕಾರಗೊಂಡ ಮನಸ್ಸಿನ ಕವಿ ವಿಚಿತ್ರ ಮಾರ್ಗದಲ್ಲೇ ಅಭ್ಯಾಸದಲ್ಲಿ ತೊಡಗುವಂತೆ ಮಾಡುತ್ತದೆ.

ಇನ್ನು ಕೆಲವು ಕವಿಗಳಲ್ಲಿ ಮೇಲೆ ಹೇಳಲಾದ ಸುಕುಮಾರ ಮತ್ತು ವಿಚಿತ್ರ ಸ್ವಭಾವಗಳ ಮಿಶ್ರಣವನ್ನು ಕಾಣುತ್ತೇವೆ. ಅವರಲ್ಲಿ ಈ ಎರಡರ ಮಿಶ್ರಣಕ್ಕನು ರೂಪವಾದ ಪ್ರತಿಭಾಶಕ್ತಿಯನ್ನು (ಸೃಜನ ಪ್ರತಿಭೆ) ಕಾಣುತ್ತೇವೆ. ಆ ಪ್ರತಿಭೆಯ ಕಾರಣವಾಗಿ ಉಭಯ ಸ್ವಭಾವಗಳ ಸುಂದರ ಅಂಶಗಳಿಂದ ಕೂಡಿದ ವ್ಯುತ್ಪತ್ತಿಯನ್ನೇ ಅಳವಡಿಸಿಕೊಳ್ಳ ತೊಡಗುತ್ತದೆ. ಅನಂತರ ಆ ಕವಿ ಸುಕುಮಾರ ಮತ್ತು ವಿಚಿತ್ರಗಳ ಸಂಮಿಶ್ರ ಪ್ರತಿಭೆ ಮತ್ತು ವ್ಯುತ್ಪತ್ತಿಗಳನ್ನು ಆಶ್ರಯಿಸಿ ಅಭ್ಯಾಸದಲ್ಲಿ ನಿರತನಾಗುತ್ತಾನೆ. ಮತ್ತು ಆ ವಿಚಿತ್ರ ಮಾರ್ಗ ನಮಗೆ ಆಪ್ಯಾಯ ಮಾನವಾಗುವುದು ಸುಕುಮಾರ ಮತ್ತು ವಿಚಿತ್ರಗಳ ಸಾಮರಸ್ಯದಿಂದಲೇ. ಕಾವ್ಯ ರಚನಾ ಕಲಾಪಕ್ಕೆ ಅತ್ಯಗತ್ಯವಿರುವ ಎಲ್ಲ ಅಂಶಗಳಲ್ಲಿ ಸಿದ್ಧಿ ಶೃಂಗವನ್ನೇ ತಲುಪುವ ರೀತಿಯಲ್ಲಿ ಅತ್ಯಂತ ರಮಣೀಯವಾದ ಕಾವ್ಯ ರಚಿಸುತ್ತಿರುವ ಕವಿಗಳಲ್ಲಿ ನಾವು ಕಾಣುವುದು ಈ ಸುಕುಮಾರ, ಮಧ್ಯಮ ಮತ್ತು ವಿಚಿತ್ರ ಪ್ರಕಾರದ ಕವಿಗಳನ್ನೇ. ಕವಿಗಳ ಪಾಲಿಗೆ ಹೆದ್ದಾರಿಗಳಂತಿರುವುದರಿಂದ ಈ ಮೂರು ಪ್ರಕಾರದ ಶೈಲಿಗಳನ್ನು ಮಾರ್ಗಗಳು ಎಂದು ಹೇಳಲಾಗಿದೆ.

ಕವಿ ಸ್ವಭಾವದ ಭೇದಗಳು ಅನಂತವಾಗಿರುವುದರಿಂದ, ಮಾರ್ಗಗಳೂ ಅನಂತವಾಗ ಬೇಕಾಗುತ್ತದಾದರೂ, ಪ್ರತಿಯೊಂದು ಅಂಶವನ್ನೂ ಎಣಿಸಿ ಕೊನೆ ಮುಟ್ಟಿಸುವುದು

ಅಸಾಧ್ಯವಾದ್ದರಿಂದ ಮೂರು ಮಾರ್ಗಗಳನ್ನು ಪ್ರಸ್ತಾಪಿಸಿರುವುದು ಅತ್ಯಂತ ಯುಕ್ತಿಯುಕ್ತವಾಗಿದೆ. ರಮಣೀಯ ಕಾವ್ಯವನ್ನು ಕುರಿತು ಪ್ರಸ್ತಾಪಿಸುತ್ತಿರುವ ಸಂದರ್ಭದಲ್ಲಿ, ಸ್ವಭಾವತಃ ಸುಕುಮಾರವಾದ ಕಾವ್ಯದ್ದು ಒಂದು ವರ್ಗವೆನಿಸುತ್ತದೆ. ಕಾರಣ ರಮಣೀಯವಲ್ಲದ್ದು ನಮ್ಮ ಪರಿಗಣನೆಯಲ್ಲಿ ಬರುವುದಿಲ್ಲ. ಮೊದಲ ವರ್ಗಕ್ಕೆ ಸೇರದಿದ್ದರೂ, ರಮಣೀಯವೂ ವಿಶಿಷ್ಟವೂ ಆದ ಕಾವ್ಯ 'ವಿಚಿತ್ರ' ಪ್ರಕಾರದ್ದೆನಿಸುತ್ತದೆ. ಈ ಎರಡೂ ಮಾರ್ಗಗಳು ರಮಣೀಯವಾದ್ದರಿಂದ ಇವೆರಡರ ಯುಕ್ತ ಸಂಯೋಜನೆಯಿಂದ ಉಂಟಾಗುವ ಮೂರನೆಯ ವರ್ಗವೂ ತನ್ನದೇ ಆದ ವಿಶಿಷ್ಟ ಸೌಂದರ್ಯದಿಂದ ಕೂಡಿರಲೇ ಬೇಕೆಂಬುದು ಯುಕ್ತಿ ಯುಕ್ತವೇ ಸರಿ. ಆದ್ದರಿಂದ ಈ ಮೂರರಲ್ಲಿ ಪ್ರತಿಯೊಂದೂ ಅಸ್ಖಲಿತವಾಗಿ ಸ್ಪಂದಿಸುವ ಗುಣವನ್ನು ಹೊಂದಿರುವುದರಿಂದ, ಸಹೃದಯರಿಗೆ ಆನಂದವನ್ನುಂಟು ಮಾಡುವ ಆತ್ಯಂತಿಕ ಉದ್ದೇಶದಲ್ಲಿ ಯಾವೊಂದು ನ್ಯೂನತೆಯೂ ಇರುವುದಿಲ್ಲ.

(ಟಿಪ್ಪಣಿ : ಆಚಾರ್ಯ ಕುಂತಕನು ಇದುವರೆಗೆ ದೇಶಭೇದದ ಆಧಾರದ ಮೇಲೆ ರೀತಿ ಭೇದವನ್ನು ಮಾಡುವುದನ್ನು ಖಂಡಿಸಿ, ಕವಿ ಸ್ವಭಾವದ ಆಧಾರದ ಮೇಲೆ ಮಾರ್ಗಭೇದವನ್ನು ಸ್ಥಾಪಿಸಿದ್ದಾನೆ. ಕವಿ ಸ್ವಭಾವಕ್ಕನುಗುಣವಾಗಿ ಸಹಜ ಪ್ರತಿಭೆ ಕವಿಯಲ್ಲಿ ಅರಳುತ್ತದೆ ಹಾಗೂ ಆ ಪ್ರತಿಭೆಯ ಮೂಲಕ ಅಂಥದೇ ವ್ಯುತ್ಪತ್ತಿಯನ್ನು ಗಳಿಸಿಕೊಳ್ಳುತ್ತಾನೆ. ಅಲ್ಲದೆ ಆ ಪ್ರತಿಭೆ ಮತ್ತು ವ್ಯುತ್ಪತ್ತಿಯ ಆಧಾರದ ಮೇಲೆ ಅಭ್ಯಾಸ ಮಾಡುತ್ತ ಕಾವ್ಯ ರಚಿಸುತ್ತಾನೆ. ಹೀಗೆ ಕವಿಯಲ್ಲಿ ಪ್ರತಿಭೆ ಸಹಜ ರೂಪದಲ್ಲಿರುತ್ತದೆ. ಆದರೆ ವ್ಯುತ್ಪತ್ತಿ ಮತ್ತು ಅಭ್ಯಾಸಗಳು ಪರಿಶ್ರಮದಿಂದ ಪ್ರಾಪ್ತವಾಗುತ್ತವೆ. ಕಾವ್ಯ ರಚನೆಗೆ ಪ್ರತಿಭೆಯೊಂದೇ ಕಾರಣವಲ್ಲ. ಅಭ್ಯಾಸ ಮತ್ತು ವ್ಯುತ್ಪತ್ತಿಗಳೂ ಕಾರಣ. ಆದ್ದರಿಂದ ಪೂರ್ವ ಪಕ್ಷದವರು ವ್ಯುತ್ಪತ್ತಿ ಮತ್ತು ಅಭ್ಯಾಸದ ಸಹಜತೆಯನ್ನು ಪ್ರಶ್ನಿಸುತ್ತಾರೆ)

ಈ ಹಂತದಲ್ಲಿ ಒಂದು ಆಕ್ಷೇಪವೇಳಬಹುದು. ಎರಡೂ ಪ್ರಕಾರದ ಪ್ರತಿಭೆಗಳಿಗೆ (ಸುಕುಮಾರ, ವಿಚಿತ್ರ) ಸಂಬಂಧಿಸಿದಂತೆ ಸ್ವಾಭಾವಿಕತೆಯನ್ನು ಒಪ್ಪಬಹುದು. (ಅವು ಹುಟ್ಟಿನಿಂದಲೇ ಬಂದವು). ಆದರೆ ಪರಿಶ್ರಮದಿಂದ ಗಳಿಸಬೇಕಾದ ಕವಿಯ ವ್ಯುತ್ಪತ್ತಿ ಮತ್ತು ಅಭ್ಯಾಸಗಳಿಗೆ ಇದು ಹೇಗೆ ಅನ್ವಯಿಸುತ್ತದೆ? (ಆದ್ದರಿಂದ ಸ್ವಭಾವ ಭೇದಕ್ಕನುಗುಣವಾಗಿ ಮಾರ್ಗಭೇದ ಕಲ್ಪಿಸುವುದು ಸರಿಯಲ್ಲ).

ಆದರೆ ಇದೊಂದು ದೋಷವಲ್ಲ.

ಕಾರಣ, ಕಾವ್ಯ ರಚನೆಯ ಮಾತನ್ನು ಒತ್ತಟ್ಟಿಗಿಟ್ಟರೂ, ಇತರೆ ಕ್ಷೇತ್ರಗಳಲ್ಲೂ ವ್ಯುತ್ಪತ್ತಿ ಮತ್ತು ಅಭ್ಯಾಸಗಳು ಪ್ರತಿಯೊಬ್ಬರಲ್ಲೂ ಅವರವರ ಜನ್ಮಜಾತವಾದ ವಾಸನಾದಿಗಳಿಂದ ನಿಯಂತ್ರಿತವಾದ ವಿಶಿಷ್ಟ ಸ್ವಭಾವ ಅಥವಾ ಮನೋಧರ್ಮಕ್ಕನುಗುಣವಾಗಿಯೇ ಪ್ರವೃತ್ತವಾಗುತ್ತವೆ (ಅಂದರೆ ಅವರವರ ಸ್ವಭಾವದಂತೆ ಅಭ್ಯಾಸ ಮತ್ತು ವ್ಯುತ್ಪತ್ತಿ). ವ್ಯುತ್ಪತ್ತಿ ಮತ್ತು ಅಭ್ಯಾಸಗಳೆರಡೂ ಜನ್ಮಜಾತವಾದ ಸ್ವಭಾವವನ್ನು ಅಭಿವ್ಯಂಜಿಸಿದಾಗಲೇ ಸಾರ್ಥಕ ವೆನಿಸುವುದು. ಜನ್ಮ ಜಾತ ಸ್ವಭಾವ ಹಾಗೂ ಅವೆರಡರ ಪರಸ್ಪರ ಸಂಬಂಧ (ವ್ಯುತ್ಪತ್ತಿ ಮತ್ತು

ಅಭ್ಯಾಸಗಳ) ಉಪಕಾರ್ಯ ಮತ್ತು ಉಪಕಾರಕ ರೂಪದಲ್ಲಿ ನೆಲೆಗೊಂಡಿರುವುದರಿಂದ, ಸ್ವಭಾವವು ಮೊದಲಿಗೆ ಪ್ರಾರಂಭಿಸುತ್ತದೆ ಹಾಗೂ ವ್ಯುತ್ಪತ್ತಿ ಮತ್ತು ಅಭ್ಯಾಸಗಳೆರಡೂ ಅದನ್ನು ಪೋಷಿಸುತ್ತವೆ. ಆ ಕಾರಣದಿಂದಾಗಿಯೇ ಜಡ ವಸ್ತುಗಳ ಸ್ವಭಾವವೂ; ಸಂವಾದಿ ಸ್ವಭಾವಗಳ ಸಾನ್ನಿಧ್ಯ ಮಹಿಮೆಯಿಂದ ಪೂರ್ಣ ಅಭಿವ್ಯಕ್ತಿಯನ್ನು ಪಡೆದುಕೊಳ್ಳುತ್ತದೆ. ಚಂದ್ರ ಕಾಂತದ ಮಣಿಗಳು ಚಂದ್ರಕಿರಣಗಳ ಸ್ಪರ್ಶದಿಂದ ದ್ರವಿಸುವ ಹಾಗೆ.

ಹೀಗೆ ಸುಕುಮಾರ, ವಿಚಿತ್ರ ಹಾಗೂ ಮಧ್ಯಮ ಮಾರ್ಗಗಳನ್ನು ಹೆಸರಿಸಿ, ಇದೀಗ ಕ್ರಮವಾಗಿ ಅವುಗಳ ಲಕ್ಷಣವನ್ನು ಹೇಳಲಾಗುವುದು.

ಅಮ್ಲಾನ ಪ್ರತಿಭೋದ್ಭಿನ್ನ ನವ ಶಬ್ದಾರ್ಥ ಬಂಧುರಃ
ಅಯತ್ನ ವಿಹಿತ ಸ್ವಲ್ಪ ಮನೋಹಾರಿ ವಿಭೂಷಣಃ(25)

ಕವಿಯ ಕಾಂತಿಗುಂದದ (ಅಮ್ಲಾನ) ಪ್ರತಿಭೆಯಿಂದ ಹೊರ ಹೊಮ್ಮುವ ನವೀನ ಶಬ್ದ ಮತ್ತು ಅರ್ಥಗಳಿಂದ ಬಂಧುರವಾದ ಹಾಗೂ ಸ್ವಲ್ಪವೇ ಆದರೂ ಅಪ್ರಯತ್ನ ಪೂರ್ವಕವಾಗಿಯೇ ಮೂಡಿ ಬಂದ ಮನೋಹರವಾದ ಅಲಂಕಾರಗಳಿಂದ ಕೂಡಿದ ಮಾರ್ಗ ಸುಕುಮಾರ ಮಾರ್ಗ.(25)

ಭಾವ ಸ್ವಭಾವ ಪ್ರಾಧಾನ್ಯನ್ಯಕ್ಕೃತಾಹಾರ್ಯ ಕೌಶಲಃ
ರಸಾದಿ ಪರಮಾರ್ಥಜ್ಞ ಮನಃ ಸಂವಾದ ಸುಂದರಃ(26)

ವ್ಯುತ್ಪತ್ತಿ ಜನ್ಯ ಕೌಶಲವನ್ನು ಮೀರುವರೀತಿಯಲ್ಲಿ ಪದಾರ್ಥಗಳ ಆಂತರಿಕ ಸ್ವಭಾವಕ್ಕೆ ಎಲ್ಲಿ ಪ್ರಾಧಾನ್ಯವ್ಹೋ, ರಸಾದಿಗಳ (ರಸ, ರೀತಿ ಸ್ಥಾಯೀಭಾವ ಇತ್ಯಾದಿ) ಪರಮಾರ್ಥವನ್ನು ಅನುಭವಕ್ಕೆ ತಂದು ಕೊಳ್ಳುವುದರಲ್ಲಿ ನಿಪುಣರಾಗಿರುವವರ ಮನಸ್ಸಿಗೆ ಎಲ್ಲಿರಮಣೀಯ ಅನುಭವ ಸಾಧ್ಯವೋ (26)

ಅವಿಭಾವಿತ ಸಂಸ್ಥಾನ ರಾಮಣೀಯಕ ರಂಜಕಃ
ವಿಧಿವೈದಗ್ಧ್ಯ ನಿಷ್ಪನ್ನ ನಿರ್ಮಾಣಾತಿಶಯೋಪಮಃ (27)

ಎಲ್ಲಿ ಅನುಭವೈಕ ವೇದ್ಯವಾದ ಸೌಂದರ್ಯದಿಂದ ಆನಂದ ಉಂಟಾಗುತ್ತದೋ, ಎಲ್ಲಿ ಸೌಂದರ್ಯ ಸಂಪತ್ತಿಯು ವಿಧಾತನ ಕೌಶಲ್ಯದಿಂದ ಉಂಟಾದ ಸೃಷ್ಟಿ ರಚನೆಯ ಸೌಂದರ್ಯವನ್ನು ಹೋಲುತ್ತದೋ ಅದು ಸುಕುಮಾರ ಮಾರ್ಗ-27.

ಯತ್ ಕಿಂಚ ನಾಪಿ. ವೈಚಿತ್ರ್ಯಂ ತತ್ಸರ್ವಂ ಪ್ರತಿಭೋದ್ಭವಮ್
ಸೌಕುಮಾರ್ಯ ಪರಿಸ್ಪಂದ ಸ್ಯಂದಿ ಯತ್ರ ವಿರಾಜತೇ(28)

ಎಲ್ಲಿ ವೈಚಿತ್ರ್ಯದ ಏನೆಲ್ಲ ಅಂಶಗಳಿವೆ ಅವೆಲ್ಲವೂ ಕವಿಪ್ರತಿಭೆಯಿಂದಲೇ ಹೊಮ್ಮಿವೆಯೋ, ಹಾಗೂ ಎಲ್ಲಿ ಸೌಕುಮಾರ್ಯದ ರಮಣೀಯತೆಯ ಪ್ರವಾಹವು ವಿರಾಜಿಸುತ್ತದೋ (28)

ಸುಕುಮಾರಾಭಿಧಃ ಸೋಯಂ ಯೇನ ಸತ್ಕವಯೋ ಗತಾಃ
ಮಾರ್ಗೇಣೋತ್ಫುಲ್ಲ ಕುಸುಮ ಕಾನನೇನೇವ ಷಟ್ಪದಾಃ (29)

ಸೊಗಸಾಗಿ ಅರಳಿದ ಕುಸುಮ ಕಾನನದ ಮಾರ್ಗವಾಗಿ ದುಂಬಿಗಳು ಸಂಚರಿಸುವಂತೆ ಸತ್ಕವಿಗಳು ಕ್ರಮಿಸಿದ ಈ ಮಾರ್ಗವು ಸುಕುಮಾರ ಮಾರ್ಗವೆಂದು ಹೆಸರಾಗಿದೆ (29)

ಮೇಲೆ ಹೇಳಲಾದ ಲಕ್ಷಣಗಳುಳ್ಳ, ಮಾರ್ಗವನ್ನು ಸುಕುಮಾರ ಮಾರ್ಗವೆಂದು ಹೇಳಲಾಗಿದೆ. ಕಾಳಿದಾಸನಂಥ ಶ್ರೇಷ್ಠಕವಿಗಳು ಕ್ರಮಿಸಿದ ಮಾರ್ಗ ಇದು. ಅರ್ಥಾತ್ ಅವರುಗಳು ಈ ಮಾರ್ಗವನ್ನು ಹಿಡಿದು ಅತ್ಯುನ್ನತ ಕೃತಿಗಳನ್ನು ರಚಿಸಿದರು. ಯಾವ ರೀತಿಯಲ್ಲಿ ಎಂದರೆ ಚೆನ್ನಾಗಿ ಅರಳಿದ ಕುಸುಮ ಕಾನನದ ಮಾರ್ಗದಲ್ಲಿ ದುಂಬಿಗಳು ಸಂಚರಿಸುವಂತೆ. ಚೆನ್ನಾಗಿ ಅರಳಿದ ಹೂಗಳ ಉಪಮೆಯಿಂದ ಕುಸುಮಗಳ ಹಾಗೆ ಸೌಕುಮಾರ್ಯ ಮತ್ತು ರಮಣೀಯತೆ ವ್ಯಕ್ತವಾಗುತ್ತದೆ. ಅಲ್ಲದೆ ಇಡೀ ವನ ಅರಳಿದ ಸುಂದರ ಹೂಗಳಿಂದ ತುಂಬಿದೆ ಎಂದಾದರೆ ಸಹಜವಾಗಿಯೇ ಅದು ತನ್ನೆಡೆಗೆ ದುಂಬಿಗಳನ್ನು ಸೆಳೆಯುತ್ತದೆ. ಈ ಕವಿಗಳನ್ನು ದುಂಬಿಗಳಿಗೆ ಹೋಲಿಸಿರುವುದರ ಉದ್ದೇಶ, ದುಂಬಿಗಳು ಹೂಗಳಿಂದ ಮಕರಂದವನ್ನು ಸಂಗ್ರಹಿಸಿದ ಹಾಗೆ, ಮಾತಿನ ತಿರುಳನ್ನು ಗ್ರಹಿಸುವುದರಲ್ಲಿ ಅವರಿಗಿರುವ ಆಸಕ್ತಿಯನ್ನು ಸೂಚಿಸುವುದು

'ಸುಕುಮಾರ' ಮಾರ್ಗ ಎಂಥದು? ಅದರ ಇನ್ನೊಂದು ಗುಣ ವಿಶೇಷ ಈ ಮಾತಿನಲ್ಲಿ ವ್ಯಕ್ತವಾಗಿದೆ -ವೈಚಿತ್ರ್ಯದ ಏನೆಲ್ಲ ಅಂಶಗಳಿವೆ ಅವೆಲ್ಲವೂ ಕವಿ ಪ್ರತಿಭೆಯಿಂದಲೇ ಹೊಮ್ಮಿವೆ. ಅಂದರೆ, ವೈಚಿತ್ರ್ಯದ ಒಂದೊಂದೂ ಸಣ್ಣ ಅಂಶ ಏನಿದೆ, ಅಂದರೆ, ಅಲಂಕಾರ ಇತ್ಯಾದಿ. ಮಾತಿನ ವಕ್ರತೆಯಿಂದಾಗಿ ಉಂಟಾಗುವ ಸೌಂದರ್ಯದ ಅಂಶ ಏನೇನಿದೆ ಅದೆಲ್ಲವೂ ಕವಿಯ ಪ್ರತಿಭೆಯಿಂದ ಅರ್ಥಾತ್ ಅವನ ಸೃಜನ ಶಕ್ತಿಯಿಂದ ಹೊರ ಹೊಮ್ಮಿದ್ದಾಗಿದೆಯೇ ಹೊರತು ಪ್ರಯತ್ನ ಪೂರ್ವಕವಾಗಿ ಹೊರಗಿನಿಂದ ಏನನ್ನೂ ಕೃತಕವಾಗಿ ಹೇರಿದ್ದಾಗಿಲ್ಲ. ಕವಿಯ ಸಹಜ ಪ್ರತಿಭೆಯಿಂದ ಮೂಡಿದ್ದು

ಮತ್ತು ಆ ವೈಚಿತ್ರ್ಯ ಹೇಗಿರುತ್ತದೆ ಅಂದರೆ ಸೌಕುಮಾರ್ಯದ ಪರಿಸ್ಪಂದದಿಂದ (ರಮಣೀಯತೆಯಿಂದ) ಪ್ರವಾಹಿತವಾದ್ದು. ಸಹೃದಯರನ್ನು ಆಹ್ಲಾದಿತಗೊಳಿಸುವಂಥ ಸೌಂದರ್ಯಸ್ಯಂದಿಯಾದ್ದು. ಸುಕುಮಾರತೆಯ ಸೌಂದರ್ಯದಿಂದ ರಸಮಯಗೊಳಿಸುವ ವೈಚಿತ್ರ್ಯ ವಿದ್ದಾಗ, ಶೋಭಾತಿ ಶಯತೆಯನ್ನು ಪೋಷಿಸುತ್ತಿದೆ ಎಂದರ್ಥ. ಉದಾ:

ಪ್ರವೃದ್ಧತಾಪೋ ದಿವಸೋऽತಿಮಾತ್ರಮತ್ಯರ್ಥಮೇವ ಕ್ಷಣದಾ ಚ ತನ್ವೀ
ಉಭೌ ವಿರೋಧ ಕ್ರಿಯಯಾ ವಿಭಿನ್ನೌ ಜಾಯಾಪತೀ ಸಾನುಶಯಾ ವಿವಾಸ್ತಾಮ್

[೭೪]

ಅತ್ಯಧಿಕ ತಾಪದಿಂದಿರುವಿ ಗುರಿಯಾದ ಹಗಲು
ಸೊರಗಿ ಕೃಶವಾದ ಈ ಇರುಳು
ಪರಸ್ಪರ ವಿರುದ್ಧ ಕ್ರಿಯೆಯಿಂದ
ಸಿಡಿದು ಬೇರಾದ ಇವು
ಪಶ್ಚಾತ್ತಾಪದಿಂದಿರ್ಪ ದಂಪತಿಗಳಂತಿಹವು (೭೪) (ರಘುವಂಶ-16-45)

ಇಲ್ಲಿ ಪ್ರಯುಕ್ತವಾಗಿರುವ ಅಲಂಕಾರ ಖಂಡಿತಾ ಹೊರಗಿನಿಂದ ಹೇರಿದ್ದಲ್ಲ. ಕವಿಯ ಸಹಜ ಪ್ರತಿಭೆಯಿಂದ ಹೊರ ಹೊಮ್ಮಿದ ಸ್ವಾಭಾವಿಕ ಶ್ಲೇಷಾಲಂಕಾರ ಶೋಭೆಯಿಂದ ಕೂಡಿದ್ದು, ಅಪೂರ್ವ ಸೌಂದರ್ಯವನ್ನು ಪೋಷಿಸುತ್ತಿದೆ.

"ಪ್ರವೃದ್ಧ ತಾಪ" ಮತ್ತು 'ತನ್ವೀ' (ಕ್ಷೀಣ, ದುರ್ಬಲ) - ಈ ಎರಡೂ ಶಬ್ದಗಳು ಹಗಲು ಮತ್ತು ರಾತ್ರಿಯ ಸುಂದರ ಸ್ವಭಾವವನ್ನು ಅಭಿವ್ಯಕ್ತಿಸಲೆಂದೇ ಬಳಕೆಯಾಗಿವೆಯೇ ಹೊರತು, ನೇರವಾಗಿ ಇನ್ನಾವುದೇ ಅರ್ಥದ ಪ್ರತೀತಿ ಮಾಡುತ್ತಿಲ್ಲ. (ಪತಿ ಪತ್ನಿಯರ ವಿರಹದಿಂದ ಉಂಟಾದ ತಾಪ ಮತ್ತು ಕೃಶತೆ) (ಮೂಲ ಸಂಸ್ಕೃತದಲ್ಲಿ ಈ ಎರಡೂ ಶಬ್ದಗಳು ಕ್ರಮವಾಗಿ -ಪುಲ್ಲಿಂಗ ಮತ್ತು ಸ್ತ್ರೀಲಿಂಗಗಳು ಹಾಗೂ ಇವು ಹಗಲು ಮತ್ತು ರಾತ್ರಿಗಳನ್ನು ಗಂಡ ಮತ್ತು ಹೆಂಡತಿಯ ಸ್ವರೂಪದಲ್ಲಿ ಚೇತನಾರೋಪಣೆ ಮಾಡಿ ಅರ್ಥ ಪ್ರತೀತಿಯನ್ನು ಉಂಟು ಮಾಡುತ್ತವೆ). (ಅರ್ಥಾತ್ ಪ್ರಕರಣವಶದಿಂದ ಈ ಎರಡೂ ಶಬ್ದಗಳು ಗ್ರೀಷ್ಮದ ಹಗಲು ಹಾಗೂ ರಾತ್ರಿಯ ತಾಪಯುಕ್ತತೆ ಮತ್ತು ಕ್ಷೀಣತೆ ಎಂಬ ಅರ್ಥಗಳಲ್ಲಿ ಅಭಿಧಾಶಕ್ತಿಯ ಮೂಲಕ ನಿಯಂತ್ರಿತವಾಗುತ್ತವೆ. ಪತಿ ಪತ್ನಿಯರ ವಿರಹದಿಂದುಂಟಾದ ತಾಪ ಮತ್ತು ಕೃಶತೆಯ ಅರ್ಥಗಳು ಅಭಿಧಾ ಮೂಲಕ ಪ್ರತಿಪಾದಿತವಾಗುವುದಿಲ್ಲ) ಆದರೂ ಕವಿಯ ಕೌಶಲದಿಂದಾಗಿ, ಈ ಎರಡೂ ಇನ್ನೊಂದು ಪ್ರಕಾರದ ಅರ್ಥದ ಪ್ರತೀತಿ ಉಂಟು ಮಾಡುವಲ್ಲಿ ಅನುರೂಪತೆಯಿಂದಾಗಿ ಸಹೃದಯರಿಗೆ ಆಹ್ಲಾದಕಾರಿಯಾಗುತ್ತವೆ. ಹಾಗಾದರೆ ಆ ಎರಡನೇ ಪ್ರಕಾರ ಯಾವುದು? ಅದೆಂದರೆ ಇನ್ನೊಂದು ಅರ್ಥ ಪ್ರತೀತಿಯನ್ನುಂಟು ಮಾಡುತ್ತಿರುವ ಎರಡು ಶಬ್ದಗಳಾದ 'ವಿರೋಧ' ಮತ್ತು 'ವಿಭಿನ್ನ'ಗಳ ಪ್ರಯೋಗ. ಸಂದೇಹಕ್ಕೆಡೆಯಿಲ್ಲದಂತೆ ಇವು ಇನ್ನೊಂದು ಅರ್ಥದತ್ತ ಬೆರಳುಮಾಡಿ ತೋರಿಸುತ್ತಿವೆ.

ಇಲ್ಲಿ ವರ್ಣಿಸಲಾದ ಉಪಮೇಯಗಳಾದ 'ಹಗಲು' ಮತ್ತು 'ರಾತ್ರಿ' ಗಳಲ್ಲಿ ಸಹಬಾಳ್ವೆ ಸಾಧ್ಯವಾಗದಿರುವುದೇ 'ವಿರೋಧ' ಹಾಗೂ ಪರಸ್ಪರರ ಸ್ವಭಾವಗಳಲ್ಲಿ ಕಂಡು ಬರುವ ವ್ಯತ್ಯಾಸವೇ "ವಿಭಿನ್ನತೆ" (ಎರಡರದ್ದೂ ವಿರುದ್ಧ ಸ್ವಭಾವ). ಉಪಮೆಯಲ್ಲಿ (ಉಪಮಾನಗಳಾದ ಗಂಡ, ಹೆಂಡಿರಲ್ಲಿ) ಈರ್ಷ್ಯಾ ಕಲಹ ರೂಪದ 'ವಿರೋಧ', ಮತ್ತು ಕೋಪದಿಂದಾಗಿ ಒಬ್ಬರಿಂದೊಬ್ಬರು ಬೇರೆ ಬೇರೆಯಾಗಿರುವುದು "ವಿಭಿನ್ನತೆ"-ಪ್ರಯೋಗಕ್ಕೆ ಎಡೆ ಕೊಟ್ಟಿದೆ. ಅದೇ ರೀತಿ 'ಅತಿ ಮಾತ್ರಮ್' ಮತ್ತು ಅತ್ಯರ್ಥಮ್ ಎಂಬ ಕ್ರಿಯಾ ವಿಶೇಷಣಗಳು ಎರಡಕ್ಕೂ ಅನ್ವಯಿಸುತ್ತವೆ (ಹಗಲು, ರಾತ್ರಿ ಮತ್ತು ಪತಿ ಹಾಗೂ ಪತ್ನಿ) ಹಾಗೂ ಅತಿಶಯತೆಯ ಬೋಧೆಯನ್ನುಂಟು ಮಾಡುವ ಕಾರಣದಿಂದಾಗಿ ಅತ್ಯಂತ ರಮಣೀಯವೆನಿಸುತ್ತವೆ. ಸಾಮಾನ್ಯವಾಗಿ, ಕ್ಲೇಶದಿಂದ ಸಾಧಿಸಬೇಕಾದ ಶ್ಲೇಷಾಲಂಕಾರ ಇಲ್ಲಿ ಅತ್ಯಂತ ಅನಾಯಾಸವಾಗಿ ಸಿದ್ಧಿಸಿ ಮನೋಹಾರಿಯಾಗಿದೆ.

ಈಗ ಸುಕುಮಾರ ಮಾರ್ಗದ ಇನ್ನೊಂದು ವಿಶೇಷತೆಯನ್ನು ನೋಡೋಣ-(ಅಮ್ಲಾನ ಪ್ರತಿಭೋದ್ಭಿನ್ನ ನವ ಶಬ್ದಾರ್ಥ ಬಂಧುರಃ) ಕವಿಯ ಅಮ್ಲಾನ ಪ್ರತಿಭೆಯಿಂದ ಅಪ್ರಯತ್ನ ಪೂರ್ವಕವಾಗಿಯೇ ಹೊರ ಹೊಮ್ಮುವ ಶಬ್ದ ಮತ್ತು ಅರ್ಥಗಳಿಂದಾಗಿ ಬಂಧುರವಾದ್ದು. ಅಮ್ಲಾನ ಪ್ರತಿಭೆ ಎಂದರೆ, ದೋಷಗಳಿಂದ ಕಲುಷಿತವಾಗದ, ಈ ಜನ್ಮದ ಹಾಗೂ ಪೂರ್ವ

ಜನ್ಮದ ಸಂಸ್ಕಾರಗಳಿಂದ ಪರಿಪಕ್ವವಾದ ಕವಿಯ ಸೃಜನ ಶೀಲ ಶಕ್ತಿ (ಪ್ರತಿಭೆ) ಎಂದು. (ಅನಿರ್ವಚನೀಯವಾದ, ಅಪೂರ್ವವಾದ ಪ್ರತಿಭೆ ಎಂದು) ಅಂಥ ಪ್ರತಿಭೆಯಿಂದ ಉದ್ಭಿನ್ನವಾದ ಎಂದರೆ, ಗಿಡದಲ್ಲಿ ಚಿಗುರುಗಳು ಮೂಡಿದಂತೆ, ಶಬ್ದಗಳು ಮತ್ತು ಅರ್ಥಗಳು ತನಗೆ ತಾನೇ ಹೊರ ಹೊಮ್ಮಬೇಕು ಎಂದು; ಪ್ರಯಾಸದಿಂದಾಗಲಿ ಕಷ್ಟದಿಂದಾಗಲಿ ಅಲ್ಲ. ಅವು ನೂತನವಾಗಿದ್ದು, ಸಹೃದಯರಿಗೆ ಹೃದಯಾಹ್ಲಾದ ಉಂಟು ಮಾಡುವ ಸಾಮರ್ಥ್ಯ ಹೊಂದಿರಬೇಕು. ಅಭಿಧಾನ ಮತ್ತು ಅಭಿಧೇಯ ಅಥವಾ ಶಬ್ದ ಮತ್ತು ಅರ್ಥಗಳೆರಡೂ ಬಂಧುರವಾಗಿರಬೇಕು.

ಮುಂದಿನ ವಿಶೇಷಣ ಎಂದರೆ ಸ್ವಲ್ಪವೇ ಆದರೂ ಮನೋಹಾರಿಯಾದ ಅಲಂಕಾರಗಳಿಂದ ಕೂಡಿದ್ದು, ಅವು ಕೂಡ ಅಪ್ರಯತ್ನ ಪೂರ್ವಕವಾಗಿ, ನಿರಾಯಾಸವಾಗಿಯೇ ಹೊರಹೊಮ್ಮಬೇಕು. ಈ ಸುಕುಮಾರ ಮಾರ್ಗದಲ್ಲಿ, ಹೆಚ್ಚಿನ ಯಾವುದೇ ಪ್ರಯತ್ನವಿಲ್ಲದೆ, ಸಾಧಿಸುವ ಸೌಂದರ್ಯವು ಸುಂದರವಾದ ಭೂಷಣ ಅಥವಾ ಅಲಂಕಾರಕ್ಕೆ ಸಮನಾಗಿರುತ್ತದೆ. ಇಲ್ಲಿ ಬಳಕೆಯಾಗಿರುವ 'ಸ್ವಲ್ಪ' ಎಂಬ ಶಬ್ದವು ಇಡೀ ಪ್ರಕರಣಕ್ಕೆ ಅನ್ವಯಿಸುತ್ತದೆಯೇ ಹೊರತು ಕೇವಲ ವಾಕ್ಯಕ್ಕಷ್ಟೇ ಸೀಮಿತವಲ್ಲ.

ಉದಾ

ಬಾಲೇಂದು ವಕ್ರಾಣ್ಯವಿಕಾಶ ಭಾವಾದ್ ಬಭುಃ ಪಲಾಶಾನ್ಯತಿಲೋಹಿತಾನಿ
ಸದ್ಯೋ ವಸಂತೇನ ಸಮಾಗತಾನಾಂ ನಖಕ್ಷತಾನೀವ ವನಸ್ಥಲೀನಾಮ್ (೭೫)

ಪೂರ್ಣರೂಪದೆ ಅರಳದ ಕತದೆ
ಬಾಲ ಚಂದ್ರನ ಹಾಗೆ ಕೊಂಕಾದ
ಕಡು ಕೆಂಪು ಬಣ್ಣದ ಮುತ್ತುಗದ ಹೂಗಳವು
ವಸಂತ ವನದೇವಿಯರ ಪ್ರಥಮ ಮಿಲನದಂದು
ವಸಂತ ಮೂಡಿಸಿದ ವನದೇವಿಯ
ನಖಕ್ಷತದವೋಲಿದ್ದುವು (೭೫) [ಕುಮಾರಸಂಭವ - 3-19]

ಇಲ್ಲಿ 'ಬಾಲೇಂದು ವಕ್ರಾಣಿ' (ಬಾಲ ಚಂದ್ರನ ಹಾಗೆ ವಕ್ರತೆ), ಅತಿಲೋಹಿತಾನಿ (ಕಡು ಕೆಂಪು ಬಣ್ಣದ) ಹಾಗೂ ಸದ್ಯಃ ವಸಂತೇನ ಸಮಾಗತಾನಾಂ (ತತ್ಕಾಲದಲ್ಲಿ ವಸಂತನೊಂದಿಗೆ ಸಮಾಗಮ ಹೊಂದಿದ) ಎಂಬ ಪದಗಳು ತಮ್ಮ ಸೌಕುಮಾರ್ಯದಿಂದಾಗಿ, ಕೇವಲ ಸ್ವಭಾವ ಸಹಜ ಸೌಂದರ್ಯವನ್ನು ವರ್ಣಿಸಲು ಬಳಕೆಯಾಗಿದ್ದರೂ ನಖಕ್ಷತಾನೀವ (ನಖಕ್ಷತದ ಹಾಗಿರುವ) ಎಂಬ ಪದದಲ್ಲಿರುವ ಮನೋಹರವಾದ ಅಲಂಕಾರ ಯೋಜನೆಯು (ಉಪಮಾಲಂಕಾರ) ಅನಾಯಾಸವಾಗಿ ಮತ್ತು ಸ್ವಾಭಾವಿಕವಾಗಿ ಅದಕ್ಕೆ ಹೊಂದಿಕೊಂಡು, ಅದ್ಭುತ ಚಮತ್ಕಾರವನ್ನುಂಟು ಮಾಡುತ್ತದೆ. ಅಂದರೆ, ಬಾಲೇಂದು ವಕ್ರಾಣಿ ಇತ್ಯಾದಿ ಪದಗಳು ಪಲಾಶಪುಷ್ಪದ (ಮುತ್ತುಗದ ಹೂವಿನ) ಸ್ವಾಭಾವಿಕತೆಯನ್ನು ಪ್ರತಿಪಾದಿಸುತ್ತವಾದರೂ, 'ನಖಕ್ಷತದ' ಹೋಲಿಕೆಯನ್ನು ನೀಡಿರುವುದು -ನಖಕ್ಷತವೂ ವಕ್ರವಾಗಿದ್ದು, ರಕ್ತ ಚಿಮ್ಮುಗುವ

ಕಾರಣದಿಂದ ಕೆಂಪಾಗಿರುತ್ತದೆ -ನಾಯಕ, ನಾಯಿಕೆಯರ ಸಮಾಗಮ ಕಾಲದಲ್ಲಿ ಇಂಥ ಸಾಧ್ಯತೆ ಇದ್ದೇ ಇರುತ್ತದೆ. ಹಾಗಾಗಿ ನಾಯಕ ನಾಯಿಕೆಯರ ರೂಪದಲ್ಲಿ ವಸಂತ ಮತ್ತು ವನಸ್ಥಲಿಯ ಪೂರ್ಣ ಸಾಮಂಜಸ್ಯವನ್ನು ಸ್ಥಾಪಿಸುತ್ತ ಈ ಎಲ್ಲ ಪದಗಳೂ ಅಪೂರ್ವ ಚಮತ್ಕಾರವನ್ನುಂಟು ಮಾಡುತ್ತವೆ.

ಸುಕುಮಾರ ಮಾರ್ಗದ ಇನ್ನೊಂದು ವಿಶೇಷತೆ "ಭಾವ ಸ್ವಭಾವ ಪ್ರಾಧಾನ್ಯನ್ಯ ಕೃತಾಹಾರ್ಯ ಕೌಶಲಃ "(ವ್ಯುತ್ಪತ್ತಿ ಜನ್ಯ ಕೌಶಲವನ್ನು ಕಡೆಗಣಿಸುವ (ಮೀರುವ) ರೀತಿಯಲ್ಲಿ ಪದಾರ್ಥಗಳ ಆಂತರಿಕ ಸ್ವಭಾವಕ್ಕೆ ಎಲ್ಲಿ ಪ್ರಾಧಾನ್ಯವೋ). ಕವಿಯ ಅಪಾರವಾದ ವಿದ್ವತ್ತನ್ನು ಬಿಂಬಿಸುವ ಕೌಶಲಗಳು ವರ್ಣಿತ ಪದಾರ್ಥಗಳ, ವಸ್ತುಗಳ ಸ್ವಭಾವ ಚಿತ್ರಣಕ್ಕೆ ಅಧೀನವಾಗಿರಬೇಕು. ಅರ್ಥಾತ್, ಕವಿಯ ಸಹಜ ಪ್ರತಿಭೆಯಿಂದ ನಿಯೋಜಿತವಾದ ವಸ್ತುಗಳ ಸ್ವಭಾವವು ಎಷ್ಟರ ಮಟ್ಟಿಗೆ ಪ್ರಸ್ಫುಟಿತಗೊಂಡಿರುತ್ತದೆಂದರೆ, ಕಾವ್ಯದಲ್ಲಿ ಯೋಜಿತವಾಗಿರುವ ಕವಿಯ ವ್ಯುತ್ಪತ್ತಿ ಜನ್ಯ ತಾಂತ್ರಿಕ ಕೌಶಲ ವಿಲಾಸಗಳೆಲ್ಲವೂ ತೀರಾ ಗೌಣವಾಗಿ ಬಿಡುತ್ತವೆ. ಇದಕ್ಕೆ ಉದಾಹರಣೆಯಾಗಿ ರಘುವಂಶದ ಮೃಗಯಾವರ್ಣನೆಯ ಈ ಪ್ರಕರಣವನ್ನು ನೋಡಬಹುದು.

ತಸ್ಯ ಸ್ತನ ಪ್ರಣಯಿಭಿರ್ಮುಹುರೇಣಶಾ ವೈ -
ರ್ವ್ಯಾಹನ್ಯಮಾನ ಹರಿಣೀಗಮನಂ ಪುರಸ್ತಾತ್
ಆವಿರ್ಬಭೂವ ಕುಶಗರ್ಭಮುಖಂ ಮೃಗಾಣಾಂ
ಯೂಥಂ ತದಗ್ರಸರ ಗರ್ವಿತ ಕೃಷ್ಣ ಸಾರಮ್ (೭೬)

ಕೃಷ್ಣ ಮೃಗವದು ಗರ್ವದಲಿ ಮುಂದೆ ನಡೆದಿರೆ
ಸ್ತನ್ಯ ಪಾನವ ಬಯಸಿ ಮರಿಗಳು
ಅಡಿಗಡಿಗೆ ಕಾಲ್ಗೆ ತೊಡರುತೆ
ನಡಿಗೆಗೆ ಎಡರಾಗುತ್ತ ನಡೆದಿರೆ,
ಕುಶಾಂಕುರವ ಮೆಲುತೆ ಮೆಲ್ಲಗೆ
ಸಾಗಿ ಬರುತಿಹ ಹುಲ್ಲೆಗಳ ಹಿಂಡನೊಂದನು
ಮುಂದೆ ಕಂಡನು ನೃಪನು (ರಘುವಂಶ 9-55) (೭೬)

ಇಲ್ಲಿ ಮೃಗಗಳ ಸ್ವಭಾವವನ್ನು ಎಷ್ಟೊಂದು ಚಮತ್ಕಾರಪೂರ್ಣವಾಗಿ ವರ್ಣಿಸಿರುವನೆಂದರೆ, ಇತರೆ ವ್ಯುತ್ಪತ್ತಿ ವಿಹಿತ ಕೌಶಲಗಳು ಲೆಕ್ಕಕ್ಕೇಬರುವುದಿಲ್ಲ. ಕುಮಾರ ಸಂಭವದಲ್ಲಿ ಈ ಸಾಲಿನಿಂದ ಪ್ರಾರಂಭವಾಗುವ ಕಾವ್ಯ ಭಾಗವೂ ಇದಕ್ಕೆ ಉತ್ಕೃಷ್ಟ ಉದಾಹರಣೆ.

ದ್ವಂದ್ವಾನಿ ಭಾವಂ ಕ್ರಿಯಯಾ ವಿವವ್ರುಃ (೭೭) (ಕುಮಾರ ಸಂಭವ 3-35)

ಮಿಥುನಗಳು ಕ್ರಿಯೆಯಿಂದೆ ತೋರಿದುವು ತಮ್ಮೊಲವನು (೭೭)

ಇದರ ನಂತರ ಪ್ರಾಣಿ ಸ್ವಭಾವ ವರ್ಣನೆಯ ಈ ಪದ್ಯಃ

ಶೃಂಗೇಣ ಚ ಸ್ಪರ್ಶ ನಿಮೀಲಿತಾಕ್ಷೀಂ
ಮೃಗೀಮಕಂಡೂಯತ ಕೃಷ್ಣಸಾರಃ (೭೮)

ಕೃಷ್ಣ ಮೃಗ ಶೃಂಗದಿಂ ತುರಿಸುತಿರಲಂದು
ಸ್ಪರ್ಶಸುಖದಿಂದೆವೆಯನರೆಮುಚ್ಚಿದುದೆರಳೆ ತಾನು. (೭೮)

(ಕುಮಾರ ಸಂಭವ 3-36)

ಆ ಸುಕುಮಾರ ಮಾರ್ಗ ಯಾವ ರೀತಿಯದು? ರಸಾದಿಗಳ ಪರಮಾರ್ಥವನ್ನು ತಿಳಿದವರೊಂದಿಗೆ ಮನಃ ಸಂವಾದ ಮಾಡುವ ಮೂಲಕ ಸೌಂದರ್ಯವನ್ನು ಗ್ರಹಿಸಲು ಸಾಧ್ಯವಾಗುವಂಥದು. ರಸವೆಂದರೆ ಇಲ್ಲಿ ಶೃಂಗಾರವೇ ಮೊದಲಾದುವು. ರಸಾದಿಗಳನ್ನು ಗ್ರಹಿಸುವುದು ಎಂದರೆ ರತಿಯೇ ಮೊದಲಾದುವೂ ಸೇರುತ್ತವೆ. ಅವುಗಳ ಪರಮಾರ್ಥ ಎಂದರೆ, ಅವುಗಳ ಪರಮ ರಹಸ್ಯ. ಆ ರಹಸ್ಯವನ್ನು ತಿಳಿದವರೇ ತಜ್ಞರು. ಅವರ ಮನಃ ಸಂವಾದ ಎಂದರೆ, ಹೃದಯ ಸಂವೇದನೆ. ಅರ್ಥಾತ್ ಸ್ವಾನುಭವಕ್ಕೆ ಗೋಚರಿಸುವುದರಿಂದ ಉಂಟಾಗುವ ಪ್ರತೀತಿ. ಸುಂದರವೂ, ಸುಕುಮಾರವೂ, ಆಗಿರುವ; ಸಹೃದಯರಿಗೆ ಹೃದಯಾಹ್ಲಾದವನ್ನುಂಟು ಮಾಡುವ ವಾಕ್ಯ ನಿಬಂಧನೆ ಎಲ್ಲಿ ಇರುತ್ತದೋ ಅದು ಸುಕುಮಾರ ಮಾರ್ಗವೆನಿಸುತ್ತದೆ. ಈ ಸಂದರ್ಭದಲ್ಲಿ, 'ರಘುವಂಶ' ಮಹಾಕಾವ್ಯದಲ್ಲಿ ರಾವಣ ವಧೆಯ ನಂತರ, ಪುಷ್ಪಕ ವಿಮಾನದಲ್ಲಿ ಸೀತೆಯನ್ನು ಅಯೋಧ್ಯೆಗೆ ಕರೆತರುತ್ತಿರುವ ಸಂದರ್ಭದಲ್ಲಿ ಸೀತೆಯಿಂದ ಅಗಲಿ ವಿರಹದ ವೇದನೆಯನ್ನನುಭವಿಸುತ್ತ-ವ್ಯಾಕುಲ ಹೃದಯನಾದ ಶ್ರೀರಾಮನು-"ನನಗೆ ಇಂಥ ಜಾಗದಲ್ಲಿ ಈ ರೀತಿಯ ವೇದನೆ ಉಂಟಾಗಿತ್ತು" ಎಂದು ಹೇಳುವ-ರಾಮನ ಬಾಯಿಂದ ಬರುವ ಶ್ಲೋಕಗಳೆಲ್ಲವೂ ಇದಕ್ಕೆ ಉದಾಹರಣೆಯಾಗುತ್ತವೆ.

ಉದಾ:

ಪೂರ್ವಾನುಭೂತಂ ಸ್ಮರತಾ ಚ ರಾತ್ರೌ ಕಂಪೋತ್ತರಮ್ ಭೀರು ತವೋಪಗೂಢಮ್|
ಗುಹಾವಿಸಾರೀಣ್ಯತಿವಾಹಿತಾನಿ ಮಯಾ ಕಥಂಚಿದ್ ಘನಗರ್ಜಿತಾನಿ -೭೯.

(ರಘುವಂಶ-iii-28)

ಎಲೆ ಭೀರು ರಾತ್ರಿಯೊಳು ನಾನಂದು
ಹಿಂದೆ ಅನುಭವಿಸಿದಾ ನಡುಕವು ಬೆರೆತ
ನಿನ್ನಪ್ಪುಗೆಯ ನೆನೆಯುತಿರಲು
ಗವಿಗಳನು ಹೊಕ್ಕು ಅನುರಣಿಸುತಿರ್ದ
ಗುಡುಗುಗಳ ಗರ್ಜನೆಯನೆಂತು ಸಹಿಸಿದೆನೊ ಕಾಣೆ (೭೯)

ಸುಕುಮಾರ ಮಾರ್ಗದ ಎರಡು ಗುಣ ವಿಶೇಷಗಳನ್ನು ಪ್ರತ್ಯೇಕವಾಗಿ ಇಲ್ಲಿ ಹೆಸರಿಸಲಾಗಿರುವ ಕಾರಣವೆಂದರೆ (ಮೊದಲಿಗೆ ಪಕ್ಷಿಗಳ ಸ್ವಭಾವಕ್ಕೆ ಪ್ರಾಧಾನ್ಯ ನೀಡಿವರ್ಣಿಸಿರುವುದು, ಅನಂತರ ಚೇತನ ವಸ್ತುಗಳ ರಸಪರಿಪೂರ್ಣ ರೀತಿಯ ವರ್ಣನೆ) ರಸಾಂಗಭೂತಗಳಾಗಿ ಪಕ್ಷಿಗಳ ಧ್ವನಿ, ವೃಕ್ಷ, ಜಲ, ವಸಂತ (ಕುಸುಮ ಸಮಯ) ಇತ್ಯಾದಿ ಪದಾರ್ಥಗಳು ತಮ್ಮ ಸ್ವಭಾವಗಳ

ಅತಿಶಯವಾದ ವರ್ಣನ ಪ್ರಾಧಾನ್ಯದಿಂದ ವಿಭಾವಾದಿಗಳ ರೂಪದಲ್ಲಿ ರಸಾಂಗತೆಯನ್ನು ಪಡೆದು ಕೊಳ್ಳುತ್ತವೆ. ಅದೇ, ಇವಕ್ಕಿಂತ ಭಿನ್ನವಾದ ಉತ್ಕೃಷ್ಟ ಚೇತನಗಳಾದ ದೇವ, ಗಂಧರ್ವರೇ ಮೊದಲಾದವರು, ಶೃಂಗಾರಾದಿ ರಸಗಳಿಂದ ಒಡಗೂಡಿರುವಂತೆ ವರ್ಣಿಸಲ್ಪಡುವುದರಿಂದ ಸಹೃದಯರ ಹೃದಯಕ್ಕೆ ಆನಂದವನ್ನುಂಟು ಮಾಡುತ್ತಾರೆ. ಇದನ್ನು ಈಗಾಗಲೇ ಕವಿಗಳು ಸ್ವೀಕರಿಸಿದ್ದಾರೆ, ಮತ್ತು ಅದೇ ಪ್ರಕಾರದ ವರ್ಣನೆಗಳು ಲಕ್ಷ್ಯ ಗ್ರಂಥಗಳಲ್ಲಿ ಕಾಣ ಸಿಗುತ್ತವೆ. (ಆದ್ದರಿಂದಲೇ ಪಶುಪಕ್ಷಿ ಇತ್ಯಾದಿಗಳ ವರ್ಣನೆಗೆ-ಭಾವಸ್ವಭಾವ ಪ್ರಾಧಾನ್ಯನ್ಯಕೃತಾಹಾರ್ಯ ಕೌಶಲಃ ಎಂಬ ವಿಶೇಷಣವನ್ನು ಬಳಸಿ, ಸುರರು, ಗಂಧರ್ವರು, ಇತ್ಯಾದಿಯವರನ್ನು ವರ್ಣಿಸಲು ರಸಾದಿ ಪರಮಾರ್ಥಜ್ಞ ಮನಃ ಸಂವಾದ ಸುಂದರಃ ಎಂಬ ವಿಶೇಷಣ ಬಳಸಿ ಎರಡು ವಿಭಾಗ ಮಾಡಲಾಗಿದೆ)

ಸುಕುಮಾರ ಮಾರ್ಗವು ಅವಿಭಾವಿತ ಸ್ಥಿತಿಯ ರಮಣೀಯತೆಯಿಂದ ಆನಂದವನ್ನುಂಟು ಮಾಡಬಲ್ಲುದು. (ಅಂದರೆ ಶಬ್ದಗಳ ಮೂಲಕ ಅಭಿವ್ಯಕ್ತಿಸಲು ಅಸಾಧ್ಯವಾದ ಆದರೆ ಕೇವಲ ಅನುಭವಕ್ಕೆ ಮಾತ್ರ ನಿಲುಕುವಂಥದು.) ರಮಣೀಯತೆಯಿಂದಾಗಿ ಸಹೃದಯರಿಗೆ ಆಹ್ಲಾದವ ನ್ನುಂಟು ಮಾಡಬಲ್ಲುದು. ಸಹೃದಯನ ವಿಶ್ಲೇಷಣಾ ಶಕ್ತಿಯನ್ನೂ ಮರೆಸಿ ಆಹ್ಲಾದವನ್ನುಂಟು ಮಾಡಬಲ್ಲುದು.

ಒಂದು ವೇಳೆ ಇದರ ಅರ್ಥ-ಈ ರೀತಿಯ ಕವಿ ಕೌಶಲ, ಕಾವ್ಯದಲ್ಲಿ ಸಂಭವಿಸಬಹುದಾದರೆ ಅದು ಇಷ್ಟೇ; ಅದನ್ನು ಇನ್ನಾವರೀತಿಯಲ್ಲೂ ಹೇಳಲು ಸಾಧ್ಯವಿಲ್ಲ. ಅದು ಕೇವಲ ಸರ್ವಾತಿಶಯ ರೂಪದಲ್ಲ ಹೃದಯದಲ್ಲಿ ಒಡಮೂಡುವಂಥದು (ಸ್ಫುರಿತ). (ಅನುಭವೈಕ ವೇದ್ಯವೇ ಹೊರತು, ವಚನೀಯವಲ್ಲ). ಅಲ್ಲದೆ ಅದು ವಿಧಿ ಅಂದರೆ ಬ್ರಹ್ಮನ ವೈದಗ್ಧ್ಯದಿಂದ ನಿಷ್ಪನ್ನವಾದ ಸೃಷ್ಟಿಯ ಅತಿಶಯಕ್ಕೆ ಸಮನಾದ್ದು. ಅಂದರೆ ಈ ವಿಶ್ವದ ಅತ್ಯಂತ ಕುಶಲ ಶಿಲ್ಪಿ ಬ್ರಹ್ಮ. ರಮಣಿಯರ ರಮಣೀಯವಾದ ಲಾವಣ್ಯ ನಿರ್ಮಿತಿಯಲ್ಲಿ ಬ್ರಹ್ಮನ ಸೃಷ್ಟಿ ನಿರ್ಮಾಣ ಕೌಶಲ್ಯ ಅದ್ಭುತವಾಗಿ ಕಂಡು ಬರುತ್ತದೆ. ಕವಿಯ ಸುಕುಮಾರ ಮಾರ್ಗವನ್ನು ಬ್ರಹ್ಮನ ಪರಿಪೂರ್ಣ ಕೌಶಲ್ಯಕ್ಕೆ ಮಾತ್ರ ಹೋಲಿಸಬಹುದು. ಬ್ರಹ್ಮನ ಸೃಷ್ಟಿ ನಿರ್ಮಾಣ ಕೌಶಲವು ಹೇಗೆ ವಿವೇಚನೆಗೆ ಒಳಪಡದೋ ಅದೇ ರೀತಿ ಕವಿಯ ಕಾವ್ಯ ಕಲೆಯೂ ವಿವೇಚನೆಗೆ ಒಳಗಾಗದಂಥದು.

ಉದಾಃ

(ಇದು ರಘುವಂಶದ 6ನೇ ಸರ್ಗದ 4ನೇ ಶ್ಲೋಕ. ಇಂದುಮತೀ ಸ್ವಯಂವರದಲ್ಲಿ 'ಪ್ರತೀಪ' ನೆಂಬ ರಾಜನನ್ನು ಪರಿಚಯಿಸುತ್ತ ಸುನಂದಾದೇವಿಯು ಅವನ ಪೂರ್ವಜ ಕಾರ್ತವೀರ್ಯಾರ್ಜುನನ ಪರಾಕ್ರಮವನ್ನು ಕುರಿತು ಹೀಗೆ ಹೇಳುತ್ತಾಳೆ).

ಜ್ಯಾಬಂಧ, ನಿಷ್ಪಂದ ಭುಜೇನ ಯಸ್ಯ ವಿನಿಃಶ್ವಸದ್ವಕ್ತ್ರಪರಂಪರೇಣ
ಕಾರಾಗೃಹೇ ನಿರ್ಜಿತ ವಾಸವೇನ ದಶಾನನೇನೋಷಿತಮಾ ಪ್ರಸಾದಾತ್ (೮೦)

(ರಘುವಂಶ-VI-40)

ಬಿಲ್ಲನೇಣೆಂದ ಬಿಗಿವಡೆದು
ಭುಜವನಲುಗಿಸಲಾರದೆಯೆ
ಸಾಲ್ಗೊಂಡ ಮೊಗಗಳಿಂದುಸಿರೆಳೆದು ಬಿಡುತೆ
ದಯೆ ದೊರೆಯದನಕ ಕಾರ್ತವೀರ್ಯನ
ಸೆರೆಯೊಳಿರ್ದನಾ ಇಂದ್ರಜಯಿ ದಶ ಮುಖನು. (೪೦)

ಈ ಶ್ಲೋಕದಲ್ಲಿ, ಇನ್ನಾವುದೇ ವಿಸ್ತೃತ ವಿಶೇಷಣದ ನೆರವಿಲ್ಲದೆ, ಕವಿಯ ಸೃಜನಶೀಲ ಪ್ರತಿಭೆ ತನ್ನ ಕೌಶಲದ ಪರಿಪಾಕವನ್ನು ತಲುಪಿರುವುದನ್ನು ಕಾಣಬಹುದು.

ಇದುವರೆಗೆ ಹೇಳಲಾದ ಈ ಶ್ಲೋಕ ಚತುಷ್ಟಯದಲ್ಲಿ (25-29) ಮೊದಲ ಶ್ಲೋಕದಲ್ಲಿ ಪ್ರಧಾನವಾಗಿ ಶಬ್ದಾಲಂಕಾರಗಳ ಸೌಂದರ್ಯವನ್ನು ಪ್ರತಿಪಾದಿಸಲಾಯಿತು. ಎರಡನೆಯದರಲ್ಲಿ ವರ್ಣನೀಯ ವಸ್ತುವಿನ ಸೌಕುಮಾರ್ಯವನ್ನು ಪ್ರಸ್ತಾಪಿಸಲಾಯಿತು. ಮೂರನೆಯದರಲ್ಲಿ ಸೌಕುಮಾರ್ಯಕ್ಕೆ ಹೊಂದುವ ರೀತಿಯಲ್ಲೇ ವೈಚಿತ್ರ್ಯದ ಸೃಷ್ಟಿ ನಡೆಯಬೇಕು ಎಂದಿದೆ. ಐದನೆಯದು ಸೌಕುಮಾರ್ಯವು ಹೇಗೆ ವಸ್ತು ಮತ್ತು ರೀತಿ ಎರಡಕ್ಕೂ ಸಂಬಂಧಪಟ್ಟದ್ದು ಎಂಬುದನ್ನು ತಿಳಿಸುತ್ತದೆ.

ಮೇಲೆ ತಿಳಿಸಿದಂತೆ, ಸುಕುಮಾರ 'ಮಾರ್ಗದ' ಲಕ್ಷಣವನ್ನು ಹೇಳಿ. ಅನಂತರ ಇದೀಗ ಅದರ ಗುಣಗಳನ್ನು ಕುರಿತು ವಿಚಾರಿಸೋಣ

ಅಸಮಸ್ತ ಮನೋಹಾರಿಪದ ವಿನ್ಯಾಸ ಜೀವಿತಮ್
ಮಾಧುರ್ಯಂ ಸುಕುಮಾರಸ್ಯ ಮಾರ್ಗಸ್ಯ ಪ್ರಥಮೋಗುಣಃ (30)

ಸುಕುಮಾರ ಮಾರ್ಗದ ಪ್ರಪ್ರಥಮ ಗುಣವೆಂದರೆ ಮಾಧುರ್ಯ. ಸಮಾಸ ರಹಿತವಾದ ಹಾಗೂ ಮನೋಹರವಾದ ಪದಗಳ ವಿನ್ಯಾಸವನ್ನು ಪ್ರಾಣವಾಗಿ ಉಳ್ಳದ್ದು ಮಾಧುರ್ಯ ಗುಣ. (30)

ಸಮಾಸ ರಹಿತವಾದ, ಹೃದಯಾಹ್ಲಾದಕರವಾದ, ಶ್ರುತಿರಮ್ಯತೆ ಮತ್ತು ಅರ್ಥರಮ್ಯತೆ ಗಳಿಂದಾಗಿ (ವಿಭಕ್ತ್ಯಂತ ಅಥವಾ ಧಾತ್ವಂತ) ಪದಗಳ ವಿನ್ಯಾಸ ವೈಚಿತ್ರ್ಯವನ್ನೇಜೀವಿತ ಸರ್ವಸ್ವ ವನ್ನಾಗಿ ಉಳ್ಳುದು ಮಾಧುರ್ಯ ಗುಣ. ಇಂಥ ಮಾಧುರ್ಯ ಸುಕುಮಾರ ಮಾರ್ಗದ ಪ್ರಧಾನಭೂತ ಗುಣ. ಶ್ಲೋಕದಲ್ಲಿ ಬಳಕೆಯಾಗಿರುವ 'ಸಮಾಸ ರಹಿತ' (ಅಸಮಸ್ತ) ಎಂಬ ಶಬ್ದವನ್ನು ಸಂಪೂರ್ಣವಾಗಿ ಸಮಾಸವೇ ಇಲ್ಲದ ಎಂಬ ಅರ್ಥದಲ್ಲಿ ಪ್ರಯೋಗಿಸಿಲ್ಲ; ಬದಲಿಗೆ ಸಮಾಸ ಪ್ರಾಚುರ್ಯದಿಂದ ಕೂಡಿರಬಾರದು ಎಂದು.

ಉದಾ :

ಕ್ರೀಡಾರಸೇನ ರಹಸಿ ಸ್ಮಿತಪೂರ್ವಮಿಂದೋ–
ರ್ಲೇಖಾಂ ವಿಕೃಷ್ಯ ವಿನಿಬದ್ಧ್ಯ ಚ ಮೂರ್ಧ್ನಿಗೌರ್ಯಾ
ಕಿಂ ಶೋಭಿತಾಹಮನಯೇತಿ ಶಶಾಂಕಮೌಲೇ:
ಪೃಷ್ಟಸ್ಯ ಪಾತು ಪರಿಚುಂಬನಮುತ್ತರಂ ವ: [೪೧] [ಚೆ - 103]

ಕ್ರೀಡಾ ವಿನೋದದೊಳೊಮ್ಮೆ
ಏಕಾಂತದಲಿ ಗೌರಿಯು
ಶಿವನ ಜಟೆಯೊಳಗಿರ್ದ ಶಶಿಲೇಖೆಯನು ಸೆಳೆದು
ಶಿರದಲಿ ಧರಿಸಿ ಮುಗುಳು ನಗೆಯಿಂದ
ಶೋಭಿಸುವುದೇನಿದು ಎನಗೆ ಎಂದು
ಶಶಾಂಕ ಮೌಳಿಯನು ಕೇಳ್ವಾಗಿರಿಜೆಗೆ
ಚುಂಬನದ ಉತ್ತರವ ನೀಡಿದನು ಶಿವನು
ರಕ್ಷಿಸಲಿ ನಮ್ಮನಿದು ಎಂದೆಂದಿಗು [೮೧]

ಇಲ್ಲಿ ಪದಗಳ ಸಮಾಸ ರಾಹಿತ್ಯ [ಮೂಲದ 'ಕ್ರೀಡಾರಸೇನ' ಅಥವಾ ಶಶಾಂಕ ಮೌಲೇ: ಎಂಬ ಪದಗಳು ಸಮಾಸ ಪದಗಳೇ ಆದರೂ ಅವು ಅರ್ಥ ಪ್ರತೀತಿಗೆ ಭಂಗವುಂಟು ಮಾಡುವಷ್ಟು ದೀರ್ಘ ಸಮಾಸವಾಗಲಿ ಕಠಿಣ ಸಮಾಸವಾಗಲಿ ಅಲ್ಲ; ಬದಲಿಗೆ ಅವು ಒಂದು ಅಪೂರ್ವ ಚಮತ್ಕಾರವನ್ನೇ ಉಂಟು ಮಾಡುತ್ತವೆ] ಶಬ್ದ ಮತ್ತು ಅರ್ಥಗಳ ರಮಣೀಯತೆ ಹಾಗೂ ವಿನ್ಯಾಸ ವೈಚಿತ್ರ್ಯ ಈ ಮೂರೂ ಕಂಡು ಬರುತ್ತವೆ.

'ಮಾಧುರ್ಯ' ಗುಣವನ್ನು ವಿವರಿಸಿದ್ದಾದ ಮೇಲೆ, 'ಪ್ರಸಾದ' ಗುಣದ ವಿಷಯವನ್ನು ಪ್ರಸ್ತಾಪಿಸುತ್ತೇವೆ.

ಅಕ್ಲೇಶ ವ್ಯಂಜಿತಾಕೂತಂ ಝಗಿತ್ಯರ್ಥಸಮರ್ಪಣಂ
ರಸವಕ್ರೋಕ್ತಿ ವಿಷಯಂ ಯತ್ಪ್ರಸಾದಃ ಸ ಕಥ್ಯತೇ[31]

ಶೃಂಗಾರವೇ ಮೊದಲಾದ ರಸಗಳ ಹಾಗೂ ವಕ್ರೋಕ್ತಿ ವಿಷಯಕವಾದ ಕವಿಯ ಆಶಯವನ್ನು ಸಹೃದಯನ ಯಾವ ಪ್ರಯತ್ನವೂ ಇಲ್ಲದೆ ಅನಾಯಾಸವಾಗಿ ಪ್ರಕಟಿಸಿ ಬಿಡುವಂಥ ರಮಣೀಯವಾದ ಹಾಗೂ ತತ್‌ಕ್ಷಣವೇ ಅರ್ಥಪ್ರತೀತಿಯನ್ನುಂಟು ಮಾಡಿ ಬಿಡುವ ಗುಣವೇ 'ಪ್ರಸಾದಗುಣ'ವೆನಿಸುತ್ತದೆ. [31]

ಕವಿಯ ಆಶಯವನ್ನು ಕೂಡಲೇ, ಅಂದರೆ ಓದಿದ ಕೂಡಲೇ ಅಥವಾ ಕೇಳಿದ ಕೂಡಲೇ ಮೊಟ್ಟ ಮೊದಲ ಬಾರಿಗೆ, ಸಹೃದಯನಿಗೆ ಅನಾಯಾಸವಾಗಿ ಮುಟ್ಟಿಸಿ ಬಿಡುವುದೇ ಅರ್ಥಸಮರ್ಪಣ. ಹಾಗೆ ಅರ್ಥಸಮರ್ಪಣೆ ಎಂದರೆ ಯಾವುದರ ವಿಷಯದ್ದು? ಸಮಸ್ತ ರಸಗಳ ಹಾಗೂ ವಕ್ರೋಕ್ತಿ ವಿಷಯಕವಾದ ವಿಚಾರಗಳದ್ದು. ರಸಗಳು ಎಂದರೆ ಶೃಂಗಾರವೇ ಮೊದಲಾದುವು. ಹಾಗೂ 'ವಕ್ರೋಕ್ತಿ' ಎಂದರೆ ಸಮಸ್ತ ಅಲಂಕಾರಗಳ ಸಾಮಾನ್ಯ ತತ್ವ. ಇವುಗಳನ್ನು ಯಾವುದೇ ಕಷ್ಟ, ಕ್ಲೇಶಗಳಿಲ್ಲದೆ ಅನಾಯಾಸವಾಗಿ ಪ್ರಕಟಿಸುವಂಥ ಗುಣವೇ ಪ್ರಸಾದ ಗುಣ. ಈ ಪ್ರಸಾದ ಗುಣದಲ್ಲಿಯ ಬಹುಮುಖ್ಯ ಪರಿಗಣನೆಗಳೆಂದರೆ 1. ಸಮಾಸ ಪದಗಳಿಲ್ಲದಿರುವಿಕೆ, 2. ನೇರವಾದ ಅರ್ಥಗಳು 3. ಅವ್ಯವಹಿತ ಸಂಬಂಧತ್ವ (ಪ್ರಸಿದ್ಧ ಶಬ್ದಾರ್ಥ ಸಂಬಂಧತ್ವ) 4. ಸಮಾಸಗಳು ಒಂದು ವೇಳೆ ಇದ್ದರೂ ಸರಳತೆಯಿಂದ ಅರ್ಥಪ್ರತೀತಿ ಉಂಟುಮಾಡುವಂಥವು. ಇದರ ಮೂಲ ಶ್ಲೋಕದಲ್ಲಿರುವ 'ಆಕೂತ' ಶಬ್ದವನ್ನು 'ರಮಣೀಯತೆ' ಎಂಬ ಅರ್ಥದಲ್ಲಿ ಬಳಸಲಾಗಿದೆ.

ಉದಾ :

ಹಿಮವ್ಯಪಾಯಾದ್ವಿಶದಾಧರಾಣಾಮಾಪಾಂಡುರೀಭೂತ ಮುಖಚ್ಛವೀನಾಮ್
ಸ್ವೇದೋದ್ಗಮ : ಕಿಂಪುರುಷಾಂಗನಾನಾಮ್ ಚಕ್ರೇ ಪದಂ ಪತ್ರ ವಿಶೇಷಕೇಷು [೮೨]
[ಕುಮಾರ ಸಂಭವ III - 33]

ಹಿಮಗಾಲ ಕಳೆಯಿತೆನೆ ಹೊಳೆವ ತುಟಿಗಳ
ಬೆಳುಮೊಗದ ಕಾಂತಿಯ ಕಿನ್ನರಿಯರ
ಮಕರಿಕಾ ಪತ್ರ ರಚನೆಗಳಲಿ
ಮೂಡಿದುದು ಬೆವರ ಹನಿ ಮಣಿಗಳಂತೆ (೮೨)

ಇಲ್ಲಿ ಸಮಾಸರಹಿತ ಪದಗಳ ಪ್ರಯೋಗ ಇತ್ಯಾದಿ ಪ್ರಸಾದ ಗುಣದ ಸಕಲ ಲಕ್ಷಣಗಳೂ ಇವೆ. ಅದೂ ಅಲ್ಲದೆ ವಿವಿಧ ಮಕರಿಕಾ ಪತ್ರಗಳ ರಚನೆಯಿಂದ ಸಾಧಿತವಾದ ಮುಖದ ಸೌಂದರ್ಯವು ಮುತ್ತಿನ ಕಣಗಳ ಹಾಗೆ ಶೋಭಿಸುತ್ತಿದ್ದ ಬೆವರ ಹನಿಗಳಿಂದ ಮತ್ತಷ್ಟು ವರ್ಧಿಸಿತು ಎಂಬುದು ಸ್ಪಷ್ಟವೇ ಇದೆ.

ಅಥವಾ ಈ ಉದಾಹರಣೆ :

ಅನೇನ ಸಾರ್ಧಂ ವಿಹರಾಂಬುರಾಶೇಸ್ತೀರೇಷು ತಾಡೀವನ ಮರ್ಮರೇಷು
ದ್ವೀಪಾಂತರಾನೀತ ಲವಂಗ ಪುಷ್ಪೈರ ಪಾಕೃತ ಸ್ವೇದಲವಾ ಮರುದ್ಭಿಃ [೮೩]

ತಾಳವನಗಳು ಮರ್ಮರ ನಿನಾದ
ಮಾಡುತಿರುವೀ ಕಡಲ ತಡಿಯೊಳು
ನೀನು ವಿಹರಿಸಿವನೊಡನೆ
ದ್ವೀಪಾಂತರಂಗಳಿಂ ಬೀಸಿ ಬಹ
ಲವಂಗ ಕುಸುಮದ ಮೇಲಣೆಲರು
ನಿನ್ನ ಮೈಯ ಬೆವರಹನಿಗಳನು [೮೩]
ತೊಡೆದು ಬಿಡಲಿ. [ರಘುವಂಶ 6-57]

(ಕಾಳಿದಾಸನ ರಘುವಂಶದಲ್ಲಿ ಇಂದು ಮತೀ ಸ್ವಯಂವರ ಪ್ರಸಂಗದಲ್ಲಿ ಕಳಿಂಗರಾಜ ಹೇಮಾಂಗದನ ಪರಿಚಯ ಮಾಡುತ್ತ ಸುನಂದೆಯು ಇಂದುಮತಿಗೆ ಹೀಗೆ ಹೇಳುತ್ತಾಳೆ.

ಅಲಂಕಾರ ವ್ಯಕ್ತಿಗೆ (ಅಲಂಕಾರಗಳಲ್ಲಿ ಕಂಡು ಬರುವ ಸೌಂದರ್ಯ ವಿಶದತೆಗೆ)

ಉದಾ :

[ಬಾಲೇಂದು ವಕ್ರಾಣಿ.....] - (೮೪) [ಉದಾ. ೭೫ ನೋಡಿ]

ಇಲ್ಲಿಯೂ ಪ್ರಚುರ ಸಮಾಸಗಳ ಅಭಾವ ಇತ್ಯಾದಿ ಪ್ರಸಾದಗುಣದ ಸಮಸ್ತ ಸಾಮಗ್ರಿಯೂ ಇರುವುದನ್ನು ನೋಡಬಹುದು. ಜೊತೆಯಲ್ಲೇ "ಅಪಾಕೃತ ಸ್ವೇದಲವಾ" ಎಂಬ ಶಬ್ದದ ಮೂಲಕ ಸುರತ ಜನ್ಯ ಬೆವರಿನ ಕಾರಣದಿಂದಾಗಿ ಹೊರ ಹೊಮ್ಮಿದ ಸ್ವೇದಕಣಗಳನ್ನು ಸೂಚಿಸಲಾಗಿದೆ.

ಅದೂ ಸುಸ್ಪಷ್ಟವೇ ಇದೆ.

ಈ ಪದ್ಯದಲ್ಲೂ (ಬಾಲೇಂದು...) ಸಮಾಸದ ಅಭಾವದ ಜೊತೆ ಜೊತೆಯಲ್ಲಿಯೇ ಅರ್ಥದ ಸ್ಪಷ್ಟತೆಯೇ ಮೊದಲಾದ ಪ್ರಸಾದ ಗುಣದ ಸಕಲ ಸಾಮಗ್ರಿಗಳ ಜೊತೆಗೆ "ನಖಕ್ಷತಾನೀವ" -ದಲ್ಲಿ ಬಳಕೆಯಾಗಿರುವ ಉಪಮಾಲಂಕಾರ ಅತ್ಯಂತ ರಮಣೀಯವಾಗಿದೆ.

'ಪ್ರಸಾದ' ಗುಣದ ನಂತರ, 'ಲಾವಣ್ಯ' ಗುಣದ ಪ್ರಸ್ತಾಪ ಮಾಡಲಾಗುತ್ತದೆ.

ವರ್ಣ ವಿನ್ಯಾಸ ವಿಚ್ಛಿತ್ತಿ ಪದ ಸಂಧಾನ ಸಂಪದಾ
ಸ್ವಲ್ಪಯಾ ಬಂಧಸೌಂದರ್ಯಂ ಲಾವಣ್ಯಮಭಿಧೀಯತೇ[32]

ವರ್ಣಗಳ ವಿನ್ಯಾಸ ಹಾಗೂ ಪದಯೋಜನೆಯಲ್ಲಿಯ ಅತ್ಯಲ್ಪ ಶೋಭೆಯಿಂದ ಉಂಟಾಗುವ ವಾಕ್ಯ ರಚನೆಯ ಮನೋಹರತೆಯು ಬಂಧ ಸೌಂದರ್ಯಕ್ಕೆ ಕಾರಣವಾದಾಗ ಅದು 'ಲಾವಣ್ಯ'ವೆಂಬ ಗುಣವೆನಿಸುತ್ತದೆ [32]

ಬಂಧ ಎಂದರೆ ವಾಕ್ಯವಿನ್ಯಾಸ ಎಂದರ್ಥ. ಅದರ ಸೌಂದರ್ಯ ಎಂದರೆ ರಮಣೀಯತೆಯು 'ಲಾವಣ್ಯ'ವೆನಿಸುತ್ತದೆ. ಅದು ಹೇಗೆ ಎಂದರೆ, ಒಂದು ಕಡೆ ವರ್ಣಗಳ ವಿಚಿತ್ರ ಸಂಘಟನೆಯ ಸೌಂದರ್ಯ ಹಾಗೂ ಇನೊಂದು ಕಡೆ ವಿಭಕ್ತ್ಯಂತ ಅಥವಾ ಧಾತ್ವಂತ ಪದಗಳ ಸಂಯೋಜನೆಯ ಸೌಂದರ್ಯದಿಂದ ಶೋಭಿತವಾದ್ದು. ಉಭಯ ರೂಪ ಸಂಪತ್ತಿಯಿಂದ ಹೊರಹೊಮ್ಮುವ ಸೌಂದರ್ಯ - (1) ವರ್ಣಗಳ ವಿಚಿತ್ರ ವಿನ್ಯಾಸದಿಂದ ಉಂಟಾದ ಶೋಭೆ ಹಾಗೂ (2) ಆ ವರ್ಣಗಳು ಕೂಡಿ ಆಗುವ ಪದ ಸಂಘಟನೆಯಿಂದ ಉಂಟಾಗುವ ಶೋಭೆ. ಆದರೆ ಇವೆರಡೂ ಅಂಶಗಳು (ಘಟಕಗಳು) ಹಿನ್ನೆಲೆಯಲ್ಲಿಯೇ ಇದ್ದು, ಯಾವುದೇ ನಿರ್ಬಂಧವಿಲ್ಲದೆ ಅಥವಾ ಅಧಿಕ ಪ್ರಯಾಸವಿಲ್ಲದೆ ಅಪ್ರಯತ್ನಪೂರ್ವಕವಾಗಿಯೇ ಕವಿಯಿಂದ ರಚಿತವಾದುವು. ಒಟ್ಟಾರೆ ಇದರ ಭಾವವೆಂದರೆ ಶಬ್ದ ಮತ್ತು ಅರ್ಥಗಳ ಸೌಕುಮಾರ್ಯರಿಂದ ಕೂಡಿದ್ದು ರಮಣೀಯವಾದ ವಾಕ್ಯರಚನೆ ಇದ್ದರೆ ಆಗ ಅದು 'ಲಾವಣ್ಯ'ವೆಂಬ ಗುಣವೆನಿಸುತ್ತದೆ.

ಉದಾ :

ಸ್ನಾನಾರ್ದ್ರ ಮುಕ್ತೇಷ್ವನುಧೂಪ ವಾಸಂ
ವಿನ್ಯಸ್ತ ಸಾಯಂತನ ಮಲ್ಲಿಕೇಷು
ಕಾಮೋ ವಸಂತಾತ್ಯಯ ಮಂದ ವೀರ್ಯಃ
ಕೇಶೇಷು ಲೇಭೇ ಬಲಮುಂಗನಾನಾಮ್ [ಲಜ] **[ರಘುವಂಶ 16-50]**

ಮೀಹದಲಿ ನಾಂದ ಕೆದರುಗೇಶವನು
ಧೂಪಧೂಮಕೆ ಒಡ್ಡಿ ಸಂಜೆಮಲ್ಲಿಗೆಯ
ಮುಡಿದಿರಲು ಲಲನೆಯರು
ವಸಂತದಂತ್ಯದೊಳು ಕ್ಷೀಣಬಲ-
ನೆನಿಸಿರ್ದ ಮನುಮಥನು
ಅವರ ಕೇಶದೊಳು ಬಲಗೊಂಡನು [ಲಜ]

ಇಲ್ಲಿ ಪದ ಸಂಘಟನೆಯಿಂದ ಸಾಧಿತವಾಗಿರುವ ಸೌಂದರ್ಯ ಎಂಥದೆಂಬುದು ಕೇವಲ ಸಹೃದಯರ ಹೃದಯ ಸಂವೇದನೆಗೆ ಮಾತ್ರ ನಿಲುಕುವಂಥದು. ಅದನ್ನು ಶಬ್ದಗಳಲ್ಲಿ ವ್ಯಕ್ತಪಡಿಸಲಾಗದು. ಅಥವಾ ಇನ್ನೊಂದು ಉದಾಹರಣೆ

ಚಕಾರ ಬಾಣೈರಸುರಾಂಗನಾನಾಮ್ ಗಂಡಸ್ಥಲೀ : ಪ್ರೋಷಿತ ಪತ್ರಲೇಖಾಃ [೮೬]

ಅಸುರ ವನಿತೆಯರ ಕದಪುಗಳ
ಮೇಲಿರ್ದ ಮಕರಿಕಾ ಪತ್ರಗಳನು
ಕಣೆಯೆಸೆದು ಅಳಿಸಿದ ಕಕುತ್ಸ್ಥನಿವನು [೮೬] [ರಘುವಂಶ 6-72]

[ರಘುವಂಶದ ಇಂದುಮತೀ ಸ್ವಯಂವರ ಪ್ರಕರಣದಲ್ಲಿ ಇಂದುಮತಿಗೆ ರಾಜಾ ಕಕುತ್ಸ್ಥನ ಪರಿಚಯ ಮಾಡಿಸುತ್ತ ಸುನಂದೆಯು, ಬಾಣಗಳಿಂದ ರಾಕ್ಷಸರನ್ನು ಕೊಂದು ರಾಕ್ಷಸ ಪತ್ನಿಯರ, ಕಪೋಲಗಳಿಂದ ಮಕರಿಕಾ ಪತ್ರಗಳನ್ನು ಶಾಶ್ವತವಾಗಿ ಅಳಿಸಿದವನು ಎಂದು ಹೇಳುವ ಸಂದರ್ಭ]

ಇಲ್ಲಿಯೂ ವರ್ಣವಿನ್ಯಾಸ ಶೋಭೆ, ಮತ್ತು ಪದ ಸಂಘಟನಾ ಶೋಭೆಗಳು ವಾಕ್ಯರಚನಾ ಸೌಂದರ್ಯದ ಅದ್ಭುತ ಸೌಂದರ್ಯಕ್ಕೆ ಕಾರಣವಾಗಿರುವುದು ಸ್ಪಷ್ಟವೇ ಇದೆ.

'ಲಾವಣ್ಯ' ಗುಣದ ವರ್ಣನೆಯ ನಂತರ, ನಾಲ್ಕನೇ ಗುಣವಾದ ಅಭಿಜಾತ್ಯವನ್ನು ವರ್ಣಿಸಲಾಗುವುದು.

ಶ್ರುತಿಪೇಶಲತಾಶಾಲಿ ಸುಸ್ಪರ್ಶಮಿವ ಚೇತಸಾ
ಸ್ವಭಾವಮಸೃಣಚ್ಛಾಯಮಾಭಿಜಾತ್ಯಂ ಪ್ರಚಕ್ಷತೇ[33]

ಕೇಳಲು ರಮಣೀಯವಾದ, ಮನಸ್ಸಿಗೆ ಅತ್ಯಂತ ಸುಂದರ ಸ್ಪರ್ಶವೆಂಬಂತಿರುವ ಮತ್ತು ಸ್ವಭಾವತಃ ಸ್ನಿಗ್ಧ ಕಾಂತಿಯಿಂದ ಕೂಡಿದ ಒಂದು ಗುಣವು 'ಅಭಿಜಾತ್ಯ'ವೆನಿಸುತ್ತದೆ.

ಈ ಮೇಲೆ ಹೇಳಿದ ಎಲ್ಲ ಗುಣಲಕ್ಷಣಗಳಿಂದ ಕೂಡಿರುವ ಭಾಗವು ಅಭಿಜಾತ್ಯಗುಣದಿಂದ ಕೂಡಿದೆ ಎನಿಸುತ್ತದೆ. ಎಲ್ಲಕ್ಕಿಂತ ಮೊದಲಿಗೆ, ಶ್ರವಣೇಂದ್ರಿಯವಾದ ಕಿವಿಗೆ ಕೇಳಿದಾಗ ಅತ್ಯಂತ ರಮಣೀಯವೆಂಬ ಭಾವ ಉಂಟಾಗಬೇಕು. ಎರಡನೆಯದಾಗಿ ಮನಸ್ಸು ಅದನ್ನಪ್ಪಿಕೊಂಡು ಸುಖಸ್ಪರ್ಶದ ಭಾವ ಉಂಟಾದಂತೆನಿಸಬೇಕು. ಯಾವುದೇ ತೊಡಕಿಲ್ಲದೆ ಮನಸ್ಸು ನಿರಾಯಾಸವಾಗಿ ಅದನ್ನು ಗ್ರಹಿಸುವಂತಿರಬೇಕೆಂಬುದೇ ಈ ರೂಪಕದ ಭಾವ. ಸ್ಪರ್ಶ ಯೋಗ್ಯತೆ ಹಾಗೂ ಸೌಕುಮಾರ್ಯ ಎರಡೂ ಮನಸ್ಸಿಗೆ ಅತ್ಯಂತ ಹೃದ್ಯವಾದ ಸುಖ ಸ್ಪರ್ಶದ ಭಾವವನ್ನು ತಂದುಕೊಡುತ್ತವೆ. ಹೀಗೆ ಸ್ವಾಭಾವಿಕವಾದ ಸ್ನಿಗ್ಧ ಕಾಂತಿಯಿಂದ ಕೂಡಿರುವ ಗುಣವು ಅಭಿಜಾತ್ಯವೆನಿಸುತ್ತದೆ.

ಉದಾ :

ಜ್ಯೋತಿರ್ಲೇಖಾವಲಯಿ ಗಲಿತಂ ಯಸ್ಯಬರ್ಹ ಭವಾನೀ
ಪುತ್ರಪ್ರೀತ್ಯಾ ಕುವಲಯದಲಪ್ರಾಪಿ ಕರ್ಣೇ ಕರೋತಿ [೮೭] [ಮೇಘದೂತ -1-44]

ಕೆಳಗುದುರಿದಾ ಕಾಂತಿಲೇಖಾವಲಯ
ವಿನ್ಯಾಸದಾ ನವಿಲುಗರಿಯನು ಗಿರಿಜೆ
ನಲವಿಂದ ಪುತ್ರಪ್ರೇಮದಲಿ
ನೈದಿಲೆಯ ದಳದೊಡನೆ
ತನ್ನ ಕಿವಿಯೊಳಿರಿಸಿದಳು [೮೭]

[ಕಾಳಿದಾಸನ ಮೇಘದೂತದಲ್ಲಿ, ದೇವಗಿರಿಯ ಮೇಲೆ ನಿಂತ ಸ್ವಾಮಿ ಕಾರ್ತಿಕೇಯನ ವಾಹನವಾದ ಮಯೂರವನ್ನು ನರ್ತಿಸಲು ಮೇಘವು ಪ್ರೇರಿಸಬೇಕೆಂದು ಯಕ್ಷ ಮೇಘದೊಡನೆ ಆ ಮಯೂರದ ವಿಶೇಷತೆಯನ್ನು ಹೀಗೆ ಬಣ್ಣಿಸುತ್ತಾನೆ]

ಇಲ್ಲಿ ಶ್ರುತಿ ಮಾಧುರ್ಯವೇ ಮೊದಲಾದ ಹಾಗೂ ಸ್ವಭಾವತಃ ಸ್ನಿಗ್ಧ ಕಾಂತಿಯುಕ್ತತೆಯ ಒಂದು ಅಪೂರ್ವತೆ, ಸಹೃದಯನ ಹೃದಯಕ್ಕೆ ಸಂವೇದ್ಯವಾಗುವ ರೀತಿಯಲ್ಲಿ ಹೊಳೆಯುತ್ತದೆ.

ಈ ಹಂತದಲ್ಲಿ - ಲಾವಣ್ಯ ಮತ್ತು ಅಭಿಜಾತ್ಯಗಳೆರಡೂ ಲೋಕೋತ್ತರ ಸ್ತ್ರೀ ಸೌಂದರ್ಯವನ್ನು ವರ್ಣಿಸುವ ವಿಶಿಷ್ಟ ವಸ್ತು ಧರ್ಮಗಳೆಂದು ಹೆಸರಾಗಿರುವಲ್ಲಿ, ಅವು ಕಾವ್ಯದ ಗುಣ ಲಕ್ಷಣಗಳಾಗಲು ಹೇಗೆ ಸಾಧ್ಯ ಎಂದು (ಪೂರ್ವ ಪಕ್ಷದವರು) ಆಕ್ಷೇಪವೆತ್ತಬಹುದು. ಆದರೆ ಈ ಆಕ್ಷೇಪದಲ್ಲಿ ಹುರುಳಿಲ್ಲ. ಕಾರಣ ಈ ತರ್ಕವನ್ನು ಒಪ್ಪಿದರೆ, ಈಗಾಗಲೇ ಕಾವ್ಯಗುಣಗಳೆಂದು ಸ್ವೀಕೃತವಾಗಿರುವ, ಮಾಧುರ್ಯ ಮತ್ತು ಪ್ರಸಾದ ಗುಣಗಳು ಕಾವ್ಯ ಧರ್ಮಗಳಾಗಿ ಉಳಿಯುವುದಿಲ್ಲ. ಕಾರಣ, ಮಾಧುರ್ಯವೆಂಬ ಗುಣ, ವಾಸ್ತವವಾಗಿ ರುಚಿಯಲ್ಲಿ ಮಧುರವಾಗಿರುವ ಬೆಲ್ಲ (ಸಕ್ಕರೆ) ಇತ್ಯಾದಿ ವಸ್ತುಗಳ ಗುಣಸ್ವಭಾವವೆಂದು ಈಗಾಗಲೇ ಹೆಸರಾಗಿದೆ. ಆದರೂ ಅವು ಅದೇ ರೀತಿಯ ಆಹ್ಲಾದವನ್ನುಂಟು ಮಾಡುತ್ತವೆಂಬ ರುಚಿ ಸಾದೃಶ್ಯದಿಂದ ಆಲಂಕಾರಿಕ ಅರ್ಥದಲ್ಲಿ ಅವನ್ನು ಕಾವ್ಯಕ್ಕೂ ಆರೋಪಿಸಲಾಗಿದೆ. ಅದೇ ರೀತಿ, ಸ್ವಚ್ಛ ಜಲ ಅಥವಾ ಸ್ಫಟಿಕದ ಹರಳಿನ ಸ್ವಭಾವ ಧರ್ಮವೆಂದು ಹೆಸರಾಗಿರುವ ಪ್ರಸಾದ ಗುಣವೂ ಪ್ರತಿಫಲಿಸುತ್ತದೆಂಬ ರೂಪಸಾದೃಶ್ಯದ ಆಧಾರದ ಮೇಲೆ ಕೇಳಿದ ಕೂಡಲೇ ಅರ್ಥಪ್ರತೀತಿಯನ್ನುಂಟು ಮಾಡುತ್ತದೆಂಬ ರಮಣೀಯತೆಯನ್ನು ಪಡೆದುಕೊಂಡಿತು. ಅದೇ ರೀತಿ ವಿವಿಧ ಆಭರಣಗಳಿಂದ ಕಲಾತ್ಮಕವಾಗಿ ಅಲಂಕೃತಗೊಂಡ ಸುಂದರಿಯ ಸೌಂದರ್ಯವು ಜನರನ್ನು ಮರುಳುಗೊಳಿಸುವಂತೆ, ಕಾವ್ಯದಲ್ಲಿ ಕವಿಯ ಸಹಜ ಪ್ರತಿಭಾ ಕೌಶಲದಿಂದಾಗಿ ವಾಕ್ಯ ವಿನ್ಯಾಸದ ಸೌಂದರ್ಯವು ನೂತನ ಕಾಂತಿಯಿಂದ ಉಜ್ವಲತೆಯನ್ನು ಪಡೆದುಕೊಳ್ಳುವುದನ್ನು ಹಾಗೂ ಅದು ಸಹೃದಯರಿಗೆ ತಂದುಕೊಡುವ ಅಪೂರ್ವ ಆನಂದವನ್ನು ಲಾವಣ್ಯ ಎಂಬ ಶಬ್ದವನ್ನು ಬಿಟ್ಟು ಬೇರಾವುದೇ ಶಬ್ದವು ವ್ಯಕ್ತಪಡಿಸಲಾರದು. ಹಾಗೆಯೇ ಕಾವ್ಯದಲ್ಲಿಯ ಸ್ವಾಭಾವಿಕ ಸ್ನಿಗ್ಧ ಕಾಂತಿಯನ್ನು ವಿಶೇಷವಾಗಿ ಅಭಿಜಾತ್ಯ ಶಬ್ದವು ಅಭಿವ್ಯಕ್ತಿಸುತ್ತದೆ [ರಮಣಿಯರ ಅಲೌಕಿಕ ಸಹಜ ಸ್ನಿಗ್ದ ಕಾಂತಿಯನ್ನು "ಅಭಿಜಾತ್ಯ" ಎಂದು ಕರೆಯುವಂತೆ].

ವನಿತೆಯರ ಲಾವಣ್ಯದೊಂದಿಗೆ ಸಾದೃಶ್ಯವಿರುವ ಕಾರಣದಿಂದಾಗಿ, ಪ್ರತೀಯಮಾನ ವಸ್ತುವನ್ನೇ ಲಾವಣ್ಯವೆಂದು ಕರೆಯಲಾಗಿದೆ.

ಪ್ರತೀಯಮಾನಂ ಪುನರನ್ಯದೇವ
ವಸ್ತ್ವಸ್ತಿ ವಾಣೀಷು ಮಹಾಕವೀನಾಮ್
ಯತ್‌ತತ್ ಪ್ರಸಿದ್ಧಾವಯವಾತಿರಿಕ್ತಂ
ವಿಭಾತಿ ಲಾವಣ್ಯಮಿವಾಂಗನಾಸು [೮೮] [ಧ್ವನ್ಯಾಲೋಕ -1-4]

ಮಹಾಕವಿಗಳ ವಾಣಿಯಲ್ಲಿ ಪ್ರತೀಯಮಾನವೇ ಆದ ಮತ್ತೊಂದು ವಸ್ತು ಇರುತ್ತದೆ. ಅದು ಲಲನೆಯರ ಲಾವಣ್ಯದ ಹಾಗೆ ಪ್ರಸಿದ್ಧವಾದ ಅವಯವಗಳ ಚೆಲವಿಕೆಗಿಂತ ಬೇರೆಯಾಗಿಯೇ ಪ್ರಕಾಶಿಸುತ್ತದೆ. [೮೮]

ಹಾಗಾದರೆ ನೀವು ಬಂಧ ಸೌಂದರ್ಯವನ್ನೇ ಲಾವಣ್ಯವೆಂದು ಹೇಗೆ ಹೇಳಿದಿರಿ? ಹಾಗಾದರೆ ಇದಕ್ಕೆ ನಾವು ಉತ್ತರಿಸುತ್ತೇವೆ. ಇದೇನೂ ದೋಷವಲ್ಲ. ಕಾರಣ ಈ ದೃಷ್ಟಾಂತದ ಮೂಲಕ (ಆನಂದವರ್ಧನ) ವಾಚ್ಯ-ವಾಚಕ ಮತ್ತು ಲಕ್ಷಣಗಳಿಂದ ಭಿನ್ನವಾದ 'ಪ್ರತೀಯಮಾನ'ದ ಸ್ವತಂತ್ರ ಅಸ್ತಿತ್ವವನ್ನು ಪ್ರತಿಪಾದಿಸಲಾಗುತ್ತಿದೆ. ಹಾಗಲ್ಲದೆ ಚೆಲುವನ್ನು ಕಾಣಬಲ್ಲ ಕಣ್ಣುಗಳ, ಲೋಕದ ಸಮಸ್ತ ಜನರೂ ತಮ್ಮ ಕಣ್ಣಿನಿಂದ ಸಂವೇದನೆ ಮಾಡಿಕೊಳ್ಳಬಹುದಾದ ಲಲನೆಯರ ಲಾವಣ್ಯದ ಬಗ್ಗೆ ಏನನ್ನೂ ಪ್ರತಿಪಾದಿಸುವುದಿಲ್ಲ. ಅಲ್ಲದೆ ಲಲನೆಯರ ಲಾವಣ್ಯದೊಂದಿಗೆ, ಕೇವಲ ಸಹೃದಯರು ತಮ್ಮ ಹೃದಯದ ಮೂಲಕ ಮಾತ್ರ ಸಂವೇದಿಸಿಕೊಳ್ಳಬಹುದಾದ ಪ್ರತೀಯಮಾನ ಅರ್ಥವನ್ನು ಸಮೀಕರಿಸುತ್ತಿಲ್ಲ [ಅಂದರೆ ಲಲನೆಯರ ಲಾವಣ್ಯವನ್ನು ಎಲ್ಲರೂ ಅರಿಯಬಲ್ಲರು. ಆದರೆ ಪ್ರತೀಯಮಾನ ಅರ್ಥದ ಅನುಭವವನ್ನು ಕೇವಲ ಸಹೃದಯರು ಮಾತ್ರ ತಂದುಕೊಳ್ಳಬಲ್ಲರು. ಅಂದ ಮೇಲೆ ಅವೆರಡೂ ಸಮಾನ ಹೇಗಾಗುತ್ತವೆ? ಆದ್ದರಿಂದ ಆನಂದವರ್ಧನನು ಕೇವಲ ಪ್ರಸಿದ್ಧವಾದ ಉಪಮಾದಿ ವಾಚ್ಯರೂಪ ಅವಯವಗಳಿಗಿಂತ ಭಿನ್ನವಾದ ಪ್ರತೀಯಮಾನ ವಸ್ತುವಿನ ಅಸ್ತಿತ್ವವನ್ನು ಸೂಚಿಸಿದ್ದಾನೆ] ಹಾಗೆ ನೋಡಿದರೆ, ಕಾವ್ಯದ ಬಂಧ ಸೌಂದರ್ಯವೊಂದೇ ಕೇವಲ ಶ್ರವಣಮಾತ್ರದಿಂದಲೇ ಪದಾರ್ಥಗಳ ವಿಷಯದಲ್ಲಿ ಅನಭಿಜ್ಞರಾದವರ ಹೃದಯವನ್ನು ಕೂಡ ಅಪಹರಿಸಿಬಿಡುತ್ತದೆ ಎನ್ನುವ ಕಾರಣದಿಂದಲೇ ಅದು ಲಾವಣ್ಯವೆಂದು ಕರೆಸಿಕೊಳ್ಳಲು ಸರ್ವರೀತಿಯಲ್ಲೂ ಅರ್ಹವಾಗಿದೆ. ಆದರೆ ಅದೇ ಪ್ರತೀಯಮಾನ ಅರ್ಥವು ಕಾವ್ಯದ ಪರಮಾರ್ಥವನ್ನು ಬಲ್ಲ ಕೆಲವೇ ಕೆಲವರ ಅನುಭವದ ಪರಿಧಿಯಲ್ಲಿ ಬರುವಂಥದು. ಲಲನೆಯರ ವಿಷಯದಲ್ಲೂ ಸೌಂದರ್ಯದ ಈ ಎರಡು ಅಂಶಗಳಿಗೆ ಸಂಬಂಧಿಸಿದಂತೆ ಪೃಥಕ್ಕರಿಸಬಹುದು. ಕಾಮಿನಿಯರನ್ನು ಉಪಭೋಗಿಸುವ ಸಾಮರ್ಥ್ಯ ಹೊಂದಿದ ನಾಯಕರಿಗೆ ಮಾತ್ರ ಸಂವೇದ್ಯವಾಗುವಂಥ ಅವರ ಅದ್ಭುತ ಸೌಂದರ್ಯ ಒಂದಾದರೆ, ಲೋಕದಲ್ಲಿ ಸಮಸ್ತರ ಅನುಭವಕ್ಕೂ ನಿಲುಕಬಹುದಾದ ಅವರ ಲಾವಣ್ಯ-ಶ್ರೇಷ್ಠ ಕವಿಗಳ ವಾಣಿಯಲ್ಲಿ ಕಂಡುಬರುವ ಸೌಂದರ್ಯದಂತೆ. ಇದೆಲ್ಲವನ್ನೂ ಈಗಾಗಲೇ ವಿವರಿಸಿರುವುದರಿಂದ ಮತ್ತೂ ವಿವರಿಸುವುದು ಬೇಕಿಲ್ಲ.

'ಸುಕುಮಾರ ಮಾರ್ಗದ' ಲಕ್ಷಣವನ್ನು ವರ್ಣಿಸಿಯಾದ ಮೇಲೆ, 'ವಿಚಿತ್ರ' ಮಾರ್ಗದ ಲಕ್ಷಣವನ್ನು ವಿವರಿಸಲಾಗುವುದು.

ಪ್ರತಿಭಾ ಪ್ರಥಮೋದ್ಭೇದ ಸಮಯೇ ಯತ್ರವಕ್ರತಾ
ಶಬ್ದಾ ಭಿಧೇಯಯೋ ರಂತಃ ಸ್ಫುರತೀವ ವಿಭಾವ್ಯತೇ(34)

ಎಲ್ಲಿ ಪ್ರತಿಭೆಯ ಪ್ರಥಮ ಪರಿಸ್ಪಂದ (ಉಲ್ಲೇಖದ)ದ ಸಮಯದಲ್ಲೇ ಶಬ್ದ ಮತ್ತು ಅರ್ಥಗಳಿಗೆ ಸಂಬಂಧಿಸಿದಂತೆ ಉಕ್ತಿ ವೈಚಿತ್ರ್ಯ ರೂಪದ ವಕ್ರತೆಯು ಅಂತರಾಳದಿಂದ ಸ್ಫುರಿತವಾಗುತ್ತಿರುವಂತೆ ಭಾಸವಾಗುತ್ತದೆಯೋ, (34)

ಅಲಂಕಾರಸ್ಯ ಕವಯೋ ಯತ್ರಾಲಂಕರಣಾಂತರಮ್
ಅಸಂತುಷ್ಟಾ ನಿಬಧ್ನಂತಿ ಹಾರಾದೇರ್ಮಣಿಬಂಧವತ್(35)

ಎಲ್ಲಿ ಕವಿಗಳು ಒಂದು ಅಲಂಕಾರದಿಂದ ಸಂತುಷ್ಟರಾಗದೆ, ಹಾರಗಳಲ್ಲಿ ಮಣಿಗಳನ್ನು ಪೋಣಿಸಿದಂತೆ ಅಲಂಕಾರಗಳ ಮೇಲೆ ಅಲಂಕಾರಗಳನ್ನು ಪೇರಿಸುತ್ತಾ ಹೋಗುತ್ತಾರೋ (35)

ರತ್ನ ರಶ್ಮಿ ಚ್ಛಟೋತ್ಸೇಕ ಭಾಸುರೈರ್ಭೂಷಣೈರ್ಯಥಾ
ಕಾಂತಾಶರೀರಮಾಚ್ಛಾದ್ಯ ಭೂಷಾಯೈ ಪರಿಕಲ್ಪ್ಯತೇ[36]

ಯತ್ರ ತದ್ವದಲಂಕಾರೈರ್ಭ್ರಾಜ ಮಾನೈರ್ನಿಜಾತ್ಮನಾ
ಸ್ವಶೋಭಾತಿಶಯಾಂತಃಸ್ಥ ಮಲಂಕಾರ್ಯಂ ಪ್ರಕಾಶತೇ[37]

ರತ್ನ ರಶ್ಮಿಗಳ ಶೋಭೆಯಿಂದ ಹೊಳೆಯುತ್ತಿರುವ ಆಭರಣಗಳಿಂದ ಪ್ರಿಯೆಯ ಶರೀರವನ್ನು ಇಡಿಯಾಗಿ ಅಲಂಕೃತಗೊಳಿಸುವ ಹಾಗೆ, ತಮ್ಮ ಅತಂರ್ಗತವಾದ ಅಧಿಕ ಶೋಭೆಯನ್ನು ಹೊರಸೂಸುತ್ತಿರುವ ಉಜ್ವಲವಾದ ಅಲಂಕಾರಗಳು, ಅಲಂಕಾರ್ಯವು ಪ್ರಕಾಶಿತಗೊಳ್ಳುವಂತೆ ಎಲ್ಲಿ ಮಾಡುತ್ತಿವೆಯೋ [36-37]

ಯದಪ್ಯನೂತನೋಲ್ಲೇಖಂ ವಸ್ತು ಯತ್ರ ತದಪ್ಯಲಮ್
ಉಕ್ತಿ ವೈಚಿತ್ರ್ಯಮಾತ್ರೇಣ ಕಾಷ್ಠಾಮ್ ಕಾಮಪಿ ನೀಯತೇ [38]

ಎಲ್ಲಿ ನೂತನವಲ್ಲದ ಹಳಸಲಾದ ವಸ್ತುವನ್ನು ಕೂಡ, ಉಕ್ತಿ ವೈಚಿತ್ರ್ಯ ಮಾತ್ರದಿಂದಲೇ ಸೌಂದರ್ಯದ ಪರಾಕಾಷ್ಠೆಗೆ ತಲುಪಿಸಲಾಗುತ್ತದೆಯೋ [38]

ಯತ್ರಾನ್ಯಥಾಭವತ್ ಸರ್ವಮನ್ಯಥೈವ ಯಥಾರುಚಿ
ಭಾವ್ಯತೇ ಪ್ರತಿಭೋಲ್ಲೇಖಮಹತ್ವೇನ ಮಹಾಕವೇಃ [39]

ಎಲ್ಲಿ ಯಾವುದೋ ರೀತಿಯಲ್ಲಿರುವ ವಸ್ತುಗಳೆಲ್ಲವೂ ಮಹಾಕವಿಯ ಪ್ರತಿಭೆಯ ಉನ್ಮೇಷದ ಅತಿಶಯತೆಯಿಂದ ಅವನ ಇಚ್ಛೆಯ ಮೇರೆಗೆ ಬೇರೊಂದೇ ರೀತಿಯಲ್ಲಿ ವರ್ಣಿತವಾಗಿ ಶೋಭೆಯನ್ನು ಪಡೆದುಕೊಳ್ಳುತ್ತವೆಯೋ [39]

ಪ್ರತೀಯಮಾನತಾ ಯತ್ರ ವಾಕ್ಯಾರ್ಥಸ್ಯ ನಿಬಧ್ಯತೇ
ವಾಚ್ಯವಾಚಕ ವೃತ್ತಿ ಭ್ಯಾಮ್ ವ್ಯತಿರಿಕ್ತ ಸ್ಯ ಕಸ್ಯಚಿತ್[40]

ಎಲ್ಲಿ ವಾಕ್ಯಾರ್ಥದ ಪ್ರತೀಯ ಮಾನತೆಯು, ಈಗಾಗಲೇ ಪ್ರಸಿದ್ಧವಾಗಿರುವ (ಚಿರಪರಿಚಿತ

ವಾಗಿರುವ) ವಾಚ್ಯ ಮತ್ತು ವಾಚಕ ವೃತ್ತಿಗಳಿಗಿಂತ (ಶಬ್ದಶಕ್ತಿ ಮತ್ತು ಅರ್ಥಶಕ್ತಿ) ಭಿನ್ನವಾದ ವ್ಯಂಗ್ಯ ರೂಪದಿಂದ ಯೋಜಿತವಾಗುತ್ತದೋ (40)

ಸ್ವಭಾವಃ ಸರಸಾಕೂತೋ ಭಾವಾನಾಮ್ ಯತ್ರ ಬಧ್ಯತೇ
ಕೇನಾಪಿ ಕಮನೀಯೇನ ವೈಚಿತ್ರ್ಯೇಣೋಪ ಬೃಂಹಿತಃ [41]

ಎಲ್ಲಿ ರಸಭಾವಗಳಿಂದ ತುಂಬಿ ತುಳುಕುತ್ತಿರುವ ಪದಾರ್ಥಗಳ ನಿಜ ಸ್ವಭಾವವು ವಿಶಿಷ್ಟ ನೂತನ ಸೌಂದರ್ಯದಿಂದ ವರ್ಧಿಸಲ್ಪಟ್ಟಿದೆಯೋ (41)

ವಿಚಿತ್ರೋ ಯತ್ರ ವಕ್ರೋಕ್ತಿ ವೈಚಿತ್ರ್ಯಂ ಜೀವಿತಾಯತೇ
ಪರಿಸ್ಫುರತಿ ಯಸ್ಯಾಂತಃ ಸಾ ಕಾಪ್ಯತಿಶಯಾಭಿಧಾ [42]

ಸೋಽತಿದುಃ ಸಂಚರೋ ಯೇನ ವಿದಗ್ಧ ಕವಯೋ ಗತಾಃ
ಖಡ್ಗಧಾರಾ ಪಥೇನೇವ ಸುಭಟಾನಾಮ್ ಮನೋರಥಾಃ [43]

ವಕ್ರೋಕ್ತಿಯ ವೈಚಿತ್ರ್ಯವೇ ಪ್ರಾಣವಾಗಿರುವ ಮಾರ್ಗ ಈ ವಿಚಿತ್ರ ಎಂಬ ಹೆಸರಿನ ಮಾರ್ಗ. ಅದರೊಳಗೆ ಯಾವಾಗಲೂ ಯಾವುದೋ ಒಂದು ಅತಿಶಯೋಕ್ತಿಯ ಸಂಚಾರವಿರುತ್ತದೆ.

ವಕ್ರೋಕ್ತಿಯ ಈ 'ವಿಚಿತ್ರ' ಮಾರ್ಗ ಸಂಚರಿಸಲು ಅತ್ಯಂತ ದುಷ್ಕರವಾದುದು. ಖಡ್ಗಧಾರಾಪಥದಂತಿರುವ ಈ ಕಠಿಣ ಮಾರ್ಗದಲ್ಲಿ ಸುಭಟರ ಮನೋರಥಗಳು ಚಲಿಸುವ ಹಾಗೆ ಅನೇಕ ವಿದಗ್ಧ ಕವಿಗಳು ನಡೆದು ಹೋಗಿದ್ದಾರೆ. [42-43]

ಆ 'ವಿಚಿತ್ರ' ಮಾರ್ಗ ಯಾವ ರೀತಿಯದು? ಅತಿ ದುಃಸಂಚರವಾದ್ದು, ಅರ್ಥಾತ್ ಸಂಚರಿಸಲು ಅತ್ಯಂತ ಕಷ್ಟದಾಯಕವಾದುದು. ಹೆಚ್ಚು ಮಾತಿನಿಂದೇನು? ಈ ಮಾರ್ಗದಲ್ಲಿ ವಿದಗ್ಧರಾದ ಕವಿಜನರು ಅಂದರೆ ಕೇವಲ ಕೆಲವೇ ವ್ಯುತ್ಪನ್ನರಾದ ಜನರು (ಕವಿಗಳು) ಸಾಗಿದ್ದಾರೆ; ಅಂದರೆ ಈ ಮಾರ್ಗವನ್ನು ಆಶ್ರಯಿಸಿ ಕಾವ್ಯಗಳನ್ನು ರಚಿಸಿದ್ದಾರೆ. ಯಾವ ರೀತಿಯಲ್ಲಿ? ಖಡ್ಗಧಾರಾಪಥದಲ್ಲಿ ಸಾಗುವ ಸುಭಟರ ಮನೋರಥಗಳ ಹಾಗೆ. ಇಲ್ಲಿ ಈ ಮಾತಿನ ಅಭಿಪ್ರಾಯವೆಂದರೆ ಔಚಿತ್ಯವರಿತು ಖಡ್ಗಧಾರಾ ಪಥದಲ್ಲಿ ಕ್ರಮಿಸತೊಡಗಿದ ಮನೋಭಿಲಾಷೆ (ಮನೋರಥ)ಗಳು ಇಷ್ಟಬಂದಂತೆ ಚಲಿಸಬಹುದು; ಆದರೆ ಅವುಗಳಿಗೆ ಕಿಂಚಿತ್ತೂ ಮ್ಲಾನಗೊಳ್ಳುವ ಸಂಭವವಿಲ್ಲ. ಒಂದು ವೇಳೆ ಭೀಕರ ರಣರಂಗದಲ್ಲಿ ನೇರವಾಗಿ ಭಾಗವಹಿಸಬೇಕಾಗಿ ಬಂದರೆ ಕೆಲವಕ್ಕೆ ನಿರಾಶೆಯನ್ನಪ್ಪುವ ಸಂಭವ ಬರಬಹುದು. (ಖಡ್ಗಧಾರಾಪಥದಲ್ಲಿ ಸಾಗುವಾಗ ಮ್ಲಾನತೆಯಂತೂ ಉಂಟಾಗುವುದಿಲ್ಲ). ಈ ಮಾರ್ಗ ಕ್ರಮಿಸಲು ಎಷ್ಟು ದುರ್ಗಮವಾದುದು ಹಾಗೂ ಈ ಮಾರ್ಗವನ್ನು ಆಯ್ದುಕೊಂಡ ಕವಿಗಳಿಗೆ ಇದರಲ್ಲಿ ಇರುವ ವಿಹರಣ ಪ್ರೌಢಿಮೆ ಎಷ್ಟೆಂಬುದನ್ನು ಈ: ಉಪಮೆ ಪ್ರತಿಪಾದಿಸುತ್ತದೆ.

ಈ ವಿಚಿತ್ರ ಮಾರ್ಗ ಇನ್ನೆಂಥದು? ಅದರ ಶಬ್ದ ಮತ್ತು ಅರ್ಥಗಳ ಅಂತರಗಂದಲ್ಲಿ ಎದ್ದು ಕಾಣುವಂತೆ ಮಾತಿನ ವೈಚಿತ್ರ್ಯವೊಂದು (ಸೌಂದರ್ಯ) ಹೊಳೆಯುತ್ತಿರುವಂತೆ ತೋರುತ್ತದೆ. ಅದೂ ಯಾವ ಸಮಯದಲ್ಲಿ? ಕವಿ ಪ್ರತಿಭೆಯ ಪ್ರಥಮ ಉಲ್ಲೇಖದ ಸಮಯದಲ್ಲೇ, ಅದೂ

ಕವಿಯ ಯಾವ ಪ್ರಯತ್ನವೂ ಇಲ್ಲದೆ ಸ್ವಾಭಾವಿಕವಾಗಿ ಶಬ್ದ ಮತ್ತು ಅರ್ಥಗಳ ವಕ್ರತೆಯ ಸಹಜ ಪ್ರಕಾರವೊಂದು ಸ್ಫುರಿತವಾಗುವಂತೆ ಭಾಸವಾಗುತ್ತದೆ.

ಕೋಽಯಂ ಭಾತಿ ಪ್ರಕಾರಸ್ತವ ಪವನ ಪದಂ ಲೋಕಪಾದಾಹತೀನಾಂ
ತೇಜಸ್ವಿ ವ್ರಾತಸೇವ್ಯೇ ನಭಸಿ ನಯಸಿ, ಯತ್ಪಾಂಸುಪೂರಂ ಪ್ರತಿಷ್ಠಾಮ್
ಯಸ್ಮಿನ್ನುತ್ಥಾಪ್ಯಮಾನೇ ಜನನಯನಪಥೋಪದ್ರವಸ್ತಾವದಾಸ್ತಾಮ್
ಕೇನೋಪಾಯೇನ ಸಹ್ಯೋ ವಪುಷಿ ಕಲುಷತಾ ದೋಷ ಏಷ ತ್ವಯ್ಯೈವ [೮೯]
[ಸುಭಾಷಿತಾವಳಿ - 1032]

ಎಲೆ ಗಾಳಿ
ಏನಿದೀ ನಿನ್ನ ರೀತಿ?
ಜನರ ಕಾಲ ತುಳಿತಕೆ ಯೋಗ್ಯವಹ
ಧೂಳಿಯನು
ತೇಜಸ್ವಿಗಳು ಉಪಭೋಗಿಸುವ ಉನ್ನತ
ನಭಕೆ ಸೆಳೆದೊಯ್ವೆ
ಇದರಿಂದ ಜನರ ದೃಷ್ಟಿಪಥಕೊದಗುವ
ಉಪದ್ರವವಂತಿರಲಿ
ನಿನ್ನಯ ಕಾಯಕೊದಗುವ ಕಲುಷತೆಯ
ದೋಷವನದೆಂತು ಸಹಿಸುವೆ ನೀನು? [೮೯]

ಇಲ್ಲಿಯ ಪ್ರಧಾನ ವಾಕ್ಯಾರ್ಥ 'ಅಪ್ರಸ್ತುತ ಪ್ರಶಂಸೆ' ಎಂಬ ಅಲಂಕಾರ. ವಾಕ್ಯದ ಸಂದರ್ಭಾತ್ಮಕ ಅರ್ಥಕ್ಕಿಂತ ಭಿನ್ನವಾದ ಪ್ರತೀಯಮಾನ ಅರ್ಥವೊಂದನ್ನು ಸಂವಹನಮಾಡುವುದು, ಈ ಇಡೀ ವ್ಯಾಖ್ಯಾನದಲ್ಲಿ ಕವಿಯ ಪ್ರಯತ್ನವಾಗಿದೆ. ಅಲ್ಲದೆ [ಯಾರೋ ನಿಮ್ನ ಶ್ರೇಣಿಯವರನ್ನು ಉದ್ಧರಿಸಲು ಹೊರಟಿರುವ ಪರೋಪಕಾರಿ ಮಹಾಪುರುಷನ ವರ್ಣನೆಯ ರೂಪದಲ್ಲಿ] ಕುಶಲನಾದ ಕವಿಯ ಸೃಜನಶೀಲ ಪ್ರತಿಭೆಯ ಸಾಮರ್ಥ್ಯದಿಂದ ನಿಷ್ಪನ್ನವಾದ ವಕ್ರ (ವೈಚಿತ್ರಪೂರ್ಣ) ಶಬ್ದ ಮತ್ತು ಅರ್ಥಗಳ ಸಾರ್ಥಕ ಪ್ರಯೋಗದ ಪರಿಣಾಮವಾಗಿ, ಪ್ರತೀಯಮಾನ ಅರ್ಥಕೂಡ ವಾಚ್ಯಾರ್ಥದಂತಾಗಿ ಬಿಟ್ಟಿದೆ. ಪ್ರಾರಂಭದಲ್ಲಿಯೇ ಓದುತ್ತಿದ್ದಂತೆಯೇ [ಮಹಾಪುರುಷ ಚರಿತ್ರೆಯ ವರ್ಣನೆಯ ರೂಪದ ಪ್ರತೀಯಮಾನ ಅರ್ಥ] ಅರ್ಥವಾಗಿಬಿಡುವುದರಿಂದ ಎರಡು ಅರ್ಥಗಳ ಪ್ರತೀತಿ ಉಂಟುಮಾಡಿಬಿಡುತ್ತದೆಂಬ ಒಂದೇ ಕಾರಣಕ್ಕೆ ಶ್ಲೇಷಾಲಂಕಾರ ಇಲ್ಲಿದೆ ಎಂದು ಹೇಳಲಾಗದು. ಹಾಗೆ ನೋಡಿದರೆ ಎರಡೂ ಅರ್ಥಗಳು ಸಮಪ್ರಾಧಾನ್ಯ ಭಾವ ಹೊಂದಿವೆ. ಪ್ರತೀಯಮಾನ ಅರ್ಥದ ಮೇಲೆ ಬೆಳಕು ಚೆಲ್ಲಿ ಅದನ್ನು ಸ್ಫುಟಗೊಳಿಸುವ ಸಲುವಾಗಿ ದ್ವಂದ್ವಾರ್ಥವುಳ್ಳ ಪದಗಳನ್ನು ಪ್ರಯೋಗಿಸಿರುವುದು ಅತ್ಯಂತ ಚಮತ್ಕಾರಕಾರಿಯಾಗಿದೆ.

'ವಿಚಿತ್ರ' ಮಾರ್ಗದ ಇನ್ನೊಂದು ಲಕ್ಷಣ - "ಅಲಂಕಾರಸ್ಯ ಕವಯೋ .....(35)ದಲ್ಲಿ

ಹೇಳಿರುವಂತೆ ಕವಿಗಳು ಒಂದು ಅಲಂಕಾರದಿಂದ ತೃಪ್ತರಾಗದೆ [ಹಾರದಲ್ಲಿನ ಪ್ರಶಸ್ತಮಣಿಗಳ ಹಾಗೆ] ಮತ್ತೊಂದು ಅಲಂಕಾರವನ್ನು ಪೇರಿಸುತ್ತ ಹೋಗುತ್ತಾರೆ- ಆಭರಣ ಕರ್ತೃಗಳು ಮುಕ್ತಾವಳಿಗಳಲ್ಲಿ ರತ್ನಗಳನ್ನು ವಿನ್ಯಾಸಗೊಳಿಸುವಲ್ಲಿ ಆಸಕ್ತಿ ತೋರುವ ಹಾಗೆ.

ಉದಾ :

ಹೇ! ಹೇಲಾಜಿತ ಬೋಧಿಸತ್ತ್ವ ವಚಸಾಂ ಕಿಂ ವಿಸ್ತರೈಸ್ತೋಯಧೇ
ನಾಸ್ತಿ ತ್ವತ್ಸದೃಶಃ ಪರಃ ಪರಹಿತಾಧಾನೇ ಗೃಹೀತವ್ರತಃ
ತೃಷ್ಯತ್ಪಾಂಥ ಜನೋಪಕಾರ ಘಟನಾ ವೈಮುಖ್ಯಲಬ್ಧಾಯಶೋ
ಭಾರ ಪ್ರೋದ್ವಹನೇ ಕರೋಷಿ ಕೃಪಯಾ ಸಾಹಾಯ್ಯಕಂ ಯನ್ಮರೋಃ [೯೦]

[ಕಾವ್ಯಪ್ರಕಾಶ x]

ಬೋಧಿಸತ್ವನನು ಕೂಡ ಮೀರಿರುವ ನೀರಧಿಯೆ
ಬಲುಮಾತಿನಿಂದೇನು? ನಿನ್ನವೊಲು
ಪರಹಿತ ಸಾಧನೆಯ ವ್ರತ ಹಿಡಿದವರು
ಇನ್ನೊಬ್ಬರಿಲ್ಲ.
ತೃಷಿತ ಪಯಣಿಗರಿಗುಪಕರಿಸುವುದರೊಳು
ವಿಮುಖತೆಯತೋರಿ ಅಪಯಶದ
ಭಾರವನು ಹೊರುವುದರಲಿ
ಕರುಣೆಯಿಂದಲಿ ಮರುಸ್ಥಲಕೆ
ಸಹಾಯಕನು ನೀನಾಗಿರುವೆ! (೯೦)

ಇಲ್ಲಿಯೂ ಕೂಡ ಬೇರೆಯದೇ ಆದ ಅರ್ಥವೊಂದನ್ನು ಮನಸ್ಸಿನಲ್ಲಿಟ್ಟುಕೊಂಡು, ಅರ್ಥಾತ್ ಅತ್ಯಂತ ನಿಂದನೀಯವಾದ ಚಾರಿತ್ರ್ಯವುಳ್ಳ ಜಿಪುಣ ವ್ಯಕ್ತಿಯೊಬ್ಬನನ್ನು, ಪ್ರತೀಯಮಾನ ರೂಪದಲ್ಲಿಟ್ಟುಕೊಂಡು, ಅದೇ ರೀತಿಯ ಗುಣಸ್ವಭಾವವುಳ್ಳ ಸಾಗರವನ್ನು ವಾಚ್ಯರೂಪದಲ್ಲಿ ವರ್ಣಿಸಲಾಗಿದೆ. [ಅಂದರೆ ಧನಾಢ್ಯ ವ್ಯಕ್ತಿಯ ಬಳಿ ಅಪಾರ ಧನವಿದ್ದರೂ ಸ್ವಭಾವತಃ ಅತ್ಯಂತ ಜಿಪುಣನಾಗಿರುವುದರಿಂದ ಬಡವರಿಗೆ ಹಣ ಕೊಟ್ಟು, ಹೇಗೆ ಸಂತುಷ್ಟಗೊಳಿಸಲಾರನೋ, ಅದೇ ರೀತಿ ಸಾಗರವೂ ಅಪಾರ ಜಲರಾಶಿಯಿಂದ ತುಂಬಿದ್ದರೂ, ಕ್ಷಾರವಾದ್ದರಿಂದ ಬಾಯಾರಿ ನೀರಿಗಾಗಿ ತಹತಹ ಪಡುತ್ತಿರುವ ಯಾರೊಬ್ಬ ಪಯಣಿಗನಿಗೂ ನೀರುಣಿಸಿ ಸಂತುಷ್ಟಗೊಳಿಸಲಾರದು] ತಿರುಳಿನಲ್ಲಿ ಇದರ ಸ್ವರೂಪ, 'ಅಪ್ರಸ್ತುತ ಪ್ರಶಂಸೆ' ಎಂಬ ಅಲಂಕಾರದ್ದು, (ಪರೋಕ್ಷ ಕಥನ). ಅಲ್ಲದೆ, ನಿಂದನೀಯ ವಿಚಾರವೇ ಆದರೂ ಅದನ್ನು ಕಂಡ ಹಾಗೆಯೇ ಅತ್ಯಂತ ಸುಂದರವಾಗಿರುವ ಭಾಷೆಯಲ್ಲಿ ಅಡಗಿಸಿ, ಪ್ರತೀಯಮಾನ ರೂಪದಲ್ಲಿ ವ್ಯಕ್ತಪಡಿಸಲು ಹೊರಟ ವಾಕ್ಯವು ಸಹೃದಯರಿಗೆ ಆಹ್ಲಾದವನ್ನುಂಟುಮಾಡುವ ಸಾಮರ್ಥ್ಯವನ್ನು ಪಡೆದುಕೊಳ್ಳುತ್ತದೆ. ಆದ್ದರಿಂದ ಇಲ್ಲಿರುವ ಅಪ್ರಸ್ತುತ ಪ್ರಶಂಸಾಲಂಕಾರವನ್ನು, ಇನ್ನೊಂದು ಅಲಂಕಾರವಾದ ವ್ಯಾಜಸ್ತುತಿ ಎಂಬ ಅಲಂಕಾರದಿಂದ ಅಲಂಕೃತಗೊಂಡ ಅಲಂಕಾರವೆಂದು ಪರಿಗಣಿಸಬಹುದು. [ಅರ್ಥಾತ್ ಕವಿ

ಇಲ್ಲಿ ವಾಚ್ಯ ರೂಪದಿಂದ ವ್ಯಾಜಸ್ತುತಿ ಅಲಂಕಾರವನ್ನು ಯೋಜಿಸಿದ್ದಾನೆ. ವ್ಯಾಜಸ್ತುತಿಯ 'ಸ್ತುತಿನಿಂದಾಭ್ಯಾಮ್ ನಿಂದಸ್ತುತ್ಯೋರ್ಗಮ್ಯತೇ ವ್ಯಾಜಸ್ತುತಿಃ' (ರುಯ್ಯಕ) ಅಂದರೆ ವಾಚ್ಯರೂಪದಲ್ಲಿ ವರ್ಣನೀಯ ವಸ್ತುವಿನ ಸ್ತುತಿ ಮತ್ತು ನಿಂದೆಯ ಮೂಲಕ ಕ್ರಮವಾಗಿ ನಿಂದೆ ಮತ್ತು ಸ್ತುತಿಗಳು ಪ್ರತೀಯಮಾನವಾಗಿದ್ದರೆ ಅಲ್ಲಿ ವ್ಯಾಜಸ್ತುತಿ ಅಲಂಕಾರವಾಗುತ್ತದೆ. ರುಯ್ಯಕನು ಉದಾಹರಣೆಯ ರೂಪದಲ್ಲಿ ಇದೇ ಪದ್ಯವನ್ನು ಉದ್ಧರಿಸಿದ್ದಾನೆ. ಇಲ್ಲಿ ಸ್ತುತಿಯ ಮೂಲಕ ಸಮುದ್ರವನ್ನು ನಿಂದಿಸಲಾಗಿದೆ. ಅರ್ಥಾತ್ ವಾಚ್ಯವಾಗಿ ಸಮುದ್ರವನ್ನು ನಿನ್ನಂಥ ಉಪಕಾರಿ ಇನ್ನಿಲ್ಲ ಎಂದು ಪ್ರಶಂಸಿಸಲಾಗಿದೆ. ಆದರೆ ಅದರ ಗುರಿ, ನೀನೆಷ್ಟು ನೀಚ ಎಂದರೆ ಅಪಾರ ಜಲರಾಶಿಯಿಂದ ತುಂಬಿ ತುಳುಕುತ್ತಿದ್ದರೂ ಕೃಷಿಕರ ಬಾಯಾರಿಕೆಯನ್ನು ಹಿಂಗಿಸಲಾರೆ ಎಂದು ಸಮುದ್ರವನ್ನು ನಿಂದಿಸುವುದು. ಜೊತೆಯಲ್ಲೇ ಕವಿ ಸಮುದ್ರದ ಗುಣವರ್ಣನೆಯ ಮೂಲಕ ಸಾಗರದ ಹಾಗೆ ಅಪಾರ ಶ್ರೀಮಂತಿಕೆ ಇದ್ದರೂ, ಹಣದ ಅಗತ್ಯತೆ ಇರುವ ಬಡವರಿಗೆ ಹಣಕೊಟ್ಟು ಉಪಕಾರ ಮಾಡದ ಜಿಪುಣ ಶ್ರೀಮಂತ ವ್ಯಕ್ತಿಯೊಬ್ಬನನ್ನು ಪ್ರಸ್ತುತ ಪಡಿಸುವುದಾಗಿದೆ. ಹೀಗೆ ಪ್ರತೀಯ ಮಾನರೂಪದಲ್ಲಿ ಅಪ್ರಸ್ತುತ ಪ್ರಶಂಸಾಲಂಕಾರವನ್ನು ಯೋಜಿಗಿಸಲಾಗಿದೆ. ಹೀಗೆ ಈ ಅಪ್ರಸ್ತುತ ಪ್ರಶಂಸಾಲಂಕಾರವು ವ್ಯಾಜಸ್ತುತಿ ಅಲಂಕಾರದಿಂದ ಇನ್ನಷ್ಟು ಅಲಂಕೃತಗೊಂಡಿದೆ.

ಅಲ್ಲದೆ ಇದನ್ನು ಅಪ್ರಸ್ತುತ ಪ್ರಶಂಸೆ ಹಾಗೂ ವ್ಯಾಜಸ್ತುತಿ ಇವರೆಡರ ಸಂಕರಾಲಂಕಾರ ವೆಂದೂ ಹೇಳುವಂತಿಲ್ಲ, ಕಾರಣ ಎರಡೂ ಸ್ಪಷ್ಟವಾಗಿ ಬೇರೆ ಬೇರೆಯಾಗಿಯೇ ಪ್ರತೀತವಾಗುತ್ತವೆ. ಎರಡಕ್ಕೂ ಸಮಾನ ಪ್ರಾಧಾನ್ಯವಿಲ್ಲದ ಕಾರಣದಿಂದಾಗಿ ಎರಡರ ಸಂಸೃಷ್ಟಿ ಸಂಭವತೆಯೂ ಇಲ್ಲ. ಎರಡರ ವಿಷಯವೂ ಭಿನ್ನ ಭಿನ್ನವಾದ ಕಾರಣ ವಾಚ್ಯಾಲಂಕಾರಗಳೂ ಅಲ್ಲ. ಅರ್ಥಾತ್ ಅಪ್ರಸ್ತುತ ಪ್ರಶಂಸಾಲಂಕಾರ ರೂಪದಲ್ಲಿ ವ್ಯಾಜಸ್ತುತಿಯನ್ನು ಪ್ರಯೋಗಿಸ ಲಾಗಿದೆ. (ಕಾರಣ ಕವಿ ಕೇವಲ ಅಪ್ರಸ್ತುತ ಪ್ರಶಂಸೆಯಿಂದುಂಟಾಗುವ ಚಮತ್ಕಾರದಿಂದಷ್ಟೇ ಸಂತುಷ್ಟನಾಗಿಲ್ಲ)

ಇನ್ನೊಂದು ಉದಾಹರಣೆ :

ನಾಮಾಪ್ಯಂತರೋರ್ನಿಮೀಲಿತಮ ಭೂತ್ತತ್ತಾವದು ನ್ಮೀಲಿತಂ
ಪ್ರಸ್ಥಾನೇ ಸ್ಖಲತಃ ಸ್ವವರ್ತ್ಮನಿ ವಿಧೇರನ್ಯದ್ ಗೃಹೀತಃ ಕರಃ
ಲೋಕಶ್ಚಾಯಮದೃಷ್ಟದರ್ಶನಕೃತಾ ದೃಗ್ವೈಶಸಾದುದ್ಧೃತೋ
ಯುಕ್ತಂ ಕಾಷ್ಠಿಕ ಲೂನವಾನ್ ಯದಸಿ ತಾಮಾಮ್ರಾಲಿಮಾಕಾಲಿಕೀಮ್ [೯೧]

[ಭಲ್ಲಟಶತಕ - 86]

ಅಕಾಲಿಕವಾದೀ ಮಾಮರದ ಪೊದೆಯನ್ನು
ನೀ ಕಡಿದುದೊಳಿತಾಯ್ತು ಓ ಮರಕಟುಕ!
ಹೆಸರು ಮೊದಲುಗೊಂಡು ಅನ್ಯವೃಕ್ಷಗಳನೆಲ್ಲ

ಮರೆಸಿತ್ತದು
ತನ್ನದಾರಿಯೊಳು ನಡೆಯುತ್ತ ಎಡವಿದ್ದ
ಬೊಮ್ಮನಿಗು ಸಹಾಯ ಹಸ್ತವನು ಚಾಚಿರುವೆ
ಹಿಂದೆಂದು ಕಾಣದುದ ಕಾಂಬ ಕಣ್ಣಬೇನೆಯಿಂದೆ
ಲೋಕವನು ಉಳಿಸಿರುವೆ ನೀನು! [ಭಲ್ಲಟಶತಕ - 86]

ಇಲ್ಲಿಗೂ ಹಿಂದಿನ ಪದ್ಯಕ್ಕೆ ಅನ್ವಯಿಸಿದ ನ್ಯಾಯವೇ ಅನ್ವಯಿಸುತ್ತೆ

[ಟಿಪ್ಪಣಿ : ಕವಿ ಈ ಪದ್ಯದಲ್ಲಿ ಹಿಂದೆ ಉದಾಹರಿಸಿದ ಪದ್ಯದ ರೀತಿಯಲ್ಲಿಯೇ ವಾಚ್ಯರೂಪದಲ್ಲಿ ಮರಕಟುಕನನ್ನು ಪ್ರಶಂಸಿಸಿದ್ದಾನೆ. ಆದರೆ ಅದರ ಉದ್ದೇಶಿತ ಅರ್ಥ (ಪ್ರತೀಯಮಾನ) ಅವನನ್ನು ಕುರಿತಾದ ನಿಂದೆ. ನೀನು ಬಹಳ ನೀಚ. ಕಾರಣ ನೀನು ಜನರು ಎಲ್ಲ ಋತುಗಳಲ್ಲೂ ಒಳ್ಳೆ ರುಚಿಕರವಾದ ಮಾವಿನ ಹಣ್ಣನ್ನು ಸೇವಿಸುವುದನ್ನು ಸಹಿಸದಾದೆಯಾಗಿ ಅಸೂಯೆಯಿಂದ ಆ ಮಾಮರದ ತೋಪನ್ನು ಕಡಿದು ಹಾಕಿದೆ. ಹೀಗೆ ಇಲ್ಲಿ ಸ್ತುತಿ ಮುಖೇನ ನಿಂದೆ ಮಾಡಿರುವುದರಿಂದ ಇದು ವ್ಯಾಜಸ್ತುತಿ ಅಲಂಕಾರ. ಜೊತೆಯಲ್ಲೇ ಆ ಮರಕಟುಕನ ಚರಿತ್ರವರ್ಣನೆಯ ಮೂಲಕ ಕವಿ ಯಾವಾಗಲೂ ಪರೋಪಕಾರದಲ್ಲಿಯೇ ಮುಳುಗಿರುವ ಮಹಾಪುರುಷನನ್ನು ನಾಶಮಾಡಿರುವ ಕ್ರೂರ ವ್ಯಕ್ತಿಯ ವರ್ಣನೆ ಮಾಡಿದ್ದಾನೆ. ಹಾಗಾಗಿ ಇಲ್ಲಿ ಪ್ರತೀಯಮಾನ ವಿಧಾನದಿಂದ ಅಪ್ರಸ್ತುತ ಪ್ರಶಂಸಾಲಂಕಾರವನ್ನು ಯೋಜಿಸಿದ್ದಾನೆ. ಈ ಅಪ್ರಸ್ತುತ ಪ್ರಶಂಸಾಲಂಕಾರ ಮೇಲೆ ಹೇಳಿದ ವ್ಯಾಜಸ್ತುತಿ ಅಲಂಕಾರದಿಂದ ಹೆಚ್ಚು ಶೋಭೆಯನ್ನು ಪಡೆದು ಅಲಂಕೃತಗೊಂಡಿದೆ. ಹಾಗಾಗಿ ಕವಿ ಇಲ್ಲಿ ಕೇವಲ ಅಪ್ರಸ್ತುತ ಅಲಂಕಾರದಿಂದ ತೃಪ್ತನಾಗದೆ, ವ್ಯಾಜಸ್ತುತಿ ಅಲಂಕಾರವನ್ನು ಅದರ ಅಲಂಕಾರ ರೂಪದಲ್ಲಿ ಯೋಜಿಸಿದ್ದಾನೆ] [ರಾಧೇಶ್ಯಾಮ್ ಮಿಶ್ರರ ಹಿಂದಿ ವಕ್ರೋಕ್ತಿ ಜೀವಿತ - ಪುಟ 129]

ಇದರ ಇನ್ನೊಂದು ಉದಾಹರಣೆ :

(ಯಾರೋ ನಾಯಿಕೆಯನ್ನು ವರ್ಣಿಸುತ್ತಾ ಕವಿ ಹೇಳುತ್ತಾನೆ)

ಕಿಂ ತಾರುಣ್ಯ ತರೋರಿಯಂ ರಸಭರೋದ್ಭಿನ್ನಾ ನವಾವಲ್ಲರೀ
ಲೀಲಾ ಪ್ರೋಚ್ಛಲಿತಸ್ಯ ಕಿಂ ಲಹರಿಕಾ ಲಾವಣ್ಯವಾರಾಂನಿಧೇಃ
ಉದ್ಗಾಢೋತ್ಕಲಿ ಕಾವತಾಮ್ ಸ್ವಸಮಯೋಪನ್ಯಾಸ ವಿಶ್ರಂಭಿಣಃ
ಕಿಂ ಸಾಕ್ಷಾದುಪದೇಶಯಷ್ಟಿ ರಥವಾ ದೇವಸ್ಯ ಶೃಂಗಾರಿಣಃ [೬೨]

[ಸುಭಾಷಿತಾವಳಿ - 1471]

ತಾರುಣ್ಯ ತರುವಿನ ರಸಾತಿಶಯದಿಂದೊಗೆದ
ನವವಲ್ಲರಿಯೊ ಇವಳು?
ಅಲ್ಲದಿರೆ ಮೆಲ್ಲಗೆ ತರಂಗಿತಗೊಳ್ಳುತಿಹ
ಲಾವಣ್ಯಸಾಗರದ ಕಿರು ಅಲೆಯೊ ?
ಅಥವಾ ತೀವ್ರತರವಾದುತ್ಕಂಠೆಯಿಂದಿರುವ

ಪ್ರೇಮಿಗಳಿಗೆ ಪ್ರೇಮ ಪಾಠವನು
ಬೋಧಿಸುತಿರುವ ಕಾಮದೇವನ ಕೈಯ
ಉಪದೇಶಯಷ್ಟಿಯೊ? [೯೨]

ಈ ಶ್ಲೋಕದಲ್ಲಿ ವಾಕ್ಯಾಲಂಕಾರವಾಗಿ ಬಳಸಿರುವ ರೂಪಕವು (ವಲ್ಲರಿ, ಲಹರಿಕಾ, ಮತ್ತು ಉಪದೇಶಯಷ್ಟಿ) ಕವಿಯ ಸಂದೇಹೋಕ್ತಿಯ ಯೋಜನೆಯಿಂದಾಗಿ ಅತಿಶಯವಾದ ಚಮತ್ಕಾರಿಕ ಸೌಂದರ್ಯವನ್ನು ಪಡೆದುಕೊಂಡು, ಸಹೃದಯರಿಗೆ ಆಹ್ಲಾದವನ್ನುಂಟು ಮಾಡುತ್ತದೆ. ಅರ್ಥಾತ್ ಇಲ್ಲಿ ವಾಕ್ಯರೂಪದಲ್ಲಿ ಕವಿ ಬಳಸಿರುವ ಸಂದೇಹಾಲಂಕಾರವು ಪ್ರತೀಯಮಾನವಾದ ರೂಪಕಾಲಂಕಾರದ ಅಲಂಕಾರವಾಗಿ ಬಳಕೆಯಾಗಿದೆ. ಆದ್ದರಿಂದ ಇಲ್ಲಿಯೂ ಪ್ರತೀಯ ಮಾನವಾದ ರೂಪಕದಿಂದ ಅಸಂತುಷ್ಟನಾಗಿ, ಅದರ ಶೋಭೆಯನ್ನು ಹೆಚ್ಚಿಸಲು 'ಸಂದೇಹ'ವೆಂಬ ಅನ್ಯ ಅಲಂಕಾರವನ್ನು ಸೃಷ್ಟಿಸಿದ್ದಾನೆ. ಉಳಿದ ವಿಚಾರಗಳಿಗೆ, ಹಿಂದಿನ ಉದಾಹರಣೆಗಳಿಗೆ ಅನ್ವಯಿಸಿದ್ದೇ ಅನ್ವಯಿಸುತ್ತದೆ.

[ಅರ್ಥಾತ್ ಈ ಎರಡೂ ಅಲಂಕಾರಗಳಲ್ಲಿ ಸಂಕರ ಮತ್ತು ಸಂಸೃಷ್ಟಿಯನ್ನು ಸ್ವೀಕರಿಸಲಾಗುವುದಿಲ್ಲ; ಎರಡೂ ಸ್ಫುಟವಾಗಿ, ಪ್ರತ್ಯೇಕವಾಗಿ ಪ್ರತೀತವಾಗುವುದ ರಿಂದ ಹಾಗೂ ಎರಡೂ ಸಮಾನ ಪ್ರಾಧಾನ್ಯತೆ ಹೊಂದಿಲ್ಲದ ಕಾರಣ ಎರಡರ ವಿಷಯವೂ ವಿಭಿನ್ನವಾಗಿರುವುದರಿಂದ ಎರಡನ್ನೂ ವಾಚ್ಯ ಅಲಂಕಾರವೆಂದು ತಿಳಿಯ ಬಾರದು.]

ವಿಚಿತ್ರ ಮಾರ್ಗದ ಇನ್ನೊಂದು ಲಕ್ಷಣವನ್ನು ವರ್ಣಿಸುತ್ತೇನೆ. ಅದು ಹೇಗಿರುತ್ತದೆ ಎಂದರೆ 'ರತ್ನ' ಇತ್ಯಾದಿ 36, 37ನೇ ಕಾರಿಕಗಳ ಮೂಲಕ ಇದನ್ನು ಪ್ರತಿಪಾದಿಸಲಾಗುವುದು. ಹೊಳೆಯುವ ಆಭರಣಗಳು ಹಾಗೂ ಶರೀರದ ಸತ್ವಪೂರ್ಣ ಕಾಂತಿಯು ಒಟ್ಟಾರೆ ಸೌಂದರ್ಯಕ್ಕೆ ಕಾರಣವಾಗಿದೆ. ಹೇಗೆ ಎಂದು ಕೇಳಬಹುದು? ಕಂಕಣವೇ ಮೊದಲಾದ ಆಭರಣಗಳ ಮೂಲಕ. ಅದೂ ಎಂಥ ಆಭರಣಗಳು? ಮಣಿಕಿರಣಗಳ ಕಾಂತಿಯ ಉಲ್ಲಾಸದಿಂದ ಕೋರೈಸುತ್ತಿರುವ ಆಭರಣಗಳ ಮೂಲಕ. ಯಾವ ರೀತಿಯಲ್ಲಿ ? ಆ ಆಭೂಷಣಗಳು ಲಲನೆಯ ಶರೀರವನ್ನು ತಮ್ಮ ಕಣ್ಕೋರೈಸುವ ಕಾಂತಿಯಿಂದ ಆಚ್ಛಾದಿತಗೊಳಿಸುವುದರ ಮೂಲಕ ಒಟ್ಟಾರೆ ಸೌಂದರ್ಯವರ್ಧನೆಗೆ ಕಾರಣವಾಗುತ್ತವೆ. ಅದೇ ರೀತಿ (ಅಂದರೆ - ಕಡಗ ಕುಂಡಲಾದಿ ಆಭರಣಗಳಿಂದ ಸುಂದರಿಯ ಶರೀರವನ್ನು ಮರೆಮಾಡುವಂತೆ) ಉಪಮಾದಿ ಅಲಂಕಾರಗಳು ಕಾವ್ಯದ ಒಟ್ಟಾರೆ ಸೌಂದರ್ಯಕ್ಕೆ ಕಳೆಗೊಡುತ್ತವೆ. ಯಾವ ರೀತಿಯಲ್ಲಿ ಎಂದರೆ ತಮ್ಮ ಕಮನೀಯ ಕಾಂತಿಯ ಪರಿಧಿಯಲ್ಲಿ ಬರುವ ಅಲಂಕಾರ್ಯಗಳನ್ನು ಸುತ್ತುವರಿದು ತಮ್ಮ ಕಾಂತಿ ಅಥವಾ ಸೌಂದರ್ಯದಿಂದ ಬೆಳಗುವುದರ ಮೂಲಕ. ಒಟ್ಟಾರೆ ತಾತ್ಪರ್ಯ: ಅಲಂಕಾರವು ತನ್ನ ಅತ್ಯುನ್ನತ ಸ್ಥಿತಿಯಲ್ಲಿದ್ದಾಗ ಅದರ ಮಹಿಮೆಯೇ ಅಲಂಕಾರ್ಯವನ್ನು ಸುತ್ತುವರಿದಿರುವ ಶೋಭಾತಿಶಯತೆಗೆ ಕಾರಣವಾಗಿ ಅದನ್ನು ಅಲಂಕಾರವು ಬೆಳಗುತ್ತದೆ.

ಉದಾ :

ಆರ್ಯಸ್ಯಾಜಿ ಮಹೋತ್ಸವ ವ್ಯತಿಕರೇ ನಾ ಸಂವಿಭಕ್ತೋಽತ್ರ ವಃ
ಕಶ್ಚಿತ್ ಕಾಪ್ಯವ ಶಿಷ್ಯತೇ ತ್ಯಜತ ರೇ ನಕ್ತಂಚರಾಃ ಸಂಭ್ರಮಮ್|
ಭೂಯಿಷ್ಠೇಷ್ವಪಿ ಕಾ ಭವತ್ಸು ಗಣನಾತ್ಯರ್ಥಂ ಕಿಮುತ್ತಾಮ್ಯತೇ
ತಸ್ಯೋದಾರ ಭುಜೋಷ್ಮಣೋಽನವಸಿತಾ ನಾರಾಚ ಸಂಪತ್ತಯಃ [೯೩]

ಅವಸರ ಪಡದಿರಿ ನೀವು ನಿಶಾಚರರೆ!
ಆರ್ಯರಾಮನ ಈ ರಣ ಮಹೋತ್ಸವದೊಳು
ನಿಮ್ಮೊಳಾರಿಗು ಪಾಲಿಲ್ಲದೆಯೆ ಇರದು
ಬಹುಸಂಖ್ಯೆ ನಿಮ್ಮದಾದರೂ
ಅದು ಗಣನೆಗೆ ಬರದು
ಅದರಿಂದ ಏಕಿನಿತು ಉದ್ವೇಗ?
ರಾಮನ ವಿಶಾಲ ಭುಜಗಳ ತಾಪದಿನೊಗೆವ
ಬಾಣ ಸಂಪದವು ತೀರಿಲ್ಲವಿನ್ನೂ [೯೩]

ಇಲ್ಲಿ ಸಂಗ್ರಾಮವನ್ನು 'ಮಹೋತ್ಸವ'ದ ರೂಪಕದ ಮೂಲಕ ಅದೆಷ್ಟು ಪರಿಣಾಮಕಾರಿಯಾಗಿ ಚಿತ್ರಿಸಲಾಗಿದೆಯೆಂದರೆ, "ಆರ್ಯನು ತನ್ನ ಶೌರ್ಯದಿಂದ ನಿಮ್ಮೆಲ್ಲರನ್ನೂ ಕೊಲ್ಲುತ್ತಾನೆ" ಎಂಬ ಸಾಮಾನ್ಯ ವಿಚಾರವು ರೂಪಕಾಲಂಕಾರದ ಅತಿಶಯ ಸೌಂದರ್ಯದಿಂದ ಆವೃತವಾಗಿದೆ. ಅರ್ಥಾತ್, ನಿಮ್ಮಲ್ಲಿಯ ಯಾರೊಬ್ಬ ಸಾಮಾನ್ಯ ರಾಕ್ಷಸನೂ, ರಣರಂಗದಿಂದ ಎಷ್ಟೇ ದೂರದಲ್ಲಿದ್ದರೂ ಕೂಡ ತನ್ನ ಪಾಲನ್ನು ಪಡೆಯದೆ ಇರುವುದಿಲ್ಲ. ಆದ್ದರಿಂದ ಸಂಗ್ರಾಮ ಮಹೋತ್ಸವದಲ್ಲಿ ಪಾಲು ಪಡೆಯಬೇಕೆಂಬ ನಿಮ್ಮ ತೀವ್ರಾಭಿಲಾಷೆಯನ್ನು ಬದಿಗೊತ್ತಿ. ನಾವು ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಪ್ರತಿಯೊಬ್ಬರಿಗೂ ಪಾಲು ಸಿಗುವುದು ಅಸಂಭವ ಎಂದು ನೀವು ಭಾವಿಸಿದ್ದಲ್ಲಿ ಅದು ಸರಿಯಲ್ಲ. ಇಷ್ಟೊಂದು ದೊಡ್ಡ ಗುಂಪಿನಲ್ಲಿ ಪ್ರತಿಯೊಬ್ಬರಿಗೂ ಅವರವರ ಪಾಲು ಪಡೆಯುವಲ್ಲಿ ಎದುರಾಗಬಹುದಾದ ಒಂದೇ ಅಡ್ಡಿ ಎಂದರೆ ಅದನ್ನು ನೀಡುವವನಲ್ಲಿ ಸಂಪತ್ತಿಯ ಅಭಾವ ಅಥವಾ ಅವನ ಕೃಪಣತೆ ಮಾತ್ರ. ಆದರೆ ಪ್ರಸ್ತುತ ಸಂದರ್ಭದಲ್ಲಿ ಆರ್ಯರಾಮನಿಗೆ ಇವೆರಡೂ ಅನ್ವಯಿಸುವುದಿಲ್ಲ. (ಸಂಪತ್ತಿಯ ಅಭಾವ ಮತ್ತು ಕಾರ್ಪಣ್ಯ). "ವಿಶಾಲ ಭುಜಗಳ ತಾಪದಿನೊಗೆವ ಬಾಣ ಸಂಪದ" ಎಂಬ ಮಾತಿನಿಂದ ಇದು ಸ್ಥಾಪಿತವಾಗಿದೆ. (ಹೀಗೆ ಈ ಶ್ಲೋಕದಲ್ಲಿ ಅಲಂಕಾರ್ಯವು ಅಲಂಕಾರದ ಶೋಭಾತಿಶಯದಲ್ಲಿ ಏಕೀಭವಿಸಿರುವಂತೆ ಪ್ರತೀತವಾಗುತ್ತದೆ.

ಈಗ ಇನ್ನೊಂದು ಉದಾಹರಣೆ:

ಕತಮಃ ಪ್ರವಿಜೃಂಭಿತ ವಿರಹವ್ಯಥಃ ಶೂನ್ಯತಾಂ ನೀತೋ ದೇಶಃ (೯೪)

ತಮ್ಮಿಂದ ಅತ್ಯಂತ ವಿರಹವ್ಯಥೆಗೆ ಮತ್ತು ಶೂನ್ಯತೆಗೆ
ಈಡಾದ ದೇಶವಾವುದು? (೯೪) (ಹರ್ಷಚರಿತೆ 1)

ಹಾಗೆಯೇ ಮತ್ತೊಂದು ಉದಾಹರಣೆ:

ಕಾ ನಿ ಚ ಪುಣ್ಯ ಭಾಂಜಿ ಭಜಂತ್ಯಭಿಖ್ಯಾಮ ಕ್ಷರಾಣಿ (೯೫)

ಅವರ ನಾಮಾಂಕಿತವನ್ನು ಆಶ್ರಯಿಸಿರುವ ಆ ಪುಣ್ಯಶಾಲಿ ಅಕ್ಷರಗಳಾವುವು? (೯೫)

ಈ ಮೇಲಿನವುಗಳಲ್ಲಿ ಕ್ರಮವಾಗಿ, ತಾವು ಎಲ್ಲಿಂದ ಬಂದಿದ್ದೀರಿ? ಈ ಮಹಾಶಯರ ಹೆಸರೇನು? ಎಂಬುವೇ ಅಲಂಕಾರ್ಯಗಳು. ಇವು ಅಪ್ರಸ್ತುತ ಪ್ರಶಂಸಾಲಂಕಾರದ ಶೋಭೆಯಿಂದ ಕೂಡಿರುವ ಕಾರಣದಿಂದಾಗಿ ಅದರ ಶೋಭೆಯಲ್ಲಿ ಮಿಳಿತವಾಗಿ ಸಹೃದಯರ ಹೃದಯಕ್ಕೆ ಆಹ್ಲಾದವುಂಟುಮಾಡುತ್ತಿವೆ. ಈ ರೀತಿಯ ವೈಚಿತ್ರ್ಯವು ವ್ಯಾಜಸ್ತುತಿ ಮತ್ತು ಪರ್ಯಾಯೋಕ್ತವೇ ಮೊದಲಾದ ಅಲಂಕಾರಗಳಲ್ಲಿ ಹೆಚ್ಚಾಗಿ ಕಂಡು ಬರುತ್ತದೆ.

(ಇಲ್ಲಿ 'ವಿಚಿತ್ರ' ಮಾರ್ಗವನ್ನು ಕುರಿತ ಚರ್ಚೆ ನಡೆಯುತ್ತಿದೆ. ಆದರೆ ಉದಾಹರಣೆಯಾಗಿ ರೂಪಕ, ಅಪ್ರಸ್ತುತ ಪ್ರಶಂಸೆ, ವ್ಯಾಜಸ್ತುತಿ ಇವೇ ಮೊದಲಾದುವುಗಳನ್ನು ನೀಡುತ್ತಿರುವುದನ್ನು ನೋಡಿ ಪೂರ್ವ ಪಕ್ಷದವರು-ರೂಪಕವೇ ಮೊದಲಾದ ಅಲಂಕಾರಗಳ ಸ್ವರೂಪ ನಿರ್ಣಯವನ್ನು, ಅವುಗಳ ಲಕ್ಷಣ ನಿರೂಪಣೆಯ ಸಂದರ್ಭದಲ್ಲಿ ಕೈಗೆತ್ತಿಕೊಳ್ಳಲಾಗುವುದೆನ್ನುವಾಗ, ಅವುಗಳ ಉದಾಹರಣೆಗಳನ್ನು ಇಲ್ಲಿ (ವಿಚಿತ್ರ ಮಾರ್ಗದ ಪ್ರಸಂಗದಲ್ಲಿ) ನೀಡುವ ಅಗತ್ಯವೇನು? ಎಂದು ಆಕ್ಷೇಪಿಸಬಹುದು. ಇದು ಸರಿಯಾದ ಆಕ್ಷೇಪ. ಆದರೆ ವಿಚಿತ್ರ ಮಾರ್ಗದ ವೈಚಿತ್ರ್ಯವೆಂದರೆ, ಅಲೌಕಿಕ ಶೋಭೆಯ ಅತಿಶಯದಿಂದ ಕೂಡಿದ್ದಾಗಲೇ ಅಲಂಕಾರಗಳ ಪ್ರಯೋಗವು ಅನಿರ್ವಚನೀಯವೂ ಅಪೂರ್ವವೂ ಆದ ವಾಕ್ಯ ವಕ್ರತೆಯನ್ನು ಅರಳಿಸುತ್ತವೆ. ಅದನ್ನು ಸ್ಪಷ್ಟಪಡಿಸಲೋಸುಗವೇ ಇಲ್ಲಿಯೂ ರೂಪಕಾದಿ ಅಲಂಕಾರಗಳ ಉದಾಹರಣೆಗಳನ್ನು ಉದ್ಧರಿಸಬೇಕಾಯಿತು.

ವಿಚಿತ್ರ ಮಾರ್ಗವನ್ನು ಮತ್ತೂ ವಿವರಿಸಲಾಗಿದೆ (38ನೇ "ಯದಪ್ಯ ನೂತನೋಲ್ಲೇಖ...") ಎಲ್ಲಿ ವಾಚ್ಯ ವಸ್ತುವು ಅಭಿನವ ರೂಪದಲ್ಲಿ ಚಿತ್ರಿತವಾಗಿರುವುದಿಲ್ಲವೋ, (ಪೂರ್ವಕವಿಗಳು ಆಗಲೇ ಪ್ರಯೋಗಿಸಿದ್ದರಿಂದ), ಅದನ್ನು ಕೂಡಾ ಲೋಕೋತ್ತರವೂ, ಅತಿಶಯವೂ ಆದ ಸ್ಥಿತಿಗೆ ಒಯ್ಯಲಾಗುತ್ತದೆ. ಹೇಗೆ ಎಂದರೆ ಉಕ್ತಿ ವೈಚಿತ್ರ್ಯ ಮಾತ್ರದಿಂದ; ಅರ್ಥಾತ್, ಮಾತಿನ ವಿದಗ್ಧತೆಯಿಂದ ಮಾತ್ರ ಎಂದು ಅರ್ಥ (ಸೌಂದರ್ಯದ ಪರಾಕಾಷ್ಠೆಗೆ ಒಯ್ಯಲಾಗುವುದು).

ಉದಾ:

ಅನ್ಯದ್ ಲಟಭತ್ವಮನ್ಯೈವ ಚ ಕಾಪಿ ವರ್ತನಚ್ಛಾಯಾ
ಶ್ಯಾಮಾ ಸಾಮಾನ್ಯ ಪ್ರಜಾಪತೇ ರೇಖೈವ ಚ ನ ಭವತಿ (೯೬)

(ಗಾಥಾ ಸಪ್ತಶತಿ-969) ಸಂಸ್ಕೃತ ಛಾಯೆ,

ಇವಳ ಸುಕುಮಾರತೆಯು
ಇವಳ ತನು ಕಾಂತಿಯು
ಬೇರೊಂದೆ ತೆರನಿಹುದು

ಶ್ಯಾಮೆಯಿವಳ ಸೃಷ್ಟಿಕ್ರಮವು
ಎಂದಿನ ಬ್ರಹ್ಮ ಸೃಷ್ಟಿಯಂತಲ್ಲವು (೯೭)

[ಕವಿ ಷೋಡಷ ವರ್ಷದ ಸುಂದರಿ 'ಶ್ಯಾಮಾ'ಳ ವರ್ಣನೆ ಮಾಡುತ್ತ ಹೇಳುತ್ತಾನೆ– ಯಾರ ಶರೀರ ಚಳಿಗಾಲದಲ್ಲಿ ಬೆಚ್ಚಗೆ ಇದ್ದು, ಮತ್ತು ಬೇಸಿಗೆಯಲ್ಲಿ ತಂಪಾಗಿದ್ದು, ಸರ್ವಾಂಗಗಳಲ್ಲೂ ಸೌಂದರ್ಯವು ಕಂಗೊಳಿಸುತ್ತಿರುತ್ತದೋ ಅವಳೇ ಶ್ಯಾಮಾ

ಶೀತಕಾಲೇ ಭವೇದುಷ್ಣಾ! ಗ್ರೀಷ್ಮೇಚ ಸುಖ ಶೀತಲಾ
ಸರ್ವಾವಯವ ಶೋಭಾಢ್ಯಾ ಸಾ ಶ್ಯಾಮಾ ಪರಿಕೀರ್ತಿತಾ]

(ಹಿಂದೀ ವಕ್ರೋಕ್ತಿಜೀವಿತ-ಪುಟ-134)

[ಅರ್ಥಾತ್, ಅವಳು ಎಂಥ ಅಲೌಕಿಕ ಸೌಂದರ್ಯದಿಂದ ಕೂಡಿದ್ದಾಳೆಂದರೆ ಆ ಸೌಂದರ್ಯ ಸಾಮಾನ್ಯ ಬ್ರಹ್ಮ ಸೃಷ್ಟಿಯಲ್ಲಂತೂ ಕಂಡು ಬರುವುದಿಲ್ಲ, ಆದ್ದರಿಂದ ಅವಳ ಸೃಷ್ಟಿಯನ್ನು, ಆ ಬ್ರಹ್ಮನಲ್ಲದೆ, ಬೇರೆಯಾರೋ ಮಾಡಿರಬೇಕು. ಇಲ್ಲಿ 'ಶ್ಯಾಮಾ'ಳ ವರ್ಣನೆಯೇನೂ ಹೊಸದಲ್ಲವಾದರೂ ಕವಿ ಕೇವಲ ಉಕ್ತಿವೈಚಿತ್ರ್ಯ ಮಾತ್ರದಿಂದ ಈ ವರ್ಣನೆಗೊಂದು ಅಪೂರ್ವ ಚಮತ್ಕಾರ ಉಂಟು ಮಾಡಿದ್ದಾನೆ]

ಇನ್ನೊಂದು ಉದಾಹರಣೆ:

ಉದ್ದೇಶೋಯಂ ಸರಸ ಕದಲೀಶ್ರೇಣಿ ಶೋಭಾತಿಶಾಯೀ
ಕುಂಜೋತ್ಕರ್ಷಾಂಕುರಿತ ಹರಿಣೀ ವಿಭ್ರಮೋ ನರ್ಮದಾಯಾಃ
ಕಿಂ ಚೈತಸ್ಮಿನ್ ಸುರತ ಸುಹೃದಸ್ತನ್ವಿ ತೇ ವಾಂತಿ ವಾತಾ
ಯೇಷಾಮಗ್ರೇ ಸರತಿ ಕಲಿತಾಕಾಂಡ ಕೋಪೋ ಮನೋಭೂಃ (೯೭)

(ಯಾರೋ ಪ್ರೇಮಿ ತನ್ನ ಪ್ರೇಯಸಿಗೆ ಹೇಳುತ್ತಿದ್ದಾನೆ)

ರಸಭರಿತ ಕದಳಿಯ ಸಾಲ್ಗಳಿಂ ಶೋಭಿತಮಾದ
ಮತ್ತೆ ಕುಂಜಗಳ ಉತ್ಕರ್ಷದಿಂದೆ ಹರಿಣಿಗಳೊಳು
ವಿಭ್ರಮವ ಮೂಡಿಸುತಿರುವೀ ನರ್ಮದೆಯ
ತೀರವಿದು ಬಲ್ ಸೊಗಸು ಸೊಗಸೆಲೆ ತರುಣಿ
ನಿನ್ನ ಸುರತದಾಯಾಸವನು ನೀಗಿಪ ಸುಮಿತ್ರ
ಸುಳಿಗಾಳಿ ಬೀಸುತಿದೆಕೋ
ಚಲಿಸುತಿಹನದೊ ಮನ್ಮಥನು ತಾನು
ಅಕಾರಣ ಕೋಪದಿಂದದರ ಮುಂದೆ (೯೭)

ಇಲ್ಲಿರುವ ಕಾವ್ಯಾರ್ಥವೆಂದರೆ ಕೇವಲ ಉಕ್ತಿವೈಚಿತ್ರ್ಯ ಮಾತ್ರ. ಕವಿಯ ನವನವೋಲ್ಲೇಖ ಶಾಲಿನಿಯಾದ ಪ್ರತಿಭೆಯ ವಿಲಾಸವಾವುದೂ ಇಲ್ಲಿಲ್ಲ. ಈ ಉಕ್ತಿ ವೈಚಿತ್ರ್ಯವೆಂಬುದು ಸಹಸ್ರ ಬಗೆಯಾಗಿ ಇರಬಹುದು. ಅದನ್ನೆಲ್ಲ ಸಹೃದಯರು ಸ್ವತಃ ಅರಿಯಬೇಕು.

39ನೇ ಕಾರಿಕೆಯಲ್ಲಿ ವಿಚಿತ್ರ ಮಾರ್ಗವನ್ನು ಹೀಗೆ ವಿವರಿಸಲಾಗಿದೆ (ಯತ್ರಾನ್ಯ

ಥಾಭವತ್...) ಎಲ್ಲಿ (ಯಾವ ಮಾರ್ಗದಲ್ಲಿ) ಯಾವುದೋ ರೀತಿಯಲ್ಲಿರುವ ವಸ್ತುಗಳೆಲ್ಲವೂ ಮಹಾ ಕವಿಯ ಪ್ರತಿಭೆಯ ಉನ್ಮೇಷದ ಅತಿಶಯತೆಯಿಂದ ಅವನ ಇಚ್ಛೆಯ ಮೇರೆಗೆ ಬೇರೊಂದೇ- ರೂಪವನ್ನು ಪಡೆದು ಕೊಳ್ಳುತ್ತವೆ.

ವಸ್ತು ಸ್ವಭಾವವೆಲ್ಲವೂ ಹೊಸ ರೀತಿಯಲ್ಲಿ ಕಂಡು ಬರುವಂತಾಗುತ್ತವೆ. ಹೇಗೆ ಎಂದರೆ ಕವಿಯ ಇಚ್ಛೆಯ ಮೇರೆಗೆ. ಅವನ ಪ್ರತಿಭೆಯನ್ನನುಸರಿಸಿ. ಯಾವ ರೀತಿಯಲ್ಲಿ? ಎಂದರೆ ಪ್ರತಿಭೆಯ ಹೊಳಹುಗಳನ್ನು ಅಪರಿಮಿತವಾಗಿ ಗ್ರಹಿಸುವ ಮಹಾಕವಿಯ ಪ್ರತಿಭಾ ಸಾಮರ್ಥ್ಯದಿಂದ. ಕವಿಯು ಸಂದರ್ಭಕ್ಕೆ ತಗುವಂತೆ ವರ್ಣ್ಯಮಾನ ವಸ್ತುವಿಗೆ ಒಂದು ಅಪೂರ್ವವೇ ಆದ ಮನೋಹರ ಸ್ವರೂಪವೊಂದನ್ನು ನೀಡಿ ಸಹೃದಯರ ಹೃದಯವನ್ನು -ಗೆಲ್ಲುತ್ತಾನೆ.

ಉದಾ:

ತಾಪಃ ಸ್ವಾತ್ಮನಿ ಸಂಶ್ರಿತ ದ್ರುಮಲತಾಶೋಷೋಧ್ವಗೈರ್ವರ್ಜನಂ
ಸಖ್ಯಂ ದುಃಶಮಯಾ ತೃಷಾ ತವ ಮರೋ ಕೋsಸಾವನರ್ಥೋ ನ ಯಃ
ಏಕೋsರ್ಥಸ್ತು ಮಹಾನಯಂ ಜಲ ಲವ ಸ್ವಾಮ್ಯಸ್ಮಯೋದ್ಗರ್ಜಿನಃ
ಸಂ ಸಹ್ಯಂತಿ ನ ಯತ್ತವೋಪ ಕೃತಯೇ ಧಾರಾಧರಾಃ ಪ್ರಾಕೃತಾಃ(೯೮)

(ಸುಭಾಷಿತಾವಲಿ - 948)

ಉದಾ:

ತಾಪವನು ನಿನ್ನೊಳಗೆ ನೆರೆತಾಳ್ದು, ನಿನ್ನನಾಶ್ರಯಿಸಿರ್ದ
ಮರಬಳ್ಳಿಗಳು ಒಣಗಿ, ಪಥಿಕರೆಲ್ಲರು ನಿನ್ನ ತೊರೆದಿರೆ
ತೀರದ ದಾಹದೊಂದಿಗೆ ಗೆಳೆತನವು ನಿನ್ನದಾಗಿರೆ
ಎಲೆಮರುವೆ ಇನ್ನಾವ ಅನರ್ಥವದು ನಿನ್ನೊಳಿಲ್ಲ?
ಹ್ಞಾ! ಒಂದು ವಿಷಯಕೆ ನೀನು ನಿಜಕು ಸಾರ್ಥಕನು !
ಅಲ್ಪಜಲ ಕಣಗಳ ಮೇಲೆ ಆಧಿಪತ್ಯವನು
ತಾಳ್ದೊಂದು ಗರ್ವದಿಂ ಗರ್ಜಿಸುವ ಕ್ಷುದ್ರ ಮೋಡಗಳು
ನಿನಗುಪಕೃತಿಯನೆಸಗೆ ಸಿದ್ಧರಿಲ್ಲ (೯೮) - ಸುಭಾಷಿತಾವಳಿ No. 948)

ಟಿಪ್ಪಣಿ : (೯೮) ಇಲ್ಲಿ ಕವಿಯು ಅಪ್ರಸ್ತುತ ಪ್ರಶಂಸಾಲಂಕಾರವನ್ನು ತುಂಬ ಸುಂದರವಾಗಿ ಪ್ರಸ್ತುತ ಪಡಿಸಿದ್ದಾನೆ. 'ಮರುಭೂಮಿ'ಯ ಮಾಧ್ಯಮದ ಮೂಲಕ ಪ್ರತೀಯಮಾನ ರೂಪದಲ್ಲಿ ನಿರ್ಧನನಾದ, ಆದರೆ ಸ್ವಾಭಿಮಾನಿಯಾದ ಉದಾರ ವ್ಯಕ್ತಿಯೊಬ್ಬನ ವರ್ಣನೆ ಮಾಡುತ್ತಿದ್ದಾನೆ. ಅಲ್ಪ ಐಶ್ವರ್ಯವನ್ನು ಪಡೆದಷ್ಟಕ್ಕೇ ಅಹಂಕಾರಿಗಳಾದವರಿಂದ, ಉಪಕೃತನಾಗಲು ಅವನಿಗಿಷ್ಟವಿಲ್ಲ. ಆದರೆ, ತಾನು ಧನಹೀನನಾದ್ದರಿಂದ ತನ್ನನ್ನು ಇತರೆ ಜನಗಳು ತ್ಯಜಿಸಿದ ಅವಮಾನವನ್ನು ತನ್ನನ್ನು ಆಶ್ರಯಿಸಿರುವ ಹೆಂಡತಿ ಮಕ್ಕಳ ಕಷ್ಟವನ್ನು ಹಾಗೂ ಅದರಿಂದ ತನಗಾಗುವ ದುಃಖ ಇದೆಲ್ಲವನೂ ಸಹಿಸಲು ಅವನು ಸಿದ್ಧ.

(ರಾಧೇಶ್ಯಾಮ್‌ಮಿಶ್ರರ ಹಿಂದೀವಕ್ರೋಕ್ತಿ ಜೀವಿತ-ಪುಟ-136)

ಅಥವಾ

ವಿಶತಿ ಯದಿ ನೋ ಕಂಚಿತ್ಕಾಲಂ ಕಿಲಾಂಬುನಿಧಿ ವಿಧೇಃ
ಕೃತಿಷು ಸಕಲಾಸ್ವೇಕೋ ಲೋಕೇ ಪ್ರಕಾಶಕತಾಂ ಗತಃ|
ಕಥಮಿತರಥಾ ಧಾಮ್ನಾಂ ಧಾತಾ ತಮಾಂಸಿ ನಿಶಾಕರಂ
ಸ್ಫುರದಿದಮಿಯತ್ತಾರಾ ಚಕ್ರಂ ಪ್ರಕಾಶಯತಿ ಸ್ಫುಟಂ(೯೯)

ಬ್ರಹ್ಮ ಸೃಷ್ಟಿಯೊಳಿರುವ ಕೃತಿಗಳೆಲ್ಲವನು
ಬೆಳಗಿಪ ಏಕಮಾತ್ರ ಬೆಳಕಿನ ನೆಲೆಯು
ಆ ರವಿಯು ಸಾಗರದೊಳಗೆ ಮುಳುಗುವುದ
ಕೆಲಕಾಲ ನಿಲಿಸಿದೊಡೆ, ಚಂದಿರನ, ನಿಶೆಯ, ಮತ್ತಾ
ನಕ್ಷತ್ರ ಮಂಡಲವನೆಂತು ಬೆಳಗಿಪನು ಸ್ಫುಟದೆ? (೯೯)

ಮೊದಲ ಉದಾಹರಣೆಯಲ್ಲಿ ಪ್ರಪಂಚದಲ್ಲಿ ಎಲ್ಲರ ಖಂಡನೆಗೆ ಗುರಿಯಾದ ಮರುಭೂಮಿಗೂ ಕವಿಯ ಉಲ್ಲೇಖಶಾಲಿ ಪ್ರತಿಭೆಯ ದೆಸೆಯಿಂದಾಗಿ, ಲೋಕೋತ್ತರ ಔದಾರ್ಯದ ಪರಾಕಾಷ್ಠೆಯ ಗುಣವು ಆರೋಪಿತವಾಗಿದೆ. ಅಲ್ಲದೆ ನಾವು ಮೆಚ್ಚಲೇಬೇಕಾದಂಥ ಉದಾರ ವ್ಯಕ್ತಿಗಳು ಸಹಸ್ರಾರು ಜನರಿದ್ದಾಗ್ಯೂ, ಮರುಭೂಮಿ ಮಾತ್ರ ಅಂಥ ಔದಾರ್ಯಕ್ಕೆ ಅರ್ಹವಾದಂಥದು ಎಂಬ ಸಂಪೂರ್ಣವಾಗಿ ನೂತನವಾದ ಅರ್ಥವನ್ನು ಪ್ರತೀಯಮಾನ ರೂಪದಲ್ಲಿ ಪಡೆದುಕೊಳ್ಳುವಂತೆ ಮಾಡಲಾಗಿದೆ. ಇದರ ಅವಯವಾರ್ಥವನ್ನು ಇದೀಗ ನೋಡಬಹುದು. 'ತೃಷೆ' (ದಾಹ) ಗೆ ಸೇರಿರುವ ದುಃಶಮ (ತೀರದ) ಎಂಬ ವಿಶೇಷಣದ ಮೂಲಕ ಇದರಲ್ಲಿ ಸೂಚಿತವಾಗಿರುವ ವ್ಯಕ್ತಿ ಮೂರೂ ಲೋಕಗಳ ಒಡೆತನವೇ ಪ್ರಾಪ್ತವಾದರೂ ಅವನು ಸಂತೃಪ್ತನಾಗುವುದಿಲ್ಲ ಎಂದು ಪಥಿಕರೆಲ್ಲರೂ ಅವನನ್ನು ತೊರೆದಿದ್ದಾರೆ ಎಂಬುದು ಕೂಡಾ ಅಷ್ಟೇ ಧ್ವನಿಪೂರ್ಣವಾದ್ದು. ಅವನಲ್ಲಿ ಎಷ್ಟೆಲ್ಲ ಔದಾರ್ಯವಿದ್ದರೂ, ಅವನ ಸಂಪತ್ತು ಹಂಚಿಕೊಳ್ಳಲಾರದಂಥದಾಗಿರುವುದರಿಂದ ಅರ್ಥಿಗಳು ತಾವೇ ಲಜ್ಜಿತರಾಗಿ, ಅವನ ಬಳಿ ಸುಳಿಯದೆ ಅವನನ್ನು ತಪ್ಪಿಸುತ್ತಾರೆ ಎಂಬುದನ್ನು ಧ್ವನಿಸುತ್ತದೆ. ಆಶ್ರಯಿಸಿರ್ದ ಮರ ಬಳ್ಳಿಗಳು ಒಣಗಿ' ಎನ್ನುವ ವಿಶೇಷಣವು ಅವನ ಅಂಥ ವಿಪತ್ತಿನಲ್ಲೂ ಅವರು ಅವನಲ್ಲೇ ಏಕನಿಷ್ಠೆಯಿಂದ ಇರುವುದನ್ನು ಸೂಚಿಸುತ್ತದೆ. (ಅರ್ಥಾತ್ ಅವನ ಪರಿಜನರು ಸಂಕಷ್ಟದ ಸಮಯದಲ್ಲೂ ಅವನನ್ನು ಬಿಟ್ಟು ಅನ್ಯರನ್ನು ಆಶ್ರಯಿಸುವುದಿಲ್ಲ).

'ತಾಪವನು ತನ್ನೊಳಗೆ ನೆರೆತಾಳ್ದು' ಎಂಬ ಮಾತು ತನ್ನನ್ನು ಆಶ್ರಯಿಸಿಕೊಂಡಿರುವವರಿಗೆ ಸಂತೋಷವನ್ನುಂಟುಮಾಡಲು ಅಸಮರ್ಥನಾದ್ದರಿಂದ ಅವನಿಗಾಗಿರುವ ಹೇಳಲಾರದ ವ್ಯಥೆಯ ದ್ಯೋತಕವೇ ಹೊರತು, ತನ್ನ ಈಡೇರಿಸಿಕೊಳ್ಳಲಾಗದ ಅಲ್ಪ ಐಂದ್ರಿಯಿಕ ಭೋಗದ ದುರಾಸೆಯನ್ನಲ್ಲ. ಪದ್ಯದ ಉತ್ತರಾರ್ಧದಲ್ಲಿ ಅಂಥ ದುರದೃಷ್ಟದ ಸಮಯದಲ್ಲೂ ಆತನ ಪರೋಪ ಕಾರತ್ವವು ಎಲ್ಲರ ಶ್ಲಾಘನೆಗೆ ಪಾತ್ರವಾಗಿರುವುದನ್ನು ಉನ್ಮೀಲಿತಗೊಳಿಸಲಾಗಿದೆ. (ಅವನು ಯಾರಿಂದಲೂ ತನಗಾಗಿ ಯಾವುದೇ ಉಪಕಾರವನ್ನು ಸ್ವೀಕರಿಸುವಂಥವನಲ್ಲವಾಗಿ -

ಅಂಥ ದುರದೃಷ್ಟವು ಕೊನೆಗೊಂಡಿದ್ದರೂ).

ಈಗ ಎರಡನೇ ಉದಾಹರಣೆಯತ್ತ ತಿರುಗೋಣ. ಇಲ್ಲಿಯೂ ಸಮುದ್ರದಲ್ಲಿ ಸೂರ್ಯನು ಮುಳುಗುವ ವಿಧಿ ವಿಹಿತವಾದ ಪ್ರಕೃತಿ ಸಹಜ ವ್ಯಾಪಾರವು ಕವಿ ಪ್ರತಿಭೆಯಿಂದಾಗಿ ನೂತನವೇ ಆದೊಂದು ಸ್ಪರ್ಶವನ್ನು ಪಡೆದಿರುವುದನ್ನು ನೋಡಬಹುದು. ಬ್ರಹ್ಮ ನಿರ್ಮಿತವಾದ ಸಕಲ ವಸ್ತುಗಳನ್ನೂ ಬೆಳಗಬೇಕೆಂಬ ತನ್ನ ವ್ರತವನ್ನು ಪಾಲಿಸಲೋಸುಗ ಸೂರ್ಯನು ಸಮುದ್ರದಲ್ಲಿ ಮುಳುಗುವ ಆಚರಣೆಯನ್ನು ಪ್ರಜ್ಞಾಪೂರ್ವಕವಾಗಿ ಮಾಡುತ್ತಿದ್ದಾನೆ ಎಂದು; ಸೂರ್ಯೋದಯದಿಂದ ತನ್ನ ಸಮಸ್ತವನ್ನೂ, ಅದು ತನಗೆ ಸೇರಿದ್ದಾಗಿರಬಹುದು, ಅಥವಾ ವಿರೋಧಿಗಳಿಗೆ ಸೇರಿದ್ದಾಗಿರಬಹುದು, ಎಲ್ಲವನ್ನೂ ಆವರಿಸುತ್ತಿದ್ದಾನೆ. ಹೀಗಿದ್ದಾಗ ಚಂದ್ರನ್ನಾಗಲಿ, ನಿಶೆಯನ್ನಾಗಲಿ ನಕ್ಷತ್ರ ಪುಂಜವನ್ನಾಗಲಿ, ಬೆಳಗುವುದು ಸಾಧ್ಯವೇ ಇಲ್ಲ. ಕವಿಯ ನವೀನ ವರ್ಣನೆ ಪ್ರತೀಯಮಾನನಾದ ಮಹಿಮಾವಂತ ವ್ಯಕ್ತಿಯ ಬೋಧೆ ಮಾಡುತ್ತ ಅತ್ಯಂತ ಆಹ್ಲಾದಕಾರಿಯಾಗುತ್ತದೆ.

ವಿಚಿತ್ರ ಮಾರ್ಗವನ್ನು ಬೇರೊಂದು ರೀತಿಯಿಂದ ಪ್ರಸ್ತುತ ಪಡಿಸಲಾಗುವುದು. ಅದೆಂದರೆ 40ನೇ ಕಾರಿಕೆಯ "ಪ್ರತೀಯಮಾನತಾ..."ದ ಮೂಲಕ. ಕಾವ್ಯಾರ್ಥವು ಪ್ರಧಾನ ರೂಪದಿಂದ ಹೇಳಬೇಕಾಗಿರುವ ವಸ್ತುವಿನ ಪ್ರತೀಯಮಾನತೆಯನ್ನು, ವ್ಯಂಗ್ಯ ರೂಪತೆ ಅಥವಾ ಗಮ್ಯ ಮಾನತೆಯನ್ನು ನಿಯೋಜಿಸುವ ಮೂಲಕ. ಯಾವ ರೀತಿಯಲ್ಲಿ ಎಂದರೆ, ವಾಚ್ಯ ಮತ್ತು ವಾಚಕ ವೃತ್ತಿಗಳ ಮೂಲಕ. ಅರ್ಥಾತ್ ಶಬ್ದ ಶಕ್ತಿ ಮತ್ತು ಅರ್ಥಶಕ್ತಿಗಳ ಮೂಲಕ. ಅರ್ಥಾತ್ ಶಬ್ದ ಮತ್ತು ಅರ್ಥದಿಂದ ಹೊರಹೊಮ್ಮುವ ಅಭಿಧಾಶಕ್ತಿಯಿಂದ ಭಿನ್ನ ಶಕ್ತಿಯಾದ ವ್ಯಂಜನಾಶಕ್ತಿಯ ಮೂಲಕ ಅಭಿವ್ಯಕ್ತಿಯನ್ನು ಮಾಡಲಾಗುತ್ತದೆ. ಕಾರಿಕೆಯಲ್ಲಿ ಹೇಳಿರುವ ವಾಚ್ಯ, ವಾಚಕ ವೃತ್ತಿ ಎಂಬುದರಲ್ಲಿರುವ 'ವೃತ್ತಿ' ಎಂಬುದು ಶಬ್ದ ಮತ್ತು ಅರ್ಥಗಳ ಆ ವ್ಯಂಗ್ಯಭೂತ ಅರ್ಥವನ್ನು ಅಭಿವ್ಯಕ್ತಿಸುವ ಸಾಮರ್ಥ್ಯವನ್ನು ಹೇಳುತ್ತದೆ. ಹಾಗೂ ಈ ವ್ಯಂಗ್ಯದ (ಪ್ರತೀಯಮಾನ ಅರ್ಥ). ಅರ್ಥ, ವಾಕ್ಯ ವಕ್ರತೆಯನ್ನು ವ್ಯಾಖ್ಯಾನಿಸುವಾಗ ಅತ್ಯಂತ ಸ್ಪಷ್ಟವಾಗಿ ಆಗುತ್ತದೆ. ಇದಕ್ಕೆ ಈ ಹಿಂದೆ ಉದಾಹರಿಸಲಾದ ಎರಡೂ ಪದ್ಯಗಳನ್ನು ಅನ್ವಯಿಸಿಕೊಳ್ಳಬಹುದು. (ಅರ್ಥಾತ್ ಈ ಎರಡೂ ಪದ್ಯಗಳಲ್ಲಿ "ಮಹಾಪುರುಷ"ನ ಪರವಾಗಿ ಪ್ರತೀಯಮಾನವಾಗುವ ಅರ್ಥವು ಅಭಿಧೇಯವಾಗಿರದೆ, ವ್ಯಂಜನಾಶಕ್ತಿಯ ಮೂಲಕ ಪ್ರತಿಪಾದ್ಯವಾಗಿ ನಮ್ಮ ಮುಂದೆ ಬರುತ್ತದೆ). ಅಥವಾ ಈ ಉದಾಹರಣೆ

ವಕ್ತ್ರೇಂದೋರ್ನ ಹರಂತಿ ಬಾಷ್ಪ ಪಯಸಾಂ ಧಾರಾ ಮನೋಜ್ಞಾಂ ಶ್ರಿಯಂ
ನಿಶ್ವಾಸಾ ನ ಕದರ್ಥಯಂತಿ ಮಧುರಾಂ ಬಿಂಬಾಧರಸ್ಯ ದ್ಯುತಿಮ್
ತಸ್ಯಾಸ್ತ್ವದ್ವಿರಹೇ ವಿಪಕ್ವ ಲವಲೀಲಾವಣ್ಯ ಸಂವಾದಿನೀ
ಛಾಯಾ ಕಾಪಿ ಕಪೋಲ ಯೋರನುದಿನಮ್ ತನ್ವ್ಯಾಃ ಪರಂ ಪುಷ್ಯತಿ (೧೦೦)

(ವಿರಹಿಣಿ ನಾಯಿಕೆಯ ದೂತಿಯೊಬ್ಬಳು ಅವಳ ಪ್ರೇಮಿ ನಾಯಕನ ಬಳಿ ಅವಳ ವಿರಹ ವ್ಯಥೆಯನ್ನು ನಿವೇದಿಸುತ್ತಾ ಹೇಳುತ್ತಾಳೆ)

ಅವಳ ಮುಖಚಂದ್ರಮನ ಅಂದವನು
ಕುಂದಿಸುವ ಕಂಗಳ ಧಾರೆಯಿಲ್ಲ
ಅವಳ ಬಿಂಬಾಧರಗಳ
ಹೊಳಪ ಮಸುಳಿಸುವ ನಿಟ್ಟುಸಿರಿಲ್ಲ
ನಿನ್ನ ವಿರಹದಲಿ
ಆ ಕೃಶಾಂಗಿಯ ಕೆನ್ನೆಗಳ ಕಾಂತಿಯದು
ದಿನ ದಿನವು ಬಿಳುಪೇರುತಿಹ
ಲವಲಿ ಹೂಗಳ ಚೆಲುವಿನೊಲು ವರ್ಧಿಸಿಹುದು (೧೦೦)

[ಸುಭಾಷಿತರತ್ನಕೋಷ-539]

ಇಲ್ಲಿ ವಾಚ್ಯಕ್ಕಿಂತ ಭಿನ್ನವಾದ ವ್ಯಂಗ್ಯ ವೃತ್ತಿಯಿಂದ ಕೂಡಿದ ದೂತಿಯ ಈ ಮಾತಿನ ತಾತ್ಪರ್ಯವು ಪ್ರತೀಯಮಾನ ರೂಪದಿಂದ ಸಹೃದಯರೆದುರು ಪ್ರಸ್ತುತವಾಗುತ್ತಿದೆ. ಇಲ್ಲಿ ಹೇಳಲಾದ ಮಾತಿನ ತಾತ್ಪರ್ಯ-"ನಿನ್ನ ವಿಯೋಗದ ಕಾರಣದಿಂದ ಉಂಟಾಗಿರುವ ದುಃಖಾತಿರೇಕವನ್ನು ಮುಚ್ಚಿಡಲು ಅತಿ ಪ್ರಯಾಸ ಪಡುತ್ತಿರುವುದರಿಂದ, ಅವಳಿಗೆ ಕಣ್ಣೀರು ಸುರಿಸಲಾಗಲಿ, ನಿಟ್ಟುಸಿರು ಬಿಡಲಾಗಲಿ ಸಮಯವೇ ಸಿಗುತ್ತಿಲ್ಲ. ಆದರೆ ಅವಳ ಸ್ಥಿತಿಯನ್ನು ಕುರಿತು ಹೇಳುವ ಒಂದನ್ನು ಮಾತ್ರ ಆಕೆ ಮುಚ್ಚಿಡಲಾಗುತ್ತಿಲ್ಲ. ಅದೇಂದರೆ, ಬಾಡಿದ ಲವಲೀ ಹೂವಿನ ಹೊಳೆವ ಬಿಳುಪನ್ನು ಹೋಲುವ ಅವಳ ಕೆನ್ನೆಗಳ ವಿಶಿಷ್ಟ ಪಾಂಡುರತೆ. ಅದು ದಿನ ದಿನವೂ ಹೆಚ್ಚಾಗುತ್ತಿದೆ. ಇದು ಆ ಪ್ರೇಮಿನಿಯ ಪ್ರಿಯತಮನನ್ನು ಉದ್ದೇಶಿಸಿ ದೂತಿಯು ಆಡಿದ ಮಾತಿನ ತಾತ್ಪರ್ಯ.

ಪ್ರೇಮಿನಿಯು ಆ ರೀತಿಯ ಕಾಂತಿಯಿಂದ ಕೂಡಿದ್ದಾಳೆಂಬ ದೂತಿಯ ಹೇಳಿಕೆಯು ಕುತೂಹಲ ಮತ್ತು ತೀವ್ರ ಉತ್ಕಂಠೆಯನ್ನು ಕೆರಳಿಸಲು ಕಾರಣವಾಗುತ್ತದೆಂದು ಭಾವಿಸಲಾಗಿದೆ.

ವಿಚಿತ್ರ ಮಾರ್ಗವನ್ನು ಬೇರೊಂದು ರೀತಿಯಿಂದಲೂ ಪ್ರತಿಪಾದಿಸಲಾಗುವುದು. "ಸ್ವಭಾವ...ಇತ್ಯಾದಿ (41ನೇ ಕಾರಿಕೆಯ ಮೂಲಕ. ಇದರಲ್ಲಿ ವಸ್ತುಗಳ (ಭಾವಗಳ) ಸ್ವಭಾವವನ್ನು ಅವುಗಳ ಸಹಜ ಸೌಂದರ್ಯವನ್ನು ಉದ್ದಿಷ್ಟ ರಸನಿರ್ಭರತೆಯಿಂದ ಕೂಡಿರುವಂತೆ ವರ್ಣಿಸಲಾಗುವುದು. ಅದನ್ನು ಹೇಗೆ ಸಾಧಿಸಲಾಗುವುದು? ವಸ್ತುವಿಗೆ ರಮಣೀಯವಾದ ವೈಚಿತ್ರ್ಯದಿಂದ ವೃದ್ಧಿಯನ್ನು ಉಂಟು ಮಾಡುವ ಮೂಲಕ. ಲೋಕೋತ್ತರವಾದ ಹೃದಯಾಪ ಹಾರಿಯಾದ ವಿದಗ್ಧತೆಯಿಂದ ಅಲಂಕರಣಗೊಳಿಸುವ ಮೂಲಕ. ಭಾವ ಶಬ್ದವನ್ನು ಎಲ್ಲ ಪದಾರ್ಥಗಳನ್ನು ಸೂಚಿಸಲು ಬಳಸಲಾಗಿದೆ; ರತಿ ಇತ್ಯಾದಿ ಭಾವಗಳನ್ನಷ್ಟೇ ಅಲ್ಲ.

ಉದಾಹರಣೆಗೆ

ಕ್ರೀಡಾಸು ಬಾಲ ಕುಸುಮಾಯುಧ ಸಂಗತಾಯಾ
ಯತ್ತತ್ ಸ್ಮಿತಂ ನ ಖಲುಸ್ಮಿತಮಾತ್ರಮೇವ|
ಆಲೋಕ್ಯತೇ ಸ್ಮಿತ ಪಟಾಂತರಿತಂ ಮೃಗಾಕ್ಷ್ಯಾ-
ಸ್ತಸ್ಯಾಃ ಪರಿಸ್ಫುರದಿವಾಪರಮೇವ ಕಿಂಚಿತ್|| (೧೦೧)

ಕಾಮ ಕೇಳಿಯೊಳು ಪ್ರಣಯದಾರಂಭದೊಳು
ಆ ಹರಿಣಾಕ್ಷಿ ಬೀರಿದ ಸ್ಮಿತವದು
ಬರಿದೆ ಸ್ಮಿತವಲ್ಲವು
ಮಂದಹಾಸದ ಜವನಿಕೆಯ ಮರೆಯೊ-
ಳಿನ್ನೇನೊ ಕಾಂಬವೊಲಿರ್ದುದು. (೧೦೧)

'ಅವಳ ಮುಗುಳ್ನಗೆಯು ಕೇವಲ ಮುಗುಳ್ನಗೆಯಲ್ಲ' ಎಂಬ ಪದ್ಯದ ಪೂರ್ವಾರ್ಧದ ಮಾತು ತೀವ್ರ ಅಭಿಲಾಷೆ ಮತ್ತು ಪ್ರೇಮ ಭಾವನೆಯನ್ನು ಅತ್ಯಂತ ಸುಂದರವಾಗಿ ಅಭಿವ್ಯಕ್ತಿಸುತ್ತದೆ. ಉತ್ತರಾರ್ಧದಲ್ಲಿ "ಮುಗುಳ್ನಗೆಯೆಂಬ ತೆರೆಯ ಮರೆಯಲ್ಲಿ ಬೇರಿನ್ನೇನೋ ಪರಿಸ್ಫುಟಿತ ವಾಗುತ್ತಿತ್ತು"ಎಂಬಲ್ಲಿ ರಮಣೀಯ ವೈಚಿತ್ರ್ಯ ಶೋಭೆಯು ಕಂಡು ಬರುತ್ತದೆ.

ಇದೀಗ ವಿಚಿತ್ರ ಮಾರ್ಗದ ಉಪಸಂಹಾರ ಮಾಡಬಹುದು. "ವಿಚಿತ್ರೋಯತ್ರ .. ಎಂಬ 42ನೇ ಕಾರಿಕೆಯ ಮೂಲಕ. ವಿಚಿತ್ರ ಮಾರ್ಗವು ವಕ್ರೋಕ್ತಿಯ ವೈಚಿತ್ರ್ಯವನ್ನೇ ಅರ್ಥಾತ್ ಅಲಂಕಾರ ವೈಚಿತ್ರ್ಯವನ್ನೇ ಜೀವಧಾತುವನ್ನಾಗಿ ಉಳ್ಳದು. ವೈಚಿತ್ರ್ಯದ ಕಾರಣದಿಂದಾಗಿಯೇ ವಿಚಿತ್ರ ಮಾರ್ಗಕ್ಕೆ 'ವಿಚಿತ್ರ' ಎಂಬ ಶಬ್ದವು ಬಳಕೆಯಾಗಿದೆ. ಹಾಗಾಗಿ ವಕ್ರೋಕ್ತಿ ಹೇಗಿರುತ್ತದೆ-ಯಾವುದರಲ್ಲಿ ಯಾವುದಾದರೊಂದು ಅತಿಶಯೋಕ್ತಿಯು ಪರಿಸ್ಫುಟಿತವಾಗುತ್ತಿರುತ್ತದೋ ಅದು. ಅರ್ಥಾತ್ ಲೋಕೋತ್ತರವಾದ ಅತಿಶಯದಿಂದ ಕೂಡಿದ ಅಭಿವ್ಯಕ್ತಿಯು ಯಾವುದರ ಅಂತರಾಳದೊಳಗಿಂದ ಹೊರ ಹೊಮ್ಮುತ್ತಿರುತ್ತದೋ ಅದು. ಉದಾ.

ಯತ್ಸೇನಾರಜಸಾಮುದಂಚತಿ ಚಯೇ ದ್ವಾಭ್ಯಾಂ ದವೀಯೋಽತರಾನ್
ಪಾಣಿಭ್ಯಾಂ ಯುಗಪದ್ವಿಲೋಚನ ಪುಟಾನಷ್ಟಾಕ್ಷಮೋ ರಕ್ಷಿತುಮ್|
ಏಕೈಕಮ್ ದಲಮುನ್ನಮಯ್ಯ ಗಮಯನ್ ವಾಸಾಂಬುಜಂ ಕೋಶ ತಾಮ್
ಧಾತಾ ಸಂವರಣಾಕುಲಶ್ಚಿರಮಭೂತ್ ಸ್ವಾಧ್ಯಾಯ ಬದ್ಧಾನನಃ(೧೦೨)

(ಬಾಲ ರಾಮಾಯಣ VII-66)

ಸುತ್ತು ಮುತ್ತೆಲ್ಲ ಕವಿಯೆ
ಸೇನೆಯ ಪದಹತಿಯಿಂದೆದ್ದ ಧೂಳಿ ತಾನದು
ಕಣ್ಗಳ ನಡುವಿನಂತರವು ಹೆಚ್ಚೆನಿಸಿ
ಕೈಗಳಿಂ ಮುಚ್ಚಲಾರದೆ ಅವುಗಳನು
ಕಮಲ ಪೀಠದ ಒಂದೊಂದೆ ದಳಗಳನು ಕಿತ್ತು
ಕಣ್ಗಳಿಗೋವರಿಗೈವ ಆಕುಲದೊಳು
ಸ್ವಾಧ್ಯಾಯದಲಿ ನಿರತನಿದ್ದನು ಬೊಮ್ಮನು (೧೦೨)

ಇಲ್ಲಿ ವೈಚಿತ್ರ್ಯಕ್ಕೆ ಕಾರಣವಾಗಿರುವುದು ಸಂಭಾವನೆಯ ಅನುಮಾನವನ್ನು ಆಧರಿಸಿದ ಉತ್ಪ್ರೇಕ್ಷೆಯ ಪ್ರತೀಯ ಮಾನತೆ ಹಾಗೂ ಆ ವೈಚಿತ್ರ್ಯವು ಮೆಟ್ಟಿಲು ಮೆಟ್ಟಿಲಾಗಿ ಪರಾಕಾಷ್ಠೆಯನ್ನು ತಲುಪಿರುವ ರಮಣೀಯತೆಯ ಕಾರಣದಿಂದಾಗಿ ಅತಿಶಯೋಕ್ತಿಯ

ವಿಲಾಸವನ್ನು ಪ್ರಸ್ತುತ ಪಡಿಸುತ್ತಿರುವಂತೆ ತೋರುತ್ತದೆ.

ಹೀಗೆ ವೈಚಿತ್ರ್ಯ ಮಾರ್ಗವನ್ನು ವ್ಯಾಖ್ಯಾನಿಸಿ, ಗ್ರಂಥ ಕರ್ತೃವು ಈಗ ಅದರ ಗುಣಗಳನ್ನು ವ್ಯಾಖ್ಯಾನಿಸುತ್ತಾನೆ.

ವೈದಗ್ಧ್ಯಸ್ಯಂದಿ ಮಾಧುರ್ಯಂ ಪದಾನಾಮತ್ರಬಧ್ಯತೇ|
ಯಾತಿ ಯತ್ಯಕ್ತ ಶೈಥಿಲ್ಯಂ ಬಂಧ ಬಂಧುರತಾಂಗತಾಮ್(44)

ಆ ವಿಚಿತ್ರ ಮಾರ್ಗದಲ್ಲಿ ಪದಗಳ ವೈದಗ್ಧ್ಯಸ್ಯಂದಿಯಾದ ಮಾಧುರ್ಯ ಗುಣವನ್ನು ಯೋಜಿಸಲಾಗುವುದು. ಆ ಮಾಧುರ್ಯ ಗುಣವೆಂಬುದು ಶಿಥಿಲತೆಯನ್ನು ತ್ಯಜಿಸಿ, ವಾಕ್ಯ ವಿನ್ಯಾಸದ ರಮಣೀಯತೆಗೆ ಕಾರಣವಾಗುತ್ತದೆ. (44)

ಈ ವಿಚಿತ್ರ ಮಾರ್ಗದಲ್ಲಿ ವಾಕ್ಯಗಳ ಅವಯವಗಳೆನಿಸಿದ ವೈದಗ್ಧ್ಯಸ್ಯಂದಿಯಾದ, ವೈಚಿತ್ರ್ಯದಿಂದ ಕೂಡಿದ ಪದಗಳ ಮಾಧುರ್ಯವನ್ನು ಯೋಜಿಸಲಾಗುತ್ತದೆ. ಈ ಮಾಧುರ್ಯ ಗುಣವಾದರೋ ಶೈಥಿಲ್ಯವನ್ನು ಬಿಟ್ಟು ಕೊಟ್ಟು ಅರ್ಥಾತ್ ಕೋಮಲ ಭಾವವನ್ನು ತ್ಯಜಿಸಿ, ಬಂಧ ಸೌಂದರ್ಯದ ಅರ್ಥಾತ್ ಸಂಘಟನೆಯ ಸೌಂದರ್ಯದ ಸಾಧನವಾಗಿ ಬಿಡುತ್ತದೆ.

ಉದಾಃ

ಕಿಂ ತಾರುಣ್ಯತರೋಃ ಇತ್ಯಾದಿ (೧೦೩)*

ಹಿಂದೆ ಉದಾಹರಿಸಿದ ಉದಾಹರಣೆಯನ್ನು ನೋಡಬಹುದು

'ಮಾಧುರ್ಯ' ಗುಣವನ್ನು ವಿವರಿಸಿದ ನಂತರ ಪ್ರಸಾದ ಗುಣವನ್ನು ಪ್ರಸ್ತುತ ಪಡಿಸಲಾಗುವುದು.

ಅಸಮಸ್ತ ಪದನ್ಯಾಸಃ ಪ್ರಸಿದ್ಧಃ ಕವಿವರ್ತ್ಮನಿ
ಕಿಂಚಿದೋಜಃ ಸ್ಪೃಶನ್ ಪ್ರಾಯಃ ಪ್ರಸಾದೋಽಪ್ಯತ್ರದೃಶ್ಯತೇ(45)

ಈ ವಿಚಿತ್ರ ಮಾರ್ಗದಲ್ಲಿ, ಕವಿ ಪರಂಪರೆಯಲ್ಲಿ ಪ್ರಸಿದ್ಧವಾಗಿರುವ, ಕೆಲಮಟ್ಟಿಗೆ ಓಜಸ್ಸಿನ ಸ್ಪರ್ಶವನ್ನು ಹೊಂದಿರುವ, ಸಮಾಸ ರಹಿತ ಪದಗಳ ರಚನೆಯೇ ಪ್ರಸಾದ ಗುಣವೆನಿಸುತ್ತದೆ. (45)

ಕವಿ ಪರಂಪರೆಯಲ್ಲಿ ಪ್ರಸಾದವೆಂಬ ಹೆಸರಿನ ಗುಣವು ಸಮಾಸ ರಹಿತ ಪದಗಳೊಂದಿಗೆ

**ಟಿಪ್ಪಣಿ:*

ಕಿಂತಾರುಣ್ಯ ತರೋರಿಯಂ ರಸಭರೋದ್ಭಿನ್ನಾ ನವಾವಲ್ಲರೀ
ಲೀಲಾ ಪ್ರೋಚ್ಛಲಿತಸ್ಯ ಕಿಂ ಲಹರಿಕಾ ಲಾವಣ್ಯ ವಾರಾನ್ನಿಧೇಃ

ಇಲ್ಲಿ ಕವಿ ತಾರುಣ್ಯತರು, ರಸಭರೋದ್ಭಿನ್ನಾ, ನವಾವಲ್ಲರೀ, ಲಾವಣ್ಯವಾರಾನ್ನಿಧೇಃ ಎಂಬವೇ ಮೊದಲಾದ ಲೋಕೋತ್ತರ ವೈಚಿತ್ರ್ಯವನ್ನು ಸಮರ್ಥಿಸುವ ಪದಗಳನ್ನು ಪ್ರಯೋಗಿಸಿದ್ದಾನೆ. ಹಾಗಾಗಿ ಇಲ್ಲಿಯೂ ಮಾಧುರ್ಯ ಗುಣವಿದೆ

ಮಿಳಿತವಾಗಿರುತ್ತದೆಂಬುದು ಈಗಾಗಲೇ ಪ್ರಸಿದ್ಧವಾಗಿದೆ. ಅಲ್ಲದೆ ಇದು ವಿಚಿತ್ರ ಮಾರ್ಗದ ವಿಷಯದಲ್ಲೂ ನಿಜ. ಬಂಧ ಸೌಂದರ್ಯವನ್ನುಂಟು ಮಾಡುವ ಸಲುವಾಗಿ ಅದು ಎದ್ದು ಕಾಣುವಂತೆ ಕಿಂಚಿತ್ ಓಜೋಗುಣದ ಸ್ಪರ್ಶವನ್ನು ಬಹುಮಟ್ಟಿಗೆ ಅಳವಡಿಸಿಕೊಂಡಿರುತ್ತದೆ. ಆ ರೀತಿಯ 'ಓಜೋ'ಗುಣವು ಸಮಾಸ ಯುಕ್ತ ವಾಕ್ಯಗಳಲ್ಲಿ ನಿಹಿತವಾಗಿರುವಂಥದೆಂಬುದನ್ನು, ಪ್ರಾಚೀನ ಆಚಾರ್ಯರು ಹೇಳಿದ್ದಾರೆ. ಇದರ ಮಥಿತಾರ್ಥವೆಂದರೆ ಹಿಂದೆ ಹೇಳಿದ ಪ್ರಸಾದಗುಣದ (ಸುಕುಮಾರ ಮಾರ್ಗದ ಗುಣಗಳನ್ನು ಪ್ರತಿಪಾದಿಸುವ 31 ನೇ ಕಾರಿಕೆ) ಲಕ್ಷಣಗಳೊಂದಿಗೆ 'ಓಜೋ' ಗುಣದ ಒಂದು ಸ್ಪರ್ಶವೂ ಸೇರಿತೆಂದರೆ, ಅದು ವಿಚಿತ್ರ ಮಾರ್ಗದ ಉತ್ಕೃಷ್ಟ ಗುಣಲಕ್ಷಣವೆನಿಸುತ್ತದೆ.

ಉದಾಹರಣೆಗೆ:

ಅಪಾಂಗತ ತಾರಕಾಃ ಸ್ತಿಮಿತ ಪಕ್ಷ್ಮ ಪಾಲೀಭೃತಃ
ಸ್ಫುರತ್‌ಸುಭಗಕಾಂತಯಃ ಸ್ಮಿತ ಸಮುದ್ಗತಿದ್ಯೋತಿತಾಃ
ವಿಲಾಸಭರ ಮಂಥರಾಸ್ತರಲ ಕಲ್ಪಿತೈಕಭ್ರುವೋ
ಜಯಂತಿ ರಮಣಾರ್ಪಿತಾಃ ಸಮದ ಸುಂದರೀ ದೃಷ್ಟಯಃ (೧೦೪)*

ಕಟಾಕ್ಷದೆಡೆಗೆ ಸರಿದ ಕಣ್ಣ ಬೊಂಬೆಗಳ
ಮಿನುಗುತಲಿ ಚಲಿಸದೆಯೆ ನಿಂತ ರೆಪ್ಪೆಗಳ
ಸುಭಗ ಕಾಂತಿಯ ಮುಗುಳು ನಗೆಯಿಂ ಹೊಳೆಯುತಿಹ,
ವಿಲಾಸ ಭರದಿಂ ಕೆದರಿರುವ ಹುಬ್ಬೊಂದ
ಚಂಚಲಗೊಳಿಸುತೆ ಪ್ರಿಯ ನೆಡೆಗೆ ನಟ್ಟ
ಮದಭರಿತ ಸುಂದರಿಯ ನೋಟವದು ಗೆಲಲಿ (೧೦೪)

ಪ್ರಸಾದ ಗುಣವನ್ನು ಬೇರೊಂದು ವಿಧದಿಂದ ಪ್ರಸ್ತುತ ಪಡಿಸಬಹುದು

ಗಮಕಾನಿ ನಿಬಧ್ಯಂತೇ ವಾಕ್ಯೇ ವಾಕ್ಯಾಂತರಾಣ್ಯಪಿ
ಪದಾನೀವಾತ್ರ ಕೋಽಪ್ಯೇಷ ಪ್ರಸಾದಸ್ಯಾಪರಃ ಕ್ರಮಃ (46)

ವಾಕ್ಯದ ಘಟಕಗಳೆನಿಸಿದ ಪದಗಳು ತಮ್ಮೊಳಗೆ ಸಮರಸಗೊಳ್ಳುವ ಹಾಗೆ ಒಂದು ವಾಕ್ಯದಲ್ಲಿ ಇತರೆ ವಾಕ್ಯಗಳು ಸಮರಸವಾಗಿ ಏಕೀಭವಿಸುವಂತಾದರೆ, ಆಗ ಪ್ರಸಾದ ಗುಣದ ಇನ್ನೊಂದು ಪ್ರಕಾರವನ್ನು ನಾವು ಪಡೆಯಬಹುದು.

ವಿಚಿತ್ರ ಮಾರ್ಗದಲ್ಲಿ, ಪದಗಳ ಸಮುದಾಯವಾದ ವಾಕ್ಯವು ಇತರೆ ಅನೇಕ ಸಮರ್ಪಕ

ಇಲ್ಲಿ ಕವಿಯು ಶೃಂಗಾರ ರಸವನ್ನು ಅತ್ಯಂತ ಮನೋಹರವಾದ ರೀತಿಯಲ್ಲಿ ಪ್ರಸ್ತುತ ಪಡಿಸಿದ್ದಾನೆ. ಪದಗಳ ಪ್ರಯೋಗ ಅರ್ಥವನ್ನು ಕೂಡಲೇ ಸ್ಪಷ್ಟಗೊಳಿಸುವಂಥದು. ಅಲ್ಲದೆ 3-4 ಸಮಾಸಗಳಿಂದ ಕೂಡಿರುವ ಎಲ್ಲ ಪದಗಳು ಸ್ವಲ್ಪಮಟ್ಟಿಗೆ ಓಜೋಗುಣದ ಸ್ಪರ್ಶವನ್ನು ಪಡೆದಿವೆಯಾಗಿ ಇದು ವಿಚಿತ್ರ ಮಾರ್ಗದ, 'ಪ್ರಸಾದ' ಗುಣಕ್ಕೆ ಉದಾಹರಣೆಯಾಗಿದೆ

ವಾಕ್ಯಾಂಶಗಳಿಂದ ಕೂಡಿಕೊಂಡಿರುತ್ತದೆ. ಹೇಗೆ ಎಂದರೆ, ಅನೇಕ ಸಾರ್ಥಕ ಪದ ಘಟಕಗಳ ಹಾಗೆ. ಅರ್ಥಾತ್, ಅವುಗಳ ಪರಸ್ಪರ ಅಂತರ್ ಸಂಬಂಧವು ಅತ್ಯಂತ ನಿಕಟವಾಗಿರುತ್ತದೆ. ಇದೊಂದು ಪ್ರಸಾದ ಗುಣದ ಅಪೂರ್ವ ಪ್ರಕಾರ. ವಾಕ್ಯ ವಿನ್ಯಾಸಕ್ಕೆ ಶೋಭೆಯನ್ನುಂಟು ಮಾಡುವ ಪ್ರಕಾರ.

ಉದಾ:

ನಾಮಾಪ್ಯಂತರೋಃ... (೧೦೫)-(91)

ಪ್ರಸಾದ ಗುಣದ ನಂತರ, ಲಾವಣ್ಯದ ಲಕ್ಷಣವನ್ನು ನಿರೂಪಿಸಲಾಗುವುದು.

ಅತ್ರಾಲುಪ್ತ ವಿಸರ್ಗಾಂತೈಃ ಪದೈಃ ಪ್ರೋತೈಃ ಪರಸ್ಪರಮ್
ಹ್ರಸ್ವೈಃ ಸಂಯೋಗ ಪೂರ್ವೈಶ್ಚ ಲಾವಣ್ಯಮತಿರಿಚ್ಯತೇ (47)

ವಿಸರ್ಗಗಳನ್ನು ಪದಾಂತ್ಯದಲ್ಲಿ ಹೊಂದಿರುವ, ಪರಸ್ಪರ ಸಂಶ್ಲಿಷ್ಟವಾದ, ಹ್ರಸ್ವ ಹಾಗೂ ಸಂಯೋಗ ಪೂರ್ವ ಪದಗಳಿಂದ ಲಾವಣ್ಯ ಗುಣವು ಪರಿಪುಷ್ಟಗೊಳ್ಳುತ್ತದೆ. (47)

'ವಿಚಿತ್ರ' ಮಾರ್ಗದಲ್ಲಿ 'ಲಾವಣ್ಯ' ಗುಣವು ಈ ರೀತಿಯ ಪದಗಳಿಂದ ಪರಿಪುಷ್ಟಗೊಳ್ಳುತ್ತದೆ. ಅವುಗಳೆಂದರೆ, ಪರಸ್ಪರ ಒಂದು ಮತ್ತೊಂದರೊಡನೆ ಅನ್ಯೋನ್ಯವಾಗಿ ಸಂಶ್ಲಿಷ್ಟಗೊಂಡಿರುವ (ಸೇರಿರುವ) ಪದಗಳಿಂದ, ಕಿವಿಗೆ ಕೇಳಿಸುವ ವಿಸರ್ಜನೀಯಗಳನ್ನು ಅಂತ್ಯವಾಗುಳ್ಳ ಪದಗಳಿಂದ, ಹಾಗೂ ಸಂಯೋಗ ಪೂರ್ವದಲ್ಲಿ ಹ್ರಸ್ವವಾಗಿರುವ ಪದಗಳಿಂದ. ತಾತ್ಪರ್ಯವೆಂದರೆ, ಸುಕುಮಾರ ಮಾರ್ಗದ ಲಕ್ಷಣ ನಿರೂಪಣೆಯ ಸಂದರ್ಭದಲ್ಲಿ (32ನೇ ಕಾರಿಕೆ) ಹೇಳಲಾಗಿರುವ ಲಾವಣ್ಯದ ಗುಣಲಕ್ಷಣಗಳ ಜೊತೆಗೆ ಈಗ ಹೊಸದಾಗಿ ಸೇರಿಸಿದವುಗಳೂ 'ವಿಚಿತ್ರ'ದಲ್ಲಿ ಲಾವಣ್ಯವನ್ನು ಪರಿಪುಷ್ಟ ಗೊಳಿಸುತ್ತವೆ. ಉದಾ:

ಶ್ವಾಸೋತ್ಕಂಪ ತರಂಗಿಣಿ ಸ್ತನ ತಟೇ ಧೌತಾಂಜನ ಶ್ಯಾಮಲಾಃ
ಕೀರ್ಯಂತೇ ಕಣಶಃ ಕೃ ಶಾಂಗಿ ಕಿಮಮೀ ಬಾಷ್ಪಾಂಭಸಾಂ ಬಿಂದವಃ
ಕಿಂಚಾ ಕುಂಚಿತ ಕಂಠರೋಧ ಕುಟಿಲಾಃ ಕರ್ಣಾಮೃತಸ್ಯಂದಿನೋ
ಹುಂಕಾರಾಃ ಕಲಪಂಚಮ ಪ್ರಣಯಿನ ಸ್ತ್ರುಟ್ಯಂತಿ ನಿರ್ಯಾಂತಿ ಚ (೧೦೬)

(ಸುಭಾಷಿತ ರತ್ನಕೋಶ -737)

ನಿನ್ನ ಕಣ್ಣೀರ ಹನಿಯಿಂದ ಕಾಡಿಗೆಯು
ಕರಗಿ ಕಪ್ಪಾಗಿ ಕಣ ಕಣವಾಗಿ
ಶ್ವಾಸವೇಗದೆ ಏರಿಳಿವ ಮೊಲೆಯ ಬಳಿ ತಾಗಿ
ನಿಂದುವೇಕಲೆ ತೆಳುಮೈಯ ಬಾಲೆ?
ಕೋಗಿಲೆಯ ಪಂಚಮದ ಇಂಚರದ ಹಾಗೆ
ಕಿವಿಗೆ ಸೊದೆಯನು ಕರೆವ ನಿನ್ನ ನರಳಿಕೆಯದುವು
ಉಬ್ಬುಗೊರಲಿಂದ ತಡೆ ತಡೆದು ಬರುವುದೇಕೆ? (೧೦೬)

(ಸುಭಾಷಿತ ರತ್ನಕೋಶ-737)

ಅಥವಾ ಇನ್ನೊಂದು ಉದಾಹರಣೆ

ಏತನ್ಮಂದ ವಿಪಕ್ವತಿಂದುಕಫಲ ಶ್ಯಾಮೋದರಾಪಾಂಡುರ -
ಪ್ರಾಂತಂ ಹಂತ ಪುಲಿಂದ ಸುಂದರ ಕರ ಸ್ಪರ್ಶಕ್ಷಮಂ ಲಕ್ಷ್ಯತೇ|
ತತ್ ಪಲ್ಲೀಪತಿ ಪುತ್ರಿ ಕುಂಜರಕುಲಂ ಕುಂಭಾಭಯಾಭ್ಯರ್ಥನಾ
ದೀನಂ ತ್ವಾಮನುನಾಥತೇ ಕುಚಯುಗಂ ಪತ್ರಾಂಶುಕೈರ್ಮಾ ಪಿಧಾಃ(೧೦೭)*

(ಸದೂಕ್ತಿಕರ್ಣಾಮೃತ - **II - 396**)

ಮುಚ್ಚದಿರು ನಿನ್ನ ಮೊಲೆಗಳನು
ಎಲೆಯ ವಸ್ತ್ರದಿಂದೆಲೆ ಊರ ಗೌಡರ ಮಗಳೆ
ತೊಟ್ಟು ಮಾತ್ರ ಪಕ್ವ ನೇರಿಳೆಯ ಹಾಗೆ ಕಪ್ಪಾಗಿ
ಉಳಿದೆಲ್ಲ ಅಚ್ಚ ಬಿಳುಪಾಗಿ ಇರುವ
ಈ ನಿನ್ನ ದುಂಡು ಮೊಲೆಗಳವು
ಬೇಡರ ಹುಡುಗನ ಸುಂದರ ಕರಸ್ಪರ್ಶಕೆ ತಕ್ಕವಿವೆ.
ಅದರಿಂದ ಆನೆಗಳ ಹಿಂಡು ತಮ್ಮ ಕುಂಭಸ್ಥಲದ
ಕೀರ್ತಿಯನು ಕಾಯಬೇಕೆಂದು ದೈನದಿಂ ಕೋರುತಿಹವು. (೧೦೭)

ಅದೇ ರೀತಿ ಇನ್ನೊಂದು ಉದಾಹರಣೆ :

ಹಂಸಾನಾಂ ನಿನದೇಷು ಇತಿ (೧೦೮) (73ನೇ ಉದಾಹರಣೆ ನೋಡಬೇಕು)

ಹೀಗೆ 'ಲಾವಣ್ಯ' ದ ಗುಣಲಕ್ಷಣಗಳನ್ನು ತಿಳಿಸಿ, ಈಗ 'ಅಭಿಜಾತ್ಯ'ದ ಲಕ್ಷಣವನ್ನು ನಿರೂಪಿಸುತ್ತಾನೆ.

ಯನ್ನಾತಿ ಕೋಮಲಚ್ಛಾಯಂ ನಾತಿ ಕಾಠಿನ್ಯಮುದ್ವಹತ್
ಅಭಿಜಾತ್ಯಂ ಮನೋಹಾರಿ ತದತ್ರ ಪ್ರೌಢಿ ನಿರ್ಮಿತಮ್(48)

ಈ ವಿಚಿತ್ರ ಮಾರ್ಗದಲ್ಲಿ ಯಾವುದು ಅತಿಯಾದ ಕೋಮಲ ಕಾಂತಿಯಿಂದಾಗಲಿ, ಅತಿಯಾದ ಕಾಠಿಣ್ಯದಿಂದಾಗಲಿ ಕೂಡಿರದೆ ಪ್ರೌಢಿಯಿಂದ ವಿರಚಿತವಾದದ್ದಾಗಿ ಎಲ್ಲರ ಹೃದಯ ವನ್ನೂ ಅಪಹರಿಸುವಂಥದಾಗಿರುತ್ತದೋ ಅದೇ ಅಭಿಜಾತ್ಯವೆಂಬ ಗುಣ ವೆನಿಸುತ್ತದೆ (48)

ಈ ವಿಚಿತ್ರ ಮಾರ್ಗದಲ್ಲಿ, ಅಭಿಜಾತ್ಯದ ಲಕ್ಷಣಗಳನ್ನು; ಅಧಿಕ ಕೋಮಲ ಛಾಯೆಯನ್ನು

ಈ ಪದ್ಯದಲ್ಲಿ 'ಪಿಧಾಃ' ಎಂಬುದನ್ನು ಹೊರತುಪಡಿಸಿ ಬೇರೆ ಯಾವುದೇ ಅಲುಪ್ತ ವಿಸರ್ಗಾಂತ ಪದದ ಪ್ರಯೋಗವಾಗಿಲ್ಲ. ಆದರೂ ಎಲ್ಲ ಪದಗಳೂ ಪರಸ್ಪರವಾಗಿ ಸೊಗಸಾಗಿ ಸಂಶ್ಲಿಷ್ಟಗೊಂಡಿವೆ. ಅಲ್ಲದೆ ಏತನ್ಮಂದ ವಿಪಕ್ವತಿಂದುಕಫಲ ಶ್ಯಾಮೋ, ರ ಪ್ರಾಂತ, ಹಂತ, ಪುಲಿಂದ, ಸುಂದರಕರ ಸ್ಪರ್ಶಕ್ಷಮಂಲಕ್ಷ್ಯತೇ ಇತ್ಯಾದಿ ಎಲ್ಲ ಪದಗಳಲ್ಲಿ ಸಂಯೋಗಕ್ಕೆ ಮುನ್ನ ಹ್ರಸ್ವ ವರ್ಣಗಳ ಪ್ರಯೋಗದಿಂದ ಶ್ಲೋಕದಲ್ಲಿ ಒಂದು ಅಪೂರ್ವ ಚಮತ್ಕಾರ ಉಂಟಾಗಿದೆ. ಅದರಿಂದ ಲಾವಣ್ಯಗುಣ ಪೂರ್ಣವಾಗಿ ಪೋಷಿತವಾಗಿದೆ

(ರಾಧೇ ಶ್ಯಾಮ್ ಮಿಶ್ರರ ಹಿಂದೀ ವಕ್ರೋಕ್ತಿ ಜೀವಿತ-ಪುಟ-146ರ ಅಡಿಟಿಪ್ಪಣಿ)

ಹೊಂದಿರದ, ಅಂದರೆ ಅತ್ಯಧಿಕ ಸ್ನಿಗ್ಧತೆಯಿಂದ ಕೂಡಿರದ ಹಾಗೂ ಹೆಚ್ಚು ಕಾಠಿಣ್ಯದಿಂದ ಕೂಡಿರದ, ಅರ್ಥಾತ್ ಅಧಿಕ ಕಠೋರತೆಯನ್ನು ಧಾರಣೆಮಾಡಿರದ, ಪ್ರೌಢಿಮೆಯಿಂದ ನಿರ್ಮಿತವಾದ, ಅರ್ಥಾತ್ ಕವಿಯ ಸಮಗ್ರ ಕುಶಲತೆಯಿಂದ ರಚಿತವಾದ, ಮನೋಹರವಾದ ಅಂದರೆ ಹೃದಯಕ್ಕೆ ಆನಂದವನ್ನು ಉಂಟು ಮಾಡುವ ಎಂದು ಹೇಳಲಾಗಿದೆ.

ಉದಾ:

(ಸಖಿಯೊಬ್ಬಳು ನಾಯಿಕೆಯನ್ನು ಕೇಳುತ್ತಾಳೆ)

ಅಧಿಕರತಲತಲ್ಪಂ ಕಲ್ಪಿತ ಸ್ವಾಪ ಲೀಲಾ -
ಪರಿಮಲನ ನಿಮೀಲ ತ್ಪಾಂಡಿಮಾ ಗಂಡ ಪಾಲೀ
ಸುತನು ಕಥಯ ಕಸ್ಯ ವ್ಯಂಜಯ ತ್ಯಂಜಸ್ಯೈವ
ಸ್ಮರನರಪತಿ ಕೇಲೀ ಯೌವ ರಾಜ್ಯಾಭಿಷೇಕಂ (೧೦೯)*

ಅಂಗೈಯ ತಲ್ಪದೊಳು
ಲೀಲೆಯಿಂದಲಿ ನಿದ್ರೆಗೈದುದರಿಂದೆ
ಮೊಗದ ಪಾಂಡುರತೆಯದು
ಮಾಯವಾಗಿರುವ ನಿನ್ನ ಕಪೋಲರಂಗ ಸ್ಥಳವು
ಆವ ಅದೃಷ್ಟಶಾಲಿ ಮದನಭೂಪತಿಯ ಕ್ರೀಡಾ
ಯೌವರಾಜ್ಯಾಭಿಷೇಕವನು ಸೂಚಿಸುತಿಹುದು ಸುಂದರಿಯೆ ? (೧೦೯)*

ಹೀಗೆ ಸುಕುಮಾರ ಮಾರ್ಗದಲ್ಲಿ ಹೇಳಲಾದ (ಮಾಧುರ್ಯ, ಪ್ರಸಾದ, ಲಾವಣ್ಯ ಹಾಗೂ ಅಭಿಜಾತ್ಯ) ಗುಣಗಳೇ ವಿಚಿತ್ರ ಮಾರ್ಗದಲ್ಲಿ ಹೊಸದೇ ಎನ್ನಬಹುದಾದೊಂದು ಅತಿಶಯತೆಯನ್ನು ಪಡೆದುಕೊಂಡು ಬಿಡುತ್ತವೆ ಎಂದು ತಿಳಿಯಬೇಕು.

ಅಭಿಜಾತ್ಯ ಪ್ರಭೃತಯಃ ಪೂರ್ವಮಾರ್ಗೋದಿತಾ ಗುಣಾಃ
ಅತ್ರಾತಿಶಯ ಮಾಯಾಂತಿ ಜನಿತಾಹಾರ್ಯ ಸಂಪದಃ (೧೧೦)

ಇದೊಂದು ಅಂತರ ಶ್ಲೋಕ

ಸುಕುಮಾರ ಮಾರ್ಗದಲ್ಲಿ ಹೇಳಲಾದ ಅಭಿಜಾತ್ಯವೇ ಮೊದಲಾದ (ಮಾಧುರ್ಯ, ಪ್ರಸಾದ, ಲಾವಣ್ಯ ಮತ್ತು ಅಭಿಜಾತ್ಯ) ಗುಣಗಳು ಇಲ್ಲಿ ಈ ವಿಚಿತ್ರ ಮಾರ್ಗದಲ್ಲಿ ಕವಿಯ ವ್ಯುತ್ಪತ್ತಿ ಜನ್ಯವಾದ ಆಲಂಕಾರಿಕ ಸೌಂದರ್ಯವನ್ನು ಉಂಟುಮಾಡಿ ಅಪೂರ್ವದೊಂದು ಅತಿಶಯತೆಯನ್ನು ಪಡೆದು ಕೊಳ್ಳುತ್ತವೆ. (೧೧೦)

ವಿಚಿತ್ರ ಮಾರ್ಗದ ಲಕ್ಷಣವನ್ನು ವಿವರಿಸಿದ ನಂತರ ಇದೀಗ ಮಧ್ಯಮ ಮಾರ್ಗವನ್ನು

---

*ಟಿಪ್ಪಣಿ: ಈ ಪದ್ಯದಲ್ಲಿ ಕವಿಯು ತೀರಾ ಅತ್ಯಧಿಕ ಕಠೋರ ಪದಗಳನ್ನಾಗಲಿ, ಅತ್ಯಂತ ಕೋಮಲ ಪದಗಳನ್ನಾಗಲಿ ಪ್ರಯೋಗಿಸಿಲ್ಲ. ಜೊತೆ ಜೊತೆಗೆ ಕವಿಯ ಪ್ರತಿಭಾ ಪ್ರೌಢಿಮೆ ಈ ಪದ್ಯದಲ್ಲಿ ಉತ್ತಮ ರೀತಿಯಲ್ಲಿ ವ್ಯಕ್ತವಾಗುತ್ತಿದೆ. ಹಾಗಾಗಿ ಇಲ್ಲಿ ಅಭಿಜಾತ್ಯ ಗುಣವಿದೆ.

ಆರಂಭಿಸುತ್ತಾನೆ.

ವೈಚಿತ್ರ್ಯಂ ಸೌಕುಮಾರ್ಯಂ ಚ ಯತ್ರ ಸಂಕೀರ್ಣತಾಂ ಗತೇ
ಭ್ರಾಜೇತೇ ಸಹಜಾಹಾರ್ಯ ಶೋಭಾತಿಶಯ ಶಾಲಿನೀ (49)

ಯಾವ ಮಾರ್ಗದಲ್ಲಿ ಸಹಜ (ಕವಿಪ್ರತಿಭಾಜನ್ಯ) ಕಾಂತಿಯ ಉತ್ಕರ್ಷದಿಂದ ಹಾಗೂ ಆಹಾರ್ಯ (ವ್ಯುತ್ಪತ್ತಿಜನ್ಯವಾದ) ಕಾಂತಿಯ ಉತ್ಕರ್ಷದಿಂದ ಶೋಭಿತವಾಗುವ ವೈಚಿತ್ರ್ಯ ಹಾಗೂ ಸೌಕುಮಾರ್ಯಗಳೆರಡೂ ಸಂಕೀರ್ಣಗೊಂಡು ಶೋಭಿತವಾಗುತ್ತಿವೆಯೋ (48)

ಮಾಧುರ್ಯಾದಿ ಗುಣಗ್ರಾಮೋ ವೃತ್ತಿ ಮಾಶ್ರಿತ್ಯ ಮಧ್ಯಮಾಮ್|
ಯತ್ರ ಕಾಮಪಿ ಪುಷ್ಣಾತಿ ಬಂಧ ಚ್ಛಾಯಾತಿರಿಕ್ತ ತಾಮ್ (50)

ಯಾವ ಮಾರ್ಗದಲ್ಲಿ ಮಾಧುರ್ಯಾದಿ ಗುಣ ಸಮುದಾಯವು ಮಧ್ಯಮ ವೃತ್ತಿಯನ್ನಾಶ್ರಯಿಸಿ (ಸುಕುಮಾರ ಮತ್ತು ವಿಚಿತ್ರ ಎರಡೂ ಮಾರ್ಗಗಳ ಕಾಂತಿಯಿಂದ ಕೂಡಿದ) ಬಂಧ ಸೌಂದರ್ಯದ (ರಚನಾ ಸೌಂದರ್ಯ) ಶೋಭೆಯನ್ನು ಪೋಷಿಸುತ್ತದೆಯೋ (50)

ಮಾರ್ಗೋಽಸೌ ಮಧ್ಯಮೋ ನಾಮ ನಾನಾ ರುಚಿ ಮನೋಹರಃ
ಸ್ಪರ್ಧಯಾ ಯತ್ರ ವರ್ತಂತೇ ಮಾರ್ಗದ್ವಿತಯ ಸಂಪದಃ (51)

ವಿಭಿನ್ನ ಅಭಿರುಚಿಯುಳ್ಳವರ ಮನಸ್ಸಿಗೆ ಹರ್ಷವನ್ನೀಯತ್ತಾ 'ಸುಕುಮಾರ ಮತ್ತು ವಿಚಿತ್ರ'-ಎಂಬ ಎರಡೂ ಮಾರ್ಗಗಳ ಅತ್ಯುತ್ತಮ ಅಂಶಗಳನ್ನು ಸ್ಪರ್ಧೆಯಿಂದಲೋ ಎಂಬಂತೆ ಹೊಂದಿರುವ ಮಾರ್ಗವನ್ನು ಮಧ್ಯಮ ಮಾರ್ಗ ಎಂದು ಕರೆಯಬಹುದು. (51)

ಇದು ಮಧ್ಯಮವೆಂಬ ಮಾರ್ಗ ಅರ್ಥಾತ್ ಮಧ್ಯಮ ಎಂಬ ಹೆಸರಿನಿಂದ ಪ್ರಕಟವಾಗುವ ಕಾವ್ಯ ಮಾರ್ಗ. ಅದರ ಮುಖ್ಯ ಲಕ್ಷಣವೆಂದರೆ ಅದು ಎಲ್ಲಥರದ ಅಭಿರುಚಿಗಳಿಗೂ ಹಿಡಿಸುವಂಥದು. ಅರ್ಥಾತ್ ಸುಕುಮಾರ, ವಿಚಿತ್ರ ಮತ್ತು ಮಧ್ಯಮ ಮಾರ್ಗವೇ ಮೊದಲಾದ ವಿವಿಧ ಮಾರ್ಗಗಳ ವ್ಯಸನಿಗಳೆನಿಸಿದ, ಎಲ್ಲ ರೀತಿಯ ಅಭಿರುಚಿಯುಳ್ಳ ಜನರಿಗೂ ಮನೋಹರವೆನಿಸುವಂಥದು. ಅಂದರೆ ಎಲ್ಲರ ಹೃದಯಾಪಹಾರಿ. ಇದರಲ್ಲಿ ಸುಕುಮಾರ ಮತ್ತು ವಿಚಿತ್ರ-ಈ ಎರಡೂ ಮಾರ್ಗಗಳ ಸೌಂದರ್ಯ ಸಂಪತ್ತು ಒಂದರೊಡನೊಂದು ಸ್ಪರ್ಧಿಸುತ್ತ, ಸಮ ತೂಕದಲ್ಲಿ (ನ್ಯೂನಾಧಿಕ್ಯದಿಂದಲ್ಲ) ಇರುತ್ತವೆ. ವಿಚಿತ್ರ ಮಾರ್ಗದ ವಿಚಿತ್ರತೆ ಹಾಗೂ ಸುಕುಮಾರ ಮಾರ್ಗದ ಸೌಕುಮಾರ್ಯಗಳೆರಡೂ ಸಂಕೀರ್ಣ ರೂಪದಲ್ಲಿ ಸಂಮಿಶ್ರಗೊಂಡು ಶೋಭಾಯಮಾನವಾಗಿರುತ್ತವೆ. ಯಾವ ರೀತಿಯಲ್ಲಿ ಎಂದರೆ ಸಹಜ ಮತ್ತು ಆಹಾರ್ಯ ಶೋಭೆಯ ಅತಿಶಯತೆಯಿಂದ ಕೂಡಿರುತ್ತವೆ. ಅರ್ಥಾತ್ ಉದ್ಬೋಧಿತ ಪ್ರತಿಭೆಯೆನಿಸಿದ ಶಕ್ತಿ ಹಾಗೂ ವ್ಯುತ್ಪತ್ತಿಯ ಪರಿಣಾಮವಾದ ಆಹಾರ್ಯ-ಇವೆರಡರ ಶೋಭಾತಿಶಯತೆಯಿಂದ ಶ್ಲಾಘನೀಯವಾದುವು-

50ನೇ ಕಾರಿಕೆಯಲ್ಲಿ ಮಾಧುರ್ಯ, ಪ್ರಸಾದ, ಲಾವಣ್ಯ ಹಾಗೂ ಅಭಿಜಾತ್ಯವೇ ಮೊದಲಾದ ಗುಣ ಸಮುದಾಯಗಳು ಮಧ್ಯಮ ಮಾರ್ಗದಲ್ಲಿ ವಿಚಿತ್ರ ಮತ್ತು ಸುಕುಮಾರ ಎರಡೂ ಮಾರ್ಗಗಳ

ಸಂಯುಕ್ತ ವೃತ್ತಿ ಅರ್ಥಾತ್ ಸ್ವಾಭಾವಿಕ ಗತಿಯನ್ನು ಆಶ್ರಯಿಸಿ, ಒಂದೆಡೆ ಸಂನಿವೇಶ ಸೌಂದರ್ಯ ಹಾಗೂ ಇನ್ನೊಂದೆಡೆ ಬಂಧ ಸೌಂದರ್ಯಗಳೆರಡನ್ನೂ ಪೋಷಿಸುತ್ತವೆ. ಎಂದು ಹೇಳಲಾಗಿದೆ.

ಈ ಮಾರ್ಗದ ಗುಣಗಳಿಗೆ ಉದಾಹರಣೆಗಳನ್ನು ನೋಡೋಣ

ಮಾಧುರ್ಯ ಗುಣಕ್ಕೆ

ವೇಲಾನಿಲೈರ್ಮೃದುಭಿರಾಕುಲತಾಲ ಕಾಂತಾ
ಗಾಯಂತಿ ಯಸ್ಯ ಚರಿತಾನ್ಯಪರಾಂತ ಕಾಂತಾಃ
ಲೀಲಾನತಾಃ ಸಮವಲಂಬ್ಯ ಲತಾಸ್ತರೂಣಾಂ
ಹಿಂತಾಲಮಾಲಿಷು ತಟೇಷು ಮಹಾರ್ಣವಸ್ಯ (೧೧೧)

(ಪಾದ ತಾಡಿತಕಭಾಣ-V-55)

ಹಿಂತಾಲ ವೃಕ್ಷಗಳ ಸಾಲ್ಗಳಿಂ ಶೋಭಿತಮಾದ
ಮಹಾಸಾಗರದ ತಟಗಳೊಳು
ಮರ ಬಳ್ಳಿಗಳಿಗೊರಗಿ ತಟದ ಮೆಲುಗಾಳಿ–
ಗೊಲೆದಾಡುತಿರ್ಪ ಮುಂಗುರುಳ ಲಲನೆಯರು
ಪಡುವಣತಟದೊಳು ನಿಂತು
ಅವನ ಚರಿತವನು ಹಾಡುತಿಹರು (೧೧೧)

ಪ್ರಸಾದ ಗುಣಕ್ಕೆ

ತದ್ವಕ್ತ್ರೇಂದು ವಿಲೋಕನೇನ ಇತ್ಯಾದಿ (೧೧೨) -'23' ನೋಡಿ

ಲಾವಣ್ಯ ಗುಣಕ್ಕೆ ಉದಾಹರಣೆ:

ಸಂಕ್ರಾಂತಾಂಗುಲಿ ಪರ್ವ ಸೂಚಿತ ಕರ ಸ್ವಾಪಾ ಕಪೋಲಸ್ಥಲೀ
ನೇತ್ರೇ ನಿರ್ಭರ ಮುಕ್ತ ಬಾಷ್ಪಕಲುಷೇ ನಿಶ್ವಾಸತಾಂತೋಽಧರಃ
ಬದ್ಧೋದ್ಭೇದ ವಿಸಂಷ್ಠುಲಾಲಕಲತಾ ನಿರ್ವೇದಶೂನ್ಯಂ ಮನಃ
ಕಷ್ಟಂ ದುರ್ನಯ ವೇದಿಭಿಃ ಕುಸಚಿವೈರ್ವತ್ಸಾ ದೃಢಂ ಖೇದ್ಯತೇ (೧೧೩)*

(ತಾಪಸ ವತ್ಸರಾಜ)

ಕೈಮೇಲೆ ಮೊಗವಿಟ್ಟು ನಿದ್ರೆಗೈದುದ ಸೂಚಿಸಿವೆ
ಕೆನ್ನೆ ಮೇಲಣ ಬೆರಳ ಗುರುತುಗಳು
ಎಡೆಬಿಡದೆ ಸುರಿಸಿರ್ಪ ಕಣ್ಣೀರಿಂದ ಕಪ್ಪಾಗಿವೆ ಕಂಗಳು
ಬಿಟ್ಟ ನಿಟ್ಟುಸಿರಿಂದ ತಾರಿ ಹೋಗಿವೆ ತುಟಿಗಳು
ಕಟ್ಟಿದ್ದ ಮುಂಗುರುಳು ಕೆದರಿಹೋಗಿವೆ ಸುತ್ತಲೂ
ಮನವಾದರೋ ಶೂನ್ಯವಾಗಿದೆ ದುಃಖ ಭಾರದಿಂದ

ಎನಿತೆಲ್ಲ ಕೋಟಲೆಗೆ ಒಳಗಾಗಿರುವೆ
ಎಲೆಮಗಳೆ ಕುಮಂತ್ರಿಗಳ ದುರ್ನೀತಿಯಿಂದ (೧೧೩)*

ಅಭಿಜಾತದ ಉದಾಹರಣೆ:

ಆಲಂಬ್ಯಲಂಬಾಃ ಸರಸಾಗ್ರವಲ್ಲೀಃ ಪಿಬಂತಿ ಯಸ್ಯ ಸ್ತನಭಾರನಮ್ರಾಃ
ಸ್ರೋತಶ್ಚ್ಯುತಂ ಶೀಕರ ಕೂಣಿತಾಕ್ಷ್ಯೋ ಮಂದಾಕಿನೀ ನಿರ್ಝರ ಮಶ್ವಮುಖ್ಯಃ
(೧೧೪)

ಉದ್ದನೆಯ ಹಸಿರು ಬಳ್ಳಿಗಳನೆಮ್ಮಿ
ಕುಚಭಾರದಿಂದೆ ನಸು ಬಾಗಿ
ಧುಮ್ಮಿಕ್ಕುವ ಜಲಧಾರೆಯ ತುಂತು–
ರ್ವನಿಗಳಿಂದರೆಗಣ್ಣಾಗಿ
ಕುದುರೆಮೊಗದ ಕಿನ್ನರ ಕನ್ಯೆಯರು
ಕುಡಿವರದೊ ಸುರನದಿಯ ದಿವ್ಯಸಲಿಲವನು. (೧೧೪)

ಅತ್ರಾರೋಚ ಕಿನಃ ಕೇಚಿತ್ ಛಾಯಾ ವೈಚಿತ್ರ್ಯ ರಂಜಕೇ|
ವಿದಗ್ಧ ನೇಪಥ್ಯವಿಧೌ ಭುಜಂಗಾ ಇವ ಸಾದರಾಃ(52)

ವಿದಗ್ಧವಾದ ವೇಷ ಭೂಷಣಗಳಲ್ಲಿ ತೀವ್ರ ಆದರ ತಾಳುವ ನಾಗರಿಕರ ಹಾಗೆಯೇ, ಸೌಂದರ್ಯ ವೈಚಿತ್ರ್ಯದಿಂದ ಮನೋಹರವಾಗಿರುವ ಈ ಮಧ್ಯಮ ಮಾರ್ಗದಲ್ಲಿ ಆದರ ಉಳ್ಳ ಅರೋಚಕಿಗಳಾದ ಕೆಲವು ಕವಿಗಳು ಆಸಕ್ತಿತಾಳಿ ಕೃತಿಗಳನ್ನು ರಚಿಸುತ್ತಾರೆ.

[ಇದುವರೆಗೆ ಮಧ್ಯಮವನ್ನು ಸವಿವರವಾಗಿ ವ್ಯಾಖ್ಯಾನಿಸಿ, ಗ್ರಂಥಕಾರ ಅದನ್ನು ಉಪ

ಟಿಪ್ಪಣಿ: ಸುಕುಮಾರ ಮಾರ್ಗದ ಲಾವಣ್ಯವೆಂದರೆ-ಶಬ್ದ ಮತ್ತು ಅರ್ಥಗಳ ಸೌಕುಮಾರ್ಯದಿಂದ ಮನೋಹರವಾದ ಸಂಘಟನೆಯ ಪ್ರಭಾವಕ್ಕೆ ಹೇಳುತ್ತಾರೆ. ಅದರಲ್ಲಿ ಪದ ಮತ್ತು ವರ್ಣಗಳ ಶೋಭೆಯನ್ನು ಹೆಚ್ಚಿನ ಪ್ರಯಾಸದಿಂದ ಸಾಧಿಸಬೇಕಾಗಿರುವುದಿಲ್ಲ. ವಿಚಿತ್ರ ಮಾರ್ಗದ ಲಾವಣ್ಯ ಪರಸ್ಪರ ಸಂಶ್ಲಿಷ್ಟವಾದ ಪದಗಳಿಂದ ಕೂಡಿರುತ್ತದೆ. ಅವುಗಳು ಹೆಚ್ಚಾಗಿ ವಿಸರ್ಗಾಂತವಾಗಿರುತ್ತವೆ ಹಾಗೂ ಸಂಯೋಗ ಪೂರ್ವದ ವರ್ಣವು ಲಘುವಾಗಿರುತ್ತದೆ. ಮೇಲೆ ಹೇಳಿದ ಉದಾಹರಣೆಯಲ್ಲಿರುವಂತೆ. ಹಾಗಾಗಿ ಇದು ಮಧ್ಯಮ ಮಾರ್ಗದ ಲಾವಣ್ಯ ಗುಣಕ್ಕೆ ಉದಾಹರಣೆ ಯಾಗಿದೆ. ಅರ್ಥಾತ್ ಇಲ್ಲಿ ವರ್ಣ ಮತ್ತು ಪದಗಳ ವಿನ್ಯಾಸ ಶಬ್ದ ಮತ್ತು ಅರ್ಥಗಳ ರಮಣೀಯತೆಯೊಂದಿಗೆ ಸೇರಿಕೊಂಡಿದೆ. ಅವುಗಳನ್ನು ಕ್ಲೇಶಪೂರ್ವಕವಾಗಿ ಪ್ರಯೋಗಿಸಿಲ್ಲ. ಅಲ್ಲದೆ ಅಧರಃ, ಮನಃ ಏವಂ, ವೇದಿಭಿಃ ಮೊದಲಾದ ಪದಗಳು ವಿಸರ್ಗಾಂತವಾಗಿವೆ. [ಉದಾ: 113]

ಜೊತೆಗೆ 'ಸಂಕ್ರಾಂತ', 'ಪರ್ವ', 'ಕರಸ್ವಾಪಾ' ಕಪೋಲ, ಸ್ಥಲೀ, ನಿರ್ಭರಮುಕ್ತ, ಬದ್ಧೋ, 'ಕಷ್ಟಂ' ಇತ್ಯಾದಿ ಪದಗಳಲ್ಲಿ ಸಂಯೋಗ ಪೂರ್ವದಲ್ಲಿ ಬಂದಿರುವ ಸ, ಪ, ರ ಆದಿ ವರ್ಣಗಳು ಹ್ರಸ್ವಗಳಾಗಿವೆ.
(ಹಿಂದೀ ವಕ್ರೋಕ್ತಿ ಜೀವಿತ-ಪುಟ 153ರ ಅಡಿಟಿಪ್ಪಣಿ)

ಸಂಹರಿಸುತ್ತಿದ್ದಾನೆ.

ಈ ಮಾರ್ಗದಲ್ಲಿ ಆದರ ಉಳ್ಳ ಕವಿಗಳು, ಇದನ್ನು ಆಶ್ರಯಿಸಿ ಕಾವ್ಯ ರಚಿಸುತ್ತಾರೆ. ಕಾರಣ ಅವರು ಸುಂದರವಾದ ಸಾಹಿತ್ಯಿಕ ವಿಷಯಗಳಲ್ಲಿ ಆಸಕ್ತಿಉಳ್ಳ ಅರೋಚಕಿಗಳು.

ಸೌಂದರ್ಯದ ವಿವಿಧ ಛಾಯೆಗಳ ರಂಜಕತೆಯ ಸಂಕೀರ್ಣ ಮಿಶ್ರಣವೆಂದು ಇದನ್ನು ಮತ್ತೂ ವಿವರಿಸಲಾಗಿದೆ. ಅದೂ ಯಾವ ರೀತಿ ಎಂದರೆ, ವಿದಗ್ಧ ಪೂರ್ಣವಾದ ನೇಪಥ್ಯದ ವಿಷಯದಲ್ಲಿ ಚತುರರ ಹಾಗೆ. ಅರ್ಥಾತ್ ಅತ್ಯಂತ ಸೊಗಸಾದ ವೇಷ ಭೂಷಣಗಳಿಗೆ ಅತಿಯಾದ ಮರ್ಯಾದೆ ಸಲ್ಲಿಸುವ ನಾಗರಿಕರಂಥ ಕವಿಗಳು ಎಂದು ನಾಗರಿಕರೊಂದಿಗೆ ಹೋಲಿಸಿದೆ. ಆ ವೇಷ ಭೂಷಣಗಳು ಕೂಡ ತಮ್ಮ ಸಮ್ಮಿಶ್ರ ಬಣ್ಣಗಳಿಂದಾಗಿ ಸಂತೋಷದಾಯಕವಾಗಿಯೇ ಇರುತ್ತವೆ.

ಇಲ್ಲಿ ಗುಣದ (ಮಧ್ಯಮ ಮಾರ್ಗದ) ಉದಾಹರಣೆಗಳನ್ನು ಸಂಕ್ಷಿಪ್ತವಾಗಿ ನಿರೂಪಿಸಲಾಗಿದೆ. ಆದರೆ, ಪ್ರತಿಪದದ ಛಾಯಾ ವೈಚಿತ್ರ್ಯವನ್ನು ಸಹೃದಯರೇ ಕಲ್ಪಿಸಿಕೊಳ್ಳಬೇಕು. (ಪ್ರತಿಪದದಲ್ಲೂ ಇರುವ ಸೌಂದರ್ಯ ಛಾಯೆಗಳು ಅಪರಿಮಿತವಾದ ಕಾರಣ ಅದನ್ನು ನಿರೂಪಿಸುವುದು ಅಸಂಭವ) ಈ ದಿಕ್ಕಿನಲ್ಲಿ ಕೆಲಮಟ್ಟಿಗೆ ದಿಗ್ದರ್ಶನ ಮಾಡಬಹುದು. ಮಾತೃ ಗುಪ್ತ, ಮಾಯುರಾಜ ಮತ್ತು ಮಂಜೀರನೇ ಮೊದಲಾದ ಕವಿಗಳ ಕಾವ್ಯಗಳು ಸುಕುಮಾರ ಭಾವ ಮತ್ತು ವಿಚಿತ್ರ ಭಾವಗಳ ಸಂಮಿಶ್ರಣದಿಂದಾಗಿ ರಮಣೀಯ ಪರಿಸ್ಪಂದತೆಯಿಂದ ಕೂಡಿರುತ್ತವೆ ಎಂದು ಹೇಳಲಾಗಿದೆ. ಅಲ್ಲಿ (ಮಾಯುರಾಜಾದಿಗಳ ಕಾವ್ಯ) ಮಧ್ಯಮ ಮಾರ್ಗದಿಂದ ಕೂಡಿರುವ ಕಾವ್ಯವನ್ನು ಪ್ರತಿನಿಧಿಸುತ್ತವೆಂದು ಹೇಳಲಾಗುವುದು. ಅದೇ ರೀತಿ ಕಾಳಿದಾಸ, ಸರ್ವಸೇನಾದಿಗಳ ಕಾವ್ಯವು ಸ್ವಾಭಾವಿಕ ಸುಕುಮಾರತೆಯಿಂದ ಸುಂದರವಾಗಿ ಕಂಗೊಳಿಸುತ್ತವೆ. ಅಲ್ಲಿ ಸುಕುಮಾರ ಮಾರ್ಗದ ಬಗ್ಗೆ ಚರ್ಚೆ ಅಗತ್ಯ. ಅದೇ ರೀತಿ ಮಹಾಕವಿ ಬಾಣಭಟ್ಟನ ಹರ್ಷ ಚರಿತದಲ್ಲಿ ವಕ್ರತೆಗಳ ವಿವಿಧ ವಿಲಾಸಗಳ ಸಮೃದ್ಧಿ ಕಂಡು ಬರುತ್ತದೆ. ಹಾಗೂ ಭವಭೂತಿ ಮತ್ತು ರಾಜಶೇಖರ ವಿರಚಿತ ಮುಕ್ತಕ ಕಾವ್ಯಗಳು ಬಂಧ ಸೌಂದರ್ಯದಿಂದ ಕಂಗೊಳಿಸುತ್ತಿವೆ. ಸಹೃದಯರು ಈ ಕವಿಗಳ ರಚನೆಗಳಲ್ಲಿ ವಿಚಿತ್ರ ಮಾರ್ಗದ ಸ್ವರೂಪವನ್ನು ಕಂಡುಕೊಳ್ಳಬಹುದು.

ಈ ರೀತಿ ಮೂರೂ ಮಾರ್ಗಗಳ ಲಕ್ಷಣವನ್ನು ಕೇವಲ ದಿಗ್ದರ್ಶನ ಮಾಡಲಾಯಿತು. ಕಾರಣ ಸತ್ಕವಿಗಳ ಕಾವ್ಯ ನಿರ್ಮಾಣ ಕೌಶಲಗಳ ಅಸಂಖ್ಯ ಪ್ರಕಾರಗಳ ಸಾಕಲ್ಯ ಸ್ವರೂಪ ನಿರೂಪಣೆ ಯಾರಿಂದಲೂ ಸಾಧ್ಯವಿಲ್ಲ. ಮಾರ್ಗಗಳು ಗುಣಗಳ ಸಮುದಾಯ ಧರ್ಮತ್ವದಿಂದ ಕೂಡಿರುವಂಥವು.

ಗುಣಗಳು ಹೇಗೆ ಕೇವಲ ಶಬ್ದಗಳಲ್ಲಿರುವುದಿಲ್ಲ ಎಂಬುದನ್ನು ಲಕ್ಷಣ ನಿರೂಪಣೆಯ ಸಂದರ್ಭದಲ್ಲಿ ವಿವರಿಸಲಾಗಿದೆ. [ಹೀಗೆ ಗ್ರಂಥಕಾರನು ಮೂರೂ ಮಾರ್ಗಗಳನ್ನು ಅವುಗಳ ಗುಣಲಕ್ಷಣಗಳ ನಿರೂಪಣೆಯ ಸಂದರ್ಭದಲ್ಲಿ ವ್ಯಾಖ್ಯಾನಿಸಿದ್ದಾನೆ. ಇದೀಗ ಆ ಮೂರೂ ಮಾರ್ಗಗಳಲ್ಲಿ ಸಮಾನ ರೂಪದಲ್ಲಿರುಬಹುದಾದ ಗುಣಗಳ ಸ್ವರೂಪವನ್ನು ವ್ಯಾಖ್ಯಾನಿಸುತ್ತಾನೆ].

ಆಂಜಸೇನ ಸ್ವಭಾವಸ್ಯ ಮಹತ್ವಂ ಯೇನ ಪೋಷ್ಯತೇ|
ಪ್ರಕಾರೇಣ ತದೌಚಿತ್ಯಮುಚಿತಾಖ್ಯಾನ ಜೀವಿತಮ್(53)

ಯಾವುದರಿಂದಾಗಿ ಕಾವ್ಯ ವಸ್ತುವಿನ ಅಥವಾ ಪದಾರ್ಥದ ಸ್ವಭಾವದ ಮಹತ್ವವು ಅತ್ಯಂತ ಸ್ಪಷ್ಟ ರೂಪದಿಂದ ಪರಿಪೋಷಿಸಲ್ಪಡುತ್ತಿದೆಯೋ ಆ ಗುಣವನ್ನು ಔಚಿತ್ಯವೆಂದು ಹೇಳಲಾಗುತ್ತದೆ. ಹಾಗೆ ನೋಡಿದರೆ ಅದನ್ನು ಕಾವ್ಯವರ್ಣನೆಗಳೆಲ್ಲದರ ಪ್ರಾಣ ಸ್ವರೂಪವೆಂದು ಪರಿಗಣಿಸಲಾಗುತ್ತದೆ. (53)

ಔಚಿತ್ಯವು ಒಂದು ಸಾಹಿತ್ಯಿಕ ಗುಣ. ಅತ್ಯಂತ ಸ್ಪಷ್ಟವಾದ ರೀತಿಯಲ್ಲಿ ವಸ್ತುವಿನ ಮಹತ್ವವು ಅರ್ಥಾತ್ ಉತ್ಕರ್ಷವು ಯಾವುದರ ಮೂಲಕ ಪೋಷಿಸಲ್ಪಡುತ್ತದೆಯೋ ಅದು ಔಚಿತ್ಯವೆನಿಸುತ್ತದೆ. ಉಕ್ತಿ ವೈಚಿತ್ರ್ಯವನ್ನು ಕಾರಿಕೆಯಲ್ಲಿ ಪ್ರಯೋಗಿತವಾಗಿರುವ "ಪ್ರಕಾರೇಣ" ಶಬ್ದದ ಮೂಲಕ ಹೇಳಲಾಗಿದೆ. ಅರ್ಥಾತ್ " ಅಂಜಸೇನ ಪ್ರಕಾರೇಣ" ಅತ್ಯಂತ ಸ್ಪಷ್ಟವಾದ ಉಕ್ತಿ ವೈಚಿತ್ರ್ಯದ ಮೂಲಕ. ಹೇಗೆ ಎಂದರೆ ಔಚಿತ್ಯದಿಂದ ಕೂಡಿದ ಆಖ್ಯಾನ-ಅಂದರೆ ಉದಾರತೆಯಿಂದ ಕೂಡಿದ ಕಥನವು ಯಾವುದರ ಪ್ರಾಣ ಸ್ವರೂಪವಾಗಿದೆಯೋ ಅದು – ವಸ್ತು ಮಹತ್ವ. ಇದೇ ಔಚಿತ್ಯಕ್ಕನುಗುಣವಾಗಿ ವಿನ್ಯಾಸಗೊಂಡ ಅಲಂಕಾರವು ಸೌಂದರ್ಯಕಾರಕವಾಗುತ್ತದೆ.

ಉದಾ:

ಕರತಲ ಕಲಿತಾಕ್ಷ ಮಾಲಯೋಃ ಸಮುದಿತಸಾಧ್ವಸ ಸನ್ನಹಸ್ತಯೋಃ
ಕೃತರುಚಿರ ಜಟಾನಿವೇಶಯೋರಪರ ಇವೇಶ್ವರಯೋಃ ಸಮಾಗಮಃ (೧೧೫)
(ತಾಪಸ ವತ್ಸರಾಜ)

ಇಬ್ಬರ ಅಂಗೈಗಳೊಳೂ ಅಕ್ಷಮಾಲೆಗಳಿರಲು
ಭಯದಿಂದ ನಡುಗುತಿರೆ ಅವರ ಕೈಗಳು
ಜಟಾಕಲಾಪಗಳಿಂದೆ ಶೋಭಿಸಿಹ ಅವರು
ಶಿವ ಪಾರ್ವತಿಯರು ಸಂಗಮಿಸಿದ ತೆರದೆ ಕಾಣಿಸಿದರು. (೧೧೫)

ಇನ್ನೊಂದು ಉದಾಹರಣೆ

ಉಪಗಿರಿ ಪುರುಹೂತ ಸ್ಯೈಷ ಸೇನಾನಿವೇಶ–
ಸ್ತಟಮ ಪರಮಿತೋಽದ್ರೇ ಸ್ತ್ವದ್ಬಲಾನ್ಯಾವಸಂತು|
ಧ್ರುವಮಿಹ ಕರಿಣಸ್ತೇ ದುರ್ಧರಾಃ ಸನ್ನಿಕರ್ಷೇ
ಸುರಗಜಮದ ಲೇಖಾ ಸೌರಭಂ ನ ಕ್ಷಮಂತೇ (೧೧೬)

ಇಲ್ಲೆ ಪರ್ವತದ ಸನಿಹದೊಳು
ಬೀಡು ಬಿಟ್ಟಿಹುದಿಂದ್ರ ಸೇನೆ
ಮಹೇಂದ್ರ ಪರ್ವತದ ಈ ತಪ್ಪಲೊಳು
ತಂಗಿರಲಿ ನಿನ್ನ ಸೇನೆಯದುವು
ಧುರದೊಳು ಗೆಲಲು ದುರ್ಧರವೆನಿಸಿರುವ

ನಿನ್ನ ಆನೆಗಳು ಇಂದ್ರನೈರಾವತದ
ಮದಲೇಖೆ ಸೌರಭವ ಸಹಿಸವಿನಿತೂ|| (೧೧೬)

ಇನ್ನೂ ಒಂದು ಉದಾಹರಣೆ:

ಹೇ ನಾಗರಾಜ ಬಹುಧಾಸ್ಯ ನಿತಂಬ ಭಾಗಮ್
ಭೋಗೇನ ಗಾಢಮಭಿವೇಷ್ಟ್ಯ ಮಂದರಾದ್ರೇಃ
ಸೋಢಾ ವಿಷಹ್ಯವೃಷ ವಾಹನಯೋಗ ಲೀಲಾ–
ಪರ್ಯಂಕ ಬಂಧನವಿಧೇಸ್ತವ ಕೋಽತಿಭಾರಃ (೧೧೭)

(ಕಾವ್ಯಮೀಮಾಂಸಾ-ಪುಟ88)

ಮಂದರ ಪರ್ವತದ ನಡುಭಾಗವೆಲ್ಲವನು
ನಿನ್ನ ಹೆಡೆಯಿಂದ ಗಾಢದಲಿ ಆವರಿಸು ಹೇ ನಾಗರಾಜ |
ವೃಷಭವಾಹನನ ಯೋಗಲೀಲೆಯ
ಪರ್ಯಂಕ ಬಂಧನವ ಹೊತ್ತ ನಿನಗೆ
ಅತಿಭಾರವಾವುದಿದೆ ಹೇಳು? (೧೧೭)

ಇಲ್ಲಿ ಮೇಲಿನ ಎರಡು ಉದಾಹರಣೆಗಳಲ್ಲಿ ಅಲಂಕಾರಗಳ ಗುಣಗಳಿಂದಲೇ ಆ ಔಚಿತ್ಯವೆಂಬ ಗುಣದ ಪೋಷಣೆಯಾಗಿದೆ. ಕೊನೆಯದರಲ್ಲಿ ಸ್ವಭಾವದ ಔಚಿತ್ಯ ಪೂರ್ಣಕಥನದಿಂದ-ಔಚಿತ್ಯಗುಣದ ಪೋಷಣೆಯಾಗಿದೆ. 'ಔಚಿತ್ಯ'ಗುಣದ ಇನ್ನೊಂದು ಛಾಯೆಯ ಮೂಲಕ ಅದರ ಸ್ವರೂಪವನ್ನು ನಿರೂಪಿಸಲಾಗುವುದು.

ಯತ್ರ ವಕ್ತುಃ ಪ್ರಮಾತುರ್ವಾ ವಾಚ್ಯಂ ಶೋಭಾತಿಶಾಯಿನಾ
ಆಚ್ಛಾದ್ಯತೇ ಸ್ವಭಾವೇನ ತದಪ್ಯೌಚಿತ್ಯಮುಚ್ಯತೇ(54)

ವಕ್ತೃವಿನ ಅಥವಾ ಶ್ರೋತೃವಿನ ಅತಿಶಯ ರಮಣೀಯತೆಯಿಂದಾಗಿ ಎಲ್ಲಿ ಅಭಿಧೇಯ ವಸ್ತುವನ್ನು ಮರೆಮಾಡಿ ಬಿಡಲಾಗುವುದೋ ಆ ಸಂದರ್ಭವೂ ಔಚಿತ್ಯಗುಣವೆನಿಸುತ್ತದೆ. ಎಲ್ಲಿ ವಕ್ತೃ (ಹೇಳುವವನು) ಅಥವಾ ಶ್ರೋತೃವಿನ ಅತಿಶಯ ಶೋಭೆಯಿಂದ ಕೂಡಿದ ಸ್ವಭಾವವು ವಸ್ತುವಿನ ಸೌಂದರ್ಯಾತಿಶಯುವನ್ನು ಆಚ್ಛಾದಿಸುತ್ತದೆಯೋ ಅದನ್ನೂ ಔಚಿತ್ಯ ಗುಣವೆಂದೇ ಕರೆಯಲಾಗುತ್ತದೆ (54)

ಟಿಪ್ಪಣಿ : 115ರಲ್ಲಿ 'ಕರತಲ' ಇತ್ಯಾದಿಯಲ್ಲಿ ಕವಿ ಸೃಷ್ಟಿಸಿರುವ ಉತ್ಪ್ರೇಕ್ಷಾಲಂಕಾರದ ಪುಷ್ಟಿಗಾಗಿ 'ಈಶ್ವರಯೋಃ'ದ ಕರತಲಕಲಿತಾಕ್ಷಮಾಲಯೋಃ ಮೊದಲಾದ ಮೂರು ವಿಶೇಷಣಗಳು ಎರಡರ ಸಾಮ್ಯವನ್ನು ಹೇಳುತ್ತಿವೆ. ಇವು ಅತ್ಯಂತ ಔಚಿತ್ಯ ಪೂರ್ಣವಾದ ಕಾರಣ, ಅಲಂಕಾರವನ್ನು ಪೋಷಿಸುತ್ತವೆ ಹಾಗೂ ಅದರಿಂದಲೇ ಔಚಿತ್ಯ ಗುಣದ ಪೋಷಣೆಯಾಗಿದೆ. ೧೧೬ರಲ್ಲಿ ದೇವೇಂದ್ರನ ಐರಾವತದ ಮದಲೇಖೆಯನ್ನು ಇತರೆ ರಾಜರುಗಳ ಆನೆಗಳು ಸಹಿಸುವುದಿಲ್ಲವೆಂಬ ವರ್ಣನೆಯಿಂದ ಐರಾವತದ ಅಲೌಕಿಕ ಸುಗಂಧದ ಪ್ರತಿಪಾದನೆ ಮಾಡಿ ಅತ್ಯುತ್ತಮ ಔಚಿತ್ಯವನ್ನು ಮೆರೆಯಲಾಗಿದೆ.

(ಹಿಂದೀ ವಕ್ರೋಕ್ತಿ ಜೀವಿತ ಪುಟ - 157)

ಉದಾ:

(ವಿಶ್ವಜಿದ್ ಯಾಗದಲ್ಲಿ ಸರ್ವಸ್ವವನ್ನೂ ದಾನವಾಗಿ ನೀಡಿಯಾದ ಮೇಲೆ ರಘುವಿನ ಬಳಿಗೆ ದಾನವನ್ನು ಬೇಡಿಹೋದ ಮುನಿ ಕೌತ್ಸ ರಘುವಿಗೆ ಹೇಳುತ್ತಾನೆ)

ಶರೀರ ಮಾತ್ರೇಣ ನರೇಂದ್ರ ತಿಷ್ಠಾನ್ನಾಭಾಸಿ ತೀರ್ಥ ಪ್ರತಿಪಾದಿತರ್ದ್ಧಿಃ
ಆರಣ್ಯಕೋಪಾತ್ತ ಫಲ ಪ್ರಸೂತಿಃ ಸ್ತಂಬೇನ ನೀವಾರ ಇವಾವಶಿಷ್ಟಃ(೧೧೮)

(ರಘುವಂಶ -5-151)

ತೀರ್ಥಸ್ಥಲಗಳಲಿ ಸತ್ಪಾತ್ರರಿಗೆ
ನಿನ್ನೆಲ್ಲವನು ದಾನವಾಗಿತ್ತು
ಶರೀರ ಮಾತ್ರದಿಂದುಳಿದಿರುವೆ ನರಪತಿಯೆ ನೀನು
ವನವಾಸಿಗಳಿಂದ ತೆನೆಯೆಲ್ಲ ಬರಿದಾಗಿ
ಬರಿಯ ದಂಟು ಮಾತ್ರವೆ ಉಳಿದ ನೀವಾರದಂತೆ. (೧೧೮)

ಈ ಪದ್ಯದಲ್ಲಿ ವರ್ಣಿತವಾಗಿರುವ ವಿಷಯ ರಘು ಮಹಾರಾಜನ ಅಪೂರ್ವ ಸ್ವಭಾವದ ಪ್ರಶಂಸೆ. ಅದನ್ನು ಮಾಡುತ್ತಿರುವ ವ್ಯಕ್ತಿ ಕೌತ್ಸ ಮಹರ್ಷಿ. ಅವನು ತನ್ನ ಅರಣ್ಯವಾಸದ ಬದುಕಿನ ಅನುಭವದಿಂದ ಪಡೆದ ಜ್ಞಾನದಿಂದ ಹೊರ ಹೊಮ್ಮುವ ಉಪಮೆಯನ್ನು ನೀಡಿದ್ದಾನೆ ಈ ಅಲಂಕಾರ ಯೋಜನೆ ವರ್ಣನೆಯ ಔಚಿತ್ಯವನ್ನು ಪೋಷಿಸುತ್ತದೆ.

ನಿಜಕ್ಕೂ ಇಲ್ಲಿ ವಕ್ತೃವಿನ (ಕೌತ್ಸ) ಸ್ವಭಾವಕ್ಕನುಸಾರಿ ಯಾದ ಉಪಮೆಯು ಅಭಿಧೇಯದ (ವಾಚ್ಯದ) ಸೌಂದರ್ಯವೆನಿಸಿದ ಮಹಾರಾಜನ ಔದಾರ್ಯವನ್ನು ಆಚ್ಛಾದಿತಗೊಳಿಸಿರುವಂತಿದೆ.*

ಈಗ ಶ್ರೋತೃವಿನ ಔಚಿತ್ಯಕ್ಕೆ ಉದಾಹರಣೆ :

ನಿಷೀಯ ಮಾನಸ್ತಬಕಾ ಶಿಲೀಮುಖೈರ ಶೋಕಯಷ್ಟಿ ಶ್ಚಲಬಾಲ ಪಲ್ಲವಾ|
ವಿಡಂಬಯಂತೀ ದದೃಶೇ ವಧೂ ಜನೈರ ಮಂದ ದಷ್ಟೌಷ್ಠ ಕರಾವಧೂನನಮ್ (೧೧೯)

(ಕಿರಾತಾರ್ಜುನೀಯ 8-6)

---

*ಅರ್ಥಾತ್ ಮಹಾರಾಜನನ್ನು ನೀವಾರ ಕಾಂಡಕ್ಕೆ ಹೋಲಿಸಿರುವುದು ಸ್ವತಃ ಅವನು (ಕೌತ್ಸ) ಅನುಭವದಿಂದ ತಿಳಿದ ವಿಷಯ. ಮುನಿಯಾದ್ದರಿಂದ ನೀವಾರ ಧಾನ್ಯವನ್ನಂತೂ ಗಿಡದಿಂದ ಪಡೆದು ಗೊತ್ತು. ಅದರ ಫಲವನ್ನು ತರಿದುಕೊಂಡಾದ ಮೇಲೆ, ಉಳಿದ ಅದರ ಕಾಂಡದಿಂದ ಒಂದು ಅಪೂರ್ವ ಶೋಭೆಯ ದರ್ಶನವಾಗುತ್ತಿತ್ತು. ಅದೇ ಶೋಭೆಯ (ತೇಜಸ್ಸಿನ) ಸಾಮ್ಯ, ತನ್ನ ಸಂಪತ್ತೆಲ್ಲವನ್ನೂ ಪ್ರಜೆಗಳಿಗೆ ದಾನವಾಗಿ ನೀಡಿದ ನಂತರ ರಾಜನಲ್ಲಿ ಅವನಿಗೆ ಅನುಭವಕ್ಕೆ ಬಂತು. ಆದ್ದರಿಂದ ರಾಜನನ್ನು ನೀವಾರ ಕಾಂಡಕ್ಕೆ ಹೋಲಿಸಿದ್ದಾನೆ. ಈ ಉಪಮೆಯನ್ನು ನೀಡಿದಾತ ಮುನಿಯಾದ್ದರಿಂದ ಅತ್ಯಂತ ಔಚಿತ್ಯಪೂರ್ಣವೆಂದು ಪ್ರತೀತವಾಗುತ್ತದೆ. ಹಾಗೆಯೇ ಇಲ್ಲಿ ವಕ್ತೃವಿನ ಸ್ವಭಾವದಿಂದ ಅಭಿಧೇಯವಾದ (ವಾಚ್ಯ-ವಸ್ತು) ರಾಜನ ಸ್ವಭಾವ ಆಚ್ಛಾದಿತವಾದಂತೆ ಭಾಸವಾಗುತ್ತದೆ. ಹೀಗೆ ಈ ಉದಾಹರಣೆಯ ಮೂಲಕ ವಕ್ತೃವಿನ ಸ್ವಭಾವದಿಂದ ವಾಚ್ಯವು (ವಸ್ತು) ಆಚ್ಛಾದಿತವಾಗುವುದನ್ನು ತೋರಿಸಿದೆ.

ಅಳಿಗಳು ಹೀರಿದ ಪುಷ್ಪಗುಚ್ಛಗಳಿಂದ
ಮತ್ತೆ ಗಾಳಿಗೊಲೆದಾಡುತಿರುವ ಚಿಗುರೆಲೆಗಳಿಂದ
ಅಶೋಕದ ರೆಂಬೆ ತಾನದು
ತಮ್ಮನು ಗಾಢದಲಿ ಚುಂಬಿಸ ಬಂದ
ಪ್ರಿಯಕರರ ನಿವಾರಿಸುವ ವಧೂ ಜನರ
ಕೋಮಲ ಕರಗಳನನುಕರಿಸುವಂತಾದುದು (೧೧೯)

ಇಲ್ಲಿ ಶ್ರೋತೃಗಳಾಗಿರುವ ವಧೂ ಜನರು, ಅಶೋಕದ ಲತೆ (ರೆಂಬೆ)ಯನ್ನು ಕುರಿತಾದ ವರ್ಣನೆಯು ತಮ್ಮ ಪ್ರೇಮಾನುಭವಕ್ಕನುಸಾರವಾಗಿ ಔಚಿತ್ಯಪೂರ್ಣವಾಗಿದೆಯೆಂದು ಮನಗಾಣುತ್ತಾರೆ.

ಈಗ ಇನ್ನೊಂದು ಉದಾಹರಣೆ

ವಾಪೀತಟೇ ಕುರಂಗಾಃ ಪ್ರಿಯಸಖಿ ಸ್ನಾತುಂ ಗತೈರ್ದೃಶ್ಯಂತೇ
ನ ಧರಂತಿ ಕರೇಣ ಭಣಂತಿ ನೇತಿ ವಲಿತುಂ ಪುನರ್ನ ದದತಿ (೧೨೦)*

ಮೀಯಲೆಂದು ತೆರಳಿದಾಗ
ಕೊಳದ ಬಳಿಯೆ ಕಾಂಬುವೀ
ಕುರಂಗಗಳು ಎಲೆ ಕೆಳದಿಯೆ
ನಮ್ಮ ಕೈಯ ಹಿಡಿದು ತಡೆವುದಿಲ್ಲ
ನಮ್ಮೊಡನೆ ನುಡಿವುದಿಲ್ಲ
ಹಿಂತಿರುಗಲು ನಮ್ಮನು
ಬಿಡುವುದಿಲ್ಲವವುಗಳು (೧೨೦)

ಇಲ್ಲಿ ಶ್ರೋತೃವಾದ ಗೆಳತಿಯ, ಮರೆ ಮೋಸಗಳನ್ನರಿಯದ ಅತಿಶಯವಾದ ಮುಗ್ಧ ಸ್ವಭಾವ ಸೌಂದರ್ಯದಿಂದ ವರ್ಣಿತ ವಸ್ತುವಾದ 'ವಾಚ್ಯವು' ಆಚ್ಛಾದಿತವಾಗಿರುವುದರಿಂದ, ಔಚಿತ್ಯಗುಣವನ್ನು ಪರಿಪೋಷಿಸುತ್ತದೆ. 'ಔಚಿತ್ಯವನ್ನು' ಹೇಳಿದ ನಂತರ, 'ಸೌಭಾಗ್ಯ'ವನ್ನು ಕುರಿತು ಹೇಳುತ್ತಾನೆ.

ಇತ್ಯುಪಾದೇಯ ವರ್ಗೇಽಸ್ಮಿನ್ ಯದರ್ಥಂ ಪ್ರತಿಭಾ ಕವೇಃ
ಸಮ್ಯಕ್ ಸಂರಭತೇ ತಸ್ಯ ಗುಣಃ ಸೌಭಾಗ್ಯಮುಚ್ಯತೇ (55)

ಕವಿಗೆ ಲಭ್ಯವಿರುವ ಉಪಾದೇಯ ವರ್ಗದಲ್ಲಿ ಕವಿ ಪ್ರತಿಭೆ ತನ್ನ ಕಾವ್ಯ ವ್ಯಾಪಾರದ ಸರಿಯಾದ ಪ್ರವರ್ತನೆಯ ಸಲುವಾಗಿ ಆರಿಸಿಕೊಳ್ಳುವ ಗುಣವು 'ಸೌಭಾಗ್ಯ'ವೆನಿಸುತ್ತದೆ. (55)

ಕವಿಯ ಕಣ್ಣೆದುರು ಶಬ್ದವೇ ಮೊದಲಾದ ಅಪಾರ ಸಾಮಗ್ರಿ ರಾಶಿರಾಶಿಯಾಗಿ ಬಿದ್ದಿದೆ. ಕವಿ ಪ್ರತಿಭೆ ತನ್ನ ಅದ್ಭುತ ಸಾಮರ್ಥ್ಯದ ಅಭಿವ್ಯಕ್ತಿಗೆ ಅವುಗಳ ಪೈಕಿ ಒಂದನ್ನು ಮಾತ್ರ ಆಯ್ಕೆ

* ವಾಪೀತಡೇ ಕುಱುಂಗ ಪಿಅಸಹಿ ಹ್ನಾವುಂ ಗಯೇಹಿಂ ದೀಸಂತಿ
ಣ ಧರಂತಿ ಕರೇಣ ಭಣಂತಿ ಣ ತ್ತಿ ವಲಿಉಂ ಪುಣಣದೇಂತಿ (ಪ್ರಾಕೃತ)

ಮಾಡಿಕೊಳ್ಳುತ್ತದೆ. ಮತ್ತು ಅದು ಇಡೀ ಕಾವ್ಯ ವ್ಯಾಪಾರಕ್ಕೆ ಅತ್ಯಂತ ಪ್ರಸ್ತುತವಾಗುತ್ತ "ಸೌಭಾಗ್ಯ"ಎಂಬ ಗುಣದ ಪ್ರಾದುರ್ಭಾವಕ್ಕೆ ಕಾರಣವಾಗುತ್ತದೆ.

ಅಲ್ಲದೆ ಈ 'ಸೌಭಾಗ್ಯ' ವೆಂಬ ಗುಣವು ಕೇವಲ ಕವಿ ಪ್ರತಿಭೆಯೊಂದರಿಂದಲೇ ಸಾಧ್ಯವಾಗುವಂಥದಲ್ಲ. ಇತರೆ ಎಲ್ಲ ಸಾಮಗ್ರಿಗಳ ಸಹಯೋಗದಿಂದ ಮಾತ್ರ ಸಾಧಿತವಾಗುವಂಥದು.

ಸರ್ವ ಸಂಪತ್ಪರಿಸ್ಪಂದ ಸಂಪಾದ್ಯಮ್ ಸರಸಾತ್ಮ ನಾಮ್
ಅಲೌಕಿಕ ಚಮತ್ಕಾರ ಕಾರಿ ಕಾವ್ಯೈಕ ಜೀವಿತಮ್ (56)

ಅದು ಕಾವ್ಯ ನಿರ್ಮಾಣಕಾರಕಗಳಾದ (ಶಕ್ತಿ, ವ್ಯುತ್ಪತ್ತಿ ಅಭ್ಯಾಸ ಇತ್ಯಾದಿ) ಸಮಸ್ತ ಸಾಮಗ್ರಿಗಳ ಸಂಪೂರ್ಣ ಸಹಯೋಗದಿಂದ ಸಂಪನ್ನವಾಗುವಂಥದು. ಹಾಗೂ ಸರಸ ಹೃದಯಿಗಳಾದ ಕಾವ್ಯರಸಿಕರ ಮನಸ್ಸಿಗೆ ಲೋಕೋತ್ತರವಾದ (ಅಲೌಕಿಕ) ಚಮತ್ಕಾರವನ್ನುಂಟು ಮಾಡುವಂಥದು. ಹಾಗೂ ಸಂಕ್ಷೇಪವಾಗಿ ಹೇಳಬೇಕೆಂದರೆ ಕಾವ್ಯದ ಸಾರ ಸರ್ವಸ್ವವೇ ಅದು; ಪ್ರಾಣ. (56)

ಕವಿಗೆ ಕಾವ್ಯ ನಿರ್ಮಾಣಕ್ಕೆ ಲಭ್ಯವಿರುವ ಸಮಸ್ತ ಸಾಮಗ್ರಿಗಳಲ್ಲಿ ಪ್ರತಿಯೊಂದರ ಸಂಪೂರ್ಣ ಸ್ಫುರಣೆಯ ಅಗತ್ಯವನ್ನು ಹೇಳಿದ್ದಾಯಿತು. ಹಾಗೆ ಪ್ರತಿಯೊಂದೂ ಸಹಕರಿಸಿದಾಗ ಮಾತ್ರ ಸರ್ವಶ್ರೇಷ್ಠ ಸಾಹಿತ್ಯಕ "ಗುಣ"ವಾದ ಸೌಭಾಗ್ಯವು ನಿಷ್ಪನ್ನವಾಗುವುದು ಹಾಗೂ ಈ ಸೌಭಾಗ್ಯಗುಣವು ಸಹೃದಯಿಗಳಿಗೆ ಅಲೌಕಿಕವಾದ ಆಹ್ಲಾದವನ್ನುಂಟು ಮಾಡುತ್ತದೆ. ಹೆಚ್ಚೇಕೆ, ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ಕಾವ್ಯದ ಪ್ರಾಣವೇ ಅದು. ಕಾವ್ಯದ ಪರಮಾರ್ಥವೇ ಅದಾಗಿದೆ.

ಉದಾಹರಣೆಗೆ:

ದೋರ್ಮೂಲಾವಧಿ ಸೂತ್ರಿತ ಸ್ತನಮುರಃ ಸ್ನಿಹ್ಯಾತ್ಕಟಾಕ್ಷೇ ದೃಶೌ
ಕಿಂಚಿತ್ತಾಂಡವ ಪಂಡಿತೇ ಸ್ಮಿತ ಸುಧಾಸಿಕ್ತೋಕ್ತಿಷು ಭ್ರೂಲತೇ
ಚೇತಃ ಕಂದಲಿತಂ ಸ್ಮರವ್ಯತಿಕರೈರ್ಲಾವಣ್ಯಮಂಗೈರ್ವೃತಂ
ತನ್ವಂಗ್ಯಾಸ್ತರುಣಿಮ್ನಿ ಸರ್ಪತಿ ಶನೈರನ್ಯೈವ ಕಾಚಿದ್ದ್ಯುತಿಃ(೧೨೧)

ಬಾಹುಮೂಲದವರೆಗೆ ವಕ್ಷಸ್ಥಲವ
ವಿಸ್ತರಿಸಿಹವು ಸ್ತನಗಳು
ಕಡೆಗಣ್ಣನೋಟದಲಿ ಒಲವು ತುಂಬಿಹುದು
ಮುಗುಳು ನಗೆಯಮೃತದಲಿ
ಮಿಂದೆದ್ದ ಮಾತುಗಳ ನಡುವೆ
ತುಸು ಲಾಸ್ಯವನು ಮೆರೆದಿವೆ ಭ್ರೂಲತೆಗಳು
ಮದನ ಭಾವಗಳು ಮನದಲಂಕುರಿಸಿಹವು
ಲಾವಣ್ಯವಂಗಗಳೊಳು ತುಂಬಿ ತುಳುಕುತಿದೆ

ಇಂತು ಮೆಲುಮೆಲನೆ ತಾರುಣ್ಯವಾವರಿಸಿರಲು ತರುಣಿಯನು
ಅಪೂರ್ವವೆನಿಸಿಹ ಕಾಂತಿಯದು ಎಲ್ಲೆಡೆಯು ಸೂಸುತಿದೆ. (೧೨೧)

ಕವಿ ಈ ಪದ್ಯದಲ್ಲಿ ತರುಣಿಯಲ್ಲಿ ಯೌವನವು ಪ್ರಪ್ರಥಮವಾಗಿ ಅಡಿಯಿಟ್ಟುದನ್ನು, ಆ ಯೌವನ ಪ್ರಾದುರ್ಭಾವವು ಆಕೆಯ ಆಕೃತಿಯಲ್ಲಿ, ಮನಸ್ಸಿನಲ್ಲಿ ಮತ್ತು ಆಕೆಯ ಭಾವಭಂಗಿಗಳಲ್ಲಿ (ಚೇಷ್ಟೆಗಳಲ್ಲಿ) ಉಂಟು ಮಾಡಿರುವ ವೈಚಿತ್ರ್ಯವನ್ನು ವರ್ಣಿಸಿದ್ದಾನೆ. 'ವಕ್ಷಸ್ಥಲವನ್ನು ವಿಸ್ತರಿಸಿರುವ ಸ್ತನಗಳು 'ಹಾಗೂ ಅಂಗಗಳನ್ನಲಂಕರಿಸಿರುವ ಲಾವಣ್ಯ ಎಂಬ ವರ್ಣನೆಗಳು ಆಕೆಯ ಆಕೃತಿಯ ಶಾರೀರಿಕ ಸೌಂದರ್ಯವನ್ನು ಸೂಚಿಸುತ್ತವೆ. ಮನ್ಮಥ ಭಾವಗಳು ಮನದಲಂಕುರಿಸಿವೆ' ಎಂಬುದು ಮನಸ್ಸಿನ ಸೌಂದರ್ಯವನ್ನು ಸೂಚಿಸುತ್ತದೆ. ಒಲವು ತುಂಬಿದ ಕಡೆಗಣ್ಣ ನೋಟ, ಮುಗುಳು ನಗೆಯಮೃತದಲಿ ಮಿಂದಿರುವ ಮಾತುಗಳ ನಡುವೆ ಕಿಂಚಿತ್ ಭ್ರೂಲತೆಗಳ ಲಾಸ್ಯ| ಇವೆಲ್ಲವೂ ಅವಳ ಭಾವಭಂಗಿಗಳ (ಆಂಗಿಕಚೇಷ್ಟೆಗಳ) ಸೌಂದರ್ಯವನ್ನು ಅಭಿವ್ಯಕ್ತಿಸುತ್ತವೆ. ಮೂಲದ ಸೂತ್ರಿತ-ಸಿಕ್ತ-ತಾಂಡವ-ಪಂಡಿತ-ಕಂದಲಿತ-ಎಂಬ ಮಾತುಗಳು ಶಬ್ದಗಳ ಉಪಚಾರ ವಕ್ರತೆಯನ್ನು ಬಿಂಬಿಸುತ್ತವೆ (ರೂಪಕಾಭಿವ್ಯಕ್ತಿಯ ಕಲಾತ್ಮಕ ಸೌಂದರ್ಯವನ್ನು). 'ಸ್ನಿಹ್ಯಾತ್' ಎಂಬ ಪದದಿಂದ (ಕಾಲ ವಿಶೇಷದ ಬೋಧವನ್ನುಂಟು ಮಾಡುವ) ಪ್ರತ್ಯಯ ವಕ್ರತೆ ಸೂಚಿತವಾಗುತ್ತದೆ. 'ಅನ್ಯೈವ ಕಾಚಿತ್' (ಹೊಸದೊಂದೇ-ಅಪೂರ್ವ) ಇದರ ಮೂಲಕ ಸಂವೃತಿ ವಕ್ರತೆಯ ಸೌಂದರ್ಯ ಲಕ್ಷ್ಯಕ್ಕೆ ಬರುತ್ತದೆ. 'ಅಂಗೈರ್ವೃತಂ' ಎಂಬುದು (ತೃತೀಯಾ ಪ್ರಯೋಗ) ಕಾರಕ ವಕ್ರತೆಯನ್ನು ಸೂಚಿಸುತ್ತದೆ. ವಿಚಿತ್ರ ಮಾರ್ಗದ ವಿಷಯವಾದ 'ಲಾವಣ್ಯ'ದ ಗುಣಾತಿರೇಕವಿದೆ. ಹೀಗೆ ಈ ಒಂದು ಉದಾಹರಣೆಯಲ್ಲಿ ಕವಿಯ ಪ್ರತಿಭಾ ವ್ಯಾಪಾರದಿಂದ ಒಡಮೂಡಿದ, ಸಕಲ ಸಾಮಗ್ರಿಗಳಿಂದ ಹೊರಹೊಮ್ಮಿದ ಹಾಗೂ ಸಹೃದಯರಿಗೆ ಸರಸ ಹೃದಯಾಹ್ಲಾದಕಾರಿಯಾದ ಅವರ್ಣನೀಯವಾದ 'ಸೌಭಾಗ್ಯವೆಂಬ' ಗುಣ ಉದ್ಭಾಸಿತವಾಗುತ್ತಿದೆ.

ಅನಂತರ ಹೇಳಲಾದ ಎರಡೂ ಗುಣಗಳ (ಔಚಿತ್ಯ ಮತ್ತು ಸೌಭಾಗ್ಯ ಎಂಬ) ವಿಷಯ ವ್ಯಾಪ್ತಿಯನ್ನು ಈ ಕೆಳಗಿನ ಉದಾಹರಣೆಯಲ್ಲಿ ನೋಡಬಹುದು.

ಏತತ್ರಿಷ್ವಪಿ ಮಾರ್ಗೇಷು ಗುಣ ದ್ವಿತಯ ಮುಜ್ವಲಮ್
ಪದ ವಾಕ್ಯ ಪ್ರಬಂಧಾನಾಮ್ ವ್ಯಾಪಕತ್ವೇನ ವರ್ತತೇ(57)

ಅತ್ಯಂತ ಉಜ್ವಲವಾದ (ಅಲಂಕಾರಾದಿಗಳಿಂದ) ಈ ಎರಡೂ ಗುಣಗಳು (ಸೌಭಾಗ್ಯ ಮತ್ತು ಔಚಿತ್ಯ) ಮೂರೂ ಮಾರ್ಗಗಳಲ್ಲಿ (ಸುಕುಮಾರ, ವಿಚಿತ್ರ ಮತ್ತು ಮಧ್ಯಮ) ಪದ, ವಾಕ್ಯ, ಮತ್ತು ಪ್ರಬಂಧಗಳಲ್ಲಿ ವ್ಯಾಪಿಸಿಕೊಂಡು ಇರುತ್ತವೆ (57).

ಈ ಔಚಿತ್ಯ ಮತ್ತು ಸೌಭಾಗ್ಯವೆಂಬ ಎರಡು ಉಜ್ವಲವಾದ ಗುಣಗಳು ಪದ ವಾಕ್ಯ ಮತ್ತು ಪ್ರಬಂಧಗಳೆಂಬ ಕಾವ್ಯದ ಮೂರೂ ಅಂಗಗಳಲ್ಲಿ (ಅಂದರೆ ಸಕಲ

ಅಂಗಗಳಲ್ಲಿ) ವ್ಯಾಪ್ತವಾಗಿ ಇರುತ್ತವೆ. ಇದು ಕೇವಲ ಯಾವುದೇ ಒಂದು ಮಾರ್ಗಕ್ಕೆ ಸೀಮಿತವಲ್ಲ. ಬದಲಿಗೆ ಸುಕುಮಾರ, ವಿಚಿತ್ರ ಮತ್ತು ಮಧ್ಯಮ ಎಂಬ ಮೂರೂ ಮಾರ್ಗಗಳಿಗೆ ಸಮಾನವಾಗಿ ಅನ್ವಯಿಸುತ್ತದೆ. ಇಲ್ಲಿ ಪದೌಚಿತ್ಯವೆಂದರೆ, ಬಹು ವಿಧವಾಗಿ ಇರುವ ಪದದ ವಕ್ರತೆ. ವಕ್ರತೆಯ ಪರಮ ರಹಸ್ಯವೆಂದರೆ ಸ್ವಭಾವ ಸತ್ಯದ ಸಹಜ ವರ್ಣನೆಯೇ ಆಗಿದೆ. ಕಾರಣ ಔಚಿತ್ಯ ಪೂರ್ಣ ಅಭಿವ್ಯಕ್ತಿಯೇ ವಾಕ್ಯದ ಪ್ರಾಣ. ವಾಕ್ಯದ ಯಾವ ಒಂದು ಅಂಶದಲ್ಲಾದರೂ ಔಚಿತ್ಯವಿಲ್ಲವೆಂದಾದರೆ ಸಹೃದಯರ ಆಹ್ಲಾದಕ್ಕೆ ಹಾನಿ ಉಂಟಾಗುತ್ತದೆ. ಇದಕ್ಕೆ ಉದಾಹರಣೆಯಾಗಿ ಕಾಳಿದಾಸನ ರಘುವಂಶದಿಂದ ಈ ಪದ್ಯ

ಪುರಂ ನಿಷಾದಾಧಿಪತೇಸ್ತದೇತದ್ಯಸ್ಮಿನ್ಮಯಾ ಮೌಲಿಮಣಿಂ ವಿಹಾಯ
ಜಟಾಸು ಬದ್ಧಾಸ್ವರುದತ್ಸುಮಂತ್ರಃ ಕೈಕೇಯಿ ಕಾಮಾಃ ಫಲಿತಾಸ್ತವೇತಿ (೧೨೨)

ಇದು ನಿಷಾದ ರಾಜನ ಅದೇ ನಗರಿ
ಇಲ್ಲಿಯೇ ನಾನು ಮೌಳಿಮಣಿಯನು ತೊರೆದು
ಜಟೆಯ ಹೆಣೆದುದ ಕಂಡು
ಸಾರಥಿ ಸುಮಂತ್ರ "ಓ! ಕೈಕೆ ಫಲಿಸಿದುದು
ನಿನ್ನಳಿಯಾಸೆ" ಎಂದೆನುತೆ ರೋದಿಸಿದನು. (೧೨೨) (ರಘುವಂಶ-13-59)

ಮಹಾನ್ ವ್ಯಕ್ತಿಗಳ ಅಮೂಲ್ಯ ಗುಣಗಳ ಭಂಡಾರದಿಂದ ಕೂಡಿದ ವ್ಯಕ್ತಿಯ ರೂಪದಲ್ಲಿ (ಅಂದರೆ ಆದರ್ಶ ನಾಯಕ-ಧೀರೋದಾತ್ತ) ವರ್ಣಿಸಲ್ಪಡಬೇಕಾದ ರಘುಪತಿ ಶ್ರೀರಾಮಚಂದ್ರನು "ಓ ಕೈಕೆ ಫಲಿಸಿದುದು ನಿನ್ನಳಿಯಾಸೆ ಎಂಬಂಥ ತುಚ್ಛವಾದ ಮಾತುಗಳನ್ನು ನೆನಪಿಸಿಕೊಳ್ಳುವುದಷ್ಟೇ ಅಲ್ಲದೇ ಅವನ್ನು ಬಾಯಿಂದ ಹೇಳಿಯೂ ಬಿಡುವುದು ಅನೌಚಿತ್ಯದ ಪರಮಾವಧಿ. ಪ್ರಬಂಧ ಕಾವ್ಯದಲ್ಲೂ ಯಾವುದಾದರೊಂದು ಪ್ರಕರಣದ ಒಂದು ಅಂಶ ದೋಷ ಪೂರ್ಣವಾಗಿದ್ದು, ಔಚಿತ್ಯರಹಿತವಾಗಿದ್ದರೂ, ಒಂದು ವಸ್ತ್ರ ತುದಿಯಲ್ಲಿ ಮಾತ್ರ ಸುಟ್ಟಿದ್ದರೂ ಇಡೀ ವಸ್ತ್ರವೇ ಹೇಗೆ ದೂಷಿತವಾಗುತ್ತದೋ ಅದೇ ರೀತಿ ಇಡೀ ಕಾವ್ಯವೇ (ಪ್ರಬಂಧ) ದೂಷಿತವಾಗುತ್ತದೆ. ಇದಕ್ಕೂ ಉದಾಹರಣೆ ನಮಗೆ ರಘುವಂಶ ಕಾವ್ಯದಲ್ಲೇ ಸಿಂಹ ದಿಲೀಪರ ಸಂವಾದ ಪ್ರಕರಣದಲ್ಲಿ ಸಿಗುತ್ತದೆ.

ಅಥೈಕಧೇನೋರಪರಾಧ ಚಂಡಾದ್
ಗುರೋಃ ಕೃಶಾನು ಪ್ರತಿಮಾ ದ್ವಿಭೇಷಿ
ಶಕ್ಯೋಽಸ್ಯ ಮನ್ಯುರ್ಭವತಾಪಿ ನೇತುಂ
ಗಾಃ ಕೋಟಿಶಃ ಸ್ಪರ್ಶಯತಾ ಘಟೋಧ್ನೀಃ (೧೨೩) (ರಘುವಂಶ-2-49)

ತನ್ನೊಂದೆ ಸಂಪದವಾದೀ ಹಸುವ
ರಕ್ಷಿಸದ ಅಪರಾಧಕಾಗಿ

ಗುರುವಿನ ಕೆಂಡದಂಥ ಕೋಪಕ್ಕೆ
ಹೆದರುವೆಯ ಹೇ ಪ್ರಭೂ,
ಒಡನೆ ಕೊಡವಾಲ್ಗರೆವ ಕೆಚ್ಚಲ
ಕೋಟಿ ಗೋಗಳನಿತ್ತು ಮುನಿಯ
ಕೋಪವನು ಕರಗಿಸಲು ಶಕ್ತ ನೀನು (೧೨೩)

ರಾಜನನ್ನು ಪರಿಹಾಸ ಮಾಡುವ ದೃಷ್ಟಿಯಿಂದ ಸಿಂಹದ ಬಾಯಿಂದ ಇಂಥ ಮಾತುಗಳು ಬರುವುದು ಔಚಿತ್ಯ ಪೂರ್ಣವಾಗಿಯೇ ಇವೆ* ಜೊತೆಗೆ ರಾಜಾ ದಿಲೀಪನು ತನ್ನ ಕೀರ್ತಿ ರಕ್ಷಣೆಯ ಬಗೆಗೆ (ರಾಜನಾಗಿ) ಕಾಳಜಿ ಉಳ್ಳವನಾಗಿರುವುದರಿಂದ ಅವನಿಗೆ ತನ್ನ ಪ್ರಾಣವು ಹುಲ್ಲುಕಡ್ಡಿಗಿಂತ ಹೆಚ್ಚಿನದಲ್ಲವೆಂದು ಅನಿಸುತ್ತದೆ. (ಆದ್ದರಿಂದ ಸಿಂಹದ ಈ ಮಾತುಗಳು ಯೋಗ್ಯವೇ, ಉಚಿತವೇ ಇವೆ. ಆದರೆ ಈ ವ್ಯಂಗ್ಯದ ಮಾತಿಗೆ ರಾಜನ ಈ ಉತ್ತರ

ಕಥಂ ನು ಶಕ್ಯಾನುನಯೋ ಮಹರ್ಷಿರ್ವಿಶ್ರಾಣನಾದನ್ಯ ಪಯಸ್ವಿನೀನಾಮ್
ಇಮಾಂ ತನೂಜಾಂ ಸುರಭೇರವೇಹಿ ರುದ್ರೌಜಸಾ ತು ಪ್ರಹೃತಂ ತ್ವಯಾಸ್ಯಾಮ್ (೧೨೪)

ಇನ್ನಿತರೆ ಗೋವ್‌ಗಳನು ನೀಡುವುದರಿನಾ
ಮಹಮುನಿಯ ಕೋಪವನು ನಾನೆಂತು ನೀಗ ಬಲ್ಲೆ
ಕಾಮಧೇನುವಿನ ಮಗಳೆಂದೆ ತಿಳಿ ಈ ನಂದಿನಿಯ
ರುದ್ರೋಜೆಯಿಂದಿದನು ಹಿಡಿದೆನೀನು (೧೨೪) (ರಘುವಂಶ 2-54)

ಒಂದು ವೇಳೆ ಇತರೆ ಹಸುಗಳು ನಂದಿನಿ ಧೇನುವಿನ ಯೋಗ್ಯತೆಗೆ ನಿಲುಕುವಂಥ ವಾಗಿದ್ದರೆ, ಅರ್ಥಾತ್ ನಂದಿನಿಯ ಬದಲಿಗೆ ಇತರೆ ಗೋವುಗಳನ್ನು ವಿನಿಮಯವಾಗಿ ನೀಡಲು ಬರುವಂತಿದ್ದರೆ, ಈ ನಂದಿನಿಧೇನುವಿನ ಜೀವವನ್ನು ರಕ್ಷಿಸುವ ಅಪೇಕ್ಷೆ, ನನಗಾಗಲಿ ನನ್ನ ಗುರು, ಮುನಿ ವಸಿಷ್ಠರಿಗಾಗಲಿ ಉಂಟಾಗುತ್ತಿರಲಿಲ್ಲ. [ಅರ್ಥಾತ್ ನಾನು ಇಲ್ಲಿ ಗುರುವಸಿಷ್ಠನ

---

*ರಾಜಾ ದಿಲೀಪನು ತನ್ನ ಗುರು ವಸಿಷ್ಠನ ಆಜ್ಞಾನುಸಾರ ಪುತ್ರ ಸಂತಾನ ಪ್ರಾಪ್ತಿಗಾಗಿ ನಂದಿನಿ ಧೇನುವಿನ ಸೇವೆ ಮಾಡುತ್ತಿರುತ್ತಾನೆ. ಒಂದು ದಿನ ಅವನು ಅದನ್ನು ಮೇಯಿಸುತ್ತ ಪರ್ವತದ ಸೌಂದರ್ಯ ವೀಕ್ಷಣೆಯಲ್ಲಿ ಮಗ್ನನಾಗಿದ್ದಾಗ, ಇದ್ದಕ್ಕಿದ್ದಂತೆ ನಂದಿನಿಯ ಕರುಣಾಕ್ರಂದನ ಕೇಳಿ ಬರುತ್ತದೆ. ಇದೇನೆಂದು ನೋಡಲು ಸಿಂಹವೊಂದು ಆ ಹಸುವಿನ ಮೇಲೆ ಆಕ್ರಮಣ ಮಾಡಿರುತ್ತದೆ. ಆ ಸಿಂಹವನ್ನು ಕೊಲ್ಲಲು ಕೂಡಲೇ ಬಾಣಕ್ಕಾಗಿ ಬತ್ತಳಿಕೆಗೆ ಕೈ ಹಾಕಿದರೆ ಕೈ ಅಲ್ಲೇ ಸಿಕ್ಕಿ ಕೊಂಡು ಬಿಡುತ್ತದೆ. ದಿಲೀಪ ಅಸಹಾಯಕನಾಗಿ ಆ ಹಸುವನ್ನು ಬಿಟ್ಟು ಬಿಡುವಂತೆ ಮನವೊಲಿಸಲು ಆ ಸಿಂಹವನ್ನು ಹಲವು ವಿಧವಾಗಿ ಅಂಗಲಾಚುತ್ತಾನೆ. ಬಿಡಲು ಸಿದ್ಧವಿಲ್ಲದಿದ್ದಾಗ, ರಾಜ ತನ್ನ ಶರೀರವನ್ನು ಅದರ ಬದಲಿಗೆ ಅರ್ಪಿಸಲು ಸಿದ್ಧನಾಗುತ್ತಾನೆ. ಆಗ ಸಿಂಹ ದಿಲೀಪನಿಗೆ ಮೇಲಿನಂತೆ ಹೇಳುತ್ತದೆ.

ಆಜ್ಞೆಯ ಹಾಗೂ ಈ ಹಸುವಿನ ರಕ್ಷಣೆಯ ಕರ್ತವ್ಯವನ್ನು ಪಾಲಿಸುತ್ತಿದ್ದೇನೆಂದರೆ ಅದು ಕೇವಲ ವಿಧಿಯಿಲ್ಲದೆ ವಿವಶನಾಗಿ (ಅನ್ಯಮಾರ್ಗವಿಲ್ಲದೆ). ಕಾರಣ ನಾನು ಈ ಹಸುವಿನ ಬದಲಾಗಿ ಏನನ್ನೂ ಕೊಟ್ಟು ತೀರಿಸಲಾರೆ. ಇಲ್ಲದಿದ್ದರೆ ಕರ್ತವ್ಯ ಪಾಲನೆಯಾಗುವುದಿಲ್ಲ]ಈ ರೀತಿ ಮಥಿತಾರ್ಥ ಹೊರಡುವುದರಿಂದ, ರಾಜನ ಈ ಹೇಳಿಕೆ ಅತ್ಯಂತ ಅನೌಚಿತ್ಯದಿಂದ ಕೂಡಿದೆ.

ಇದೇ ರೀತಿಯ ಅನೌಚಿತ್ಯವನ್ನು ಕುಮಾರ ಸಂಭವದಲ್ಲೂ ನೋಡಬಹುದು. ಅಲ್ಲಿ ಮೂರು ಲೋಕಗಳನ್ನೂ ಆಕ್ರಾಂತ ಗೊಳಿಸುವುದರಲ್ಲಿ ವ್ಯಸ್ತನಾದ ತಾರಕನೆಂಬ ಶತ್ರುವನ್ನು ಗೆಲ್ಲುವ ಉಪಾಯ ಹುಡುಕಲು ಇಂದ್ರನು ಸೇರಿಸಿದ್ದ ಸಭೆಯಲ್ಲಿ (ಬ್ರಹ್ಮನ ಹೇಳಿಕೆಯ ಪ್ರಕಾರ, ಯಾವುದಾದರೂ ರೀತಿಯಲ್ಲಿ ಶಂಕರನ ಮದುವೆಯಾಗಿ ಬಿಟ್ಟಿತೆಂದರೆ, ಅವನ ವೀರ್ಯದಿಂದ ಹುಟ್ಟುವ ಮಗನು ತಾರಕನನ್ನು ಸಂಹರಿಸಬಲ್ಲನು) ಕಾಮನು ಇಂದ್ರನೊಡನೆ ಹೀಗೆ ಹೇಳುತ್ತಾನೆ.

ಕಾಮೇಕ ಪತ್ನೀಂ ವ್ರತ ದುಃಖ ಶೀಲಾಂ ಲೋಲಂ ಮನಶ್ಚಾರುತಯಾ ಪ್ರವಿಷ್ಟಾಮ್
ನಿತಂಬಿನೀಮಿಚ್ಛಸಿ ಮುಕ್ತಲಜ್ಜಾಂ ಕಂಠೇ ಸ್ವಯಂ ಗ್ರಾಹನಿಷಕ್ತ ಬಾಹುಂ (೧೨೫)
(ಕುಮಾರ ಸಂಭವ-III-7)

ಹದಿ ಬದೆಯ ಧರ್ಮದಾಚರಣೆಯಿಂದೆ
ದುಃಖ ಸಹಿಸುವ ದೃಢವ್ರತಿ ಯಾವಳಾದರು.
ತನ್ನ ಅನುಪಮದ ಚೆಲುವಿಂದೆ
ನಿನ್ನೀ ಚಲ ಚಿತ್ತವನು ಹೊಕ್ಕಿರೆ ಹೇಳು ನೀನು
ತನ್ನೆಲ್ಲ ಲಜ್ಜೆಯನುಳಿದು ಆವ್ರತಿ
ತನ್ನಿಚ್ಛೆಯಿಂದೆ ಓಡುತ್ತಬಂದು
ನಿನ್ನ ಕೊರಳಪ್ಪುವಂತೆಸಗುವೆನು ನಾನು (೧೨೫) III-7) ಕು. ಸಂಭವ

ಈ ಇಡೀ ಕಥನವೇ ಸದಾಚಾರವಿಹೀನವಾಗಿದೆ. ಸ್ವರ್ಗದ ಅಧಿಪತಿಯಾಗಿ ಪ್ರತಿಷ್ಠಿತ ನಾಗಿಯೂ, ಈ ರೀತಿಯ ಅಶ್ಲೀಲದ ದುಃಸ್ಸಾಹಸಕ್ಕೆ (ಪರಸ್ತ್ರೀಯ ಸತೀತ್ವದ ಅಪಹರಣದಂಥ) ಮನವೊಲಿಸಬಹುದಾದವನೆಂಬ ರೀತಿಯಲ್ಲಿ ಇಂದ್ರನ ಬಗ್ಗೆ ಕಾಮನು ಹೇಳಿರುವ ಈ ಮಾತುಗಳು ಅತ್ಯಂತ ಅನೌಚಿತ್ಯದಿಂದ ಕೂಡಿವೆ. ಸಹಜವೂ, ಸುಕುಮಾರವೂ ಆದ ಸೂಕ್ತಿಗಳ ಸೌಂದರ್ಯದಿಂದ ಕೂಡಿದ ಕಾವ್ಯಗಳನ್ನು ರಚಿಸಿದ ಕವಿಯಾದ ಕಾರಣಕ್ಕೆ ಕಾಳಿದಾಸನನ್ನು ಇಂಥ ಸೂಕ್ಷ್ಮ ವಿಮರ್ಶೆಗೆ ಒಳಪಡಿಸುತ್ತಿದ್ದೇನೆಯೇ ಹೊರತು, ಕೇವಲ ಕಾವ್ಯ ರಚನೆಯ ಕೃತಕ ಕೌಶಲಗಳನ್ನಳವಡಿಸಿಕೊಂಡು ಪ್ರಶಂಸಾರ್ಹರೆನಿಸಿಕೊಂಡ ಕವಿಗಳನ್ನಲ್ಲ. ಅಂಥವರ ಬಗ್ಗೆ ನಾನು ತಲೆ ಕೆಡಿಸಿಕೊಳ್ಳುವುದಿಲ್ಲ.

ಅದೇ ರೀತಿ ಎಲ್ಲ ಕಾವ್ಯದ ಜೀವ ಸರ್ವಸ್ವವೆನಿಸಿರುವ ಉಜ್ವಲತೆ (ಸೌಭಾಗ್ಯ) ಅದರ

ಇನ್ನೊಂದು ಅಮೂಲ್ಯಗುಣ. ಈ ಉಜ್ವಲತೆ ಎಂಬುದು, ವೈವಿಧ್ಯಮಯವಾದ ಕಾವ್ಯ ನಿರ್ಮಾಣಕಾರಕ ಅಂಶಗಳಿಂದಾಗಿ ರಮಣೀಯವೆನಿಸಿ, ಕಾಂತಿಯುತವಾದ, ಪದ, ವಾಕ್ಯ, ಪ್ರಕರಣ ಮತ್ತು ಪ್ರಬಂಧವೇ ಮೊದಲಾದ ಕಾವ್ಯದ ವಿವಿಧ ಅಂಗಗಳ ಮೂಲಕ ಸಹೃದಯರ ಹೃದಯ ಸಂವೇದನೆಗೆ ನಿಲುಕುವಂಥದು.

ಈ ಅಮೂಲ್ಯ ಗುಣ ಕೃತಿಯೊಂದರ ಸಕಲಾಂಶಗಳನ್ನೂ ವ್ಯಾಪಿಸುತ್ತದಾದ್ದರಿಂದ, ಅಂಥ ಒಂದು ಕೃತಿ ಅನೇಕ ರಸಗಳ ಸಂಯೋಗದಿಂದಾಗಿ ಅಲೌಕಿಕ ಚಮತ್ಕಾರಕಾರಿ ಎನಿಸುತ್ತದೆ.

[ಈ ರೀತಿ ಮಾರ್ಗದ ವಿವೇಚನೆಯ ಉಪಸಂಹಾರ ಮಾಡಿ (ಇಲ್ಲಿಯವರೆಗೆ ಪ್ರಥಮ ಉನ್ಮೇಷದಲ್ಲಿ ಮಾರ್ಗಗಳ ಸ್ವರೂಪ ಮತ್ತು ಗುಣಗಳ ವಿವೇಚನೆ ಮಾಡಿ) ಗ್ರಂಥ ಕರ್ತೃ ಮುಂದಿನ ವಿಷಯಕ್ಕೆ ಪ್ರವೇಶಿಸುತ್ತಾನೆ].

ಮಾರ್ಗಾಣಾಂ ತ್ರಿತಯಂ ತದೇತದಸಕೃತ್ ಪ್ರಾಪ್ತವ್ಯಪರ್ಯುತ್ಸುಕೈಃ
ಕ್ಷುಣ್ಣಂ ಕೈರಪಿ ಯತ್ರ ಕಾಮಪಿ ಭುವಂ ಪ್ರಾಪ್ಯ ಪ್ರಸಿದ್ಧಿಂ ಗತಾಃ |
ಸರ್ವೇ ಸ್ವೈರ ವಿಹಾರ ಹಾರಿ ಕವಯೋ ಯಾಸ್ಯಂತಿ ಯೇನಾಧುನಾ
ತಸ್ಮಿನ್ ಕೋಽಪಿ ಸ ಸಾಧು ಸುಂದರ ಪದನ್ಯಾಸ ಕ್ರಮಃ ಕಥ್ಯತೇ (58)

ಕೆಲವೇ ಕವಿಗಳು ತಮ್ಮ ಪರಿಪೂರ್ಣತೆಯ ಪ್ರಾಮಾಣಿಕ ಅನ್ವೇಷಣೆಯಲ್ಲಿ ಸುದೀರ್ಘಕಾಲ ನಿಷ್ಠೆಯಿಂದ ತೊಡಗಿಕೊಂಡ ಕಾರಣದಿಂದಾಗಿ ಪೂರ್ಣತೆಯನ್ನು ತಲುಪಿದಂಥ ಮಾರ್ಗಗಳಾಗಿವೆ ಈ ಮೂರೂ ಮಾರ್ಗಗಳು. ಅವುಗಳಲ್ಲಿ ಪಡೆದುಕೊಂಡ ಕಿಂಚಿತ್ ಸಫಲವೆನ್ನಬಹುದಾದ ನೆಲೆಯೊಂದರ ಸಿದ್ಧಿಯೂ ಅವರಿಗೆ ಅಪಾರ ಪ್ರಸಿದ್ಧಿಯನ್ನು ತಂದು ಕೊಟ್ಟಿದೆ. ಎಲ್ಲ ಶ್ರೇಷ್ಠ ಕವಿಗಳಿಗೆ ಸ್ವಚ್ಛಂದ ವಿಹಾರ ಕ್ಷೇತ್ರದಂತಿರುವ ಹಾಗೂ ಶ್ರೇಷ್ಠ ಕವಿಗಳ ಉತ್ತಮ ಅಭಿರುಚಿಯ ದ್ಯೋತಕವಾಗಿರುವ ವಿಶಿಷ್ಟ ಹಾಗೂ ಸುಂದರ ಪದಗಳ ವಿನ್ಯಾಸಕ್ರಮದ ವಿಶ್ಲೇಷಣೆಯನ್ನು ಇನ್ನು ಮುಂದೆ ಕೈಗೊಳ್ಳಲಾಗುವುದು. (58)

ಸುಕುಮಾರವೇ ಮೊದಲಾದ ಮಾರ್ಗತ್ರಯಗಳು, ಮಹಾಕವಿಗಳಿಂದ ಮಾತ್ರ, ಬಳಕೆಯಾಗಿ ಪೂರ್ಣತೆಯನ್ನು ತಲುಪಿರುವಂಥವಾಗಿವೆ. ಸಾಮಾನ್ಯ ಕವಿಗಳಿಗೆ ಆ ಶೈಲಿ ಅಥವಾ ಮಾರ್ಗಗಳು ನಿಲುಕುವಂಥವೂ ಅಲ್ಲ. ಆ ಶ್ರೇಷ್ಠ ಕವಿಗಳೂ ಶ್ರದ್ಧಾ ಪೂರ್ವಕ ಸಾಧನೆ, ಮತ್ತು ತಮ್ಮ ಗಂತವ್ಯದ ಬಗೆಗಿನ ಎಚ್ಚರದಿಂದಾಗಿ ಮಾತ್ರ ಆ ಶೈಲಿಯನ್ನು ಕರಗತ ಮಾಡಿಕೊಂಡಿದ್ದಾರೆ. ಆ ಶೈಲಿಗಳಲ್ಲಿ ಕಿಂಚಿತ್ ಸಫಲತೆಯ ನೆಲೆಯನ್ನು ಸಾಧಿಸಿದ ಕಾರಣಕ್ಕಾಗಿ ಲೋಕೋತ್ತರವಾದ ಕೀರ್ತಿಯನ್ನು ಅವರು ಗಳಿಸಿದ್ದಾರೆಂದರೆ ನಿಜಕ್ಕೂ ಅದೊಂದು ಅಪೂರ್ವ ಸಾಧನೆಯೇ ಸರಿ.

ಮೂರು ಮಾರ್ಗಗಳಲ್ಲಿ ಮುನ್ನಡೆದ ಶ್ರೇಷ್ಠ ಕವಿಗಳು ತಮ್ಮ ಪ್ರತಿಭಾ ಪ್ರಕಾಶನದ ಸಲುವಾಗಿ ಅಳವಡಿಸಿಕೊಂಡ ಅಡೆ ತಡೆಗಳೇ ಇಲ್ಲದ ಸ್ವೇಚ್ಛಾ ವಿಹಾರದ ಕ್ಷೇತ್ರವೆಂಬಂತಿರುವ

ಸುಂದರ ಪದ ಪ್ರಯೋಗದ ಕೌಶಲವನ್ನು ಇನ್ನು ಮುಂದೆ ವಿವೇಚಿಸಲಾಗುವುದು. ಮಾರ್ಗ, ಸ್ವೈರ ವಿಹಾರ, ಪದ, ಮೊದಲಾದ ಶಬ್ದಗಳನ್ನು ಶ್ಲೇಷದ ಛಾಯೆಯ ವೈಶಿಷ್ಟ್ಯದಿಂದ ಕೂಡಿರುವಂತೆ ಭಾವಿಸಬೇಕು.

*　　*　　*

ಇಲ್ಲಿಗೆ ಶ್ರೀರಾಜಾನಕ ಕುಂತಕನಿಂದ ವಿರಚಿತವಾದ
'ವಕ್ರೋಕ್ತಿ ಜೀವಿತ'ವೆಂಬ ಕಾವ್ಯಾಲಂಕಾರದಲ್ಲಿ
ಮೊದಲನೆಯ ಉನ್ಮೇಷ ಮುಗಿಯಿತು

ಕನ್ನಡ ವಕ್ರೋಕ್ತಿ ಜೀವಿತ

ಎರಡನೆಯ ಉನ್ಮೇಷ

ಸಾಮಾನ್ಯ ಲಕ್ಷಣವನ್ನು ಹೇಳಿದ ನಂತರ ತನ್ನ ವಿಷಯಕ್ಕೆ ಸಂಬಂಧಿಸಿದಂತೆ ಗ್ರಂಥಕರ್ತನು ವಿಶೇಷ ಲಕ್ಷಣವನ್ನು ಹೇಳಬೇಕೆಂಬುದು ಸಾರ್ವತ್ರಿಕವಾಗಿ ಒಪ್ಪಿತವಾದ ವಿಚಾರ. ಅದರಂತೆ ಪ್ರಥಮ ಉನ್ಮೇಷದಲ್ಲಿ "ಶಬ್ದಾರ್ಥೌ ಸಹಿತೌಕಾವ್ಯಂ" ಎಂದು ಕಾವ್ಯದ ಸಾಮಾನ್ಯ ಲಕ್ಷಣವನ್ನು ಹೇಳಿ (1/7ರಲ್ಲಿ) ಅನಂತರ (16 ಮತ್ತು 17ರಲ್ಲಿ) ಕಾವ್ಯದ ಅಂಗಗಳಾದ ಶಬ್ದ ಮತ್ತು ಅರ್ಥಗಳ ಪರಸ್ಪರ ಸಹಭಾವವೇ (ಸಹಿತತ್ವ) ಕಾವ್ಯ ಎಂಬ ವಿಶೇಷ ಲಕ್ಷಣವನ್ನು ಹೇಳಲಾಗಿದೆ. ಇದೀಗ ಈ ಎರಡನೇ ಉನ್ಮೇಷದಲ್ಲಿ ಪ್ರಥಮ ಉನ್ಮೇಷದ 17ನೇ ಕಾರಿಕೆಯಲ್ಲಿ ಉದ್ದಿಷ್ಟವಾಗಿದ್ದ, ವಕ್ರೋಕ್ತಿಯ ಮೊದಲ ಪ್ರಕಾರವಾದ ವರ್ಣವಿನ್ಯಾಸ ವಕ್ರತೆಯ ವಿಶೇಷ ಲಕ್ಷಣವನ್ನು ಪ್ರಾರಂಭಿಸಲಾಗುವುದು.

ಏಕೋ ದ್ವೌ ಬಹವೋ ವರ್ಣಾ ಬಧ್ಯಮಾನಾಃ ಪುನಃ ಪುನಃ
ಸ್ವಲ್ಪಾಂತರಾಸ್ತ್ರಿಧಾ ಸೋಕ್ತಾ ವರ್ಣವಿನ್ಯಾಸ ವಕ್ರತಾ[1]

ಒಂದು, ಎರಡು ಅಥವಾ ಹಲವು ವರ್ಣಗಳು (ವ್ಯಂಜನಗಳು) ಕಡಿಮೆ ಕಾಲದ ಅಂತರದಲ್ಲಿ ಮತ್ತೆ ಮತ್ತೆ ಬಳಕೆಯಾದಾಗ ಮೂರು ರೀತಿಯ ವರ್ಣವಿನ್ಯಾಸ ವಕ್ರತೆಗಳು ರೂಪಿತವಾಗುತ್ತವೆ [1]

ಇಲ್ಲಿ ವರ್ಣವು, ಈಗಾಗಲೇ ಪ್ರಸಿದ್ಧವಾಗಿರುವಂತೆ ವ್ಯಂಜನಕ್ಕೆ ಪರ್ಯಾಯವಾಗಿ ಬಳಕೆಯಾಗಿದೆ. ವರ್ಣ ವಿನ್ಯಾಸದಲ್ಲಿ ಕಂಡುಬರುವ ವಕ್ರತೆಯು (ರಮಣೀಯತೆಯು) ವ್ಯಂಜನ ಸಂಯೋಜನೆಯಲ್ಲಿ ಕಂಡುಬರುವ ರಮಣೀಯತೆಯಂತೆಯೇ ಇರುತ್ತದೆಂಬ ಭಾವ. ಅಂಥ ವಿನ್ಯಾಸವು ಮೂರು ಪ್ರಕಾರದ್ದಾಗಿರುತ್ತದೆ. ಆ ಮೂರು ಪ್ರಕಾರಗಳಾವುವೆಂದರೆ

1) ಕೇವಲ ಒಂದು ವ್ಯಂಜನ ತೀರಾ ಕಡಿಮೆ ಕಾಲದ ಅಂತರದಲ್ಲಿ ಪುನರಾವೃತ್ತವಾಗುವುದು.

2) ಎರಡು ವ್ಯಂಜನಗಳು ಕಡಿಮೆ ಕಾಲದ ಅಂತರದಲ್ಲಿ ಪುನರಾವೃತ್ತವಾಗುವುದು

3) ಅನೇಕ ವ್ಯಂಜನಗಳು ಕಡಿಮೆ ಕಾಲದ ಅಂತರದಲ್ಲಿ ಪುನರಾವೃತ್ತವಾಗುವುದು

ಅಂದರೆ ಪುನರಾವರ್ತನೆಯ ನಡುವಿನ ಕಾಲದ ಅಂತರ ಅತ್ಯಂತ ಕಡಿಮೆ ಅವಧಿಯದ್ದಾಗಿರುತ್ತದೆ. ಇವೇ ಆ ಮೂರು ಬಗೆಗಳು.

ಇಲ್ಲಿ ಬಳಕೆಯಾಗಿರುವ ಪುನಃ ಪುನಃ ಎಂಬ ಶಬ್ದಗಳನ್ನು ಎರಡು ಸಲಕ್ಕಿಂತ ಜಾಸ್ತಿ, ಹೆಚ್ಚು ಬಾರಿ 'ಪುನರಾವೃತ್ತಿ' ಎಂದು ತೆಗೆದುಕೊಳ್ಳಬೇಕೇ ಹೊರತು ಅದರ ಹೊರತು ಎಂದಲ್ಲ.

[ಇಲ್ಲಿ ಪುನಃ ಪುನಃ ಎಂದು ಪುನರಾವರ್ತನೆ ಮಾಡಿರುವುದನ್ನು ಅಯೋಗವ್ಯವತ್ ಛೇದ ಪರತ್ವ ನಿಯಮವನ್ನು ಇಟ್ಟುಕೊಳ್ಳಬೇಕೇ ಹೊರತು ಅನ್ಯಯೋಗವ್ಯವತ್ ಛೇದ ಪರತ್ವ

ನಿಯಮವನ್ನಲ್ಲ. ಆದ್ದರಿಂದ ಉಳಿದೆಲ್ಲ ವ್ಯಂಜನಗಳಲ್ಲಿ ಪುನಃ ಪುನಃ ಬಳಕೆಯಾಗಬಲ್ಲಂಥವು ಎಂದು ಅರ್ಥವೇ ಹೊರತು ಎರಡು ಸಲ ಬಳಕೆಯಾದವು ಎಂದಲ್ಲ. 'ಏಕವರ್ಣ' (ವ್ಯಂಜನ) ಪುನರಾವೃತ್ತಿಗೆ ಉದಾಹರಣೆ

ಧಮ್ಮಿಲ್ಲೋ ವಿನಿವೇಶಿತಾಲ್ಪ ಕುಸುಮಃ ಸೌಂದರ್ಯಧುರ್ಯಂ ಸ್ಮಿತಮ್
ವಿನ್ಯಾಸೋ ವಚಸಾಂ ವಿದಗ್ಧ ಮಧುರಃ ಕಂಠೇ ಕಲಃ ಪಂಚಮಃ|
ಲೀಲಾ ಮಂಥರ ತಾರಕೇ ಚ ನಯನೇ ಯಾತಂ ವಿಲಾಸಾಲಸಂ
ಕೋಽಪ್ಯೇವಂ ಹರಿಣೀದೃಶಃ ಸ್ಮರಶರಾಪಾತಾ ವದಾತಃ ಕ್ರಮಃ [೧]*

ಕೇಶಪಾಶದಿ ಕೆಲವೆ ಕುಸುಮವು ಕೋದಿವೆ
ಮುಗುಳು ನಗೆಯಾದರೊ ಅಪೂರ್ವ ಚೆಲುವನಾಂತಿದೆ
ಮಾತಿನ ರೀತಿಯಾದರೋ ವಿದಗ್ಧ ಮಧುರ
ಕಂಠದಲಿ ಕೋಗಿಲೆಯ ಪಂಚಮ ಸ್ವರ ನೆಲಸಿದೆ
ಕಂಗಳಲಿ ಕೊಂಕು ನೋಟದ ಚೆಲುವುವೆತ್ತಿಹ
ಕಣ್ಣ ಬೊಂಬೆಗಳ ಮೋಡಿ
ಹಾವಭಾವದ ಅಲಸಗಮನದ ಕಾಮ ಬಾಣವು ತಾಕಿಹ
ಆ ಹರಿಣಾಕ್ಷಿಯ ರೀತಿಯೇ ಇಂತಪೂರ್ವವೆನಿಸಿಹುದು [೧]

ಈ ಕೆಳಗಿನ ಪದ್ಯದಲ್ಲಿ ಒಂದು, ಎರಡು ಅಥವಾ ಹೆಚ್ಚಿನ ವ್ಯಂಜನಗಳ ಪುನಾರವೃತ್ತಿ ಕಂಡು ಬರುತ್ತದೆ.

ಭಗ್ನೈಲಾವಲ್ಲರೀ ಕಾಸ್ತರಲಿತ ಕದಲೀ ಸ್ತಂಬ ತಾಂಬೂಲ ಜಂಬೂ-
ಜಂಬೀರಾಸ್ತಾಲತಾಲೀ ಸರಲತರಲತಾಲಾಸಿಕಾ ಯಸ್ಯ ಜಹ್ನುಃ
ವೇಲ್ಲತ್ಕಲ್ಲೋಲ ಹೇಲಾ ಬಿಸಕಲನ ಜಡಾಃ ಕೂಲಕಚ್ಛೇಷು ಸಿಂಧೋಃ
ಸೇನಾಸೀಮಂತಿನೀ ನಾಮನವರತ ರತಾಭ್ಯಾಸತಾಂತಿ ಸಮೀರಾಃ [೨]

ಏಲಕ್ಕಿ ಬಳ್ಳಿಗಳ ಮುರಿದು
ಬಾಳೆ, ವೀಳ್ಯ, ನಿಂಬೆ, ನೇರಿಳೆಗಳನಲ್ಲಾಡಿಸುತೆ
ತಾಳೆ ತೆಂಗು ಸಾಲವೃಕ್ಷ ಮತ್ತಿತರ
ಗಿಡ ಬಳ್ಳಿಗಳ ಕುಣಿಸುತೆ
ಸಾಗರದಲೆಗಳ ತಣ್ಪಿನಿಂ ಕೂಡಿ

---

* ಟಿಪ್ಪಣಿ : ಮೇಲಿನ ಪದ್ಯದಲ್ಲಿ ಮೊದಲ ಚರಣದಲ್ಲಿ ಮ್,ಲ್,ವ್ ಹಾಗೂ ಯ ವ್ಯಂಜನಗಳ, ಎರಡನೇ ಚರಣದಲ್ಲಿ 'ವ್', 'ಸ್', 'ಧ್' ಮತ್ತು ಕ್ ವರ್ಣಗಳ, ಮೂರನೇ ಚರಣದಲ್ಲಿ ಲ್,ರ್,ನ್,ಯ್ ಹಾಗೂ ಸ ವರ್ಣಗಳ ಹಾಗೂ ನಾಲ್ಕನೇ ಚರಣದಲ್ಲಿ ರ್,ಶ್ ಹಾಗೂ ತ್ ವರ್ಣಗಳು ಬೇರೆಬೇರೆಯಾಗಿ ಹಲವು ಬಾರಿ ನಿಯೋಜಿತವಾಗಿವೆ. ಹಾಗಾಗಿ ಇಲ್ಲಿ ಒಂದೇ ವ್ಯಂಜನ ಪುನಃ ಪುನಃ ವಿನ್ಯಸ್ತಗೊಂಡು ವರ್ಣ ವಿನ್ಯಾಸ ವಕ್ರತೆಯ ಮೊದಲ ಪ್ರಕಾರಕ್ಕೆ ಉದಾಹರಣೆಯಾಗಿದೆ.

(ಹಿಂದೀ ವಕ್ರೋಕ್ತಿ ಜೀವಿತ -ಪುಟ 173ರಿಂದ ಉದ್ಧೃತ)

ತಾವರೆಯ ನಾರ್ಗಳಿಂ ಭಾರವಾಗಿಹ
ತಂಪು ಮಾರುತ ತಾನು ಸಾಗರತಟದ
ಬಳ್ಳಿ ಮಾಡಗಳಲಿರುವ
ಸೇನಾ ಸೀಮಂತಿನಿಯರ ನಿರಂತರ
ರತಿ ಕ್ರೀಡೆಯಾಯಾಸವನು ನೀಗುತಿದೆ [೨]*

ಇದೇ ವರ್ಣ ವಿನ್ಯಾಸ ವಕ್ರತೆಯನ್ನು ಅದರ ಇನ್ನೊಂದು ರೂಪದಿಂದ ಭಿನ್ನವಾಗಿ ಪ್ರತಿಪಾದಿಸಬಹುದು,

ವರ್ಗಾಂತ ಯೋಗಿನ: ಸ್ಪರ್ಶಾ ದ್ವಿರುಕ್ತಾ ಸ್ತ-ಲ- ನಾದಯಃ
ಶಿಷ್ಟಾಶ್ಚ ರಾದಿಸಂಯುಕ್ತಾಃ ಪ್ರಸ್ತು ತೌಚಿತ್ಯಶೋಭಿನಃ[೨]

ವರ್ಗೀಯ ವ್ಯಂಜನಗಳು ('ಕ'ಕಾರದಿಂದ ಮಕಾರದವರೆಗಿನ 25) ತಮ್ಮ ವರ್ಗದ ಅಂತಿಮ ವ್ಯಂಜನಗಳಾದ ಅನುನಾಸಿಕಗಳೊಂದಿಗೆ ಸೇರಿ ಆವೃತ್ತವಾಗಬಹುದು. 'ತ' 'ಲ' 'ನ'ಗಳು ದ್ವಿರುಕ್ತಗಳಾಗಿ ಆವೃತ್ತಗೊಳ್ಳಬಹುದು. ಉಳಿದ ಎಲ್ಲ ವರ್ಣಗಳು 'ರ' ಆದಿಯೊಂದಿಗೆ ಸಂಯುಕ್ತಗೊಂಡು ಆವೃತ್ತಗೊಳ್ಳಬಹುದು. ವರ್ಣ್ಯಮಾನ ವಸ್ತುವಿನೊಂದಿಗೆ ಔಚಿತ್ಯಪೂರ್ಣವಾಗಿ ಮಿಳಿತಗೊಂಡು ಇವು ಶೋಭಿಸುತ್ತವೆ - (3)

ವರ್ಣ ವಿನ್ಯಾಸ ವಕ್ರತೆಯ ಮೂರು ಪ್ರಕಾರಗಳನ್ನು ಹೇಳಿದ ಹಿಂದಿನ ಕಾರಿಕೆಯೊಂದಿಗೆ ಈ ಕಾರಿಕೆಯಲ್ಲಿರುವ 'ಚ' (ಮತ್ತು) ಅನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. ಈ ವರ್ಣವಿನ್ಯಾಸ ವಕ್ರತೆಯದೂ ಮೂರು ಪ್ರಕಾರಗಳಾಗುತ್ತವೆ. ಹಾಗಾದರೆ ಆ ಮೂರು ಯಾವುವು? ಅವುಗಳೆಂದರೆ

---

* **ಟಿಪ್ಪಣಿ** : ಮೇಲಿನ ಪದ್ಯದಲ್ಲಿ ಕುಂತಕನು ವರ್ಣ ವಿನ್ಯಾಸ ವಕ್ರತೆಯ ಮೂರೂ ಪ್ರಕಾರಗಳ ಉದಾಹರಣೆಯನ್ನು ಪ್ರಸ್ತುತ ಪಡಿಸಿದ್ದಾನೆ. ಇದರಲ್ಲಿ ಮೊದಲ ಪ್ರಕಾರದ ಸ್ವರೂಪ ಹೀಗೆ : ಪ್ರಥಮ ಚರಣದಲ್ಲಿ 'ಲ' ವರ್ಣದ ಅನೇಕಸಲ ಪುನರಾವೃತ್ತಿ. ಮೂರನೇ ಚರಣದಲ್ಲಿ 'ಲ್' ಒಂದೇ ವರ್ಣದ ಪುನರಾವೃತ್ತಿ ಬಹುಬಾರಿ. ಹಾಗೂ ನಾಲ್ಕನೇ ಚರಣದಲ್ಲಿ 'ಸ' ವರ್ಣದ ಪ್ರಯೋಗ ನಾಲ್ಕು ಸಲ.

ಎರಡನೇ ಪ್ರಕಾರದ ಸ್ವರೂಪ : 1) 2ನೇ ಚರಣದಲ್ಲಿ 'ತಾಲ', 'ತಾಲಿ'ಯಲ್ಲಿ 'ತ' ಮತ್ತು 'ಲ'ಗಳ ಎರಡು ಬಾರಿ ಆವೃತ್ತಿ 2) ಮೂರನೇ ಚರಣದಲ್ಲಿ ವೇಲ್ಲತ್ನಲ್ಲೋಲದಲ್ಲಿ 'ಲ್ಲ' ವ್ಯಂಜನಗಳ ಎರಡು ಬಾರಿ ಪುನರಾವೃತ್ತಿ 3) 'ಕಲ್ಲೋಲ' ಮತ್ತು 'ಬಿಸಕಲನ' ಮತ್ತು 'ಕೂಲ ಕಚ್ಛೇಷು' ಶಬ್ದಗಳಲ್ಲಿ 'ಕಲ'ದ ಮೂರು ಬಾರಿ ಆವೃತ್ತಿ ಹಾಗೂ 4) ನಾಲ್ಕನೇ ಚರಣದಲ್ಲಿ 'ರತರತಾಭ್ಯಾಸ'ದಲ್ಲಿ 'ರ' ಮತ್ತು 'ತ'ಗಳ ಎರಡು ಬಾರಿ ಆವರ್ತನೆ.

ಮೂರನೇ ಪ್ರಕಾರದ ಸ್ವರೂಪ : 1) ಮೊದಲ ಚರಣದಲ್ಲಿಯ 'ಸ್ತಂಬ ತಾಂಬೂಲ'ದಲ್ಲಿ ತ,ಮ, ಬಗಳು ಒಟ್ಟಿಗೇ ಎರಡು ಸಲ ಆವೃತ್ತಿಯಾಗಿರುವುದು ಹಾಗೂ 2) ಜಂಬು 'ಜಂಬೀರಾ'ದಲ್ಲಿ ಜ,ಮ,ಬ ಒಟ್ಟಿಗೇ ಒಮ್ಮೆಗೇ ಎರಡು ಸಲ ಆವರ್ತನೆ ಹಾಗೂ ಎರಡನೇ ಚರಣದಲ್ಲಿ "ಸರಲತರಲತಾ"ದಲ್ಲಿ ರ,ಲ,ತ,ಗಳು ಒಟ್ಟಿಗೇ ಪ್ರಯೋಗವಾಗಿರುವುದು. ಹೀಗೆ ಈ ಶ್ಲೋಕದಲ್ಲಿ ವರ್ಣವಿನ್ಯಾಸವಕ್ರತೆಯ ಮೂರೂ ಪ್ರಕಾರಗಳ ಉದಾಹರಣೆ ಸಿಗುತ್ತದೆ.

ಅದೇ, ಪುಟ. 174

(1) ತಮ್ಮ ತಮ್ಮ ವರ್ಗದ ಅನುನಾಸಿಕಗಳೊಂದಿಗೆ ಸೇರಿಕೊಂಡ ವರ್ಗೀಯ ವ್ಯಂಜನಗಳು ಅರ್ಥಾತ್ ಸ್ಪರ್ಶ ವ್ಯಂಜನಗಳಾದ ವರ್ಗೀಯಗಳು (ಕದಿಂದ ಮ) ತಮ್ಮ ತಮ್ಮ ವರ್ಗದ ಅಂತಿಮ ಅನುನಾಸಿಕಗಳೊಂದಿಗೆ ಆವೃತ್ತಿಗಾಗಿ ಸೇರಬಹುದು. ಇದು ಮೊದಲ ಪ್ರಭೇದ. 'ತ' 'ಲ' 'ನ' ಮೊದಲಾದ ವ್ಯಂಜನಗಳು ದ್ವಿರುಕ್ತಗೊಂಡು ಪುನರಾವರ್ತನೆಗೊಳ್ಳಬಹುದು. ಇದು ಎರಡನೇ ಪ್ರಭೇದ. ಇವಲ್ಲದೆ ಉಳಿದ ವ್ಯಂಜನಗಳು 'ರ', 'ಲ', 'ವ' ಕಾರದೊಂದಿಗೆ ಸಂಯುಕ್ತಗೊಂಡು ಆವೃತ್ತಗೊಳ್ಳಬಹುದು. ಇದು ಮೂರನೇ ಪ್ರಭೇದ. ಇಲ್ಲಿ ಹೇಳಲಾದ ಎಲ್ಲ ವ್ಯಂಜನಗಳಿಗೂ ಒಂದಕ್ಕೂ ಮತ್ತೊಂದಕ್ಕೂ ಅತ್ಯಲ್ಪ ಕಾಲಾವಧಿಯ ಅಂತರವಿರುತ್ತದೆ. ಅವು ಇನ್ನೂ ಹೇಗಿರಬೇಕು?

ಪ್ರಸ್ತುತದ ಔಚಿತ್ಯದಿಂದ ಶೋಭಿಸುವಂಥದು; ಅಂದರೆ ವರ್ಣ್ಯಮಾನ ವಸ್ತುವಿಗೆ ಉಚಿತವಾದ ಭಾವದಿಂದ ಶೋಭಿಸುವಂಥವು. ವಸ್ತುವಿನ ಭಾವಕ್ಕೆ ಅನುರೂಪವಾದ ಸಾಮರಸ್ಯದಿಂದ ಕೂಡಿರುವಂಥ ವರ್ಣಗಳ ಪುನರಾವೃತ್ತಿ ಇರಬೇಕು. ರಸಾನುಗುಣವಾದ ವರ್ಣಗಳ ಪುನರಾವರ್ತನೆ ಇರಬೇಕು. ಹಾಗಲ್ಲದೆ, ರಸ ವಿರುದ್ಧವಾದ ವಸ್ತು (ರಸಕ್ಕೆ ಬಾಧಕವಾಗುವ) ಮತ್ತು ಶ್ರುತಿ ಪರಿಣಾಮವನ್ನುಂಟುಮಾಡುವ ಸಲುವಾಗಿ ಕೃತಿಕಾರನ ಪ್ರಯಾಸವನ್ನು ಎದ್ದು ಕಾಣಿಸುವಂಥ ವರ್ಣಾವೃತ್ತಿಯನ್ನು ವರ್ಣಾವೃತ್ತಿಪ್ರಪಂಚದಿಂದಲೇ ನಿವಾರಿಸುತ್ತೇವೆ. ಈ ಕಾರಣದಿಂದಾಗಿಯೇ, ಪರುಷ ರಸಗಳ ಅಭಿವ್ಯಕ್ತಿಯಲ್ಲಿ ಪರುಷ ವರ್ಣಗಳ ಸಂಯೋಜನೆಯನ್ನು ಒಪ್ಪಲಾಗಿದೆ.

[ಪರುಷ ವರ್ಣಗಳು - ಪರುಷ ರಸಕ್ಕೆ ಅನುರೂಪವಾಗಿರುವುದರಿಂದ ಉಚಿತವಾಗಿರುತ್ತವೆ]

ಉದಾ :

ಉನ್ನಿದ್ರಕೋಕನದ ರೇಣುಪಿಶಙ್ಗಿತಾಙ್ಗಾ
ಗುಂಞ್ಜನ್ತಿ ಮಞ್ಜು ಮಧುಪಾಃ ಕಮಲಾಕರೇಷು
ಏತಚ್ಚಕಾಸ್ತಿ ಚ ರವೇರ್ನವ ಬನ್ಧು ಜೀವ
ಪುಷ್ಪಚ್ಛದಾಭಮುದಯಾಚಲ ಚುಮ್ಬಿಬಿಮ್ಬಮ್ [೩]

(ಶಾರ್ಙ್ಗಧರಪದ್ಧತಿ - 3736)

ಅರಳ್ದ ಕೆಂದಾವರೆಯ ಪರಾಗ ರೇಣುಗಳು ಸೋಕಿ
ರಕ್ತ ವರ್ಣವ ತಳೆದ ಭ್ರಮರಗಳು
ಝೇಂಕಾರಗೈಯುತಿವೆ ಕಮಲಾಕರಂಗಳಲಿ ಮಧುರವಾಗಿ

ಟಿಪ್ಪಣಿ : ಮೇಲಿನ ಶ್ಲೋಕದಲ್ಲಿ ಪಿಶಙ್ಗಿತಾಙ್ಗಾ, ಗುಞ್ಜನ್ತಿ, ಮಞ್ಜು, ಚುಮ್ಬಿ ಮತ್ತು ಬಿಮ್ಬಮ್‌ಗಳಲ್ಲಿ ಕ್ರಮವಾಗಿ ಸ್ಪರ್ಶವರ್ಣ ಗ,ಗ,ಜ,ಜ ಹಾಗೂ ಬ ಮತ್ತು 'ಬ' ತಮ್ಮ ವರ್ಗದ ಅಂತ್ಯವರ್ಣ (ಅನುನಾಸಿಕ)ಗಳೊಂದಿಗೆ ಕೂಡಿಕೊಂಡು ಎರಡರೆಡು ಬಾರಿ ಪುನರಾವೃತ್ತಗೊಂಡಿವೆ. ಆದ್ದರಿಂದ ಇದು ವರ್ಣವಿನ್ಯಾಸ ವಕ್ರತೆಯ ಪ್ರಥಮ ಪ್ರಕಾರಕ್ಕೆ ಉದಾಹರಣೆ.

ಅದೇ, ಪುಟ. 176

ಉದಯಾಚಲವ ಚುಂಬಿಸಿಹ
ಸೂರ್ಯ ಬಿಂಬವು ಜಪಾ ಕುಸುಮದ
ಹಾಗೆ ಕೆಂಪಾಗಿದೆ (೩)

ಅದೇ ರೀತಿ :

ಕದಲೀ ಸ್ತಮ್ಬ ತಾಮ್ಬೂಲ ಜಮ್ಬೂ ಜಮ್ಬೀರಾಃ ४

[ಇಲ್ಲಿ ಸ್ಪರ್ಶ ವರ್ಣ ಬ ತನ್ನ ವರ್ಗದ ಅಂತಿಮ ವರ್ಣವಾದ ಮ ದೊಂದಿಗೆ ಕೂಡಿಕೊಂಡು ನಾಲ್ಕು ಸಲ, ಆವೃತ್ತಗೊಂಡಿದೆ.]

ಅದೇ ರೀತಿ :

ಸರಸ್ವತೀ ಹೃದಯಾರವಿನ್ದಮಕರನ್ದಬಿನ್ದುಸನ್ದೋಹ ಸುನ್ದರಾಣಾಮ್ [೫]

ಸರಸತಿಯ ಹೃದಯ ಕಮಲದೊಳಿರುವ ಸುನ್ದರ, ಮಕರನ್ದಬಿನ್ದು
ಸನ್ದೋಹಗಳನು. [೫]

ಎರಡನೇ ಪ್ರಕಾರದ ವರ್ಣವಿನ್ಯಾಸ ವಕ್ರತೆ :

ಪ್ರಥಮ ಮರುಣಚ್ಛಾಯಸ್ತಾವತ್ತ ತತಃಕನಕ ಪ್ರಭ-
ಸ್ತದನು ವಿರಹೋತ್ತಾಮ್ಯತ್ತನ್ವೀ ಕಪೋಲ ತಲದ್ಯುತಿಃ
ಪ್ರಸರತಿ ತತೋಧ್ವಾಂತ ಕ್ಷೋದಕ್ಷಮಃ ಕ್ಷಣದಾಮುಖೇ
ಸರಸ ಬಿಸಿನೀ ಕಂದಚ್ಛೇದಚ್ಛವಿ ರ್ಮೃಗಲಾಂಛನಃ [೬]

ಇನ್ನೊಂದು ಉದಾಹರಣೆ :

"ಸೌಂದರ್ಯ ಧುರ್ಯಂ ಸ್ಮಿತಮ್" [೭]

(ಇಲ್ಲಿ 'ಯ 'ಕಾರ 'ರ'ಕಾರದೊಂದಿಗೆ ಎರಡು ಸಲ ಆವೃತ್ತವಾಗಿದೆ)

ಅದೇ ರೀತಿ

---

* ಟಿಪ್ಪಣಿ : ಇಲ್ಲಿ ಸ್ಪರ್ಶವರ್ಣ 'ದ' ತ ವರ್ಗದ ಅಂತ್ಯವರ್ಣ 'ನ'ದೊಂದಿಗೆ ಕೂಡಿಕೊಂಡು 5ಸಲ ಆವೃತ್ತಗೊಂಡಿದೆ. ಹಾಗಾಗಿ ಇದು ಕೂಡ ಪ್ರಥಮ ಪ್ರಕಾರದ ಉದಾಹರಣೆ (5) ಇಲ್ಲಿ ಆದಿವರ್ಣ ಎಂದರೆ ತ,ಲ ಮತ್ತು ನಗಿಂತ ಛ,ದ, ಮೊದಲಾದ ವರ್ಣಗಳೆಂದು ಅರ್ಥ. ದ್ವಿತ್ವ ಎಂದರೆ, ಅದೇ ವರ್ಣಬಂದು ಆಗುವಂಥದಷ್ಟೇ ಅಲ್ಲ, (ಛ ಕ್ಕೆ ಛ ಬಂದೇ ಆಗುವ ದ್ವಿತ್ವವಲ್ಲ) ಆ ವರ್ಣದ ಉಚ್ಚಾರ - ದ್ವಿತ್ವದಂತಿದ್ದರೆ ಸಾಕು. ನಮ್ಮ ಉಚ್ಚಾರ 'ಕಂದಚ್ಛೇದಚ್ಛವಿ' ಎಂಬಂತೆ ಕೇಳಿಸುತ್ತದೆ. ಹೀಗಾಗಿ ಕೇಳುವುದರಲ್ಲಿ ಒಂದು ಅಪೂರ್ವ ಆನಂದ ಉಂಟಾಗುತ್ತದೆ. ಹಾಗಾಗಿ ಇದು ವರ್ಣವಿನ್ಯಾಸ ವಕ್ರತೆಯ 2ನೇ ಪ್ರಕಾರದಲ್ಲಿ ಬರುತ್ತದೆ.

ವರ್ಣ ವಿನ್ಯಾಸ ವಕ್ರತೆಯ ತೃತೀಯ ಪ್ರಕಾರ - 'ರ' ಆದಿಯೊಂದಿಗೆ ಸಂಯುಕ್ತವಾದ ಕ್+ಷ್ (ಕ್ಷ) ಇದರ ಸಂಯುಕ್ತರೂಪದ ಮೂರು ಬಾರಿ ಪ್ರಯೋಗವಾಗಿದೆ. ಹಾಗಾಗಿ ವರ್ಣವಿನ್ಯಾಸ ವಕ್ರತೆಯ ಮೂರನೇ ಪ್ರಕಾರಕ್ಕೆ ಉದಾಹರಣೆ. ಉಳಿದ ವರ್ಣಗಳ ಪುನರಾವೃತ್ತಿ. ಇದರ ಎರಡು ಮತ್ತು ಮೂರನೇ ಚರಣಗಳು ಎರಡನೇ ಪ್ರಕಾರದ ವರ್ಣವಕ್ರತೆಗೆ ಹಾಗೂ ಮೂರನೇ ಪ್ರಕಾರದ ವರ್ಣವಕ್ರತೆಗೆ ಉದಾಹರಣೆಗಳಾಗಿವೆ.

ಅದೇ, ಪುಟ. 177

'ಹ್ಲಾದ' ಶಬ್ದದೊಂದಿಗೆ 'ಕ'ಹ್ಲಾರ ಶಬ್ದವನ್ನು ಪ್ರಯೋಗಿಸಿದರೆ
ಮೂರನೇ ಪ್ರಕಾರದ ವರ್ಣವಕ್ರತೆಯನ್ನು ಕಾಣಬಹುದು.
(ಇಲ್ಲಿ 'ಹ'ದೊಂದಿಗೆ 'ಲ'ಗೆ ಎರಡು ಸಲ ಸಂಯೋಗವಾಗಿ ಆವೃತ್ತವಾಗಿದೆ)

ಪರುಷ 'ರಸ'ದ ಸಂದರ್ಭದಲ್ಲಿ ಅದೇ ರೀತಿಯ ಪರುಷವರ್ಣದ ಸಂಯೋಗವಾಗಿ ಆವರ್ತನೆಯಾಗುವುದಕ್ಕೆ ಉದಾ :

ಉತ್ತಾಮ್ಯತ್ತಾಲವಶ್ಚ ಪ್ರತಪತಿ ತರಣಾವಾಂಶವೀ ತಾಪತಂದ್ರೀ-
ಮದ್ರಿದ್ರೋಣೀಕುಟೀರೇ ಕುಹರಿಣಿ, ಹರಿಣಾರಾತಯೋ ಯಾಪಯಂತಿ [೮]

ಹೊತ್ತೇರುತ್ತಿದ್ದಂತೆ ಬೆಂಗದಿರ
ತಾಪಕ್ಕೆ ಅಂಗುಳವು ತಾರಿದಾ
ವ್ಯಾಘ್ರಗಳು ಪರ್ವತದ ತಪ್ಪಲಿನ
ಗುಹೆಗಳಲಿ ಶ್ರಾಂತಿಯನು ನೀಗುತಿಹವು [೮]

ಇದೇ ವರ್ಣ ವಿನ್ಯಾಸ ವಕ್ರತೆಯ ಇನ್ನೊಂದು ಪ್ರಕಾರದ ವೈಚಿತ್ರ್ಯವನ್ನು ವರ್ಣಿಸಲಾಗುವುದು.

ಕ್ವಚಿದವ್ಯವಧಾನೇಪಿ ಮನೋಹಾರಿ ನಿಬಂಧನಾ
ಸಾ ಸ್ವರಾಣಾಮಸಾರೂಪ್ಯಾತ್ ಪರಾಂ ಪುಷ್ಣಾತಿ ವಕ್ರತಾಮ್ [3]

ಕೆಲವೊಮ್ಮೆ ಕಾಲ ವಿಳಂಬವಿಲ್ಲದೆ ಒಂದಾದ ನಂತರ ಮತ್ತೊಂದರಂತೆ ಕವಿಯು ಕಲಾತ್ಮಕವಾಗಿ ಯೋಜಿಸಿದ ವರ್ಣಾವೃತ್ತಿಯು ಸ್ವರಗಳ ವ್ಯತ್ಯಯದಿಂದಾಗಿ ಅಪೂರ್ವವಾದ ಕಾವ್ಯಸೌಂದರ್ಯವನ್ನು ಪೋಷಿಸುತ್ತದೆ [3]

ಕೆಲವೊಮ್ಮೆ ವಾಕ್ಯದ ಅನಿಶ್ಚಿತ ಭಾಗಗಳಲ್ಲಿ ಒಂದು ಎರಡು ಅಥವಾ ಮೂರು ವರ್ಣಗಳು ಒಂದರ ನಂತರ ಮತ್ತೊಂದು ಕಾಲ ವಿಳಂಬವಿಲ್ಲದಂತೆಯೂ ಪುನಾರವೃತ್ತಗೊಳ್ಳುವಂತೆ ಮಾಡಿದ ರಚನೆಯು ಚಿತ್ತಾಕರ್ಷಕವಾದ ಕಾವ್ಯಸೌಂದರ್ಯವನ್ನು ಪಡೆದುಕೊಂಡು ಬಿಡುತ್ತದೆ. ಕೆಲವೊಮ್ಮೆ ಹೀಗೆ ಆಗಿ ಬಿಡುತ್ತದೆನ್ನುವುದೇ ಅದರ ತಾತ್ಪರ್ಯ. ಇದು ಯಮಕವಂತೂ ಅಲ್ಲ ಕಾರಣ ಯಮಕವು ಯಾವಾಗಲೂ ನಿಶ್ಚಿತವಾದ ಎಡೆಗಳಲ್ಲಿ ಮಾತ್ರ ಪ್ರಯುಕ್ತವಾಗುತ್ತದೆ. [ಯಮಕದಲ್ಲಿ ಎಲ್ಲೆಲ್ಲಿ ವ್ಯಂಜನಗಳ ಆವೃತ್ತಿಯಾಗಬೇಕೆಂಬುದಕ್ಕೆ ನಿಶ್ಚಿತ ನಿಯಮಗಳಿವೆ] ಆದರೆ ವರ್ಣವಿನ್ಯಾಸ ವಕ್ರತೆಯಲ್ಲಿ ಆ ರೀತಿಯ ನಿಯಮಗಳಿಲ್ಲ. ಸ್ವರಗಳು ಕಾಲ ವಿಳಂಬವಿಲ್ಲದೆ ಬರುವುದು ನಮ್ಮ ವಿವಕ್ಷೆಯಲ್ಲಿಲ್ಲ.

ಕಾಲವಿಳಂಬವಿಲ್ಲದ ಏಕವ್ಯಂಜನ ವರ್ಣಾವೃತ್ತಿಗೆ
ವಾಮಂ ಕಜ್ಜಲವದ್ವಿಲೋಚನ ಮುರೋರೋಹದ್ವಿಸಾರಿಸ್ತನಮ್ [೯]

[-1/44 ನೋಡುವುದು]

ಇಲ್ಲಿ 'ಕಜ್ಜಲ'ದಲ್ಲಿ 'ಜ'ದ ಹಾಗೂ "ವಿಲೋಚನ ಮುರೋರೋಹದ್"ನಲ್ಲಿ 'ರ' ಕಾಲ ವಿಳಂಬವಿಲ್ಲದೆ ಆವೃತ್ತವಾಗಿವೆ.

ಎರಡು ವ್ಯಂಜನಗಳ ಪುನರಾವೃತ್ತಿಗೆ

ತಾಂಬೂಲೀನದ್ಧ ಮುಗ್ಧ ಕ್ರಮುಕ ತರುತಲ ಪ್ರಸ್ತರೇ ಸಾನುಗಾಭಿಃ
ಪಾಯಂ ಪಾಯಂ ಕಲಾಚೀಕೃತಕ ದಲದಲಂ ನಾರಿಕೇಳೀ ಫಲಾಂಭಃ
ಸೇವ್ಯಂತಾಂ ವ್ಯೋಮಯಾತ್ರಾ ಶ್ರಮಜಲಜಯಿನಃ ಸೈನ್ಯಸೀಮಂತಿನೀಭಿ -
ರ್ದಾತ್ಯೂಹವ್ಯೂಹ ಕೇಲೀಕಲಿತ ಕುಹುಕುಹಾರಾವ ಕಾಂತಾಬನಾಂತಾಃ [10]

ಕುಹು ಕುಹು ಕೋಕಿಲ ಸ್ವರಗಳು
ಮಾರ್ದನಿಗೊಡುತಿರುವ ವನಸ್ಥಳಗಳಲಿ
ವೀಳ್ಯದ ಬಳ್ಳಿಗಳು ತಬ್ಬಿರುವ
ಎಳೆಯ ಅಡಿಕೆ ಮರಗಳೆಡೆಗಳಲಿ
ಶಿಲಾಸ್ತರದ ಮೇಲ್‌ಕುಳಿತು ಸೇನಾಲಲನೆಯರು
ಬಾಳೆಲೆಯ ದೊನ್ನೆಗಳಲಿ ಎಳನೀರ
ಕುಡಿಕುಡಿದು ವ್ಯೋಮಯಾತ್ರೆಯ
ಶ್ರಮದಲುದಿಸಿದ ಬೆವರ ಹನಿಗಳ ನೀಗಿಕೊಳಲಿ [೧೦]

ಹಾಗೂ

ಅಯಿ ಪಿಬಿತ ಚಕೋರಾಃ ಕೃತ್ಸ್ನಮುನ್ನಮ್ಯ ಕಂಠಾನ್
ಕ್ರಮುಕವಲನ ಚಂಚಚ್ಚಂಚವಶ್ಚಂದ್ರಿಕಾಂಭಃ
ವಿರಹವಿಧುರಿತಾನಾಮ್ ಜೀವಿತತ್ರಾಣಹೇತೋ -
ರ್ಭವತಿ ಹರಿಣಲಕ್ಷ್ಮಾಯೇನ ತೇಜೋದರಿದ್ರಃ [೧೧]

ಅಡಕೆಗಳ ಕುಕ್ಕಿ ಹರಿತ ಕೊಕ್ಕನು ಹೊಂದಿಹ
ಚಕೋರಗಳೆ
ವಿರಹದಲಿ ನವೆಯುತಿರುವವರ
ಪ್ರಾಣ ರಕ್ಷಣೆಗಾಗಿ
ನಿಮ್ಮ ಕೊರಳನೆತ್ತರಿಸಿ ಕುಡಿದು ಬಿಡಿ
ಚಂದ್ರಿಕೆಯ ಜಲವನೆಲ್ಲ
ಅದರಿಂದ ಮೃಗಲಾಂಛನನು
ತನ್ನ ತೇಜವನೆಲ್ಲ ನೀಗಿಕೊಂಡು ಬಿಡಲಿ [೧೧]

ಇಲ್ಲಿ ಕೊನೆಯ ಸಾಲಿನಲ್ಲಿ ಮಾತ್ರ ಬರುವ "ದರಿದ್ರ"ದಲ್ಲಿ 'ದ' ಮತ್ತು 'ರ'ಗಳು ಕಾಲವಿಳಂಬವಿಲ್ಲದೆ ಪುನರಾವೃತ್ತಗೊಂಡಿವೆ.

ಅನೇಕ ವ್ಯಂಜನಗಳ ಪುನರಾವೃತ್ತಿಗೆ :

ಸರಲತರಲತಾಲಾಸಿಕಾ - [೧೨]

(ಇಲ್ಲಿ ರ,ಲ,ತ ಎಂಬ ವರ್ಣಗಳು ಕಾಲ ವಿಳಂಬವಿಲ್ಲದೆ ಎರಡು ಸಲ ಆವೃತ್ತಗೊಂಡಿವೆ) ಕಾರಿಕೆಯಲ್ಲಿ ಬಳಕೆಯಾಗಿರುವ 'ಅಪಿ' (ವಿಳಂಬವಿಲ್ಲದಂತೆಯೂ) ಶಬ್ದದಿಂದಾಗಿ ಕೆಲವೊಮ್ಮೆ ಕಾಲವಿಳಂಬವಿರುವಲ್ಲಿಯೂ (ಅಂದರೆ ಮಧ್ಯೆ ಕೆಲವು ವರ್ಣಗಳು ಬಂದೂ ಕೂಡ) ವರ್ಣಾವೃತ್ತಿಯಾಗುವುದುಂಟು.

ಸ್ವಸ್ಥಾಃ ಸಂತು ವಸಂತ ತೇ ರತಿಪತೇರಗ್ರೇಸರಾ ವಾಸರಾಃ [೧೩]

ಹೇ ವಸಂತನೆ! ರತಿಪತಿಯ ಮುನ್ನಡೆಯಲಿ ಸಾಗುವಾ ನಿನ್ನ ದಿನಗಳು ಸುಖಕರವಾಗಲಿ [೧೩]

ಟಿಪ್ಪಣಿ ಇಲ್ಲಿ 'ತ, 'ರಗಳ ಆವೃತ್ತಿ 'ತೇರತಿಪತೇರಗ್ರೇದಲ್ಲಿ, ಹಾಗೂ 'ಸ 'ರಗಳ ಆವೃತ್ತಿ 'ಅಗ್ರೇಸರಾವಾಸರಾ'ದಲ್ಲಿ ಕ್ರಮವಾಗಿ 'ತಿಪ ಹಾಗೂ 'ವಾ' ಎಂಬ ವರ್ಣಗಳು ಬಂದು ಆಗಿದೆ. [ಅಂದರೆ ವ್ಯವಧಾನ ಉಂಟಾಗಿ]

ಅನೇಕ ವರ್ಣಗಳು ಮಧ್ಯೆ ವ್ಯವಧಾನವಿದ್ದೂ, ಪುನರಾವೃತ್ತವಾಗುವುದಕ್ಕೆ

ಚಕಿತ ಚಾತಕಮೇಚಕಿತವಿಯತಿ ವರ್ಷಾತ್ಯಯೇ [೧೪]

ಮಳೆಗಾಲದಂತ್ಯದಲಿ ಚಕಿತಗೊಂಡ ಚಾತಕಗಳಾಗಸದೊಳು [೧೪]

ಸ್ವರಗಳ ವ್ಯತ್ಯಯದಿಂದಾಗಿ [ಸಾ ಸ್ವರಾಣಾಮಸಾರೂಪ್ಯಾತ್] ಎಂದು ಕಾರಿಕೆಯಲ್ಲಿ ಹೇಳಿರುವುದರ ಉದ್ದೇಶ, ಆವೃತ್ತಗೊಳ್ಳುವ ವರ್ಣ, ವ್ಯಂಜನ ಸಮುದಾಯದ ಯಾವುದಾದರೊಂದು ಭಾಗದಲ್ಲಿರುವ ಅಕ್ಕಪಕ್ಕದ ಅಕಾರಾದಿ ಸ್ವರಗಳ ವ್ಯತ್ಯಯದಿಂದ ವರ್ಣಾವೃತ್ತಿಯಲ್ಲೊಂದು ಅಪೂರ್ವ ಸೌಂದರ್ಯವುಂಟಾಗುತ್ತದೆ ಎಂದು ಹೇಳುವುದು.

ಉದಾ :

ರಾಜೀವ ಜೀವಿತೇಶ್ವರೇ [೧೫]

[ಇಲ್ಲಿ 'ಜ' ಮತ್ತು 'ವ' ವರ್ಣ ಸಮುದಾಯದ ಆವೃತ್ತಿ ಉಂಟಾಗಿದೆ. ಆದರೆ 'ವ್' ವ್ಯಂಜನದೊಂದಿಗಿರುವ ಸ್ವರಗಳು ಎರಡರಲ್ಲೂ ಭಿನ್ನವಾಗಿವೆ. ಮೊದಲು 'ಅ' ಇದ್ದರೆ ಅನಂತರದ 'ವ'ದೊಂದಿಗೆ 'ಇ' ಸ್ವರವಿದೆ. ಇದರಿಂದ ಅಪೂರ್ವ ಚಮತ್ಕಾರ ಉಂಟಾಗಿದೆ.

ಅದೇ ರೀತಿ

"ಧೂಸರ ಸರಿತಿ .....[೧೬]

ಅಥವಾ ಸ್ವಸ್ಥಾ ಸಂತು ವಸಂತ ಇತಿ [೧೭]

ಅಥವಾ ತಾಲ ತಾಲೀ ಇತಿ .....[೧೮]

ವರ್ಣ ವಿನ್ಯಾಸ ವಕ್ರತೆಯನ್ನೊಳಗೊಂಡ ವಾಕ್ಯ. ವಿನ್ಯಾಸದ ಈ ಎರಡೂ ಪ್ರಕಾರಗಳು, 'ಯಮಕ' ಅಥವಾ ಪ್ರಾಸವನ್ನು ಕೆಲಮಟ್ಟಿಗೆ ಹೋಲುತ್ತವೆ ಹಾಗೂ ಮುಕ್ತಾಹಾರದ

ಮಧ್ಯಭಾಗದಲ್ಲಿ ವಿನ್ಯಸ್ತಗೊಂಡ ಮಣಿಮಯ ಪದಕದ ಹಾಗೆ ಮನೋಹರವಾಗಿದ್ದು, ಸಹೃದಯರ ಹೃದಯವನ್ನಪಹರಿಸುತ್ತವೆ. ಆ ಕಾರಣದಿಂದಲೇ ವಿಚಿತ್ರ ಮಾರ್ಗವನ್ನು ಈ ಮುಂಚೆ ಹೀಗೆ ವರ್ಣಿಸಲಾಗಿದೆ.

ಅಲಂಕಾರಸ್ಯ ಕವಯೋ ಯತ್ರಾಲಂಕಾರಣಾಂತರಮ್
ಅಸಂತುಷ್ಟಾ ನಿಬಧ್ನಂತಿ ಹಾರಾದೇರ್ಮಣಿ ಬಂಧವತ್ [೧೯]

ಯಾವ ಮಾರ್ಗದಲ್ಲಿ ಕವಿಗಳು ಒಂದು ಅಲಂಕಾರದಿಂದ ತೃಪ್ತರಾಗದೆ, ಹಾರಾದಿಗಳಲ್ಲಿರುವ ಮಣಿಬಂಧದ ಹಾಗೆ ಅಲಂಕಾರದ ಮೇಲೆ ಅಲಂಕಾರಗಳನ್ನು ಪೇರಿಸುತ್ತ ಹೋಗುತ್ತಾರೋ ಅದು ವಿಚಿತ್ರಮಾರ್ಗ. [೧೯]

ಈ ಕೆಳಗಿನ ಕಾರಿಕೆಯಲ್ಲಿ ಹೇಳಿರುವ ರೀತಿಯಲ್ಲಿ ವಿಶೇಷಣ ವಿಶಿಷ್ಟತೆಗಳನ್ನು ಸಮನ್ವಿತ ರೀತಿಯಲ್ಲಿ ಪ್ರತಿಪಾದಿಸುವಂತಿದ್ದರೆ, ವಿವಿಧ ಪ್ರಕಾರಗಳ ಈ ವರ್ಣ ವಿನ್ಯಾಸ ಕೌಶಲವು ಅತ್ಯಧಿಕ ಸೌಂದರ್ಯಪೂರ್ಣವಾಗಿರುತ್ತದೆಂದು ವಿಶೇಷಿಸಲಾಗಿದೆ.

ನಾತಿನಿರ್ಬಂಧವಿಹಿತಾ ನಾಪ್ಯಪೇಶಲಭೂಷಿತಾ
ಪೂರ್ವಾವೃತ್ತ ಪರಿತ್ಯಾಗ ನೂತನಾವರ್ತನೋಜ್ವಲಾ [4]

ಹೆಚ್ಚಿನ ಪ್ರಯಾಸವಿಲ್ಲದೆ, (ಪ್ರಯತ್ನವಿಲ್ಲದೆ) ಕರ್ಕಶವಲ್ಲದ ವರ್ಣಗಳಿಂದ ಕೂಡಿದ್ದು, ಈ ಮುಂಚೆ ಆವೃತ್ತಗೊಂಡ ವರ್ಣಗಳನ್ನು ಬಿಟ್ಟು ನೂತನ ವರ್ಣಗಳ ಆವರ್ತನದಿಂದ ಸುಶೋಭಿತಗೊಂಡ ವರ್ಣವಿನ್ಯಾಸ ವಕ್ರತೆಯಾಗಿರಬೇಕು [4]

ಅತಿಯಾದ ನಿರ್ಬಂಧದಿಂದ ಕೂಡಿರದ - ಇಲ್ಲಿ "ನಿರ್ಬಂಧ" ಶಬ್ದ 'ವ್ಯಸನಿತಾ' ಎಂಬ ಅರ್ಥದಲ್ಲಿ ಬಳಕೆಯಾಗಿದೆ. ಆದ್ದರಿಂದ ಅತ್ಯಧಿಕ ನಿರ್ಬಂಧ ಅರ್ಥಾತ್ -ಪುನಃ ಪುನಃ ಆವೃತ್ತ ಮಾಡಬೇಕೆಂಬ ಗೀಳಿನಿಂದ ರಚಿತವಾಗಿರದ - ಅಂದರೆ ಯಾವುದೇ ಪ್ರಯಾಸವಿಲ್ಲದೆ ರಚಿತವಾದ (ಅಪ್ರಯತ್ನಪೂರ್ವಕವಾಗಿ ರಚಿತವಾದ)ದ್ದಾಗಿರಬೇಕು. ಅಂಥದ್ದೇ ವಿಹಿತವಾದ ವರ್ಣಾವೃತ್ತಿಯೆನಿಸುತ್ತದೆ. ಪ್ರಯಾಸ ಪೂರ್ವಕವಾಗಿ ಮತ್ತು ಗೀಳಿನಿಂದ ಮಾಡಿದರೆ, ಪ್ರಕರಣದ ಔಚಿತ್ಯಕ್ಕೆ ಭಂಗ ಬರುವುದಲ್ಲದೆ, ವಾಚ್ಯ ಮತ್ತು ವಾಚಕಗಳಿಗೆ (ಶಬ್ದ ಮತ್ತು ಅರ್ಥಗಳಿಗೆ) ಪರಸ್ಪರವಾಗಿ ಸ್ಪರ್ಧಾತ್ಮಕ ರೂಪದಲ್ಲಿ ಇರಬೇಕಾದ ಅನ್ಯೋನ್ಯ ಸಾಮರಸ್ಯಕ್ಕೆ ಭಂಗ ಬರುತ್ತದೆ. ಶಬ್ದ ಮತ್ತು ಅರ್ಥಗಳ ಪರಸ್ಪರ ಅನ್ಯೋನ್ಯತೆ ಎಂಬುದು ಎಲ್ಲ ಶ್ರೇಷ್ಠ ಕಾವ್ಯಗಳ ಮೂಲ ಅಗತ್ಯ ಎಂಬುದನ್ನು ಈಗಾಗಲೇ ಸಾಧಿಸಲಾಗಿದೆ.

ಪ್ರಯಾಸ ಪೂರ್ವಕವಾಗಿ ಸಾಧಿಸಲಾದ ವರ್ಣಾವೃತ್ತಿಗೆ

ಭಣ ತರುಣಿ........ ಇತಿ [೨೦] - [1-10]

[ಟಿಪ್ಪಣಿ : ಇಲ್ಲಿ ಕವಿ ಕೇವಲ ಅನುಪ್ರಾಸ ಅಥವಾ ವರ್ಣಗಳ ಪುನರಾವೃತ್ತಿಯ ಗೀಳಿಗೆ ಬಿದ್ದು ವರ್ಣಗಳು ಸವರ್ಣವಾಗಿರುವುದರ ಸೌಂದರ್ಯವನ್ನಷ್ಟೇ ಪ್ರಸ್ತುತಪಡಿಸಿದ್ದಾನೆ. ಆದರೆ

ಅರ್ಥ ವೈಚಿತ್ರ್ಯ ಸ್ವಲ್ಪವೂ ಇಲ್ಲ] ಹಾಗೂ ವರ್ಣವಿನ್ಯಾಸ ವಕ್ರತೆಯು ಕರ್ಕಶ ವರ್ಣಗಳಿಂದ ಅಲಂಕೃತಗೊಂಡಿರಬಾರದು.

ಉದಾ :

ಶೀರ್ಣಘ್ರಾಣಾಂಘ್ರಿಪಾಣಿನ್ [೨೧]*

ಸರಿಯಾದ ವರ್ಣವಿನ್ಯಾಸ ವಕ್ರತೆ ಹೇಗಿರುತ್ತದೆ.

ಹಾಗಾದರೆ ಯಾವ ರೀತಿಯಲ್ಲಿ ವರ್ಣವಿನ್ಯಾಸ ವಕ್ರತೆಯನ್ನು ಯೋಜಿಸಬೇಕು ಇದನ್ನು ಹೇಳುತ್ತೇನೆ :

ಈ ಮುಂಚೆ ಪುನರಾವೃತ್ತಗೊಳಿಸಲಾಗಿದ್ದ ವರ್ಣಗಳ ಬಳಕೆಯನ್ನು ತಪ್ಪಿಸಿ, ಹೊಸ ಹೊಸ ವರ್ಣಗಳನ್ನು ಆವೃತ್ತಗೊಳಿಸುವ ಮೂಲಕ - ಈ ಎರಡೂ ವಿಧಾನಗಳಿಂದ ಕಾವ್ಯವನ್ನು ಸುಶೋಭಿತಗೊಳಿಸಬೇಕು. (ಉಜ್ವಲಗೊಳಿಸಬೇಕು)

ಉದಾ :

ಏತಾಮ್ ಪಶ್ಯ ಪುರಸ್ತಟೀಮಿಹ ಕಿಲ ಕ್ರೀಡಾಕಿರಾತೋ ಹರಃ
ಕೋದಂಡೇನ ಕಿರೀಟಿನಾ ಸರಭಸಂ ಚೂಡಾಂತರೇ ತಾಡಿತಃ
ಇತ್ಯಾಕರ್ಣ್ಯ ಕಥಾದ್ಭುತಂ ಹಿಮ ನಿಧಾವದ್ರೌ ಸುಭದ್ರಾಪತೇ -
ರ್ಮಂದಂ ಮಂದಮಕಾರಿ ಯೇನ ನಿಜಯೋರ್ದೋರ್ದಂಡಯೋರ್ಮಂಡನಂ [೨೨]

ಮುಂದಿರುವೀ ನದೀತಟವ ನೋಡಿದೊ
ಇಲ್ಲೆ ಅರ್ಜುನನು ಧನುವಿಂದ
ಕಿರಾತವೇಷದ ಶಿವನ ಶಿರವ ರಭಸದಿಂದಲಿ
ಘಟ್ಟಿಸಿದನು. ಹಿಮಗಿರಿಯ ಮೇಲೆ
ಸುಭದ್ರಾಪತಿ ಅರ್ಜುನನು ಮೆರೆದ

*** ಟಿಪ್ಪಣಿ :**

ಶೀರ್ಣಘ್ರಾಣಾಂಗ್ರಿ ಪಾಣೀನ್ ಬ್ರಣಿಭಿರಪಘನೈರ್ಘರ್ಘರಾ-
ವ್ಯಕ್ತಘೋಷಾನ್
ದೀರ್ಘಾಘ್ರಾತಾನಘೌಘೈಃ ಪುನರಪಿ ಘಟಯತ್ಯೇಕ-
ಉಲ್ಲಾಂಘಯನ್ ಯಃ
ಘರ್ಮೋಶೋಸ್ತಸ್ಯವ್ಯೋತರ್ದ್ವಿಗುಣ ಘನಘೃಣಾ ನಿಘ್ನ ನಿರ್ವಿಘ್ನ ವೃತ್ತೇ-
ರ್ದತ್ತಾರ್ಥಾಃ ಸಿದ್ಧ ಸಂಘೈರ್ವಿದಧತು ಘೃಣಯಃ
ಶೀಘ್ರಮಂಹೋವಿಘಾತಂ [೩೦]

ಇಲ್ಲಿ ಕವಿ ಸೂರ್ಯ ಕಿರಣಗಳಿಂದ ಪಾಪವನ್ನು ನೀಗಿಸಿಕೊಳ್ಳುವುದನ್ನು ಹೇಳುತ್ತಿದ್ದಾನೆ. ಆದರೆ ಇಲ್ಲಿ ಣ,ಣ,ಘ್ರ,ಘ್ರ,ಘ,ಘ್ನ ಇವೇ ಮೊದಲಾದ ಶ್ರುತಿ ಕಷ್ಟವರ್ಣಗಳನ್ನು ಪುನರಾವೃತ್ತಿ ಮಾಡಲಾಗಿದೆ. ಇದರಿಂದ ಕೇಳುಗರ ಕಿವಿಗಳು ತೂತು ಬೀಳುತ್ತವೆ. ಯಾವುದೇ ಪ್ರಕಾರದ ಆನಂದ ಉಂಟಾಗುವುದಿಲ್ಲ. ಹಾಗಾಗಿ ಇಂಥ ವರ್ಣ ವಿನ್ಯಾಸ ವಕ್ರತೆ ನಿಷ್ಫಲವಾಗುತ್ತದೆ.

ಅದೇ, ಪುಟ. 177

ಸಾಹಸದ ಈ ಅದ್ಭುತ ಕಥೆ ಕೇಳಿ
ತನ್ನದೋರ್ದಂಡಗಳನಲಂಕರಿಸುವುದ ನಿಧಾನಿಸಿದನು [೨೨]

ಟಿಪ್ಪಣಿ: ಈ ಶ್ಲೋಕವಲ್ಲಿ ಕವಿ ಮೊದಲಿಗೆ 'ಪ ನಂತರ 'ಕ ಮತ್ತು ಡಗಳನ್ನು ಆವೃತ್ತಗೊಳಿಸಿ, ಆಮೇಲೆ ಅವುಗಳನ್ನು ಬಿಟ್ಟು ಮೂರನೇ ಚರಣದಲ್ಲಿ ದ,ರ,ಮ ಮತ್ತು 'ಣ್ಡ'-ಗಳನ್ನು ಹೊಸರೀತಿಯಲ್ಲಿ ಆವೃತ್ತಗೊಳಿಸಿದ್ದಾನೆ. ಹಾಗಾಗಿ ಇಲ್ಲಿ ಯಾವುದೇ ವರ್ಣವನ್ನು ಮತ್ತೆ ಮತ್ತೆ ಪುನರಾವೃತ್ತಗೊಳಿಸುವ ಗೀಳಿಗೆ ಬಿದ್ದಿದ್ದಾನೆಂದನಿಸುವುದಿಲ್ಲ. ಹಾಗೂ ಹೊಸ ಹೊಸ ವರ್ಣಗಳು ಪುನರಾವೃತ್ತಗೊಂಡಿರುವುದರಿಂದ ಒಂದು ಅಪೂರ್ವ ಚಮತ್ಕಾರ ಉಂಟಾಗಿದೆ

ಅಥವಾ

ಹಂಸಾನಾಂ ನಿನದೇಷು ಇತಿ [೨೩] [1-73]

ಅಥವಾ

ಏತನ್ಮಂದ ವಿಪಕ್ವ ....[೨೪]

ಣಮಹ ದಸಾಣಣ ಸರಹಸಕರ ತುಲಿಅವಲಂತ ಸೇಲಭ ಅವಿಹಲಂ
ವೇವತಥೋರಥಣ ಹರಹರಕ ಅಕಂ ರಗ್ಗಹಂ ಗೋರಿ [ಪ್ರಾಕೃತ] [೨೫]

ನಮತ ದಶಾನನ ಸರಭಸಕರ ತುಲಿತ ವಲಚ್ಛೈಲ ಭಯವಿಹ್ವಲಾಮ್
ವೇಪಮಾನಸ್ಥೂಲಸ್ತನಭರಹರ ಕೃತಕಂಠ ಗ್ರಹಾಮ್ ಗೌರೀಮ್ [೨೫]

(ಸಂಸ್ಕೃತ ಛಾಯೆ)

ರಭಸದಲಿ ರಾವಣನು ಕೈಲಾಸಗಿರಿಯನೆತ್ತಿದಂದು
ಪರ್ವತವು ಕಂಪಿಸಲು
ಇದ್ದಕಿದ್ದೊಲೆ ಭಯವಿಹ್ವಲಳಾಗಿ
ಶಿವನ ಕೊರಳನು ತಬ್ಬಿದಾ
ಏರಿಳಿವ ತೋರ ಮೊಲೆಗಳ ಗೌರಿಗೆ ನಮಿಸಿರೆಲ್ಲ [೨೫]

ಇಲ್ಲಿಯೂ ಣ, ಸ ಮತ್ತು ಲ ಗಳ ಪುನರಾವರ್ತನೆಯ ನಂತರ ವ,ಹ,ರ ಮತ್ತು ಗ ಗಳ ಪುನರಾವರ್ತನೆ ಆಗಿದೆ.

ವರ್ಣವಿನ್ಯಾಸ ವಕ್ರತೆಯನ್ನು ಇದುವರೆಗೆ ವ್ಯಾಖ್ಯಾನಿಸಿದ ನಂತರ, ಅದರ ಉಪಸಂಹಾರವನ್ನು ಹೀಗೆ ಮಾಡುತ್ತಿದ್ದಾನೆ.

ವರ್ಣಚ್ಛಾಯಾನುಸಾರೇಣ ಗುಣಮಾರ್ಗಾನುವರ್ತಿನೀ
ವೃತ್ತಿವೈಚಿತ್ರ್ಯಯುಕ್ತೇತಿ ಸೈವ ಪ್ರೋಕ್ತಾ ಚಿರಂತನೈಃ[5]

ವರ್ಣಗಳ ಸೌಂದರ್ಯವನ್ನು ದುಡಿಸಿಕೊಳ್ಳುವ ವರ್ಣವಿನ್ಯಾಸ ವಕ್ರತೆಯು ಗುಣ ಮತ್ತು 'ಮಾರ್ಗ'ಗಳನ್ನು ಅನುಸರಿಸುವಂಥದು, ವೃತ್ತಿ ವೈಚಿತ್ರ್ಯದಿಂದ ಕೂಡಿರುವಂಥದು ಎಂದು ಚಿರಂತನಾಚಾರ್ಯರು ಹೇಳಿದ್ದು ಇದನ್ನೇ [5]

ವರ್ಣಗಳ ಸೌಂದರ್ಯ ಅಥವಾ ಕಾಂತಿ ಎಂದು ಇಲ್ಲಿ ಹೇಳಿರುವುದು ಶ್ರವ್ಯತ್ವವೇ ಮೊದಲಾದ ಗುಣಸಂಪತ್ತಿಯನ್ನು ಕುರಿತಾಗಿ. ಅದನ್ನು ಸಾಧಿಸುವುದೆಂದರೆ, ಮಾಧುರ್ಯವೇ ಮೊದಲಾದ ಗುಣಗಳನ್ನು ಹಾಗೂ ಸುಕುಮಾರವೇ ಮೊದಲಾದ ಮಾರ್ಗಗಳನ್ನು ಅನುಸರಿಸುವುದೆಂದು. ವರ್ಣವಿನ್ಯಾಸ ವಕ್ರತೆಗೆ ಲಗತ್ತಿಸಿರುವ ವಿಶೇಷಣ (ವೃತ್ತಿವೈಚಿತ್ರ್ಯ)ದಿಂದ ಇದು ಸ್ಪಷ್ಟ. ಕಾರಿಕೆಯಲ್ಲಿ 'ಗುಣ'ದ ಉಲ್ಲೇಖವನ್ನು ಮಾರ್ಗಕ್ಕಿಂತ ಮೊದಲಿಗೆ ಮಾಡಿರುವುದಕ್ಕೆ ಕಾರಣ ಅವು ಹೆಚ್ಚು ನೈಜವಾದವು ಮತ್ತು ಗುಣಗಳ ಮೂಲಕವಾಗಿಯೇ ಮಾರ್ಗವನ್ನು ತಲುಪಬೇಕಾಗಿರುವ ಕಾರಣದಿಂದಾಗಿ.

ಇದರ ಮಥಿತಾರ್ಥವೆಂದರೆ, ವರ್ಣ ವಿನ್ಯಾಸ ವಕ್ರತೆಯು ಮೂಲತಃ ವ್ಯಂಜನಗಳ ಆವೃತ್ತಿಯ ಪರಿಣಾಮವಾಗಿ ಮೂಡಿ ಬರುವ ಸೌಂದರ್ಯಾನುಸರಣೆಯಲ್ಲಿದೆಯಾದರೂ, ನಿಶ್ಚಿತ ಗುಣವಿಶೇಷದಿಂದ ಕೂಡಿರುವ ವಿಶಿಷ್ಟ ಮಾರ್ಗಗಳಿಗೆ ಹೊಂದಿಕೆಯಾಗುವ ರೀತಿಯಲ್ಲಿ ಆ ಅನುಸರಣೆ ಇರಬೇಕು. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಮಾರ್ಗಗಳ ಸ್ವಭಾವದಿಂದಾಗಿಯೇ ವರ್ಣವಿನ್ಯಾಸ ವಕ್ರತೆಯ ವಿವಿಧ ಪ್ರಕಾರಗಳು ಉಂಟಾಗುತ್ತವೆ. ಪೂರ್ವಾಚಾರ್ಯರು ತಮ್ಮದೇ ಆದ ಸ್ವೋಪಜ್ಞ ರೀತಿಯಲ್ಲಿ ಅದನ್ನು ವೃತ್ತಿವೈಚಿತ್ರ್ಯದಿಂದ ಕೂಡಿರುವಂಥದೆಂದು ಹೇಳಿದರು. ಪೂರ್ವಾಚಾರ್ಯರು ಹೇಳಿದ್ದೆಂದರೆ ವರ್ಣಾವೃತ್ತಿವಕ್ರತೆಯು ವಿವಿಧ ಬಗೆಯ ವೃತ್ತಿಗಳಾದ ಉಪನಾಗರಿಕಾವೃತ್ತಿಯೇ ಮೊದಲಾದವುಗಳಿಂದ ಕೂಡಿರುವಂಥದು. ಒಟ್ಟಾರೆ ಇದರ ತಾತ್ಪರ್ಯ ವರ್ಣವೃತ್ತಿ ವಕ್ರತೆಯು ವಿವಿಧ ಪ್ರಕಾರದ ಗುಣಗಳ ಅಗತ್ಯಗಳನ್ನು ಪೂರೈಸುತ್ತ ಸುಕುಮಾರವೇ ಮೊದಲಾದ ಮಾರ್ಗಗಳನ್ನು ಪ್ರಜ್ಞಾಪೂರ್ವಕವಾಗಿ ಅನುಸರಿಸುವುದನ್ನು ಅವಲಂಬಿಸಿದೆ. ಈಗಿರುವಂತೆ ವರ್ಣವಿನ್ಯಾಸ ವಕ್ರತೆಯ ಈ ರೀತಿಯ ಅವಲಂಬನೆ, ಮತ್ತು ಅದರ ಅಸಂಖ್ಯಾತ ಪ್ರಕಾರಗಳಂತೂ ಅತ್ಯಂತ ಅನಿವಾರ್ಯ ಅಂಶಗಳು. ಆದ್ದರಿಂದ ಅದಕ್ಕೆ ಇನ್ನೊಂದರ ಅವಲಂಬನೆಯಿಲ್ಲದೆ, ಅದು ಸ್ವತಂತ್ರವೆಂದಾಗಲಿ, ಅಥವಾ ಅದರ ಪ್ರಕಾರಗಳು ಸೀಮಿತವೆಂದಾಗಲಿ ಹೇಳುವುದು ಹೆಚ್ಚು ತರ್ಕಸಮ್ಮತವೆನಿಸುವುದಿಲ್ಲ.

ಈ ಹಂತದಲ್ಲಿ - ಈ ಅಧ್ಯಾಯದ ಮೊದಲ ಕಾರಿಕೆಯಲ್ಲಿ ಒಂದು, ಎರಡು ಅಥವಾ ಹಲವು ವರ್ಣಗಳು ಎಂದು ಪರಿಮಿತ ಪ್ರಕಾರಗಳನ್ನು ಪ್ರಸ್ತಾಪಿಸಿ, ಹಾಗೂ ಅದರ ಸ್ವಾತಂತ್ರ್ಯವನ್ನು ನೀವೇ ಪ್ರಸ್ತಾಪಿಸಿ, ಇದೀಗ ಅದಕ್ಕೆ ತದ್ವಿರುದ್ಧವಾದದ್ದನ್ನು ಹೇಳುತ್ತಿದ್ದೀರಲ್ಲ ಎಂದು ಯಾರಾದರೂ ಆಕ್ಷೇಪವೆತ್ತಬಹುದು. ನನ್ನ ಉತ್ತರವೆಂದರೆ ವಸ್ತುತಃ ಇದರಲ್ಲಿ ಯಾವ ದೋಷವೂ ಇಲ್ಲ; ಸ್ವಯಂ ವಿರೋಧವೇನೂ ಇಲ್ಲ. ತಾನು ಯಾವ ಸಮುದಾಯದ ಭಾಗವಾಗಿದೆಯೋ, ಆ ಸಮುದಾಯವನ್ನವಲಂಬಿಸಿರುವಂಥ ವಿಷಯ (ವಸ್ತು) ವೊಂದರ ಬಗ್ಗೆ ಲಕ್ಷಣಕಾರರು ವ್ಯವಹರಿಸುವಾಗ, ಅನುಸರಿಸುವ ಒಂದು ಸಾಮಾನ್ಯ ಕ್ರಮವೆಂದರೆ, ಅದನ್ನು ಸುಲಭವಾಗಿ ಗ್ರಹಿಸಲು, ಮೊದಲಿಗೆ ಅದೇ ಒಂದು ಸ್ವತಂತ್ರ ಘಟಕವೋ ಎಂಬಂತೆ ಪರಿಗಣಿಸಿ, ವಿಶ್ಲೇಷಣಾತ್ಮಕ ದೃಷ್ಟಿಯನ್ನು ತಾಳುವುದು, ಅನಂತರ ಒಟ್ಟಾರೆ ದೃಷ್ಟಿಕೋನದಿಂದ, ಸಮುದಾಯದ ಒಂದು ಭಾಗವಾಗಿ ಅದನ್ನು ವಿವರಿಸುವುದು. ಇದನ್ನು ಇನ್ನು ಹೆಚ್ಚು ಲಂಬಿಸುವುದು ಬೇಡ.

ವರ್ಣವಿನ್ಯಾಸ ವಕ್ರತೆ ಎಂದು ಕರೆಯಲ್ಪಡುವ ಈ ಶಬ್ದಾಲಂಕೃತಿಯು, ಎಲ್ಲೆಲ್ಲಿ ವರ್ಣಾವೃತ್ತಿ ಬರಬೇಕೆಂಬುದು ಅನಿಶ್ಚಯವಾಗಿರುವುದರಿಂದ, ಇಡೀ ವಾಕ್ಯಕ್ಕೇ ಅನ್ವಯಿಸು ವಂಥದೆಂದು ಹೇಳಲಾಗಿದೆ. ಒಂದು ವೇಳೆ ವರ್ಣವಿನ್ಯಾಸ ವಕ್ರತೆಯು ನಿರ್ದಿಷ್ಟ ಸ್ಥಾನದಲ್ಲಿ ಹಾಗೂ ನಿರ್ದಿಷ್ಟ ರೂಪದಲ್ಲಿ ನಿಯೋಜಿತಗೊಳ್ಳಬೇಕೆಂಬ ಷರತ್ತಿಗೊಳಪಟ್ಟರೆ ಅದು ಒಂದು ಬೇರೆ ಪ್ರಕಾರವೆನಿಸಿ ಅಪೂರ್ವವಾದೊಂದು ವೈಚಿತ್ರ್ಯವನ್ನುಂಟುಮಾಡುತ್ತದೆ.

ಸಮಾನ ವರ್ಣಮನ್ಯಾರ್ಥಂ ಪ್ರಸಾದಿ ಶ್ರುತಿಪೇಶಲಮ್
ಔಚಿತ್ಯಯುಕ್ತಮಾದ್ಯಾದಿ ನಿಯತಸ್ಥಾನ ಶೋಭಿ ಯತ್ [6]

ಯಮಕಂ ನಾಮ ಕೋಽಪ್ಯಸ್ಯಾಃ ಪ್ರಕಾರಃ ಪರಿದೃಶ್ಯತೇ।
ಸ ತು ಶೋಭಾಂತರಾಭಾವಾದಿಹ ನಾತಿಪ್ರತಯಂತೇ[7]

ಭಿನ್ನ ಅರ್ಥವನ್ನು ಹೊಂದಿದ್ದು, ಸಮಾನ ವರ್ಣಗಳಿಂದ ಕೂಡಿದ, ಪ್ರಸಾದ ಗುಣದಿಂದ ಕೂಡಿದ್ದು, ಕೇಳಲು ಮಧುರವಾದ, ಔಚಿತ್ಯಪೂರ್ಣವಾಗಿದ್ದು, ಪದ್ಯದ ನಿಯತ ಸ್ಥಾನಗಳಲ್ಲಿ ಸುಶೋಭಿತವಾಗುವ ಈ ವರ್ಣವಿನ್ಯಾಸ ವಕ್ರತೆಯು "ಯಮಕ"ವೆಂದು ಹೆಸರಾಗಿದೆ.

ವರ್ಣವಿನ್ಯಾಸ ವಕ್ರತೆಗಿಂತ ಭಿನ್ನವಾದ (ನಿಯತ ಸ್ಥಾನ ನಿಯಮ ಬಿಟ್ಟು)ದ್ದಲ್ಲವಾದ್ದರಿಂದ, ಅದನ್ನು ಇಲ್ಲಿ ಅಧಿಕವಾಗಿ ವಿಸ್ತರಿಸಿಲ್ಲ. [7]

ಇದರ ಇನ್ನೊಂದು ಪ್ರಭೇದ- ಅಂದರೆ ವರ್ಣವಿನ್ಯಾಸ ವಕ್ರತೆಯ ಇನ್ನೊಂದು ಅಪೂರ್ವ ಪ್ರಭೇದ ಕಂಡುಬರುತ್ತದೆ. ಯಾವುದದು? 'ಯಮಕ'ವೆಂದು ಅದು ಹೆಸರಾಗಿದೆ. ಅದರ ರೀತಿ ಯಾವುದು? ಸಮಾನ ಸ್ವರೂಪದ, ಕೇಳಲು ಒಂದೇ ರೀತಿ ಇರುವ ವರ್ಣಗಳಿಂದ ಕೂಡಿರುವಂಥದು. ಹೀಗೆ ಕೇಳಲು ಒಂದೇ ರೀತಿ ಇರುವ ವರ್ಣಗಳು ನಿಯತವಾದ ಕಾಲದ ಅಂತರದಲ್ಲಿ ಅಥವಾ ಕಾಲದ ಅಂತರವಿಲ್ಲದೆ ಪುನರಾವರ್ತನೆಯಾಗುವುದು 'ಯಮಕ'ವೆನಿಸುತ್ತದೆ. ಸಮಾನ ರೀತಿಯ ವರ್ಣಗಳ (ಎರಡು ಬೇರೆ ಬೇರೆ ಗುಂಪು) ಪುನರಾವರ್ತನೆ ಇದ್ದರೂ, ಎರಡರ ಅರ್ಥವೂ ಒಂದೇ ಆಗಿರುವುದಿಲ್ಲ; ಬದಲಿಗೆ ಬೇರೆ ಬೇರೆಯಾಗಿರುತ್ತದೆ. ಮತ್ತೆ ಯಾವ ರೀತಿ ಇರುತ್ತದೆ? ಪ್ರಸಾದ ಗುಣದಿಂದ ಕೂಡಿರುತ್ತದೆ. ಅಂದರೆ ವಾಕ್ಯದ ಅರ್ಥ ಯಾವುದೇ ಕ್ಲೇಶವಿಲ್ಲದೆ ಕೂಡಲೇ ಸಮರ್ಪಕವಾಗಿ ಆಗುವಂತಿರುತ್ತದೆ. ಕವಿಯ ಉದ್ದೇಶಿತ ಅರ್ಥವನ್ನು ಅರಿಯಲು ಓದುಗನ ಯಾವುದೇ ರೀತಿಯ ವಿಶೇಷ ಪ್ರಯತ್ನಬೇಕಿಲ್ಲ. ಇಲ್ಲಿ ಬಳಸಲಾಗಿರುವ ಇನ್ನೊಂದು ವಿಶೇಷಣವೆಂದರೆ 'ಶ್ರುತಿಪೇಶಲಮ್' - ಅರ್ಥಾತ್ ಕೇಳಲು ಮಧುರವಾದ, ಸುಕುಮಾರವಾದ, ಕಠೋರವಲ್ಲದ ಪದಗಳಿಂದ ಕೂಡಿರುವಂಥದಾಗಿರುತ್ತದೆ. ಮತ್ತಿನ್ನಾವ ರೀತಿ ಇರುತ್ತದೆ? ಔಚಿತ್ಯದಿಂದ ಕೂಡಿರುವಂಥದು. ವಸ್ತುವಿನ ಸ್ವಭಾವದ ಉತ್ಕರ್ಷಕ್ಕೆ ಅತ್ಯಂತ ಸಂಗತವಾದ ಶೈಲಿಯಿಂದ ಕೂಡಿರುವುದೇ ಔಚಿತ್ಯ. ಅರ್ಥಾತ್ 'ಯಮಕ'ದ ಪ್ರಯೋಗವಿದ್ದಾಗ್ಯೂ ಔಚಿತ್ಯಕ್ಕೆ ಯಾವುದೇ ಭಂಗ ಬರಕೂಡದು. ಅದನ್ನು ಮುಂದಿನ ವಿಶೇಷಣದಿಂದ ಅಲಂಕರಿಸಲಾಗುವುದು. ಪದ್ಯದ 'ಆದಿ' ಇತ್ಯಾದಿ ನಿಯತ ಸ್ಥಾನಗಳಲ್ಲಿ ಶೋಭಿಸುವಂಥದು.

ಪದ್ಯದ ಛಂದೋಬದ್ಧವಾದ ಸಾಲಿನಲ್ಲಿ ಆದಿ, ಮಧ್ಯ ಮತ್ತು ಅಂತ್ಯ ಎಂಬಿವು ಮೂರೇ ಆ ನಿಯತವಾದ ಸ್ಥಾನಗಳು. ಈ ನಿಯತವಾದ ಸ್ಥಾನಗಳಲ್ಲಿ ಕ್ರಮವಾಗಿ ಪುನರಾವರ್ತನೆಯಾದಾಗ, ಲಯದಲ್ಲಿ ಹೊಸತೊಂದು ಸೌಂದರ್ಯ ಗೋಚರವಾಗುತ್ತದೆ. ಇಲ್ಲಿ 'ಆದಿ' ಇತ್ಯಾದಿ ಶಬ್ದಗಳು ಸಂಬಂಧ ವಾಚಕಗಳು. ಅವು 'ಪದಾದಿ' ಶಬ್ದಕ್ಕೆ ವಿಶೇಷಣವಾಗಿ ಬಂದಿದೆ. ಆದರೆ ವರ್ಣ ವಿನ್ಯಾಸ ವಕ್ರತೆಯ ಪ್ರಭೇದವಾದ ಯಮಕವು ಮೇಲೆ ಹೇಳಿದ ಲಕ್ಷಣಗಳನ್ನು ಹೊಂದಿದ್ದಾಗ್ಯೂ (ಕೇಳಲು ಮನೋಹರ, ಪ್ರಸಾದ ಗುಣಯುಕ್ತ, ಔಚಿತ್ಯಪೂರ್ಣ ಇತ್ಯಾದಿ) ಈ ಗ್ರಂಥದಲ್ಲಿ ಹೆಚ್ಚು ವಿಸ್ತಾರವಾಗಿ ಅದನ್ನು ಚರ್ಚಿಸುವುದಿಲ್ಲ. ಕಾರಣ ಅದರ ಸೌಂದರ್ಯವು ವರ್ಣವಿನ್ಯಾಸ ವಕ್ರತೆಗಿಂತ ಭಿನ್ನ ರೀತಿಯದ್ದಲ್ಲ. ಇಂಥದೇ ನಿಯತ ಸ್ಥಾನದಲ್ಲಿ ವರ್ಣಗಳು ಪುನರಾವರ್ತನೆಯಾಗಬೇಕೆಂಬ ನಿರ್ಬಂಧವನ್ನು ಹೊರತುಪಡಿಸಿದರೆ ಯಮಕದಲ್ಲಿ ವಿನೂತನವಾದ ಸೌಂದರ್ಯವೇನೂ ಇಲ್ಲ. ಅದರ ಅಂತಃಪ್ರಾಣವಾದ ವರ್ಣವಿನ್ಯಾಸ ವೈಚಿತ್ರವೊಂದನ್ನು ಬಿಟ್ಟರೆ, ಯಮಕದಲ್ಲಿ ಬೇರಿನ್ನೇನೂ ಇಲ್ಲ. ಹಾಗಾಗಿ ಇದನ್ನು ಈಗತಾನೆ ಹೇಳಲಾದ ವರ್ಣವಿನ್ಯಾಸ ವಕ್ರತೆ ಎಂಬ ಅಲಂಕಾರದ ಒಂದು ಪ್ರಕಾರವೆಂದೇ ಪರಿಗಣಿಸಲಾಗಿದೆ. ಮಾಘ ಕವಿಯ 'ಶಿಶುಪಾಲವಧ' ಕಾವ್ಯದ 4ನೇ ಸರ್ಗದಲ್ಲಿ ಇದಕ್ಕೆ ಉದಾಹರಣೆಗಳು ದೊರೆಯುತ್ತವೆ; ವಾಕ್ಯಾರ್ಥವನ್ನು ಸ್ಫುಟವಾಗಿ ಗ್ರಹಿಸಲಾಗುವುವು ಕೆಲವೇ ಆದರೂ ರಘುವಂಶ ಕಾವ್ಯದ ವಸಂತ ವರ್ಣನೆಯಲ್ಲಿ 'ಯಮಕ'ದ ಪ್ರಯೋಗಗಳನ್ನು ಕಾಣಬಹುದು.*

ಹೀಗೆ ಪದಗಳ ಅಂಗಗಳಾದ ವರ್ಣಗಳ ವಿನ್ಯಾಸದಲ್ಲಿರುವ ವಕ್ರತೆಯನ್ನು ಗಣನೆಗೆ ತೆಗೆದು ಕೊಂಡಮೇಲೆ, ವರ್ಣ ಸಮುದಾಯಾತ್ಮಕಗಳಾದ ಪದಗಳ ವಕ್ರತೆಯನ್ನು ಪರಿಗಣಿಸುವುದು ಸಹಜ ಕ್ರಮವೆನಿಸುತ್ತದೆ (ಕಾರಣ ಪದಗಳು ಅಕ್ಷರ ಘಟಕಗಳು). ಅದರಲ್ಲಿ ಮೊದಲಿಗೆ ಪದ ಪೂರ್ವಾರ್ಧ ವಕ್ರತೆಯಲ್ಲಿರಬಹುದಾದ ಪ್ರಕಾರಗಳನ್ನು ಗ್ರಂಥಕರ್ತೃ ಪರಿಗಣನೆಗೆ ತೆಗೆದುಕೊಳ್ಳುತ್ತಿದ್ದಾನೆ.

ಯತ್ರ ರೂಢೇರಸಂಭಾವ್ಯ ಧರ್ಮಾಧ್ಯಾರೋಪಗರ್ಭತಾ
ಸದ್ಧರ್ಮಾತಿಶಯಾರೋಪಗರ್ಭತ್ವಂ ವಾ ಪ್ರತೀಯತೇ[8]

ಲೋಕೋತ್ತರ ತಿರಸ್ಕಾರ ಶ್ಲಾಘ್ಯೋತ್ಕರ್ಷಾಭಿಧಿತ್ಸಯಾ
ವಾಚ್ಯಸ್ಯ ಸೋಚ್ಯತೇ ಕಾಪಿ ರೂಢಿ ವೈಚಿತ್ರ್ಯ ವಕ್ರತಾ[9]

ವಸ್ತುವಿನ ಬಗೆಗಿನ ಕವಿಯ ಪ್ರಶಂಸನೀಯ ಉತ್ಕರ್ಷ, ಅಥವಾ ಅತ್ಯಂತ ತಿರಸ್ಕಾರವನ್ನು ಅಭಿವ್ಯಕ್ತಪಡಿಸಬೇಕೆಂಬ ಉದ್ದೇಶದ ಪರಿಣಾಮವಾಗಿ ಎಲ್ಲಿ ವಾಚ್ಯಾರ್ಥವು ಕವಿಯು ಕಲ್ಪಿಸಿದ -

---

* **ರಘುವಂಶದಿಂದ :** 9ನೇ ಸರ್ಗದಲ್ಲಿ ಪ್ರಾರಂಭದಿಂದ 54 ಪದ್ಯಗಳವರೆಗೆ ನಿರಂತರ ಯಮಕಗಳ ಪ್ರಯೋಗವಿದೆ. ಉದಾ: ಅಜಯದೇಕ ರಥೇನ ಸಮೇದಿನೀಂ ಉದಧಿ ನೇಮಿಮಧಿಜ್ಯಶರಾಸನಃ| ಜಯಘೋಷಯದಸ್ಯ ತು ಕೇವಲಂ| ಗಜವತೀ ಜವತೀವ್ರ ಹಯಾಚಮೂಃ| ಕನ್ನಡದಲ್ಲಿ ಜೈಮಿನೀಭಾರತದಲ್ಲಿ ಯಮಕದ ವಿಪುಲ ಪ್ರಯೋಗಗಳು ಕಂಡುಬರುತ್ತವೆ. ಕುಮಾರವ್ಯಾಸ ಭಾರತದಿಂದ ಒಂದು ಉದಾಹರಣೆ

ನೀಲಕಂಠನ ಬಲದ ಬಯಕೆಗೆ
ನೀಲಕಂಠನೆ ಬಲಕಗೆ ಬಂದುದು [ಅರಣ್ಯಪರ್ವ]

ರೂಢಿಯ ಮೂಲಕ ಸಂಭವವಾಗಲು ಸಾಧ್ಯವಿಲ್ಲದ ಧರ್ಮದ ಅಧ್ಯಾರೋಪದ ಅಭಿಪ್ರಾಯವನ್ನು, ಅಥವಾ ಯಾವುದಾದರೂ ವಿದ್ಯಮಾನ ಧರ್ಮದ ಅತಿಶಯವನ್ನು ಪ್ರತಿಪಾದಿಸುವ ಭಾವವನ್ನು ಒಳಗೊಳ್ಳುತ್ತದೋ ಆಗ ರೂಢಿವೈಚಿತ್ರ್ಯವಕ್ರತೆ ಉಂಟಾಗುತ್ತದೆ [8-9]

ಎಲ್ಲಿ ರೂಢಿಯ ಮೂಲಕ ಸಂಭವವಾಗಲು ಸಾಧ್ಯವಿಲ್ಲದ ಧರ್ಮದ ಅಧ್ಯಾರೋಪದ ಅಭಿಪ್ರಾಯ ಪ್ರತೀತವಾಗುತ್ತದೆಯೋ, ಅದನ್ನು ರೂಢಿ ವೈಚಿತ್ರ್ಯ ವಕ್ರತೆ ಎಂದು ಕರೆಯಲಾಗುತ್ತದೆ. 'ರುಹ್' ಎಂಬ ಧಾತುವಿನಿಂದ 'ರೂಢಿ' ಶಬ್ದ ಬಂದಿದೆ. 'ರುಹ್' ಎಂದರೆ ಬೆಳೆ (ಕ್ರಿ) ಎಂದರ್ಥ. ಯಾವುದರಿಂದ ಶಬ್ದದ ವ್ಯಾಪಾರವು ನಿಯತವಾಗುತ್ತದೋ ಆ ಧರ್ಮವನ್ನು ರೂಢಿ ಎಂದು ಕರೆಯಲಾಗುತ್ತದೆ [ಶಬ್ದದೊಂದಿಗೆ ಅದರ ಅರ್ಥವೂ ಯುಗ ಯುಗಗಳವರೆಗೆ ಬೆಳೆಯುತ್ತದೆ] ಆ ನಿಯತ ವೃತ್ತಿಯು (ಅರ್ಥವ್ಯಾಪ್ತಿ) ಎರಡು ವಿಧ.

(1) ನಿಯತ ಸಾಮಾನ್ಯ ವೃತ್ತಿ (ಸಾಮಾನ್ಯ ವೃತ್ತಿನಿಯತವಾಗುವುದು)

(2) ಹಾಗೂ ನಿಯತ ವಿಶೇಷ ವೃತ್ತಿ (ವಿಶೇಷ ವೃತ್ತಿ ನಿಯತವಾಗುವುದು) ಆದ್ದರಿಂದ 'ರೂಢಿ' ಶಬ್ದದ ಮೂಲಕ ರೂಢಿ ಪ್ರಧಾನ ಶಬ್ದವನ್ನು ಗ್ರಹಿಸಲಾಗುವುದು, ಕಾರಣ, ಧರ್ಮ ಮತ್ತು ಧರ್ಮಿಗಳನ್ನು ಅಭೇದಗಳೆಂದು ಸಾಮಾನ್ಯವಾಗಿ ಪರಿಗಣಿಸುವುದರಿಂದ 'ರೂಢಿಗತ' ಶಬ್ದದ ಮೂಲಕ ಸಂಭವವಾಗಿಸಲು ಸಾಧ್ಯವಿಲ್ಲದ ವಸ್ತುವಿನ ಧರ್ಮದ ವಿಶೇಷವನ್ನು ಪ್ರತೀತವಾಗಿಸುವಲ್ಲಿ (ಇದು ಒಂದು ವಿಧ) ವಿದ್ಯಮಾನ ಧರ್ಮದ ಅತಿಶಯತೆ (ಉತ್ಕರ್ಷ)ಯನ್ನು ಪ್ರತೀತಗೊಳಿಸುವಲ್ಲಿ (ಇದು ಇನ್ನೊಂದು ವಿಧ), ರೂಢಿ ವೈಚಿತ್ರ್ಯ ವಕ್ರತೆ ಕಂಡು ಬರುತ್ತದೆ.

ಅಧ್ಯಾರೋಪವು ಅತ್ಯಂತ ಸಣ್ಣ ಪ್ರಮಾಣದಲ್ಲಿದ್ದಾಗ್ಯೂ, ವಸ್ತುವನ್ನು ಅತ್ಯಂತ ವಿಸ್ಮಯಕಾರಿಯಾಗಿ ಪ್ರತಿಬಿಂಬಿಸಲು ಅತ್ಯುನ್ನತವಾಗಿ ಉತ್ಪ್ರೇಕ್ಷಿತಗೊಳಿಸಬಹುದು. ಈ ಕವಿ ಕರ್ಮದ ಹಿಂದಿನ ಕಾರಣ ವಸ್ತುವಿನ ಬಗೆಗೆ, ಅತ್ಯಂತ ತಿರಸ್ಕಾರ ಅಥವಾ ಪ್ರಶಂಸನೀಯ ಉತ್ಕರ್ಷವನ್ನು ಮಳೆಗೆರೆಯಬೇಕೆಂಬುದೇ ಆಗಿದೆ. ವಸ್ತುವೊಂದನ್ನು ಅದು ವಾಸ್ತವವಾಗಿ ಇರುವುದಕ್ಕಿಂತ ಅತಿಶಯವಾಗಿ ಅಥವಾ ಅತಿ ನಿಕೃಷ್ಟವಾಗಿ ಬಿಂಬಿಸಲು ಕವಿ ಇಚ್ಛಿಸಬಹುದು. ಇಲ್ಲಿ ವಸ್ತುವೆಂದರೆ, ರೂಢಿಯ ಅರ್ಥದಲ್ಲಿ ಹೇಗೆ ಬಳಕೆಯಾಗುತ್ತದೋ ಹಾಗೆಯೇ. ಅಂಥ ಲೋಕೋತ್ತರ ವಸ್ತು ರೂಢಿ ವೈಚಿತ್ರ್ಯ ವಕ್ರತೆ ಎನಿಸುತ್ತದೆ. ರೂಢಿ ಶಬ್ದದ ಈ ರೀತಿಯ ವೈಚಿತ್ರ್ಯದಿಂದ ಬರುವ ವಕ್ರತೆಗೆ ಈ ಸಂಜ್ಞೆಯನ್ನು ನೀಡಲಾಗಿದೆ. ಶಬ್ದಗಳು ಸಾಮಾನ್ಯವಾಗಿ ಸಾಧಾರಣತ್ವವನ್ನೇ ಪ್ರತಿಪಾದಿಸುತ್ತವೆ.

ಅವುಗಳು ನಿಯತ ವೈಶಿಷ್ಟ್ಯವನ್ನು ಅನುಮಾನದಿಂದ ಗ್ರಹಿಸುವುದು ಸ್ವಲ್ಪ ಮಟ್ಟಿಗೂ ಸಾಧ್ಯವಿಲ್ಲ. ಹೀಗೆ ಸ್ವಭಾವತಃ ಶಬ್ದಗಳು ವಿಶೇಷಾರ್ಥವನ್ನು ಪ್ರತಿಪಾದಿಸುವ ಸಾಮರ್ಥ್ಯವನ್ನು ಹೊಂದಿಲ್ಲದೇ ಇದ್ದರೂ, ಕವಿಯ ಕಲೆಯಿಂದಾಗಿ, ಅವನ ಉದ್ದೇಶಿತ ನಿಯತ ವಿಶಿಷ್ಟತೆಯನ್ನು ಪಡೆದುಕೊಳ್ಳುವಂತಾಗುತ್ತವೆ. ಹೀಗಾಗಿ ಕವಿ ಅವುಗಳನ್ನು ಬಳಸುವ ರೀತಿಯಿಂದಾಗಿ ಅವು

ಲೋಕೋತ್ತರವಾದ ಚಮತ್ಕಾರವನ್ನು ಉಂಟುಮಾಡುವ ಸಾಮರ್ಥ್ಯವನ್ನು ಪಡೆದುಕೊಳ್ಳುತ್ತವೆ.

ತಾಲಾ ಜಾ ಅನ್ತಿ ಗುಣಾ ಜಾಲಾ ತೇಸಹಿ ಅಏಹಿ ಘೇಪ್ಪನ್ತಿ
ರ ಇ ಕಿ ರಣಾನುಗ್ಗಹಿ ಆಇಂ ಹೋನ್ತಿ ಕಮಲಾಇಂ ಕಮಲಾ ಇಂ
ತದಾ ಜಾಯಂತೇ ಗುಣಾ ಯದಾತೇ ಸಹೃದಯೈ ರ್ಗೃಹ್ಯಂತೇ
ರವಿಕಿರಣಾನುಗೃಹೀತಾನಿ ಭವಂತಿ ಕಮಲಾನಿ ಕಮಲಾನಿ [೨೬]

ಗುಣವು ಗುಣವೆನಿಸುವುದು
ಸಹೃದಯರು ಗ್ರಹಿಸಿದಂದು
ಕಮಲಗಳು ಕಮಲಗಳಹವು
ರವಿ ಕಿರಣಗಳು ಅನುಗ್ರಹಿಸಿದಂದು [೨೬]

ಕಾರಿಕೆಯಲ್ಲಿ ಪ್ರಯುಕ್ತವಾಗಿರುವ 'ಪ್ರತೀಯತೆ' (ಪ್ರತೀತವಾಗುತ್ತದೆ) ಎಂಬ ಕ್ರಿಯಾಪದದ ವೈಚಿತ್ರ್ಯದ ಆಶಯವೇನೆಂದರೆ ಇಂಥ ವಿಷಯಗಳಲ್ಲಿ ಶಬ್ದಗಳ ವಾಚಕತ್ವದಿಂದ (ವಾಚಕರೂಪ) ಅರ್ಥವ್ಯಾಪಾರವಾಗುವುದಿಲ್ಲ; ಅಂದರೆ ಅದರ ಅರ್ಥವನ್ನು ಪ್ರಕಟಿಸುವಲ್ಲಿ ಶಬ್ದದ ಅಭಿಧಾಶಕ್ತಿ ಕೆಲಸಕ್ಕೆ ಬರುವುದಿಲ್ಲ. ಬದಲಿಗೆ ಬೇರೆಯದೇ ಆದ ವ್ಯಾಪಾರ ಪ್ರವರ್ತಿಸಿ, ಕವಿ ವಿವಕ್ಷಿತ ನಿಯತ ವಿಶೇಷದ ಪ್ರತೀತಿಯನ್ನುಂಟು ಮಾಡುತ್ತದೆ. ಈ ವಿಚಾರ ಇಲ್ಲಿ ಯುಕ್ತಿಯುಕ್ತವೇ ಆದರೂ ಇಲ್ಲಿ ಆ ಪ್ರಶ್ನೆ ನಮಗೆ ಅಪ್ರಕೃತ. ಅದರ ಚರ್ಚೆಗೆ ತೊಡಗುವುದಿಲ್ಲ; ಕಾರಣ ಧ್ವನ್ಯಾಲೋಕಕಾರನು (ಧ್ವನಿಕಾರ) ಇಂಥ ಸಂದರ್ಭಗಳಲ್ಲಿ ವ್ಯಂಗ್ಯ - ವ್ಯಂಜಕಭಾವವನ್ನು ಪ್ರಬಲವಾಗಿ ಸಮರ್ಥಿಸಿರುವುದರಿಂದ ಮತ್ತೆ ಅದನ್ನು ಪುನರಾವರ್ತಿಸುವುದರಿಂದ ಏನೂ ಪ್ರಯೋಜನವಿಲ್ಲ.

ರೂಢಿ ವೈಚಿತ್ರ್ಯ ವಕ್ರತೆಯಲ್ಲಿ ಮುಖ್ಯವಾಗಿ ಎರಡು ಪ್ರಕಾರಗಳಿವೆ.

1) ರೂಢಿ ವಾಚ್ಯಾರ್ಥವಿದ್ದಲ್ಲಿ ನಿರ್ದೇಶಕ ಅಂಕಿತನಾಮವನ್ನೇ ವಕ್ತಾರನನ್ನಾಗಿ ಕವಿಯು ಚಿತ್ರಿಸಬಹುದು. ಹಾಗೂ ತನ್ನಲ್ಲಿಯೇ ಉತ್ಕೃಷ್ಟತೆ ಅಥವಾ ನಿಕೃಷ್ಟತೆಯನ್ನು ಸಮಾರೋಪಗೊಳಿಸುವ ಉದ್ದೇಶದಿಂದ ಯುಕ್ತ ರೂಪದಲ್ಲಿ ಉಪನಿಬದ್ಧಗೊಳಿಸಬಹುದು.

2) ಯಾವುದಾದರೊಂದು ವಸ್ತುವಿನಲ್ಲಿ ಉತ್ಕೃಷ್ಟತೆ ಅಥವಾ ನಿಕೃಷ್ಟತೆಯನ್ನು ಸಮಾರೋಪಗೊಳಿಸುವ ಸಲುವಾಗಿ ಆ ವಸ್ತುವಿಗಿಂತ ಭಿನ್ನವಾದ ಬೇರೆ ವಕ್ತೃವನ್ನು ಉಪನಿಬದ್ಧಗೊಳಿಸ ಬಹುದು.

ಸ್ನಿಗ್ಧ ಶ್ಯಾಮಲ ಕಾಂತಿಲಿಪ್ತ ವಿಯತೋ ವೇಲ್ಲದ್ಬಲಾಕಾ ಘನಾ
ವಾತಾಃ ಶೀಕರಿಣಃ ಪಯೋದ ಸುಹೃದಾಮಾನಂದಕೇಕಾ : ಕಲಾಃ
ಕಾಮಂ ಸಂತು ದೃಢಂ ಕಠೋರ ಹೃದಯೋ ರಾಮೋಸ್ಮಿ ಸರ್ವಂ ಸಹೇ
ವೈದೇಹೀ ತು ಕಥಂ ಭವಿಷ್ಯತಿ ಹಹಾ ಹಾ ದೇವಿ ಧೀರಾ ಭವ [೨೭]

ತಮ್ಮಯ ಸ್ನಿಗ್ಧಶ್ಯಾಮಲ ಕಾಂತಿಯಿಂದಲಿ
ಅಂತರಿಕ್ಷವನೆಲ್ಲ ವ್ಯಾಪಿಸುತೆ ಮತ್ತೆ
ಶೋಭಾಯಮಾನವಹ ಬಲಾಕದ

ಸಾಲ್ಗಳಿಂ ಕೂಡಿಹವು ಮೋಡಗಳು
ಜಲಕಣಗಳಿಂದ ಕೂಡಿ ಹವೆಯು ತಂಪಾಗಿಹುದು
ಮೇಘ ಮಿತ್ರಗಳೆನಿಪ ಮಯೂರಗಳ
ಆನಂದ ಧ್ವನಿಯು ಕೇಳುತಿದೆ
ಇವೆಲ್ಲ ಇದ್ದರೇನಾಯಿತು
ದೃಢಕಠೋರ ಹೃದಯಿ ರಾಮನಲ್ಲವೆ ನಾನು?
ಸಹಿಸುವೆನು ಅದನೆಲ್ಲವನು
ಆದರೆ ವೈದೇಹಿ ಸಹಿಸುವಳೆಂತು - ಇದನೆಲ್ಲ?
ಎಂತಿಹಳು? ಹಾದೇವಿ! ಧೈರ್ಯವನು ನೆರೆತಾಳು. [೨೭]

ಈ ಉದಾಹರಣೆಯಲ್ಲಿ "ದೃಢಂ ಕಠೋರ ಹೃದಯಃ" ಮತ್ತು "ಸರ್ವಂಸಹೇ" ಎಂಬ ಈ ಎರಡೂ ಪದಗಳ ಮೂಲಕ ಪ್ರತಿಪಾದಿಸಲು ಸಾಧ್ಯವಾಗದ ಅರ್ಥವನ್ನು 'ರಾಮ' ಶಬ್ದ ಪ್ರಬಲವಾಗಿ ಪ್ರತಿಪಾದಿಸುತ್ತದೆ. ಇಲ್ಲಿ ಉಕ್ತವಾಗಿರುವ ಉದ್ದೀಪನ ವಿಭಾವಗಳ ವೈಭವವನ್ನು ಸಹಿಸುವ ಸಾಮರ್ಥ್ಯ, ಅದೂ ಜನಕನಂದನೆಯ ಅಸಹನೀಯ ವಿರಹವೇದನೆಯನ್ನನುಭವಿಸು ತ್ತಿರುವ ಸಮಯದಲ್ಲಿ, ಮತ್ತು ನಿರ್ಲಜ್ಜ ರೀತಿಯಲ್ಲಿ ತನ್ನ ಪ್ರಾಣರಕ್ಷಣೆಮಾಡಿಕೊಳ್ಳುವ ಚಾತುರ್ಯ ಇಂಥ ಎಲ್ಲ ಅಸಂಭಾವ್ಯವೂ, ಅಸಾಧಾರಣವೂ ಆದ ಅವನ ಕ್ರೌರ್ಯವನ್ನು 'ರಾಮ' ಎಂಬ ಅಂಕಿತನಾಮ ಪ್ರತೀತಗೊಳಿಸುತ್ತದೆ. 'ವೈದೇಹಿ' ಪದ ವರ್ಷಾಕಾಲದ ರಮಣೀಯ ಪ್ರಾಕೃತಿಕ ದೃಶ್ಯಗಳನ್ನು ನೋಡಲಸಮರ್ಥವಾದ ಸೀತೆಯ ಸಹಜ ಸೌಕುಮಾರ್ಯಕ್ಕೆ ಮಾತ್ರ ತಗುವಂಥ ಅನಿರ್ವಚನೀಯ ಭೀರುತ್ವವನ್ನು ಸೂಚಿಸುತ್ತದೆ. ಸಂಯುಕ್ತವಾಚಕವಾದ 'ತು' (ಆದರೆ) ಎಂಬುದು ಸೀತೆಯ ಈ ಸ್ಥಿತಿಗೂ ರಾಮನ ಆ ಸ್ಥಿತಿಗೂ ಇರುವ ವೈದೃಶ್ಯವನ್ನು ಎತ್ತಿ ತೋರಿಸುತ್ತದೆ ಮತ್ತು ವೈದೃಶ್ಯ ಸೂಚಕವಾದ 'ತು' ಎಂಬುದು ಶಬ್ದದ ಜೀವಿತವೇ ಆಗಿದೆ.

ವಸ್ತುವಿನಲ್ಲಿ ವಿದ್ಯಮಾನವಾಗಿರುವ 'ಧರ್ಮ'ದ ಉತ್ಪ್ರೇಕ್ಷೆಯ (ಉತ್ಕರ್ಷ) ಆರೋಪದಿಂದ ಕೂಡಿರುವುದಕ್ಕೆ ಉದಾಹರಣೆ

ತತಃ ಪ್ರಹಸ್ಯಾಹ ಪುನಃ ಪುರಂದರಂ
ವ್ಯಪೇತಭೀರ್ಭೂಮಿ ಪುರಂದರಾತ್ಮಜಃ
ಗೃಹಾಣ ಶಸ್ತ್ರಂ ಯದಿ ಸರ್ಗ ಏಷ ತೇ
ನ ಖಲ್ವನಿರ್ಜಿತ್ಯ ರಘುಂ ಕೃತೀ ಭವಾನ್ [೨೮]

ಆ ಬಳಿಕ ಭಯವದಿನಿತಿಲ್ಲದೆಯೆ
ಭೂಮೀಂದ್ರ ಸುತನು
ಅಟ್ಟಹಾಸವಗೈದು ನುಡಿದ-
ನಿಂದ್ರನೊಡನಿಂತು
ಇದೆ ನಿನ್ನ ಇಚ್ಛೆಯಾದೊಡಸ್ತ್ರವನು ಧರಿಸು

ರಘುವ ನೀ ಗೆಲ್ಲದೆಯೆ ಸಫಲನೆಂತಪ್ಪೆ? [೨೮]

[ರಘು -3-51]

['ರಘುವಂಶ' ಕಾವ್ಯದಲ್ಲಿ ತನ್ನ ತಂದೆ ದಿಲೀಪನು ಪೂಜಿಸಿ ಬಿಟ್ಟ ಅಶ್ವಮೇಧದ ಕುದುರೆಯನ್ನು ಅಪಹರಣ ಮಾಡಿ, ಯುದ್ಧಮಾಡಿದಲ್ಲದೆ, ಯಾವ ರೀತಿಯಲ್ಲೂ ಅದನ್ನು ಹಿಂತಿರುಗಿಸಲು ಸಿದ್ಧನಿಲ್ಲದ ಇಂದ್ರನನ್ನು ಕುರಿತು ಹೇಳಿದ್ದು]

ಇಲ್ಲಿ 'ರಘು' ಶಬ್ದದ ಮೂಲಕ, ಸಮಸ್ತ ಲೋಕಗಳಲ್ಲಿ ಅಪ್ರತಿಹತವಾದ ದೇವರಾಜ ಇಂದ್ರನ ಉತ್ಸಾಹವನ್ನು ಆ ರೀತಿಯಲ್ಲಿ ಭಗ್ನಗೊಳಿಸಿದ ರಘುವಿನ ಪರಾಕ್ರಮದ ಅತಿಶಯತೆಯನ್ನು ಪ್ರತೀತಗೊಳಿಸಲಾಗಿದೆ. 'ಪ್ರಹಸ್ಯ' (ಅಟ್ಟಹಾಸಮಾಡಿ) ಎಂಬ ಪದದ ಮೂಲಕ ಅದನ್ನು (ಪರಾಕ್ರಮದ ಅಲೌಕಿಕ ಉತ್ಕರ್ಷವನ್ನು) ಪುಷ್ಟಿಗೊಳಿಸಲಾಗಿದೆ.

ವಕ್ತೃ ಬೇರೆ ಯಾರೋ ಆಗಿರುವ ಒಂದು ಉದಾಹರಣೆಯನ್ನು ನೋಡಬಹುದು.

ಆಜ್ಞಾ ಶಕ್ರ ಶಿಖಾಮಣಿ ಪ್ರಣಯಿನೀ ಶಾಸ್ತ್ರಾಣಿ ಚಕ್ಷುರ್ನವಂ
ಭಕ್ತಿರ್ಭೂತ ಪತೌ ಪಿನಾಕಿನಿ ಪದಂ ಲಂಕೇತಿ ದಿವ್ಯಾಪುರೀ
ಸಂಭೂತಿರ್ದ್ರುಹಿಣಾನ್ವಯೇ ಚ ತದಹೋ ನೇದೃಗ್ವರೋ ಲಭ್ಯತೇ
ಸ್ಯಾಚ್ಚೇದೇಷ ನ ರಾವಣಃ ಕ್ವ ನು ಪುನಃ ಸರ್ವತ್ರ ಸರ್ವೇ ಗುಣಾಃ [೨೯]

[ಬಾಲರಾಮಾಯಣ - 1-36]

ಅವನ ಆಜ್ಞೆಯು ಇಂದ್ರನ ಮುಕುಟ
ಮಣಿಗಳ ಪ್ರಣಯಿಯು
ತಾನು ಪ್ರಭುತೆಯನಾಂತ ಸಕಲ
ಶಾಸ್ತ್ರಗಳವಗೆ ನೂತನ ನೇತ್ರವು
ಪಿನಾಕ ಪಾಣಿಯೊಳವಗತುಳ ಭಕ್ತಿಯು
ದಿವ್ಯ ನಗರಿ ಲಂಕೆ ಅವನ ಪುರವು
ಅವನ ಜನನವಾದರೊ ಬ್ರಹ್ಮಕುಲದೊಳಗೆ
ಇಂಥ ವರನಿನ್ನೆಲ್ಲಿ ದೊರೆವನು?
ಆದರಾಹಾ! ಅವನು ರಾವಣನಲ್ಲದಿರೆ!
ಎಲ್ಲ ಗುಣಗಳು ಒಂದೆ ಎಡೆಯೊಳು
ಅದೆಲ್ಲಿ ದೊರೆವುವು ಜಗದೊಳು! [೨೯]

[ಬಾಲರಾಮಾಯಣ ನಾಟಕದಲ್ಲಿ ರಾವಣನ ವಿಷಯದಲ್ಲಿ ಜನಕಮಹಾರಾಜನೊಂದಿಗೆ ಶತಾನಂದನು ಹೇಳಿದ್ದು]

ಇಲ್ಲಿ ರಾವಣ ಶಬ್ದಪ್ರಯೋಗವು ಸಕಲ ಲೋಕಗಳಲ್ಲೂ ಹೆಸರಾದ, ದಶಕಂಠನ ದುರ್ವಿಲಾಸ ಪ್ರತೀತಿ ಉಂಟುಮಾಡುವುದಷ್ಟೇ ಅಲ್ಲದೇ ಒಬ್ಬ ಆದರ್ಶ ವರನಿಗಿರಬೇಕಾದ ಸಜ್ಜನರ ವಿವೇಕ, ಸದಾಚಾರ, ಹುಟ್ಟಿನ ಹಿರಿಮೆ, ದೈವಭಕ್ತಿ ಪ್ರಭಾವ ಮತ್ತು ಐಹಿಕ ಸುಖ

ಸಂಪತ್ಸುಖ ಸಾಮಗ್ರಿಗಳೆಲ್ಲವನ್ನೂ ಹೊಂದಿದ್ದಾಗ್ಯೂ, ಅದೆಲ್ಲವನ್ನೂ ತಿರಸ್ಕರಿಸಿ ಬಿಡುವಷ್ಟು ಹೇಯತೆಗೆ ಕಾರಣವಾದ ಅವನ ಅನರ್ಹತೆಯನ್ನು ಪ್ರತೀತಿಗೊಳಿಸುತ್ತದೆ [ಇದರಿಂದ ಅವನು ವರನಾಗಲು ಉಪಾದೇಯನಲ್ಲ].

ಇಲ್ಲಿಯೇ ವಸ್ತುವಿನಲ್ಲಿ ವಿದ್ಯಮಾನವಾಗಿರುವ ಗುಣಾತಿಶಯದ ಆರೋಪವನ್ನು ಹೊಂದಿರುವುದಕ್ಕೆ ಉದಾಹರಣೆ

ರಾಮೋऽಸೌ ಭುವನೇಷು ವಿಕ್ರಮಗುಣೈಃ ಪ್ರಾಪ್ತಃ ಪ್ರಸಿದ್ಧಿಂ ಪರಾಂ [೩೦]

[1-43]

ಮೂರು ಲೋಕಗಳಲಿ ತನ್ನ ಶೌರ್ಯಗುಣದೆ
ಪ್ರಸಿದ್ಧನೀ ರಾಮನು [೩೦]

ಇಲ್ಲಿ 'ರಾಮ' ಎಂಬ ಶಬ್ದವು ಮೂರು ಲೋಕಗಳಲ್ಲಿ ಅತಿಶಯವಾಗಿ ಬೆಳಗಬಲ್ಲ ರಾಮನ ಪರಾಕ್ರಮವನ್ನು ಪ್ರತೀತಗೊಳಿಸುತ್ತದೆ. ಇದು ರಾವಣನ ಸೇವಕನನ್ನೂ ಆಶ್ಚರ್ಯಚಕಿತನನ್ನಾಗಿಸಿಬಿಡುತ್ತದೆ. ಅಲ್ಲದೆ ರೂಢಿ ವೈಚಿತ್ರ್ಯ ವಕ್ರತೆಯ ಪ್ರತೀಯಮಾನ ಧರ್ಮಗಳು ಅಸಂಖ್ಯವಾದ ಕಾರಣ ಅನೇಕ ಭೇದಗಳು ಸಾಧ್ಯ. ಅವುಗಳನ್ನು ಸಹೃದಯರೇ ವಿಚಾರಿಸಬೇಕು ಉದಾ :

ಗುರ್ವರ್ಥಮರ್ಥೀ ಶ್ರುತಪಾರದೃಶ್ವಾ
ರಘೋಃ ಸಕಾಶಾದನವಾಪ್ತಕಾಮಃ
ಗತೋ ವದಾನ್ಯಾಂತರ ಮಿತ್ಯಯಂ ಮೇ
ಮಾ ಭೂತ್ಪರೀವಾದನವಾವತಾರಃ [೩೧] **[ರಘುವಂಶ V-24]**

[ರಘುವಂಶ ಮಹಾಕಾವ್ಯದಲ್ಲಿ ವಿಶ್ವಜಿದ್ ಯಾಗದಲ್ಲಿ ರಘು ಸರ್ವಸ್ವವನ್ನೂ ದಾನವಾಗಿ ಕೊಟ್ಟುಬಿಟ್ಟ ಮೇಲೆ, ಗುರುದಕ್ಷಿಣೆ ಪಡೆಯುವ ಸಲುವಾಗಿ ದ್ರವ್ಯಯಾಚನೆಗಾಗಿ ಕೌತ್ಸನು ಆಗಮಿಸಿದನು. ಆದರೆ ಮೊದಲ ಸ್ವಾಗತದಲ್ಲೇ ಮಣ್ಣಿನ ಅರ್ಘ್ಯ ಪಾತ್ರೆಯನ್ನು ನೋಡಿ ನಿರಾಶನಾಗಿ, ಇನ್ನಾರಾದರೂ ದಾತರ ಬಳಿಗೆ ದ್ರವ್ಯಕ್ಕಾಗಿ ಹೊರಟು ನಿಂತ ವರತಂತುವಿನ ಶಿಷ್ಯ ಕೌತ್ಸನೊಂದಿಗೆ ರಘು ಮಹಾರಾಜ ಈ ಮಾತುಗಳನ್ನು ಹೇಳುತ್ತಾನೆ]

ಗುರುವಿನರ್ಥವನು ಬೇಡಿದ ವೇದ ಪಾರಂಗತನು
ರಘುವಿನಿಂದಿಷ್ಟಾರ್ಥವನು ಪಡೆಯದೆಯೆ
ಬೇರೊಬ್ಬ ದಾನಿಯೆಡೆಗೈದಿದನು ಎಂಬ
ಹೊಸ ಅಪವಾದವೆನಗೆ ಬರದಿರಲಿ [೩೧]

ಇಲ್ಲಿ 'ರಘು' ಎಂಬ ಅಂಕಿತನಾಮ, ಮೂರೂ ಲೋಕಗಳಲ್ಲಿ ಔದಾರ್ಯ ಮತ್ತು ಪರಾಕ್ರಮದ ಗುಣಗಳನ್ನು ಅತ್ಯುನ್ನತ ಪ್ರಮಾಣದಲ್ಲಿ ವ್ಯಕ್ತಿ ಪಡೆದುಕೊಂಡಿರುವುದನ್ನು ಪ್ರತೀತಗೊಳಿಸುತ್ತದೆ. ರೂಢಿಯ ಶಬ್ದದ ಮೂಲಕವೇ, ಅದರ ಸಾಮಾನ್ಯ ಅರ್ಥ ನಿಷ್ಪತ್ತಿಯನ್ನು

ತ್ಯಜಿಸಿ, ಕವಿವಿವಕ್ಷಿತ ವಿಶೇಷಾರ್ಥದ ಬೋಧೆಯನ್ನುಂಟುಮಾಡುವ ಸಾಮರ್ಥ್ಯವುಳ್ಳ ರಮಣೀಯ ಉತ್ಕರ್ಷವನ್ನು ಪ್ರತಿಪಾದಿಸುವುದೇ ಈ ರೂಢಿ ವೈಚಿತ್ರ್ಯ ವಕ್ರತೆಯ ತಿರುಳು. ಅಂಕಿತನಾಮಗಳು ನಿಶ್ಚಿತ ಅರ್ಥಪ್ರತೀತಿಯನ್ನುಂಟುಮಾಡುವ ಕಾರಣದಿಂದಾಗಿ ಅವುಗಳಲ್ಲಿ ಯಾವುದೇ ಸಾಮಾನ್ಯ ಹಾಗೂ ವಿಶೇಷ ಭಾವವಿರಲು ಸಾಧ್ಯವೇ ಇಲ್ಲ- ಎಂದು ಹೇಳುವುದು ಸರಿಯಲ್ಲ. ಅಂಕಿತನಾಮಗಳ ಅರ್ಥ ವ್ಯಾಪ್ತಿ ಹೇಗೆಂದರೆ, ಅದು ವಾಚ್ಯವೊಂದರ ಬದಲಾಗುತ್ತಿರುವ ಸಹಸ್ರಾರು ಮನೋವೃತ್ತಿ ಅಥವಾ ಸಂದರ್ಭಗಳಿಗೆ ಸಮಾನವಾಗಿ ಅನ್ವಯಿಸಬಲ್ಲುದು. ಹಾಗೆಯೇ ಸ್ವರಶ್ರುತಿನ್ಯಾಯ* ಅಥವಾ ಲಗ್ನಾಂಶುಕ ನ್ಯಾಯದಂತೆ ಸತ್ಕವಿ ವಿವಕ್ಷಿತವಾದ ವಾಚ್ಯದ ಯಾವುದೋ ಒಂದು ಗೊತ್ತಾದ ಮನೋವೃತ್ತಿ ಅಥವಾ ಸಂದರ್ಭಕ್ಕೂ ಸಕಾರಣವಾಗಿಯೇ ಅನ್ವಯಿಸಬಹುದು.

ರೂಢಿವೈಚಿತ್ರ್ಯ ವಕ್ರತೆಯನ್ನು ವಿವೇಚಿಸಿದ್ದಾದ ಮೇಲೆ, ಗ್ರಂಥ ಕರ್ತೃವು ಕ್ರಮ ಪ್ರಾಪ್ತ ಸಮನ್ವಯವೆನಿಸಿದ ಪರ್ಯಾರ್ಯ ವಕ್ರತೆಯ ವಿವೇಚನೆಯನ್ನು ಕೈಗೆತ್ತಿಕೊಳ್ಳುತ್ತಾನೆ.

ಅಭಿಧೇಯಾಂತರತಮಸ್ತ ಸ್ಯಾತಿಶಯಪೋಷಕಃ
ರಮ್ಯ ಚ್ಛಾಯಾಂತರ ಸ್ಪರ್ಶಾತ್ತ ದಲಂಕರ್ತುಮೀಶ್ವರಃ[10]
ಸ್ವಯಂ ವಿಶೇಷಣೇನಾಪಿ ಸ್ವಚ್ಛಾಯೋತ್ಕರ್ಷ ಪೇಶಲಃ
ಅಸಂಭಾವ್ಯಾರ್ಥ ಪಾತ್ರತ್ವಗರ್ಭಂ ಯಶ್ಚಾಭಿಧೀಯತೇ[11]
ಅಲಂಕಾರೋಪ ಸಂಸ್ಕಾರ ಮನೋಹಾರಿ ನಿಬಂಧನಃ
ಪರ್ಯಾಯಸ್ತೇನ ವೈಚಿತ್ರ್ಯಂ ಪರಾ ಪರ್ಯಾಯ ವಕ್ರತಾ [12]

ಅಭಿಧೇಯಾರ್ಥಕ್ಕೆ ಅತ್ಯಂತ ಸಮೀಪವಾದ ಪರ್ಯಾಯವಾಗಿದ್ದು ಅರ್ಥದ ಸೌಂದರ್ಯವನ್ನು ಅತಿಶಯವಾಗಿ ಪೋಷಿಸುವಂಥದಾಗಿರುತ್ತದೆ. ತಾನೇ ಅಭಿಧೇಯಾರ್ಥವನ್ನು ಅಲಂಕರಿಸಲು ಸಮರ್ಥವಾದುದು ಅಥವಾ ಆಲಂಕಾರಿಕ ಸೌಂದರ್ಯದ ವಿವಿಧ ಛಾಯೆಗಳನ್ನು ತಳೆಯುವ ವಿಶೇಷಣಗಳನ್ನು ಅಲಂಕೃತಗೊಳಿಸುವಂಥದಾಗಿರುತ್ತದೆ [10]

---

*ಸ್ವರಶ್ರುತಿ ನ್ಯಾಯ-ಸಂಗೀತದ ಸಪ್ತಸ್ವರಗಳಲ್ಲಿ ಪ್ರತಿಯೊಂದು ಸ್ವರಕ್ಕೂ ಒಂದು ವಿಶೇಷ ವ್ಯಕ್ತಿವಾಚಕ ಸಂಜ್ಞೆ ಇರುವಂತೆ, ಒಂದು ವಿಶೇಷ ಸ್ವರವೇ ಸೂಚಕವೂ ಆಗಿರುತ್ತದೆ. ಆದರೆ ಆ ಒಂದು ಸ್ವರದಲ್ಲೂ ಅನೇಕ ಏರಿಳಿತಗಳ ಧ್ವನಿ ಅಥವಾ ಶ್ರುತಿ ಸಾಧ್ಯ. ಗಾಯಕನು ತಾನು ಇಷ್ಟಪಟ್ಟರೆ, ಅದೊಂದೇ ಸ್ವರದ ಬೇರೆ ಬೇರೆ ಪ್ರಕಾರಗಳ ಶ್ರುತಿ ಹೊರಡಿಸಬಲ್ಲ. (ಅಥವಾ ಅವಲಂಬಿಸಬಲ್ಲ) ಅದೇ ರೀತಿ ವ್ಯಕ್ತಿವಾಚಕ ಶಬ್ದಗಳಾದ ರಾಮ, ರಘು ಇತ್ಯಾದಿಗಳು ಒಬ್ಬನೇ ವ್ಯಕ್ತಿಯನ್ನು ಸೂಚಿಸುವ ವಾಚಕಗಳಾದರೂ ಆ ವ್ಯಕ್ತಿಯ ಅನೇಕ ಅವಸ್ಥೆಗಳ ಸ್ಥಿತಿಯಾಗಿರಲು ಸಾಧ್ಯ. ಅದರಿಂದ ವ್ಯಕ್ತಿವಾಚಕ ಶಬ್ದವೂ ವಿವಿಧ ಅವಸ್ಥೆಗಳ ವಿಶಿಷ್ಟ ವ್ಯಕ್ತಿಯ ವಾಚಕವಾಗುವುದರಿಂದ ಸಾಮಾನ್ಯ ವಾಚಕ ಶಬ್ದವಾಗಬಲ್ಲುದು ಮತ್ತು ಅದರಲ್ಲೂ ಕವಿ ವಿವಕ್ಷಿತವಾದ ಅವಸ್ಥಾ ವಿಶೇಷಕ್ಕನುಗುಣವಾಗಿ ವಿಶೇಷಾರ್ಥಪರವೂ ಆಗಬಲ್ಲುದು.

ಲಗ್ನಾಂಶುಕ : ವಿವಾಹವಸ್ತ್ರ ಸಾಮಾನ್ಯಕ್ಕೆ ಅನ್ವಯಿಸುವಂತೆ ಪೂರ್ತಿಸಾಂಕೇತಿಕವೂ ವಿಶಿಷ್ಟವೂ ಆಗಬಹುದು.

ಯಾವುದು ಸ್ವಯಂ ಸೌಂದರ್ಯದ ಉತ್ಕರ್ಷವನ್ನು ಪೋಷಿಸುತ್ತದೆಯೋ ಬಹುಮಟ್ಟಿಗೆ ಅಸಂಭಾವ್ಯವೆನ್ನುವಂಥ ಅಂಶಗಳನ್ನು ಹೊಂದಿರುವ ಅರ್ಥವನ್ನು ಸೂಚಿಸುತ್ತಿರುತ್ತದೆ (11)

ಸೌಂದರ್ಯಪೋಷಕಗಳಾದ ಆಲಂಕಾರಿಕ ಅಂಶಗಳನ್ನು ಹೊಂದಿರುವಂಥದು ಪರ್ಯಾಯ ವಕ್ರತೆಯ ಬಳಕೆಯಲ್ಲಿ ಅತ್ಯುತ್ಕೃಷ್ಟ ಕಲೆ ಎನಿಸುತ್ತದೆ [12]

ಕಾವ್ಯವಿಷಯದಲ್ಲಿ ಪೂರ್ವೋಕ್ತ ವಿಶೇಷಣಗಳಿಂದ ವಿಶಿಷ್ಟವಾದದ್ದನ್ನು ಮಾತ್ರ ಪರ್ಯಾಯವೆಂದು ಕರೆಯಲಾಗುವುದು. ಅದರ ಪರಿಣಾಮವಾಗಿ ಉಂಟಾಗುವ ವೈಚಿತ್ರ್ಯ ಅರ್ಥಾತ್ ವಿಶೇಷ ರೀತಿಯ ಸೌಂದರ್ಯ ವಿಶೇಷವೇನಿದೆ ಅದು ಅತ್ಯುಚ್ಚವಾದುದು ಮತ್ತು ಅದನ್ನು ಪರ್ಯಾಯ ವಕ್ರತೆ ಎಂದು ಕರೆಯಲಾಗುವುದು. ಇಲ್ಲಿ ವರ್ಣಿಸಲಾದ ಪರ್ಯಾಯದ ವೈಶಿಷ್ಟ್ಯವೆಂದರೆ, ಒಂದು ಸಂದರ್ಭದಲ್ಲಿ ಉದ್ದೇಶಿಸಲಾದ ಅರ್ಥವನ್ನು ಅಭಿವ್ಯಕ್ತಿಸಲು ಒಂದು ಪರ್ಯಾಯ ಅತ್ಯುತ್ಕೃಷ್ಟವೆಂದಾದರೆ ಬೇರೆ ಸಂದರ್ಭಗಳಲ್ಲಿ ಬೇರೆಯದೇ ಆದ ಪರ್ಯಾಯ ಅಗತ್ಯವಾಗುತ್ತದೆ. ಹಾಗೆ ಅಸಂಖ್ಯಾತ ಪರ್ಯಾಯಗಳು ಸಾಧ್ಯವಾಗುತ್ತವೆ. ಆದರೆ ಕಾವ್ಯಮೀಮಾಂಸೆಯಲ್ಲಿ ಅಸಂಖ್ಯಾತಗಳು (ಬಹುಪ್ರಕಾರಗಳು) ಕಾಣುವುದಿಲ್ಲ. ಹಾಗಾಗಿ ಲೇಖಕ ಇಲ್ಲಿ ಕೇವಲ ಪ್ರಧಾನ ಪ್ರಕಾರಗಳನ್ನು ಮಾತ್ರ ಗಮನಿಸುತ್ತಾನೆ.

(1) ಅಭಿಧೇಯಾರ್ಥಕ್ಕೆ (ಉದ್ದಿಷ್ಟ ಅರ್ಥ) ಅತ್ಯಂತ ಹತ್ತಿರವಾದ ಪರ್ಯಾಯ. ಉದ್ದಿಷ್ಟ ಅಥವಾ ಅಭಿಧೇಯಾರ್ಥವೆಂದರೆ ಕಾವ್ಯದ ವಾಚ್ಯ-ವಸ್ತು. ಅದನ್ನು ಅಭಿವ್ಯಕ್ತಿಸಲು ಅತ್ಯಂತ ನಿಕಟವಾದ ಶಬ್ದವನ್ನು ಕವಿ ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಇತರೆ ಪರ್ಯಾಯಗಳು ಇದ್ದಾಗ್ಯೂ ಹೇಳಬೇಕಾದ ಅರ್ಥದ ಛಾಯೆಯನ್ನು, ಉಳಿದ ಶಬ್ದಗಳಾವುವೂ ಸಂವಹನ ಮಾಡಲು ಸಾಧ್ಯವಾಗದೆ ಅದೊಂದು ಮಾತ್ರವೇ ಅತ್ಯಂತ ಅಂತರತಮ (ನಿಕಟತಮ)ವಾಗಿ ಸಂವಹನಿಸಲು ಸಾಧ್ಯ

ನಾಭಿಯೋಕ್ತುಮನೃತಂ ತ್ವಮಿಷ್ಯಸೇ
ಕಸ್ತಪಸ್ವಿ ವಿಶಿಖೇಷು ಚಾದರಃ
ಸಂತಿ ಭೂಭೃತಿ ಹಿ ನಃ ಶರಾಃ ಪರೇ
ಯೇ ಪರಾಕ್ರಮ ವಸೂನಿ ವಜ್ರಿಣಃ [೩.೨]

ನಿನ್ನೊಡನೆ ಬರಿದೆ ಕಾದಲಿಚ್ಛಸೆನು ನಾನು
ನಿನ್ನೊಡನೆ ಅನೃತವನು ನುಡಿಯಲಿಚ್ಛೆಸೆನು
ಅಲ್ಲದೆ ತವಸಿಗಳ ಬಾಣಕಿನ್ನೆಂಥ ಆದರವು?
ವಜ್ರಿಯ ಶೌರ್ಯಸಂಪದವಹ ಶರಗಳು
ಎನ್ನಬಳಿಯೊಳಿಹವು ಅಲ್ಲಿ ಪರ್ವತದೊಳು [೩.೨]

ಭಾರವಿಯ ಕಿರಾತಾರ್ಜುನೀಯದಲ್ಲಿ ಶಿವನ ಬಾಣ ಪಡೆಯಲು ಅರ್ಜುನನ ಬಳಿಗೆ ಬಂದ ಕಿರಾತನು ಅರ್ಜುನನಿಗೆ ಮೇಲ್ಕಂಡಂತೆ ಹೇಳುತ್ತಾನೆ.

ಇಲ್ಲಿ 'ಮಹೇಂದ್ರ' ವಾಚಕವಾದ ಅಸಂಖ್ಯ ಪರ್ಯಾಯ ಶಬ್ದಗಳಿದ್ದಾಗ್ಯೂ ಅವೆಲ್ಲಕ್ಕಿಂತ

'ವಜ್ರಿ' (ಮೂಲ ವಜ್ರಿಣ) ಎಂಬ ಶಬ್ದ ಮಾತ್ರ ಪರ್ಯಾಯ ವಕ್ರತೆಯನ್ನು ಪೋಷಿಸುತ್ತದೆ. ದೇವತೆಗಳ ಒಡೆಯನಾಗಿ ಯಾವಾಗಲೂ ವಜ್ರಧಾರಿಯಾಗಿರುವ ಇಂದ್ರನ ಶೌರ್ಯಸಂಪತ್ತೆನಿಸಿವೆ ಈ ಬಾಣಗಳು ಎಂದಾಗ ಆ ಬಾಣಗಳ ಅಲೌಕಿಕತೆ (ಲೋಕೋತ್ತರತೆ) ಪ್ರತೀತವಾಗುತ್ತದೆ. ಜೊತೆಯಲ್ಲೇ "ತಪಸ್ವಿ" ಶಬ್ದವೂ ಅತ್ಯಂತ ರಮಣೀಯವಾಗಿದೆ. ಕಾರಣ ಶೂರರ ಬಾಣಗಳ ವಿಷಯಕ್ಕೆ ಆದರ ತೋರುವುದು ಉಚಿತವೇ ಆದರೂ ಕೇವಲ ತಪಸ್ವಿಗಳ ಬಡ ಬಾಣಗಳ ವಿಷಯಕ್ಕೆ ಯಾರು ತಾನೆ ಸಂಭ್ರಮ ಆಸಕ್ತಿಗಳನ್ನು ತೋರಿಯಾರು?

(ಹೀಗಾಗಿ ಇಲ್ಲಿ 'ತಪಸ್ವಿ' (ತವಸಿ) ಪದವೂ ಅತ್ಯಧಿಕ ಚಮತ್ಕಾರಕಾರಿಯಾಗಿದೆ, ಕಾರಣ ಅರ್ಜುನನಿಗೆ ಬೇರಾವುದಾದರೂ ವಿಶೇಷ ವಾಚಕ ಬಳಸಿದ್ದರೆ, ಆಗ ಸಾಮಾನ್ಯ ವಾಚಕವಾದ 'ತಪಸ್ವಿ' ಪದದಿಂದ ಉಂಟಾಗಿರುವ ಚಮತ್ಕಾರ, ಅದರಿಂದ ಆಗುತ್ತಿರಲಿಲ್ಲ)

ಇನ್ನೊಂದು ಉದಾಹರಣೆ

ಕಸ್ತ್ವಂ ಜ್ಞಾಸ್ಯಸಿ ಮಾಂ ಸ್ಮರ ಸ್ಮರಸಿ, ಮಾಂ ದಿಷ್ಟ್ಯಾ ಕಿಮಭ್ಯಾಗತ-
ಸ್ತ್ವಾಮುನ್ಮಾದಯಿತುಂ ಕಥಂ ನನು ಬಲಾತ್ ಕಿಂ ತೇ ಬಲಂ ಪಶ್ಯ ತತ್
ಪಶ್ಯಾಮೀತ್ಯಭಿಧಾಯ ಪಾವಕಮುಚಾ ಯೋ ಲೋಚನೇನೈವ ತಂ
ಕಾಂತಾಕಂಠ ನಿಷಕ್ತಬಾಹುಮದ ಹತ್ತಸ್ಮೈ ನಮಃ ಶೂಲಿನೇ [೩೩]

'ನೀನಾರು'? 'ಇಷ್ಟರಲ್ಲೇ ತಿಳಿಯುವೆ'
'ಓಹೋ! ಮನ್ಮಥನೆ!' 'ಆಹಾ! ನನ್ನ ನೆನಪಿದೆ ಹಾಗಾದರೆ'
'ನೀನೇಕೆ ಬಂದೆ'? ನಿನ್ನನ್ನು ಉನ್ಮತ್ತಗೊಳಿಸಲು
ಅದು ಹೇಗೆ? 'ನನ್ನ ಸಾಮರ್ಥ್ಯದಿಂದ'
'ಏನದು ನಿನ್ನ ಸಾಮರ್ಥ್ಯ?' 'ಹಾಗಾದರೆ ನೋಡು ಅದನ್ನು'
'ಆಗಲಿ ನೋಡುವೆನು'-ಎನುತೆ
ತನ್ನ ಪ್ರಿಯತಮೆಯ ಕಂಠವನು
ಬಾಹುಗಳಿಂದ ಅಪ್ಪಿ ಹಿಡಿದಿರ್ದಕಂದರ್ಪನನು
ಉರಿಗಣ್ಣಿಂದ ಉರುಹಿಕೆಡಹಿದಾ ಶೂಲಿಗೆ ನಮೋ! [೩೩]

ಇಲ್ಲಿ ಭಗವಾನ್ ಶಂಕರನಿಗೆ ಸಹಸ್ರಾರು ಪರ್ಯಾಯ ವಾಚಕಗಳಿದ್ದರೂ, ಕವಿ ಬಳಸಿರುವ "ಶೂಲಿನೇ" ಎಂಬ ಶಬ್ದಕ್ಕೆ ವಿಶೇಷ ಮಹತ್ವವಿದೆ. ಅಂಥ ಮಹಿಮಾವಂತ ಭಗವಂತನಿಗೆ "ನಮಸ್ಕಾರ"ದ ಹೊರತು ಬೇರೇನು ಹೇಳಲು ಸಾಧ್ಯ. ವಿನಯ ರಹಿತನಾಗಿ, ಅಷ್ಟೊಂದು ಅಹಂಕಾರವನ್ನು ಮೆರೆದ ಮನ್ಮಥನ ವರ್ತನೆಯಿಂದ ಕುಪಿತನಾಗಿದ್ದರೂ, ಸದಾತ್ರಿಶೂಲದಾರಿಯೇ ಆದ ಮುಕ್ಕಣ್ಣನು ತನ್ನ ಕೋಪವನ್ನು ತೋರಿಸಲು ತ್ರಿಶೂಲವನ್ನು ಅವನ ಮೇಲೆ ಪ್ರಯೋಗಿಸದೆ, ಮನ್ಮಥನು ಹೇಳಿದ ಪ್ರಕಾರವೇ ಕಣ್ಣನ್ನು ಮಾತ್ರ ಪ್ರಯೋಗಿಸಿದ್ದಾನೆ. ಕೇವಲ ಕಣ್ಣಿನ ನೋಟದಿಂದಲೇ ಅವನ ಕೋಪದ ಪರಿಣಾಮ ಸಾಧಿತವಾಗಿರುವುದರಿಂದ, ಶಿವನ ಪ್ರಭಾವಾತಿಶಯ ಪೋಷಿತವಾಗಿದೆ. ಆದ್ದರಿಂದ ಅವನಿಗೆ ನಮಸ್ಕರಿಸುವುದು ಅತ್ಯಂತ ಉಚಿತವೇ ಆಗಿದೆ.

ಪದಪೂರ್ವಾರ್ಧ ವಕ್ರತೆಗೆ ಕಾರಣವಾದ ಈ ಎರಡನೇ ಪ್ರಕಾರ ಅದರ ಅತಿಶಯವನ್ನು ಪುಷ್ಟಿಗೊಳಿಸುತ್ತದೆ.

ಅಭಿಧೇಯಾರ್ಥದ ಅತಿಶಯ, ಅರ್ಥಾತ್ ಉತ್ಕರ್ಷವನ್ನು ಪೋಷಿಸುತ್ತದೆ (ಅಭಿಧೇಯದ ಉತ್ಕರ್ಷ ಪೋಷಿಸುವ ಪರ್ಯಾಯ ಎಂದು ಹೇಳಲಾಗುತ್ತದೆ). ತನ್ನ ಸಹಜ ಸೌಕುಮಾರ್ಯದಿಂದ ರಮಣೀಯವಾಗಿರುವ ಪದಾರ್ಥವು ಯುಕ್ತ ಪರ್ಯಾಯ ವಾಚಕದಿಂದ ಪರಿಪೋಷಿತಗೊಂಡು ಸಹೃದಯರ ಹೃದಯವನ್ನಪಹರಿಸುವಂಥದಾಗಿ ಬಿಡುತ್ತದೆ ಉದಾ :

ಸಂಬಂಧೀ ರಘುಭೂಭುಜಾಮ್ ಮನಸಿಜವ್ಯಾಪಾರ ದೀಕ್ಷಾಗುರು–
ರ್ಗೌರಾಂಗೀವದನೋಪಮಾ ಪರಿಚಿತಸ್ತಾರಾವಧೂ ವಲ್ಲಭಃ|
ಸದ್ಯೋಮಾರ್ಜಿತ ದಾಕ್ಷಿಣಾತ್ಯ ತರುಣೀ ದಂತಾವದಾತದ್ಯುತಿ–
ಶ್ಚಂದ್ರಃ ಸುಂದರಿ ದೃಶ್ಯತಾಮಯಮಸೌ ಚಂಡೀಶ ಚೂಡಾಮಣಿಃ [೩೪]

(ಬಾಲ ರಾಮಾಯಣ - 10-41)

ರಘು ಕುಲಚಕ್ರವರ್ತಿಗಳ ಸಂಬಂಧಿ
ಮದನ ಕಲೆಯ ದೀಕ್ಷಾಗುರು
ಗೌರಾಂಗಿಯರ ಮೊಗದುಪಮೆಗೆ ವಿಖ್ಯಾತನೀ
ತಾರಾಂಗನೆಯರ ಪ್ರಿಯತಮನು
ದಾಕ್ಷಿಣಾತ್ಯ ತರುಣಿಯರ ಇದೀಗ ಬೆಳಗಿದ
ಹೊಳೆವ ದಂತದಂದದವನು
ಚಂಡೀಶನ ಶಿರೋರತ್ನವೆನಿಪ
ಉದಿತ ಚಂದ್ರಮನ ಸುಂದರಿಯೆ ನೋಡು ನೀನಲ್ಲಿ! [೩೪]

ಬಾಲ ರಾಮಾಯಣದ ಹತ್ತನೇ ಅಂಕದಲ್ಲಿ, ಪುಷ್ಪಕ ವಿಮಾನದಲ್ಲಿ ಕುಳಿತು, ಲಂಕೆಯಿಂದ ಅಯೋಧ್ಯೆಗೆ ಬರುತ್ತಿರುವಾಗ ರಾಮನು, ಸೀತೆಗೆ ಉದಯಿಸುತ್ತಿರುವ ಚಂದ್ರನನ್ನು ತೋರಿಸಿ ಈ ಮಾತುಗಳನ್ನು ಹೇಳುತ್ತಾನೆ.

ಚಂದ್ರನು ಸ್ವಭಾವ ಸಹಜ ಸೌಂದರ್ಯ ಸಂಪತ್ತಿನಿಂದ ಕೂಡಿರುವವನು. ಆದರೆ ಕವಿ ಚಂದ್ರನಿಗೆ ಬಳಸಿರುವ ಪರ್ಯಾಯ ವಾಚಕಗಳು (ಅಥವಾ ವಿಶೇಷಣಗಳು) ಸಹೃದಯರ ಹೃದಯಾಹ್ಲಾದಕ್ಕೆ ಕಾರಣವಾಗಿ ಅತಿಶಯವನ್ನು ಸೃಷ್ಟಿಸುತ್ತಾ ಪದಪೂರ್ವಾರ್ಧ ವಕ್ರತೆಯನ್ನು ಪೋಷಿಸುತ್ತವೆ. ಲಂಕಾಧಿಪತಿ ರಾವಣನನ್ನು ವಧಿಸಿದ ನಂತರ ಪುಷ್ಪಕ ವಿಮಾನದಲ್ಲಿ ಅಯೋಧ್ಯೆಗೆ ಹಿಂತಿರುಗುತ್ತಿರುವಾಗ, ಸೀತೆಯೊಂದಿಗೆ ಆತ್ಮೀಯವಾಗಿ ಸಂಭಾಷಿಸುತ್ತ ಹೇಳುತ್ತಾನೆ - ಹೇ ಸುಂದರಿ! ಚಂದ್ರನನ್ನು ನೋಡು ಅರ್ಥಾತ್ ಸೌಂದರ್ಯದಿಂದ ನನ್ನ ಮನಸ್ಸನ್ನಪಹರಿಸಿರುವ ಪ್ರಿಯೆ, ಸಮಸ್ತ ಲೋಕದ ಕಣ್ಣುಗಳಿಗೆ ಆನಂದವನ್ನುಂಟುಮಾಡುವ ಚಂದ್ರನ ಬಗ್ಗೆ ಯೋಚಿಸು. ಕಾರಣ ಸುಂದರವಾಗಿರುವವರು ಮಾತ್ರವೇ ಅತ್ಯಂತ ಸುಂದರವಾದ ದೃಶ್ಯಗಳ ಬಗ್ಗೆ ವಿಚಾರ ಮಾಡುವುದು ಅತ್ಯಂತ ಯುಕ್ತ. ರಘುವಂಶದ ರಾಜರುಗಳ ಸಂಬಂಧಿ ಇವನು ಎಂದು ಹೇಳುವ

ಮೂಲಕ ಚಂದ್ರನು ನಮ್ಮ ವಂಶಕ್ಕೆ ಹೊಸಬನಲ್ಲ; ಅಪರಿಚಿತನಲ್ಲ; ಹಾಗೆ ನೋಡಿದರೆ ಅವನು ನಮ್ಮ ಕುಟುಂಬದ ಸಂಬಂಧಿ. ಆದ್ದರಿಂದ ಅವನ ಕಡೆ ನೋಡಿ ಅವನಿಗೆ ಗೌರವ ತೋರು. ಬೇರೊಂದು ರೀತಿಯಿಂದಲೂ ಚಂದ್ರನ ವಿಷಯದಲ್ಲಿ ಗೌರವದ ಭಾವನೆ ಉಂಟಾಗುತ್ತದೆ. ಉಳಿದ ವಿಶೇಷಣಗಳು [ಮನ್ಮಥ ವ್ಯಾಪಾರದಲ್ಲಿ ದೀಕ್ಷಾ ಗುರು] ಕೂಡಾ ಚಂದ್ರನ ವಿಶಿಷ್ಟ ಸೌಂದರ್ಯ ವಿಭೂತಿಗೆ ಉತ್ಕೃಷ್ಟತೆಯನ್ನು ತಂದುಕೊಡುವುದರ ಬಗ್ಗೆಯೇ ತತ್ಪರವಾಗಿವೆ. ಪ್ರತಿಯೊಂದು ವಿಶೇಷಣವೂ ಪ್ರಸ್ತುತ ವಿಷಯವಾದ ಚಂದ್ರನ ಸೌಂದರ್ಯಕ್ಕೆ ಒಂದೊಂದು ಬೇರೆ ಬೇರೆ ಉತ್ಕರ್ಷವನ್ನು ಸೇರಿಸುವುದರಿಂದ ಅಷ್ಟೊಂದು ಪರ್ಯಾಯಗಳಿದ್ದಾಗ್ಯೂ ಯಾವುದೊಂದೂ ಪುನರುಕ್ತವೆನಿಸುವುದಿಲ್ಲ.

ತೃತೀಯ ಚರಣದಲ್ಲಿ (ಸದ್ಯೋಮಾರ್ಜಿತ ......) ವಿಶೇಷಣ ವಕ್ರತೆ ಇದೆ; ಪರ್ಯಾಯ ವಕ್ರತೆ ಅಲ್ಲ.

[ಟಿಪ್ಪಣಿ : ಮೂರನೇ ಚರಣದಲ್ಲಿ ವಿಶೇಷಣ ವಕ್ರತೆ ಉಳಿದವುಗಳಲ್ಲಿ ಪರ್ಯಾಯ ವಕ್ರತೆ ಎಂದಿದ್ದಾನೆ. 15ನೇ ಕಾರಿಕೆಯಲ್ಲಿ ಹೇಳಿರುವಂತೆ ವಿಶೇಷಣ ವಕ್ರತೆಯ ಸ್ವರೂಪ- ಎಲ್ಲಿ ವಿಶೇಷಣದ ಮಹಿಮೆಯಿಂದ ಕ್ರಿಯಾರೂಪ ಅಥವಾ ಕಾರಕರೂಪದ ವಸ್ತುವಿನ ರಮಣೀಯತೆ - ಹೊರಹೊಮ್ಮುತ್ತದೋ ಅಲ್ಲಿ ವಿಶೇಷಣ ವಕ್ರತೆ ಕಂಡುಬರುತ್ತದೆ. ಇಲ್ಲಿ ಮೂರನೇ ಚರಣ ಚಂದ್ರನಿಗೆ ಪರ್ಯಾಯವಾಗಿ ಬಳಕೆಯಾಗಿಲ್ಲ. ಅದು ಕೇವಲ ಚಂದ್ರನಿಗೆ ವಿಶೇಷಣವಾಗಿ - ಆಗ ತಾನೆ ಬೆಳಗಿದ ದಾಕ್ಷಿಣಾತ್ಯ ಸುಂದರಿಯರ ದಂತದ ಹಾಗೆ ಬೆಳ್ಳಗಿರುವ- ಎಂದು ಚಂದ್ರನ ಬಿಳುಪಿನ ವಿಶೇಷತೆಯನ್ನು ಹೇಳುತ್ತದೆ. ಆದ್ದರಿಂದ ಅದು ಪರ್ಯಾಯವಲ್ಲ, ಆದ್ದರಿಂದ ಇದರಿಂದ ಉಂಟಾಗಿರುವ ಚಮತ್ಕಾರ ವಿಶೇಷಣದ ವಕ್ರತೆಯೇ ಹೊರತು ಪರ್ಯಾಯ ವಕ್ರತೆಯದಲ್ಲ]

ಪದಪೂರ್ವಾರ್ಧ ವಕ್ರತೆಗೆ ಕಾರಣವಾಗಿರುವ ಪರ್ಯಾಯದ ಇನ್ನೊಂದು ಪ್ರಭೇದ - ಯಾವುದು ಅರ್ಥವನ್ನು ಅಲಂಕರಿಸಬಲ್ಲುದೋ ಅದು - ಅರ್ಥಾತ್ ಆ ಅಭಿಧೇಯ ರೂಪದ ವಸ್ತುವನ್ನು ಅಲಂಕರಿಸುವ ಸಾಮರ್ಥ್ಯವುಳ್ಳದ್ದು. ಹೇಗೆ? - ತಾನೇ ಅಥವಾ ಅದರ ವಿಶೇಷಣಗಳು ರಮ್ಯತೆಯ ಇತರೆ ಛಾಯೆಗಳನ್ನು ಪಡೆದುಕೊಳ್ಳುವುದರಿಂದ. ರಮ್ಯತೆಯ ಇತರೆ ಛಾಯೆಗಳೆಂದರೆ ಶ್ಲೇಷವೇ (ಶ್ಲಿಷ್ಟತೆಯೇ) ಮೊದಲಾದವುಗಳ ಸೌಂದರ್ಯ - ಅವುಗಳ ಸ್ಪರ್ಶದಿಂದ ಹೊಸದೊಂದು ಶೋಭೆಯೇ ಪ್ರತೀತವಾಗುತ್ತದೆ. ಯಾವ ವಿಧಾನದಲ್ಲಿ? ಸ್ವಯಂ ಹಾಗೂ ಅದರ ವಿಶೇಷಣಗಳಿಂದ (ಅಭಿಧೇಯವನ್ನು ಅಲಂಕೃತಗೊಳಿಸುವ ವಿಶೇಷಣ ರೂಪದ ಇತರೆ ವಸ್ತುಗಳಿಂದ) ಸಮರ್ಥವಾಗುತ್ತದೆ. ಈ ಕೆಳಗಿನದು ಪರ್ಯಾಯ ಶಬ್ದವೊಂದು ತನಗೆ ತಾನೇ ರಮ್ಯತೆಯ ವಿನೂತನ ಸ್ಪರ್ಶವನ್ನು ಪಡೆದುಕೊಳ್ಳುತ್ತಿರುವುದಕ್ಕೆ ಉದಾ

ಇತ್ಥಂ ಜಡೇ ಜಗತಿ ಕೋ ನು ಬೃಹತ್ಪ್ರಮಾಣ -
ಕರ್ಣಃ ಕರೀ ನನು ಭವೇದ್ ಧ್ವನಿತಸ್ಯ ಪಾತ್ರಮ್|
ಇತ್ಯಾಗತಂ ಝಟಿತಿ ಯೋಽಲಿನ ಮುನ್ಮಮಾಥ
ಮಾತಂಗ ಏವ ಕಿಮತಃ ಪರಮುಚ್ಯತೇಽಸೌ [೩೫] **[ಸುಭಾಷಿತಾವಲಿ - 628]**

ಈ ಜಡ ಜಗತ್ತಿನಲಿ ನನ್ನ ಸಂಗೀತಕ್ಕೆ
ಪಾತ್ರರಿನ್ನಾರು?
ದೊಡ್ಡಗಾತ್ರದ ಕಿವಿ, ಸೊಂಡಿಲನುಳ್ಳ ಆನೆಯಲ್ಲದೆ
ಎನುತ ಹತ್ತಿರ ಬಂದ ಭ್ರಮರವನು
ಕ್ಷಣದೊಳಪ್ಪಳಿಸಿ ಹಾಕಿತದು
ಎಷ್ಟಾದರು ಮಾತಂಗವಲ್ಲವೆ ಅದು?
ಅದಕಿಂತ ಬೇರೇನು ಹೇಳುವುದು? [೩೫]

ಈ ಸಂದರ್ಭದಲ್ಲಿ ಮಾತಂಗ ಶಬ್ದ ನೇರವಾಗಿ ಆನೆಗೆ ಮಾತ್ರ ಅನ್ವಯಿಸುತ್ತದೆ. ಆದರೆ ಶ್ಲೇಷ ವೃತ್ತಿಯ ಮೂಲಕ ಅದು ಚಂಡಾಲ (ಕಟುಕ) ಎಂಬ ಅರ್ಥದಲ್ಲಿ ಅಪ್ರಸ್ತುತ ವಸ್ತುವಿನ ಪ್ರತೀತಿ ಉಂಟುಮಾಡುತ್ತದೆ. ಹಾಗೆ ಉಂಟುಮಾಡುತ್ತ ರೂಪಕಾಲಂಕಾರದ ಛಾಯೆಯ ಸಂಸ್ಪರ್ಶದಿಂದ "ಗೌರ್ವಾಹೀಕ:"*ದಲ್ಲಿನ ಸಾದೃಶ್ಯದ ಮೇರೆಗೆ ಉಪಚಾರವು ಪ್ರವರ್ತಿಸಿ, ಪ್ರಸ್ತುತ ವಸ್ತುವಿನಲ್ಲಿ (ವಾರಣ) ಅಪ್ರಸ್ತುತ ವಸ್ತುವಿನ (ಚಂಡಾಲ) ಭಾವವನ್ನು ಆರೋಪಿಸುತ್ತ ಪರ್ಯಾಯ ವಕ್ರತೆಯನ್ನು ಪೋಷಿಸುತ್ತದೆ. ಕಾರಣ ಈ ರೀತಿಯ ಉದಾಹರಣೆಗಳಲ್ಲಿ ಪ್ರಸ್ತುತ (ಆನೆ) ಮತ್ತು ಅಪ್ರಸ್ತುತದ (ಚಂಡಾಲ) ಸಂಬಂಧವನ್ನು ಒಮ್ಮೆ ರೂಪಕಾಲಂಕಾರದ ಮೂಲಕವಾಗಿಯಾಗಲಿ (ಇದು ಅದೇ) ಅಥವಾ ಉಪಮಾಲಂಕಾರದ (ಇದು ಅದರಂತೆ) ಮೂಲಕವಾಗಿಯಾಗಲಿ ಅಭಿವ್ಯಕ್ತಿಸಲಾಗುವುದು.

ಇದನ್ನು ಧ್ವನಿವಾದಿಗಳು (ಆನಂದವರ್ಧನ) ಶಬ್ದಶಕ್ತಿಮೂಲ ಅನುರಣನ ರೂಪವ್ಯಂಗ್ಯದ ಪ್ರಭೇದವಾಗಿ ಬರುವ ಧ್ವನಿಗೆ (ಸಂಲಕ್ಷ್ಯಕ್ರಮಧ್ವನಿ) ಉದಾಹರಣೆಯಾಗಿ ಹೇಳಿದ್ದಾರೆ. ಇದರಲ್ಲಿ ಶಬ್ದಕ್ಕೆ ಒಂದಕ್ಕೊಂದಕ್ಕೆ ಸಂಬಂಧವಿರುವ ಎರಡು ಅರ್ಥಕೊಡುವ ಶ್ಲೇಷದ ಶಕ್ತಿ ಇರುತ್ತದೆ. [ರೂಪಕ ಮತ್ತು ಅದನ್ನು ಹೋಲುವ ಅನುರಣನ ಧ್ವನಿಯ ಹಾಗೆ ಇರುವಂಥದು] ಈಗ ಇನ್ನೊಂದು ಉದಾಹರಣೆ

ಇದೇ (ಪರ್ಯಾಯ ವಕ್ರತೆಯ ಮೂರನೇ ಪ್ರಭೇದವು ಧ್ವನಿವಾದಿಗಳ ಅಭಿಪ್ರಾಯದ ಮೇರೆಗೆ ಮೇಲೆ ಹೇಳಿದ ಉದಾಹರಣೆಯ ರೀತಿ ಪರ್ಯಾಯ ಪದದ ಪ್ರಯೋಗವಾದಾಗ) ಶಬ್ದ ಶಕ್ತಿಮೂಲ - ಅನುರಣನ ರೂಪ ವ್ಯಂಗ್ಯದ ಪದ ಧ್ವನಿಯ ವಿಷಯವಾಗುತ್ತದೆ. ಅದೇ ರೀತಿಯ ಅನೇಕ ರೀತಿಯ ಅನೇಕ ಪರ್ಯಾಯಗಳ ಪ್ರಯೋಗವಿದ್ದಲ್ಲಿ ವಾಕ್ಯಧ್ವನಿಯ ವಿಷಯವಾಗುತ್ತದೆ. ಉದಾ:

---

*ಇಲ್ಲಿ ಗೌರ್ವಾಹೀಕ : ನ್ಯಾಯದ ಪ್ರಸ್ತಾಪ ಮಾಡಲಾಗಿದೆ. ಹಿಂದೆ ವಾಹೀಕವೆಂಬ ಪ್ರದೇಶದ ಜನ ಮೂರ್ಖತೆಗೆ ಹೆಸರಾಗಿದ್ದರು. ಆ ಮೂರ್ಖತೆಯ ಅತಿಶಯತೆ ಸೂಚಿಸಲು ವಾಹಕದ ಜನರನ್ನು 'ಗೌ' ಅಥವಾ 'ದನ'ದ ಹಾಗೆ ಎಂದು ಹೇಳಲಾಗುತ್ತಿತ್ತು. ಹಸುವಿನಲ್ಲಿರುವ ಮಂದ ಬುದ್ಧಿಯ ಸಂಕೇತವಾಗಿ ಜನರನ್ನು ಅದಕ್ಕೆ ಹೋಲಿಸಲಾಗುತ್ತಿತ್ತು. ಕ್ರೌರ್ಯ ವರ್ತನೆಗೆ ಸಾದೃಶ್ಯರೂಪದಿಂದ ಆನೆಯನ್ನು (ಮಾತಂಗ) ಚಂಡಾಲನಿಗೆ ಹೋಲಿಸಲಾಗಿದೆ.

ಕುಸುಮಸಮಯಯುಗಮುಪಸಂಹರನ್ನುತ್ಫುಲ್ಲ
ಮಲ್ಲಿಕಾ ಧವಲಾಟ್ಟಹಾಸೋ ವ್ಯಜೃಂಭತ್
ಗ್ರೀಷ್ಮಾಭಿಧಾನೋಮಹಾಕಾಲಃ [೩೬] [ಧ್ವನ್ಯಾಲೋಕ - ಪುಟ 78]

ವಸಂತಯುಗವನುಪಸಂಹರಿಸುತೆ
ಅರಳು ಮಲ್ಲಿಗೆಯ ಧವಳಾಟ್ಟಹಾಸದಲಿ
ಗ್ರೀಷ್ಮ ಹೆಸರಿನ ಮಹಾಕಾಲನಡಿಯಿಟ್ಟನಿದೊ [೩೬]

ಅಥವಾ

ವೃತ್ತೇಽಸ್ಮಿನ್ ಮಹಾಪ್ರಲಯೇ ಧರಣೀ ಧಾರಣಾಯಾಧುನಾ ತ್ವಂ ಶೇಷಃ ಇತಿ [೩೭]

ಈ ಮಹಾಪ್ರಳಯ ಕಾಲದೊಳು ಭೂಮಂಡಲವ ರಕ್ಷಿಸಲು
ನೀ ಮಾತ್ರ ಶೇಷನಿರುವೆ [೩೭]

ಇಲ್ಲಿ ಯುಗ (ಕಾಲಮಾನ ಮತ್ತು ಎರಡು ತಿಂಗಳು)ವೇ ಮೊದಲಾದ ಶಬ್ದಗಳು ಪ್ರಸ್ತುತವನ್ನು ಸೂಚಿಸಲು ಪ್ರಯೋಗವಾಗಿವೆಯಾದರೂ ಪರೋಕ್ಷವಾಗಿ ಅಪ್ರಸ್ತುತ ವಸ್ತುವನ್ನು ಪ್ರತೀತಗೊಳಿಸುತ್ತ ವಿಶೇಷವಾದ ಕಾವ್ಯ ಚಮತ್ಕಾರವನ್ನುಂಟುಮಾಡುತ್ತವೆ. ಇದನ್ನು ಪ್ರತೀಯಮಾನ ಅಲಂಕಾರ ಎಂದು ಹೇಳಲಾಗಿದೆ (ಆನಂದವರ್ಧನ). ಪರ್ಯಾಯ ವಿಶೇಷಣಗಳು ಹೊಸ ರೀತಿಯ ಕಾವ್ಯಶೋಭೆಯನ್ನು ಪಡೆದುಕೊಳ್ಳುವುದಕ್ಕೆ ಉದಾ :

ಸುಸ್ನಿಗ್ಧ ದುಗ್ಧಧವಲೋರುದೃಶಂ ವಿದಗ್ಧ-
ಮಾಲೋಕ್ಯ ಯನ್ಮಧುರ ಮುಗ್ಧ ವಿಲಾಸದಿಗ್ಧಮ್
ಭಸ್ಮೀ ಚಕಾರ ಮದನಂ ನನು ಕಾಷ್ಠಮೇವ
ತನ್ನೂನಮೀಶ ಇತಿ ವೇತ್ತಿ ಪುರಂಧ್ರಿ ಲೋಕಃ [೩೮]

ಸ್ನೇಹತುಂಬಿದ ಹಾಲುಬಿಳುಪಿನ ಕಂಗಳ
ಮಧುರ ಮುಗ್ಧ ವಿಲಾಸಂಗಳ ಮೂರ್ತಿಯ
ಕಂಡೊಡನೆ ನಾರೀಲೋಕ ತಿಳಿದುದು
ಉರಿಗಣ್ಣಿಂದ ಹರನು ಮದನನ ಸುಟ್ಟುದಲ್ಲ
ಅದು ಬರಿಯ ಕಾಷ್ಠವಷ್ಟೆ ಎಂಬುದ [೩೮]

ಈ ಉದಾಹರಣೆಯಲ್ಲಿ 'ಕಾಷ್ಠ' ವೆಂಬ ಈ ಪದ ವಿಶೇಷಣ. ಇದು ವರ್ಣ್ಯಮಾನ ವಸ್ತು (=ನಾಯಕ)ವಿಗಿಂತ ಕಾಮದೇವನ ನೀರಸತೆಯನ್ನು ಪ್ರತಿಪಾದಿಸುತ್ತದೆ. ಹಾಗೆ ಪ್ರತಿಪಾದಿಸುತ್ತ, ರಮಣೀಯವೆನಿಸಿದ ಇತರೆ ಪ್ರಕಾರದ ಸೌಂದರ್ಯವನ್ನು ಅಭಿವ್ಯಕ್ತಿಸುವ 'ಶ್ಲೇಷ'ದ ಛಾಯೆಯಿಂದ ಸುಂದರ ರಚನೆಯ ಅರಿವನ್ನುಂಟುಮಾಡುತ್ತದೆ. ಇಲ್ಲಿ 'ಮಯನಫಲ' (ಮದನಫಲ)ವೆಂಬ ಹೆಸರಿನ ವೃಕ್ಷ ವಿಶೇಷ ರೂಪವು ಅಪ್ರಸ್ತುತ ವಸ್ತುವಿನ ಛಾಯಾ ಸ್ಪರ್ಶದಿಂದ ಅಪೂರ್ವ ಪರ್ಯಾಯ ವಕ್ರತೆಯನ್ನು ಪ್ರಕಟಪಡಿಸುತ್ತಿದೆ.

ಪದಪೂರ್ವಾರ್ಧ ವಕ್ರತೆಗೆ ಕಾರಣವಾಗುವ ಪರ್ಯಾಯದ ಇನ್ನೊಂದು ಪ್ರಕಾರವೆಂದರೆ ತನ್ನ ಕಾಂತಿಯ ಉತ್ಕರ್ಷದಿಂದ ಮನೋಹರವಾಗಿರುವಂಥದು. ಅಂದರೆ ತನ್ನ ಕಾಂತಿ ಅಥವಾ ಸುಕುಮಾರತೆಯ ಉತ್ಕರ್ಷದಿಂದ ಸಹೃದಯರಿಗೆ ಮನೋಹರವಾಗಿರುವಂಥದು. ಇದರ ಮಥಿತಾರ್ಥವೆಂದರೆ ವರ್ಣಿತವಾಗುತ್ತಿರುವ ವಸ್ತು ಇನ್ನೊಂದರ ಸೌಂದರ್ಯಕ್ಕೆ ಕಾರಣವಾಗುವಂತಿರುತ್ತದಾದರೂ ವಸ್ತುವನ್ನು ಪ್ರಸ್ತುತಪಡಿಸುವ ರೀತಿಯೇ ಸಹೃದಯರ ಗಮನವನ್ನು ಸೆಳೆಯುವಂತಿರುತ್ತದೆ.

ಉದಾ :

ಇತ್ಥಮುತ್ಕಃಮುತಿ ತಾಂಡವಲೀಲಾ ಪಂಡಿತಾಬ್ಧಿಲಹರೀ ಗುರುಪಾದೈಃ
ಉತ್ಥಿತಮ್ ವಿಷಮ ಕಾಂಡ ಕುಟುಂಬಸ್ಯಾಂಶುಭಿಃ ಸ್ಮರವತೀ ವಿರಹೋ.ಮಾಮ್ [೩೯]

ತಾಂಡವ ನೃತ್ಯ ಲೀಲೆಯಲಿ
ಸಾಗರದ ಅಲೆಗಳನು ಪರಿಣತಗೊಳಿಸುವ
ವಿಷಮ ಕಾಂಡ ಕುಟುಂಬನ
ಉದ್ದ ಕಿರಣಗಳ ಜೊತೆ ಜೊತೆಯಲಿ
ಪ್ರಿಯತಮೆಯನಗಲಿರುವ ನನ್ನ ವ್ಯಥೆಯು
ಎತ್ತರೆತ್ತರಕೆ ಏರಿಹುದು [೩೯]

ಇಲ್ಲಿ ಚಂದ್ರನಿಗೆ ಪರ್ಯಾಯವಾಗಿ "ವಿಷಮ ಕಾಂಡ ಕುಟುಂಬ" ಎಂಬ ಶಬ್ದವನ್ನು ನಿಯೋಜಿಸಿದ್ದಾನೆ. ತನ್ನ ಪ್ರಿಯತಮೆಯ ವಿರಹದಿಂದ ವ್ಯಾಕುಲಗೊಂಡ ಹೃದಯವುಳ್ಳ ಚಂದ್ರೋದಯ ದ್ವೇಷಿಯೊಬ್ಬನ ಬಾಯಲ್ಲಿ ಈ ಮಾತು ಅತ್ಯಂತ ಉಚಿತವೆನಿಸುತ್ತದೆ. ಈ ಶಬ್ದ ಪ್ರಸಿದ್ಧವಲ್ಲದಿದ್ದರೂ ಪ್ರಸ್ತುತ ಸಂದರ್ಭದಲ್ಲಿ ಸಮುಚಿತವಾದ ಪರ್ಯಾಯವನ್ನಾಗಿ ಮಾಡಲಾಗಿದೆ. ಮೊತ್ತ ಮೊದಲ ಬಾರಿಗೆ ಯಶಸ್ವಿ ಪರ್ಯಾಯವಾಗಿ ಪ್ರಯೋಗವಾಗಿರುವ ಕಾರಣದಿಂದ, ಸಹೃದಯನಿಗೆ ಒಮ್ಮೆಲೆ ಹಿಡಿಸುತ್ತದೆ ಮತ್ತು ಆನಂದ ಉಂಟುಮಾಡುತ್ತದೆ. ಆದರೆ ವಿಶೇಷ ಕಾಂತಿಯಿಂದ ಮತ್ತು ಅದರ ಸ್ವೋಪಜ್ಞತೆಯಿಂದ ಹಾಗೂ ಸಹಜ ಸುಕುಮಾರತೆಯ ರಮಣೀಯತೆಯಿಂದ ಕವಿಗಳು ಉಳಿದೆಲ್ಲ ಪರ್ಯಾಯಗಳನ್ನು ಪರಿತ್ಯಜಿಸಿ ಈ ಪರ್ಯಾಯ ವಾಚಕಗಳನ್ನು ಬಳಸಲು ಬಯಸುತ್ತಾರೆ. ಉದಾ : 'ಕೃಷ್ಣಕುಟಿಲಕೇಶಿ' ಎಂದು ಹೇಳುವ ಬದಲು ಅವರು "ಯಮುನಾಕಲ್ಲೋಲ ವಕ್ರಾಲಕಾ' ಎಂದು ಹೇಳಲಿಷ್ಟಪಡುತ್ತಾರೆ ಅದೇ ರೀತಿ -

'ಗೌರಾಂಗಿ ವದನೋಪಮಾ ಪರಿಚಿತ'ದಲ್ಲಿ ಸ್ತ್ರೀ ವಾಚಕವಾಗಿ ಅನೇಕ ಪರ್ಯಾಯಗಳಿದ್ದಾಗ್ಯೂ ಅವುಗಳಲ್ಲಿ ಗೌರಾಂಗೀ ಎಂಬ ಅಭಿಧಾನ ಅತ್ಯಂತ ರಮಣೀಯವಾದ್ದು.

ಪದಪೂರ್ವಾರ್ಧ ವಕ್ರತೆಯ ಪರ್ಯಾಯದ ಇನ್ನೊಂದು ಪ್ರಕಾರವೆಂದರೆ, ಅಸಂಭಾವ್ಯ ಅರ್ಥಕ್ಕೆ ಪಾತ್ರವಾಗುವಂಥವುಗಳನ್ನು ಹೊಂದಿರುವುದು. ವರ್ಣ್ಯಮಾನ ವಸ್ತುವಿನ ಅಸಂಭಾವ್ಯ ರಚನೆಯಲ್ಲಿ ವಿಶಿಷ್ಟವಾದೊಂದು ಚಮತ್ಕಾರ ಇರುವಲ್ಲಿ; ನಿಯತವಾದೊಂದು ಪರ್ಯಾಯವು

ಅಲ್ಲಿ ಮಹತ್ವಪೂರ್ಣವೆನ್ನಿಸಿದಾಗ - ಉದಾ :

ಅಲಂ ಮಹೀಪಾಲ ತವ ಶ್ರಮೇಣ
ಪ್ರಯುಕ್ತಮಪ್ಯಸ್ತ್ರಮಿತೋ ವೃಥಾ ಸ್ಯಾತ್|
ನ ಪಾದಪೋನ್ಮೂಲನ ಶಕ್ತಿ ರಂಹಃ
ಶಿಲೋಚ್ಚಯೇ ಮೂರ್ಛತಿ ಮಾರುತಸ್ಯ [೪೦] [ರಘು -2-34]

ಬೇಡ ನಿನ್ನೀ ಶ್ರಮವು ಎಲೆ ಮಹೀಪಾಲ
ಅಸ್ತ್ರವನು ಪ್ರಯೋಗಿಸಿದರೂ
ವ್ಯರ್ಥ ತಾನದು ಕೇಳು
ಮರವ ಬುಡಮೇಲು ಮಾಡುವ ಮಾರುತನ ವೇಗವದು
ಬೆಟ್ಟದ ಮೇಲೆ ಮೂರ್ಛೆ ಹೋಗುವುದು ತಾನು [೪೦]

[ರಘುವಂಶ ಕಾವ್ಯದಲ್ಲಿ ಮಹಾರಾಜ ದಿಲೀಪನು ತನ್ನ ಗುರುವಿನ ಹಸುವನ್ನು ರಕ್ಷಿಸುವ ಸಲುವಾಗಿ ಬತ್ತಳಿಕೆಯಿಂದ ಬಾಣ ಸೆಳೆದುಕೊಳ್ಳಲು ಕೈ ಹಾಕುತ್ತಾನೆ. ಅದು ಅಲ್ಲೇ ಹಿಡಿದುಕೊಂಡು ಬಿಡುತ್ತದೆ. ಆಗ ಸಿಂಹವು ರಾಜನಿಗೆ ಮೇಲಿನಂತೆ ಹೇಳುತ್ತದೆ]

ಇಲ್ಲಿ ರಾಜನಿಗೆ ಪರ್ಯಾಯವಾಗಿ ಬಳಕೆಯಾಗಿರುವ 'ಮಹೀಪಾಲ' ಶಬ್ದವು ಮಹತ್ವಪೂರ್ಣವಾದುದು. ಸಕಲ ಭೂಮಂಡಲವನ್ನು ರಕ್ಷಿಸುವ ಸಾಮರ್ಥ್ಯದ ಪರಾಕ್ರಮವುಳ್ಳ ಮಹಾರಾಜ ಎಂದು ಹೇಳಿ, ಅದೇ ಸಮಯಕ್ಕೆ ವೈದೃಶ್ಯದಿಂದ ಎಲ್ಲ ವಿಧದಲ್ಲೂ ರಕ್ಷಿಸಬೇಕಾದ ಅವನ ಗುರುವಿನ ಗೋವನ್ನು, ಒಂದು ಯಃಕಶ್ಚಿತ್ ಪ್ರಾಣಿಯನ್ನು ರಕ್ಷಿಸುವಲ್ಲಿ ಅವನ ಅಸಾಮರ್ಥ್ಯವನ್ನು ಪ್ರಬಲವಾಗಿ ಪ್ರಸ್ತುತಪಡಿಸುತ್ತದೆ. ಇದೊಂದು ಸ್ವಪ್ನದಲ್ಲೂ ಸಂಭವಿಸಲಾಗದ ವಿಚಾರ ಹಾಗೂ ಇದು ರಾಜನಿಗೆ ಪರ್ಯಾಯವಾಗಿ ಬಳಕೆಯಾಗಿರುವ 'ಮಹೀಪಾಲ' ಶಬ್ದದಿಂದ ಸೂಚಿತವಾಗಿದೆ. ಈಗ ಇನ್ನೊಂದು ಉದಾಹರಣೆ :

ಭೂತಾನು ಕಂಪಾ ತವ ಚೇದಿಯಂ ಗೌ –
ರೇಕಾ ಭವೇತ್ ಸ್ವಸ್ತಿಮತೀ ತ್ವದಂತೇ|
ಜೀವನ್ ಪುನಃ ಶಶ್ವದುಪಪ್ಲವೇಭ್ಯಃ
ಪ್ರಜಾಃ ಪ್ರಜಾನಾಥ ಪಿತೇವ ಪಾಸಿ [೪೧] [ರಘುವಂಶ-2-34]

ಭೂತಾನುಕಂಪೆಗೋಸುಗ ನೀನಳಿದೆಯಾದೊಡೆ
ನಿನ್ನಳಿವಿನಿಂದುಳಿವುದಿದೊಂದು ತುರುಮಾತ್ರ
ಹೇ ಪ್ರಜೆಗಳೊಡೆಯನೆ ನೀನುಳಿದೆಯಾದೊಡೆ
ವಿಪತ್ತಿನಿಂ ಪ್ರಜೆಗಳನು ಪಿತನಂತೆ ಪೊರೆವೆ ನೀನು

ಪ್ರಾಣಿಗಳ ಮೇಲಿನ ಅನುಕಂಪೆಯ ಕಾರಣದಿಂದ ನೀನು ಪ್ರಾಣತ್ಯಾಗ ಮಾಡುತ್ತಿರುವಿ ಯೆಂದಾದರೆ, ಅದು ಸರಿಯಲ್ಲ. ಕಾರಣ ನಿನ್ನ ಸಾವಿನಿಂದ ಕೇವಲ ಈ ಗೋವಿಗೆ ಮಾತ್ರ

ಒಳಿತಾಗುತ್ತದೆ. ಹೀಗಾಗಿ ಈ ಮೂರು ವಿಚಾರಗಳು ತಿರಸ್ಕರಣೀಯವಾದವು. ಒಂದು ವೇಳೆ ನೀನು ಜೀವಂತವಾಗಿದ್ದರೆ, ಹೇ ಪ್ರಜಾನಾಥನೆ ಇಡೀ ಭೂಮಂಡಲದಲ್ಲಿರುವ ಜೀವಿಗಳನ್ನೆಲ್ಲ ತಂದೆಯಂತೆ ಸದಾ ಎಲ್ಲ ಉಪದ್ರವಗಳಿಂದ ರಕ್ಷಿಸಬಲ್ಲೆ. 'ತಂದೆಯಂತೆ' ಎಂಬ ಉಪಮೆ ರಾಜನ ವಿಷಯಕ್ಕಿರುವ ಅನಾದರವನ್ನು ಇನ್ನಷ್ಟು ಗಾಢವಾಗಿಸುತ್ತದೆ.

ಹೀಗೆ ಈ ವಾಕ್ಯದ ಅರ್ಥ ಸುಸ್ಪಷ್ಟವಾಗಿ ಹೊಂದಿಕೆಯಾಗುತ್ತದಾದರೂ ಇಲ್ಲಿ ಮೇಲುನೋಟದ ಅರ್ಥವಲ್ಲದೆ ಒಂದು ಸೂಚ್ಯಾರ್ಥವೂ ಇದೆ. ಯಾರೇ ಆಗಲಿ ಪ್ರಜಾನಾಥನಾಗಿದ್ದಾನೆಂದರೆ, ಎಲ್ಲರನ್ನೂ ಸದಾಕಾಲ ರಕ್ಷಿಸುವ ಕರ್ತವ್ಯದ ಹೊಣೆ ಹೊತ್ತಿದ್ದಾನೆಂದೇ ಅರ್ಥ. ಹಾಗೆ ಪ್ರಜೆಗಳ ರಕ್ಷಣೆ ಮಾಡದಿರುವುದು ಅತ್ಯಂತ ಅಸಂಭವ. ಕವಿ ಪರ್ಯಾಯ ಶಬ್ದವನ್ನು ಬಳಸಿರುವುದರ ಇಂಗಿತ ಇದೇ ಆಗಿದೆ. ಕಂಡ ಹಾಗೆಯೇ, ನಿನ್ನ ಪೂಜ್ಯಗುರುವಿನ ಯಜ್ಞದ ಹಸುವೊಂದು ಸಿಂಹದ ಬಾಯಿಗೆ ಆಹಾರವಾಗಿ ಹೋಗುತ್ತಿದ್ದರೂ ಅದನ್ನು ರಕ್ಷಿಸುವುದನ್ನು ಬಿಟ್ಟು, ನಿನ್ನ ಪ್ರಾಣವನ್ನು ರಕ್ಷಿಸಿಕೊಳ್ಳುವುದರಲ್ಲಿ ನೀನು ಆಸಕ್ತನಾಗಿರುವೆ. ಒಂದು ಪ್ರಾಣಿಯನ್ನು ರಕ್ಷಿಸದವನು ಯಾವ ಕಾಲಕ್ಕೂ ಪ್ರಜೆಗಳನ್ನೆಲ್ಲ ಸಂರಕ್ಷಿಸುವ ಕರ್ತವ್ಯವನ್ನು ನಿಭಾಯಿಸಬಲ್ಲನೆಂಬುದು ಅತ್ಯಂತ ಅಸಂಭವ ಎಂಬ ಅರ್ಥ ಪ್ರಮಾಣಗಳಿಂದ ಸಿದ್ಧವಾಗುತ್ತದೆ. ಹೇಗೂ ನಾಣ್ನುಡಿ ಇದ್ದೇ ಇದೆ

> "ಪ್ರಮಾಣವತ್ವಾದಾಯಾತಃ ಪ್ರವಾಹಃ ಕೇನ ವಾರ್ಯತೇ" [೪೨]
>
> "ಪ್ರವಾಹ ಸದೃಶ ಪ್ರಮಾಣಗಳಿಂದ ಸಿದ್ಧವಾದ ನಿರ್ಣಯವನ್ನು
> ಯಾರು ತಾನೆ ತಡೆಯಬಲ್ಲರು?" [೪೨]

ಇಲ್ಲಿ ಅಭಿಧಾನಾರ್ಥ ಮತ್ತು ಪ್ರತೀತವಾಗುವ ಅರ್ಥಗಳೆರಡನ್ನೂ ಪರಸ್ಪರ ಪ್ರತಿಯೋಗಿತವಾದ ಉದಾಹರಣೆ ಮತ್ತು ಪ್ರತ್ಯುದಾಹರಣೆಗಳ ಮೂಲಕ ತಿಳಿಯಬೇಕು.

ಪದಪೂರ್ವಾರ್ಧ ವಕ್ರತೆಯ ಮುಂದಿನ ಪರ್ಯಾಯವೆಂದರೆ, ಅಲಂಕಾರೋಪ ಸಂಸ್ಕಾರದಿಂದ ಮನೋಹರವಾದ ರಚನೆಯನ್ನೊಳಗೊಂಡುದು. ಇಲ್ಲಿ ಅಲಂಕಾರೋಪ ಸಂಸ್ಕಾರ ಶಬ್ದದಲ್ಲಿ ತೃತೀಯಾ ಸಮಾಸ ಮತ್ತು ಷಷ್ಠೀ ಸಮಾಸಗಳನ್ನು ಮಾಡಬೇಕು. ಇದರಿಂದ ಎರಡು ಅರ್ಥಗಳು ಹೊರಡುತ್ತವೆ. ಒಂದು ರೂಪಕಾದಿ ಅಲಂಕಾರಗಳ ಕೌಶಲ ಪೂರ್ಣ ಬಳಕೆಯಿಂದ ಸಾಧಿಸಲಾಗುವ ಬೇರೆಯದೇ ಆದೊಂದು ಹೃದಯ ರಂಜಕವಾದ ಶೋಭೆ. ಇನ್ನೊಂದು ಅರ್ಥವು (ಷಷ್ಠೀ ತತ್ಪುರುಷದ ಪ್ರಕಾರ) ಉತ್ಪ್ರೇಕ್ಷಾದಿ ಅಲಂಕಾರಗಳ ಉಪಸಂಸ್ಕಾರದಿಂದ ಉಂಟಾಗುವ ಶೋಭೆ. [ರೂಪಕವೇ ಮೊದಲಾದ ಅಲಂಕಾರಗಳಿಗೆ ಕಲಾತ್ಮಕ ಶೋಭೆಯನ್ನು ತಂದು ಕೊಡುವುದು] ಉದಾ :

> ತೃತೀಯಾ ಸಮಾಸದ ಸೌಂದರ್ಯಕ್ಕೆ
> ಯೋ ಲೀಲಾ ತಾಲವೃಂತೋ ರಹಸಿ ನಿರುಪಧಿರ್ಯಶ್ಚ ಕೇಲೀ ಪ್ರದೀಪಃ
> ಕೋಪ ಕ್ರೀಡಾಸು ಯೋಽಸ್ತ್ರಂ ದಶನಕೃತರುಜೋ ಯೋಽಧರಸ್ಯೈಕಸೇಕಃ |

ಆ ಕಲ್ಪೇ ದರ್ಪಣಂ ಯಃ ಶ್ರಮ ಶಯನ ವಿಧೌ ಯಶ್ಚ ಗಂಡೋಪಧಾನಂ
ದೇವ್ಯಾಃ ಸ ವ್ಯಾಪದಂ ವೋ ಹರತು ಹರಜಟಾ ಕಂದಲೀಪುಷ್ಪಮಿಂದುಃ [೪೩]

ಯಾರು ದೇವಿ ಪಾರ್ವತಿಯ ನೆಚ್ಚಿನ ಬೀಸಣಿಗೆಯೊ
ಅವಳ ಏಕಾಂತದ ನಂದಾದೀಪವೊ
ಪ್ರಣಯ ಕಲಹದೊಳವಳು ಬಳಸುವ ಅಸ್ತ್ರವೊ
ಆಕೆಯ ತುಟಿಯ ಮೇಲಣ ದಂತಕ್ಷತದ ತಣ್ಪೊ
ತನ್ನನು ಅಲಂಕರಿಪ ಎಡೆಯೊಳು ದರ್ಪಣವೊ
ಆಕೆ ಆಯಾಸದೊಳೊರಗುವಂದು
ಕಪೋಲದೆಡೆಯ ತಲೆಗಿಂಬು ತಾನಾಗಿರ್ಪ
ಹರ ಜಟೆಯ ಮೇಲಿರ್ಪ
ಬಿಳಿಯ ಕಂದಲಿಪುಷ್ಪ ತಾನೆನಿಸಿರ್ಪ
ಚಂದ್ರಮನು ನಿಮ್ಮ ಕಷ್ಟಗಳನೆಲ್ಲ ಪರಿಹರಿಸಲಿ [೪೩]

ಇಲ್ಲಿ ತಾದಾತ್ಮ್ಯಮೂಲ ಲಕ್ಷಣದ ಮೂಲಕ ಚಂದ್ರನ ಹಾಗೂ ಬೀಸಣಿಗೆ, ದೀಪ, ದರ್ಪಣ, ತಲೆಗಿಂಬು ಮುಂತಾದ ವಸ್ತುಗಳ ನಡುವೆ ವಿನ್ಯಾಸಗೊಳಿಸಲಾದ ರೂಪಕಾಲಂಕಾರ ವಿನ್ಯಾಸವು ಎಲ್ಲ ಪರ್ಯಾಯಗಳ ಸೌಂದರ್ಯವನ್ನು ಅತಿಶಯವಾಗಿ ಸಾಧಿಸಿದೆ.

ಇನ್ನು ಮುಂದೆ ಷಷ್ಠೀ ಸಮಾಸದ ಉದಾಹರಣೆಯನ್ನು ನೋಡಬಹುದು.

ದೇವಿ ತ್ವನ್ಮುಖ ಪಂಕಜೇನ ಶಶಿನಃ ಶೋಭಾತಿರಸ್ಕಾರಿಣಾ
ಪಶ್ಯಾಬ್ಜಾನಿ ವಿನಿರ್ಜಿತಾನಿ ಸಹಸಾ ಗಚ್ಛಂತಿ ವಿಚ್ಛಾಯತಾಮ್ [೪೪]

[ರತ್ನಾವಳಿ 1-25]

ಶಶಿಯ ಕಾಂತಿಯನು ಕಡೆಗಣಿಪ
ನಿನ್ನ ಮೊಗದಾವರೆಯಿಂದ
ಪರಾಜಿತಗೊಂಡೀ ಕಮಲಗಳು
ಇದಕಿದ್ದೊಲೆ ಕಾಂತಿಯನು ನೀಗಿ ಕೊಂಡಿಹವು [೪೪]

ಈ ಉದಾಹರಣೆಯಲ್ಲಿ - ಪ್ರಿಯತಮೆಯ ಮನವೊಲಿಸುವುದರಲ್ಲಿ ತೊಡಗಿರುವ ನಾಯಕನು, ಅತ್ಯಂತ ಚತುರತೆಯಿಂದ – ಸಂಜೆಯ ವೇಳೆಗೆ ಸ್ವಾಭಾವಿಕವಾಗಿಯೇ ಕಮಲಗಳು ಕಾಂತಿ ಹೀನವಾಗುವ ಪ್ರಕೃತಿವ್ಯಾಪಾರವನ್ನು, ಸೌಂದರ್ಯದಲ್ಲಿ ತನ್ನ ಪ್ರಿಯತಮೆಯ ಮುಖದೊಂದಿಗೆ ಹೋಲಿಸಿದ ಕಾರಣದಿಂದ ಅವು ಸೋಲು ಅನುಭವಿಸಿದ್ದು ಎಂದು ಪ್ರತೀಯಮಾನ ಉತ್ಪ್ರೇಕ್ಷಾಲಂಕಾರದ ಮೂಲಕ ಪ್ರತಿಪಾದಿಸಿದ್ದಾನೆ. ಇದು ನೂತನವೂ ಹೌದು; ಅತ್ಯಂತ ಪರಿಣಾಮಕಾರಿಯೂ ಹೌದು. ಕಾರಣ ಎಲ್ಲ ಕಮಲದ ಹೂಗಳೂ ಚಂದ್ರನ ಕಾಂತಿಯ ಎದುರಿನಲ್ಲಿ ಕಾಂತಿಗುಂದುತ್ತವೆ. ಆದರೆ ಅದೇ ಚಂದ್ರನ ಕಾಂತಿಯನ್ನೂ ಮೀರಿಸಿರುವ ನಿನ್ನ ಮುಖ ಕಮಲವು ನಿಶ್ಚಿತವಾಗಿಯೂ ಕಮಲಗಳನ್ನೂ ಸೋಲಿಸಿದೆ. ಹಾಗಾಗಿ ಅವು ಬಣ್ಣಗೆಟ್ಟು

ಕಾಂತಿ ಹೀನವಾಗಿವೆ. ಇದು ನ್ಯಾಯಯುತವಾಗಿಯೇ ಇದೆ. ಹೀಗೆ ಇಲ್ಲಿ ಪ್ರತೀಯಮಾನವಾಗುವ ಉತ್ಪ್ರೇಕ್ಷಾಲಂಕಾರದ ಸೌಂದರ್ಯವು ಅಧಿಕಗೊಂಡಿದೆ.

ಹೀಗೆ ಪರ್ಯಾಯ ವಕ್ರತೆಯನ್ನು ವಿಚಾರಿಸಿದ ನಂತರ, ಕ್ರಮ ಪ್ರಕಾರವಾಗಿ ಉಪಚಾರ ವಕ್ರತೆಯನ್ನು ಕೈಗೆತ್ತಿಕೊಳ್ಳಲಾಗುವುದು.

ಯತ್ರ ದೂರಾಂತರೇಽನ್ಯಸ್ಮಾತ್ಸಾಮಾನ್ಯಮುಪಚರ್ಯತೇ
ಲೇಶೇನಾಪಿ ಭವತ್ ಕಾಂಚಿದ್ವಕ್ತುಮುದ್ರಿಕ್ತ ವೃತ್ತಿತಾಮ್[13]

ಯನ್ಮೂಲಾ ಸರಸೋಲ್ಲೇಖಾ ರೂಪಕಾದಿರಲಂಕೃತಿಃ|
ಉಪಚಾರ ಪ್ರಧಾನಾಸೌ ವಕ್ರತಾ ಕಾಚಿದುಚ್ಯತೇ[14]

ಎರಡೂ ಒಂದರಿಂದೊಂದು ಪರಸ್ಪರ ದೂರವಾಗಿದ್ದರೂ ಅವರೆಡಕ್ಕೂ ಇರುವ ಹೋಲಿಕೆಯು ತೀರಾ ಹತ್ತಿರವಾದ್ದೆಂದು ತೋರಿಸಲು ಸಾಮಾನ್ಯ ಧರ್ಮವೊಂದು, ಎಷ್ಟೇ ಕಿಂಚಿತ್ ಪ್ರಮಾಣದ್ದೇ ಆಗಿದ್ದರೂ ಅದನ್ನು ಅತಿಶಯವಾಗಿ ಆರೋಪಿಸುವುದು ಉಪಚಾರ* ವಕ್ರತೆ [13]

ರೂಪಕಾದಿ ಅಲಂಕಾರಗಳ ಅಡಿಯಲ್ಲಿ ಬರುವ ಅನೇಕ ಸರಸ ಅಲಂಕಾರಗಳ ತಳಹದಿಯೇ ಅದಾಗಿದ್ದು, ಅದನ್ನು ಉಪಚಾರ ವಕ್ರತೆ ಎಂದು ಕರೆಯಲಾಗುವುದು [14]

ಇದನ್ನು ಅಪೂರ್ವ ವಕ್ರತೆ ಎಂದು ಕರೆಯಲಾಗುತ್ತದೆ. ಅದು ಎಂಥದೆಂದರೆ, ಉಪಚಾರವು ಪ್ರಧಾನವಾದ ವಕ್ರತೆ. ಆದ್ದರಿಂದ ಉಪಚಾರತೆ. ಸಾಧಾರಣ ಧರ್ಮದ ಸಮ್ಯಕ್ ಆರೋಪವೇ ಇದರಲ್ಲಿ ಪ್ರಧಾನ. ಯಾವುದಾದರೊಂದು ಉದಾಹರಣೆಯಲ್ಲಿ ವರ್ಣಿತವಾಗುವ ವಸ್ತು ಮತ್ತು ಹೋಲಿಸಲಾಗುವ ವಸ್ತು (ವಿವಕ್ಷಿತ)ಗಳೆರಡೂ ವಾಸ್ತವವಾಗಿ ದೂರವಿದ್ದಾಗ, ವಿಶೇಷ ಉದ್ದೇಶದ ಸಲುವಾಗಿ ಅವರೆಡರ ನಡುವೆ ಸಾಮಾನ್ಯತೆಯನ್ನು ಆರೋಪಿಸಬಹುದು. ಉಪಚಾರ ವಕ್ರತೆಯ ಮಥಿತಾರ್ಥ ಇದೇ. ಇದರ ಮೇಲೆ ಪೂರ್ವಪಕ್ಷದವರು ಹೀಗೆ ವಾದಿಸಬಹುದು-ವರ್ಣಿಸಲಾಗುವ ವಸ್ತುವಿಗೂ ವಿವಕ್ಷಿತಕ್ಕೂ ನಡುವೆ ಇರುತ್ತದೆಂದು ಹೇಳಲಾಗುವ ಅಂತರ (ವ್ಯವಧಾನ) ಅದು-ದೇಶ ವಿಹಿತವಾಗಬಹುದು ಅಥವಾ ಕಾಲವಿಹಿತವಾಗಬಹುದು - ಎರಡೂ ಅಸಂಭವ. ವರ್ಣ್ಯಮಾನ ವಸ್ತು ಅಮೂರ್ತವಾದ್ದರಿಂದ, ದೇಶವಿಹಿತ ಆಗಲು ಸಾಧ್ಯವಿಲ್ಲ. ದೇಶವಿಹಿತ ವ್ಯವಧಾನ (ದೇಶಗತ ಅಂತರ) ಕೇವಲ ಮೂರ್ತ ವಸ್ತುಗಳಲ್ಲಿ ಆಗುತ್ತದೆ. ಕಾಲಕೃತ (ಕಾಲವಿಹಿತ) ವ್ಯವಧಾನ ಕ್ರಿಯಾವಿಷಯಕವಾದ್ದರಿಂದ ಅದೂ ಸಂಭವವಲ್ಲ. ವರ್ಣ್ಯಮಾನ ವಸ್ತುವಿನಲ್ಲಿ ಕ್ರಿಯೆ ಇರುವುದೇ ಇಲ್ಲ. ಆದ್ದರಿಂದ ವರ್ಣ್ಯಮಾನ ವಸ್ತುವಿನಲ್ಲಿ ವ್ಯವಧಾನ (ಅಂತರ) ಇರುತ್ತದೆಂಬುದು ಸರಿಯಲ್ಲ.

---

* ಉಪಚರಣವೆಂದರೆ ಜೊತೆಜೊತೆಯಲ್ಲಿ ಗಮನ. ಅಂದರೆ ಎರಡೂ ಗೌಣ ರೂಪ ತಾಳುವುದು. ಕಾರಣ ಯಾವುದನ್ನು ಗಮನಿಸಲಾಗುವುದೋ ಅದು ಪ್ರಧಾನ. ಅದರ ಜೊತೆ ಜೊತೆಯಲ್ಲಿ ಸಾಗುವುದು ಗೌಣ. ಅದೇ ರೀತಿ ಶಬ್ದದ ಸಂಕೇತಿತ ಅರ್ಥ ಪ್ರಧಾನ, ಅದರ ಜೊತೆ ಜೊತೆಯಲ್ಲಿ ಪ್ರತೀತವಾಗುವ ಅರ್ಥಗೌಣ. ಇದೇ ಗೌಣತೆಯನ್ನು ಅಥವಾ ಅಮುಖ್ಯತೆಯನ್ನು ಉಪಚಾರವೆಂದು ಕರೆಯಲಾಗುವುದು.

ಹಾಗೆ ನೋಡಿದರೆ ಈ ಆಕ್ಷೇಪ ಒಂದು ರೀತಿಯಲ್ಲಿ ಸರಿಯೇ. ಆದರೆ 'ದೂರಾಂತರ' ಶಬ್ದ ಮುಖ್ಯವಾಗಿ ದೇಶ ಕಾಲ ವಿಷಯಕವಾದ ವಿಪ್ರಕರ್ಷ ಅರ್ಥಾತ್ 'ದೂರ' ಅರ್ಥದ ಪ್ರತಿಪಾದಕವಾಗಿದ್ದರೂ ಸೂಚ್ಯಾರ್ಥದಲ್ಲಿ (ಉಪಚಾರಾರ್ಥ) ಸ್ವಭಾವಗಳ ವಿಪ್ರಕರ್ಷ ಎಂದು ತೆಗೆದುಕೊಳ್ಳಬೇಕೇ ಹೊರತು, ದೇಶವಿಹಿತ ಅಥವಾ ಕಾಲವಿಹಿತ ದೂರ ಎಂದು ಅಕ್ಷರಶಃ ಅಲ್ಲ. ಸ್ವಭಾವಗಳ ವಿರುದ್ಧ ಧರ್ಮವೆಂಬುದು ವಿರುದ್ಧ ಸ್ವಭಾವಗಳನ್ನು ಹೊಂದಿರುವ ವಸ್ತುಗಳಿಗೆ ಧರ್ಮಗಳನ್ನು ಆರೋಪಿಸುವುದು, ಉದಾಹರಣೆಗೆ ಮೂರ್ತತೆ ಅಮೂರ್ತತೆಯಿಂದ ದೂರವಿರುವುದು, ದ್ರವರೂಪ ಘನರೂಪದಿಂದ ದೂರವಿರುವುದು, ಚೇತನವು ಅಚೇತನದಿಂದ ದೂರವಿರುವುದು. ಹಾಗಾದರೆ ಆ ಸಾಮಾನ್ಯತ್ವದ ಆರೋಪ ಹೇಗಿರುತ್ತದೆ? ಅದು ಅತ್ಯಲ್ಪ ಪ್ರಮಾಣದಲ್ಲಿ ಇರುತ್ತದೆ. ಕವಿ ಪ್ರತಿಭೆಯ ಅತಿಶಯದ ಹೊಳಹನ್ನು ಅಭಿವ್ಯಕ್ತಿಸುವುದೇ ಅದರ ಉದ್ದೇಶ

ಉದಾ :

"ಸ್ನಿಗ್ಧ ಶ್ಯಾಮಲ ಕಾಂತಿಲಿಪ್ತ ವಿಯತಃ" [೪೫] -2-27ರಲ್ಲಿ

ಇಲ್ಲಿ ಕವಿಯು ಆಲಂಕಾರಿಕವಾಗಿ "ಆಕಾಶವು ಸ್ನಿಗ್ಧ ಶ್ಯಾಮಲ ಕಾಂತಿಯಿಂದ ಬಳಿಯಲ್ಪಟ್ಟಿತು" ಎಂದು ವರ್ಣಿಸಿದ್ದಾನೆ. ಅಚೇತನ ವಸ್ತುಗಳಿಗೆ ಬುದ್ಧಿಪೂರ್ವಕವಾಗಿ ಚೇತನ ಸ್ವರೂಪವನ್ನು ನೀಡಲುದ್ದೇಶಿಸಿದ್ದಾನೆ. ಎರಡು ಮೂರ್ತ ವಸ್ತುಗಳಾದ ಬಣ್ಣ ಬಳಿಯಲ್ಪಡಬೇಕಾದ ವಸ್ತು ಉದಾ : ಒಂದು ವಸ್ತ್ರ ಮತ್ತು ಬಣ್ಣದ ಮಾಧ್ಯಮ - ಉದಾ: ಶ್ಯಾಮಲ ವರ್ಣ. ಇವೆರಡೂ ಇದ್ದಾಗ ಮಾತ್ರ ಲೇಪನದ ನಿಜವಾದ ಕ್ರಿಯೆ ಇಲ್ಲಿಗೆ ಅನ್ವಯಿಸುತ್ತದೆ. ಇಲ್ಲಿ ಅಮೂರ್ತ ಕಾಂತಿಯು ಇನ್ನೊಂದು ಅಮೂರ್ತವನ್ನು ಲೇಪಿಸಬೇಕಾಗಿದೆ. ಕಾರಣ ಹಾಗೆ ಹೇಳಿದಾಗ ಅತ್ಯಂತ ತೆಳುವಾದರೂ ಅವರೆಡರ ನಡುವೆ ಇರುವ ಸಾಮ್ಯ ಘನಿಷ್ಠವಾಗುತ್ತದೆ. 'ಸ್ನಿಗ್ಧ' ಶಬ್ದವೂ ಉಪಚಾರ ವಕ್ರವೇ ಆಯಿತು. ಸ್ನಿಗ್ಧತೆಯನ್ನು ಕಣ್ಣಿಂದ ನೋಡುವುದಷ್ಟೇ ಅಲ್ಲದೆ, ಅದನ್ನು ಮುಟ್ಟಿ ಅನುಭವಿಸಲೂ ಸಾಧ್ಯವಿರುವುದರಿಂದ ಮೂರ್ತವಸ್ತುವೊಂದನ್ನು ಸ್ನಿಗ್ಧವೆಂದು ಕರೆಯಲು ಹೇಗೆ ಸಾಧ್ಯವೋ ಹಾಗೆಯೇ ಅಮೂರ್ತ ಕಾಂತಿಯನ್ನು ಇಲ್ಲಿ ಸ್ನಿಗ್ದವೆಂದು ಆಲಂಕಾರಿಕವಾಗಿ ಹೇಳಲಾಗಿದೆ.

ಈಗ ಇನ್ನೊಂದು ಉದಾಹರಣೆ :

ಗಚ್ಛಂತೀನಾಂ ರಮಣವಸತಿಂ ಯೋಷಿತಾಂ ತತ್ರ ನಕ್ತಂ
ರುದ್ಧಾಲೋಕೇ ನರಪತಿಪಥೇ ಸೂಚಿಭೇದ್ಯೈಸ್ತಮೋಭಿಃ|
ಸೌದಾಮಿನ್ಯಾ ಕನಕನಿಕಷಸ್ನಿಗ್ಧಯಾ ದರ್ಶಯೋರ್ವೀಂ
ತೋಯೋತ್ಸರ್ಗ ಸ್ತನಿತಮುಖರೋ ಮಾಸ್ಮ ಭೂರ್ವಿಕ್ಲವಾಸತಾಃ [೪೬]

[ಮೇಘದೂತ-37]

ಸೂಜಿಯನು ಚುಚ್ಚಬಹುದೆನುವಂಥ
ಕಗ್ಗತ್ತಲೆಯು ಕಣ್ಣನೋಟವನು ತಡೆಗಟ್ಟಿರುವ

ಉಜ್ಜಯಿನಿಯ ರಾಜಬೀದಿಯೊಳಲ್ಲಿ
ರಮಣವಸತಿಯ ಕುರಿತು
ತೆರಳಲನುವಾಗಿಹರು ರಮಣಿಯರು
ಒರೆಗಲ್ಲ ಮೇಲೆ ಹೊಳೆವ ಹೊನ್ನಗೆರೆ ಕಾಂತಿಯೊಲು
ಮಿಂಚ ಹೊಮ್ಮಿಸಿ ನೀನವರಿಗೆ ದಾರಿತೋರು
ಮೊದಲೆ ಭಯಚಕಿತೆಯರಹ ಅಬಲೆಯರ
ಮಳೆ ಗುಡುಗುಗಳ ಕರೆದು ನೀ ಬೆದರಿಸದಿರು [೪೬]

ಮೇಘದೂತದಲ್ಲಿ ವಿರಹಿಯಕ್ಷನು ತನ್ನ ಪ್ರಿಯತಮೆಯ ಬಳಿಗೆ ಸಂದೇಶವನ್ನು ಕೊಂಡೊಯ್ಯುತ್ತಿರುವ ಮೇಘಕ್ಕೆ ಅದು ಸಾಗಬೇಕಾದ ಮಾರ್ಗವನ್ನು ನಿರ್ದೇಶಿಸುತ್ತ, ಉಜ್ಜಯಿನಿಯ ವಿಷಯದಲ್ಲಿ ಮೇಲಿನಂತೆ ಹೇಳುತ್ತಾನೆ.

ಇಲ್ಲಿಯೂ ಕೂಡ ಕತ್ತಲೆಯು ಅಮೂರ್ತವಾದರೂ, ಮೂರ್ತ ವಸ್ತುವಿನಲ್ಲಿ ಮಾತ್ರ ಸಾಧ್ಯವಾಗುವ ಅದರ ಸಾಂದ್ರತೆಯನ್ನು ಒತ್ತಿ ಹೇಳಲು ಕವಿಯು 'ಸೂಚಿಭೇದ್ಯ' ಎಂದು ಉಪಚಾರ ರೂಪದಲ್ಲಿ (ರೂಪಕವಾಗಿ) ಹೇಳಿದ್ದಾನೆ.

ಇನ್ನೊಂದು ಉದಾ :

ಗ ಅಣಂ ಚ ಮತ್ತ ಮೇಹಂ ಧಾರಾಲುಲಿ ಅಜ್ಜುಣಾಇಂ ಅ ವಣಾ ಇಂ
ಣಿ ರಹಂಕಾರಮಿ ಅಂಕಾ ಹರಂತಿ ಣೇಲಾವೋ ಅ ಣಿ ಸಾವೊ [೪೭]

[ಗ ಉ ಡ ವಹೋ-406]

ಗಗನಂ ಚ ಮತ್ತ ಮೇಘಂ ಧಾರಾಲುಲಿತಾರ್ಜುನಾನಿ ಚ ವನಾನಿ
ನಿರಹಂಕಾರ ಮೃಗಾಂಕಾ ಹರಂತಿ ನೀಲಾಶ್ಚ ನಿಶಾಃ (ಸಂಸ್ಕೃತ ಛಾಯೆ)
ಮದವೇರಿಹ ಮೋಡಗಳಾಗಸವು
ವರ್ಷಧಾರೆಯಲಿ ಕಂಪಿಸುವರ್ಜುನ ವೃಕ್ಷಗಳು
ಅಹಂಕಾರವಿನಿತಿಲ್ಲದಾ ಚಂದ್ರಮನು
ಮತ್ತಾ ಕಾಳ ರಾತ್ರಿಗಳು ಮನವನು ಸೆಳೆಯುತಿವೆ [೪೭]

ಇಲ್ಲಿ ಮದೋನ್ಮತ್ತತೆ ಮತ್ತು ಅಹಂಕಾರ ಹೀನತೆಗಳೆಂಬ ಚೇತನ ವಸ್ತುಗಳ ಗುಣಧರ್ಮಗಳು ಉಪಚಾರವಾಗಿವೆ. ಎಲ್ಲ ಚೇತನ ವಸ್ತುಗಳ ಸಾಮಾನ್ಯ ಧರ್ಮವೆಂದರೆ, ಮದವೇರುವುದು ಮತ್ತು ಅಹಂಕಾರ ಹೀನತೆ. ಕೇವಲ ಅಚೇತನದಲ್ಲಂತೂ ಇದು ಸಾಧ್ಯವಾಗುವುದಿಲ್ಲ. ಆದರೆ ಇಲ್ಲಿ ಅಹಂಕಾರ ಮತ್ತು ನಿರಹಂಕಾರತೆಗಳ ಪ್ರಯೋಗ ಕ್ರಮವಾಗಿ ಮೋಡಗಳು ಮತ್ತು ಚಂದ್ರನ ವಿಷಯದಲ್ಲಿ ಆಗಿದೆ. ಆದರೆ ಅವರಲ್ಲಿ ಅದು ಸಂಭವವಾಗದು. ಆದರೆ ಮತ್ತೇರಿದ ಮನುಷ್ಯ ಹೇಗೆ ಅತ್ತ ಇತ್ತ ಅಲೆದಾಡುತ್ತಿರುತ್ತಾನೆ, ಅದೇ ರೀತಿ ಮೋಡಗಳೂ ಆಕಾಶದಲ್ಲಿ ಅತ್ತ ಇತ್ತ ಅಲೆದಾಡುತ್ತಿರುತ್ತವೆ. ಆದ್ದರಿಂದಲೇ ಅತ್ತ ಇತ್ತ ಅಲೆದಾಡುವ ಈ ಗುಣಸಾಮ್ಯದ ಮೇಲೆ ಮೋಡಗಳಿಗೆ 'ಮತ್ತ' (ಮತ್ತಮೇಘ) ಶಬ್ದವು ಅಮುಖ್ಯವಾಗಿ ಉಪಚಾರವಾಗಿದೆ.

ಯಾವ ರೀತಿಯಲ್ಲಿ ಚೇತನ ವಸ್ತುಗಳಿಗೆ ರೂಪ ಅಥವಾ ಐಶ್ವರ್ಯ ನಾಶವಾದರೆ, ಅವುಗಳ ಅಹಂಕಾರ ನಾಶವಾಗಿ ಅವು ನಿರಂಹಕಾರಿಗಳಾಗಿ ಬಿಡುತ್ತವೆಯೋ ಅದೇ ರೀತಿ ಇಲ್ಲಿ ಚಂದ್ರನೂ ಮೋಡಗಳ ನೆರಳಿನಿಂದಾಗಿ ತನ್ನ ಪ್ರಕಾಶವನ್ನು ಕಳೆದುಕೊಂಡು ರೂಪರಹಿತನಾಗಿ ಬಿಡುತ್ತಾನೆ. ಈ ರೂಪ ರಾಹಿತ್ಯದ ಸಾಮ್ಯದ ಮೇಲೆ ಚಂದ್ರನ ವಿಷಯಕ್ಕೆ 'ನಿರಹಂಕಾರ' ಎಂಬ ಶಬ್ದ ಪ್ರಯೋಗ ಗೌಣರೂಪದಲ್ಲಿ ಅವನ ಪ್ರಕಾಶ ರಾಹಿತ್ಯವನ್ನು ವ್ಯಕ್ತಪಡಿಸಲು ಉಪಚಾರ ರೂಪದಲ್ಲಿ ಆಗಿದೆ. ಆದ್ದರಿಂದ ಇಲ್ಲಿ ಉಪಚಾರ ವಕ್ರತೆ ಇದೆ.

ಈ ರೀತಿಯ ಉಪಚಾರ ವಕ್ರತೆಯ ಭೇದಗಳು, ಸತ್ಕವಿ ಪರಂಪರೆಯಲ್ಲಿ ಸಹಸ್ರಾರು ಸಿಗುತ್ತವೆ ಮತ್ತು ಸಹೃದಯರು ಇದನ್ನು ಸುಲಭವಾಗಿ ಗ್ರಹಿಸಬಹುದು. ಎರಡಕ್ಕೂ ಇರುವ ಅಂತರ ಅತಿ ಅಲ್ಪವಾಗಿದ್ದಾಗ ವಕ್ರ ವ್ಯಾಪಾರವಿರುವುದಿಲ್ಲ- 'ಹಳ್ಳಿಯವನು ಹೋರಿ' ಎಂಬ ಉದಾಹರಣೆಯಲ್ಲಿದ್ದಂತೆ. ಉಪಚಾರ ವಕ್ರತೆಯ ಇನ್ನೊಂದು ಪ್ರಭೇದವಿದೆ. ಅದು ಮೂಲದಲ್ಲಿ ಇರುವುದರಿಂದ ರೂಪಕಾದಿ ಅಲಂಕಾರಗಳು ಸರಸ ಉಲ್ಲೇಖನೀಯವಾಗಿ ಬಿಡುತ್ತವೆ. ಯಾವುದು ಯಾವುದರ ಮೂಲ ಆಗುತ್ತದೆಯೋ ಅದನ್ನು ಯನ್ಮೂಲಕ ಎಂದು ಹೇಳಲಾಗುತ್ತದೆ. ರೂಪಕವು ಯಾವುದರ ಆದಿಯಲ್ಲಿ ಇರುತ್ತದೆಯೋ ಅದನ್ನು ರೂಪಕಾದಿ ಎಂದು ಹೇಳಲಾಗುತ್ತದೆ. ಅರ್ಥಾತ್ ಅಲಂಕೃತಿ ಅಥವಾ ಆಭೂಷಣ. ಮಥಿತಾರ್ಥವಿಷ್ಟೆ. ಇದು ಮೂಲದಲ್ಲಿರುವುದರಿಂದ, ರೂಪಕಾದಿ ಅಲಂಕಾರಗಳ ಶೋಭೆಯು ಸರಸ ಉಲ್ಲೇಖನೀಯವಾಗಿಬಿಡುತ್ತದೆ. ಸರಸ ಎಂದರೆ ಆಸ್ವಾದಪೂರ್ಣ ಅರ್ಥಾತ್ ಚಮತ್ಕಾರ ಸಂಪನ್ನ. ಉಲ್ಲೇಖ ಎಂದರೆ ಉಜ್ವಲಪೂರ್ಣವಾಗಿರುವ ಎಂದು. ಸಮಾನಾಧಿಕರಣ ಉಳ್ಳ ಅಲಂಕೃತಿ ಮತ್ತು ಸರಸೋಲ್ಲೇಖಗಳೆರಡರಲ್ಲೂ ಕಾರಣ ಮತ್ತು ಪರಿಣಾಮಗಳ ಸಂಬಂಧವಿರುತ್ತದೆ.

ಉದಾ :

ಅತಿಗುರವೋ ರಾಜಮಾಷಾ ನ ಭಕ್ಷ್ಯಾ ಇತಿ [೪೮]

ಬಹಳ ದೊಡ್ಡ ಗಾತ್ರದ ಉದ್ದಿನ ಕಾಳುಗಳು ಜೀರ್ಣಕ್ಕೆ ಕಷ್ಟವಾಗಿರುವುದರಿಂದ ಅವುಗಳನ್ನು ತಿನ್ನಬಾರದು [೪೮]

ಉಪಚಾರ ವಕ್ರತೆಯು ಅವುಗಳಲ್ಲಿ ಸೇರಿಕೊಂಡಿರುವುದರಿಂದಾಗಿ ರೂಪಕವೇ ಮೊದಲಾದ ಅಲಂಕಾರಗಳು ಚಮತ್ಕಾರ ಪೂರ್ಣವರ್ಣನೆಯಿಂದ ಕೂಡಿದವಾಗಿ ಒಂದು ನೂತನ ಶೋಭೆಯನ್ನು ಪಡೆದುಕೊಂಡು ಬಿಡುತ್ತವೆ. ಹಾಗಾಗಿ ಉಪಚಾರ ವಕ್ರತೆಯ ಸೌಂದರ್ಯವು ರೂಪಕಾದಿ ಸಮಸ್ತ ಅಲಂಕಾರ ಸಮುದಾಯದ ಪ್ರಾಣಸ್ವರೂಪವೆನಿಸಿದೆ.

ಹಾಗಾದರೆ ಮೊದಲು ಹೇಳಿದ ಉಪಚಾರ ವಕ್ರತೆಗೂ ಈ ಉಪಚಾರ ವಕ್ರತೆಗೂ ಏನು ವ್ಯತ್ಯಾಸ? ಮೊದಲಿನ ಪ್ರಕಾರದಲ್ಲಿ ಸ್ವಭಾವದಲ್ಲಿ ತೀರ ಭಿನ್ನವಾದ, ನಗಣ್ಯವೆನಿಸಬಹುದಾದ ಸಾಮ್ಯವಿರುವ ಎರಡು ವಸ್ತುಗಳಿದ್ದು, ಈ ಮೇಲ್ ತೋರಿಕೆಯ ಸಾದೃಶ್ಯದ ಆಧಾರದ ಮೇಲೆ, ಅವುಗಳ ಅತಿಶಯತೆಯನ್ನು ಪ್ರತಿಪಾದಿಸಲೋಸುಗ ಅವುಗಳ

ಒಂದೆರಡು ಗುಣಧರ್ಮಗಳ ಅಧ್ಯಾರೋಪ ಮಾಡಲಾಗುತ್ತಿತ್ತು. ಆದರೆ ಅದೇ ಎರಡನೇ ಪ್ರಕಾರದಲ್ಲಿ, ಎರಡು ವಸ್ತುಗಳಲ್ಲಿ ಪರಸ್ಪರ ಸಮೀಪಸ್ಥವಾದ ಅಥವಾ ದೂರಸ್ಥವಾದ ಸಾಮ್ಯವಿರುತ್ತದೆಂಬ ಭಾವನೆಯಿಂದ, ಎರಡೂ ವಸ್ತುಗಳಿಗಿರುವ ಅಭೇದ, ಉಪಚಾರ ತತ್ವವನ್ನೇ ಆರೋಪಿಸಲಾಗುತ್ತದೆ.

ಉದಾ :

ಸತ್ಸ್ವೇವ ಕಾಲಶ್ರವಣೋತ್ಪಲೇಷು ಸೇನಾವನಾಲೀ ವಿಷಪಲ್ಲವೇಷು|
ಗಾಂಭೀರ್ಯ ಪಾತಾಲ ಫಣೀಶ್ವರೇಷು ಸಂಗೇಷು ಕೋ ವಾ ಭವತಾಮ್ ಮುರಾರಿಃ [೪೯]

ಕಾಲನ ಕರ್ಣೋತ್ಪಲಗಳೆನಿಪ
ನಿನ್ನ ಸೇನಾರಣ್ಯಗಳ ವಿಷ ಪಲ್ಲವಗಳೆನಿಪ
ಆಳ, ಪಾತಾಳ ಫಣೀಶ್ವರಗಳೆನಿಪ
ಖಡ್ಗಗಳು ನಿನ್ನ ಬಳಿಯಿರಲು
ಮುರಾರಿ ತಾನಾವ ಲೆಕ್ಕ ನಿನಗೆ? [೪೯]

ಇಲ್ಲಿ ಕಾಲಶ್ರವಣೋತ್ಪಲವೇ ಮೊದಲಾದ ಸಾದೃಶ್ಯಗಳಿಂದ ಹುಟ್ಟುವ ಅಭೇದೋಪಚಾರ ನಿಬಂಧನ ತತ್ವವು ಅಧ್ಯಾರೋಪಿತವಾಗಿದೆ.

ರೂಪಕಾದಿರಲಂಕೃತಿ : ಎಂಬಲ್ಲಿ ಇರುವ 'ಆದಿ' ಶಬ್ದವು; ಕೆಲವೊಂದು ಅನ್ಯೋಕ್ತಿರೂಪದ ಅಪ್ರಸ್ತುತ ಪ್ರಶಂಸಾಲಂಕಾರ ಪ್ರಕಾರದ ಪ್ರಾಣಸ್ವರೂಪ ಕೂಡ ಈ ಉಪಚಾರ ವಕ್ರತೆಯೇ ಆಗಿರುತ್ತದೆ ಎಂಬುದಕ್ಕೆ ಅನ್ವಯಿಸುತ್ತದೆ.

ಕವಿಗಳು ಬಹುಮಟ್ಟಿಗೆ ತಮ್ಮ ಮನಸ್ಸಿನಲ್ಲಿಟ್ಟುಕೊಂಡಿರುವ ಪದಾರ್ಥಗಳಿಗಿಂತ ಭಿನ್ನವಾದವುಗಳನ್ನೇ ವರ್ಣಿಸುತ್ತಿರುವುದು ಕಂಡುಬರುತ್ತದೆ. ಕಾರಣ, ತಮ್ಮ ಮನಸ್ಸಿನಲ್ಲಿರುವ ಪದಾರ್ಥಕ್ಕೂ ಹೊರಗಿನದಕ್ಕೂ ಗುಣಲಕ್ಷಣಗಳಲ್ಲಿರುವ ಕೆಲವೊಂದು ಕಲ್ಪಿತ ಸಾದೃಶ್ಯವೇ ಇದಕ್ಕೆ ಆಧಾರ.

ಅನರ್ಘಃ ಕೋಽಪ್ಯನ್ತಸ್ತವ ಹರಿಣ ಹೇವಾಕಮಹಿಮಾ
ಸ್ಫುರತ್ಯೇಕಸ್ಯೈವ ತ್ರಿಭುವನ ಚಮತ್ಕಾರ ಜನಕಃ|
ಯದಿಂದೋರ್ಮೂರ್ತಿಸ್ತೇ ದಿವಿ ವಿಹರಣಾರಣ್ಯ ವಸುಧಾ
ಸುಧಾಸಾರಸ್ಯಂದೀ ಕಿರಣನಿಕರಃ ಶಷ್ಪಕವಲಃ [೫೦]

ನಿನ್ನ ಸಾಧನೆಯ ಔನ್ನತ್ಯ ನಿನ್ನಂತರಂಗದ
ಬೆಲೆ ಕಟ್ಟಲಾಗದೊಂದದ್ಭುತವು ಎಲೆ ಚಂದ್ರ ಹರಿಣ!
ಮೂರು ಲೋಕಕು ಅಚ್ಚರಿಯ ಮಾಳ್ಪುದದು
ನಿನ್ನ ವೈಶಿಷ್ಟ್ಯ!
ಚಂದ್ರಮೂರ್ತಿಯು ನಿನ್ನ ವಿಹಾರದರಣ್ಯ ಭೂಮಿ
ಅಮೃತರಸದಿಂ ನೆನೆದ ಚಂದ್ರಕಿರಣಗಳು

ನೀ ಮೆಲುವ ಗರುಕೆ ಚಿಗುರು! [೫೦]

ಇಲ್ಲಿ ಒಂದೆಡೆ ಪ್ರತೀಯಮಾನ ಅರ್ಥ ಹಾಗೂ ವಿವಕ್ಷಿತ ಅರ್ಥ ಹಾಗೂ ಇನ್ನೊಂದೆಡೆ ಪ್ರಧಾನವಾಗಿ ನಿರೂಪಿಸಲಾದ ವಸ್ತು- ಇವೆರಡಕ್ಕೂ ಸಮಾನವಾಗಿ ಅನ್ವಯವಾಗುವ ಲಕ್ಷಣವೆಂದರೆ ಲೋಕೋತ್ತರ ಅಥವಾ "ಅಸಾಧಾರಣ ಸ್ವಭಾವ". ಈ ಸಾಮಾನ್ಯ ಗುಣಲಕ್ಷಣದ ಆಧಾರದ ಮೇಲೆ ಎರಡನ್ನೂ ಕಾವ್ಯಾತ್ಮಕವಾಗಿ ಗುರುತಿಸಲಾಗಿದೆ. ರೂಪಕಾಲಂಕಾರ ಹಾಗೂ ಅಪ್ರಸ್ತುತ ಪ್ರಶಂಸಾಲಂಕಾರ ಈ ಎರಡೂ ಅಲಂಕಾರಗಳಲ್ಲಿ ಉಪಚಾರ ವಕ್ರತೆಯು ಪ್ರಾಣ ಸ್ವರೂಪವಾಗಿ ಸಮಾನವಾಗಿಯೇ ಇದ್ದರೂ ರೂಪಕಾಲಂಕಾರವನ್ನು ವಾಚ್ಯತ್ವ ಮತ್ತು ಅಪ್ರಸ್ತುತ ಪ್ರಶಂಸಾಲಂಕಾರವನ್ನು ಪ್ರತೀಯಮಾನತ್ವ ಎಂದು ವಿವರಿಸುವ ಮೂಲಕ ಎರಡಕ್ಕೂ ಇರುವ ವ್ಯತ್ಯಾಸವನ್ನು ಕಾಣಿಸಬಹುದು. ಮುಂದಿನ ಅಧ್ಯಾಯದಲ್ಲಿ ಈ ಎರಡೂ ಅಲಂಕಾರಗಳನ್ನು ವ್ಯಾಖ್ಯಾನಿಸುವ ಸಂದರ್ಭದಲ್ಲಿ ಇದು ಇನ್ನಷ್ಟು ಸ್ಪಷ್ಟವಾಗುತ್ತದೆ.

ಹೀಗೆ ಉಪಚಾರ ವಕ್ರತೆಯನ್ನು ವಿವೇಚಿಸಿದ ನಂತರ ಕ್ರಮಾನುಸಾರ ಗ್ರಂಥಕರ್ತೃ ವಿಶೇಷಣ ವಕ್ರತೆಯನ್ನು ಪರಿಶೀಲಿಸುತ್ತಾನೆ.

ವಿಶೇಷಣಸ್ಯ ಮಾಹಾತ್ಮ್ಯಾತ್ ಕ್ರಿಯಾಯಾಃ ಕಾರಕಸ್ಯ ವಾ|
ಯತ್ರೋಲ್ಲಸತಿ ಲಾವಣ್ಯಂ ಸಾ ವಿಶೇಷಣ ವಕ್ರತಾ|| [15]

ವಿಶೇಷಣದ ಉತ್ಕೃಷ್ಟತೆಯಿಂದ (ಮಾಹಾತ್ಮ್ಯದಿಂದ) ಕ್ರಿಯೆ ಅಥವಾ ಕಾರಕಕ್ಕೆ (ನಾಮ - ವಸ್ತು) ರಮಣೀಯತೆಯು ಪ್ರಾಪ್ತವಾಗುವಂತಿದ್ದರೆ ಅದನ್ನು ವಿಶೇಷಣ ವಕ್ರತೆ ಎಂದು ಹೇಳಬೇಕು. [15] (ಕಾರಣ ಅಲ್ಲಿ ಲೋಕೋತ್ತರವಾದ ವಿಶೇಷಣದಿಂದಾಗಿಯೇ ಸೌಂದರ್ಯ ಪ್ರಕಟವಾಗುತ್ತದೆ)

ವಿಶೇಷಣದ ವೈಚಿತ್ರ್ಯದಿಂದ ಉಂಟಾದ ಶೋಭೆಗೆ ವಿಶೇಷಣ ವಕ್ರತೆ ಎಂದು ನಾವು ಹೇಳುತ್ತೇವೆ. ಯಾವ ರೀತಿ ಇರುತ್ತದೆ? ಎಲ್ಲಿ ಲಾವಣ್ಯವು ಉಲ್ಲಸಿತವಾಗುತ್ತದೆಯೋ, ಅರ್ಥಾತ್ ರಮಣೀಯತೆ ವ್ಯಕ್ತವಾಗುತ್ತದೆಯೋ ಅಲ್ಲಿ. ರಮಣೀಯತೆಯು ಕ್ರಿಯೆ ಅಥವಾ ಕಾರಕದ್ದಾಗಿರುತ್ತದೆ. ಅರ್ಥಾತ್ ಕ್ರಿಯಾರೂಪ ವಸ್ತುವಿನ ಅಥವಾ ಕಾರಕ ರೂಪ ವಸ್ತುವಿನ ರಮಣೀಯತೆ ವ್ಯಕ್ತವಾಗುತ್ತದೆ. ಯಾವ ಕಾರಣದಿಂದಾಗಿ ಎಂದರೆ, ವಿಶೇಷಣದ ಅತಿಶಯತೆ ಅಥವಾ ಉತ್ಕೃಷ್ಟತೆಯಿಂದಾಗಿ. ಅಂದರೆ ವಿಶೇಷಣಗಳು ಅತಿಶಯವಾದ ಕಾವ್ಯಮೌಲ್ಯದಿಂದ ಕೂಡಿದ್ದಾಗ, ಕ್ರಿಯೆ ಅಥವಾ ಕಾರಕಗಳ ಸೌಂದರ್ಯವನ್ನು ವರ್ಧಿಸುತ್ತವೆ. ಸಹಜ ಕ್ರಿಯೆಗಳು ಅಥವಾ ವಸ್ತುಗಳಿಗೆ, ಅತಿಶಯ ರಮಣೀಯತೆಯನ್ನು ಪಡೆದುಕೊಳ್ಳುವ ಹಾಗೆ ಅತ್ಯಂತ ವಿಶಿಷ್ಟ ವಿಶೇಷಣಗಳನ್ನು ಸೇರಿಸಬೇಕು. ಅತಿಶಯ ಯುಕ್ತತೆ ಎರಡು ರೀತಿಯವು.

(1) ವಸ್ತುವಿನ ಸಹಜ ಸುಕುಮಾರತೆಯನ್ನು ಉಲ್ಲಾಸಪೂರ್ಣವಾಗಿ ಅಭಿವ್ಯಕ್ತಿಸುವುದು.

(2) ಈಗಾಗಲೇ ಪರಿಚಿತವಾಗಿರುವ ಅಲಂಕಾರಗಳ ಸೌಂದರ್ಯವನ್ನು ಇನ್ನಷ್ಟು ಪರಿಪುಷ್ಟಗೊಳಿಸುವುದು. ಉದಾ : (ವಸ್ತುವಿನ ಸಹಜ ಸುಕುಮಾರತೆಯನ್ನು ಅಭಿವ್ಯಕ್ತಿಸುವ ಕಾರಕ ವಿಶೇಷಣದ ಉದಾಹರಣೆ)

ಶ್ರಮಜಲಸೇಕ ಜನಿತ ನವ ಲಿಖಿತ ನಖ ಪದ ದಾಹ ಮೂರ್ಛಿತಾ
ವಲ್ಲಭ ರಭಸ ಲುಲಿತ ಲಲಿತಾಲಕ ವಲಯ ಚಯಾರ್ಧನಿಹ್ನುತಾ|
ಸ್ಮರರಸ ವಿವಿಧ ವಿಹಿತ ಸುರತ ಕ್ರಮ ಪರಿಮಲನತ್ರ ಪಾಲಸಾ
ಜಯತಿ ನಿಶಾತ್ಯಯೇ ಯುವತಿದೃಕ್ ತನುಮಧುಮದವಿಶದಪಾಟಲಾ [೫೧]

ಬೆವರ ಹನಿಗಳಿಂ ತೊಯ್ದು ನಖಕ್ಷತಗಳ
ನೋವಿನಿಂದರೆ ಮುಚ್ಚಿದ ನಯನ
ಪ್ರಿಯತಮನು ರಭಸದಿಂ ಸೆಳೆದು ಚೆದುರಿಸಿದ
ಮೃದುವಾದ ಮುಂಗುರುಳಿಂದರೆ ಮುಚ್ಚಿದ ನಯನ
ಸುರತ ಲೀಲೆಯೊಳು ಪರಿಪರಿಯಲಿ
ರಮಿಸಿದುದರಿಂದ ನಾಚಿಕೆಯಲಲಸಿಹ ನಯನ
ನಿಶೆಯ ಅವಸಾನದೊಳು ಮಧುಮದದಿ ಮುಳುಗಿರುವ
ಸುಂದರಿಯ ಲುಳಿತ ಪಾಟಲ ನಯನವದು ಗೆಲುವುದು! [೫೧]

ಅಥವಾ

ಕರಾಂತರಾಲೀನ ಕಪೋಲ ಭಿತ್ತಿರ್ಬಾಷ್ಪೋಚ್ಛಲತ್ಕೂಣಿತಪತ್ರಲೇಖಾ
ಶ್ರೋತ್ರಾಂತರೇ ಪಿಂಡಿತ ಚಿತ್ತ ವೃತ್ತಿಃ ಶೃಣೋತಿಗೀತಧ್ವನಿಮತ್ರ ತನ್ವೀ [೫೨]

ಅಂಗೈಗಳೊಳು ಕೆನ್ನೆಯನೂರಿಕೊಂಡಿರಲು
ಉಕ್ಕಿಬಹ ಕಣ್ಣೀರಿಂದ ಮಕರಿಕಾ ಪತ್ರವದು
ಅಳಿಸಿ ಹೋಗಿರಲು
ಮನವೆಲ್ಲ ಕಿವಿಯೊಳೇ ನಟ್ಟಿರಲು
ಸುಂದರಿಯು ಹಾಡನಾಲಿಸುತಿಹಳು [೫೨]

ಅಥವಾ

ಶುಚಿ ಶೀತಲ ಚಂದ್ರಿಕಾ ಪ್ಲುತಾಶ್ಚಿರ ನಿಃಶಬ್ದ ಮನೋಹರಾ ದಿಶಾಃ|
ಪ್ರಶಮಸ್ಯ ಮನೋಭವಸ್ಯ ವಾ ಹೃದಿ ತಸ್ಯಾಪ್ಯಥ ಹೇತುತಾಂ ಯಯುಃ [೫೩]

ಧವಳ ಶೀತಲ ಚಂದ್ರಿಕೆಯ ಹೊನಲಿನಲಿ ಮುಳುಗಿ
ಚಿರಕಾಲದಿಂ ನಿಶ್ಶಬ್ದವಾಗಿಹ
ಮನೋಹರ ದಿಶೆಗಳು
ಅವನ ಹೃದಯದೊಳು ಕೂಡ
ಶಾಂತ ಭಾವವನೊ ಅಥವಾ
ಪ್ರೇಮ ಭಾವವನೊ ಅಂಕುರಿಸತೊಡಗಿದುವು [೫೩]

ಈಗ ಕ್ರಿಯಾ ವಿಶೇಷಣ ವಕ್ರತೆಗೆ ಉದಾಹರಣೆ

ಸಸ್ಮಾರ ವಾರಣಪತಿರ್ವಿನಿಮೀಲಿತಾಕ್ಷಃ
ಸ್ವೇಚ್ಛಾ ವಿಹಾರ ವನವಾಸ ಮಹೋತ್ಸವಾನಾಮ್ [೫೪] (ಶಿಶುಪಾಲವಧ -1-50

ಕಂಗಳನು ಮುಚ್ಚಿ ಗಜರಾಜನು
ನೆನೆದನರಣ್ಯದೊಳಿರುವಂದು
ತಾ ನಡೆಸಿದ ಸ್ವೇಚ್ಛಾ ವಿಹಾರ ಮಹೋತ್ಸವಗಳನು! [೫೪]

ಮೇಲಿನ ಎಲ್ಲ ಉದಾಹರಣೆಗಳಲ್ಲಿ ವಿಶೇಷಣಗಳು ವಸ್ತುಗಳ (ಅಥವಾ ಕ್ರಿಯೆಗಳ) ಸಹಜ ಸೌಂದರ್ಯವನ್ನು ಉಲ್ಲಾಸಪೂರ್ಣವಾಗಿ ವ್ಯಕ್ತಪಡಿಸುತ್ತವೆ. ಎರಡನೇ ಪ್ರಕಾರಗಳು ಅಂದರೆ ವಿಶೇಷಣವು ಪ್ರಸಿದ್ಧವಾದ ಅಲಂಕಾರಗಳಿಗೂ ನವ ಸೌಂದರ್ಯ ಶೋಭೆಯನ್ನು ತಂದು ಕೊಡುವುದಕ್ಕೆ ಈ ಉದಾಹರಣೆ

ಶಶಿನಃ ಶೋಭಾತಿರಸ್ಕಾರಿಣಾ [೫೫] (ರತ್ನಾವಳಿ -1-25)

ಶಶಿಯ ಕಾಂತಿಯನು ಕಡೆಗಣಿಪ [೫೫]

ವರ್ಣಿತ ವಸ್ತುವಿನ ಔಚಿತ್ಯಕ್ಕನುಸಾರಿಯಾಗಿರುವ ಇದೇ ವಿಶೇಷಣ ವಕ್ರತೆಯು ಸಮಸ್ತ ಶ್ರೇಷ್ಠ ಕಾವ್ಯಗಳ ಪ್ರಾಣ ಸ್ವರೂಪವೆಂದು ಪರಿಗಣಿಸಲ್ಪಡುತ್ತದೆ. ಕಾರಣ ಇದರಿಂದಾಗಿಯೇ ರಸವು ಪರಿಪೋಷಣೆ ಹೊಂದಿ ಪರಾಕಾಷ್ಠೆಯನ್ನು ತಲುಪುತ್ತದೆ. ಉದಾ :

ಕರಾಂತರಾಲೀನ ಇತಿ ....[೫೬] (ಹಿಂದಿನ ಉದಾಹರಣೆ)

ಒಟ್ಟಾರೆ ಹೇಳುವುದಾದರೆ

ಸ್ವಮಹಿಮ್ನಾ ವಿಧೀಯಂತೇ ಯೇನ ಲೊಕೋತ್ತರಶ್ರಿಯಃ|
ರಸಸ್ವಭಾವಾಲಂಕಾರಾಸ್ತದ್ವಿಧೇಯಮ್ ವಿಶೇಷಣಮ್ [೫೭]

(ಅಂತರಶ್ಲೋಕ)

ರಸ, ವಸ್ತು, (ಕ್ರಿಯೆ) ಹಾಗೂ ಅಲಂಕಾರಗಳಿಗೆ, ಲೋಕೋತ್ತರವಾದ ಸೌಂದರ್ಯವನ್ನುಂಟು ಮಾಡಲು, ಕವಿಯು ಮಹತ್ವದ ವಿಶೇಷಣವನ್ನು ಯುಕ್ತ ರೀತಿಯಲ್ಲಿ ಬಳಸಿಕೊಳ್ಳಬೇಕು [೫೭]

ವಿಶೇಷಣ ವಕ್ರತೆಯ ವಿವೇಚನೆಯನ್ನು ಮುಗಿಸಿ, ಈಗ ಕ್ರಮವಾಗಿ ಸಂವೃತಿ ವಕ್ರತೆಯ ಚರ್ಚೆಯನ್ನು ಕೈಗೆತ್ತಿಕೊಳ್ಳುತ್ತಾನೆ.

ಯತ್ರ ಸಂವ್ರಿಯತೇ ವಸ್ತು ವೈಚಿತ್ರ್ಯಸ್ಯ ವಿವಕ್ಷಯಾ
ಸರ್ವನಾಮಾದಿಭಿಃ ಕೈಶ್ಚಿತ್ ಸೋಕ್ತಾ ಸಂವೃತಿ ವಕ್ರತಾ|| [16]

ಅಭಿವ್ಯಕ್ತಿಯಲ್ಲಿ ವೈಚಿತ್ರ್ಯ ಸಿದ್ಧಿಯ ಸಲುವಾಗಿ ಎಲ್ಲಿ ವರ್ಣ್ಯವಸ್ತುವನ್ನು ಸರ್ವನಾಮಾದಿಗಳಿಂದ ಅಡಗಿಸಿಡುವ ಕೆಲಸವನ್ನು ಮಾಡಲಾಗುತ್ತದೋ, ಆಗ ಸಂವೃತ್ತಿ ವಕ್ರತೆ ಉಂಟಾಗುತ್ತದೆ. [ಕಾರಣ ಇದರಲ್ಲಿ ವಸ್ತುವಿನ ಸ್ವರೂಪದ ಸಂವೃತಿ ಅರ್ಥಾತ್, ಅಡಗಿಸುವುದರ ಪ್ರಾಧಾನ್ಯದಿಂದಲೇ ಚಮತ್ಕಾರ ಉಂಟಾಗುತ್ತದೆ. ಆದ್ದರಿಂದ ಇದನ್ನು ಸಂವೃತ್ತಿ ವಕ್ರತೆ ಎಂದು ಹೇಳುತ್ತಾರೆ] [16]

ಕಾರಿಕೆಯಲ್ಲಿ ಹೇಳಿರುವ ನಿಬಂಧನೆಗಳನ್ನು ಪೂರ್ಣಗೊಳಿಸಿದಾಗ ಅದಕ್ಕೆ ಸಂವೃತಿ ವಕ್ರತೆ

ಎಂದು ಹೇಳಲಾಗುತ್ತದೆ. ಈ ಸಮಾಸ ಶಬ್ದವನ್ನು ಎರಡು ರೀತಿಯಲ್ಲಿ ಅರ್ಥೈಸಬಹುದು. ಸಂವರಣದ ಕಾರಣದಿಂದಾಗಿ ಉಂಟಾಗುವ ವಕ್ರತೆ ಅಥವಾ ಸಂವರಣವು ಪ್ರಧಾನವಾಗಿರುವ ವಕ್ರತೆ ಎಂದು. ಈ ವಕ್ರತೆಯಲ್ಲಿ, ವರ್ಣ್ಯ ವಸ್ತುವಿನ ಸ್ವರೂಪವನ್ನು ಅಡಗಿಸಿಡಲಾಗುತ್ತದೆ ಅಥವಾ ಮುಚ್ಚಿಡಲಾಗುತ್ತದೆ. ಇದರ ಉದ್ದೇಶ, ವೈಚಿತ್ರ್ಯದ ಪ್ರತಿಪಾದನೆ. ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ, ವಸ್ತುವಿಗೆ ಇನ್ನಿಲ್ಲದ ವೈಚಿತ್ರ್ಯ ಉಂಟಾಗುತ್ತದೆ. ವಸ್ತುವನ್ನು ಸಂವರಣಗೊಳಿಸಲು ಬಳಸುವ ಸಾಧನಗಳೆಂದರೆ ಸರ್ವನಾಮಾದಿಗಳು.

ಯಾವುದೇ ನಾಮಪದವನ್ನು ಹೆಸರಿಸಲು ಸರ್ವನಾಮ ಬಳಕೆಯಾಗುತ್ತದೆ. ಇದೇ ಉದ್ದೇಶವನ್ನು ಸಾಧಿಸುವ, ಆದಿಯಲ್ಲಿ ಬಳಕೆಯಾಗುವ ಇತರೆ ಅಪೂರ್ವ ಶಬ್ದಗಳೆಲ್ಲವೂ ಸರ್ವನಾಮಾದಿಗಳೆಂದು ಕರೆಯಲ್ಪಡುತ್ತವೆ. (ವಸ್ತುವನ್ನು ಸಂವರಣಗೊಳಿಸಬಲ್ಲ)

ಇದರಲ್ಲಿ ಅನೇಕ ಪ್ರಕಾರಗಳಿವೆ.

ಕವಿಯು ಕೆಲವೊಮ್ಮೆ ತಾನು ಹೇಳಬೇಕಾದ್ದನ್ನು ನೇರವಾಗಿ ಹೇಳಿದರೆ ವಸ್ತುವಿನ ಅತಿಶಯತೆ ಮರೆಯಾಗಿ ಹೋಗಿಬಿಡಬಹುದು. ಅಥವಾ ಸೀಮಿತಗೊಂಡು ಬಿಡಬಹುದೆಂದು ಭಾವಿಸಬಹುದು. ಅಂಥದನ್ನು (ಸಂದರ್ಭ) ತಪ್ಪಿಸುವ ಸಲುವಾಗಿ, ಸಾಮಾನ್ಯ ವಾಚಕ ಸರ್ವನಾಮದಿಂದ ಅದನ್ನು ಮರೆಮಾಡುತ್ತಾನೆ ಹಾಗೂ ಅದರ ಅತಿಶಯ ಅರ್ಥವನ್ನು, ಮರೆಮಾಚಲಾದ ಉತ್ಕೃಷ್ಟಾರ್ಥವನ್ನು ಅಭಿವ್ಯಕ್ತಿಸುವ ವಾಕ್ಯಾಂತರದ ಮೂಲಕ ಪ್ರತೀತಿಗೊಳಿಸಬಹುದು. ಉದಾ:

> ತತ್ಪಿತರ್ಯಥ ಪರಿಗ್ರಹಲಿಪ್ಸೌ ಸ ವ್ಯಧತ್ತ ಕರಣೀಯಮಣೀಯಃ|
> ಪುಷ್ಪಚಾಪ ಶಿಖರಸ್ಥ ಕಪೋಲೋ ಮನ್ಮಥಃ ಕಿಮಪಿಯೇನ ನಿದಧ್ಯೌ|| [೫೮]
>
> ತನ್ನ ಪಿತನು ಪಾಣಿಗ್ರಹಣಕೆಳಸಿದುದ
> ಕಂಡು ಅವನು ಮಾಡಿದುದೊಂದಲ್ಪ
> ಕಾರ್ಯವೆ ದಿಟ
> ಅದರಿಂದ ಮನ್ಮಥನು ತನ್ನ ಕಪೋಲವನು
> ಪುಷ್ಪ ಬಾಣದ ತುದಿಯ ಮೇಲಿರಿಸುತೆ
> ಬೇರೊಂದೆ ತೆರನ ಅವಸ್ಥೆಗೊಳಗಾದನು! [೫೮]

ಗುರು ಜನರ ವಿಷಯಕ್ಕೆ ತನಗಿದ್ದ ಅಪಾರ ಭಕ್ತಿ ಭಾವನೆ ಮತ್ತು ಸದಾಚಾರ ಗುಣದಿಂದ ಹಾಗೂ ತನ್ನ ಲೋಕೋತ್ತರವಾದ ಔದಾರ್ಯದಿಂದಾಗಿ ವಿವಿಧ ವಿಷಯೋಪಭೋಗಗಳಿಗೆ ವಿಮುಖವಾದ ಮನಸ್ಸುಳ್ಳವನಾದ, ಶಂತನುವಿನ ಮಗನು ಅಸಂಭವವಾದ ಇಂದ್ರಿಯ ನಿಗ್ರಹವನ್ನು ತೋರಿದ ಎಂದು ನೇರವಾಗಿ ಕವಿಗೆ ಹೇಳಲು ಖಂಡಿತ ಸಾಧ್ಯವಿತ್ತು. ಆದರೆ ಕವಿ ಹಾಗೆ ನೇರವಾಗಿ ಹೇಳುವುದನ್ನು ಕೈಬಿಟ್ಟಿದ್ದಾನೆ. ಆದರೆ ಅವನು ಸಾಮಾನ್ಯ ವಾಚಕ ಸರ್ವನಾಮದಿಂದ (ಅವನು/ಸಃ) ಅದನ್ನು ಮರೆಮಾಚಿದ್ದಾನೆ. ಹೀಗೆ ಸರ್ವನಾಮದಿಂದ

ಆಚ್ಛಾದಿಸಿ, ಶ್ಲೋಕದ ಉತ್ತರಾರ್ಧದಲ್ಲಿ ಬೇರೊಂದು ವಾಕ್ಯದ ಮೂಲಕ, ಬೇರೊಂದು ಕಾರ್ಯವನ್ನು ವರ್ಣಿಸಿ, ಅದನ್ನು ಪ್ರತೀತಿ ಗೋಚರವಾಗುವಂತೆ ಮಾಡುವುದರಲ್ಲಿ ಕವಿಯ ಅದ್ಭುತ ಚಮತ್ಕಾರಕಾರಿತೆ ವ್ಯಕ್ತವಾಗುತ್ತದೆ.

ಈ ಸಂವೃತಿ ವಕ್ರತೆಯ ಮತ್ತೊಂದು ಪ್ರಭೇದವೆಂದರೆ, (ಸ್ವಭಾವ ಸುಂದರವಾದ) ವಸ್ತುವಿನ ಅತಿಶಯತೆಯು ಅನಿರ್ವಚನೀಯವಾಗಿದ್ದು, ಕವಿಯು ವಸ್ತುವನ್ನು ಆಚ್ಛಾದಿಸಲು ಸರ್ವನಾಮವನ್ನು ಬಳಸುವುದರಿಂದ, ಈ ಅನಿರ್ವಚನೀಯತೆ ವ್ಯಕ್ತವಾಗುತ್ತದೆ. ಆಮೇಲೆ ಅದರ ಪರಿಣಾಮವನ್ನು ಅಥವಾ ಅದರ ಅತಿಶಯತೆಯನ್ನು ಬೇರೊಂದು ವಾಕ್ಯದ ಮೂಲಕ ಅಭಿವ್ಯಕ್ತಿಸುತ್ತಾನೆ. ಉದಾ:

ಯಾತೇ ದ್ವಾರವತೀಮ್ ತದಾ ಮಧುರಿಪೌ ತದ್ದತ್ತಕಂಪಾನತಾಮ್
ಕಾಲಿಂದೀ ಜಲಕೇಲಿವಂಜುಲಲತಾ ಮಾಲಂಬ್ಯ ಸೋತ್ಕಂಠಯಾ|
ತದ್‌ಗೀತಂ ಗುರುಬಾಷ್ಪ ಗದ್ಗದ ಲಸತ್ತಾರಸ್ವರಂ ರಾಧಯಾ
ಯೇನಾಂತರ್ಜಲಚಾರಿಭಿರ್ಜಲಚರೈರ ಪ್ಯುತ್ಕಮುತ್ಕೂಜಿತಮ್ [೫೯]

(ಸದೂಕ್ತಿಕ ಕರ್ಣಾಮೃತ 289)

ದ್ವಾರಕೆಗೆ ಶ್ರೀ ಕೃಷ್ಣ ತೆರಳಿದಂದು
ಉತ್ಕಂಠಿತ ರಾಧೆ
ಯಮುನೆಯಲಿ ಜಲಕ್ರೀಡೆಯಾಡುವಂದು
ಕೃಷ್ಣನ ಕೈಯ ಕಂಪನಕೆ ಈಡಾದ ಬಳ್ಳಿಯನು ನೆಮ್ಮಿ
ಉಕ್ಕಿಬಹ ಕಣ್ಣೀರಿಂದ ಕಂಠ ಉಮ್ಮಳಿಸಿ
ತಾರಸ್ವರದೊಳಾ ಗೀತವನು ಹಾಡುತಿರೆ
ದುಃಖಭರದಿಂದೆ ಚೀರಿದುವು
ಯಮುನೆಯಲಿ ಚರಿಸುವ ಜಲಚರಗಳೆಲ್ಲ [೫೯]

ಇಲ್ಲಿ ಅವಳೇನು ಹಾಡಿದಳು ಎಂಬುದು 'ತದ್' (ಆ) ಎಂಬ ಸರ್ವನಾಮದಿಂದ ಆಚ್ಛಾದಿತವಾಗಿದೆ. ಅಲ್ಲದೆ ಅದೇ ಸಮಯಕ್ಕೆ ಆಚ್ಛಾದಿತವಾದ ವಸ್ತುವು ಅದರ ಕಾರ್ಯವನ್ನು ಅಭಿವ್ಯಕ್ತಿಸುವ ಬೇರೊಂದು ವಾಕ್ಯದಿಂದ ಅಭಿವ್ಯಕ್ತವಾಗಿದೆ. ಅದು ಸಹೃದಯರ ಹೃದಯವನ್ನು ಗೆಲ್ಲುತ್ತದೆ.

ಇನ್ನೊಂದು ಉದಾಹರಣೆ

ತಹ ರುಣ್ಣಂ ಕಣ್ಹ ವಿಸಾಹೀಆಯೆ ರೋಹಗಗ್ಗರಗಿರಾಯೇ|
ಜಹ ಕಸ್ಸ ವಿ ಜಮ್ಮಸಏ ವಿ ಕೋಇ ಮಾವಲ್ಲಹೋ ಹೋ ಉ[೬೦] [ಪ್ರಾಕೃತ]
ತಥಾರುದಿತಂ ಕೃಷ್ಣ ವಿಶಾಖಯಾ ರೋಧ ಗದ್ಗದಗಿರಾ
ಯಥಾ ಕಸ್ಯಾಪಿ ಜನ್ಮಶತೇಽಪಿ ಕೋಽಪಿ ಮಾವಲ್ಲಭೋ ಭವತು [೬೦]

[ಸಂಸ್ಕೃತಛಾಯೆ]

ಹೇ ಕೃಷ್ಣ! ಕಂಠ ಉಮ್ಮಳಿಸಿ
ಗದ್ಗದ ಸ್ವರದಿಂದ ರಾಧೆ

ಅತ್ತಳೆಂತೆನೆ
ನೂರು ಜನ್ಮದೊಳೊಮ್ಮೆಯಾದರು
ಯಾರೂ ಪ್ರಿಯತಮರಾಗಲಾರರು [೬೦]

ಇಲ್ಲಿ ಮೊದಲರ್ಧದಲ್ಲಿ ಮರೆಮಾಚಲಾದ (ಸಂವೃತವಾದ) ವಸ್ತುವೆಂದರೆ ರಾಧೆಯ ರೋದನದ ಅತಿಶಯತೆ. ಆದರೆ ಉತ್ತರಾರ್ಧದಲ್ಲಿರುವ ಎರಡನೇ ವಾಕ್ಯವು ಅದರ ಅತಿಶಯತೆಯನ್ನು ಸಹೃದಯರಿಗೆ ಆಹ್ಲಾದವನ್ನುಂಟುಮಾಡುವ ರೀತಿಯಲ್ಲಿ ಪ್ರತಿಪಾದಿಸಿದೆ.

ವಿಶೇಷಣವಕ್ರತೆಯ ಮತ್ತೊಂದು ಪ್ರಭೇದವಿದೆ. ಇದರಲ್ಲಿ ಅತ್ಯಧಿಕವಾಗಿ ಸುಕುಮಾರವಾದ ವಸ್ತು ತನ್ನ ಕಾರ್ಯಾತಿಶಯದ ವಿಸ್ತೃತ ವಿವರಣೆಯಿಲ್ಲದೆಯೇ ಗೋಪನೀಯತೆಯ ರಮಣೀಯತೆಯಿಂದ ಮಾತ್ರವೇ ಅಪೂರ್ವ ಪರಾಕಾಷ್ಠೆಯನ್ನು ತಲುಪುತ್ತದೆ.

ದರ್ಪಣೇ ಚ ಪರಿಭೋಗ ದರ್ಶಿನೀ
ಪೃಷ್ಠತಃ ಪ್ರಣಯಿನೋ ನಿಷೇದುಷಃ|
ವೀಕ್ಷ್ಯ ಬಿಂಬಮನುಬಿಂಬಮಾತ್ಮನಃ
ಕಾನಿ ಕಾನಿ ನ ಚಕಾರ ಲಜ್ಜಯಾ [೬೧] **[ಕುಮಾರಸಂಭವ-8-11]**

ಭೋಗದಂಕಿತಗಳನು ಕನ್ನಡಿಯಲಿ ಕಂಡಂದು
ತನ್ನ ಬಿಂಬದ ಹಿಂದೆ ಪತಿಯ ಪ್ರತಿಬಿಂಬವನು
ಕಾಣುತಲೆ ಲಜ್ಜೆಯಿಂದಲಿ ಗಿರಿಜೆ
ತಾನದೇನೇನ ಗೈದಳಿಲ್ಲ! [೬೧]

ಇದೇ ಸಂವೃತಿ ವಕ್ರತೆಯ ಮತ್ತೊಂದು ಪ್ರಕಾರವೆಂದರೆ ವಸ್ತುವೊಂದು ಸ್ವಾನುಭವದಿಂದ ಮಾತ್ರ ಸಂವೇದಿಸಬಹುದಾದಂಥದು ಮತ್ತು ಮಾತಿನ ಮೂಲಕ ವರ್ಣಿಸಲು ಸಾಧ್ಯವಾಗುವಂಥದಲ್ಲ ಎಂದು ಸೂಚಿಸಲು ಅದನ್ನು ಗೋಪ್ಯ ಮಾಡುವಂಥದು.

ತಾನ್ಯಕ್ಷರಾಣಿ ಹೃದಯೇ ಕಿಮಪಿ ಧ್ವನಂತಿ [೬೨]

ಹಿಂದೆಯೇ ಇದನ್ನು ವ್ಯಾಖ್ಯಾನಿಸಲಾಗಿದೆ [1-೫೧]

ಸಂವೃತಿ ವಕ್ರತೆಯ ಮಗುದೊಂದು ಪ್ರಕಾರವೆಂದರೆ ಇನ್ನೊಬ್ಬ ವ್ಯಕ್ತಿಗಾದ ಅನುಭವ ಸಂವೇದನೆಯನ್ನು ವಕ್ತೃವು ವರ್ಣಿಸಲು ಅಸಮರ್ಥ ಎಂದು ಆಚ್ಛಾದಾನೆಯು ಸೂಚಿಸುವಂಥದು.

ಉದಾ :

ಮನ್ಮಥಃ ಕಿಮಪಿ ಯೇನ ನಿದಧ್ಯೌ [೬೩] ೨-೫೪ರಲ್ಲಿರುವ ಉದಾಹರಣೆ.

ಇಲ್ಲಿ ಮೂರೂ ಲೋಕಗಳಲ್ಲಿ ಹೆಸರಾದ ಪರಾಕ್ರಮಿ ಮನ್ಮಥ ಕೂಡ ಆ ರೀತಿಯಲ್ಲಿ ತನ್ನ ಶಕ್ತಿಗೊದಗಿದ ವ್ಯಾಘಾತವನ್ನು ಕಂಡು, ಅದೆಷ್ಟು ವಿಷಣ್ಣ ಮನಸ್ಕನಾದನೆಂದರೆ, ತನಗೆ ಮಾತ್ರ ಅನುಭವಕ್ಕೆ ಬರುವಂಥ ಆಲೋಚನೆಯಲ್ಲಿ ಮುಳುಗಿಬಿಟ್ಟ. (ಭೀಷ್ಮನ "ಜೀವನ ಪರ್ಯಂತ ಬ್ರಹ್ಮಚಾರಿಯಾಗಿರುತ್ತೇನೆಂಬ" ಪ್ರತಿಜ್ಞೆ ಕೇಳಿ)

ಇನ್ನೊಂದು ಪ್ರಕಾರದ ವಿಶೇಷಣ ವಕ್ರತೆ -ಎಲ್ಲಿ ಸ್ವಭಾವದ ಕಾರಣದಿಂದ ಅಥವಾ ಕಥನಾಭಿಲಾಷೆಯಿಂದ ಏನಾದರೊಂದು ದೋಷದಿಂದ ಕೂಡಿದ ವಸ್ತು ಮಹಾಪಾತಕದಂತೆ ಹೇಳಲು ಯೋಗ್ಯವಲ್ಲ ಎಂದು ಹೇಳಲು ಆಚ್ಛಾದಿತಗೊಳಿಸಲಾಗುತ್ತದೆ. ಉದಾ

ದುರ್ವಚಂ ತದಥ ಮಾಸ್ಮ ಭೂನ್ಮೃಗ ಸ್ತ್ವಯ್ಯಸೌ ಯದಕರಿಷ್ಯದೋಜಸಾ!
ನೈನ ಮಾಶು ಯದಿ ವಾಹಿನೀಪತಿಃ ಪ್ರತ್ಯಪತ್ಸ್ಯತ ಶಿತೇನ ಪತ್ರಿಣಾ [೬೪]
ಈ ನಮ್ಮ ಸೇನಾಧಿಪತಿಯು ತನ್ನ
ನಿಶಿತ ಬಾಣದಿಂದ ಕಡಿದುರುಳಿಸದಿರ್ದಡೆ
ಈ ಮಹಾಮೃಗ ನಿನಗದೇನನೆಸಗುತಿದ್ದಿತೊ
ಹೇಳಲಸದಳವದನು
ಆ ಅನರ್ಥವೆಂದಿಗೂ ಘಟಿಸದಿರಲಿ ನಿನಗೆ [೬೪]

[ಕಿರಾತಾರ್ಜುನೀಯ ಕಾವ್ಯದಲ್ಲಿ ಕಿರಾತವೇಷಧಾರಿ ಶಂಕರನ ಅನುಚರ ಸೈನಿಕನೊಬ್ಬ ಅರ್ಜುನನಿಗೆ ಹೇಳುತ್ತಾನೆ]

ಅಥವಾ

[ಕುಮಾರ ಸಂಭವದಲ್ಲಿ ಕಪಟ ವಟುವೇಷಧಾರಿ ಶಂಕರನು ಪಾರ್ವತಿಯನ್ನು ಪರೀಕ್ಷಿಸುವ ಸಲುವಾಗಿ ಶಂಕರನ ನಿಂದೆ ಮಾಡತೊಡಗಿದಾಗ, ಪಾರ್ವತಿ ತನ್ನ ಸಖಿಯೊಂದಿಗೆ ಹೀಗೆ ಹೇಳುತ್ತಾಳೆ]

ನಿವಾರ್ಯತಾಮಾಲಿ ಕಿಮಪ್ಯಯಂ ವಟುಃ
ಪುನರ್ವಿವಕ್ಷುಃ ಸ್ಫುರಿತೋತ್ತರಾಧರಃ|
ನ ಕೇವಲಂ ಯೋ ಮಹತೋಽಪಭಾಷತೇ
ಶೃಣೋತಿ ತಸ್ಮಾದಪಿ ಯಃ ಸ ಪಾಪಭಾಕ್ [೬೫] [ಕುಮಾರ ಸಂಭವ 5-83]
ತಡೆ ಈ ವಟುವನೆಂತಾದರೂ ಸಖಿ
ಮತ್ತೇನನೊ ಹೇಳಲೆಂದೆ
ತುಟಿಯನಲುಗಿಸುತಿಹನ.
ಹಿರಿದ ನಿಂದಿಸುವವರಷ್ಟೆ
ಅದ ಕೇಳುವವರೂ ಪಾಪ ಭಾಜನರಲ್ತೆ [೬೫] [ಕು.ಸಂ. 5-83]

ಈ ಉದಾಹರಣೆಗಳಲ್ಲಿ ಅರ್ಜುನವಧೆ ಮತ್ತು ಭಗವಾನ್ ಶಂಕರನ ನಿಂದೆ ಇವೆರಡೂ ಪ್ರಕಟವಾಗಿ ಹೇಳಲರ್ಹವಲ್ಲ; ಆದ್ದರಿಂದ ಆಚ್ಛಾದನೆಯ (ಸಂವರಣ) ಮುಖಾಂತರ ಅದನ್ನು ರಮಣೀಯವಾಗಿಸಿದ್ದಾನೆ. ಕವಿಯ ಕಥನಾಭಿಲಾಷೆಯಿಂದ ತಡೆಯಲ್ಪಟ್ಟುದು –

ಸೋಽಯಂ ದಂಭಧೃತವ್ರತಃ ಪ್ರಿಯತಮೇ ಕರ್ತುಂ ಕಿಮಪ್ಯುದ್ಯತಃ [೬೬]

ಓ! ಪ್ರಿಯೆ! ಈ ಮಿಥ್ಯಾವ್ರತಿ ಅದೇನನೋ ಮಾಡ ಹೊರಟಿಹನು [೬೬] [1-50]

[ತಾಪಸವತ್ಸರಾಜ ನಾಟಕದಲ್ಲಿ ಪತ್ಸರಾಜ ಉದಯನನು ಪದ್ಮಾವತಿಯನ್ನು ಮದುವೆಯಾಗುವ ಸಮಯದಲ್ಲಿ ತನ್ನ ಮಹಾರಾಣಿ ವಾಸವದತ್ತೆಯನ್ನು ನೆನೆಸಿಕೊಂಡು ಮೇಲಿನಂತೆ ಹೇಳುತ್ತಾನೆ]

ಹೀಗೆ ಸಂವೃತಿ ವಕ್ರತೆಯನ್ನು ವಿವೇಚಿಸಿ, ಪದಮಧ್ಯದಲ್ಲಿ ಸೇರಿಕೊಂಡ ಕಾರಣದಿಂದಾಗಿ ಇದು ಸುಸಂದರ್ಭವೆಂದು ಪ್ರತ್ಯಯ ವಕ್ರತೆಯ ಪ್ರಕಾರವೊಂದನ್ನು ಈಗ ವಿವೇಚಿಸಲಾಗುವುದು.

ಪ್ರಸ್ತುತೌಚಿತ್ಯವಿಚ್ಛಿತ್ತಿಂ ಸ್ವಮಹಿಮ್ನಾ ವಿಕಾಸಯನ್
ಪ್ರತ್ಯಯಃ ಪದಮಧ್ಯೇಽನ್ಯಾಮುಲ್ಲಾಸಯತಿ ವಕ್ರತಾಮ್[17]

ಪದಮಧ್ಯದಲ್ಲಿರುವ ಪ್ರತ್ಯಯವು ತನ್ನೊಂದು ಉತ್ಕರ್ಷದಿಂದ ಪ್ರಸ್ತುತ ವಸ್ತುವಿನ ಔಚಿತ್ಯದ ಸೌಂದರ್ಯವನ್ನು ವಿಕಾಸಗೊಳಿಸುತ್ತ ಅಪೂರ್ವವಾದೊಂದು ವಕ್ರತೆಯನ್ನು ಪ್ರಕಾಶಿತಗೊಳಿಸುತ್ತದೆ [17]

ಪದಮಧ್ಯದಲ್ಲಿರುವ ಕೃದಾದಿ ಪ್ರತ್ಯಯಗಳು ಅಪೂರ್ವವಾದೊಂದು ವಕ್ರತೆಯನ್ನು ಅಂದರೆ ಸೌಂದರ್ಯವನ್ನು ಉದ್ದೀಪನಗೊಳಿಸುತ್ತಿರುತ್ತವೆ.

ಅವು ವರ್ಣಿತ ವಸ್ತುವಿನ ಔಚಿತ್ಯದ ಸೌಂದರ್ಯವನ್ನು ಹೆಚ್ಚಿಸುತ್ತಿರುವಂತೆ ಕಂಡುಬರುತ್ತವೆ. ಇದು ಹೇಗೆ ಎಂದರೆ ತಮ್ಮ ಮಹಿಮೆ ಅಥವಾ ಉತ್ಕರ್ಷದ ಮೂಲಕ ಉದಾ :

ವೇಲ್ಲದ್ಬಲಾಕಾಘನಾ: [೬೭] - [II-27]

ಅಥವಾ

ಸ್ನಿಹ್ಯಾತ್ ಕಟಾಕ್ಷೇದೃಶೌಇತಿ [೬೮] - [1-121]

ಮೇಲಿನ ಎರಡೂ ಉದಾಹರಣೆಗಳಲ್ಲಿ ವರ್ತಮಾನ ಕಾಲವನ್ನು ಪ್ರತಿಪಾದಿಸುವ ಶತೃಂತ ಪ್ರತ್ಯಯವು ಭೂತ ಮತ್ತು ಭವಿಷ್ಯತ್‌ಗಳ ಸೌಂದರ್ಯದಿಂದ ಹೀನವಾಗಿದ್ದರೂ, ವರ್ತಮಾನದ ಸಹಜ ರಮಣೀಯತೆಯಿಂದ ಕೂಡಿ ವಸ್ತುವಿನ ಸೌಂದರ್ಯವನ್ನು ಪ್ರಕಟಪಡಿಸುತ್ತ ರಸಿಕ ಜನರ ಹೃದಯಕ್ಕೆ ಆಹ್ಲಾದಕಾರಿಯಾಗಿ ಪ್ರತ್ಯಯ ವಕ್ರತೆಯೆನಿಸುತ್ತದೆ. ಇದರ ಇತರ ಪ್ರಕಾರಗಳನ್ನು ವಿವೇಚಿಸಬಹುದು.

ಆಗಮಾದಿ ಪರಿಸ್ಪಂದ ಸುಂದರಃ ಶಬ್ದ ವಕ್ರತಾಮ್।
ಪರಃ ಕಾಮಪಿ ಪುಷ್ಣಾತಿ ಬಂಧಚ್ಛಾಯಾ ವಿಧಾಯಿನೀಮ್[18]

ಆಗಮಾದಿಗಳ ಪರಿಸ್ಫುರಣದಿಂದ ಸುಂದರವಾದ ಎರಡನೇ ಪ್ರಕಾರದ ಪ್ರತ್ಯಯವು ಬಂಧವಿನ್ಯಾಸದ ಶೋಭೆಗೆ ಕಾರಣವಾದ ಶಬ್ದ ವಕ್ರತೆಯನ್ನು ಅರ್ಥಾತ್ ವಾಚಕ ವಕ್ರತೆಯನ್ನು ಪೋಷಿಸುತ್ತದೆ [18]

ಎರಡನೇ ಪ್ರಕಾರದ ಪ್ರತ್ಯಯ ವಕ್ರತೆಯು ಶಬ್ದವಕ್ರತೆಯನ್ನು ಉಂಟುಮಾಡುತ್ತದೆ; ಅರ್ಥಾತ್ ವಾಚಕ ವಕ್ರತೆಯನ್ನು ಸೃಷ್ಟಿಸುತ್ತದೆ. ಎಂಥ ಪ್ರಕಾರದ ಪ್ರತ್ಯಯ ವಕ್ರತೆ?

ಆಗಮಾದಿಗಳ ಪರಿಸ್ಫುರಣದಿಂದ ರಮಣೀಯವಾದ 'ಮುಮ್' ಇತ್ಯಾದಿಗಳು ಆದಿಯಲ್ಲಿರುವುವು - ಆಗಮಾದಿಗಳು. ಈ ಆಗಮಾದಿಗಳ ಪರಿಸ್ಪಂದದಿಂದ ಸುಂದರವಾದ ಪ್ರತ್ಯಯಗಳು ಬಂಧ ಶೋಭೆಯನ್ನು ಉತ್ಪನ್ನ ಮಾಡುವ ಶಬ್ದ ವಕ್ರತೆಯನ್ನು ಪೋಷಿಸುತ್ತವೆ.

ಜಾನೇ ಸಖ್ಯಾಸ್ತವ ಮಯಿ ಮನಃ ಸಂಭೃತ ಸ್ನೇಹಮಸ್ಮಾ-
ದಿತ್ಥಂ ಭೂತಾಂ ಪ್ರಥಮ ವಿರಹೇ ತಾಮಹಂ ತರ್ಕಯಾಮಿ|
ವಾಚಾಲಂ ಮಾಂ ನ ಖಲು ಸುಭಗಂಮನ್ಯಭಾವಃ ಕರೋತಿ
ಪ್ರತ್ಯಕ್ಷಂ ತೇ ನಿಖಿಲಮಚಿರಾದ್ ಭ್ರಾತರುಕ್ತಂ ಮಯಾ ಯತ್ [೬೯]

[ಮೇಘದೂತ - 90]

ನಿನ್ನ ಕೆಳದಿಯ ಮನವು ನನ್ನ ವಿಷಯಕೆ
ಅತಿ ಪ್ರೇಮಪೂರ್ಣವೆಂದರಿತಿರುವೆನು
ಅಂತಾಗಿ ಈ ಪ್ರಥಮ ವಿರಹದೊಳವಳು
ಇಂತಿರುವಳೆಂದೂಹಿಸುವೆನು
ಸುಭಗನಾನೆಂದೆನುವ ಹೆಮ್ಮೆಯೆನ್ನನು
ವಾಚಾಳಿ ಮಾಡಲಿಲ್ಲವಿದು ನಿಶ್ಚಯ
ಸೋದರನೆ ನಾ ಹೇಳಿರುವುದೆಲ್ಲವನು
ಇಷ್ಟರಲೆ ಕಣ್ಣಾರೆ ಕಾಣ್ಬೆ ನೀನೆ [೬೯]

ಹಾಗೆಯೇ

ದಾಹೋಂಭಃ ಪ್ರಸೃತಿಮ್ಪಚಃ ಇತಿ [೭೦] [1-48]
ಪಾಯಂ ಪಾಯಂ ಕಲಾಚೀಕೃತಕದಲಿದಲಮ್ ಇತಿ [೭೧] [2-10]

ಇಲ್ಲಿ 'ಸುಭಗಂಮನ್ಯಭಾವ', 'ಪ್ರಸೃತಿಂಪಚ' ಇತ್ಯಾದಿ ಪದಗಳಲ್ಲಿ 'ಮುಮಾದಿ ಪ್ರತ್ಯಯಗಳ ವಿಲಾಸದಿಂದಾಗಿ ರಮಣೀಯವಾದ ಪ್ರತ್ಯಯ ವಿನ್ಯಾಸದ ಶೋಭೆಯನ್ನುಂಟು ಮಾಡುವ ಶಬ್ದ ವಕ್ರತೆಯನ್ನು ಪೋಷಿಸಲಾಗಿದೆ.

ಈ ರೀತಿ ಪ್ರಸಂಗಕ್ಕೆ ಅನುರೂಪವಾದ, ಪದಗಳ ಮಧ್ಯದಲ್ಲಿರುವ ಪ್ರತ್ಯಯ ವಕ್ರತೆಯನ್ನು ವಿವೇಚಿಸಿದ ನಂತರ, ವೃತ್ತಿ ವಕ್ರತೆಯನ್ನು ಕೈಗೆತ್ತಿಕೊಳ್ಳುತ್ತಾನೆ. ಘಟಕ ಪದ ಅಥವಾ ಪದಗಳ ಪದಶಃ ಅರ್ಥಕ್ಕಿಂತ ಭಿನ್ನವಾದ ಒಟ್ಟರ್ಥವನ್ನು ಇವು ತಂದುಕೊಡುತ್ತವೆ.

ಅವ್ಯಯೀಭಾವ ಮುಖ್ಯಾನಾಂ ವೃತ್ತೀನಾಂ ರಮಣೀಯತಾ|
ಯತ್ರೋಲ್ಲಸತಿ ಸಾಜ್ಞೇಯಾ ವೃತ್ತಿವೈಚಿತ್ರ್ಯವಕ್ರತಾ [19]

ಎಲ್ಲಿ ಅವ್ಯಯೀಭಾವ (ಸಮಾಸ) ಪ್ರಧಾನವಾದ ವೃತ್ತಿಗಳ ಸೌಂದರ್ಯ ಹೊಳೆಯುತ್ತಿರುತ್ತದೋ

ಅದನ್ನು ವೃತ್ತಿವೈಚಿತ್ರ್ಯದಿಂದುಂಟಾದ ವಕ್ರತೆ ಎಂದು ತಿಳಿಯಬೇಕು] [19]

ವೃತ್ತಿಗಳ ವೈಚಿತ್ರ್ಯ ಅರ್ಥಾತ್ ವಿಚಿತ್ರತೆ, ಸಮಾನ ಧರ್ಮಿಗಳಿಗಿಂತ (ಸಜಾತೀಯಗಳಿಗಿಂತ) ಸೌಕುಮಾರ್ಯದ ಆಧಿಕ್ಯ, ಅದರಿಂದ ಉಂಟಾಗುವ ವಕ್ರತೆಯನ್ನು ವೃತ್ತಿವೈಚಿತ್ರ್ಯವಕ್ರತೆ ಎಂದು ಕರೆಯಲಾಗುತ್ತದೆ. ಯಾವ ರೀತಿಯವು? ಯಾವುದರಲ್ಲಿ ರಮಣೀಯತೆ ಹೊರಸೂಸುತ್ತದೋ ಅರ್ಥಾತ್ ಸೌಂದರ್ಯ ಹೊಳೆಯುತ್ತದೋ ಅಂಥವು. ಯಾವುದರ ರಮಣೀಯತೆ? ವೃತ್ತಿಗಳದು. ಯಾವ ವೃತ್ತಿಗಳದು ಎಂದರೆ ಅವ್ಯಯೀ ಭಾವ ಸಮಾಸ ಯಾವುದರಲ್ಲಿ ಪ್ರಧಾನ ಭೂತವಾಗಿರುತ್ತದೋ ಹಾಗೂ ವ್ಯಾಕರಣದಲ್ಲಿ ಹೆಸರಾದ ಅವ್ಯಯೀಭಾವ ಪ್ರಧಾನ ಸಮಾಸ-ತದ್ಧಿತ ಮತ್ತು 'ಸುಪ್' ಧಾತು ವೃತ್ತಿಗಳ ಸಹಜ ಸೌಂದರ್ಯ ಅಭಿವ್ಯಕ್ತವಾಗುತ್ತದೋ ಅದನ್ನು ವೃತ್ತಿ ವೈಚಿತ್ರ್ಯ ಎಂದು ಹೇಳಲಾಗುತ್ತದೆ. ಇದರ ಆಶಯವೆಂದರೆ, ಈ ಸಮಾಸ, ತದ್ಧಿತವೇ ಮೊದಲಾದ ವೃತ್ತಿಗಳ ಸಹಜ ಸೌಂದರ್ಯವು ಒಂದು ಉಚಿತ ನೆಲೆಯಲ್ಲಿ ಬಳಕೆಯಾದಾಗ ಹೊರಹೊಮ್ಮುತ್ತದೆ.

ಅಭಿವ್ಯಕ್ತಿಂ ತಾವದ್ ಬಹಿರಲಭಮಾನಃ ಕಥಮಪಿ
ಸ್ಫುರನ್ನಂತಃ ಸ್ವಾತ್ಮನ್ಯಧಿಕ ತರಸಂಮೂರ್ಛಿತ ತರಃ
ಮನೋಜ್ಞಾಮುದ್ವೃತ್ತಸ್ಮರಪರಿಮಲಸ್ಪಂದ ಸುಭಗಾ-
ಮಹೋ ದತ್ತೇ ಶೋಭಾಮಧಿಮಧು ಲತಾನಾಂ ನವರಸಃ [೭೨]

ಮಧುಮಾಸದೊಳೆಂತೂ ಹೊರಹೊಮ್ಮದ
ಲತೆಗಳ ನವರಸವು
ಅತ್ಯಧಿಕ ಸಮ್ಮೋಹದ ಭಾರದೊಳು
ಒಳಗೊಳಗೇ (ಅಧಿ)ವರ್ಧಿಸುತಲಿ
ಉತ್ಕೃಷ್ಟ ಸುಗಂಧವ
ಭರದಲಿ ಹರಡುವುದು [೭೨]

ಇಲ್ಲಿ "ಅಧಿಮಧು" ಶಬ್ದದಲ್ಲಿ (ಮಧೌ ಇತಿ ಅಧಿಮಧು) ವಿಭಕ್ತ್ಯರ್ಥದಲ್ಲಿ ವಿಹಿತವಾಗಿರುವ ಅವ್ಯಯೀಭಾವ ಸಮಾಸವು ಸಮಯದ ಪ್ರತಿಪಾದಕವಾಗಿದ್ದರೂ ವಿಷಯ ಸಪ್ತಮೀ ವಿಭಕ್ತಿಯ ಬೋಧೆ ಉಂಟು ಮಾಡುತ್ತ, "ನವರಸ" ಶಬ್ದದ ಶ್ಲೇಷೆಯ ಶೋಭೆಯಿಂದ ಉಂಟಾಗುವ ವೈಚಿತ್ರ್ಯವನ್ನು ಹೊರಹೊಮ್ಮಿಸುತ್ತದೆ (ಮಧುಮಾಸ (ಋತು)ವು ಪ್ರೇಮ ಭಾವನೆಗಳನ್ನುದ್ದೀಪಿಸುತ್ತದೆ ಎಂಬುದೇ ಆ ಶ್ಲೇಷಾರ್ಥ) ಈ ಅವ್ಯಯೀ ಭಾವ ಸಮಾಸ ವೃತ್ತಿಯ ಹೊರತಾಗಿಯೂ, ಬೇರೆ ವಿಧಾನದಿಂದ ಇದೇ ಅರ್ಥವನ್ನು ತರಬಹುದಾದರೂ ಕಾವ್ಯ ರಸಿಕರಿಗೆ ಅದೇ ವಿಧವಾದ ಆನಂದವನ್ನಲ್ಲ; ಆ ಸೌಂದರ್ಯವನ್ನೂ ಅಲ್ಲ. ಉದ್ವೃತ್ತ, ಪರಿಮಳ, ಸ್ಪಂದ ಹಾಗೂ ಸುಭಗ ಶಬ್ದಗಳಲ್ಲಿಯ ಉಪಚಾರ ವಕ್ರತೆಯಂತೂ ಸ್ಪಷ್ಟವೇ ಇದೆ.

ಇನ್ನೊಂದು ಉದಾಹರಣೆ

ಆ ಸ್ವರ್ಲೋಕಾದುರಗನಗರಂ ನೂತನಾಲೋಕಲಕ್ಷ್ಮೀಂ-
ವ್ಯಾತನ್ವದ್ಭಿಃ ಕಿಮಿವ ಸಿತತಾಂ ಚೇಷ್ಟಿತೈಸ್ತೇ ನ ನೀತಮ್|
ಅಪ್ಯೇ ತಾಸಾಮ್ ದಯಿತವಿರಹೇ ವಿದ್ವಿಷತ್ಸುಂದರೀಣಾಮ್
ಯೈರಾನೀತಾ ನಖಪದಮಯೀ ಮಂಡನಾ ಪಾಂಡಿಮಾನಸಮ್ [೭೩]
ದೇವಲೋಕದಿಂದ ನಾಗಲೋಕದವರೆಗೆ
ಯಾವುದನು ತಾನೆ ಬಿಳಿದಾಗಿಸದೆ ಬಿಟ್ಟಿಹುದು
ನಿಮ್ಮ ಕಾರ್ಯಗಳ ನೂತನಾಲೋಕಲಕ್ಷ್ಮಿ
ಪ್ರಿಯರಿಂದಗಲಿದ ಶತ್ರುಪತ್ನಿಯರ
ಶರೀರದ ಮೇಲಿನ ನಖಕ್ಷತಗಳೆಂಬಾಭರಣಗಳನೂ
ಬಿಳಿದಾಗಿಸಿಬಿಟ್ಟಿಹುದು. [ಸುಭಾಷಿತಾವಳಿ - 2954]

ಇಲ್ಲಿ ಮೂಲದಲ್ಲಿ ಪಾಂಡುತ್ವ, ಪಾಂಡುತಾ ಅಥವಾ ಪಾಂಡುಭಾವ ಈ ಸಮಾನಾರ್ಥಕ ಶಬ್ದಗಳಿಗಿಂತ 'ಪಾಂಡಿಮಾನಮ್' ಶಬ್ದಕ್ಕಿರುವ ಅಪೂರ್ವವಾದ ವೃತ್ತಿವೈಚಿತ್ರ್ಯ ವಕ್ರತ್ವ ಗೋಚರವಾಗುತ್ತದೆ. ಇದೇ ರೀತಿ ಇನ್ನೊಂದು

ಕಾಂತ್ಯೋನ್ಮೀಲತಿ ಸಿಂಹಲೀ ಮುಖರುಚಾಂ ಚೂರ್ಣಾಭಿಷೇಕೋಲ್ಲಸ-
ಲ್ಲಾವಣ್ಯಾಮೃತ ವಾಹಿನಿರ್ಝರ ಜುಷಾಮಾ ಚಾಂತಿಭಿಶ್ಚಂದ್ರಮಾಃ|
ಯೇನಾ ಪಾನ ಮಹೋತ್ಸವ ವ್ಯತಿಕರೇಷ್ವೇಕಾತಪತ್ರಾಯ್ಯತೇ
ದೇವಸ್ಯ ತ್ರಿದಶಾಧಿಪಾವಧಿ ಜಗಜ್ಜಿಷ್ಣೋರ್ಮನೋಜನ್ಮನಃ [೭೪]

ಚೂರ್ಣಾಭಿಷೇಕದ ಕತದೆ
ಉಲ್ಲಸಿತವಾದ ಲಾವಣ್ಯಾಮೃತ
ನಿರ್ಝರಿಣಿಯೊಳು ಮಿಂದಿಹ
ಸಿಂಹಳದ ಸುಂದರಿಯರ ಮೊಗದ ಕಾಂತಿಯನು
ಇನಿಸಿನಿಸೆ ಕುಡಿದು ಚಂದ್ರಮನು
ಅದೆನಿತು ಕಾಂತಿಯ ತಳೆದಿಹನೆಂದರೆ
ನಾಕದೊಡೆಯನು ಮೊದಲಾಗಿ
ಲೋಕಸಮಸ್ತವನು ಗೆಲುವಿಚ್ಛೆಯ
ಮನಸಿಜನ ಪಾನಗೋಷ್ಠಿಯೊಳವನು
ಬೆಳುಗೊಡೆಯವೋಲಿಹನು [೭೪]

ಇಲ್ಲಿ ನಾಮಧಾತುವೃತ್ತಿ (ಸುಪ್‌ಧಾತು) ಹಾಗೂ ಸಮಾಸವೃತ್ತಿಗಳ ಅಪೂರ್ವ ವೈಚಿತ್ರ್ಯ ಲಕ್ಷ್ಯಕ್ಕೆ ಬರುತ್ತದೆ. ಇದುವರೆಗೆ ವೃತ್ತಿವಕ್ರತೆಯ ವಿಚಾರ ಮಾಡಿ, ಈಗ ಪದಗಳ ಪೂರ್ವಾರ್ಧದಲ್ಲಿರುವ ಮತ್ತು ಕ್ರಮಾನುಗತವಾದ ಭಾವವಕ್ರತೆಯನ್ನು ಕುರಿತು ವಿಚಾರ

ಮಾಡಲಾಗುವುದು.

ಸಾಧ್ಯತಾಮಪ್ಯನಾದೃತ್ಯ ಸಿದ್ಧತ್ವೇನಾಭಿಧೀಯತೇ|
ಯತ್ರ ಭಾವೋ ಭವೇದೇಷಾ ಭಾವ ವೈಚಿತ್ರ್ಯ ವಕ್ರತಾ[20]

ಎಲ್ಲಿ ಭಾವ ಅರ್ಥಾತ್ ಕ್ರಿಯೆಯನ್ನು, ಸಾಧ್ಯತೆಯನ್ನು ಕಡೆಗಣಿಸಿ, ಸಿದ್ಧರೂಪದಲ್ಲಿ ಪ್ರತಿಪಾದಿಸಲಾಗುತ್ತದೋ ಅಲ್ಲಿ ಭಾವ ವೈಚಿತ್ರ್ಯ ವಕ್ರತೆ ಉಂಟಾಗುತ್ತದೆ. [ಇನ್ನೂ ನಡೆಯ ಬೇಕಾದ ಕ್ರಿಯೆಯನ್ನು ನಡೆದಂತೆ ವರ್ಣಿಸಲಾಗುವ ಸಂದರ್ಭ ಭಾವ ವೈಚಿತ್ರ್ಯ ವಕ್ರತೆ ಎನಿಸುತ್ತದೆ] [೨೦]

ಈಗ ವರ್ಣಿಸಲಾಗಿರುವುದು. ಭಾವವೈಚಿತ್ರ್ಯ ವಕ್ರತೆಯ ಸ್ವರೂಪ: ಭಾವದ ಅರ್ಥ ಧಾತ್ವರ್ಥರೂಪ. ಅರ್ಥಾತ್ ಕ್ರಿಯೆಯ ವೈಚಿತ್ರ್ಯ. ಅದರ ವೈಚಿತ್ರ್ಯ ಬೇರಿನ್ನಾವುದೇ ರೀತಿಯಿಂದ ವರ್ಣಿತವಾಗುವುದಕ್ಕಿಂತ ವಿಶಿಷ್ಟವಾದ ರೀತಿಯಲ್ಲಿ ಸಾಧಿತವಾದ ಸೌಂದರ್ಯ. ಇನ್ನೂ ಸಾಧಿತವಾಗಬೇಕಾಗಿದೆ ಎಂಬ ವಾಸ್ತವ ಸಂಗತಿಯನ್ನು ಕಡೆಗಣಿಸಿ ವಸ್ತುವೊಂದನ್ನು ಸಾಧಿತವಾಗಿ ಬಿಟ್ಟಿದೆಯೆಂದು ವರ್ಣಿಸುವ ವಿಧಾನವೆಂದು ಅದನ್ನು ವಿವರಿಸಲಾಗಿದೆ. ಇದರ ಒಟ್ಟು ಆಶಯವೆಂದರೆ, - ಉದ್ದೇಶಿತ ವಿಚಾರವೊಂದು, ಇನ್ನೂ ಸಾಧಿತವಾಗಬೇಕಾಗಿದೆ ಎಂದು ವರ್ಣಿತವಾದರೆ ದುರ್ಬಲವಾಗಿ ಪೋಷಿತವಾಗುವುದಾದಲ್ಲಿ ಕವಿಯು ಅದನ್ನು ಕಾಲ್ಪನಿಕವಾಗಿ ಆಗಲೇ ಸಿದ್ಧವಾಗಿದೆಯೆಂಬಂತೆ ವರ್ಣಿಸುತ್ತಾನೆ. ಇದರಿಂದ ಅದಕ್ಕೆ ಬಲವಾದ ಪೋಷಣೆ ಒದಗುತ್ತದೆ. ಉದಾ:

ಶ್ವಾಸಾಯಾಸಮಲೀಮಸಾಧರ ರುಚೇರ್ದೋಃ ಕಂದಲೀತಾನವಾತ್
ಕೇಯೂರಾಯಿತಮಂಗದ್ಯೈಃ ಪರಿಣತಮ್ ಪಾಂಡಿಮ್ನಿ ಗಂಡತ್ವಿಷಾ|
ಅಸ್ಯಾಃ ಕಿಂ ಚ ವಿಲೋಚನೋತ್ಪಲ ಯುಗೇನಾತ್ಯಂತಮಶ್ರು ಸ್ನುತಾ
ತಾರಂ ತಾದೃಗಪಾಂಗಯೋರರುಣಿತಂ ಯೇನೋತ್ಪ್ರತಾಪಃ ಸ್ಮರಃ [೭೫]

ಅಧರವಾದರೊ ನಿಟ್ಟುಸಿರ ತಾಪದಿಂ
ಕಾಂತಿಗುಂದಿಹುದು
ಬಾಲೆಯ ಎಳೆಯ ಬಾಳೆಯ ತೋಳ್ಗಳು
ಕೃಶಗೊಂಡು ತೋಳಬಂದಿಗಳು ಕಂಕಣಗಳಾಗಿವೆ.
ಕಪೋಲಗಳಾದರೊ ಬೆಳ್ಳಗೆ ಬಿಳಿಚಿಕೊಂಡಿಹವು
ಕನ್ನೈದಿಲೆಯಂಥ ಕಂಗಳೆರಡೂ ಕಣ್ಣೀರ ಸುರಿಸಿ ಸುರಿಸಿ
ಅಪಾಂಗದೊಳು ಅರುಣವರ್ಣವ ತಾಳಿವೆ
ಇದರಿಂದ ಮನಸಿಜನು ಅಧಿಕಪ್ರತಾಪಿಯಾಗಿಹನು [೭೫]

ಮೇಲಿನ ಪದ್ಯದಲ್ಲಿ ಭಾವದ ಸಿದ್ಧರೂಪದ ಪ್ರತಿಪಾದನೆಯು ಅತ್ಯಂತ ಚಮತ್ಕಾರಕಾರಿಯಾಗಿದೆ.

ಭಾವವಕ್ರತೆಯನ್ನು ವಿಚಾರ ಮಾಡಿದ ನಂತರ, ಪ್ರಾತಿಪದಿಕದೊಳಗಿರುವ ಲಿಂಗ ವಕ್ರತೆಯನ್ನು ಚರ್ಚಿಸಲಾಗುವುದು

ಭಿನ್ನಯೋರ್ಲಿಂಗಯೋರ್ಯಸ್ಯಾಮ್ ಸಾಮಾನಾಧಿಕರಣ್ಯತಃ
ಕಾಪಿ ಶೋಭಾಭ್ಯುದೇತ್ಯೇಷಾ ಲಿಂಗವೈಚಿತ್ರ್ಯ ವಕ್ರತಾ [21]

ಭಿನ್ನ ಲಿಂಗಗಳಿಗೆ ಸೇರಿದ ಎರಡು ಶಬ್ದಗಳು ಸಮಾನಾಧಿಕರಣದಲ್ಲಿ ಒಂದೇ ವಸ್ತುವನ್ನು ಸೂಚಿಸಲು ಬಳಕೆಯಾದಾಗ ಅಪೂರ್ವ ಸೌಂದರ್ಯ ಸೃಷ್ಟಿಯಾಗುತ್ತದೆ. ಇದನ್ನು ಲಿಂಗವೈಚಿತ್ರ್ಯ ಎಂದು ಕರೆಯಲಾಗುತ್ತದೆ.

ಪ್ರಸ್ತುತ ಲಿಂಗವೈಚಿತ್ರ್ಯ ವಕ್ರತೆ ಎಂಬುದು ಸ್ತ್ರೀಲಿಂಗವೇ (ನಪುಂ) ಮೊದಲಾದವುಗಳ ವೈಚಿತ್ರ್ಯದ ಸೌಂದರ್ಯಕ್ಕೆ ಸಂಬಂಧಿಸಿದ್ದು. ಮೇಲಿನ ಕಾರಿಕೆಯಲ್ಲಿ ಬೇರೆ ಕ್ರಿಯಾಪದದ ಅಭಾವದಲ್ಲಿ 'ಭವತಿ' ಎಂಬ ಕ್ರಿಯಾಪದ ಅಧ್ಯಾಹಾರ. ಎರಡು ಭಿನ್ನ ಲಿಂಗಗಳು ಸಮಾನಾಧಿಕರಣ್ಯದಿಂದ ಒಂದೇ ಒಂದು ಆಶ್ರಯ ಅಂದರೆ ಒಂದೇ ವಸ್ತುವನ್ನು ಸೂಚಿಸಲು ಬಳಕೆಯಾದಾಗ ಈ ವಿಭಿನ್ನ ಲಿಂಗಗಳ ಸಮಾನ ನೆಲೆಯಿಂದ ಅಪೂರ್ವವಾದೊಂದು ಶೋಭೆ ಉಂಟಾಗುತ್ತದೆ. ಉದಾ:

ಯಸ್ಯಾರೋಪಣ ಕರ್ಮಣಾಪಿ ಬಹವೋ ವೀರವ್ರತಮ್ ತ್ಯಾಜಿತಾಃ
ಕಾರ್ಯಂ ಪುಂಖಿತ ಬಾಣಮೀಶ್ವರಧನುಸ್ತದ್ದೋರ್ಭಿರೇಭಿರ್ಮಯಾ
ಸ್ತ್ರೀ ರತ್ನಂ ತದಗರ್ಭ ಸಂಭವ ಮಿತೋ ಲಭ್ಯಂ ಚ ಲೀಲಾಯಿತಾ
ತೇನೈಷಾ ಮಮ ಪುಲ್ಲ ಪಂಕಜವನಂ ಜಾತಾ ದೃಶಾಂ ವಿಂಶತಿಃ [೭೬]

ಯಾವ ಧನುವಿಗೆ ಹೆದೆಯೇರಿಸಿದುದರಿಂದೆ
ಅನೇಕರು ವೀರವ್ರತವನು ತೊರೆದರೊ
ಅಂಥ ಶಿವಧನುಸ್ಸಿಗೆ ನನ್ನೀ ಬಾಹುಗಳಿಂದ
ಬಾಣವೇರಿಸಲಹುದಿಂದು
ಇದಕೆ ದೊರೆವಳಾ ನಾರೀರತ್ನವೆನಿಪ ಅಯೋನಿಜೆ
ಅದಕೆಂದೆ ನನ್ನೀ ಇಪ್ಪತ್ತು ಕಂಗಳು
ಅರಳಿದಂಬುಜವನವಾಗಿಹವು ಉಲ್ಲಾಸದಿಂದೆ [೭೬]

[ಬಾಲರಾಮಾಯಣ - 1- 30]

ಅಥವಾ

ನಭಸ್ವತಾ ಲಾಸಿತ ಕಲ್ಪವಲ್ಲೀ ಪ್ರಬಾಲ ಬಾಲವ್ಯಜನೇನ ಯಸ್ಯ|
ಉರಃಸ್ಥಲೇsಕೀರ್ಯತ ದಕ್ಷಿಣೇನ ಸರ್ವಾಸ್ಪದಂ ಸೌರಭಮಂಗರಾಗಃ [೭೭]

[ಬಾಲರಾಮಾಯಣ - 7 - 66]

ಕಲ್ಪವೃಕ್ಷದ ಹೊಸ ಚಿಗುರಿನಂಥ ವ್ಯಜನಗಳನು
ನರ್ತಿಸುವಂತೆ ಮಾಡಿದ ಮಲಯಾನಿಲವು

ಟಿಪ್ಪಣಿ : (76) ಇಲ್ಲಿ ದೃಶಾಂ ವಿಂಶತಿ ಸ್ತ್ರೀ ಲಿಂಗ, 'ಪುಲ್ಲಪಂಕಜವನಂ' ನಪುಂಸಕಲಿಂಗ. ಇವೆರಡೂ ಸಮನಾಧಿಕರಣದಲ್ಲಿ ಬಳಕೆಯಾಗಿರುವುದರಿಂದ ಲಿಂಗವೈಚಿತ್ರ್ಯದಂತೆ ಇದೆ. ಹಾಗೆಯೇ 77ರಲ್ಲಿ ಸರ್ವಾಸ್ಪದಂಸೌರಭಂ ನಪುಂಸಕಲಿಂಗ, ಅಂಗರಾಗ ಪುಲ್ಲಿಂಗ. ಇವೆರಡೂ ಸಮಾನಾಧಿಕರಣದಲ್ಲಿ ಬಂದು ಲಿಂಗವೈಚಿತ್ರ್ಯ ಉಂಟಾಗಿದೆ.

ಎಲ್ಲೆಡೆ ಹರಡುವ ಸುಗಂಧಿತ ಅಂಗರಾಗವನು
ಅವನೆದೆಯ ಮೇಲೆ ತೂರಿದುದು [೭೭]

ಅಥವಾ ಹೀಗೆ

ಆಯೋಜ್ಯಮಾಲಾಮೃತುಭಿಃ ಪ್ರಯತ್ನ-
ಸಂಪಾದಿತಾಮಂಸತಟೇಽಸ್ಯಚಕ್ರೇ
ಕರಾರವಿಂದಂ ಮಕರಂದ ಬಿಂದು -
ಸ್ಯಂದಿ ಶ್ರಿಯಾ ವಿಭ್ರಮ ಕರ್ಣಪೂರಃ [೭೮]

ಸಕಲ ಋತುಗಳ ಪರಿಶ್ರಮದ
ಫಲವೆನಿಪ ಹಾರವನು
ಅವನ ಭುಜಗಳ ಮೇಲೆ ತೊಡರಿಸುವಂದು
ಜೇನಹನಿ ಸುರಿಸುವ
ಲಕ್ಷ್ಮಿಯ ಕರಕಮಲವು
ಮನೋಹರ ಕರ್ಣಪೂರವದಾದು. [೭೮]

ಇದು ಇನ್ನೊಂದು ಲಿಂಗ ವೈಚಿತ್ರ್ಯ ವಕ್ರತೆ

ಸತಿ ಲಿಂಗಾಂತರೇ ಯತ್ರ ಸ್ತ್ರೀಲಿಂಗಂ ಚ ಪ್ರಯುಜ್ಯತೇ।
ಶೋಭಾನಿಷ್ಪತ್ತಯೇ ಯಸ್ಮಾ ನ್ನಾಮೈವ ಸ್ತ್ರೀತಿ ಪೇಶಲಮ್ [22]

ಇತರೆ ಲಿಂಗಗಳ ಬಳಕೆ ಸಾಧ್ಯವಿದ್ದರೂ ಸೌಂದರ್ಯ ಸೃಷ್ಟಿಯ ಸಲುವಾಗಿ ಸ್ತ್ರೀ ಲಿಂಗದ ಪ್ರಯೋಗ ಮಾಡಲಾಗುವುದು. (ಅಲ್ಲಿ ಲಿಂಗವೈಚಿತ್ರ್ಯ ವಕ್ರತೆಸಾಧ್ಯ) ಕಾರಣ ಹೆಣ್ಣಿನ ಹೆಸರೇ ಆಹ್ಲಾದಕರ [೭೭]

ಬೇರೆ ಲಿಂಗಗಳ ಪ್ರಯೋಗ ಸಾಧ್ಯವಿದ್ದರೂ ಸ್ತ್ರೀಲಿಂಗವನ್ನು ಅಳವಡಿಸಲಾಗುತ್ತದೆ. ವಸ್ತುವೊಂದರ ಹೆಸರನ್ನು ಎಲ್ಲ ಲಿಂಗಗಳಲ್ಲಿ ಬಳಸಲು ಸಾಧ್ಯವಿದ್ದರೂ, ವಸ್ತುವನ್ನು ನಿರ್ದೇಶಿಸುವಾಗ ಸ್ತ್ರೀಲಿಂಗ ವಿಷಯಕ ಪ್ರಯೋಗವನ್ನೇ ಮಾಡುವುದು ಕಂಡುಬರುತ್ತದೆ. ಸೌಂದರ್ಯ ಸೃಷ್ಟಿಯೇ ಅದರ ಉದ್ದೇಶ. ಸ್ತ್ರೀಲಿಂಗವನ್ನೇ ಏಕೆ ಪ್ರಯೋಗಿಸುತ್ತಾರೆಂದರೆ, ಹೆಣ್ಣಿನ ಹೆಸರೇ ಮನೋಹರ. ಅಲ್ಲದೆ ನೂತನ ಸೌಂದರ್ಯ ನಿರ್ಮಿತಿಯ ಸಂದರ್ಭದಲ್ಲಿ ರಸಾದಿಗಳೊಂದಿಗೆ ಸಂಯೋಜನೆ ಹೊಂದಲು ಅದು ಯುಕ್ತವಾಗಿರುವ ಕಾರಣದಿಂದಲೂ ಸ್ತ್ರೀಲಿಂಗವನ್ನೇ ಪ್ರಯೋಗಿಸುತ್ತಾರೆ.

ಉದಾ :

ಯಥೇಯಂ ಗ್ರೀಷ್ಮೋಷ್ಮವ್ಯತಿಕರವತೀ ಪಾಂಡುರಭಿಧಾ
ಮುಖೋದ್ಭಿನ್ನ ಮ್ಲಾನಾನಿಲ ತರಲವಲ್ಲೀಕಿಸಲಯಾ।
ತಟೀ ತಾರಂ ತಾಮ್ಯತ್ಯತಿಶಶಿಯಶಾಃ ಕೋಽಪಿ ಜಲದ-
ಸ್ತಥಾ ಮನ್ಯೇ ಭಾವೀ ಭುವನ ವಲಯಾಕ್ರಾಂತಿ ಸುಭಗಾ [೭೯]

ಬೇಸಿಗೆಯ ಬೇಗೆಯಲಿ ಬೇಗುದಿಗೊಂಡು
ಸಾಗರದ ತಟಿಯು ಬೆಳ್ಳಗೆ ಬಿಳಿಚಿದೆ
ಎಳೆ ಬಳ್ಳಿಗಳ ಹೊಸ ಚಿಗುರುಗಳು
ನಿಟ್ಟುಸಿರ ಗಾಳಿಗೊಲೆದಾಡುತಿವೆ
ತಟಿಯಾದರೋ ಬಹು ಸಂತಪ್ತಗೊಂಡಿದೆ
ಶಶಿಯ ಗೆಲಿದೊಂದು ಕೀರ್ತಿಯಲಿ
ಬೀಗುತಿದೆ ಜಲದ ತಾನು
ಇದರಿಂದೆ ಜಲಧರವನೊಳಗೊಂಡು
ಭೂ ಮಂಡಲವೆಲ್ಲವನು ಮುಂದೆ
ಆಕ್ರಾಂತಗೊಳಿಸುವುದು ತಟಿಯೆಂದು ಊಹಿಸುವೆನು [೭೯]

ಇಲ್ಲಿ ತಟ ಶಬ್ದದ ಬಳಕೆ ಮೂರೂ ಲಿಂಗಗಳಲ್ಲಿ ಸಾಧ್ಯವಾಗಬಹುದಾದರೂ ಸೌಕುಮಾರ್ಯದ ಸಲುವಾಗಿ ಸ್ತ್ರೀ ಲಿಂಗರೂಪವನ್ನೇ ಪ್ರಯೋಗಿಸಲಾಗಿದೆ. ಆದ್ದರಿಂದ ಈ ಪ್ರಯೋಗ ಬೇರೊಂದು ಸೌಂದರ್ಯ ವಿಧಾನದಿಂದ, ನಾಯಕ 'ಜಲಧರ'ಕ್ಕೂ ನಾಯಕಿ 'ತಟಿ'ಗೂ ಮುಂದೆ ಸಂಭವಿಸಲಿರುವ ಪ್ರೇಮ ವ್ಯವಹಾರಕ್ಕೆ ಭಿತ್ತಿಯನ್ನೊದಗಿಸುತ್ತಿದೆ. ನಿಜಕ್ಕೂ ಇದು ಅತ್ಯಂತ ಮನೋಹರವಾಗಿದೆ.

ಇದರ ಇತರೆ ಪ್ರಭೇದದ ಲಕ್ಷಣ ಹೀಗಿದೆ.

ವಿಶಿಷ್ಟಂ ಯೋಜ್ಯತೇ ಲಿಂಗಮನ್ಯಸ್ಮಿನ್ ಸಂಭವತ್ಯಪಿ|
ಯತ್ರ ವಿಚ್ಛಿತ್ತಯೇ ಸಾನ್ಯಾ ವಾಚ್ಯೌಚಿತ್ಯಾನುಸಾರತಃ[23]

ಮೇಲೆ ಹೇಳಲಾದ್ದು ಇನ್ನೊಂದು ವಿಧದ ಲಿಂಗ ವೈಚಿತ್ರ್ಯ ವಕ್ರತೆ. ಇದರಲ್ಲಿ ಕವಿಯ ಉದ್ದೇಶಕ್ಕನುಗುಣವಾಗಿ ವಸ್ತುವಿನ ಮೂರು ಲಿಂಗಗಳಲ್ಲಿ ವಿಶಿಷ್ಟವಾದ ಒಂದು ಲಿಂಗವನ್ನು ಪ್ರಯೋಗಿಸಲಾಗುತ್ತದೆ. ಅರ್ಥಾತ್ ವಸ್ತುವಿನ ಇತರ ಲಿಂಗಗಳ ಪ್ರಯೋಗ ಸಾಧ್ಯವಿದ್ದರೂ ವಿಶಿಷ್ಟ ಲಿಂಗವನ್ನು ಮಾತ್ರ ಪ್ರಯೋಗಿಸಲಾಗುತ್ತದೆ. ಕವಿಯ ಉದ್ದೇಶ ಸೌಂದರ್ಯಸೃಷ್ಟಿಯೇ ಹೊರತು ಬೇರೇನಲ್ಲ. ಅದೂ ಯಾವ ರೀತಿಯಲ್ಲಿ ಎಂದರೆ, ಅಭಿವ್ಯಕ್ತಪಡಿಸಬೇಕಾದ ವಿಚಾರದ ಔಚಿತ್ಯಕ್ಕೆ ಅನುಗುಣವಾಗಿ.

ಉದಾ:

ತ್ವಂ ರಕ್ಷಸಾ ಭೀರು ಯತೋಽಪನೀತಾ
ತಂ ಮಾರ್ಗಮೇತಾಃ ಕೃಪಾಯ ಲತಾಮೇ|
ಅದರ್ಶಯನ್ ವಕ್ತುಮಶಕ್ನುವಂತ್ಯಃ
ಶಾಖಾಭಿರಾವರ್ಜಿತ ಪಲ್ಲವಾಭಿಃ [೮೦] [ರಘುವಂಶ - 13-24]

ರಾಕ್ಷಸನು ನಿನ್ನನದಾವ ಮಾರ್ಗದಿಂ-
ಸೆಳೆದೊಯ್ದನೆನುವುದನು, ಎಲೆ ಭೀರು
ಚಿಗುರುಗಳ ಭಾರದಿಂದೊಂದೆಸೆಗೆ ಬಾಗಿದ

ತಮ್ಮ ಶಾಖೆಗಳಿಂದೆ ಕೃಪೆದೋರಿ ಅರುಹಿದುವು
ಮಾತಾಡಲಾರದೀ ಲತೆಗಳೆನಗಂದು.

ಸಂದರ್ಭ ಹೀಗಿದೆ : ರಘುವಂಶದಲ್ಲಿ ರಾಮನು ಸೀತೆಯೊಂದಿಗೆ ಪುಷ್ಪಕ ವಿಮಾನವನ್ನೇರಿ ಅಯೋಧ್ಯೆಗೆ ಹಿಂದಿರುಗುತ್ತಾ ಸೀತೆಗೆ ಹೇಳುವುದು.

ಇಲ್ಲಿ ಸೀತೆಯೊಂದಿಗೆ ಪುಷ್ಪಕವನ್ನೇರಿ ಬರುತ್ತಿದ್ದ ರಾಮನು ಜನಸ್ಥಾನದಲ್ಲಿ ಒಂದೆಡೆ ಸ್ವಲ್ಪ ಕಾಲ ಇಳಿದು-ಸೀತೆಯ ವಿರಹದಿಂದ ತನಗಾದ ವೇದನೆಯನ್ನು ಸ್ವಯಂ ವಿವರಿಸುತ್ತಿದ್ದಾನೆ. ಪರಾಧೀನ ಚಿತ್ತದ ರಾವಣನು ಹಾಗೆ ಅತಿ ಶೀಘ್ರವಾಗಿ ನಿನ್ನನ್ನು ಬಲವಂತವಾಗಿ ಅಪಹರಿಸಿ ಕೊಂಡೊಯ್ದ ಮಾರ್ಗದಲ್ಲಿ ಲತೆಗಳ ಎಲೆಗಳನ್ನು ಸವರಿಕೊಂಡು ಹೋದದ್ದರಿಂದ ಅವುಗಳ ಸ್ಥಿತಿ ಮೇಲೆ ವಿವರಿಸಿದಂತೆ ಆಗಿತ್ತು. ಲತೆಗಳು ಒಂದೆಡೆಗೆ ತಲೆಕೆಳಗಾಗಿ ಬಾಗಿದ್ದ ಅವಸ್ಥೆಯು ನಿನ್ನನ್ನು ಅಪಹರಿಸಿ ಕೊಂಡೊಯ್ದಿರಬಹುದಾದ ಮಾರ್ಗವನ್ನು ಊಹಿಸಲು ನನಗೆ ಸೂಚನೆ ಕೊಟ್ಟಿತು. ರಾಮನು ಹೇಳಬೇಕೆಂದಿದ್ದ ವಿಚಾರವಿದು. ಇದನ್ನು ಅತ್ಯಂತ ಸುಂದರವಾಗಿ, ಸೊಗಸಾಗಿ ಹೇಳುತ್ತಾನೆ.

ಎಲೈ ಭೀರು ಸ್ವಭಾವದವಳೆ, ಅರ್ಥಾತ್ ಸಹಜ ಸುಕುಮಾರತೆಯಿಂದಾಗಿ ಅಧೀರ ಹೃದಯಳಾದ ಸೀತೆ! ಅಂಥ ನೃಶಂಸ ಕೃತ್ಯಗಳನ್ನೆಸಗುವ ರಾವಣನು ನಿನ್ನನು ಯಾವ ಮಾರ್ಗವಾಗಿ ಅಪಹರಿಸಿಕೊಂಡು ಹೋದನೋ, ಅದನ್ನು ಅಂದು ಸಾಕ್ಷಾತ್ತಾಗಿ ಸೂಚಿಸಿದ್ದು, ಈಗಲೂ ನಾವು ಕಣ್ಣಾರೆ ನೋಡುತ್ತಿರುವ ಈ ಲತೆಗಳೇ. ಬಾಯಿ ಮಾತಿನಿಂದ ಆ ಮಾರ್ಗವನ್ನು ಅವು ಸೂಚಿಸಲಂತೂ ಸಾಧ್ಯವೇ ಇಲ್ಲ. ಕಾರಣ ಅವು ಜಡವಸ್ತುಗಳು. ಆದ್ದರಿಂದ ಈ ಭಾವವನ್ನು ಪ್ರತೀಯಮಾನ ವೃತ್ತಿಯ ಉತ್ಪ್ರೇಕ್ಷಾಲಂಕಾರದ ಮೂಲಕ ಅಭಿವ್ಯಕ್ತಿಸುವುದು ಕವಿಯ ಅಪೇಕ್ಷೆ ಎನ್ನುವುದು ಇಲ್ಲಿಯ ಅಧ್ಯಾಹಾರ. ವಿವರಿಸಿ ಹೇಳುವುದಾದರೆ ನಿನ್ನ ಭಯ ಪ್ರಕೃತಿ, ರಾವಣನ ಕ್ರೌರ್ಯ ಹಾಗೂ ನಿನ್ನನ್ನು ರಕ್ಷಿಸುವ ಪ್ರಯತ್ನದಲ್ಲಿ ನನಗಿರುವ ತತ್ಪರತೆ, ಇವನ್ನೆಲ್ಲ ಪರ್ಯಾಲೋಚಿಸಿ, ಲತೆಗಳು ಸ್ತ್ರೀ ಸ್ವಭಾವಕ್ಕನುಗುಣವಾಗಿ ಆರ್ದ್ರ ಹೃದಯದವಾದ್ದರಿಂದ, ತಮ್ಮ ಬಳಗಕ್ಕೆ ಸೇರಿದವಳೊಬ್ಬಳು ವೇದನೆಯಿಂದ ನರಳುತ್ತಿರುವುದನ್ನು ಕಂಡು ಕರುಣೆ ಉಕ್ಕಿ ಕೃಪೆಯಿಂದ ನನಗೆ ಮಾರ್ಗವನ್ನು ಸೂಚಿಸಿದುವು. ಹೇಗೆ ಅವು ಮಾರ್ಗಸೂಚಿಸಿದವು ಎಂದರೆ, ಎಲೆಗಳಿಂದ ಕೂಡಿದ ಅವುಗಳ ಶಾಖೆಗಳನ್ನು ಒಂದು ರೀತಿಯಲ್ಲಿ ಬಾಗಿಸುವುದರ ಮೂಲಕ ಸೂಚಿಸಿದುವು. ಕಾರಣ ವಾಗಿಂದ್ರಿಯದ ಅಭಾವದಿಂದಾಗಿ ಅವು ಮಾತನಾಡಲಶಕ್ತವಾಗಿದ್ದುವು. ಯಾರು ಮಾತನಾಡದೆ ದಾರಿಯನ್ನು ತೋರುತ್ತಾರೋ ಅವರು ಆ ದಿಕ್ಕಿನತ್ತ ತಮ್ಮ ಕರಪಲ್ಲವಗಳಿಂದ ಕೂಡಿದ ಬಾಹುಗಳನ್ನು ಚಾಚಿ, ಕೈಗಳಿಂದ ಸ್ಪಷ್ಟವಾಗಿ ಸೂಚಿಸುತ್ತಾರೆ. ಆದ್ದರಿಂದ ಲತೆಗಳು ಆ ರೀತಿಯಲ್ಲಿ ಮಾರ್ಗದರ್ಶನ ಮಾಡಿರುವುದು ಅತ್ಯಂತ ಯುಕ್ತಿಯುಕ್ತವಾಗಿದೆ.

ಅಲ್ಲಿಯೇ ಅದಕ್ಕೆ ಉದಾಹರಣೆಯಾಗಿ ಇನ್ನೊಂದು ಶ್ಲೋಕವೂ ಇದೆ

ಮೃಗ್ಯಶ್ಚ ದರ್ಭಾಂಕುರ ನಿರ್ವ್ಯಪೇಕ್ಷಾ-
ಸ್ತವಾಗತಿಜ್ಞಂ ಸಮಬೋಧಯನ್ಮಾಮ್।
ವ್ಯಾಪಾರಯಂತ್ಯೋ ದಿಶಿ ದಕ್ಷಿಣಸ್ಯಾ-
ಮುತ್ಪಕ್ಷ್ಮ ರಾಜೀನಿ ವಿಲೋಚನಾನಿ [೮೧]

ಗರುಕೆ ಚಿಗುರನು ಮೆಲುವುದನು ಬಿಟ್ಟು
ಹರಿಣಿಗಳು ದಕ್ಷಿಣ ದಿಕ್ಕಿನೆಡೆಗೆ
ನಿಮಿರ್ದ ರೆಪ್ಪೆಗಳ ತಮ್ಮ ಕಣ್ಗಳನು ತಿರುಗಿಸುತೆ
ನೀನು ತೆರಳಿದ ದಾರಿಯನು ತಿಳಿಯದ
ನನಗೆ ಸೊಗಸಾಗಿ ದಾರಿ ತೋರಿದುವು [೮೧] [ರಘು-13-25]

ಹೆಣ್ಣುಜಿಂಕೆಗಳು ನನಗೆ ಸ್ಪಷ್ಟವಾಗಿ ಮಾರ್ಗ ತೋರಿದ್ದುವು. ಹೇಗೆ? ನೀನು ಹೋದ ದಾರಿಯನ್ನು ತಿಳಿಯದ ನನಗೆ ಲತೆಗಳು ತಮ್ಮದೇ ರೀತಿಯಲ್ಲಿ ಅತ್ಯುತ್ತಮವಾಗಿ ಮಾರ್ಗವನ್ನು ಸೂಚಿಸಿದ್ದರೂ, ಹರಿಣಿಗಳು ಅವಕ್ಕಿಂತಲೂ ಹೆಚ್ಚು ತಿಳಿವಳಿಕೆಯುಳ್ಳವಾದ ಕಾರಣ ಇನ್ನೂ ಸ್ಪಷ್ಟವಾಗಿ ಸೂಚಿಸಿದ್ದವು. ಹೆಣ್ಣು ಜಿಂಕೆಗಳು ಆ ರೀತಿಯ ದುಃಖದ ದೃಶ್ಯವನ್ನು ನೋಡಿ ವೇದನೆಗೊಳಗಾದ ಕಾರಣ ಗರುಕೆ ಚಿಗುರುನ್ನು ತಿನ್ನುವುದನ್ನು ಬಿಟ್ಟುಬಿಟ್ಟಿದ್ದುವು. ಅದೇ ದಿಕ್ಕಿನೆಡೆಗೆ (ಅರ್ಥಾತ್ ನೀನು ಹೋದ ದಿಕ್ಕಿಗೆ) ತಮ್ಮ ಕಣ್ಣುಗಳನ್ನು ಕೀಲಿಸಿದ್ದುವು. ಅದೂ ಎಂಥ ಕಣ್ಣುಗಳು? ಮೇಲಕ್ಕೆ ಎತ್ತಿದ ರೆಪ್ಪೆಗಳನ್ನುಳ್ಳ ಕಣ್ಣುಗಳು. ಹೀಗೆ ಕಣ್ಣರೆಪ್ಪೆಗಳನ್ನು ಮೇಲಕ್ಕೆ ಮಾಡುವ ಹಾಗೂ ದಕ್ಷಿಣಕ್ಕೆ ಮುಖ ಮಾಡುವ ಮೂಲಕ ಅವು ಸೀತೆಯನ್ನು ಆಕಾಶಮಾರ್ಗದ ಮೂಲಕ ದಕ್ಷಿಣ ದಿಕ್ಕಿಗೆ ಕೊಂಡೊಯ್ಯಲಾಯಿತು ಎಂಬುದನ್ನು ಸೂಚಿಸಿದವು.

ಈ ಎರಡೂ ಉದಾಹರಣೆಗಳಲ್ಲಿ 'ಲತಾ' ಶಬ್ದದ ಬದಲಿಗೆ 'ವೃಕ್ಷ' ಹಾಗೂ 'ಮೃಗೀ' ಶಬ್ದದ ಬದಲಿಗೆ 'ಮೃಗ' ಎಂಬ ಪುಲ್ಲಿಂಗ ರೂಪಗಳು ಇವೆಯಾದರೂ ವರ್ಣಿತ ವಸ್ತುವಿನ ಔಚಿತ್ಯಕ್ಕನುಸಾರವಾಗಿ ಹಾಗೂ ಸಹೃದಯರಿಗೆ ಆಹ್ಲಾದಕರವಾಗುವ ಸಲುವಾಗಿ ಸ್ತ್ರೀ ಲಿಂಗರೂಪಗಳನ್ನೇ ಬಳಸುವುದು ಕವಿಯ ಅಭೀಷ್ಟ. ಅದರಿಂದ ಅಪೂರ್ವವಾದೊಂದು ವಕ್ರತೆ ಉಂಟಾಗಿದೆ.

ಹೀಗೆ ನಾಮಪದಗಳಲ್ಲಿ ಪದ ಪೂರ್ವಾರ್ಧದಲ್ಲಿ ಆಗಬಹುದಾದ ಪ್ರಾತಿಪದಿಕದ ವಕ್ರತೆಯನ್ನು ವಿವೇಚಿಸಿ ಇದೀಗ ಪದಪೂರ್ವಾರ್ಧದಲ್ಲಿ ನಾಮಪದ ಮತ್ತು ಕ್ರಿಯಾಪದದ ಧಾತು ಸ್ವರೂಪದಲ್ಲಿ ಆಗಬಹುದಾದ ವಕ್ರತೆಯನ್ನು ಕೈಗೆತ್ತಿಕೊಳ್ಳಲಾಗುವುದು. ಅಲ್ಲಿಯ ವಕ್ರತೆಗೆ ಕಾರಣ ಕ್ರಿಯಾವೈಚಿತ್ರ್ಯವೇ ಆಗಿರುತ್ತದೆ. ಹಾಗಾಗಿ ಕ್ರಿಯಾವೈಚಿತ್ರ್ಯದ ವಕ್ರತೆಯ ಎಷ್ಟು ಪ್ರಕಾರದ ಭೇದಗಳು ಸಾಧ್ಯವೆಂಬುದನ್ನು ಈ ಕೆಳಗಿನ ಕಾರಿಕೆಯಲ್ಲಿ ಹೇಳಲಾಗಿದೆ.

ಕರ್ತುರತ್ಯಂತರಂಗತ್ವಂ ಕರ್ತ್ರಂತರವಿಚಿತ್ರತಾ।
ಸ್ವವಿಶೇಷಣ ವೈಚಿತ್ರ್ಯಮುಪಚಾರ ಮನೋಜ್ಞತಾ ॥ [24]

ಕರ್ಮಾದಿ ಸಂವೃತಿಃ ಪಂಚ ಪ್ರಸ್ತುತೌಚಿತ್ಯ ಚಾರವಃ
ಕ್ರಿಯಾವೈಚಿತ್ರ್ಯ ವಕ್ರತ್ವ ಪ್ರಕಾರಾಸ್ತ ಇಮೇ ಸ್ಮೃತಾಃ[25]

1) ಕರ್ತೃವಿನ ತೀವ್ರ ಅಂತರಂಗತ್ವ, 2) ಇದೇ ಕ್ರಿಯೆಯನ್ನು ನಿರ್ವಹಿಸುವ ಬೇರೊಬ್ಬ ಕರ್ತೃವಿಗಿಂತ ಶ್ರೇಷ್ಠ (ಸುಂದರ)ವಾಗಿರುವುದು, 3) ಕ್ರಿಯೆಯ ಮಹತ್ವದ ವಿಶೇಷಣದ ವೈಚಿತ್ರ್ಯ 4) ಉಪಚಾರದಿಂದುಟಾಗುವ ರಮಣೀಯತೆ ಹಾಗೂ 5) ಕರ್ಮವನ್ನು ಅಡಗಿಸಿಡುವುದು-ವರ್ಣ್ಯಮಾನ ವಸ್ತುವಿನ ಔಚಿತ್ಯಕ್ಕನುಸಾರವಾಗಿ ರಮಣೀಯತೆಯನ್ನು ಉಂಟುಮಾಡುವ ಈ ಐದನ್ನು ಕ್ರಿಯಾವೈಚಿತ್ರ್ಯ ವಕ್ರತೆಯ ಪ್ರಭೇದಗಳಿಂದ ಹೇಳಲಾಗಿದೆ. [24-25]

ಮೇಲೆ ಹೇಳಲಾದ ಕ್ರಿಯಾವೈಚಿತ್ರ್ಯ ವಕ್ರತೆಯೆಂದರೆ, ಧಾತ್ವರ್ಥದ ವೈಚಿತ್ರ್ಯದ ವಕ್ರತೆ. ಅವುಗಳ ಪ್ರಭೇದ ಐದು. ಅವೆಲ್ಲವೂ ವರ್ಣನೀಯ ವಸ್ತುವಿಗೆ ಅತ್ಯಂತ ಉಚಿತವಾಗಿರುವ ಕಾರಣದಿಂದ ಸುಂದರವಾಗಿರುವಂಥವು. ಅವುಗಳಲ್ಲಿ ಮೊದಲ ಪ್ರಭೇದ ಕರ್ತೃವಿನ ತೀವ್ರ ಅಂತರಂಗತ್ವ. ಅರ್ಥಾತ್ ಕರ್ತೃವು ಅದೆಷ್ಟು ಸ್ವತಂತ್ರನೆಂದರೆ ವರ್ಣಿತ ಕ್ರಿಯೆಯನ್ನು ಕಾರ್ಯಗತಗೊಳಿಸುವಲ್ಲಿ ಅವನು ಸರ್ವಸಮರ್ಥ ಉದಾ:

ಚೂಡಾರತ್ನ ನಿಷಣ್ಣದುರ್ವಹ ಜಗದ್ಭಾರೋನ್ನಮತ್ಕಂಧ ರೋ
ಧತ್ತಾಮುದ್ಧುರ ತಾಮ ಸೌ ಭಗವತಃ ಶೇಷಸ್ಯ ಮೂರ್ಧಾ ಪರಮ್|
ಸ್ವೈರಂ ಸಂಸ್ಪೃಶತೀಷದಪ್ಯವನತಿಮ್ ಯಸ್ಮಿನ್ ಲುಠಂತ್ಯಕ್ರಮಂ
ಶೂನ್ಯೇ ನೂನಮಿಯಂತಿ ನಾಮ ಭುವನಾನ್ಯುದ್ಧಾಮ ಕಂಪೋತ್ತರಮ್ [೮೨]

ಜಗದ ಭಾರವ ಹೊರುತೆ ಕೆಳಗೆ ಬಾಗಿರುವ ಕಂಧರದ
ಭಗವಾನ್ ಆದಿಶೇಷನ ಮಣಿಖಚಿತ ಶಿರಮಾತ್ರ
ಸಕಲ ಭೂಮಂಡಲದ ಮಹಾಭಾರವನು ಹೊರುವ
ಸಾಮರ್ಥ್ಯವನು ಪಡೆದಿರಬಹುದು.
ಅವನು ಇನ್ನು ನಸುವೆ ಬಾಗಿದರು
ಭುವನಗಳೆಲ್ಲ ಚೆದರಿ ಚೆಲ್ಲಾಪಿಲ್ಲಿಯಾಗಿ
ಶೂನ್ಯತೆಯನ್ನೈದುವುವು| [೮೨]

ಇಲ್ಲಿ ಕರ್ತನೆಂದರೆ ಭಗವಾನ್ ಶೇಷನಾಗನ (ಆದಿಶೇಷ) ಹೆಡೆ. ಅದೇ ವರ್ಣಿತವಸ್ತು. ಅವನ ಕಾರ್ಯವಾದರೋ ಮಹಾ ಭಾರವನ್ನು ಹೊರುವ ಸಾಮರ್ಥ್ಯ. ಇದನ್ನು ಎಷ್ಟು ಯುಕ್ತಿಯುಕ್ತವಾಗಿ ಚಿತ್ರಿಸಲಾಗಿದೆಯೆಂದರೆ ಉಳಿದೆಲ್ಲ ಅಂಶಗಳ ಕಾಂತಿಯನ್ನೂ ಅದು ಮೀರಿಸುತ್ತದೆ ಹಾಗೂ ಅದು ವಿಶಿಷ್ಟ ಕ್ರಿಯಾವೈಚಿತ್ರ್ಯ ವಕ್ರತೆಯ ಸೌಂದರ್ಯಾಸ್ವಾದನೆಗೆ ಕಾರಣವಾಗಿದೆ.

ಅಥವಾ

ಕಿಂ ಶೋಭಿತಾಹಮನಯೇತಿ ಪಿನಾಕ ಪಾಣೇಃ
ಪೃಷ್ಟಸ್ಯ ಪಾತು ಪರಿಚುಂಬನ ಮುತ್ತರಂ ವಃ [೮೩]   [1/81ರ ಉತ್ತರಾರ್ಧ]

ಪಾರ್ವತಿಯ ಆ ಲೋಕೋತ್ತರ ಸೌಂದರ್ಯದ ಉತ್ಕರ್ಷವನ್ನು ಶಿವನು ಚುಂಬನಕ್ಕಿಂತ ಬೇರೆಯಾದ ಯಾವುದೇ ಕ್ರಿಯೆಯಿಂದ ಸೂಚಿಸಲು ಸಾಧ್ಯವಿರಲಿಲ್ಲ. ಹೀಗಾಗಿ ಕವಿಯ ಈ ಕ್ರಿಯಾ ವೈಚಿತ್ರ್ಯ ಯೋಜನೆ ವಕ್ರಭಾವವನ್ನು ಪಡೆದುಕೊಳ್ಳುತ್ತದೆ. (ಕ್ರಿಯೆಯ ಈ ವಿಶಿಷ್ಟ ಅಭಿವ್ಯಕ್ತಿಯಿಂದ ಸೌಂದರ್ಯ ಪ್ರಾಪ್ತವಾಗಿದೆ)

ರುದ್ರಸ್ಯತೃತೀಯ ನಯನಂ ಪಾರ್ವತೀ ಪರಿಚುಂಬಿತಂ ಜಯತಿ [೮೪]
ನೋಡಿ 1-58

ಅಥವಾ

ಶಿದಿಲೀಕೃತ ಚಾಪೋ ಜಯತಿ ಮಕರಧ್ವಜ : [೮೫] [1/61]

ಈ ಎರಡೂ ಉದಾಹರಣೆಗಳ ವೈಚಿತ್ರ್ಯದ ವಿಶ್ಲೇಷಣೆಯನ್ನು ಈ ಮೊದಲೇ ಮಾಡಲಾಗಿದೆ.

ಕ್ರಿಯಾವೈಚಿತ್ರ್ಯ ವಕ್ರತೆಯ ಇನ್ನೊಂದು ಪ್ರಭೇದವಿದೆ. ಅದೆಂದರೆ - ಇನ್ನೊಬ್ಬ ಕರ್ತೃವಿನ ಕಾರಣದಿಂದಾಗಿ ಉಂಟಾಗುವ ವೈಚಿತ್ರ್ಯ (ಅನ್ಯಕರ್ತೃ). ಭಿನ್ನಕರ್ತೃ ಸಜಾತೀಯವಷ್ಟೇ ಅಲ್ಲ ಸಂದರ್ಭಕ್ಕೆ ತಕ್ಕುನಾದ್ದೂ ಆಗಿರುತ್ತದೆ. (ಪ್ರಸ್ತುತತ್ವ). ಅದೇ ಕ್ರಿಯೆಗೆ ಸಂಬಂಧಿಸಿದಂತೆ ಇತರೆ ಕರ್ತೃಗಳಿಂದ ಸಾಧಿತವಾದ ಸೌಂದರ್ಯಕ್ಕಿಂತ ತೀರಾ ಭಿನ್ನವಾಗಿರುವ ಸೌಂದರ್ಯದ ಛಾಯೆಯನ್ನು ಕ್ರಿಯೆಗೆ ನೀಡುವುದರಲ್ಲಷ್ಟೆ ಅದರ ವೈಚಿತ್ರ್ಯವಿದೆ.

ಉದಾ:

ನೈಕತ್ರ ಶಕ್ತಿವಿರತಿಃ ಕ್ವಚಿದಸ್ತಿ ಸರ್ವೇ
ಭಾವಾಃ ಸ್ವಭಾವ ಪರಿನಿಶ್ಚಿತ ತಾರತಮ್ಯಾಃ!
ಆ ಕಲ್ಪಮೌರ್ವದಹನೇನ ನಿಪೀಯಮಾನ-
ಮಂಭೋಧಿಮೇಕಚುಲಕೇನ ಪಪಾವಗಸ್ತ್ಯಃ [೮೬]

[ಸುಭಾಷಿತಾವಳಿ - 9-92]

ಯಾರೊಬ್ಬರಿಗೆ ಶಕ್ತಿಸೀಮಿತವಲ್ಲವು
ಜಗದ ಜೀವಿಗಳೆಲ್ಲ ತಮ್ಮ
ಸ್ವಭಾವಕನುಸರಿಸಿ ಶಕ್ತಿಯನು
ಹೆಚ್ಚು ಕಡಿಮೆ ಪ್ರಮಾಣದಲಿ ಪಡೆದಿಹವು
ಎಂತೆನೆ ಬಡಬಾಗ್ನಿ ಕಲ್ಪಾದಿಯಿಂ
ಕುಡಿಯುತಿಹ ಕಡಲನು ಅಗಸ್ತ್ಯ ಋಷಿ
ಒಂದೆ ಆಪೋಶನದಿ ಬರಿಗೈದನಹುದು [೮೬]

ಇಲ್ಲಿ ಇಡೀ ಸಮುದ್ರವನ್ನು ಏಕಾಪೋಶನವಾಗಿ ಕುಡಿದು ಬಿಟ್ಟ ಅಗಸ್ತ್ಯರ ಕ್ರಿಯೆಯು ಬಡಬಾನಲನ ಕಲ್ಪಾಂತರ ಕ್ರಿಯೆಗೆ ಹೋಲಿಸಿದಾಗ ಅಪೂರ್ವ ಕ್ರಿಯಾವಿಲಕ್ಷಣತೆಯನ್ನು ತೋರಿಸುತ್ತದೆ. ಹಾಗೂ ಸತತವಾದ ಅಧ್ಯವಸಾಯ ಮತ್ತು ಅಭ್ಯಾಸದಿಂದ ಅವರ ಸಾಧನೆ

ಪರಾಕಾಷ್ಠೆಯನ್ನು ತಲುಪಿರುವುದನ್ನು ಸೂಚಿಸುತ್ತದೆ. ಅದರಿಂದ ಅವರ ಕ್ರಿಯೆಗೆ ಲೋಕೋತ್ತರ ವಕ್ರತೆ ಪ್ರಾಪ್ತವಾಗುತ್ತದೆ.

ಅಥವಾ

ಪ್ರಪನ್ನಾರ್ತಿಚ್ಛಿದೋ ನಖಾಃ [೮೭] [1/59]

ಅಥವಾ

ದಹತು ದುರಿತಂ ಶಾಂಭವೋ ವಃ ಶರಾಗ್ನಿಃ [೮೮] [1-60]

ಈ ಎರಡೂ ಉದಾಹರಣೆಗಳ ವೈಚಿತ್ರ್ಯವನ್ನು ಈ ಮೊದಲೇ ಹೇಳಲಾಗಿದೆ.

ಕ್ರಿಯಾವೈಚಿತ್ರ್ಯ ವಕ್ರತೆಯ ಮತ್ತೊಂದು ಪ್ರಭೇದವೆಂದರೆ ಸ್ವವಿಶೇಷಣ ವೈಚಿತ್ರ್ಯ. ಪ್ರಧಾನವಾಗಿ ವರ್ಣಿತವಾಗುವ ಕಾರಣ ಕ್ರಿಯೆಯ ತನ್ನದೇ ಆದ ವಿಶೇಷಣವೇನಿದೆ ಅದು. (ಅರ್ಥಾತ್ ಇತರೆ ಸಜಾತೀಯ ಕ್ರಿಯೆಗಳಿಂದ ಅದನ್ನು ಬೇರ್ಪಡಿಸುವ) ಆ ಕಾರಣದಿಂದಾಗಿ ಉಂಟಾಗುವ ವೈಚಿತ್ರ್ಯ ಅರ್ಥಾತ್ ವಿಲಕ್ಷಣತೆಯೇ ಕ್ರಿಯಾವೈಚಿತ್ರ್ಯ ವಕ್ರತೆಯ ಪ್ರಭೇದ.

ಉದಾ :

ಇತ್ಯುದ್ಗತೇ ಶಶಿನಿ ಪೇಶಲ ಕಾಂತಿದೂತಿ-
ಸಂಲಾಪ ಸಂವಲಿತ ಲೋಚನಮಾನಸಾಭಿಃ
ಅಗ್ರಾಹಿ ಮಂಡನ ವಿಧಿರ್ವಿಪರೀತ ಭೂಷಾ
ವಿನ್ಯಾಸಹಾಸಿತ ಸಖೀಜನಮಂಗನಾಭಿಃ [೮೯]

(ಕಾವ್ಯಮೀಮಾಂಸಾ ಪುಟ 70)

ಚಂದ್ರನುದಯಿಸುತಿರೆ, ಸುಕುಮಾರಕಾಂತಿಯ
ಕೆಳದಿಯರ ಮಾತುಕತೆಯೊಳು
ಕಣ್ಮನಗಳನು ಕೀಲಿಸಿಹ ಲಲನೆಯರು
ಅವಸರದಲಿ ಒಡವೆಗಳನು ತಲೆಕೆಳಕಾಗಿ ತೊಟ್ಟು
ಸಖೀ ಜನರನು ನಗೆಗಡಲೊಳು ಮುಳುಗಿಸಿದರು [೮೯]

ಇಲ್ಲಿ ವರ್ಣಿತವಾಗಿರುವ ಕ್ರಿಯೆ ಅಲಂಕರಣದ್ದು. ತಲೆಕೆಳಕಾಗಿ ಯುವತಿಯರು ಆಭರಣಗಳನ್ನು ತೊಟ್ಟು ಸಖೀ ಜನರನ್ನು ನಗೆಯಲ್ಲಿ ಮುಳುಗಿಸಿದರು ಎಂಬ ವಿಶೇಷಣವನ್ನು ಅಳವಡಿಸುವ ಮೂಲಕ ಲೋಕೋತ್ತರವಾದ ಸೌಕುಮಾರ್ಯವನ್ನು ಅಭಿವ್ಯಕ್ತಿಸಲಾಗಿದೆ. ಈ ಪದ್ಯದಲ್ಲಿ ವರ್ಣಿತವಾಗಿರುವ ವಸ್ತು ತಮ್ಮ ಪ್ರಿಯತಮರ ವಿಷಯಕ್ಕೆ ಲಲನೆಯರಿಗಿರುವ ಗಾಢವಾದ ಅನುರಾಗ; ಹಾಗೂ ಅಷ್ಟೆಲ್ಲ ಆಸಕ್ತಿಯಿಂದ ಮಾಡಿರುವ ಅಲಂಕರಣ ಕ್ರಿಯೆಯು ಅವರ ಗಾಢ ಅನುರಾಗವನ್ನೇ ಧ್ವನಿಸುತ್ತದೆಂಬ ನಿರೀಕ್ಷೆ ಹಾಗೂ ಇವೆಲ್ಲದರಿಂದ ಆ ಪ್ರೇಮವೂ ಉನ್ನತೀಕರಿಸಲ್ಪಟ್ಟಿದೆ.

ಅಥವಾ

ಮಯ್ಯಾಸಕ್ತಶ್ಚಕಿತ ಹರಿಣೀ ಹಾರಿನೇತ್ರ ತ್ರಿಭಾಗ [೯೦] **1/49**

ಇದರ ವೈಚಿತ್ರ್ಯವನ್ನು ಈಗಾಗಲೇ ವಿವರಿಸಲಾಗಿದೆ. ಈ ಕ್ರಿಯಾವಿಶೇಷಣ, ಕ್ರಿಯೆ ಮತ್ತು ಕಾರಕ ಎರಡರ ವಕ್ರತೆಯನ್ನೂ ಅಭಿವ್ಯಕ್ತಿಸುತ್ತದೆ. ಕಾರಣ ಕಾರಕದ ವೈಚಿತ್ರ್ಯವೆಂದರೆ, ಸುಂದರ ಕ್ರಿಯೆಗೆ ಒತ್ತಾಸೆ ಕೊಡುವುದೇ ಆಗಿದೆ.

ಕ್ರಿಯಾವೈಚಿತ್ರ್ಯ ವಕ್ರತೆಯ ಮುಂದಿನ (4ನೆಯ) ಪ್ರಭೇದವೆಂದರೆ, ಉಪಚಾರ ಮನೋಜ್ಞತೆ. ಉಪಚಾರವೆಂದರೆ ಸಾದೃಶ್ಯಾದಿ ಸಮನ್ವಯಗಳನ್ನು ಆಧರಿಸಿ ಅಲ್ಲಿ ಇಲ್ಲದೆ ಇರುವ ಇನ್ನೊಂದು ಧರ್ಮವನ್ನು ಅಧ್ಯಾರೋಪಿಸುವುದು. ಅದರಿಂದ ಬರುವ ಸೌಂದರ್ಯ.

ಉದಾ :

ತರಂತೀವಾಂಗಾನಿ ಸ್ಖಲದಮಲ ಲಾವಣ್ಯಜಲಧೌ
ಪ್ರಥಿಮ್ನಃ ಪ್ರಾಗಲ್ಭ್ಯಂ ಸ್ತನ ಜಘನ ಮುನ್ಮುದ್ರಯತಿ ಚ|
ದೃಶೋರ್ಲೀಲಾರಂಭಾಃ ಸ್ಫುಟಮಪವದಂತೇ ಸರಲತಾ-
ಮಹೋ ಸಾರಂಗಾಕ್ಷ್ಯಾಸ್ತರುಣಿಮ್ನಿ ಗಾಢಃ ಪರಿಚಯಃ [೯೧]

[ಸದೂಕ್ತಿಕರ್ಣಾಮೃತ - 2-11]

ಅಂಗಾಂಗಳಾದರೋ ಅಮಲ ಅಲ್ಲೋಲ ಕಲ್ಲೋಲ
ಲಾವಣ್ಯಸಾಗರದೊಳೀಸುತಿರುವಂತಿವೆ
ಸ್ತನ ಜಘನಗಳು ಪ್ರಗಲ್ಭತೆಯ ಮೆರೆಸುತಿವೆ
ಕಣ್ಣನೋಟದ ಬೆಡಗುಗಳು ಸರಳತೆಯ ತ್ಯಜಿಸಿವೆ.
ಓಹ್! ಹರಯದ ಪರಿಚಯವು ಹರಿಣಾಕ್ಷಿಗತಿ ಗಾಢವು! [೯೧]

ಇಲ್ಲಿ ಕ್ಷುಬ್ಧ ಅಮಲ ಲಾವಣ್ಯಸಾಗರದಲ್ಲಿ ತೇಲುತ್ತಿರುವ ಕೈಕಾಲುಗಳು ಅರ್ಥಾತ್ ಅಲ್ಲೋಲ ಕಲ್ಲೋಲಗೊಂಡಿರುವ ನಿರ್ಮಲವಾದ ಲಾವಣ್ಯಸಾಗರದಲ್ಲಿ ತರುಣಿಯ ಸಮಸ್ತ ಅವಯವಗಳು ಈಜಿಕೊಂಡು ಆಚೆಯ ದಡವನ್ನು ಸೇರಲು ಯತ್ನಿಸುತ್ತಿರುವಂತೆ ಉತ್ಪ್ರೇಕ್ಷಿಸಲಾಗಿದೆ. ಹೀಗೆ ಚೇತನ ವಸ್ತುವಿನಲ್ಲಿ ಸಂಭವಿಸಬಹುದಾದ ಸಾದೃಶ್ಯದಿಂದಾಗಿ, ಉಪಚಾರದಿಂದ (ರೂಪಕ ಪ್ರಯೋಗದಿಂದ) ಯೌವನದಿಂದ ಚಂಚಲಳಾದ ಯುವತಿಯ ಶರೀರವೂ ಈಜುತ್ತಿದೆ ಎಂದು ಉತ್ಪ್ರೇಕ್ಷಿಸಲಾಗಿದೆ.

ರೂಪಕವೇ ಎಲ್ಲ ಉತ್ಪ್ರೇಕ್ಷೆಯ ಜೀವಧಾತು ಎಂಬುದನ್ನು ಉತ್ಪ್ರೇಕ್ಷಾಲಂಕಾರದ ವಿವೇಚನೆಯ ಸಮಯದಲ್ಲಿ ಪರಿಶೀಲಿಸಲಾಗುವುದು. ಸ್ತನ, ಜಘನಗಳು ಪ್ರೌಢತೆಯನ್ನು ಪ್ರಕಟಿಸುತ್ತಿವೆ" ಎಂಬ ಮಾತಿನಲ್ಲಿ ಸ್ತನ ಮತ್ತು ಜಘನಗಳು ಅವುಗಳ ಬೆಳವಣಿಗೆಯ ಸಂಪತ್ತನ್ನು ವ್ಯಕ್ತಪಡಿಸುವ ಕರ್ತೃಗಳಾಗಿವೆ. ಯಾವ ರೀತಿಯಲ್ಲಿ ವ್ಯಕ್ತಿಯೊಬ್ಬ ತನ್ನ ವಶದಲ್ಲಿರುವ ಅತಿ ಮುಖ್ಯ ನಿಧಿಯನ್ನು ಕೆಲಕಾಲ ಜತನದಿಂದ ಬಚ್ಚಿಟ್ಟುಕೊಂಡು ಅದರ ಉಪಯೋಗದ ಸಮಯ

ಬಂದಾಗ, ಅದನ್ನು ಬಹಿರಂಗ ಪಡಿಸುತ್ತಾನೋ ಅದೇ ರೀತಿ ಹೊರಗೆಡಹುವ ಈ ಪ್ರಕ್ರಿಯೆಯನ್ನು ರೂಪಕಾತ್ಮಕವಾಗಿ ಸ್ತನ-ಜಘನ ಕರ್ತೃವಿಗೆ ಅನ್ವಯಿಸಿದೆ. ಕಾರಣ ಅದರ ಕಾರ್ಯವೂ ಅದೇ ರೀತಿಯದಾಗಿದೆ. ಮಥಿತಾರ್ಥ ಇಷ್ಟು : ಬಾಲ್ಯಾವಸ್ಥೆಯಲ್ಲಿ ಸತ್ವರೂಪದಲ್ಲಿ ಅವ್ಯಕ್ತವಾಗಿ ಹುದುಗಿಕೊಂಡಿದ್ದ ಗಾತ್ರ ಶ್ರೀಮಂತಿಕೆಯು ಯೌವನ ಪ್ರಾದುರ್ಭಾವವಾದ ಕ್ಷಣದಲ್ಲೇ ಬಹಿರಂಗವಾಗಿ ವ್ಯಕ್ತವಾಗುವ ಅವಕಾಶವನ್ನು ಪಡೆದುಕೊಳ್ಳುತ್ತದೆ.

"ಕಣ್ಣ ನೋಟದ ಬೆಡಗುಗಳು ಸರಳತೆಯ ತ್ಯಜಿಸಿಹವು"- ಈ ಮಾತಿನಲ್ಲಿ ಕಣ್ಣನೋಟದ ವಿಲಾಸಗಳು ಬಾಲ್ಯಾವಸ್ಥೆಗೆ ಅಂಟಿಕೊಂಡಿದ್ದ ಸರಳತೆಯನ್ನು ಸ್ಪಷ್ಟವಾಗಿ ಕಳಚಿಕೊಂಡು, ನವ ಯೌವನಕ್ಕನುಗುಣವಾದ ವಿಭ್ರಮ ವಿಲಾಸಗಳನ್ನು ಪಡೆದುಕೊಳ್ಳುತ್ತವೆ. ಹೇಗೆಂದರೆ ವ್ಯಕ್ತಿಗಳು ಸಾಮಾಜಿಕ ವ್ಯವಹಾರದಲ್ಲಿ ಸಿದ್ಧ ಸಂಪ್ರದಾಯಗಳನ್ನು ಬದಿಗೆ ಸರಿಸಿ, ತಮಗಿಷ್ಟವಾದಂಥವನ್ನು ಅಳವಡಿಸಿಕೊಳ್ಳುವ ಹಾಗೆ. ಸೊಗಸುಗಾತಿಯರ ಕಣ್ಣ ನೋಟದ ಬೆಡಗುಗಳು, ಮೊದಲಿನ ಸರಳತೆಯನ್ನು ತ್ಯಜಿಸುವ ಹಾಗೆ. ಕಾರಣ ಎರಡೂ ಕ್ರಿಯೆಗಳು ಪರಸ್ಪರ ಸದೃಶವಾದವು. ಹೀಗೆ ರೂಪಕಾತ್ಮಕತೆಯನ್ನು ಒಳಗೊಳ್ಳುವ ಈ ಮೂರೂ ಕ್ರಿಯೆಗಳು [ಈಸುವುದು, ಮೆರೆಸುವುದು, ತ್ಯಜಿಸುವುದು] ಲೋಕೋತ್ತರವಾದ ವಕ್ರತೆಯನ್ನು ಪಡೆದುಕೊಳ್ಳುತ್ತವೆ. ಈ ಶ್ಲೋಕದಲ್ಲಿಯೇ ಮುಂದೆ ವಿವರಿಸುವಂತೆ, ಪದ ಪದದಲ್ಲಿಯೂ ವಕ್ರತೆಯ ಬೇರೆ ಬೇರೆ ಪ್ರಕಾರಗಳು ಕಂಡು ಬರುವುದನ್ನು ನೋಡಬಹುದು.

ಕ್ರಿಯಾವೈಚಿತ್ರ್ಯ ವಕ್ರತೆಯ ಇನ್ನಿತರ ಪ್ರಕಾರವೆಂದರೆ (5ನೆಯದು) ಕರ್ಮವೇ ಮೊದಲಾದುವುಗಳ ಸಂವರಣ. ಕರ್ಮ (obtect)ವೇ ಮೊದಲಾದ ಕಾರಕಗಳನ್ನು ಅಡಗಿಸಿಡುವುದರ ಅರ್ಥ, ವರ್ಣಿತ ವಸ್ತುವಿನ ಔಚಿತ್ಯಕ್ಕನುಸಾರವಾಗಿ ಅದರ ಅತಿಶಯದ ಪ್ರತೀತಿ ಉಂಟು ಮಾಡುವ ಸಲುವಾಗಿ ಕರ್ಮ (object)ವನ್ನು ಮರೆಮಾಡಿ ಹೇಳುವುದು ಹಾಗೂ ಅದು ತನ್ನದೇ ಆದ ರೀತಿಯಲ್ಲಿ ಕ್ರಿಯಾವೈಚಿತ್ರ್ಯವನ್ನುಂಟು ಮಾಡುವುದರಿಂದ ಅದನ್ನೊಂದು ಪ್ರಕಾರವಾಗಿ ಹೇಳಿದೆ. ಕಾರಣವನ್ನು ಕಾರ್ಯದೊಂದಿಗೆ ಅಭೇದರೂಪಕವಾಗಿಸಿ ಹೇಳುವುದು.

ನೇತ್ರಾಂತರೇ ಮಧುರಮರ್ಪಯತೀವಕಿಂಚಿತ್
ಕರ್ಣಾಂತಿಕೇ ಕಥಯತೀವ ಕಿಮಪ್ಯಪೂರ್ವಮ್|
ಅಂತಃ ಸಮುಲ್ಲಿಖತಿ ಕಿಂಚಿದಿವಾಯತಾಕ್ಷ್ಯಾಃ
ರಾಗಾಲಸೇ ಮನಸಿ ರಮ್ಯಪದಾರ್ಥಲಕ್ಷ್ಮೀಃ[೯೨]

ಈ ಬೊಗಸೆಗಂಗಳ ಚೆಲುವೆಯ
ಸರ್ವಾಂಗ ಸೌಂದರ್ಯ ಛವಿಯು
ಕಂಗಳೊಳಗೊಂದನುಪಮದ
ಮಾಧುರ್ಯವದೇನನೋ ತುಂಬುವಂತಿದೆ
ಕಿವಿಗಳೊಳಗೊಂದಪೂರ್ವವಾದುದೇನನೋ
ಒರೆಯುವಂತಿದೆ

ಅನುರಾಗ ತುಂಬಿದ ಅವಳ
ಮನದೊಳಗದೇನನೋ ಅಂಕಿಸುವ ತೆರನಿದೆ [೯೨]

ಇಲ್ಲಿ ಕೇವಲ ಅನುಭವೈಕ ಗೋಚರವಾದ ಕಾರಣ, ಅನಿರ್ವಚನೀಯವಾಗಿ ಕ್ರಿಯೆಗಳು ಪ್ರತಿಪದವಲ್ಲಿ, ಅತ್ಯಧಿಕವಾದೊಂದು ಉತ್ಕರ್ಷಪೂರ್ಣವಾದ ಕರ್ಮವನ್ನು ಪುಷ್ಟೀಕರಿಸುತ್ತ, ತಮ್ಮೊಳಗೆ ಲೋಕೋತ್ತರವಾದೊಂದು ವಕ್ರತೆಯನ್ನು ಪಡೆದುಕೊಳ್ಳುತ್ತವೆ. ಅಲ್ಲದೆ ಇಲ್ಲಿ ರೂಪಕದ ಬಳಕೆಯಿಂದ (ಉಪಚಾರ) ಪ್ರಾಪ್ತವಾಗುವ ರಮಣೀಯತೆಯೂ ಇದೆ. ಮೂಲತಃ ಚೇತನ ವಸ್ತುವಿನ ಧರ್ಮಗಳಾದ ತುಂಬು, ಒರೆ, ಚಿತ್ರಿಸು ಈ ಕ್ರಿಯೆಗಳು ಅಚೇತನ ಕರ್ತೃವಿಗೆ ಅನ್ವಿತವಾಗಿವೆ. [ಅರ್ಪಯತಿ ಕಥಯತಿ, ಉಲ್ಲಿಖತಿ]

ಹಾಗೆಯೇ–

ನೃತ್ತಾರಂಭಾದ್ವಿರ ತರಭಸಸ್ತಿಷ್ಠ ತಾವನ್ಮುಹೂರ್ತಂ
ಯಾವನ್ಮೌಲೌ ಶ್ಲಥಮ ಚಲತಾಂ ಭೂಷಣಂ ತೇ ನಯಾಮಿ
ಇತ್ಯಾಖ್ಯಾಯ ಪ್ರಣಯಮಧುರಂ ಕಾಂತಯಾ ಯೋಜ್ಯಮಾನೇ
ಚೂಡಾಚಂದ್ರೇ ಜಯತಿ ಸುಖಿನಃ ಕೋಽಪಿ ಶರ್ವಸ್ಯ ಗರ್ವಃ [೯೩]

ನಿನ್ನೀಭರದ ನರ್ತನವ ನಿಧಾನಿಸಿ
ಕ್ಷಣಕಾಲ ನಿಲ್ಲಿಸೆಲೆ ಪ್ರಿಯನೆ
ಅಷ್ಟರೊಳು ಸಡಿಲಗೊಂಡಿಹ ನಿನ್ನ ಶಿರೋಭೂಷಣವ
ನಿಲ್ಲಿಸುವೆನಲ್ಲಿಯೆ ಎಂಬೀ ಒಲವು ತುಂಬಿದ
ಮಧುರ ನುಡಿಗಳಲಿ ಪ್ರಿಯೆ ಗಿರಿಜೆ
ಮುಡಿಯ ಚಂದಿರನ ನಿಲಿಸಿರಲು
ಆನಂದ ತುಂದಿಲ ಶಿವನ 'ಆ'ಗರ್ವವದು ಗೆಲಲಿ! [೯೩]

ಇಲ್ಲಿ 'ಆ' (ಕೋಽಪಿ) ಎಂಬ ಸರ್ವನಾಮದಿಂದ ಶಿವನಿಗೆ ಮಾತ್ರ ಅನುಭವೈಕ ಗೋಚರವಾದ ಶಿವನ ಗರ್ವದ ಅತಿಶಯತೆಯನ್ನು ಕಥಿಸಲಾಗಿದೆ. ಹಾಗೂ ಆ ಮೂಲಕ 'ಕರ್ತೃ'ವನ್ನು ಮರೆಮಾಚಲಾಗಿದೆ. ಹಾಗೆಯೇ 'ಸರ್ವೋತ್ಕೃಷ್ಟ' ಎಂಬ ರೂಪದಲ್ಲಿರುವ ಗೆಲಲಿ (ಜಯತಿ) ಎಂಬ ಕ್ರಿಯಾಪದ ಕ್ರಿಯೆಯ ವೈಚಿತ್ರ್ಯತೆಗೆ ಕಾರಣವಾಗಿದೆ.

ಇತ್ಯಯಂ ಪದಪೂರ್ವಾರ್ಧ ವಕ್ರಭಾವೋ ವ್ಯವಸ್ಥಿತಃ|
ದಿಙ್ಮಾತ್ರಮೇವ ಮೇತಸ್ಯ ಶಿಷ್ಟಂ ಲಕ್ಷ್ಯೇ ನಿರೂಪ್ಯತೇ [೯೪]
ಇದು ಅಂತರ ಶ್ಲೋಕ.

ಹೀಗೆ ಪದ ಪೂರ್ವಾರ್ಧ ವಕ್ರತೆಯನ್ನು ವ್ಯವಸ್ಥೆಗೊಳಿಸಿದ್ದಾಯಿತು. ಇದರ ಕೇವಲ ದಿಕ್ ಪ್ರದರ್ಶನ (ಒಂದು ಭಾಗ ಮಾತ್ರ) ಮಾಡಲಾಗಿದೆ. ಉಳಿದವುಗಳು ಮಹಾಕವಿಗಳ ಕಾವ್ಯದಲ್ಲಿ ಕಂಡುಬರುತ್ತವೆ [೯೪]

ನಾಮಪದ ಮತ್ತು ಕ್ರಿಯಾಪದಗಳ ಪೂರ್ವಾರ್ಧದಲ್ಲಿ ಕಂಡುಬರುವ ಪ್ರಾತಿಪದಿಕ ಮತ್ತು ಧಾತುಗಳ ಯಥೋಚಿತ ವಕ್ರತೆಯನ್ನು ಇದುವರೆಗೆ ವಿವೇಚಿಸಿದ್ದಾಯಿತು. ಈಗ ಇದೇ ನಾಮಪದ ಮತ್ತು ಕ್ರಿಯಾಪದಗಳ ಉತ್ತರಾರ್ಧದಲ್ಲಿ ಕಂಡುಬರುವ ಪ್ರತ್ಯಯಗಳ ವಕ್ರತೆಯ ವಿವೇಚನೆಯನ್ನು ಕೈಗೆತ್ತಿಕೊಳ್ಳಲಾಗುವುದು. ಕ್ರಿಯೆಯ ವಿವಿಧ ಹಂತಗಳಲ್ಲಿ ಕಾಲವು ಜೊತೆಜೊತೆಗೇ ಸೇರಿಕೊಂಡಿರುವುದರಿಂದ, ಕ್ರಿಯಾವೈಚಿತ್ರ್ಯ ವಕ್ರತೆಯ ವಿವೇಚನೆಯ ನಂತರ, ಕಾಲದ ವಕ್ರತೆಯನ್ನು ವಿವೇಚಿಸಲಾಗುವುದು.

ಔಚಿತ್ಯಾಂತರತಮ್ಯೇನ ಸಮಯೋ ರಮಣೀಯತಾಮ್|
ಯಾತಿ ಯತ್ರ ಭವತ್ಯೇಷಾ ಕಾಲ ವೈಚಿತ್ರ್ಯ ವಕ್ರತಾ[26]

ಯಾವಾಗ ಸಮಯದ ಅತ್ಯಂತ ಔಚಿತ್ಯದ ಕಾರಣದಿಂದಾಗಿ ರಮಣೀಯತೆ ಉಂಟಾಗುತ್ತದೋ ಆಗ ಕಾಲವೈಚಿತ್ರ್ಯ ವಕ್ರತೆ ಉಂಟಾಗುತ್ತದೆ (26)

'ಕಾಲವೈಚಿತ್ರ್ಯ ವಕ್ರತೆ' ಎಂಬ ಒಂದು ಪ್ರಕಾರ ಉಂಟು. 'ಕಾಲ'ವೆಂದರೆ ವೈಯಾಕರಣರಿಂದ ಬಳಕೆಗೆ ಬಂದು ಪ್ರಸಿದ್ಧವಾಗಿರುವ 'ಲಟ್' ಆದಿ ಪ್ರತ್ಯಯಗಳ ಮೂಲಕ ಹೇಳಲಾಗುವ, ಪದಾರ್ಥಗಳ ಉದಯ ಮತ್ತು 'ಅಸ್ತ'ಗಳ ವ್ಯವಸ್ಥೆಗೆ ಕಾರಣವಾದ ವರ್ತಮಾನಾದಿ ಕಾಲ - ಅದರ ವೈಚಿತ್ರ್ಯ.

ಕವಿಯೊಬ್ಬ ಇದನ್ನು ಅಳವಡಿಸಿಕೊಂಡು ವಿಶೇಷ ಶೋಭಾಯುಕ್ತವಾಗಿ ಬಳಸಬಹುದು. ಅದರ ಪರಿಣಾಮವೆಂದರೆ ಅದರಲ್ಲಿ ಅಳವಟ್ಟಿರುವ ಔಚಿತ್ಯದ ಅತಿಶಯತೆಯಿಂದಾಗಿ ಕಾಲವೇ ರಮಣೀಯತೆಯನ್ನು ಪಡೆದುಕೊಂಡುಬಿಡುತ್ತದೆ. ಇಲ್ಲಿ ಹೇಳಲಾದ ಔಚಿತ್ಯ, ಕವಿ ವರ್ಣಿಸುತ್ತಿರುವ ವಸ್ತುವಿಗೆ ಸಂಬಂಧಿಸಿದ್ದು. ವಸ್ತು ಮತ್ತು ಕಾಲದ ಔಚಿತ್ಯ ಎರಡೂ ಪರಸ್ಪರವಾಗಿ ಸಂಲಗ್ನಗೊಂಡದ್ದರ ಪರಿಣಾಮವೆಂದರೆ, ಕಾವ್ಯದ ಅತಿಶಯ ರಮಣೀಯತೆ.

ಸಮವಿಸಮಣಿವ್ವಿಸೇಸಾ ಸಮಂತಓಮಂದಮಂದ ಸಂಚಾರಾ|
ಅಯಿರೋ ಹೋ ಹಿಂತಿ ಪಹಾ ಮಣೋರಹಾಣಂ ಪಿ ದುಲ್ಲಂಘಾ [೯೫]
ಸಮ ವಿಷಮ ನಿರ್ವಿಶೇಷಾಃ ಸಮಂತತೋ ಮಂದ ಮಂದ ಸಂಚಾರಾ|
ಅಚಿರಾದ್ಭವಿಷ್ಯಂತಿ ಪಂಥಾನೋ ಮನೋರಥಾನಾಮಪಿ - ದುರ್ಲಂಘ್ಯಾಃ* [೯೫]

ಮಾರ್ಗಗಳ ತಗ್ಗು ದಿಣ್ಣೆಗಳೆಲ್ಲ ಸವರಿ
ಸಮತಟ್ಟಾಗುವುವು
ಎಲ್ಲೆಡೆಗಳಲಿ ಪಯಣಗಳು ನಿಧನಿಧಾನವಾಗುವುವು
ಅತಿ ಶೀಘ್ರದಲಿ ಅವು ಮನೋರಥಗಳಿಗು
ಅತಿ ದುರ್ಗಮವೆನಿಸಲಿಹವು

ಇಲ್ಲಿ, ಉದ್ದೀಪನ ವಿಭಾವದ ವೈಭವ ವಿಲಾಸವನ್ನು ಹಾಗೂ ಅದರ ಸ್ವರೂಪದ

---

* ಧ್ವನ್ಯಾಲೋಕ - ಪುಟ

ಸೌಂದರ್ಯ ದರ್ಶನವನ್ನು ಸಹಿಸಲಾರದ ಮತ್ತು ಅತಿಯಾದ ಭಯದಿಂದ ಅಸ್ವಸ್ಥನಾಗಿ, ಶಂಕಾಕುಲನಾಗಿ, ತನ್ನ ಪ್ರಿಯತಮೆಯ ವಿಯೋಗದ ದುಃಖದಿಂದ ಭಯಭೀತ ಹೃದಯನಾದ ಪ್ರೇಮಿಯೊಬ್ಬ ಮುಂದೆ ಬರಲಿರುವ 'ಕಾಲ'ದ ಸಂಭಾವ್ಯತೆಯ ಕಲ್ಪನೆಯ ಮಹತ್ವವನ್ನು ಉತ್ಪ್ರೇಕ್ಷಿಸಿ ಹೀಗೆ ಗೋಳಿಡುತ್ತಾನೆ - "ಶೀಘ್ರದಲಿ ಮಾರ್ಗಗಳು ಮನೋರಥಗಳಿಗು ಅತಿ ದುರ್ಗಮವೆನಿಸಲಿಹವು" ಎಂದು.

ಇಲ್ಲಿ ಭವಿಷ್ಯತ್ ಕಾಲವನ್ನು ಪ್ರತಿಪಾದಿಸುವ 'ಲಟ್' ಪ್ರತ್ಯಯ ಪದದ ಉತ್ತರಾರ್ಧದ ವಿಶಿಷ್ಟ ವಕ್ರತೆಯನ್ನು ವ್ಯಕ್ತಪಡಿಸುತ್ತದೆ.

ಈಗ ಇನ್ನೊಂದು ಉದಾಹರಣೆ

ಯಾವತ್ಕಿಂಚಿದಪೂರ್ವಮಾರ್ದ್ರಮನಸಾಮಾವೇದಯಂತೋ ನವಾಃ
ಸೌಭಾಗ್ಯಾತಿಶಯಸ್ಯ ಕಾಮಪಿ ದಶಾಂ ಗಂತುಂ ವ್ಯವಸ್ಯಂತ್ಯಮೀ|
ಭಾವಾಸ್ತಾವದನನ್ಯಜಸ್ಯ ವಿಧುರಃ ಕೋऽಪ್ಯುದ್ಯಮೋ ಜೃಂಭತೇ
ಪರ್ಯಾಪ್ತೇ ಮಧುವಿಭ್ರಮೇ ತು ಕಿಮಯಂ ಕರ್ತೇತಿ ಕಂಪಾಮಹೇ [೯೬]

ಪ್ರಕೃತಿಯ ಸಹಜ ವಸ್ತುಗಳೆಲ್ಲ ನವಸೌಂದರ್ಯ
ಛಾಯೆಯನು ಪಡೆಯುತೆ ಆರ್ದ್ರ ಮಾನಸರಿಗೆಲ್ಲ
ಅಪೂರ್ವ ಸಂದೇಶವೊಂದನು ಬೀರುತಿವೆ. ಮತ್ತೆ
ಸೌಭಾಗ್ಯಾತಿಶಯದ ಶಿಖರಕವರನೊಯ್ಯಲೆತ್ನಿಸಿವೆ
ವಿಲ್ಲರನು ವಿಕಲಗೊಳಿಸುವ ಮದನನಾಟವದಾಗಲೇ
ಸಾಗಿರಲು ತನ್ನೆಲ್ಲ ಪೂರ್ಣವಿಭವದಲಿ ವಸಂತ
ಧಾವಿಸಿದನಾದರೆ ಏನನೆಸಗುವನೊ ಇವನೆಂದು ನಡುಗುತಿಹೆವು| [೯೬]

ಇಲ್ಲಿ 'ವ್ಯವಸ್ಯಂತಿ' (ಯತ್ನಿಸಿವೆ-ಲಟ್), ಜೃಂಭತೆ (ಸಾಗಿರಲು-ಲುಟ್) ಕರ್ತಾ (ಎಸಗು-ಲುಟ್) ಹಾಗೂ ಕಂಪಾಮಹೇ (ನಡುಗುತಿಹೆವು-ಲಟ್) - ಇವುಗಳಲ್ಲಿ ಒಂದೊಂದೂ ನಿಶ್ಚಿತ ಕಾಲವನ್ನು ಸೂಚಿಸುವ ಪ್ರತ್ಯಯಗಳಾಗಿವೆ. ಹಾಗೂ ಇವು ಪದದ ಉತ್ತರಾರ್ಧದ ಯಾವುದಾದರೊಂದು ಅಪೂರ್ವ ವಕ್ರತೆಯನ್ನು ಪ್ರಕಟಿಸುತ್ತಿವೆ. ಹೇಗೆಂದರೆ - ಪ್ರೇಮದ ಅಧಿದೇವನಾದ ಮಕರಧ್ವಜನು ತನ್ನ ಅನುಪಮ ಶಕ್ತಿಯಿಂದ ಸೂಕ್ಷ್ಮಹೃದಯದ ಪ್ರೇಮಿಗಳನ್ನು ಈಗಾಗಲೇ ಪೀಡಿಸುತ್ತಿರುವುದು ಕಂಡುಬರುತ್ತಿದೆ. ಅವನ ಆ ಅನುಪಮ ಶಕ್ತಿಯಾದರೋ ಪ್ರಥಮ ಬಾರಿಗೆ ಕಾಲಿಟ್ಟಿರುವ ವಸಂತದ ಸಾಮರ್ಥ್ಯದಿಂದ ಪ್ರಕೃತಿಯ ಪದಾರ್ಥ ಸಮುದಾಯದ ಮೇಲೆ ಕೆಲವೇ ಕೆಲವು ಸುಕುಮಾರ ಸ್ಪರ್ಶದ ಗುರುತುಗಳನ್ನು ಮೂಡಿಸುವುದರ ಮೂಲಕ ಪ್ರೇಮದ ಭಾವನೆಗಳನ್ನು ಉದ್ದೀಪನಗೊಳಿಸುವಂಥ ಸೌಂದರ್ಯವನ್ನು ಅವುಗಳಲ್ಲಿ ತುಂಬಿದ್ದರಿಂದ ಉಜ್ಜೀವಿತವಾದಂಥದ್ದು. ಬರಲಿರುವ ಕಾಲದ ಬಗೆಗಿನ ಶಂಕಿತ ಭಯವೇ ನಿಜಕ್ಕೂ ಇಲ್ಲಿಯ ಅದ್ಭುತ ಸೌಂದರ್ಯಕ್ಕೆ ಕಾರಣವಾಗಿದೆ.

ವಸಂತದ ದುರ್ದಮವಾದ ಶೋಭೆಯು ಸಕಲ ವಿಧದಲ್ಲೂ ಪೂರ್ಣವಾದಾಗ ಪ್ರತಿಯೊಬ್ಬರನ್ನೂ ಗೆಲ್ಲುವ ಅವಕಾಶ ಮನ್ಮಥನಿಗೆ ಬಂದೇ ಬರುತ್ತದೆ; ಆಗ ಮಾನಿನಿಯರ ಗರ್ವಸರ್ವಸ್ವವನ್ನೂ ಎಷ್ಟು ಸುಲಲಿತವಾಗಿ ಅಡಗಿಸಿಬಿಡುತ್ತಾನೆಂದರೆ, ಆಗ ಅವರ ಸೌಂದರ್ಯಕ್ಕೆ ಸಹಜ ಸೌಕುಮಾರ್ಯ ಸಂಪತ್ತು ಪ್ರಾಪ್ತವಾಗುತ್ತದೆ. ಮನ್ಮಥನ ಪುಷ್ಪ ಬಾಣಗಳಿಂದ ಈಗಾಗಲೇ ಆಹತರಾದ ಪ್ರೇಮಿಗಳಿಗೆ, ಮನ್ಮಥನ ಬಳಿ ತಮ್ಮ ವಿಷಯಕ್ಕೆ ಇದಕ್ಕಿಂತಲೂ ಘೋರತರವಾದ ಅಸ್ತ್ರವಿರಬಹುದೆಂಬ ಯೋಚನೆಯೇ ಅವರನ್ನು ಭಯಭೀತರನ್ನಾಗಿಸಿ, ಇನ್ನೇನು ಮಾಡಿಬಿಡುತ್ತಾನೋ ಎಂದು ಕಂಪಿಸುವಂತೆ ಮಾಡುತ್ತದೆ. ತನ್ನ ಪ್ರಿಯತಮೆಯ ಅಗಲಿಕೆಯಿಂದ ಸಂತಪ್ತನಾದ ಸರಸ ಹೃದಯದ ಪ್ರೇಮಿಯೊಬ್ಬನ ಭಾವನೆಗಳಾಗಿವೆ ಇವು.

ಕಾಲವಕ್ರತೆಯ ವಿವೇಚನೆಯ ನಂತರ, ಕ್ರಮ ಪ್ರಾಪ್ತವಾಗಿ ಬಂದ ಕಾರಕ ವಕ್ರತೆಯನ್ನು ಈಗ ವಿವೇಚಿಸಲಾಗುವುದು

ಯತ್ರ ಕಾರಕ ಸಾಮಾನ್ಯಂ ಪ್ರಾಧಾನ್ಯೇನ ನಿಬಧ್ಯತೇ।
ತತ್ತ್ವಾಧ್ಯಾರೋಪಣಾನ್ಮುಖ್ಯಗುಣಭಾವಾಭಿಧಾನತಃ[27]
ಪರಿಪೋಷಯಿತುಂ ಕಾಂಚಿದ್ ಭಂಗೀ ಭಣಿತಿರಮ್ಯತಾಮ್।
ಕಾರಕಾಣಾಂ ವಿಪರ್ಯಾಸಃ ಸೋಕ್ತಾ ಕಾರಕ ವಕ್ರತಾ [28]

ಮಾತಿನ ಭಂಗಿಯಲ್ಲಿ ಒಂದು ರೀತಿಯ ಅಪೂರ್ವತೆಯನ್ನು ಪೋಷಿಸುವ ಸಲುವಾಗಿ - ಕಾರಕ ಸಾಮಾನ್ಯವನ್ನು ಪ್ರಧಾನವೆಂಬ ರೀತಿಯಲ್ಲಿ ಆರೋಪಿಸಿ, ಹಾಗೆಯೇ ನಿಜಕ್ಕೂ ಪ್ರಧಾನ ವಾಗಿರುವುದರಲ್ಲಿ ಗೌಣತೆಯನ್ನು ಆರೋಪಿಸಿ ಗೌಣವೆಂಬ ರೀತಿಯಲ್ಲಿ-ಹೀಗೆ ಕಾರಕಗಳಲ್ಲಿ ಈ ರೀತಿಯ ವಿಪರ್ಯಾಸದ ಪ್ರಯೋಗ ಮಾಡುವುದನ್ನು ಕಾರಕವಕ್ರತೆ ಎಂದು ಕರೆಯಲಾಗುತ್ತದೆ. [27-28]

ಕಾರಕಗಳ ಸ್ಥಾನದಲ್ಲಿ ಒಂದು ರೀತಿಯ ವಿಪರ್ಯಯವಾಗುವುದನ್ನು ಕಾರಕ ವಕ್ರತೆ ಎಂದು ಕರೆಯಲಾಗುತ್ತದೆ. ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ ಗೌಣವಾದದ್ದನ್ನು ಪ್ರಧಾನವೆಂಬಂತೆ ಹಾಗೂ ಪ್ರಧಾನವಾದ್ದನ್ನು ಗೌಣವೆಂಬಂತೆ ಪರಿವರ್ತಿಸುವುದು. ಇದನ್ನು ಹೇಗೆ ಸಾಧಿಸಲಾಗುವುದು? (ಅಪ್ರಧಾನ ಮತ್ತು ಪ್ರಧಾನ ಎರಡರಲ್ಲೂ ಒಂದು ಇನ್ನೊಂದಕ್ಕೆ ಸಮವೆನಿಸುವುದು) 'ಕರಣ'ವೇ ಮೊದಲಾದ ಎಲ್ಲ ಕಾರಕಗಳು - ಅವು ತಮ್ಮ ಸ್ಥಾನದ ದೃಷ್ಟಿಯಿಂದ ಗೌಣವೇ ಆಗಿದ್ದರೂ ಅವನ್ನು ಕವಿ ಪ್ರಧಾನವೆಂಬಂತೆ ಆರೋಪಿಸಿ ಪ್ರಯೋಗಿಸುವುದು. ಇದಕ್ಕೇನಾದರೂ ಕ್ರಮವಿದೆಯೆ ಎಂದು ಕೇಳಬಹುದು. ಇವುಗಳಲ್ಲಿ 'ಅದನ್ನು' (ತತ್) ಅಧ್ಯಾರೋಪಿಸುವುದರ ಮೂಲಕ ಅರ್ಥಾತ್, ಪ್ರಧಾನತೆಯ ಅಧ್ಯಾರೋಪ ಮಾಡುವುದರ ಮೂಲಕ. 'ತತ್-ಎಂಬುದರಿಂದ 'ಮುಖ್ಯ' ಎಂದು

ಅರ್ಥವಾಗುತ್ತದೆ. ಹೀಗೆ ನಿಜಕ್ಕೂ ಗೌಣವಾದ ಕಾರಕಗಳ ಮೇಲೆ ಚಮತ್ಕಾರವಾಗಿ ಪ್ರಧಾನತೆಯನ್ನು ಅಧ್ಯಾರೋಪಿಸುತ್ತಾನೆ. ಹೀಗೆ ಗೌಣ ಕಾರಕವು ಪ್ರಧಾನ ಕಾರಕವಾಗಿ ಅಧ್ಯಾರೋಪಿತವಾದಾಗ, ಪ್ರಧಾನಕಾರಕದ ಸ್ಥಾನವೇನು? ಪ್ರಧಾನ ಕಾರಕಕ್ಕೆ ಗೌಣ ಕಾರಕದ ಸ್ಥಾನ ನೀಡಬೇಕೆಂಬುದೇ ಉತ್ತರ. ಹೀಗೆ ಮುಖ್ಯವನ್ನು ಗೌಣವಾಗಿ, ಹಾಗೂ ಗೌಣವನ್ನು ಮುಖ್ಯವಾಗಿ ಅಧ್ಯಾರೋಪಿಸಿ ಹೇಳಿದ್ದರಿಂದ ಯಾವ ಉದ್ದೇಶವನ್ನು ಸಾಧಿಸಿದಂತಾಯಿತು? ಕಾವ್ಯಾಭಿವ್ಯಕ್ತಿಗೆ ವಿನೂತನವಾದ ರಮ್ಯತೆಯ ಪೋಷಣೆ ನೀಡಿದ್ದೇ ಇದರ ಸಾಧನೆ. ಅರ್ಥಾತ್ ವಿಶಿಷ್ಟವೂ ವಿನೂತನವೂ ಆದ ಅಭಿವ್ಯಕ್ತಿಯ ರಮಣೀಯತೆಯನ್ನು ಅರಳಿಸಲು ಸಾಧ್ಯವಾದದ್ದು. ಹೀಗೆ ಚೇತನ ವ್ಯಕ್ತಿಯಲ್ಲಿ ಸಂಭವವಾಗಬಹುದಾದ ಸ್ವಾತಂತ್ರ್ಯವನ್ನು ಅಚೇತನ ವಸ್ತುವಿಗೂ ನೀಡುವ ಮೂಲಕ, ಅಥವಾ ಗೌಣ 'ಕರಣಾ'ದಿಗಳಿಗೆ ಕರ್ತೃವನ್ನು ಅಧ್ಯಾರೋಪಿಸುವ ಮೂಲಕ, ಕಾರಕಗಳ ವಿಪರ್ಯಯವು ಅತ್ಯಧಿಕ ಕಾವ್ಯ ಚಮತ್ಕಾರ ವನ್ನುಂಟು ಮಾಡುತ್ತದೆ.

ಉದಾ :

ಯಾಮ್ಂಚಾಮ್ಂ ದೈನ್ಯ ಪರಿಗ್ರಹ ಪ್ರಣಯಿನೀಂ ನೇಕ್ಷ್ವಾಕವಃ ಶಿಕ್ಷಿತಾಃ
ಸೇವಾಸಂವಲಿತಃ ಕದಾ ರಘುಕುಲೇ ಮೌಲೌ ನಿಬದ್ಧೋಂಜಲಿಃ|
ಸರ್ವಂ ತದ್ವಿಹಿತಂ ತಥಾಪ್ಯುದಧಿನಾ ನೈವೋಪರೋಧಃ ಕೃತಃ
ಪಾಣಿಃ ಸಂಪ್ರತಿ ಮೇ ಹಠಾತ್ ಕಿಮುಪರಂ ಸ್ಪ್ರಷ್ಟುಂ ಧನುರ್ಧಾವತಿ [೯೭]

(ಮಹಾನಾಟಕ - 4-78)

ದೈನ್ಯಕೊಲಿವ ಯಾಚಕ ವೃತ್ತಿಯೊಳು
ಇಕ್ಷ್ವಾಕು ವಂಶೀಯರೆಂದೂ ಅಭ್ಯಸ್ತರಲ್ಲ
ಸೇವಾ ಭಾವದೊಳೆಂದಾದರು ತಲೆಬಾಗಿ
ಕೈಮುಗಿದು ನಿಂತ ರಘುಕುಲಜರನೆಂದಾದರು
ಕಂಡುದುಂಟೆ? ಅದನೆಲ್ಲ ಮಾಡಾಯ್ತು
ಆದರೂ ಸಾಗರದ ಮನಕೆ ಬಂದಿಲ್ಲವಿದು
ಈಗಂತು ಧನುವ ತುಡುಕಲು ಕೈ ಓಡುತಿದೆ! [೯೭]

ಇಲ್ಲಿ ಧನಸ್ಸನ್ನು ಕೈಗೆತ್ತಿಕೊಳ್ಳಲಿಚ್ಛಿಸುತ್ತೇನೆ ಎನ್ನುವುದರ ಬದಲಿಗೆ ಕೇವಲ 'ಕರಣ'ವಾದ ಕೈಗೆ ಕರ್ತೃತ್ವವನ್ನು (ಪ್ರಜ್ಞಾಪೂರ್ವಕ) ಅಧ್ಯಾರೋಪಿಸಲಾಗಿದೆ; ಅಥವಾ ಉಪಕರಣವೇ ಹೇಳುತ್ತಿದೆ. ಅದರಿಂದಾಗಿ ಅಪೂರ್ವವಾದೊಂದು ಕಾರಕವಕ್ರತೆ ಉಂಟಾಗಿದೆ. ಅಥವಾ

ಸ್ತನದ್ವಂದ್ವಂ [೯೮] - 1-65

ಈಗ ಇನ್ನೊಂದು ಉದಾಹರಣೆ

ನಿಷ್ಪರ್ಯಾಯ ನಿವೇಶ ಪೇಶಲರಸೈರನ್ಯೋನ್ಯನಿರ್ಭರ್ತ್ಸಿಭಿ-
ರ್ಹಸ್ತಾಗ್ರೈರ್ಯುಗಪನ್ನಿಪತ್ಯ ದಶಭಿರ್ವಾಮ್ಯೈರ್ಧೃತಂ ಕಾರ್ಮುಕಂ

ಸವ್ಯಾನಾಂ ಪುನರಪ್ರಥೀಯಸಿ ವಿಧಾವಸ್ಮಿನ್ ಗುಣಾರೋಪಣೇ
ಮತ್ಸೇವಾ ವಿದುಷಾಮಹಂ ಪ್ರಥಮಿಕಾ ಕಾಪ್ಯಂಬರೇ ವರ್ತತೇ [೯೯]

[ಬಾಲ ರಾಮಾಯಣ - 1-50]

ಏಕ ಕಾಲಕೆ ಧನುವ ಹಿಡಿವುದರೊಳು ಕಾತರದಿ
ಸ್ಪರ್ಧಿಸುತಿಹ ನನ್ನ ಹತ್ತೂ ಎಡಹಸ್ತಗಳು
ಏಕಕಾಲಕೆ ಅದನು ಹಿಡಿದಿಹವು
ಧನುಗೆ ಹೆದೆಯೇರಿಸುವುದರೊಳು ನನ್ನ
ಸೇವೆಯಲಿ ನಿಪುಣವಹ ಬಲಗೈಗಳೊಳು
ಆಕಾಶದಲಿ ನಾ ಮುಂದು ತಾ ಮುಂದೆಂಬ ಸ್ಪರ್ಧೆ ಸಾಗಿಹುದು [೯೯]

ಇಲ್ಲಿಯೂ ಹಿಂದಿನ ಉದಾಹರಣೆಯಲ್ಲಿದ್ದಂತೆ ಅಚೇತನ ವಸ್ತುವಾದ 'ಕರಣ'ದ ಮೇಲೆ ಕರ್ತೃತ್ವದ ಅಧ್ಯಾರೋಪದಿಂದುಂಟಾದ ಕಾರಕ ವಕ್ರತೆ ಕಂಡುಬರುತ್ತದೆ.

ಅಥವಾ ಇನ್ನೊಂದು ಉದಾ :

"ಬದ್ಧಸ್ಪರ್ಧ ಇತಿ" [೧೦೦] [1/೬೬]

ಕಾರಕ ವಕ್ರತೆಯ ವಿವೇಚನೆಯ ನಂತರ, ಸಂಖ್ಯಾ ವಕ್ರತೆಯನ್ನು ಕುರಿತು ವಿಚಾರಿಸಲಾಗುವುದು, ಕಾರಣ ಸಂಖ್ಯೆಯೂ ಕೂಡ ನಿಯಂತ್ರಕ ಶಕ್ತಿಯಾಗಬಹುದು.

ಕುರ್ವಂತಿ ಕಾವ್ಯವೈಚಿತ್ರ್ಯ ವಿವಕ್ಷಾಪರತಂತ್ರಿತಾಃ|
ಯತ್ರ ಸಂಖ್ಯಾ ವಿಪರ್ಯಾಸಂ ತಾಂ ಸಂಖ್ಯಾವಕ್ರತಾಂ ವಿದುಃ[29]

ಯಾವಾಗ ಕವಿಗಳು ಕಾವ್ಯ ವೈಚಿತ್ರ್ಯವನ್ನು ಸಾಧಿಸುವ ಉದ್ದೇಶದಿಂದ ವಚನಗಳ ವಿಪರ್ಯಯಕ್ಕೆ ಮನಮಾಡುತ್ತಾರೋ ಆಗ ಸಂಖ್ಯಾವಕ್ರತೆ (ವಚನ ವಕ್ರತೆ) ಉಂಟಾಗುತ್ತದೆ. [29]

ಎಲ್ಲಿ ಕವಿಗಳು, ಕಾವ್ಯದಲ್ಲಿ ವೈಚಿತ್ರ್ಯವನ್ನು ಸಾಧಿಸುವ ಉದ್ದೇಶದಿಂದ ಅರ್ಥಾತ್ ತಮ್ಮ ಕಾವ್ಯವಾಪಾರದಲ್ಲಿ ವೈಚಿತ್ರ್ಯವನ್ನು ತರುವ ಇಚ್ಛೆಗೆ ಒಳಗಾಗಿ, ಸಂಖ್ಯೆಯಲ್ಲಿ ವಿಪರ್ಯಯವನ್ನು (ವಚನ ಪರಿವರ್ತನೆ) ತರುತ್ತಾರೋ ಆಗ ಸಂಖ್ಯಾವಕ್ರತೆ ಎಂದು ಕರೆಯಲಾಗುತ್ತದೆ. ಇದರ ಆಶಯವೇನೆಂದರೆ, ಏಕವಚನ ಅಥವಾ ದ್ವಿವಚನವನ್ನು ಪ್ರಯೋಗಿಸಬೇಕಾದಾಗ ವೈಚಿತ್ರ್ಯವನ್ನು ತರುವ ಸಲುವಾಗಿ ಕವಿಗಳು ಅನ್ಯವಚನವನ್ನು ಪ್ರಯೋಗಿಸಿದಾಗ, ಅಥವಾ ಭಿನ್ನ ಭಿನ್ನ ವಚನಗಳನ್ನು ಸಮಾನಾಧಿಕರಣದಲ್ಲಿ ಉಚಿತ ರೂಪದಲ್ಲಿ ಪ್ರಯೋಗಿಸಿದಾಗ ಸಂಖ್ಯಾವಕ್ರತೆ ಉಂಟಾಗುತ್ತದೆ. ಉದಾ :

ಕಪೋಲೇ ಪತ್ರಾಲಿ ಕರತಲನಿರೋಧೇನ ಮೃದಿತಾ
ನಿಪೀತೋ ನಿಶ್ವಾಸೈರ ಯಮಮೃತಹೃದ್ಯೋಧರಃ ರಸಃ
ಮುಹುಃ ಕಂಠೇ ಲಗ್ನಸ್ತರಲಯತಿ ಬಾಷ್ಪಃ ಸ್ತನತಟೀಂ
ಪ್ರಿಯೋ ಮನ್ಯುರ್ಜಾತಸ್ತವ ನಿರನುರೋಧೇ ನ ತು ವಯಮ್ [೧೦೧]

(ಅಮರುಶತಕ - 85)

ಕೆನ್ನೆಗಳ ಮಕರಿಕಾಪತ್ರವದು
ಕರತಳವು ಒತ್ತಿ ಮಸುಳಿಹುದು
ಅಮೃತದಂತಿನಿದಾದ ಅಧರ ರಸವನು
ನಿಟ್ಟುಸಿರುಗಳು ಬತ್ತಿಸಿಹವು
ಕುತ್ತಿಗೆಯನಪ್ಪಿ ನಿಲುವ ಕಣ್ಣೀರು
ಸ್ತನತಟವ ಕಂಪಿಸಿಹವು!
ಅನುನಯಕೆ ಒಗ್ಗದ ಓ ಬಾಲೆ
ಕೋಪವೆ ಈಗ ನಿನ್ನ ಪ್ರಿಯಕರನು
ನಾವಲ್ಲವು! [೧೦೧]

ಮೇಲಿನ ಉದಾಹರಣೆಯಲ್ಲಿ ನಾನಲ್ಲವು ಎಂದು ಏಕವಚನವನ್ನು (ನ, ತು ಅಹಂ) ಪ್ರಯೋಗಿಸಬೇಕಾದೆಡೆಯಲ್ಲಿ "ನಾವಲ್ಲವು" (ನ ತು ವಯಂ) ಎಂದು ಬಹುವಚನ ಪ್ರಯೋಗಿಸಿದ್ದಾನೆ. ತಾನು ಇನ್ನು ಮುಂದೆ ಆತ್ಮೀಯನಲ್ಲ ಎಂಬುದನ್ನು ಸೂಚಿಸಲು ಹಾಗೂ ತಾನು ವಾಸ್ತವವಾಗಿ ಅಪರಿಚಿತನೆಂಬುದನ್ನು (ತಟಸ್ಥ) ಧ್ವನಿಸಲು, ಹೀಗೆ ಹೇಳಿದ್ದಾನೆ.

ಈಗ ಇನ್ನೊಂದು ಉದಾಹರಣೆ :

ವಯಂ ತತ್ತ್ವಾನ್ವೇಷಾನ್ಮಧುಕರ ಹತಾಸ್ತ್ವಂ ಖಲುಕೃತೀ [೧೦೨]

ನೀನೆ ಧನ್ಯನು ಮಧುಕರ, ನಿಜವ ಹುಡುಕುತ ಕೆಟ್ಟವರು ನಾವಲ್ಲವೆ. . [ಶಾಕುಂತಲ 1-64]

ಹಿಂದಿನದರಂತೆಯೇ ಇಲ್ಲಿ, ಅವನೊಬ್ಬ ಅಪರಿಚಿತನೆಂಬುದನ್ನು ಸ್ಪಷ್ಟವಾಗಿ ಧ್ವನಿಸಿದೆ.

ಫುಲ್ಲೇಂದೀವರ ಕಾನನಾನಿ ನಯನೇ ಪಾಣೀ ಸರೋಜಾಕರಾಃ [೧೦೩] [1-64]

ಇಲ್ಲಿ ದ್ವಿವಚನ ಮತ್ತು ಬಹುವಚನಗಳು ಸಮಾನಾಧಿಕರಣ ರೂಪದ ವಚನಗಳಾಗಿ ಪರಿವರ್ತಿತವಾಗಿವೆ. ಈ ರೀತಿಯ ವಚನಗಳ ಪರಿವರ್ತನೆ ಕಾವ್ಯ ರಸಿಕರಿಗೆ ಅಪೂರ್ವವಾದ ಆನಂದವನ್ನು ಉಂಟು ಮಾಡುತ್ತದೆ. ಇಂಥ ಇನ್ನೊಂದು ಉದಾ :

ಶಾಸ್ತ್ರಾಣಿ ಚಕ್ಷುರ್ನವಮ್ [೧೦೪]

ಇಲ್ಲಿಯೂ ಏಕವಚನ ಮತ್ತು ಬಹುವಚನಗಳ ಸಮಾನಾಧಿಕರಣ, ವೈಚಿತ್ರ್ಯವನ್ನುಂಟು ಮಾಡಿದೆ. ಹೀಗೆ ಸಂಖ್ಯಾವಕ್ರತೆಯನ್ನು ವಿವೇಚಿಸಿ, ತದನಂತರ ವ್ಯಾಕರಣದಲ್ಲಿ ಪುರುಷಗಳಿಗೂ ಸಂಖ್ಯೆಗಳಿಗೂ ಸಂಬಂಧವಿರುವುದರಿಂದ ಸರಣಿಯ ಕ್ರಮದಲ್ಲಿ ಇದೀಗ ಪುರುಷ ವಕ್ರತೆಯನ್ನು ಕುರಿತು ವಿಚಾರ ಮಾಡಲಾಗುವುದು.

ಪ್ರತ್ಯಕ್ತಾ ಪರಭಾವಶ್ಚ ವಿಪರ್ಯಾಸೇನ ಯೋಜ್ಯತೇ
ಯತ್ರ ವಿಚ್ಛಿತ್ತ್ಯೇ ಸೈಷಾ ಜ್ಞೇಯಾ ಪುರುಷ ವಕ್ರತಾ [30]

ವ್ಯಾಕರಣದಲ್ಲಿ ಹೇಳಿರುವ ಉತ್ತಮ ಪುರುಷ ಮತ್ತು ಮಧ್ಯಮ ಪುರುಷಗಳು ಸಕಾರಣವಾಗಿಯೇ ಅಗತ್ಯವಿದ್ದಾಗಲೂ, ಅವನ್ನು ಉದ್ದೇಶಪೂರ್ವಕವಾಗಿಯೇ ಕೈಬಿಟ್ಟು ವೈಚಿತ್ರ್ಯದ ಸಿದ್ಧಿಗಾಗಿ ಪ್ರಥಮ ಪುರುಷವನ್ನು ವಕ್ರರೂಪದಲ್ಲಿ ಪ್ರಯೋಗಿಸಲಾಗುವುದು-ಇದಕ್ಕೆ ಪುರುಷ ವಕ್ರತೆ ಎಂದು ಹೆಸರು. [130]

ಎಲ್ಲಿ "ಪ್ರತ್ಯಕ್ತಾ" ಎಂದರೆ ತನ್ನಸ್ವರೂಪ (ಉ.ಪು) ಹಾಗೂ ಪರಭಾವ ಅರ್ಥಾತ್ ಅನ್ಯಸ್ವರೂಪ (ಮ.ಪು) ಎರಡನ್ನೂ ಪರಿವರ್ತನೆಯೊಂದಿಗೆ ವೈಚಿತ್ರ್ಯಕ್ಕೋಸ್ಕರ ಪ್ರಯೋಗಿಸಲಾಗುವುದೋ ಅದನ್ನು ಪುರುಷ ವಕ್ರತೆ ಎಂದು ಕರೆಯಲಾಗುವುದು. ಇದರ ಆಶಯವೆಂದರೆ, ಎಲ್ಲಿ ಪ್ರಥಮ, ಉತ್ತಮ, ಅಥವಾ ಮಧ್ಯಮ ಪುರುಷದ ಪ್ರಯೋಗಮಾಡಬೇಕಾದಾಗ, ವೈಚಿತ್ರ್ಯವನ್ನು ತರುವುದಕ್ಕಾಗಿ, ಅವುಗಳ ಬದಲಿಗೆ ಪ್ರಥಮ ಪುರುಷ (ಅನ್ಯಪುರುಷ)ವನ್ನು ಪ್ರಯೋಗಿಸಲಾಗುತ್ತದೋ ಅದನ್ನು ಪುರುಷ ವಕ್ರತೆ ಎಂದು ಕರೆಯಲಾಗುವುದು. ಇದೇ ಕಾರಣಕ್ಕೆ ಸರ್ವನಾಮಗಳು (ಅಸ್ಮದಾದಿ) ನಾಮಪದಗಳಂತೆಯೇ ಇರುವುದರಿಂದ, ಸರ್ವನಾಮದ ಬದಲಿಗೆ ನಾಮಪದದ [ಪ್ರಾತಿಪದಿಕ-ಪ್ರಥಮ ಪುರುಷ] ಬಳಕೆ ಕೂಡ ಈ ರೀತಿಯ ಪುರುಷ ವಕ್ರತೆಗೆ ಸೂಕ್ತ ಉದಾಹರಣೆಯಾಗುತ್ತದೆ.

> **ಕೌಶಾಂಬೀಂ ಪರಿಭೂಯ ನಃ ಕೃಪಣಕೈರ್ವಿದ್ವೇಷಿಭಿಃ ಸ್ವೀಕೃತಾಮ್**
> **ಜಾನಾಮ್ಯೇವ ತಥಾ ಪ್ರಮಾದ ಪರತಾಂ ಪತ್ಯುರ್ನಯದ್ವೇಷಿಣಃ|**
> **ಸ್ತ್ರೀಣಾಂ ಚ ಪ್ರಿಯ ವಿಪ್ರಯೋಗ ವಿಧುರಂ ಚೇತಃ ಸದೈವಾತ್ರ ಮೇ**
> **ವಕ್ತುಂ ನೋತ್ಸಹತೇ ಮನಃ ಪರಮತೋ ಜಾನಾತು ದೇವೀ ಸ್ವಯಮ್ [೧೦೫]**

> ಬಲ್ಲೆನಾ ಹೀನ ಶತ್ರುಗಳೆಂತವಮಾನಕರ
> ರೀತಿಯೊಳೆಮ್ಮ ಸೋಲಿಸಿ ಕೌಶಾಂಬಿಯನು
> ಕರಗತ ಮಾಡಿಕೊಂಡರೆಂಬುದನು
> ಮೇಣೆಮ್ಮ ಪ್ರಭುವಿನ ನಿರ್ಲಕ್ಷ್ಯವನು
> ಲಲನೆಯರ ಹೃದಯವಾದರೊ ಪ್ರಿಯವಿಯೋಗದೆ
> ಸದಾ ಪರಿತಪಿಸುವುದು
> ನನಗೊ ಈ ವಿಷಯದೊಳೇನ ಹೇಳಲು
> ಉತ್ಸಾಹವಿಲ್ಲವು
> ಈ ಪದದೊಳೇನನೆಸಗುವುದೆಂಬುದ
> ಸ್ವಯಂ ದೇವಿಯೆ ಬಲ್ಲರು [೧೦೫] (ತಾಪಸವತ್ಸರಾಜ 1-67)

ಇಲ್ಲಿ [ಯುಷ್ಮದ್-ನೀನು] ಎಂಬ ಶಬ್ದದ ಮಧ್ಯಮ ಪುರುಷ ಪ್ರಯೋಗ [ತ್ವಂ] ಇರಬೇಕಿತ್ತು. ಅದರ ಬದಲು ಸ್ವಯಂ ದೇವಿಯೆ ಬಲ್ಲರು - (ಜಾನಾತು ದೇವೀ ಸ್ವಯಂ) ಎಂದು ಕವಿ ಪ್ರಯೋಗಿಸಿದ್ದಾನೆ. ಈ ಪ್ರಯೋಗ-ವಕ್ರವಾದ ಯೌಗಂಧರಾಯಣನಿಗೆ ಅದು ಎಷ್ಟು ಕಷ್ಟಕರವೆಂದು ಅನಿಸಿದೆ ಎಂಬುದನ್ನು ಹಾಗೂ ಆ ಕಾರಣದಿಂದಲೇ ಅವನು ತಟಸ್ಥನೆಂಬುದನ್ನು ಅತ್ಯಂತ ಸಮರ್ಥವಾಗಿ ಅಭಿವ್ಯಕ್ತಿಸುತ್ತದೆ. ಅದೇ ಸಮಯಕ್ಕೆ ರಾಣಿ

ವಾಸವದತ್ತೆ ತಾನೇ ಸ್ವತಃ ಪ್ರಭುವಾಗಿರುವುದರಿಂದ, ತನಗೆ ಯಾವುದು ಹಿತ, ಹಾಗೂ ಅಹಿತವೆಂಬುದನ್ನು ಸ್ವತಂತ್ರವಾಗಿ ವಿಚಾರ ಮಾಡಿ ಮುಂದೆ ಮಾಡಬೇಕಾಗಿರುವುದರ ಬಗ್ಗೆ ನಿರ್ಣಯಕ್ಕೆ ಬರಬಹುದು. ಈ ರೀತಿ ಅವಳಿಗೆ ನೀಡಿರುವ ಈ "ಸ್ವಾತಂತ್ರ್ಯ" ಇಡೀ ವಾಕ್ಯಕ್ಕೆ ಎಲ್ಲಿಲ್ಲದ ಅಪೂರ್ವ ಸೌಂದರ್ಯವನ್ನು ತಂದುಕೊಟ್ಟಿದೆ. ಅಲ್ಲದೆ ಈ ವಾಕ್ಯ ಇಡೀ ಶ್ಲೋಕದ ಪ್ರಾಣವೆಂಬಂತೆ ಶೋಭಿಸುತ್ತಿದೆ.

ಹೀಗೆ ಪುರುಷ ವಕ್ರತೆಯನ್ನು ವಿವೇಚಿಸಿದ ನಂತರ ಪುರುಷಗಳನ್ನು ಆಶ್ರಯಿಸಿರುವ ಕಾರಣ ಆತ್ಮನೇಪದ ಮತ್ತು ಪರಸ್ಮೈಪದಗಳ ವಕ್ರತೆಯನ್ನು ವಿವೇಚಿಸಲಾಗುವುದು. ಧಾತುಗಳ ಲಕ್ಷಣಕ್ಕನುಗುಣವಾಗಿ, ಪ್ರಾಚೀನ ಆಚಾರ್ಯರು, ಆತ್ಮನೇಪದ ಮತ್ತು ಪರಸ್ಮೈಪದಗಳ ನಿಶ್ಚಿತ ಪದ ಪ್ರಯೋಗಗಳಿಗೆ "ಉಪಗ್ರಹ" ಎಂಬ ಪದವನ್ನು ಬಳಸಿರುವುದು ಕಂಡುಬರುತ್ತದೆ. ಆದ್ದರಿಂದ ಪ್ರಸ್ತುತ ಗ್ರಂಥಕಾರನೂ ಅದೇ ಶಬ್ದವನ್ನು ಬಳಸಿದ್ದಾನೆ.

ಪದಯೋರುಭಯೋರೇಕಮೌಚಿತ್ಯಾದ್ ವಿನಿಯಜ್ಯತೇ|
ಶೋಭಾಯೈ ಯತ್ರ ಜಲ್ಪಂತಿ ತಾಮುಪಗ್ರಹ ವಕ್ರತಾಮ್ [31]

ಧಾತುವೊಂದಕ್ಕೆ ಆತ್ಮನೇಪದ ಹಾಗೂ ಪರಸ್ಮೈಪದ ಎರಡೂ ಬಗೆಯ ಪ್ರತ್ಯಯಗಳನ್ನು ಲಗತ್ತಿಸಬಹುದಾದರೂ, ಸೌಂದರ್ಯ ಸೃಷ್ಟಿಯ ಸಲುವಾಗಿ ಔಚಿತ್ಯದ ಕಾರಣದಿಂದಾಗಿ ಅವುಗಳಲ್ಲೊಂದನ್ನು ಮಾತ್ರ ವಿಶೇಷ ರೂಪದಿಂದ ಪ್ರಯೋಗಿಸಿದಾಗ, ಅದನ್ನು ಉಪಗ್ರಹ ವಕ್ರತೆ ಎಂದು ಹೇಳಲಾಗುತ್ತದೆ. [31]

ಮೇಲೆ ವಿವರಿಸಲಾದ ಧಾತುವಿನ ಪ್ರತ್ಯಯಗಳ ಸೌಂದರ್ಯವನ್ನು ಕವಿಗಳು ಉಪಗ್ರಹ ವಕ್ರತೆ ಎಂದು ಹೆಸರಿಸಿದ್ದಾರೆ. ಅದರ ಸ್ವರೂಪವೇನು? ಯಾವುದೊಂದು ಸಂದರ್ಭದಲ್ಲಿ ಆತ್ಮನೇ ಪದ ಅಥವಾ ಪರಸ್ಮೈಪದ-ಧಾತುಗಳ ಪ್ರತ್ಯಯಗಳಲ್ಲಿ ಯಾವುದನ್ನು ಬೇಕಾದರೂ ನಿಯಮ ಪೂರ್ವಕವಾಗಿ ಬಳಸಬಹುದಾಗಿದ್ದಾಗ, ಕವಿಗಳು ಇನ್ನೊಂದನ್ನು ಬಿಟ್ಟು ಒಂದನ್ನು ಮಾತ್ರ ಆದ್ಯತೆಯ ಮೇರೆಗೆ ಬಳಸುತ್ತಿರುವುದು ಕಂಡು ಬರುತ್ತಿದೆ. ಯಾವ ಕಾರಣದಿಂದ? - ಎಂದರೆ ಔಚಿತ್ಯದ ಸಲುವಾಗಿ. ವರ್ಣಿತ ವಸ್ತುವಿನ ಔಚಿತ್ಯಕ್ಕನುಗುಣವಾಗಿ. ಇದರ ಪರಿಣಾಮವಾಗಿ ಅಪೂರ್ವ ಶೋಭೆ ಉಂಟಾಗುತ್ತದೆ.

ಉದಾ :

ತಸ್ಯಾಪರೇಷ್ವಪಿ ಮೃಗೇಷು ಶರಾನ್ಮುಮುಕ್ಷೋಃ
ಕರ್ಣಾಂತಮೇತ್ಯ ಬಿಭಿದೇ ನಿವಿಡೋಽಪಿ ಮುಷ್ಟಿಃ|
ತ್ರಾಸಾತಿಮಾತ್ರ ಚಟುಲೈಃ ಸ್ಮರಯತ್ಸು ನೇತ್ರೈಃ
ಪ್ರೌಢ ಪ್ರಿಯಾನಯನ ವಿಭ್ರಮಚೇಷ್ಟಿತಾನಿ [೧೦೬]

[ರಘುವಂಶ - 9-58]

ಅನ್ಯ ಮೃಗಗಳ ಮೇಲೆ
ಬಾಣ ಹೂಡುವಪೇಕ್ಷೆ ಇದ್ದರು

ಕಿವಿಯವರೆಗು ಸೆಳೆದಿದ್ದ
ನೃಪನ ದೃಢ ಮುಷ್ಟಿ ತನಗೆ ತಾನೇ ಸಡಿಲಿತು
ಹೆದರಿದ ಹರಿಣಿಗಳ ಚಂಚಲಾಕ್ಷಿಗಳ
ಚೆಲುವು ತಂದಿತು ನೃಪಗೆ
ಪ್ರೇಮ ವ್ಯಾಪಾರದೊಳು ನುರಿತ ಪ್ರಿಯೆಯ
ಮಧುರ ನಯನದ ವಿಲಾಸಂಗಳ ಸವಿನೆನಪನು [೧೦೬]

ಇಲ್ಲಿ ರಾಜನು, (ದಶರಥ) ತನ್ನ ಪ್ರಿಯ ವಿಲಾಸವತಿಯರ ಸುಂದರ ನಯನಗಳ ವಿಲಾಸವನ್ನು ನೆನೆಸಿಕೊಂಡಿದ್ದಾನೆ. ಅವನ ಮನಸ್ಸು ಅವುಗಳಲ್ಲೇ ಮಗ್ನವಾಗಿ ಬಿಟ್ಟಿದೆ. ರಾಜನ ಪ್ರಜ್ಞಾಪೂರ್ವಕವಾದ ಯಾವ ಶಾರೀರಿಕ ಪ್ರಯತ್ನವೂ ಇಲ್ಲದೆ, ತನಗೆ ತಾನೇ ಅವನ ಬಿಗಿದ ಮುಷ್ಟಿ ಸಡಿಲಿದೆ. ಆತ್ಮನೇ ಪದ ಪ್ರಯೋಗದ ಮಹತ್ವಪೂರ್ಣ ಪ್ರಯೋಗದಿಂದ ಇದೆಲ್ಲವೂ ಸೂಚಿತವಾಗಿದೆ. ಅದೇ ಈ ಕರ್ಮದ ಕರ್ತೃತ್ವ. ಒಟ್ಟಾರೆ ಇದರಿಂದ ಇಡೀ ವಾಕ್ಯದಲ್ಲೊಂದು ವಕ್ರತೆ ಸಾಧಿತವಾಗಿ ಅಪೂರ್ವ ಚಮತ್ಕಾರ ಉಂಟಾಗಿದೆ.

ಹೀಗೆ ಉಪಗ್ರಹ ವಕ್ರತೆಯನ್ನು ವಿವೇಚಿಸಿದ ಅನಂತರ ಇತರೆ ಪ್ರಕಾರದ ಕ್ರಿಯಾಪ್ರತ್ಯಯಗಳ ವಕ್ರತೆಯನ್ನು ಕೈಗೆತ್ತಿಕೊಳ್ಳಲಾಗುವುದು.

ವಿಹಿತಃ ಪ್ರತ್ಯಯಾದನ್ಯಃ ಪ್ರತ್ಯಯಃ ಕಮನೀಯತಾಮ್
ಯತ್ರ ಕಾಮಪಿ ಪುಷ್ಣಾತಿ ಸಾನ್ಯಾ ಪ್ರತ್ಯಯವಕ್ರತಾ [32]

ಮಾಮೂಲಿ ಪ್ರತ್ಯಯವಲ್ಲದೆ ಕಣ್ಣುಕುಕ್ಕುವ ಸೌಂದರ್ಯದ ಕಡೆಗೆ ಕಣ್ಣಿಟ್ಟು ಹೊಸದೊಂದು ಪ್ರತ್ಯಯವನ್ನು ಸೇರಿಸಿದಾಗ, ಅದು ವಿಶಿಷ್ಟ ಪ್ರತ್ಯಯ ವಕ್ರತೆ ಎನಿಸುತ್ತದೆ. [32]

ಅದು ಬೇರೊಂದೇ ಪ್ರತ್ಯಯ ವಕ್ರತೆ ಎನಿಸುತ್ತದೆ. ಅರ್ಥಾತ್ ಈ ಮೊದಲು ಹೇಳಲಾದ ಮಾಮೂಲಿ ಪ್ರತ್ಯಯಗಳಲ್ಲದೆ ಭಿನ್ನವಾದೊಂದು ಪ್ರತ್ಯಯವನ್ನು ಸಾಹಿತ್ಯಿಕ ಸೌಂದರ್ಯದತ್ತ ಕಣ್ಣಿಟ್ಟು ವೈಶಿಷ್ಟ್ಯಪೂರ್ಣವಾಗಿ ಬಳಸಿದಾಗ, ವಿಶಿಷ್ಟ ಪ್ರತ್ಯಯ ವಕ್ರತೆ ಕಂಡುಬರುತ್ತದೆ. ಅಂಥ ವೈಶಿಷ್ಟ್ಯ ಪೂರ್ಣ ಪ್ರಯೋಗಗಳು ಇವೆ. ಅಂಥ ನೂತನ ಪ್ರಯೋಗಗಳು ಕಾವ್ಯದ ಕಮನೀಯತೆಯನ್ನು ಪೋಷಿಸುತ್ತವೆ. ಬಳಕೆಯಿಂದ ಸವಕಲಾದ ಧಾತು ಪ್ರತ್ಯಯವೊಂದರ ಸ್ಥಾನದಲ್ಲಿ ಅಷ್ಟೇನೂ ಹಳಸಲಲ್ಲದ ಪ್ರತ್ಯಯವು ಬಂದಾಗ ಅನನ್ಯ ಪ್ರತ್ಯಯ (ವಿಶಿಷ್ಟ) ವಕ್ರತೆ ಉಂಟಾಗುತ್ತದೆ.

ಉದಾ :

ಲೀನಂ ವಸ್ತುನಿ ಯೇನ ಸೂಕ್ಷ್ಮಸುಭಗಂ ತತ್ತ್ವಂ ಗಿರಾ ಕೃಷ್ಯತೇ
ನಿರ್ಮಾತುಂ ಪ್ರಭವೇನ್ಮನೋಹರಮಿದಂ ವಾಚೈವ ಯೋ ಬಹಿಃ|

ವಂದೇ ದ್ವಾವಪಿ ತಾವಹಂ ಕವಿವರೌ ವಂದೇತರಾಂ ತಂ ಪುನ-
ರ್ಯೋ ವಿಜ್ಞಾತಪರಿಶ್ರಮೋಽಯಮನಯೋರ್ಭಾರಾವತಾರಕ್ಷಮಃ [೧೦೭]

ಪ್ರಕೃತಿ ವಸ್ತುಗಳಲಡಗಿರುವ ಸೂಕ್ಷ್ಮ ಸುಂದರ
ತತ್ತ್ವವನು ಮಾತಿನಿಂ ಹೊರಸೆಳೆವನೊಬ್ಬ
ಮಾತೊಂದರಿಂದಲೆ ನವ ಮನೋಹರ ವಸ್ತುಗಳ
ನಿರ್ಮಿಪನಿನ್ನೊಬ್ಬ. ಈ ಕವಿವರರಿರ್ವರನು
ವಂದಿಪೆನು. ಇವರಿರ್ವರ ಶ್ರಮವರಿತು
ಅದರ ಭಾರವನಿಳುಹಿ ಕೊಳಲಾರ್ಪನನು ಮಿಗಿಲಾಗಿ ವಂದಿಪೆನು [೧೦೭]

"ವಂದೇತರಾಂ" ಎಂಬ ಪದ ಪ್ರಯೋಗದಲ್ಲಿ ಅಪೂರ್ವವಾದ ಪ್ರತ್ಯಯ ವಕ್ರತೆ ಕವಿ ಪ್ರತಿಭೆಯಲ್ಲಿ ಹೊಳಹುಗೊಡುತ್ತಿರುವುದನ್ನು ನೋಡಬಹುದು. ಅದರಿಂದಲೇ ಮೊದಲಿನದಕ್ಕೂ ಅನಂತರದಕ್ಕೂ ಇರುವ ವೈದೃಶ್ಯವನ್ನು ಎದ್ದು ಕಾಣುವಂತೆ ತೋರಿಸಲೆಂದೇ 'ಪುನಃ' ಶಬ್ದದ ಪ್ರಯೋಗವನ್ನು ಮಾಡಲಾಗಿದೆ.

ಇದುವರೆಗೂ ಲೇಖಕನು ನಾಮಪದ ಮತ್ತು ಕ್ರಿಯಾಪದಗಳನ್ನು ವಿವೇಚಿಸಿದ್ದಾನೆ. ಹಾಗೂ ಅವುಗಳನ್ನು ಪ್ರಕೃತಿ, ಪ್ರತ್ಯಯ ಎಂದೆಲ್ಲ ಪ್ರತಿಯೊಂದನ್ನು ಪ್ರತ್ಯೇಕವಾಗಿ ವಿಶ್ಲೇಷಿಸಿ ಅವುಗಳಲ್ಲಿರಬಹುದಾದ ವಕ್ರತೆಯನ್ನು ವಿವೇಚಿಸಿದ್ದಾನೆ. ಆದರೆ ಸಂಸ್ಕೃತ ದಲ್ಲಿ ವಿಭಕ್ತಿ ಪ್ರತ್ಯಯಗಳು ಹತ್ತದಿರುವ ಅವ್ಯಯಗಳು, ನಿಪಾತಗಳು ಮತ್ತು ಉಪಸರ್ಗದಂಥ ಪದಗಳಿವೆ. ಇದೀಗ ಅವುಗಳ ವಕ್ರತೆಯನ್ನು ಸಮಗ್ರವಾಗಿ ವಿವೇಚಿಸಲಾಗುವುದು.

ರಸಾದಿದ್ಯೋತನಂ ಯಸ್ಯಾಮುಪಸರ್ಗನಿಪಾತಯೋಃ|
ವಾಕ್ಯೈಕ ಜೀವಿತತ್ವೇನ ಸಾ ಪರಾ ಪದವಕ್ರತಾ [33]

ಕಾವ್ಯದಲ್ಲಿ ಒಟ್ಟಾರೆಯಾಗಿ ರಸವೇ ವಾಕ್ಯದ ಏಕಮಾತ್ರ ಪ್ರಾಣವೆಂದು ಸೂಚಿಸಲು ಉಪಸರ್ಗಗಳು ಮತ್ತು ನಿಪಾತಗಳನ್ನು ಬಳಸಿದಾಗ, ಬೇರೊಂದೇ ವಿಧವಾದ ಪದವಕ್ರತೆ ಕಂಡುಬರುತ್ತದೆ. [33]

ಈಗ ಇನ್ನೊಂದು ವಿಧವಾದ ಪದವಕ್ರತೆಗೆ ಬರುತ್ತೇವೆ. ಈಗಾಗಲೇ ವಿವೇಚಿಸಲಾದ ಪದ ವಕ್ರತೆಗಿಂತ ಭಿನ್ನವಾದ ಸಮಗ್ರಪದವಕ್ರತೆ ಇದು. ಅದರ ವಿಶೇಷತೆಯನ್ನು ಇಲ್ಲಿ ವಿವರಿಸಲಾಗಿದೆ. ಉಪಸರ್ಗಗಳು ಮತ್ತು ನಿಪಾತ (ಅವ್ಯಯಗಳು)ಗಳಿಗೆ ವ್ಯಾಕರಣಕಾರರು ನಿಗದಿಪಡಿಸಿದ ಎಂದಿನ ಪ್ರಸಿದ್ಧ ಅರ್ಥಗಳಿದ್ದೇ ಇವೆ. ಅವು ಶೃಂಗಾರಾದಿ ರಸಗಳನ್ನು ಸೂಚಿಸುವ ಸಾಧನಗಳಾಗಬಹುದು. ಹೇಗೆ ಎಂದು ಕೇಳಬಹುದು. ಸಂಪೂರ್ಣ ವಾಕ್ಯದ ಏಕಮಾತ್ರ ಪ್ರಾಣಸ್ವರೂಪವೆಂಬಂತೆ ಅವು ಕಂಡುಬರಬಹುದು. ವಾಕ್ಯವೆಂದರೆ ಅದರ ಅಂಗಗಳೇ ಆದ ಉಪಸರ್ಗ ಇತ್ಯಾದಿಗಳನ್ನೂ ಒಳಗೊಂಡಂತೆ ಇಡೀ ಶ್ಲೋಕ ಎಂದೇ ಅರ್ಥ. ಕವಿಯ

ಕಲಾನೈಪುಣ್ಯದಿಂದಾಗಿ ಅವು ಇಡೀ ರಚನೆಯ ಜೀವಿತವೆಂಬಂತೆ ಕಾಣಿಸಿಕೊಳ್ಳುತ್ತವೆ. ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ, ಇವುಗಳ ಮೂಲಕವೂ ರಸಾದಿಗಳು ರಚನೆಯ (ಕಾವ್ಯ) ಅತಿ ಪ್ರಮುಖ ಹೊಳಹೆಂಬಂತೆ ಸ್ಫುರಿತವಾಗುತ್ತವೆ.

ಉದಾ :

ವೈದೇಹೀ ತು ಕಥಂ ಭವಿಷ್ಯತಿ ಹಹಾ ಹಾ ದೇವಿ ಧೀರಾ ಭವ [೧೦೮]

ಆದರೆ ಹಾಯ್ ವೈದೇಹಿ ಎಂತಿರುವೆ ನೀನು?
ಹಾ| ಹಾ| ದೇವಿ|
ಧೈರ್ಯದಿಂದಿರು| [೧೦೮]

ಈ ಸಾಲುಗಳಲ್ಲಿ ವರ್ಷಾಕಾಲದ ಉದ್ದೀಪನ ವಿಭಾವಗಳಿಂದ ಇದ್ದಕ್ಕಿದ್ದಂತೆ ತಳಮಳಕ್ಕೀಡಾದ ರಾಮನ ಹೃದಯಸ್ಪರ್ಶಿ ವರ್ಣನೆ ಇದೆ. ಸೀತೆಯು ಮರಣಿಸಿರ ಬಹುದೆಂದು ಹೆಚ್ಚುಕಡಿಮೆ ತೀರ್ಮಾನಿಸಿಯೇ ಬಿಟ್ಟಿರುವ ರಾಮ, ಅವಳ ಪ್ರಾಣರಕ್ಷಣೆಗಾಗಿ ತನ್ನ ದೇಹದ ಕಣಕಣವನ್ನೂ ಮೀಸಲಾಗಿಟ್ಟಿರುವ ರಾಮ, ಅವಳ ಯೋಚನೆಯಲ್ಲಿ ಅದೆಷ್ಟು ಮುಳುಗಿ ಹೋಗಿದ್ದಾನೆಂದರೆ, ಅವಳನ್ನೂ ತನ್ನನ್ನೂ ಬೇರ್ಪಡಿಸಿರುವ ದೂರವನ್ನೂ ಕಡೆಗಣಿಸಿ, ಅವಳ ಜೀವಂತ ಚಿತ್ರ ಅವನ ಮನಸ್ಸಿನಲ್ಲಿ ನೆಲೆ ನಿಂತುಬಿಟ್ಟಿದೆ. ಇಲ್ಲಿ ಪರಾಕಾಷ್ಠಸ್ಥಿತಿ ತಲುಪಿರುವ ಶೃಂಗಾರ ರಸವಂತೂ (ಪ್ರೇಮಭಾವನೆ) ನಿಜಕ್ಕೂ ಅತ್ಯುಜ್ವಲವಾಗಿದೆ. ಸುಂದರ ನಿಪಾತ ಪರಂಪರೆಗಳ ಸಂಚಿತ ಪರಿಣಾಮದಿಂದಾಗಿ ಇದು ಸಾಧ್ಯವಾಗಿದೆ. ಈ ಸಂಚಿತ ಪರಿಣಾಮ ಪದ್ಯದ ಜೀವ ಸರ್ವಸ್ವವೆಂಬಂತೆ ಪ್ರತೀತವಾಗುತ್ತ ಒಟ್ಟಾರೆ ಇಲ್ಲಿಯ ವಾಕ್ಯ ವಕ್ರತೆಗೆ ಕಾರಣವಾಗಿರುವುದೇನು ಆಶ್ಚರ್ಯ? ಅಲ್ಲದೆ 'ತು' ಎಂಬ ನಿಪಾತ ಅವ್ಯಯದ ವಕ್ರತೆಯನ್ನು ಕುರಿತು ಈಗಾಗಲೇ ವಿವರಿಸಲಾಗಿದೆ. ಇನ್ನೊಂದು ಉದಾಹರಣೆ

ಅಯಮೇಕಪದೇ ತಯಾ ವಿಯೋಗಃ
ಪ್ರಿಯಯಾ ಚೋಪನತಃ ಸುದುಃ ಸಹೋ ಮೇ|
ನವವಾರಿಧರೋದಯಾದಹೋಭಿ-
ರ್ಭವಿತವ್ಯಮ್ ಚ ನಿರಾತಪತ್ವರಮ್ಯೈಃ[೧೦೯]

ಇದ್ದಕಿದ್ದೊಲೆ ನನ್ನ ಪ್ರಿಯತಮೆಯ ವಿಯೋಗ–
ವೊದಗಿಹುದು ಮತ್ತೆ ಎನಿತು ದುಸ್ಸಹವಿದುವು|
ನವಜಲದಗಳು ಕೂಡ ಈಗಲೇ
ಕಾಣುತಿವೆಯಾಗಿ ಬಿಸಿಲಿರದ
ಈ ಪಗಲುಗಳ ಚೆಲುವು ಅರೆಬರೆಯಾಗಿದೆ. [೧೦೯] [ವಿಕ್ರ 4+10]

ವಿಕ್ರಮೋರ್ವಶೀಯದಲ್ಲಿ ಊರ್ವಶಿಯ ವಿರಹದಿಂದ ವೇದನೆಗೊಳಗಾದ ಪುರೂರವನು

ತನ್ನ ದುಃಖವನ್ನು ತೋಡಿಕೊಳ್ಳುತ್ತ ಯಾರು ಹತಭಾಗ್ಯರೋ ಅವರಿಗೆ ಒಂದು ದುಃಖದೊಂದಿಗೆ ಮತ್ತೊಂದು ದುಃಖ ಕೂಡ ಗಂಟುಬೀಳುತ್ತದೆ ಎನ್ನುತ್ತಾನೆ.

ಇಲ್ಲಿ ಯಾರ ವೇದನೆಯನ್ನೇ ಆಗಲಿ ಉದ್ದೀಪನಗೊಳಿಸುವ ಅದಮ್ಯ ಸಾಮರ್ಥ್ಯವನ್ನು ಹೊಂದಿರುವ ಎರಡು ಅಂಶಗಳಿವೆ. ಅವುಗಳೆಂದರೆ ಪ್ರಿಯರ ಅಗಲಿಕೆಯ ದುಸ್ಸಹವೇದನೆ ಮತ್ತು ವರ್ಷಾಕಾಲದ ಆಗಮನ. 'ಚ' ಮತ್ತು 'ಚ' ಎಂಬ ಎರಡು ನಿಪಾತ ಶಬ್ದಗಳ ಬಲದಿಂದ ಅವರೆಡೂ ಏಕಕಾಲದಲ್ಲಿ ಸಂಧಿಸುತ್ತಿರುವಂತೆ ಇಲ್ಲಿ ವರ್ಣಿಸಲಾಗಿದೆ ಈ ಬಲ ದುಃಖಾಗ್ನಿಯನ್ನು ಒಮ್ಮೆಗೇ ಪ್ರಜ್ವಲಗೊಳಿಸಬಲ್ಲ ವ್ಯಜನ ಸಮಾನವಾದ ದಕ್ಷಿಣ ಪವನದ ಹಾಗೆ ಇದೆ. ಪರಿಣಾಮ, ವಾಕ್ಯದ ವಕ್ರತೆ ಸಮರ್ಥವಾಗಿ ಪ್ರಕಾಶಕ್ಕೆ ಬಂದಿದೆ. 'ಸು' ಮತ್ತು 'ದು' ಎಂಬ ಉಪಸರ್ಗಗಳಿಂದ, ಪ್ರಿಯೆಯ ವಿರಹದ ನಿರಾಕರಣೆ ಅಶಕ್ಯ ಎಂಬುದನ್ನು ಸೂಚಿಸಲಾಗಿದೆ. ಹೇಗೆಂದರೆ -

ಮುಹುರಂಗುಲಿ ಸಂವೃತಾಧರೋಷ್ಠಂ
ಪ್ರತಿಷೇಧಾಕ್ಷರ ವಿಕ್ಲವಾಭಿರಾಮಮ್|
ಮುಖಮುಂಸವಿವರ್ತಿ ಪಕ್ಷ್ಮಲಾಕ್ಷ್ಯಾಃ
ಕಥಮಪ್ಯುನ್ನಮಿತಂ ನಚುಂಬಿತಂ ತು [೧೧೦] **[ಶಾಕುಂತಲ -3-78]**

ಕೈಯ ಬೆರಳುಗಳಿಂದ ತುಟಿಗಳನು
ಮತ್ತೆ ಮತ್ತೆ ಮರೆಮಾಡುತ್ತೆ
ಬಿಡು ಬಿಡು ಬೇಡ ಬೇಡೆನುವ
ತೊದಲು ನುಡಿಗಳಿಂದತಿ ರಮ್ಯಮಾಗಿ
ತುರುಗಿದೆವಗಳ ಕಂಗಳ
ಭುಜದ ಕಡೆಗೆ ಮೊಗಮಾಡಿರ್ದ
ಚೆಲುವೆಯ ಮೊಗವನೆಂತೊ
ಮೇಲೆತ್ತಿಯುಮಂದು ಚುಂಬಿಸದಾದೆನು [೧೧೦]

ಇಲ್ಲಿ ನಾಯಕ ದುಷ್ಯಂತನು, ತನ್ನ ಪ್ರಥಮಾಭಿಲಾಷೆಯ ಹುಚ್ಚನ್ನು ಅದೆಷ್ಟು ತಲೆಗೆ ಹತ್ತಿಸಿಕೊಂಡಿದ್ದಾನೆಂದರೆ ಹಾಗೂ ಅವನ ಅನುಭವ ಸ್ಮೃತಿ, ಶಕುಂತಲೆಯ ಮರುಳು ಗೊಳಿಸುವ ಮುಖಚಂದ್ರನ ಪೂರ್ಣಕಳೆಯಿಂದ ಅವನ ಮನಸ್ಸನ್ನು ಅದೆಷ್ಟು ತುಂಬಿಬಿಟ್ಟಿದೆ ಎಂದರೆ, ಮೊದಲ ಭೇಟಿಯ ಸಂದರ್ಭದಲ್ಲಿ ಅವಳ ಚುಂಬನದಿಂದ ವಂಚಿತನಾದದ್ದಕ್ಕೆ ತೀವ್ರ ಪಶ್ಚಾತ್ತಾಪಪಡುತ್ತಿದ್ದಾನೆ. 'ತು' ಎಂಬ ನಿಪಾತ ಅವ್ಯಯವು ಪಶ್ಚಾತ್ತಾಪದಲ್ಲಿ ಪರ್ಯವಸಾನವಾಗಲಿರುವ ನಾಯಕನ ಆವೇಶವನ್ನು ಪ್ರಕಾಶನಗೊಳಿಸುವಲ್ಲಿ ಸಮರ್ಥವಾಗಿದೆಯಷ್ಟೇ ಅಲ್ಲದೆ, ಲೋಕೋತ್ತರವಾದ ರೀತಿಯಲ್ಲಿ ವಾಕ್ಯವಕ್ರತೆಯನ್ನು ಉತ್ತೇಜಿಸುತ್ತದೆ.

ಈ ಉಪಸರ್ಗಾದಿಗಳ ಮುಂದೆ ಹತ್ತುವ ಪ್ರತ್ಯಯಗಳ ವಕ್ರತೆ ಈ ರೀತಿಯ ಇತರೆ ಪ್ರತ್ಯಯ ವಕ್ರತೆಗಳಲ್ಲಿಯೇ ಸೇರುತ್ತವಾದ ಕಾರಣ ಅವನ್ನು ಬೇರೆಯಾಗಿ ಹೇಳಿಲ್ಲ. ಸಹೃದಯರೇ ಅಂಥ ಉದಾಹರಣೆಗಳನ್ನು ಊಹಿಸಿಕೊಳ್ಳಬಹುದು. ಉದಾ :

ಯೇನ ಶ್ಯಾಮಂ ವಪುರತಿತರಾಂ
ಕಾಂತಿಮಾಪತ್ಸ್ಯತೇ ತೇ
ಬರ್ಹೇಣೇವ ಸ್ಫುರಿತ ರುಚಿನಾ
ಗೋಪವೇಷ ಸ್ಯ ವಿಷ್ಣೋಃ [೧೧೧] **[ಮೇಘದೂತ - 15]**

ಇದರಿಂದ ನಿನ್ನ ಶ್ಯಾಮಲ ದೇಹ
ಅತಿಶಯದ ಕಾಂತಿಯಿಂ ಕಂಗೊಳಿಪುದು
ಗೋಪಾಲವೇಷದಲಿ
ಹೊಳೆವ ನವಿಲು ಗರಿಯಿಂದೆಸೆವ
ವಿಷ್ಣುವಿನ ದೇಹದಂತೆ [೧೧೧]

ಇಲ್ಲಿ "ಅತಿತರಾಂ" ಎಂಬ ಶಬ್ದ ಅತ್ಯಂತ ಚಮತ್ಕಾರಕಾರಿಯಾಗಿದೆ. ಇದೇ ರೀತಿ ಸಜಾತೀಯ ಲಕ್ಷಣಗಳ ಆಧಾರದ ಮೇಲೆ ಸಹೃದಯರು ತಮಗೆ ತಾವೇ ಲಕ್ಷಣಗಳ ನಿಷ್ಪತ್ತಿಯನ್ನು ಮಾಡಿಕೊಳ್ಳಬಹುದು. ಹೀಗೆ ನಾನಾ ಬಗೆಯ ವಕ್ರತ್ವ ಶೋಭೆಗಳು ನಾಲ್ಕು ಬಗೆಯ ಪದ ವಿಷಯಗಳನ್ನು ವಿಶೇಷಿಸುತ್ತವೆ ಹಾಗೂ ವಾಕ್ಯದ (ಕಾವ್ಯದ) ಒಂದು ಭಾಗದ ಪ್ರಾಣಸ್ವರೂಪವೆಂಬಂತೆ ಕಂಡು ಬಂದರೂ ಸಮಸ್ತ ವಾಕ್ಯದ ವೈಚಿತ್ರ್ಯಕ್ಕೆ ಕಾರಣವಾಗಬಹುದು.

ವಕ್ರತಾಯಾಃ ಪ್ರಕಾರಾಣಾ ಮೇಕೋऽಪಿ ಕವಿ ಕರ್ಮಣಃ|
ತದ್ವಿದಾಹ್ಲಾದ ಕಾರಿತ್ವ ಹೇತುತಾಂ ಪ್ರತಿಪದ್ಯತೇ [೧೧೨]

ಇದು ಅಂತರ ಶ್ಲೋಕ

ಕವಿ ನಿರ್ಮಿತ ವಕ್ರತೆಯ ಅಸಂಖ್ಯಾತ ಪ್ರಕಾರಗಳಲ್ಲಿ ಕಾವ್ಯರಸಿಕರ ಆಹ್ಲಾದಕ್ಕೆ ಕೇವಲ ಒಂದೇ ಒಂದು ಪ್ರಕಾರವೂ ಸಾಕಾಗಬಹುದು.

ಈ ಶ್ಲೋಕ ಇಡೀ ಚರ್ಚೆಯ ಸಾರಾಂಶವಾಗಿದೆ. ಒಂದೇ ಒಂದು ಪ್ರಕಾರದ ವಕ್ರತೆಯ ಮಹಿಮೆಯೇ ಈ ಮಟ್ಟಿಗೆ ಇರಬೇಕಾದರೆ, ಇನ್ನು ಅದರ ವಿವಿಧ ಪ್ರಕಾರಗಳು ಒಂದೇ ಎಡೆಯಲ್ಲಿ ಸಂಧಿಸುವಂತಿದ್ದರೆ, ಇನ್ನೆಷ್ಟಿರಬೇಡ?

ಪರಸ್ಪರಸ್ಯ ಶೋಭಾಯೈ ಬಹವಃ ಪತಿತಾಃ ಕ್ವಚಿತ್|
ಪ್ರಕಾರಾ ಜನಯಂತ್ಯೇತಾಮ್ ಚಿತ್ರಚ್ಛಾಯಾ ಮನೋಹರಾಮ್ [34]

ವಕ್ರತೆಯ ಅಂಥ ವಿವಿಧ ಪ್ರಕಾರಗಳು ಒಂದು ಮತ್ತೊಂದರ ಸೌಂದರ್ಯವನ್ನು ಹೆಚ್ಚಿಸುವ

ರೀತಿಯಲ್ಲಿ ಒಂದೆಡೆ ಸೇರಿದಾಗ [ಬಹುವರ್ಣಗಳ ಚಿತ್ರ ಛಾಯೆಯಂತೆ] ಬಹುಮುಖ ಸೌಂದರ್ಯದ ವಕ್ರತೆಯನ್ನು ನಿರ್ಮಿಸುತ್ತವೆ. [34]

ಅನೇಕಸಲ ಒಂದೇ ಒಂದು ಶಬ್ದ ಅಥವಾ ಶ್ಲೋಕ (ವಾಕ್ಯ)ದಲ್ಲಿ ಕೂಡ, ಮೇಲೆ ವರ್ಣಿಸಲಾದ ಸೌಂದರ್ಯದ ಪ್ರಕಾರಗಳು ಸಹಜವಾಗಿ ಹುಟ್ಟಿಕೊಳ್ಳುತ್ತವೆ. ಕವಿ ಪ್ರತಿಭೆಯ ಶೋಧಕ ಶಕ್ತಿಗೆ ನಮೋ ನಮೋ! ಪರಿಣಾಮವೆಂದರೆ ಅವು ಒಂದು ಮತ್ತೊಂದರ ಶೋಭೆಯನ್ನು ಹೆಚ್ಚಿಸುತ್ತವೆ. ಉದಾ: ತರಂತೀವಾಂಗಾನಿ ..... [೧೧೩] [2-91] ಇಲ್ಲಿಯ ಮೂರು ಕ್ರಿಯಾಪದಗಳಲ್ಲಿ ಪ್ರತಿಯೊಂದರದ್ದೂ ಮೂರು ವಿಧವಾದ ವೈಚಿತ್ರ್ಯ ಪ್ರಕಾಶಕ್ಕೆ ಬರುತ್ತದೆ. 1) ಕ್ರಿಯಾವೈಚಿತ್ರ್ಯ 2) ಕಾರಕ ವೈಚಿತ್ರ್ಯ ಹಾಗೂ 3) ಕಾಲ ವೈಚಿತ್ರ್ಯ ಪ್ರಥಿಮ್ನ-ಸ್ತನ- ಜಘನ ಮತ್ತು ತರುಣಿಮಾ ಈ ಮೂರರಲ್ಲೂ ವೃತ್ತಿ ವೈಚಿತ್ರ್ಯ ವಕ್ರತೆ ಇದೆ. ಲಾವಣ್ಯ, ಜಲಧಿ, ಪ್ರಾಗಲ್ಭ್ಯ, ಸರಲತಾ ಮತ್ತು ಪರಿಚಯ ಇವುಗಳಲ್ಲಿ ಉಪಚಾರ ವಕ್ರತೆ ಇದೆ. ಹೀಗೆ ವಕ್ರತೆಯ ಈ ವಿವಿಧ ಪ್ರಕಾರಗಳು ಒಂದೇ ಪದ ಅಥವಾ ವಾಕ್ಯದಲ್ಲಿ ಒಟ್ಟಾಗಿ ಸೇರಿಕೊಂಡು ಚಿತ್ರದ ಶೋಭೆಯ ಹಾಗೆ ಮನೋಹರವಾಗಿ ಬಹುಮುಖ ಸೌಂದರ್ಯದಿಂದ ಸಹೃದಯರಿಗೆ ಆನಂದವನ್ನುಂಟು ಮಾಡುತ್ತ ವಾಕ್ಯ ವಕ್ರತೆಯ ರೂಪವನ್ನು ತಾಳುತ್ತವೆ.

ಹೀಗೆ ನಾಮ, ಆಖ್ಯಾತ, ಉಪಸರ್ಗ ಮತ್ತು ನಿಪಾತವೇ ಮೊದಲಾದ ನಾಲ್ಕು ವಿಧವಾದ ಪದಗಳ ವಕ್ರತೆಯ ಸಾಧ್ಯತೆಗಳನ್ನು ವಿವೇಚಿಸಿ ಇದೀಗ ಈ ಪ್ರಕರಣವನ್ನು ಈ ರೀತಿ ಉಪಸಂಹರಿಸುತ್ತಿದ್ದಾನೆ.

ವಾಗ್ವಲ್ಯಾಃ ಪದಪಲ್ಲವಾಸ್ಪದತಯಾ ಯಾ ವಕ್ರತೋದ್ಭಾಸಿನೀ
ವಿಚ್ಛಿತ್ತಿಃ ಸರಸತ್ವ ಸಂಪದುಚಿತಾ ಕಾಪ್ಯುಜ್ವಲಾ ಜೃಂಭತೇ।
ತಾಮಾಲೋಚ್ಯ ವಿದಗ್ಧ ಷಟ್ಪದ ಗಣೈರ್ವಾಕ್ಯ ಪ್ರಸೂನಾಶ್ರಯಂ
ಸ್ಫಾರಾಮೋದ ಮನೋಹರಂ ಮಧು ನವೋತ್ಕಂಠಾಕುಲಂ ಪೀಯತಾಮ್ [35]

(ಕಾವ್ಯಭಾಷೆಯನ್ನು ಕೋಮಲವಾದ ಬಳ್ಳಿ ಎಂದು ರೂಪಕದಲ್ಲಿ ಹೇಳಿದೆ) ಕಾವ್ಯದ ನುಡಿಯೇ ಒಂದು ಕೋಮಲ ಲತೆ. ಪದಗಳೇ ಎಲೆಗಳು. ವಕ್ರತೆಯಿಂದ ಸುಶೋಭಿತವಾಗುವ ಸೌಂದರ್ಯಕ್ಕೆ ಇವೇ ಆಧಾರ. ಅಲ್ಲದೆ ಸರಸತ್ವ ಸಂಪತ್ತಿಯಿಂದ ಕೂಡಿದ ಸಂವೇದನೆಗಳು ಮತ್ತು ಭಾವಗಳಿಗೆ ಅತ್ಯಂತ ಉಜ್ವಲವಾದ ರೀತಿಯಲ್ಲಿ ಇವು ಕಳೆಕೊಡುತ್ತವೆ. ಅದನ್ನು ವಿಚಾರ ಮಾಡಿ, ಭ್ರಮರ ರೂಪೀ ಸಹೃದಯರು, ವಾಕ್ಯರೂಪೀ ಪುಷ್ಪಗಳಲ್ಲಿರುವ ಅತ್ಯಂತ ಸುಗಂಧಯುಕ್ತವೂ, ಸುರುಚಿಪೂರ್ಣವೂ ಆದ ಮನೋಹರ ಮಧುವನ್ನು ಅತ್ಯಂತ ಉತ್ಕಂಠೆಯಿಂದ ಆಸ್ವಾದಿಸಲಿ [35]

ಕಾವ್ಯಭಾಷೆಯನ್ನು ಸುಕೋಮಲ ಬಳ್ಳಿ ಎಂದು ರೂಪಕದಲ್ಲಿ ಹೇಳಲಾಗಿದೆ. ಒಂದು ಅಲೌಕಿಕ ಸೌಂದರ್ಯ ಅದರಲ್ಲಿ ಅರಳುತ್ತದೆ. ಹೇಗೆ ಎಂದು ಕೇಳಬಹುದು. ಪದಗಳೇ

ಎಳೆಯ ಎಲೆಗಳು; ಅರ್ಥಾತ್ ನಾಮಪದಗಳು ಮತ್ತು ಕ್ರಿಯಾಪದಗಳೇ ಅದರ ಎಲೆಗಳು ಎಂಬುದೇ ಉತ್ತರ. ಅಂದರೆ ಈ ಎಲೆಗಳು (ನಾಮ ಮತ್ತು ಕ್ರಿಯಾಪದಗಳು) ಸೌಂದರ್ಯಕ್ಕೆ ಆಧಾರ. ಈ ಸೌಂದರ್ಯವನ್ನು ಇನ್ನಷ್ಟು ವಿವರಿಸಲಾಗುವುದು. ಅದು ಹೇಗೆ ಎಂದರೆ ಈ ಸೌಂದರ್ಯ (ವಿಚ್ಛಿತ್ತಿ) ಎಂಬುದು ಭಾವನೆ ಮತ್ತು ಸಂವೇದನೆಗಳ ರಮ್ಯತೆಯೊಂದಿಗೆ ಘನಿಷ್ಠವಾಗಿ ಹೆಣೆದುಕೊಂಡು ಬಿಟ್ಟಿವೆ. ಅದು ವಕ್ರತೆಯೊಂದಿಗೆ (ಕಲಾತ್ಮಕ ಸೌಂದರ್ಯ) ಸುಶೋಭಿತವಾಗಿದೆ. ಇದು ಉಜ್ವಲತೆಯಿಂದ ಕೂಡಿದೆ. ಅತಿಶಯವಾದ ರಮಣೀಯತೆಯಿಂದ ಕೂಡಿದೆ. ಅದರ ವಿಶೇಷತೆ ಎಂದರೆ ಮೂಲ ಮತ್ತು ನೂತನ ಸೌಂದರ್ಯಾತಿಶಯ ಛಾಯೆಗೆ ಇದರಲ್ಲಿ ಆಸ್ಪದವಿದೆ. ಈ ರೀತಿಯ ಸೌಂದರ್ಯದ ಬಗ್ಗೆ ವಿಚಾರ ಮಾಡಿ, ವಿದಗ್ಧ ರೂಪದ ದುಂಬಿಗಳ ಸಮೂಹ ಅರ್ಥಾತ್ ಭ್ರಮರವನ್ನು ಹೋಲುವ ಸಹೃದಯರ ಸಮುದಾಯ ಮಧುಪಾನ ಮಾಡಲಿ. ಅಂದರೆ ಪುಷ್ಪದ ರಸವನ್ನು ಆಸ್ವಾದಿಸಲಿ. ಎಂಥ ಪುಷ್ಪರಸ-? ವಾಕ್ಯವೆಂಬ ಹೂವನ್ನು ಆಶ್ರಯಿಸಿರುವ ಮಧುವನ್ನು ಎಂದು. ಪದಗಳ ಸಮುದಾಯವೇ ವಾಕ್ಯ. ಮಧುವನ್ನು ಪಡೆಯುವುದೂ ಇದೇ. ಮಧುವಿಗೆ ಬಳಸಿರುವ ಮತ್ತೊಂದು ವಿಶೇಷಣ ಅದು ಅತ್ಯಧಿಕ ಸುವಾಸನೆಯಿಂದ ಕೂಡಿರುತ್ತದೆ ಎನ್ನುವುದು. (ಸ್ಫಾರಾಮೋದ ಮನೋಹರಮ್) ಮಧು ಅತ್ಯಧಿಕವಾಗಿ ಸುಗಂಧಿತವಾಗಿರುತ್ತದೆ. ಬಹು ವ್ಯಾಪ್ತವೂ ಹೃದಯಾಪಹಾರಿಯೂ ಆಗಿರುತ್ತದೆ. ಯಾವ ರೀತಿಯಲ್ಲಿ ಆಸ್ವಾದಿಸಲಾಗುತ್ತದೆ? ನವೀನ ಉತ್ಕಂಠೆಯಿಂದ ಆಕುಲನಾಗಿ [ಇನ್ನಷ್ಟು ಕುತೂಹಲಿಗಳನ್ನಾಗಿ ಮಾಡುವಷ್ಟು ಆಮೋದಿತರನ್ನಾಗಿ]

ಭ್ರಮರ ಸಮೂಹವು ಬಳ್ಳಿಯಲ್ಲಿ ಮೊದಲು ಮೂಡಿದ ಚಿಗುರುಗಳನ್ನು ಕಂಡು ನಂಬಿಕೆ ಹುಟ್ಟಿ ಅನಂತರ ಅರಳಿದ ಸುಕೋಮಲ ಪುಷ್ಪಗಳ ಪುಷ್ಪರಸವನ್ನು ಆಸ್ವಾದಿಸುವ ಆನಂದದ ಅನುಭವವನ್ನು ಹೇಗೆ ಪಡೆಯುತ್ತವೆಯೋ, ಅದೇ ರೀತಿ ಸಹೃದಯರು, ಪದವನ್ನು ಆಶ್ರಯಿಸಿರುವ ಕಾವ್ಯದಲ್ಲಿ ಅಲೌಕಿಕ ವಕ್ರತೆಯ ಶೋಭೆಯನ್ನು ವಿವೇಚಿಸಿ, ನವೀನ ಉತ್ಕಂಠೆಯಿಂದ ರೋಮಾಂಚಿತ ಹೃದಯರಾಗಿ ವಾಕ್ಯವನ್ನೆಲ್ಲಾ ಆವರಿಸಿರುವ ವಕ್ರತೆಯ ಜೀವಿತ ಸರ್ವಸ್ವವನ್ನು ಪರಿಭಾವಿಸಲು ತೊಡಗುತ್ತಾರೆ. ಇದೇ ಇದರ ತಾತ್ಪರ್ಯ.

ಇಲ್ಲಿ ಶ್ಲೋಕದಲ್ಲಿ ಹೇಳಲಾಗಿರುವ 'ಸರಸತೆ' ಎಂಬುದಕ್ಕೆ ಎರಡು ಅರ್ಥಗಳಿವೆ. ಮೊದಲ ಅರ್ಥ ಋತುಮಾನಕ್ಕನುಗುಣವಾಗಿ, ವಸಂತದಲ್ಲಿ ಬಳ್ಳಿಗಳಲ್ಲಿ ಉತ್ಪನ್ನವಾಗುವ ರಸದ ಪ್ರಾಚುರ್ಯ ಹಾಗೂ ಎರಡನೆಯದಕ್ಕೆ ಶೃಂಗಾರಾದಿ ರಸಗಳ ವ್ಯಂಜಕತೆ. ಲತೆಗೆ ಅನ್ವಯಿಸಿದಂತೆ 'ವಕ್ರತೆ' ಎಂಬುದು ಬಾಲ ಚಂದ್ರನ ಹಾಗೆ ಸುಂದರ ಸಂಘಟನೆಯಿಂದ ಕೂಡಿರುವುದು ಎಂದು (ಬಿದಿಗೆಯ ಚಂದ್ರನಂತಿರುವ ಬಳ್ಳಿಯ ಕೊಂಕುಗಳು). ಎರಡನೇ ಅರ್ಥ (ವಾಣಿಯ ಪರವಾಗಿ)ದಲ್ಲಿ ಕಥನವೇ ಮೊದಲಾದವುಗಳ ವೈಚಿತ್ರ್ಯ (ಉಕ್ತಿವೈಚಿತ್ರ್ಯ). ಅದೇ ರೀತಿ ವಿಚ್ಛಿತ್ತಿಯ

ಮೊದಲ ಅರ್ಥ ಎಲೆಗಳು ಸ್ಫುಟವಾಗಿ ವಿಭಕ್ತವಾಗಿರುವುದು ಎಂದಾದರೆ, ಕಾವ್ಯಕ್ಕೆ ಸಂಬಂಧಿಸಿದಂತೆ ಕವಿಕೌಶಲ ಸೌಂದರ್ಯ. ಉಜ್ವಲತ್ವ ಎಂದರೆ ಮೊದಲ ಅರ್ಥದಲ್ಲಿ ಎಲೆಗಳ ಕಾಂತಿ. ಎರಡನೇ ಅರ್ಥದಲ್ಲಿ ಅವುಗಳ ಸನ್ನಿವೇಶ ಸೌಂದರ್ಯ ಸಮುದಾಯ. ಆಮೋದವೆಂದರೆ, ಬಳ್ಳಿಯಲ್ಲಿರುವ ಸುಗಂಧ ಹಾಗೂ ಕಾವ್ಯದ ಸಂದರ್ಭದಲ್ಲಿ ಆಮೋದವೆಂದರೆ ಸಹೃದಯರನ್ನು ಆನಂದಿತಗೊಳಿಸುವುದು. 'ಮಧು' ಎಂದರೆ ಹೂಗಳಲ್ಲಿರುವ ಮಕರಂದ. ಕಾವ್ಯದಲ್ಲಿ (ವಾಕ್ಯದಲ್ಲಿ) ಸಕಲ ಕಾವ್ಯಕಾರಣ ಸಂಪತ್ಸಮುದಾಯ.

* * *

ಇಲ್ಲಿಗೆ ಶ್ರೀರಾಜಾನಕ ಕುಂತಕನಿಂದ ವಿರಚಿತವಾದ
'ವಕ್ರೋಕ್ತಿ ಜೀವಿತ'ವೆಂಬ ಕಾವ್ಯಾಲಂಕಾರದಲ್ಲಿ
ಎರಡನೆಯ ಉನ್ಮೇಷ ಮುಗಿಯಿತು

ಕನ್ನಡ ವಕ್ರೋಕ್ತಿ ಜೀವಿತ

ಮೂರನೆಯ ಉನ್ಮೇಷ

ಹಿಂದಿನ ಅಧ್ಯಾಯದಲ್ಲಿ ವಾಕ್ಯದ ಅವಯವಗಳಾದ ಪದಗಳ ವಕ್ರತೆಯನ್ನು ವಿವೇಚಿಸುವ ಸಂದರ್ಭದಲ್ಲಿ ಶಬ್ದಗಳ ವಕ್ರತೆಯಿಂದ ಮೂಡುವ ವೈಚಿತ್ರ್ಯದ ಪ್ರಭೇದಗಳ ದಿಕ್‌ಪ್ರದರ್ಶನ ಮಾಡಲಾಯಿತು. ಇದೀಗ ವಾಕ್ಯಗಳ ವಕ್ರತೆಯ ವೈಚಿತ್ರ್ಯವನ್ನು ಪ್ರತಿಪಾದಿಸಲಾಗುವುದು. ಕಾವ್ಯವ್ಯಾಪಾರದ ಮೂಲ ವಿಷಯವೇ ವಾಚ್ಯ ಅಥವಾ ವರ್ಣಿತ ವಸ್ತುವಾದ ಕಾರಣ, ಪ್ರಕರಣದ ಆಶ್ರಯದಲ್ಲಿರುವ ವಸ್ತುವಿನ ವಕ್ರತೆಯ ಸ್ವರೂಪವನ್ನು ವಿವರಿಸಲಾಗುವುದು. ಕಾರಣ ಪದಾರ್ಥದ ಜ್ಞಾನದ ನಂತರವೇ ವಾಕ್ಯಾರ್ಥದ ಜ್ಞಾನವಾಗುವುದು.

ಉದಾರ ಸ್ವ ಪರಿಸ್ಪಂದ ಸುಂದರತ್ವೇನ ವರ್ಣನಮ್।
ವಸ್ತುನೋ ವಕ್ರ ಶಬ್ದೈಕ ಗೋಚರತ್ವೇನ ವಕ್ರತಾ [1]

ತನ್ನದೇ ಆದ ಅಪಾರ ಸ್ವಾಭಾವಿಕ ಸೌಂದರ್ಯದ ದೆಸೆಯಿಂದಾಗಿ ವಸ್ತುವು ರಮಣೀಯತೆಗೆ ತಗುವ ರೀತಿಯಲ್ಲಿ ವಿಶಿಷ್ಟ ವಕ್ರ ಶಬ್ದದ ಮೂಲಕವೇ ವರ್ಣಿಸಲ್ಪಟ್ಟಾಗ, ಅದನ್ನು ವಸ್ತುವಕ್ರತೆ ಎಂದು ಪರಿಗಣಿಸಬಹುದು. [1]

ತನ್ನ ಸೃಜನಶೀಲ ರಚನೆಗೆ ಕವಿ ಪ್ರಸ್ತುತವೆಂದು ಆಶಿಸಿದಂಥ ರೀತಿಯಲ್ಲಿ ಇರುವ ಪದಾರ್ಥವೇ ವಸ್ತು. ಈ ಶ್ಲೋಕದಲ್ಲಿ ಉಕ್ತವಾಗಿರುವ ವಿಶೇಷಣಗಳ ಪ್ರಕಾರ ವರ್ಣಿಸಲ್ಪಟ್ಟಾಗ, ವಕ್ರತೆಯ ವಿಚ್ಛಿತ್ತಿ ಅರ್ಥಾತ್ ಸೌಂದರ್ಯ ಉಂಟಾಗುತ್ತದೆ. ವರ್ಣನೆಯ ಸ್ವರೂಪವನ್ನು ಮೊದಲನೆಯ ವಿಶೇಷಣದಲ್ಲಿ ವರ್ಣಿಸಲಾಗಿದೆ. ಅದೆಂದರೆ "ಉದಾರ ಸ್ವಪರಿಸ್ಪಂದ ಸುಂದರತ್ವೇನ ವರ್ಣನಮ್" ಇಲ್ಲಿ 'ಉದಾರ'ವೆಂದರೆ ಸ್ವಾಭಾವಿಕ ರಮಣೀಯತೆಯು ಸರ್ವಾತಿಶಯವಾದ್ದು ಎಂದು. ಅದರ ರಮಣೀಯತೆ ಅಂದರೆ 'ಪರಿಸ್ಪಂದ' ಅದರ ಅತ್ಯಧಿಕ ಸುಕುಮಾರತೆಯಲ್ಲದೆ ಬೇರೆ ಅಲ್ಲ. ಅತ್ಯಂತ ರಮಣೀಯವಾದ ಸ್ವಾಭಾವಿಕ ಧರ್ಮದಿಂದ ಯುಕ್ತರೂಪದಲ್ಲಿ ವರ್ಣನೆ ಅರ್ಥಾತ್ ಪ್ರತಿಪಾದನೆ. ಅಂದರೆ ವಸ್ತುವು ಸರ್ವೋತ್ಕೃಷ್ಟವಾದ ಸ್ವಾಭಾವಿಕ ಸೌಂದರ್ಯದಿಂದ ಕೂಡಿರುತ್ತದೆ. ಯಾವ ರೀತಿಯಲ್ಲಿ ಅಂದರೆ 'ವಕ್ರಶಬ್ದೈಕ ಗೋಚರತ್ವೇನ' ಅಂದರೆ, ನಾನಾ ಪ್ರಕಾರದ ವಕ್ರತೆಯಿಂದ ಕೂಡಿದ ಶಬ್ದಗಳಲ್ಲಿ, ತನ್ನ ಕೃತಿಯ ಪ್ರಧಾನ ವಿಷಯವಾಗಿ ಪ್ರತಿಪಾದಿಸಬೇಕೆಂದಿರುವ ಕವಿ ವಿವಕ್ಷಿತ ಅರ್ಥವನ್ನು (ವಸ್ತುವನ್ನು) ಸಮರ್ಥವಾಗಿ ಅಭಿವ್ಯಕ್ತಿಸಬಲ್ಲ ವಿಶಿಷ್ಟ ಶಬ್ದವೊಂದನ್ನು ಮಾತ್ರ ಆಯ್ಕೆ ಮಾಡಲಾಗುವುದು. ಇಲ್ಲಿ ವಾಚ್ಯ

ರೂಪದಿಂದ ಎಂದು ಹೇಳಿಲ್ಲ; ಕಾರಣ, ವ್ಯಂಗ್ಯ ವಿಧಾನದಿಂದಲೂ ಪ್ರತಿಪಾದನೆ ಸಾಧ್ಯ ಎಂಬ ಕಾರಣದಿಂದ. ಇದರ ಒಟ್ಟಾರೆ ಆಶಯವೆಂದರೆ, ಈ ರೀತಿಯಲ್ಲಿ ಪದಾರ್ಥದ (ವಸ್ತುವಿನ) ಸ್ವಭಾವ ಸುಕುಮಾರತೆಯ ವರ್ಣನೆಯ ಸಂದರ್ಭವಿರುವಲ್ಲಿ ವಾಚ್ಯ ಅಲಂಕಾರಗಳಾದ ಉಪಮೆಯೇ ಮೊದಲಾದವುಗಳ ಪ್ರಯೋಗಕ್ಕೆ ಹೆಚ್ಚು ಎಡೆ ಇರುವುದಿಲ್ಲ. ಕಾರಣ, ಅದರಿಂದ ವಸ್ತುವಿನ ಸ್ವಭಾವ ಸುಂದರ ಸೌಕುಮಾರ್ಯವು ಹಾಳಾಗುತ್ತದೆ.

ಈ ವಿಚಾರದಲ್ಲಿ ಸ್ವಭಾವೋಕ್ತಿಯನ್ನು ಅಲಂಕಾರವೆಂದು ಒಪ್ಪುವವರು ಈ ಪ್ರಶ್ನೆಯನ್ನೆತ್ತಬಹುದು. ವಸ್ತು ವಕ್ರತೆ ಅಥವಾ ವಾಚ್ಯ ವಕ್ರತೆ ಎಂದು ಯಾವುದನ್ನು ಕುಂತಕನು ಇದುವರೆಗೆ ವರ್ಣಿಸಿದ್ದಾನೋ, ಇದೇ ವಸ್ತುವಿನ ಸ್ವಾಭಾವಿಕ ಮತ್ತು ಸುಂದರ ವರ್ಣನೆಯನ್ನು ಭಾಮಹನೇ ಮೊದಲಾದ ಪ್ರಾಚೀನ ಆಲಂಕಾರಿಕರು ಸ್ವಭಾವೋಕ್ತಿ ಅಲಂಕಾರ ಎಂದು ಕರೆದಿದ್ದಾರೆ. ಅದನ್ನು (ಸ್ವಭಾವೋಕ್ತಿಯ ಅಲಂಕಾರತೆ)ಯನ್ನು ದೂಷಣಗೊಳಿಸುವ ದುರ್ವ್ಯಸನ ದಿಂದೇನು ಪ್ರಯೋಜನ? ಕಾರಣ (ಸ್ವಭಾವೊಕ್ತ್ಯಲಂಕಾರವಾದಿಗಳ) ಅವರ ದೃಷ್ಟಿಯಲ್ಲಿ ವಸ್ತುವಿನ ಸಾಮಾನ್ಯ ಧರ್ಮವೇ ಅಲಂಕಾರ್ಯ ಹಾಗೂ ಅತಿಶಯದಿಂದ ಕೂಡಿದ ಸ್ವಭಾವ ಸೌಂದರ್ಯದ ಪರಿಪೋಷಣೆಯೇ ಅಲಂಕಾರ. ಸ್ವಭಾವೋಕ್ತಿಯ ಅಲಂಕಾರತ್ವವನ್ನು ಯುಕ್ತಿ ಯುಕ್ತವೆಂದು ಒಪ್ಪಿರುವವರ ವಿರುದ್ಧ ದನಿಯೆತ್ತುತ್ತ ಅದನ್ನು ಹೀಗೆ ಖಂಡಿಸುತ್ತಾನೆ. ಅವರ ವಾದ (ಸ್ವಭಾವೋಕ್ತಿ ಒಂದು ಅಲಂಕಾರವೆಂದು ಹೇಳುವ) ಸರಿಯಲ್ಲ. ಕಾರಣ ಅಗತಿಕ ಗತಿ ನ್ಯಾಯದಿಂದ, ಹೇಗೆಂದರೆ ಹಾಗೆ ಕಾವ್ಯ ರಚಿಸುವುದು ಪ್ರತಿಷ್ಠೆಗೆ ತಗುವಂತಿರುವುದಿಲ್ಲ; ಕಾರಣ ಸಹೃದಯರಿಗೆ ಆಹ್ಲಾದ ಉಂಟು ಮಾಡುವುದೇ ಕಾವ್ಯದ ಲಕ್ಷಣ. (ಹೇಗೆಂದರೆ ಹಾಗೆ ಕಾವ್ಯ ರಚಿಸಿದರೆ, ಅದರಿಂದ ಸಹೃದಯರಿಗೆ ಆನಂದ ಉಂಟಾಗುವುದಿಲ್ಲ; ಆದ್ದರಿಂದ ಅದು ಕಾವ್ಯವಾಗುವುದಿಲ್ಲ). ಉತ್ಕೃಷ್ಟವಲ್ಲದ ಧರ್ಮದಿಂದ ಕೂಡಿದ ವರ್ಣ್ಯಮಾನ ವಸ್ತುವನ್ನು ಅಲಂಕೃತಗೊಳಿಸುವುದೆಂದರೆ ಸಮುಚಿತವಲ್ಲದ ಭಿತ್ತಿಯ ಮೇಲೆ ಚಿತ್ರಿಸಿದಂಥ ಚಿತ್ರದ ಹಾಗೆ ಅತಿಶಯ ಶೋಭೆಯನ್ನುಂಟು ಮಾಡದು. ಆದ್ದರಿಂದ ಅತ್ಯಂತ ರಮಣೀಯವಾದ ಸ್ವಾಭಾವಿಕ ಧರ್ಮದಿಂದ ಕೂಡಿದ ವರ್ಣನೀಯ ವಸ್ತುವನ್ನು ಪರಿಗ್ರಹಿಸಬೇಕು. ಅನಂತರ ಆ ರೀತಿಯ ವಸ್ತುವನ್ನು ಆ ವಸ್ತುವಿನ ಔಚಿತ್ಯಕ್ಕನುಗುಣವಾಗಿ ರೂಪಕಾದಿ ಅಲಂಕಾರಗಳಿಂದ ಅಲಂಕೃತ ಗೊಳಿಸಬೇಕು. ವಿಶೇಷವೆಂದರೆ, ಯಾವ ವಸ್ತುವಿನ ವರ್ಣನೆಯಲ್ಲಿ ಸಹಜ ರಮಣೀಯತೆಯೇ ಪ್ರಧಾನವಾಗಿ ವಿವಕ್ಷಿತವಾಗಿರುವುದೋ ಅದರ ಪ್ರತಿಪಾದನೆಯಲ್ಲಿ ಬಹುಮಟ್ಟಿಗೆ ರೂಪಕಾದಿ ಅಲಂಕಾರಗಳ ಬಳಕೆ ಉಪಯುಕ್ತವಾಗುವುದಿಲ್ಲ. ಅದರಿಂದ ಆ ವರ್ಣ್ಯವಸ್ತುವಿನ ಸಹಜ ಸುಕುಮಾರತೆಯೇ ಮರೆಯಾಗಿ ಬಿಡುತ್ತದೆ ಇಲ್ಲವೆ ರಸಪರಿಪೋಷಣೆಯು ಸರಿಯಾಗಿ ಆಗುವುದಿಲ್ಲ. ಆದ್ದರಿಂದ ಈ ವಿಷಯದಲ್ಲಿ ಹೇಳಬಹುದಾದ್ದೆಂದರೆ, ಎಲ್ಲ ರೀತಿಯಲ್ಲಿ ಅಲಂಕರಿಸಲ್ಪಡಲು ಯೋಗ್ಯವಾದ ವಸ್ತು ಕೂಡ, ಅತ್ಯಧಿಕ ಅಲಂಕಾರಗಳನ್ನು ಸಹಿಸಲಾರದು. ಯಾವ ರೀತಿಯಲ್ಲಿ ಎಂದರೆ ಸುಂದರಿ ಸ್ತ್ರೀಯು ಸ್ನಾನ ಸಮಯದಲ್ಲಿ ಅಥವಾ ಪತಿಯಿಂದ ಅಗಲಿ ವಿರಹವ್ರತಾಚರಣೆ ಮಾಡುತ್ತಿರುವ ಸಂದರ್ಭದಲ್ಲಿ ಅಥವಾ ಸುರತಾನಂತರದಲ್ಲಿ ಅತ್ಯಧಿಕ ಅಲಂಕಾರಗಳನ್ನು ಹೇಗೆ

ಸಹಿಸಲಾರಳೋ ಹಾಗೆ. ಅಂಥ ಎಲ್ಲ ಸಂದರ್ಭಗಳಲ್ಲಿ ಸ್ವಾಭಾವಿಕ ಸುಕುಮಾರತೆಯೇ ರಸಿಕರ ಹೃದಯಕ್ಕೆ ಆಹ್ಲಾದವನ್ನುಂಟುಮಾಡಬಲ್ಲುದು.

ತಾಂ ಪ್ರಾಙ್ಮುಖೀಂ ತತ್ರ ನಿವೇಶ್ಯ ತನ್ವೀಂ
ಕ್ಷಣಂ ವ್ಯಲಂಬಂತ ಪುರೋ ನಿಷಣ್ಣಾಃ|
ಭೂತಾರ್ಥ ಶೋಭಾಹ್ರಿಯ ಮಾಣನೇತ್ರಾಃ
ಪ್ರಸಾಧನೇ ಸಂನಿಹಿತೇಽಪಿ ನಾರ್ಯಃ[೧]

ಆ ಕೃಶಾಂಗಿಯನು ಎದುರೆದುರು ಕುಳ್ಳಿರಿಸಿಕೊಂಡು
ಅಲಂಕರಣ ಸಾಮಗ್ರಿ ಬಳಿಯೊಳೇ ಇದ್ದರು
ಅಂಗನೆಯರೆಲ್ಲ ಅವಳ ಸಹಜ ಸೊಬಗಿಗೆ
ಕಣ್ ಕೋರೈಸಿದಂತಾಗಿ ಕ್ಷಣ ಕಾಲ ತಳುವಿದರು

ಇದು ಕುಮಾರಸಂಭವದ 7ನೇ ಸರ್ಗದ 13ನೇ ಶ್ಲೋಕ. ಶಿವಪಾರ್ವತಿಯರ ವಿವಾಹಾನಂತರ, ಶೋಭನ ಪ್ರಸ್ತವನ್ನೇರ್ಪಡಿಸಿದ ಸಂದರ್ಭದಲ್ಲಿ ಸುಮಂಗಲಿಯರು ಪಾರ್ವತಿಗೆ ಒಡವೆಗಳನ್ನು ತೊಡಿಸಲು ಕುಳಿತ ಸಂದರ್ಭವನ್ನು ವರ್ಣಿಸುತ್ತ ಕವಿ ಹೇಳುತ್ತಾನೆ.

ಮೇಲಿನ ಉದಾಹರಣೆಯಲ್ಲಿ ಪಾರ್ವತಿಯ ಅಪೂರ್ವ ಹಾಗೂ ಸಹಜ ಸೌಕುಮಾರ್ಯದಿಂದ ಮನೋಹರವಾದ ಸೌಂದರ್ಯಾತಿಶಯವನ್ನು ಪ್ರತಿಪಾದಿಸುವುದು ಕವಿಯ ಅಭೀಷ್ಟವಾಗಿದೆ. ಯಾವುದೇ ಅಲಂಕಾರದಿಂದ ಅವಳನ್ನು ಅಲಂಕರಿಸುವುದರಿಂದ ಅವಳ ಸಹಜ ಸೌಂದರ್ಯವು ಮರೆಯಾಗಬಹುದೆಂಬ ಅನುಮಾನ ಕವಿಗೆ ಇದೆ. ಸ್ವಾಭಾವಿಕ ಸೌಂದರ್ಯಕ್ಕೆ ಪ್ರಾಧಾನ್ಯ ನೀಡಿ ವರ್ಣಿಸಲಾಗುತ್ತಿರುವ ವಸ್ತುವಿನ ವಿಷಯದಲ್ಲಿ, ಅದರ ಸ್ವಾಭಾವಿಕ ಸೌಂದರ್ಯವು ಮರೆಯಾಗುವಂತೆ ಹಾಗೂ ಇನ್ನೊಂದರ ಪ್ರತೀತಿಯನ್ನು ಅಪೇಕ್ಷಿಸುವ ರೀತಿಯಲ್ಲಿ ಅಲಂಕಾರಗಳನ್ನು ಬಳಸುವುದರಿಂದ ಆ ವಸ್ತುವಿಗೆ ಖಂಡಿತಕ್ಕೂ ಸಹಾಯಕವಾಗುವುದಿಲ್ಲ. ವಿಭಾವ ಅನುಭಾವ ಹಾಗೂ ವ್ಯಭಿಚಾರಿ ಭಾವಗಳ ಔಚಿತ್ಯಪೂರ್ಣ ಸಂಯೋಗದಿಂದಲೇ ರಸಪರಿಪೋಷಣೆಯಾಗಿ ಅನುಭವದ ರಸಪ್ರತೀತಿ ಉಂಟಾಗುತ್ತದೆ. ಇದರ ಹೊರತು ಬೇರಿನ್ನಾವುದರ ಪ್ರಸಕ್ತಿಯೂ ಅದರ ಸ್ವಾಭಾವಿಕ ಸೌಂದರ್ಯಕ್ಕೆ ಅಡ್ಡಿ ಉಂಟು ಮಾಡುವುದಾಗುತ್ತದೆ. ಇದರಿಂದಲೇ ಯುವತಿಯರಲ್ಲಿ ಕಂಡು ಬರುವ ಯೌವನದ ಅಂಕುರಾರ್ಪಣೆ, ಸುಕುಮಾರ ವಸಂತಾಗಮನ, ಅದರ ಪರಿಪೋಷಣೆ ಮತ್ತು ಮುಗಿವು ಇತ್ಯಾದಿ ವಿಷಯಗಳ ಪ್ರತಿಪಾದನೆ ಮಾಡುವಾಗ ಶ್ರೇಷ್ಠ ಕವಿಗಳಾರೂ ಅವುಗಳ ಸಹಜ ವರ್ಣನೆ ಮಾಡುವ ವಾಕ್ಯ ವಕ್ರತೆಗಿಂತ ಭಿನ್ನವಾದ ಅಲಂಕಾರಗಳಿಂದ ಅವುಗಳನ್ನು ಅಲಂಕರಿಸುವುದು ಕಂಡುಬಂದಿಲ್ಲ.

ಉದಾ :

ಸ್ಮಿತಂ ಕಿಂಚಿನ್ಮುಗ್ಧಂ ತರಲ ಮಧುರೋ ದೃಷ್ಟಿವಿಭವಃ
ಪರಿಸ್ಪಂದೋ ವಾಚಾಮಭಿನವ ವಿಲಾಸೋಕ್ತಿಸರಸಃ|

ಗತಾನಾಮಾರಂಭಃ ಕಿಸಲಯಿತ ಲೀಲಾಪರಿಮಲಃ
ಸ್ಪೃಶಂತ್ಯಾಸ್ತಾರುಣ್ಯಂ ಕಿಮಿವ ಹಿ ನ ರಮ್ಯಂ ಮೃಗದೃಶಃ [೨]

[ಧ್ವನ್ಯಾಲೋಕ - 138]

ಮುಗುಳು ನಗೆಯಾದರೊ ಬಲು ಮುಗ್ಧವು
ಕಣ್ಣ ನೋಟಗಳೆನಿತು ಚಂಚಲ ಮಧುರ!
ನುಡಿವ ನಯವಾದರೋ ನವನವ
ಸರಸ ವಿಲಾಸೋಕ್ತಿಗಳಿಂದ ಅತಿ ಬಂಧುರ
ನಡೆವ ಬೆಡಗಾದರೋ ಒಲೆದಾಡುವ
ಅಂಕುರವ ನಾಚಿಸಿಹುದು.
ತಾರುಣ್ಯಕಡಿಯಿಟ್ಟಿರುವ ಹರಿಣಾಕ್ಷಿಗೆ
ರಮ್ಯವಲ್ಲದುದೇನಿದೆ? [೨]

ಅಥವಾ

ಅಪ್ರುತ್ತಪನ್ನ ಮನೋಭವಾ ಮಧುರಿಮಸ್ಪರ್ಶೋಲ್ಲಸನ್ಮಾನಸಾ
ಭಿನ್ನಾಂತಃಕರಣಂ ದೃಶೌ ಮುಕುಲಯಂತ್ಯಾಘ್ರಾತ ಭೂತೋದ್ಭ್ರಮಾಃ|
ರಾಗೇಚ್ಛಾಂ ನ ಸಮಾಪಯಂತಿ ಮನಸಃ ಖೇದಂ ವಿನೈವಾಲಸಾ
ವೃತ್ತಾಂತಂ ನ ವಿದಂತಿ ಯಾಂತಿ ಚ ವಶಂ ಕನ್ಯಾ ಮನೋಜನ್ಮನಃ [೩]

ಕಾಮಭಾವನೆಗಳಲಿ ಪರಿಣತಿಯ ಹೊಂದದವರು
ಮಧುರ ಸ್ಪರ್ಶದಿಂದ ಉಲ್ಲಾಸ ಚಿತ್ತರಾದವರು
ತಮ್ಮ ನೋಳ್ಪರಂತಃಕರಣವನು ಒಡೆಯೆ
ಕಣ್ಣ ಮುಚ್ಚಿದವರು,
ಎಲ್ಲರನು ಭ್ರಾಂತಿಯಲಿ ಮುಳುಗಿಸಿದವರು
ಮನದನುರಾಗದಿಚ್ಛೆಯನು ಚಿವುಟಿ ಹಾಕದವರು,
ಶ್ರಮವದಿನಿತಿಲ್ಲದೆಯೆ ಅಲಸಿಗಳಾದವರು,
ಮನ್ಮಥ ವ್ಯಾಪಾರವನು ಅರಿತವರಲ್ಲ
ಆದರೂ ಕನ್ಯೆಯರು ಅವನ ವಶವರ್ತಿಗಳಹರು [೩]

ದೋರ್ಮೂಲಾವಧಿ ಇತಿ .....[೪] (1/21)

ಈ ಪದ್ಯ ಯುವತಿಯ ಪ್ರಥಮತರ ತಾರುಣ್ಯದ ಸಹಜ ವರ್ಣನೆಯನ್ನು ಪ್ರಸ್ತುತಪಡಿಸುತ್ತದೆ.

ಅಥವಾ

ಗರ್ಭಗ್ರಂಥಿಷು ವೀರುಧಾಂ ಸುಮನಸೋ ಮಧ್ಯೇಂಕುರಂ ಪಲ್ಲವಾ
ವಾಂಛಾ ಮಾತ್ರ ಪರಿಗ್ರಹಃ ಪಿಕವಧೂ ಕಂಠೋದರೇ ಪಂಚಮಃ|

ಕಿಂ ಚ ತ್ರೀಣಿ ಜಗಂತಿ ಜಿಷ್ಣು ದಿವಸೈರ್ದ್ವಿತ್ರೈರ್ಮನೋಜನ್ಮನೋ
ದೇವಸ್ಯಾಪಿ ಚಿರೋಂಝಿತಂ ಯದಿ ಭವೇದಭ್ಯಾಸವಶ್ಯಂ ಧನುಃ [೫]

(ವಿದ್ಧಸಾಲಭಂಜಿಕಾ **1-13**)

ಬಳ್ಳಿಗಳ ಒಡಲಿಂದೆ ಹೂಗಳರಳುತಿವೆ
ಮೊಳಕೆಗಳ ಮಧ್ಯದಿಂ ಚಿಗುರು ಮೂಡುತಿದೆ
ಕೋಕಿಲವಧು ಕಂಠದಲಿ ಪಂಚಮದಲಿ
ಹಾಡುವಾಸೆ ಮೂಡಿಹುದು
ಬಹುದಿನಗಳಿಂದ ತೊರೆದಿದ್ದರೂ
ಒಂದೆರಡು ದಿನದೊಳಗೆ ಅಭ್ಯಾಸದಿಂದ
ವಶವಹ ಕಾಮ ಬಾಣವದು
ಮೂರು ಲೋಕಗಳ ಜಯಿಸಲಿಹುದು [೫]

ಅಥವಾ

ಹಂಸಾನಾಂ ನಿನದೇಷು ಇತಿ [೬] (1-73)

ಅಥವಾ

ಸಜ್ಜಯತಿ ಸುರಭಿಮಾಸೋ ನ ತಾವದರ್ಪಯತಿ ಯುವತಿ ಜನ ಲಕ್ಷ್ಯಸಹಾನ್|
ಅಭಿನವ ಸಹಕಾರ ಮುಖಾನ್ ನವ ಪಲ್ಲವ ಪತ್ರಲಾನನಂಗಸ್ಯ ಶರಾನ್ [೭]*

[ಸಂಸ್ಕೃತಛಾಯೆ]

ತರುಣಿಯರ ಗುರಿಮಾಡಿ
ಮಾಮರದ ಹೊಸ ಎಲೆ ಚಿಗುರುಗಳ ನಿಶಿತ
ಕಾಮಬಾಣಗಳನು ಸಜ್ಜುಗೊಳಿಸಿಟ್ಟಿಹುದು ಮಧುಮಾಸವು
ಆದರೆ ಬಿಟ್ಟಿಲ್ಲವಿನ್ನೂ [೭]

ಇಂಥ ಸಂದರ್ಭಗಳಲ್ಲಿ ಕವಿಗಳು ಸಹಜ ಸುಕುಮಾರತೆಗೆ ಪ್ರಾಧಾನ್ಯ ನೀಡಿ, ಯುಕ್ತ ರೀತಿಯಲ್ಲಿ ವರ್ಣಿಸಬೇಕಾಗಿರುವ ವಸ್ತುವನ್ನು ಅತ್ಯಧಿಕ ಅಲಂಕಾರಗಳಿಂದ ಅಲಂಕರಿಸಲು ಹೋಗುವುದಿಲ್ಲ; ಏಕೆಂದರೆ ಆ ಅಲಂಕಾರಗಳ ಬಳಕೆಯಿಂದ ಆ ವಸ್ತುವಿನ ಸ್ವಾಭಾವಿಕ ಸೌಂದರ್ಯವು ಮರೆಯಾಗಿ ಬಿಡುವ ಭಯವಿರುತ್ತದೆ. ಒಂದು ವೇಳೆ ಯಾವುದಾದರೊಂದು ಅಲಂಕಾರವನ್ನು ಬಳಸಿದ್ದೇ ಆದರೆ, ಅದರ ಸ್ವಾಭಾವಿಕ ಸುಕುಮಾರತೆಯನ್ನು ಸಂಪೂರ್ಣವಾಗಿ ತೆರೆದು ತೋರುವ ಸಲುವಾಗಿ ಮಾತ್ರವೇ ಹೊರತು, ಅಲಂಕಾರಗಳ ವೈಚಿತ್ರ್ಯವನ್ನು ಪ್ರತಿಪಾದಿಸಲು ಅಲ್ಲ. ಉದಾ :

ಧೌತಾಂಜನೇ ಚ ನಯನೇ ಸ್ಫಟಿಕಾಚ್ಛಕಾಂತಿ-
ರ್ಗಂಡಸ್ಥಲೀ ವಿಗತ ಕೃತ್ರಿಮ ರಾಗಮೋಷ್ಠಮ್|

---

* ಸಜ್ಜೇಹಿ ಸುರಹಿಮಾಸೋ ಣ ದಾವ ಅಪ್ಪೇಇ ಜು ಅಇ ಜ ಣಲಕ್ಖ ಸಹೇ
ಅಹಿಣವಸಹಅರಮುಹೇ ಣವಪಲ್ಲವ ಪತ್ತಲೇ ಅಣಂಗಸ್ಸಸರೇ (ಪ್ರಾಕೃತ)

[ಕನ್ನಡ ಧ್ವನ್ಯಾಲೋಕ ಮತ್ತು ಲೋಚನಸಾರ - ಪುಟ - 100]

ಅಂಗಾನಿ ದಂತಿಶಿಶುದಂತ ವಿನಿರ್ಮಲಾನಿ
ಕಿಂ ಯನ್ನ ಸುಂದರಮಭೂತ್ತರುಣೀಜನಸ್ಯ [೮] ೮

ಕಾಡಿಗೆಯ ತೊಳೆದು ಕಳೆದಿಹ ಕಂಗಳು
ಸ್ವಚ್ಛ ಸ್ಫಟಿಕದ ಹಾಗೆ ಹೊಳೆಯುತಿಹ ಕೆನ್ನೆಗಳು
ತೊಡೆದ ಬಣ್ಣವ ನೀಗಿಕೊಂಡಿಹ ತುಟಿಗಳು
ಆನೆ ಮರಿಯ ದಂತದ ಹಾಗೆ ನಿರ್ಮಲವಾದ ಅಂಗಗಳು.
ಅಂದವಲ್ಲದುದಾವುದಾ ತರುಣಿಯರೊಳು [೮]

ಇಲ್ಲಿ "ಆನೆಮರಿಯ ದಂತದ ಹಾಗೆ ನಿರ್ಮಲವಾಗಿಹ" (ದಂತ 'ಶಿಶುದಂತ ವಿನಿರ್ಮಲಾನಿ') ಎಂಬ ಉಪಮೆಯ ಪ್ರಯೋಗದ ಮೂಲಕ ಸಹಜ ಸೌಂದರ್ಯವನ್ನು ತೆರೆದು ತೋರಿದ್ದಾನೆ.

ಅಕಠೋರ ವಾರಣವಧೂದಂತಾಂಕುರ ಸ್ಪರ್ಧಿನಃ ಇತಿ [೯] [1-73]

"ಕರಿಣಿಯ ಮೃದುಮೊಳೆವಲ್ಲಗಳೊಡನೆ ಸ್ಪರ್ಧಿಸುತಿರುವ" [೯]

-9ರಲ್ಲಿ ಉಪಮೆಯ ಮೂಲಕ ಮೃಣಾಲದ ಹೊಸದಂಟಿನ ಸ್ವಾಭಾವಿಕ ಸೌಂದರ್ಯದ ಉತ್ಕರ್ಷವೇ ವ್ಯಕ್ತವಾಗಿದೆ.

ಇವೆಲ್ಲವೂ ಯುಕ್ತಿಯುಕ್ತವಾಗಿಯೇ ಇದೆ. ಕಾರಣ, ಕೆಲವೊಮ್ಮೆ ವರ್ಣಿತ ಪದಾರ್ಥದ ಔಚಿತ್ಯಕ್ಕನುಸಾರವಾಗಿ ವಸ್ತುವಿನ ಸ್ವಾಭಾವಿಕ ಸೌಂದರ್ಯವಷ್ಟನ್ನೇ ಚಿತ್ರಿಸುವುದು ಮಹಾಕವಿಗಳ ಅಭೀಷ್ಟವಾಗಿದ್ದರೆ, ಇನ್ನು ಕೆಲವೊಮ್ಮೆ ವಿವಿಧ ಪ್ರಕಾರದ ರಚನಾ ವೈಚಿತ್ರ್ಯದಿಂದೊಡಗೂಡಿದ ಸೌಂದರ್ಯವನ್ನು ಚಿತ್ರಿಸುವುದಾಗಿರುತ್ತದೆ (ಅರ್ಥಾತ್ ಅಲಂಕಾರಾದಿಗಳು). ಮೊದಲ ಸಂದರ್ಭದಲ್ಲಿ (ಅಂದರೆ ವಸ್ತುವಿನ ಸಹಜ ಸೌಂದರ್ಯವನ್ನು ಪ್ರತಿಪಾದಿಸುವುದಷ್ಟೇ ಅಭೀಷ್ಟವಾಗಿದ್ದಾಗ) ರೂಪಕಾದಿ ಅಲಂಕಾರಗಳಿಗೆ ಅಷ್ಟೊಂದು ಪ್ರಾಧಾನ್ಯವಿರುವುದಿಲ್ಲ. ಎರಡನೇ ಸಂದರ್ಭದಲ್ಲಿ [ನಾನಾ ಪ್ರಕಾರದ ರಚನಾ ವೈಚಿತ್ರ್ಯದಿಂದೊಡಗೂಡಿರುವ ರೀತಿಯಲ್ಲಿ ವಸ್ತುವಿನ ವರ್ಣನೆ ಮಾಡುವುದು ಕವಿಯ ಅಭೀಷ್ಟವಾಗಿದ್ದಾಗ] ಅದೇ (ರೂಪಕಾದಿ ಅಲಂಕಾರಗಳು) ಬಹುವಾಗಿ ವಿಜೃಂಭಿಸುತ್ತವೆ.

ಈ ತರ್ಕದಿಂದ ಹೊರಪಡುವ ತೀರ್ಮಾನವೆಂದರೆ, ಸ್ವಾಭಾವಿಕ ಸೌಂದರ್ಯವು ಕಾವ್ಯದ ವರ್ಣನೆಯ ವಸ್ತುವಾಗಿದ್ದಾಗ, ಅದನ್ನು ಅಲಂಕಾರ್ಯವೆಂದು ಪರಿಗಣಿಸಬೇಕೇ ಹೊರತು ಅಲಂಕಾರವೆಂದಲ್ಲ. ಅದೇ ಯುಕ್ತಿ ಸಂಗತ. (ಸರ್ವೋತ್ಕೃಷ್ಟವಾದ ಸ್ವಾಭಾವಿಕ ಸೌಂದರ್ಯವಿಲ್ಲದೆ ಇದ್ದಾಗ) ಅತಿಶಯ ರಹಿತ 'ಧರ್ಮ'ದಿಂದ ಕೂಡಿದ ವಸ್ತುವನ್ನು ಅಲಂಕಾರಗಳಿಂದ ಸಜ್ಜುಗೊಳಿಸಿದರೂ ಸಹ, ಪಿಶಾಚಾದಿಗಳಂತೆ ಸಹೃದಯರಿಗೆ ಆಹ್ಲಾದವನ್ನುಂಟುಮಾಡಲಾರದಾದ್ದರಿಂದ ಅದು ಉಪಾದೇಯವಾಗುವುದಿಲ್ಲ. ಈ ಬಗ್ಗೆ ಇನ್ನು ಹೆಚ್ಚಿನ ಚರ್ಚೆ ಅಗತ್ಯವಿಲ್ಲ. ಅಥವಾ ಒಂದು ವೇಳೆ ಕಣ್ಣಿಗೆ ಹೊಡೆಯುವಂಥ ಔಚಿತ್ಯದ ಮಹತ್ವದಿಂದಾಗಿ, ಪದಾರ್ಥದ (ವಸ್ತುವಿನ) ಸೌಂದರ್ಯವೇ (ಸ್ವಭಾವ) ಅತಿಶಯ ರೂಪದಲ್ಲಿ ವರ್ಣ್ಯಮಾನವಾಗಿದ್ದು, ತನ್ನ ಮಹಿಮೆಯಿಂದ ಬೇರಿನ್ನಾವುದೇ ಅಲಂಕಾರವನ್ನು ಹೇರುವುದನ್ನು

ಸಹಿಸಲಾರದಾದ್ದರಿಂದ, ತನ್ನ ಸೌಂದರ್ಯಾತಿಶಯತೆಯಿಂದಾಗಿ, ಅಲಂಕಾರ್ಯವೇ ಆಗಿದ್ದರೂ ಸ್ವಯಂ ಅಲಂಕಾರವೆಂದೇ ಪರಿಗಣಿಸಲರ್ಹವಾದುದು. ಇದು ನಮಗೆ ಒಪ್ಪಿತವಾದ ವಿಚಾರ. ಸ್ವಾಭಾವಿಕವಾದದ್ದರ ಜೊತೆ ಅಲಂಕಾರಗಳು ಇರುತ್ತವೆಂಬುದನ್ನು ನಿರಾಕರಿಸುವುದೇ ನಮ್ಮ ಮುಖ್ಯ ಕಾಳಜಿಯಾದ್ದರಿಂದ ನಾವು ಅದರ ಬಗ್ಗೆ ವಿವಾದ ಮಾಡುವುದಿಲ್ಲ.

ವರ್ಣ್ಯಮಾನ ವಸ್ತುವಿನ ವಕ್ರತೆ ಇದೊಂದೆಯೋ ಅಥವಾ ಇನ್ನಾವುದಾದರೂ ಇದೆಯೋ - ಇದನ್ನು ಇನ್ನು ಮುಂದೆ ಹೇಳಲಾಗುವುದು.

ಅಪರಾ ಸಹಜಾಹಾರ್ಯಕವಿಕೌಶಲಶಾಲಿನೀ
ನಿರ್ಮಿತಿರ್ನೂತನೋಲ್ಲೇಖಲೋಕಾತಿಕ್ರಾಂತ ಗೋಚರಾ [2]

ಇನ್ನೊಂದು ಪ್ರಕಾರದ ವಕ್ರತೆ ಇದೆ. ಅದು ಕವಿಯ ಸಹಜ ಹಾಗೂ ವ್ಯುತ್ಪತ್ತಿಜನ್ಯ ಕೌಶಲಗಳಿಂದ ಶೋಭಿತವಾದ್ದು. ಅದು ಕವಿ ಪ್ರತಿಭಾಜನ್ಯ ಮೌಲಿಕ ರಚನೆಗಳಲ್ಲಿ ಪರಿಣಮಿಸುವಂಥದು [೨]

ವರ್ಣ್ಯಮಾನ ವಸ್ತು (ಕಾವ್ಯವಸ್ತು, ವಿಷಯ)ಗಳ ನಿರ್ಮಿತಿಯನ್ನೊಳಗೊಳ್ಳುವ ಇನ್ನೊಂದು ಪ್ರಕಾರದ ವಕ್ರತೆ ಇದೆ. (ಅದರ ವಿಶೇಷತೆಯನ್ನು ಮೊದಲನೆಯ ವಿಶೇಷಣವು ಸೂಚಿಸುತ್ತದೆ) ಎಂಥ ವಕ್ರತೆ? ಸಹಜಾಹಾರ್ಯಕೌಶಲಶಾಲಿನಿ - ಅರ್ಥಾತ್ ಸ್ವಭಾವ ಸಹಜವಾಗಿ ಬಂದಿರುವ ಶಕ್ತಿ ಹಾಗೂ ಕಲಿಕೆ ಮತ್ತು ಅಭ್ಯಾಸಗಳಿಂದ ಸಂಪಾದಿಸಿದ ಕೌಶಲ-ಅಂದರೆ ವ್ಯುತ್ಪತ್ತಿಜನ್ಯ ಕೌಶಲ ಇವೆರಡನ್ನೂ ಎರಡನೇ ಪ್ರಕಾರದ ವಕ್ರತೆ ಒಳಗೊಳ್ಳುತ್ತದೆ. ಮತ್ತೆ ಹೇಗಿರುತ್ತದೆ? ಅಂದರೆ ಅದು (ವಕ್ರತೆ) ಈ ಮುಂಚೆಗೊತ್ತಿರದ ವಸ್ತುಗಳನ್ನು ನಿರ್ಮಾಣ ಮಾಡಬಲ್ಲ ನೂತನ ಮೌಲಿಕ ಪ್ರತಿಭೆಯನ್ನು ಅಳವಡಿಸಿಕೊಂಡಿರುವಂಥದು. ಇದರ ಪರಿಣಾಮವಾಗಿ ಅಂಥ ಕವಿಯಲ್ಲಿ ಲೋಕಾತಿಕ್ರಾಂತಗೋಚರವಾದ, ಅಂದರೆ ಇತರ ಲೌಕಿಕ ವ್ಯವಹಾರಗಳಿಂದ ತೀರ ಭಿನ್ನವಾದ ಸರ್ವಾತಿಶಯ ಚಟುವಟಿಕೆಯನ್ನು ಅಲ್ಲಿ ಕಾಣಬಹುದು. ಮಥಿತಾರ್ಥವೆಂದರೆ, ಕವಿಗಳು ಜಗತ್ತಿನಲ್ಲಿ ಅಸ್ತಿತ್ವದಲ್ಲಿಲ್ಲದೆ ಇರುವ ವಸ್ತುಗಳನ್ನು ನಿರ್ಮಿಸುವುದಿಲ್ಲ. ಅರ್ಥಾತ್ ಕವಿ ವರ್ಣಿಸುತ್ತಿರುವ ಪದಾರ್ಥಗಳು, ಅವನಿಗಿಂತ ಹಿಂದೆ ಪ್ರಪಂಚದಲ್ಲಿ ಇರಲಿಲ್ಲ, ಈ ಕವಿಯೇ ಅವುಗಳನ್ನು ನಿರ್ಮಿಸುತ್ತಿರುವುದು ಎಂದರ್ಥವಲ್ಲ. ಈ ಮುಂಚೆ ಕೇವಲ ಅಸ್ತಿತ್ವ ಮಾತ್ರದಲ್ಲಿದ್ದ ವಸ್ತುಗಳಿಗೆ ಅಪೂರ್ವವಾದ ಹಾಗೂ ಮೌಲಿಕವಾದ ಉತ್ಕರ್ಷವನ್ನು ತಂದುಕೊಡುತ್ತಾರೆ. ಅದರಿಂದ ಕಾವ್ಯರಸಿಕರ ಹೃದಯವನ್ನು ಸೂರೆಗೊಳ್ಳುವಂಥ ರಮಣೀಯತೆಯನ್ನು ಅವು ಪಡೆದುಕೊಂಡು ಬಿಡುತ್ತವೆ. ಅದರಿಂದಲೇ ಹೀಗೆ ಹೇಳಿದೆ.

ಲೀನಂ ವಸ್ತುನಿ ಏನ [೧೦] **(2/107)**

ಈ ಜಗತ್ತಿನಲ್ಲಿರುವ ವಸ್ತುಗಳಿಗೆ (ಪದಾರ್ಥ) ಕೇವಲ ಅಸ್ತಿತ್ವ ಮಾತ್ರ ಇದೆ. ಇಂಥವಕ್ಕೆ ಎಂಥ ಅಲೌಕಿಕ ಶೋಭಾತಿಶಯತೆಯನ್ನುಂಟು ಮಾಡುವ ಸೌಂದರ್ಯ ಛಾಯೆಯನ್ನು ನೀಡಲಾಗುತ್ತದೆಂದರೆ, ಅವು ತೀರಾ ವಿನೂತನವಾದವೆಂಬಂತೆ ಕಾಣತೊಡಗುತ್ತದೆ. ಅವುಗಳ ವಾಸ್ತವಿಕ ಸ್ವರೂಪವು ಸಂಪೂರ್ಣವಾಗಿ ಮರೆಮಾಚಲ್ಪಟ್ಟು ಮನೋಹರವಾದ ನೂತನ ಕಾಂತಿಯು

ಪ್ರಾಪ್ತವಾಗಿ ವರ್ಣನೀಯ ಪದಾರ್ಥವು ತನ್ನ ಸೌಂದರ್ಯದಿಂದ ಬೆಳಗತೊಡಗಿ ಅವು ಆಗತಾನೆ ಮೊತ್ತ ಮೊದಲಿಗೆ ಹೊಸದಾಗಿ ಸೃಷ್ಟಿಯಾದುವೇನೋ ಎಂದು ಭಾವಿಸುವಂತಾಗುತ್ತದೆ. ಈ ಕಾರಣದಿಂದಲೇ (ಸಾಧಾರಣ ಲೌಕಿಕ ವಸ್ತುವಿನಲ್ಲಿ ತನ್ನ ಪ್ರತಿಭೆಯಿಂದ ಅಲೌಕಿಕ ಸೌಂದರ್ಯವನ್ನು ನಿರ್ಮಿಸುವ ಸಾಮರ್ಥ್ಯ) ಕವಿಗಳು ಪ್ರಜಾಪತಿ (ಬ್ರಹ್ಮ) ಎಂಬ ಬಿರುದಿಗೆ ಪಾತ್ರರಾಗಿದ್ದಾರೆ. ಆನಂದವರ್ಧನನು ಇದನ್ನು ಹೇಳಿಯೂ ಇದ್ದಾನೆ.

ಅಪಾರೇ ಕಾವ್ಯಸಂಸಾರೇ ಕವಿರೇವ ಪ್ರಜಾಪತಿಃ
ಯಥಾಸ್ಮೈ ರೋಚತೇ ವಿಶ್ವಂ ತಥೇದಂ ಪರಿವರ್ತತೇ [೧೧]

[ಧ್ವನ್ಯಾಲೋಕ ಮತ್ತು ಲೋಚನಸಾರ - 228]

ಅಪಾರವಾದ ಕಾವ್ಯಪ್ರಪಂಚದಲ್ಲಿ ಕವಿಯೇ ಬ್ರಹ್ಮ. ತನಗೆ
ಹೇಗೆ ಬೇಕೋ ಹಾಗೆ ವಿಶ್ವವನ್ನು ಪರಿವರ್ತನಗೊಳಿಸುತ್ತಾನೆ. - [೧೧]

ಹೀಗಾಗಿ ವರ್ಣನೀಯ ವಸ್ತುವಿನ ವಕ್ರತೆ 'ಸಹಜ' ಮತ್ತು 'ವ್ಯುತ್ಪತ್ತಿಜನ್ಯ' ಎಂದು ಎರಡು ಬಗೆ. ಅದರಲ್ಲಿ ವ್ಯುತ್ಪತ್ತಿ ಜನ್ಯ ವಕ್ರತೆಯು ವರ್ಣ್ಯಮಾನ ವಸ್ತುವನ್ನು ಅಲಂಕರಿಸುವುದರಲ್ಲಿ ತೊಡಗುವುದರಿಂದ ಅದು ಅಲಂಕಾರಗಳಿಗಿಂತ ಭಿನ್ನವಲ್ಲ. ಅದರಿಂದಲೇ ಅದರ ಅನೇಕ ಪ್ರಕಾರಗಳಾದ ಭೇದ-ಉಪಭೇದಗಳ ಮೂಲಕ ಅತಿ ಹೆಚ್ಚಿನ ವಿಸ್ತೃತ ವ್ಯವಹಾರದಿಂದ ಕೂಡಿದ ಪದಾರ್ಥಗಳು ಕಂಡುಬರುತ್ತವೆ.

ಉದಾ :

ಅಸ್ಯಾಃ ಸರ್ಗವಿಧೌ ಪ್ರಜಾಪತಿರಭೂತ್ ಚಂದ್ರೋ ನು ಕಾಂತದ್ಯುತಿಃ
ಶೃಂಗಾರೈಕ ರಸಃ ಸ್ವಯಂ ನು ಮದನೋ ಮಾಸೋ ನು ಪುಷ್ಪಾಕರಃ
ವೇದಾಭ್ಯಾಸ ಜಡಃ ಕಥಂ ನು ವಿಷಯವ್ಯಾವೃತ್ತ ಕೌತೂಹಲೋ
ನಿರ್ಮಾತುಂ ಪ್ರಭವೇನ್ಮನೋಹರ ಮಿದಂ ರೂಪಂ ಪುರಾಣೋಮುನಿಃ [೧೨]

[ವಿಕ್ರಮೋರ್ವಶೀಯ 1-8]

ಇವಳ ನಿರ್ಮಿಸುವೆಡೆಯೊಳಾ ಹೊಳೆವ
ಹೊಳಪಿನ ಚಂದ್ರನಾದನೆ ಬೊಮ್ಮನು?
ಅಥವಾ ಶೃಂಗಾರವೊಂದೆ ರಸವಾದಾ
ಕಂದರ್ಪನಿವಳನು ತಾನೆ ನಿರ್ಮಿಸಿದನೋ!
ಅಲ್ಲದಿರೆ ಹೂಗಳಾಗರವೆನಿಪ
ವಸಂತನಿವಳನು ಆಕೃತಿಗೈದನೋ
ಅಂತಲ್ಲದಿರೆ ವೇದ ಜಡನಾ ಮುದಿ ಮುನಿಯು
ವಿಷಯ ವಿಮುಖನೆಂತು ನಿರ್ಮಿಸಲಾರ್ಪನೀ
ಮನೋಹರ ರೂಪರಾಶಿಯನು [೧೨]*

*ಕಾಂತಿಯನ್ನು ನೀಡುವ ಚಂದ್ರ, ಅಪಾರ ವಿಲಾಸ, ಸಂಪತ್ತಿಗೆ ಆಶ್ರಯವಾಗಿರುವ ಕಾಮದೇವ, ಸರಸತೆ, ಅಸಾಮಾನ್ಯ ಸೌಂದರ್ಯ ಸುಕುಮಾರತೆಗೆ ಕಾರಣನಾದ ವಸಂತ ಇವರುಗಳನ್ನು ಬ್ರಹ್ಮ ಎಂದು ಹೇಳಲಾಗಿದೆ.

ಇದು ಕಾಳಿದಾಸನ ವಿಕ್ರಮೋರ್ವಶೀಯ ನಾಟಕದಲ್ಲಿ ನಾಯಕ ಪುರೂರವನು ಊರ್ವಶಿಯ ಅಲೌಕಿಕ ಸೌಂದರ್ಯದ ವರ್ಣನೆ ಮಾಡುವ ಪ್ರಸಂಗ. ಇದರಲ್ಲಿ ಊರ್ವಶಿಯ ಕಾಂತಿಮತ್ವ, ಅಪಾರ ಸೌಂದರ್ಯಸಂಪನ್ನತೆ ಹಾಗೂ ಅಸಾಮಾನ್ಯ ಅಂಗಸೌಷ್ಠವ ಮತ್ತು ಸೌಕುಮಾರ್ಯಗಳನ್ನು ಪ್ರತಿಪಾದಿಸುವುದು ಕವಿಯ ಉದ್ದೇಶವಾಗಿದೆ. ಎರಡನೇ ಪ್ರಕಾರದ ವಕ್ರತೆ ಅದಕ್ಕಾಗಿ ತನ್ನ ಔಚಿತ್ಯಪ್ರಜ್ಞೆ ಮತ್ತು ಕಲ್ಪನಾ ಶಕ್ತಿಯಿಂದ ಅವಳ ಸ್ವರೂಪ ವಿಶೇಷವೊಂದೊಂದಕ್ಕೂ ಪರಿಣತರೆನಿಸಿದವರನ್ನು ಪ್ರತ್ಯೇಕವಾಗಿ ಗೊತ್ತುಪಡಿಸುವಲ್ಲಿ ಉತ್ಪ್ರೇಕ್ಷೆಯ ದಾರಿ ಹಿಡಿದಿದ್ದಾನೆ. ಅದರ ಪರಿಣಾಮವಾಗಿ ಅವಳೊಂದು ವಿನೂತನ ನಿರ್ಮಿತಿಯೆಂಬಂತೆಯೇ ಕಲ್ಪಿಸಲ್ಪಟ್ಟಿದ್ದಾಳೆ. ಇದರಿಂದಾಗಿಯೇ ಈ ಮೂರು "ಕಾರಣ"ಗಳಾದ ಚಂದ್ರ, ಕಾಮ ಮತ್ತು ವಸಂತ ಇವರ ವಿಶೇಷಣಗಳೊಂದಿಗೆ "ಸ್ವಯಂ" ಎಂಬ ಸರ್ವನಾಮವನ್ನು ಲಗತ್ತಿಸುವುದರ ಮೂಲಕ ಇದೇ ಕಲ್ಪನೆಯನ್ನು ಚೆನ್ನಾಗಿ ಪೋಷಿಸಲಾಗಿದೆ. ಹೇಗೆಂದರೆ ಸ್ವಯಂ ಮನೋಹರ ಕಾಂತಿಯಿಂದ ಕೂಡಿರುವ ಚಂದ್ರಮನು, ಸೌಜನ್ಯಕ್ಕೆ ತಕ್ಕಂತೆ ಅರೋಚಕಿಯಾಗಿರುವುದರಿಂದ (ಅಸುಂದರ ಪದಾರ್ಥ ಯಾರಿಗೆ ರುಚಿಸುವುದಿಲ್ಲವೋ ಅವನು) ಅವನಲ್ಲಿ ಕಾಂತಿಯುಕ್ತ ವಾದದ್ದನ್ನು ನಿರ್ಮಿಸುವ ಅತ್ಯುನ್ನತ ಮಟ್ಟದ ಸಾಮರ್ಥ್ಯ ಕೌಶಲವೇ ಕಂಡುಬರುತ್ತದೆ ಹಾಗೂ ಸ್ವಯಂ ಶೃಂಗಾರ ರಸ ಪ್ರಧಾನನಾಗಿ, ರಸಿಕನಾಗಿರುವುದರಿಂದ ಅದೊಂದರಲ್ಲೇ ಆನಂದವನ್ನು ಹೊಂದಲಿರುವವನಾಗಿ (ಕಾಮನು) ಅಂತ ಒಂದು ಗುಣ ವಿಶೇಷವನ್ನು ಹೊಂದಿರುವ ವ್ಯಕ್ತಿತ್ವವನ್ನು ನಿರ್ಮಿಸುವುದರಲ್ಲಿ ಔಚಿತ್ಯವನ್ನು ಕಂಡುಕೊಳ್ಳುತ್ತಾನೆ. ಹಾಗೂ ತಾನೇ ಸ್ವತಃ ಪುಷ್ಪಾಕರನಾಗಿದ್ದು ಉನ್ನತ ಕುಲದಲ್ಲಿ ಹುಟ್ಟಿದವನಾಗಿರುವುದರಿಂದ (ಅಭಿ ಜಾತ್ಯಕುಲ) ವಸಂತನು ಅಂಥ ಒಂದು ಲೋಕೋತ್ತರ ಸುಕುಮಾರ ಗುಣದ ವ್ಯಕ್ತಿತ್ವವನ್ನು ನಿರ್ಮಿಸುವುದೇ ಉಚಿತವೆನ್ನಬೇಕು.

ಶ್ಲೋಕದ ಉತ್ತರಾರ್ಧದಲ್ಲಿ ಬಳಸಿರುವ ವಿಶೇಷಣಗಳ ಮೂಲಕ ಕವಿಯು ವ್ಯತಿರೇಕದಿಂದ ಕಾಂತಿ ಸಂಪನ್ನತೆಯೇ ಮೊದಲಾದ ಮೂರೂ ವಿಶೇಷಣಗಳ ಪ್ರಾಪ್ತಿ ಅವರುಗಳ ಹೊರತು ಬೇರಿನ್ನಾರಿಂದಲೂ ಸಾಧ್ಯವಿಲ್ಲವೆಂದು ಹೇಳಿದ್ದಾನೆ. ಕಾರಣ ವೇದಗಳ ನಿರಂತರ ಅಭ್ಯಾಸದಿಂದ ಬುದ್ಧಿ ಜಡವಾಗಿ ಬಿಡುವುದರಿಂದ ಬ್ರಹ್ಮನು ಕಾಂತಿಸಂಪನ್ನ ವಸ್ತುವನ್ನು ನಿರ್ಮಿಸುವ ಕಲೆಯಲ್ಲಿ ಅನಭಿಜ್ಞ. ಕುತೂಹಲ ಬುದ್ಧಿಯಿಂದ ವಿಮುಖನಾದ್ದರಿಂದ, ರಸಯುಕ್ತ ಪದಾರ್ಥದ ಸೃಷ್ಟಿಯಲ್ಲಿ ವಿಮುಖತೆ, ಮುದುಕನಾಗಿರುವುದರಿಂದ ಸೌಕುಮಾರ್ಯದಿಂದ ಕೂಡಿದ ಸರಸ ಪದಾರ್ಥ ಅಥವಾ ವ್ಯಕ್ತಿಯ ನಿರ್ಮಾಣದಲ್ಲಿ ವಿರಕ್ತಿ ವ್ಯಕ್ತವಾಗುತ್ತದೆ. ಈ ರೀತಿಯಲ್ಲಿ ಶ್ಲೋಕದುದ್ದಕ್ಕೂ ಕವಿ ತನ್ನ ವರ್ಣನೀಯ ವಸ್ತುವಿಗೆ ಒಂದು ಅಲೌಕಿಕತೆ, ವಿಲಕ್ಷಣವಾದ ಅತಿಶಯತೆಯನ್ನು ತಂದುಕೊಡಲು ಉತ್ಪ್ರೇಕ್ಷಾಲಂಕಾರವನ್ನು ಬಳಸಿದ್ದಾನೆ ಹಾಗೂ ಆ ಉತ್ಪ್ರೇಕ್ಷಾಲಂಕಾರದ ಸಹಜ ಸೌಂದರ್ಯವು, ಸಂದೇಹಾಲಂಕಾರದ ಸೌಂದರ್ಯದ ಸಂಸರ್ಗದಿಂದ ಇನ್ನಷ್ಟು ಪುಷ್ಟಿ ಹೊಂದುತ್ತದೆ. ಅಲ್ಲದೆ ಇವರೆಡರ ಸಂಸರ್ಗದಿಂದ ವಸ್ತುವಿನ ಇನ್ನಷ್ಟು ಶೋಭೆ ಸಾಧಿತವಾಗುತ್ತದೆ. ಇದೆಲ್ಲವೂ ಕವಿಯು ತನ್ನ ಕಾವ್ಯ ವಸ್ತುವಾದ ಊರ್ವಶಿಯ ಸೌಂದರ್ಯವನ್ನು ಚಿತ್ರಿಸುವಲ್ಲಿ ಲೋಕೋತ್ತರವಾದ

ಸೃಜನಕೌಶಲವನ್ನು ತೋರಿರುವುದಲ್ಲದೆ ಮೊದಲ ಬಾರಿಗೆ ಇಂಥ ನೂತನ ಸೌಂದರ್ಯ ನಿರ್ಮಾಣವಾಯಿತೆಂಬ ಭಾವನೆ ಬರುವಂತೆ ಮಾಡಿದ್ದಾನೆ.

ಹೀಗೆ ಕಾವ್ಯದಲ್ಲಿ ಕವಿಗಳು ವ್ಯಕ್ತಿ, ವಸ್ತುವೊಂದನ್ನು ವಾಸ್ತವವಾಗಿ ಮೊದಲ ಬಾರಿಗೆ ನಿರ್ಮಿಸಿರುವಂಥ ಇತರೆ ಉದಾಹರಣೆಗಳು ಇರಬಹುದು. ಅಂಥ ಕಡೆಗಳಲ್ಲಿ ಕೂಡ ಪದಾರ್ಥಗಳನ್ನು ಮೊತ್ತ ಮೊದಲ ಬಾರಿಗೆ ನಿರ್ಮಿಸಿರುವುದಿಲ್ಲ. ಕಾರಣ ಪ್ರಕೃತಿಯಲ್ಲಿ ಪದಾರ್ಥಗಳು ತಮ್ಮದೇ ಆದ ರೀತಿಯಲ್ಲಿ ಇರುತ್ತವೆ. ಆದರೆ ಅವುಗಳೊಳಗೆ ಪಾರಸ್ಪರಿಕ ಸಂಬಂಧವನ್ನು ಹೊಸದಾಗಿ ಕಲ್ಪಿಸಲಾಗುತ್ತದೆ ಹಾಗೂ ಇದು ಅತಿಶಯವಾದ ಮೌಲಿಕತೆಯನ್ನು ತಂದುಕೊಡುತ್ತದೆ.

ಉದಾ :

ಕಸ್ತ್ವಂ ಭೋ ದಿವಿ ಮಾಲಿಕೋಽಹಮಿಹ ಕಿಂ ಪುಷ್ಪಾರ್ಥಮಭ್ಯಾಗತಃ
ಕಿಂ ತೇನಾಸ್ತು ಮಹಾನ್ ಕ್ರಯೋ ಯದಿ ಮಹಚ್ಚಿತ್ರಂ ತದಾಕರ್ಣ್ಯಾತಾಮ್|
ಸಂಗ್ರಾಮೇಷ್ವಲ ಭಾಭಿಧಾನ ನೃಪತೌ ದಿವ್ಯಾಂಗನಾಭಿಃ ಸ್ರಜಃ
ಪ್ರೋಜ್ಝಂತೀಭಿರವಿದ್ಯಮಾನ ಕುಸುಮಂ ಯಸ್ಮಾತ್ಕೃತಂ ನಂದನಂ [೧೩]

"ಯಾರು ನೀನು?" "ಸ್ವರ್ಗದ ಮಾಲಿ"
"ಈ ಭೂಮಿಗೇಕೆ ಬಂದೆ?" "ಪುಷ್ಪಗಳನ್ನೊಯ್ಯಲು"
"ಯಾವ ಉದ್ದೇಶಕ್ಕಾಗಿ ಇವು?"
"ಒಳ್ಳೆಯ ಕ್ರಯ ಸಿಗುವುದೆಂದು"
"ಬಹು ಆಶ್ಚರ್ಯವೆ!" "ಅಂತಿರೆ ಕೇಳು"
ಸಂಗ್ರಾಮದೊಳು ಅಲಭನೆಂಬ ಅರಸು ಮಡಿದಂದು
ಅಪ್ಸರೆಯರು ಅವನ ಮೇಲೆ
ಸ್ವರ್ಗದೊಳಿದ್ದ ಪುಷ್ಪಮಾಲೆಗಳನೆಲ್ಲ ಬರಿದುಮಾಡಿದರು.
ಇಂದ್ರನ ನಂದನದೊಳೊಂದೂ ಹೂವಿಲ್ಲವಿಂದು!" - [೧೩]

ಇಂಥ ಸಂದರ್ಭಗಳಲ್ಲಿ ವರ್ಣನೀಯ ವಸ್ತುವಿಗೆ ವಿಶಿಷ್ಟತೆಯನ್ನು ನೀಡಬಲ್ಲ ಅಲಂಕರಣ ವಿನ್ಯಾಸ ಅತ್ಯಂತ ಉಚಿತವಾಗುತ್ತದೆ. ಮೇಲೆ ಉದ್ಧರಿಸಲಾದ ಉದಾಹರಣೆಯಲ್ಲಿನ ಅಲಂಕಾರ ವಿನ್ಯಾಸವನ್ನರಿಯದೆ ಅಲ್ಲಿರುವ ವಾಕ್ಯಾರ್ಥವು ಯಾವ ರೀತಿಯಲ್ಲೂ ಸಂಗತವಾಗುವುದಿಲ್ಲ. ಕಾರಣ ಪ್ರತ್ಯಕ್ಷವೇ ಮೊದಲಾದ ಲಭ್ಯ ಪ್ರಮಾಣಗಳ ನಿಶ್ಚಯದ ಅಭಾವವಿರುವುದರಿಂದ, ಸ್ವಾಭಾವಿಕ ವಸ್ತುಧರ್ಮಗಳ ರೂಪದಲ್ಲಿ ವ್ಯವಸ್ಥಿತಗೊಳ್ಳುವುದಿಲ್ಲ. ಹಾಗಾಗಿ ಅದು ವಿದಗ್ಧ ಕವಿಗಳ ಪ್ರತಿಭೆಯಿಂದ ಹೊರಹೊಮ್ಮಿದ ಅಲಂಕಾರಗಳಿಂದ ಒಡಗೂಡಿದಾಗಲೇ ಸಹೃದಯರಿಗೆ ಆಹ್ಲಾದವನ್ನುಂಟುಮಾಡುವುದಾಗುತ್ತದೆ. ಈ ಶ್ಲೋಕದಲ್ಲಿರುವ ಅಲಂಕಾರವನ್ನು ವಿವರಿಸುವುದಾದರೆ - ಅತ್ಯಂತ ಭೀಷಣ ಸಂಗ್ರಾಮ ಸಮಯದಲ್ಲಿ ವೀರನಿಗೆ ಸಮುಚಿತವಾದ ಶೌರ್ಯಾತಿಶಯದಿಂದ ಕೂಡಿರುವನೆಂಬ ಶ್ಲಾಘನೆಗೆ ಪಾತ್ರನಾದ ವೀರ ನರಪತಿಯನ್ನು (ಅಲಭನನ್ನು) ಅಪ್ಸರೆಯರು ಮೆಚ್ಚುಗೆಯಿಂದ ನೋಡುವಲ್ಲಿ ಯೋಗ್ಯ ಪತಿಯನ್ನು ಪಡೆದ ಅತೀವ

ಸಂತೋಷವನ್ನನುಭವಿಸುತ್ತಾರೆ. ಅವನಿಗೆ ಸ್ವಾಗತ ಕೋರುವ ಸಂಭ್ರಮದಲ್ಲಿ ಇಂದ್ರನ "ನಂದನ" ವನದಲ್ಲಿರುವ ಮಂದಾರವೇ ಮೊದಲಾದ ಹೂಗಳ ಸಹಸ್ರಾರು ಮಾಲೆಗಳನ್ನು ಪರಸ್ಪರ ಹುರುಡಿನಿಂದ ಸಂಗ್ರಹಿಸುತ್ತಾರೆ. ಎಷ್ಟರ ಮಟ್ಟಿಗೆ ಎಂದರೆ ಇಂದ್ರನ ನಂದನ ವನದ ಇಡೀ ಪುಷ್ಪಸಂಪತ್ತು ಪ್ರಧ್ವಂಸಗೊಂಡು ಖಾಲಿಯಾಗಿ ಬಿಡುವಷ್ಟು. ನಂದನವನದ ಹೂಗಳೆಲ್ಲ ಪ್ರಧ್ವಂಸವಾಗಿಬಿಟ್ಟವೆಂದು ಮಾಡಿರುವ ಉತ್ಪ್ರೇಕ್ಷೆ ಮನಸ್ಸಿಗೆ ತಟ್ಟುವಂಥದು. ಅಂಥ ಉತ್ಪ್ರೇಕ್ಷಾ ವಿಷಯಕ ವಸ್ತುಗಳು - "ಇದು ಅದರಂತೆ ಇದೆ" (ತ ದಿವ) ಇದು ಅದೇ ಆಗಿದೆ (ತದೇವ) ಎಂದು ಎರಡು ರೀತಿಯದಾಗಿವೆ. ಇದರ ವಿವೇಚನೆಯನ್ನು ರೂಪಕಾಲಂಕಾರದ ಲಕ್ಷಣ ನಿರೂಪಣೆಯ ಸಂದರ್ಭದಲ್ಲಿ ಮಾಡಲಾಗುವುದು. ಹೀಗೆ ಈ ಶ್ಲೋಕದ ಪೂರ್ವಾರ್ಧದಲ್ಲಿ ಪ್ರತಿಪಾದಿತವಾದ, ಅಪ್ರಸ್ತುತ ಪ್ರಶಂಸಾಲಂಕಾರದ ಸಂಸರ್ಗದಿಂದ ರಮಣೀಯತೆಯನ್ನು ಪಡೆದುಕೊಂಡ ಈ ಉತ್ಪ್ರೇಕ್ಷೆ ರಾಜನ ಶೌರ್ಯಾತಿಶಯವನ್ನು ಸಮರ್ಥವಾಗಿ ಪುಷ್ಟಿಗೊಳಿಸುತ್ತ ಕಾವ್ಯರಸಿಕರಿಗೆ ಅತಿಶಯವಾದ ಆಹ್ಲಾದವನ್ನುಂಟುಮಾಡುತ್ತದೆ.

(ಪ್ರಾಚೀನ ಆಲಂಕಾರಿಕನು ತನ್ನ ಉತ್ಪ್ರೇಕ್ಷಾಲಂಕಾರದ ಲಕ್ಷಣ ನಿರೂಪಣೆಯ ಸಂದರ್ಭದಲ್ಲಿ ಈ ಅಂಶವನ್ನು ಗಮನಿಸಿದ್ದಾನೆ)

"ಉತ್ಪ್ರೇಕ್ಷಾತಿಶಯಾನ್ವಿತಾ" [೧೪] - ಭಾಮಹ

ಉತ್ಪ್ರೇಕ್ಷಾಲಂಕಾರವು ಸಾಮಾನ್ಯವಾಗಿ "ಅತಿಶಯೋಕ್ತಿ"ಯಿಂದ ಕೂಡಿರುತ್ತದೆ [೧೪]

ಅದೇ ಲೇಖಕನು ಅತಿಶಯೋಕ್ತಿಯ ಸಾಮರ್ಥ್ಯವನ್ನು ಈ ಮಾತುಗಳಲ್ಲಿ ಮುಕ್ತಕಂಠದಿಂದ ಹೇಳಿದ್ದಾನೆ

ಕೋಽಲಂಕಾರೋಽನಯಾವಿನಾ [೧೫] - ಭಾಮಹ-

"ಇದರ ಹೊರತು ಅಲಂಕಾರವೆಲ್ಲಿಯದು?" [ಇದರ ಮಾಯಾಸ್ಪರ್ಶವಿಲ್ಲದೆ ಯಾವ ಅಲಂಕಾರವಿದೆ?] [೧೫]

ಎಲ್ಲ ಬಗೆಯ ಅಲಂಕಾರಗಳನ್ನು ಅನುಗ್ರಹಿಸುವಲ್ಲಿ ಅದರ ಸಾಮರ್ಥ್ಯವನ್ನು ಈ ಮಾತುಗಳ ಮೂಲಕ ಶ್ರುತಪಡಿಸಲಾಗಿದೆ. (ಸಕಲಾಲಂಕಾರಣಾನುಗ್ರಾಹಕತ್ವಮ್) ಆದ್ದರಿಂದ ಪ್ರತ್ಯೇಕವಾಗಿ ಅತಿಶಯೋಕ್ತಿಯೇ ಇಲ್ಲಿಯ ಪ್ರಧಾನ ಅಲಂಕಾರ ಎಂದು ಹೇಳಿದರೂ ಹೆಚ್ಚು ವ್ಯತ್ಯಾಸವೇನು ಆಗುವುದಿಲ್ಲ. (ಉತ್ಪ್ರೇಕ್ಷೆಅಲ್ಲ). ಲೋಕಾಂತಿಕ್ರಾಂತ ಗೋಚರತ್ವ ಎಂಬ ಮಾತನ್ನು ಕಾರಣವಾಗಿ ಹೇಳಿರುವುದರಿಂದ, ಇಲ್ಲಿಯ ಮಾತುಗಳನ್ನು ಅತಿಶಯೋಕ್ತಿ ಅಲಂಕಾರದ್ದು ಎಂದು ಹೇಳಬಹುದು. ಹಾಗಾದರೂ ಕೂಡ ವರ್ಣ್ಯಮಾನ ವಸ್ತುವಿಗೆ ಅತಿಶಯತೆಯನ್ನು ತಂದುಕೊಡುವುದರ ಹೊರತು ಬೇರೇನೂ ಅಪೂರ್ವತೆ ಸಾಧಿತವಾಗುವುದಿಲ್ಲ.

ಈ ರೀತಿಯಲ್ಲಿ ಮೊದಲಿಗೆ ಶಬ್ದದ ಅನಂತರ ಅರ್ಥದ ವಕ್ರತೆಯನ್ನು ಪ್ರತಿಪಾದಿಸಿದ ನಂತರ ಇದೀಗ ವಾಕ್ಯ ವಕ್ರತೆಯನ್ನು ಪ್ರತಿಪಾದಿಸಲಾಗುವುದು.

ಮಾರ್ಗಸ್ಥ ವಕ್ರಶಬ್ದಾರ್ಥ ಗುಣಾಲಂಕಾರ ಸಂಪದಃ।
ಅನ್ಯದ್ವಾಕ್ಯಸ್ಯ ವಕ್ರತ್ವಂ ತಥಾಭಿಹಿತಿ ಜೀವಿತಮ್ [3]
ಮನೋಜ್ಞ ಫಲಕೋಲ್ಲೇಖ ವರ್ಣಚ್ಛಾಯಾಶ್ರಿಯಃ ಪೃಥಕ್।
ಚಿತ್ರಸ್ಯೇವ ಮನೋಹಾರಿ ಕರ್ತುಃ ಕಿಮಪಿ ಕೌಶಲಮ್ [4]

ಸುಕುಮಾರಾದಿ ಮಾರ್ಗಗಳಲ್ಲಿರುವ (ವಕ್ರ) ಶಬ್ದ, ಅರ್ಥ, ಗುಣ ಹಾಗೂ ಅಲಂಕಾರಗಳ ಸೌಂದರ್ಯ ಸಂಪತ್ತಿಗಿಂತ ವಾಕ್ಯ ವಕ್ರತೆ ಎಂಬುದು ತೀರಾ ಭಿನ್ನವಾದ್ದು. ವಾಕ್ಯರೂಪದ ಅಭಿವ್ಯಕ್ತಿಯೇ ಈ ಸೌಂದರ್ಯದ ಪ್ರಾಣವೆಂದು ಪರಿಗಣಿಸಲಾಗಿದೆ. ಅದು ಕವಿಯ ವಿಶಿಷ್ಟ ಕೌಶಲದ ದ್ಯೋತಕ-ಹೇಗೆಂದರೆ ಚಿತ್ರವೊಂದನ್ನು ರೂಪಿಸುವ ಸುಂದರ ಫಲಕ, ಗೆರೆಗಳು ಮತ್ತು ವಿವಿಧ ವರ್ಣ ಛಾಯೆಗಳೇ ಮೊದಲಾದ ವಿವಿಧ ವಸ್ತುಗಳ ಸೌಂದರ್ಯಕ್ಕಿಂತ ಚಿತ್ರದ ಒಟ್ಟಾರೆ ವಿಶಿಷ್ಟ ಸೌಂದರ್ಯವು ವಿಭಿನ್ನವಾಗಿರುವಂತೆ [3 & 4]

ವಾಕ್ಯವಕ್ರತೆ ಎಂಬುದು ತೀರಾ ಬೇರೆಯೇ ಆದದ್ದು. ಇಲ್ಲಿ ವಾಕ್ಯವೆಂದರೆ ಪರಸ್ಪರ ಅನ್ವಯಿಕ ಸಂಬಂಧವಿರುವ ಪದಗಳ ಗುಂಪು. ಅದರ ವಕ್ರತೆ ಅದರಲ್ಲಿರುವ ಬೇರೆ ಬೇರೆ ಘಟಕಗಳ ವಕ್ರತೆಗಿಂತ ಭಿನ್ನವಾದದ್ದು. ಘಟಕಗಳೆಂದರೆ ಮಾರ್ಗಗಳಲ್ಲಿ ಸೇರಿ ಹೋಗಿರುವ ವಕ್ರ ಶಬ್ದ ಅರ್ಥ ಗುಣ ಅಲಂಕಾರ ಸಂಪತ್ತಿಯೇ ಮೊದಲಾದುವು. ಮಾರ್ಗಗಳೆಂದರೆ ಸುಕುಮಾರಾದಿ ಮಾರ್ಗಗಳೆಂದು ಅರ್ಥ. ಮಾರ್ಗಗಳ ವಾಕ್ಯದಲ್ಲಿರುವ ಎಲ್ಲೋ ಕೆಲವೇ ಶಬ್ದ ಮತ್ತು ಅರ್ಥಗಳು ಲೋಕರೂಢಿಯ ಸಾಮಾನ್ಯ ವ್ಯವಹಾರದಲ್ಲಿ ಬಳಕೆಯಾಗುವುದಕ್ಕಿಂತ ಭಿನ್ನವಾಗಿ ಬಳಕೆಯಾಗಿ ಗುಣಾಲಂಕಾರಗಳಿಂದ ಅಲಂಕೃತಗೊಂಡು ಬೇರೊಂದು ವಕ್ರತೆಯೇ ನಿರ್ಮಾಣಗೊಳ್ಳುತ್ತದೆ. ಈ ವಾಕ್ಯವಕ್ರತೆ ಹಿಂದಿನದರ ವಕ್ರತೆಗಿಂತ ಭಿನ್ನವಾದ್ದು. ಅದರ ಪ್ರಾಣವಿರುವುದೇ ವಾಕ್ಯರೂಪದಲ್ಲಿ. ಅರ್ಥಾತ್ ಕಥನದ ರೀತಿಯೇ (ಪ್ರಕ್ರಿಯೆ) ಅತ್ಯಂತ ಅಪೂರ್ವವಾದ ಸೌಂದರ್ಯವೆಂದು ತೋರುವುದರಿಂದ; ಅದರ ಪ್ರಾಣಸ್ವರೂಪವೆಂದಾಗುತ್ತದೆ. ಕಥನದ ಸ್ವರೂಪವನ್ನು ಕುರಿತಂತೆ ಅದು ಕರ್ತೃವಿನ ವಿಶಿಷ್ಟ ಕೌಶಲವೆಂದು ವಿವರಿಸಲಾಗಿದೆ. ವಿಶಿಷ್ಟ ಎಂಬುದು ಅಸಾಧಾರಣ, ಅಲೌಕಿಕ ಎಂಬ ಅರ್ಥದಲ್ಲಿ. ಈ ಲೋಕೋತ್ತರ ಕೌಶಲವೇ ವಾಕ್ಯವಕ್ರತೆ. ಯಾವ ರೀತಿಯಲ್ಲಿ ಎಂದರೆ ಚಿತ್ರದ ಸೌಂದರ್ಯದ ಹಾಗೆ ಮನೋಹರವೂ, ಹೃದಯ ರಂಜಕವೂ ಆದದ್ದು. ಚಿತ್ರದಲ್ಲಿ (ಆಲೇಖ್ಯ) ಚಿತ್ರ ನಿರ್ಮಾಣಕ್ಕೆ ಬಳಸಲಾಗುವ ಸಾಧನಗಳು (ಉಪಕರಣಗಳು) ಮನೋಹರವೂ ಹೃದಯರಂಜಕವೂ ಆದ ಸೌಂದರ್ಯಕ್ಕಿಂತ ಚಿತ್ರಕಾರನ ಕೌಶಲವು ವಿಭಿನ್ನವಾಗಿರುವಂತೆ ಕಾವ್ಯದಲ್ಲಿಯೂ ಸಾಧನಗಳ ಸೌಂದರ್ಯವೆಂದರೆ ಸುಂದರವಾದ ಫಲಕ, ರೇಖಾಚಿತ್ರ ಮತ್ತು ವಿವಿಧ ವರ್ಣಛಾಯೆಗಳು ಈ ಕೆಲವು ಸಾಧನಗಳ ಸಂಯೋಜನೆಯು 'ಸುಂದರ' ಎಂಬ ಭಾವ ಮೂಡಿಸಬಹುದು; ಇದು ಸಾಧನಗಳ ಸೌಂದರ್ಯವೆಂಬ ವರ್ಗವೆನಿಸುತ್ತದೆ. ಆದರೆ ಈ ಸಾಧನಗಳ ಸೌಂದರ್ಯಕ್ಕಿಂತ ಮಿಗಿಲಾದ, ಬೇರೆಯೇ ಆದೊಂದು ಸೌಂದರ್ಯವೂ ಉಂಟು. ಫಲಕವೆಂಬುದು ಚಿತ್ರದ ಆಧಾರ ಬಿತ್ತಿ. 'ಉಲ್ಲೇಖ' ಚಿತ್ರದ ರಚನಾ

ಸೂತ್ರಗಳಿಗನುಗುಣವಾಗಿ ಎಳೆದಿರುವ ರೇಖಾ ವಿನ್ಯಾಸ. ವರ್ಣಗಳೆಂದರೆ ಚಿತ್ರಕಾರ ಬಳಸುವ ತೈಲವರ್ಣ, ಜಲವರ್ಣ ಇತ್ಯಾದಿ ವರ್ಣಗಳು. ಛಾಯೆ ಎಂದರೆ ಅದರ ಕಾಂತಿ. ಇದೆಲ್ಲದರ ತಾತ್ಪರ್ಯ ಅಥವಾ ಮಥಿತಾರ್ಥವೆಂದರೆ ಚಿತ್ರದಲ್ಲಿ ಚಿತ್ರಕಾರನು, ಬಳಸಿರುವ ವಿವಿಧ ಸಾಧನ ಸಲಕರಣೆಗಳಾದ ಫಲಕವೇ ಮೊದಲಾದವುಗಳ ಸೌಂದರ್ಯಕ್ಕಿಂತ ಚಿತ್ರಕಾರನ ವಿಶಿಷ್ಟ ಕಲಾಕೌಶಲ್ಯವೇ ಅದರ ಸಕಲ ಪದಾರ್ಥಗಳ ಪ್ರಾಣ ಸ್ವರೂಪವೆನಿಸಿ, ಅವುಗಳಿಂದ ಹೇಗೆ ಭಿನ್ನವಾಗಿ ನಿಲ್ಲುತ್ತದೆಯೋ, ಹಾಗೆಯೇ ವಾಕ್ಯ ವಕ್ರತೆಯಲ್ಲಿ ಮಾರ್ಗವೇ ಮೊದಲಾದ ಸಮಸ್ತ ಪದಾರ್ಥ ಸಮುದಾಯದಿಂದ ಭಿನ್ನವಾಗಿ ಅವುಗಳ ಪ್ರಾಣ ಸ್ವರೂಪವಾಗಿ ಸಹೃದಯ ಹೃದಯ ಸಂವೇದ್ಯವಾಗಿ ನಿಲ್ಲುವುದೆಂದರೆ, ಕವಿಯ ವಿಶಿಷ್ಟ ಕೌಶಲ.

ಇದೇ ಕಾರಣದಿಂದ ಪದಾರ್ಥಗಳ ಸ್ವಭಾವ ಸೌಕುಮಾರ್ಯದ ವರ್ಣನೆಯಲ್ಲಿ ಅಥವಾ ಶೃಂಗಾರವೇ ಮೊದಲಾದ ರಸಗಳ ಚಿತ್ರಣದಲ್ಲಿ, ವಿವಿಧ ಅಲಂಕಾರಗಳ ವಿನ್ಯಾಸದ ಮೂಲಕ ಸೌಂದರ್ಯದ ವಿರಚನೆಯಲ್ಲಿ ವ್ಯಕ್ತವಾಗುವ ಕವಿಯ ಸಾಧನೆಯಾದ "ಅತಿಶಯವಾದ ಪರಿಣಾಮವು" ಸಹೃದಯರ ಆನಂದಕ್ಕೆ ಕಾರಣವಾಗುತ್ತದೆ. ಪದ ಅಥವಾ ವಾಕ್ಯದ ಯಾವುದಾದರೊಂದು ಭಾಗದಲ್ಲಿ ಕಿಂಚಿತ್ ವಕ್ರತೆ ಕಂಡು ಬಂದರೂ ಅದು ಕೂಡ ಕವಿ ಕೌಶಲದ ಪರಿಣಾಮವೆಂದೇ ಪರಿಗಣಿಸಬೇಕು. ಕಾರಣ, ಸೃಷ್ಟಿಯ ಪ್ರಾರಂಭದಿಂದಲೂ ಇಂದಿನವರೆಗೂ ಅದೇ ರೂಪದಲ್ಲಿ ಉಳಿದಿರುವ ವಸ್ತುಗಳನ್ನು (ಪದಾರ್ಥಗಳನ್ನು) ಸ್ವಭಾವ, ಅಲಂಕರಣ, ಮತ್ತು ವಕ್ರತೆಯ ಪ್ರಕಾರಗಳಲ್ಲಿ ಹೊಸ ಹೊಸ ರೀತಿಗಳಲ್ಲಿ ವರ್ಣಿಸುವ ಕಾರಣದಿಂದಾಗಿ, ಸಹೃದಯರನ್ನು ಆನಂದಿತರನ್ನಾಗಿಸುವ ಆನಂದದ ಈ ಹೊಸ ಅಂಶವು ವಿಶಿಷ್ಟವೆನಿಸುತ್ತದೆ. ಅದರಿಂದಾಗಿಯೇ ಹೀಗೆ ಹೇಳಲಾಗಿದೆ.

ಆ ಸಂಸಾರಂ ಕ ಇ ಪುಂಗವೇಹಿ ಪಡಿದಿ ಅಹಗಹಿ ಅಸಾರೋ ವಿ|
ಅಜ್ಜವಿ ಅಭಿನ್ನಮುದ್ದೋ ವ್ವ, ಜ ಅ ಇ ವಾ ಆಂ ಪರಿಪ್ಫಂದೋ

[ಗುಡವಹೋ-87]

ಆ ಸಂಸಾರಂ ಕವಿಪುಂಗವೈಃ ಪ್ರತಿದಿವಸ ಗೃಹೀತ ಸಾರೋऽಪಿ|
ಅದ್ಯಾಪ್ಯಭಿನ್ನಮುದ್ರ ಇವ ಜಯತಿ ವಾಚಾಂ ಪರಿಸ್ಪಂದಃ [೧೬]

(ಸಂಸ್ಕೃತಛಾಯೆ)

ಜಗದೊಳಿರುವ ಕವಿ ಪುಂಗವರೆಲ್ಲ
ಸೃಷ್ಟಿಯ ಆದಿಯಿಂದ ದಿನದಿನವೂ
ಅದರ ಸಾರವನು ತಮ್ಮ ಕೃತಿಗಳಿಗೆ
ಸೆಳೆಯುತಿದ್ದರು ಕೂಡ
ವಾಣಿಯ ಭಂಡಾರದ ಮುದ್ರೆಯದು
ಇನ್ನೂ ತೆರೆಯದೆಲೆ ವಿಜಯಿಯಹುದು ! [೧೬]

ಇದರ ಸಾರವಿದು; ಸೃಷ್ಟಿಯ ಪ್ರಾರಂಭದಿಂದಲೂ ಶ್ರೇಷ್ಠ ಕವಿಗಳು ತಮ್ಮ ತಮ್ಮ ವ್ಯಕ್ತಿಗತ ಅಸಾಧಾರಣ ಪ್ರತಿಭಾಪರಿಸ್ಪಂದಕ್ಕನುಗುಣವಾಗಿ ಪ್ರತಿದಿನವೂ ವಾಣಿಯ ಭಂಡಾರದ ಸಂಪತ್ತನ್ನು ಸೂರೆಗೊಳ್ಳುತ್ತಿದ್ದಾರೆ. ಇಷ್ಟಾದರೂ ವಾಣಿಯ ಭಂಡಾರವು ಮಾತ್ರ ಇನ್ನೂ ತೆರೆಯದೆ ಅಭಿನ್ನವಾಗಿ ಇದ್ದಂತೆಯೇ ಇದೆ. ಕಾರಣ ನವನವ ಪ್ರತಿಭೆಗಳ ಅಸಂಖ್ಯವಿಲಾಸಗಳಿಂದ ಅದು ಅನುದ್ಘಾಟಿತವಾಗಿಯೇ ಇದ್ದು, ಅದು ಸರ್ವೋತ್ಕೃಷ್ಟ ರೂಪದಿಂದ ವಿಜಯಿಯಾಗಿಯೇ ಉಳಿದಿದೆ. ಈ ರೀತಿಯಲ್ಲಿ ಇದರ ವಾಕ್ಯಾರ್ಥ ಸುಸಂಗತವೆನಿಸಿದರೂ ಕವಿ ಕೌಶಲದ ಸೌಂದರ್ಯ ಅಲೌಕಿಕವೆಂದೇ ಪ್ರತೀತವಾಗುತ್ತದೆ. ಕಾರಣ ಅವನು ತನ್ನ "ಸ್ವಾಭಿಮಾನಿ"ದನಿಗೆ ಹೆಚ್ಚು ಒತ್ತುಕೊಟ್ಟು ಹೀಗೆ ಹೇಳಿದ್ದಾನೆ - "ಸೃಷ್ಟಿಯ ಪ್ರಾರಂಭದಿಂದಲೂ ಪ್ರತಿದಿನವೂ ತಮಗೆ ಬೇಕಾದದ್ದನ್ನು ಯಥೇಚ್ಛವಾಗಿ ತೆಗೆದುಕೊಳ್ಳುತ್ತ ಬಂದಿದ್ದರೂ ವಾಣಿಯ ಭಂಡಾರದ ಉದ್ಘಾಟನೆಯೇ ಆಗಿಲ್ಲ. ವಾಸ್ತವ ಸಂಗತಿಯೆಂದರೆ, ಇದರ ಭಂಡಾರದಲ್ಲಿ ಏನು ಅಡಗಿದೆ ಎಂಬುದು ಯಾರಿಗೂ ತಿಳಿಯದೆ ಇದ್ದುದರಿಂದ ಜಗತ್ತಿನಲ್ಲಿ ಎಲ್ಲಿಯೂ, ಹಿಂದಿನ ಯಾವ ಕವಿಯೂ ಇಲ್ಲಿಂದ ಏನನ್ನೂ ತೆಗೆದುಕೊಳ್ಳಲು ಸಾಧ್ಯವಾಗಿಲ್ಲ. ಇದೀಗ ಪ್ರಥಮ ಬಾರಿಗೆ ನನ್ನ ಪ್ರತಿಭೆಯಿಂದ ಪರಮಾರ್ಥದ ಉದ್ಘಾಟನೆಯಾಗಿ, ಇದರ ರಹಸ್ಯ ಹೊರಬೀಳಲಿದೆ". ತನ್ನ ಅಲೌಕಿಕ ಪ್ರತಿಭೆಯ ಪರಿಣಾಮವಾಗಿ ಹೊಸಕಾವ್ಯ ಬರೆಯುವ ಸಂದರ್ಭ ಒದಗಿರುವುದನ್ನು ಸಮರ್ಥಿಸುತ್ತ ವಾಣಿಯ ಪರಿಸ್ಪಂದದ ವಿಜಯದ ಪ್ರಸ್ತಾವನೆಯ ಮೂಲಕ ಹೊರಗೆಡಹಿರುವುದು ಮಹತ್ವದ್ದಾಗಿದೆ.

ಕವಿ ಕೌಶಲವೇ ರಸ, ಸ್ವಭಾವ, ಅಲಂಕಾರ ಇವೆಲ್ಲವುಗಳ ಪ್ರಾಣಸ್ವರೂಪವಾದರೂ, ಅಲಂಕಾರದೊಂದಿಗೆ ಅದರ ಸಂಬಂಧ ಅತ್ಯಂತ ಘನಿಷ್ಠವಾದ್ದು. ಕಾರಣ ಕವಿ ಕೌಶಲವಿಲ್ಲದೆ, ವರ್ಣಿತ ವಿಷಯವು ಅಲಂಕಾರವೆಂದು ಕರೆಯಲ್ಪಡುವ ಅದರ ಸ್ವರೂಪ ಮಾತ್ರದಿಂದ ಯಥಾರ್ಥ ರೂಪದಲ್ಲಿ ರೇಖಿತವಾದರೆ, ಅದು ಸಹೃದಯರಿಗೆ ಆನಂದದಾಯಕವಾಗದಿರುವುದರಿಂದ, ಅಂಥ ಅಲಂಕಾರಕ್ಕೆ ಯಾವುದೇ ವೈಚಿತ್ರ್ಯ ಪ್ರಾಪ್ತವಾಗುವುದಿಲ್ಲ. ಕಾರಣ ಪ್ರಚುರ ಪ್ರವಾಹದಲ್ಲಿ ಸಿಕ್ಕಿಬಿದ್ದಿರುವ ಇತರೆ ಅಸಂಖ್ಯ ಸಾಧಾರಣ ಪದಾರ್ಥಗಳ ಹಾಗೆ ಅದು ಕಾವ್ಯ ಪ್ರತೀತಿ ಉಂಟು ಮಾಡದೆ ಸಮಾನ್ಯ ರೂಪದಲ್ಲಿಯೇ ಪ್ರತೀತವಾಗುತ್ತದೆ.

ಉದಾ:

ದೂರ್ವಾಕಾಂಡಮಿವ ಶ್ಯಾಮಾ ತನ್ವೀ ಶ್ಯಾಮಲತಾ ಯಥಾ [೧೭]

ಗರುಕೆ ಕಾಂಡದ ಹಾಗಿರುವ ಶ್ಯಾಮೆಯಿವಳು
ತೆಳ್ಳನೆಯ ಪ್ರಿಯಂಗು ಲತೆಯಂತಿಹಳು [೧೭]

[ಕವಿ ಕೌಶಲದ ಅಭಾವದಿಂದಾಗಿ, ಕೇವಲ ಸಾದೃಶ್ಯ ಮಾತ್ರದಿಂದ ಯಾವುದೇ ರೀತಿಯಲ್ಲಿ ಸಹೃದಯರ ಹೃದಯಕ್ಕೆ ಆಹ್ಲಾದವುಂಟುಮಾಡುವ ವೈಚಿತ್ರ್ಯವಿಲ್ಲ]

ಅದೇ ಅಲಂಕಾರ (ಉಪಮೆ) ನೂತನವೂ ಮನೋಹರವೂ ಆದ ಪ್ರತಿಭೆಯಿಂದ

ಹೊರಹೊಮ್ಮಿತಾದರೆ, ಲೋಕೋತ್ತರವಾದ ರಚನಾಶೈಲಿಯಿಂದ, ವಿಶಿಷ್ಟ ಶೋಭಾತಿಶಯತೆಯನ್ನು ಪಡೆದುಕೊಂಡು ಸಹೃದಯರ ಹೃದಯಕ್ಕೆ ಆಹ್ಲಾದವುಂಟುಮಾಡುತ್ತದೆ.

ಉದಾ :

ಅಸ್ಯಾಃ ಸರ್ಗವಿಧೌ ಇತಿ [೧೮] [-3-12]

ಅಥವಾ

ಕಿಂ ತಾರುಣ್ಯತರೋಃ ಇತಿ [೧೯] [1-92]

ಹೀಗೆ ಈ ಅಲಂಕಾರ ವಕ್ರತೆ ಬೇರೆ ರೀತಿಯಿಂದಲೂ ಸಂಭವವಾಗಬಹುದಾದರೂ, ಕವಿಯ ಕಾವ್ಯ ಕೌಶಲದ ಅಡಿಯಲ್ಲಿ ಬರುವ ವಾಕ್ಯವಕ್ರತೆಯ ವ್ಯಾಪ್ತಿಯೊಳಗೇ ಇದರ ಸೇರ್ಪಡೆಯಾಗುವುದು ಯುಕ್ತಿ ಯುಕ್ತ. ಆ ಕಾರಣದಿಂದಲೇ ಹೀಗೆ ಹೇಳಲಾಗಿದೆ.

ವಾಕ್ಯಸ್ಯ ವಕ್ರಭಾವೋऽನ್ಯೋ ಭಿದ್ಯತೇ ಯಃ ಸಹಸ್ರಧಾ|
ಯತ್ರಾಲಂಕಾರ ವರ್ಗೋऽಸೌ ಸರ್ವೋಽಪ್ಯಂತರ್ಭವಿಷ್ಯತಿ [೨೦]

ವಾಕ್ಯ ವಕ್ರತೆ ಎಂಬುದು ಹಿಂದೆ ಹೇಳಲಾದ ಪದಾದಿ ವಕ್ರತೆಯಿಂದ ಭಿನ್ನವಾಗಿದ್ದು ಸಹಸ್ರಾರು ಪ್ರಕಾರಗಳನ್ನು ಒಳಗೊಳ್ಳುವಂಥದು. ಇಡೀ ಅಲಂಕಾರ ಸಮೂಹವೇ ಅದರಲ್ಲಿ ಸೇರಿದೆ [೩೦]

ಈಗ ಈ ಅಲಂಕಾರ ವಕ್ರತೆಯಿಂದ ಅಲಂಕೃತಗೊಂಡ 'ಸ್ವಭಾವ'ದ ಉದಾಹರಣೆ

ತೇಷಾಂ ಗೋಪ ವಧೂವಿಲಾಸ ಸುಹೃದಾಂ ರಾಧಾರಹಃ ಸಾಕ್ಷಿಣಾಂ
ಕ್ಷೇಮಂ ಭದ್ರ ಕಲಿಂದ ಶೈಲತನಯಾತೀರೇ ಲತಾವೇಶ್ಮನಾಂ|
ವಿಚ್ಛಿನ್ನೇ ಸ್ಮರ ತಲ್ಪ. ಕಲ್ಪನ ಮೃದುಚ್ಛೇದೋಪಯೋಗೇऽಧುನಾ
ತೇ ಜಾನೇ ಜರಠೀಭವಂತಿ ವಿಗಲನ್ನೀಲತ್ವಿಷಃ ಪಲ್ಲವಾಃ [೨೧]

[ಧ್ವನ್ಯಾ 1.68] [1-20]

ಗೋಪ ಬಾಲೆಯರ ವಿಲಾಸಂಗಳ
ನೆಚ್ಚಿನ ನೇಹಿಗರು
ರಾಧೆಯೊಡನೆಯ ಏಕಾಂತ ಕ್ರೀಡೆಗಳಿಗೆಲ್ಲ
ನಿತ್ಯಸಾಕ್ಷಿಗಳು
ಯಮುನೆಯ ತಟದೊಳಿಹ
ಆ ಲತಾ ಗೃಹಗಳೆಲ್ಲ ಹದುಳವೆ ಓ ಗೆಳೆಯಾ?
ಪ್ರಣಯದ ಸೆಜ್ಜೆಗೆ ಮೃದುವಾಗಿರೆ
ಕೊಯ್ಯುದು ತಪ್ಪಿರುವಾ ಪಂದಳಿರೆಲ್ಲವು
ಹಸಿರೆಲ್ಲ ಉಡುಗಿ, ಮುದಿಯಾಗಿ ಹಾಳಾಗಿ
ಹೋಗಿಹುದೆಂದೆಣಿಪೆನು ನಾನು. [೨೧]

ಈ ಪದ್ಯದಲ್ಲಿ ವರ್ಣಿಸಿರುವುದು ಕೇವಲ ವಸ್ತುವಿನಲ್ಲಿ ಸಂಭವಿಸಬಹುದಾದ, ಸಹೃದಯರ

ಸಂವೇದನೆಗೆ ನಿಲುಕಬಲ್ಲ, ಸ್ವಭಾವ ಮಾತ್ರವನ್ನು (ಜೀವನಕ್ಕೆ ಹತ್ತಿರವಾದ ಸಹಜವಾದ). ವಿಷಯ ಇಷ್ಟಾದರೂ ಅದರ ಸೌಂದರ್ಯ ತುಂಬ ದೂರದವರೆಗೆ ಸಾಗುವಂಥದಲ್ಲ. ಅದನ್ನು ನೇರವಾಗಿ ಹೇಳದೆ ವಕ್ರ ಭಾವದಿಂದ ಹೇಳಿದ್ದರಿಂದ, ವಿರಳರಾದ ವಿದಗ್ಧ ಸಹೃದಯರ ಅನುಭವಕ್ಕೆ ಮಾತ್ರ ಗೋಚರವಾಗಬಹುದಾದ ಪದಾರ್ಥದ ಅಂತರಾಳದೊಳಗಿಂದ, ಕವಿಯ ವಿನೂತನವೂ ಮನೋಹರವೂ ಆದ ಪ್ರತಿಭೆಯ ಸೆಳಕಿನಿಂದ ಸೂಕ್ಷ್ಮವೂ ಸುಂದರವೂ ಆದೊಂದು ಲೋಕೋತ್ತರ ಸ್ವರೂಪವು ಅರಳಿ ನಿಲ್ಲುತ್ತದೆ. ಅದರಿಂದ ವಾಕ್ಯವಕ್ರತಾ ರೂಪದ* ಕವಿಕೌಶಲವು ಅಪೂರ್ವವೂ ಉನ್ನತವೂ ಆದೊಂದು ಸಿದ್ಧಿಯನ್ನು ಪಡೆದುಕೊಂಡು ಬಿಡುತ್ತದೆ. ಕಾರಣ ಅದಕ್ಕಿಂತ ಭಿನ್ನವಾದ ಅರ್ಥಾತಿಶಯವಾವುದೂ ಇಲ್ಲ.

ರಸಕ್ಕೆ ಉದಾಹರಣೆಯಾಗಿ (ಕವಿಕೌಶಲ ನಿಮಿತ್ತವಾದ ರಸ)

> **ಲೋಕೋ ಯಾದೃಶಮಾಹ ಸಾಹಸಧನಂ ತಂ ಕ್ಷತ್ರಿಯಾ ಪುತ್ರಕಂ**
> **ಸ್ಯಾತ್ಸತ್ಯೇನ ಸ ತಾದೃಗೇವ ನ ಭವೇದ್ವಾರ್ತಾ ವಿಸಂವಾದಿನೀ|**
> **ಏಕಾಂ ಕಾಮಪಿ ಕಾಲವಿಪ್ರುಪಮಮೀ ಶೌರ್ಯೋಷ್ಮ ಕಂಡೂವ್ಯಯ-**
> **ವ್ಯಗ್ರಾಃ ಸ್ಯುಶ್ಚಿರ ವಿಸ್ಮೃತಾಮರ ಚಮೂ ಡಿಂಬಾಹವಾ ಬಾಹವಃ [೨೨]**

[ಸುಭಾಷಿತ ರತ್ನಕೋಷ - 73]

> ಲೋಕ ಹೇಳುವ ಹಾಗೆ ಆ ಕ್ಷತ್ರಿಯ ಹೆಂಗಸಿನ ಪಿಳ್ಳೆ
> ಸಾಹಸಧನನನೆ ಇದ್ದೀತು
> ಈ ಸುದ್ದಿ ಸುಳ್ಳಲ್ಲದೆ ನಿಜವೆ ಇದ್ದೀತು
> ದೇವ ಸೇನೆಯೊಡನೆ ಸೆಣಸಿದುದ ಬಹುಕಾಲದಿಂ
> ಮರೆತಿರುವ ಈ ನನ್ನ ಬಾಹುಗಳು
> ತಮ್ಮ ಶೌರ್ಯದ ಬೇಗೆಯ ಕಂಡೂತಿಯನು
> ಕ್ಷಣಬಿಂದುವಾದರೂ ನೀಗಿಕೊಳಲು ವ್ಯಗ್ರವಾಗಿಹವು [೨೨]

ರಾಮಚಂದ್ರನ ಪರಾಕ್ರಮದ ಪ್ರಶಂಸೆಯನ್ನು ಕೇಳಿ, ರಾಮನೊಂದಿಗೆ ಯುದ್ಧಮಾಡಬೇಕೆಂದು ತುಡಿಯುತ್ತಿರುವ ರಾವಣನು ಹೇಳಿದ ಮಾತು.

ಇಲ್ಲಿಯ ಸ್ಥಾಯೀ ಭಾವ ಉತ್ಸಾಹ. ಈ ಸ್ಥಾಯೀ ಭಾವಕ್ಕೆ ಸಮುಚಿತ ಆಲಂಬನ ವಿಭಾವವಾದ ರಾಮನ ಸೌಂದರ್ಯಾತಿಶಯದ ಶ್ಲಾಘನೆಯನ್ನು ಶ್ರದ್ಧೆಯಿಂದ ಮಾಡುವುದು ಕವಿಯ ಕಾಳಜಿ. ಅದಕ್ಕಾಗಿ ವೈದಗ್ಧ್ಯ ಭಂಗಿ ಭಣಿತಿ ವೈಚಿತ್ರ್ಯದ ಮೂಲಕ ರಾಮನ ವಿಜಿಗೀಷುತ್ವದ ಭಾವವನ್ನು ಪರಾಕಾಷ್ಠ ಸ್ಥಿತಿಗೆ ಕೊಂಡೊಯ್ದು ವೀರ ರಸ ರೂಪದಲ್ಲಿ ಆಸ್ವಾದ್ಯವಾಗುವಂತೆ ಮಾಡುವುದು ಅವನ ವಿಧಾನವಾಗಿದೆ. ಇದು ವಾಕ್ಯ ವಕ್ರತೆಯ ಭಾವವನ್ನು ನಿರ್ಮಿಸುವ ಕವಿಕೌಶಲವನ್ನು ವ್ಯಕ್ತಪಡಿಸುತ್ತದೆ. ಹಿಂದಿನ ಅನ್ಯಪ್ರಕರಣಗಳಲ್ಲಿ ನೀಡಲಾಗಿರುವ ಅಂಥ ವಾಕ್ಯ ರಚನೆಗೆ ಸಂಬಂಧಪಟ್ಟ ವಕ್ರತೆಯ ಇತರೆ ಉದಾಹರಣೆಗಳನ್ನು ಈ ಹಿನ್ನೆಲೆಯಲ್ಲೇ ಸಹೃದಯರು ವಿಚಾರಿಸಬೇಕು.

* ಇದು ವಾಕ್ಯ ವಕ್ರತಾ ರೂಪದ ವರ್ಗದ ಇದು ಕವಿ ಕೌಶಲದ ಪರಾಕಾಷ್ಠೆ

ವಕ್ರತಾಯಾಃ ಪ್ರಕಾರಾಣಾಮೌಚಿತ್ಯಗುಣಶಾಲಿನಾಮ್|
ಏತದುತ್ತೇಜನಾಯಾಲಂ ಸ್ವಸ್ಪಂದ ಮಹತಾಮಪಿ [೨೩]

ರಸಸ್ವಭಾವಾಲಂಕಾರಾ ಆಸಂಸಾರಮಪಿ ಸ್ಥಿತಾಃ|
ಅನೇನ ನವತಾಂ ಯಾಂತಿ ತದ್ವಿದಾಹ್ಲಾದದಾಯಿನೀಮ್ [೨೪]

ಔಚಿತ್ಯಗುಣದಿಂದ ಕೂಡಿರುವ, ಹಾಗೂ ತನ್ನದೇ ಆದ ರೀತಿಯಲ್ಲಿ ಸುಂದರವಾಗಿರುವ ವಕ್ರತೆಯ ಈ ವಿವಿಧ ಪ್ರಕಾರಗಳಿಗೆ ಹೆಚ್ಚಿನ ಸೌಂದರ್ಯವನ್ನು ತಂದುಕೊಡಲು ಈ ವಾಕ್ಯವಕ್ರತೆಯು ಸಮರ್ಥವಾಗಿದೆ [೨೩]

ವಿಶ್ವದಲ್ಲಿ ಎಲ್ಲ ಕಾಲದಲ್ಲಿಯೂ ಇರುವ, ಕಾವ್ಯದ ಮೂರು ಅಂಶಗಳಾದ ರಸ, ಸ್ವಭಾವ ಮತ್ತು ಅಲಂಕಾರಗಳು ಸಹೃದಯರಿಗೆ ಆಹ್ಲಾದವನ್ನುಂಟುಮಾಡುವ ನವತ್ವವನ್ನು ಈ ವಾಕ್ಯವಕ್ರತೆಯಿಂದ ಪಡೆದುಕೊಂಡು ಬಿಡುತ್ತವೆ. [೨೪]

ಇವೆರಡೂ ಅಂತರ ಶ್ಲೋಕಗಳು

ಇದುವರೆಗೂ ಕಾವ್ಯೋಪಯೋಗಿ ವಿಚಾರಗಳಾದ ಅಭಿಧಾನ

(ಶಬ್ದ); ಅಭಿಧೇಯ [ವಸ್ತು, (ಅರ್ಥ)] ಮತ್ತು ಅಭಿಧಾಲಕ್ಷಣ [ವಕ್ರತೆಯಿಂದ ಕೂಡಿದ ಕಥನ ಶೈಲಿ, (ಸಂವಹನ ಪ್ರಕ್ರಿಯೆ)] ಈ ಮೂರರ ಸ್ವರೂಪವನ್ನು ವರ್ಣಿಸಿ, ಇದೀಗ ವರ್ಣನೀಯ ವಸ್ತುವನ್ನು ವಿಷಯದ ದೃಷ್ಟಿಯಿಂದ ವಿಭಾಗಿಸಲಾಗುವುದು.

ಭಾವಾನಾಮಪರಿಮ್ಲಾನ ಸ್ವಭಾವೌಚಿತ್ಯ ಸುಂದರಮ್|
ಚೇತನಾನಾಮ್ ಜಡಾನಾಮ್ ಚ ಸ್ವರೂಪಂ ದ್ವಿವಿಧಂ ಸ್ಮೃತಂ [5]

ಎಂದೂ ಮಾಸದ ಔಚಿತ್ಯದಿಂದ ಹಾಗೂ ಸರಸ ಸ್ವಭಾವದ ಸೌಂದರ್ಯದಿಂದ ಕೂಡಿರುವಂತೆ ವರ್ಣಿಸಲಾಗುವ ಕಾವ್ಯ ವಿಷಯಗಳು ಎರಡು ಪ್ರಕಾರದವು. ಅವಗಳೆಂದರೆ ಜಡ ಮತ್ತು ಚೇತನಗಳು [5]

ಭಾವ ಅರ್ಥಾತ್ ಕಾವ್ಯದಲ್ಲಿ ವರ್ಣಿಸಲಾಗುವ ವಿಷಯಗಳ (ಪದಾರ್ಥಗಳ) ಸ್ವರೂಪ ಅಂದರೆ ಸ್ವಭಾವ, ಯಾವ ವಿಧವಾಗಿ ಇರುತ್ತದೆ? ಅದು ಮುಖ್ಯವಾಗಿ ಎರಡು ವಿಧವಾಗಿರುತ್ತದೆ ಎಂದು ಹೇಳಲಾಗುತ್ತದೆ. ಹಾಗೆಂದು ವಿದ್ವಾಂಸರ ಅಭಿಪ್ರಾಯ. ಆ ಪದಾರ್ಥಗಳೆಂದರೆ - ಚೇತನ ಮತ್ತು ಜಡಪದಾರ್ಥ. ಚೇತನಗಳೆಂದರೆ, ಪ್ರಜ್ಞೆಯನ್ನು (ಜ್ಞಾನ) ಹೊಂದಿರುವಂಥವು ಪ್ರಾಣಿಗಳು. ಜಡಪದಾರ್ಥಗಳೆಂದರೆ ಅವುಗಳಿಂದ ಭಿನ್ನವಾದ, ಪ್ರಜ್ಞೆಯನ್ನು ಹೊಂದಿರದವು. (ಚೇತನಾರಹಿತ) ಈಗ ಹೇಳಲಾದ ಈ ಎರಡು ವಿಧಗಳಲ್ಲಿರುವ ವ್ಯತ್ಯಾಸವು ಅವುಗಳ ಗುಣಗಳ (ಧರ್ಮದ) ವ್ಯತ್ಯಾಸಕ್ಕೂ ಕಾರಣ (ಧರ್ಮಿಗಳಲ್ಲಿರುವ ವೈವಿಧ್ಯ-ಧರ್ಮವೈವಿಧ್ಯಕ್ಕೆ ಕಾರಣ) ಅವುಗಳ ಸ್ವರೂಪ ಎಂಥದು? ಅದನ್ನೊಂದು ಅಲಂಕಾರದ ಮೂಲಕ ವಿವರಿಸಲಾಗಿದೆ. ಅದೆಂದರೆ ಅಪರಿಮ್ಲಾನ ಸ್ವಭಾವೌಚಿತ್ಯಸುಂದರಮ್' ಎಂದು. ಅರ್ಥಾತ್ ಮ್ಲಾನವಾಗದ ಸೌಂದರ್ಯದಿಂದ ಹಾಗೂ ಸರಸ ಸ್ವಭಾವದಿಂದ ಕೂಡಿರುವಂಥದು. ಔಚಿತ್ಯದೊಂದಿಗೆ ಕೂಡಿಕೊಂಡಿರುವುದರಿಂದ

ದೋಷಗಳಿಗೆ ಆಸ್ಪದವಿರುವುದಿಲ್ಲ. ಇಂಥ ಸ್ಥಿತಿಯಲ್ಲಿ ಸಹೃದಯರಿಗೆ ಆಹ್ಲಾದ ಉಂಟು ಮಾಡುವಂಥದಾಗಿರುತ್ತದೆ.

ಈ ಎರಡು ವರ್ಗಗಳನ್ನು ಪುನಃ ವಿಭಜಿಸಿ ಚರ್ಚಿಸಲಾಗುವುದು.

ತತ್ರ ಪೂರ್ವಂ ಪ್ರಕಾರಾಭ್ಯಾಮ್ ದ್ವಾಭ್ಯಾಮೇವ ವಿಭಿದ್ಯತೇ।
ಸುರಾದಿ ಸಿಂಹಪ್ರಭೃತಿ ಪ್ರಾಧಾನ್ಯೇತರ ಯೋಗತಃ[6]

ಇವುಗಳಲ್ಲಿ ಮೊದಲನೆಯದಾದ ಚೇತನ ವರ್ಗದಲ್ಲಿ ದೇವಾದಿ ಮತ್ತು ಸಿಂಹಾದಿಗಳಲ್ಲಿ ಪ್ರಾಧಾನ್ಯ ಮತ್ತು ಅಪ್ರಾಧಾನ್ಯದಿಂದ ಮತ್ತೆ ಎರಡು ವಿಧಗಳಾಗುತ್ತವೆ. [6]

ಮೇಲೆ ಹೇಳಲಾದ ಎರಡು ಪ್ರಕಾರಗಳಲ್ಲಿ (ಚೇತನ ಮತ್ತು ಅಚೇತನ) ಮೊದಲನೆಯದಾದ ಚೇತನ ಪದಾರ್ಥಗಳಿಗೆ ಸಂಬಂಧಿಸಿದ್ದನ್ನು ಮತ್ತೆ ಎರಡು ಉಪಪ್ರಕಾರಗಳಲ್ಲಿ ಮಾತ್ರ ವಿಭಜಿಸಲಾಗುತ್ತದೆ; ಕಾರಣ ಮೂರನೆಯದು ಇಲ್ಲವಾದ್ದರಿಂದ. ಆ ಎರಡು ಉಪಪ್ರಕಾರಗಳೆಂದರೆ, ದೇವ ಅಥವಾ ಸಿಂಹಗಳಿಗೆ ಪ್ರಾಧಾನ್ಯ ಹಾಗೂ ಉಪ ಪ್ರಾಧಾನ್ಯವಿರುವ ಪ್ರಕಾರಗಳು. ಸುರಾದಿ ಪ್ರಕಾರದಲ್ಲಿ ದೇವರು, ರಾಕ್ಷಸರು, ಸಿದ್ಧರು, ವಿದ್ಯಾಧರರು ಮತ್ತು ಗಂಧರ್ವರೇ ಮೊದಲಾದ ಚೇತನ ವ್ಯಕ್ತಿಗಳು ಬರುತ್ತಾರೆ ಹಾಗೂ ಎರಡನೆಯ ಸಿಂಹಾದಿ ಪ್ರಕಾರದಲ್ಲಿ ಸಿಂಹವು ಪ್ರಧಾನವಾಗಿರುವ ಪ್ರಾಣಿವರ್ಗವೆಲ್ಲಾ ಒಳಗೊಳ್ಳುತ್ತದೆ. ಇವುಗಳಲ್ಲಿ ಪ್ರಾಧಾನ್ಯ ಅಥವಾ ಮುಖ್ಯರೂಪತ್ವ ಹಾಗೂ ಅದಕ್ಕಿಂತ ಭಿನ್ನವಾದ ಗೌಣತ್ವವು ಕ್ರಮವಾಗಿ ಯಾವುದರೊಂದಿಗೆ ಸಂಬಂಧ ಉಂಟಾಗುತ್ತದೋ ಅದರ ಮೇರೆಗೆ ಬರುತ್ತದೆ.

ಕವಿಗಳ ವರ್ಣನೆಯ ವಸ್ತುಗಳಲ್ಲಿ, ದೇವಾದಿ ಪ್ರಧಾನವಾದ ಚೇತನ ಪದಾರ್ಥಗಳು ಒಂದು ಮುಖ್ಯವರ್ಗ. ಎರಡನೆಯ ವರ್ಗವೆಂದರೆ, ಸಿಂಹವೇ ಮೊದಲಾದ ಪಶುಗಳು, ಪಕ್ಷಿಗಳು ಸರೀಸೃಪಗಳೇ ಮೊದಲಾದ ಗೌಣ ಚೇತನ ಪದಾರ್ಥಗಳು. ಅವುಗಳಿಗೆ ಸಂಬಂಧಿಸಿದ ಸ್ವರೂಪವನ್ನು ವಿಶೇಷ ರೀತಿಯಲ್ಲಿ ಪ್ರತಿಪಾದಿಸಲಾಗುವುದು.

ಮುಖ್ಯಮಕ್ಲಿಷ್ಟರತ್ಯಾದಿ ಪರಿಪೋಷ ಮನೋಹರಮ್।
ಸ್ವಜಾತ್ಯುಚಿತ ಹೇವಾಕ ಸಮುಲ್ಲೇಖೋಜ್ವಲಂ ಪರಮ್[7]

ಮೊದಲನೆಯದಾಗಿ ಚೇತನ ಪ್ರಕಾರಗಳು ಸುಂದರವಾದ ರತಿಯೇ ಮೊದಲಾದ ಸ್ಥಾಯೀ ಭಾವಗಳ ಸರಾಗ ಪರಿಪೋಷಣೆಯಿಂದ ಮನೋಹರವೆನಿಸುತ್ತವೆ. ಎರಡನೆಯ ಗೌಣ[6] ಚೇತನ ಪದಾರ್ಥಗಳು ತಮ್ಮ ಜಾತಿಗೆ ಉಚಿತವಾದ ಸ್ವಭಾವದ ಸಂಯಕ್ ನಿರೂಪಣೆಯಿಂದ ಉಜ್ವಲವಾಗುತ್ತವೆ. [7]

ಸುರರು, ಅಸುರರು ಮೊದಲಾದವರಿಗೆ ಸಂಬಂಧಿಸಿದ ಮುಖ್ಯ ಚೇತನ ವಸ್ತುಗಳು ಈ ಮುಂದೆ ಸೂಚಿಸಿರುವ ವಿಧಾನದಲ್ಲಿ ಶ್ರೇಷ್ಠ ಕವಿಗಳ ವರ್ಣನೆಗೆ ಯೋಗ್ಯವಾಗುತ್ತವೆ; ಅಂದರೆ ಅವರ ಕಾವ್ಯವ್ಯಾಪಾರದ ವಿಷಯಗಳಾಗುತ್ತವೆ. ಆ ವಿಧಾನವೆಂದರೆ, ಸುಕುಮಾರವಾದ ರತಿಯೇ ಮೊದಲಾದ ಭಾವಗಳ ಸರಾಗ ಪೋಷಣೆಯಿಂದ ಮನೋಹರವೆನಿಸುತ್ತವೆ. ಅಕ್ಲಿಷ್ಟ (ಸರಾಗ)

ಎಂಬುದರ ಅರ್ಥ ರತಿಯೇ ಮೊದಲಾದ ಸ್ಥಾಯೀಭಾವಗಳು ಕ್ಷುದ್ರಾರ್ಥದಿಂದ ಕೂಡಿರದೆ ಅಪೂರ್ವತೆಯಿಂದ ಮನೋಹರವಾಗಿರಬೇಕು, ಎಂದು. ರತ್ಯಾದಿ ಸ್ಥಾಯೀ ಭಾವಗಳು ಈ ರೀತಿಯಲ್ಲಿ ಪರಿಪುಷ್ಟಗೊಂಡಾಗ, ಶೃಂಗಾರವೇ ಮೊದಲಾದ ರಸಗಳಲ್ಲಿ ಪರಿಣತವಾಗುತ್ತವೆ, ಕಾರಣ ಸ್ಥಾಯೀಭಾವವೇ ಪರಿಪುಷ್ಟಗೊಂಡು, ರಸವಾಗಿ ಪರಿವರ್ತಿತವಾಗುತ್ತವೆ ಎಂಬುದು ಪ್ರಸಿದ್ಧವೇ ಇದೆ. ಆಗ ಇದು ಮನೋಹರವೆನಿಸಿ, ಹೃದ್ಯವಾಗುತ್ತದೆ. ವಿಪ್ರಲಂಭ ಶೃಂಗಾರಕ್ಕೆ ಉದಾಹರಣೆಯಾಗಿ ಕಾಳಿದಾಸನ ವಿಕ್ರಮೋರ್ವಶೀಯ ನಾಟಕದ 4ನೇ ಅಂಕದಲ್ಲಿ ಊರ್ವಶಿಯ ವಿಯೋಗದಿಂದ ಹುಚ್ಚನಾದ ಪುರೂರವನ ಪ್ರಲಾಪದ ಭಾಗವನ್ನು ನೋಡಬಹುದು.

ತಿಷ್ಠೇತ್ ಕೋಪವಶಾತ್ ಪ್ರಭಾವ ಪಿಹಿತಾ ದೀರ್ಘಂ ನ ಸಾ. ಕುಪ್ಯತಿ
ಸ್ವರ್ಗಾಯೋತ್ಪತಿತಾ ಭವೇನ್ಮಯಿ - ಪುನರ್ಭಾವಾರ್ದ್ರಮಸ್ಯಾ ಮನಃ|
ತಾಂ ಹರ್ತುಂ ವಿಬುಧ ದ್ವಿಷೋಽಪಿ ನ ಚ ಮೇ ಶಕ್ತಾಃ ಪುರೋವರ್ತಿನೀಂ
ಸಾ ಚಾತ್ಯಂತಮಗೋಚರಂ ನಯನಯೋರ್ಯಾತೇತಿ ಕೋಽಯಂ ವಿಧಿಃ [೨೫]
[ವಿಕ್ರಮೋರ್ವಶೀಯ 4-2]

ಕೋಪದಲಿ ತನ್ನ ಮಾಯೆಯಿನವಳು
ಕಾಣದಿದ್ದರು ಕೂಡ ಬಹುಕಾಲ ನಿಲ್ಲದವಳ ಕೋಪ
ಅಲ್ಲದಿರೆ ನಾಕಲೋಕಕ್ಕೆ ಹಾರಿಹೋದಳೆ ಅವಳು ಎನೆ
ಎನ್ನ ವಿಷಯದಲವಳ ಮನವಾರ್ದ್ರಗೊಂಡಿಹುದು.
ನನ್ನೆದುರೊಳಾಕೆ ಇರುತಿರಲಲ್ಲಿ
ರಕ್ಕಸರೆಂತವಳ ಸೆಳೆದೊಯ್ಯಲಾರ್ಪರು?
ಆದರೂ ಈ ಕಂಗಳಿಗೆ ಕಾಣದಿಹಳಯ್ಯೋ!
ಏನಿದೀ ನನ್ನ ದುರ್ವಿಧಿಯು! [೨೫]

ಇಲ್ಲಿ ರಾಜನು ತನ್ನಪ್ರಿಯತಮೆಯ ವಿರಹದ ನೋವಿನಿಂದ ತಪ್ತನಾಗಿ ಅತ್ಯಂತ ವ್ಯಾಕುಲ ಚಿತ್ತನಾಗಿದ್ದಾನೆ. ಅವಳು ಕಣ್ಮರೆಯಾಗಿರುವುದರ ಕಾರಣವನ್ನು ತಿಳಿಯದವನಾಗಿದ್ದಾನೆ. ಹಾಗಾಗಿ ಮೊದಲಿಗೆ ಅವಳ ಸುಕುಮಾರ ಸ್ವಭಾವಕ್ಕನುಗುಣವಾದ ಕಾರಣವೊಂದನ್ನು ಊಹಿಸಿದ. ಕೂಡಲೇ ಅದು ಸಯುಕ್ತಿಕವಲ್ಲವೆನಿಸಿ, ಅದನ್ನು ತಳ್ಳಿಹಾಕುತ್ತಾನೆ. ಅನಂತರ ಅವಳು ಕಾಣದಿರುವುದಕ್ಕೆ ಬೇರೊಂದೇ ಕಾರಣವನ್ನು ಊಹಿಸುತ್ತಾನೆ. ಇದೂ ಅವಳು ಕಣ್ಮರೆಯಾಗಿರುವುದಕ್ಕೆ ಸಕಾರಣವೆನಿಸದಿದ್ದಾಗ, ಅವನು ಅವಳು ದೊರಕುವುದು ಅಸಂಭವವೆನಿಸಿ, ನಿರಾಶೆಯು ನಿಶ್ಚಿತವೆನಿಸಿ, ವಿಮೂಢ ಮನಸ್ಕನಾಗುತ್ತಾನೆ. ಇವೆಲ್ಲ ಸೇರಿ ಇಲ್ಲಿಯ ಸ್ಥಾಯೀ ಭಾವವನ್ನು ಅದರ ಪರಾಕಾಷ್ಠ ಸ್ಥಿತಿಗೆ ತಲುಪಿಸುತ್ತವೆ.

ಇದೇ ವಿಪ್ರಲಂಭ ಶೃಂಗಾರದ ಭಾವವನ್ನು ಕೆಳಗಿನ ಈ ಶ್ಲೋಕದಲ್ಲಿ ಇನ್ನಷ್ಟು ಉದ್ದೀಪನಗೊಳಿಸಲಾಗಿದೆ.

ಪದ್ಭ್ಯಾಮ್ ಸ್ಪೃಶೇದ್ವ ಸುಮತೀಂ ಯದಿ ಸಾ ಸುಗಾತ್ರೀ
ಮೇಘಾಭಿವೃಷ್ಟ ಸಿಕತಾಸು ವನಸ್ಥಲೀಷು|
ಪಶ್ಚಾನ್ನತಾ ಗುರುನಿತಂಬತಯಾ ತತೋಽಸ್ಯಾ
ದೃಶ್ಯೇತ ಚಾರುಪದ ಪಂಕ್ತಿರಲಕ್ತಕಾಂಕಾ [೨೬]

[ವಿಕ್ರಮೋರ್ವಶೀಯ 4-6]

ಚೆಲುಮೈಯ ಆ ಪ್ರಿಯೆಯು
ಈ ನೆಲವನಡಿಯಿಂದೆ ಸೋಕುತ್ತೆ ನಡೆದಿದ್ದರೆ
ಮೋಡಗಳು ಮಳೆಗರೆದು ನೆನೆದಿರುವ
ಈ ಬನದ ಮಳಲಿನೊಳು
ಗುರು ನಿತಂಬದ ಭರಕೆ ಮುಂಗಡೆ ಉಬ್ಬಾಗಿ
ಹಿಂದೆ ನಸು ತಗ್ಗಿದೊಲು ಕಾಣದಿರುತಿರ್ದುದೆ
ಅಲತಿಗೆಯ ಬಳಿದ ಅವಳ ಚೆಲುವಾದ
ಆ ಹೆಜ್ಜೆ ಸಾಲು? [೨೬]

'ಈ ನೆಲನಡಿಯಿಂದೆ ಸೋಕುತ್ತೆ ನಡೆದಿದ್ದರೆ' ಎಂದು ಪುರೂರವನು ಹೇಳುವಾಗ, ಅವಳನ್ನು ಮತ್ತೆ ಪಡೆಯಬಹುದೆಂಬ ಭರವಸೆ ಇದೆ. ಆ ಕಾರಣದಿಂದ ಮೋಡಗಳು ಮಳೆ ಸುರಿಸಿ, ವನ ಪ್ರದೇಶದ ಮೃದು ಮರಳುನೆಲವೆಲ್ಲ ಹೇಗೂ ನೆನೆದಿದೆಯಾಗಿ, ಅವಳ ನಿತಂಬಗಳ ಭಾರದಿಂದ ಹಿಮ್ಮಡಿಯ ಗುರುತು ಆಳವಾಗಿ ಬಿದ್ದಿರಬೇಕಿತ್ತು. ಅಲ್ಲದೆ ಪಾದದ ಮುಂಭಾಗವೂ ಅಲತಿಗೆಯ ರಸದಿಂದ ಕೆಂಪಾಗಿರುವುದರಿಂದ ಸುಂದರ ಪದವಿನ್ಯಾಸ ಅತ್ಯಂತ ಸ್ಪಷ್ಟವಾಗಿ ಕಾಣಬೇಕಾಗಿತ್ತು ಎಂದು ಅಂದುಕೊಳ್ಳುತ್ತಾನೆ. ಆದರೆ ಇಂಥ ಹೆಜ್ಜೆಯ ಗುರುತು ಕಾಣದೆ ಇರುವುದರಿಂದ, ನಿರಾಶೆಯ ತೀವ್ರತೆ ಹೆಚ್ಚಾಗುತ್ತದೆ ಮತ್ತು ಈ ನೈರಾಶ್ಯವೇ ಮುಂದಿನ ಉನ್ಮತ್ತ ವಿಲಾಪಕ್ಕೆ ಕಾರಣವಾಗಿದೆ.

ಕರುಣ ರಸಕ್ಕೆ ಉದಾಹರಣೆಯಾಗಿ 'ತಾಪಸ ವತ್ಸರಾಜ' ನಾಟಕದ ಎರಡನೇ ಅಂಕದಲ್ಲಿ ಬರುವ ವತ್ಸರಾಜನ 'ಪ್ರಲಾಪ'ದ ಭಾಗವನ್ನು ನೀಡಿದೆ.

ಧಾರಾವೇಶ್ಮ ವಿಲೋಕ್ಯ ದೀನವದನೋ ಭ್ರಾಂತ್ವಾ ಚ ಲೀಲಾಗೃಹಾ–
ನ್ನಿಶ್ವಸ್ಯಾಯತಮಾಶು ಕೇಸರಲತಾ ವೀಥೀಷು ಕೃತ್ವಾ ದೃಶಃ|
ಕಿಂ ಮೇ ಪಾರ್ಶ್ವಮುಪೈಷಿ ಪುತ್ರಕ ಕೃತೈಃ ಕಿಂ ಚಾಟುಭಿಃ ಕ್ರೂರಯಾ
ಮಾತ್ರಾ ತ್ವಂ ಪರಿವರ್ಜಿತಃ ಸಹ ಮಯಾ ಯಾಂತ್ಯಾತಿ ದೀರ್ಘಾಂ ಭುವಮ್ [೨೭]

ಧಾರಾಗೃಹಗಳನು ನೋಡಿ ದೀನಮುಖನಾಗಿ
ಕ್ರೀಡಾಗೃಹಗಳೆಡೆ ಸುಳಿದಾಡಿ ಸುಯ್ಯುತ್ತ
ಕೇಸರ ಲತೆಯ ಬೀದಿಗಳತ್ತ ಕಣ್ಣ ಹಾಯಿಸುತ
ನನ್ನ ಬಳಿಗೇಕೆ ಬರುತಿರುವೆ ಮುದ್ದು ಜಿಂಕೆಯೆ
ಮುದ್ದು ಧನಿಗಳ ತೆಗೆಯೆ ಬರುವುದೇನೆಲೆ ವತ್ಸ?

ನನ್ನನೆಂತೋ ನಿನ್ನನೂ ಅಂತೆಯೆ ತೊರೆದು
ದೂರ ದೇಶಕೆ ತೆರಳಿಹಳಾ ಕ್ರೂರ ಮಾತೆ [೨೭]

[ತಾಪಸವತ್ಸರಾಜ II - 71]

ಇಲ್ಲಿ ಕರುಣ ರಸ ಪರಿಪೋಷಕ್ಕೆ ಕಾರಣವಾದ ವಿಭಾವಾದಿ ಸಕಲ ಸಾಮಗ್ರಿಯನ್ನೂ ಕವಿ ಪ್ರಸ್ತುತಪಡಿಸಿದ್ದಾನೆ. ಅದಕ್ಕೆ ತಕ್ಕಂತೆ ಈ ಶ್ಲೋಕಕ್ಕೆ ಮುಂಚೆ (ಅವತರಣೆಯ ರೂಪದಲ್ಲಿ) ವಿದೂಷಕನ ಹೇಳಿಕೆ ಹೀಗಿದೆ.

ಪಮಾದೋ ಏಸೋ ಕ್ಖು ದೇವಿಏ ಪುತ್ತಕಿದಕೋ ಹರಿಣಪೋದೋ
ಅತ್ತಭವಂತಂ ಅಣುಸರದಿ|| [೨೮]

ಪ್ರಮಾದಃ ! ಏಷ ಖಲು ದೇವ್ಯಾಃ ಪುತ್ರಕೃತಕೋ ಹರಿಣಪೋತೋಽತ್ರಭವಂತಮನುಸರತಿ

ಅಹ ಏನನ್ಯಾಯ! ದೇವಿಯು ತನ್ನ ಮಗನಂತೆ ಪೋಷಿಸಿದ ಈ ಜಿಂಕೆಯ ಮರಿ ತಮ್ಮ ಹಿಂದೆ ಹಿಂದೆಯೇ ಬರುತ್ತಿದೆ ಮಹಾಪ್ರಭು [೨೮]

ವಿದೂಷಕನ ಈ ಮಾತಿನಿಂದ, ಜಿಂಕೆಯ ಮರಿ, ಧಾರಾಗೃಹ ಇವೆಲ್ಲವೂ ಸ್ಪಷ್ಟವಾಗಿ ಕರುಣರಸದ ಉದ್ದೀಪನ ವಿಭಾವಗಳಾಗಿಬಿಡುತ್ತವೆ. ಅದೇ ಕಾರಣದಿಂದ, ಮಂತ್ರಿ ರುಮಣ್ವಂತನು - ಇದು ಉರಿಯುವ ಗಾಯಕ್ಕೆ ಉಪ್ಪು ಹಾಕಿದಂತಾಯಿತು - ಎಂದು ಉದ್ಗರಿಸಿದ ಕೂಡಲೇ ಇದೇ ಭಾಗವನ್ನು ಪುಷ್ಟಗೊಳಿಸುವ ಈ ಶ್ಲೋಕವಿದೆ.

ಕರ್ಣಾಂತಸ್ಥಿತ ಪದ್ಮರಾಗಕಲಿಕಾಂ ಭೂಯಃ ಸಮಾಕರ್ಷತಾ
ಚಂಚ್ವಾ ದಾಡಿಮ ಬೀಜಮಿತ್ಯಭಿಹತಾ ಪಾದೇನ ಗಂಡಸ್ಥಲೀ
ಯೇನಾಸೌ ತವ ತಸ್ಯ ನರ್ಮಸುಹೃದಃ ಖೇದಾನ್ಮುಹುಃ ಕ್ರಂದತೋ
ನಿಶ್ಶಂಕಂ ನ ಶುಕಸ್ಯ ಕಿಂ ಪ್ರತಿವಚೋ ದೇವಿ ತ್ವಯಾ ದೀಯತೇ [೨೯]

ನಿನ್ನ ಕಿವಿಯೊಳಿರ್ದ ಪದ್ಮರಾಗದ ಮಣಿಯ
ದಾಳಿಂಬೆ ಬೀಜವೆನೆ ಭ್ರಮಿಸಿ, ತನ್ನಯ
ಪಂಜದಿಂದೀ ನಿನ್ನ ಕೆನ್ನೆಯನು ಉಜ್ಜುತ್ತೆ
ಒಂದೊಂದೆ ಬೀಜವನು ನಿಶ್ಶಂಕೆಯಿಂ ಕೊಕ್ಕಿನಿಂ
ಕುಕ್ಕಿ ತಿನಲೆತ್ನಿಸುತಿರ್ದ ನಿನ್ನ ನೇಹಿಗ ಮುದ್ದುಗಿಳಿ
ವ್ಯಾಕುಲಗೊಂಡು ಬಾರಿ ಬಾರಿಗು ಚೀರುತಿದೆ
ಅದಕೆ ಮರುಮಾತುಗುಡದೆ ಸುಮ್ಮನೇಕಿರುವೆ ಎಲೆದೇವಿಯೆ [೨೯]

ಗಿಳಿಯ ಈ ಅಕೃತ್ಯಗಳನ್ನೆಲ್ಲ ವಿವರಿಸಿರುವ ಉದ್ದೇಶ, ರಾಣಿಗೆ ಅದೆಷ್ಟು ಪ್ರೀತಿ ಪಾತ್ರವಾದುದು ಎಂಬುದನ್ನು ಸೂಚಿಸಲು. 'ಕೆನ್ನೆ'ಗೆ ವಿಶೇಷಣವಾಗಿ ಸೇರಿಸಿರುವ 'ಈ' ಎಂಬ ಸರ್ವನಾಮ ಶಬ್ದ, ರಾಜನು ಸ್ವಾನುಭವದಿಂದ ಕಂಡುಕೊಂಡಿದ್ದ ಅದರ ಅತಿಶಯವಾದ ಸೌಕುಮಾರ್ಯವನ್ನು ಸೂಚಿಸುತ್ತದೆ. ಇಂಥ ಉದ್ದೀಪನ ವಿಭಾವವೇ ಪ್ರಾಣವಾದ ಕರುಣ ರಸವನ್ನು ಹೀಗೆ ರಮಣೀಯತೆಯ ಪರಾಕಾಷ್ಠೆಗೆ ಒಯ್ಯಲಾಗಿದೆ.

ವಿಪ್ರಲಂಭಶೃಂಗಾರ ಮತ್ತು ಕರುಣರಸ - ಇವುಗಳಿಗೆ ಮಾತ್ರ ಇಲ್ಲಿ ಉದಾಹರಣೆಗಳನ್ನು ನೀಡಲಾಗಿದೆ. ಕಾರಣ ಅವೆರಡೂ ಅತ್ಯಂತ ಸುಕುಮಾರವಾದ ರಸಗಳು. ಇತರೆ ರಸಗಳ ಉದಾಹರಣೆಯನ್ನು ಸಹೃದಯರೇ ಊಹಿಸಿಕೊಳ್ಳಬೇಕು.

ಇದೇ ರೀತಿ ಗೌಣಚೇತನ (ದ್ವಿತೀಯ ಪ್ರಧಾನಚೇತನ)ಗಳಾದ ಸಿಂಹವೇ ಮೊದಲಾದವುಗಳ ವರ್ತನೆಗೆ ಸಂಬಂಧಿಸಿದವೂ ಕೆಲವೊಂದು ನಿರ್ಬಂಧಗಳಿಗೆ ಒಳಪಟ್ಟು ಕವಿಗಳ ವರ್ಣನೆಗೆ ಒಳಗಾಗುತ್ತವೆ. ಒಂದು ನಿರ್ಬಂಧವೆಂದರೆ, ತನ್ನ ಜಾತಿಗೆ ಅನುರೂಪವಾದ ಸ್ವಭಾವದ ಸುಂದರವೂ ಉಜ್ವಲವೂ ಆದ ವರ್ಣನೆ. ಪ್ರತಿಯೊಂದು ಜಾತಿಗೂ ತನ್ನದೇ ಆದ ಲಕ್ಷಣವಿರುತ್ತದೆ - ಸಾಮಾನ್ಯ ಲಕ್ಷಣ ವಸ್ತು ಸ್ವರೂಪವೇ ಆದರೂ ಅದಕ್ಕನುಸಾರವಾದ ಸ್ವಭಾವವೆಂದು ವರ್ಣಿಸಲಾದ ವರ್ತನೆಯು ಆ ಪ್ರಾಣಿಯ ವಾಸ್ತವಿಕ ಸ್ವಭಾವದ ಭಾಗವಾಗಿರಬೇಕು. ಅಂಥ ಸಹಜ ಸ್ವಭಾವದ ವಾಸ್ತವಿಕ ವರ್ಣನೆಯು ಉಜ್ವಲವೆನಿಸುತ್ತದೆ-ಅರ್ಥಾತ್ ಸಹೃದಯರನ್ನು ಆಹ್ಲಾದಗೊಳಿಸುವಂಥದಾಗುತ್ತದೆ.

ಉದಾ :

ಕದಾಚಿದೇತೇನ ಚ ಪಾರಿಯಾತ್ರ ಗುಹಾಗೃಹೇ ಮೀಲಿತಲೋಚನೇನ
ವ್ಯತ್ಯಸ್ತ ಹಸ್ತ ದ್ವಿತಯೋಪವಿಷ್ಟ ದಂಷ್ಟ್ರಾಂಕುರಾಂ ಚಟ್ಟಬುಕಮ್ ಪ್ರಸುಪ್ತಮ್ [೩೦]

ಕಂಗಳನು ಮುಚ್ಚಿ
ಒಂದರ ಮೇಲೊಂದು ಚಾಚಿದ್ದ ತನ್ನ
ಮುಂಗಾಲ್ಗಳ ಮೇಲೆ ದಾಡೆಗಳನಿಟ್ಟು
ಗಲ್ಲವದು ಒತ್ತಡಕೆ ಹರಡಿಕೊಂಡಂತಿರಲು
ಪಾರಿಯಾತ್ರದ ಪರ್ವತಾಗ್ರದ ತನ್ನ ಗೃಹಮೆಂಬ
ಗುಹೆಯೊಳಗೆ ಮಲಗಿರ್ದುದಾ ಸಿಂಹವು [೩೦]

ಇಲ್ಲಿ ಕವಿ ಪರ್ವತದ ಗುಹೆಯೆಂಬ ಗೃಹದಲ್ಲಿ ನಿದ್ರಾನುಭವದಲ್ಲಿದ್ದ ಸಿಂಹದ ಚಿತ್ರವನ್ನು ಸಿಂಹ ಜಾತಿಯ ನಿದ್ರಾವಸ್ಥೆಯ ಸ್ಥಿತಿಗೆ ತಕ್ಕಂತೆ ನೀಡಿದ್ದಾನೆ.

ಈಗ ಇನ್ನೊಂದು ಉದಾಹರಣೆ

ಗ್ರಿವಾಭಂಗಾಭಿರಾಮಂ ಮುಹುರನುಪತತಿ ಸ್ಯಂದನೇ ದತ್ತದೃಷ್ಟಿಃ
ಪಶ್ಚಾರ್ಧೇನ ಪ್ರವಿಷ್ಟಃ ಶರಪತನ ಭಯಾದ್ ಭೂಯಸಾ ಪೂರ್ವಕಾಯಮ್|
ದರ್ಭೈರರ್ಧಾವಲೀಢೈಃ ಶ್ರಮವಿವೃತ ಮುಖಭ್ರಂಶಿಭಿಃ ಕೀರ್ಣವರ್ತ್ಮಾ.
ಪಶ್ಯೋಽದಗ್ರ ಪ್ಲುತತ್ವಾದ್ವಿಯತಿ ಬಹುತರಂ ಸ್ತೋಕಮುರ್ವ್ಯಾಂ ಪ್ರಯಾತಿ [೩೧]
[ಶಾಕುಂತಲ-1-7]

ಕೊರಲಂ ತಾಂ ಕೊಂಕುಗೈಯುತ್ತಡಿಗಡಿಗೊಡನೈತರ್ಪತೇರಲ್ಲಣಂ ನ
ಟ್ಟಿರೆ ನೋಟಂ ಬಾಣಪಾತಕ್ಕಗಿದಿರುಕಿಸುತೆ ಪೃಷ್ಠಮಂ ಮಾರ್ಗದೊಳ್ತೀ

ವಿರೆ ನೀಡುಂಬಿಟ್ಟಬಾಯಿಂದುದಿರ್ವರೆಮೆಲ್ದಿರ್ದ ದರ್ಭಾಂಕುರಂಗಳ್
ಧರೆಯಲ್ಲೋರೊರ್ಮೆ ಕಾಲಿಟ್ಟಹಹ ನಿರುಕಿಸ್ಸೆ ಬಾನೊಳೇ ಪಾರಿಪೋಕುಂ [೩೧]
[ಬಸವಪ್ಪಶಾಸ್ತ್ರಿಗಳ ಅಭಿಜ್ಞಾನ ಶಾಕುಂತಲ]

ಇದನ್ನು ಬೇರೊಂದು ರೀತಿಯಿಂದ ವಿಸ್ತರಿಸಲಾಗುವುದು (ವಿವರಿಸು)

ರಸೋದ್ದೀಪನ ಸಾಮರ್ಥ್ಯ ವಿನಿಬಂಧನ ಬಂಧುರಮ್।
ಚೇತನಾನಾಮಮುಖ್ಯಾನಾಂ ಜಡಾನಾಂ ಚಾಪಿ ಭೂಯಸಾ॥ [8]

ಗೌಣಚೇತನ ಪದಾರ್ಥಗಳು(ಅಮುಖ್ಯ ಚೇತನ ಪಶುಪಕ್ಷಿ ಸಿಂಹಾದ್ರಿ) ಹಾಗೂ ಹೆಚ್ಚಾಗಿ ಜಡ ಪದಾರ್ಥಗಳನ್ನು ರಸವನ್ನು ಉದ್ದೀಪಿಸಲು ಸಮರ್ಥವಾಗುವ ರೀತಿಯಲ್ಲಿ ವರ್ಣಿಸಿದಾಗ, ಅವು ಅತ್ಯಂತ ಮನೋಹರವೆನಿಸುತ್ತವೆ [8]

ಕವಿಗಳು ಗೌಣ ಚೇತನ ಪದಾರ್ಥಗಳ ವಾಸ್ತವ ಸ್ವರೂಪವನ್ನು ಪ್ರಸ್ತುತ ಪದಾರ್ಥದ ಉದ್ದೇಶಕ್ಕನುಗುಣವಾಗಿ ವರ್ಣಿಸಬೇಕು. ಅದು ಹೇಗೆ ಎಂದರೆ ರಸವನ್ನು ಉದ್ದೀಪನಗೊಳಿಸಲು ಸಮರ್ಥವಾಗುವ ರೀತಿಯಲ್ಲಿ ವರ್ಣಿಸಬೇಕು. ಇಲ್ಲಿ ರಸಗಳು ಎಂದರೆ, ಶೃಂಗಾರವೇ ಮೊದಲಾದುವು. ಅವುಗಳ ಉದ್ದೀಪನ ಎಂದರೆ, ಅವುಗಳ ಉಲ್ಲಾಸ-ಪರಿಪುಷ್ಟವಾಗುವುದು. ಕವಿಯ ಸೃಜನಶೀಲ ಕಲೆಯನ್ನು ಅದು ಅವಲಂಬಿಸಿದೆ. ಕವಿಯ ಸೃಜನ ಕಲೆಯಿಂದ ರಸಗಳು ಉದ್ದೀಪ್ತವಾಯಿತೆಂದರೆ, ಅದು ರಸಿಕರ ಆಹ್ಲಾದಕ್ಕೆ ಕಾರಣವಾಗುತ್ತದೆ ಉದಾ:

ಚೂತಾಂಕುರಾಸ್ವಾದ ಕಷಾಯ ಕಂಠಃ ಪುಂಸ್ಕೋಕಿಲೋ ಯನ್ಮಧುರಂ ಚುಕೂಜ
ಮನಸ್ವಿನೀಮಾನ ವಿಘಾತದಕ್ಷಂ ತದೇವ ಜಾತಂ ವಚನಂ ಸ್ಮರಸ್ಯ [೩೨]
[ಕುಮಾರಸಂಭವ-3-32]

ಮಾಂದಳಿರ ಸವಿಯುಂಡು
ಆರಕ್ತಕಂಠವಾದಾ ಗಂಡುಕೋಗಿಲೆಗೈದ
ಮಧುರಕೂಜನವೆ
ಮಾನಿನಿಯರ ಗರ್ವವನು ಭಂಗಿಸುವ
ಮನುಮಥನ ಆದೇಶ ತಾನಾದುದು [೩೨]

ಹೆಚ್ಚಾಗಿ ಜಡಪದಾರ್ಥಗಳಾದ, ಜಲ, ವೃಕ್ಷ, ವಸಂತವೇ ಮೊದಲಾದುವು ರಸಗಳನ್ನು ಉದ್ದೀಪನಗೊಳಿಸುವ ಸಾಮರ್ಥ್ಯವನ್ನು ಹೊಂದುವ ರೀತಿಯಲ್ಲಿ ಇವುಗಳ ವರ್ಣನೆ ಇರಬೇಕು.

ಇದಮಸುಲಭ ವಸ್ತು ಪ್ರಾರ್ಥನಾ ದುರ್ನಿವಾರಂ
ಪ್ರಥಮಮಪಿ ಮನೋ ಮೇ ಪಂಚಬಾಣಃ ಕ್ಷಿಣೋತಿ।
ಕಿಮುತ ಮಲಯವಾತೋನ್ಮೂಲಿತಾ ಪಾಂಡುಪತ್ರೈ-
ರುಪವನ ಸಹಕಾರೈರ್ದರ್ಶಿತೇಷ್ವಂಕುರೇಷು [೩೩]

[ವಿಕ್ರಮೋರ್ವಶೀಯ - III - 6]

ಸುಲಭವಲ್ಲದ ವಸ್ತುವನು ಬಯಸುವ
ನನ್ನೀ ಮನವ ತಡೆಯಲು ಆರೆನು
ಇಂಥ ಇದನೀಗಾಗಲೇ ಪಂಚಬಾಣನು
ಘಾತಿಸುತಿರುವನು
ಮಲಯಮಾರುತವು ಬೀಸಿ ಉಪವನದ
ಮಾಮರಂಗಳ ಹಳದಿ ಎಲೆಗಳನೆಲ್ಲ ಉದುರಿಸಿ
ಹೊಸ ಚಿಗುರ ಹೊಮ್ಮಿಸಿದ ಬಳಿಕ
ಎನಗಿನ್ನೇನು ಗತಿಯೋ ಕಾಣೆನಾ [೩೩]

ಅಥವಾ

ಉದ್ಭೇದಾಭಿಮುಖಾಂಕುರಾಃ ಕುರವಕಾಃ ಶೈವಾಲ ಜಾಲಾಕುಲ-
ಪ್ರಾಂತಂ ಭಾಂತಿ ಸರಾಂಸಿ ಫೇನಪಟಲೈಃ ಸೀಮಂತಿತಾಃ ಸಿಂಧವಃ|
ಕಿಂಚಾಸ್ಮಿನ್ ಸಮಯೇ ಕೃಶಾಂಗಿ ವಿಲಸತ್ಕಂದರ್ಪಕೋದಂಡಿಕ
ಕ್ರೀಡಾ ಭಾಂಜಿ ಭವಂತಿ ಸಂತತಲತಾಕೀರ್ಣಾನ್ಯರಣ್ಯಾನ್ಯಪಿ [೩೪]

ಅಂಕುರಗಳಿನ್ನೇನು ಹೊರ ಹೊಮ್ಮುವಂತಿಹವು
ಕೇಸರ ವೃಕ್ಷಗಳು.
ದಡಗಳೆಡೆಯಲ್ಲಿ ಪಾಚಿ ಬೆಳೆದು
ಕಂಗೊಳಿಸುತಿವೆ ಕಾಸಾರಗಳು
ನೊರೆಯ ರಾಶಿಗಳಿಂದ ಇಬ್ಭಾಗಗೊಂಡಂತಿಹವು
ಸಾಗರಗಳು
ಓ ನಲ್ಲೆ, ಲತೆಗಳಿಂದಿಡಿಕಿರದ ಅರಣ್ಯಗಳು ಕೂಡ
ಸುಂದರ ಧನುರ್ಧಾರಿ
ಕಂದರ್ಪನಾಡುಂಬೊಲವಾಗಿಹವು [೩೪]

[ಈ ಶ್ಲೋಕಗಳಲ್ಲಿ ಜಲ, ವೃಕ್ಷ ಮತ್ತು ವಸಂತವೇ ಮೊದಲಾದ ಅಚೇತನ ಪದಾರ್ಥಗಳನ್ನು ಕೂಡ ಉದ್ದೀಪನ ವಿಭಾವದ ರೂಪದಲ್ಲಿ ವರ್ಣಿಸಲಾಗಿದೆ]

ಇದುವರೆಗೆ ಪ್ರಕೃತಿಯಲ್ಲಿ ವಸ್ತುಗಳು ವಾಸ್ತವವಾಗಿ ಇರುವಂತೆ ಅವುಗಳ ಸ್ವಾಭಾವಿಕ ಸೌಂದರ್ಯವನ್ನು ವಿವರಿಸಿದ್ದಾಯಿತು. ಈಗ ಅದನ್ನು ಉಪ ಸಂಹರಿಸಲಾಗುವುದು.

ಶರೀರಮಿದಮರ್ಥಸ್ಯ ರಾಮಣೀಯಕ ನಿರ್ಭರಮ್|
ಉಪಾದೇಯತಯಾ ಜ್ಞೇಯಂ ಕವೀನಾಂ ವರ್ಣನಾಸ್ಪದಂ [9]

ಕವಿಗಳು ವರ್ಣನೀಯ ವಸ್ತುವಿನ ಶರೀರವನ್ನು ಸೌಂದರ್ಯದಿಂದ ಪರಿಪೂರ್ಣವಾದದ್ದೆಂದೂ, ಅವರ ವರ್ಣನ ಕೌಶಲದ ಉದ್ದೇಶವನ್ನು ಈಡೇರಿಸುತ್ತಿರುವುದಾಗಿ ಭಾವಿಸಿ ಅದನ್ನು ಉಪಾದೇಯ ವೆಂದು ತಿಳಿಯಬೇಕು [9]

ಕಾವ್ಯ ವಸ್ತುವಿನ ಶರೀರವು ಅಂದರೆ, ವರ್ಣನೀಯ ವಸ್ತುವು ಉಪದೇಯವಾದದ್ದೆಂದು ಕವಿಗಳು ತಿಳಿಯಬೇಕು. ಇದು ಎರಡು ವಿಶೇಷಣಗಳಿಂದ ಶೋಭಿತವಾಗಿದೆ. ಮೊದಲನೆಯದಾಗಿ ಅದು ಸೌಂದರ್ಯದಿಂದ ಅಥವಾ ರಮಣೀಯತೆಯಿಂದ ತುಂಬಿ ತುಳುಕುತ್ತಿರಬೇಕು. ಅಂದರೆ ಅದು ಎಲ್ಲ ದೋಷಗಳಿಂದ ಮುಕ್ತವಾಗಿ ಸಹೃದಯರಿಗೆ ಆಹ್ಲಾದವನ್ನುಂಟುಮಾಡುವ ಸಾಮರ್ಥ್ಯದಿಂದ ಕೂಡಿರಬೇಕು.

ವರ್ಣನೆಗೆ ಕಾರಣವಾದ ಅಭಿಧಾವ್ಯಾಪಾರದತ್ತ ಕವಿಗಳನ್ನು ಆಕರ್ಷಿಸಲು ಇದೊಂದೇ ಸಾಕು. ಕಾವ್ಯವಸ್ತು ಆ ರೀತಿಯಲ್ಲಿ ಸ್ವಾಭಾವಿಕ ಸೌಂದರ್ಯದಿಂದ ಕೂಡಿದ್ದಾಗ, ಅದು ಅಲಂಕೃತಗೊಳ್ಳಲು ಅರ್ಹವಾಗುತ್ತದೆ. ಈ ರೀತಿ ಅಲಂಕಾರಗಳನ್ನು ಸೇರಿಸಿದಾಗ ಅದು ಪಡೆದುಕೊಳ್ಳುವ ಶೋಭೆಯು ಮುಖ್ಯ ಅಥವಾ ಯಥಾರ್ಥಶೋಭೆಯಲ್ಲ; ಉಪಶೋಭೆ ಎನಿಸಿಕೊಳ್ಳುತ್ತದೆ. (ಅವುಗಳದೇ ಆದ ಹೊಸ ರೂಪವನ್ನು ಪಡೆದುಕೊಳ್ಳುತ್ತದೆ). ಇದನ್ನು ಬೇರೊಂದು ರೀತಿಯಿಂದ ವಿವೇಚಿಸಲಾಗುವುದು.

ಧರ್ಮಾದಿ ಸಾಧನೋಪಾಯ ಪರಿಸ್ಪಂದ ನಿಬಂಧನಮ್।
ವ್ಯವಹಾರೋಚಿತಂ ಚಾನ್ಯಲ್ಲಭತೇ ವರ್ಣನೀಯತಾಮ್[೧೦]

ಕವಿಯ ಕಲಾ ವಿಷಯವಾಗುವಂಥ ಇನ್ನೊಂದು ಪ್ರಕಾರದ ಕಾವ್ಯವಸ್ತುವಿದೆ. ಧರ್ಮ, ಅರ್ಥ, ಕಾಮ, ಮೋಕ್ಷಾದಿ ಚತುರ್ವಿಧ ಪುರುಷಾರ್ಥಗಳ ಸಾಧನೋಪಾಯಗಳಾಗಿ ಜನರ ಲೋಕ ವ್ಯವಹಾರದ ಬದುಕಿಗೆ ಉಚಿತವಾದ ಹಾಗೂ ಅವರು ಅನುಸರಿಸಬಹುದಾಂಥ ವಸ್ತು ಅದು. [10]

ಇನ್ನೊಂದು ಪ್ರಕಾರದ ಕಾವ್ಯ ವಸ್ತುವಿದೆ, ಅದು ಮನುಷ್ಯರ ನಡವಳಿಕೆ ಅಥವಾ ಸಾಮಾಜಿಕ ನಡವಳಿಕೆಗೆ ಸಂಬಂಧಿಸಿದ್ದು. ಚೇತನ ಮತ್ತು ಅಚೇತನ ಪದಾರ್ಥಗಳ ಲೋಕವ್ಯವಹಾರ ಯೋಗ್ಯವಾದ ಸ್ವರೂಪ ಕೂಡ ಕವಿಗಳ ಕಾವ್ಯವ್ಯಾಪಾರದ ವಿಷಯವಾಗುತ್ತದೆ. ಯಾವ ರೀತಿಯಲ್ಲಿ ಎಂದರೆ, ಧರ್ಮ, ಅರ್ಥ, ಕಾಮ, ಮೋಕ್ಷಾದಿ ಚತುರ್ವಿಧ ಪುರುಷಾರ್ಥಗಳನ್ನು ಸಾಧಿಸುವ ಸಾಧನಗಳಾಗಿ ಶೋಭಿತವಾಗುತ್ತವೆ.

ಇದರ ಅಭಿಪ್ರಾಯವೆಂದರೆ ಕಾವ್ಯದಲ್ಲಿ ವರ್ಣಿತವಾಗುವ ಮುಖ್ಯ ಚೇತನಾದಿ (ದೇವಾಸುರಗಂಧರ್ವ ವಿದ್ಯಾಧರ) ಸಮಸ್ತ ಪದಾರ್ಥಗಳು ಚತುರ್ವರ್ಗ ಪುರುಷಾರ್ಥಗಳನ್ನು ಸಂಪಾದಿಸುವ ಸಾಧನಗಳಾಗಿ ಪ್ರಧಾನವಾಗಿ ವರ್ಣಿತವಾಗುತ್ತವೆ. ಹಾಗೂ ಅಪ್ರಧಾನ (ಗೌಣ) ಚೇತನ ರೂಪಗಳು ಕೂಡ (ಪಶುಪಕ್ಷಿ ಆದಿ ತಿರ್ಯಕ್) ಧರ್ಮಾದಿ ಪುರುಷಾರ್ಥಗಳನ್ನು ಸಾಧಿಸುವ ಸಾಧನಗಳಾಗಿ, ತಮ್ಮ ವ್ಯಾಪಾರದ ಪ್ರಾಧಾನ್ಯದಿಂದಲೇ ಕವಿಗಳ ವರ್ಣನೆಯ ವಿಷಯಗಳಾಗಿ ಬಿಡುತ್ತವೆ. ಅಂದರೆ ಇದರರ್ಥ ಕಾವ್ಯದಲ್ಲಿ ವರ್ಣಿತವಾಗುವ ಪ್ರಧಾನ ಚೇತನ ವಸ್ತುಗಳೆಲ್ಲವೂ ಅವುಗಳ ಕ್ರಿಯೆಯಲ್ಲಿ ಧರ್ಮಾದಿ ಪುರುಷಾರ್ಥಗಳನ್ನು ಸಾಧಿಸುವಲ್ಲಿ ಇತರೆಯವರಿಗೆ ಮಾದರಿಗಳೆಂಬಂತೆ ಚಿತ್ರಿತವಾಗಬೇಕು. ಗೌಣಚೇತನ ಪದಾರ್ಥಗಳು ಕೂಡ, ಅದೇ ಪುರುಷಾರ್ಥಗಳ ಸಾಧನೆಗೆ ನೆರವಾಗುವುದರಿಂದ ಅದೇ ವಿಧಾನದಲ್ಲಿ ಚಿತ್ರಿತವಾಗಬೇಕು.

ಅದೇ ಕಾರಣದಿಂದಲೇ ಶೂದ್ರಕ ಮಹಾರಾಜನೇ ಮೊದಲಾದ ರಾಜರುಗಳು, ಶುಕನಾಸನೇ ಮೊದಲಾದ ಮಂತ್ರಿಪ್ರಮುಖರ ಚಾರಿತ್ರ್ಯವನ್ನು ಚತುರ್ವಿಧ ಪುರುಷಾರ್ಥಗಳ ಅನುಷ್ಠಾನದ ಉಪದೇಶದ ಸಲುವಾಗಿಯೇ ಚಿತ್ರಿಸಲಾಗಿದೆ ಹಾಗೂ ಕಾವ್ಯಗಳಲ್ಲಿ ಗೌಣಚೇತನಗಳಾದ ಆನೆ, ಜಿಂಕೆ ಮೊದಲಾದುವುಗಳನ್ನು ಯುದ್ಧ, ಬೇಟೆ ಇತ್ಯಾದಿಗಳಲ್ಲಿ ಅವುಗಳ ಪಾಲ್ಗೊಳ್ಳುವಿಕೆಗೆ ಸಂಬಂಧಿಸಿದಂತೆ ವರ್ಣಿಸಲ್ಪಟ್ಟಿರುವುದು ಕಂಡುಬರುತ್ತದೆ. ಇದೇ ಕಾರಣಕ್ಕಾಗಿ ಆ ರೀತಿಯ ಸ್ವರೂಪದ ವರ್ಣನೆಯ ಪ್ರಾಧಾನ್ಯದಿಂದ, ಕಾವ್ಯ, ಕಾವ್ಯಸಾಮಗ್ರಿ, ಮತ್ತು ಕವಿಯೊಂದಿಗೆ, ಚಿತ್ರ, ಚಿತ್ರಸಾಮಗ್ರಿ ಮತ್ತು ಚಿತ್ರಕಾರನಿಗೆ ಇರುವ ಸಾಮ್ಯವನ್ನು ಕುರಿತು ಈ ಮೊದಲೇ ಪ್ರತಿಪಾದಿಸಲಾಗಿದೆ. (ಎರಡರಲ್ಲೂ ಆಯ್ದ ಕ್ರಿಯೆಗಳಿರುತ್ತವೆ). ಯಾವುದನ್ನು ಅಲಂಕಾರ್ಯ ಹಾಗೂ ವರ್ಣನ ಕಲೆಗಳೆಲ್ಲದರ ಶರೀರವೆಂದು ಪರಿಗಣಿಸಬಹುದೋ ಅದು ಸ್ವಭಾವ ಪ್ರಾಧಾನ್ಯದಿಂದ ಮತ್ತು ರಸಪ್ರಾಧಾನ್ಯದಿಂದ ಎಂದು ಎರಡು ಬಗೆ. ಎರಡೂ ತಮ್ಮದೇ ಆದ ಸಹಜ ಸೌಕುಮಾರ್ಯ ಸ್ವರೂಪವನ್ನು ಹೊಂದಿರುವಂಥವು. ಇವೆರಡರಲ್ಲಿ ಯಾವುದೊಂದನ್ನೂ ಅಲಂಕಾರವೆಂದು ಪರಿಗಣಿಸುವಂತಿಲ್ಲ, ಅಲಂಕಾರ್ಯವೇ. ಇವೆರಡರಲ್ಲಿ ಪದಾರ್ಥಗಳ ಸ್ವಾಭಾವಿಕ ಸ್ವರೂಪವನ್ನು ಹೇಗೆ ಅಲಂಕಾರವೆಂದು ಪರಿಗಣಿಸಲಾಗುವುದಿಲ್ಲ ಎಂಬುದನ್ನು ಈಗಾಗಲೇ ಪ್ರತಿಪಾದಿಸಲಾಗಿದೆ. ಇದೀಗ ಎರಡನೆಯದಾದ ಪ್ರಧಾನ ಚೇತನ ಪದಾರ್ಥಗಳ ಕ್ರಿಯೆಗಳಲ್ಲಿ ರಸಗಳು ವರ್ಣಿತವಿಷಯಗಳಾಗಿರುವುದನ್ನೂ ಅಲಂಕಾರವೆಂದು ಎಂದಿಗೂ ಪರಿಗಣಿಸಲು ಸಾಧ್ಯವಿಲ್ಲವೆಂಬುದನ್ನು ವಿಚಾರಿಸಲಾಗುವುದು. ಅದು ಕೂಡ ಅಲಂಕಾರವೆಂದು ಹೇಳುವ ಇತರೆ ಆಲಂಕಾರಿಕರ ವಾದವನ್ನು ನಿರಾಕರಿಸಲಾಗುವುದು.

ಅಲಂಕಾರೋ ನ ರಸವತ್ ಪರಸ್ಯಾಪ್ರತಿಭಾಸನಾತ್।
ಸ್ವರೂಪಾದತಿರಿಕ್ತಸ್ಯ ಶಬ್ದಾರ್ಥಾಸಂಗತೇರಪಿ[11]

ವರ್ಣಿತ ಪದಾರ್ಥದ ಸ್ವರೂಪಕ್ಕಿಂತ ಭಿನ್ನವಾದದ್ದರ ಬೋಧವನ್ನು ಉಂಟುಮಾಡದೆ ಇರುವುದರಿಂದ ಹಾಗೂ ಶಬ್ದ ಮತ್ತು ಅರ್ಥಗಳು ಪರಸ್ಪರ ಸಂಗತವಾಗದಿರುವುದರಿಂದಲೂ 'ರಸವತ್' ಒಂದು ಅಲಂಕಾರವಲ್ಲ. [11]

'ರಸವತ್' ಎನ್ನುವುದು ಒಂದು ಅಲಂಕಾರವಲ್ಲ. ಹಿಂದಿನ ಆಲಂಕಾರಿಕರು ಯಾವುದನ್ನು 'ರಸವತ್' ಎಂದು ಹೇಳುತ್ತಾರೋ ಅದರ ಅಲಂಕಾರತ್ವವು ಉಚಿತವಲ್ಲ. (ಅಲಂಕಾರವೆಂದು ಕರೆಸಿಕೊಳ್ಳಲು ಯೋಗ್ಯವೇ ಅಲ್ಲ). ಯಾವ ಕಾರಣದಿಂದ ಎಂದರೆ, ವರ್ಣ್ಯಮಾನ ವಸ್ತುವಿನ ಸ್ವರೂಪವೇನಿದೆ, ಅದಕ್ಕಿಂತ ಭಿನ್ನವಾದದ್ದಾವುದರ ಬೋಧೆಯೂ ಆಗದ ಕಾರಣದಿಂದ. ಇದರ ಆಶಯವೇನೆಂದರೆ, ಎಲ್ಲ ಶ್ರೇಷ್ಠ ಕವಿಗಳ ವಾಕ್ಯಗಳಲ್ಲಿ, ಇದು ಅಲಂಕಾರ್ಯ ಇದು ಅಲಂಕರಣ ಎಂದು ಗೊತ್ತುಪಡಿಸುವ ಬಗ್ಗೆ ಸಹೃದಯರ ಮನಸ್ಸಿನಲ್ಲಿ ಸ್ಪಷ್ಟತೆ ಇರುತ್ತಿತ್ತು. ಆದರೆ 'ರಸವತ್ ಅಲಂಕಾರ'ದಿಂದ ಕೂಡಿದ ಕಾವ್ಯ [ದ ಹಾಗೆ ಇರುವ ವಾಕ್ಯ] ಎಂಬ ಮಾತನ್ನು, ನಾವು ಎಷ್ಟೆಲ್ಲ ಸೂಕ್ಷ್ಮವಾಗಿ ಚಿಂತಿಸಿ ಪ್ರಯತ್ನ ಪಟ್ಟರೂ ಈ ಮೂಲಭೂತ ವ್ಯತ್ಯಾಸದ ಬಗ್ಗೆ ಏನೊಂದೂ

ತಿಳಿಯುವುದಿಲ್ಲ.

ಒಂದು ವೇಳೆ, ಶೃಂಗಾರಾದಿಗಳೇ ಪ್ರಧಾನವಾಗಿ ವರ್ಣಿತವಾಗಿರುವ ಅಲಂಕಾರ್ಯ ಎಂದಾದರೆ, ಬೇರಾವುದಾದರೊಂದು 'ಅಲಂಕಾರ' ರೂಪದಲ್ಲಿರಬೇಕೆಂಬುದು ಯುಕ್ತಿಯುಕ್ತ. ಅಥವಾ ಶೃಂಗಾರಾದಿಗಳ ಸ್ವರೂಪವೇ ಸಹೃದಯರ ಹೃದಯದಲ್ಲಿ ಆನಂದವನ್ನುಂಟು ಮಾಡುವ ಕಾರಣದಿಂದ ಅಲಂಕರಣ ಎಂದು ಕರೆಯುವುದಾದಲ್ಲಿ ಆಗಲೂ ಕೂಡ ಅದಕ್ಕಿಂತ ಭಿನ್ನವಾದ 'ಅಲಂಕಾರ್ಯ'ವೊಂದನ್ನು ಹೆಸರಿಸುವ ಹೊಣೆಗಾರಿಕೆ ಆಲಂಕಾರಿಕನಾದಗುತ್ತದೆ. ರಸವದಲಕಾರದ ಲಕ್ಷಣ ನಿರೂಪಣೆಯಲ್ಲಾಗಲಿ, ಅದರ ಲಕ್ಷ್ಯ ಪದ್ಯಗಳೆಂದು ಉದಾಹರಿಸಿರುವುದರಲ್ಲಾಗಲಿ, ಪ್ರಾಚೀನ ಆಲಂಕಾರಿಕರಲ್ಲಿ ಇಂಥ ಒಂದು ಸ್ಪಷ್ಟ ವಿವೇಚನೆಯ ಎಳೆಯೂ ಸಿಕ್ಕುವುದಿಲ್ಲ. ಉದಾ : ರಸವದಲಂಕಾರದ ಹೆಸರಾಂತ ಲಕ್ಷಣವನ್ನು (ಭಾಮಹ) ನೋಡಬಹುದು.

ರಸವದ್ದರ್ಶಿತಸ್ಪಷ್ಟ ಶೃಂಗಾರಾದಿ [೩೫] ಭಾಮಹ III - 6

ಶೃಂಗಾರವೇ ಮೊಲಾದ 'ರಸಗಳು' ಸ್ಪಷ್ಟರೂಪದಲ್ಲಿ ಅಭಿವ್ಯಕ್ತವಾಗಿದ್ದರೆ 'ರಸವತ್' ಎನಿಸುತ್ತದೆ. [೩೫]

ಇದು (ಭಾಮಹ ಮತ್ತು ಉದ್ಭಟನ ಪ್ರಕಾರ) ರಸವದಲಂಕಾರದ ಲಕ್ಷಣ. ಇದರ ಇನ್ನೊಂದು ಪಾಠಾಂತರವಿದೆ - ಸ್ಪೃಷ್ಟಾ ಎಂದು. ಪಾಠಾಂತರ ಯಾವುದೇ ಇರಲಿ ಬಹುವ್ರೀ ಹಿ ಸಮಾಸದ ರೀತ್ಯಾ ಅರ್ಥೈಸಿದರೆ ಕಾವ್ಯದ ಹೊರತು (ಅನ್ಯಪದಾರ್ಥಪ್ರಧಾನವಾದ) ಆ ಸಮಾಸದಿಂದ ಸೂಚಿತವಾಗುವ ಬೇರೆ ಯಾವುದೇ ಪದಾರ್ಥ ಕಂಡುಬರುವುದಿಲ್ಲ. ಅಥವಾ ಹೀಗೆ ಹೇಳಿದರೆ ಆ (ರಸವತ್) ಅಲಂಕಾರ ಕಾವ್ಯವೇ ಎಂದು ಹೇಳಿದರೆ ಆಗಲೂ ಸರಿಯಾಗಿ ಅನ್ವಯವಾಗುವು ದಿಲ್ಲ. ಕಾರಣ ಕಾವ್ಯದ ಅವಯುವಗಳು- ಶಬ್ದ ಮತ್ತು ಅರ್ಥ;- ಈ ಘಟಕ ಗಳಿಗೆ ಪ್ರತ್ಯೇಕವಾಗಿ ಅಲಂಕರಣಗಳಿವೆ ಎಂದು (ಕಾವ್ಯಾಲಂಕಾರ ಗ್ರಂಥದಲ್ಲಿ) ಪ್ರಾರಂಭದಲ್ಲಿ ಹೇಳಿ, ಈಗ ಕಾವ್ಯವೇ ಅಲಂಕರಣ ಎಂದು ಉಪಸಂಹಾರ ಮಾಡಿದ್ದೇ ಆದರೆ ಉಪಕ್ರಮ ಮತ್ತು ಉಪಸಂಹಾರಗಳಲ್ಲಿ ಅಂತರ್ವಿರೋಧದ ದೋಷ ಉಂಟಾಗುತ್ತದೆ. ಅಥವಾ ಸಮಾಸ ಪದವನ್ನು ಯಾವುದರಿಂದ ಶೃಂಗಾರಾದಿಗಳು ಸ್ಪಷ್ಟರೂಪದಲ್ಲಿ ಕಾಣಿಸಲ್ಪಡುತ್ತವೆಯೋ ಅದು ರಸವದಲಂಕಾರ - ಎಂದು ವಿಗ್ರಹ ವಾಕ್ಯ ಮಾಡಿ ಅರ್ಥೈಸ ಹೋದರೆ, - ಆಗ 'ಅದು ಯಾವುದು' ಎಂದು ಹೇಳಬೇಕಾಗುತ್ತದೆ. ಒಂದು ವೇಳೆ ಅದಕ್ಕೆ ಉತ್ತರ ಪ್ರತಿಪಾದನ ವೈಚಿತ್ರ್ಯವೇ ಅದು - ಎಂದಾದರೆ ಅದನ್ನು ಸರಿಯಾಗಿ ಸಮರ್ಥಿಸಿಕೊಳ್ಳಲಾಗುವುದಿಲ್ಲ. ಕಾರಣ - ಪ್ರತಿಪಾದ್ಯಮಾನ (ಅಲಂಕಾರ್ಯ)ಕ್ಕಿಂತ ಭಿನ್ನವಾಗಿ ಅದರ ಸೌಂದರ್ಯಕ್ಕೆ ಕಾರಣವಾದ (ಅಲಂಕಾರ) ಪ್ರತಿಪಾದನ ವೈಚಿತ್ರ್ಯ' ಬೇರೆಯದೇ ಇರುತ್ತದೆಂದು ಒಪ್ಪಬೇಕಾಗುತ್ತದೆ. ಪ್ರತಿಪಾದ್ಯವೇ ಅಂತೂ ಅಲ್ಲ.

ಅಥವಾ ಒಂದು ವೇಳೆ, ಸ್ಪಷ್ಟ ರೂಪದಲ್ಲಿ ತೋರಿಸಲಾದ ರಸಗಳ ಪ್ರತಿಪಾದನ ವೈಚಿತ್ರ್ಯವೇ ಅದು ಎಂದು ಅರ್ಥೈಸಿದರೆ, ಆಗಲೂ ಸರಿಯಾಗಿ ಅರ್ಥೈಸಿದಂತಾಗುವುದಿಲ್ಲ, ಕಾರಣ ಶೃಂಗಾರಾದಿ ರಸಗಳ ಸ್ಪಷ್ಟ ಪ್ರತಿಪಾದನೆ ಎಂದರೆ, ಅವುಗಳ ಸ್ವರೂಪವೇ (ನಿಷ್ಪತ್ತಿಯೇ) ಎಂದಂತಾಯಿತು.

ಒಂದು ವೇಳೆ ಕಷ್ಟಪಟ್ಟು ರಸವಂತ ಕಾವ್ಯಗಳ ಅಲಂಕಾರವೇ ಅದು (ರಸವದಲಂಕಾರ) ಎಂದು ಅರ್ಥೈಸಿದರೆ ಆಗಲೂ ಏನೂ ಹೇಳಿದಂತಾಗುವುದಿಲ್ಲ.

ಅಥವಾ ಅದೇ ಅಲಂಕಾರವೇ ಕಾವ್ಯಕ್ಕೆ ರಸವತ್ವವನ್ನುಂಟುಮಾಡುತ್ತದೆ ಎಂದುಅರ್ಥೈಸಿದರೆ ಆಗ ಅದು 'ರಸವತ್'ನ ಅಲಂಕಾರವಾಗುವುದಿಲ್ಲ; 'ರಸವಾನ್' ಎಂಬುದೇ ಅಲಂಕಾರ ಆಗುತ್ತದೆ. ಅದರ ಪರಿಣಾಮವಾಗಿ ಕಾವ್ಯವೂ 'ರಸವತ್' ಆಗುತ್ತದೆ.

ಇದನ್ನು ಅರ್ಥೈಸುವ ಇನ್ನೊಂದು ವಿಧಾನವನ್ನು ಕಲ್ಪಿಸಬಹುದು. ಈ ವ್ಯಕ್ತಿಯ ಪುತ್ರನು ಅಗ್ನಿಷ್ಟೋಮಯಾಜಿಯಾಗಲಿಹನು ಎಂಬ ರೀತಿಯಲ್ಲೇ ರಸದ ಜೊತೆ ಮೊತ್ತ ಮೊದಲಿಗೆ ಸಂಬಂಧವನ್ನು ಸ್ಥಾಪಿಸಿಕೊಳ್ಳುವ ಕಾವ್ಯಕ್ಕೆ ಅನಂತರ ಆ ರಸದ ಸಂಬಂಧದಿಂದಾಗಿ ರಸವದ್ ಅಲಂಕಾರ ಎಂದು ಹೆಸರಾಯಿತು ಎನ್ನುವ ಹಾಗೆ. ಈ ಅರ್ಥವೂ ಸರಿಹೊಂದುವುದಿಲ್ಲ. ಕಾರಣ ಅಗ್ನಿಷ್ಟೋಮಯಾಜಿ ಎಂಬ ಪದದಿಂದ ಮೊದಲಿಗೆ, ಈಗಾಗಲೇ ಹಿಂದೆ ಆ ಯಾಗವನ್ನು ಮಾಡಿ ಪ್ರಸಿದ್ಧಿಯನ್ನು ಪಡೆದಿರುವ ವ್ಯಕ್ತಿಯ ಅರ್ಥ ಬರುತ್ತದೆ; ಅನಂತರ, ಆ ಯಾಗವನ್ನು ಮಾಡಲಿರುವ ವ್ಯಕ್ತಿಯಾಗಿ (ಭವಿಷ್ಯದ್ ವಾಚೀವಾಕ್ಯಾರ್ಥದೊಂದಿಗೆ ಸಂಬಂಧ ಹೊಂದುವುದರಿಂದ) ಅದರ ಅನುಭವವನ್ನು (ಅಗ್ನಿಷ್ಟೋಮ ಯಾಗದ) ಹೊಂದಲು ಸಾಧ್ಯ. ಆದರೆ ಪ್ರಸ್ತುತ ಪ್ರಯೋಗ ಆ ರೀತಿ ಅಲ್ಲ.

'ರಸವತ್' ಕಾವ್ಯದ ಅಲಂಕಾರ [ರಸವನ್ನು ಹೊಂದಿರುವ ಅಥವಾ ರಸದಿಂದ ಕೂಡಿರುವ ಕಾವ್ಯದ ಅಲಂಕಾರವೇ ರಸವದಲಂಕಾರ] ಎಂದು ಹೇಳಿದ ಕೂಡಲೇ ನಾವು ಅಲಂಕಾರ್ಯದಿಂದ ಅಲಂಕಾರದ ಕಡೆಗೆ ಹೋಗಬೇಕಾಗಿಲ್ಲ; ಕಾರಣ ಅವೆರಡೂ ಪರಸ್ಪರ ಸಂಬಂಧ ಹೊಂದಿರುವುದರಿಂದ, ಅಲ್ಲದೆ ಕಾವ್ಯದ ರಸವತ್ವವು ಅಲಂಕಾರವನ್ನು ಹಾಗೂ ಅಲಂಕಾರತ್ವವು ರಸವನ್ನು ಅವಲಂಬಿಸಿರುವುದಾದರೆ, ಆಗ ಈ ಅನ್ಯೋನ್ಯಾಶ್ರಯ ದೋಷವನ್ನು ಯಾರು ನಿವಾರಿಸಲು ಸಾಧ್ಯ?

ಅಥವಾ ಕಾವ್ಯದಲ್ಲಿ ರಸವಿದ್ದು, ಅದು ಅಲಂಕಾರವೂ ಆಗುತ್ತದೆ ಎಂಬುದು ಇದರ ಅರ್ಥ ಎನ್ನುವುದಾದರೆ ಆಗಲೂ ಅಲಂಕಾರ ಮತ್ತು ಕಾವ್ಯ ಇವೆರಡನ್ನೂ ಬಿಟ್ಟು ಮೂರನೆಯದು ಅಲ್ಲಿ ಇಲ್ಲವೇ ಇಲ್ಲ. ಈ ಇತರೆ ಪರ್ಯಾಯಗಳನ್ನು ಈಗಾಗಲೇ ನಿರಾಕರಿಸಲಾಗಿದೆ. ಲಕ್ಷಣದಷ್ಟೇ ಅದರ ಲಕ್ಷ್ಯವೂ ನಿಷ್ಪ್ರಯೋಜಕವಾದ್ದರಿಂದ ಅದನ್ನು ಪ್ರತ್ಯೇಕವಾಗಿ ಚರ್ಚಿಸಿಲ್ಲ. ಉದಾಹರಣೆಗೆ (ದಂಡಿ ನೀಡಿರುವ ಈ ಉದಾಹರಣೆ)

> ಮೃತೇತಿ ಪ್ರೇತ್ಯ ಸಂಗಂತುಂ ಯಯಾ ಮೇ ಮರಣಂ ಸ್ಮೃತಂ
> ಸೈವಾವಂತೀ ಮಯಾ ಲಬ್ಧಾ ಕಥಮತ್ರೈವ ಜನ್ಮನಿ [೩೬]
>
> ಮೃತಳಾದಳೆಂದೆ ತಿಳಿದು
> ಯಾರ ಸಮ್ಮಿಲನಕಾಗಿ
> ನಾನು ಮರಣವನು ನೆನೆದೆನೋ
> ಆ ಅವಳೆ ಅವಂತಿಕುಮಾರಿ
> ಈ ಜನ್ಮದೊಳೆ ಎಂತು ದೊರಕಿದಳೆನಗೆ? [೩೬] [ದಂಡಿ - ಕಾವ್ಯಾದರ್ಶ II - 200]

ಈ ಮೇಲಿನ ಉದಾಹರಣೆಯಲ್ಲಿ ರತಿ ಚಿತ್ತವೃತ್ತಿಯ ಪರಿಪೋಷಣೆಯಷ್ಟೇ ಇಡೀ ಶ್ಲೋಕದ ವರ್ಣನ ಯೋಗ್ಯವಾದ ಶರೀರವಾಗಿರುವುದನ್ನು ಹೊರತುಪಡಿಸಿದರೆ, ಬೇರೆ ಯಾವ ವಸ್ತುವೂ ಸ್ಪಷ್ಟವಾಗಿ ಕಂಡುಬರುವುದಿಲ್ಲ. ಆದ್ದರಿಂದ ಅದು ಮಾತ್ರ ಅಲಂಕಾರ್ಯವೆಂದು ಕರೆಸಿಕೊಳ್ಳಲು ಅರ್ಹವಾಗಿದೆ.

ಇನ್ನೊಬ್ಬರು ಮೇಲಿನ ಲಕ್ಷಣದ ಜೊತೆಗೆ ಇನ್ನೊಂದು ಗುಣವನ್ನು ಸೇರಿಸಿದ್ದಾರೆ.

ಸ್ವಶಬ್ದಸ್ಥಾಯಿ ಸಂಚಾರಿ ವಿಭಾವಾಭಿನಯಾಸ್ಪದಮ್ [೩೭]

ಸ್ವಶಬ್ದ, ಸ್ಥಾಯಿಭಾವ, ಸಂಚಾರಿಭಾವ, ವಿಭಾವ ಹಾಗೂ ಅಭಿನಯಕ್ಕೆ (ಅನುಭಾವ) ಆ ಸ್ಪದವಾದ [ರಸವನ್ನು ಸ್ಪಷ್ಟವಾಗಿ ಅಭಿವ್ಯಕ್ತಿಸುಂಥ ಶೃಂಗಾರಾದಿ ರಸವದಲಂಕಾರವಾಗುತ್ತದೆ] [೩೭]

[ಉದ್ಭಟ-ಕಾವ್ಯಾಲಂಕಾರ ಸಂಗ್ರಹ 4-3]

ಈ ಹೇಳಿಕೆಯಿಂದ ಹಿಂದಿನ ಲಕ್ಷಣವನ್ನೇ ವಿಶೇಷವಾಗಿ (ಉದ್ಭಟ ತನ್ನ ಕಾರಿಕೆಯಲ್ಲಿ ಹೇಳಿದ) ವ್ಯಾಖ್ಯಾನಿಸಿದಂತಾಗಿದೆ. ಅದರಲ್ಲಿ ರಸಗಳನ್ನು ಅವುಗಳ ಹೆಸರುಗಳಿಂದ ಪ್ರತಿಷ್ಠಿಸಲು ಸಾಧ್ಯವೆಂಬುದನ್ನು ಮೊದಲಿಗೆ ತಿಳಿದಂತಾಯಿತು (ಸ್ವಶಬ್ದಸಂಪದತ್ವ). ಆದ್ದರಿಂದ ಯಾರು ರಸ ಸರ್ವಸ್ವವನ್ನೂ ಸಮಾಹಿತವಾದ ಮನಸ್ಸಿನಿಂದ ಗ್ರಹಿಸಿದ್ದಾರೋ, ರಸದ ವಿಷಯದಲ್ಲಿ ಸಕಲವನ್ನೂ ತಿಳಿದವರಾಗಿದ್ದಾರೋ ಅಂಥ (ಪರಮಾರ್ಥವನ್ನು ಬಲ್ಲವರಾಗಿದ್ದಾರೋ) ವಿದ್ವಾಂಸರನ್ನು ಪ್ರಶ್ನಿಸಬೇಕಾಗಿದೆ. ಏನೆಂದರೆ, ಸ್ವಶಬ್ದಾಸ್ಪದತ್ವ ರಸಗಳದೋ ಅಥವಾ ರಸವತ್‌ದೋ (ರಸವನ್ನು ಹೊಂದಿರುವ - ಕಾವ್ಯದ್ದೋ) ಎಂದು. ಒಂದು ವೇಳೆ ಮೊದಲನೆಯದನ್ನು ಅವರು ಒಪ್ಪುತ್ತಾರೆಂದರೆ (ರಸು ತನ್ನ ಶಬ್ದಗಳಲ್ಲಿ ಪ್ರತಿಷ್ಠಿತವಾಗಿರುತ್ತದೆ. - ಸ್ವಶಬ್ದನಿಷ್ಠತೆ) ಆಸ್ವಾದನೆ ಮಾಡಲಾಗುವಂಥವು ರಸಗಳು. (ಯಾವುದನ್ನು ಆಸ್ವಾದನೆ ಮಾಡಲಾಗುತ್ತದೋ ಅವು) ಹಾಗೂ ಅವುಗಳು ಸ್ವಶಬ್ದ ನಿಷ್ಠಗಳು (ಅರ್ಥಾತ್ 'ರಸ'- ಶಬ್ದದಿಂದ ಅವುಗಳನ್ನು ಆಸ್ವಾದಿಸಲಾಗುತ್ತದೆ ಎಂದು ಅರ್ಥ - (ಇದು ರಸಗಳ ಸ್ವಶಬ್ದಾಸ್ಪದತ್ವದ ಅರ್ಥ) ಅಂದರೆ ಶೃಂಗಾರವೇ ಮೊದಲಾದ ಶಬ್ದಗಳಲ್ಲಿ ಅವು ಇರುತ್ತವೆ ಎಂದು ಹಾಗೂ ಅವು ಆ ರೀತಿಯಲ್ಲೇ ಸಹೃದಯರಿಗೆ ಆಸ್ವಾದ್ಯವಾಗುತ್ತವೆ. ಇನ್ನೂ ಸರಿಯಾಗಿ ವಿವರಿಸಬೇಕೆಂದರೆ, ರಸಗಳನ್ನು ಸೂಚಿಸುವ ಶಬ್ದಗಳನ್ನು ಹೇಳಿದ ಕೂಡಲೇ, ಅವು ಚೇತಸರ (ಸಹೃದಯರ) ಶ್ರೋತ್ರೇಂದ್ರಿಯದ ಮೇಲೆ ಬೀಳುತ್ತಿದ್ದಂತೆಯೇ ಸಹೃದಯರಿಗೆ ಆನಂದವನ್ನುಂಟುಮಾಡಬೇಕು. ಈ ತರ್ಕದ ಮೇರೆಗೆ, 'ಘೃತಪೂರ' - ದಂಥ (ಖಾದ್ಯ) ಪದಾರ್ಥಗಳ ಹೆಸರನ್ನು ಉಚ್ಚರಿಸಿದ ಕೂಡಲೇ ಅದರ ಆಸ್ವಾದದ ಆನಂದವನ್ನು ಉಂಟುಮಾಡಿಬಿಡುತ್ತವೆ. ಹಾಗಾಗಿ ಆ ಉದಾರ ಪುರುಷ ಮಹಾಶಯರು, ಉಪಭೋಗ ಸುಖದ ಇಚ್ಛೆಯನ್ನು ಹೊಂದಿರುವ ಯಾವುದೇ ವ್ಯಕ್ತಿಗೆ ಅದರ ಹೆಸರನ್ನು ಹೇಳಿದಷ್ಟರಿಂದಲೇ ಯಾವುದೇ ಪ್ರಯತ್ನವಿಲ್ಲದೆ, ಮೂರು, ಲೋಕಗಳ ಚಕ್ರವರ್ತಿಯ ಸಂಪತ್ ಸೌಖ್ಯ ಸಮೃದ್ಧಿ ಎಲ್ಲವನ್ನೂ ಗಳಿಸಿಕೊಡಬಲ್ಲರು. ಆ ಮಹಾಪುರುಷರಿಗೆ ನಮ್ಮ ದೊಡ್ಡ ನಮಸ್ಕಾರ!

ಈಗ ಎರಡನೆಯ ವ್ಯಾಖ್ಯಾನ ಕೂಡ ಅಷ್ಟೇನೂ ಉತ್ತಮವಲ್ಲ. 'ರಸವತ್' ಶಬ್ದದ ತದಾಸ್ಪದತ್ವ ಕೂಡ ಸಾಧ್ಯವಿಲ್ಲ. 'ರಸವತ್' (ರಸವನ್ನು ಹೊಂದಿರುವ ಕಾವ್ಯ) 'ಶೃಂಗಾರಾದಿ' ಶಬ್ದಗಳಿಂದ ಸರಿಯಾಗಿ ಸೂಚಿತವಾಗುತ್ತದೆಂದು ಹೇಳಲಾಗುವುದಿಲ್ಲ. 'ಪ್ರೇಮ'ದ ಸೌಂದರ್ಯಾಸ್ವಾದನೆಯೇ 'ಶೃಂಗಾರ' ಶಬ್ದದಿಂದ ಸೂಚಿತವಾಗುವುದು ಅಸಾಧ್ಯವೆಂದು ಈಗಾಗಲೇ ನಿರೂಪಿಸಿರುವುದರಿಂದ, ಪ್ರೇಮ (ಶೃಂಗಾರ)ದೊಂದಿಗೆ ತೀರಾ ದೂರ ಸಂಬಂಧ ಹೊಂದಿರುವ ಭಾವವನ್ನು ಅದು ಹೇಗೆ ಆ ಶಬ್ದ ನಿರೂಪಿಸಬಲ್ಲುದು? ಅದರ ಅಲಂಕಾರತ್ವವನ್ನು (ರಸ ಅಲಂಕಾರ್ಯವಾದ್ದರಿಂದ) ಈ ಮೊದಲೇ ತಿರಸ್ಕರಿಸಲಾಗಿದೆ. ಉಳಿದ ಸ್ಥಾಯಿಭಾವ ಇತ್ಯಾದಿಗಳ ವ್ಯಾಖ್ಯಾನವನ್ನು ಈ ಮೊದಲೇ ಮಾಡಲಾಗಿದೆ. ಅದನ್ನು ಮತ್ತೊಮ್ಮೆ ಚರ್ಚಿಸುವುದಿಲ್ಲ.

ರಸವದಲಂಕಾರದ ಇನ್ನೊಂದು ವ್ಯಾಖ್ಯಾನ ಇಂತಿದೆ

ರಸವದ್ರಸಸಂಶ್ರಯಾತ್ [೩೮]

ರಸದ ಸಂಶ್ರಯ (ಸಹಯೋಗ)ದಿಂದಾಗಿ 'ರಸವತ್' (ಅಲಂಕಾರ) ಆಗುತ್ತದೆ. [೩೮]

ಹೀಗೆಂದು ರಸವದಲಂಕಾರದ ಲಕ್ಷಣವನ್ನು ಯಾರೋ ಹೇಳಿದ್ದಾರೆ. ಆದರೆ ಅದೂ ಕೂಡ ತರ್ಕ ಸಂಗತವಲ್ಲ. (ಸಮಾಧಾನಕರವೆಂದು ಹೇಳಲಾಗುವುದಿಲ್ಲ). ರಸವು ಯಾವುದರ ಸಂಶ್ರಯವೋ ಅದನ್ನು ರಸಸಂಶ್ರಯ ಎಂದು ಹೇಳಬಹುದು. ಅದೇ ಸಂಶ್ರಯದ ಕಾರಣದಿಂದಾಗಿ (association) ಅದು ರಸವದಲಂಕಾರವೆನಿಸುತ್ತದೆ. ಇಷ್ಟಾದರೂ ರಸದ ಹೊರತಾಗಿ ಅಲ್ಲಿ ಇರುವುದಾವುದು (ರಸದ ಸಂಶ್ರಯವಾಗಿ) ಎಂಬುದನ್ನು ಹೇಳುವ ಹೊಣೆ ಲೇಖಕನದೇ ಆಗಿದೆ. ಒಂದು ವೇಳೆ ಕಾವ್ಯವೇ ಅದು ಎಂದು ಹೇಳಬೇಕೆಂದರೆ, ಅದನ್ನು ಈಗಾಗಲೇ ನಿರಾಕರಿಸಲಾಗಿದೆ. (ಕಾವ್ಯ ಅಲಂಕಾರವಲ್ಲ, ಕಾವ್ಯದ ಒಂದು ಭಾಗವಾದ ಶಬ್ದ ಅಥವಾ ಅರ್ಥದ ಧರ್ಮಗಳು ಅಲಂಕಾರವಾಗುತ್ತವೆ) ತನ್ನಲ್ಲಿಯೇ ಕ್ರಿಯಾವಿರೋಧವಿರುವುದರಿಂದ, ಅದರ ಅಲಂಕಾರತ್ವ ಸಿದ್ಧವಾಗುವುದಿಲ್ಲ [ಅಂದರೆ ಅದೇ ಅಲಂಕಾರವೂ ಆಗಿ, ಅಲಂಕಾರ್ಯವೂ ಆಗುವುದು]

ಸಮಾಸಪದವನ್ನು ಬೇರೆ ವಿಧಗಳಲ್ಲೂ ಬಿಡಿಸಲು ಸಾಧ್ಯ. ರಸದ ಸಂಶ್ರಯ (ಇದು ಷಷ್ಠೀ ತತ್ಪುರುಷ) ಅಥವಾ ರಸದೊಂದಿಗೆ ಸಂಶ್ರಯವಾಗುವುದು ಯಾವುದೋ ಅದು ರಸಸಂಶ್ರಯ (ಸಂಶ್ರಯ-ಆಶ್ರಯ) ಹಾಗಾದರೆ ಅದು (ಹೀಗೆ ರಸಾಶ್ರಯಿಯಾದ್ದು) ಯಾವುದು ಎಂಬುದನ್ನು ಸ್ಪಷ್ಟವಾಗಿ ಹೇಳಬೇಕಾಗುವುದು. ಈ ಲಕ್ಷಣದ ಎಲ್ಲ ಉದಾಹರಣೆಗಳೂ ಮೊದಲಿನ ಹಾಗೆಯೇ ಲಕ್ಷಣದ ದುರವಸ್ಥೆಯನ್ನೇ ಹೊಂದುವುದರಿಂದ ಅದನ್ನು ಪ್ರತ್ಯೇಕವಾಗಿ ಚರ್ಚಿಸಿಲ್ಲ.

ರಸಪೇಶಲಮ್ [೩೯][1] (ರಸದಿಂದ ಸುಂದರವಾಗಿರುವ)

'ರಸವದ್ರಸ ಸಂಶ್ರಯಾತ್' ಎಂಬುದರ ಬದಲಿಗೆ ಮೇಲಿನಂತೆ ಪಾಠವನ್ನು ಬದಲಾಯಿಸಿ ಕೊಂಡರೂ, ವ್ಯತ್ಯಾಸವೇನೂ ಆಗುವುದಿಲ್ಲ. ಅಲ್ಲದೆ ಪ್ರತಿಪಾದಕ ವಾಕ್ಯದಲ್ಲಿ ಪ್ರತಿಪಾದಿತವಾಗುವ

---

1 ದಂಡಿ ಕಾವ್ಯಾದರ್ಶ II - 275

ಪದಾರ್ಥಗಳ ಸ್ವರೂಪವು ಅಲಂಕಾರ್ಯವಾದ ರಸದ ಪ್ರವೇಶದಿಂದ ಅಲಂಕಾರ ಹೇಗಾಗುತ್ತದೆ ಎಂಬುದು ವಿಚಾರಣೀಯ. [(ಚಿನ್ನದಂಥ) ವಸ್ತುಗಳು ಅವುಗಳ ಆಕೃತಿ (ಸ್ವರೂಪ) ಬದಲಾಗದೆ, ಆಭರಣವಾಗಲು ಸಾಧ್ಯವೇ ಇಲ್ಲ ಎಂಬಂತೆ] ಒಂದು ವೇಳೆ ವಾದಕ್ಕಾಗಿ ಅದನ್ನು ಒಪ್ಪಿದರೂ, ಪ್ರಧಾನತೆ ಮತ್ತು ಗೌಣತೆಯ ವೈಪರೀತ್ಯ ಎದುರಾಗುತ್ತದೆ. [ಅರ್ಥಾತ್ ಅಲಂಕಾರ್ಯವಾಗಿದ್ದಾಗ ಪ್ರಧಾನವಾಗಿದ್ದ ಪದಾರ್ಥದ ಸ್ವರೂಪ, ಅಲಂಕಾರವಾದಾಗ ಗೌಣವಾಗಿಬಿಡುತ್ತದೆ] ಹಾಗಾಗಿ ಈ 'ರಸಪೇಶಲಮ್' ಎಂಬುದು ಸಂಗತವಾಗುವುದಿಲ್ಲ.

ಇಲ್ಲಿಯವರೆಗೆ 11ನೇ ಕಾರಿಕೆಯ ಪೂರ್ವಭಾಗವಾದ 'ಸ್ವರೂಪಾದತಿರಿಕ್ತಸ್ಯ ಪರಸ್ಯಾಪ್ರತಿಭಾಸನಾತ್' ಇದನ್ನು ವ್ಯಾಖ್ಯಾನಿಸಿ, ಕಾರಿಕೆಯಲ್ಲಿರುವ - 'ಶಬ್ದಾರ್ಥಾಸಂಗತೇರಪಿ' ಭಾಗವನ್ನು ವ್ಯಾಖ್ಯಾನಿಸಲು ತೊಡಗುತ್ತಾನೆ.

'ಶಬ್ದಾರ್ಥಾಸಂಗತೇರಪಿ' - ಶಬ್ದ ಮತ್ತು ಅರ್ಥಗಳು ಸಂಗತವಾಗದಿರುವುದರಿಂದಲೂ ರಸವದಲಂಕಾರವಾಗುವುದಿಲ್ಲ. ಶಬ್ದ ಮತ್ತು ಅರ್ಥ ಅಂದರೆ ಅಭಿಧಾನ ಮತ್ತು ಅಭಿಧೇಯಗಳ ಸಮನ್ವಯವಾಗದಿರುವುದರಿಂದ (ಅನ್ವಯ ಅಥವಾ ಸಂಬಂಧ ಸರಿಯಾಗಿ ಆಗದೆ ಇರುವುದರಿಂದ) ರಸವದಲಂಕಾರದ ಸಿದ್ಧಿಯಾಗುವುದಿಲ್ಲ. ಇಲ್ಲಿ 'ರಸವು ಯಾವುದರಲ್ಲಿ ಇದೆಯೋ' - ಈ ರೀತಿ ರಸದೊಂದಿಗೆ 'ಮತ್' ಪ್ರತ್ಯಯ ಮಾಡುವುದರಿಂದ, ಅದು 'ರಸವತ್' ಎಂದು ಕರೆಯಲ್ಪಡುವುದು ಅದರ ಅಲಂಕಾರ ರಸವದಲಂಕಾರವಾಯಿತು ಎಂದು ಷಷ್ಠೀ ತತ್ಪುರುಷ ಸಮಾಸ ಮಾಡಬಹುದು ಅಥವಾ "ರಸವಾನ್" ಆದ ಅಲಂಕಾರ, ಯಾವುದೋ ಅದು ರಸವದಲಂಕಾರ ಈ ರೀತಿ ವಿಶೇಷಣ ಸಮಾಸ (ಕರ್ಮಧಾರಯಸಮಾಸ) ಮಾಡಬಹುದು. ಅವುಗಳಲ್ಲಿ ಮೊದಲನೆಯದರಲ್ಲಿ - (ಷಷ್ಠೀತತ್ಪುರುಷ) ರಸದ ಹೊರತಾಗಿ ಅಲ್ಲಿ ಸೇರಿಕೊಂಡಿರುವ ಬೇರೆ ಪದಾರ್ಥವಾವುದು (ಅದರ ಅಲಂಕಾರ ಎಂಬುದರಿಂದ) ಎಂಬ ಪ್ರಶ್ನೆಗೆ ಉತ್ತರಿಸಬೇಕಾಗುತ್ತದೆ. ಕಾವ್ಯವೇ ಆ ಪದಾರ್ಥ ಎಂದು ಹೇಳುವುದಾದರೆ ಅದರಲ್ಲೂ 'ರಸ'ದಿಂದ ಭಿನ್ನವಾದ 'ರಸವದಲಂಕಾರ' ಎಂಬ ಹೆಸರನ್ನು ಪಡೆದುಕೊಳ್ಳುವ ಅವಕಾಶ ಯಾವ ಪದಾರ್ಥಕ್ಕಿದೆ? ಎರಡನೆಯದಾದ ವಿಶೇಷಣ ಸಮಾಸರೀತ್ಯಾ ರಸವದಲಂಕಾರ ಪದ ಪ್ರಯೋಗವಾಗುವಂಥ, ರಸಕ್ಕಿಂತ ಭಿನ್ನವಾದ ಯಾವ ವಿಶೇಷ ಪದಾರ್ಥವೂ ಕಂಡುಬರುತ್ತಿಲ್ಲ. [ರಸವನ್ನೇ ರಸವಾನ್ ಅಲಂಕಾರ ಎಂದು ಹೇಳಬೇಕಾಗುತ್ತದೆ - ಅದನ್ನು ಈ ಮುಂಚೆಯೇ ಖಂಡಿಸಲಾಗಿದೆ) ರಸ ಅಲಂಕಾರ್ಯವೇ ಹೊರತು ಅಲಂಕಾರವಲ್ಲ] ಹೀಗೆ ಮೇಲೆ ಹೇಳಲಾದ ಸ್ವರೂಪ ಅಥವಾ ಮಾರ್ಗದಲ್ಲಿ ರಸವದಲಂಕಾರದ ಶಬ್ದ ಮತ್ತು ಅರ್ಥಗಳು ಪರಸ್ಪರ ಸಂಗತವಾಗುವುದಿಲ್ಲ.

ಅಥವಾ ಎರಡು ಸಮಾಸಗಳ ಅರ್ಥದಲ್ಲಿ [ರಸವತೋ ಅಲಂಕಾರಃ ರಸವದಲಂಕಾರಃ ಈ ಷಷ್ಠೀ ಸಮಾಸ ಹಾಗೂ ರಸವಾಂಶ್ಚಾಸೌ ಅಲಂಕಾರಃ ರಸವದಲಂಕಾರ ಎಂಬ ಕರ್ಮಧಾರೆಯ ಸಮಾಸ] ಕಂಡುಬರುವ ಅಸಂಗತಿಯನ್ನು ಇತರೆ ಉದಾಹರಣೆಗಳ ಮೂಲಕ ನಿವಾರಿಸಲಾಗಿದೆ.

ತನ್ವೀ ಮೇಘಜಲಾರ್ದ್ರ ಪಲ್ಲವತಯಾ ಧೌತಾಧರೇವಾಶ್ರುಭಿಃ
ಶೂನ್ಯೇವಾಭರಣೈಃ ಸ್ವಕಾಲ ವಿರಹಾದ್ ವಿಶ್ರಾಂತ ಪುಷ್ಪೋದ್ಗಮಾ|
ಚಿಂತಾ ಮೌನಮಿವಾಸ್ಥಿತಾ ಮಧುಕೃತಾಂ ಶಬ್ದೈರ್ವಿನಾ ಲಕ್ಷ್ಯತೇ
ಚಂಡೀ ಮಾಮವಧೂಯ ಪಾದಪತಿತಂ ಜಾತಾನುತಾಪೇವ ಸಾ [೪೦]

[ವಿಕ್ರಮೋರ್ವಶೀಯ IV - 38]

ಮಳೆಹನಿಯು ಸುರಿದು ಎಳ ತಳಿರು ನಾಂದು
ಬಾಷ್ಪಾಂಬು ತೊಳೆದಧರದಂತಿರಲು
ಹೂ ಬಿಡುವ ಕಾಲವದು ಕಳೆದಿರಲು
ಒಡವೆಗಳನುಳಿದಿರುವಂತೆ
ದುಂಬಿಗಳ ಝೇಂಕಾರವಿನಿತಿಲ್ಲದಿರಲು
ಚಿಂತೆಯಲಿ ಮಾತಿಲಿಯಾದ ಮೌನ ಗೌರಿಯ ತೆರದಿ
ಕಾಲ್ಗೆರಗಿದೆನ್ನನು ಕೋಪದಿಂ ಕಡೆಗಣಿಸಿ
ಮತ್ತೆ ಪರಿತಪಿಸುತಿರುವ ಪ್ರಿಯಳೆಂದೆ
ಎಣಿಸುವೆನು ತೆಳು ಬಳ್ಳಿಯಿದನು. [೪೦]

ತರಂಗ ಭ್ರೂಭಂಗಾ ಕ್ಷುಭಿತ ವಿಹಗಶ್ರೇಣಿರಶನಾ
ವಿಕರ್ಷಂತೀ ಫೇನಂ ವಸನಮಿವ ಸಂರಂಭ ಶಿಥಿಲಮ್
ಯಥಾವಿದ್ಧಂ ಯಾತಿ ಸ್ಖಲಿತಮಭಿಸಂಧಾಯ ಬಹುಶೋ
ನದೀಭಾವೇನೇಯಂ ಧ್ರುವಮಸಹನಾ ಸಾ ಪರಿಣತಾ [೪೧]

[ವಿಕ್ರಮೋರ್ವಶೀಯ IV - 28]

ಅಲೆಗಳೋಳಿಯೆ ಮುರಿದ ಹುಬ್ಬೆನೆ
ಹಾರುವ ಹಕ್ಕಿಸಾಲೇ ಒಡ್ಯಾಣವೆನಿಸಿರೆ
ಕೋಪದಲಿ ಜಾರಿದ ವಸ್ತ್ರದಂತಿಹ
ಬೆಳ್ನೊರೆಯ ಪಸರಿಸುತೆ
ವಕ್ರಗತಿಯಲಿ ವೇಗದಿಂದಲಿ ಎಡವುತೆಡವುತೆ
ಸಾಗುತಿರುವೀ ಹೊಳೆಯ ನೋಡಲು
ನನ್ನ ವಿಷಯಕೆ ಮುನಿದ ನಲ್ಲೆಯೆ ನಿಜಕು
ಹರಿವಳೀ ಪರಿ ಹೊಳೆಯ ರೂಪವ ತಾಳುತೆನಿಸುತಿದೆ [೪೧]

ಇಲ್ಲಿ ರಸ(ತ್ವ) ಮತ್ತು ಅಲಂಕಾರಗಳೆರಡೂ ಇರುವುದು ಸ್ಪಷ್ಟವಾಗಿ ಕಂಡುಬರುತ್ತಿದೆ. ಆದ್ದರಿಂದ ಅವುಗಳನ್ನು ಪ್ರತ್ಯೇಕವಾಗಿ ಗುರುತಿಸಲು ಕಷ್ಟವೇನೂ ಆಗುವುದಿಲ್ಲ. 'ರಸವಾನ್'ದ ಅಲಂಕಾರ 'ರಸವದಲಂಕಾರ' ಎಂಬ ಷಷ್ಠೀ ತತ್ಪುರುಷದ ರೀತ್ಯಾ ವಿಗ್ರಹವಾಕ್ಯ ಮಾಡಿದಲ್ಲಿ 'ರಸವತ್' ಶಬ್ದ ಮತ್ತು ಅದರ ಅರ್ಥಗಳ ನಡುವೆ ಯಾವುದೇ ಅಸಾಂಗತ್ಯವಿಲ್ಲ. ಅಲಂಕಾರ ದಿಂದಾಗಿ ರಸಪರಿಪೋಷಣೆಯಾಗಿದೆ ಹಾಗೂ 'ರಸವತ್'ನ ಗುಣವು (ರಸವತ್ವವು) ಅಲಂಕಾರದಿಂದ

ನಿಬಂಧಿತವಾಗಿದೆ. ಕರ್ಮಧಾರಯ ಸಮಾಸದ (ವಿಶೇಷಣ ಸಮಾಸ) ರೀತ್ಯಾ "ರಸವಾನ್‌ಶ್ಚ ಅಸೌ ಅಲಂಕಾರಃ (ರಸವಾನ್ ಯಾವುದೋ ಅದು ಅಲಂಕಾರ) ಎಂದು ಅರ್ಥೈಸಿದರೂ ಶಬ್ದ ಮತ್ತು ಅರ್ಥಗಳ ನಡುವೆ ಯಾವುದೇ ಅಸಂಗತಿ ಇಲ್ಲ. ಅದು ಹೇಗೆಂದರೆ,-ಈ ಎರಡು ಉದಾಹರಣೆಗಳಲ್ಲಿ - ಲತೆ ಮತ್ತು ನದಿಗಳು ಉದ್ದೀಪನ ವಿಭಾವಗಳು.* ನಾಯಕ ಪುರೂರವನು, ತನ್ನ ಪ್ರಿಯತಮೆಯ ಅಗಲಿಕೆಯಿಂದ ಭಾವಿತಾಂತಃಕರಣನಾಗಿ, ತನ್ಮಯತೆಯಿಂದ ಎಲ್ಲ ಪದಾರ್ಥಗಳಲ್ಲೂ, ಎಲ್ಲ ಕಡೆಯೂ, ಊರ್ವಶಿಯೇ ಕಂಡು ಬರುತ್ತಾಳೆಯಾಗಿ, ನದಿ ಮತ್ತು ಲತೆಯಂಥ ಪ್ರತಿಯೊಂದು ಅಚೇತನ ಪದಾರ್ಥವನ್ನು ನೋಡಿ, ಅವಳ ಸಾಮ್ಯದ ಆರೋಪ ಮತ್ತು ಅವಳ ಧರ್ಮದ ಅಧ್ಯಾರೋಪವನ್ನು ಮಾಡುತ್ತಾನೆ. ಈ ರೀತಿಯ ಸಾಮ್ಯದ ಆರೋಪಣ ಮತ್ತು ಧರ್ಮದ ಅಧ್ಯಾರೋಪಣವು ಉಪಮಾ ಮತ್ತು ರೂಪಕಾಲಂಕರಾಗಳ ವಿನಾ ಇನ್ನಾವುದೇ ರೀತಿಯಿಂದ ಸಾಧ್ಯವಿಲ್ಲ. [ಸಾಮ್ಯಾರೋಪಣದಿಂದ ಉಪಮಾಲಂಕಾರ ಮತ್ತು ಧರ್ಮದ ಆರೋಪಣದಿಂದ ರೂಪಕಾಲಂಕಾರವಾಗುತ್ತದೆ] ಹಾಗಾಗಿ ಇಲ್ಲಿ ನದಿ ಹಾಗೂ ಲತೆ ಎಂಬ ಪದಾರ್ಥಗಳು ಅಲಂಕಾರ್ಯಗಳಾದುವು, ಉಪಮಾ ಮತ್ತು ರೂಪಕಗಳು ಅಲಂಕಾರಗಳಾದುವು. ಅಲ್ಲದೆ ನದಿ ಹಾಗೂ ಲತೆಗಳೊಂದಿಗೆ ಶೃಂಗಾರ ರಸದ ಸಂಬಂಧ ಇರುವುದರಿಂದ ಆ ಪದಾರ್ಥಗಳು ರಸವದ್ ಅಲಂಕಾರವಾಗುತ್ತವೆ. .

ಇದೆಲ್ಲ ಸರಿಯೆ. ಆದರೆ ಕರ್ಮಧಾರಯ ಸಮಾಸದ ಪ್ರಕಾರ (ವಿಶೇಷಣ ಸಮಾಸದ ಪರವಾಗಿ) 'ಅಲಂಕಾರ' ಶಬ್ದವನ್ನು ಬಿಟ್ಟು ಕೇವಲ 'ರಸವಾನ್' -ಈ ಪ್ರಯೋಗ ಮಾತ್ರ ಸಿಗುತ್ತದೆ. ರಸವದಲಂಕಾರ ಎಂಬ ಶಬ್ದದಿಂದ "ರಸವಾನ್ ಅಲಂಕಾರ" ಎಂದು ಒಪ್ಪಿಕೊಂಡರೆ, ಅದೂ ಯುಕ್ತಿಯುಕ್ತವಾಗುವುದಿಲ್ಲ. ಷಷ್ಠೀ ತತ್ಪುರುಷದ ಪ್ರಕಾರ ರಸವಾನ್‌ದ ಅಲಂಕಾರ ರಸವದಲಂಕಾರ ಎಂದು ಅರ್ಥೈಸಿದರೆ ಅದೂ ಯುಕ್ತಿಸಂಗತವಾಗುವುದಿಲ್ಲ.* ಕಾರಣ ಯಾವುದೇ ಕಾವ್ಯದಲ್ಲಿ ರಸವತ್ವವೇ ಅದರ ಕಾವ್ಯತ್ವ. ಈ ರಸವತ್ವದ ಅತಿಶಯದ ಸಲುವಾಗಿಯೇ ಆ ರೀತಿಯ ಸಹೃದಯ ಹೃದಯಾಹ್ಲಾದಕಾರಕ ಕಾವ್ಯದ ರಚನೆ ಮಾಡಲಾಗುತ್ತದೆ. ಅದರಿಂದಾಗಿಯೇ ಅದರ ಅಲಂಕಾರ (ರಸವತ್ ಕಾವ್ಯದ) ರಸವದಲಂಕಾರವೆಂದು ಕರೆಯಲ್ಪಡುತ್ತದೆ. ಈ ರೀತಿ ಅರ್ಥಮಾಡಿದರೆ, ರೂಪಕವೇ ಮೊದಲಾದ ಎಲ್ಲ ಅಲಂಕಾರಗಳನ್ನೂ ರಸವದಲಂಕಾರವೆಂದು ಪರಿಗಣಿಸುವುದು ಯುಕ್ತಿ ಸಂಗತವಾಗುತ್ತದೆ-ಎಲ್ಲ ಅಲಂಕಾರಗಳೂ ರಸವತ್ ಕಾವ್ಯದಲ್ಲಿ ಪ್ರಯೋಗವಾಗಿ ಒಂದಲ್ಲ ಒಂದು ರಸವನ್ನು ಪರಿಪೋಷಿಸುತ್ತ 'ರಸವತ್' ಆದ್ದರಿಂದ

---

* ಪುರೂರವನಿಗೆ ಎಲ್ಲವೂ ತನ್ನ ಪ್ರಿಯತಮೆಯ ಪ್ರತಿರೂಪದಂತೆಯೇ ಕಂಡುಬರುತ್ತದೆ. ಕಂಡ ವಸ್ತುಗಳೊಂದಿಗೆ ತನ್ನ ಪ್ರಿಯತಮೆಯ ಸಾಮ್ಯಾರೋಪಣೆ ಮಾಡುತ್ತ ಅಥವಾ ಅವುಗಳೊಂದಿಗೆ ಅಭೇದ ಕಲ್ಪನೆ ಮಾಡುತ್ತ ಹೋಗುತ್ತಾನೆ.

* ಇಲ್ಲಿಂದ ಮುಂದೆ, ಗ್ರಂಥದ ಕೆಲವು ಪಂಕ್ತಿಗಳು ಲೋಪವಾಗಿವೆ. ಹೀಗಾಗಿ ತನ್ನ ಮಾತನ್ನು ಸಾಧಿಸಲು ಗ್ರಂಥ ಕರ್ತೃ ಏನು ವಿಶೇಷ ಆಧಾರ ನೀಡಿದ್ದಾನೆಂದು ತಿಳಿಯುವುದಿಲ್ಲ. "ದೇರಭಾವಾತ್" ಎಂಬ ಅಕ್ಷರಗಳಿವೆ ಮೂಲದಲ್ಲೇನಿತ್ತೋ ತಿಳಿಯುವುದಿಲ್ಲ.

[ರಸವಾಂಶ್ಚಾಸೌ ಅಲಂಕಾರಃ ಇತಿ ರಸವದಲಂಕಾರ] ವಿಶೇಷಣ ಸಮಾಸಕ್ಕೂ ಇದೇ ಮಾತು ಅನ್ವಯಿಸುತ್ತದೆ.

[ಇದರ ಅಭಿಪ್ರಾಯವೆಂದರೆ, ರಸಾತ್ಮಕ ವಾಕ್ಯವೇ ಸಹೃದಯಾಹ್ಲಾದಕರವಾದ್ದರಿಂದ, ಕಾವ್ಯವೆಂದು ಕರೆಸಿಕೊಳ್ಳಲು ಯೋಗ್ಯ. ಆದ್ದರಿಂದ ಪ್ರತಿಕಾವ್ಯವೂ ರಸವತ್ ಕಾವ್ಯವಾಗಿರುತ್ತದೆ ಆದ್ದರಿಂದ ರಸವದಲಂಕಾರ ಶಬ್ದದಲ್ಲಿ ಷಷ್ಠೀ ತತ್ಪುರುಷವನ್ನು ಒಪ್ಪಲಿ, ಅಥವಾ ವಿಶೇಷಣ ಸಮಾಸವಾಗಲಿ, ಎರಡೂ ಸಂದರ್ಭಗಳಲ್ಲಿ 'ರಸವತ್' ಕಾವ್ಯದಲ್ಲಿ ಪ್ರಯೋಗವಾಗುವ ಎಲ್ಲ ಅಲಂಕಾರಗಳೂ ರಸವದಲಂಕಾರವೆನಿಸುತ್ತವೆ. ಹಾಗಾಗಿ ರಸವದಲಂಕಾರವೆಂದು ಪ್ರತ್ಯೇಕವಾಗಿರುವುದಿಲ್ಲ] ಒಂದು ವೇಳೆ ಇದನ್ನು ಒಪ್ಪಿದರೆ, [ಎಲ್ಲ ಅಲಂಕಾರಗಳನ್ನೂ ರಸವದಲಂಕಾರವೆಂದು ಒಪ್ಪಿದರೆ ಅಥವಾ ರಸವದಲಂಕಾರದ ಅಸ್ತಿತ್ವವನ್ನೊಪ್ಪಿದರೆ] ಬೇರೆ ಬೇರೆ ಅಲಂಕಾರಗಳ ಲಕ್ಷಣಕ್ಕೆ ಹೊಸದೇನನ್ನೂ, ಈಗಾಗಲೇ ತಿಳಿದಿಲ್ಲದೆ ಇರುವುದೇನನ್ನೂ ಸೇರಿಸಿದಂತಾಗುವುದಿಲ್ಲ. ಕಾರಣ ಪ್ರತಿಯೊಂದು ಅಲಂಕಾರಕ್ಕೂ ಅದರದೇ ಆದ ಲಕ್ಷಣವಿದೆ ಹಾಗೂ ಕಾವ್ಯ ವಸ್ತುವಿನ ಸೌಂದರ್ಯವನ್ನು ಪುಷ್ಟಗೊಳಿಸುವಂಥದನ್ನು ಹೊಂದಿರುತ್ತದೆ. ಅದನ್ನು ಅಲಂಕಾರವಾಗಿ ರೂಪಿಸುವುದೇ ಈ ಎರಡು ಗುಣಗಳು. ಕಾವ್ಯ ವಸ್ತುವಿನ ಸೌಂದರ್ಯವನ್ನು ಪುಷ್ಟಗೊಳಿಸುವ ಗುಣ (ಕಾರ್ಯ)ವೊಂದಕ್ಕೆ ಪ್ರಾಧಾನ್ಯ ಕೊಟ್ಟಿದ್ದಾದರೆ, ಬೇರೆ ಬೇರೆ ಅಲಂಕಾರಗಳ ವಿಶಿಷ್ಟ ಲಕ್ಷಣವನ್ನು ನಿರರ್ಥಕವಾಗಿಸುತ್ತದೆ. ಕಾರಣ ಎಲ್ಲವೂ ರಸವದಲಂಕಾರವಾಗಿ ಬಿಡುವುದರಿಂದ ಅಂಥ ಸಂದರ್ಭವನ್ನು ಯಾವ ರೀತಿಯಲ್ಲೂ ತಳ್ಳಿ ಹಾಕಲಾಗುವುದಿಲ್ಲ. ಇಂಥ ಉದಾಹರಣೆಗಳು ರಸವದಲಂಕಾರದ ಹೆಸರನ್ನು ಸಮರ್ಥಿಸಿಕೊಳ್ಳುವುದಕ್ಕೆಂದು ತಿಳಿಯಬಾರದು. ಉತ್ಕೃಷ್ಟಕವಿಗಳಾರೂ ಅದನ್ನು ಮಾನ್ಯ ಮಾಡಿಲ್ಲ. ಹಾಗಾಗಿ ರೂಪಕಾದಿ ಅಲಂಕಾರಗಳು ಮುಖ್ಯವಾಗಿರುವ ಈ ಸಂದರ್ಭದಲ್ಲಿ "ರಸವದಲಂಕಾರವನ್ನು ರೂಢಿಗೆ ತರುವ ಪ್ರಸಕ್ತಿ ಇರುವುದಿಲ್ಲ; ಕಾರಣ ಅದನ್ನು ತಿಳಿದವರಿಗೂ ಹಾಗೆಯೇ, ರೂಪಕವೇ ಮೊದಲಾದ ಇತರೆ ಅಲಂಕಾರಗಳೆಲ್ಲವೂ ತನ್ನಷ್ಟಕ್ಕೆ ಮುಖ್ಯವೇ ಬೇರಾವುದಕ್ಕೂ ಅಧೀನವಲ್ಲ.

ಉಪಮಾದಿ ಹಾಗೂ ರಸವದಲಂಕಾರಗಳ ವಿಷಯ ವಿಭಾಗದ ಖಂಡನೆ.

ಚೇತನ ಪದಾರ್ಥಗಳ ವರ್ಣನೆಯ ವಿಷಯದಲ್ಲಿ ರಸವದಲಂಕಾರವಿರುತ್ತದೆ. ಹಾಗೂ ಅಚೇತನ ಪದಾರ್ಥಗಳ ವರ್ಣನೆಯಲ್ಲಿ ಉಪಮಾದಿ ಅನ್ಯ ಅಲಂಕಾರಗಳಿರುತ್ತವೆ. ಹೀಗೆಂದು ರಸವದಲಂಕಾರ ಮತ್ತು ಉಪಮಾದಿ ಅಲಂಕಾರಗಳ ವಿಷಯ ವಿಂಗಡಣೆ ಮಾಡುವುದಾದರೆ, ಅದೂ ವಿದ್ವಾಂಸರ ಒಪ್ಪಿಗೆಯನ್ನು ಪಡೆದಿಲ್ಲ (ಯುಕ್ತಿ ಸಂಗತವಲ್ಲ). ಕಾರಣ ಜಡ ಪದಾರ್ಥಗಳು ಕೂಡ ಕಾವ್ಯದಲ್ಲಿ ರಸವನ್ನು ಉದ್ದೀಪನಗೊಳಿಸುವ ಸಾಮರ್ಥ್ಯಕ್ಕೆ ತಕ್ಕಂತೆ ಸೌಕುಮಾರ್ಯ, ಸರಸತ್ವವನ್ನು ಪಡೆದುಕೊಳ್ಳುತ್ತವೆ. ಇದಕ್ಕೆ ಶ್ರೇಷ್ಠಕವಿಯ ಪ್ರತಿಭಾವ್ಯಾಪಾರವೇ ಕಾರಣ. ಹೀಗೆ ಜಡಪದಾರ್ಥಗಳೂ ಸುಕುಮಾರತೆಯ ಸರಸತ್ವವನ್ನು ಪಡೆದುಕೊಂಡು ಬಿಡುವುದರಿದ ಉಪಮಾದಿ ಅಲಂಕಾರಗಳಿಗೆ ಏನೂ ಅವಕಾಶವೇ ಇರುವುದಿಲ್ಲ. ಒಂದು ವೇಳೆ ಇದ್ದರೂ ಬಹಳ ಕಡಿಮೆ

ಅವಕಾಶ. ಇದು ಒಂದೆಡೆಯಾದರೆ, ಇನ್ನೊಂದೆಡೆ ಶ್ರೇಷ್ಠ ಕವಿಗಳಿಗೆ ಪ್ರಿಯವಾದ ಶೃಂಗಾರಾದಿ ರಸಗಳಿಂದ ತುಂಬಿ ತುಳುಕುತ್ತಿರುವ ಒಂದು ಇಡೀ ಕೃತಿ ಸಮುದಾಯ ನೀರಸವಾಗಲಾರಂಭಿಸುತ್ತದೆ [ಅರ್ಥಾತ್ ಅಚೇತನ ವಸ್ತುಗಳು ಚೇತನ ವಸ್ತುಗಳಾಗಿ ಮಾನವೀಕರಣಗೊಳ್ಳುವುದರ ಸುಂದರ ವರ್ಣನೆ] ಪೂರ್ವಸೂರಿಗಳು ಇವೆಲ್ಲವನ್ನೂ ಈಗಾಗಲೇ ಪ್ರತಿಪಾದಿಸಿದ್ದಾರೆ.

ರಸವದಲಂಕಾರವು ಬೇರೊಂದೇ ತೆರನಾದ ವೈಚಿತ್ರ್ಯದಿಂದಾಗಿ ಮನೋಹರತೆಯನ್ನು ಪಡೆದುಕೊಳ್ಳಲನುಕೂಲಿಸುವಂತೆ ಮಾನ್ಯ ಆಚಾರ್ಯರು ಅದನ್ನು ಪ್ರತಿಪಾದಿಸಿರಲು ಸಾಧ್ಯ

ಪ್ರಧಾನೇಽನ್ಯತ್ರ ವಾಕ್ಯಾರ್ಥೇ ಯತ್ರಾಂಗಂ ತು ರಸಾದಯಃ|
ಕಾವ್ಯೇ ತಸ್ಮಿನ್ನಲಂಕಾರೋ ರಸಾದಿರಿತಿ ಮೇ ಮತಿಃ [೪೨]

ನನ್ನ ಅಭಿಪ್ರಾಯದಲ್ಲಿ ಯಾವ ಕಾವ್ಯದಲ್ಲಿ ಇತರೆ ವಾಕ್ಯಾರ್ಥಗಳು ಪ್ರಧಾನವಾಗಿ, ರಸಾದಿಗಳು ಅಂಗರೂಪದಲ್ಲಿರುತ್ತವೆಯೋ ಅಲ್ಲಿ ರಸಾದಿಗಳು ಅಲಂಕಾರವಾಗುತ್ತವೆ. [೪೨]

[ಧ್ವನ್ಯಾಲೋಕ ಪು -43]

ಅಂದರೆ ಇಡೀ ವಾಕ್ಯದ ಪ್ರಧಾನಾರ್ಥವು ರಸಕ್ಕಿಂತ ಬೇರೆಯದೇ ಆಗಿ ಅಲಂಕಾರ್ಯವೆಂದು ಪರಿಗಣಿತವಾಗಿ ಪ್ರಯೋಗವಾದಾಗ, ಮತ್ತು ಶೃಂಗಾರಾದಿ ರಸಗಳು ಅದರ ಅಂಗಭೂತವಾಗಿ ಅಲಂಕಾರಗಳಾಗಿ ಪ್ರಯೋಗವಾದಾಗ ಅಂಥ ರಸಗಳು ರಸವದಲಂಕಾರವೆನಿಸುತ್ತವೆ. ಇಂಥ ಸಂದರ್ಭಗಳಲ್ಲಿ ಗೌಣವಾಗಿದ್ದು ಪ್ರಧಾನವಾದ್ದನ್ನು ಅಲಂಕರಿಸುವುದರಿಂದ, ಗೌಣತೆ ಮತ್ತು ಪ್ರಧಾನತೆಗಳು ಭಾವಾಭಿವ್ಯಕ್ತಿಪೂರ್ವವಾಗಿ, ಶೋಭಿತವಾಗುತ್ತವೆಯಾಗಿ, ಅಲಂಕಾರವಾವು ದೆಂಬುದನ್ನು (ಹಾಗೂ ಅಲಂಕಾರ್ಯ-ರಸ) ಸ್ಪಷ್ಟವಾಗಿ ಗೊತ್ತುಹಚ್ಚಲು ಬರುತ್ತದೆ ಉದಾ:

ಕ್ಷಿಪ್ತೋ ಹಸ್ತಾವಲಗ್ನಃ ಪ್ರಸಭಮಭಿಹತೋಽಪ್ಯಾದದಾನೋಂಽಶುಕಾಂತಂ
ಗೃಹ್ಣನ್ ಕೇಶೇಷ್ವಪಾಸ್ತಶ್ಚರಣ ನಿಪತಿತೋ ನೇಕ್ಷಿತಃ ಸಂಭ್ರಮೇಣ
ಆಲಿಂಗನ್ ಯೋಽವಧೂತಸ್ತ್ರಿಪುರ ಯುವತಿಭಿಃ ಸಾಶ್ರುನೇತ್ರೋತ್ಪಲಾಭಿಃ
ಕಾಮೀವಾರ್ದ್ರಾಪರಾಧಃ ಸದಹತು ದುರಿತಂ ಶಾಂಭವೋ ವಃ ಶರಾಗ್ನಿಃ [೪೩]*

ಕೈವಿಡಿಯೆ ನೂಂಕಿದೊಡೆ ಪೊಯ್ದುರೂ ರೋಷದಲಿ
ಸೆರಗತುದಿಯನೆ ಮತ್ತೆ ಸಾರಿ ಪಿಡಿಯುತಲಿ
ತಳ್ಳಿದೊಡೆ ಕೂದಲನೆ ಸವರ ತೊಡಗುತ ಮತ್ತೆ
ಕಾಲ್ಬಿಡಿದರೂ ದುಗುಡದಿಂದದನು ಮರೆತು,
ಅಪ್ಪಲೆಳಸಲು, ಮೊದಲೆ ತಪ್ಪಿಸುತ ವೇಗದಲಿ,
ನೇತ್ರ ಪದ್ಮಗಳಿಂದ ಕಣ್ಣೀರ ಮಿಡಿವ
ತ್ರಿಪುರ ಯುವತಿಯರಿಂತು ಧೂರ್ತಕಾಮಿಯವೋಲು
ಕಂಡ ಶ್ರೀ ಶಂಭುವಿನ ಬಾಣಾಗ್ನಿಯು
ನಮ್ಮ ಪಾಪವನ್ನೆಲ್ಲ ಸುಟ್ಟುರುಹಲಿ [೪೩]*

---

* ಧ್ವನ್ಯಾಲೋಕ ಪುಟ 64 ಡಾ. ಕೆ. ಕೃಷ್ಣಮೂರ್ತಿ

[ಇಲ್ಲಿ ಆನಂದ ವರ್ಧನಾಚಾರ್ಯನು ರಸವದಲಂಕಾರವನ್ನು ಸ್ವೀಕರಿಸಿದ್ದಾನೆ. ಎರಡು ಪ್ರಕಾರದ ರಸವದಲಂಕಾರವನ್ನು ಅವನು ಒಪ್ಪಿದ್ದಾನೆ. ಒಂದು ಶುದ್ಧ ರಸವದಲಂಕಾರ, ಇನ್ನೊಂದು ಸಂಕೀರ್ಣ ರಸವದಲಂಕಾರ. ಪ್ರಸ್ತುತ ಉದಾಹರಣೆಯನ್ನು ಅವನು ಸಂಕೀರ್ಣ ರಸವದಲಂಕಾರದ ರೂಪದಲ್ಲಿ ಉದಾಹರಿಸಿದ್ದಾನೆ. ಈ ವಿಷಯದಲ್ಲಿ ಅವನು ಹೇಳುವುದು- ಈ ಶ್ಲೋಕದಲ್ಲಿ ಭಗವಾನ್ ಶಂಕರನ ಪ್ರಭಾವಾತಿಶಯವೆ ಪ್ರಧಾನ ವಾಕ್ಯಾರ್ಥ. ಅದರ ಅಂಗರೂಪದಲ್ಲಿ ಈರ್ಷ್ಯಾವಿಪ್ರಲಂಭ ಸೇರಿದೆ. ಆದ್ದರಿಂದ ಇದು ರಸವದಲಂಕಾರವಾಯಿತು. ಜೊತೆಯಲ್ಲೇ ಶ್ಲೇಷವೂ ಅಂಗರೂಪದಲ್ಲಿ ಬಂದಿದೆ. ಆದ್ದರಿಂದ ಈರ್ಷ್ಯಾ ವಿಪ್ರಲಂಭವು ಶ್ಲೇಷದೊಂದಿಗೆ ಸಂಕೀರ್ಣವಾಗಿರುವುದರಿಂದ ಅದು ಸಂಕೀರ್ಣರಸವದಲಂಕಾರದ ಉದಾಹರಣೆಯಾಗುತ್ತದೆ] ಇಲ್ಲಿಯ ಪ್ರಧಾನ ವಾಕ್ಯಾರ್ಥ ತ್ರಿಪುರರಿಪು ಶಿವನ ಪ್ರಭಾವದ ಅತಿಶಯತೆಯ ವರ್ಣನೆ. ಶಿವನ ಶರಾಗ್ನಿಯಿಂದ ದಗ್ಧರಾಗಿ, ನೇತ್ರಪದ್ಮಗಳಿಂದ ಕಣ್ಣೀರು ಮಿಡಿಯುತ್ತಿರುವ ರಾಕ್ಷಸ ಸ್ತ್ರೀಯರ ವಿಕಲಾವಸ್ಥೆಯ ವರ್ಣನೆಯ ಮೂಲಕ ಪ್ರಕರ್ಷ ಸ್ಥಿತಿಯನ್ನು ಮುಟ್ಟಿರುವ ಕರುಣ ರಸಸ್ಪರ್ಶದಿಂದ ಅದು ಅಲಂಕೃತಗೊಂಡಿದೆ. ಆದರೆ ಅದು (ಆನಂದವರ್ಧನ ಹೇಳುವಂತೆ) ಈರ್ಷ್ಯಾ ವಿಪ್ರಲಂಭ ಶೃಂಗಾರದಿಂದ ಅಲಂಕೃತಗೊಂಡಿಲ್ಲ. ಕಾರಣ ಅದರ ಅನುಭವವೇ ಆಗುವುದಿಲ್ಲ. ತಾತ್ಪರ್ಯವೆಂದರೆ, ಕವಿ ಪ್ರತಿಭೆಯಿಂದ ಪರಿಪೋಷಿತವಾದ ಪ್ರಕರ್ಷಾವಸ್ಥೆಯ ಕರುಣ ರಸ ಸ್ಪರ್ಶದಿಂದೊಡಗೂಡಿದ, ಭಗವಾನ್ ಶಂಕರನ ಪ್ರಭಾವಾತಿಶಯದ ಸೌಂದರ್ಯವು ಸಹೃದಯನ ಹೃತ್ಪೂರ್ವಕ ಮೆಚ್ಚಿಗೆಯನ್ನು ಗಳಿಸುತ್ತದೆ.

ಇಲ್ಲಿ ಕಾಮಿ ಮತ್ತು ಶಂಭುವಿನ ಶರಾಗ್ನಿಯ ತೇಜಸ್ಸನ್ನು ಸಮಾನ ರೂಪದ ಶಬ್ದ ವಾಚ್ಯತೆಯ ಮೂಲಕ ಹೇಳಲಾಗಿದೆ ಎನ್ನುವುದಷ್ಟೇ. ಪರಸ್ಪರ ವಿರುದ್ಧ ಸ್ವಭಾವವುಳ್ಳ ಹಾಗೂ ವಿರುದ್ಧ ಧರ್ಮದ ಅಧ್ಯಾರೋಪವಾದ ಇವುಗಳ ಐಕ್ಯವನ್ನು ಯಾವುದೇ ರೀತಿಯಲ್ಲೂ ಸಾಧಿಸಲಾಗುವುದಿಲ್ಲ. ಕಾರಣ ಸಾಕ್ಷಾತ್ ಪರಮೇಶ್ವರನೇ ಎಷ್ಟೆಲ್ಲ ಪ್ರಯತ್ನಪಟ್ಟರೂ, ಒಂದು ವಸ್ತುವಿನ ಮೂಲಭೂತ ಸ್ವಭಾವವನ್ನು ಅದಕ್ಕೆ ತದ್ವಿರುದ್ಧವಾದ ರೀತಿಯಲ್ಲಿ ಬದಲಾಯಿಸಲು ಸಾಧ್ಯವಿಲ್ಲ. ಅಥವಾ ಕೇವಲ ಆ ರೀತಿಯ ಶ್ಲಿಷ್ಟ ಶಬ್ದ ವಾಚ್ಯಗಳಿಂದಷ್ಟೇ ವಿಪ್ರಲಂಭ ಶೃಂಗಾರದ ಅನುಭವ ಪ್ರತೀತಿ ಸಹೃದಯರಿಗೆ ಆಗುವುದಿಲ್ಲ. ಒಂದು ವೇಳೆ ಆ ರೀತಿ ಆಗುವುದಿದ್ದರೆ 'ಬೆಲ್ಲ' ಎಂದು ಬಾಯಿಂದ ಹೇಳಿದ ಕೂಡಲೇ ಅದರ ರುಚಿಯ ಅನುಭವದ ಜೊತೆ ಜೊತೆಯಲ್ಲೇ ಅದರ ವಿರುದ್ಧವಾದ ಕಹಿಯ ಅನುಭವದ ಪ್ರತೀತಿಯೂ ಆಗಿಬಿಡಬೇಕಿತ್ತು. ಒಂದು ವೇಳೆ ಶೃಂಗಾರ ರಸದ ಅನುಭವದ ಪ್ರತೀತಿ ಆಗುತ್ತದೆಂದು ಒಪ್ಪಿದ್ದೇ ಆದರೆ, ಆಗ ಎರಡು ವಿರುದ್ಧ ರಸಗಳು (ಕರುಣ ಮತ್ತು ವಿಪ್ರಲಂಭ) ಏಕಕಾಲದಲ್ಲೇ ಸಮಾವೇಶವಾದ ದೋಷ ಅನಿವಾರ್ಯವಾಗಿ ತಟ್ಟುತ್ತದೆ. ಅಥವಾ ಈ ಎರಡೂ ವಿರುದ್ಧ ರಸಗಳಲ್ಲಿ ಒಂದು ಮಾತ್ರ ಪ್ರಧಾನವಾಗಿದ್ದು, ಇನ್ನೊಂದು ಗೌಣವಾಗಿರುವುದರಿಂದ (ತಮ್ಮ ವಿರೋಧ ನೀಗಿಕೊಂಡು) ಸಹವರ್ತಿಗಳಾಗಿರುತ್ತವೆ ಎಂದು ಘೋಷಿಸಿದರೂ, ದೋಷ ಪರಿಹಾರವಾಗುವುದಿಲ್ಲ. ಭಗವಾನ್

ಶಂಕರನ ಪ್ರಭಾವಾತಿಶಯತೆಯ ವರ್ಣನೆಯೇ ಮುಖ್ಯವಾದ್ದು, ಇವೆರಡೂ ವಿರುದ್ಧ ರಸಗಳು ಗೌಣವಾಗಿರುವುದರಿಂದ ಅದರ ಅಂಗ ರಸಗಳಾಗಿ ಅಲಂಕಾರತ್ವವನ್ನು ಪಡೆದುಕೊಳ್ಳುತ್ತವೆ ಎಂದು ಸಮಾಧಾನ ಹೇಳಿದರೂ ಅದು ಯುಕ್ತಿ ಸಂಗತವಾಗುವುದಿಲ್ಲ. ಕಾರಣ ಕರುಣ ರಸವೊಂದೇ ವಾಸ್ತವವಾಗಿ ಪ್ರಧಾನವಾದದ್ದಾಗಿದ್ದು ಬೇರಿನ್ನಾವುದಕ್ಕೂ ಸ್ಥಾನವಿಲ್ಲ. ಅವುಗಳಲ್ಲಿ ಒಂದಕ್ಕಂತೂ ಆಧಾರವೇ ಇಲ್ಲವಾದ್ದರಿಂದ ಅವೆರಡಕ್ಕೂ ಸಮಾನ ಸ್ಥಾನವೆಂದು ಪರಿಗಣಿಸಲು ಸಾಧ್ಯವೇ ಇಲ್ಲ. ತರ್ಕದಲ್ಲಿ ಅಸ್ತಿತ್ವಕ್ಕೂ ಅಸ್ತಿತ್ವವಿಲ್ಲದಿರುವುದಕ್ಕೂ (ಭಾವ ಮತ್ತು ಅಭಾವ) ಪರಸ್ಪರ ಸಮಾನ ಸ್ಥಾನವಾಗಲಿ, ಸಾಮ್ಯವಾಗಲಿ ಹೇಗೆ ಇಲ್ಲವೋ ಹಾಗೆ ಈ ಅನುಚಿತ ವಿಷಯದ ಚರ್ಚೆಯಲ್ಲಿ ಚಾತುರ್ಯ ತೋರಿಸುವ ಪ್ರಯತ್ನ ಸಾಕು.

ಬಹುಶಃ ಪ್ರಸ್ತುತ ಉದಾಹರಣೆಯ (ಕ್ಷಿಪ್ತೋಹಸ್ತಾವಲಗ್ನಃ) ಬಗ್ಗೆ ಮಾನ್ಯ ಕೃತಿಕಾರನಿಗೆ (ರಸವದಲಂಕಾರದ ನೂತನ ದೃಷ್ಟಿಯನ್ನು ಪ್ರತಿಪಾದಿಸಿದ ಆನಂದವರ್ಧನ) ಅಷ್ಟೊಂದು ನಂಬಿಕೆ ಉಂಟಾಗದೆ ಲಕ್ಷಣ ಮತ್ತು ಲಕ್ಷ್ಯಗಳಲ್ಲಿ ಸಾಮಂಜಸ್ಯವನ್ನು ತೋರಿಸುವ ಸಲುವಾಗಿ ರಸವದಲಂಕಾರದ ಬೇರೊಂದು ಉದಾಹರಣೆಯನ್ನು ವ್ಯಾಖ್ಯಾನಿಸುತ್ತಿದ್ದಾನೆ.

ಕಿಂ ಹಾಸ್ಯೇನ ನ ಮೇ ಪ್ರಯಾಸ್ಯಸಿ ಪುನಃ ಪ್ರಾಪ್ತಶ್ಚಿರಾದ್ದರ್ಶನಂ
ಕೇಯಂ ನಿಷ್ಕರುಣ ಪ್ರವಾಸ ರುಚಿತಾ, ಕೇನಾಸಿ ದೂರೀಕೃತಃ|
ಸ್ವಪ್ನಾಂತೇಷ್ವಿತಿ ತೇ ವದನ್ ಪ್ರಿಯತಮವ್ಯಾಸಕ್ತ ಕಂಠಗ್ರಹೋ
ಬದ್ಧ್ವಾ ರೋದಿತಿ ರಿಕ್ತಬಾಹು ವಲಯ ಸ್ತಾರಂ ರಿಪುಸ್ತ್ರೀಜನಃ [೪೪]

[ಧ್ವನ್ಯಾಲೋಕ - ಪುಟ ಪದ್ಯ -20]

"ಈ ನಗೆ ಚಾಟಿಕೆಯಿಂದೇನು
ಮತ್ತೆ ನನ್ನಿಂದ ನೀ ದೂರ ಹೋಗೆ.
ಬಹುದಿನದ ಬಳಿಕ ನಿನ್ನ ಮುಖದರ್ಶನವಿಂದು.
ತಿರುಗಾಟದಲಿ ನಿನಗೆಂತು ಬಂದುದೀ ಹುಚ್ಚು?
ನಿಷ್ಕರುಣ! ಹೇಳು ನೀ ದೂರಾದುದಾರಿಂದ"
ಎಂದಿಂತು ಕನಸಿನೊಳು ಕನವರಿಸುತೆ
ತಮ್ಮ ಪ್ರಿಯತಮರ ಕಂಠವನು ಅಪ್ಪುತಿರಲು
ಕನಸೊಡೆದು ಎಚ್ಚತ್ತು ತೋಳತೆಕ್ಕೆ
ಬರಿದಾದುದನು ಕಂಡು ವಿಪ್ರಲಾಪವ-
ಗೈವರರಾತಿಲಲನೆಯರು. [೪೪]

[ಈ ಶ್ಲೋಕದಲ್ಲಿ ಯಾವುದೋ ರಾಜನಸ್ತುತಿ ಇದೆ. ಸ್ತುತಿಕಾರ ಹೇಳುತ್ತಿದ್ದಾನೆ: ನೀನು ಸಮಸ್ತ ಶತ್ರುಗಳನ್ನೂ ಸಂಹರಿಸಿ ಬಿಟ್ಟಿದ್ದೀಯೆ. ಆ ಮೃತ ಶತ್ರುಗಳ ಪತ್ನಿಯರು ರಾತ್ರಿಯಲ್ಲಿ ನಿದ್ರೆ ಮಾಡುತ್ತಿರುವಾಗ ಸ್ವಪ್ನದಲ್ಲಿ ತಮ್ಮ ಗಂಡಂದಿರನ್ನು ಕಂಡು ಅವರ ಕೊರಳ ಸುತ್ತ ಕೈಹಾಕಿ ಹೀಗೆ ಹೇಳುತ್ತಾರೆ]

ಇಲ್ಲಿಯ ಪ್ರಧಾನ ವಾಕ್ಯಾರ್ಥ - "ಹೇ ಪ್ರಭು ತಮ್ಮಿಂದ ಹತರಾದ ಶತ್ರುಗಳ ಪತ್ನಿಯರು, ಶೋಕಾವೇಶವಶರಾಗಿ, ಅಸಹಾಯಕ ಸ್ಥಿತಿಯಲ್ಲಿ ಮುಳುಗಿದ್ದಾರೆ. ಅವರು ಎಂಥ ಹೀನದೀನ ಸ್ಥಿತಿಯಲ್ಲಿದ್ದಾರೆಂದರೆ, ಇಲ್ಲಿ ಕರುಣ ರಸವು ಪರಾಕಾಷ್ಠ ಸ್ಥಿತಿಯನ್ನು ತಲುಪಿದೆ ಹಾಗೂ ಅದರ ಶೋಕದ ಅನುಭವವನ್ನು ಅವರು ಪಡೆದಿದ್ದಾರೆ". ಕರುಣ ರಸವನ್ನೇ ಪ್ರಧಾನವೆಂದು ಪರಿಗಣಿಸಿದಲ್ಲಿ ಮಾತ್ರ ಈ ಉದ್ದೇಶವನ್ನು ಅತ್ಯುತ್ಕೃಷ್ಟವಾಗಿ ಸಾಧಿಸಬಹುದು. ಪ್ರಿಯತಮನು ದೂರದೇಶಕ್ಕೆ ತೆರಳಿದ ಪರಿಣಾಮವಾಗಿ ಉಂಟಾಗಿರುವ ಪ್ರವಾಸ ವಿಪ್ರಲಂಭ ಶೃಂಗಾರವನ್ನೇ ಪ್ರಧಾನ ವಾಕ್ಯಾರ್ಥವೆಂದು ಪರಿಗಣಿಸುವುದು ತಪ್ಪಾಗುತ್ತದೆ. ವಿವಿಧ ಘಟಕ ಪದಾರ್ಥಗಳು ತಮ್ಮಲ್ಲೇ ಪರಸ್ಪರವಾಗಿ ಅನ್ವಿತಗೊಂಡು ಯೋಜಿತವಾಗಿರುವ, ಪ್ರಧಾನ ವಾಕ್ಯಾರ್ಥವನ್ನು ಸ್ಪಷ್ಟವಾಗಿ ಪೋಷಿಸುವ ಗೌಣಸಾಧನಕ್ಕೆ 'ಅಲಂಕರಣ' ಎಂಬ ಮಾತು ಅನ್ವಯವಾಗುತ್ತದೆ.

ಅಲ್ಲದೆ ಈ ಗೌಣರಸವಾದ ವಿಪ್ರಲಂಭ ಶೃಂಗಾರವು ನಿರ್ವಿಷಯವಾಗಿಲ್ಲ. ಹಾಗಾಗಿ ಯಾರೂ ರಸಪುಷ್ಟಿಗೆ ಅಗತ್ಯವಿರುವ ಆಲಂಬನ ವಿಭಾವಾದಿ ಸ್ವಕಾರಣ ಸಾಮಗ್ರಿಗಳ ಕೊರತೆ ಇದೆಯೆಂದೂ ಹೇಳಲು ಸಾಧ್ಯವಿಲ್ಲ. ಎರಡೆರಡು ವಿರುದ್ಧ ರಸಗಳನ್ನು ಏಕಕಾಲದಲ್ಲಿ ಸಮಾವೇಶಗೊಳಿಸಿದ ದೋಷವೂ (ವಿಪ್ರಲಂಭ ಶೃಂಗಾರ ಮತ್ತು ಕರುಣ) ತಟ್ಟುವುದಿಲ್ಲ. ಕಾರಣ ಎರಡೂ ರಸಗಳು ವಾಸ್ತವವಾಗಿ ಇರುವುದಾದರೆ, ಅವುಗಳ ಅನುಭವದ ಪ್ರತೀತಿ ಸ್ಪಷ್ಟವಾಗಿ ಆಗುವುದಾದರೆ, ಅವುಗಳಲ್ಲಿ ಒಂದಕ್ಕೂ ಮತ್ತೊಂದಕ್ಕೂ ಪ್ರಧಾನಸ್ಥಾನ ಪಡೆಯಲು ಸ್ಪರ್ಧೆ ಇಲ್ಲವೆಂದ ಮೇಲೆ ಸ್ವವಿರೋಧವೂ ಉಂಟಾಗುವುದಿಲ್ಲ.

ಕರುಣ ರಸಮಾತ್ರ ಅಥವಾ ಪ್ರವಾಸ ವಿಪ್ರಲಂಭ ಶೃಂಗಾರ ರಸಮಾತ್ರ ನಿಶ್ಚಯವಾಗಿಯೂ ಇಲ್ಲಿ ಇರುವುದು ಎಂಬುದಕ್ಕೆ ನಿರ್ಣಯಾತ್ಮಕ ಸಾಕ್ಷಿ ಇಲ್ಲದಿರುವುದರಿಂದ, ಈ ಎರಡನ್ನೂ ಏಕಕಾಲದಲ್ಲಿ ಚಿತ್ರಿಸುವುದು ಸಹೃದಯರಿಗೆ ಆಹ್ಲಾದಕಾರಿಯೇ ಆಗುವುದರಿಂದ ರಮಣೀಯವಾಗುತ್ತದೆ. ಸ್ವಪ್ನ ಇರುವಷ್ಟು ಕಾಲವೂ, ಪ್ರವಾಸ ವಿಪ್ರಲಂಭ ಶೃಂಗಾರವು ಆಲಂಬನ ವಿಭಾವಾದಿ ಸಾಮಗ್ರಿಗಳಿಂದ ಪೋಷಿಸಲ್ಪಡುತ್ತಿದ್ದು, ಸ್ವಪ್ನ ಮುಗಿದ ಕೂಡಲೇ ಅವು ಶೋಕ ಅಥವಾ ಕರುಣ ರಸಸ್ಥಿತಿಗೆ ಹಿಂದೆ ಸರಿದುಬಿಡುತ್ತವೆ. ಆದ್ದರಿಂದ ಕರುಣ ಮತ್ತು ಪ್ರವಾಸ ವಿಪ್ರಲಂಭ ಶೃಂಗಾರಗಳೆರಡೂ ವಾಕ್ಯದ ಪ್ರಧಾನಾರ್ಥಕ್ಕೆ ಸುಸಂಗತವೇ, ಯುಕ್ತಿ ಯುಕ್ತವೇ ಅನಿಸುತ್ತದೆ. ಯಾರಾದರೂ - ಪ್ರವಾಸ ವಿಪ್ರಲಂಭವೇ ಅದಕ್ಕಿಂತ ಮೊದಲಿಗೆ ಹೇಗೆ ಉದ್ಭವಿಸಿತು ಎಂದು ಆಕ್ಷೇಪವೆತ್ತಿದರೆ ಅದಕ್ಕೆ ಇನ್ನೂ ಉತ್ತರ ಸಿಕ್ಕಿಲ್ಲ. ಆದರೆ ಈ ಆಕ್ಷೇಪ ಯುಕ್ತವಲ್ಲ. ಕಾರಣ ಮಹಾಪರಾಕ್ರಮಿ ಮಹಾರಾಜನ ಅದಮ್ಯ ಪರಾಕ್ರಮಪೂರ್ಣವಾದ ಆಕ್ರಮಣದ ವಿಷಯ ಕೇಳಿ, ಭಯಭೀತ ಹೃದಯಿಗಳಾದ ಶತ್ರುಗಳು ಮತ್ತು ಅವರ ರಾಣಿಯರು, ಪ್ರಾಣ ಉಳಿಸಿಕೊಳ್ಳಲು ಅತ್ತ ಇತ್ತ ಚೆದುರಿ ಚೆಲ್ಲಾಪಿಲ್ಲಿಯಾಗಿ ಹೋಗಿ ಸದ್ಯಕ್ಕೆ ಅಗಲಿ ದೂರಾಗಿದ್ದರೂ ಬೇರೆಲ್ಲೋ ನೆಲೆ ನಿಂತಿರುವುದು ಸಾಧ್ಯ ಎಂದು ವಾದಿಸಬಹುದು. (ಖಂಡಿತಾ ಮೃತಿಹೊಂದಿಲ್ಲ). ಈ ವಾದ ವಿಪ್ರಲಂಭಶೃಂಗಾರದ ಆವಿರ್ಭಾವಕ್ಕೆ ಸಮರ್ಥನೆ ಒದಗಿಸುತ್ತದೆ.

ಒಮ್ಮೆ ಕರುಣ ರಸದ ಅಸ್ತಿತ್ವ ಖಚಿತವಾಗಿ ತೀರ್ಮಾನವಾದರೆ ಅದರ ಜೊತೆ ಜೊತೆಯಲ್ಲೇ

ಈ ಉಪಸಿದ್ಧಾಂತವೂ ಕಾಣಿಸಿಕೊಳ್ಳುತ್ತದೆ. ಕರುಣವು ಅವರ ಮನಸ್ಸಿನಲ್ಲಿ ಅತ್ಯಂತ ಪರಾಕಾಷ್ಠ ಸ್ಥಿತಿಯಲ್ಲಿ ಪರಿಪುಷ್ಟಿ ಹೊಂದಿ, ವಿಧವೆಯರಾದ ರಾಣಿಯರ ಮನಸ್ಸುಗಳು ದೀರ್ಘಕಾಲದ ವ್ಯಥೆಯಿಂದ ಪೀಡಿತವಾದ ಕಾರಣ, ಪ್ರೇಮದ ವಿಷಯಕ್ಕೆ ಹಗಲುಗನಸು ಕಾಣುತ್ತಾರೆ ಮತ್ತು ಬಹಳ ಕಾಲದ ನಂತರ, ತಮ್ಮ ಪ್ರಿಯರೊಂದಿಗೆ ವಾಸ್ತವ ಸಮಾಗಮದ ಕನಸನ್ನು ಕಾಣುತ್ತಾರೆ. ಇಷ್ಟಾದರೂ ಆ ಸುಂದರ ಸ್ವಪ್ನ ಒಮ್ಮಿಂದೊಮ್ಮೆಗೇ ಭಗ್ನವಾಗಿ ಬಿಡುತ್ತದೆ. ಎಚ್ಚೆತ್ತ ಮೇಲೆ, ಆಶ್ಚರ್ಯಚಕಿತರಾಗಿ, ತಮ್ಮ ಹಿಂದಿನ ಸ್ಥಿತಿಗೂ, ಈಗಿನ ಸ್ಥಿತಿಗೂ ಇರುವ ಸ್ಪಷ್ಟ ವ್ಯತ್ಯಾಸವನ್ನು ಅದೂ ಹೃದಯಭೇದಕವಾದಂಥ ವ್ಯತ್ಯಾಸವನ್ನು ಮನಗಂಡು ಬಹುದೀರ್ಘವಾಗಿ ರೋದಿಸತೊಡಗುತ್ತಾರೆ. "ಭಗ್ನಗೊಂಡ ನಿನ್ನ ಶತ್ರು ವಿಲಾಸಿನಿಯರು ಅಳುತ್ತಿದ್ದಾರೆ" ಈ ಮಾತಿನಿಂದ ಪ್ರಸ್ತುತ ಕರುಣ ರಸವೇ ಪುಷ್ಟಿಯಾಗುತ್ತಿದೆ. ಸಂಗತಿಗಳನ್ನು ಹೀಗೆ ವ್ಯಾಖ್ಯಾನಿಸುವುದ ರಿಂದ ಕರುಣವೊಂದೇ ಇಲ್ಲಿ ಪೂರ್ಣ ಪ್ರಮಾಣದಲ್ಲಿ ಪ್ರಸ್ತುತ ಪಡಿಸಲಾದ ಪ್ರಧಾನ ರಸವೆಂಬ ತೀರ್ಮಾನಕ್ಕೆ ನಮ್ಮನ್ನು ಕೊಂಡೊಯ್ಯುತ್ತದೆ. (ವಿಪ್ರಲಂಭಶೃಂಗಾರದ ಸುಳಿವೂ ಇಲ್ಲದೆ)

ಆ ರೀತಿಯ ವ್ಯಭಿಚಾರಿ ಭಾವಗಳ ಔಚಿತ್ಯದ ಸೌಂದರ್ಯ, ಅಥವಾ ಅದರ ಮಧ್ಯಪ್ರವೇಶದಿಂದಾಗಿ, ವಿಪ್ರಲಂಭ ಶೃಂಗಾರದ ವ್ಯಾಪಾರವು ಪ್ರವರ್ತಿಸಿತೆಂದರೆ ರಸದ ಗಂಧಕ್ಕೂ ಅಲ್ಲಿ ಅವಕಾಶವಿಲ್ಲ. ಒಂದು ವೇಳೆ ಯಾರಾದರೂ ಪ್ರೇಯಸ್ ಮಾತ್ರ ಇಲ್ಲಿ ಪ್ರಧಾನ; ಅದರ ಪೋಷಕ ರಸವಾಗಿರುವ ಕಾರಣ, ಕರುಣ ರಸವನ್ನು ಅಲಂಕರಣ ಎಂದು ಹೇಳಲಾಗುತ್ತದೆ ಎಂದು ಹೇಳಿದರೆ ಅದೂ ನಿರ್ದುಷ್ಟವಲ್ಲ; ಕಾರಣ ಆ ಎರಡೂ ಉದಾಹರಣೆಗಳಲ್ಲಿ ಪ್ರಧಾನ ವಾಕ್ಯಾರ್ಥವಾಗಿ ಕರುಣರಸವೇ ಅದರ ಬೇರೆ ಬೇರೆ ರೂಪಗಳಲ್ಲಿ ಪ್ರತಿಪಾದಿತವಾಗಿದೆ.

ಪರ್ಯಾಯೋಕ್ತ ಅಲಂಕಾರ ಮತ್ತು ಅನ್ಯಾಪದೇಶ ಅಲಂಕಾರಗಳಲ್ಲಿ ವ್ಯಕ್ತವಾಗಿರುವ ಪ್ರಕಾರ ವಾಚ್ಯತೆಗಿಂತ ಭಿನ್ನವಾದ ಅರ್ಥಗಳು ಪ್ರತೀಯಮಾನವಾದ ಕಾರಣ ಹಾಗೂ 'ಕರುಣ'ವು 'ರಸ'ವಾದ ಕಾರಣ ಅದು ಯಾವ ರೀತಿಯಲ್ಲೂ ವಾಚ್ಯತ್ವಕ್ಕಿಳಿಯಲು ಸಾಧ್ಯವಿಲ್ಲ; (ನೇರವಾಗಿ ಹೇಳಲು ಸಾಧ್ಯವಿದ್ದರೂ) ವ್ಯಂಗ್ಯವೇ ಆಗುತ್ತದೆ ಅಥವಾ ಅದು ಗುಣೀಭೂತ ವ್ಯಂಗ್ಯದ ಉದಾಹರಣೆಯೂ ಆಗುವುದಿಲ್ಲ; ಕಾರಣ ಕರುಣವು ಮೂಲತಃ ವ್ಯಂಗ್ಯ ರೂಪದಲ್ಲಿಯೇ ಪ್ರತೀತವಾಗುತ್ತದೆ. ಎರಡೂ ರಸಗಳು ವ್ಯಂಗ್ಯ ರೂಪದಲ್ಲಿ ಪ್ರತೀತವಾಗುತ್ತವೆಂದು ಹೇಳಲಾಗುವುದಿಲ್ಲ, ಕಾರಣ ಅವಕ್ಕೆ ಪರಸ್ಪರ ಅಂಗಾಂಗೀ ಭಾವವಿಲ್ಲ. ಮೇಲಿನ ಉದಾಹರಣೆಯಲ್ಲಿ ರಸವದಲಂಕಾರದ ವಿಭಿನ್ನ ಪರ್ಯಾಯಗಳನ್ನು ಕಲ್ಪಿಸಿ ಅನಂತರ, ಅವು ಯುಕ್ತಿ ಸಂಗತವಲ್ಲ ಎಂದು ನಿರಾಕರಿಸಲಾಗಿದೆ. 'ಪರ್ಯಾಯೋಕ್ತ' ಮತ್ತು 'ಅಪ್ರಸ್ತುತ ಪ್ರಶಾಂಸಾ'ಗಳೆರಡೂ ಒಂದೇ ಎಂಬುದು ಇಲ್ಲಿ ಯುಕ್ತವಾಗುವುದಿಲ್ಲ. ಇದರೊಂದಿಗೆ ಈ ಚರ್ಚೆಯನ್ನು ಮುಕ್ತಾಯಗೊಳಿಸಲಾಗಿದೆ.

ಅಲ್ಲದೆ - "ಈ ಕಾವ್ಯದಲ್ಲಿ ರಸಾದಿ ಅಲಂಕಾರಗಳಿವೆ" - ಎಂಬ ಹೇಳಿಕೆಯಲ್ಲಿ ರಸವೇ ಅಲಂಕಾರವೆಂದು ನಿರ್ದೇಶಿತವಾಗುತ್ತದೆಯೇ ಹೊರತು, 'ರಸವತ್' ಅಲ್ಲ; ರಸವನ್ನು

ಹೊಂದಿರುವಂಥದೂ ಅಲ್ಲ ಮತ್ತು 'ರಸವತ್' ಎಂಬ ಶಬ್ದಕ್ಕೂ ಅದರಿಂದ ಹೊರಡುವ ಅರ್ಥಕ್ಕೂ ಸಾಮಂಜಸ್ಯವಿಲ್ಲದಿರುವುದು (ಹೊಂದಿಕೆ ಇಲ್ಲದಿರುವುದು) ನಮ್ಮನ್ನು ತೀವ್ರ ಗೊಂದಲದಲ್ಲಿ ಮುಳುಗಿಸುತ್ತದೆ.

ಇದುವರೆಗೂ 'ರಸವತ್' ಅನ್ನು ಒಂದು ಅಲಂಕಾರವೆಂದು ಪರಿಗಣಿಸುವುದರ ವಿರುದ್ಧವಾಗಿ ಚರ್ಚಿಸಿ ಅದು (ರಸವತ್ ಅಲಂಕಾರ) ವಾಸ್ತವವಾಗಿ ಕಾವ್ಯ ಶರೀರದ ಅವಿಭಾಜ್ಯ ಅಂಗವಾಗಿದೆ ಎಂಬ ನಮ್ಮ ನಿಲುವನ್ನು ಹೇಳಿದ್ದಾಯಿತು. ಈಗ ಇನ್ನೊಂದು ಅಲಂಕಾರವಾದ "ಪ್ರೇಯಸ್"ಗೂ ಅದೇ ಕಾರಣ ಅಷ್ಟೇ ಪ್ರಬಲವಾಗಿ ಅನ್ವಯಿಸುವುದರಿಂದ ಅದು ಅಲಂಕಾರವೆ ಅಲ್ಲವೆ ಎಂಬುದನ್ನು ಚರ್ಚಿಸೋಣ.

ನಪ್ರೇಯಸ್ತದ್ವಿರುದ್ಧಃ ಸ್ಯಾದ ಪ್ರೇಯೋಽ ಸಾವಲಂಕೃತಿಃ
ಅಲಂಕಾರಾಂತರೇ ಸ್ಯಾತಾಮನ್ಯತ್ರಾದರ್ಶನಾದಪಿ[12]

ಪ್ರೇಯಸ್ ಕೂಡ ಒಂದು ಅಲಂಕಾರವಲ್ಲ. ಕಾರಣ ಆ ಲೆಕ್ಕದಲ್ಲಿ ಅದರ ವಿರುದ್ಧವಾದ ಅಪ್ರೇಯಸ್- (ನಿಂದೆ) ಕೂಡ ಒಂದು ಅಲಂಕಾರವಾಗಬೇಕು. ಈಗಾಗಲೇ ಅಂಗೀಕೃತವಾದ ಅಲಂಕಾರಗಳನ್ನು (ಉದಾ - ಉಪಮಾಲಂಕಾರ) ಪ್ರೇಯಸ್‌ನೊಂದಿಗೆ ಬಳಸುವುದನ್ನು ಎರಡು ಅಲಂಕಾರಗಳ ಸಂಯೋಗ (ಸಮಾವೇಶ)ವೆಂದೋ, ಅಥವಾ ಮಿಶ್ರ ಅಲಂಕಾರಗಳೆಂದೋ ಪರಿಗಣಿಸಬೇಕಾಗುತ್ತದೆ. ಪ್ರಶಂಸೆ ಅಥವಾ ಸ್ತುತಿಯನ್ನು ಒಳಗೊಳ್ಳದಿರುವ ಸಂದರ್ಭಗಳಲ್ಲಿ ಕೂಡ, ಇತರೆ ಅಲಂಕಾರಗಳ ಹಾಗೆ, ಅದಕ್ಕೊಂದು ಸ್ವತಂತ್ರ ಸ್ಥಾನವಿರಬೇಕಾಗುತ್ತದೆ. [12]

ಯಾವುದನ್ನು ಪೂರ್ವಾಚಾರ್ಯರು (ಚಿರಂತನೈಃ) ಅಲಂಕಾರ ಎಂದು ಮಾನ್ಯಮಾಡುತ್ತ ಬಂದಿದ್ದಾರೋ ಅದು ಆ ಹೆಸರಿಗೆ ಯೋಗ್ಯವಲ್ಲ. ಕಾರಣಗಳು ಹೀಗಿವೆ. ಮೊದಲನೆಯದಾಗಿ 'ಪ್ರಿಯತರವಾದ ಆಖ್ಯಾನವೇ ಪ್ರೇಯಸ್' ಎಂದು ಒಬ್ಬ ಲೇಖಕ ಹೇಳಿರುವ ಅದರ ಲಕ್ಷಣವನ್ನು ನೋಡೋಣ. ಇನ್ನು ಕೆಲವು ಲೇಖಕರು, ಬಹುಶಃ ಲಕ್ಷ್ಯವೇ ಲಕ್ಷಣದ ಕೆಲಸವನ್ನು ನಿರ್ವಹಿಸುತ್ತದೆಂದು ಭಾವಿಸಿ, ಅದರ ಉದಾಹರಣೆಯನ್ನು ಮಾತ್ರ ಹೇಳಿದ್ದಾರೆ.*

ಪ್ರೇಯೋ ಗೃಹಗತಂ ಕೃಷ್ಣಮವಾದೀದ್ವಿದುರೋ ಯಥಾ|
ಕಾಲೇನೈಷಾ ಭವೇತ್ ಪ್ರೀತಿಸ್ತವೈವಾಗಮನಾತ್ ಪುನಃ[೪೫] [ಕಾವ್ಯಾದರ್ಶ II 276]

ಪೂರ್ವೇಷಾಂ ಚೈತದೇವೋದಾಹರಣಮಭಿಮತಮ್ ತಥಾ ಚ ತೈರುಕ್ತಮ್-
ಅದ್ಯ ಯಾ ಮಮ ಗೋವಿಂದ ಜಾತಾ ತ್ವಯಿ ಗೃಹಗತೇ[೪೬]

ದೇವಾ ನೀನೆನ್ನ ಮನೆಗೆ ಬಂದುದರಿಂದಾದ ಸಂತಸವು
ಕಾಲಾಂತರದೊಳು ನೀನೆನ್ನ ಮನೆಗೆ ಮತ್ತೆ ಬಂದಂದು ಆಗುವುದೈಸೆ [೪೫]

---

* ಕೃಷ್ಣನು ವಿದುರನ ಮನೆಗೆ ಅತಿಥಿಯಾಗಿ ಹೋದಾಗ, ವಿದುರನು ಕೃಷ್ಣನನ್ನು ಸಂಬೋಧಿಸಿ ಆಡುವ ಮಾತುಗಳಲ್ಲಿ 'ಪ್ರೇಯಸ್' ಲಕ್ಷ್ಯಕ್ಕೆ ಬರುತ್ತದೆ.

ಹಿಂದಿನ ಆಲಂಕಾರಿಕರ ಪ್ರಕಾರವೂ ಇದು ಪ್ರೇಯಸ್‌ನ ಉದಾಹರಣೆಯಾಗಿದೆ. ಪೀಠಿಕಾ ಭಾಗದ ಅವರ ಮಾತುಗಳಿಂದ ಇದು ಸ್ಪಷ್ಟವಾಗುತ್ತದೆ. ಉದಾ:

ಓ ಗೋವಿಂದ ಇಂದು ನೀನೆನ್ನ
ಮನೆಗೆ ಬಂದುದರಿಂದಾದುದೀ ಸಂತಸವು [೪೬]

ಇದು ಅಷ್ಟೊಂದು ಸೂಕ್ಷ್ಮ ಪರಿಶೀಲನೆಗೆ ಅರ್ಹವಲ್ಲ ಎಂದು ಕುಂತಕ ಹೇಳುತ್ತಾನೆ. ಕಾರಣ ಮೂಲದ ಎರಡನೇ ಸಾಲಿನಲ್ಲಿ ಹೇಳಿರುವ "ಕಾಲಾಂತರದಲ್ಲಿ ನೀನು ಪುನಃ ನನ್ನ ಮನೆಗೆ ಬಂದಾಗ ಮಾತ್ರ ಅನುಭವಕ್ಕೆ ಬರುವಂಥದು"- ಎಂಬ ಮಾತೇ ವರ್ಣ್ಯಮಾನ ವಿಷಯವಾದ್ದರಿಂದ, ಅದೇ ಪದಾರ್ಥದ ಸ್ವಭಾವವಾಗಿದೆ. ಅದನ್ನೇ ಅಲಂಕರಣ (ಅಲಂಕಾರ)ವೆಂದು ಹೇಳಬೇಕೆಂದರೆ, ಅಲಂಕಾರ್ಯವೆಂದು ಹೇಳಬೇಕಾದ ಕಾವ್ಯವಸ್ತುವಾವುದೂ ಉಳಿದಿರುವುದಿಲ್ಲ. ಅದೇ ಅಲಂಕಾರ್ಯವೂ ಆಗಿ, ಅಲಂಕಾರವೂ ಆಗಿರುತ್ತದೆಂದು ಹೇಳುವುದು ಯುಕ್ತಿ ಸಂಗತವಲ್ಲ, ಅಲ್ಲದೆ ಕ್ರಿಯೆಯೊಂದು ನಡೆದರೆ ಒಂದೇ ವಸ್ತು ಏಕಕಾಲದಲ್ಲಿ ಆ ಕ್ರಿಯೆಯ ಕರ್ಮ ಹಾಗೂ ಅದರ ಕರಣ (ಸಾಧನವೂ)ವೂ ಆಗಿರುವುದೆಂದು ಊಹಿಸುವುದೇ ಸರಿಯಲ್ಲ. ಒಂದು ವೇಳೆ ಈ ರೀತಿಯ ವಾಕ್ಯಗಳು ಈ ಕೆಳಗೆ ಹೇಳಿರುವ ಹಾಗೆ ಒಂದೇ ಕ್ರಿಯೆಯ ಕರ್ಮ ಮತ್ತು ಕರಣಗಳನ್ನು ಒಳಗೊಂಡಿರುವಂಥವು ಕಂಡುಬರಬಹುದು.

ಆತ್ಮಾನಮಾತ್ಮನಾ ವೇತ್ಸಿ ಸೃಜಸ್ಯಾತ್ಮಾನಮಾತ್ಮನಾ
ಆತ್ಮನಾ ಕೃತಿನಾ ಚ ತ್ವಮಾತ್ಮನ್ಯೇವ ಪ್ರಲೀಯಸೇ [೪೭] (ಕುಮಾರಸಂಭವ II 10)

ನಿನ್ನನ್ನು ನೀನು ನಿನ್ನಿಂದ ಚೆನ್ನಾಗಿ ತಿಳಿದಿರುವೆ
ನಿನ್ನನ್ನು ನೀನು ನಿನ್ನಿಂದ ಸೃಷ್ಟಿಸುವೆ
ನಿನ್ನ ಕಾರ್ಯಗಳಿಂದ ನಿನಗೆ ನೀನೇ ಬಿಡುಗಡೆಗೊಂಡು,
ನಿನ್ನಲ್ಲಿ ನೀನೇ ಲೀನವಾಗುವೆ [೪೭]

ಹೀಗೆ ಹೇಳಿದರೂ ಅದೂ ಕೂಡ ವಸ್ತು ಸ್ಥಿತಿಯೊಂದಿಗೆ ಸಂಗತವಾಗುವುದಿಲ್ಲ. ಪರಮಾತ್ಮ ಮತ್ತು ಈ ವಿಶ್ವಗಳ ವಿಷಯದಲ್ಲಿ ಅಭೇದತೆಯೇ ವಾಸ್ತವವಾದರೂ, ಕವಿ, ಕಾಲ್ಪನಿಕ ಔಪಚಾರಿಕ ಸತ್ತೆಯ ಆಧಾರದ ಮೇಲೆ ಪರಮಾತ್ಮನು ತನ್ನ ಸೃಷ್ಟಿಯಾದ ಈ ವಿಶ್ವದಿಂದ ಬೇರೆ ಎಂಬಂತೆ ವರ್ಣಿಸುವುದಕ್ಕೆ ಹೊರಟಿದ್ದಾನೆ. ಜೊತೆಗೆ ಪರಮೇಶ್ವರನು ವಿಶ್ವಮಯವಾಗಿರುವುದು ಹಾಗೂ ವಿಶ್ವವು ಪರಮೇಶ್ವರಮಯವಾಗಿರುವುದರಿಂದ ಅವರ ಅಭೇದತೆಯೊಂದೇ ಅಂತಿಮ ಸತ್ಯ. ಇಷ್ಟಾದರೂ ಅವನ ಮಾಹಾತ್ಮ್ಯ ಪ್ರತಿಪಾದನೆಯ ಸಲುವಾಗಿ ಅದರೆಲ್ಲ ಅನಂತ ವೈಭವಗಳಿಂದ ವೈವಿಧ್ಯಪೂರ್ಣವಾಗಿರುವ ಈ ಜಗತ್ತಿನಿಂದ ಅವನನ್ನು ಬೇರೆ ಎಂದು ತೋರಿಸಲು ಮಾಡುವ ವರ್ಣನೆಯು ಎಲ್ಲ ಸಂವೇದನೆಗಳ ಸಾರ್ವತ್ರಿಕ ವಸ್ತುವಾಗಿ ಅವನ ಸರ್ವಾಂತರ್ಯಾಮಿತ್ವವನ್ನೇ ಒತ್ತಿ ಹೇಳುತ್ತದೆ. ಹಾಗೂ ಅದು ಪರಿಪೂರ್ಣ ವಾಸ್ತವತೆಯ ಸ್ವರೂಪವನ್ನೇನೂ ಬದಲಾಯಿಸುವು ದಿಲ್ಲ. ವಿಶ್ವವ್ಯಾಪಕನಾಗಿಯೂ

ವಿಶ್ವಾತೀತನಾಗಿಯೂ ಇರುವ ಪರಮೇಶ್ವರನಿಗೆ ಮಾತ್ರ ಒಂದು ದೃಷ್ಟಿಯಿಂದ ಒಂದು ಅಸಾಂಗತ್ಯವೂ ಇಲ್ಲದೆ ತನ್ನ ಸಂವೇದನೆಯ ಕರ್ತೃವೂ ಅವನೇ ಕರ್ಮವೂ ಅವನೇ ಕೆಲವೊಮ್ಮೆ ಕರಣವೂ ಎಂಬುದು ಅನ್ವಯಿಸುತ್ತದೆ. ಆದರೆ ನಾವು ಚರ್ಚಿಸುತ್ತಿರುವ ಪ್ರಸ್ತುತ ಉದಾಹರಣೆಯಲ್ಲಿ ಎರಡೂ ವಸ್ತುಗಳು ವಾಸ್ತವವಾಗಿಯೂ ಭಿನ್ನವಾಗಿದೆಯೆಂದು ಕಷ್ಟದಿಂದ ನಾವು ಕಂಡುಕೊಂಡರೂ ನಮಗೆ ಅದರಿಂದೇನೂ ಉಪಯೋಗವಿಲ್ಲ. ಆದ್ದರಿಂದ ರಸವದಲಕಾರದ ಬಗ್ಗೆ ಈ ಮುಂಚೆ ಮಾಡಲಾದ ಟೀಕೆ-ವಸ್ತುವಿನ ವ್ಯಾಪ್ತಿಯಲ್ಲಿ ಇರುವುದರ ಹೊರತು ಎರಡನೆಯ ಪದಾರ್ಥವಾವುದೂ ಇಲ್ಲ ಎಂಬ ಟೀಕೆಯು ಅಷ್ಟೇ ಸಮರ್ಥವಾಗಿ ಅನ್ವಯಿಸುತ್ತದೆ. ಎರಡಕ್ಕೂ ಇರುವ ಈ ಅಭೇದವನ್ನು ಒಮ್ಮೆ ಒಪ್ಪಿಕೊಂಡು ಬಿಟ್ಟರೆ, ಪ್ರೇಯಸ್ ಮತ್ತು ರಸವತ್‌ನಲ್ಲಿ ಅದೇ ವಸ್ತು ಅಲಂಕೃತಗೊಳ್ಳುವ ಪದಾರ್ಥವಾಗಿ ಹಾಗೂ ಅಲಂಕರಣ ಸಾಧನವಾಗಿ ಕಾಣಿಸಿಕೊಳ್ಳುತ್ತದೆ. ಇದರಲ್ಲಿ ಅದೇ ವಸ್ತು ಪರಸ್ಪರ ವಿರುದ್ಧ ಕ್ರಿಯೆಗಳಿಗೆ ಕಾರಣವಾಗುತ್ತದೆಂದು ಹೇಳುವುದು ಯುಕ್ತಿಯುಕ್ತವಾಗುವುದಿಲ್ಲ ವಾದ್ದರಿಂದ, ಇದು ತನಲ್ಲಿಯೇ ಸ್ವವಿರೋಧವನ್ನು ಒಳಗೊಂಡಿರುವ ದೋಷಕ್ಕೆ ಪಕ್ಕಾಗುತ್ತದೆ. ಈ ಹಿಂದೆಯೇ ನೋಡಿದಂತೆ, - "ತನ್ನ ಹೆಗಲ ಮೇಲೆಯೇ ಯಾರೂ ಹತ್ತಲಾರರು" ಈ ಒಂದು ತೀವ್ರ ಟೀಕೆ ಈ ಹಿಂದಿನಂತೆಯೇ ಈಗಲೂ ಉತ್ತರ ಸಿಗದೆ ಹಾಗೆಯೇ ಉಳಿಯುತ್ತದೆ.

[ಕುಂತಕನು ಇನ್ನೊಂದು ತದ್ವಿರುದ್ಧವಾದ ದೋಷಣೆಯನ್ನು ಮಾಡುತ್ತಾನೆ.] ಅದೆಂದರೆ- ಆ ಲೆಕ್ಕದಲ್ಲಿ, ಪ್ರೇಯಸ್‌ಗೆ ವಿರುದ್ಧವಾದ ನಿಂದೆ (ಅಪ್ರಶಂಸೆ) ಕೂಡ ಒಂದು ಅಲಂಕಾರವಾಗ ಬಹುದು. ಅದೇ ಸಂಜ್ಞೆಯ ಮೇರೆಗೆ, ವರ್ಣಿತ ವ್ಯಕ್ತಿಯ, ಸುಪ್ರೇಯದ (ಸುಪ್ರಶಂಸೆ) ಹಾಗೆಯೇ ನಿಂದೆ (ಅಪ್ರಶಂಸೆ) ಕೂಡ ಶೋಭಾಯಮಾನವಾಗಿದ್ದು, ಅಲಂಕಾರದ ಮಾನ್ಯತೆಗೆ ಅರ್ಹವೆಂದು ಯಾರಾದರೂ ವಾದಿಸಬಹುದು. ಪ್ರಾಚೀನ ಆಲಂಕಾರಿಕರಾರೂ ಅಂಥ ಸಂಭವನೀಯತೆಯನ್ನು ಒಪ್ಪಲಾರರು. ಕಾರಣ ಅಪ್ರೇಯಸ್ ಅನ್ನು ಅಲಂಕಾರವೆಂದು ಅವರುಗಳಾರೂ ಮಾನ್ಯ ಮಾಡಿಲ್ಲ. ಅಲಂಕರಣಕ್ಕೂ ಅಲಂಕಾರ್ಯಕ್ಕೂ ಪ್ರಾಚೀನ ಅಲಂಕಾರಿಕರು ಮಾಡುವ ಸಾಮಾನ್ಯ ಪ್ರಭೇದ ತತ್ತ್ವವೇ ಕಾವ್ಯದಲ್ಲಿ ಅಲಂಕಾರಗಳನ್ನು ಗುರುತಿಸಲು ಇರುವ ಮೂಲಾಧಾರ ಮೂರು ಲೋಕಗಳಲ್ಲಿ ಸಿದ್ಧರು, ವಿದ್ಯಾಧರರೇ ಮೊದಲಾದವರನ್ನು ಒಳಗೊಂಡಂತೆ, ವಸ್ತುಗಳ ಅಸಂಖ್ಯಾತ ಜೋಡಣೆಯೇ ಅಲಂಕಾರ್ಯಗಳು. ಆದರೆ ಅವರು ಧರಿಸುವ ಆಭರಣಗಳಾದ (ಅಲಂಕರಣ) ಕಟಕ, ಕೇಯೂರಾದಿಗಳು ಪರಿಮಿತ ಸಂಖ್ಯೆಯ ವಸ್ತುಗಳು ಅಲಂಕಾರಗಳು ಅದೇ ರೀತಿ ಕಾವ್ಯದಲ್ಲಿ ಕೂಡ ವರ್ಣನೆಗೆ ನಿಲುಕುವ ಕಾವ್ಯ ವಸ್ತುವಿನ ಶರೀರವು ಅಪರಿಮಿತವಾದ್ದು ಹಾಗೂ ಅದೆಲ್ಲವೂ ಅಲಂಕಾರ್ಯವೆಂದೇ ಪರಿಗಣಿತವಾಗಬೇಕು. ಉಪಮೆಯೇ ಮೊದಲಾದ ಅಲಂಕರಣಗಳು ಪರಿಮಿತ ಸಂಖ್ಯೆಯಲ್ಲಿರುತ್ತವೆ. ಒಂದು ವೇಳೆ ವರ್ಣನೀಯಗಳಾದ ಪ್ರೇಯವೇ ಮೊದಲಾದವುಗಳನ್ನು ಅಲಂಕಾರಗಳೆಂದು ಪರಿಗಣಿಸಿದ್ದೇ ಆದರೆ ವರ್ಣಿತ ವಸ್ತುವನ್ನು ಹೊರತುಪಡಿಸಿ, ಉಳಿದ ಅಲಂಕಾರಗಳೂ ಅಸಂಖ್ಯಾತವೇ (ಅನಂತಾ) ಆಗಬೇಕಾಗುತ್ತದೆ. ಅವು ಅನಂತವಾಗಬೇಕೆಂದಾದರೆ, ಅವೆಲ್ಲವನ್ನೂ ಸಮಗ್ರವಾಗಿ ಎಣಿಸುವುದಾಗಲಿ, ಅಥವಾ ಅವುಗಳನ್ನು ಕಲ್ಪಿಸಿಕೊಳ್ಳುವುದಾಗಲಿ,

ಅಸಾಧ್ಯವೇ ಸರಿ. ಆದ್ದರಿಂದ ಕಾವ್ಯದಲ್ಲಿ ಕೂಡ, ಸಾಮಾನ್ಯ ಬಳಕೆಯಲ್ಲಿ ಅಲಂಕಾರ ಮತ್ತು ಅಲಂಕಾರ್ಯಗಳು ಲೌಕಿಕ ವ್ಯವಹಾರದಲ್ಲಿ ಯಾವ ಅರ್ಥವನ್ನು ಸೂಚಿಸುತ್ತವೋ ಅದೇ ಅರ್ಥವನ್ನು ಸೂಚಿಸುತ್ತವೆ, ಅದಕ್ಕಿಂತ ಹೆಚ್ಚೂ ಅಲ್ಲ, ಕಮ್ಮಿಯೂ ಅಲ್ಲ.

ಇಲ್ಲಿಯೇ ಕುಂತಕನು ಇನ್ನೊಂದು ಆಕ್ಷೇಪಣೆಯನ್ನು ಎತ್ತುತ್ತಾನೆ. ಅದು ಅಲಂಕಾರಾಂತರೇ' - ಇಂಥ ಸಂದರ್ಭಗಳನ್ನು ಸಂಸೃಷ್ಟಿ ಅಥವಾ ಸಂಕರ ಅಲಂಕಾರಗಳೆಂದು ಪರಿಗಣಿಸಬೇಕಾಗುತ್ತದೆ. ಮೊದಲನೆಯದಾಗಿ, ಪ್ರಿಯತರ ಆಖ್ಯಾನ - (ಪ್ರೇಯ)ವು, ವಾಸ್ತವವಾಗಿ ವರ್ಣನೀಯ ಅಲಂಕಾರ್ಯವೆ ಆಗಿದ್ದರೂ, ರೂಪಕಾದಿ ಅಲಂಕಾರಣಗಳು ಅದರೊಂದಿಗೆ (ಹೆಚ್ಚಾಗಿ) ಸೇರ್ಪಡೆ ಯಾಗಿದ್ದಾಗ, ಪ್ರೇಯವನ್ನೇ ಅಲಂಕರಣ ಸಾಧನವಾಗಿ ಪರಿಗಣಿಸುವುದಾದರೆ, ಅವುಗಳನ್ನು ಎರಡು ಅಲಂಕಾರಗಳ ಸಂಸೃಷ್ಟಿ ಮತ್ತು ಸಂಕರ ಅಲಂಕಾರಗಳ ಉದಾಹರಣೆಗಳೆಂದು ಭಾವಿಸಬೇಕು. ಎರಡನ್ನೂ ಪ್ರತ್ಯೇಕವಾಗಿ ಗುರುತಿಸಲು ಸಾಧ್ಯವಿದ್ದರೆ ಸಂಸೃಷ್ಟಿ ಅಲಂಕಾರ ವೆನಿಸುತ್ತದೆ. ಎರಡನ್ನೂ ಪ್ರತ್ಯೇಕವಾಗಿ ಗುರುತಿಸಲು ಸಾಧ್ಯವಾಗದೆ ಅಭಿನ್ನವಾಗಿದ್ದಾಗ, ಸಂಕರ ಅಲಂಕಾರವೆನಿಸುತ್ತದೆ. ನಮಗೆ ತಿಳಿದಿರುವ ಮಟ್ಟಿಗೆ, ಹಿಂದಿನ ಯಾವ ಆಲಂಕಾರಿಕನೂ ಪ್ರೇಯೋ ಅಲಂಕಾರದ ಉದಾಹರಣೆಗಳ ಸಂದರ್ಭದಲ್ಲಿ ಸಂಕರ ಅಥವಾ ಸಂಸೃಷ್ಟಿ ಅಲಂಕಾರಗಳೆಂದು ಇವಕ್ಕೆ ಹೆಸರಿಡುವ ಗೋಜಿಗೆ ಹೋಗಿಲ್ಲ. ಅದು ಸರಿಯಾಗಿಯೇ ಇದೆ. ಕಾರಣ ಆ ಉದಾಹರಣೆಗಳಲ್ಲಿ ಯಾವುದೇ ಎರಡು ಅಲಂಕಾರಗಳ ಮಿಶ್ರಣವಿರುವುದಿಲ್ಲ.

ಉದಾ :

ಇಂದೋರ್ಲಕ್ಷ್ಮ ಸ್ಮರವಿಜಯಿನಃ ಕಂಠಮೂಲಂ ಮುರಾರಿಃ
ದಿಙ್ನಾಗಾನಾಂ ಮದಜಲಮಷೀ ಭಾಂಜಿ ಗಂಡಸ್ಥಲಾನಿ|
ಅದ್ಯಾಪ್ಯುರ್ವೀ ವಲಯ ತಿಲಕ ಶ್ಯಾಮ ಲಿಮ್ನಾನು ವಿಲಿಪ್ತಾ-
ನ್ಯಾಭಾಸಂತೇ ವದ ಧವಲಿತಂ ಕಿಂ ಯಶೋಭಿಸ್ತ್ವದೀಯೈಃ [೪೮]

ಚಂದಿರನ ಲಾಂಛನವು ಕಾಮಾರಿಯ ಕಂಠ,
ಮುರಾರಿಯ ಮೈ ಮತ್ತಾಮದಜಲದ
ಮಸಿಯು ಸೋರುತಿಹ ದಿಕ್ಕರಿಗಳ ಗಂಡಸ್ಥಲವು
ಇಂದಿಗೂ ಇಹವು ಕಪ್ಪಾಗಿಯೆ,
ಹೇಳು ಹೇಳೆಲೆ ಭೂತಿಲಕ
ಆವುದನು ಬಿಳಿದಾಗಿಸಿಹುದು
ನಿನ್ನಾ ಧವಳ ಕೀರ್ತಿಯು [೪೮]*

---

* ಇದು ನೋಡಲು ರಾಜನ ನಿಂದೆಯೆಂಬಂತೆ ಭಾಸವಾಗುತ್ತಿದೆ. ಕಾರಣ ನಿಮ್ಮಯ ಕೀರ್ತಿಯು ಇವಾವುದನ್ನೂ ಬಿಳಿದಾಗಿಸಿಯೇ ಇಲ್ಲ ಎಂಬ ಮಾತು. ಆದರೆ ವಾಸ್ತವವಾಗಿ ಅದು ಪ್ರಶಂಸೆಯಾಗಿದೆ.

ಇಲ್ಲಿ ರಾಜನ ಪ್ರಿಯಕಥನ (ಪ್ರೇಯ) ಅಲಂಕಾರ್ಯ. ಅದರ ಅಲಂಕರಣ ವ್ಯಾಜಸ್ತುತಿ ಅಲಂಕಾರದ ರೂಪದಲ್ಲಿದೆ. ಎರಡು ವಿಭಿನ್ನ ಅಲಂಕಾರಗಳು ಜೊತೆಯಾಗಿ ಇರುವುದು ಪ್ರತೀತಿಯಾಗುತ್ತಿಲ್ಲ. ಹಾಗೆ ಅವರೆಡರ ಪ್ರತೀತಿಯಾಗಿದ್ದಿದ್ದರೆ ಇದನ್ನು (ಈ ಶ್ಲೋಕವನ್ನು) ಸಂಕರ ಅಲಂಕಾರ ಅಥವಾ ಸಂಸೃಷ್ಟಿ ಅಲಂಕಾರಕ್ಕೆ ಉದಾಹರಣೆ ಎಂದು ಸಮರ್ಥಿಸುವುದು ನ್ಯಾಯೋಚಿತವಾಗುತ್ತಿತ್ತು. ಪ್ರೇಯಸ್ ಮತ್ತು ವ್ಯಾಜಸ್ತುತಿಯ ಹೊರತಾಗಿ, ಅಲಂಕಾರ್ಯವೆಂದು ಹೇಳಬಹುದಾದ ಮೂರನೆಯ ಪದಾರ್ಥ ಕಂಡು ಬರುತ್ತಿಲ್ಲ.

ಈಗ ಇನ್ನೊಂದು ಆಕ್ಷೇಪವನ್ನು ಮುಂದೊಡ್ಡುತ್ತಾನೆ. ಅದೆಂದರೆ ಪ್ರಶಂಸೆಯನ್ನು ಒಳಗೊಳ್ಳದಿರುವ ಇನ್ನಿತರೆ ಉದಾಹರಣೆಗಳಲ್ಲೂ, ಇತರೆ ಅಲಂಕಾರಗಳಿಗಿರುವಂತೆ ಅದಕ್ಕೂ ಸ್ವತಂತ್ರ ಸ್ಥಾನವಿರಬೇಕಾಗುತ್ತದೆ. ಪ್ರೇಯಸ್ ಅನ್ನು ಒಂದು ಅಲಂಕಾರವೆಂದು ಪರಿಗಣಿಸಿದಲ್ಲಿ, ಸ್ತುತಿಯನ್ನು ಒಳಗೊಳ್ಳದಿರುವ ಉದಾಹರಣೆಗಳ ಸಂದರ್ಭದಲ್ಲೂ, ಉಪಮಾದಿ ಅಲಂಕಾರಗಳು ಇರುವಂತೆಯೇ ಅದೂ ಇರಬೇಕಾದ ಸಂದರ್ಭ ಒದಗಬಹುದು. ಆದರೆ ಅಂಥ ಸಂದರ್ಭ ಎಂದೂ ಒದಗಿಬಂದಿಲ್ಲ. ಇದೇ ಕಾರಣದಿಂದಲೂ ರಸವದಲಂಕಾರದ ಹಾಗೆಯೇ ಪ್ರೇಯಸ್ ಕೂಡ ಸ್ವತಂತ್ರ ಅಲಂಕಾರವೆಂದು ವಿಂಗಡಣೆಗೊಳ್ಳುವುದು ಯುಕ್ತಿ ಸಂಗತವಲ್ಲ. ಈ ವಿಷಯದಲ್ಲಿ ಎರಡೂ ಸಮನಾಗಿವೆ ಹಾಗೂ ರಸವತ್ ಒಂದು ಅಲಂಕಾರವಲ್ಲ ಎಂಬ ಈ ಮುಂಚಿನ ನಮ್ಮ ವಾದಕ್ಕೆ ಹೆಚ್ಚಿನ ಪುಷ್ಟಿಯೊದಗಿಸುತ್ತದೆ. ಪ್ರೇಯಸ್‌ಗೆ ಅಲಂಕರಣದ ಸ್ಥಾನವನ್ನು ನಿರಾಕರಿಸಿದ ನಂತರ, ಕುಂತಕನು ವಾಸ್ತವವಾಗಿ ವರ್ಣನೀಯ ಶರೀರವೇ ಅಥವಾ ಅಲಂಕಾರ್ಯವೇ ಆಗಿದ್ದರೂ, ಅಲಂಕಾರ ಗಳೆಂದು ಕರೆಯಲಾಗುವ ಊರ್ಜಸ್ವಿ ಮೊದಲಾದುವುಗಳಿಗೆ ಇದೇ ವಾದವನ್ನು ವಿಸ್ತರಿಸುತ್ತಾನೆ.

ಊರ್ಜಸ್ವ್ಯುದಾತ್ತಯೋಸ್ತದ್ವದ್ ಭೂಷಣತ್ವಂ ನ ವಿದ್ಯತೇ।
ತಥಾ ಸಮಾಹಿತಸ್ಯಾಪಿ ಪ್ರಕಾರದ್ವಯ ಶೋಭಿನಃ[13]

ಅದೇ ರೀತಿಯಲ್ಲಿಯೇ ಊರ್ಜಸ್ವಿನ್ ಉದಾತ್ತ ಹಾಗೂ ಎರಡು ಪ್ರಕಾರದ ಸಮಾಹಿತಗಳಲ್ಲಿ ಅಲಂಕಾರದ ಗುಣ ಲಕ್ಷಣಗಳು ಕಂಡುಬರುವುದಿಲ್ಲ. [13]

ಇದುವರೆಗೆ ಪ್ರತಿಪಾದಿಸಿದ ತರ್ಕದ ಮೇರೆಗೆ ಪ್ರಾಚೀನ ಆಲಂಕಾರಿಕರು, ಅಲಂಕಾರದ ಪಟ್ಟಿಗೆ ಸೇರಿಸಿರುವ ಊರ್ಜಸ್ವಿ ಮತ್ತು ಉದಾತ್ತ ಅಲಂಕಾರಗಳಲ್ಲಿ, ಅಲಂಕರಣದ

ಅದರಿಂದ ಅದು ವ್ಯಾಜಸ್ತುತಿ ಅಲಂಕಾರ. ಇದರಲ್ಲಿ ರಾಜನ ವಿಷಯಕವಾದ ಪ್ರಿಯವಾದ ಮಾತುಗಳ ಪ್ರಸಕ್ತಿ ಇರುವುದರಿಂದ ಚಾಟು ಅಥವಾ ಪ್ರೇಯ ಅಲಂಕಾರ. ಆದ್ದರಿಂದ ಇಲ್ಲಿ ಅಲಂಕಾರ-ಅಲಂಕಾರ್ಯ ಭಾವ ಸ್ಪಷ್ಟವಾಗಿದೆ. ಪ್ರೇಯ ಅಲಂಕಾರ - ಅಲಂಕಾರ್ಯ ಮತ್ತು ವ್ಯಾಜಸ್ತುತಿ ಅಲಂಕಾರ ರೂಪದಲ್ಲಿದೆ. ಅಥವಾ ಅದು ಎರಡು ಅಲಂಕಾರಗಳ ಸಂಕರ. ಹೀಗೆಂದು ಪೂರ್ವಪಕ್ಷದ ಅಭಿಪ್ರಾಯ. ಇದನ್ನು ಖಂಡಿಸುತ್ತ ಕುಂತಕ ಹೇಳುತ್ತಾನೆ.

ಗುಣಲಕ್ಷಣಗಳು ಗೈರುಹಾಜರಾಗಿರುತ್ತವೆ. ಇದುವರೆಗೆ ಪ್ರತಿಪಾದಿಸಿದ ತರ್ಕ ಎಂದರೆ, 'ರಸವತ್' ಮತ್ತು ಪ್ರೇಯಸ್‌ಗಳಿಗೆ ಸಂಬಂಧಿಸಿದಂತೆ ಮಂಡಿಸಿದ ತರ್ಕ. ಆ ಎರಡರಂತೆ, ಇವೆರಡರಲ್ಲೂ ಅಲಂಕರಣದ ಅಗತ್ಯಗಳ ಕೊರತೆ ಇದೆ. ಹಾಗೆ ನೋಡಿದರೆ ಪ್ರಾಚೀನರೂ ಇವೆರಡಕ್ಕೂ ಅಲಂಕಾರಗಳಲ್ಲಿ ಸ್ಥಾನ ನೀಡಿ, ಅವುಗಳ ಲಕ್ಷಣ ಮತ್ತು ಉದಾಹರಣೆಗಳನ್ನು (ಲಕ್ಷಣ-ಲಕ್ಷ್ಯ) ನೀಡಿದ್ದಾರಾದರೂ ಅವುಗಳನ್ನು ಅಲಂಕಾರಗಳೆಂದು ಪರಿಗಣಿಸಲು ಬರುವುದಿಲ್ಲ. [ಕಾರಣ ಅವುಗಳಿಗೆ ಆ ಅರ್ಹತೆ ಇಲ್ಲ; ಯುಕ್ತಿಸಂಗತವಲ್ಲವಾದ್ದರಿಂದ] ಒಬ್ಬಾನೊಬ್ಬ ಲಾಕ್ಷಣಿಕನು ಊರ್ಜಸ್ವಿಯನ್ನು ಹೀಗೆ ಲಕ್ಷಣಿಸಿದ್ದಾನೆ.

ಅನೌಚಿತ್ಯ ಪ್ರವೃತ್ತಾನಾಂ ಕಾಮಕ್ರೋಧಾದಿಕಾರಣಾತ್|
ಭಾವನಾಂ ಚ ರಸಾನಾಂ ಚ ಬಂಧ ಊರ್ಜಸ್ವಿ ಕಥ್ಯತೇ [೪೯]

ತಥಾ ಕಾಮೋಽಸ್ಯ ವವೃಧೇ ಯಥಾ ಹಿಮಗಿರೇಃ ಸುತಾಮ್|
ಸಂಗೃಹೀತುಂ ಪ್ರವವೃತೇ ಹಠೇನಾಪಾಸ್ಯ ಸತ್ಪಥಮ್ [೫೦] [ಅಲ್ಲೀ IV - 6]

ಕಾಮಕ್ರೋಧಾದಿಗಳ ಉತ್ಕರ್ಷದ ಕಾರಣದಿಂದಾಗಿ, ಅನುಚಿತ ರೂಪದಲ್ಲಿ ಪ್ರವೃತ್ತವಾಗುವ ಭಾವ ಮತ್ತು ರಸಗಳ ವರ್ಣನೆಯು ಊರ್ಜಸ್ವಿ ಅಲಂಕಾರವೆನಿಸುತ್ತದೆ. [೪೯]

ಉದಾ :

ಅವನ ಕಾಮವು ಅದೆಷ್ಟು ಉಲ್ಬಣಿಸಿತೆಂದರೆ
ಸನ್ಮಾರ್ಗವನೆಲ್ಲ ಬಿಟ್ಟು ಶಿವನು
ಪಾರ್ವತಿಯ ಬಲವಂತದಿಂದಲಿ
ಹಿಡಿಯಲುದ್ಯತನಾದನು. [೫೦]

ಇನ್ನೊಬ್ಬರು ಲಕ್ಷ್ಯವೇ (ಉದಾಹರಣೆ) ಲಕ್ಷಣದ ಕಾರ್ಯವನ್ನು ನಿರ್ವಹಿಸುತ್ತದೆಂದು ತಿಳಿದು ಈ ಉದಾಹರಣೆಯನ್ನು ನೀಡಿದ್ದಾರೆ.

ಊರ್ಜಸ್ವಿ ಕರ್ಣೇನ ಯಥಾ ಪಾರ್ಥಾಯ ಪುನರಾಗತಃ|
ದ್ವಿಃ ಸಂದಧಾತಿ ಕಿಂ ಕರ್ಣಃ ಶಲ್ಯೇತ್ಯಹಿರಪಾಕೃತಃ [೫೧] [ಭಾಮಹ III 7]

ಸರ್ಪಾಸ್ತ್ರವು ಮರಳಿ ಕರ್ಣನೆಡೆ ಬರಲು
ಪಾರ್ಥನ ಮೇಲಿದನು ಮತ್ತೆ ತೊಡಬೇಕೆನೆ
"ಓ ಶಲ್ಯ! ಕರ್ಣನೆಂದಾದರು ಎರಡು ಸಲ
ಬಾಣವ ತೊಟ್ಟುದುಂಟೆ ಎಂದದನು
ಪರಿಹರಿಸಿದುದು ಊರ್ಜಸ್ವಿ [೫೧]

ಅಥವಾ

ಅಪಕರ್ತಾಹಮಸ್ಮೀತಿ ಹೃದಿ ತೇ ಮಾಸ್ಮ ಭೂದ್ಭಯಮ್|
ವಿಮುಖೇಷು ನ ಮೇ ಖಡ್ಗಃ ಪ್ರಹರ್ತುಂ ಜಾತು ವಾಂಛತಿ [೫೨] [ದಂಡಿ II -293]

ನಾ ನಿನಗೆ ಕೆಡುಕನೆಸಗಬಹುದೆಂಬ
ಭಯವ ತಾಳದಿರು ಹೃದಯದಲಿ
ಮೊಗದಿರುಹಿ ಓಡುತಿರುವವನೆಂದಿಗೂ
ಘಾತಿಸಲು ಇಚ್ಛಿಸದು ನನ ಖಡ್ಗವು [೫೨]

ಇವುಗಳಲ್ಲಿ ಮೊದಲು ಉಲ್ಲೇಖಿಸಿದ ಲಕ್ಷಣ ಮತ್ತು ಉದಾಹರಣೆಯಲ್ಲಿ ಯಾವುದನ್ನು ನಿಜವಾಗಿ ಅನೌಚಿತ್ಯ ಎಂದು ಪರಿಗಣಿಸಬೇಕು ಎಂಬುದನ್ನು ಮೊದಲಿಗೆ ಪರ್ಯಾಲೋಚಿಸ ಬೇಕು. ಕಾರಣ ಅದರಿಂದಾಗಿಯೇ ಕವಿಯು ಯೋಜಿಸಿದ ರಸಾದಿಗಳನ್ನು ಅಲಂಕಾರಗಳೆಂದು (ಅಥವಾ ಭೂಷಣಗಳೆಂದು) ಕರೆಯಲಾಗುತ್ತದೆ. ಔಚಿತ್ಯಕ್ಕೆ ವಿರುದ್ಧವಾದುದು ಅನೌಚಿತ್ಯವಾದ್ದ ರಿಂದ ಆ ರೀತಿಯಲ್ಲಿ ಪ್ರತಿಪಾದಿಸಲಾದ ರಸಗಳು ಸೌಕುಮಾರ್ಯ ರಹಿತವಷ್ಟೇ ಅಲ್ಲ; ಪರಿಪುಷ್ಟಹೀನವೂ ಆಗುತ್ತವೆ. ಅದರಿಂದಾಗಿಯೇ ಗ್ರಂಥಕರ್ತೃವೊಬ್ಬ ಸರಿಯಾಗಿಯೇ ಹೇಳಿದ್ದಾನೆ.

ಅನೌಚಿತ್ಯಾದೃತೇ ನಾನ್ಯದ್ರಸಭಂಗಸ್ಯ ಕಾರಣಮ್
ಪ್ರಸಿದ್ಧೌಚಿತ್ಯ ಬಂಧಸ್ತು ರಸಸ್ಯೋಪನಿಷತ್ಪರಾ [೫೩]

ಅನೌಚಿತ್ಯದ ಹೊರತು ರಸಭಂಗಕ್ಕೆ ಬೇರಾವುದೂ ಕಾರಣವಲ್ಲ. ಪ್ರಸಿದ್ಧವಾದ ಔಚಿತ್ಯದ ಪಾಲನೆಯೇ ರಸದ ಪರಮ ರಹಸ್ಯ [ಧ್ವನ್ಯಾ ಪು. 147 (ಡಾ. ಕೆ. ಕೃ.)] [೫೩]

ಬಹುಶಃ ಹೀಗೂ ವಾದಿಸಬಹುದು. ಅದರ ನಿಜವಾದ ಅರ್ಥದಲ್ಲಿ ಯಾವುದೇ ಅನೌಚಿತ್ಯ ಇಲ್ಲಿ ವಿವಕ್ಷಿತವಲ್ಲ. ಆದರೆ ಬೇರೆಡೆ ಪ್ರಸ್ತುತವಾದರೂ ಇಲ್ಲಿಗೆ ಅಪ್ರಸ್ತುತವೆನಿಸಿದ ರಸಾಂಗಗಳಾದ ವಿಭಾವಾನುಭಾವ ವ್ಯಭಿಚಾರಿಗಳಿಂದ ಕೂಡಿದ ರಸಗಳ ದೋಷರಹಿತ ಪ್ರತಿಪಾದನೆಯ ಸಂದರ್ಭದಲ್ಲಿ ಕಂಡುಬರುವ ಅಸಮಂಜಸತೆ. ಅಂಥ ಅಪ್ರಸ್ತುತವಾದದ್ದರ ಪ್ರಸಕ್ತಿಯನ್ನು ಸಮರ್ಥಿಸುವ ಈ ಮಾತುಗಳು - "ಕಾಮಕ್ರೋಧಾದಿ ಕಾರಣಾತ್" ಆದರೆ ಈ ವಾದದಲ್ಲಿ ದೋಷವಿಲ್ಲದೆ ಇಲ್ಲ. ಪ್ರಧಾನ ರಸವು ವಿಭಾವಾದಿ ಸಮುದಾಯದಿಂದ ಪರಿಪುಷ್ಟವಾಗಿ, ನಿರೂಪಿತವಾಗಿದ್ದಾಗ ಪರಿಮಿತ ಸತ್ವವುಳ್ಳ ಜೀವಿಗಳ ವಿಷಯದಲ್ಲಿ ಮಾತ್ರ ಇದ್ದಕಿದ್ದಂತೆ ಒಮ್ಮಿಂದೊಮ್ಮೆಗೇ - ಪುಟಿದೇಳುವ ಪ್ರೀತಿ ಕ್ರೋದಾಧಿಗಳ ಕಾರಣದಿಂದ ಹೊರಹೊಮ್ಮುವ ವಿರಳವಾದ ರಸಭಾವಾದಿಗಳ ಸಂದರ್ಭದಲ್ಲಿ ಅನೌಚಿತ್ಯ ಉಂಟಾದರೂ ಅದಕ್ಕೆ ಅವಕಾಶವಿದೆ. ಆದರೆ ಪ್ರಸ್ತುತ ಉದಾಹರಣೆಯಲ್ಲಿರುವಂತೆ ಸರ್ವಶಕ್ತ ಶಿವನಂಥ ಪಾತ್ರಗಳ ಸಂದರ್ಭದಲ್ಲಿ ಅನೌಚಿತ್ಯಕ್ಕೆ ಖಂಡಿತ ಅವಕಾಶವಿಲ್ಲ.

ನಿಜವಾಗಿಯೂ ಸಮುಚಿತವಾದ ರಸವು ಖಂಡಿತವಾಗಿಯೂ ಸೂಕ್ಷ್ಮ ವಿಮರ್ಶಕನನ್ನು ವಿಸ್ಮಯ ಮತ್ತು ಮೆಚ್ಚಿಕೆಯ ಭಾವನೆಗಳ ಉಕ್ಕಂದದಲ್ಲಿ ಕೊಚ್ಚಿಕೊಂಡು ಹೋಗಿ ಅವನ ಮನಸ್ಸಿನಲ್ಲಿ ಪರಮ ಸೌಂದರ್ಯ ಭಾವವನ್ನು ಮೂಡಿಸಲೇಬೇಕು. ಯಾವ ರೀತಿಯಲ್ಲಿ ಎಂದರೆ

ಬೆಳುದಿಂಗಳು ಚಂದ್ರಕಾಂತ ಶಿಲೆಯನ್ನು ದ್ರವಿಸುವ ಹಾಗೆ ಮಾಡುವಂತೆ. ಕಾರಣ ಅದು ರಸೋತ್ಪತ್ತಿಕಾರಕಗಳಾದ ಶ್ರೇಷ್ಠ ಉದ್ದೀಪನ ವಿಭಾವಗಳೇ ಮೊದಲಾದುವುಗಳಿಂದ ಸಮೃದ್ಧಗೊಂಡು, ಸಹಜವಾದ ಕವಿ ಪ್ರತಿಭೆಯ ಕಾರಣದಿಂದಾಗಿ ಸ್ವಾಭಾವಿಕ ರಮಣೀಯತೆಯನ್ನು ಪಡೆದುಕೊಂಡು ಬಿಟ್ಟಿರುತ್ತದೆ. ಅಂಥ ಕಾವ್ಯಸಂದರ್ಭದಲ್ಲಿ ಸರ್ವವ್ಯಾಪಕವಾದ ರಸವು ಕಾಮಾದಿಗಳ ತತ್‌ಕ್ಷಣದ ಉತ್ಕರ್ಷದಿಂದಾಗಿ ಅಡಚಣೆಗೊಂಡು ಅಲಂಕರಣವಾಗಿಬಿಡುತ್ತದೆಂಬುದು ಯುಕ್ತಿ ಯುಕ್ತವಲ್ಲ. ಅದೇ ಕಾರಣದಿಂದಾಗಿ ಸತ್ಕವಿಗಳು ರಸಕ್ಕೆ ಸಮನೆನಿಸಿದ ಇತರೆ ವರ್ಣನೀಯ ವಿಷಯಗಳನ್ನು ರಸಭರಿತವಾಗಿ ಮಾಡುತ್ತ ಬಂದಿರುವುದು ಅತ್ಯಂತ ಶ್ಲಾಘನೀಯ. ಹೇಗೆಂದರೆ

ಪಶುಪತಿರಪಿ ತಾನ್ಯಹಾನಿ ಕೃಚ್ಛ್ರಾ-
ದಗಮಯದದ್ರಿಸುತಾ ಸಮಾಗಮೋತ್ಕಃ
ಕಮಪರವಶಂ ನ ವಿಪ್ರಕುರ್ಯುಃ
ವಿಭುಮಪಿ ತಂ ಯದಮೀ ಸ್ಪೃಶಂತಿ ಭಾವಾಃ [೫೪]

[ಕುಮಾರ ಸಂಭವ VI - 95]

ಹಿಮಸುತೆಯ ಕೂಡಲುತ್ಸುಕನಾದಾ
ಪಶುಪತಿಯು ಕಳೆದನತಿ ಕಷ್ಟದಲಿ ಆ ದಿನಗಳನು
ಅಂಥ ಜಗದೀಶ್ವರನು ಕೂಡ ಈ ತೆರನ
ಭಾವದೊಳು ವಿಕೃತನಾದನೆನೆ
ವಿಕೃತಗೊಳ್ಳದಿಹ ನರನಾವನು? [೫೪]

ಈ ನಮ್ಮ ಇಡೀ ಚರ್ಚೆ ಕೇವಲ ಆನುಷಂಗಿಕವೆಂದು ಪರಿಗಣಿಸಬೇಕು.

ಭರತಮುನಿ ಪ್ರಣೀತ ನಾಟಕದ ರಸಾನುಭವ ಸಿದ್ಧಾಂತದಲ್ಲಿ ನಿಪುಣರಾದ ಈ ವಿದ್ವಾಂಸರಿಗೆ ನೇರವಾಗಿ ಕೆಲವೊಂದು ಪ್ರಶ್ನೆಗಳನ್ನು ಹಾಕಬೇಕಿದೆ (ಇಲ್ಲಿ ಹೇಳಿರುವ ವಿದ್ವಾಂಸರು ಉದ್ಭಟ)

ಇಲ್ಲಿ ವರ್ಣಿಸಲಾದ ಭಗವಾನ್ ಶಂಕರನು, ರಸಾಭಾಸದ ವಸ್ತುವಾಗಿ ಪ್ರತಿಪಾದಿಸಬಹುದಾದಂಥವನೆ? ಅಥವಾ ಇಲ್ಲವೆ? ಔಚಿತ್ಯ ಅನೌಚಿತ್ಯಗಳ ಈ ಅನಗತ್ಯ ಚರ್ಚೆ ಏಕೆಬೇಕು? ನಿಮ್ಮ ಉತ್ತರದ ಸ್ವರೂಪ ಏನೇ ಇರಲಿ, ವಾದದ ಸಲುವಾಗಿ ಅದಕ್ಕೆ ಮಾನ್ಯತೆ ಇದೆ. ಇಲ್ಲಿರುವ ಅತಿಶಯವಾದ ಚಿತ್ತವೃತ್ತಿ ವಿಶೇಷವು ರಸ ಅಥವಾ ರಸಾಭಾಸ ಏನಾದರೂ ಆಗಿರಲಿ ಇಲ್ಲಿ ಪ್ರಧಾನ ರೂಪದಲ್ಲಿ ವರ್ಣಿತವಾದ ವಸ್ತು ಅಲಂಕಾರವಂತೂ ಖಂಡಿತ ಅಲ್ಲ.

ಓ ಶಲ್ಯ! ಕರ್ಣನೆಂದಾದರು ಎರಡು ಸಲ ಬಾಣವ ತೊಟ್ಟುದುಂಟೆ" ಎಂಬ ಉದಾಹರಣೆಯಲ್ಲಿ, ಪ್ರಧಾನ ವಾಕ್ಯಾರ್ಥವು ಲೋಕೋತ್ತರವಾದ ತನ್ನ ಪೌರುಷವನ್ನು ಕೊಚ್ಚಿಕೊಳ್ಳುವ ಗೀಳು ಹಿಡಿದ, ಹುಟ್ಟಾವೀರ ಸ್ವಭಾವದ ಕರ್ಣನ ಉತ್ಸಾಹದ ಚಿತ್ತವೃತ್ತಿ

ವಿಶೇಷವೇ ಆಗಿದೆ. ಕರ್ಣನ ಪ್ರಶ್ನೆಯು ಎರಡನೆಯ ಸಲ ಬಾಣತೊಡುವ ವಿರಳಸಾಧ್ಯತೆಯನ್ನೂ ತಳ್ಳಿಹಾಕುತ್ತಿದೆ. ಕಾರಣ ಅಂಥ ಯೋಚನೆ ತನ್ನ ಮನದಲ್ಲಿ ಅಕಸ್ಮಾತ್ ಸುಳಿದರೂ ಅದು ತನ್ನ ಸಾಹಸಕ್ಕೆ ಅವಮಾನವೆಂದವನ ಎಣಿಕೆ. "ಕರ್ಣ" ಎಂದು ತನ್ನ ಹೆಸರನ್ನು ತಾನೇ ಪುನರುಚ್ಚರಿಸುವುದು ಕೂಡ ಅತ್ಯುನ್ನತ ಸ್ವಾಭಿಮಾನವನ್ನು ಧ್ವನಿಸುತ್ತದೆ. ಇಲ್ಲಿ 'ಶಲ್ಯ' ಎಂಬ ಹೆಸರಿನ ಸಂಬೋಧನೆಯಲ್ಲಿ ರೂಢಿ ವೈಚಿತ್ರ್ಯ ವಕ್ರತೆ (ಮಧ್ಯಮ ಪುರುಷ ವಕ್ರತೆ)ಯೊಂದಿಗೆ ಮಹತ್ವ ಪೂರ್ಣವಾದ ಅಂಕಿತನಾಮದ ಸೌಂದರ್ಯವೂ (ಪುರುಷವಾಚಕ ವಕ್ರತೆ) ಸೇರಿಕೊಂಡಿದೆ. 'ಪಾರ್ಥಾಯ' ಎನ್ನುವ ಆಕಾರಾಂತ ಶಬ್ದವೂ ಮಹತ್ವದಿಂದ ಕೂಡಿದೆ ಒಂದು ವೇಳೆ ಯಾರಾದರೂ ಸಾಮಾನ್ಯ ವ್ಯಕ್ತಿಯಾಗಿದ್ದರೆ, ಯಾವುದಾದರೊಂದು ಬೇರೆ ಬಾಣದಿಂದ ಪ್ರತಿಘಾತಿಸಲು ಸಾಧ್ಯವಿತ್ತು. ಶತ್ರುವನ್ನು ಕೊಲ್ಲುವ ಸಾಮರ್ಥ್ಯವಿರುವ ಇನ್ನಾವುದಾದರೊಂದು ಶಕ್ತ್ಯಾಯುಧವನ್ನುಬಳಸಬಹುದಿತ್ತು. ಇವೆಲ್ಲವನ್ನೂ ಸಂದರ್ಭವಶದಿಂದ ನಾವು ಗ್ರಹಿಸಬಹುದು. 'ಪುನರಾಗತ' ಎಂಬ ಶಬ್ದವನ್ನು ನೋಡೋಣ. ಅದು ಅರ್ಜುನನ್ನು ಕೊಲ್ಲುವ ಸಲುವಾಗಿ ಎಂಬುದನ್ನು ಸೂಚಿಸುತ್ತದೆ. ಬಾಣವು ತಾನಾಗಿಯೇ ಅತಿಪ್ರಯಾಸದಿಂದ ಬಂದರೂ ಸ್ವಾಭಿಮಾನಿ ಯಾದ ಕರ್ಣನು ಅದನ್ನು ತಿರಸ್ಕರಿಸಿದನು. ಸಂದರ್ಭವಶದಿಂದ ಇದು ಅವನ ಸ್ವಾಭಿಮಾನದ ಉತ್ಕರ್ಷದ ಪ್ರತಿರೂಪ ಎಂದು ಹೇಳಬಹುದು. ಹೀಗೆ ಈ ಉದಾಹರಣೆಯೇ ಅತ್ಯುತ್ಸಾಹದಿಂದ ಕೂಡಿರುವಂಥದು. ಮಾತನಾಡುತ್ತಿರುವ ವ್ಯಕ್ತಿಯು ಉನ್ನತ ವ್ಯಕ್ತಿತ್ವದವನು ಎಂಬ ಅಂಶವು ಇಲ್ಲಿಯ ಚಿತ್ರವೃತ್ತಿ ವಿಶೇಷಕ್ಕೆ ಹೆಚ್ಚಿನ ಮೆರುಗನ್ನು ನೀಡಿದೆ. ಅದು ಅವನ ಸ್ವಭಾವದ ಭಾಗವೇ ಆಗಿದೆ ಹಾಗೂ ಅದು ವರ್ಣನೆಯ ಮುಖ್ಯವಸ್ತುವಾಗಿರುವಾಗ ಅದು ಅಲಂಕಾರ್ಯ ವೆಂದಾಗುತ್ತದೆಯೇ ಹೊರತು, ಅಲಂಕಾರವಾಗಲಿ, ಭೂಷಣವಾಗಲಿ ಆಗುವುದಿಲ್ಲ.

ಈಗಾಗಲೇ ನೋಡಿದಂತೆ

ಉದಾರಸ್ವ ಪರಿಸ್ಪಂದ ಸುಂದರತ್ವೇನ ವರ್ಣನಮ್।
ವಸ್ತು ನೋ ವಕ್ರಶಬ್ದೈಕ ಗೋಚರತ್ವೇನ ವಕ್ರತಾ (3-1) ಕಾರಿಕಾ

ತನ್ನದೇ ಆದ ಅಪಾರ ಸ್ವಾಭಾವಿಕ ಸೌಂದರ್ಯದ ದೆಸೆಯಿಂದಾಗಿ ವಸ್ತುವು ರಮಣೀಯತೆಗೆ ತಗುವ ರೀತಿಯಲ್ಲಿ ವಿಶಿಷ್ಟ ವಕ್ರಶಬ್ದದ ಮೂಲಕವೇ ವರ್ಣಿಸಲ್ಪಟ್ಟಾಗ ಅದನ್ನು ವಸ್ತುವಕ್ರತೆ ಎಂದು ಪರಿಗಣಿಸಲಾಗುವುದು.

ರಸ, ಭಾವ, ರಸಾಭಾಸ, ಭಾವಾಭಾಸಗಳು, ಮೇಲಿನ ವರ್ಣನೆಗೆ ಉತ್ತರವಾದಂಥ ಚಿತ್ರವೃತ್ತಿ ವಿಶೇಷಗಳಾಗುವುದರಿಂದ, ಅವೆಲ್ಲವನ್ನೂ ವ್ಯಕ್ತಿಯ (ಕರ್ತೃವಿನ) ಇಚ್ಛಾನುಸಾರ, ಅಲಂಕಾರ್ಯ ವರ್ಗಕ್ಕೆ ಸೇರಿಸಬಹುದೇ ಹೊರತು, ಅದನ್ನು ಎಂದಿಗೂ ಅಲಂಕಾರಗಳೆಂದು ಹೇಳಲು ಸಾಧ್ಯವಿಲ್ಲ. ರಸವದಲಂಕಾರದ ವಿಷಯದಲ್ಲಿ ದೋಷಗಳೆಂದು ಎಣಿಸಿದವುಗಳೆಲ್ಲವೂ ಸಮಗ್ರವಾಗಿ ಇದಕ್ಕೂ (ಊರ್ಜಸ್ವಿಗೂ) ಅನ್ವಯಿಸುತ್ತದೆ. ಆ ಸಂಬಂಧದಲ್ಲಿ ಹೇಳಿದ್ದೆಲ್ಲವೂ ಇಲ್ಲಿಗೂ ಅನ್ವಯಿಸುತ್ತದೆ.

"ಭಯವತಾಳದಿರು ಹೃದಯದಲಿ" ಎಂಬ ಎರಡನೇ ಉದಾಹರಣೆಯೂ ಅದೇ ರೀತಿಯ ದೋಷಗಳಿಂದ ಕೂಡಿದೆಯಾಗಿ ಅದನ್ನು ಬೇರೆಯಾಗಿ ಖಂಡಿಸುವ ಅಗತ್ಯವಿಲ್ಲ.

ಇದೇ ತರ್ಕದ ಆಧಾರದ ಮೇಲೆ, ಉದಾತ್ತ ಅಲಂಕಾರ ಮತ್ತು ಅದರ ಎರಡು ಪ್ರಕಾರಗಳು, ಅಲಂಕಾರ್ಯಗಳೆಂದು ಪರಿಗಣಿಸಲು ಅರ್ಹವಾಗಿವೆಯೇ ಹೊರತು ಅಲಂಕಾರವೆಂದಲ್ಲ. ಉದಾತ್ತಾಲಂಕಾರದ ಮೊದಲ ಪ್ರಕಾರದ ಲಕ್ಷಣವೇ ಸಮನ್ವಯವಾಗುವುದು ಕಷ್ಟವಾಗಿ ನಮ್ಮನ್ನು ಗಾಬರಿಗೊಳಿಸುತ್ತದೆ. ಅದರ ಲಕ್ಷಣ

ಉದಾತ್ತಮೃದ್ಧಿಮದ್ವಸ್ತು || [೫೫]

ಋದ್ಧಿಯಿಂದ ಕೂಡಿದ ವಸ್ತುವೇ ಉದಾತ್ತ [೫೫]

ಋದ್ಧಿಯುಕ್ತ ವಸ್ತುವೇ ಉದಾತ್ತಾಲಂಕಾರ. ಅಂದರೆ ಇಲ್ಲಿ ವರ್ಣನೀಯ ವಸ್ತುವೇ ಉದಾತ್ತ ಅಲಂಕಾರ. ಅದರ ಅಲಂಕರಣವಾವುದು? ಎಂಬ ಪ್ರಶ್ನೆ ಸಹಜವಾಗಿ ಏಳುತ್ತದೆ. 'ಋದ್ಧಿಮತ್' ಎಂಬ ವಿಶೇಷಣವೇ ಉತ್ತರ ಎನ್ನುವುದಾದರೆ ಅದರಿಂದ ವಿಶೇಷಿಸಲ್ಪಡುವ ವಸ್ತು ಎಂದರೆ ಅದು ಮತ್ತೆ ವರ್ಣ್ಯಮಾನ ಅಲಂಕಾರ್ಯವೇ ಆಗಬೇಕಾಗುತ್ತದೆ. [ಋದ್ಧಿಯಿಂದ ಕೂಡಿದ ವಸ್ತು ವರ್ಣನೀಯವಾದ ಕಾರಣದಿಂದ ಅಲಂಕಾರ್ಯ ಎಂದು ಹೇಳಿ ಮತ್ತೆ ಅದೇ ಅಲಂಕಾರ] ಎಂದರೆ ಒಂದೇ ವಸ್ತು ಏಕಕಾಲದಲ್ಲಿ ಅಲಂಕಾರ್ಯ ಮತ್ತು ಅಲಂಕಾರ ಎರಡೂ ಆಗಲು ಸಾಧ್ಯವಿಲ್ಲ. ಕಾರಣ ಆಗ ತನ್ನಲ್ಲಿಯೇ ಕ್ರಿಯಾವಿರೋಧ ದೋಷ (ಎರಡು ಕ್ರಿಯೆಗಳನ್ನೊಳಗೊಳ್ಳುವುದು) ಅನಿವಾರ್ಯವಾಗಿ ಬಿಡುತ್ತದೆ. ಅಲ್ಲದೆ ತನಗಿಂತ ಭಿನ್ನವಾದ ಅನ್ಯವಸ್ತುವಿನ ಪ್ರತೀತಿ ಉಂಟುಮಾಡಿಸದೆ ಇರುವ ದೋಷವೂ (ಗೈರುಹಾಜರಿ) ತಟ್ಟುತ್ತದೆ. ಹೀಗಾಗಿ ಊರ್ಜಸ್ವಿಯಂತೆಯೇ ಉದಾತ್ತವೂ ಅಲಂಕಾರ್ಯವಾಗುತ್ತದೆಯೇ ಹೊರತು ಅಲಂಕಾರವೆಂದು ಅದನ್ನು ಪರಿಗಣಿಸಲಾಗುವುದಿಲ್ಲ.

ಅಥವಾ ಮೇಲಿನ ಸೂತ್ರಕ್ಕೆ - "ಋದ್ಧಿಯಿಂದ ಕೂಡಿದ ವಸ್ತು ಯಾವುದರಲ್ಲಿದೆಯೋ ಅದು, ಅಥವಾ ಯಾವುದರದ್ದೋ ಅದು ಎಂದು ಸಮಾಸಪದಕ್ಕೆ ಬೇರೆ ರೀತಿಯಲ್ಲಿ ವ್ಯಾಖ್ಯಾನ ಮಾಡಿದರೂ, ಆ ಭಿನ್ನ ಪದಾರ್ಥರೂಪದ ವಸ್ತು ಯಾವುದೆಂದು ಹೇಳಲೇಬೇಕಾಗುತ್ತದೆ. ಕಾವ್ಯವೇ ಆ ಭಿನ್ನವಸ್ತು (ಋದ್ಧಿಯಿಂದ ಕೂಡಿದ ವಸ್ತು ಯಾವುದರಲ್ಲಿದೆಯೋ ಅಥವಾ ಯಾವುದರದ್ದೋ) ಎಂದು ಘೋಷಿಸಿಬಿಟ್ಟರೂ ಅದು ನಿರರ್ಥಕವಾಗುತ್ತದೆ. ಕಾರಣ ಕಾವ್ಯದ ಅಲಂಕಾರ (ಅಂದರೆ ಅಲಂಕಾರಗಳಿಂದ ಕೂಡಿರುವುದು ಕಾವ್ಯ) ಎಂದು ಹೇಳುವುದು ಪ್ರಸಿದ್ಧವಾದ ರೂಢಿಯೇ ಹೊರತು ಅಲಂಕಾರವೇ ಕಾವ್ಯ ಎಂದು ಹೇಳುವುದಲ್ಲ.

ಮೇಲಿನ ವ್ಯಾಖ್ಯಾನದಲ್ಲಿ ಒಂದು ವೇಳೆ - "ಋದ್ಧಿಯಿಂದ ಕೂಡಿದ ವಸ್ತು ಯಾವುದರಲ್ಲಿದೆಯೋ ಅಥವಾ ಯಾವುದರದ್ದೋ ಅದು ಅಲಂಕಾರ" ಎಂಬ ಸಮಾಸದ ಉದ್ದಿಷ್ಟ ಅರ್ಥ ಅಲಂಕಾರವೆಂದೇ ಎಂದು ಹೇಳಿದರೆ, ಅದನ್ನು ತಾರ್ಕಿಕವಾಗಿ ಸಮರ್ಥಿಸಲಾಗುವುದಿಲ್ಲ. ಕಾರಣ, ಅಲಂಕಾರದಂಥದು ಯಾವುದೂ ಇಲ್ಲಿ ಕಂಡು ಬರುವುದಿಲ್ಲ; ಎರಡೂ ಪ್ರಕರಣಗಳಲ್ಲಿ

ಶಬ್ದ ಮತ್ತು ಅರ್ಥಗಳ ನಡುವಿನ ಅಸಂಗತಿ ರೂಪದ ದೋಷಕ್ಕೆ ಅವಕಾಶವಾಗುತ್ತದೆ. (ಆದ್ದರಿಂದ ಋದ್ಧಿಮದ್ವಸ್ತು ಉದಾತ್ತ ಅಲಂಕಾರವಾಗುತ್ತದೆ ಎಂದು ಹೇಳುವುದು ಅನುಚಿತ. ಅದು ಅಲಂಕಾರವಲ್ಲ. ಅದೇ ಅಲಂಕಾರ್ಯ) ಒಂದು ವೇಳೆ ಉದಾತ್ತವನ್ನು ಅಲಂಕಾರವೆಂದು ಪರಿಗಣಿಸಿದರೆ, ಇನ್ನೊಂದು ಅಲಂಕಾರವೂ ಅದರ ಜೊತೆ ಸೇರಿಕೊಂಡದ್ದೇ ಆದರೆ, ಅದನ್ನು ಸಂಸೃಷ್ಟಿ ಅಥವಾ ಸಂಕರ ಅಲಂಕಾರಕ್ಕೆ ಉದಾಹರಣೆಯೆಂದು ಪರಿಗಣಿಸುವ ಸಂಭವವಿಲ್ಲದಿಲ್ಲ. ಆದರೆ ಅಂಥ ಕ್ರಮ ಯಾವ ಕವಿಯಲ್ಲೂ ಕಂಡುಬಂದಿಲ್ಲ. ಅಲ್ಲದೆ, ರೂಪಕವೇ ಮೊದಲಾದ ಅಲಂಕಾರಗಳು, ಎಲ್ಲ ವರ್ಣನೀಯ ವಿಷಯಗಳಲ್ಲಿ ಕಂಡುಬರುವಂತೆ ಈ ಉದಾತ್ತವೂ ಉದಾತ್ತವಲ್ಲದ ಹಾಗೂ ಉದಾತ್ತ ವಿಷಯಗಳಲ್ಲಿ ಸಮಾನರೀತಿಯಲ್ಲಿರಬೇಕಾಗುತ್ತದೆ. ಅದು ಒಪ್ಪಿತವಲ್ಲದ ಸಂದರ್ಭ. ಹೀಗಾಗಿ ಉದಾತ್ತವನ್ನು ತಾರ್ಕಿಕವಾಗಿ ಭೂಷಣ ಅಥವಾ ಅಲಂಕಾರವೆಂದು ಪರಿಗಣಿಸಲು ಸಾಧ್ಯವಿಲ್ಲ.

ಅದೇ ರೀತಿಯಲ್ಲಿ ಉದಾತ್ತಾಲಂಕಾರದ ಎರಡನೇ ಪ್ರಕಾರವೂ ಅಲಂಕಾರ್ಯವೆಂದು ಪರಿಗಣಿಸಲರ್ಹವಾದುದೇ ಹೊರತು, ಅಲಂಕಾರವೆಂದಲ್ಲ; ಕಾರಣ ಅದರ ಲಕ್ಷಣ.

> **........ ಚರಿತಂ ಚ ಮಹಾತ್ಮನಾಮ್|**
> **ಉಪಲಕ್ಷಣತಾಂ ಪ್ರಾಪ್ತಂ ನೇತಿವೃತ್ತತ್ವಮಾಗತಂ [೩೩b]**

> ಮಹಾತ್ಮರ ಚರಿತ್ರೆಯು ಇತಿವೃತ್ತದ ಭಾಗವಾಗಿ ಬರದೆ, ಉಪಲಕ್ಷಣದ ಭಾಗವಾಗಿ ಬರುವುದು (ಉದಾತ್ತ ಅಲಂಕಾರವೆನಿಸುತ್ತದೆ.) [೩೩b]

ಇಲ್ಲಿ ವಾಕ್ಯಾರ್ಥದ ಉಪಲಕ್ಷಣ ಮಾತ್ರವಾಗಿರುವ ಮಹಾನುಭಾವರ ವ್ಯವಹಾರವು ಪ್ರಸ್ತುತ ಉದಾಹರಣೆಯ ವಾಕ್ಯಾರ್ಥದೊಂದಿಗೆ ಅನ್ವಯವನ್ನು ಹೊಂದಿದೆಯೇ ಇಲ್ಲವೆ ಎಂಬುದರ ಬಗ್ಗೆ ವಾಕ್ಯಾರ್ಥದ ಪರಮಾರ್ಥವನ್ನು ಬಲ್ಲ ವಿದ್ವಾಂಸರು ವಿಚಾರ ಮಾಡಬೇಕಾಗುತ್ತದೆ. ಅಂಥ ಸಂಬಂಧ ಹೊಂದಿದೆ ಎಂದಾದರೆ, ಅದರಲ್ಲಿ ಸೇರದಿರುವ ಕಾರಣದಿಂದ, ಇತರೆ ಪದಾರ್ಥಗಳ ಹಾಗೆಯೇ, ಆ ವಾಕ್ಯಾರ್ಥದ ಅವಿಭಾಜ್ಯ ಅಂಗವೆಂಬಂತೆಯೇ, ಮಾನವ ಶರೀರದ ಅಂಗಗಳಾದ ಕೈ, ಕಾಲು, ಇತ್ಯಾದಿಗಳು ಹೇಗೋ ಹಾಗೆ ಇರುತ್ತದೆ. ಅಲಂಕಾರದ ಉಪಾಧಿಯನ್ನು ಪಡೆದುಕೊಳ್ಳಲರ್ಹವಲ್ಲ. ಎರಡನೇ ಪರ್ಯಾಯದಲ್ಲಿ ಅಂದರೆ ಅಂಥ ಅನ್ವಯ ಸಂಬಂಧ ಹೊಂದಿಲ್ಲ ಎಂದಾದರೆ, ಅನ್ವಯದ ಗೈರು ಹಾಜರಿಯು ಅದರ ಅಸ್ತಿತ್ವವನ್ನೇ ಅಲ್ಲಗಳೆಯುತ್ತದೆ. ಪ್ರಸ್ತುತ ವಾಕ್ಯಾರ್ಥವನ್ನು ಬಿಟ್ಟು ಉಳಿದ ವಾಕ್ಯಗಳ ವಾಕ್ಯಾರ್ಥದ ಅಸ್ತಿತ್ವವನ್ನು ಅಲ್ಲಗಳೆಯುವ ಹಾಗೆ ಹೀಗೆ ಅಲ್ಲಿ ಯಾವುದೇ ಅಲಂಕಾರಕ್ಕೆಡೆ ಇರುವ ಬಗ್ಗೆ ಚರ್ಚೆಯ ಅಗತ್ಯವೇ ಇಲ್ಲ.

ಬಹುಶಃ ಯಾರಾದರೂ ಹೀಗೆ ವಾದಿಸಿಯಾರು - ಅಲ್ಲಿ ಅಲಂಕೃತಗೊಂಡಿರುವ ವಸ್ತು, ರೂಪಕವೇ ಮೊದಲಾದ ಇತರೆ ಅಲಂಕಾರಗಳೊಂದಿಗೆ ಅನ್ವಯವನ್ನು ಹೊಂದಿರುವುದು ಕಂಡುಬರುತ್ತದೆ. ಅಂದ ಮೇಲೆ ಅಂಥ ಸಂದರ್ಭದಲ್ಲೂ ಅಲಂಕಾರಗಳ ಕಾರ್ಯವನ್ನು ನಿರಾಕರಿಸುವುದು ಕರ್ತವ್ಯವಾಗುತ್ತದೆಯೆ? ಈ ವಾದ ಭಾಗಶಃ ಮಾತ್ರ ಸರಿ. ಅಲಂಕಾರ್ಯದೊಂದಿಗೆ

ಅನ್ವಯ ಹೊಂದಿರುವ ವಸ್ತು ಎರಡು ತೆರನಾಗಿರುತ್ತದೆ. ಮೊದಲನೆಯದಾಗಿ ಕಾವ್ಯದೋಷಗಳಲ್ಲಿ ಆಗುವಂತೆ ಅದು ಮೂಲ ಅನ್ವಯದ ಉಪ ಅಂಗವಾಗಿರಬಹುದು. ಎರಡನೆಯದಾಗಿ ಇತರೆ ಅಲಂಕಾರಗಳ ಹಾಗೆ ಮೂಲ ವಾಕ್ಯಾರ್ಥಕ್ಕೆ ವಿಶೇಷ ಸೌಂದರ್ಯ ಶೋಭೆಯನ್ನು ತಂದುಕೊಡಬಹುದು. ಮೊದಲನೆಯದಕ್ಕೆ ಸಂಬಂಧಿಸಿದಂತೆ ಯುಕ್ತಿಯುಕ್ತವಾದ್ದನ್ನು ಈಗಾಗಲೇ ಹೇಳಲಾಗಿದೆ. ಮೂಲ ವಾಕ್ಯಾರ್ಥಕ್ಕೆ ವಿಶೇಷ ಶೋಭೆಯನ್ನುಂಟು ಮಾಡಬಹುದೆಂದು ಹೇಳಿರುವ ಎರಡನೇ ಸಂದರ್ಭದಲ್ಲಿ - ಇದು ಇತರೆ ಅಲಂಕಾರಗಳ ವಿಷಯಕ್ಕೆ ಸರಿಯೆನ್ನಿಸಬಹುದು; ಆದರೆ ಮಹಾಪುರುಷರ ಚರಿತ್ರೆಗೆ ಸಂಬಂಧಿಸಿದಂತೆ ನಾವು ನೋಡಿದ ಅನೇಕ ದೋಷಗಳನ್ನು ನಿವಾರಿಸಲಾಗುವುದಿಲ್ಲ. ಆಗ ಮಹಾಪುರುಷರಿಗೆ ವಿರುದ್ಧವಾದ ಚಾರಿತ್ರವುಳ್ಳವರ ವರ್ಣನೆಯನ್ನೂ ಅಲಂಕಾರವೆಂದು ಪರಿಗಣಿಸಬೇಕಾದ ಸಂದರ್ಭವೊದಗುತ್ತದೆ. ಎರಡನೆಯದಾಗಿ (ರೂಪಕವೇ ಮೊದಲಾದ) ಇತರೆ ಅಲಂಕಾರಗಳು ಜೊತೆ ಜೊತೆಯಲ್ಲೇ ಇರಬೇಕೆಂದಾದರೆ, ಅಂಥ ಉದಾಹರಣೆಗಳನ್ನು ಸಂಸೃಷ್ಟಿ ಅಥವಾ ಸಂಕರ ಅಲಂಕಾರಗಳ ಉದಾಹರಣೆಗಳೆಂದು ಪರಿಗಣಿಸ ಬೇಕಾಗುವುದು. ಅಲ್ಲದೆ (ಮೂರನೆಯದಾಗಿ) ಇಲ್ಲಿ ಹೇಳಲಾದ ಸಂದರ್ಭವನ್ನು ಬಿಟ್ಟು ಇತರೆಡೆ ಗಳಲ್ಲಿ, ಇತರೆ ಯಾವುದೇ ಅಲಂಕಾರದ ಹಾಗೆಯೇ, ಈ ಅಲಂಕಾರವೂ ಬಳಕೆಯಾಗುತ್ತದೆ.

ಕಾವ್ಯ ಸಂಪ್ರದಾಯದಲ್ಲಿರುವ ತೀವ್ರತರವಾದ ಶ್ರದ್ಧೆಯಿಂದ ಹೆಚ್ಚು ಸಮಂಜಸವಾದ ಉದಾಹರಣೆಗಳನ್ನು ನೀಡುವಲ್ಲಿ ಈ ಹಿಂದಿನ ಆಲಂಕಾರಿಕರು ನಿರತರಾಗಿದ್ದಾಗ್ಯೂ, ಅವು ಕೂಡ ವರ್ಣನೀಯ ವಸ್ತುವಿನ ಅವಿಭಾಜ್ಯ ಅಂಗವಾಗಿ ಉಳಿದುಬಿಡುವ ಕಾರಣದಿಂದ ಅವರ ಪ್ರಯತ್ನವು ಸಹೃದಯರ ಆದರವನ್ನು ಗಳಿಸುವುದಿಲ್ಲ.

ಉದಾ :

ನೇಥಾ ಕುಂಥಪೃಥಕ್ ತರ್ಜರತ್ವಾ.....
ಮಸ್ಥಾಪತ್ತೇಃ ವಿಚ್ಛಿತ್ತಿಃ [?] [೫೬]

.....ಮಹೇಂದ್ರ ಕಂದರಕ್ವಣತ್ಕರ್ಣೇಷು ಟಂಕಾನ್ವಿತಾಃ
ತೇ ನೀಲಾ ...... ಶೇಖರಶರಕ್ಷ್ಪೈಕವೀಥೀಭುವಾ ....
ದುರ್ಗಾ ಅವಿಗಾಹಿತಾಃ ಶಶಿರುಚಾ ಕೀರ್ತ್ಯಾ ವಸಂತ್ಯಾಸ್ತವ (?) [೫೭]

ಚಂದ್ರಕಾಂತಿಯ ಹಾಗೆ ಹೊಳೆವ
ನಿನ್ನಚಳ ಕೀರ್ತಿಯದು
ಕೋಟೆ ಕೊತ್ತಳಗಳನೆಲ್ಲ ವ್ಯಾಪಿಸಿಹುದು.........
ಮಹೇಂದ್ರ ಪರ್ವತದ ವನಗಳಲಿ
ಅಲೆಯುತಿಹ ಆನೆಗಳಸಿತ ಗಾತ್ರವನು
ಬಿಳಿದಾಗಿಸಿ ಬಿಟ್ಟಿಹುದು [೫೭]

ಮೇಲಿನ ಎರಡು ಶ್ಲೋಕಗಳಲ್ಲಿ ವರ್ಣಿಸಲಾದ ಮಹಾಪುರುಷ ಚರಿತಲಕ್ಷಣವು (ವ್ಯತಿರೇಕದ ಛಾಯೆಯಿಂದ ಕೂಡಿರುವ) ಪ್ರಸ್ತುತ ಮೂಲ ವಾಕ್ಯಾರ್ಥ ತಾತ್ಪರ್ಯವನ್ನಷ್ಟೇ ಹಾಳು

ಮಾಡುವುದಲ್ಲ; ವಿಶಿಷ್ಟ ಆಲಂಕಾರಿಕ ರಮಣೀಯತೆಯನ್ನು ಹಾಳು ಮಾಡುತ್ತದೆ. ಆದ್ದರಿಂದ ಅದರ ಅರ್ಥವನ್ನು ಸರಿಯಾಗಿ ಈ ರೀತಿ ಗ್ರಹಿಸಬೇಕು.

ಹಿಂದಿನ ಕಾಲದ ಮಹಾಪುರುಷರು, ಕ್ರಮಿಸಿದ ಹಾದಿಯನ್ನು ತ್ಯಜಿಸುವುದರಲ್ಲಿರುವ ಸಾಹಸ, ಅಪ್ರಾಕೃತಿಕವಾದ ಶಕ್ತಿಯನ್ನು ಹೊಂದಿದ್ದಾಗ್ಯೂ ಇತರೆ ಯಾವ ವ್ಯಕ್ತಿಯೂ ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲದಂತಹ ಅಪೂರ್ವ ಕೃತ್ಯಗಳನ್ನು ತಾನೇ ಕೈಗೆತ್ತಿಕೊಂಡು ಮಾಡುವುದು ಇಲ್ಲಿಯ ಮುಖ್ಯ ವಾಕ್ಯಾರ್ಥ. ಅದರಿಂದಾಗಿಯೇ ಆ ಕ್ಷೇತ್ರಗಳು ದಂತ ಕಥೆಯ ವೀರರ ಸಾಹಸ ಗಾಥೆಗಳಿಂದ ತುಂಬಿದ್ದರೂ, ನಿನ್ನ ಸಾಹಸವು ಅದೆಲ್ಲವನ್ನೂ ಮೀರಿದೆ ಎಂದು ಕವಿ ಹೇಳುತ್ತಾನೆ.

ಅದೇ ರೀತಿ, 'ಸಮಾಹಿತ'ವನ್ನೂ ಅಲಂಕಾರ್ಯವೆಂದು ಪರಿಗಣಿಸಬೇಕೇ ಹೊರತು ಅಲಂಕಾರವೆಂದಲ್ಲ. ಅದರಿಂದಲೇ ಪ್ರಸ್ತುತ ಕವಿಯ "ಸಮಾಹಿತಸ್ಯಾಪಿ" ಎಂದು ಸಮಾಹಿತದ ಎರಡು ಪ್ರಕಾರಗಳ ಕಡೆ ಲಕ್ಷ್ಯ ಸೆಳೆದಿದ್ದಾನೆ. ಅದೇ ತರ್ಕದ ಮೇರೆಗೆ, ಸಮೂಹಿತವು ಅಲಂಕಾರದ ಸ್ಥಾನವನ್ನು ಪಡೆಯದು. ಅದರ ಲಕ್ಷಣ ಹೀಗಿದೆ

ರಸ, ಭಾವ, ತದಾಭಾಸ ಪ್ರಶಮೋऽವಿದಿತಕ್ರಮಃ
ಅನ್ಯಾನುಭಾವನಿಶ್ಶೂನ್ಯರೂಪೋ ಯಸ್ತತ್ಸಮಾಹಿತಂ [೫೮]

ರಸಗಳು, ಭಾವಗಳು, ರಸಾಭಾಸ, ಭಾವಾಭಾಸ ಇವುಗಳು ತಾರ್ಕಿಕ ಕ್ರಮದಲ್ಲಿ ಪ್ರಶಮನ ಗೊಳ್ಳುವುದು. ಅಲ್ಲದೆ ಇತರೆ ಅನುಭಾವಗಳಿಲ್ಲದ ನಿಶ್ಶೂನ್ಯರೂಪದ ಮನಸ್ಥಿತಿಯೇ ಸಮಾಹಿತ[೫೮]

ಇಲ್ಲಿ ಪ್ರಸ್ತುತವಾದ್ದು ರಸಗಳ, ಭಾವಗಳ, ರಸಾಭಾಸ ಮತ್ತು ಭಾವಾಭಾಸಗಳ ಪ್ರಶಮನದ ಗುಣಲಕ್ಷಣದಿಂದ ಕೂಡಿದ ಮನಸ್ಥಿತಿ. ಅನಂತರ ಉದಿಸಬಹುದಾದ ಇತರೆ ರಸಗಳ ತರಂಗಗಳಿಂದ ಮುಕ್ತವಾದ್ದು. ಆ ವ್ಯಂಜಕಗಳ ವ್ಯಂಜನಾವ್ಯಾಪಾರವು ತಟಸ್ಥವಾಗಿರುತ್ತದೆ. ರಸೋತ್ಕರ್ಷದ ಪ್ರಥಮ ಪರಿಸ್ಪಂದವು ಮುಕ್ತಾಯದ ಹಂತಕ್ಕೆ ಬಂದಿದ್ದು, ಅನಂತರದ ಕ್ರಿಯೆಯಾದ ಇತರೆ ರಸಗಳ ವಿಷಯಕವಾದ ಅದರ ಚಟುವಟಿಕೆ ಇನ್ನೂ ಪ್ರಾರಂಭ ವಾಗಿರುವುದಿಲ್ಲ. ವಿರಾಮ ಸ್ಥಿತಿಯ ಈ ಅಸಂವೇದ್ಯಮಾನ ಕ್ರಮವು ಸಂಧ್ಯಾಕಾಲವನ್ನು ಹೋಲುವಂಥದಾಗಿದೆ. (ಹಗಲಿನ ಬೆಳಕು ಸಂಧ್ಯಾಸಮ ಕತ್ತಲಲ್ಲಿ ಐಕ್ಯವಾಗುವ ಸನ್ನಿವೇಶ) ಸತ್ಕವಿಗಳು ಅತ್ಯಂತ ಪ್ರಯತ್ನಪೂರ್ವಕವಾಗಿ ಗೊತ್ತುಹಚ್ಚ ಬೇಕಾಗಿರುವ ಅನಿಮಿತ್ತ ಮನೋಹರವಾದ ಇದು ಸಮಾಹಿತಾಲಂಕಾರ ಉದಾ :

ಅಕ್ಷ್ಣೋಃ ಸ್ಫುಟಾಶ್ರು ಕಲುಷೋಽರುಣಿಮಾ ವಿಲೀನಃ
ಶಾಂತಂ ಚ ಸಾರ್ಧಮಧರ ಸ್ಫುರಣಂ ಭ್ರುಕುಟ್ಯಾ|
ಭಾವಾಂತರಸ್ಯ (ತವ) ಗಂಡಗತೋಽಪಿ ಕೋಪೋ
ನೋದ್ಗಾಢ ವಾಸನತಯಾ ಪ್ರಸರಂ ದದಾತಿ [೫೯]

(ಅಲಂಕಾರಸರ್ವಸ್ವ R.P ದ್ವಿವೇದಿ p 70]

ಉಕ್ಕಿಬಹ ಕಣ್ಣೀರಿಂದ ಕಲುಷಿತವಾದ
ಕಂಗಳ ಕೆಂಪು ಕಾಣದಾಗಿದೆ ಈಗ
ತುಟಿ ಹುಬ್ಬುಗಳ ನಡುಕವಾಗಳೆ ನಿಂತಿದೆ
ಕೋಪ ಕೆನ್ನೆಯೊಳಿನ್ನು ಕಾಂಬುದಾದರು
ಗಾಢ ಸಂಸ್ಕಾರ ಬಲದಿಂದ
ಬೇರೆ ಭಾವಕೆ ಎಡೆ ಕೊಟ್ಟಿಲ್ಲವು [೫೯]

ಈ ಎಲ್ಲದರಿಂದಲೂ ಸಮಾಹಿತವನ್ನು ಸಾಧಿಸುವುದಾಗದು. ಕಾರಣ, ಅದರ ಅಸ್ತಿತ್ವ ಅವಲಂಬಿಸಿರುವುದು ರಸದ ಛಾಯೆಯ ಅಸ್ತಿತ್ವವನ್ನು. ರಸವೆಂದರೆ ವಿವಿಧ ಚಿತ್ತವೃತ್ತಿ ವಿಶೇಷಗಳೇ ಹೊರತು ಬೇರೆಯಲ್ಲ. ಅವು (ರಸಛಾಯೆಗಳು) ಭೂಷಣಗಳಾಗಬೇಕೆಂದರೆ, ಮನಸ್ಸಿನ ವಿರುದ್ಧ ಸ್ಥಿತಿಗಳನ್ನು (ಈಗ ಸಮಾಹಿತದ ಲಕ್ಷಣದಲ್ಲಿ ಅದನ್ನು ಕೈಬಿಡಲಾಗಿದೆ) ಭೂಷಣಗಳೆಂದೇ ಪರಿಗಣಿಸಬೇಕಾಗುತ್ತದೆ. ಅದಂತೂ ಸಾಧ್ಯವಿಲ್ಲವೆಂಬುದು ಸ್ಪಷ್ಟ.

ಅಲ್ಲದೆ ಮೇಲೆ ನಿರೂಪಿಸಿದ ಲಕ್ಷ್ಯದಲ್ಲಿ ವರ್ಣಿತ ವಸ್ತುವಿನ ಸ್ವಭಾವವು ಪ್ರಧಾನ ಚೇತನ ಸ್ವರೂಪದ್ದು. ಅದರ ಸ್ವಭಾವಕ್ಕೆ ತಕ್ಕಂತೆ ತನ್ನನ್ನು ಬಿಟ್ಟು ಇತರೆ ಯಾವುದೇ ವ್ಯಂಜಕವನ್ನು ಅದು ಸಹಿಸದು. ಅದರ ಹುಟ್ಟಾ ಸ್ವಭಾವವೇ ಅದನ್ನು ಇತರೆಯವುಗಳೊಂದಿಗೆ ಸೇರುವುದನ್ನು ವಿರೋಧಿಸುತ್ತದಾದ್ದರಿಂದ ಹಿಂದೆ ಎತ್ತಲಾದ ಆಕ್ಷೇಪಗಳು ಮತ್ತೆ ಇಲ್ಲಿಗೆ ಅನ್ವಯಿಸುತ್ತವೆ. ಅವನ್ನು ತಪ್ಪಿಸಲಂತೂ ಸಾಧ್ಯವೇ ಇಲ್ಲ. ಆ ಆಕ್ಷೇಪಣೆಗಳೆಂದರೆ ತನ್ನನ್ನು ಹೊರತುಪಡಿಸಿ ಇತರೆ ಯಾವುದೊಂದರ ಗೈರು ಹಾಜರಿ.

ಇನ್ನು ಕೆಲವರು, ಸಮಾಹಿತಾಲಂಕಾರವನ್ನು ಕಿಂಚಿತ್ ಬೇರೆ ರೀತಿಯಾಗಿ ಸೂತ್ರೀಕರಿಸಿದ್ದಾರೆ. ಹೊಸ ಲಕ್ಷಣವೂ ಸಮಾಹಿತವನ್ನು ಒಂದು ಅಲಂಕಾರ ಅಥವಾ ಭೂಷಣ ಎಂದು ಸಿದ್ಧ ಮಾಡಲು ಸಾಧ್ಯವಾಗಿಲ್ಲ. ಈ ಕೆಳಗಿನ ಸೂತ್ರ ಅದನ್ನೇ ಹೇಳುತ್ತದೆ.

ತಥಾ ಸಮಾಹಿತಸ್ಯಾಪಿ ಪ್ರಕಾರದ್ವಯ ಶೋಭಿನಃ [೬೦]

"ಎರಡು ಪ್ರಕಾರಗಳಿಂದ ಶೋಭಿತವಾದ [ಮೊದಲು ಹೇಳಿದ "ಉದ್ಭಟನ ಹಾಗೂ ಅನಂತರದ ದಂಡಿಯ ಅಭಿಮತದ ಮೇರೆಗೆ] ಸಮಾಹಿತದ ವಿಶಿಷ್ಟ ಲಕ್ಷಣವು ಸಿದ್ಧವಾಗುವುದಿಲ್ಲ" [೬೦]

ಸಮಾಹಿತದ ಎರಡನೇ ಲಕ್ಷಣ ಮತ್ತು ಲಕ್ಷ್ಯಗಳು ಹೀಗಿವೆ :

ಕಿಂಚಿದಾರಭ ಮಾಣಸ್ಯ ಕಾರ್ಯಂ ದೈವವಶಾತ್ ಪುನಃ
ತತ್ಸಾಧನ ಸಮಾಪತ್ತಿರ್ಯತ್ತಮಾಹುಃ ಸಮಾಹಿತಮ್ [೬೧][1]

ಯಾವುದಾದರೊಂದು ಕಾರ್ಯವನ್ನು ಆರಂಭಿಸುತ್ತಿರುವವನಿಗೆ, ಅದೃಷ್ಟವಶಾತ್ ತನ್ನ ಗುರಿಯನ್ನು ಸಾಧಿಸುವ ಮತ್ತೊಂದು ಸಾಧನವು ಪ್ರಾಪ್ತವಾದರೆ ಆಗ ಅದು ಸಮಾಹಿತಾಲಂಕಾರವೆನಿಸುತ್ತದೆ. [೬೧]

---

1 ಕಾವ್ಯಾದರ್ಶ II - 298

ಉದಾ :

ಮಾನಮಸ್ಯಾ ನಿರಾಕರ್ತುಂ ಪಾದಯೋರ್ಮೇ ಪತಿಷ್ಯತಃ
ಉಪಕಾರಾಯ ದಿಷ್ಟ್ಯೈತದುದೀರ್ಣಂ ಘನಗರ್ಜಿತಮ್ [೬೨]

ಅವಳ ಬಿಗುಮಾನವನು ಇಳಿಸಲು
ಕಾಲಿಗೆರಗಬೇಕನುತಿರೆ
ನನಗುಪಕರಿಸಲೆಂದೆ ಮೋಡಗಳು
ಮೊಳಗತೊಡಗಿವೆ ನನ್ನ ಭಾಗ್ಯವಶದೆ! [೬೨]

(ಕಾವ್ಯಾದರ್ಶ II 299)

ಇಲ್ಲಿ ಉತ್ತರಾರ್ಧದ ಸಂಗತಿಯು ಪೂರ್ವಾರ್ಧವನ್ನು ಸಮರ್ಥಿಸುತ್ತದಾದ್ದರಿಂದ ಈ ಶ್ಲೋಕದಲ್ಲಿ ಸಮಾಹಿತ ಅಲಂಕಾರವಿದೆ ಎಂದು ಕೆಲವರು ಹೇಳುತ್ತಾರೆ. ಇದು ಸರಿ ಇರಬಹುದು. ಕಾರಣ ಮೊದಲಿನದಕ್ಕೆ ಸ್ಪಷ್ಟೀಕರಣ ನೀಡುವ ಆ ಬರಹಕ್ಕೆ "ಸಮೂಹಿತ" ಎಂದು ಹೇಳುವುದನ್ನು ಯಾರೂ ಅಲ್ಲಗಳೆಯಲಾರರು. ಆದರೆ ನಾವು ನಿರಾಕರಿಸಹೊರಟಿರುವುದು ಅವುಗಳ ಅಲಂಕಾರ ಸಾಮರ್ಥ್ಯವನ್ನು. ಎರಡೂ ಕವಿವರ್ಣಿತ ರಸಭರಿತ ಪ್ರಸಂಗಗಳು. ಈಗಿರುವಂತೆ ಅವೆರಡೂ ಒಂದಕ್ಕೊಂದು ಸಮಾನ ಮತ್ತು ಅವುಗಳಲ್ಲಿ ಒಂದನ್ನು ಪ್ರಧಾನ ಇನ್ನೊಂದನ್ನು ಗೌಣ ಎಂದು ಪರಿಗಣಿಸಲು ಸಾಧ್ಯವಿಲ್ಲ. ಹಾಗಾಗಿ ಅವುಗಳ ಅಲಂಕರಣತ್ವವನ್ನು ಸಮರ್ಥಿಸುವಂಥದೇನೂ ಇಲ್ಲ. ಎರಡೂ ವರ್ಣಿತ ವಸ್ತುವಿನ ಅಂಶಗಳಾದ್ದರಿಂದ ಸಮಾನ ಲಕ್ಷಣಗಳನ್ನು ಸಮನಾಗಿಯೇ ಪಡೆದಿವೆ. ನಾಯಕಿಯ ಮನವೊಲಿಸುವಲ್ಲಿ ನಾಯಕನಿಗೆ ಸಹಾಯಮಾಡಲೋಸುಗವೋ ಎಂಬಂತೆ ಮೋಡಗಳು ಮೊಳಗಿದುವು ಎಂದು ಅರ್ಥೈಸುವುದಾದರೆ, ಉತ್ಪ್ರೇಕ್ಷಾಲಂಕಾರಕ್ಕವಕಾಶವಾಗುತ್ತದೆ. ಈ ಅನಗತ್ಯ ಚರ್ಚೆಯನ್ನು ಇನ್ನು ಬೆಳೆಸುವುದು ಬೇಕಿಲ್ಲ.

ಕಾವ್ಯವಸ್ತುವು ತನ್ನ ಸಹಜ ಸುಕುಮಾರ ಸೌಂದರ್ಯದಿಂದ ನಮಗೆ ಕಾಣುವುದು ಎರಡು ರೂಪದಿಂದ. ಅವುಗಳೆಂದರೆ ಚೇತನ ಮತ್ತು ಅಚೇತನ ಎಂದು ಈಗಾಗಲೇ ಪ್ರತಿಪಾದಿಸಲಾಗಿದೆ. ಇದೀಗ ಅಪೂರ್ವ ಪ್ರತಿಭಾಶಾಲಿಯಾದ ಕವಿ ತನ್ನ ಲೋಕೋತ್ತರವಾದ ಅತಿಶಯ ನಿರ್ಮಾಣ ಶಕ್ತಿಯಿಂದ ನಿರ್ಮಿಸಿದ ಮನೋಜ್ಞ ಸ್ವರೂಪವನ್ನು ವಿವೇಚಿಸಲಾಗುವುದು. ಅಲಂಕಾರಗಳ ಯೋಜನೆಯಿಂದ ಕಾವ್ಯವಸ್ತುವಿಗೆ ಪ್ರಾಪ್ತವಾಗುವ ಸೌಂದರ್ಯದ ಹೊರತಾಗಿ ಅಲಂಕೃತ ವಸ್ತುವಿನ ಸಹಜ ಸೌಂದರ್ಯವೂ ಇದ್ದಿತೆಂದರೆ ಸಹೃದಯರಿಗೆ ಆಹ್ಲಾದವನ್ನುಂಟು ಮಾಡುವಲ್ಲಿ ವಸ್ತುವಿನ ಸೌಂದರ್ಯವು ಆಲಂಕಾರಿಕ ಸೌಂದರ್ಯಕ್ಕೆ ಸಮನೆಂದು ಪರಿಗಣಿಸಲು ಸಾಧ್ಯವಿಲ್ಲ.

ಪ್ರಸಿದ್ಧೋ ವಸ್ತು ಧರ್ಮೋ ಯೋ ನ ವಿಚ್ಛಿತ್ತ್ಯಾಶ್ರಯೋ ಭವೇತ್|
ತದೇವಂ ಕವಿಮುಖ್ಯಾನಾಂ ವರ್ಣನಾಯೋಗಮಾಶ್ಚಿತಃ [೬೩]

ತಸ್ಯ ಲೋಕೋತ್ತರೋತ್ಕರ್ಷಲೇಖಾಲಗಿತ ವೃತ್ತಿಭಿಃ|
ಗುಣೈಶ್ಚಭಾಸಮಾನಸ್ಯ ನವತ್ವಮುಪಪದ್ಯತೇ [೬೪]

ಇವು ಅಂತರ ಶ್ಲೋಕಗಳು.

ಕಾವ್ಯ ವಸ್ತುವಿನ ಸುಂದರವಾದ ಯಾವ ಯಾವ ಭಾಗವಿದೆಯೋ ಅದು ಅದೇ ಕಾರಣಕ್ಕಾಗಿಯೇ ಆಲಂಕಾರಿಕ ಸೌಂದರ್ಯಕ್ಕೆ ಆಶ್ರಯ (ಮೂಲ)ವಾಗುವುದಿಲ್ಲ. ಬಹುಮುಖ್ಯ ಕವಿಗಳೆಲ್ಲರೂ ಅದನ್ನು ತಮ್ಮ ವರ್ಣನ ಕಲೆಯ ವಿಷಯಗಳನ್ನಾಗಿ ಮಾಡಿಕೊಂಡಿದ್ದಾರೆ. [೬೩]

ಗುಣಗಳ ಕಾರಣದಿಂದ ಕಣ್ಣುಕುಕ್ಕುವ ಹಾಗೆ ಹೊಳೆಯುತ್ತಿರುವ ಲೋಕೋತ್ತರವಾದ ಸೌಂದರ್ಯ ರೇಖೆಗಳೊಂದಿಗೆ ಅವು ಕೂಡಿಕೊಂಡು ಬಿಟ್ಟಾಗ ಅವು ನವತ್ವವನ್ನು ಉಂಟುಮಾಡುತ್ತದೆ. (ಅವುಗಳನ್ನು ನೂತನವೆಂದು ಪರಿಗಣಿಸಬೇಕು. [೬೪]

ಮೇಲಿನ ಶ್ಲೋಕಗಳೆರಡೂ ಇಲ್ಲಿಯವರೆಗಿನ ಚರ್ಚೆಯ ಸಾರವನ್ನು ಹಿಡಿದಿರಿಸಿದೆ.

ಹೀಗೆ ಅಲಂಕಾರಗಳು ಅಥವಾ ಭೂಷಣಗಳು ತನಗೆ ತಾನೇ ಸುಂದರವಾಗಿರುವ ಕಾವ್ಯವಸ್ತುವಿನ ನೂತನ ಸೌಂದರ್ಯಾತಿಶಯದ ರೂವಾರಿಗಳು ಎಂದು ಪರಿಗಣಿಸಬೇಕಾಗುತ್ತದೆ.

ಅಭಿಧಾಯಾಃ ಪ್ರಕಾರೌ ಸ್ತಃ ಕೋಟಿ ಪ್ಯೇನಂ ಸ್ಫುಟಯತ್ಯಸೌ|
ಕಾವ್ಯಸ್ಯ ಕಶ್ಚಿದ್ವಿಚ್ಛಿತ್ತಿಂ ದ್ಯೋತಯತ್ಯಂಗತಃ ಸ್ಥಿತಃ [14]

ಕಾವ್ಯದ ನಿರೂಪಣೆಯ (ಅಭಿವ್ಯಕ್ತಿಯ) ಪ್ರಕಾರಗಳು ಎರಡು. ಒಂದು ಅಲಂಕಾರ್ಯದ ಸೌಂದರ್ಯವನ್ನು ಹೆಚ್ಚಿಸುವಂಥದು. ಇನ್ನೊಂದು ಮೂಲತಃ ತಾನು ಅದನ್ನು ಧ್ವನಿಸಿ ಅದಕ್ಕೆ ಅಧೀನವಾಗಿದ್ದು ಕೊಂಡು ಅದರ ಅಲಂಕಾರದ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. [14]

ಮೇಲಿನ ಕಾರಿಕೆಯು, 'ರಸವತ್' ಮೊದಲಾದ ಅಲಂಕಾರಗಳು ಅಲಂಕಾರ್ಯದ ಸೌಂದರ್ಯಕ್ಕೆ ಅತಿಶಯ ಶೋಭೆಯನ್ನು ತಂದುಕೊಡುವ ಕೃತ್ಯದಲ್ಲಿ ತೊಡಗಿವೆ ಎಂದು ಘೋಷಿಸುತ್ತಿದೆ.

ರೂಪಕವೇ ಮೊದಲಾದ ಇತರೆ ಅಲಂಕಾರಗಳು ಮುಖ್ಯವಾಗಿ ಅಲಂಕಾರ್ಯದ ಸೌಂದರ್ಯವನ್ನು ಸೂಚಿಸುತ್ತವೆ. ಆದರೆ ಅವು ಮಾತ್ರ ಉಪಾಂಗಗಳಾಗಿ (ಪೂರಕ) ಇರುತ್ತವೆ (ಧ್ವನಿಸುತ್ತದೆ). ಈ ಗುಣಲಕ್ಷಣದಿಂದಾಗಿ ಅವು ಅಲಂಕಾರ ಅಥವಾ ಭೂಷಣಗಳಾಗಿ ಉಳಿಯುತ್ತವೆ. ಇದನ್ನು ಮುಂದಿನ ಪ್ರಸಂಗದಲ್ಲಿ ಇನ್ನಷ್ಟು ವಿವರಿಸಲಾಗುವುದು.

ಮೇಲಿನ ಅಂಶವನ್ನು ವಿಸ್ತೃತವಾಗಿ ಚರ್ಚಿಸಲಾಗುವುದು.

ಯಥಾ ಸ ರಸವನ್ನಾಮ ಸರ್ವಾಲಂಕಾರ ಜೀವಿತಮ್|
ಕಾವ್ಯೈಕಸಾರತಾಂ ಯಾತಿ ತಥೇದಾನೀಂ ವಿಚಾರ್ಯತೇ[15]

'ರಸವತ್' ಎಂಬ ಅಲಂಕಾರವು ಒಂದೆಡೆ ಸಮಸ್ತ ಅಲಂಕಾರಗಳ ಪ್ರಾಣ ಸ್ವರೂಪವೂ ಇನ್ನೊಂದೆಡೆ ಕಾವ್ಯದ ಸಾರ ಸರ್ವಸ್ವವೂ ಆಗುವ ರೀತಿಯಲ್ಲಿ ಅದರ ಸ್ವರೂಪವನ್ನು ಈಗ ವಿಚಾರ ಮಾಡಲಾಗು ವುದು. [15]

ಯಥಾ ಇತ್ಯಾದಿ- ಇಲ್ಲಿ ಹೇಳಿರುವ 'ರಸವತ್' ಎಂಬ ಶಬ್ದ ಈ ಹಿಂದಿನ ಅಧ್ಯಾಯಗಳಲ್ಲಿ ವಿಸ್ತಾರವಾಗಿ ಚರ್ಚಿಸಿರುವಂಥದು. ಈಗ ಅದನ್ನು ಹೊಸ ದೃಷ್ಟಿಕೋನದಿಂದ ವಿಚಾರ ಮಾಡಲಾಗುವುದು. ಆ ರಸವದಲಂಕಾರವು ಹೇಗೆ ಕಾವ್ಯದ ಏಕಮಾತ್ರ ಸಾರಸರ್ವಸ್ವವನ್ನು

ಪಡೆದುಕೊಳ್ಳುತ್ತದೆ ಹಾಗೂ ಅದು ಹೇಗೆ ಸಮಸ್ತ ಅಲಂಕಾರಗಳ ಪ್ರಾಣ ಅರ್ಥಾತ್, ಉಪಮೆಯೇ ಮೊದಲಾದ ಎಲ್ಲ ಅಲಂಕಾರಗಳ ಜೀವಿತ ಸರ್ವಸ್ವವಾಗುತ್ತದೆ ಎಂಬುದನ್ನು ಇದೀಗ ವಿಚಾರಿಸಲಾಗುವುದು. ಲಕ್ಷಣ ಮತ್ತು ಉದಾಹರಣೆಗಳ ಮೂಲಕ ಅದನ್ನು ವಿಚಾರ ಮಾಡಲಾಗುವುದು.

ಹೊಸದಾಗಿ ಪ್ರಸ್ತುತ ಪಡಿಸಲಾಗುವ ರಸವದಲಂಕಾರದಲಕ್ಷಣ

ರಸೇನ ವರ್ತತೇ ತುಲ್ಯಂ ರಸವತ್ತ್ವವಿಧಾನತಃ|
ಯೋಽಲಂಕಾರಃ ಸ ರಸವತ್ ತದ್ವಿದಾಹ್ಲಾದನಿರ್ಮಿತೇಃ[16]

ರಸವನ್ನು ಕಾವ್ಯದಲ್ಲೆಲ್ಲ ವ್ಯಾಪಿಸುತ್ತ ರಸದ ಹಾಗೆ ವರ್ತಿಸುವ (ರಸದ ಹಾಗೆ ಕಾರ್ಯ ನಿರ್ವಹಿಸುವ) ಕಾರಣದಿಂದ ಸಹೃದಯರಿಗೆ ಆಹ್ಲಾದವನ್ನುಂಟುಮಾಡುವ ಅಲಂಕಾರಕ್ಕೆ ರಸವದಲಂಕಾರ ಎಂದು ಹೆಸರು.

ರಸವತ್ ಎಂಬ ಅಲಂಕಾರವೊಂದಿದೆ (ಯಾವುದು ಅಲಂಕಾರವೋ ಅದು ರಸವತ್). ಅದು ಸ್ವತಂತ್ರವಾದ್ದಲ್ಲ; ಪ್ರಸಿದ್ಧವಾದ ರೂಪಕಾದಿ ಅಲಂಕಾರಗಳ ಸ್ವರೂಪವನ್ನು ಹೊಂದಿರುವಂಥದು. 'ರಸವತ್' ಎಂದು ಕರೆಯುವುದೇಕೆ ಎಂದು ಕೇಳಬಹುದು. ರಸದ ಹಾಗೆ ಕಾರ್ಯನಿರ್ವಹಿಸುವ ಅಲಂಕಾರ ಎಂಬ ಮಾತೇ ಅದಕ್ಕೆ ಉತ್ತರ. ಸಾರಾಂಶವೆಂದರೆ, ರಸವದಲಂಕಾರವು ಶೃಂಗಾರಾದಿ ರಸಗಳೊಂದಿಗೆ ಸಹವರ್ತಿಯಾಗಿ, ಹಾಗೂ ರಸದ ಹಾಗೆ ಕೆಲಸ ಮಾಡುತ್ತ, ಅದಕ್ಕೆ ಸಮನಾಗಿ ಇರುತ್ತದೆ. ಬ್ರಾಹ್ಮಣನ ಹಾಗೆ ಕಾಣುವ ಕ್ಷತ್ರಿಯನನ್ನು "ಬ್ರಾಹ್ಮಣವತ್ ಕ್ಷತ್ರಿಯ" ಎಂದು ಹೇಳುವ ಹಾಗೆ. (ಉಪಮಾ, ರೂಪಕಾದಿ) ಅಲಂಕಾರಗಳು ರಸದೊಂದಿಗೆ ಕಂಡುಬಂದಾಗ ರಸವದಲಂಕಾರ ಎಂಬ ಹೆಸರನ್ನು ಪಡೆಯುತ್ತವೆ. ಯಾವ ಕಾರಣದಿಂದ ಹಾಗೆ ಕರೆಯಲ್ಪಡುತ್ತವೆ ಎಂಬುದಕ್ಕೆ ರಸವತ್ತ್ವ ವಿಧಾನತಃ" ಎಂಬುದೇ ಉತ್ತರ. ಅರ್ಥಾತ್ ರಸವನ್ನು ಕಾವ್ಯದಲ್ಲಿ ವ್ಯಾಪ್ತಗೊಳಿಸುವ ಕಾರಣದಿಂದ. ರಸವು ಅದರಲ್ಲಿದೆ ಎನ್ನುವ ಕಾರಣದಿಂದ. ಕಾವ್ಯವು 'ರಸವತ್'. ಆ ಒಂದು ಗುಣ ಅಥವಾ ಸ್ಥಿತಿಯೇ ರಸವತ್ತ್ವ. ಅದೇ ಸರಸತ್ವ ಸಂಪಾದನೆ. ಈಗ ಅಲಂಕಾರವು (ಉಪಮಾ, ರೂಪಕ) ಕಾವ್ಯದಲ್ಲಿ ರಸವತ್ತ್ವವನ್ನು ತುಂಬಿಬಿಡುತ್ತದೆ. ಅಥವಾ ಕಾವ್ಯದಲ್ಲಿ ರಸವು ವ್ಯಾಪ್ತವಾಗುವಂತೆ ಮಾಡುತ್ತದೆ. ಇದೆಲ್ಲದರ ಅಂತಿಮ ಗುರಿಯೇನೆಂದು ಕೇಳಬಹುದು. ಸಹೃದಯರಿಗೆ ಆಹ್ಲಾದವನ್ನುಂಟು ಮಾಡುವುದೇ ಆತ್ಯಂತಿಕ ಉದ್ದೇಶ. ತದ್ವಿದರು ಎಂದರೆ, ಕಾವ್ಯದ ಮರ್ಮವನ್ನು ಚೆನ್ನಾಗಿ ತಿಳಿದವರೇ ಸಹೃದಯರು. ಅಂಥ ಕಾವ್ಯರಸಿಕರಿಗೆ ಆಹ್ಲಾದವನ್ನುಂಟು ಮಾಡುವುದೇ ಹೊಸದಾದ ರಸವದಲಂಕಾರದ ಗುರಿ. ಹೇಗೆ ರಸವು ಕಾವ್ಯದಲ್ಲಿ ರಸವತ್ತ್ವ ಹಾಗೂ ಸಹೃದಯರಲ್ಲಿ ಆನಂದವನ್ನುಂಟುಮಾಡುತ್ತದೆಯೋ ಅದೇ ರೀತಿಯಲ್ಲಿ ಉಪಮೆಯೇ ಮೊದಲಾದ ಅಲಂಕಾರಗಳು, ಕಾವ್ಯರಸತ್ವ ಹಾಗೂ ಸಹೃದಯಾಹ್ಲಾದ ಎರಡನ್ನೂ ಉಂಟು ಮಾಡುವುದರಿಂದ ಅವು ರಸವದಲಂಕಾರವೆನಿಸುತ್ತವೆ.

ಉಪೋಢರಾಗೇಣ ವಿಲೋಲ ತಾರಕಂ
ತಥಾ ಗೃಹೀತಂ ಶಶಿನಾ ನಿಶಾಮುಖಂ
ಯಥಾ ಸಮಸ್ತಂ ತಿಮಿರಾಂಶುಕಂ ತಯಾ
ಪುರೋಽಪಿ ರಾಗಾದ್ಗಲಿತಂ ನ ಲಕ್ಷಿತಂ [೬೫] [ಧ್ವನ್ಯಾಲೋಕ]*

ಚಂಚಲ ತಾರಕೆಗಳ ನಿಶೆಯ ಮೊಗವನು
ರಾಗವುಕ್ಕಿ ಬರೆ ಶಶಿಯು
ಅದೆನಿತು ಭರದಲಿ ಹಿಡಿದನೆಂದರೆ
ಕರಿಯ ಪತ್ತಲವು ಮುಂಗಡೆ ಜಾರಿದುದ
ರಾಗದೆ ನಿಶೆಯು ಕಾಣದೆ ಹೋದಳು.

ಚಂದ್ರ ಮತ್ತು ರಜನಿ - ಇವರನ್ನು ಸಮಾಗಮದ ಸಮಯವನ್ನು ಸಮೀಪಿಸುತ್ತಿರುವ ಸುಕುಮಾರ ಸ್ವಭಾವದ ಪ್ರೇಮಿಗಳಾಗಿ ಚೇತನಾರೋಪಣೆ ಮಾಡಿ ರೂಪಕಾಲಂಕಾರದ ಯೋಜನೆ ಮಾಡಿರುವುದೇ ಇಲ್ಲಿಯ ವಾಕ್ಯಾರ್ಥ ಅಥವಾ ವರ್ಣನೀಯ ಮುಖ್ಯ ವಿಷಯ. ಇದು ಈಗಾಗಲೇ ಹೇಳಿದ ಪ್ರಧಾನ ವಿಷಯಕ್ಕೆ ಇನ್ನಷ್ಟು ಶೋಭೆಯನ್ನು ತಂದುಕೊಡುತ್ತದೆ.

ಆ ರೂಪಕವು ಶ್ಲೇಷದ ಸೌಂದರ್ಯದಿಂದ ರಮಣೀಯವಾದ ವಿಶೇಷಣಗಳ ವಕ್ರತೆ ಹಾಗೂ ಲಿಂಗದ ವಿಶಿಷ್ಟ ಬಳಕೆಯಿಂದ ಅತಿಶಯ ಸೌಂದರ್ಯವನ್ನು ಪಡೆದುಕೊಳ್ಳುತ್ತದೆ. ಹೀಗೆ ಕಾವ್ಯವು ರಸಸಂಪನ್ನತೆಯನ್ನು ಪಡೆದುಕೊಂಡು ಬಿಡುತ್ತದೆ ಮತ್ತು ಸಹೃದಯರಿಗೆ ಆಹ್ಲಾದ ನೀಡುತ್ತದೆ. ಒಟ್ಟಾರೆ ಹೇಳಬೇಕೆಂದರೆ ಇಲ್ಲಿ ಬಳಕೆಯಾಗಿರುವ ರೂಪಕವು ರಸವದಲಂಕಾರದ ಮಾನ್ಯತೆಯನ್ನು ಪಡೆದುಕೊಂಡಿದೆ.

ಪ್ರೇಮಿ ಮತ್ತು ಪ್ರೇಯಸಿಯರ ಮಹತ್ವವನ್ನು ಅವರನ್ನು ಅಭಿವ್ಯಕ್ತಿಸುವ ಶಬ್ದಗಳನ್ನು ಪ್ರಕಟವಾಗಿ ಹೇಳದೆಯೆ ರೂಪಕವೊಂದು ಹೀಗೆ ಅಭಿವ್ಯಕ್ತಪಡಿಸಬಹುದೆಂಬುದನ್ನು ಏಕದೇಶ ವಿವರ್ತಿ ರೂಪಕದ (ಅಥವಾ ಒಂದು ಅಂಶಕ್ಕೆ ಮಾತ್ರ ಸೀಮಿತವಾದ ರೂಪಕ) ಅಡಿಯಲ್ಲಿ ವಿಚಾರ ಮಾಡಲಾಗುವುದು.

ರಸವದಲಂಕಾರಕ್ಕೆ ಸಂಬಂಧಿಸಿದಂತೆ ಈ ಹಿಂದೆ ಹೇಳಿದ ದೋಷಗಳು, [ಅಧಿಕವಾಗಿ ಸೇರಿದ ಅಲಂಕಾರವನ್ನು ಸಂಕರ ಅಥವಾ ಸಂಸೃಷ್ಟಿ ಅಲಂಕಾರಗಳೆಂದು ಭಾವಿಸಬೇಕೆಂಬ] ಈಗ ಪ್ರಸ್ತುತ ಪಡಿಸಿದ ಲಕ್ಷಣವನ್ನು ದೂಷಿತಗೊಳಿಸಲಾರವು. ಅದೇ ರೀತಿ ಈಗಾಗಲೇ ವಿವರಿಸ

---

* ಇದು ಪಾಣಿನಿ ವಿರಚಿತ ಶ್ಲೋಕವೆಂದು ಹೇಳಲಾಗುತ್ತದೆ. ಇದರಲ್ಲಿ ಸಂಧ್ಯಾಸಮಯದಲ್ಲಿ ಉದಯವಾಗುತ್ತಿರುವ ಚಂದ್ರನ ವರ್ಣನೆ ಇದೆ. ಚಂದ್ರನಿಗೆ ಪುಲ್ಲಿಂಗ ಶಬ್ದವಾದ "ಶಶಿ" ಮತ್ತು ರಾತ್ರಿಗೆ ಸ್ತ್ರೀ ಲಿಂಗಶಬ್ದವಾದ "ನಿಶಾ"ವನ್ನು ಪ್ರಯೋಗಿಸಿ ಅವುಗಳಲ್ಲಿ ನಾಯಕ ನಾಯಿಕೆಯರ ವ್ಯವಹಾರವನ್ನು ಆರೋಪಿಸಿದ್ದಾನೆ. ಅದರಿಂದ ಆನಂದವರ್ಧನನಾದಿಯಾಗಿ ಎಲ್ಲ ಆಲಂಕಾರಿಕರೂ ಇದನ್ನು ಸಮಾಸೋಕ್ತಿ ಅಲಂಕಾರವೆಂದು ಹೇಳಿದ್ದಾರೆ. ಆದರೆ ಕುಂತಕನು ಇದನ್ನು ವಿವೇಚಿಸುತ್ತ ಇದರಲ್ಲಿ ರೂಪಕಾಲಂಕಾರ ವಿದೆಯೆಂದು ಪ್ರತಿಪಾದಿಸಿದ್ದಾನೆ

[ಆಚಾರ್ಯ ವಿಶ್ವೇಶ್ವರ ಸಂಪಾದಿತ ಹಿಂದೀ ವಕ್ರೋಕ್ತಿಜೀವಿತ - ಪು 385]

ಲಾದವುಗಳಿಗೆ ವಿರುದ್ಧವಾದ ಉದಾಹರಣೆಗಳಿಗೂ ಈ ಅಲಂಕಾರವು ಅನ್ವಯಿಸಬಹುದಾದ ದೋಷ ಕೂಡ ಇಲ್ಲಿ ಉದ್ಭವಿಸುವುದಿಲ್ಲ. ಕಾರಣ ರೂಪಕವು ವಿರುದ್ಧ ಗುಣ ಲಕ್ಷಣಗಳೊಂದಿಗೆ ಕೂಡಿಕೊಡು ಇಲ್ಲಿ ಅಲ್ಲಿ ಎಲ್ಲೆಲ್ಲಿಯೂ ಸ್ವತಂತ್ರವಾಗಿ ಇರಬಹುದು. ಮುಂದಿನ ದೋಷ "ಅದರಿಂದ ಅಲಂಕೃತವಾದದ್ದರ ಹೊರತು, ಬೇರಾವುದೂ ಪಥ್ಯವಲ್ಲ. ಅಂದರೆ, ಅಲಂಕಾರ ಮತ್ತು ಅಲಂಕಾರ್ಯಗಳು ಒಂದೇ ಆಗಿಬಿಡುವ ಮತ್ತು ಅದರ ಪರಿಣಾಮವಾಗಿ ಅವುಗಳಲ್ಲೇ ಪರಸ್ಪರ ಕ್ರಿಯಾ ವಿರೋಧವಿರುವ ದೋಷ ಕೂಡ ಹೊಸಲಕ್ಷಣ ಮತ್ತು ಸ್ವತಂತ್ರ ಉದಾಹರಣೆ ಗಳಿಂದ ನಿವಾರಿತವಾಗಿವೆ.

ಚಲಾಪಾಂಗಾಂ ದೃಷ್ಟಿಂ ಸ್ಪೃಶಸಿ, ಬಹುಶೋ ವೇಪಥುಮತೀಂ
ರಹಸ್ಯಾಖ್ಯಾಯೀವ ಸ್ವನಸಿ, ಮೃದು ಕರ್ಣಾಂತಿಕ ಚರಃ||
ಕರಂ ವ್ಯಾಧುನ್ವತ್ಯಾಃ ಪಿಬಸಿ ರತಿಸರ್ವಸ್ವಮಧರಂ
ವಯಂ ತತ್ತ್ವಾನ್ವೇಷಾನ್ಮಧುಕರ ಹತಾಸ್ತ್ವಂ ಖಲು ಕೃತೀ. [೬೬]

(ಶಾಕುಂತಲ 1-24)

ನಡುಗುವೀಕೆಯ ಚಂಚಲತೆವೆತ್ತ
ಕಡೆಗಣ್ಣ ನೋಟವ ಮತ್ತೆ ಮತ್ತಿದೊ ಸೋಂಕುವೆ
ಕಿವಿಯ ಬಳಿಯೊಳೆ ಗುಟ್ಟ ಹೇಳುವರಂತೆ
ಮಧುರ ಗುಂಜನ ಮಾಡುವೆ
ಕೈಯ ಕೊಡಹುತಲಿರುವಳ
ರತಿಸರ್ವಸ್ವವೆನಿಸಿಹ ತುಟಿಗಳ
ಮುದ್ದಿಸುವ ನೀನೆ ಧನ್ಯನು ನೋಡೆ ಮಧುಕರ
ನಿಜವನರಸುತ ದಿಟದಿ
ನಾವೇ ಕೆಟ್ಟೆವು! [೬೬]

ಇಲ್ಲಿಯ ಆತ್ಯಂತಿಕ ಅರ್ಥ :- ನಾಯಕನ ವರ್ತನೆಯನ್ನು ದುಂಬಿಗೆ ಆರೋಪಿಸಿರುವುದರ ಪರಿಣಾಮವಾದ ರೂಪಕಾಲಂಕಾರವು (ರಸವದಲಂಕಾರ) ಶೃಂಗಾರ ರಸಕ್ಕೆ ಅತಿಶಯವಾದ ಶೋಭೆಯನ್ನು ತಂದುಕೊಟ್ಟಿದೆ. ಇಲ್ಲಿ ರೂಪಕಾಲಂಕಾರವು ರಸದೊಂದಿಗೆ ಇರುವುದರಿಂದ ರಸವದಲಂಕಾರವಾಗಿದೆ. ಅಥವಾ ಈ ಉದಾಹರಣೆಯನ್ನು ನೋಡಬಹುದು.

ಕಪೋಲೇ ಪತ್ರಾಲಿ [೬೭] II - 101

ಇದರಲ್ಲೂ ರಸವದಲಂಕಾರವಿದೆ

ಇದೇ ತರ್ಕದ ಆಧಾರದ ಮೇಲೆ - "ಕ್ಷಿಪ್ತೋ ಹಸ್ತಾವಲಗ್ನಃ" - [೬೮]

ಎಂಬ ಉದಾಹರಣೆಯಲ್ಲಿ ರಸವದಲಂಕಾರವನ್ನು ಖಂಡಿಸಿರುವುದರು ಯುಕ್ತವಲ್ಲ ಎನ್ನಬಹುದು.

ಕುಂತಕನು ಇದಕ್ಕೆ ಉತ್ತರಿಸುತ್ತ ಈ ಆಕ್ಷೇಪ ಸ್ವಲ್ಪ ಮಟ್ಟಿಗೆ ಮಾತ್ರ ನಿಜ. (ಅಂದರೆ

ಅದೂ ರಸವದಲಂಕಾರಕ್ಕೆ ಉದಾಹರಣೆಯಾಗಬಹುದು) ಅಲ್ಲಿ ನಾವು ವಿಪ್ರಲಂಭ ಶೃಂಗಾರವನ್ನು ನಿಷೇಧಿಸುತ್ತಿದ್ದೇವೆ. ಉಳಿದಂತೆ ಅಲ್ಲಿಯೂ ಇಲ್ಲಿರುವಂತೆಯೇ ಹೋಲಿಕೆ ಇರುವುದರಿಂದ (ಕಾಮಿ ಮತ್ತು ಶರಾಗ್ನಿಯ ಸಾಮ್ಯ) ರಸವದಲಂಕಾರತ್ವ ಅನಿವಾರ್ಯವೇ ಆಗುತ್ತದೆ. ಕಾರಣ ಈ ಉದಾಹರಣೆಗಳು ಹಾಗೂ ಅದು ಎಲ್ಲ ಅಂಶಗಳಲ್ಲೂ ಸರಿ ಸಮಾನ.

ಈಗಿನ ವಿವರಣೆಯಲ್ಲಿ, ರಸವದಲಂಕಾರದೊಂದಿಗೆ ಇತರೆ ಅಲಂಕಾರಗಳು ಸೇರಿಕೊಂಡಿರುವುದನ್ನು, ಸಂಸೃಷ್ಟಿ ಅಥವಾ ಸಂಕರ ಅಲಂಕಾರವೆಂದು ಹೇಳಿರುವುದನ್ನು ನಿರಾಕರಿಸುವುದು ಯುಕ್ತವಲ್ಲ. ಉದಾ :

ಅಂಗುಲೀಭಿರಿವ ಕೇಶಸಂಚಯಂ
ಸಂನಿಗೃಹ್ಯ ತಿಮಿರಂ ಮರೀಚಿಭಿಃ
ಕುಡ್ಮಲೀಕೃತ ಸರೋಜಲೋಚನಂ
ಚುಂಬತೀವ ರಜನೀ ಮುಖಂ ಶಶೀ [೬೯]

[ಕುಮಾರ ಸಂಭವ VIII - 63]

ತನ್ನ ಬೆರಳ ಕಿರಣಗಳಿಂದ ಕತ್ತಲೆಯ ಕೇಶರಾಶಿಯನು
ಬಿಗಿ ಹಿಡಿದು ಚಂದ್ರಮನು
ಕಂಗಳನು ಮುಚ್ಚಿರುವ ಕಮಲನೇತ್ರೆ
ಆ ರಜನಿಯ ಮೊಗವನು ಚುಂಬಿಸುವವೋಲಿಹನು [೬೯]

ಇಲ್ಲಿ ರಸವದಲಂಕಾರವು ಇತರೆ ರೂಪಕಾದಿ ಅಲಂಕಾರಗಳ ಜೊತೆ ಮಿಳಿತವಾಗಿರುವುದನ್ನು ಅತ್ಯಂತ ಸ್ಪಷ್ಟವಾಗಿ ಕಾಣಬಹುದು. ಆದರೆ "ರಜನಿಯ ಮೊಗವನು ಚುಂಬಿಸುವವೋಲಿಹನು" ಎಂಬ ಪಂಕ್ತಿಯಲ್ಲಿರುವ ಉತ್ಪ್ರೇಕ್ಷಾಲಂಕಾರವೇ ಇಲ್ಲಿ ರಸವದಲಂಕಾರದ ಹಾಗೆ ಪರಿಗಣಿಸಲ್ಪಡಬೇಕಾಗಿರುವ ಅಲಂಕಾರ. ಉಪಮಾದಿ ಇತರೆ ಅಲಂಕಾರಗಳೆಲ್ಲವೂ ರಸವತ್ ಆದ ಉತ್ಪ್ರೇಕ್ಷಾಲಂಕಾರದ ಸೌಂದರ್ಯವನ್ನು ಪೋಷಿಸುವ ಸಲುವಾಗಿ ಇವೆಯೇ ಹೊರತು, ಅವಕ್ಕೆ ಸ್ವತಂತ್ರವಾದ ಕಾರ್ಯವಿಲ್ಲ. ಈಗ ಇನ್ನೊಂದು ಉದಾಹರಣೆ

ಐಂದ್ರಂ ಧನುಃ ಪಾಂಡುಪಯೋಧರೇಣ
ಶರದ್ಧಾನಾರ್ದ್ರನಖಕ್ಷತಾಭಮ್|
ಪ್ರಸಾದಯಂತೀ ಸಕಲಂಕಮಿಂದುಂ
ತಾಪಂ ರವೇರಭ್ಯಧಿಕಂ ಚಕಾರ [೭೦]

ತನ್ನಯ ಪಾಂಡುವರ್ಣದ ಪಯೋಧರದಲಿ
ಕಾಮನ ಬಿಲ್ಲಿನಂಥ ನಖಕ್ಷತವ ತಳೆದಿರುವ
ಶರದ ನಾಯಿಕೆಯು ಕರೆಮೊಗದ
ಚಂದಿರನ ಮುದಗೊಳಿಸುತೆ
ಬೆಂಗದಿರ ತಾಪವನು ಹೆಚ್ಚಿಸಿಹಳು [೭೦]

ಇಲ್ಲಿ ಕಾವ್ಯದ ಮುಖ್ಯವಸ್ತು ಶರದ್ ಋತುವಿನ ಸೌಂದರ್ಯ ವರ್ಣನೆ. ಇದಕ್ಕಾಗಿ ಕವಿ ಉತ್ಪ್ರೇಕ್ಷಾ ರೂಪದ ರಸವದಲಂಕಾರವನ್ನು ಬಳಸಿದ್ದಾನೆ. "ಮುದಗೊಳಿಸುತೆ ಬೆಂಗದಿರನ ತಾಪವನು ಹೆಚ್ಚಿಸಿಹಳು" - ಎಂಬ ಮಾತಿನಿಂದ ಋತುಮಾನಕ್ಕೆ ಸಹಜವಾದ 'ಮೋಡ ಎಂಬ ಶಬ್ದದ ಹೆಸರನ್ನೇ ಎತ್ತದೆ, ಪ್ರತೀಯಮಾನ ಉತ್ಪ್ರೇಕ್ಷಾ ರೂಪದ ರಸವದಲಂಕಾರದ ಮೂಲಕ ಅಪೂರ್ವ ರಮಣೀಯತೆಯನ್ನು ಸೃಜಿಸಿದ್ದಾನೆ. ಅಲ್ಲದೆ, 'ಸಕಲಂಕ" ಮೊದಲಾದ ಬೇರೆ ರೀತಿಯಲ್ಲಿಯೇ ಪ್ರತೀತವಾಗುವ (ಶ್ಲೇಷದ ಸೌಂದರ್ಯದಿಂದ) ಶಬ್ದಗಳನ್ನು ಪ್ರಯೋಗಿಸಿರುವುದೇ ಅಲ್ಲದೆ ಪಾಂಡು ಪಯೋಧರೇಣಾರ್ದ್ರನಖಕ್ಷತಾಭಮ್ಯೈಂದ್ರಂಧನುಃ" (ತನ್ನಯ ಪಾಂಡು ವರ್ಣದ ಯೋಧರದಲಿ......) ಎಂಬ ವಾಕ್ಯದಲ್ಲಿ ಶ್ಲೇಷೆ ಹಾಗೂ ಉಪಮೆ (ಶ್ಲೇಷೋಪಮಾ) ಬಳಸಿದ್ದಾನೆ ಮತ್ತು ಇದು ಉದ್ದಿಷ್ಟ ವಿಚಾರಕ್ಕೆ ಅನುಗುಣವಾಗಿಯೇ ಇದೆ ಮತ್ತು 'ಕರೆಮೊಗದ ಚಂದಿರನ ಮುದಗೊಳಿಸುತೆ' ಪ್ರತಿಸ್ಪರ್ಧಿಯ (ಬೆಂಗದಿರ) ತಾಪವನು ಹೆಚ್ಚಿಸಿಹಳು'- ಅಸೂಯೆಯನ್ನು ಸಹಜವಾಗಿಯೇ ಹೆಚ್ಚಿಸಿದಳು- ಎಂದು ಹೇಳುವಲ್ಲಿ ವೇಶ್ಯಾಸ್ತ್ರೀಯ ವರ್ತನೆಯನ್ನು ಋತುಮಾನದ ಘಟನೆಯ ಮೇಲೆ ಆರೋಪಿಸುತ್ತ ರೂಪಕಾಲಂಕಾರವನ್ನು ಯೋಜಿಸಿರುವುದು ಕಾವ್ಯಕ್ಕೆ ಅತ್ಯಧಿಕ ರಮಣೀಯತೆಯನ್ನು ತಂದುಕೊಟ್ಟಿದೆ. ಇಲ್ಲಿಯೂ ಕೂಡ ಪ್ರತೀಯಮಾನ ರಸವದಲಂಕಾರವೇ (ಉತ್ಪ್ರೇಕ್ಷೆ) ಪ್ರಧಾನವಾಗಿದ್ದು, ಉಪಮೆಯೇ ಮೊದಲಾದುವು ಅದರ ಅಂಗರೂಪವಾಗಿವೆ. ಹಿಂದಿನ ಉದಾಹರಣೆಗಳಲ್ಲಿ ಆದಂತೆಯೇ ಇಲ್ಲಿಯೂ ಆಗಿದೆ.

ಅಲಂಕಾರಗಳು, ಕೆಲವೊಮ್ಮೆ ಪಾತ್ರಗಳು ಪ್ರಪ್ರಥಮವಾಗಿ ಉದಿಸಿದ ರತಿಭಾವದಿಂದ ಚೇತನಗೊಂಡವರಂತೆ (ಉತ್ಸಾಹಗೊಂಡವರಂತೆ) ಮಾಡುತ್ತವೆ. ಆಗಲೂ ಸಹೃದಯರು ತಮ್ಮ ವಿವೇಚನೆಗೆ ತಕ್ಕಂತೆ ಇದೇ ತತ್ತ್ವವನ್ನು ಅಳವಡಿಸಿಕೊಳ್ಳಬೇಕು. ಉದಾ :

ಲಗ್ನದ್ವಿರೇಫಾಂಜನ ಭಕ್ತಿಚಿತ್ರಂ
ಮುಖೇ ಮಧು ಶ್ರೀಸ್ತಿಲಕಂ ನಿವೇಶ್ಯ
ರಾಗೇಣ ಬಾಲಾರುಣ ಕೋಮಲೇನ
ಚೂತ ಪ್ರವಾಲೋಷ್ಠಮಲಂ ಚಕಾರ [೭೧]

[ಕುಮಾರ ಸಂಭವ 3-30]

ವಸಂತ ಲಕ್ಷ್ಮಿಯು ತನ್ನ ಮುತ್ತಿರ್ದ
ಭ್ರಮರಗಳ ಕಾಡಿಗೆಯ ಕಂಗಳಲಿ ತಳೆದು
ತಿಲಕದಲರಿನ ತಿಲಕವನು ಲಲಾಟದಲಿ ಧರಿಸಿ
ಮಾಂದಳಿರ ತುಟಿಗಳನು
ಬಾಲ ಕೋಮಲವೆನಿಪ
ಅರುಣರಾಗದಿಂದಲಂಕರಿಸಿದಳು [೭೧]

ಇಲ್ಲಿಯೂ ಪ್ರಣಯ ಭಾವ ತಾಳಿದ ನಾಯಿಕೆಯ ವೃತ್ತಾಂತವನ್ನು ಶ್ಲೇಷದ ಸಹಾಯದಿಂದ ವಸಂತಕ್ಕೆ ಆರೋಪಿಸುತ್ತಿರುವ ರೂಪಕವನ್ನು ರಸವದಲಂಕಾರವೆಂದೇ ಪರಿಗಣಿಸಬೇಕು. ಕಾರಣ

ಶೃಂಗಾರ ಭಾವ ತಾಳಿದ ವ್ಯಕ್ತಿಗಳ ವರ್ತನೆಯನ್ನು ಅದು (ವಸಂತ) ಅನುಕರಿಸುತ್ತದಾದ್ದರಿಂದ.

ನೀರಸಪ್ರಾಯವಾದ ಪದಾರ್ಥಗಳು ಕೂಡ ರಸಾಪ್ಲಾವಿತವಾಗುವಂತೆ ಮಾಡಬಹುದು. ಉದಾ :

ಬಾಲೇಂದು ವಕ್ರಾಣಿ....[೭೨] [ಕುಮಾರ ಸಂಭವ III - 29]

ಅಲಂಕಾರಗಳ ವಿಶಿಷ್ಟ ಸಾಮರ್ಥ್ಯದಿಂದಾಗಿ, ಕಾಷ್ಠಪಾಷಾಣಾದಿ ಅಚೇತನ ವಸ್ತುಗಳಲ್ಲೂ ಚೇತನ ಚಮತ್ಕಾರವನ್ನು ತುಂಬುವುದೇ ಎಲ್ಲ ಕಾವ್ಯಗಳ ಅತ್ಯುನ್ನತ ಸಾರಸರ್ವಸ್ವ. ಸಹೃದಯ ಚೇತನರಿಗೆ ಇದು ನೂತನಾನಂದದ ಆಗರ.

ಅಯಂ ಸ ರಸವನ್ನಾಮ ಸರ್ವಾಲಂಕರಣಾಗ್ರಣೀಃ|
ಚೂಡಾಮಣಿ ರಿವಾ ಭಾತಿ ಕಾವ್ಯೋತ್ಕರ್ಷೈಕ ಕಾರಣಮ್ [೭೩]

ಕವಿ ಕೌಶಲ ಸರ್ವಸ್ವಮುದ್ಯೋದ್ಘಾಟಿತ ಮಂಜಸಾ
ವಿಪಶ್ಚಿತಾಂ ವಿಚಾರಸ್ಯ ಗೋಚರತ್ವಂ ಗಮಿಷ್ಯತಿ [೭೪]

ಇವೆರಡೂ ಅಂತರ ಶ್ಲೋಕಗಳು

ರಸವತ್ ಎಂಬ ಈ ಅಲಂಕಾರವು ಸಮಸ್ತ ಅಲಂಕಾರಗಳಲ್ಲಿ ಅಗ್ರಗಣ್ಯವೆನಿಸಿದೆ. ಕಾವ್ಯದ ಉತ್ಕರ್ಷಕ್ಕೆ ಏಕೈಕ ಕಾರಣವಾದ ಅದು ಸಕಲ ಅಲಂಕಾರಗಳ ಶಿರೋರತ್ನವೆನಿಸಿದೆ [೭೩]

ಕವಿ ಕೌಶಲ ಸರ್ವಸ್ವವೂ ಇದೀಗ ಸ್ಪಷ್ಟವಾಗಿ ತೆರೆದಿಟ್ಟಂತಾಗಿದೆ. ಕಾವ್ಯವನ್ನು ಕುರಿತಾದ ಚರ್ಚೆ, ವ್ಯಾಖ್ಯಾನಗಳಲ್ಲಿ ವಿದ್ವಾಂಸರ ಮೆಚ್ಚುಗೆಯನ್ನು ಅದು ಗಳಿಸೀತೆಂದು ನಿರೀಕ್ಷಿಸಲಾಗಿದೆ [೭೪]

ಇವೆರಡೂ ಅಂತರ ಶ್ಲೋಕಗಳು

ಹೀಗೆ ನೀರಸ ಪದಾರ್ಥಗಳಿಗೆ ಸರಸತೆಯನ್ನು ತಂದು ಕೊಡುವ ಉದ್ದೇಶದಿಂದ ರಸವದಲಂಕಾರದ ವಿವೇಚನೆಯನ್ನು ಕೈಗೆತ್ತಿಕೊಳ್ಳಲಾಯಿತು. ಇದೀಗ ತಮ್ಮ ಸ್ವರೂಪದಿಂದಲೇ ಸಹಜ ಸೌಂದರ್ಯದಿಂದ ಕೂಡಿರುವ ವಸ್ತುಗಳಿಗೆ ಅತಿಶಯತೆಯನ್ನು ಉದ್ದೀಪಿಸುವ ದೀಪಕಾಲಂಕಾರದ ವಿವೇಚನೆಯನ್ನು ಕೈಗೆತ್ತಿಕೊಳ್ಳಲಾಗುವುದು. ಪ್ರಾಚೀನ ಆಲಂಕಾರಿಕರು, ವಾಕ್ಯದಲ್ಲಿ ದೀಪ್ಯಮಾನ ಪದದ ಸ್ಥಾನದ ಆಧಾರದ ಮೇಲೆ ಮೇಲೆ ಆದಿದೀಪಕ, ಮಧ್ಯದೀಪಕ ಹಾಗೂ ಅಂತ್ಯದೀಪಕ ಎಂದು ದೀಪಕಾಲಂಕಾರವನ್ನು ವಿಭಾಗಿಸಿದ್ದಾರೆ. ಯಾವುದು ಬೆಳಗುತ್ತದೋ ಅದು ದೀಪಕ ಎಂಬ ಅರ್ಥದಲ್ಲಿ ಕ್ರಿಯಾಪದವನ್ನೇ ದೀಪಕಾಲಂಕಾರ ಎಂದು ವರ್ಣಿಸಿದ್ದಾರೆ. [ಇದರ ನಂತರ ಕುಂತ ಕನುದೀಪಕದ ಮೂರೂ ಪ್ರಭೇದಗಳಿಗೆ ಉದಾಹರಣೆಗಳನ್ನು ನೀಡುತ್ತಾನೆ].

ಮದೋ ಜನಯತಿ ಪ್ರೀತಿಂ ಸಾನಂಗಂ ಮಾನ ಭಂಗುರಮ್
ಸ ಪ್ರಿಯಾಸಂಗಮೋತ್ಕಂಠಾಂ ಸಾಽಸಹ್ಯಾಂ ಮನಸಃ ಶುಚಮ್[೭೫]

ಮಾಲಿನೀರಂಶುಕ ಭೃತಃ ಸ್ತ್ರಿಯೋಽಲಂಕುರುತೇ ಮಧುಃ
ಹಾರೀತ ಶುಕವಾಚಶ್ಚ ಭೂಧರಾಣಾ ಮುಪತ್ಯಕಾಃ [೭೬]

ಚೀರೀಮತೀರರಣ್ಯಾನೀಃ ಸರಿತಃ ಶುಷ್ಯದಂಭಸಃ
ಪ್ರವಾಸಿನಾಂ ಚ ಚೇತಾಂಸಿ, ಶುಚಿರಂತಂ ನಿನೀಷತಿ [೭೭]

ಮದವು ಪ್ರೇಮವನುದಿಪುದು
ಅದು ಮುನಿಸನೋಡಿಪ ಕಾಮವ
ಪ್ರಿಯತಮೆಯ ಸಂಗದಿಚ್ಛೆಯ ಕಾತರವನದುವು
ಆ ಕಾತರವು ಅಸಹನೀಯವೆನಿಪ ವೇದನೆಯನು [೭೫] [ಭಾಮಹ II - 77]

ಹಾರತೊಟ್ಟು ಚೀರ ಉಟ್ಟ
ಅಂಗನೆಯರನು ಸಿಂಗರಿಸುವನು ವಸಂತ
ಅಂತೆ ಶುಕ ಹಾರೀತಗಳ ವಾಣಿಯು
ಬೆಟ್ಟ ಗುಡ್ಡಗಳ ಕಣಿವೆಗಳನು [೭೬] [ಅಲ್ಲೇ II - 28]

ಮಿಡಿತೆಗಳ ದನಿಯಿಂದ ಇಡಿಕಿರಿದ ಅಡವಿಗಳಿಗೆ
ನೀರು ಬತ್ತಿದ ನದಿಗಳಿಗೆ
ಪ್ರಿಯೆಯರನಗಲ್ದ ಪಯಣಿಗರ ಹೃದಯಗಳಿಗೆ
ಕೊನೆಯ ತರುವುದು ಗ್ರೀಷ್ಮವು [೭೭] [ಅಲ್ಲೇ II - 29]

ಮೇಲಿನ ಎಲ್ಲ ಉದಾಹರಣೆಗಳಲ್ಲಿ ದೀಪಕತ್ವ ಗುಣವು ಕ್ರಿಯಾಪದಗಳಲ್ಲಿ ಕಂಡುಬರುವುದು. ಎಲ್ಲ ಪದಾರ್ಥಗಳೂ ಒಂದೇ ಕ್ರಿಯಾಪದದೊಂದಿಗೆ ತಮ್ಮ ಸಂಬಂಧವನ್ನು ಸ್ಥಾಪಿಸಿಕೊಂಡಿವೆ. [ಜನಯತಿ (ಆದಿ), ಅಲಂಕುರುತೆ (ಮಧ್ಯ) ನಿನೀಷತಿ (ಅಂತ್ಯ)]

ಇದನ್ನು ಕುಂತಕನು ಖಂಡಿಸುತ್ತಾನೆ.

ಇದರ ಪ್ರಕಾರ ಎಲ್ಲ ವಾಕ್ಯಗಳನ್ನೂ ದೀಪಕಾಲಂಕಾರದ ಉದಾಹರಣೆಗಳೆಂದೇ ಪರಿಗಣಿಸಬೇಕಾಗುತ್ತದೆ. ದೀಪಕಾಲಂಕಾರದ ಶೋಭೆ ಇಲ್ಲದ ವಾಕ್ಯಗಳಲ್ಲಿ ಕೂಡ, ಒಂದೇ ಕ್ರಿಯಾಪದ ಬಹುಮಟ್ಟಿಗೆ ಕಂಡು ಬರುತ್ತದೆ. ಎಲ್ಲ ಕ್ರಿಯಾಪದಗಳೂ ದೀಪಕದೊಂದಿಗೆ ಸಮಾನವಾದ್ದರಿಂದ, ದೀಪಕಾಲಂಕಾರಗಳು ಅನೇಕ ಆಗಿಬಿಡುತ್ತವೆ.

ವಿಶೇಷ ರಮಣೀಯತೆಯನ್ನು ಉಂಟು ಮಾಡುವಲ್ಲಿ ಅದು ಯುಕ್ತಿಯುಕ್ತವಲ್ಲವಾದ್ದರಿಂದ ಅದರ ಅಲಂಕಾರತ್ವವೇ ಸಾಧ್ಯವಾಗುವುದಿಲ್ಲ. ಒಂದು ವೇಳೆ ನಾವು ಕ್ರಿಯಾಪದವನ್ನು ಒತ್ತಟ್ಟಿಗಿಟ್ಟರೂ ಒಂದು ವಾಕ್ಯದ ಯಾವುದೇ ಮತ್ತು ಎಲ್ಲ ಪದಗಳು ಆದೇ ವಾಕ್ಯದ ಇತರೆ ಪದಗಳೊಂದಿಗೆ ಸಂಬಂಧ ಹೊಂದಿವೆ ಮತ್ತು ಪರಸ್ಪರ ಸಂಬಂಧ ಹೊಂದಿರುವ ಕಾರಣದಿಂದಲೇ ಅದು ಇನ್ನೊಂದು ಪದವನ್ನು ದೀಪನಗೊಳಿಸುವುದು ಸಹಜವೇ ಆಗಿದೆ ಎಂಬುದನ್ನು ಒಪ್ಪಲೇಬೇಕಾಗುತ್ತದೆ. ಮತ್ತು ದೀಪಕದ ಅದ್ವೈತತ್ತ್ವ ಅರ್ಥಾತ್ ಎಲ್ಲದರಲ್ಲೂ ದೀಪಕವಿರುವ ಸಮಸ್ಯೆ ಎದುರಾಗುತ್ತದೆ.

ವಾಕ್ಯದ ಆದಿ, ಮಧ್ಯ ಮತ್ತು ಅಂತ್ಯಗಳಲ್ಲಿ ಕಂಡು ಬರುವ ಕ್ರಿಯಾಪದವು ಕಾವ್ಯಕ್ಕೆ ಅತಿಶಯತೆಯನ್ನು ತಂದು ಕೊಡುತ್ತದಾದ್ದರಿಂದ ಅದಕ್ಕೆ 'ಅಲಂಕಾರ'ವೆಂಬ ಅರ್ಹತೆ ಪ್ರಾಪ್ತವಾಗುತ್ತದೆ ಎಂದು ವಾದಿಸುವುದು ಸಾಧ್ಯ. ಆಗ ಹೀಗೆ ಕೇಳಬೇಕಾಗುತ್ತದೆ. ಆ ಕ್ರಿಯಾ ಪದಗಳ ಮತ್ತು ವಾಕ್ಯಾದಿಗಳ ಸ್ವರೂಪದಲ್ಲಿ ಆ ರೀತಿಯ ಅಂಥ ಯಾವ ವಿಶೇಷ ವ್ಯತ್ಯಾಸ ವುಂಟಾಗುತ್ತದೆ? [ಅರ್ಥಾತ್ ಇತರೆ ಕ್ರಿಯಾಪದ ಅಥವಾ ವಾಕ್ಯದಲ್ಲಿ ಕಂಡು ಬಾರದೆ ಇರುವಂಥ ಯಾವ ವಿಶೇಷತೆಯನ್ನೂ ತಾವು ತೋರಿಸಿ ಕೊಡಲಾಗುವುದಿಲ್ಲ. ಇಂಥ ಸ್ಥಿತಿಯಲ್ಲಿ ಕೇವಲ ಕ್ರಿಯಾಪದಗಳನ್ನಷ್ಟೇ ಅಲ್ಲ; ಎಲ್ಲ ಪದಗಳನ್ನೂ ದೀಪಕಗಳೆಂದೇ ಹೇಳಬಹುದು]

ಕ್ರಿಯಾಪದದ ಪ್ರಕಾರ ಭೇದಗಳಿಂದಾಗಿ ವಾಕ್ಯಗಳ ಆದಿ, ಮಧ್ಯ ಅಥವಾ ಅಂತ್ಯದಲ್ಲಿ ಅವು ಇರುವುದಾಗಿದ್ದು, ಅದೇ ಪ್ರಕಾರದ ಇತರೆ ಅರ್ಥ ವಾಚಕಗಳಲ್ಲಿಯೂ (ಆದಿ ಮಧ್ಯ ಮತ್ತು ಅಂತಗಳಲ್ಲದೆ) ಅವು ಇರುವುದು ಸಾಧ್ಯ. ಹೀಗೆ ಈ ರೀತಿಯಲ್ಲೂ ದೀಪಕದ ಅನಂತ ಪ್ರಕಾರಗಳಾಗಿ ಬಿಡುತ್ತವೆ. ಅರ್ಥಾತ್ ಆದಿ, ಮಧ್ಯ ಮತ್ತು ಅಂತಗಳಲ್ಲಿ ಬರುವುದಷ್ಟೇ ಅಲ್ಲ; ಎಲ್ಲ ಕ್ರಿಯಾಪದಗಳೂ ದೀಪಕಗಳಾಗಿ ಬಿಡುತ್ತವೆ.

ದೀಪಕಾಲಂಕರಕ್ಕೆಂದು ಆಯ್ಕೆ ಮಾಡಿರುವ ವಾಕ್ಯದ ಕಾವ್ಯ ಗುಣವು ಅದರಲ್ಲಿರುವ "ಭ್ವಾದಿ" ಕ್ರಿಯಾಪದಕ್ಕೆ [The verb-todo'-ಗಣದ ಕ್ರಿಯೆ] ಸಂಬಂಧಿಸಿದ್ದಾಗಿರದೆ, ಅದಕ್ಕಿಂತ ಭಿನ್ನವಾದದ್ದಾವುದಕ್ಕೋ ಸಂಬಂಧಿಸಿದ್ದಾಗಿರುತ್ತದೆ. ಅಥವಾ ಸಮಾನ ವಿಭಕ್ತಿಯನ್ನುಳ್ಳ ಅನೇಕ ಕಾರಕಗಳಿಗೆ ಒಂದೇ ಕ್ರಿಯಾಪದವಿದ್ದು, ಆ ಕ್ರಿಯಾಪದವನ್ನು ದೀಪಕ ಎಂದು ಕರೆಯಲಾಗುತ್ತದೆ ಎಂದು ದೀಪಕದ ಲಕ್ಷಣವನ್ನು ವ್ಯಾಖ್ಯಾನಿಸುವುದಾದರೆ ಆಗಲೂ ಕೂಡ, ಕಾವ್ಯ ಸೌಂದರ್ಯದ ಅತಿಶಯತೆಗೆ ಕಾರಣವಾದ್ದು ಯಾವುದು ಎಂಬುದನ್ನು ಹೇಳಿದಂತಾಗುವುದಿಲ್ಲ.

ದೀಪಕವೆಂದರೆ ಪ್ರಸ್ತುತ (ವಿಷಯ) ಮತ್ತು ಅದರ ಜೊತೆ ಜೊತೆಯಲ್ಲಿಯೇ ಇರುವ ಅಪ್ರಸ್ತುತ (ವಿಷಯ)ಗಳ ನಡುವಿನ ಪ್ರತೀಯಮಾನ ರೂಪದ (Snggested) ಹೋಲಿಕೆಯೇ ಹೊರತು ಬೇರೆ ಅಲ್ಲ ಎಂದು ಶ್ರೇಷ್ಠ ವಿದ್ವಾಂಸರು ಈಗಾಗಲೇ ಪ್ರತಿಪಾದಿಸಿ ಬಿಟ್ಟಿದ್ದಾರೆ*

ಆದಿಮಧ್ಯಾಂತವಿಷಯಾಃ ಪ್ರಾಧಾನ್ಯೇತರ ಯೋಗಿನಃ|
ಅಂತರ್ಗತೋಪಮಾಧರ್ಮಾ ಯತ್ರ ತದ್ದೀಪಕಂ ವಿದುಃ [೭೮]

---

* ಭಾಮಹನು ನೀಡಿರುವ ದೀಪಕಾಲಂಕಾರದ ಉದಾಹರಣೆಗಳಿಂದ ವಾಕ್ಯದ ಆದಿ, ಮಧ್ಯ ಮತ್ತು ಅಂತ್ಯ ಗಳಲ್ಲಿರುವ ಕ್ರಿಯಾಪದಗಳೇ ದೀಪಕಗಳೆಂದು ಅರ್ಥ ಬರುತ್ತಿತ್ತು. ಆದರೆ ಇಷ್ಟನ್ನು ಹೇಳಿದರೆ ಸಾಕಾಗುವುದಿಲ್ಲ. ಕಾವ್ಯ ಸೌಂದರ್ಯಕ್ಕೆ ಕಾರಣ ("ಹೇತು" ಮೂಲ)ವನ್ನು ಹೇಳಬೇಕಿತ್ತು. ಭಾಮಹ ಅದನ್ನು ಹೇಳಲಿಲ್ಲ. ಅವನಿಗಿಂತ ಅವನ ವ್ಯಾಖ್ಯಾನಕಾರ ಉದ್ಭಟನ ವಿವೇಚನೆಯನ್ನು ಹೆಚ್ಚು ಸಮಂಜಸವೆಂದು ಕುಂತಕನು ಭಾವಿಸುತ್ತ ಅದನ್ನು ಪ್ರಸ್ತಾಪಿಸಿದ್ದಾನೆ.

ಪ್ರಧಾನ ಮತ್ತು ಅಪ್ರಧಾನ ವಿಷಯಗಳೆರಡೂ, ಶ್ಲೋಕದ (ವಾಕ್ಯದ) ಆದಿ, ಮಧ್ಯ ಮತ್ತು ಅಂತ್ಯಗಳಲ್ಲಿ ತಮ್ಮ ಸ್ಥಾನದ ದೆಸೆಯಿಂದಾಗಿ ಪ್ರತೀಯಮಾನ ಉಪಮೆಯೊಂದಿಗೆ [ತಮ್ಮಲ್ಲಿ ಅಂತರ್ಗತವಾದ ಉಪಮೆಯೊಂದಿಗೆ] ಕಾಣಿಸಿಕೊಳ್ಳುವ ಸಂದರ್ಭಕ್ಕೆ ದೀಪಕಾಲಂಕಾರ ವೆಂದು ಹೇಳಲಾಗುತ್ತದೆ.

ಇದಕ್ಕೆ ಉದಾಹರಣೆಯಾಗಿ ಕುಂತಕ ನೀಡುವ ಉದಾಹರಣೆ ಈ ಪ್ರಾಕೃತ ಶ್ಲೋಕಃ

ಚಂಕಮಂತಿ ಕರೀಂದಾ ದಿಸಾಗ ಅಮ ಅಗಂಧಹಾರಿ ಅಹಿಅ ಆ|
ದುಃಖ ಬಣೆ ಚ ಕ ಇಣೋ ಭಣೆ ಇವಿಸಮಮ ಹಾಕ ಇಮಗ್ಗೇ [೭೯]

<u>ಸಂಸ್ಕೃತ ರೂಪ</u>

ಚಂಕ್ರಮ್ಯಂತ್ಯೇ ಕರೀಂದ್ರಾ ದಿಗ್ಗಜ ಮದಗಂಧಹಾರಿತಹೃದಯಾಃ|
ದುಃಖಂ ವನೇ ಚ ಕವಯೋ ಭಣಿತಿವಿಷಮಮಹಾಕವಿಮಾರ್ಗೇ [೭೯]

ದಿಗ್ಗಜಂಗಳ ಮದಜಲದ ಗಂಧ ತೀಡುತಿಹ
ಅರಣ್ಯದೊಳು ವಿದೀರ್ಣ ಹೃದಯಿಗಳಾಗಿ
ಸಂಚರಿಸುವುವು ಕರಿಗಳು
ಮತ್ತಾಮಹಾಕವಿವಾಣಿ ವಿಷಮ
ಮಾರ್ಗದೊಳು ಕವಿಗಳು [೭೯]

ಇಲ್ಲಿ ವರ್ಣಿತವಾಗಿರುವ ಪ್ರಸ್ತುತ ಮತ್ತುಅಪ್ರಸ್ತುತ ವಿಷಯಗಳ ನಡುವಿನ ಪ್ರತೀಯಮಾನ ಸಾಮ್ಯ (ಅಂತರ್ಗತ) ಕಾರಣದಿಂದಾಗಿ ಉಂಟಾಗಿರುವ ಸಹೃದಯ ಹೃದಯಾಹ್ಲಾದಕಾರಿಯಾದ ಕಾವ್ಯ ರಮಣೀಯತೆಯೇ ದೀಪಕದ ವಿಶಿಷ್ಟ ಸ್ವರೂಪವೆಂಬುದು ಈ ಉದಾಹರಣೆಯಿಂದ ಸ್ಪಷ್ಟ. ಈ ವಾಕ್ಯದಲ್ಲಿ ಕ್ರಿಯಾಪದದ ಕಾರ್ಯವು, ಬೇರೆ ಯಾವುದೇ ವಾಕ್ಯದಲ್ಲಿ ಅದರ ಕಾರ್ಯಕ್ಕಿಂತ ಅಥವಾ ಇದೇ ವಾಕ್ಯದಲ್ಲಿರುವ ಇತರೆ ಯಾವುದೇ ಪದದ ಕಾರ್ಯಕ್ಕಿಂತ ಯಾವ ರೀತಿಯಲ್ಲೂ ಭಿನ್ನವಲ್ಲ. ಇಡೀ ವಾಕ್ಯದ ವಾಕ್ಯಾರ್ಥ ಹೀಗಿದೆ:

ಯಾವ ರೀತಿಯಲ್ಲಿ ದಿಗ್ಗಜಗಳ ಮಸ್ತಕದಿಂದ ಸುರಿದ ಮದೋದಕದ ಸುಗಂಧದಿಂದ ದುಃಖಿತ ಹೃದಯಿಗಳಾದ ಆನೆಗಳು, ಅರಣ್ಯಗಳಲ್ಲಿ ಕಷ್ಟದಿಂದ ಸಂಚರಿಸುವುವೋ ಅದೇ ರೀತಿಯಲ್ಲಿ ವಕ್ರೋಕ್ತಿಯಿಂದ ವಿಷಮವಾಗಿರುವ ಮಹಾಕವಿಗಳ ಮಾರ್ಗದಲ್ಲಿ ಕವಿಗಳು ಕಷ್ಟದಿಂದ ಸಾಗಬೇಕಾಗಿದೆ ಎಂದರ್ಥ. ಈ ಹೋಲಿಕೆಯು 'ಚ' (ಮತ್ತು) ಎಂಬ ಪದದಿಂದ ಧ್ವನಿತವಾಗುತ್ತದೆ*. ಸಂಪೂರ್ಣ ಸ್ವಾಭಿಮಾನಿಗಳಾಗಿರುವುದರಿಂದ, ಇತರೆ ಮಹಾ ಕವಿಗಳಿಗಿಂತ ಮಿಗಿಲಾಗಿ ಮಹತ್ತಾದುದನ್ನು ಸಾಧಿಸಬೇಕೆಂಬ ಮಹದಾಸೆ ಉಳ್ಳ ಅವರು, ಬಹು ಪ್ರಯಾಸದಿಂದ ದನಿಗೊಡುತ್ತಾರೆ.

ಆದ್ದರಿಂದ ಈ ದೀಪಕಾಲಂಕಾರವು ಸಾಮ್ಯವೊಂದನ್ನೇ ಜೀವಿತ ಸರ್ವಸ್ವವನ್ನಾಗಿ ಉಳ್ಳದ್ದು. ತನ್ನ ಪ್ರತೀಯಮಾನತ್ವದಿಂದಾಗಿಯೇ ಅದು ಉಪಮಾಲಂಕಾರಕ್ಕಿಂತ ಬೇರೆಯೇ

ಆದ ಅಲಂಕಾರವಾಗಿದೆ. ಇತರೆಡೆಗಳಲ್ಲೂ, ವಸ್ತು, ಅಲಂಕಾರ ಮತ್ತು ರಸಗಳೆಂಬ ತ್ರಿವಿಧ ಧ್ವನಿಗಳಲ್ಲಿ ಯಾವುದಾದರೊಂದು ಬೆಳಗುವ ಸಂದರ್ಭದಲ್ಲಿ ಇದೇ ತತ್ವವನ್ನು ಅನುಸರಿಸಬೇಕು. ಇದನ್ನು ಹೊರತುಪಡಿಸಿದಂಥದ್ದೆಲ್ಲವೂ ಕೇವಲ ವಾರ್ತೆಗಿಂತ ಯಾವ ರೀತಿಯಲ್ಲೂ ಉತ್ತಮವಲ್ಲ ಉದಾ :

ಗತೋಽಸ್ತಮರ್ಕೋ ಭಾತೀಂದುರ್ಯಾಂತಿ
ವಾಸಾಯ ಪಕ್ಷಿಣಃ [೮೦]

'ಸೂರ್ಯನು ಅಸ್ತಂಗತನಾದ. ಚಂದ್ರ ಹೊಳೆಯುತ್ತಿದ್ದಾನೆ.
ಹಕ್ಕಿಗಳು ತಮ್ಮ ಗೂಡಿಗೆ ಮರಳುತಿವೆ [೮೦]

ಈಗ ಕುಂತಕನು, ದೀಪಕಾಲಂಕಾರಕ್ಕೆ ಹೊಸದೇ ಆದ ರೂಪವನ್ನು ಕೊಡಲು ಹೊರಟಿದ್ದಾನೆ. ಅದರಿಂದಾಗಿ ತನ್ನದೇ ಆದ ಲಕ್ಷಣವನ್ನು ಈ ರೀತಿ ನೀಡುತ್ತಾನೆ.

ಔಚಿತ್ಯಾವಹಮಮ್ಲಾನಂ ತದ್ವಿದಾಹ್ಲಾದ ಕಾರಣಮ್।
ಅಶಕ್ತಂ ಧರ್ಮಮರ್ಥಾನಾಂ ದೀಪಯದ್ವಸ್ತು ದೀಪಕಮ್ [17]

ವರ್ಣನೀಯ ಪದಾರ್ಥಗಳ ಔಚಿತ್ಯಪೂರ್ಣವೂ, ಅಮ್ಲಾನವೂ, ಸಹೃದಯರ ಆಹ್ಲಾದಕ್ಕೆ ಕಾರಣವಾದಂಥದೂ, ಅಶಕ್ತ ಅರ್ಥಾತ್ ವಾಚ್ಯದಿಂದ ಭಿನ್ನವಾದ ಪ್ರತೀಯಮಾನ ಧರ್ಮವನ್ನು ದೀಪನಗೊಳಿಸುವ ವಸ್ತು ದೀಪಕಾಲಂಕಾರವೆನಿಸುತ್ತದೆ [17]

ವಸ್ತು ದೀಪಕಾಲಂಕಾರವಾಗುತ್ತದೆ ಅರ್ಥಾತ್ ಸಿದ್ಧವಸ್ತು ದೀಪಕವಾಗಬಲ್ಲುದು.ಅದಕ್ಕೆ ಬೇರೆ ಯಾವುದೇ ಕ್ರಿಯೆಯನ್ನು ಲಗತ್ತಿಸಿಲ್ಲವಾಗಿ. ಇದರ ಮೇರೆಗೆ ಯಾವುದೆಲ್ಲ ವಸ್ತುವೂ ದೀಪಕಾಲಂಕಾರವಾಗಿಬಿಡಬಹುದು. ಈ ಒಂದು ದೋಷವನ್ನು ನಿವಾರಿಸುವ ಸಲುವಾಗಿಯೇ, "ದೀಪನಗೊಳಿಸಿದಾಗ ಮಾತ್ರ" ಎಂದು ಹೇಳಿರುವುದು. ಅಂದರೆ ಕಾವ್ಯಾರ್ಥವನ್ನು ಧ್ವನಿಸಿದಾಗ (ಸೂಚಿಸಿ)ಅದು ಅಲಂಕಾರವೆನಿಸುತ್ತದೆ. ಅದು ಏನನ್ನು ದೀಪನಗೊಳಿಸಬೇಕು ಮತ್ತು ಯಾವುದರದ್ದು? ಇವನ್ನು ಮತ್ತೆ ವಿವರಿಸಲಾಗಿದೆ. ಅದು ವರ್ಣಿತ ವಸ್ತುವಿನ ಕೆಲವೊಂದು ಅಂಶಗಳನ್ನು ದೀಪನಗೊಳಿಸಬೇಕು. ಅರ್ಥದ ಈ ಅಂಶದ ಸ್ವರೂಪವೇನು? - ಅಶಕ್ತಧರ್ಮ ಮರ್ಥಾನಾಂ" ಅಂದರೆ ಶಬ್ದದ ಸಾಮಾನ್ಯ ಅರ್ಥಕ್ಕಿಂತ ಭಿನ್ನವಾಗಿರಬೇಕು. ಅಂದರೆ ಅದು ಗರ್ಭಿತ ಅಥವಾ ಸೂಚಿತವಾಗಿರಬೇಕೇ ಹೊರತು ಸಾಧಾರಣವಾಗಿ ಹೇಳುವ ಅಥವಾ ಶಬ್ದಗಳು ಪ್ರಕಟವಾಗಿ ವ್ಯಕ್ತಪಡಿಸುವಂಥದಲ್ಲ. ಸೂಚಿತ ಕ್ರಿಯೆಗೆ "ದೀಪನಗೊಳಿಸು" ಎಂಬುದನ್ನು ಸಮರ್ಥಿಸುವುದು ಇದೇ ಆಗಿದೆ. ಇದರ ಜೊತೆಗಿರುವ ಇನ್ನಿತರ ವಿಶೇಷಣವೆಂದರೆ "ಔಚಿತ್ಯಪೂರ್ಣ ವಾದ". ಹಾಗೆ ಸೂಚಿತವಾದ ಅರ್ಥ ಕಾವ್ಯರಮಣೀಯತೆಯಿಂದ ಕೂಡಿರಬೇಕು. ಅಲ್ಲದೆ ಅದು ಅಮ್ಲಾನವಾಗಿರಬೇಕು. ಅಂದರೆ ಮೌಲಿಕವಾಗಿದ್ದು, ಪುನಃ ಪುನಃ ಬಳಸಿ ಸವಕಲಾಗಿರಬಾರದು. ಈ ಎಲ್ಲ ಗುಣ ವಿಶೇಷಗಳಿಂದ ಕೂಡಿದ್ದರ ಪರಿಣಾಮವಾಗಿ ಅದು ಸಹೃದಯರಿಗೆ ಆಹ್ಲಾದವನ್ನುಂಟು ಮಾಡುವ ಸಾಮರ್ಥ್ಯವನ್ನು ಪಡೆದುಕೊಳ್ಳುತ್ತದೆ.

ಇದರ ಇತರೆ ಭೇದಗಳು ಹೀಗಿವೆ:

ಏಕಂ ಪ್ರಕಾಶಕಂ ಸಂತಿ ಭೂಯಾಂಸಿ, ಭೂಯಸಾಂ ಕ್ವಚಿತ್।
ಕೇವಲಂ ಪಂಕ್ತಿ ಸಂಸ್ಥಮ್ ವಾ ದ್ವಿವಿಧಂ ಪರಿದೃಶ್ಯತೇ[18]

ದೀಪಕಾಲಂಕಾರವು "ಕೇವಲ" ಮತ್ತು "ಪಂಕ್ತಿ ಸಂಸ್ಥ" ಎಂದು ಎರಡು ವಿಧವಾಗಿದೆ. ಅವುಗಳಲ್ಲಿ ಒಂದು ವಸ್ತು ಅನೇಕ ಪದಾರ್ಥಗಳನ್ನು ಬೆಳಗುತ್ತಿರಬಹುದು. (ಕೇವಲ ದೀಪಕ) ಹಾಗೆಯೇ ಅನೇಕ ವಸ್ತುಗಳು ಅನೇಕ ಪದಾರ್ಥಗಳನ್ನು ಬೆಳಗುತ್ತಿರಬಹುದು. (ಪಂಕ್ತಿ ಸಂಸ್ಥ ಅಥವಾ ಮಾಲಾದೀಪಕ) [18]

ಕಾವ್ಯಾದಿಗಳಲ್ಲಿ ಕಂಡುಬರುವ ಲಕ್ಷ್ಯಗಳನ್ನು ನೋಡಿದಾಗ ಎರಡು ಬಗೆಯ ದೀಪಕಗಳು ಕಂಡು ಬರುವುದರಿಂದ ಇಲ್ಲಿ ಆ ಎರಡನ್ನು ವಿವರಿಸಲಾಗಿದೆ. ಹೇಗೆ ಎಂದರೆ ಒಂದು ಕೇವಲ ಅಥವಾ ಅಸಹಾಯ; ಬೇರೆ ಯಾವುದರ ಜೊತೆಯೂ ಬರದೆ ಒಂದೇ ಒಂದಾಗಿ ಇರುವುದು. ಅಥವಾ ಪಂಕ್ತಿಸಂಸ್ಥ, ಅಂದರೆ ಪಂಕ್ತಿಯಲ್ಲಿ ವ್ಯವಸ್ಥಿತಗೊಂಡು, ಅಂದರೆ ಅನ್ಯ ಅನೇಕ ಸಮಾನ ದೀಪಕ ಪದಗಳ ಪಂಕ್ತಿಯಲ್ಲಿ ವ್ಯವಸ್ಥಿತಗೊಂಡು ಬರುವುದು (ಮಾಲಾ ದೀಪಕ) ಅದರ ಕಾರ್ಯ ಹೇಗೆ ಎಂದರೆ ಒಂದೇ ಒಂದು ಅನೇಕ ಪದಾರ್ಥಗಳನ್ನು ಬೆಳಗಿಸುವುದು (ಪ್ರಕಾಶಕ)

ಉದಾ :

ಅಸಾರಂ ಸಂಸಾರಮ್ [೮೧] **[1-21]**

ಈ ಹೀನ ಕೃತ್ಯವನು ನೀಗೈದೆಯಾದೊಡೆ
ಬದುಕಿಗಿನ್ನೆಲ್ಲಿಹುದು ಜೀವಂತಿಕೆ?
ವಿಶ್ವವಾಗುವುದಲ್ತೆ ಅಮೂಲ್ಯರತ್ನಹೀನ
ಲೋಕಕ್ಕೆ ಇನ್ನೆಲ್ಲಿ ಆ ಲೋಕವು? ಬಂಧುಗಳಿಗಾದರೋ
ಮರಣವಲ್ಲದೆ ಬೇರೆ ಶರಣುಂಟೆ ಬದುಕಲ್ಲಿ?
ಕಂದರ್ಪನಾಗುವನು ದರ್ಪಹೀನ
ಜನರ ಕಣ್ಣಿದ್ದು ನಿಷ್ಫಲವು
ಜಗವಾಗುವುದಲ್ತೆ ನಿರ್ಜೀವ ಕಾನನವು?* [೮೧]

ಇಲ್ಲಿ "ವಿಧಾತುಂ ವ್ಯವಸಿತಃ" ಎನ್ನುವ ಕ್ರಿಯಾಪದದ "ಕರ್ತಾ" (ಕರ್ತೃ) "ನೀ", ಸಂಸಾರ (ಲೋಕ)ವೇ ಮೊದಲಾದುವುಗಳ ನಿಸ್ಸಾರತೆಯೇ ಮೊದಲಾದ ಧರ್ಮಗಳನ್ನು ಬೆಳಗಿಸುತ್ತ (ಪ್ರಕಾಶನಗೊಳಿಸುತ್ತ) ದೀಪಕಾಲಂಕಾರವಾಗಿದೆ. [ಒಂದರ ಜೊತೆ ಹಲವು "ಪದಾರ್ಥಗಳ ಸಂಬಂಧ")

ಇನ್ನೊಂದು ಬಗೆಯ ದೀಪಕ ಪಂಕ್ತಿಸಂಸ್ಥ. ಅಂದರೆ ಪಂಕ್ತಿ ಅಥವಾ ಸರಣಿಯಲ್ಲಿ ನೆಲೆ ಗೊಂಡಿರುವುದು. ಇಲ್ಲಿ ಅನೇಕ ವಸ್ತುಗಳು ಅನೇಕ ಪದಾರ್ಥಗಳ ಪ್ರಕಾಶಕಗಳಾಗಿ

---

* ಇಲ್ಲಿ ಯುವತಿಯ ಕೊಲೆಯಂಥ ಹೀನ ಕೃತ್ಯವನ್ನು ಮಾಡಲು ಹೊರಟಿರುವ ಏಕಮಾತ್ರ ವ್ಯಕ್ತಿ ಲೋಕದ ಜೀವಂತಿಕೆಯೇ ಮೊದಲಾದುವುಗಳನ್ನು ನಾಶಮಾಡುವುದನ್ನು ಧ್ವನಿಸುತ್ತದೆ.

(ಬೆಳಗಿಸುವಂಥವಾಗಿ) ಬರುತ್ತವೆ. ಇದಕ್ಕೆ ಮಾಲಾದೀಪಕವೆಂದೂ ಹೆಸರಿದೆ ಉದಾ:

ಕವಿಕೇಸರಿ ವಚನಾನಾಂ ಮೌಕ್ತಿಕ ರತ್ನಾನಾಮಾದಿವೈಕಟಿಕಃ|
ಸ್ಥಾನಾಸ್ಥಾನಂ ಜಾನಾತಿ ಕುಸುಮಾನಾಂ ಚ ಜೀರ್ಣಮಾಲಾಕಾರಃ[೮೨]

[ಸಂಸ್ಕೃತ ಛಾಯೆ]

ಕವಿ ಕೇಸರಿಯು ಶಬ್ದಗಳ
ಹಳೆಯ ರತ್ನಪಡಿ ವ್ಯಾಪಾರಿ ಮುತ್ತುರತ್ನಗಳ
ಮುದಿಹೂವಾಡಿಗನು ಹೂಗಳ
ಸ್ಥಾನಾ ಸ್ಥಾನಗಳ ಬಲ್ಲನು [೮೨]

ಇಲ್ಲಿಯ ಶ್ಲೋಕದ ಮೂರು ಚರಣಗಳಲ್ಲಿ ಹೇಳಿರುವ ಅನೇಕ ಪದಾರ್ಥಗಳನ್ನು ಬೆಳಗಿಸುವ ಶಬ್ದ ಕೊನೆಯಲ್ಲಿ ಇರುವ "ಸ್ಥಾನಾಸ್ಥಾನಗಳ ಬಲ್ಲನು" ಎಂಬ ಅನೇಕ ಪದಗಳ ಗುಂಪು. ಆದ್ದರಿಂದ ಇದು ಮಾಲಾದೀಪಕಕ್ಕೆ ಉದಾಹರಣೆ.

ಪ್ರಾಚೀನ ಆಲಂಕಾರಿಕರೂ ದೀಪಕಕ್ಕೆ ಇದೇ ಶ್ಲೋಕವನ್ನೇ ಉದಾಹರಿಸಿದ್ದರು. ಇದುವರೆಗೂ ನೀವು ದೀಪಕಾಲಂಕಾರದ ಅವರ ವಿಚಾರದ ವಿರುದ್ಧವಾಗಿ ಇಷ್ಟೆಲ್ಲಾ ವಾದಿಸಿ ಅದನ್ನು ಅಯುಕ್ತವೆಂದು ಹೇಳಿದ ಈಗ ನೀವು ಅದೇ ಉದಾಹರಣೆಯನ್ನೇ ದೀಪಕದ ನಿಮ್ಮ ವಿನೂತನ ಲಕ್ಷಣಕ್ಕೂ ಲಕ್ಷ್ಯವಾಗಿ ನೀಡಿದ್ದೀರಲ್ಲಾ ನೀವು ಅಯುಕ್ತವೆಂದು ಹೇಳಿದ ಹಿಂದಿನವರ ದೀಪಕಾಲಂಕಾರದ ಲಕ್ಷಣಕ್ಕಿಂತ ಇದು ಯಾವ ರೀತಿ ಮತ್ತು ಹೇಗೆ ಭಿನ್ನ ಎಂದು ನಮ್ಮ ಪೂರ್ವ ಪಕ್ಷದವರು ಆಕ್ಷೇಪಿಸಬಹುದು. ಈ ಆಕ್ಷೇಪ ಕೇವಲ ಭಾಗಶಃ ಸರಿ. ಕಾರಣ ಹಿಂದಿನ ಆಲಂಕಾರಿಕರು, ಒಂದು ವಿಧವಾದ ದೀಪಕವನ್ನು ಮಾತ್ರ ವಿವರಿಸಿದ್ದರು. ಅದು ಕ್ರಿಯಾಪದವೊಂದು ಶ್ಲೋಕದ ವಿಶಿಷ್ಟವಾದೊಂದು ಸ್ಥಾನದಲ್ಲಿ ಬಂದು, ಅನೇಕ ಪದಾರ್ಥಗಳಿಗೆ ಸಮಾನಾಗಿ ಸಂಬಂಧಿಸಿದ್ದು ಅವೆಲ್ಲವನ್ನೂ ಅದು ಬೆಳಗಿಸುವಂಥದಾಗಿತ್ತು. ಆದರೆಈಗ ನಾವು, ಘೋಷಿಸುತ್ತಿರುವುದೆಂದರೆ ಪರಸ್ಪರ ಸಂಬಂಧಿತ ಕಾರಕಗಳೇ ವರ್ಣನೀಯ ವಸ್ತುಗಳ ಯಾವುದೋ ಒಂದು ಗುಣವಿಶೇಷವನ್ನು ಬೆಳಗಿಸಬಲ್ಲ ಬಹುದೀಪಕಗಳಾಗುತ್ತವೆ ಎಂದು.

ಹಾಗಾಗಿ ಮೇಲಿನ ಶ್ಲೋಕದ ಅಭಿಪ್ರಾಯ ವಸ್ತುವಿಗನುಗುಣವಾದ ಶೋಭಾತಿಶಯತೆ ಯನ್ನು ಶ್ರೇಷ್ಠ ಕವಿ ಮಾತ್ರ ಬಲ್ಲನು- ಎಂದು. ಅಂದರೆ ಪದ ಪ್ರಯೋಗದಲ್ಲಿ ತನಗಿರುವ ನುರಿತ ವಿದಗ್ಧತೆಯಿಂದಾಗಿ, ವಿಶಿಷ್ಟವಾದೊಂದು ಸೌಂದರ್ಯ ವಿಶೇಷವನ್ನು ಶ್ರೇಷ್ಠಕವಿ ನಿರ್ಮಿಸಬಲ್ಲನು. ಅದೇ ರೀತಿ ನುರಿತ ರತ್ನಪಡಿ ವ್ಯಾಪಾರಿಯು ಮುತ್ತುರತ್ನಗಳನ್ನು ಜೋಡಿಸುವಲ್ಲಿ ತನಗಿರುವ ಕುಶಲಕಲೆಯಿಂದಾಗಿ ಶೋಭಾತಿಶಯತೆಯನ್ನು, ಮತ್ತು ವೃದ್ಧ ಮಾಲಿಯು (ಹೂವಾಡಿಗನು) ಹೂಗಳಿಂದ ಹಾರ ನಿರ್ಮಿಸಬಲ್ಲ ತನ್ನ ವಿಶಿಷ್ಟ ಕಲೆಯಿಂದಾಗಿ, ಸೌಂದರ್ಯ ವಿಶೇಷವನ್ನು ನಿರ್ಮಿಸಬಲ್ಲನು.

'ಕೇಸರಿ'ಯೇ (ಶ್ರೇಷ್ಠ ಎಂಬ ಲಾಕ್ಷಣಿಕ ಅರ್ಥದಲ್ಲಿ) ಮೊದಲಾದ ಪದಗಳು, ಇತರೆ ಸಜಾತೀಯ ವಸ್ತುಗಳೊಂದಿಗೆ ಕೂಡಿಕೊಂಡು, ಪ್ರತೀಯಮಾನ ವೃತ್ತಿ ಸಾಮ್ಯತೆಯನ್ನು ಹೊಳೆ

ಸುತ್ತವಾದರೂ ಒಟ್ಟಾರೆ ತಾತ್ಪರ್ಯದ ಪರಿಣಾಮವಾಗಿಯೇ ದೀಪಕಾಲಂಕಾರವು ಫಲಿಸುವುದು. ಒಟ್ಟು ವಾಕ್ಯಾರ್ಥದಲ್ಲಿ ಸಾಮ್ಯವು ಅಷ್ಟಾಗಿ ಎದ್ದು ಕಾಣುವುದಿಲ್ಲ.

ಈಗ ಇನ್ನೊಂದು ಉದಾಹರಣೆ

ಚಂದ್ರಮಯೂಖೈರ್ನಿಶಾ ನಲಿನೀ ಕಮಲೈಃ ಕುಸುಮಗುಚ್ಛೈರ್ಲತಾ
ಹಂಸೈಶ್ಶಾರದಶೋಭಾ ಕಾವ್ಯಕಥಾ ಸಜ್ಜನೈಃ ಕ್ರಿಯತೇ ಗುರ್ವೀ| [೮೩]

(ಸಂಸ್ಕೃತ ಛಾಯೆ, ಧ್ವನ್ಯಾಲೋಕ 2 - 27)

ಚಂದ್ರ ಕಿರಣಗಳಿಂದ ರಜನಿಗೆ
ತಾವರೆಗೆ ಕಮಲ ಪುಷ್ಪಗಳಿಂದ
ಲತಾಂತಗಳಿಂದಾ ಲತೆಗೆ
ಹಂಸಗಳಿಂದ ಶರದ ಸೌಂದರ್ಯಕ್ಕೆ
ಕಾವ್ಯ ಕೃತಿಗಳಿಗೆ ಸಹೃದಯರಿಂದ
ಉನ್ನತಿಯು ಸಮನಿಸುವುದು [೮೩]

ಇಲ್ಲಿ ಮೇಲೆ ಹೆಸರಿಸಲಾದ ಚಂದ್ರ ಕಿರಣಗಳೇ ಮೊದಲಾದುವುಗಳಿಂದ ಇವೆಲ್ಲ ಅಧಿಕವಾದ ವಿಶೇಷ ಸೌಂದರ್ಯವನ್ನು ಪಡೆದುಕೊಳ್ಳುತ್ತವೆ. ವಿವಿಧ ಕರ್ತೃಗಳು ತಾವೇ ಅನೇಕ ದೀಪಕಗಳಾಗುತ್ತವೆ. ಉಳಿದದ್ದನ್ನು ಹಿಂದಿನ ಉದಾಹರಣೆಯಂತೆಯೇ ಅರ್ಥೈಸಿಕೊಳ್ಳಬೇಕು.

ಅಪರಂ ತ್ರಿಪ್ರಕಾರಂ ಚ, ಕ್ವಚಿದ್ಭೂಯಾಂಸಿ ಭೂಯಸಾ|
ದೀಪಕಂ ದೀಪಯತ್ಯನ್ಯತ್ತದನ್ಯದ್ದೀಪಯನ್ಮತಮ್ [19]

ಎರಡನೇ ಪ್ರಕಾರವಾದ ಪಂಕ್ತಿಸಂಸ್ಥ (ಮಾಲಾದೀಪಕ) ದೀಪಕವು ಮೂರು ವಿಧವಾಗಿದೆ. ಅನೇಕ ದೀಪಕಗಳು ಅನೇಕ (ವಸ್ತುಗಳನ್ನು)ವನ್ನು ದೀಪನಗೊಳಿಸುತ್ತವೆ ಅಥವಾ ಸರಣಿಯಲ್ಲಿ ಮೊದಲನೆಯದು ಎರಡನೆಯದನ್ನು, ಅದು ಮೂರನೆಯದನ್ನು ದೀಪನಗೊಳಿಸುತ್ತದೆ(ಅಥವಾ ಹತ್ತಿದ ದೀಪವು ತಾನೇ ದೀಪಕವಾಗಿ ಪಕ್ಕದ್ದನ್ನು ಬೆಳಗುತ್ತದೆ) [19]

ಎರಡನೇ ಪ್ರಕಾರದ ದೀಪಕವಾದ ಪಂಕ್ತಿ ಸಂಸ್ಥಾದೀಪಕವು (ಮಾಲಾದೀಪಕ - ಸರಣಿದೀಪಕ) ಕಾರ್ಯ ವಿಧಾನದ ಮೇರೆಗೆ ಮೂರು ಉಪಭೇದಗಳನ್ನು ಹೊಂದಿದೆ. ಮೊದಲನೆಯ ಉಪಭೇದವನ್ನು ಹೀಗೆ ಹೇಳಲಾಗಿದೆ. ಅನೇಕವನ್ನು ಅನೇಕವು ಬೆಳಗುತ್ತವೆ.

ಎರಡನೇ ಉಪಪ್ರಭೇದವನ್ನು ಆನಂತರ ಮಾತುಗಳಲ್ಲಿ ಹೇಳಲಾಗಿದೆ - ಸರಣಿಯಲ್ಲಿ ಒಂದು ಮತ್ತೊಂದನ್ನು, ಅದು ಇನ್ನೊಂದನ್ನು ಬೆಳಗುತ್ತದೆ ಎಂದು. ಇಲ್ಲಿಯೂ ಅಪೇಕ್ಷಿತವಾದ ದೀಪನವೆಂದರೆ, ವಿಶಿಷ್ಟ ಸೌಂದರ್ಯಾತಿಶಯತೆಯ (ಶೋಭಾತಿಶಯತೆಯ) ಗುಣ. ಒಂದು ಬೆಳಗಿಸುವ ಕರ್ತೃವಾದರೆ ಇನ್ನೊಂದು ಬೆಳಗಲ್ಪಡುವ ಕರ್ಮ (ವಸ್ತು). ಇದು ಸರಣಿಕ್ರಮದಲ್ಲಿ ಎರಡನೆಯದು ಮೂರನೆಯದನ್ನು ಬೆಳಗಿಸುತ್ತದೆ. ಈ ದೀಪಕದ ಈ ಎರಡನೆಯ ಉಪ ಪ್ರಭೇದಕ್ಕೆ ಉದಾಹರಣೆ.

ಕ್ಷೋಣೀಮಂಡಲ ಮಂಡನಂ ನೃಪತಯಸ್ತೇಷಾಂ ಶ್ರಿಯೋ ಭೂಷಣಂ
ತಾಃ ಶೋಭಾಂ ಗಮಯತ್ಯಚಾಪಲಮಿದಂ ಪ್ರಾಗಲ್ಭ್ಯತೋ ರಾಜತೇ|
ತದ್ಭೂಷ್ಯಂ ನಯವರ್ತ್ಮನಾ ತದಪಿ ಚೇತ್ ಶೌರ್ಯಕ್ರಿಯಾಲಂಕೃತಂ
ವಿಭ್ರಾಣಂ ಯದಿಯತ್ತಯಾ ತ್ರಿಭುವನಂ ಭೇತ್ತುಂ ವ್ಯವಸ್ಯೇದಪಿ [೮೪]

ಭೂಮಂಡಲವನಲಂಕರಿಸುವರು ನೃಪರು
ಆ ನೃಪರ, ಸಂಪದವು
ಆ ಸಂಪದವನಲಂಕರಿಸುವುದು ಸಾವಧಾನತೆ
ಸಾವಧಾನತೆಯನಲಂಕರಿಸುವುದು ಪ್ರಗಲ್ಭತೆ
ಪ್ರಗಲ್ಭತೆಯನಲಂಕರಿಸುವುದು ನೀತಿ
ಅದನಲಂಕರಿಸುವುದು ಪರಾಕ್ರಮವು
ಪರಾಕ್ರಮವು ಬೆರೆತಿಹ ನೀತಿಮಾರ್ಗವ
ಹಿಡಿದ ಪ್ರಭು ತಾನು ಮೂರು ಲೋಕಗಳ ನಾಶಕೆಳಸಲು ಬಹುದು [೮೪]

ಇಲ್ಲಿ ಕವಿಯು ಮುಂದು ಮುಂದಿನ ಪದಾರ್ಥವು ಹಿಂದಿನದನ್ನು ದೀಪನಗೊಳಿಸುವ ಕ್ರಮದಲ್ಲಿ ಜೋಡಿ ಪದಾರ್ಥಗಳನ್ನು ಮಾಲಾ ರೂಪದಲ್ಲಿ ಅಳವಡಿಸಿದ್ದಾನೆ.

ಇದು ಪಂಕ್ತಿ ಸಂಸ್ಥ ದೀಪಕ ಅಥವಾ ಮೂಲಾದೀಪಕದ ಎರಡನೇ ಪ್ರಭೇದವಾದ ದೀಪಕ-ದೀಪಕದ ಉದಾಹರಣೆ. ಇದರಲ್ಲಿ ಒಂದು ಪದಾರ್ಥವು ಇನ್ನೊಂದರ ದೀಪಕವಾಗುತ್ತದೆ ಮತ್ತು ತಾನೂ ಕೂಡ ಇನ್ನೊಂದರಿಂದ ದೀಪ್ತಗೊಳಿಸಲ್ಪಡುತ್ತದೆ ಇದರಿಂದ "ಯದ್ದೀಪಿತಂ ತತ್ಕರ್ಮಭೂತಂ" - ಯಾವುದು ದೀಪಿತವಾಗುತ್ತದೋ ಅದು ಕರ್ಮಭೂತ ಅದನ್ನು ಕರ್ತೃ ರೂಪದ ಇನ್ನೊಂದು (ದೀಪಕ-ಪದಾರ್ಥವು) ದೀಪಿತಗೊಳಿಸುತ್ತದೆ. ತಾನೂ ಸಹ ಇನ್ನೊಂದನ್ನು ದೀಪಿತಗೊಳಿಸುತ್ತದೆ*

ಇನ್ನೊಂದು ಉದಾಹರಣೆ

ಶುಚಿ ಭೂಷಯತಿ ಶ್ರುತಂ ವಪುಃ ಪ್ರಶಮಸ್ತಸ್ಯ ಭವತ್ಯಲಂಕ್ರಿಯಾ|
ಪ್ರಶಮಾಭರಣಂ ಪರಾಕ್ರಮಃ ಸ ನಯಾಪಾದಿತ ಸಿದ್ಧಿ ಭೂಷಣಃ [೮೫]

ಪರಿಶುದ್ಧ ಜ್ಞಾನ ಶರೀರವನಲಂಕರಿಸುವುದು
ಶಮವು ಪರಿಶುದ್ದ ಜ್ಞಾನಕೆ ತೊಡವು
ಪರಾಕ್ರಮವು ಆ ಶಮವನಲಂಕರಿಪುದು
ನಯದ ಸಿದ್ಧಿಯು ಪರಾಕ್ರಮವನು [೮೫] [ಕಿರಾತಾರ್ಜುನೀಯ 2-32]

---

* ಡಾ. ನಗೇಂದ್ರ ವಕ್ರೋಕ್ತಿ ಜೀವಿತ ಪುಟ 40

ಇನ್ನೊಂದು ಉದಾಹರಣೆ

ಚಾರುತಾ ವಪುರಭೂಷಯದಾಸಾಂ ತಾಮನೂನ ನವಯೌವನ ಯೋಗಃ
ತಂ ಪುನರ್ಮಕರ ಕೇತನ ಲಕ್ಷ್ಮೀ ಸ್ತಾಂ ಮದೋ ದಯಿತ ಸಂಗಮಭೂಷಃ

ಶಿಶುಪಾಲವಧ [10-33] [೮೬]

ಚೆಲುವು ತನುವನು ಸಿಂಗರಿಸಿರೆ,
ಆ ಚೆಲುವ ನವಯೌವನವು
ಅದನು ಮದನ ಸಂಪದವು
ಆ ಮದನಸಂಪದವ
ಪ್ರಿಯನ ಸಂಗಮಭೂಷಣ ಮದವು ಸಿಂಗರಿಸಿತು [೮೬]

ಇಲ್ಲಿ ಪಂಕ್ತಿ ಸಂಸ್ಥ ಅಥವಾ ಮಾಲಾದೀಪಕದ ಮೂರನೇ ಪ್ರಕಾರವನ್ನು, ಮೇಲಿನ ಕಾರಿಕೆಯ ಉತ್ತರಾರ್ಧದಲ್ಲಿರುವ "ದೀಪಕ" ಶಬ್ದದ ಸ್ಥಾನದಲ್ಲಿ "ದೀಪಿತ" ಎಂಬ ಪಾಠಾಂತರವನ್ನಿಟ್ಟು ಕೊಂಡು ಅರ್ಥೈಸಿಕೊಳ್ಳಬೇಕು. ಆಗ ಅದರ ಅರ್ಥ ತಾನೇ ಇನ್ನೊಂದರಿಂದ ದೀಪ್ತವಾಗಿ ಆ ಬಳಿಕ ಬೇರೊಂದರ ದೀಪಕವಾಗಿ ಅದನ್ನು ಉತ್ತೇಜಿಸುತ್ತದೆ.

ಉದಾ :

ಮದೋಜನಯತಿ ಪ್ರೀತಿಮ್ ಇತ್ಯಾದಿ [೮೭]

[ಮದೋ ಜನಯತಿ ಪ್ರೀತಿಂ ಸಾನಂಗಂ ಮಾನಭಂಗುರಮ್|
ಸ ಪ್ರಿಯಾ ಸಂಗಮೋತ್ಕಂಠಾಂ ಸಾಸಹ್ಯಾಂ ಮನಸಶ್ಶುಚಮ್]

ಮದವು ಪ್ರೇಮವನುದಿಪುದು
ಅದು ಮುನಿಸನೋಡಿಪ ಕಾಮವ
ಪ್ರಿಯತಮೆಯ ಸಂಗದಿಚ್ಛೆಯ ಕಾತರವನದುವು
ಆ ಕಾತರವು ಅಸಹನೀಯವೆನಿಪ ವೇದನೆಯನು [೮೭]

ಈಗ ನಮ್ಮ ಪೂರ್ವಪಕ್ಷದವರು ಪ್ರಾಚೀನ ಆಲಂಕಾರಿಕರು ಇದೇ ಉದಾಹರಣೆಯನ್ನು ನೀಡಿದ್ದರು. ಮೊದಲಿಗೆ ಅದನ್ನು ಖಂಡಿಸಿ ಈಗ ಅದನ್ನೇ ಸಮರ್ಥಿಸಲಾಗುತ್ತಿದೆಯಲ್ಲಾ ಇದನ್ನು ವಿವರಿಸುವ ಅಗತ್ಯವಿದೆ ಎನ್ನಬಹುದು.

ನಿಮ್ಮ ಅಭಿಪ್ರಾಯ ಸರಿ. ಅದನ್ನು ವಿವರಿಸುತ್ತೇವೆ - ಅವರ ಅಭಿಪ್ರಾಯದಲ್ಲಿ ಕೇವಲ ಕ್ರಿಯಾಪದವೊಂದು ಮಾತ್ರ ದೀಪಕ. ನಮ್ಮ ಅಭಿಪ್ರಾಯವೆಂದರೆ ಕರ್ತೃಪದಾದಿ ಮೂಲವಾದ ಶಬ್ದಗಳು ಕೂಡ ಅನೇಕ ದೀಪಕಗಳಾಗಬಲ್ಲುವು. ಈ ಮುಂಚೆ ಇರದೆ ಇದ್ದ 'ಪ್ರೀತಿ'ಯೇ ಮೊದಲಾದುವನ್ನು ಮೊದಲ ಬಾರಿಗೆ ಉದಿಸುವಂತೆ ಮಾಡಲಾಗಿದೆ ಎಂಬ ಅರ್ಥದಲ್ಲಿ ಕವಿಯು ಇಲ್ಲಿ 'ಜನಯತಿ' ಎಂಬ ಕ್ರಿಯಾಪದವನ್ನು ಬಳಸಿದ್ದಾನೆಂದು ತಿಳಿಯಬಾರದು. ಕಾರಣ 'ಮದ'ವೇ ಮೊದಲಾದುವು ಪ್ರೀತಿ ಇತ್ಯಾದಿಗಳನ್ನು ಉದಿಸುವ ನಿಯತ ಕಾರಣಗಳಾಗುವುದಿಲ್ಲ. ಅವುಗಳ ಪ್ರಾದುರ್ಭಾವವು ಅಪೂರ್ವವಾದೊದು ಅತಿಶಯತೆಯನ್ನು ಉಂಟುಮಾಡುತ್ತದೆ ಎಂಬುದು

ಕವಿಯ ಅಭಿಪ್ರಾಯವೆಂದು ತಿಳಿಯಬೇಕು. ಆ ಯೌವನದ 'ಪ್ರಾದುರ್ಭಾವವು ಯುವತಿಯರಿಗೆ ಅಪೂರ್ವವಾದೊಂದು' ಲಾವಣ್ಯವನ್ನು ಉಂಟು ಮಾಡುತ್ತದೆ ಎಂಬ ಅರ್ಥದಲ್ಲಿ 'ಜನಯತಿ' ಎಂಬ ಕ್ರಿಯಾಪದವನ್ನು ತೆಗೆದುಕೊಳ್ಳಬೇಕು. ಅಥವಾ 'ಜನಯತಿ' ಎಂಬುದರ ಸ್ಥಾನದಲ್ಲಿ 'ಜ್ವಲಯತಿ' ಎಂಬ ಪಾಠಾಂತರವನ್ನು ಇಟ್ಟುಕೊಂಡರೆ ಶ್ಲೋಕದ ಅರ್ಥ ಹೆಚ್ಚು ಸ್ಪಷ್ಟವಾಗುತ್ತದೆ.

ಈ ಎಲ್ಲ ಚರ್ಚೆಯನ್ನು ಈ ಕಾರಿಕೆಯಲ್ಲಿ ಉಪಸಂಹರಿಸಲಾಗಿದೆ.

ಯಥಾಯೋಗಿ ಕ್ರಿಯಾಪದಂ ಮನಃಸಂವಾದಿ ತದ್ವಿದಾಮ್|
ವರ್ಣನೀಯಸ್ಯ ವಿಚ್ಛಿತ್ತೇಃ ಕಾರಣಂ ವಸ್ತುದೀಪಕಮ್ [20]

ಏಕಕಾಲದಲ್ಲಿ ಒಂದಕ್ಕಿಂತ ಹೆಚ್ಚು ವಿಷಯಗಳೊಂದಿಗೆ ಸಂಬಂಧವನ್ನು ಹೊಂದಿರುವ ಕ್ರಿಯಾಪದವು ವರ್ಣಿತವಾದ ಪ್ರಧಾನ ವಸ್ತುವಿನ ಸೌಂದರ್ಯವನ್ನು ವರ್ಧಿಸುವ ಮೂಲಕ ಸಹೃದಯರ ಹೃದಯಕ್ಕೆ ನಿಲುಕುವಂಥದಾಗುವ ರೀತಿಯಲ್ಲಿಯೇ ಇತರೆಯವುಗಳೊಂದಿಗೆ ಅನೇಕ ರೀತಿಯ ಸಂಬಂಧ ಹೊಂದಿರುವ ವಸ್ತುವು (ಕರ್ತೃ) ವಸ್ತು ದೀಪಕವೆನಿಸುತ್ತದೆ.

ಕಾರಿಕೆಯ ಮೊದಲ ಭಾಗದಲ್ಲಿ ಕ್ರಿಯಾಪದವು ವಿಷಯಗಳೊಂದಿಗೆ ವಿವಿಧ ರೀತಿಯ ಸಂಬಂಧ ಹೊಂದಿರುವುದನ್ನು ವಿವರಿಸಲಾಗಿದೆ. ದೀಪಕದಲ್ಲಿ ಕ್ರಿಯಾಪದವು ಇತರೆ ಪದಗಳೊಂದಿಗೆ ವಿವಿಧ ಬಗೆಯ ಸಂಬಂಧಗಳನ್ನು ತಾಳುವಂತೆಯೆ ವಸ್ತುಗಳನ್ನು (ವಿಷಯ, ಕರ್ತೃ) ಇತರೆಯಗಳೊಂದಿಗೆ ವಿವಿಧ ರೀತಿಯ ಸಂಬಂಧಗಳನ್ನು ಸ್ಥಾಪಿಸಿಕೊಂಡು ಸಹೃದಯರ ಹೃದಯ ಸಂವೇದನೆಗೆ ನಿಲುಕಬಹುದು. ಆಗ ಇದೂ ದೀಪಕ ಎಂದೇ ಪರಿಗಣಿಸಲ್ಪಡಲು ಅರ್ಹವಾಗುತ್ತದೆ.

ದೀಪಕವನ್ನು ವಿವರಿಸಿಯಾದ ಮೇಲೆ ಕುಂತಕನು ರೂಪಕವನ್ನು ಕೈಗೆತ್ತಿಕೊಳ್ಳುತ್ತಾನೆ. ಅದೂ ಸಾಮ್ಯವನ್ನು ಆಧರಿಸಿರುವ ಅಲಂಕಾರವೇ ಆಗಿದೆ.

ಉಪಚಾರೈಕ ಸರ್ವಸ್ವಂ(ಯತ್ರತತ್) ಸಾಮ್ಯಮುದ್ವಹನ್|
ಯದರ್ಪಯತಿ ರೂಪಂ ಸ್ವಂ ವಸ್ತು ತದ್ರೂಪಕಂ ವಿದುಃ[21]

ಉಪಚಾರ ವಕ್ರತೆಯೇ ತನ್ನ ಜೀವಿತ ಸರ್ವಸ್ವವಾಗಿದ್ದು ಸಾಮ್ಯವನ್ನು ಧಾರಣೆ ಮಾಡುತ್ತ, ತನ್ನ ಸ್ವರೂಪವನ್ನೇ ಇನ್ನೊಂದಕ್ಕೆ (ಉಪಮೇಯ) ಸಮರ್ಪಿಸುವ ವಸ್ತು (ಉಪಮಾನ)ವನ್ನು ರೂಪಕವೆಂದು ಹೇಳಲಾಗುತ್ತದೆ [೨೧]

ವರ್ಣನೀಯಸ್ಯ ವಿಚ್ಛಿತ್ತೇಃ ಕಾರಣಂ ದ್ವಿವಿಧಂ ಸ್ಮೃತಂ|
ಸಮಸ್ತ ವಸ್ತು ವಿಷಯಮೇಕದೇಶ ವಿವರ್ತಿ ಚ[22]

ಮೇಲೆ ಹೇಳಲಾದ ರೂಪಕವು (ಸಾಮ್ಯ ಲಕ್ಷಣದಿಂದ ಕೂಡಿರುವ) ವರ್ಣಿತ ವಸ್ತುವಿನ ರಮಣೀಯತೆಗೆ ಮೂಲ ಕಾರಣ. ಇಂಥ ರೂಪಕವು ಎರಡು ವಿಧವೆಂದು ಹೇಳಲಾಗುತ್ತದೆ. (1) ಸಮಸ್ತ ವಸ್ತು ವಿಷಯ ಮತ್ತು (2) ಏಕದೇಶವಿವರ್ತಿ ರೂಪಕದ ವಿವೇಚನೆ ಮಾಡಲಾಗುವುದು.

ವಿದ್ವಾಂಸರು ಕಾವ್ಯ ವಸ್ತುವನ್ನೇ ರೂಪಕಾಲಂಕಾರವೆಂದು ಹೇಳುತ್ತಾರೆ. ಯಾವಾಗ ಎಂದರೆ

ಈ ಕೆಲವು ಅಗತ್ಯಗಳನ್ನು ಪೂರೈಸಿದಾಗ. ಅದು (ಕಾವ್ಯವಸ್ತು) ತನ್ನ ನಿಜಸ್ವರೂಪವನ್ನೇ ಅಂದರೆ ವಾಕ್ಯದ ವಾಚಕರೂಪವನ್ನೇ ಅರ್ಪಿಸಿದಾಗ. ವಾಚಕ ರೂಪ ಎಂದರೆ, ಅಲಂಕಾರದ ಸ್ವರೂಪವನ್ನೇ. ಕಾರಣ ಅಲಂಕಾರದ ಪ್ರಸ್ತಾಪವಾದ್ದರಿಂದ. ಅಲ್ಲದೆ ಅದು ಉಪಮೇಯದೊಂದಿಗೆ ಸಾಮ್ಯವನ್ನು ಧಾರಣ ಮಾಡುತ್ತದೆ.

ಇಲ್ಲಿ ಸಾಮ್ಯ ಅಥವಾ ಸಾದೃಶ್ಯ ಎಂದರೆ, ಪ್ರತೀಯಮಾನ ವೃತ್ತಿಯ ಸಾದೃಶ್ಯ. ಕೇವಲ ಪುನರ್ಜನ್ಯತ್ವ ಅಥವಾ ಪ್ರಮೇಯತ್ವದಲ್ಲ. ಈ ರೀತಿಯ ಲಕ್ಷಣಗಳುಳ್ಳ ವಸ್ತು ಮಾತ್ರ ಸಹೃದಯರಿಗೆ ಆಹ್ಲಾದವನ್ನುಂಟುಮಾಡುವಂಥದಾಗುತ್ತದೆ. ಉಪಚಾರೈಕ ಸರ್ವಸ್ವಂ ಎಂಬ ಮಾತಿನ ಅರ್ಥ - ಇನ್ನೊಂದರ ಅಧ್ಯಾರೋಪ ಅಂದರೆ ರೂಪಕದಲ್ಲಿ ಉಪಮೇಯದ ಮೇಲೆ ಉಪಮಾನದ ಅಧ್ಯಾರೋಪವನ್ನೇ ತನ್ನ ಪ್ರಾಣ ಸರ್ವಸ್ವವನ್ನಾಗಿ ಉಳ್ಳದ್ದು ಈ ಕಾರಣದಿಂದಲೇ ಅದು ರೂಪಕವೆನಿಸುತ್ತದೆ. (ಉಪಚಾರ ವಕ್ರತೆಯನ್ನೇ ಜೀವಿತವಾಗಿ ಉಳ್ಳದ್ದು. ರೂಪಕಾಲಂಕಾರದ ಪ್ರಾಣವೇ ಉಪಚಾರ ವಕ್ರತೆ ಎಂದು ಈ ಹಿಂದೆ ಆಗಲೇ ಹೇಳಿದೆ [2/14] [ಯಾವ ಉಪಚಾರ ವಕ್ರತೆಯಿಂದಾಗಿ, ರೂಪಕಾದಿ ಅಲಂಕಾರಗಳು ಸರಸತೆಯನ್ನು ಪಡೆದುಕೊಳ್ಳುತ್ತವೆಯೋ] [ಯನ್ಮೂಲಾಸರಸೋಲ್ಲೇಖಾರೂಪಕಾದಿರಲಂಕೃತಿಃ]

"ಮುಖಮಿಂದುಃ" (ಮುಖವು ಚಂದ್ರ) ಎಂಬುದು ರೂಪಕಾಲಂಕಾರಕ್ಕೆ ಉದಾಹರಣೆ. ಪರಸ್ಪರ ವಿಭಿನ್ನ ರೂಪದ ಈ ವಿಶೇಷಣ ವಿಶೇಷ್ಯಗಳು ಸಾದೃಶ್ಯ ಸೂಚಕವಾದ ಸಮಾನಾಧಿಕರಣ ಹೇಗಾಗುತ್ತವೆ ಎಂದು ಕೇಳಬಹುದು. ಅದಕ್ಕೆ ನಮ್ಮ ಉತ್ತರ 'ಇಂದು' ಎಂಬ ಶಬ್ದ ಮೊತ್ತ ಮೊದಲಿಗೆ ನೇರವಾಗಿ ಚಂದ್ರನನ್ನು ಸೂಚಿಸುತ್ತದೆ. ಎರಡನೆಯದಾಗಿ ವಸ್ತು ಮತ್ತುಅದರ ವಿಶೇಷಣಗಳಿಗಿರುವ ಸಾಹಚರ್ಯದಿಂದಾಗಿ. ಚಂದ್ರನಿಗಿರುವ ಕಾಂತಿ, ಚಲನೆ ಇತ್ಯಾದಿ ಗುಣಗಳನ್ನು ಸೂಚಿಸುತ್ತದೆ. ಆ ನಂತರ ಅದು ಹೆಣ್ಣಿನ ಮುಖಕ್ಕೆ ಸದೃಶವಾದ ಗುಣಲಕ್ಷಣಗಳನ್ನು ಪ್ರತೀಯಮಾನ ವೃತ್ತಿಯಿಂದ ಸೂಚಿಸುತ್ತ ಮುಖದ ವಿಶೇಷಣವಾಗಿ ಬಿಡುತ್ತದೆ. ಇದು ಸಹೃದಯರಿಗೆ ಆಹ್ಲಾದವನ್ನುಂಟು ಮಾಡುತ್ತದೆ.

ಉಪಮೇಯ (ಯಾವುದನ್ನು ಹೋಲಿಸಲಾಗುತ್ತದೋ ಅದು)ಸೂಚಕ ಶಬ್ದವು ಉಪಮಾನ (ಯಾವುದಕ್ಕೆ ಹೋಲಿಸಲಾಗುತ್ತದೋ ಅದು) ಸೂಚಕ ಶಬ್ದವನ್ನು ನಿಯಮಿಸುತ್ತದೆ - ಎರಡರ ಸಂಪೂರ್ಣ ಸಾದೃಶ್ಯ ತಾರ್ಕಿಕವಾಗಿ ಸಾಧ್ಯವಿಲ್ಲವಾದ್ದರಿಂದ. ವಿಶೇಷಣ ವಿಶೇಷ್ಯ ಶಬ್ದಗಳ ಈ ಸ್ವರೂಪದಿಂದಾಗಿಯೇ ಮುಖೇಂದು ಎಂಬ ಸಮಾಸ ಶಬ್ದ ಸಮರ್ಥನೀಯವೆನಿಸುತ್ತದೆ. ಸಹೃದಯ ಸಾಮಾನ್ಯರೆಲ್ಲರಿಗೂ ಇದು ಸಂವೇದ್ಯವಾಗುತ್ತದಾದ ಕಾರಣದಿಂದಾಗಿ ಮುಖಮಿಂದು ಎಂಬುದೊಂದೇ ಅಲ್ಲ "ಕಿಂತಾರುಣ್ಯತರೋಃ" ಎಂಬುದು ಕೂಡಾ ರೂಪಕಾಲಂಕಾರವೆನಿಸುತ್ತದೆ (1 92, 103 III - 19)

ರೂಪಕಾಲಂಕಾರದ ಸಾಮಾನ್ಯ ಲಕ್ಷಣ ನಿರೂಪಣೆಯ ನಂತರ, ಅದರ ಪ್ರಕಾರಗಳನ್ನು ವಿವೇಚಿಸುತ್ತ ಅದನ್ನು ಇನ್ನಷ್ಟು ಸ್ಪಷ್ಟಪಡಿಸುತ್ತಾನೆ

1ddd) "ಸಮಸ್ತ ವಸ್ತು ವಿಷಯಮ್" ಇತಿ

2) ಏಕದೇಶ ವಿವರ್ತಿ

ಯಾವ ಅಲಂಕಾರದ ವಿಷಯ ಸಮಸ್ತ ವಸ್ತುವೇ ಆಗಿರುತ್ತದೋ ಅದು ಸಮಸ್ತವಸ್ತುವಿಷಯ ರೂಪಕವಾಗುತ್ತದೆ. ಇದರ ಆಶಯವೆಂದರೆ, ವಾಕ್ಯದಲ್ಲಿ ಅಲಂಕಾರ್ಯ ರೂಪದಲ್ಲಿ ಸೇರ್ಪಡೆಯಾಗಿರುವ ಅಭಿಧೇಯಾರ್ಥ ಸಮಸ್ತವೂ ಈ ರೂಪಕದಿಂದ ವ್ಯಾಪ್ತವಾಗಿ, ಪ್ರತಿಯೊಂದಕ್ಕೂ ಅದರ ಸುಂದರ ಸ್ವರೂಪ ಪ್ರಾಪ್ತವಾಗಿ ಬಿಡುತ್ತದೆ. ವಿಶೇಷಣಗಳು ವಿಶೇಷ್ಯಗಳ ಮೇಲೆಯೇ ಅವಲಂಬಿತವಾಗುವುದರಿಂದ, ಅವಕ್ಕೆ ತಮ್ಮದೇ ಆದ ಸ್ವತಂತ್ರ ಅಸ್ತಿತ್ವವಿರುವುದಿಲ್ಲ. ಹಾಗೂ ಅವನ್ನು ಅಲಂಕಾರ್ಯದಿಂದ ಬೇರೆಯಾದ ಸ್ವತಂತ್ರ ಘಟಕಗಳೆಂದು ಪರಿಗಣಿಸಲಾಗುವುದಿಲ್ಲ. ಹಾಗಾಗಿ ವಿಶೇಷಣಗಳು ಈ ಬಗೆಯ ರೂಪಕದ ವ್ಯಾಪ್ತಿಯೊಳಗೆ ಬರುವುದಿಲ್ಲ.

ತಡಿದ್ವಲಯ ಕಕ್ಷ್ಯಾಣಾಂ ಬಲಾಕಾಮಾಲಭಾರಿಣಾಮ್ |
ಪಯೋಮುಚಾಂ ಧ್ವನಿರ್ಧೀರೋ ದುನೋತಿ ಮಮ ತಾಂ ಪ್ರಿಯಾಂ [೮೮]

ಸೆಳೆಮಿಂಚಿನ ಅಂಬಾರಿಯ ಪಟ್ಟಿಯನು
ಮತ್ತಾ ಬೆಳ್ಳಕ್ಕಿಗಳಾ ಹೂಮಾಲೆಯನು
ಧರಿಸಿಹ ಮೋಡದ ಮೊಳಗದು
ನೋಯಿಪುದೆನ್ನಿನಿಯಳನು [೮೮]

ಇಲ್ಲಿ ಮಿಂಚನ್ನು, ಆನೆಗಳ ಅಂಬಾರಿಯನ್ನು ಅಲಂಕರಿಸುವ ಹಗ್ಗದ ಪಟ್ಟಿಯೆಂದೂ, ಬೆಳ್ಳಕ್ಕಿಗಳ ಸಾಲನ್ನು ಹೂಮಾಲೆಯೆಂದೂ ರೂಪಿಸಲಾಗಿದೆ. ಆದರೆ ಮೋಡಗಳನ್ನು ಆನೆಗಳೆಂದು ರೂಪಕವಾಗಿಸಲಿಲ್ಲವಾಗಿ ಇದು ಏಕದೇಶ ವಿವರ್ತಿರೂಪಕಾಲಂಕಾರ*ವಾಗುತ್ತದೆ. ಅದು ಅತ್ಯಂತ ಉಚಿತವೂ ಹೌದು. ಕಾರಣ ಅಲಂಕಾರದ ಸಾರ್ಥಕತೆ ಅಲಂಕಾರ್ಯಕ್ಕೆ ಶೋಭೆಯನ್ನುಂಟು ಮಾಡುವುದು ಆಗಿರುತ್ತದೆಯೇ ಹೊರತು ಬೇರೇನೂ ಅಲ್ಲ. ಒಂದು ವೇಳೆ ಈ ಒಳಪ್ರಭೇದವನ್ನು ಸಮರ್ಥಿಸಲು ಇಲ್ಲಿ ಹೇಳಿರುವುದಕ್ಕಿಂತ ಹೆಚ್ಚಾಗಿ ಬೇರೆ ಇನ್ನೇನಾದರೂ ಹೇಳಿದ್ದರೆ, ಆಗ ಅದು ಭಾಗಶಃ ಈ ರೂಪಕದ ಇನ್ನೊಂದು ಪ್ರಭೇದವನ್ನು ಸಮರ್ಥಿಸಿದಂತಾಗುತ್ತಿತ್ತು.

ಇದನ್ನು ಇಲ್ಲಿಗೆ ಬಿಡೋಣ. ಇಲ್ಲಿಯ ಕೆಡುಕೇನೆಂದರೆ, (ಇದನ್ನು ಸಮಸ್ತ ಅಲಂಕಾರವೆಂಬ ಬೇರೊಂದು ಪ್ರಕಾರದ್ದೆಂದು ಪರಿಗಣಿಸುವುದಾದಲ್ಲಿ) ರೂಪಕದಲ್ಲಿರುವ ದೋಷವನ್ನು ಪರಿಹರಿಸುವ ಯಾವ ಉಪಾಯವೂ ಇಲ್ಲಿ ಕಂಡುಬರುತ್ತಿಲ್ಲ. ಕಾರಣ ಮುಖ್ಯವಸ್ತುವಾದ ಮೋಡಗಳನ್ನು ಆನೆಗಳೆಂದು ಹೇಳದೆ, ಕೇವಲ 'ಕಕ್ಷ್ಯ'ವೇ (ಪಟ್ಟಿ) ಮೊದಲಾದ ನಿಮಿತ್ತಗಳಿಗೆ ಮಾತ್ರ ರೂಪಕವನ್ನು ಆರೋಪಿಸಿರುವುದರಿಂದ ಅಕ್ಷರಮಟ್ಟಿಗೆ ರೂಪಕಾಲಂಕಾರ ವಿಷಯದ ಈ ದೋಷ ಪರಿಹರಿಸಲು ದುಸ್ಸಾಧ್ಯವಾಗಿದೆ.

---

* ಕೆಲವು ಅಂಶಗಳಿಗೆ ಮಾತ್ರ ಸೀಮಿತ

ರೂಪಕಾಲಂಕಾರದ ಸಾರಸರ್ವಸ್ವವಿರುವುದು ಇದರಲ್ಲಿ ಮಾತ್ರ - ವರ್ಣನೀಯ ವಸ್ತು ತನ್ನ ಸ್ವರೂಪವನ್ನು ಸಮರ್ಪಿಸಿಕೊಳ್ಳುವ ಸ್ಥಿರ ಸಾಮರ್ಥ್ಯವನ್ನು ಹೊಂದಿರಬೇಕು. ಯಾವುದ ರಿಂದಾಗಿ ಈ ಸಾಮರ್ಥ್ಯ ಅದಕ್ಕೆ ಬರುತ್ತದೆ ಎಂದರೆ, ಇನ್ನೊಂದರೊಂದಿಗೆ (ಉಪಮಾನ) ಅದಕ್ಕಿರುವ ಸಾಮ್ಯದ ಕಾರಣದಿಂದಾಗಿ. ಮತ್ತು ಇದರಿಂದಾಗುವ ಪ್ರಯೋಜನವೆಂದರೆ ಈ ಪ್ರಕ್ರಿಯೆಯಲ್ಲಿ ವರ್ಣಿತ ವಸ್ತುವಿಗೆ ಸುಕುಮಾರ ಸೌಂದರ್ಯಾತಿಶಯತೆಯನ್ನು ಪ್ರದಾನ ಮಾಡುತ್ತದೆ. ಆದ್ದರಿಂದ "ಮುಖಮಿಂದು:" (ಮುಖವು ಚಂದ್ರ) ಎಂಬ ಪ್ರಯೋಗದಲ್ಲಿ ಮುಖವನ್ನೇ ಚಂದ್ರನನ್ನಾಗಿ ಪರಿವರ್ತಿಸಲಾಗುತ್ತದೆ. ಅಂದರೆ ಮುಖವು ತನ್ನ ಸ್ವರೂಪದಲ್ಲಿಯೇ ಬದಲಾವಣೆಯನ್ನು ಹೊಂದುತ್ತದೆ. ಹಾಗಾಗಿ, ಈ ಅಲಂಕಾರವು ಪದಪೂರ್ವಾರ್ಧ ವಕ್ರತೆಯ ಒಂದು ರೂಪ; ಅಲ್ಲದೆ ಪದದ ಅರ್ಥಕ್ಕೆ ಮಾತ್ರ ಇದು ಸಂಬಂಧಿಸಿರುವುದರಿಂದ, ಅದು ಈಗಾಗಲೇ ಹೇಳಿರುವ ಪರ್ಯಾಯ ವಕ್ರತೆಯ ವ್ಯಾಪ್ತಿಯಲ್ಲಿ ಬರುತ್ತದೆ. ಅಂಥ ಸಂದರ್ಭದಲ್ಲಿ ವಾಕ್ಯ ವಕ್ರತೆಗೆ ಮೀಸಲಾದ ಈ ಅಲಂಕಾರ ವಿಭಾಗದಲ್ಲಿ ರೂಪಕವನ್ನು ವಿವರಿಸಲು ಸಮರ್ಥನೆಯೇ ಇರುವುದಿಲ್ಲ. ಆ ಒಂದು ದೋಷವನ್ನು ನಿವಾರಿಸುವ ಸಲುವಾಗಿ ಗ್ರಂಥಕಾರನು, ರೂಪಕವು ಎರಡು ವಿಧವಾದದ್ದು ಎಂದು ಹೇಳುತ್ತಾನೆ. (1) ಸಮಸ್ತ ವಸ್ತು ವಿಷಯ ಮತ್ತು (2) ಏಕದೇಶವಿವರ್ತಿ ಎಂದು. ಮೊದಲನೆಯದು - ವಾಕ್ಯದಲ್ಲಿರುವ ಎಲ್ಲ ಪದಾರ್ಥ ಘಟಕಗಳೂ ತೀವ್ರ ಅಲಂಕರಣಕ್ಕೊಳಗಾಗುತ್ತವೆ. ಇದು ಯಶಸ್ವಿಯಾಗಿ ಕಾರ್ಯಗತವಾದಾಗ ಇಡೀ ವಾಕ್ಯವೇ ಅಲಂಕರಣಕ್ಕೊಳಗಾಗಿ ರೂಪಾಂತರಿತವಾಗುತ್ತದೆ.

ಉದಾ:

> **ಮೃದುತನುಲತಾವಸಂತಃ ಸುಂದರವದನೇಂದು ಬಿಂಬಸಿತ ಪಕ್ಷಃ|**
> **ಮನ್ಮಥಮಾತಂಗಮದೋ ಜಯತ್ಯಹೋ ತರುಣತಾರಂಭಃ [೮೯]**
>
> ಮೃದು ತನುಲತೆಯ ವಸಂತ
> ಸುಂದರ ಚಂದ್ರ ವದನದ ಶುಕ್ಲ ಪಕ್ಷವು
> ಮನ್ಮಥ ಮಾತಂಗದ ಮದವು
> ಇಂಥ ತಾರಣ್ಯದಾರಂಭಕ್ಕೆ ಜಯವಾಗಲಿ| [೮೯]

ರೂಪಕದ ಇನ್ನೊಂದು ಪ್ರಕಾರವಾದ "ಏಕದೇಶ ವಿವರ್ತಿ"ಯನ್ನು ಈಗ ಚರ್ಚೆಗೆ ತೆಗೆದುಕೊಳ್ಳಬಹುದು. ಇದರ ವಿಷಯದಲ್ಲಿ ಪೂರ್ವಾಚಾರ್ಯರು ಹೀಗೆ ವ್ಯಾಖ್ಯಾನಿಸಿದ್ದಾರೆ - ಕೆಲವೊಂದು ಭಾಗದಿಂದ ವಿಘಟಿತವಾಗುತ್ತದೆ ಅಥವಾ ಕೆಲವೊಂದು ಭಾಗದಲ್ಲಿ ವಿಶೇಷವಾಗಿ ಇರುತ್ತದೆ. ಅರ್ಥಾತ್ ಕೆಲವೊಂದು ಅಂಶಗಳಿಗೆ ಅನ್ವಯಿಸುವಲ್ಲಿ ಅಸಮರ್ಥವಾಗುತ್ತದೆ. ಅಥವಾ ಕೆಲವೊಂದು ಭಾಗಕ್ಕೆ ವಿಶೇಷವಾಗಿ ಅನ್ವಯಿಸುತ್ತದೆ ಎಂದು. ಹೀಗೆ ಮಾಡಿದ ಎರಡೂ ರೀತಿಯ ವ್ಯಾಖ್ಯಾನಗಳು ಅನುಚಿತ. ಅದರ ಒಟ್ಟಾರೆ ಮಥಿತಾರ್ಥ ವಾಕ್ಯದ ಕೆಲವೊಂದು ಅಂಶಗಳಿಗೆ ಮಾತ್ರ ಅದು ತನ್ನ ಸ್ವಭಾವದ ಸಮರ್ಪಣ ರೂಪದ ಅಧ್ಯಾರೋಪಣವನ್ನು ಉಂಟು ಮಾಡುತ್ತದೆ

ಅದೂ ಕೆಲ ಸಮಯ ಮಾತ್ರ. ಅದರಿಂದಾಗಿಯೇ ಅದಕ್ಕೆ ಏಕದೇಶ ವಿವರ್ತಿ ಎಂದು ಹೆಸರು.

ಉದಾ :

ಹಿಮಾಚಲಸುತಾವಲ್ಲೀ ಗಾಢಾಲಿಂಗಿತ ಮೂರ್ತಯೇ|
ಸಂಸಾರ ಮರುಮಾರ್ಗೈಕ ಕಲ್ಪವೃಕ್ಷಾಯ ತೇ ನಮಃ[೯೦]

ಹಿಮಾಚಲನ ಮಗಳು ಆ ಎಳವಳ್ಳಿ
ಬಿಗಿದಪ್ಪಿದ ಮೂರ್ತಿಯೆ
ಜಗದ ಮರುಭೂಮಿಮಾರ್ಗದ
ಏಕೈಕ ಕಲ್ಪವೃಕ್ಷವೆ ನಿನಗೆ ನಮೋ [೯೦]

'ಏಕದೇಶವಿವರ್ತಿ' ಎಂಬುದರ ನಿಜವಾದ ಅರ್ಥ ವಾಕ್ಯದ ಯಾವುದೋ ಒಂದು ಭಾಗಕ್ಕೆ ಅನ್ವಯಿಸಿದಂತೆ ಮಾತ್ರ, ರೂಪಾಂತರಿತ ಸ್ವರೂಪದಲ್ಲಿ ನಿಲ್ಲುತ್ತದೆ ಎಂದು. ವಿಶೇಷಣರೂಪದ ಗುಣ ವಾಚಕಗಳ ವಿಶಿಷ್ಟತೆಯಿಂದ ಹೊರ ಹೊಮ್ಮುವ ಪದಾರ್ಥ ಶೋಭೆಯು, ರೂಪಕವೆಂಬ ಈ ಅಲಂಕಾರದಲ್ಲಿ ಪರ್ಯವಸಾಯವಾಗುತ್ತದೆ. ಕಾರಣ ಅದು ರೂಪಾತಿಶಯತೆಯನ್ನುಂಟು ಮಾಡುತ್ತದಾಗಿ ಉದಾ : 'ಉಪೋಢರಾಗೇಣ' ಇತ್ಯಾದಿ ಶ್ಲೋಕಗಳಲ್ಲಿ - "ತಿಮಿರಾಂಶುಕಂ" ಎಂಬುದು ಏಕದೇಶ ವಿವರ್ತಿ ರೂಪಕಕ್ಕೆ ಉದಾಹರಣೆ. ಉಳಿದ ರೂಪಕಗಳಾದ "ಶಶಿನಃ ಕಾಮು ಕತ್ವ" "ನಿಶಾಯಾಶ್ಚ ಕಾಮಿನೀತ್ವಂ"ಗಳಲ್ಲಿ ವಿಶಿಷ್ಟ ವಿಶೇಷಣಗಳ ಲಿಂಗ ಸಾಮರ್ಥ್ಯದಿಂದ ಅರ್ಥವು ಪ್ರತೀತವಾಗಿ ಬಿಡುತ್ತದೆ. ಒಂದು ವೇಳೆ ಹಲವಾರು ಶಬ್ದಗಳಲ್ಲಿ ಪ್ರಕಟವಾಗಿ ಹೇಳಿದ್ದಿದ್ದರೆ, ಅದು ಗ್ರಾಮ್ಯತೆಯ ಅಥವಾ ಪುನರುಕ್ತತೆಯ ದೋಷವಾಗಿ ಪರಿಣಮಿಸುತ್ತಿತ್ತು.

ವಾಚ್ಯಂ ಸಾಮರ್ಥ್ಯ ಲಭ್ಯಂ ಚ ಪ್ರತೀತ್ಯಾ ಚ ಸಮರ್ಪಿತಮ್|
ಅಲಂಕೃತೀನಾಮಾತ್ಮಾನಂ ತ್ರಿವಿಧಂ ತದ್ವಿದೋ ವಿದುಃ [23]

ಅಲಂಕಾರಗಳ ಆತ್ಮ ವು ಮೂರು ಬಗೆಯದೆಂದು ವಿದ್ವಾಂಸರ ಅಭಿಪ್ರಾಯ(1) ವಾಚ್ಯ (ಪ್ರಕಟವಾಗಿ ಹೇಳಿದ್ದು) (2) ಸಾಮರ್ಥ್ಯ ಲಭ್ಯ (ಸೂಚಕಗಳಿಂದ ಅಧ್ಯಾಹಾರವಾದ್ದು) ಮತ್ತು (3) ಪ್ರತೀಯಮಾನ [23]

ಮೊದಲನೆಯದಾದ 'ವಾಚ್ಯ'ವನ್ನು ಸಮಸ್ತ ವಸ್ತು ವಿಷಯ ರೂಪಕದ ಮೂಲಕ ಉದಾಹರಿಸಲಾಗಿದೆ. ಎರಡನೆಯದಾದ ಸಾಮರ್ಥ್ಯ ಲಭ್ಯವನ್ನು 'ಏಕದೇಶ ವಿವರ್ತಿತ'ದ ಉಪೋಢರಾಗೇಣದ ಮೂಲಕ ಉದಾಹರಿಸಲಾಗಿದೆ. ಮೂರನೆಯದಾದ ಪ್ರತೀಯ ಮಾನ ರೂಪಕವನ್ನು ಇದೀಗ ಉದಾಹರಿಸಲಾಗುವುದು.

ಲಾವಣ್ಯ ಕಾಂತಿ ಪರಿಪೂರಿತ ದಿಙ್ಮುಖೇಽಸ್ಮಿನ್
ಸ್ಮೇರೇಽಧುನಾ ತವಮುಖೇ ತರಲಾಯತಾಕ್ಷಿ|
ಕ್ಷೋಭಂ ಯದೇತಿ ನ ಮನಾಗಪಿ ತೇನ ಮನ್ಯೇ
ಸುವ್ಯಕ್ತ ಮೇವ ಜಲ (ಡ) ರಾಶಿರಯಂ ಪಯೋಧಿಃ[೯೧]

ಲಾವಣ್ಯ ಕಾಂತಿಯಿಂದಲಿ ದಿಕ್ತಟಂಗಳ ಬೆಳಗುತೆ
ನಿನ್ನ ನಗೆಮುಖವಿರಲು ಲೋಲ ಲೋಚನೆಯೆ
ಕಿಂಚಿತ್ತು ಕ್ಷೋಭೆಯನು ತಾಳದಿದೆ ಅಂಬುಧಿಯು
ಅದರಿಂದ ತಿಳಿವೆನಿದು ನಿಜಕು ಜಲ (ಡ) ರಾಶಿಯೆಂದು [೯೧]

(ಧ್ವನ್ಯಾಲೋಕ III - 27]ಕ್ಕೆ

ಇಲ್ಲಿ ಕವಿಯು "ನಿನ್ನ ಮುಖವು ಚಂದ್ರ" ಎಂಬ ರೂಪಕವನ್ನು ಪ್ರತೀಯ ಮಾನ ರೂಪದಲ್ಲಿ ಹೇಳಿದ್ದಾನೆ. ರೂಪಕದ ಎರಡೂ ಪ್ರಭೇದಗಳಾದ 'ಏಕದೇಶ ವಿವರ್ತಿತ ಮತ್ತು 'ಸಮಸ್ತ ವಸ್ತು ವಿಷಯ'ಗಳೆರಡಜೂ ದೀಪಕದ ದೀಪನಗೊಳಿಸುವ ಲಕ್ಷಣವನ್ನು ಹೊಂದಿವೆ. ಅದರಿಂದಲೇ ಇವೆರಡನ್ನೂ ದೀಪಕದ ನಂತರ ಕೂಡಲೇ ವಿವರಿಸಿದ್ದು. ಸೌಂದರ್ಯದ ಹೊಸ ಛಾಯೆಗಳನ್ನು ನಿರ್ಮಿಸುವ ಸಲುವಾಗಿ ರೂಪಕವನ್ನು ಮುಂದಿನ ಕಾರಿಕೆಯಲ್ಲಿ ಮತ್ತಷ್ಟು ವಿಶ್ಲೇಷಿಸಲಾಗುವುದು.

ನಯಂತಿ ರೂಪಕಂ ಕಾಂಚಿದ್ವಕ್ರಭಾವ ರಹಸ್ಯತಾಮ್।
ಅಲಂಕಾರಾಂತರೋಲ್ಲೇಖ ಸಹಾಯಂ ಪ್ರತಿಭಾವಶಾತ್ [24]

ಕವಿಗಳು ತಮ್ಮ ಸೃಜನ ಶೀಲ ಪ್ರತಿಭೆಯ ಸಾಮರ್ಥ್ಯದಿಂದ, ನೂತನ ಅಲಂಕಾರಗಳ ಛಾಯೆಗಳು ಹೊರಹೊಮ್ಮುವ ರೀತಿಯಲ್ಲಿ, ರೂಪಕವನ್ನು ಅತ್ಯುನ್ನತ ಕಾವ್ಯ ಪರಿಣಾಮವನ್ನುಂಟು ಮಾಡುವ ಸಲುವಾಗಿ ಪರಿವರ್ತನಗೊಳಿಸುತ್ತಾರೆ [24]

ಇದುವರೆಗೂ ಇಷ್ಟೊಂದು ಸುದೀರ್ಘವಾಗಿ ಚರ್ಚಿಸಲಾದ ರೂಪಕಾಲಂಕಾರವು ಲೋಕೋತ್ತರವಾದ ವಕ್ರಭಾವದ ರಮಣೀಯತೆಯನ್ನು ಪಡೆದುಕೊಳ್ಳುವ ಹಾಗೆ ಕವಿಗಳು ಮಾಡುತ್ತಾರೆ. ಅದರಲ್ಲಿ ಅಳವಟ್ಟಿರುವ ಇತರೆ ಅಲಂಕಾರಗಳ ಸೌಂದರ್ಯ ಛಾಯೆಯಲ್ಲಿ ರೂಪಕದ ತತ್ವವೇ ಕೇಂದ್ರವಾಗಿ ಇರುತ್ತದೆ. ಯಾವ ರೀತಿಯಲ್ಲಿ ಎಂದರೆ - ಇತರೆ ಅಲಂಕಾರಗಳಾದ ಸಸಂದೇಹ ಮತ್ತು ಉತ್ಪ್ರೇಕ್ಷಾಲಂಕಾರಗಳು ಮೂಡುವ ಹಾಗೆ. ಆ ಅಲಂಕಾರಗಳ ರೂಪಣದಲ್ಲೂ ರೂಪಕವು ನೆರ ವಾಗುತ್ತದೆ. ಕವಿಗಳು ರೂಪಕವನ್ನು ಹೇಗೆ ಪರಿವರ್ತನಗೊಳಿಸುತ್ತಾರೆ? ತಮ್ಮ ಜನ್ಮಜಾತವಾದ ಪ್ರತಿಭಾಶಕ್ತಿಯ ಬಲದಿಂದ ಲೋಕಾತಿ ಕ್ರಾಂತ ಗೋಚರವಾದ ವಿಷಯಗಳಲ್ಲಿ ಕವಿಗಳು ರೂಪಕವನ್ನು ಹಾಗೆ ಬಳಸುತ್ತಾರೆ. ಅತ್ಯಂತ ಅಪರಿಚಿತವಾದ ವಿಚಾರಗಳು ಅತಿ ಪರಿಚಿತವಾದ ವಿಚಾರಗಳ ಹಾಗೆ ವರ್ಣಿತವಾದಾಗ, ಅದು ಕವಿಯ ದೊಡ್ಡ ಸಾಹಸವೆಂಬಂತೆ ತೋರುತ್ತದೆ. ಇತರೆ ಅಲಂಕಾರಗಳೊಂದಿಗೆ ಕೂಡಿಕೊಂಡು ಮೈತಾಳುವ ರೂಪಕದ ಆ ಒಂದು ವಿಧಾನವು ಸಹೃದಯ ಹೃದಯ ಸಂವಾದಿಯಾಗಿ ಉತ್ಕೃಷ್ಟ ಕಾವ್ಯ ಕೌಶಲಕ್ಕೆ ಕಾರಣವಾಗುತ್ತದೆ.

ಉದಾ:

ನಿರ್ಮೋಕ್ತ ಮುಕ್ತಿರಿವ ಗಗನೋರಗಸ್ಯ ಲೀಲಾಲಲಾಟಿಕಾಮಿವ
ತ್ರಿವಿಷ್ಟಪ ವಿಟಸ್ಯ [೯೨] **[ಬಾಣ - ಹರ್ಷಚರಿತ Page 19]**

ಗಗನ ಫಣಿ ಬಿಟ್ಟ ಪರೆಯಂತೆ
ನಾಕವಿಟನ ಲಲಾಟತಿಲಕದಂತೆ[೯೨]

"ಕವಿ ಪ್ರತಿಭೆಯ ಕಾಂತಿಯಿಂದ" - ಎಂಬುದರ ಮಥಿತಾರ್ಥ ಅವುಗಳಿಂದ ಅಭಿವ್ಯಕ್ತವಾಗುವ ವಸ್ತು ಅದೆಷ್ಟು ಲೋಕೋತ್ತರವಾದ ಸೌಂದರ್ಯದ ಅತಿಶಯತೆಯಿಂದ ಹೊಳೆಯುತ್ತಿರುತ್ತದೆಂದರೆ ಬೇರಾವುದೇ ರೀತಿಯಿಂದಲೂ ಅದನ್ನು ಅಭಿವ್ಯಕ್ತಿಸುವುದು ಅಶಕ್ಯವೆನಿಸುವಷ್ಟು. ಇಲ್ಲಿ ರೂಪಕದ ರೇಖೆಯನ್ನು ಸ್ಪಷ್ಟವಾಗಿ ಗುರುತಿಸಬಹುದಾದರೂ, ಕಂಠೋಕ್ತವಾಗಿ ಯಾವುದೇ ಹಿಂಜರಿಕೆಯಿಲ್ಲದೆ, ಪರಿಶುದ್ಧ ರೂಪಕವೆಂದು ಸಾರಲು ಸಾಧ್ಯವಿಲ್ಲ; ಕಾರಣ ಅದನ್ನು ಹಾಗೆ ಹೆಸರಿಸಲು ಹೆಸರಾಂತ ಪರಂಪರೆಯಿಲ್ಲ. ಆದರೆ ವರ್ಣಿತ ವಸ್ತು, ರೂಪಕದ ರೇಖಾ ಮಾತ್ರ ಗುರುತನ್ನು ಹೊಂದಿದೆ ಎಂಬುದು ನಮ್ಮ ಅನುಭವವಾಗಿರುವುದರಿಂದ, ಇಲ್ಲಿ ರೂಪಕದೊಂದಿಗೆ ಇನ್ನೊಂದು ಅಲಂಕಾರವಾದ ಉತ್ಪ್ರೇಕ್ಷೆಯ ಸಾಹಚರ್ಯವಿದೆ ಎಂದು ಸಾರಿದ್ದೇವೆ.

ಈಗ ಇನ್ನೊಂದು ಉದಾಹರಣೆ

ಕಿಂತಾರುಣ್ಯತರೋಃ [೯೩] (22ನೇ ಕಾರಿಕೆಯಡಿ)

ಇಲ್ಲಿಗೂ ಮೇಲಿನದೇ ಅನ್ವಯಿಸುತ್ತದೆ. ಒಂದೇ ಒಂದು ವ್ಯತ್ಯಾಸವೆಂದರೆ, ಇಲ್ಲಿ ರೂಪಕದ ಸಾಹಚರ್ಯವಿರುವ ಇನ್ನೊಂದು ಅಲಂಕಾರವೆಂದರೆ, ಸಸಂದೇಹಾಲಂಕಾರ. ಕವಿ ವರ್ಣಿಸುತ್ತಿರುವ ಹೆಣ್ಣು ಅದೆಷ್ಟು ಅನುಪಮ ಮತ್ತು ಅತಿಶಯ ಸುಂದರಿಯೆಂದರೆ, ಅವಳ ಸುಕುಮಾರ ಸೌಂದರ್ಯವನ್ನು ಬೇರಿನ್ನಾವುದೇ ರೀತಿಯಿಂದಲೂ ಸಮರ್ಥವಾಗಿ ವರ್ಣಿಸಲಶಕ್ಯ. ಚರ್ವಿತ ಚರ್ವಣ ರೂಪಕಗಳಾದ 'ಮುಖೇಂದು' ಇತ್ಯಾದಿಗಳು ಅವನ ಅಪೂರ್ವ ಭಾವನೆಗಳನ್ನು ಅಭಿವ್ಯಕ್ತಿಸಲು ಪರ್ಯಾಪ್ತವಲ್ಲ. ಆದ್ದರಿಂದ ಅವನು ಸಸಂದೇಹಾಲಂಕಾರವನ್ನಾಶ್ರಯಿಸಿ - "ನನ್ನ ಮನಸ್ಸಂತೂ ಅಂಥ ಅತ್ಯುತ್ಕೃಷ್ಟ ಸೌಂದರ್ಯವನ್ನು ಕಂಡು ದಿಗ್ಭ್ರಮೆ ಹೊಂದಿದ ಪರಿಣಾಮವಾಗಿ ಅನುಮಾನಕ್ಕೆ ಪಕ್ಕಾಗಿ ಅಂಥ ವಸ್ತು ನಿಜಕ್ಕೂ ಹೇಗಿದ್ದಿರಬಹುದು" ಎಂಬ ಪ್ರಶ್ನೆಯ ರೂಪವನ್ನು ಪಡೆದುಕೊಂಡಿದೆ. ಇಲ್ಲಿ ರೂಪಕದ ಸಾಹಚರ್ಯವಿರುವ ಅಲಂಕಾರವೆಂದರೆ, ಸಸಂದೇಹಾಲಂಕಾರ - ಎಂಬುದೇ ಎಲ್ಲ ಸಹೃದಯರ ಅನುಭವವಾಗುತ್ತದೆಂದು ನಿರೀಕ್ಷಿಸಲಾಗಿದೆ.

ಭ್ರೂಲತಾನರ್ತಕೀ' [೯೪]

ಎಂಬಂಥ ಉದಾಹರಣೆಗಳಲ್ಲಿ ಹೇಳಿರುವಂತೆ "ರೂಪಕ ರೂಪಕಂ" ಎಂಬ ರೂಪಕದ ಇತರ ಪ್ರಭೇದಗಳಿಲ್ಲ. ಕಾರಣ ಅದಕ್ಕೆ ಬೇರೆಯದೇ ಆದ ಲಕ್ಷಣವಿಲ್ಲ. ಕೇವಲ ಉದಾಹರಣೆಯನ್ನು ನೀಡಿದಾಕ್ಷಣಕ್ಕೇ ಬೇರೆಯಾದೊಂದು ಹೊಸ ಪ್ರಭೇದವನ್ನು ಸಮರ್ಥಿಸಿದಂತಾಗುವುದಿಲ್ಲ. ಆ ಲೆಕ್ಕದಲ್ಲಿ ಅಪಾರ ಸಂಖ್ಯೆಯ ರೂಪಕದ ಪ್ರಭೇದಗಳು ಸಾಧ್ಯ. ಅವುಗಳ ಉದಾಹರಣೆಗಳ

' ದಂಡಿಯ ಕಾವ್ಯಾದರ್ಶ II - 93

ಸಂಖ್ಯೆಗಳೂ ಅನಂತವಾಗಬಹುದು.

ಹೀಗೆ ರೂಪಕದ ವಿವೇಚನೆಯನ್ನು ಮುಗಿಸಿ, ಗ್ರಂಥ ಕರ್ತೃ ಅಪ್ರಸ್ತುತ ಪ್ರಶಂಸಾಲಂಕಾರದ ವಿವೇಚನೆಗೆ ತೊಡಗುತ್ತಾನೆ. ರೂಪಕದಲ್ಲಿರುವಂತೆಯೇ ಅದರಲ್ಲೂ ಸಾಮ್ಯವಿರುತ್ತದೆ. (ಪ್ರಸ್ತುತ ಮತ್ತು ಅಪ್ರಸ್ತುತಗಳ ನಡುವೆ ಸಾಮ್ಯವಿರುತ್ತದೆ)

ಅಪ್ರಸ್ತುತೋಽಪಿ ವಿಚ್ಛಿತ್ತಿಂ ಪ್ರಸ್ತುತಸ್ಯಾವತಾರಯನ್।
ಪದಾರ್ಥೋ ವಾಥ ವಾಕ್ಯಾರ್ಥಃ ಪ್ರಾಪ್ಯತೇ ವರ್ಣನೀಯತಾಮ್ [25]

ಯತ್ರ ತತ್ಸಾಮ್ಯಮಾಶ್ರಿತ್ಯ ಸಂಬಂಧಾಂತರಮೇವ ವಾ।
ಅಪ್ರಸ್ತುತ ಪ್ರಶಂಸೇತಿ ಕಥಿತಾಸಾವಲಂಕೃತಿಃ[26]

ಪ್ರಸ್ತುತವಾದ ವಿಷಯಕ್ಕೆ ರಮಣೀಯತೆಯನ್ನು ತಂದುಕೊಡುವಂಥ ಅಪ್ರಸ್ತುತವಾದ ಪದಾರ್ಥವೋ ಅಥವಾ ವಾಕ್ಯಾರ್ಥವೋ ವರ್ಣನೆಯ ಮುಖ್ಯವಸ್ತುವಾಗಿಬಿಟ್ಟಾಗ [25]

ಎರಡಕ್ಕೂ ಇರುವ ಸಾಮ್ಯವನ್ನಾಶ್ರಯಿಸಿಯೋ, ಎರಡರ ನಡುವಿನ ಸಂಬಂಧಾಂತರ, ಗಳನ್ನಾಧರಿಸಿಯೋ, ಆ ಅಲಂಕಾರವನ್ನು ಅಪ್ರಸ್ತುತ ಪ್ರಶಾಸಲಂಕಾರವೆಂದು ಕರೆಯಲಾಗುತ್ತದೆ [26]

ಆಲಂಕಾರಿಕರು ಈ ಅಲಂಕಾರವನ್ನು ಅಪ್ರಸ್ತುತ ಪ್ರಶಂಸೆ ಎಂದು ಕರೆದಿದ್ದಾರೆ. ಅದರ ಸ್ವರೂಪವನ್ನು ಹೀಗೆ ವಿವರಿಸಲಾಗುವುದು. ವಿಷಯಕ್ಕೆ ಪ್ರಸ್ತುತವಲ್ಲದ ಅಂದರೆ ಅಪ್ರಸ್ತುತ (ಅಪ್ರಕೃತ)ವೆನಿಸಿದಂಥದ್ದು ಕೂಡ ವರ್ಣನಾ ವಿಷಯವಾಗಿ ಬಿಡುತ್ತದೆ. ಯಾವ ಸಂದರ್ಭದಲ್ಲಿ? ಅಂದರೆ ಪ್ರಸ್ತುತವಾದ ವಿಷಯಕ್ಕೆ ನೂತನ ರಮಣೀಯತೆಯನ್ನು ತಂದುಕೊಟ್ಟಾಗ. ಪ್ರಸ್ತುತ ವಿಷಯ (ಪದಾರ್ಥ) ಎರಡು ಪ್ರಕಾರದ್ದು ಮಾತ್ರ ಆಗಿರುತ್ತದೆ. (ಒಂದು) ವಾಕ್ಯದ ಒಳಗಡೆ ಸೇರಿರುವ ಪದಗಳಿಂದ ಮಾತ್ರ ಸಿದ್ಧವಾಗಬಹುದಾದ್ದು ಮತ್ತು ಎರಡನೆಯದು ಒಟ್ಟಾರೆಯಾಗಿ ಇಡೀ ವಾಕ್ಯದಿಂದ ಸಿದ್ಧವಾಗಬಹುದಾದ್ದು. ಇದರಲ್ಲಿ ಸೌಂದರ್ಯದ ವಿವಿಧ ಘಟಕಾಂಶಗಳು, ಮುಖ್ಯವಾದ ವಿವಕ್ಷಿತ ಅರ್ಥವನ್ನುಂಟು ಮಾಡುವ ಸಲುವಾಗಿ ಸೇರುತ್ತವೆ. ಪ್ರಸ್ತುತ ಪ್ರಧಾನ ವಿಷಯ (ಪದಾರ್ಥ)ದ ಎರಡೂ ಪ್ರಕಾರಗಳು ಪ್ರತೀಯಮಾನವೇ ಆಗಿರುತ್ತವೆ. ಕವಿಗಳು ಅದನ್ನು ಮುಖ್ಯವಾಗಿ ಮನಸ್ಸಿನಲ್ಲಿಟ್ಟುಕೊಂಡು ಅದನ್ನು ಇನ್ನಷ್ಟು ರಮಣೀಯವಾಗಿಸಲು ಅಪ್ರಸ್ತುತ (ಪರೋಕ್ಷವಾದ) ವಾದ ಬೇರೊಂದು ಪದಾರ್ಥವನ್ನು ವರ್ಣನೆಯ ಮುಖ್ಯ ವಿಷಯವಾಗಿ ಮಾಡಿಕೊಳ್ಳುತ್ತಾರೆ. ಅದನ್ನು ಹೇಗೆ ಸಾಧಿಸುತ್ತಾರೆ? ಆ ಸಾಮ್ಯವನ್ನು ಆಶ್ರಯಿಸಿ. ಅರ್ಥಾತ್ ಇದೀಗ ಪ್ರತಿಪಾದಿಸಿದ ರೂಪಕದಲ್ಲಿರುತ್ತದೆಂದು ಹೇಳಲಾದ ಸಾಮ್ಯವನ್ನಾಶ್ರಯಿಸಿ. ಅಲ್ಲದೆ, ಸಾಮ್ಯದ ಹೊರತಾಗಿ ವಿವಕ್ಷಿತ ಮತ್ತು ವಿವಕ್ಷಿತವಲ್ಲದ ವಿಷಯಗಳಿಗಿರುವ ಕಾರಣ-ಪರಿಣಾಮಗಳ ಸಂಬಂಧವನ್ನು ಆಶ್ರಯಿಸಬಹುದು. ಅದೇ ರೀತಿಯಲ್ಲಿ ಅವರು ಮೇಲ್ನೋಟಕ್ಕೆ ಅಪ್ರಸ್ತುತವೆಂದು ತೋರುವ ವಾಕ್ಯಾರ್ಥವನ್ನು [ಎಲ್ಲಿ ಘಟಕ ಶಬ್ದಗಳೆಲ್ಲವೂ ಒಟ್ಟಾರೆಯಾಗಿ ಅವಿವಕ್ಷಿತ ಅರ್ಥವನ್ನು ಪ್ರತಿಪಾದಿಸುತ್ತಿವೆಯೋ] ಪ್ರಸ್ತುತ ಪಡಿಸಲಿಚ್ಛಿಸಬಹುದು. ಬೇರೆ

ಮಾತುಗಳಲ್ಲಿ ಹೇಳಬೇಕೆಂದರೆ, ಕವಿಗಳು ಸಾಮ್ಯ ಅಥವಾ ಸಂಬಂಧಾಂತರಗಳನ್ನು ಆಶ್ರಯಿಸಿ, ಪ್ರಸ್ತುತದ ಸೌಂದರ್ಯಕ್ಕಾಗಿ ಅಪ್ರಸ್ತುತವನ್ನು ವರ್ಣನೆಯ ವಿಷಯವನ್ನಾಗಿ ಮಾಡಿಕೊಳ್ಳುತ್ತಾರೆ.

ಮೊದಲಿಗೆ ಸಾಮ್ಯವನ್ನಾಶ್ರಯಿಸಿರುವ, ವಾಕ್ಯದಲ್ಲಿ ಸೇರಿರುವ ಪದಾರ್ಥದ ಅಪ್ರಸ್ತುತ ಪ್ರಶಂಸೆಗೆ ಉದಾಹರಣೆಯನ್ನು ನೋಡಬಹುದು.

ಲಾವಣ್ಯಸಿಂಧುರಪರೈವ ಹಿ ಕೇಯಮತ್ರ
ಯತ್ರೋತ್ಪಲಾನಿ ಶಶಿನಾ ಸಹ ಸಂಪ್ಲವಂತೇ|
ಉನ್ಮಜ್ಜತಿ ದ್ವಿರದ ಕುಂಭತಟೀ ಚ ಯತ್ರ
ಯತ್ರಾಪರೇ ಕದಲಿಕಾಂಡ ಮೃಣಾಲದಂಡಾ: [೯೫]

[ಧ್ವನ್ಯಾಲೋ. ಸಾರ - ಪುಟ - 209]

ಉತ್ಪಲಗಳು ಶಶಿಯೊಡನೆ ತೇಲುತಿರುವ
ಆನೆಯ ಕುಂಭ ಸ್ಥಲವು ಕೂಡ ಮುಳುಗಿರುವ
ಮೃಣಾಳನಾಳಗಳು ಜೊತೆಗೆ ಬಾಳೆಯ ಕಂಬಗಳು
ಮುಳುಗೇಳುತಿರುವ
ನೋಡೆ ಬೇರೊಂದು ಚೆಲುವಿನ ಹೊಳೆಯಿವಳಾರಿಲ್ಲಿ? [೯೫]

ಇಲ್ಲಿ ಸಾಮ್ಯವನ್ನು ಆಧರಿಸಿರುವ ವಾಕ್ಯದಲ್ಲಿ ಸೇರಿರುವ ಪದಾರ್ಥದ ಅಪ್ರಸ್ತುತ ಪ್ರಶಂಸೆಯು ಕವಿ ವಿವಕ್ಷಿತ ಮುಖ್ಯ ಅರ್ಥವನ್ನು ಪ್ರತೀಯಮಾನಗೊಳಿಸುತ್ತದೆ.

ಇಡೀ ವಾಕ್ಯವನ್ನೆಲ್ಲಾ ಆವರಿಸಿರುವ ಅಪ್ರಸ್ತುತ ಪ್ರಶಂಸೆಗೆ ಉದಾಹರಣೆ

ಛಾಯಾ ನಾತ್ಮನ ಏವ ಯಾ ಕಥಮುಸಾವನ್ಯಸ್ಯ ನಿಷ್ಪ್ರಗ್ರಹಾ
ಗ್ರೀಷ್ಮೋಷ್ಮಾಪದಿ ಶೀತಲಸ್ಥಲ ಭುವಿ ಸ್ಪರ್ಶೋನಿಲಾದೇಃ ಕುತಃ|
ವಾರ್ತಾ ವರ್ಷಶತೇ ಗತೇ ಕಿಲ ಫಲಂ ಭಾವೀತಿ ವಾರ್ತೇವ ಸಾ
ದ್ರಾಧಿಮ್ನಾ ಮುಷಿತಾಃ ಕಿಯಚ್ಚಿರಮಹೋ ತಾಲೇನ ಬಾಲಾ ವಯಮ್ [೯೬]

[ಸುಭಾಷಿತಾವಲಿ 821]

ತನಗೇನೆರಳಿಲ್ಲದಂದು
ಅನ್ಯರಿಗೆ ನೆರಳೀವುದೆಂತು?
ಸುಡು ಬೇಸಗೆಯ ವಿಪತ್ತಿನಲಿ
ತಂಗಾಳಿಯ ಸ್ಪರ್ಶಕೆಡೆಯೆಲ್ಲಿ ಅದರಡಿಯಲಿ?
ವರುಷಗಳು ನೂರು ಆದಂದು
ಅದು ಫಲ ಬಿಡುವುದೆಂಬುದು
ಬರಿ ಗಾಳಿ ಮಾತು
ಅದೆಷ್ಟು ಕಾಲದಿಂದಲಿ
ಈ ತಾಳೆಯ ಮರವು ತನ್ನ ಎತ್ತರದಿಂದ
ಮೋಸಗೊಳಿಸಿತು ನಮ್ಮನು? [೯೬]

ಸಾಮ್ಯದ ಹೊರತಾಗಿ ಬೇರೆಯದರ ಸಂಬಂಧವನ್ನು ಹೊಂದಿದ್ದು ವಾಕ್ಯದಲ್ಲಿ ಸೇರಿ ಹೋಗಿರುವ ಪದಾರ್ಥದ ಅಪ್ರಸ್ತುತ ಪ್ರಶಂಸೆಗೆ ಉದಾ:

ಇಂದುರ್ಲಿಪ್ತ ಇವಾಂಜನೇನ ಜಡಿತಾ ದೃಷ್ಟಿರ್ಮೃಗೀಣಾಮಿವ
ಪ್ರಮ್ಲಾನಾರುಣಿಮೇವ ವಿದ್ರುಮಲತಾ ಶ್ಯಾಮೇವ ಹೇಮಪ್ರಭಾ|
ಕಾರ್ಕಶ್ಯಂ ಕಲಯಾ ಚ ಕೋಕಿಲವಧೂ ಕಂಠೇಷ್ವಿವ ಪ್ರಸ್ತುತಂ
ಸೀತಾಯಾಃ ಪುರತಶ್ಚ ಹಂತ ಶಿಖಿನಾಂ ಬರ್ಹಾಃ ಸಗರ್ಹಾ ಇವ [೯೭]

[ರಾಜಶೇಖರನ ಬಾಲರಾಮಾಯಣ 1-42]

ಜಾನಕಿಯ ಎದುರಿನಲಿ
ಚಂದ್ರಮನು ಕಾಡಿಗೆಯ ಬಳಿದರೆಂತೊ ಅಂತೆ
ಹರಿಣಿಗಳ ನೋಟವದು ಜಡಗೊಂಡಿತೆಂಬಂತೆ
ಹವಳದ ಬಳ್ಳಿಗಳ ಕೆಂಪು ಮಾಸಿತೆಂಬಂತೆ
ಹೊನ್ನು ತಾನದು ಹೊಳಪುಗುಂದಿ ಕಪ್ಪಾದುದೆಂಬಂತೆ
ಕೋಗಿಲೆಯ ಕಂಠದಲಿ ಕಾಠಿಣ್ಯ ನೆಲೆಗೊಂಡಿತೆಂಬಂತೆ
ಮಯೂರಪಿಂಛದ ಪ್ರತಿಷ್ಠೆ ಅಳಿದುದೆಂಬಂತೆ ಆದುದು [೯೭]

ಇಲ್ಲಿ ಚಂದ್ರನೇ ಮೊದಲಾದ ಬೇರೆ ಬೇರೆ ಪದಾರ್ಥಗಳ ಕಾಂತಿಗುಂದುವಿಕೆಗೆ ಸೀತೆಯ ಅಂಗೋಪಾಂಗಗಳಾದ ಮುಖ, ಕಣ್ಣು, ತುಟಿ, ಕಂಠ, ಕೇಶ ಮೊದಲಾದುವುಗಳ ಅತಿಶಯ ಸೌಂದರ್ಯವೇ ಕಾರಣವೆಂದು ಹೇಳಲಾಗಿದೆ. ವರ್ಣನೀಯ ಮುಖ್ಯ ಪದಾರ್ಥನೆನಿಸಿದ ಸುಂದರಿ ಸೀತೆಯ ಸುಕುಮಾರ ಮನೋಹರತೆಯನ್ನು ಅಧಿಕವಾಗಿಸುವಲ್ಲಿ ಹೆಚ್ಚಿನ ಪೋಷಣೆಯನ್ನು ಹಾಗೂ ತಮ್ಮ ಇತರೆ ಸಹಚರಿ ಅಲಂಕಾರಗಳಾದ ಉತ್ಪ್ರೇಕ್ಷೆಯೇ ಮೊದಲಾದುವುಗಳ ಮನೋಹರತೆಯನ್ನು ಪಡೆದುಕೊಳ್ಳುವುದನ್ನು ಪ್ರತೀತಗೊಳಿಸಲಾಗಿದೆ.

ಅದೇ ರೀತಿಯಲ್ಲಿ ಪ್ರಸ್ತುತ ಮತ್ತು ಅಪ್ರಸ್ತುತಗಳ ನಡುವಿನ ಸಾಮ್ಯವಲ್ಲದೆ, ಅನ್ಯ ಸಂಬಂಧವನ್ನು ಆಧರಿಸಿದ್ದು, ಇಡೀ ವಾಕ್ಯವನ್ನೆಲ್ಲಾ ವ್ಯಾಪಿಸಿರುವ ಅಪ್ರಸ್ತುತ ಪ್ರಶಂಸೆಗೆ ಉದಾ:

ಪರಾಮೃಶತಿ ಸಾಯಕಂ ಕ್ಷಿಪತಿ ಲೋಚನಂ ಕಾರ್ಮುಕೇ
ವಿಲೋಕಯತಿ ವಲ್ಲಭಾಸ್ಮಿತ ಸುಧಾರ್ದ್ರವಕ್ತ್ರಮ್ ಸ್ಮರಃ|
ಮಧೋಃ ಕಿಮಪಿ ಭಾಷತೇ ಭುವನ ನಿರ್ಜಯಾ ಯಾವನಿಂ
ಗತೋಽಹಮಿತಿ ಹರ್ಷಿತಃ ಸ್ಪೃಶತಿ ಗಾತ್ರಲೇಖಾಮಹೋ [೯೮]

ಬಾಣವನು ಬೆರಳಿಂದೆ ಸ್ಪರ್ಶಿಸುತೆ
ಬಿಲ್ಲ ಕಡೆಗೊಮ್ಮೆ ಕಣ್ಣ ಹಾಯಿಸುತೆ
ಮುಗುಳುನಗೆಯಮೃತದಲಿ ಮಿಂದ ಮೊಗದಿಂದ
ಮಡದಿಯ ಕಡೆಗೊಮ್ಮೆ ನೋಡುತೆ
ವಸಂತನೊಡನೇನನೋ ನುಡಿಯುತಲಿ

ಜಗವ ಗೆಲಲೆಂದೆ ಬುವಿಗೆ ಬಂದಿಹೆನೆಂದು
ಮುದವ ತಾಳುತೆ ಯುವತಿಯ ಚೆಲುವಮೈಯನು
ಮುಟ್ಟಿದನಲೆ ಮದನನು| [೯೮]

ಇಲ್ಲಿ ತರುಣಿಯಲ್ಲುಂಟಾದ ಯೌವನ ಪ್ರಾದುರ್ಭಾವವನ್ನು ವರ್ಣಿಸುವುದೇ ಕಾವ್ಯದ (ಶ್ಲೋಕದ) ಮುಖ್ಯವಸ್ತು. ಇದನ್ನು ಬೇರಾವುದೇ ರೀತಿಯಿಂದ ವರ್ಣಿಸುವುದು ದಿಕ್ಕೆಡಿಸುವಂಥದು. ಆದ್ದರಿಂದ ಇಲ್ಲಿ ವಾಸ್ತವವಾಗಿ ವರ್ಣಿಸಿರುವುದು ಅದರ ನಿಮಿತ್ತವಾದ ಅತಿಶಯ ಮನ್ಮಥ ಚೇಷ್ಟೆ. ಕಾರಣ ಮತ್ತು ಪರಿಣಾಮಗಳ ಈ ಸಂಬಂಧದ ಮೂಲಕ ಕಾವ್ಯದ ಉದ್ದೇಶಿತ ಮುಖ್ಯವಸ್ತು ಪರೋಕ್ಷವಾಗಿ ಪ್ರತೀತವಾಗಿದೆ.

ಉದ್ದೇಶಿತ ಪ್ರಧಾನ ವಸ್ತುವಿನ ಸಂವಹನೆಯನ್ನು ಪ್ರಕಟವಾಗಿಯೇ ಅಸತ್ಯವಾದ ಇಡೀ ವಾಕ್ಯದ ಪ್ರತೀತ್ಯರ್ಥದ ರೂಪದಲ್ಲಿ ಒಳಗೊಂಡಿರುವ ಅಪ್ರಸ್ತುತ ಪ್ರಶಂಸೆಯನ್ನು ಈ ಉದಾಹರಣೆಯಲ್ಲಿ ನೋಡಬಹುದು.

ತಣ್ಣತ್ಥಿ ಕಿಂಪಿ ಪಇಣೋ ಪಕಪ್ಪಿಅಂ ಜಂ ಣ ಣಿ ಅಇ ಘರಣೀಯೇ
ಅಣವರ ಅಗಅಣಸೀಲಸ್ಸ ಕಾಲ ಪಹಿಅಸ್ಸ ಪಾಹಿಜ್ಜಂ [೯೯]

** ತನ್ನಾಸ್ತಿ ಕಿಮಪಿ ಪತ್ಯುಃ ಪ್ರಕಲ್ಪಿತಂ ಯನ್ನ ನಿಯತಿ ಗೇಹಿನ್ಯಾ*
ಅನವರತ ಗಮನ ಶೀಲಸ್ಯ ಕಾಲಪಥಿಕಸ್ಯ ಪಾಥೇಯಮ್ [99]

ನಿರಂತರ ಪಯಣಿಗನಾ
ಕಾಲ ಪಥಿಕನಿಗೆ
ಅವನ ನೆಚ್ಚಿನ ನಲ್ಲೆ ನಿಯತಿಯು
ಬುತ್ತಿಯಾಗಿ ಕಟ್ಟಿಕೊಡದಿರುವ
ವಸ್ತುವಿಲ್ಲ [೯೯]

ಈ ಉದಾಹರಣೆಯಲ್ಲಿ ಅಪ್ರಸ್ತುತ ಪ್ರಶಂಸೆಯ ಮೂರೂ ನೆಲೆಗಳಾದ ಸಾಮ್ಯ, ನಿಮಿತ್ತ ನಿಮಿತ್ತಿ ಭಾವ, (ಕಾರಣ ಮತ್ತು ಪರಿಣಾಮ ಸಂಬಂಧೀಭಾವ) ಹಾಗೂ ಸಾಮಾನ್ಯ ವಿಶೇಷ ಭಾವಗಳು ಒಟ್ಟಾಗಿ ಯೋಜಿತವಾಗಿರುವುದನ್ನು ಮನಗಾಣಬಹುದು. ಪ್ರಹಸ್ತವಧೆಯ ವಿಷಯವನ್ನು ಹೇಳಬೇಕಾಗಿರುವ ಸಂಕಟದ ಸಂದರ್ಭ. ಪ್ರಕಟವಾಗಿ ಈ ಸುದ್ದಿಯನ್ನು ತಿಳಿಸುವುದು ಅನುಚಿತವೆನಿಸಿರುವುದರಿಂದ ಪರೋಕ್ಷವಾಗಿ ಮತ್ತು ಪ್ರಖರವಾಗಿ ಈ ರೀತಿ ಹೇಳಲಾಗಿದೆ. ಕವಿಗಳು ಈ ಅಪ್ರಸ್ತುತ ಪ್ರಶಂಸಾಲಂಕಾರವನ್ನು ಅತ್ಯಂತ ವ್ಯಾಪಕವಾಗಿ ಬಳಸುತ್ತಿದ್ದಾರೆ. ಆದ್ದರಿಂದ ಸಹೃದಯರು ಅದರ ವಿವಿಧ ಸಾಧ್ಯತೆಗಳನ್ನು ತಾವೇ ಕಲ್ಪಿಸಿಕೊಳ್ಳಬೇಕು. ಇಲ್ಲಿ ಅಲಂಕಾರದ ಹೆಸರಿನಲ್ಲಿರುವ "ಪ್ರಶಂಸೆ" ಎಂಬ ಶಬ್ದವು ವಿಪರೀತ ಲಕ್ಷಣೆಯಿಂದಾಗಿ ಅದರ ವಿರುದ್ಧವಾದ "ನಿಂದೆ"ಯ ಅರ್ಥವನ್ನೂ ಕೊಡಬಲ್ಲುದು ಅಥವಾ

---

* ಭಾಮಹ ವಿವರಣದಲ್ಲಿ ಉಲ್ಲೇಖಿತಗೊಂಡಿರುವ ಶ್ಲೋಕ

ವರ್ಣನಾ ಸಂದರ್ಭದಲ್ಲಿ ಕೇವಲ ಒಂದು "ಸೂಚನೆ" ಎಂಬ ಅರ್ಥವಷ್ಟನ್ನು ಒಳಗೊಳ್ಳಬಹುದು.

[ಅಪ್ರಸ್ತುತ ಪ್ರಶಂಸಾಲಂಕಾರದ ವ್ಯಾಖ್ಯಾನವನ್ನು ಮುಗಿಸಿ, ಈಗ ಕುಂತಕನು ಪ್ರಕಾರಾಂತರವಾಗಿ ವಿವಕ್ಷಿತ ಅರ್ಥವನ್ನು ಪ್ರತಿಪಾದಿಸುವ ಪರ್ಯಾಯೋಕ್ತ ಅಲಂಕಾರವನ್ನು ಚರ್ಚೆಗೆ ಕೈಗೆತ್ತಿಕೊಳ್ಳುತ್ತಾನೆ].

ಯದ್ವಾಕ್ಯಾಂತರವಕ್ತವ್ಯಂ ತದನ್ಯೇನ ಸಮರ್ಪ್ಯತೇ|
ಯೇನೋಪಶೋಭಾನಿಷ್ಪತ್ತ್ಯೈ ಪರ್ಯಾಯೋಕ್ತಂ ತದುಚ್ಯತೇ [27]

ಬೇರೊಂದು ವಾಕ್ಯದ ಮೂಲಕ ಪ್ರತಿಪಾದಿಸಬಹುದಾದ ವಸ್ತುವೊಂದನ್ನು, ಸೌಂದರ್ಯ ಸೃಷ್ಟಿಯ ಸಲುವಾಗಿಯೇ, ಅದಕ್ಕಿಂತ ಭಿನ್ನವಾದ ವಾಕ್ಯವೊಂದರ ಮೂಲಕ ಪ್ರತಿಪಾದಿಸಿದಾಗ ಅದರಲ್ಲಿರುವ ಅಲಂಕಾರವನ್ನು ಪರ್ಯಾಯೋಕ್ತ ಅಲಂಕಾರವೆಂದು ಕರೆಯಲಾಗುತ್ತದೆ [27]

ಬೇರೊಂದೇ ವಾಕ್ಯದ (ಅಥವಾ ಪದಗಳ) ಮೂಲಕ ಅರ್ಥಾತ್ ವಾಸ್ತವವಾಗಿ ಇರುವ ಅಥವಾ ಉಕ್ತವಾದ ವಾಕ್ಯಕ್ಕಿಂತ ಭಿನ್ನವಾದ ವಾಕ್ಯದ ಮೂಲಕ ವಸ್ತು ವಿಷಯವನ್ನು ಅಭಿವ್ಯಕ್ತಿಸಲು ಸಾಧ್ಯವಾದಾಗ ಪರ್ಯಾಯೋಕ್ತವೆನಿಸುತ್ತದೆ. ಯಾವ ಉದ್ದೇಶ ಸಾಧನೆಗಾಗಿ? ವಿಶೇಷ ಕಾವ್ಯ ಸೌಂದರ್ಯಚ್ಛಾಯೆಯನ್ನು ತಂದುಕೊಡುವ ಉದ್ದೇಶದಿಂದ.

"ಹಾಗಾದರೆ ಪರ್ಯಾಯ ವಕ್ರತೆಗಿಂತ ಇದು ಯಾವ ರೀತಿಯಲ್ಲಿ ಭಿನ್ನವಾದ್ದು?" ಎಂದು ಆಕ್ಷೇಪವೆತ್ತಬಹುದು. ಆದರೆ ಪರ್ಯಾಯ ವಕ್ರತೆಯಲ್ಲಿ ಪದಾರ್ಥ (ಪದದ ಅರ್ಥಮಾತ್ರ) ಮಾತ್ರ ವಾಚ್ಯದ ವಿಷಯ, ಆದರೆ ಪರ್ಯಾಯೋಕ್ತಿಯಲ್ಲಿ ಪದಾರ್ಥವಷ್ಟೇ ಅಲ್ಲದೆ ವಾಕ್ಯಾರ್ಥವೂ ಲಕ್ಷ್ಯದಲ್ಲಿದೆಯಾಗಿ ಅದನ್ನು ಪ್ರತ್ಯೇಕವಾಗಿ ಚರ್ಚಿಸುವುದು ಯುಕ್ತವಾಗಿಯೇ ಇದೆ. ಉದಾ :

ಚಕ್ರಾಭಿಘಾತ ಪ್ರಸಭಾಜ್ಞಯೈವ
ಚಕಾರ ಯೋ ರಾಹುವಧೂ ಜನಸ್ಯ|
ಆಲಿಂಗನೋದ್ದಾಮ ವಿಲಾಸವಂಧ್ಯಾ
ರತೋತ್ಸವಂ ಚುಂಬನ ಮಾತ್ರ ಶೇಷಂ|| [೧೦೦] **[ಧ್ವನ್ಯಾಲೋಕ -2-19]**

ರಾಹುವ ತುಂಡರಿಸಲು ಸುದರ್ಶನ ಚಕ್ರಕೆ
ಕೂಡಲೆ ಆಜ್ಞೆಯನಿತ್ತಾ ಪ್ರಭುವು
ರಾಹು ಪತ್ನಿಯರ ರತಿಕ್ರೀಡೆಯನು
ಗಾಢಾಲಿಂಗನ ವಿಲಾಸಗಳಿರದ ಬರಿ ಚುಂಬನ
ಮಾತ್ರಕೆ ಮಿತಗೊಳಿಸಿದನು [೧೦೦]

ಅದೇ ರೀತಿ

ಯತ್ರ ವಾಚ್ಯತಯಾ ನಿಂದಾ ವಿಚ್ಛಿತ್ತ್ಯೈ ಪ್ರಸ್ತುತಸ್ಯ ಸಾ|
ಸ್ತುತಿರ್ವ್ಯಂಗ್ಯತಯಾ ಚೈವ ವ್ಯಾಜಸ್ತುತಿರಸೌ ಮತಾ [28]

ಎಲ್ಲಿ ವಾಚ್ಯವಾಗಿ ಪ್ರಸ್ತುತದ (ಮೂಲತಃ ವರ್ಣಿತವಾದ ವಸ್ತುವಿನ) ನಿಂದೆ ಇದ್ದು,

ಮೂಲವಸ್ತುವಿಗೆ ಶೋಭೆಯನ್ನುಂಟುಮಾಡುವ ಸಲುವಾಗಿ, ಅದರ ಪ್ರಶಂಸೆಯು ಪ್ರತೀಯಮಾನ ವಾಗಿರುತ್ತದೋ ಆ ಅಲಂಕಾರವನ್ನು 'ವ್ಯಾಜಸ್ತುತಿ' ಅಲಂಕಾರವೆಂದು ಕರೆಯಲಾಗಿದೆ. [28]

ಉದಾಹರಣೆಯೊಂದರಲ್ಲಿ, ನೇರವಾಗಿ ಸೂಚಿತ ಅರ್ಥವು ನಿಂದಾರೂಪವನ್ನು ಪಡೆದುಕೊಂಡಿದ್ದರೂ ವರ್ಣಿತ ವಸ್ತುವಿನ ಪ್ರಶಂಸೆಯನ್ನು ಧ್ವನಿಸುತ್ತ (ಪ್ರತೀಯಮಾನ ರೂಪದಲ್ಲಿ ಸೂಚಿಸುತ್ತ) ಅದರ ಸೌಂದರ್ಯದ ಉತ್ಕರ್ಷತೆಗೆ ಕಾರಣವಾಗಿದ್ದರೆ, ಆಗ ನಾವು ವ್ಯಾಜಸ್ತುತಿ ಅಲಂಕಾರದ ಎರಡು ಪ್ರಕಾರಗಳಾದ 'ಸ್ತುತಿನಿಂದಾ' ಮತ್ತು 'ನಿಂದಾಸ್ತುತಿ'ಗಳನ್ನು ಗುರುತಿಸಬಹುದು. (ವಾಚ್ಯ ಮತ್ತು ವ್ಯಂಗ್ಯಾರ್ಥಗಳ ರೂಪದಲ್ಲಿ)

ಭೂಭಾರೋದ್ವಹನಾಯ ಶೇಷ ಶಿರಸಾಂ ಸಾರ್ಥೇನ ಸಂನಹ್ಯತೇ
ವಿಶ್ವಸ್ಯ ಸ್ಥಿತಯೇ ಸ್ವಯಂ ಸ ಭಗವಾನ್ ಜಾಗರ್ತಿ ದೇವೋ ಹರಿಃ|
ಅದ್ಯಾಪ್ಯತ್ರ ಚ ನಾಭಿಮಾನಮಸಮಂ ರಾಜಂಸ್ತ್ವಯಾ ತನ್ವತಾ
ವಿಶ್ರಾಂತಿಃ ಕ್ಷಣ ಮೇಕಮೇವ ನ ತಯೋರ್ಜಾತೇತಿ ಕೋಽಯಂ ಕ್ರಮಃ [೧೦೧]

ಭೂಮಿಯ ಭಾರವ ಹೊರಲು ಸಾವಿರ ಹೆಡೆಗಳ
ಶೇಷನು ಕೂಡಾ ತಿಣುಕುತಿಹನು ಈಗಲೂ
ಲೋಕವ ಪಾಲಿಸೆ ಸ್ವಯಂ ಶ್ರೀಹರಿಯು
ಎಚ್ಚೆತ್ತಿರುವನು ಈಗಲೂ
ನೀಗೈದಿಹುದಾದರೊ ಏತಕು ಎಣಿಕೆಗೆ ಸಿಗದು
ಅದರಿಂದಭಿಮಾನಕೆ ಎಡೆಯಿಲ್ಲ ಪ್ರಭೂ
ಕ್ಷಣಕಾದರು ವಿಶ್ರಾಂತಿಯು ನಿನ್ನ ಕೃತ್ಯದಿಂ-
ದವರಿಗೆ ಸಿಗದು. ಏನಿದು ನಿನ್ನೀ ಕ್ರಮವು? [೧೦೧]

ಅಥವಾ

ಇಂದೋರ್ಲಕ್ಷ್ಮ [೧೦೨] [3-48]

ವಾಚ್ಯವಾಗಿ ನಿಂದೆಯಿದ್ದು ಅದು ವ್ಯಂಗ್ಯವಾಗಿ 'ಸ್ತುತಿ'ಯಾಗಿರುವಂಥ ವಿಪರ್ಯಯ ಸಂದರ್ಭದ ಉದಾಹರಣೆಗಳಲ್ಲಿ, ಇದೇ ವ್ಯಾಜಸ್ತುತಿ ಅಲಂಕಾರವೆಂದು ಭಾವಿಸಬೇಕು - (ಇವುಗಳಲ್ಲಿರುವಂತೆ)

ಹೇ ಹೇಲಾಜಿತ [೧೦೩] (1-90)

ಹಾಗೂ

ನಾಮಾಪ್ಯಂತರೋ [೧೦೪] (1-91)

ಇನ್ನೂ ಒಂದು ಉದಾಹರಣೆಯನ್ನು ನೀಡಬಹುದು.

ದಿನಮವಸಿತಂ ವಿಶ್ರಾಂತಾಃ ಸ್ಮಸ್ತ್ವಯಾ ಮರುಕೂಪ ಹೇ
ಪರಮುಪಕೃತಂ ವಕ್ತುಂ ರೋಷಂ ಪ್ರಿಯಾ ನ ವಯಂ ಕ್ಷಮಾಃ

ಭವತು ಸುಕೃತೈರಧ್ವನ್ಯಾನಾಮಶೋಷ ಜಲೋ ಭವಾ-
ನಿಯಮಪಿ ಪುನಶ್ಛಾಯಾ ಭೂಯಾ ತವೋಪತಟಂ ಶಮೀ [೧೦೫]

(ಜಲ್ಹಣನ ಸೂಕ್ತಿಮುಕ್ತಾವಳಿ
G. O. S. Edna Baro da 1938 P -119]

ಹಗಲು ಕಳೆದುದು
ವಿಶ್ರಾಂತಿಯ ಪಡೆದೆವು ನಾವು
ನಿನ್ನ ದಯದಿಂದ !
ಓ ಮರುಸ್ಥಲದ ಕೂಪವೇ
ನಿನ್ನುಪ್ರಕೃತಿಯ ಮಹತಿಯನು
ಹೇಳಲಾರೆವು ನಾವು ನಾಚಿಕೆಯ ಭರದಿ
ದಾರಿಗರ ಭಾಗ್ಯದಿಂ ನಿನ್ನ ಜಲವದು
ಎಂದಿಗೂ ಬತ್ತದಿರಲೆಂದಾಶಿಸುವೆವು
ನಿನ್ನ ಬದಿಯಲಿ ಬೆಳೆದು ನಿಂತಿಹ ಶಮಿಯು
ನೆರಳನೆಲ್ಲರಿಗು ನೀಡಲೆಂದಾಶಿಸುವೆವು [೧೦೫]

ಇಲ್ಲಿ 'ಸ್ತುತಿ' ಶಬ್ದವು ಹಿಂದೆ ಹೇಳಿದಂತೆ, ವಿಪರೀತ ಲಕ್ಷಣೆಯ ಮೂಲಕ ವ್ಯಂಗ್ಯವಾಗಿ 'ನಿಂದೆ' ಎಂದೂ ಅರ್ಥ ಕೊಡಬಹುದು.

ಈ ರೀತಿಯಲ್ಲಿ 'ವ್ಯಾಜಸ್ತುತಿ'ಯನ್ನು ವ್ಯಾಖ್ಯಾನಿಸಿ, ಅನಂತರ ಗ್ರಂಥ ಕರ್ತನು, ಉತ್ಪ್ರೇಕ್ಷಾಲಂಕಾರವನ್ನು ಚರ್ಚೆಗೆ ತೆಗೆದುಕೊಳ್ಳುತ್ತಾನೆ. ಕಾರಣ ಅದು ಪ್ರಾರಂಭ ಹಾಗೂ ಮುಕ್ತಾಯಗಳಲ್ಲಿ ಉಪಮೆಯನ್ನು ಅತಿ ಸಮೀಪವಾಗಿ ಹೋಲುತ್ತ ಅದಕ್ಕೆ ಸಮನಾಗಿದೆ.

ಸಂಭಾವನಾನುಮಾನೇನ ಸಾದೃಶ್ಯೇನೋಭಯೇನ ವಾ|
ನಿರ್ವರ್ಣ್ಯಾತಿಶಯೋದ್ರೇಕಪ್ರತಿಪಾದನ ವಾಂಛಯಾ [29]

ವಾಚ್ಯವಾಚಕ ಸಾಮರ್ಥ್ಯಾಕ್ಷಿಪ್ತ ಸ್ವಾರ್ಥೈರಿವಾದಿಭಿಃ|
ತದಿವೇತಿ ತದೇವೇತಿ ವಾದಿಭಿರ್ವಾಚಕಂ ವಿನಾ [30]

ಸಮುಲ್ಲಿಖಿತ ವಾಕ್ಯಾರ್ಥ ವ್ಯತಿರಿಕ್ತಾರ್ಥ ಯೋಜನಮ್
ಉತ್ಪ್ರೇಕ್ಷಾ, (ಕಾವ್ಯ ತತ್ತ್ವಜ್ಞೈರಲಂಕರಣಮುಚ್ಯತೇ) [31]

ಸಂಭಾವನಾರೂಪದ ಅನುಮಾನ(ಕಲ್ಪನೆ)ದಿಂದಾಗಲಿ, ಅಥವಾ ಸಾದೃಶ್ಯದಿಂದಾಗಲಿ, ಅಥವಾ ಇವೆರಡರಿಂದಾಗಲಿ, ವರ್ಣನೀಯ ವಸ್ತುವಿನ ಅತಿಶಯ ಸ್ವರೂಪವನ್ನು ಪ್ರತಿಪಾದಿಸುವ ಇಚ್ಛೆಯಿಂದ [29]

'ಇವ ಇತ್ಯಾದಿ ದ್ಯೋತಕ ಶಬ್ದಗಳನ್ನು ಬಳಸಿದಾಗ ಅಥವಾ ಅದರ ಹಾಗೆ (ತದಿವ) ಅಥವಾ 'ಅದೇ' (ತದೇವ) ಎಂಬ ರೂಪವನ್ನು ತಾಳುವ ಕೆಲವು ವಾಚ್ಯ (ಅರ್ಥ) ವಾಚಕ (ಶಬ್ದ)ಗಳನ್ನು ಅವುಗಳ ಸಂದರ್ಭಗಳಿಂದ ತಾನಾಗಿಯೇ ಪ್ರತೀಯಮಾನವಾಗುವ ರೀತಿಯಲ್ಲಿ

(ಧ್ವನಿತವಾಗು) ಅವನ್ನು ಬಳಸಿದಾಗ[30]

ಮತ್ತು ಆ ರೀತಿಯಲ್ಲಿ ಚೆನ್ನಾಗಿ ಗ್ರಹಿಸಲಾದ ವರ್ಣಿತ ವಸ್ತು ಮತ್ತು ಅದಕ್ಕಿಂತ ಬೇರೆಯದೇ ಆದ ಅದರ ಅರ್ಥಯೋಜನೆ - ಇವೆರಡರ ನಡುವೆ ಅನ್ಯೋನ್ಯತೆ ಇದ್ದಾಗ ಉತ್ಪ್ರೇಕ್ಷಾಲಂಕಾರವಾಗುತ್ತದೆ [31]

[ಸ್ವಾಭಾವಿಕವಾದ ರೀತಿಯಲ್ಲಿ ಪ್ರಸ್ತಾಪಿತವಾದ ಪದಸಮುದಾಯಗಳಿಂದ ಅಭಿಧೇಯವಾದ ವಸ್ತು ಮತ್ತು ಅದಕ್ಕಿಂತ ಭಿನ್ನವಾದ ಅರ್ಥಯೋಜನೆ ಇದ್ದಾಗ, ಉತ್ಪ್ರೇಕ್ಷಾಲಂಕಾರವೆನಿಸುತ್ತದೆ]

ಇದರ ಕೊನೆಯ ಭಾಗದಲ್ಲಿ ಮೇಲಿನವುಗಳ ತಿರುಳಿದೆ. ಚೆನ್ನಾಗಿ ವರ್ಣಿತವಾದ ವಸ್ತು ಮತ್ತು ಅದಕ್ಕಿಂತ ಭಿನ್ನವಾದ (ವ್ಯತಿರಿಕ್ತವಾದ) ಅದರ ವಾಕ್ಯಾರ್ಥ - ಇವೆರಡರ ನಡುವಿನ ಸಮನ್ವಯವೇ ಉತ್ಪ್ರೇಕ್ಷೆ. ಸಮುಲ್ಲಿಖಿತ" ಎಂಬ ವಿಶೇಷಣವು, ಸ್ವಾಭಾವಿಕವಾದ ರೀತಿಯಲ್ಲಿ ವರ್ಣಿಸಬೇಕೆಂದು ಕವಿ ಉದ್ದೇಶಿಸಿರುವ ವಸ್ತುವಿಗೆ ಅನ್ವಯಿಸುತ್ತದೆ. ಪ್ರಸ್ತುತ ವರ್ಣನೀಯ ವಸ್ತುವೆಂದರೆ, ಪದ ಸಮುದಾಯದಿಂದ ರಚಿತವಾದ, ಇಡೀ ವಾಕ್ಯದಿಂದ ಹೊರಡುವ ತಾತ್ಪರ್ಯವೇನಿದೆ ಅದು. ಬೇರೊಂದು ವಾಕ್ಯದಿಂದ ಹೊರಡುವ ಇದಕ್ಕಿಂತ ಭಿನ್ನವಾದ ವಾಕ್ಯಾರ್ಥ ಅಥವಾ ತಾತ್ಪರ್ಯದೊಂದಿಗೆ ಇದರ ಸಮನ್ವಯ ಮಾಡುತ್ತಾನೆ ಕವಿ. ಉತ್ಪ್ರೇಕ್ಷಾಲಂಕಾರವೆಂದರೆ ಇದೇ. ಉತ್ಪ್ರೇಕ್ಷೆ ಮಾಡುವ ಕವಿ ಕರ್ಮವನ್ನೇ ಉತ್ಪ್ರೇಕ್ಷಾಲಂಕಾರ ಎಂದು ಹೇಳಲಾಗಿದೆ (ಉತ್ಪ್ರೇಕ್ಷೆ ಮಾಡುವುದು ಯಾವುದೋ ಅದು ಉತ್ಪ್ರೇಕ್ಷೆ) ಯಾವುದರ ಮೂಲಕ (ಉಪಕರಣ) ಇದನ್ನು ಸಾಧಿಸಲಾಗುತ್ತದೆ? ಎಂದರೆ ಮೊದಲನೆಯ ಶ್ಲೋಕದಲ್ಲಿ (29) ಹೇಳಲಾದ ಸಂಭಾವನಾ ರೂಪದ ಅನುಮಾನದ (ಕಲ್ಪನೆ) ಮೂಲಕ. ಕಲ್ಪಿತ ವಸ್ತುವಿಗೆ ಸಂಬಂಧಿಸಿದಂತೆ ಮಾಡಲಾಗುವ ಊಹನೆ ಅಥವಾ ಕಲ್ಪನೆಯ ಕುರಿತು ಪ್ರಸ್ತಾಪಿಸಲಾಗುತ್ತಿದೆ. ವರ್ಣಿತ ವಸ್ತುವನ್ನು, ಅದಕ್ಕಿಂತ ವಿಭಿನ್ನವಾದದ್ದೊಂದನ್ನಾಗಿ- ಅವೆರಡರ ಕಾರ್ಯ ಒಂದೇ ಆದರೂ- ಪರಿವರ್ತಿಸುವ ಪ್ರಕ್ರಿಯೆಯನ್ನು ಅವಶ್ಯಕವಾಗಿ ಒಳಗೊಂಡಿದೆ.

ಉತ್ಪ್ರೇಕ್ಷೆ ಸಾಧ್ಯವಾಗಬಹುದಾದ ಸಾದೃಶ್ಯವೇ ಮೊದಲಾದ ಇತರೆ ಮಾರ್ಗಗಳೂ ಉಂಟೆಂದು ಗ್ರಂಥ ಕರ್ತೃ ಹೇಳುತ್ತಾನೆ. ಮೂಲತಃ ವರ್ಣಿಸಲಾದ ವಸ್ತುವಿಗೂ ಅದರೊಂದಿಗೆ ಸಾದೃಶ್ಯ ಹೊಂದಿರುವ ಇನ್ನೊಂದು ವಸ್ತುವಿಗೂ ಇರುವ ಸಾಮ್ಯವನ್ನೂ ಉತ್ಪ್ರೇಕ್ಷೆಯೆಂದೇ ಪರಿಗಣಿಸಬೇಕು.

ಸಾದೃಶ್ಯವು ಎರಡು ವಿಧ : (1) ವಾಸ್ತವಿಕ ಮತ್ತು (2) ಕಾಲ್ಪನಿಕ. ಮೊದಲ ಪ್ರಕಾರವಾದ ವಾಸ್ತವಿಕ ಸಾದೃಶ್ಯವು ಉಪಮಾದಿ ಅಲಂಕಾರಗಳಲ್ಲಿ ಕಂಡು ಬರುತ್ತದೆ. ಆದರೆ ಉತ್ಪ್ರೇಕ್ಷೆಗೆ ಆಧಾರವಾದ್ದು ಎರಡನೇ ವಿಧವಾದ ಕಾಲ್ಪನಿಕ ಸಾದೃಶ್ಯವೇ. ಕಾರಣ, ಅದು ಅತಿಶಯವಾದ ಪ್ರತಿಮಾ ವಿಧಾನವನ್ನೊಳಗೊಂಡಿದೆಯಾಗಿ. ಉಪಮೆಯು ಉಭಯಾಶ್ರಿತ. ಅರ್ಥಾತ್ ಎರಡು ವಸ್ತುಗಳಿಲ್ಲದೆ ಉಪಮೆ ಸಾಧ್ಯವಾಗುವುದಿಲ್ಲವಾದ್ದರಿಂದ ಹಾಗೂ ಕವಿಯ ಕಾವ್ಯನಿರ್ಮಾಣ

ಸಂದರ್ಭದಲ್ಲಿ, ಪ್ರಸ್ತುತ ವರ್ಣನೀಯ ವಸ್ತುವಿಗಿಂತ ವಿಭಿನ್ನವಾದ ಇನ್ನೊಂದು ವಸ್ತುವೊಂದನ್ನು ನಾವು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲವಾದ್ದರಿಂದ. ಅಲ್ಲದೆ, ಅದನ್ನೊಂದು ಗುಣ ಎಂದು ನಾವು ಪರಿಗಣಿಸಿದಲ್ಲಿ, ಇನ್ನೊಂದು ಉಪಸ್ತರವನ್ನು ಅದು ಅವಲಂಬಿಸಿದೆ ಎಂದು ನಾವು ಒಪ್ಪಬೇಕಾಗುತ್ತದೆ. ಹಾಗೂ ಅದನ್ನು ಸಕಾರಣವಾಗಿ ಸ್ವತಂತ್ರವಾಗಿ ಕಲ್ಪಿಸಿಕೊಳ್ಳಲೇ ಆರೆವು. ಅಲ್ಲದೆ ಅದರ ಉಪಸ್ತರವಾಗಿ ಇನ್ನೂ ಒಂದನ್ನು ನಾವು ಕಲ್ಪಿಸಿಕೊಳ್ಳಬೇಕಾಗುತ್ತದೆ. ಹೀಗೆ ಅದಕ್ಕೆ ಕೊನೆಯೇ ಇರುವುದಿಲ್ಲ ಮತ್ತು ಯಾವುದೇ ಒಂದು ಪದಾರ್ಥಕ್ಕೂ ಅದನ್ನು ಸೀಮಿತಗೊಳಿಸಲಾಗುವುದಿಲ್ಲ. ಅಲ್ಲದೆ ಆ ಗುಣದೊಂದಿಗೆ ಸಮನ್ವಯ ಮಾಡಲೇನೂ ಇಲ್ಲವೆಂದಾದರೆ ಆ ಗುಣವನ್ನು ಊಹಿಸಲಾಗುವುದಿಲ್ಲವೆಂದೇ ಅರ್ಥ. ಆದ್ದರಿಂದ ಸಹೃದಯರು ತಮ್ಮ ಅನುಭವವನ್ನೇ ಆಧಾರವಾಗಿಟ್ಟುಕೊಳ್ಳಬೇಕು. ಹಾಗೂ ಪ್ರಸ್ತಾಪಿಸಲಾಗು ತ್ತಿರುವ ವಾಸ್ತವ ಸಾದೃಶ್ಯಕ್ಕೆ ಸದೃಶವಾದ ಧರ್ಮವುಳ್ಳುದನ್ನು ಕಾವ್ಯಾತ್ಮಕವಾಗಿ ಕಲ್ಪಿಸಿಕೊಳ್ಳ ಬಹುದೆಂದು ಒಪ್ಪಬೇಕು. ಹಾಗಾಗಿ ಇಲ್ಲಿ ಉದ್ದಿಷ್ಟವಾದ ಸಾದೃಶ್ಯವೆಂದರೆ ಕಾಲ್ಪನಿಕ ಸಾದೃಶ್ಯ ದೊಂದಿಗೆ ಸಾಮ್ಯವುಳ್ಳುದೇ ಹೊರತು ವಾಸ್ತವ ಸಾದೃಶ್ಯದೊಂದಿಗೆ ಅಲ್ಲ.

"ಉಭಯೇನವಾ" (ಅಥವಾ ಇವೆರಡರಿಂದಲಾಗಲಿ') ಎಂಬ ಮಾತುಗಳ ಮೂಲಕ, ಈಗಾಗಲೇ ಪ್ರಸ್ತಾಪಿಸಲಾಗಿರುವ ಎರಡರ ಜೊತೆಗೆ, ಲೇಖಕನು ಮೂರನೇ ಸಾಧ್ಯತೆಯನ್ನು ಪ್ರಸ್ತಾಪಿಸುತ್ತಿದ್ದಾನೆ. ನಿಜ ಹೇಳಬೇಕೆಂದರೆ ಇದು ಅವಾಸ್ತವ. ಆದರೂ ಪ್ರೌಢಿವಾದವಾಗಿ ಇದನ್ನು ಇಲ್ಲಿ ಮಂಡಿಸಲಾಗಿದೆ. ವಾಸ್ತವಿಕ ಸಾದೃಶ್ಯ (ಸಂಭಾವನಾಸಾದೃಶ್ಯ) ಮತ್ತು ಕಲ್ಪಿತ ಸಾದೃಶ್ಯ (ಅನುಮಾನ)ಗಳೆರಡೂ ಒಂದರಲ್ಲೊಂದು ಮಿಳಿತವಾಗಿ, ಪ್ರಸ್ತುತ ವರ್ಣನೀಯ ವಸ್ತುವಿಗಿಂತ ವಿಭಿನ್ನವಾಗಿರುವ ವಸ್ತುವೊಂದನ್ನು ನೀಡಿದಾಗ, ಅದನ್ನು ಉತ್ಪ್ರೇಕ್ಷೆ ಎಂದು ಪರಿಗಣಿಸಬೇಕು. "ವರ್ಣನೀಯ ವಸ್ತುವಿನ ಅತಿಶಯ ಸ್ವರೂಪವನ್ನು ಪ್ರತಿಪಾದಿಸುವ ಇಚ್ಛೆ" ಎಂಬ ಮಾತಿನಲ್ಲಿ ಈ ಮೂರನೇ ವಿಧವಾದ ಉತ್ಪ್ರೇಕ್ಷೆಯನ್ನು ಅವಲಂಬಿಸುವ ಉದ್ದೇಶವನ್ನು ಸ್ಪಷ್ಟವಾಗಿ ಹೇಳಲಾಗಿದೆ. ಕವಿಯು ತಾನು ವರ್ಣಿಸಬೇಕೆಂದಿರುವ ವಸ್ತುವನ್ನು ಉತ್ಕರ್ಷಸ್ಥಿತಿಗೆ ಕೊಂಡೊಯ್ಯಲು ಯತ್ನಿಸುತ್ತಾನೆ "ಹೇಗೆ?" ಅದರ ಹಾಗೆ (ತದಿವ) ಅಥವಾ ಅದೇ (ತದೇವ) ಎಂಬ ಎರಡು ರೀತಿಯಲ್ಲಿ. "ತದಿವ" ಎಂಬುದು ವರ್ಣಿತ ವಸ್ತುವು ಕಲ್ಪಿತ ವಸ್ತುವಿನಂತಿದೆ ಎಂಬುದನ್ನು ಸೂಚಿಸುತ್ತದೆ. ವರ್ಣಿತ ವಸ್ತುವಿನೊಂದಿಗೆ ಅದಕ್ಕಿರುವ ಸಾದೃಶ್ಯಕ್ಕೆ ಒತ್ತುಕೊಟ್ಟು, ವರ್ಣಿತ ವಸ್ತುವಿನ (ಪ್ರಸ್ತುತ) ಉತ್ಕೃಷ್ಟ ಸ್ವರೂಪವನ್ನು ಅಭಿವ್ಯಕ್ತಿಸಲಾಗುತ್ತದೆ 'ತದೇವ' (ಅದೇ ಆಗಿದೆ) ಎಂಬುದು ಆ ಸದೃಶವಾದ ವಸ್ತುವೇ ವರ್ಣಿತ ವಸ್ತುವಿನಂತಿದೆ ಎಂಬುದನ್ನು ಸೂಚಿಸುತ್ತದೆ (ಅಪ್ರಸ್ತುತವೇ ಪ್ರಸ್ತುತ). ಕವಿಯ ಉದ್ದಿಷ್ಟದಂತೆ, ಅಪ್ರಸ್ತುತದ (ಇನ್ನೊಂದರ) ಸ್ವರೂಪವನ್ನು ಪ್ರಸ್ತುತದ ಮೇಲೆ ಹೀಗೆ ಆರೋಪಿಸುವುದರ ಉದ್ದೇಶ, ಪ್ರಸ್ತುತದ ಉತ್ಕರ್ಷವನ್ನು ನಿರಂತರವಾಗಿ ಪರಾಕಾಷ್ಠೆಗೆ ಕೊಂಡೊಯ್ಯುವುದು. ಉತ್ಪ್ರೇಕ್ಷದ ದ್ಯೋತಕ ಉಕ್ತಿಗಳಾವುವು? 'ಇವ' ಇತ್ಯಾದಿಗಳ ಮೂಲಕ ಉತ್ಪ್ರೇಕ್ಷೆ ವ್ಯಕ್ತವಾಗುತ್ತದೆ. ಅರ್ಥಾತ್, ಸಂದರ್ಭಾನುಸಾರವಾಗಿ ಪ್ರಯೋಗವಾಗುವ 'ಇವ' ಇತ್ಯಾದಿ ಶಬ್ದಗಳ ಮೂಲಕ ಉತ್ಪ್ರೇಕ್ಷೆ ವ್ಯಕ್ತವಾಗುತ್ತದೆ. ಇವಾದಿ

ಶಬ್ದಗಳಲ್ಲದೆ ಬೇರೊಂದು ರೀತಿಯಲ್ಲೂ ಉತ್ಪ್ರೇಕ್ಷೆ ವ್ಯಕ್ತವಾಗಬಹುದು. ವಾಚ್ಯವಾಚಕ ಸಾಮರ್ಥ್ಯದಿಂದ ಸಂದರ್ಭದಿಂದ ಪ್ರತೀಯ ಮಾನವಾಗಬಹುದು. ಹೀಗಾಗಿ ಉತ್ಪ್ರೇಕ್ಷೆಯ ಎರಡು ವಿಧ - ಪ್ರತ್ಯಕ್ಷವಾಗಿ ಅಭಿವ್ಯಕ್ತ ವಾಗುವಂಥದು - ಪರೋಕ್ಷವಾಗಿ ಪ್ರತೀಯಮಾನ ವಾಗುವಂಥದು ಅಥವಾ ಧ್ವನಿತವಾಗುವಂಥದು ಎಂದು.

ಸಂಭಾವನಾ ರೂಪದ ಅನುಮಾನ (ಕಲ್ಪನೆ)ದ ಉತ್ಪ್ರೇಕ್ಷೆಗೆ

ಆಪೀಡಲೋಭಾದುಪಕರ್ಣಮೇತ್ಯ
ಪ್ರತ್ಯಾಹಿತೋಪಾಂಶುರುತೈರ್ದ್ವಿರೇ ಫೈಃ|
ಅಭ್ಯಸ್ಯಮಾನೇವ ಮಹೀಪತೀನಾಂ
ಸಂಮೋಹ ಮಂತ್ರಂ ಮಕರಧ್ವಜೇನ [೧೦೬]

ಅವಳ ಮುಡಿಯೊಳಗಿರ್ದ ಕುಸುಮವನು
ಅರಸುತ್ತ ಭ್ರಮರಗಳು ಕಿವಿಯ ಬಳಿಸುಳಿದು
ಝೇಂಕಾರದಿಂಚರವಗೈದಿರಲು
ಮಹಿಪತಿಗಳ ಮೇಲೆ ಮೋಹನದ ಮಂತ್ರವನು ಬೀರೆ
ಮನುಮಥನು ಪ್ರೇರಿಸಿದವೋಲಿರ್ದಳು [೧೦೬]

ಕಾಲ್ಪನಿಕ ಸಾದೃಶ್ಯಕ್ಕೆ ಉದಾಹರಣೆಯಾಗಿ

ರಾಶೀಭೂತಃ ಪ್ರತಿದಿನಮಿವ ತ್ರ್ಯಂಬಕಸ್ಯಾಟ್ಟಹಾಸಃ [೧೦೭] [ಮೇಘದೂತ 1-58]

ದಿನದಿನವು ರಾಶಿ ಹಾಕಿದ ಹರನ ಅಟ್ಟಹಾಸವೆಂಬಂತೆ [1-58]

ಹಾಗೆಯೇ

ನಿರ್ಮೋಕ ಮುಕ್ತಿರಿವ ಗಗನೋರಗಸ್ಯ [೧೦೮]

"ಗಗನ ಫಣಿಬಿಟ್ಟ ಪರೆಯಂತೆ" [೧೦೮]

ಇದರ ನಂತರ ವಾಸ್ತವ ಸಾದೃಶ್ಯೋತ್ಪ್ರೇಕ್ಷೆಗೆ ಉದಾಹರಣೆಯಾಗಿ ಪ್ರಾಕೃತ ಪದ್ಯವೊಂದನ್ನು ಉದಾಹರಿಸುತ್ತಾನೆ. ಆದರೆ ಅದು ಅತ್ಯಂತ ಅಸ್ಪಷ್ಟವಾಗಿರುವುದರಿಂದ ಅದನ್ನು ಓದಲು ಸಾಧ್ಯವಾಗಿಲ್ಲ [೧೦೯]

ಉಭಯ ಉದಾಹರಣೆ [ಎರಡೂ ಸೇರಿರುವುದಕ್ಕೆ]

ತರುಣಿಯ ಮೃದು ಮಧುರ ನೋಟಗಳವು
ಹೃದಯ ವಿದಾರಕ ಜೊತೆಗೆ ಕಡುಗೆಂಪು
ಅರಿಗಳ ಅರುಣಜಲದಲಿ ಮಿಂದ
ಹರಿತ ಬಾಣಗಳ ಹಾಗೆ ಕಾಣುತಿವೆ. [೧೧೦]

ಅಥವಾ

ಣೀಸಾಸಾ ಖಣವಿರಹೇ
ಫುರಂತಿ ರಮಣೀಣಸುರಹಿಣೋ ತಸ್ಸ|
ಕಡ್ಢಿಅ ಹಿಅ ಟ್ಟಿ ಅ
ಕುಸುಮಬಾಣಮಅರಂದಲೇಸವ್ವ|| (ಪ್ರಾಕೃತ)

ನಿಃಶ್ವಾಸಾ ಕ್ಷಣವಿರಹೇ ಸ್ಫುರಂತಿ ರಮಣೀನಾಂ ಸುರಭಯಸ್ತಸ್ಯ|
ಕೃಷ್ಟ ಹೃದಯಸ್ಥಿತ ಕುಸುಮ ಬಾಣ ಮಕರಂದಲೇಶಾ ಇವ [೧೧೧]

(ಸಂ. ಛಾಯೆ)

ಅವನ ಕ್ಷಣಕಾಲದಗಲಿಕೆಯು ಕೂಡಾ
ಎಂಥ ಬಿಸಿ ಉಸಿರ ಹೊಮ್ಮಿಸಿವೆ ರಮಣಿಯರೊಳು!
ಅವರ ಹೃದಯದಲಿ ನಟ್ಟಿದ್ದ ಹೂಬಾಣಗಳ
ಮನಸಿಜನು ಕಿತ್ತಂದು ಅಲ್ಲೆ ಉಳಿದ
ಜೇನ ಹನಿಗಳ ಹಾಗೆ ಅವು ತೋರುತಿಹವು [೧೧೧]

[ಗ ಉಡವಹೋ V - 748]

ವಾಸ್ತವ ಸಾದೃಶ್ಯಕ್ಕೆ ಉದಾಹರಣೆ:

ಉತ್ಫುಲ್ಲ ಚಾರು ಕುಸುಮ ಸ್ತಬಕೇನ ನಮ್ರಾ
ಯೇಯಂ ಧುತಾ ರುಚಿರ ಚೂತಲತಾ ಮೃಗಾಕ್ಷ್ಯಾ|
ಶಂಕೇನ ವಾ ವಿರಹಿಣೀ ಮೃದು ಮರ್ದನಸ್ಯ
ಮಾರಸ್ಯ ತರ್ಜಿತ ಮಿದಂ ಪ್ರತಿ ಪುಷ್ಪಚಾಪಂ [೧೧೨]

ಅರಳಿದ ಚೆಲುವಿನ ಹೂಗೊಂಚಲ ಭಾರದೆ
ಬಾಗಿದ ಸೊಂಪಿನ ಈ ಎಳಮಾವಿನ ಬಳ್ಳಿಯನು
ಅಲುಗಾಡಿಸೆ ಈ ಹರಿಣಾಕ್ಷಿಯು ಇಂದು
ಶಂಕೆಯು ಮೂಡುತಿದೆ ಎನಗೆ
ವಿರಹಿಣಿಯರ ಬಿಗುಮಾನವ
ಮರ್ದಿಸುವ ಮದನನ ಹೂ ಬಿಲ್ಲಿನ
ಟಂಕಾರವೊ ಇದು ಎಂದು! [೧೧೨]

ವರ್ಣಿತ ವಸ್ತುವಿನ ಬದಲಿಗೆ ಬೇರೊಂದನ್ನು ಸಮರ್ಥಿಸಿದ್ದಾನೆಂಬ ಕಾರಣಕ್ಕೆ ಇದನ್ನು ವ್ಯತಿರೇಕಾಲಂಕಾರದ ಉದಾಹರಣೆ ಎಂದು ಭ್ರಾಂತಿಗೊಳಗಾಗಬಾರದು. ವ್ಯತಿರೇಕವನ್ನು ಬೆಳೆಸುವ ಮೂಲತತ್ತ್ವ ಉತ್ಪ್ರೇಕ್ಷೆಯೇ ಹೊರತು, ಉತ್ಪ್ರೇಕ್ಷೆಯನ್ನು ಬೆಳೆಸುವುದು ವ್ಯತಿರೇಕವಲ್ಲ. ಅಪಹ್ನುತಿ ಅಲಂಕಾರವನ್ನು ಕೈಗೆತ್ತಿಕೊಂಡಾಗ ಈ ಎರಡೂ ಅಲಂಕಾರಗಳಿಗಿರುವ ವ್ಯತ್ಯಾಸ ಇನ್ನಷ್ಟು ಸ್ಪಷ್ಟವಾಗುತ್ತದೆ.

ಅದರ ಹಾಗೆ ಇದು (ತದಿವ) ['ವಾ' ಅಥವಾ 'ಇವಾ' ಎಂಬ ಸೂಚಕಗಳಿಲ್ಲದೆ] ಎಂಬುದಕ್ಕೆ ಉದಾಹರಣೆ (ದ್ಯೋತಕ) ಅರ್ಥಾತ್ ಪ್ರತೀಯಮಾನ ಉತ್ಪ್ರೇಕ್ಷಾ

ಚಂದನಾಸಕ್ತ ಭುಜಗ ನಿಃಶ್ವಾಸಾನಿಲಮೂರ್ಛಿತಃ|
ಮೂರ್ಛಯತ್ಯೇಷ ಪಥಿಕಾನ್ ಮಧೌ ಮಲಯ ಮಾರುತಃ [೧೧೩]

ಶ್ರೀಗಂಧದ ತರುವನು ತಬ್ಬಿಹ
ಸರ್ಪಗಳ ನಿಃ ಶ್ವಾಸದ ಗಾಳಿಯು
ಮೂರ್ಛಿತ ಗೊಳಿಸಿರುವೀ ಮಲಯ ಮಾರುತವು
ಪಯಣಿಗರನು ಮೂರ್ಛೆಗೊಳಿಸಿಹುದೀ
ವಸಂತದೊಳು [೧೧೩] [ಧ್ವನ್ಯಾಲೋಕ. ಲೋ. ಸಾರ - 107]

ಅಥವಾ

ದೇವಿ ತ್ವನ್ಮುಖ ಪಂಕಜೇನ [೧೧೪] [ರತ್ನಾವಲಿ 1-25]

ಅಥವಾ

ತ್ವಂ ರಕ್ಷಸಾ ಭೀರು [೧೧೫] [ರಘುವಂಶ 13-24]

ಇತ್ಯಾದಿ

"ಇದು ಅದೇ" (ತದೇವ'ಕ್ಕೆ ವಾಚಕಗಳಿಲ್ಲದೆ ಉದಾಹರಣೆ)

ಏಕೈಕಂ ದಲಮುನ್ನಮಯ್ಯ [೧೧೬] [1-42] ವಕ್ರೋಕ್ತಿ

ಇನ್ನೊಂದು ಪ್ರಕಾರದ ಉತ್ಪ್ರೇಕ್ಷೆಯನ್ನು ಹೀಗೆ ವಿವರಿಸಲಾಗುವುದು

ಪ್ರತಿಭಾ ಸಾತ್ತ ಥಾಬೋದ್ಧುಃ ಸ್ವಸ್ಪಂದ ಮಹಿಮೋಚಿತಮ್|
ವಸ್ತುನೋ ನಿಷ್ಕ್ರಿಯಸ್ಯಾಪಿ ಕ್ರಿಯಾಯಾಂ ಕರ್ತೃತಾರ್ಪಣಮ್ [32]

ಕ್ರಿಯಾರಹಿತ ವಸ್ತುವಿಗೂ - ಕ್ರಿಯೆಗೆ ಸಂಬಂಧಿಸಿದಂತೆ - ವಸ್ತುವಿನ ವಿಶಿಷ್ಟ, ಸ್ವಾಭಾವಿಕ ಸೌಂದರ್ಯೋತ್ಕರ್ಷಕ್ಕನು ರೂಪವಾಗಿ - ಕಾರಣ - ಅದು ನಿರೀಕ್ಷಕನಿಗೆ ಹಾಗೆ ಕಾಣುವುದರಿಂದ- ಕರ್ತೃತ್ವವನ್ನು ಆರೋಪಿಸುವುದು ಕೂಡಾ ಉತ್ಪ್ರೇಕ್ಷಾಲಂಕಾರದ ಪ್ರಭೇದವೆನಿಸುತ್ತದೆ [32]

ಉತ್ಪ್ರೇಕ್ಷೆಯ ಇನ್ನೊಂದು ಪ್ರಭೇದವನ್ನು ಇಲ್ಲಿ ವಿವರಿಸಲಾಗುವುದು - (ಪ್ರತಿಭಾಸಾತ್- ಈ ಕಾರಿಕೆಯ ಮೂಲಕ) ಸಾಧ್ಯರೂಪದ ಕ್ರಿಯೆಗೆ ಸಂಬಂಧಿಸಿದಂತೆ ಕರ್ತೃತ್ವವನ್ನು ಆರೋಪಿಸುವುದು ಅರ್ಥಾತ್ ಸ್ವಾತಂತ್ರ್ಯದ ಆರೋಪ. [ಉತ್ಪ್ರೇಕ್ಷೆ ಕಾಲ್ಪನಿಕವಾಗಿ] ಯಾವುದಕ್ಕೆ ಕರ್ತೃತ್ವವನ್ನು ಆರೋಪಿಸುವುದು - ನಿಷ್ಕ್ರಿಯ ವಸ್ತುವಿಗೆ. ಯಾವ ರೀತಿಯಲ್ಲಿ ಎಂದರೆ ವರ್ಣಿತ ವಸ್ತುವಿನ ಸ್ವಾಭಾವಿಕ ಸೌಂದರ್ಯೋತ್ಕರ್ಷಕ್ಕನುಗುಣವಾದ ರೀತಿಯಲ್ಲಿ. (ಯಾವ ಕಾರಣಕ್ಕೆ ಹೀಗೆ ಆರೋಪಿಸಬೇಕು?) - ಅನುಭವಿಕನ ಮನಸ್ಸಿಗೆ ಆ ರೀತಿಯಲ್ಲಿ ಪ್ರತೀತವಾಗುವ ಕಾರಣದಿಂದ. ಈ ಮುಂಚೆ ಹೇಳಲಾದ ಉತ್ಪ್ರೇಕ್ಷೆಯ ಇತರೆ ನಿಯಮಗಳು- ಕವಿಯು ವರ್ಣನೀಯ

ವಸ್ತುವಿನ ಸ್ವಭಾವಾತಿಶಯವನ್ನು ಪ್ರತಿಪಾದಿಸಲಿಚ್ಛಿಸಿದಾಗ, ಹಾಗೂ 'ಇವ' ಮೊದಲಾದ ದ್ಯೋತಕ ಶಬ್ದಗಳನ್ನು ಬಳಕೆ ಮಾಡಿಯೋ ಅಥವಾ ಅವು ಹಾಗೆಯೆ ತನಗೆ ತಾನೇ ಪ್ರತೀಯಮಾನವಾಗಲು ಬಿಡುತ್ತ ಹಾಗೂ 'ತದಿವ' ಅಥವಾ ತದೇವ ಎಂಬ ರೂಪಗಳನ್ನು ತಾಳುತ್ತದೆ- ಎಂಬ ಈ ಎಲ್ಲ ನಿಯಮಗಳು ಇಲ್ಲಿಗೂ ಅನ್ವಯಿಸುತ್ತವೆ.

ಅದಕ್ಕೆ ಉದಾಹರಣೆ

ಲಿಂಪತೀವ ತಮೋಽಂಗಾನಿ ವರ್ಷತೀವಾಂಜನಂ ನಭಃ
ಇತೀದಮಪಿ ಭೂಯಿಷ್ಠಮುತ್ಪ್ರೇಕ್ಷಾಲಕ್ಷಣಾನ್ವಿತಮ್ [೧೧೭]

[ಕಾವ್ಯಾದರ್ಶ 1-226]

ಕತ್ತಲೆಯು ಅವಯವಗಳನ್ನೆಲ್ಲ ಲೇಪಿಸುವಂತಿದೆ
ಆಕಾಶವು ಕಾಡಿಗೆಯ ಮಳೆಯನ್ನು ಸುರಿಸುವಂತಿದೆ [೧೧೭] [K. K. 83]

ಅಥವಾ

ತರಂತೀವಾಂಗಾನಿ ಸ್ಖಲದಮಲಲಾವಣ್ಯ ಜಲಧೌ [೧೧೮]

ಸದೂಕ್ತಿಕರ್ಣಾಮೃತ

ಅಥವಾ

ವಿಯತಿ ವಿಸರ್ಪತೀವ ಕುಮುದೇಷು ಬಹುಭವತೀವ ಯೋಷಿತಾಮ್
ಪ್ರತಿಫಲತೀವ ಜರಠ ಶರಕಾಂಡ ಪಾಂಡುಷು ಗಂಡಭಿತ್ತಿಷು|
ಅಂಭಸಿ ವಿಕಸತೀವ ಹಸತೀವ ಸುಧಾಧವಲೇಷು ಧಾಮಸು
ಧ್ವಜಪಟಪಲ್ಲವೇಷು ಲಲತೀವ ಸಮೀರಚಲೇಷು ಚಂದ್ರಿಕಾ [೧೧೯]

ಗಗನವನೆಲ್ಲ ಆವರಿಸುತಿದೆಯೆಂಬಂತೆ
ನೈದಿಲೆಗಳೆಡೆಗಳೊಳು ಉಬ್ಬುತಿದೆಯೆಂಬಂತೆ
ಮುದಿಯಾದ ಬಿಳಿ ಜೊಂಡಕಾಂಡದ ಹಾಗೆ
ಬೆಳ್ಳಗೆ ಹೊಳೆವ ಲಲನೆಯರ ಕೆನ್ನೆಯೊಳು
ಪ್ರತಿಫಲಿಸುತಿದೆ ಎಂಬಂತೆ
ಜಲದೊಳು ವಿಕಸಿತವಾಗುತಿರುವಂತೆ
ಸುಣ್ಣ ಬಳಿದ ಮನೆಗಳ ಮಹಲುಗಳಲಿ
ನಗುತಿದೆಯೊ ಎಂಬಂತೆ
ಗಾಳಿಗೊಲೆದಾಡುತಿರುವ ಕಿರು ಬಾವುಟಗಳಲಿ
ನಲಿದಾಡುತಿರುವಂತೆ ಚಂದ್ರಿಕೆಯು ತೋರುತಿದೆ [೧೧೯]

ಉತ್ಪ್ರೇಕ್ಷಾ ವಾಚಕಗಳಾದ 'ಇವಾ'ದಿಗಳನ್ನು ದಂಡಿಯು ಸಂಪೂರ್ಣವಾಗಿ ಗಣನೆಗೆ ತೆಗೆದುಕೊಂಡು ವಿವರಿಸಿರುವುದರಿಂದ ಅದನ್ನು ಮತ್ತೆ ಪುನರಾವರ್ತಿಸ ಹೋಗುವುದಿಲ್ಲ.

ಈ ರೀತಿಯ ಉತ್ಪ್ರೇಕ್ಷೆಯು ವರ್ಣನೀಯ ವಸ್ತುವಿನ ಅತಿಶಯ ಸ್ವಭಾವಕ್ಕನುಗುಣವಾಗಿ ಆಹ್ಲಾದ ಪೂರ್ಣವಾದ ವಿಶಿಷ್ಟ ಕಾವ್ಯ ಸೌಂದರ್ಯವನ್ನುಂಟು ಮಾಡುತ್ತದೆ. ಈ ಅಲಂಕಾರವು ಕವಿ ಪ್ರತಿಭೆಯ ವಿಭಿನ್ನ ಸೃಷ್ಟಿಗಳೆನಿಸಿದ ನಾನಾ ಅಲಂಕಾರಗಳ ಪ್ರಾಣ ಸ್ವರೂಪಿಯಾದ್ದು ಹಾಗೂ ಅವುಗಳ ತಳದಲ್ಲಿದ್ದುಕೊಂಡು ಆ ಎಲ್ಲ ಅಲಂಕಾರಗಳ ವೈವಿಧ್ಯಕ್ಕೆ ಅದೇ ಮೂಲ ಎನಿಸುತ್ತದೆ. ಅಲಂಕಾರಗಳ ವೈವಿಧ್ಯಪೂರ್ಣವಾದ ಕಾವ್ಯ ಸೌಂದರ್ಯಕ್ಕೆ ಅಧಿಷ್ಠಾತೃ ರೂಪದಲ್ಲಿರುವುದು ಕವಿಯ ಸೃಜನಶೀಲ ಪ್ರತಿಭೆಯೇ.

ಅಪಹೃತ್ಯಾಲಂಕಾರ ಲಾವಣ್ಯಾತಿಶಯಶ್ರಿಯಃ|
ಉತ್ಪ್ರೇಕ್ಷಾ ಪ್ರಥಮೋಲ್ಲೇಖ ಜೀವಿತತ್ವೇನ ಜೃಂಭತೇ [೧೨೦]

ಇದು ಅಂತರ ಶ್ಲೋಕ

ಇತರೆ ಅಲಂಕಾರಗಳ ಸೌಂದರ್ಯ ಮತ್ತು ಅತಿಶಯ ಸಂಪತ್ತನ್ನೆಲ್ಲ ತಾನೇ ಸೂರೆಗೊಂಡು ಉತ್ಪ್ರೇಕ್ಷೆಯು ಕವಿಪ್ರತಿಭೆಯ ಪ್ರಾಣಸ್ವರೂಪವಾಗಿ ವಿಜೃಂಭಿಸುತ್ತದೆ [೧೨೦]

ಈ ರೀತಿಯಲ್ಲಿ ಉತ್ಪ್ರೇಕ್ಷಾಲಂಕಾರವನ್ನು ವಿವೇಚಿಸಿದ ನಂತರ, ಅದರೊಂದಿಗೆ ಅತಿಶಯವಾದ ರೂಪ ಸಾದೃಶ್ಯವನ್ನು ಹೊಂದಿರುವ ಕಾರಣ, ಅತಿಶಯೋಕ್ತಿ ಅಲಂಕಾರವನ್ನು ಪ್ರಸ್ತುತ ಪಡಿಸಲಾಗುವುದು.

ಉಚ್ಯತೇಽ ತಿಶಯೋಕ್ತಿಃ ಸಾ ಸರ್ವಾಲಂಕಾರ ಜೀವಿತಮ್|
ಯಸ್ಯಾಮತಿಶಯಃ ಕೋಽ ಪಿ ವಿಚ್ಛಿತ್ತ್ಯಾ ಪ್ರತಿಪಾದ್ಯತೇ
ವರ್ಣನೀಯಸ್ಯಧರ್ಮಾಣಾಂ ತದ್ವಿದಾಹ್ಲಾದದಾಯಿನಾಮ್ [33]

ಎಲ್ಲ ಅಲಂಕಾರಗಳ ಜೀವಿತ ಸರ್ವಸ್ವವೆನಿಸಿರುವುದೇ ಅತಿಶಯೋಕ್ತಿ. ಸಹೃದಯರಿಗೆ ಆಹ್ಲಾದವನ್ನುಂಟು ಮಾಡುವ, ವರ್ಣನೀಯ ಪದಾರ್ಥಗಳ ಸೌಂದರ್ಯ ಧರ್ಮಗಳನ್ನು ಎಲ್ಲಿ ವೈದಗ್ಧ್ಯ ಪೂರ್ಣವಾದ ರೀತಿಯಲ್ಲಿ ಪ್ರತಿಪಾದಿಸಲಾಗುವುದೋ ಅದೇ ಅತಿಶಯೋಕ್ತಿ [33]

ಯಾವುದರಲ್ಲಿ ಪ್ರಸಿದ್ಧವಾದ ಲೋಕರೂಢಿಯ ವ್ಯವಹಾರಗಳ ಅಭಿವ್ಯಕ್ತಿಯ ರೀತಿಯನ್ನು ಸಂಪೂರ್ಣವಾಗಿ ಮೀರಿದ, ಲೋಕೋತ್ತರವಾದೊಂದು ಪರಾಕಾಷ್ಠೆಯನ್ನು ಸಾಧಿಸಲಾಗುತ್ತದೋ ಅದು ಅತಿಶಯೋಕ್ತಿ ಎನಿಸುತ್ತದೆ. ವೈದಗ್ಧ್ಯ ಪೂರ್ಣ ಭಂಗಿಯ ಮೂಲಕ ಅದನ್ನು ಸಾಧಿಸಲಾಗುವುದು.

ವೈದಗ್ಧ್ಯಪೂರ್ಣ ಭಂಗಿ ಯಾವುದರದ್ದು? ಎಂದರೆ ವರ್ಣನೀಯ ವಸ್ತುವಿನ ಸ್ವಾಭಾವಿಕ ಗುಣ ಧರ್ಮಗಳದ್ದು. ಎಂಥ ಗುಣ ಧರ್ಮಗಳು? ಎಂದರೆ ಸಹೃದಯರಿಗೆ ಆಹ್ಲಾದವನ್ನುಂಟು ಮಾಡುವ, ವಸ್ತುವಿನ ಸ್ವಾಭಾವಿಕ ಗುಣಧರ್ಮಗಳ ಅತಿಶಯತೆ. ವಸ್ತುವಿನ ಸ್ವಭಾವ ಸಹಜವಾದ ಗುಣಧರ್ಮಗಳ ಅತಿಶಯೋಕ್ತಿ ಮಾತ್ರವಾದ್ದರಿಂದ ಕಾವ್ಯಾಲಂಕಾರಗಳ ಬಗ್ಗೆ ಬರೆದ ಎಲ್ಲ ಲೇಖಕರೂ ಅತಿಶಯೋಕ್ತಿ ಅಲಂಕಾರದ ವಿಚಾರದಲ್ಲಿ ಅತಿಶಯವಾದ ಆದರವುಳ್ಳವರಾಗಿದ್ದಾರೆ.

ಹಾಗಾಗಿಯೇ ಅತಿಶಯೋಕ್ತಿಯು ಎಲ್ಲ ಕಾವ್ಯಕ್ಕೆ ಅತ್ಯಗತ್ಯವೆನಿಸಿದೆ.

ಏವಂ ವಿಧ ಸ್ವರೂಪಾಸ್ತೇ ಯಥೋಲ್ಲಾಸಿತ ಕಾಂತಯಃ।
ರಸಸ್ವಭಾವಾಲಂಕಾರಾಃ ಪರಾಂ ಪುಷ್ಣಂತಿ ವಕ್ರತಾಮ್[34]

ಅತಿಶಯೋಕ್ತಿಯ ಅಂಶದಿಂದಾಗಿ, ರಸಗಳು, ಸ್ವಭಾವಗಳು (ಪ್ರಾಕೃತಿಕ ವಸ್ತುಗಳು) ಹಾಗೂ ಅಲಂಕಾರಗಳ ಕಾಂತಿಯು ಉತ್ಕೃಷ್ಟವಾಗಿ ಉದ್ದೀಪ್ತಗೊಂಡಾಗ, ಅವುಗಳು ಅಲೌಕಿಕವಾದ ಕಾವ್ಯ ಜೀವಿತವೆನಿಸಿದ ವಕ್ರತೆಯ ಪರಾಕಾಷ್ಠೆಯನ್ನು ತಲುಪುತ್ತವೆ [34]

ವಕ್ರತೆಯು ಎಲ್ಲ ಕಾವ್ಯದ ಪ್ರಾಣಸ್ವರೂಪವೇ ಆಗಿದೆ. ಕಾವ್ಯವಸ್ತುವಿನ ಮೂರು ಪ್ರಕಾರಗಳಾದ ರಸ ಸ್ವಭಾವ ಮತ್ತು ಅಲಂಕಾರಗಳಿಗೆ ಅತಿಶಯೋಕ್ತಿಯ ಸ್ಪರ್ಶವಾಯಿತೆಂದರೆ, ಆಗ ವಕ್ರತೆ, ಅತ್ಯುತ್ಕೃಷ್ಟವಾಗಿ ಪ್ರಕಾಶಕ್ಕೆ ಬರುತ್ತದೆ.

ಚಂದ್ರಕಾಂತಮಣಿದುರ್ದಿನೇ (ಸದ್ಮನಿ?) ತ್ಯಜದ್
ರಾಜಹಂಸಮನುಬಧ್ನತೀ ಗಿರಾ।
ಜ್ಯೋತ್ಸ್ನಯಾ ಜನಿತ ಸಂಶಯಾ ಪುನಃ
ವಕ್ರದೂತಿರಿವ ರೌತಿ ಸಾರಸೀ [೧೨೧]*

ಚಂದ್ರಕಾಂತದ ಮಣಿಯ ಮಾಡದಲಿ
ರಾಜ ಹಂಸವನಗಲಿ ಪರಿತಪಿಸುತೆ
ಮತ್ತದರ ದನಿಯಿಂದ ಗುರುತಿಸಿ
ಸೇರಬೇಕೆನುವಷ್ಟರಲಿ
ಚಂದ್ರಿಕೆಯ ಕಾರಣದಿ ಮತ್ತೆ ಸಂಶಯವುದಿಸಿ,
ವಕ್ರದೂತಿಯ ಹಾಗೆ ಹಂಸಿ ರೋದಿಸುವುದು [೧೨೧]

ಅಥವಾ

ಖಪುಷ್ಪಚ್ಛವಿಹಾರಿಣ್ಯಾ ಚಂದ್ರಭಾಸಾ ತಿರೋಹಿತಾಃ।
ಅನ್ವಮೀಯಂತ ಭೃಂಗಾಲಿವಾಚಾ ಸಪ್ತಚ್ಛದದ್ರುಮಾಃ [೧೨೨]

ಆಕಾಶ ಕುಸುಮದ ಕಾಂತಿಯ ಮೀರಿಪ
ಬೆಳುದಿಂಗಳಲಿ ಮರೆಯಾಗಿರ್ದ
ಏಳೆಲೆ ಬಾಳೆಯ ಗಿಡಗಳನು
ದುಂಬಿಯ ಗುಂಜಾರವದಲಿ
ಮಾತ್ರವೆ ಗುರುತಿಸಲಾದುದು [೧೨೨][1]

---

* ಇದರ ಪಾಠ ಕೆಟ್ಟಿದೆ ಎಂದು ಡಾ. ಕೆ. ಕೃಷ್ಣಮೂರ್ತಿಯವರು ಹೇಳುತ್ತಾರೆ

1 ಭಾಮಹನ ಕಾವ್ಯಾಲಂಕಾರ II - 82 (K.K) ದ್ವಿ. ಮು. 1961

ಇಲ್ಲಿ ವೃಕ್ಷಗಳ ಸಹಜ ಸೌಂದರ್ಯವನ್ನು ಅತಿಶಯದ ಪರಾಕಾಷ್ಠೆಗೆ ಏರಿಸಲಾಗಿದೆ

ಅಥವಾ

ಯಸ್ಯ ಪ್ರಜ್ವಲತಿ ಪ್ರತಾಪ ತಪನೇ ತೇಜಸ್ವಿನಾಮಿತ್ಯಲಂ
ಲೋಕಾಲೋಕ ಧರಾಧರೇಽಪ್ಯತಿಶಯಃ ಶೀತಾಂಶು ಬಿಂಬೇ ವೃಥಾ
ತ್ರೈಲೋಕ್ಯ ಪ್ರಥಿತಾಪದಾನ ಮಹಿತೇ ಕ್ಷೋಣೀ ವಂಶೋದ್ಭವೇ
ಸೂರ್ಯಾ ಚಂದ್ರಮಸೌ ಸ್ವಯಂ ಕೃಶತರಚ್ಛಾಯಾಂ ಸಮಾರೋಹತಃ [೧೨೩]

ಅವನ ಪ್ರತಾಪ ಸೂರ್ಯನು ಪ್ರಜ್ವಲಿಸುತಿರುವಂದು
ತೇಜಸ್ವಿಗಳ ಮಾತಂತಿರಲಿ
ಮೇರುವಿನೊಳಾಗಲಿ ತಂಗದಿರೊಳನಾಗಲಿ
ಅತಿಶಯಕೆ ಎಡೆಯೆಲ್ಲಿ?
ಮೂರು ಲೋಕಗಳಲಿ ಮಾನ್ಯನಹ
ಈ ನೃಪನ ಸಿದ್ಧಿಯೆದುರು
ಸೂರ್ಯಚಂದ್ರರು ಕೂಡ ಕಾಂತಿಗುಂದಿಹರು [೧೨೩]

ಇನ್ನೊಂದು ಉದಾಹರಣೆ

ಹಿಮಾಂಬು ನಿರ್ವೃತ್ತನಿಮಜ್ಜನಾನಾಂ
ಬಾಲಾತಪ ಸ್ಪರ್ಶನ ನಿರ್ಮಲಾನಾಂ!
ಸಾವಿತ್ರಭಾಸಾ ವಿಹಿತಾಂಗರಾಗ-
ಮಂಗಂ ಕಿಮಪ್ಯಂಕುರಿತಂ ಸ್ಥಲೀನಾಮ್ [೧೨೪]

ಹಿಮ ಜಲದಲಿ ಮಿಂದು ಮಡಿಯಾಗಿ
ಎಳನೇಸರ ಹೊಂಗಿರಣದ ಹಿತಸ್ಪರ್ಶಕೆ ಹಿಗ್ಗಿ
ಅವನ ಅಂಗರಾಗದಲಿ ಕೆಂಪಾಗಿ
ವನದೇವಿಯ ಗಾತ್ರದಿ ಗುಡಿಗಟ್ಟಿತು ಪುಲಕ! [೧೨೪]

ಇಲ್ಲಿ ಮೊದಲ ಉದಾಹರಣೆಯಲ್ಲಿ (ಪ್ರತಾಪ ತಪನ) ರೂಪಕಾಲಂಕಾರವು ಕವಿಯ ಅತಿಶಯದಿಂದ ಪರಿಪುಷ್ಟಗೊಂಡು ಪ್ರಕರ್ಷ ಸ್ಥಿತಿಯನ್ನು ಮುಟ್ಟಿದೆ. ಮೊದಲನೆಯದರಲ್ಲಿ ಹಾಗೂ ಎರಡನೆಯದರಲ್ಲಿ ರಸವದಲಂಕಾರವು ಪರಿಪುಷ್ಟಗೊಂಡಿರುವುದನ್ನೂ ಕಾಣಬಹುದು. ಹಿಮಶೀತಲ ಜಲದಲ್ಲಿ ಮಿಂದು ಮಡಿಯಾಗುವ, ತಮ್ಮ ಉಡುಪನ್ನು ಸರಿಸಿ ಸೂರ್ಯಕಿರಣಗಳಿಗೆ ತಮ್ಮ ಸುಂದರ ದೇಹವನ್ನೊಡ್ಡಿಕೊಳ್ಳುವ, ರಮಣಿಯರ ಸರಸ ವ್ಯಾಪಾರವನ್ನು ವನಸ್ಥಲಗಳಿಗೆ (ವನದೇವಿಗೆ) ಆರೋಪಿಸಿರುವುದು, ವರ್ಣನೆಗೆ ಅನನ್ಯವಾದ ಸುಕುಮಾರತೆಯನ್ನು ತಂದುಕೊಟ್ಟಿದೆ.

ಉದಾ:

ಶಕ್ಯಮೋಷಧಿಪತೇರ್ನವೋದಯಾಃ
ಕರ್ಣಪೂರ ರಚನಾಕೃತೇ ತವ|
ಅಪ್ರಗಲ್ಭಯವ ಸೂಚಿ ಕೋಮಲಾ
ಛೇತ್ತುಮಗ್ರನಖ ಸಂಪುಟೈಃ ಕರಾಃ [೧೨೫]

ಎಳೆಯ ಗೋಧಿ ಪೈರಿನ ಹಾಗೆ ಚೂಪಾಗಿ
ನಳನಳಿಸುವೀ ಬಾಲಚಂದ್ರನ ನವಕಿರಣಗಳನು
ನಿನ್ನಯ ಕರ್ಣಪೂರಕೆಂದಾನು
ಕೈ ಯುಗರ ಮೊನೆಯಿಂದ ಚಿವುಟಿ ಕೊಡಬಲ್ಲೆ [೧೨೫]

(ಕು. ಸಂಭವ 8-62)

ಇಲ್ಲಿ ರಸಾವಿರ್ಭಾವದ ಸೌಂದರ್ಯಾತಿಶಯವು ಉತ್ಕೃಷ್ಟವಾಗಿ ಪ್ರಸ್ಫುಟಗೊಂಡಿದೆ. ಆಗ ತಾನೆ ಉದಿಸುತ್ತಿರುವ ಬಾಲ ಚಂದ್ರನ ಕಿರಣಗಳ ಸುಕುಮಾರ ಸೌಂದರ್ಯವನ್ನು ಕವಿ ಅತ್ಯದ್ಭುತವಾಗಿ ಅನ್ಯಾದೃಶವಾದ ರೀತಿಯಲ್ಲಿ ವರ್ಣಿಸಿದ್ದಾನೆ. ಪಾರ್ವತೀ ಪತಿಶಂಕರನು ತನ್ನ ಪ್ರಿಯೆ ಪಾರ್ವತಿಗೆ- ಶಶಾಂಕ ಕಿರಣಗಳು, ಅವಳ ಕಿವಿಗಳಿಗೆ ಆಭರಣಗಳಾದ ಕರ್ಣಪೂರಗಳಾಗುವ ಭಾಗ್ಯ ಪಡೆದು ಅವಳ ಸುಂದರ ಕಪೋಲಗಳು ಕರ್ಣಗಳು ಮತ್ತು ಅಲಕಗಳ ಸಂಸ್ಪರ್ಶನ ಸುಖವನ್ನು ಹೊಂದುವ ಮಹಾಯೋಗವನ್ನು ಪಡೆದಿವೆ- ಎಂದು ಹರ್ಷಭರಿತನಾಗಿ ಹೇಳುತ್ತಿದ್ದಾನೆ. ಪಾರ್ವತಿಯ ಮುಖಚಂದ್ರಮನ ಸೌಂದರ್ಯದರ್ಶನ ಹಾಗೂ ಅದೇ ಸಮಯಕ್ಕೆ ಉದಯಿಸಿದ ಶಶಿಕಿರಣಗಳ ದರ್ಶನದಿಂದ ಶಂಕರನು ಪ್ರೇಮಾನಂದ ಭರಿತ ಹೃದಯನಾದನು ಎಂಬುದನ್ನು ಕವಿಯು ಪ್ರತೀಯಮಾನಗೊಳಿಸುತ್ತಿದ್ದಾನೆ.

ವಾಸ್ತವವಾಗಿ ಕಾವ್ಯವಸ್ತುವಾದ ಅಲಂಕಾರ್ಯವೇ ಪ್ರಧಾನಭೂತವಾದ ಅಂಗವಾಗಿ, ಪರಿಗಣಿಸಲ್ಪಡಬೇಕಾಗಿದ್ದು, ಅದಕ್ಕೆ ತಕ್ಕಂತೆ ಅಲಂಕಾರಗಳೆಲ್ಲವೂ ಗೌಣವಾಗಿ ಯೋಜಿಸಲ್ಪಡಬೇಕಾದ್ದು ಯುಕ್ತಿಸಂಗತವೇ ಆದರೂ ಅಲಂಕಾರಗಳಿಗೆ ನೀಡಿರುವ ವಿಶೇಷ ಸ್ಥಾನಮಾನದಿಂದಾಗಿ ಹಾಗೂ ಸನ್ನಿವೇಶ ಸೌಂದರ್ಯದಿಂದಾಗಿ ಅವು ಅಪೂರ್ವವಾದೊಂದು ಪ್ರಾಮುಖ್ಯವನ್ನು ಪಡೆದುಕೊಂಡು ಬಿಡುತ್ತವೆ ಹಾಗೂ ಅವು ಗೌಣವೇ ಆದರೂ ಪ್ರಧಾನಭೂತವೆಂಬ ಭಾವ ಬರುವಂತೆ ಭಾಸವಾಗುತ್ತವೆ. ಕವಿಗಳು ಅವುಗಳನ್ನು ಪ್ರಯೋಗಿಸುವ ರೀತಿಯಿಂದ, ಪ್ರಭಾವಶಾಲಿಗಳಾಗಿ ಕಾಣುತ್ತವೆಯಾಗಿ ಇಲ್ಲಿ ಅವು ಸರ್ವೋತ್ಕೃಷ್ಟವಾದ ರೀತಿಯಲ್ಲಿ ಸಂವೇದ್ಯವಾಗುತ್ತವೆಂಬ ರೀತಿಯಲ್ಲಿ ವ್ಯಾಖ್ಯಾನಿಸಲಾಗಿದೆ.

ಈಗ ಕುಂತಕನು ಸಾಮ್ಯವನ್ನಾಧರಿಸಿರುವ ಅಲಂಕಾರಗಳ ಸಮುದಾಯದ ವಿವೇಚನೆಗೆ ಹಾಗೂ ಅವುಗಳ ಕಲಾತ್ಮಕ ಪ್ರಯೋಗದಿಂದ ಸಿದ್ಧಿಸುವ ಕಾವ್ಯ ಸೌಂದರ್ಯನಿರೂಪಣೆಗೆ ತೊಡಗುತ್ತಾನೆ.

ವಿವಕ್ಷಿತ ಪರಿಸ್ಪಂದ ಮನೋಹಾರಿತ್ವ ಸಿದ್ಧಯೇ।
ವಸ್ತುನಃ ಕೇನಚಿತ್ಸಾಮ್ಯಂ ತದುತ್ಕರ್ಷವತೋಪಮಾ[35]

ತಾಂ ಸಾಧಾರಣ ಧರ್ಮೋಕ್ತೌ ವಾಕ್ಯಾರ್ಥೇ ವಾ ತದನ್ವಯಾತ್।
ಇವಾದಿರಪಿ ವಿಚ್ಛಿತ್ಯಾ ಯತ್ರ ವಕ್ತಿ ಕ್ರಿಯಾಪದಮ್[36]

ವರ್ಣನೀಯ ವಸ್ತುವಿನ ಗುಣಲಕ್ಷಣಗಳ ಸೌಂದರ್ಯ(ಮನೋಹರತೆಯನ್ನು)ವನ್ನು ಸಾಧಿಸುವ ಸಲುವಾಗಿ, ಅದೇ ರೀತಿಯ ಗುಣಲಕ್ಷಣಗಳನ್ನು ಉತ್ಕೃಷ್ಟ ಪ್ರಮಾಣದಲ್ಲಿ ಹೊಂದಿರುವ ಇನ್ನೊಂದು ವಸ್ತುವಿನೊಂದಿಗೆ ಅದರ ಸಾಮ್ಯವನ್ನು ಹೇಳಿದಾಗ ಉಪಮಾಲಂಕಾರ ಸಿದ್ಧಿಸುತ್ತದೆ [35]

ಸಾಧಾರಣ ಧರ್ಮವನ್ನು ವ್ಯಕ್ತವಾಗಿಯೆ ಹೇಳುವ ಮೂಲಕವಾಗಿ, ವಾಕ್ಯಾರ್ಥದಲ್ಲಿ ಅದನ್ನು ಸೂಚಿಸುವ ಮೂಲಕವಾಗಿ ಹಾಗೂ 'ಇವ' ಮುಂತಾದ ಶಬ್ದಗಳ ಮೂಲಕವಾಗಿ ಉಪಮಾಲಂಕಾರವನ್ನು ನಿರೂಪಿಸಲಾಗುತ್ತದೆ. ಆದರೆ ಈ ಎಲ್ಲವುಗಳಲ್ಲಿ ಉಪಮೆಗೆ ರಮಣೀಯತೆಯನ್ನು ತಂದುಕೊಡುವ ಅಂಶವೆಂದರೆ ಕ್ರಿಯಾಪದ [36]

ಪ್ರತಿಪಾದಿತವಾದ ವಸ್ತುವನ್ನು (ಉಪಮೇಯ) ಯಾವುದಾದರೊಂದು ಅಪ್ರಸ್ತುತ ಅನ್ಯ ಪದಾರ್ಥದೊಂದಿಗೆ (ಉಪಮಾನ) ಹೋಲಿಸುವುದಿದ್ದಲ್ಲಿ ಅದು ಉಪಮಾಲಂಕಾರ ವೆನಿಸುತ್ತದೆ. ಅಪ್ರಸ್ತುತದೊಂದಿಗೆ ಸಾಮ್ಯವನ್ನು ಪ್ರತಿಪಾದಿಸುವ ಕಾರಣವೇನು? ಇದನ್ನು ಈಗ ಹೇಳಲಾಗುವುದು. ಅರ್ಥಾತ್ ಹೇಳಬೇಕಾಗಿರುವ ವಸ್ತುವಿನ ಧರ್ಮ ವಿಶೇಷವೇನಿದೆ (ಗುಣ ಸ್ವಭಾವ) ಅದರ ಮನೋಹರತೆಯನ್ನು ಸಾಧಿಸುವುದು. ಹೇಳಬೇಕಾಗಿರುವ ವಸ್ತು ಎಂದರೆ, ಕವಿ ವರ್ಣಿಸಬೇಕೆಂದು ಉದ್ದೇಶಿಸಿರುವಂಥದು. ಅದರ ಧರ್ಮವಿಶೇಷವೆಂದರೆ ಅದರ ಸ್ವಾಭಾವಿಕ ಗುಣಲಕ್ಷಣಗಳು. ಈ ಗುಣಲಕ್ಷಣಗಳು (ಧರ್ಮಸ್ವಭಾವ) ಸಹೃದಯರಿಗೆ ಹೃದಯಾಹ್ಲಾದಕರ ವೆನಿಸಬೇಕು. ಅದನ್ನು ಸಾಧಿಸುವ ಸಲುವಾಗಿ ಅಪ್ರಸ್ತುದೊಂದಿಗೆ ಸಾಮ್ಯವನ್ನು ಪ್ರತಿಪಾದಿಸಲಾಗುವುದು. ಹಾಗಾದರೆ ಆ ಅಪ್ರಸ್ತುತ ಪದಾರ್ಥ ಹೇಗಿರಬೇಕು? ಅದು ಈ ಮನೋಹರತೆಯನ್ನು ಉತ್ಕರ್ಷ ರೂಪದಲ್ಲಿ ಅರ್ಥಾತ್ ಅತಿಶಯ ರೂಪದಲ್ಲಿ ಹೊಂದಿರಬೇಕು.

ಇದೆಲ್ಲದರ ಮಥಿತಾರ್ಥವನ್ನು ಈಗ ಹೀಗೆ ಹೇಳಬಹುದು. ವರ್ಣನೀಯ ಪದಾರ್ಥದ ವಿವಕ್ಷಿತ ಧರ್ಮದ ಸೌಂದರ್ಯದ (ಮನೋಹರತೆಯ) ಸಿದ್ಧಿಗೆ, ಪ್ರಸ್ತುತ ಪದಾರ್ಥ ಅಥವಾ ಧರ್ಮದ ಸಾದೃಶ್ಯ ಯುಕ್ತಿಯುಕ್ತವಾಗುತ್ತದೆ. ಕೇವಲ ಧರ್ಮದೊಂದಿಗೆ (ಗುಣಲಕ್ಷಣಗಳು - ಸ್ವಭಾವ) ಸಾದೃಶ್ಯ ಅಸಂಭವ. ಕಾರಣ ಧರ್ಮಗಳು ತಮ್ಮಲ್ಲಿಯೇ ಸಾಮಾನ್ಯವಾಗಿರಲು ಸಾಧ್ಯವೇ ಇಲ್ಲ. ಆದ್ದರಿಂದ ಕಾರಿಕೆಯಲ್ಲಿ 'ಧರ್ಮೇಣ' ಎಂಬ ಮಾತನ್ನು ಹೇಳಿಲ್ಲ. ಹೀಗೆ ಎರಡಕ್ಕೂ ಸಾಮಾನ್ಯವೆನ್ನಬಹುದಾದ ಧರ್ಮಗಳನ್ನು ಹೊಂದಿರುವಂತೆ ಕಾಣುವ ಕಾರಣಕ್ಕಾಗಿ ಎರಡು ವಸ್ತುಗಳನ್ನು ಸಮಾನವೆಂದು ವರ್ಣಿಸಲಾಗುತ್ತದೆ ಎಂಬುದೇ ಇದರ ತಾತ್ಪರ್ಯ. ಈ ವಿಧವಾದ ಸಾದೃಶ್ಯವನ್ನು (ಉಪಮೆ) ಪ್ರತಿಪಾದಿಸುವ ಅಂಶ ಯಾವುದದು? ಎಂದರೆ ಅದು ಕ್ರಿಯಾಪದ. ಕ್ರಿಯಾಪದ ಎಂದರೆ ವಾಚ್ಯ ವಾಚಕ ಸಾಮಾನ್ಯ (ಧಾತು ಮತ್ತು ಧಾತ್ವರ್ಥ)

ಮಾತ್ರ ಎಂದೇ ಹೊರತು ಅಖ್ಯಾತ ಪದ ಎಂಬಷ್ಟಕ್ಕೆ ಸೀಮಿತವಲ್ಲ. ಕಾರಣ ಕ್ರಿಯಾಪದವು ಗೌಣರೂಪದಲ್ಲಿ ಇದ್ದಾಗಲೂ ಅದು ಉಪಮಾವಾಚಕವೇ ಆಗಿರುತ್ತದೆ. ಉದಾಹರಣೆಗೆ 'ಪಾಚಕ' (ಅಡಿಗೆ ಮಾಡುವವನು) ಶಬ್ದದಲ್ಲಿ ಪಾಕ ಶಕ್ತಿ ಪ್ರಧಾನವೇ ಆಗಿ, ಅದನ್ನು ಮಾಡುವವನಿಗೆ ಪ್ರಾಧಾನ್ಯವಿದ್ದರೂ, ಅದರ ಪ್ರಕೃತ್ಯರ್ಥವಾದ- ಪಚತಿ ಇತಿ ಪಾಚಕ- ಎಂಬುದು (ಧಾತ್ವರ್ಥ) ಅದರಲ್ಲಿ ಅಡಗಿಯೇ ಇರುತ್ತದೆ. ಅದೇ ರೀತಿ 'ಪಚತಿ' ಎಂಬ ಕ್ರಿಯಾ ಪದದಲ್ಲಿ ಕ್ರಿಯೆಯ ಅರ್ಥವೇ ಪ್ರಧಾನವಾದರೂ, ಅದರ ಕಾರಕಾರ್ಥವೂ ಅದರಲ್ಲಿ ನಿಗೂಢವಾಗಿ ಅಡಗಿರುತ್ತದೆ. (ಅಡಿಗೆ ಮಾಡುವವನ್ನು ಸೂಚಿಸುವ). ಹಾಗಾಗಿ ಕ್ರಿಯಾಪದವು ಅದರ ಎರಡೂ ರೂಪಗಳಲ್ಲಿ ವೈದಗ್ಧ್ಯ ಪೂರ್ಣಭಂಗಿಯಮೂಲಕ ಮನೋಹರತೆಯನ್ನು (ವಿಚ್ಛಿತ್ತಿಯನ್ನು) ತಂದುಕೊಡುವ ರೀತಿಯಲ್ಲಿ ಉಪಮೆಯನ್ನು ಸೂಚಿಸುತ್ತದೆ. ಕಾರಣ ಕಾವ್ಯ ಸೌಂದರ್ಯ ರಹಿತವಾದ (ವಿಚ್ಛಿತ್ತಿ ರಹಿತ) ಯಾವುದೇ ಉಕ್ತಿ ಸಹೃದಯರಿಗೆ ಹೃದಯಾಹ್ಲಾದವನ್ನುಂಟುಮಾಡುವುದಿಲ್ಲ. ಕೇವಲ ಕ್ರಿಯಾಪದವಷ್ಟೇ ಉಪಮಾ ವಾಚಕವಲ್ಲ; 'ಇವ' ಇತ್ಯಾದಿಗಳೂ ವಾಚಕಗಳಾಗುತ್ತವೆ. ಹೀಗೆ ಉಪಮೆಯನ್ನು ಪ್ರತಿಪಾದಿಸುವ ಸಾಮರ್ಥ್ಯ ಕೆಲವೊಂದು ವಿಶಿಷ್ಟ ರೀತಿಯ ಶಬ್ದಗಳು, ಬಹುವ್ರೀಹಿಯೇ ಮೊದಲಾದ ವಿಶಿಷ್ಟ ಸಮಾಸಗಳು, ಹಾಗೂ 'ವತ್' ಮೊದಲಾದ ಪ್ರತ್ಯಗಳಿಗೆ ಸೀಮಿತಗೊಂಡಿದೆ. ಕಾರಿಕೆಯಲ್ಲಿ ಬಂದಿರುವ 'ಅಪಿ' ಶಬ್ದ - ಸಮುಚ್ಛಯವಾಗಿದೆ. ಯಾವ ನಿಬಂಧನೆಗೊಳಪಟ್ಟು? ಎಂದರೆ, ಸಾಧಾರಣ ಧರ್ಮವನ್ನು ಹೇಳಿದ ಮೇಲೆ. ಉಪಮೇಯ ಮತ್ತು ಉಪಮಾನಗಳೆರಡಕ್ಕೂ ಅನ್ವಯವಾಗುವಂಥದು ಸಾಧಾರಣ ಧರ್ಮ. ಎರಡು ವಿಭಿನ್ನ ವಸ್ತುಗಳಲ್ಲಿನ ಎರಡು ಸಮಾನ ಲಕ್ಷಣಗಳ ಪರಸ್ಪರ ಸಂಬಂಧದ ಅಧೀನಕ್ಕೆ ಒಳಪಟ್ಟು ಎರಡು ಕ್ರಿಯಾಪದಗಳು ಇದರಲ್ಲಿ ಸೇರಿರುವುದರಿಂದ, ಎರಡು ವಸ್ತುಗಳು ಅಥವಾ ಎರಡು ನಾಮಪದಗಳಲ್ಲಿ ಸಾಮ್ಯವಿದೆ ಎಂದು ಹೇಳಬಹುದು. ಮತ್ತೇನು? ಸಾದೃಶ್ಯವು ಇಡೀ ವಾಕ್ಯಾರ್ಥದಲ್ಲಿಯೂ ಇರಬಹುದು. ಪರಸ್ಪರ ಅನ್ವಯ ರೂಪ ಸಂಬಂಧದಿಂದ ಕೂಡಿದ ಪದಗಳ ಸಮೂಹವೇ ವಾಕ್ಯ. ಅದರ ಮೂಲಕ ಪ್ರತಿಪಾದಿತವಾಗುವ ಪದಾರ್ಥವೇ (ವಸ್ತು) ಅಲಂಕಾರ್ಯ ರೂಪದಲ್ಲಿ ಉಪಮೆಯ ವಿಷಯವಾಗುತ್ತದೆ. ಹೇಗೆ? ಎಂದರೆ ವಾಕ್ಯದಲ್ಲಿ ಸೇರಿರುವ ಘಟಕ ಪದಗಳ ಪರಸ್ಪರ ಅನ್ವಯ ಸಂಬಂಧದಿಂದ. ವಾಕ್ಯದಲ್ಲಿ ವಾಸ್ತವವಾಗಿ ಅನೇಕ ಪದಾರ್ಥಗಳಿರುತ್ತವೆ. ಆದರೆ ಎಲ್ಲವೂ ಉಪಮೆಗೆ ಪೂರಕಗಳಲ್ಲ. ಅವುಗಳಲ್ಲಿ ಪರಸ್ಪರ ಅನ್ವಯಿಕ ವಿಶೇಷ ಸಂಬಂಧಗಳನ್ನು ಹೊಂದಿರುವ ಕಾರಣದಿಂದಾಗಿ, ಸಾಮ್ಯವನ್ನು ಸೂಚಿಸಬಲ್ಲಂಥ ಪದಗಳು ಮಾತ್ರ ಉಪಮೆ ಅಥವಾ ಉತ್ಪ್ರೇಕ್ಷೆಗೆ ಕಾರಣವಾಗುತ್ತವೆ. ಹಾಗಾದರೆ ಎರಡಕ್ಕೂ ಇರುವ ವ್ಯತ್ಯಾಸವೇನು? ಅದಕ್ಕೆ ಉತ್ತರ

ಉತ್ಪ್ರೇಕ್ಷಾ ವಸ್ತು ಸಾಮ್ಯೇಽ ಪಿ ತಾತ್ಪರ್ಯಾಂತರಗೋಚರಃ[37]

ಉತ್ಪ್ರೇಕ್ಷೆಯ ವಸ್ತುವಿನಲ್ಲಿ ಕೂಡ ಸಾಮ್ಯ ಕಂಡು ಬರುವುದಾದರೂ ಅದರ ತಾತ್ಪರ್ಯ ಇನ್ನೆಲ್ಲೋ ಇರುತ್ತದೆ [37]

ಉತ್ಪ್ರೇಕ್ಷೆ ಕೂಡ ಕೆಲಮಟ್ಟಿಗೆ ಸಾಮ್ಯವನ್ನು ಹೊಂದಿರುತ್ತದಾದರೂ ಅದರ ಇಡಿಯಾದ ವಾಕ್ಯಾರ್ಥ ಜೀವಿತವು ಸಾದೃಶ್ಯಕ್ಕಿಂತಲೂ ಭಿನ್ನವಾದದ್ದಾಗಿದ್ದು ಸಹೃದಯರ ಹೃದಯದಲ್ಲಿ ಹೊಳೆಯುವಂಥದು. ಈಗಾಗಲೇ ಇದೇ ಅರ್ಥದಲ್ಲಿ ಉತ್ಪ್ರೇಕ್ಷೆಯನ್ನು ಉದಾಹರಿಸಲಾಗಿದೆ. ಉಪಮೆಯಲ್ಲಾಗಲಿ ಉತ್ಪ್ರೇಕ್ಷೆಯಲ್ಲಾಗಲಿ, ಸೇರಿರುವ ಪ್ರತ್ಯಯವು ಕರಣಕಾರಕದ ಅರ್ಥವನ್ನಾಗಲಿ, ಕರ್ಮಕಾರಕದ ಅರ್ಥವನ್ನಾಗಲಿ ನೀಡುತ್ತಿರಲಿಲ್ಲ. ಹಾಗಾಗಿ ಅವೆರಡೂ ಸಾದೃಶ್ಯದೊಂದಿಗೆ ಸಂಬಂಧ ಸ್ಥಾಪಿಸಿಕೊಂಡುವು. ಆದ್ದರಿಂದ ಉಪಮೆಯ ಭಾವವು ಸಾದೃಶ್ಯದ ಅಥವಾ ಉಪಮಿತಿಯ ಸಂಕ್ಷಿಪ್ತ ಸ್ಥಿತಿ ಮಾತ್ರ. ಉಪಮೆಯ ಸೂತ್ರವು- ಕೈವಶದಲ್ಲಿರುವ ವಸ್ತುವಿಗೂ ಹಾಗೆ ಇಲ್ಲದೆ ಇರುವುದಕ್ಕೂ ಇರುವ ಸಾಮ್ಯವೇ ಉಪಮೆ ಎಂಬ ಅರ್ಥಕೊಡುವಷ್ಟಕ್ಕೆ ಮಾತ್ರ ಉಪಮೆಯ ವ್ಯಾಖ್ಯಾನವನ್ನು ಸೀಮಿತಗೊಳಿಸಿಕೊಳ್ಳಬೇಕು. ಇವೆರಡನ್ನೂ ಈಗಾಗಲೇ ನಿರ್ಣಯಾತ್ಮಕವಾಗಿ ವಿವರಿಸಲಾಗಿದೆ.

ಅಮುಖ್ಯ ಕ್ರಿಯಾಪದದಿಂದ ಹುಟ್ಟುವ ಪದಾರ್ಥಗಳಿಗೆ ಉದಾ :

ಪೂರ್ಣೇಂದೋಸ್ತವ ಸಂವಾದಿ ವದನಂ ವನಜೇಕ್ಷಣೇ|
ಪುಷ್ಣಾತಿ ಪುಷ್ಪಚಾಪಸ್ಯ ಜಗತ್ರಯ ಜಿಗೀಷುತಾಮ್ [೧೨೬]

ಎಲೆಕಮಲನಯನೆ
ಪೂರ್ಣಚಂದ್ರನ ಹಾಗಿರುವ
ಈ ನಿನ್ನ ಮೊಗವು
ಲೋಕತ್ರಯಗಳನು ಗೆಲ್ಲಬೇಕೆಂಬ
ಮದನನಿಚ್ಛೆಯನು ಬಲಪಡಿಸುತಿಹುದು! [೧೨೬]

'ಇವಾದಿ' ವಾಚಕಗಳಿಂದ ಪ್ರತಿಪಾದಿತವಾದ ಪದಾರ್ಥೋಪಮೆಗೆ ಉದಾಹರಣೆ

ನಿಪೀಯ ಮಾನಸ್ತಬಕಾ ಶಿಲೀಮುಖೈಃ [೧೨೭] **[1-119ರಲ್ಲಿ ಬಂದಿದೆ]**

ಅಳಿಗಳು ಹೀರಿದ ಪುಷ್ಪಗುಚ್ಛಗಳಿಂದ [೧೨೭]

ಆಖ್ಯಾತ ಪದದ ಮೂಲಕ ಪ್ರತಿಪಾದಿತವಾದ ಪದಾರ್ಥೋಪಮೆಗೆ ಉದಾ :

ತತೋರುಣ ಪರಿಸ್ಪಂದ ಇತ್ಯಾದಿ [೧೨೮] **[1-19]**

ಅರುಣನ ಸಂಚರಣದಿಂದ......[೧೨೮]

ಅದೇ ರೀತಿಯಲ್ಲಿ ವಾಕ್ಯೋಪಮೆಗೆ ಉದಾಹರಣೆ

ಮುಖೇನ ಸಾ ಕೇತಕ ಪತ್ರ ಪಾಂಡುನಾ
ಕೃಶಾಂಗಯಷ್ಟಿಃ ಪರಿಮೇಯ ಭೂಷಣಾ|
ಸ್ಥಿತಾಲ್ಪತಾರಾಂ ತರುಣೇಂದು ಮಂಡಲಾಂ
ವಿಭಾತಕಲ್ಪಾಂ ರಜನೀಂ ವ್ಯಡಂಬಯತ್ [೧೨೯]

[ರಘುವಂಶ **III -2**]

ಕೇದಗೆಯ ದಳಗಳ ಹಾಗೆ
ಬೆಳುಮೊಗದ ತೆಳುಮೈಯ
ಒಂದೆರಡೆ ಒಡವೆಗಳ ಆ ತರುಣಿ
ಕೆಲವೆ ಚುಕ್ಕಿಗಳು ಸುತ್ತುವರಿದಿರುವ,
ಮಸುಕು ಚಂದಿರನಿರುವ
ಇನ್ನೇನು ಮುಗಿಯಲಿಹ ರಜನಿಯನು
ಅಣಕಿಸುತ ನಿಂದಿಹಳು [೧೨೯] [IV - 2]

ಇವಾದಿ ವಾಚಕಗಳಿಂದ ಪ್ರತಿಪಾದಿತವಾಗುತ್ತಿರುವ ಪದಾರ್ಥೋಪಮೆಗೆ ಇನ್ನೊಂದು ಉದಾಹರಣೆ

ಚುಂಬನ್ ಕಪೋಲತಲಮುತ್ಪುಲಕಂ ಪ್ರಿಯಾಯಾಃ
ಸ್ಪರ್ಶೋಲ್ಲಸನ್ನಯನ ಮಾಮುಕುಲೀಚಕಾರ|
ಆವಿರ್ಭವನ್ಮಧುರ ನಿದ್ರಮಿವಾರವಿಂದ-
ಮಿಂದು ಸ್ಪುಶಾಸ್ತಮಿತ ಮುತ್ಪುಲಮುತ್ಪಲಿನ್ಯಾಃ [೧೩೦]

ಮಧುರ ನಿದ್ರೆಯು ಬರುವಂತಿರುವ
ಕಮಲಪುಷ್ಪವು ತಾನು
ಚಂದಿರನ ಸ್ಪರ್ಶಕ್ಕೆ ಮುಚ್ಚುವಂತೆ
ಪ್ರಿಯತಮೆಯ ಪುಲಕಿತ ಕಪೋಲವನು
ಚುಂಬಿಸುತೆ ಅವನು
ಮಿದು ಸ್ಪರ್ಶದಿಂದುಲ್ಲಸಿತಳಾದಾ ತರುಣಿ
ಸಂತಸದಿ ಕಂಗಳನು ಮುಚ್ಚುವಂತೆಸಗಿದನು! [೧೩೦]

ಅದೇ ರೀತಿಯ ವಾಕ್ಯೋಪಮೆಗೆ ಇನ್ನೊಂದು ಉದಾಹರಣೆ

ಪಾಂಡ್ಯೋಽಯಮಂಸಾರ್ಪಿತ ಲಂಬಹಾರಃ
ಕ್ಲುಪ್ತಾಂಗರಾಗೋ ಹರಿಚಂದನೇಸ|
ಆಭಾತಿ ಬಾಲಾತಪ ರಕ್ತಸಾನುಃ
ಸನಿರ್ಝರೋದ್ಗಾರ ಇವಾದ್ರಿರಾಜಃ|| [೧೩೧] **[ರಘುವಂಶ VI - 60]**

ಭುಜಗಳಲಿ ಒಲೆದಾಡುತಿರುವ
ಉದ್ದನೆಯ ಮುತ್ತಿನ ಹಾರದಿಂದ ಶೋಭಿತನು
ಪಾಂಡ್ಯರಾಜನಿವನು ಹರಿಚಂದನಲೇಪಿತನು
ಹೊಳೆವ ಎಳೆಬಿಸಿಲಿಂದ ಕೆಂಪಾದ ಶಿಖರಗಳ
ಧುಮ್ಮಿಕ್ಕುವಬ್ಬಿಗಳ
ಅದ್ರಿರಾಜನವೋಲು ಕಾಣುತಿಹನು [೧೩೧]

ಮೇಲಿನ ಎರಡೂ ಉದಾಹರಣೆಗಳಲ್ಲಿ ಉಪಮೇಯ ಮತ್ತು ಉಪಮಾನಗಳಲ್ಲಿ ಪರಸ್ಪರ ಸಾಮ್ಯವಿದೆ ಮತ್ತು ಅವುಗಳಲ್ಲಿ ಪರಸ್ಪರ ಸಂಬಂಧ ಏರ್ಪಡಿಸುವುದು ಈ ಸಾಮ್ಯವೇ ಆಗಿದೆ. ಇಷ್ಟಾದರೂ ಅವುಗಳಲ್ಲಿ ಸ್ಪಷ್ಟ ವ್ಯತ್ಯಾಸವೂ ಇದೆ. ಮೊದಲನೆಯದರಲ್ಲಿ ನಮ್ಮ ವಾಕ್ಯಾರ್ಥದ ತಿಳಿವಳಿಕೆ ಸಾಮ್ಯ ಸಂಬಂಧದ ನಮ್ಮ ತಿಳಿವನ್ನು ಅನುಸರಿಸುತ್ತದೆ ಮತ್ತು ಅದನ್ನೇ ಅವಲಂಬಿಸಿದೆ. ಎರಡನೇದರಲ್ಲಿ ವಾಕ್ಯಾರ್ಥದ ತಿಳಿವಿನ ನಂತರ ಸಾಮ್ಯ ಸಂಬಂಧದ ತಿಳಿವು ಉಂಟಾಗುತ್ತದೆ. ಮತ್ತೆ ಮೊದಲನೆಯದರಲ್ಲಿ ಪರೋಕ್ಷವಾಗಿ ಉಪಮೆಯನ್ನು ಪ್ರತೀತಗೊಳಿಸುವಂಥ ಸಮಾಸ ಇತ್ಯಾದಿಗಳಾವುವೂ ಇಲ್ಲದಿರುವುದರಿಂದ ಹಾಗೂ ಇವ ಇತ್ಯಾದಿಗಳಿಂದ ನೇರವಾಗಿ ವ್ಯಕ್ತವಾಗುವುದರಿಂದ "ಪದೋಪಮೆ" ಎಂಬ ಮಾತು ಅದಕ್ಕೆ ಅರ್ಥಪೂರ್ಣವಾಗಿ ಅನ್ವಯಿಸುತ್ತದೆ. ಅಲ್ಲದೆ ಪದಾರ್ಥವು ಉಪಮೇಯ ಮತ್ತು ಉಪಮಾನಗಳ ನಡುವಿನ ಸಾಮ್ಯದ ಹಿಂದೆ ಇದ್ದು ಅದನ್ನು ನಿಯಂತ್ರಿಸುತ್ತದೆ ಎಂಬುದೇ ಇದಕ್ಕೆ ಸಮರ್ಥನೆ. ಕವಿ ವಿವಕ್ಷಿತ ಮುಖ್ಯ ವಿಚಾರವು ಅನುಭವಕ್ಕೆ ಬಂದಿಲ್ಲದೆ ಇರುವುದರಿಂದ ಪದ್ಯದ ಪ್ರಥಮಾರ್ಧದಲ್ಲೇ ಇಡೀ ವಾಕ್ಯಾರ್ಥ ಸಂಪೂರ್ಣವಾಗಿ ತಿಳಿದು ಬರುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಅಲ್ಲಿ "ಸಾಲಂಕಾರಸ್ಯಕಾವ್ಯತಾ" ಎಂಬುದೇ ಇಲ್ಲಿಯ ನ್ಯಾಯವೆಂದು ತಿಳಿಯಬೇಕು.

ಎರಡನೇ ಉದಾಹರಣೆಯಲ್ಲಿ ಪರಸ್ಪರ ಅನ್ವಯ ಲಕ್ಷಣ ಸಂಬಂಧದಲ್ಲಿ ಸೇರಿರುವ ಪದಗಳನ್ನು ಒಳಗೊಂಡ ವಾಕ್ಯಾರ್ಥವು ಮುಂಚೆ ಬರುತ್ತದೆ ಹಾಗೂ ಉಪಮೇಯ ಮತ್ತು ಉಪಮಾನಗಳ ನಡುವಿನ ಪರಸ್ಪರ ಸಾಮ್ಯವನ್ನು ಅರ್ಥೈಸಿಕೊಳ್ಳುವ ಸಾಧನವಾಗುತ್ತದೆ. ಹಾಗಾಗಿ ವಾಕ್ಯೋಪಮೆ ಎಂಬ ಶೀರ್ಷಿಕೆಯನ್ನು ಪಡೆದುಕೊಳ್ಳುತ್ತದೆ. ಕ್ರಿಯಾಪದಗಳಿಂದ ಪ್ರತಿಪಾದ್ಯವಾದ ಉಪಮಾರೂಪದ ಉದಾಹರಣೆಗಳಿಂದ ಇದು ಹೇಗಾಗುತ್ತದೆಂಬುದನ್ನು ನೋಡಲಾಗಿದೆ. ಇನ್ನು ಈ ವಿಷಯದಲ್ಲಿ ಹೆಚ್ಚು ಚರ್ಚೆ ಬೇಡ. 'ಇವಾದಿ' ಎಂದು ಹೇಳಿರುವುದರಿಂದ, 'ಇವ' ಮಾತ್ರವೇ ಅಲ್ಲದೆ "ಯಥಾ" ಕೂಡ ಉಪಮಾವಾಚಕವಾಗ ಬಹುದೆಂದು ಸೂಚಿತವಾಗುತ್ತದೆ ಇದನ್ನೂ ಈಗಾಗಲೇ ಈ ಮುನ್ನವೆ ಹೇಳಲಾಗಿದೆ.

ಸಮಾಸವಿದ್ದಾಗ, ಉಪಮೆಯು ಎರಡು ಪ್ರಕಾರದ್ದಿರುತ್ತದೆ.

1) ಅನುಕ್ತವಾದದ್ದು 2) ಪ್ರತ್ಯಯದಿಂದ ಪ್ರತಿಪಾದಿತವಾದದ್ದು

ಮೊದಲನೆಯದಕ್ಕೆ

> ಪೂರ್ಣೇಂದು ಕಾಂತಿವದನಾ ನೀಲೋತ್ಪಲ ವಿಲೋಚನಾ [೧೩೨]
>
> ಪೂರ್ಣ ಚಂದ್ರನ ಕಾಂತಿಯ ಮೊಗವು
> ಕನ್ನೈದಿಲೆಯ ಕಂಗಳು [೧೩೨]

(ಮೂಲದಲ್ಲಿ ಈ ಎರಡೂ ಸಮಾಸಗಳು ಬಹುವ್ರೀಹಿ. ಇದರಲ್ಲಿ ಉಪಮೆಯು ಅಧ್ಯಾಹಾರ್ಯವೇ ಹೊರತು ನೇರವಾಗಿ ಹೇಳಿಲ್ಲ. ಹಾಗೆಯೇ

ಯಾಂತ್ಯಾ ಮುಹುರ್ವಲಿತ ಕಂಧರಮಾನನಂ ತ-
ದಾವೃತ್ತವೃತ್ತ ಶತಪತ್ರನಿಭಂ ವಹಂತ್ಯಾ|
ದಿಗ್ಧೋಽಮೃತೇನ ಚ ವಿಷೇಣ ಚ ಪಕ್ಷ್ಮಲಾಕ್ಷ್ಯಾ
ಗಾಢಂ ನಿಖಾತ ಇವ ಮೇ ಹೃದಯೇ ಕಟಾಕ್ಷಃ [೧೩೩]

[ಮಾಲತೀಮಾಧವ 1-26]

ಕಮಲ ಪುಷ್ಪದ ಹಾಗೆ ಸುತ್ತಲೂ ಸುಳಿಗೊಂಡ
ದುಂಡುಮೊಗದವಳು
ಕತ್ತನತ್ತಿತ್ತ ಒಲೆಯುತ್ತ ಬರುತಿರಲು
ಅಮೃತದಲಿ ಮತ್ತೆ ವಿಷದಲದ್ದಿದಂಥ
ತುರುಗೆಮೆಯ ಪ್ರಿಯತಮೆಯ
ಕಡೆಗಣ್ಣ ನೋಟಗಳು ಹೃದಯದೊಳೆ
ನಟ್ಟಂತಿಹವು ಗಾಢದಲಿ [೧೩೩]

ಪ್ರತ್ಯಯದಿಂದ ಪ್ರತಿಪಾದಿತವಾದ ಉಪಮೆಗೆ ಉದಾಹರಣೆ

ಮಾಂಜಿಷ್ಠೀಕೃತ ಪದ್ಮ ಸೂತ್ರ ಸದೃಶಃ ಪಾದಾನಯಂ ಪುಂಜಯನ್
ಯಾತ್ಯಸ್ತಾಚಲ ಚುಂಬಿನೀಂ ಪರಿಣತಿಂ ಸ್ವೈರಂ ಗ್ರಹಗ್ರಾಮಣೀಃ|
ವಾತ್ಯಾ ಚಕ್ರವಿವರ್ತಿತಾಂಬುಜ ರಜಚ್ಛತ್ರಾಯ ಮಾಣಃ ಕ್ಷಣಂ
ಕ್ಷೀಣಜ್ಯೋತಿರಿತೋಽಪ್ಯಯಂ ಸ ಭಗವಾನಂಭೋನಿಧೌ ಮಜ್ಜತಿ [೧೩೪]

[ಬಾಲಾರಾಮಾಯಣ III - 10]

ಹಳದಿಯ ರೇಷ್ಮೆಯ ನೂಲಿನಂಥ
ತನ್ನ ಕಿರಣಗಳನೊಟ್ಟುಗೂಡಿಸುತೆ
ಗ್ರಹಗಳಧಿಪತಿಯು ರವಿಯು
ಪೂರ್ಣಾಕೃತಿಯನ್ನೈದಿರಲು ಅಸ್ತಗಿರಿ ಶಿಖರದಲಿ
ಬಿರುಗಾಳಿ ಬೀಸಿ ಕಮಲ ಪುಷ್ಪಗಳ ರಜವು
ಆತಪತ್ರದ ಹಾಗೆ ಅವನನಲಂಕರಿಸಿರೆ
ಕಾಂತಿಗುಂದುತೆ ನಿಧನಿಧಾನಕೆ
ಮುನ್ನೀರಿನಲಿ ಮುಳುಗುತಿಹನದೊ ದೇವನು [೧೩೪]

ಹಾಗೂ

ಇತ್ಯಾಕರ್ಣಿತ ಕಾಲನೇಮಿವಚನಾ (ದಾಘುರ್ಘುರೋ) ದುರ್ಧರೋ
ಹುಂಕಾರಃ ಪದಯೋ..... ಪುರಃ ಪ್ರಖ್ಯಾಪಿತಸ್ವಾಗಮಃ|
ಧೈರ್ಯಸ್ತಂಭ ವಿಜೃಂಭಿತೋದ್ಧುರ ಮದಪ್ರೋನ್ಮಾಥ ಪರ್ಯಾಕುಲಂ
ಕ್ರೋಧಃ ಕುಂಜರವನ್ಮಹಾಸುರಪತೇಃ ಸ್ವಚ್ಛಂದ ಮಾಲೋಕ್ಯತೇ [೧೩೫]

ಕಾಲನೇಮಿಯ ಮಾತ ಕೇಳುತಲೆ
ಇಂದ್ರನೈರಾವತದ ಕ್ರೋಧವು ಕಾಂಬ ತೆರದಲಿ
ಧೈರ್ಯಸ್ತಂಬದಲಿ ವಿಜೃಂಭಿಸುವ
ಎಲ್ಲರ ಮದವ ಮುರಿಯಬಲ್ಲ
ಆ ಮಹಾದೈತ್ಯನ ಕ್ರೋದ
ಮತ್ತವನ ದೈತ್ಯಶಕ್ತಿಯ ಸಾರುವ
ರಣಘೋಷಗಳು ಕೇಳಿದುವು ಕಿವಿಯನಪ್ಪಳಿಸುವಂತೆ [೧೩೫]

ಅಥವಾ

ಇತೀದಮಾಕರ್ಣ್ಯ ತಪಸ್ವಿಕನ್ಯಾ
(ವಿಲೋಲ) ಮುದ್ವೀಕ್ಷಿತ ಮುತ್ಸುಕಸ್ಯ|
ತಸ್ಯಾತಿಮುಕ್ತಾಕುಲ ಪುಷ್ಪಕಾಲಂ
ಗತಾಗತಾಸ್ಯಾ ಹೃದಯಂ ಮುಮೋಹ [೧೩೬]

ಇದ ಕೇಳಿ ಉತ್ಸುಕದ ಉದ್ದೀಪನದ
ಅವನ ಹೊಸ ನೋಟಗಳ ಕಂಡು
ಹೌದೆನುವ ಭಾವದೊಳಾ ತಪಸ್ವಿ ಕನ್ಯೆ
ಶಿರವನೊಲೆದೊಪ್ಪಿಗೆಯ ಸೂಚಿಸುತೆ
ಕೋಮಲ ಕುಸುಮವದು ಜೋಲ್ವತೆರದಲಿ
ಅವನ ಹೃದಯವನು ಸೂರೆಗೊಂಡಳವಳು

[ಸಾಮ್ಯವನ್ನು ಸೂಚಿಸುವ ಪ್ರತ್ಯಯವನ್ನು ಸ್ಪಷ್ಟವಾಗಿ ತೆರೆದು ತೋರಲು ಸಾಧ್ಯವಿಲ್ಲದಷ್ಟರ ಮಟ್ಟಿಗೆ ಪಾಠ ಕೆಟ್ಟಿದೆ]

ಹಾಗೆಯೇ

ರಾಮೇಣ ಮುಗ್ಧ ಮನಸಾ ವೃಷಭಧ್ವಜಸ್ಯ
ಯಜ್ಜರ್ಜರಂ ಧನುರ ಭಾಜಿ ಮೃಣಾಲಭಂಜಮ್|
ತೇನಾಮುನಾ ತ್ರಿಜಗದರ್ಪಿತ ಕೀರ್ತಿ ಭಾರೋ
ರಕ್ಷಃ ಪತಿರ್ನನು ಮನಾಜ್ ನ ವಿಡಂಬಿತೋಽಭೂತ್ [೧೩೭]

[ಬಾಲ ರಾಮಾಯಣ III - 80]

ಕಮಲದ ದಂಟೋ ಇದು ಎನುವಂತೆ
ಮುಗ್ಧರಾಮನು ಜರ್ಜರಿತ ಶಿವಧನುವ ಮುರಿದು
ತ್ರಿಭುವನ ವಿಜಯಿ ಎಂಬ ಕೀರ್ತಿಶಾಲಿ
ರಕ್ಕಸರ ರಾಜನನು ನಿಜಕು ವಿಡಂಬಿಸಿದ ನಲ್ತೆ [೧೩೭]

ಪ್ರತೀಯಮಾನ ಉಪಮೆಯ ಉದಾಹರಣೆಗಳಲ್ಲಿ ಕ್ರಿಯಾಪದವೇ ಮೊದಲಾದುವುಗಳ ಪ್ರತಿಪಾದಕತೆಯಿಂದಲೂ ಉಪಮೆಯು ಒಟ್ಟರ್ಥದ ಧ್ವನಿಸುವಿಕೆಯ ಮೂಲಕ ಹೊರಪಡುವಂತೆ

ತೋರುತ್ತದೆ. ವರ್ಣ್ಯಮಾನ ವಸ್ತು ಮತ್ತು ಉಪಮೇಯಗಳೆರಡಕ್ಕೂ ಸಮನಾಗಿಯೇ ಅತ್ಯಂತ ಯುಕ್ತವಾಗಿ ಹೊಂದಿಕೆಯಾಗುವಂಥ ಪದಗಳು ರಸದ ಚರಮೋತ್ಕರ್ಷದೊಂದಿಗೆ ಅಳವಟ್ಟಿರುತ್ತವೆ. ಉದಾ:

ಮಹೀಭೃತಃ ಪುತ್ರವತೋऽಪಿ ದೃಷ್ಟಿ-
ಸ್ತಸ್ಮಿನ್ನಪತ್ಯೇ ನ ಜಗಾಮ ತೃಪ್ತಿಮ್|
ಅನಂತಪುಷ್ಪಸ್ಯ ಮಧೋರ್ಹಿಚೂತೇ
ದ್ವಿರೇಫ ಮಾಲಾ ಸವಿಶೇಷ ಸಂಗಾ [೧೩೮] [ಕುಮಾರ ಸಂಭವ 1-27]

ಆ ನರಪತಿಗೆ ಇನ್ನಿತರ ಪುತ್ರ ಸಂತಾನವಿದ್ದರೂ
ಅವನ ಕಂಗಳಿಗಾದರೊ ಆ ಮಗುವಿನೊಳೆ ತೃಪ್ತಿ
ವಸಂತದಲಿ ಅರಳಿರುವ ಅಸಂಖ್ಯ ಹೂಗಳಲಿ
ಮಾಮರದ ಸಂಗದೊಳೆ ದುಂಬಿಗಳ ಹಿಂಡಿಗಾಮೋದವು [೧೩೮]

ವಸಂತದಲ್ಲಿ ಬಗೆ ಬಗೆಯ ಪುಷ್ಪ ಸಂಪತ್ತಿದ್ದರೂ, ದುಂಬಿಗಳಿಗೆ ಮಾವಿನ ಹೂವಿನಲ್ಲಿ ವಿಶೇಷ ಅನುರಕ್ತಿ ಎಂಬ ವಿಚಾರವು, ಈ ಪದ್ಯದಲ್ಲಿ ಈ ಮುಂಚೆ ವರ್ಣಿಸಲಾದ ವಿಚಾರಕ್ಕೆ ಸರಿಸಮನಾಗಿದೆ. ಆದ್ದರಿಂದ ಪ್ರತೀಯಮಾನ ಉಪಮೆಯನ್ನು ಅದು ಸೂಚಿಸುತ್ತಿದೆ ಎಂದು ಪರಿಭಾವಿಸುವುದೇ ಸೂಕ್ತ. ವಸಂತದಲ್ಲಿ ಕಂಡು ಬರುವ ಅಪಾರ ಪುಷ್ಪ ಸಂಪತ್ತು ರಾಜನಿಗಿರುವ ಬಹುಪುತ್ರ ಸಂತಾನದ ವಿಚಾರದೊಂದಿಗೆ ಸಾಮ್ಯಹೊಂದಿದೆ. ಹಾಗಾಗಿ ಉಪಮೆಯ ಬಹುಮುಖ್ಯ ಲಕ್ಷಣಗಳು ನಿರ್ವಿವಾದವಾಗಿ ಇಲ್ಲಿವೆ. ಇಲ್ಲಿರುವ ಉಪಮೆಯನ್ನು ಅರ್ಥಾಂತರ ನ್ಯಾಸವೆಂದು ಭ್ರಮಿಸಬಾರದು (ಅಥವಾ ಸಾಮ್ಯ ಸಾಮಾನ್ಯವೆಂದು). ಕಾರಣ ಅರ್ಥಾಂತರ ನ್ಯಾಸೇನಿದ್ದರೂ, ಒಂದುಇಡೀ ವಾಕ್ಯಾರ್ಥ ತಾತ್ಪರ್ಯವು ಇಡಿಯಾದ ಇನ್ನೊಂದು ವಾಕ್ಯಾರ್ಥ ತಾತ್ಪರ್ಯದಲ್ಲಿನ ಸಾಮ್ಯವನ್ನು ಸೂಚಿಸುತ್ತಿದ್ದಾಗ ಮಾತ್ರ ಉದ್ಭವಿಸುವಂಥದು.

'ಇದೇ ತರ್ಕದ ಆಧಾರದ ಮೇಲೆ, ಪ್ರತಿವಸ್ತೂಪಮವನ್ನೂ ಒಂದು ಸ್ವತಂತ್ರ ಅಲಂಕಾರವೆಂದು ಪರಿಗಣಿಸಲು ಬರುವುದಿಲ್ಲ. ಕಾರಣ ಅದು ಸಾಮ್ಯವೊಂದನ್ನು ಮುಂದಿಡುತ್ತದೆ ಅಷ್ಟೆ. ಅದು ಇಂಥ ಉದಾಹರಣೆಗಳ ಪ್ರಪಂಚಕ್ಕಷ್ಟೇ ಸೀಮಿತವಾಗಿದೆ. ಅದೇ ಕಾರಣ ಈ ಮುಂಚಿನ ಲಾಕ್ಷಣಿಕರು ಅದನ್ನು ಇದೇ ರೀತಿ ಲಕ್ಷಣ ಹೇಳಿ ಉದಾಹರಣೆಗಳನ್ನು ನೀಡಿದ್ದಾರೆ. ಸಾಮ್ಯವಿರುವ ವಿಚಾರವೊಂದನ್ನು ಹೇಳಬೇಕಾದಾಗ ಬರುವ ಅಲಂಕಾರವೆಂದು ಹೇಳಿ ಈ ಉದಾಹರಣೆ ನೀಡುತ್ತಾರೆ.

ಕಿಯಂತಃ ಸಂತಿ ಗುಣಿನಃ ಸಾಧುಸಾಧಾರಣ ಶ್ರಿಯಃ|
ಸ್ವಾದುಪಾಕಫಲಾನಮ್ರಾಃ ಕಿಯಂತೋ ವಾಧ್ವಶಾಖಿನಃ [೧೩೯]

[ಕುಮಾರ ಸಂಭವ 1 - 27]

ಸಜ್ಜನರೊಡನೆ ತಮ್ಮ ಸಂಪದವ
ಹಂಚಿಕೊಂಬ ಗುಣಿಗಳೆನಿತಿಹರು?
ಪಕ್ವ ಫಲಬಾರದಿಂದೆ ಬಾಗಿರುವ
ಮರಗಳೆನಿತಿಹವು ಮಾರ್ಗದೊಳು? [೧೩೯]

ಇಲ್ಲಿ ಸಮಾನ ಸೌಂದರ್ಯವುಳ್ಳ [ಸಾಧಾರಣ ಸಂಪತ್ತುಳ್ಳ ಗುಣಿಗಳು ಮತ್ತು ಫಲಭಾರದಿಂದ ಬಾಗಿದ, ವೃಕ್ಷಗಳು] ಈ ಎರಡರಲ್ಲಿ ಕವಿ ವಿವಕ್ಷಿತವಾದ 'ವಿರಲತ್ವ' ರೂಪ 'ಸಾಮ್ಯ'ದ ಹೊರತು, ಬೇರಾವುದೇ ಮನೋಹರ ಮತ್ತು ಪ್ರಾಣ ಸ್ವರೂಪ "ತತ್ವ" ಕಂಡು ಬರುವುದಿಲ್ಲ.

ಈ ರೀತಿಯಲ್ಲಿ ಪ್ರತಿ ವಸ್ತೂಪಮಾಲಂಕಾರವು ಪ್ರತೀಯಮಾನ ಉಪಮೆಯಲ್ಲಿ ಅಂತರ್ಭಾವವಾಗುತ್ತದೆ. ಉಪಮೇಯೋಪಮಾಲಂಕಾರವೂ ಉಪಮೆಯಲ್ಲಿ ಹೇಗೆ ಅಂತರ್ಭಾವವಾಗುತ್ತದೆ ಎಂಬುದನ್ನು ಈಗ ವಿಚಾರ ಮಾಡಬಹುದು.

ಉಪಮೇಯೋಪಮಾ ಯೇಯಮುಪಮಾನೋಪಮೇಯಯೋಃ
ಸಾಮಾನ್ಯಾ ಪ್ರಸ್ತುತತ್ವಾತ್ತು ಲಕ್ಷಣಾನನ್ಯಥಾಸ್ಥಿತೇಃ[38]

ಉಪಮಾನ ಮತ್ತು ಉಪಮೇಯಗಳೊಂದಿಗೆ ಸಾಮ್ಯವನ್ನು ಹೊಂದಿರುವ ಉಪಮೇಯೋಪಮಾ ಎಂಬ ಅಲಂಕಾರವು ಇದೇ ಉಪಮಾಲಂಕಾರದಲ್ಲಿಯೇ ಬರುತ್ತದೆ ಎಂದು ತಿಳಿಯಬೇಕು, ಕಾರಣ ಅದರಲ್ಲಿಯೂ 'ಉಪಮೆ' ಇರುತ್ತದೆ. ಅದಕ್ಕೇ ಪ್ರತ್ಯೇಕವಾದ ಲಕ್ಷಣವಿಲ್ಲ.

ಇತರೆ ಲೇಖಕರು ಹೇಳುವ 'ಉಪಮೇಯೋಪಮಾ' ಎಂಬ ಅಲಂಕಾರ ವಾಸ್ತವವಾಗಿ ಉಪಮಾಲಂಕಾರಕ್ಕಿಂತ ಭಿನ್ನವಲ್ಲ. ಏಕೆ? ಏಕೆಂದರೆ, ಉಪಮೆಯು ಅಲ್ಲಿಯೂ ಹೆಚ್ಚು ಪ್ರಸ್ತುತ. ಅದೂ ಅಲ್ಲದೆ, ಅದಕ್ಕೆ ವ್ಯತಿರಿಕ್ತವಾವುದೂ ಇಲ್ಲ. ಸಮಾಸ ಪದವನ್ನು ವಿಗ್ರಹವಾಕ್ಯ ಮಾಡಿದ್ದೇ ಆದರೆ, ಉಪಮೇಯವೇ ಉಪಮಾನವೂ ಆಗುತ್ತದೆ. ಒಂದೇ ವಸ್ತು ಉಪಮಾನ ಮತ್ತು ಉಪಮೇಯಗಳೆರಡೂ ಆಗುತ್ತದೆ ಎಂಬ ಅರ್ಥ ಹೊರಡುತ್ತದೆ.

ಪ್ರಸುಪ್ತಮಥವಾ ನಿದ್ರಾ ಚ ಶೋಕಾತ್ಮತಾಮಾಪನ್ನಸ್ಯ
ಹೃದಯಹಾರೀತಿ ರತೇರಾಶ್ವಾಸನಾ ಭೂಮಯಃ[೧೪೦]

ನಿದ್ರೆಯೋ ಪ್ರಸ್ತುಪಿಯೋ ಶೋಕಾರ್ತರಾಗಿರುವವರ
ಹೃದಯವನು ಸೆಳೆಯುವುದು ಇದು ಖಂಡಿತ
ಆದರೆ ಅದೇ ವಿಯೋಗಿಗಳ ಸಂತೈಪ
ಭರವಸೆಯ ತವನಿಧಿಗಳಹವು ತಾವು [೧೪೦]

ಇಂಥ ಉದಾಹರಣೆಗಳಲ್ಲಿ ತುಲ್ಯಯೋಗಿತಾಲಂಕಾರವಿದೆ ಎಂಬುದನ್ನು ಒಪ್ಪಬೇಕಾಗುತ್ತದೆಯೆ ಅಥವಾ ಇಲ್ಲವೆ? ಅದನ್ನು ಈಗ ವಿಚಾರಿಸಲಾಗುವುದು.

ತತ್ತುಲ್ಯಯೋಗಿತಾ ನಾಮ ನಾಸೌ ಪೃಥಗಲಂಕೃತಿಃ|
ಏತಸ್ಯಾಂ ಬಹವೋ ದ್ವೌ ವಾ ಪದಾರ್ಥಾಸ್ತುಲ್ಯ ಯೋಗಿನಃ[39]

ಪ್ರಕಾರತ್ವಂ ಪ್ರಪದ್ಯಂತೇ ಪ್ರಾಧಾನ್ಯಸ್ಯ ನಿವರ್ತನಾತ್
ವಸ್ತು ಮುಖ್ಯತಯಾ ವರ್ಣ್ಯ ಕಿಂ ಸ್ಯಾತ್ ಕಸ್ಯ ಭೂಷಣಮ್[40]

ತುಲ್ಯಯೋಗಿತಾ ಎಂಬುದು ವಾಸ್ತವವಾಗಿ ಪ್ರತ್ಯೇಕ ಅಲಂಕಾರವಲ್ಲ. ಇದರಲ್ಲಿ

ಒಂದೇ ರೀತಿ ಇರುವ ಎರಡು ಮೂರು 'ಸದೃಶ' ವಸ್ತುಗಳನ್ನು ಒಟ್ಟಿಗೆ ತರಲಾಗುವುದು. ಯಾವುದರ ಪ್ರಧಾನ್ಯವೂ ನಿರ್ದಿಷ್ಟವಾಗಿ ನಿರ್ಧರಿತವಾಗದಿರುವುದರಿಂದ, ಅದರಲ್ಲಿ ಸೇರಿರುವ ಪ್ರತಿಯೊಂದೂ ವರ್ಣ್ಯಮಾನ ವಸ್ತುವೆಂದು, ಸಮಾನ ಲಕ್ಷ್ಯವನ್ನು ನೀಡಬೇಕೆಂದು ಸಾಧಿಸುತ್ತದೆ. ಒಂದು ಪದಾರ್ಥ ಮಾತ್ರ ಪ್ರಧಾನ ವಸ್ತುವಾಗಿರಬೇಕು. ಒಂದಕ್ಕಿಂತ ಹೆಚ್ಚಿನವು ಪ್ರಧಾನ ವಸ್ತುವೆಂದು ಸಾಧಿಸುವಲ್ಲಿ ಯಾವುದು ಅಲಂಕಾರ ಯಾವುದು ಅಲಂಕಾರ್ಯ ಎಂದು ಯಾರು ಹೇಳಲು ಸಾಧ್ಯ? [39-40]

ತುಲ್ಯಯೋಗಿತಾ ಎಂಬುದು ಅಲಂಕಾರವೆಂದು ಪರಿಗಣಿಸಲು ಅರ್ಹವಾದ್ದೇ ಅಲ್ಲ. ಏಕೆ?ಕಾರಣ ಇದರಲ್ಲಿ ಎರಡು ಮೂರು ಪದಾರ್ಥಗಳು ಕಾವ್ಯದ ವರ್ಣ್ಯವಿಷಯಗಳಾಗುತ್ತವೆ. ಇದರಲ್ಲಿಯ ಪ್ರಧಾನ ವರ್ಣ್ಯವಿಷಯವಾವುದೆಂಬುದನ್ನು ನಿರ್ಧರಿಸಲು ಸಾಧ್ಯವಿಲ್ಲದಿದ್ದಾಗ ಯಾವುದು ಯಾವುದನ್ನು ಅಲಂಕರಿಸುತ್ತದೆಂಬುದನ್ನು ಯಾರು ಹೇಗೆ ತಾನೆ ಹೇಳಬಲ್ಲರು. ಪ್ರತಿಯೊಂದೂ ಪ್ರಧಾನವಾಗುತ್ತದೆಂದಾದರೆ, ಈ ಅನಿಶ್ಚಿತ ನಿರ್ಧಾರದ ಸ್ಥಿತಿಯಲ್ಲಿ ವಾಸ್ತವವಾಗಿ ಯಾವುದೂ ಇನ್ನೊಂದರ ಅಲಂಕರಣವಾಗಲಾರದು. ಅವುಗಳಲ್ಲಿ ಯಾವೊಂದೂ ಉಳಿದವುಗಳ ಅಲಂಕರಣವಾಗಬಲ್ಲುದು. ಆದರೆ ಅಂಥ ಒಂದು ಸ್ಥಿತಿ ತರ್ಕಕ್ಕೆ ದೂರವಾದ್ದು. ಯಾಕೆ? ಯಾವುದೊಂದರ ಸರ್ವೋಚ್ಛತೆಯಾಗಲಿ, ಅಥವಾ ಎಲ್ಲವುಗಳ ಸರ್ವೋಚ್ಚತೆಯಾಗಲಿ ರದ್ದಾಗುತ್ತದೆ. ಕಾರಣ ಯಾವುದಾದರೊಂದು ಅಲಂಕಾರವಾಗಿದೆ ಎಂದರೆ, ಅದು ಪ್ರಧಾನವಾದ್ದಕ್ಕೆ ಆನುಷಂಗಿಕವಾಗಿರಬೇಕು ಎಂದರ್ಥ. ಹಾಗಾಗಿ ಒಂದು ವಸ್ತುವಿನ ಪ್ರಾಧಾನ್ಯ ಇಲ್ಲವಾಯಿತು. ಪ್ರಧಾನ ವಸ್ತುವೊಂದು ತನ್ನ ಸ್ವರೂಪದಲ್ಲಿ ಬದಲಾವಣೆ ಇಲ್ಲದೆ, ಪ್ರಧಾನ ಮತ್ತು ಗೌಣ ಎರಡೂ ಏಕಕಾಲದಲ್ಲಿ ಆಗಿರುವುದು ಸಾಧ್ಯವಿಲ್ಲ. ಪರಸ್ಪರ ವಿರುದ್ಧವಾದ ಎರಡು ತಮ್ಮ ರೂಪದಲ್ಲಿ ಏನೊಂದೂ ವ್ಯತ್ಯಾಸವಿಲ್ಲದೆ, ಜೊತೆ ಜೊತೆಯಲ್ಲಿ ಇರಲಾರವು.

ಪ್ರಧಾನ ಮತ್ತು ಗೌಣ ಭಾವ ಎರಡೂ ಜೊತೆ ಜೊತೆಯಲ್ಲಿ ಇರುವಂಥದು, ರಾಜನ ಅನುಚರನ ಸಂದರ್ಭದಂಥ ಅಪರೂಪದ ಸಂದರ್ಭದಲ್ಲಿ ಸಾಧ್ಯ ಎಂದು ವಾದಿಸಬಹುದು. ಆದರೆ, ಆ ಅನುಚರನಲ್ಲಿ ತನ್ನ ಪ್ರಭುವಿನ ವಿಷಯಕ್ಕೆ ಭೃತ್ಯಭಾವ ಮತ್ತು ತನ್ನ ಕೈ ಕೆಳಗಿನ ನೌಕರರ ವಿಷಯಕ್ಕೆ ಸ್ವಾಮಿ ಭಾವ (ಪ್ರಭುತ್ವದ ಭಾವ) - ಹೀಗೆ ಎರಡು ರೂಪಗಳು ಇರುತ್ತವೆ. ಆ ರೀತಿ ಪರಸ್ಪರ ವಿರುದ್ಧವಾದ ಎರಡು ಲಕ್ಷಣಗಳು ರಾಜನ ಅನುಚರನಲ್ಲಿ ಜೊತೆಜೊತೆಯಲ್ಲಿ ಸಮಸಮವಾಗಿ ಇರಬಲ್ಲುವು ಎಂದಾದರೆ ಇಲ್ಲಿಯೂ ಅದೇ ರೀತಿ ಎರಡು ವಿಭಿನ್ನ ರೀತಿಯ ರೂಪಗಳು, ಜೊತೆ ಜೊತೆಯಲ್ಲಿ ಇರಬಲ್ಲವು. ಅವುಗಳಲ್ಲಿ ಒಂದು ತುಲ್ಯಯೋಗಿತೆಯು ಒಂದು ಅಲಂಕಾರ ಎಂದು ಖಚಿತಪಡಿಸುವ ನಮ್ಮ ವಾದವನ್ನು ಸಮರ್ಥಿಸುತ್ತದೆ ಎಂದು ವಾದಿಸಬಹುದು. ಈ ಅಂಶದ ಸತ್ಯತೆಯನ್ನು ಒಪ್ಪುತ್ತೇವೆ. ಅದರಲ್ಲಿ ಯಾವುದಾದರೊಂದು ಅಲಂಕಾರವಿರಬಹುದೆಂದು ಒಪ್ಪುತ್ತೇವೆ. ಆದರೆ ಅದು 'ತುಲ್ಯಯೋಗಿತಾ' ಎಂದು ಕರೆಸಿಕೊಳ್ಳಲು ಅರ್ಹವಾಗುವುದಿಲ್ಲ ಎಂದು ಮಾತ್ರ ಹೇಳಬಹುದು.

ವರ್ಣ್ಯತ್ವಮೇಷಾಮಥವಾ ಸಾಮ್ಯಂ ಯದ್ಯತಿರಿಚ್ಯತೇ।
ಏತೇಷಾಂ ಪ್ರಸ್ತುತಾನಾಂ ಸಾ ಭವತ್ಯುಪಮಿತಿಃ ಸ್ಫುಟಮ್[41]

ಈ ಅಲಂಕಾರದಲ್ಲಿ ವರ್ಣ್ಯಮಾನ ಪದಾರ್ಥಗಳಲ್ಲಿ ಎಲ್ಲ ವಸ್ತುಗಳೂ ಸಮಪ್ರಾಧಾನ್ಯ ಹೊಂದಿವೆ ಎಂದು ಹೇಳುವುದಾದರೆ, ಅಥವಾ ಅವೆಲ್ಲವೂ ವಾಸ್ತವವಾಗಿಯೂ ಪರಸ್ಪರ ಸದೃಶವಾದುವು ಎಂದಾದರೆ, ಆಗ ಈ ಲಕ್ಷಣಗಳ ಕಾರಣದಿಂದಾಗಿಯೇ ಅದು, ಉಪ ಮಾಲಂಕಾರವೇ ಆಗಿರಬೇಕಲ್ಲದೆ ಬೇರೇನೂ ಆಗಿರಲು ಸಾಧ್ಯವಿಲ್ಲ.

ಕವಿಯು ಒಂದೋ, ಅದರಲ್ಲಿರುವ ಪದಾರ್ಥಗಳೆಲ್ಲವನ್ನೂ ಸಮಾನವಾಗಿಯೇ ವರ್ಣ್ಯಮಾನ ವಸ್ತುಗಳೆಂದು ಉದ್ದೇಶಿಸಿದ್ದಾನೆಂದಾಗಲಿ ಅಥವಾ ಅವೆಲ್ಲವೂ ಪರಸ್ಪರ ಸಾಮ್ಯತೆಯನ್ನು ಹೊಂದಿವೆ ಎಂದಾಗಲಿ ಪರಿಗಣಿಸಬೇಕಾಗುತ್ತದೆ. ಮೂರನೇ ಪರ್ಯಾಯ ಸಾಧ್ಯವಿಲ್ಲ. ವಾಸ್ತವವಾಗಿ ವರ್ಣನೆಯ ಪ್ರಧಾನ ವಸ್ತುಗಳೆಂದಲ್ಲದಿದ್ದರೂ, ವರ್ಣಿತವಾದ ಕೆಲವು ವಸ್ತುಗಳು, ಸಾಮ್ಯತೆಯ ಗುಣದಿಂದ ಹಾಗೆ ವರ್ಣಿತವಾಗಿವೆ ಎನ್ನುವುದಾದರೆ, ಅವುಗಳ ಯುಕ್ತತೆಗಿಂತ ಪರಸ್ಪರ ಸಾಮ್ಯತೆಯೇ ಮುಖ್ಯವಾಗುತ್ತದೆ. ಅದರ ಪರಿಣಾಮವೇನಾಗುತ್ತದೆ? ಆಗ ಅದು ಉಪಮೆಯ ಸ್ಪಷ್ಟ ಉದಾಹರಣೆಯಾಗುತ್ತದೆಂಬುದೇ ಪರಿಣಾಮ; ಕಾರಣ ಉಪಮಾಲಂಕಾರದ ನಿಯಮವಾದ ಅನೇಕ ವಸ್ತುಗಳೊಂದಿಗೆ ಸಾಮ್ಯಸಮನ್ವಯ - ತತ್ವ ಇಲ್ಲಿಗೆ ಅತ್ಯಂತ ಯುಕ್ತವಾಗಿ ಅನ್ವಯಿಸುವುದರಿಂದ, ಅದು ಉಪಮಾಲಂಕಾರವಲ್ಲದೆ ಬೇರಾವುದೇ ಅಲಂಕಾರವಾಗಲು ಸಾಧ್ಯವಿಲ್ಲ.

ಈ ಅಲಂಕಾರವನ್ನು ಸಮುಚ್ಚಿತೋಪಮಾಕ್ಕೆ ಸಮನಾದ್ದೆಂದು ಪರಿಗಣಿಸಬಹುದು. ಸಮುಚ್ಚಯದಲ್ಲಿ ವರ್ಣಿತವಾದ ಅರ್ಥದೊಂದಿಗೆ ಸಂಬಂಧ ಹೊಂದಿರುವುದು ಯಾವುದೋ ಅದು ಸಮುಚ್ಚಿತೋಪಮಾ. 'ಸಮುಚ್ಚಿತೋಪಮಾ'ದಲ್ಲಿರುವ 'ಉಪಮಾ' ಎಂಬುದಕ್ಕೆ 'ಸಮುಚ್ಚಿತ ಉಪಮಾನ' ಎಂದೇ ಅರ್ಥ; 'ಉಪಮೆ' ಎಂದಲ್ಲ.

ಇಲ್ಲಿ ಉಪಮಾನವು, ಪ್ರಧಾನವಸ್ತುವಿನಂತೆಯೇ ವರ್ಣಿತವಾದಾಗ, ಸಾಮ್ಯ ಸಮನ್ವಯಾತಿರೇಕದಿಂದಾಗಿ, ಕಾವ್ಯ ಸೌಂದರ್ಯವನ್ನುಂಟು ಮಾಡುತ್ತದೆ. ಈ ಕೆಳಗಿನ ಉದಾಹರಣೆಯಲ್ಲಿ ಅದನ್ನು ನೋಡಬಹುದು.

'ಮೂಲ ಪ್ರಾಕೃತ ಶ್ಲೋಕದ ಪಾಠ ಪೂರ ಕೆಟ್ಟಿದೆ'. ಅನುವಾದ ಅಸಾಧ್ಯವೆನ್ನುವಷ್ಟು- ಅದೇ ರೀತಿ ಇಲ್ಲಿಯೂ ಉಪಮಾನಗಳನ್ನು ಮಾತ್ರವೇ ಪೂರ್ತಿ ವರ್ಣಿಸಲಾಗಿದೆ ಎಂದಾದರೂ ಕೂಡ, ಸಾಮ್ಯಾತಿರೇಕದಿಂದ, 'ಉಪಮಾ' ಎಂದೇ ಪರಿಗಣಿಸಬೇಕಾಗುತ್ತದೆಂಬುದನ್ನು ಸಮರ್ಥಿಸುತ್ತದೆ.

[೧೪೧]

ಉದಾ:

ಜನಸ್ಯ ಸಾಕೇತ ನಿವಾಸಿನಸ್ತೌ
ದ್ವಾವಪ್ಯಭೂತಾಮಭಿನಂದ್ಯಸತ್ತ್ವೌ।
ಗುರು ಪ್ರದೇಯಾಧಿಕ ನಿಃಸ್ಪೃಹೋsರ್ಥೀ
ನೃಪೋsರ್ಥಿ ಕಾಮಾದಧಿಕ ಪ್ರದಶ್ಚ [೧೪೨] (ರಘುವಂಶ V - 31)

ಗುರುವಿಂಗೆ ನೀಡಬೇಕಾದುದಕಿಂತ
ಅಧಿಕವನು ಬಯಸದ ಯಾಚಕನು
ಯಾಚಕನು ಬಯಸಿದುದಕಿಂತ
ಹೆಚ್ಚಿನದ ನೀಡಬೇಕೆನುವ ನೃಪವರನು
ಈ ಇರ್ವರನು ಹೊಗಳಿದರಂದು
ಸಾಕೇತಪುರಜನರು ಅಭಿನಂದನೀಯರೆಂದು [೧೪೨]

ಅದೇ ರೀತಿ ಉಪಮಾನವನ್ನು ಕಾಲ್ಪನಿಕವಾಗಿ ಅತಿಶಯವಾದ ರೀತಿಯಲ್ಲಿ ರುಚಿರವೂ ಸುಕುಮಾರವೂ ಆದ ಲಕ್ಷಣಗಳಿಂದ ಕೂಡಿರುವಂತೆ ವರ್ಣಿಸಿಬಿಟ್ಟಾಗ, ಕವಿವಿವಕ್ಷಿತ ಉಪಮೇಯಕ್ಕೆ ಅದು ಇನ್ನಷ್ಟು ಅತಿಶಯ ಸೌಂದರ್ಯವನ್ನು ತಂದು ಕೊಡುತ್ತದೆ. ಉದಾ :

ಉಭೌ ಯದಿ ವ್ಯೋಮ್ನಿ ಪೃಥಕ್ ಪ್ರವಾಹಾ-
ವಾಕಾಶಗಂಗಾ ಪಯಸಃ ಪತೇತಾಮ್|
ತೇನೋಪಮೀಯೇತ ತಮಾಲನೀಲ-
ಮಾಮುಕ್ತ ಮುಕ್ತಾಲತಮಸ್ಯ ವಕ್ಷಃ[೧೪೩] (ಶಿಶುಪಾಲವಧ III - 8)

ಸುರನದಿಯ ಹೊನಲೆರಡು ನಭದಿಂದ
ಜೊತೆಜೊತೆಗೆ ಧುಮ್ಮಿಕ್ಕಿ ಹರಿಯುತಿರಲದನು
ತಮಾಲ ವೃಕ್ಷದ ಹಾಗೆ ಕಪ್ಪಗಿರುವ
ಬಾನೆದೆಯಿಂದ ಇಳಿಬಿದ್ದ ಹೊಳೆಹೊಳೆವ
ತೋರಮುತ್ತಿನ ಹಾರಕೆಣೆಯನಲು ಬಹುದಲ್ತೆ! [೧೪೩]

ಇದು ತುಲ್ಯಯೋಗಿತ ಮತ್ತು ಕಲ್ಪಿತೋಮಮಾ - ಇವೆರಡಕ್ಕೂ ನಿದರ್ಶನ

ಇದೇ ಮಾತು ಅನನ್ವಯಾಲಂಕಾರಕ್ಕೂ ಅನ್ವಯಿಸುತ್ತದೆ. ವರ್ಣ್ಯಮಾನ ವಸ್ತುವಿನ ಅತಿಶಯ ಸೌಂದರ್ಯ, ಅದೆಷ್ಟು ಕಣ್ಣಿಗೆ ಹೊಡೆಯುತ್ತಿರುತ್ತದೆ ಎಂದರೆ, ಕಾಲ್ಪನಿಕ ಉಪಮಾನವಾಗಲಿ, ಉಪಮಾನವಾಗಲಿ, ಅದಕ್ಕೆ ಹೋಲಿಕೆಯಲ್ಲ. ಆದ್ದರಿಂದ ಅದಕ್ಕೆ ಬೇರೆ ಹೋಲಿಕೆಯಿಲ್ಲ. ಅದಕ್ಕೆ ಅದೇ ಹೋಲಿಕೆ. ಆದ್ದರಿಂದ ಅದನ್ನು ಅದರ ವಿಶಿಷ್ಟ ಸ್ವರೂಪಕ್ಕೆ ಮಾತ್ರ ಹೋಲಿಸಬಹುದಾದ ಉಪಮೆ ಎಂದು ಪರಿಗಣಿಸುತ್ತಾರೆ ಉದಾ :

ತತ್ಪೂರ್ವಾನುಭವೇ ಭವಂತಿ ಲಘುವೋ ಭಾವಾಃ ಶಶಾಂಕಾದಯಃ
ತದ್ವಕ್ತ್ರೋಪಮಿತೇ ಪರಂ ಪರಿಣಮೇಚ್ಚೇತೋ ರಸಾಯಾಂಬುಜಾತ್|
ಏವಂ ನಿಶ್ಚಿನುತೇ ಮನಸ್ತವ ಮುಖಂ ಸೌಂದರ್ಯಸಾರಾವಧಿ
ಬಧ್ನಾತಿ ವ್ಯವಸಾಯಮೇತುಮುಪಮೋತ್ಕರ್ಷಂ ಸ್ವಕಾಂತ್ಯಾ ಸ್ವಯಮ್ [೧೪೪]

ನಿನ್ನ ಆ ಮೊಗವ ಮುನ್ನ ಕಂಡವರಿಗೆ
ಚಂದ್ರಮನೆ ಮೊದಲಾದುವೆಲ್ಲ
ಪೇಲವವೆನಿಸಿ ಬಿಡುವವು ಅದರೆದುರೊಳು
ಅದರುಪಮೆಗೆ ತಕ್ಕುದೆನಿಸಿಹ ಕಮಲ ಕೂಡ
ಕೀಳೆನಿಸಿ ಬಿಡುವುದು ಮನಕೆ!
ಸೌಂದರ್ಯಸಾರದ ಸೀಮೆಯೆನಿಸಿಹ
ನಿನ್ನ ಮೊಗವು ತನ್ನ ಹೋಲಿಕೆಯ ಉತ್ಕರ್ಷಕೆ
ತನ್ನ ಕಾಂತಿಯ ಕಡೆಗೆ ತಿರುಗುವುದೊಂದೆ ದಾರಿ
ಎಂದು ನಿಶ್ಚಯಿಸಿಹೆನು ನಾನು! [೧೪೪]

ಕವಿಯ ಅಭಿವ್ಯಕ್ತಿ ವೈಚಿತ್ರ್ಯಗಳಲ್ಲಿ ಮಾತ್ರ ಹೀಗೆ ಅನಂತ ಪ್ರಕಾರಗಳು ಕಂಡು ಬರುತ್ತವೆಯೇ ಹೊರತು, ಅಲಂಕಾರಗಳ ಲಕ್ಷಣಗಳಲ್ಲಿ ಅಲ್ಲ. [ಅಂದರೆ, ಒಂದೇ ಲಕ್ಷಣವು ಅಂಥ ವಿವಿಧ ಬಗೆಯ ಅಲಂಕಾರಗಳನ್ನು ವಿವರಿಸಬಲ್ಲುದು. ಸಾದೃಶ್ಯದ ದೃಷ್ಟಿಯಿಂದ ಸಾದೃಶ್ಯ ಮೂಲದ ಎಲ್ಲ ಅಲಂಕಾರಗಳೂ ಉಪಮೆಯಲ್ಲಿಯೇ ಪರಿಗಣಿತವಾಗುತ್ತವೆ]

ಅಭಿಧಾಯಾಃ ಪ್ರಕಾರಾಣಾಮಾನಂತ್ಯಂ ಪ್ರತಿಭೋದ್ಭವಮ್|
ವಕ್ತುಂ ನ ಪಾರ್ಯತೇ ಕಾಂತಾಲೀಲಾ ವೈಚಿತ್ರ್ಯವತ್ ಸ್ಫುಟಮ್ [೧೪೫]

ಇದು ಅಂತರಶ್ಲೋಕ

ಕವಿ ಪ್ರತಿಭೆಯಿಂದ ಹೊರಹೊಮ್ಮುವ ಕವಿಯ ಉಕ್ತಿ ವೈಚಿತ್ರ್ಯಗಳ (ಅಭಿವ್ಯಕ್ತಿ ಪ್ರಕಾರಗಳ) ಅನಂತತೆಯು ಪ್ರಿಯೆಯ ಲೀಲಾವೈಚಿತ್ರ್ಯಗಳ ಹಾಗೆ ಹೇಳಿಮುಗಿಸಲಾರದಷ್ಟು ಅಸಂಖ್ಯವಾದವು [೧೪೫]

ತುಲ್ಯ ಯೋಗಿತಾಲಂಕಾರವೂ, ಉಪಮೆಯಲ್ಲಿಯೇ ಬರುವುದರಿಂದ (ಅಂತರ್ಭಾವ) ಅದನ್ನು ಪ್ರತ್ಯೇಕವಾದ ಅಲಂಕಾರವೆಂದು ಪರಿಗಣಿಸಬಾರದು. ಅದರ ಲಕ್ಷಣ ಮತ್ತು ಉದಾಹರಣೆ ಈ ಕೆಳಕಂಡಂತೆ.

ನ್ಯೂನಸ್ಯಾಪಿ ವಿಶಿಷ್ಟೇನ ಗುಣಸಾಮ್ಯವಿವಕ್ಷಯಾ|
ತುಲ್ಯಕಾಲಕ್ರಿಯಾಯೋಗಾದಿತ್ಯುಕ್ತಾ ತುಲ್ಯಯೋಗಿತಾ [೧೪೬]

[ಭಾಮಹ III - 26]

ಗುಣಸಾಮ್ಯವನ್ನು ಸಿದ್ಧಪಡಿಸುವುದಕ್ಕೆಂದು ವಸ್ತುತಃ ನ್ಯೂನ ಗುಣವಾದ ಉಪಮೇಯಕ್ಕೂ ಅಧಿಕ ಗುಣವಾದ ಉಪಮಾನಕ್ಕೂ ಸಮಾನವಾದ ಕಾರ್ಯ ನಿರ್ವಾಹಕತ್ವ ವನ್ನು ವರ್ಣಿಸುವುದು ತುಲ್ಯಯೋಗಿತೆ[1] [೧೪೬]

ಇದು ಪ್ರಾಚೀನರು ನೀಡುವ ಅದರ ಲಕ್ಷಣ. ಸಾಮ್ಯಾತಿಶಯವನ್ನು ಸೂಚಿಸುವುದು ಅದರ ಉದ್ದೇಶ ಉದಾ :

ಶೇಷೋ ಹಿಮಗಿರಿಸ್ತ್ವಂ ಚ ಮಹಾನ್ತೋಗುರವಃ ಸ್ಥಿರಾಃ
ಜಾತ್ವಲಂಘಿತಮರ್ಯಾದಾಶ್ಚಲನ್ತೀಂ ಬಿಭ್ರತಕ್ಷಿತಿಮ್ ||[೧೪೭]

ಮೇರೆಯ ಮೀರದ ಹಾಗೆ
ಚಲಿಸುವ ದರಣಿಯ ಹೊತ್ತು ಹೊರೆವ ಕಾರಣದಿಂದೆ
ಹಿಮವಂತನು ನೀನು ಮತ್ತಾ ದಿಶೇಷನು
ಮಹಿಮಾಸ್ಪದರು, ಸ್ಥಿರರು ಮತ್ತು ಗುರುಯುತರು [೧೪೭] [ಭಾಮಹ III - 2]

ಕುಂತಕನು ಉಪಮೆಯ ಲಕ್ಷಣದಲ್ಲಿಯೇ ತುಲ್ಯಯೋಗಿತಾಲಂಕಾರದ ಲಕ್ಷಣವೂ ಹೇಗೆ ಅಂತರ್ಭಾವವಾಗಿದೆ ಎಂಬುದನ್ನು ಈಗ ಪ್ರತಿಪಾದಿಸುತ್ತಾನೆ. ಉಪಮೆಯ ಹಿಂದಿರುವ ಪ್ರಧಾನ ತತ್ತ್ವವೆಂದರೆ, ಈಗಾಗಲೇ ಚೆನ್ನಾಗಿ ತಿಳಿದಿರುವ ವಸ್ತುವಿನ ಸೌಂದರ್ಯಕ್ಕೂ ಚೆನ್ನಾಗಿ ತಿಳಿಯದಿರುವ ವಸ್ತುವಿನ ಸೌಂದರ್ಯಕ್ಕೂ ಇರುವ ಸಾಧರ್ಮ್ಯ ಸಮನ್ವಯವನ್ನು ವರ್ಣಿಸುವುದು ತುಲ್ಯಯೋಗಿತಲಂಕಾರದಲ್ಲಾದರೂ ಗುಣಸಾಮ್ಯ ವಿವಕ್ಷೆಯ ದೃಷ್ಟಿಯಿಂದ ಉಪಮಾನ ಉಪಮೇಯಗಳಿಗೆ ಸಮಾನ ಕಾರ್ಯ ನಿರ್ವಾಹಕತ್ವವನ್ನು ವರ್ಣಿಸುವುದಾಗಿದೆ. ಸರಿಯಾಗಿ ವಿಶ್ಲೇಷಿಸಿ ನೋಡಿದಾಗ ತಿಳಿದು ಬರುವುದು, ಇಲ್ಲಿಯೂ ಕೂಡಾ ಪ್ರಸ್ತುತಕ್ಕೂ ಅಪ್ರಸ್ತುತಕ್ಕೂ (ವಸ್ತು) ಇರುವ ಸಾಮ್ಯ ವ್ಯತಿರೇಕವೇ ಹೊರತು ಬೇರೇನೂ ಅಲ್ಲ. ಉದಾಹರಣೆಯೂ ಅದನ್ನೇ ಸಮರ್ಥಿಸುತ್ತದೆ. ಕಾರಣ ಪ್ರಧಾನ ವರ್ಣನಾ ವಿಷಯದಲ್ಲಿ ಶ್ಲೇಷವೇ ಮೊದಲಾದುವುಗಳ ಮೂಲಕ ಪ್ರತಿಪಾದಿತವಾದ ಸಮಾನ ಕ್ರಿಯೆಗಳ ಸಾಮ್ಯದ ಹೊರತು ಬೇರೇನೂ ಕಂಡು ಬರುವುದಿಲ್ಲ. ಎರಡು ವಸ್ತುಗಳಿಗೂ ಸಮಾನವಾಗಿ ಅನ್ವಯಿಸುವ ಕ್ರಿಯೆಯು ಶ್ಲೇಷದ ಸೌಂದರ್ಯದಿಂದ ಕೂಡಿರುವುದರಿಂದ ಇದು ತುಲ್ಯಯೋಗಿತಾಲಂಕಾರಕ್ಕೆ ಉದಾಹರಣೆಯೇ ಹೊರತು, ಬೇರೆ ಯಾವುದೇ ಅಲಂಕಾರಕ್ಕೆ ಉದಾಹರಣೆಯಾಗುವದಿಲ್ಲ ಎಂಬ ಮಾನ್ಯ ಪ್ರಾಚೀನ ಆಲಂಕಾರಿಕರ ವಿವರಣೆಯೂ ಯುಕ್ತಿಯುಕ್ತವಲ್ಲ.

ಯೈರ್ದೃಷ್ಟಾ ಸಾ ನ ವಾ ದೃಷ್ಟಾ ಮುಷಿತಾಃ ಸಮಮೇವ ತೇ|
ಹೃತಂ ಹೃದಯಮೇಕೇಷಾಮನ್ಯೇಷಾಂ ಚಕ್ಷುಶಃ ಫಲಮ್ [೧೪೮]

ಅವಳ ಕಂಡವರು ಮತ್ತವಳ ಕಾಣದಿದ್ದವರು
ಕೂಡಿಯೆ ಸಮಾನಾಗಿ ವಂಚಿತರಾದರು
ಒಬ್ಬರ ಹೃದಯ ಅಪಹೃತವಾದರೆ
ಇನ್ನೊಬ್ಬರದು ಕಣ್ಣಫಲವು [೧೪೭]

ತುಲ್ಯಯೋಗಿತಾಲಂಕಾರಕ್ಕೆ ಉದಾಹರಣೆಯೆಂದು ಪ್ರಾಚೀನರು ನೀಡಿರುವ ಇದು, ಸಹೃದಯರಿಗೆ ಅಲಂಕಾರಗಳ ಓನಾಮಾ ಗೊತ್ತಿಲ್ಲದವರ ಪ್ರಲಾಪದಂತನಿಸುತ್ತದೆ. ಪದ್ಯದಲ್ಲಿ ತರುಣಿಯ ಲಾವಣ್ಯಾತಿಶಯವನ್ನು ವರ್ಣಿಸಲು ಅಪ್ರಸ್ತುತ ಪ್ರಶಂಸಾರೂಪದ ವೈದಗ್ಧ್ಯಪೂರ್ಣ ಭಂಗಿಯು ಕವಿ ಹೃದಯದಿಂದ ಮೂಡಿ ಬಂದಿದೆ [ಆದ್ದರಿಂದ ಅವನು ಕಂಡವರು ಮತ್ತು

ಕಾಣದವರನ್ನು ಹೋಲಿಸುವ ಗೊಡವೆಗೆ ಹೋಗಿಲ್ಲ] ಆದ್ದರಿಂದ ಈ ಕೆಳಗಿನಂಥ ಪದ್ಯಗಳು ತುಲ್ಯಯೋಗಿತಾಲಂಕಾರಕ್ಕೆ ಉತ್ತಮ ನಿದರ್ಶನಗಳಾಗಬಹುದು.

ಯತ್ಕಾವ್ಯಾರ್ಥ ನಿರೂಪಣಂ ಪ್ರಿಯ ಕಥಾಲಾಪಾ ರಹೋಽವಸ್ಥಿತಂ
ಕಂಠಾಂತಂ ಮೃದುಗೀತ ಮಾದೃತ ಸುಹೃದ್ ದುಃಖಾಂತರಾವೇದನಮ್ [೧೪೯]

ಕಾವ್ಯಾರ್ಥ ನಿರೂಪಣೆ ಪ್ರಿಯಕಥಾಲಾಪ
ಏಕಾಂತವಾಸ ತುಂಬು ಕೊರಳ ಮೃದುಗೀತ
ಜೀವದ ಗೆಳೆಯನೊಡನೆ ತೋಡಿಕೊಂಡ
ಮನದಳಲು ನೀಡಬಹುದು ನೆಮ್ಮದಿಯನು [೧೪೯]

[ಮೇಲುನೋಟಕ್ಕೆ ಒಂದೇ ರೀತಿಯ ಒತ್ತುಕೊಟ್ಟು ಅನೇಕ ಸಂಗತಿಗಳನ್ನು ಇಲ್ಲಿ ನಿರೂಪಿಸಲಾಗಿದೆಯಾದರೂ, ಅವುಗಳಲ್ಲಿರುವ ಸಾದೃಶ್ಯವು ಬಹುಮುಖ್ಯವಾದುದು. ಹಾಗಾಗಿ ಇವನ್ನು ಉಪಯೆಂದೇ ತೆಗೆದುಕೊಳ್ಳಬೇಕು KLV F.N. on page 205 - Kun. V. Jeevita K. K. illnstrated]

ಅನನ್ವಯಾಲಂಕಾರವೂ ಉಪಮೆಯಲ್ಲಿಯೇ ಸೇರುತ್ತದೆ. ಅದನ್ನು ಕುರಿತು ಹಿಂದಿನ ಆಚಾರ್ಯರು ನೀಡಿರುವ ಲಕ್ಷಣ ಮತ್ತು ಉದಾಹರಣೆಗಳನ್ನು ಈಗ ನೋಡಬಹುದು.

ಯತ್ರ ತೇನೈವ ತಸ್ಯ ಸ್ಯಾದುಪಮಾನೋಪಮೇಯತಾ|
ಅಸಾದೃಶ್ಯ ವಿವಕ್ಷಾತಸ್ತಮಿತ್ಯಾಹುರನನ್ವಯಮ್ [೧೫೦]

ತಾಂಬೂಲರಾಗವಲಯಂ ಸ್ಫುರದ್ದಶನದೀಧಿತಿ|
ಇಂದೀವರಾಭನಯನಂ ತವೇವ ವದನಂ ತವ [೧೫೧]*

ಸದೃಶವಾದ ವಸ್ತು ಬೇರಾವುದೂ ಇಲ್ಲವೇ ಇಲ್ಲವೆಂಬುದನ್ನು ಸೂಚಿಸಲೆಂದು, ಒಂದೇ ವಸ್ತುವನ್ನು ಉಪಮೇಯ ಮತ್ತು ಉಪಮಾನಗಳೆರಡರ ಸ್ಥಾನದಲ್ಲಿಯೂ ಪ್ರಯೋಗಿಸಿದರೆ, ಅದನ್ನು ಅನನ್ವಯವೆನ್ನುತ್ತಾರೆ [೧೫೦]

ತಾಂಬೂಲದ ಕೆಂಪಿನ ಈ ಸೊಗಸೊ
ಹೊಳೆವ ಹಲ್ಲಿನ ಈ ಹೊಳಪೊ|
ಕನ್ನೈದಿಲೆಯಂಥ ಈ ಕಂಗಳೊ
ಇಂಥ ಈ ನಿನ್ನ ಮೊಗವು ನಿನ್ನ ಮೊಗವೇ [೧೫೧]

ಮೇಲೆ ನೀಡಲಾಗಿರುವ ಅನನ್ವಯದ ಲಕ್ಷಣ ಹಾಗೂ (ಉಪಮಾ ಪ್ರಭೇದಕ್ಕಿಂತ ಯಾವ ರೀತಿಯಲ್ಲೂ ಬೇರೆಯಲ್ಲದ) ಅದಕ್ಕೆ ಲಕ್ಷ್ಯವಾಗಿ ನೀಡಿರುವುದರ ಅನುಪಮ ಉಕ್ತಿವೈಚಿತ್ರ್ಯ ಇವೆರಡೂ ಅದು ಉಪಮಾಲಂಕಾರದ ಅಡಿಯಲ್ಲೇ ವರ್ಗೀಕರಣಗೊಳ್ಳುತ್ತದೆಂಬ ನಮ್ಮ ವಾದವನ್ನು ಸಮರ್ಥಿಸುತ್ತದೆ. ಉಪಮಾನ - ಉಪಮೇಯಗಳ ಸಂಬಂಧ ಅದರಲ್ಲಿ ಅತ್ಯಂತ ಸ್ಪಷ್ಟವಾಗಿದೆ.

* ಕಾವ್ಯಾಲಂಕಾರ 3-45

ಹೋಲಿಸಲು ಬೇರಾವ ಉಪಮಾನವೂ ಇಲ್ಲದಿರುವುದರಿಂದ, ಉಪಮಾ ಪ್ರಭೇದತ್ವವನ್ನು ಇದಕ್ಕೆ ಅನ್ವಯಿಸಲು ಸಾಧ್ಯವಿಲ್ಲವೆಂದು ಹೇಳುವಂತಿಲ್ಲ. ಒಂದೇ ವಸ್ತುವನ್ನು ಉಪಮಾನ ಮತ್ತು ಉಪಮೇಯವೆಂದು ಆರೋಪಿತಗೊಳಿಸಿಕೊಂಡದ್ದರಲ್ಲಿಯೇ ಅನನ್ವಯದ ಪ್ರಭೇದವಾಗಿದೆ.

ನಮಗೆ ಸಂಬಂಧಿಸಿದಂತೆ ಆರೋಪಿತ ಅಥವಾ ಆರೋಪಿತವಲ್ಲದ್ದು ಯಾವುದಾದರೂ ಸರಿಯೆ ಅದೇ ಸಾಕು. ಇದನ್ನು ಕೆಳಗೆ ವಿವರಿಸಲಾಗಿದೆ.

ಕಲ್ಪಿತೋಪಮಯಾ ತುಲ್ಯಂ ಕವಯೋಽನನ್ವಯಂ ವಿದುಃ [42]

ಅನನ್ವಯವು ಕಲ್ಪಿತೋಪಮೆಗೆ ಸಮನಾದುದೆಂದು ವಿದ್ವಾಂಸರ ಮತ [೪೨]

ಕಲ್ಪಿ ತೋಪಮೆಯೆಂಬುದು ಸಂಪೂರ್ಣವಾಗಿ ಕವಿಕಲ್ಪಿತವಾದ ಉಪಮೆ. ವಿದ್ವಾಂಸರು ಹೇಳುವುದೆಂದರೆ, ಅನನ್ವಯವು ಕಲ್ಪಿತೋಪಮೆಯೇ ಹೊರತು ಅದಕ್ಕಿಂತ ಕಿಂಚಿತ್ತೂ ಬೇರೆ ಅಲ್ಲ. ಕಲ್ಪಿತೋಪಮೆಯಲ್ಲಿ ನಾವು ನೋಡುವುದೇನು? ವರ್ಣಿತ ವಸ್ತು ಅತ್ಯುತ್ಕೃಷ್ಟ ಸೌಂದರ್ಯದ ಅಂಶದಲ್ಲಿ ಸ್ವಸಾಮ್ಯ ಸಮನ್ವಯವನ್ನು ಸಾಧಿಸಿಕೊಳ್ಳುತ್ತದೆ (ತನ್ನೊಂದಿಗೆ ಸಮನ್ವಯ ಸಂಬಂಧ). ವಾಸ್ತವವಾಗಿ ಅಸ್ತಿತ್ವದಲ್ಲಿ ಇಲ್ಲದಿದ್ದರೂ ಕವಿಗಳು ಅತ್ಯುನ್ನತವಾದ ಕಾಲ್ಪನಿಕ ಉಪಮಾನವನ್ನು ಆವಿಷ್ಕರಿಸಲು ತುದಿಗಾಲ ಮೇಲೆ ನಿಂತಿರುವುದನ್ನು ಕಾಣಬಹುದು. ಏಕೆ ಹೀಗೆ ಮಾಡುತ್ತಾರೆ?

'ಪ್ರಕೃತಿಯಲ್ಲಿ ಅಸ್ತಿತ್ವದಲ್ಲಿ ಇಲ್ಲದಿರುವ', 'ಆದರೆ ಕವಿಪ್ರತಿಭಾ ನಿರ್ಮಿತವಾದವು' ಎಂಬ ಈ ಎರಡು ವಿಶೇಷಣಗಳು ಅವೆರಡರ ನಡುವಿನ ಪರಸ್ಪರ ಸಾಮ್ಯವನ್ನು ಮಾತ್ರ ಮತ್ತೆ ಮತ್ತೆ ಒತ್ತುಕೊಟ್ಟು ಹೇಳುತ್ತವೆ ಹಾಗೂ ಕಾವ್ಯವು ನಮಗೆ ಹೃದ್ಯವಾಗುವುದಕ್ಕೆ ಕಾರಣಭೂತವಾದ್ದು ಸಾಮ್ಯತತ್ತ್ವಕ್ಕಿಂತ ಬೇರಾವುದೂ ಅಲ್ಲ. ಎಂಬುದನ್ನೂ ಸಾರುತ್ತವೆ. ಈ ವಿಚಾರದಲ್ಲಿ ಉಪಮೇಯೋಪಮೆ ಕುರಿತ ಈ ಮುಂಚಿನ ಲಕ್ಷಣ ಮತ್ತು ಉದಾಹರಣೆಯನ್ನು ಕೂಡ ನೋಡಬಹುದು -

ಉಪಮೇಯೋಪಮಾಂ ನಾಮ ಬ್ರುವತೇ ತಾಂ ಯಥೋದಿತಾಂ[1] [೧೫೨]

[ಉಪಮಾನ ಮತ್ತು ಉಪಮೇಯಗಳು ಪರ್ಯಾಯವಾಗಿ ಉಪಮೇಯ ಉಪಮಾನಗಳೂ ಆಗುವಂತೆ ಒಂದೇ ಕಡೆ ವರ್ಣಿಸಿದರೆ, ಅದನ್ನು ಉಪಮೇಯೋಪಮೆ ಎನ್ನುವರು] ಅದು ಹೀಗಿರುತ್ತದೆ [೧೫೨]

ಸುಗಂಧಿ ನಯನಾನಂದಿ ಮದಿರಾಮದ ಪಾಟಲಮ್|
ಅಂಭೋಜಮಿವ ತೇ ವಕ್ತ್ರಂ ತ್ವದಾಸ್ಯಮಿವ ಪಂಕಜಮ್| [೧೫೩]

ಪರಿಮಳದಲಿ
ಕಂಗಳಿಗೆ ಸಂತಸವ ತರುವುದರಲಿ

* ಭಾಮಹ ಕಾವ್ಯಾಲಂಕಾರ 3-37
ಉದಾ ಡಾ. ಕೆ. ಕೃಷ್ಣಮೂರ್ತಿ ಕನ್ನಡ ಕಾವ್ಯಾಲಂಕಾರ ಪುಟ 66

ಮದಿರಾಮದದ ಕೆಂಪಿನಲಿ
ನಿನ್ನ ಮುಖವು ಕಮಲದಂತೆ
ಕಮಲವೂ ನಿನ್ನ ಮುಖದಂತೆ [೧೫೩].

ಮೇಲೆ ಹೇಳಿದಂತೆ ಇದರ ಲಕ್ಷಣವು ಉಪಮಾಲಂಕಾರದಿಂದ ವಿಭಿನ್ನವೆಂಬಂತೆ ಇದನ್ನು ತೋರಿಸುವಂಥದಲ್ಲ. ಮುಂಚೆ ಇದರ ವಿಷಯದಲ್ಲಿ ಹೇಳಲಾದ ಇದರ ವಿಚಾರಗಳು ಅದರಿಂದ ಇದು ಬೇರೆಯಾದ್ದಲ್ಲ ಎಂಬುದನ್ನು ಹೇಳಲು ಸಾಕು. (ಅದರಿಂದ ಇದು ಸ್ವತಂತ್ರವಾದ್ದು ಎಂಬುದನ್ನು ನಿರಾಕರಿಸಲು ಸಾಕು). ಉಪಮಾನ ಮತ್ತು ಉಪಮೇಯಗಳು ತಮ್ಮ ಸ್ಥಾನಗಳನ್ನು ಬದಲಿಸಿಕೊಂಡು ಉಪಮೇಯ ಉಪಮಾನಗಳಾಗಬಹುದು. ಅದರ ಪರಿಣಾಮವಾಗಿ ಉಪಮಾನ ಉಪಮೇಯಗಳ ನಡುವಿನ ಸಾದೃಶ್ಯ ಅಥವಾ ವ್ಯತ್ಯಾಸವನ್ನು ಕಂಡುಕೊಳ್ಳಬಹುದು.

ಪರಸ್ಪರವಾಗಿ ಸದೃಶವಾಗಿರುವ ಎರಡು ವಸ್ತುಗಳಲ್ಲಿ ಮೂರನೆಯ ಉಪಮಾನ ಹೊಂದಿರುವುದನ್ನು ನಿರಾಕರಿಸುವುದು ಕವಿಯ ಉದ್ದೇಶವಾಗಿದೆ ಎಂಬುದು ಕೂಡ ಅದೊಂದು ಸ್ವತಂತ್ರವೂ ಹೊಸದೂ ಆದ ಅಲಂಕಾರವೆಂದು ಸಮರ್ಥಿಸಲು ಬರುವುದಿಲ್ಲ. ಕಾರಣ 'ಮುಖೇಂದು' ಮುಂತಾದ ರೂಪಕಗಳಲ್ಲಿ ಬೇರಾವುದೇ ಅನ್ಯ ಉಪಮಾನವಿರುವುದಕ್ಕೆ ಆಸ್ಪದವೇ ಇಲ್ಲ. ಉಪಮೇಯೋಪಮೆಯಲ್ಲಿರುವುದೇನೆಂದರೆ ಕವಿಯ ಸೃಜನಶೀಲ ಪ್ರತಿಭೆಯಿಂದ ಹೊರಹೊಮ್ಮಿದ ಅಭಿಧಾಪ್ರಕಾರ ವೈಚಿತ್ರ್ಯ ಮಾತ್ರ; ಹೊಸ ಅಲಂಕಾರವಾವುದೂ ಅಲ್ಲ. ಕಾವ್ಯೋಕ್ತಿಗಳಲ್ಲಿ ಅದೇ ಅಲಂಕಾರದ ಇನ್ನಿತರ ಉದಾಹರಣೆಗಳಲ್ಲಿ ಎದ್ದು ಕಾಣುವಂಥ ವೈಚಿತ್ರ್ಯಗಳು ಕಂಡುಬರುತ್ತವೆ ಉದಾ :

ತದ್‌ವಲ್ಗುನಾ ಯುಗಪದುನ್ಮಿಷಿತೇನ ತಾವತ್
ಸದ್ಯಃ ಪರಸ್ಪರ ತುಲಾಮಧಿರೋಹತಾಂ ದ್ವೇ|
ಪ್ರಸ್ಪಂದ ಮಾನ ಪರುಷೇತರ ತಾರಮಂತಃ
ಚಕ್ಷುಸ್ತವ ಪ್ರಚಲಿತ ಭ್ರಮರಂ ಚ ಪದ್ಮಮ್ [೧೫೪]

ಸೊಗಸುತಲಿ ಜೊತೆ ಜೊತೆಯಲರಳುತಲಿ
ಸದೃಶತೆಯನಾಂತುವೀಯೆರಡು
ಮೃದು ಗತಿಯೊಳತ್ತಿತ್ತ ಚಲಿಸುತಿಹ
ಪುತ್ಥಳಿಯನೊಳಕೊಂಡ ನಿನ್ನ ಈ ಕಣ್ಣು
ಮತ್ತತ್ತಿತ್ತ ಚಲಿಸುತಿಹ ಭ್ರಮರವನಾಂತ ಆ ಕಮಲ [೧೫೪] (ರಘುವಂಶ 5-68)

ಹಾಗೂ

ಜನಸ್ಯ ಸಾಕೇತ ನಿವಾಸಿನಸ್ತೌ
ದ್ವಾವಪ್ಯಭೂತಾಮಭಿನಂದ್ಯಸತ್ತ್ವೌ|
ಗುರು ಪ್ರದೇಯಾಧಿಕ ನಿಃಸ್ಪೃಹೋಽರ್ಥೀ
ನೃಪೋಽರ್ಥಿ ಕಾಮಾದಧಿಕ ಪ್ರದಶ್ಚ [೧೫೫] **(ರಘುವಂಶ V - 31)**

ಗುರುವಿಂಗೆ ನೀಡಬೇಕಾದುದಕಿಂತ
ಅಧಿಕವನು ಬಯಸದ ಯಾಚಕನು
ಯಾಚಕನು ಬಯಸಿದುದಕಿಂತ
ಹೆಚ್ಚಿನದ ನೀಡಬೇಕೆನುವ ನೃಪವರನು
ಈ ಇರ್ವರನು ಹೊಗಳಿದರಂದು
ಸಾಕೇತ ಪುರಜನರು ಅಭಿನಂದನೀಯರೆಂದು [೧೫೫] ರಘುವಂಶ

ಈ ಉದಾಹರಣೆಗಳಲ್ಲಿ ವರ್ಣಿಸಲಾದ ಎರಡೂ ವಸ್ತುಗಳು ಪ್ರಸ್ತುತವಾಗಿರುವುದರಿಂದ, ಅವೆರಡರಲ್ಲೂ ಸಾಮ್ಯವಿದೆ ಹಾಗೂ ಅವು ಯಾವುದೇ ನವೀನ ಅಲಂಕಾರಗಳಾಗುತ್ತವೆಂದು ಹೇಳಲಾಗದು.

ಇನ್ನೊಂದು ಉದಾಹರಣೆಯನ್ನು ನೋಡೋಣ
ಹೇಲಾವಭಗ್ನಹರಕಾರ್ಮುಕ ಏಷ ಸೋऽಪಿ
ಹೇಲಾ (ಪ್ರದಾನ) ಪರಿತೋಷಿತ ಚಂದ್ರ ಚೂಡಃ|
ತಸ್ಯೈವ ಸೋऽಸ್ಯ ಚ.... ಸಖ್ಯ ವಾ ಸ್ಯಾತ್
ಶ್ಲಾಘ್ಯಂ ದ್ವಯೋರುಭಯಥಾಪಿ ತವಾದ್ಯ ತೇಷಾಮ್ [೧೫೬]

ಮುರಿದನೀತನು ಶಿವಧನುವ ಲೀಲೆಯಲಿ
ಸಂಪ್ರೀತಗೊಳಿಸಿಹನವನು ಶಿವನ
ತನ್ನ ಲೀಲಾ ಕೃತ್ಯದಿಂದ.
ಅವರಿರ್ವರೊಳು ಮೈತ್ರಿ ಮೂಡಿದರದುವೆ
ಶ್ಲಾಘ್ಯವು ಆ ಇರ್ವರಿಗು ಮತ್ತೆ ತಮಗೂ [೧೫೬]

ಹಿಂದಿನದರ ಬಗ್ಗೆ ಏನು ಹೇಳಲಾಯಿತೋ, ಅದೇ ಇದಕ್ಕೂ ಅನ್ವಯಿಸುತ್ತದೆ. ಉಪಮಾಲಂಕಾರದ ಲಕ್ಷಣವನ್ನು ಹೇಳುವಾಗ ಉಪಮಾನ ಉಪಮೇಯಗಳಿಗಿರುವ ಸಾಮ್ಯ ಸಂಬಂಧವೇ ಉಪಮಾಲಂಕಾರದ ಮೂಲಭೂತ ತತ್ತ್ವ ಎಂದು ಹೇಳಿದ್ದರೂ, ಉಪಮಾನ ಯಾವಾಗಲೂ ಅಪ್ರಸ್ತುತವೇ ಆದ್ದರಿಂದ ಅದು ಉಪಮೇಯಕ್ಕೆ ನೆರವಾಗಬೇಕು. ಆದರೆ ಈ ಹಿಂದಿನ ಉದಾಹರಣೆಗಳಲ್ಲಿ ಪ್ರಸ್ತುತದ ಪ್ರಾಧಾನ್ಯವನ್ನು ಇನ್ನಷ್ಟು ಒತ್ತುಕೊಟ್ಟು ಹೇಳಲಾಗಿದೆ.

ಇದೇ ತರ್ಕದ ಆಧಾರದ ಮೇಲೆ ಪರಿವೃತ್ತಿ ಅಲಂಕಾರವನ್ನೂ ಪ್ರತ್ಯೇಕ ಅಲಂಕಾರವೆಂದು ಪರಿಗಣಿಸಲು ಸಾಧ್ಯವಾಗುವುದಿಲ್ಲ. ಪರಿವೃತ್ತಿ ಅಲಂಕಾರದ ಲಕ್ಷಣವನ್ನು ಪ್ರಾಚೀನ ಆಲಂಕಾರಿಕರು ಹೀಗೆ ಹೇಳಿದ್ದಾರೆ.

"ಅರ್ಥಾನಾಂ ಯೋ ವಿನಿಮಯಃ ಪರಿವೃತ್ತಿಸ್ತು ಸಾ ಮತಾ" [೧೫೭]

ಎರಡು ವಸ್ತುಗಳ ನಡುವಿನ ವಿನಿಮಯವೇ ಪರಿವೃತ್ತಿ [೧೫೭]

ವಿನಿಮಯವೆಂದರೆ ಒಂದು ವಸ್ತುವಿನ ಜಾಗದಲ್ಲಿ ಇನ್ನೊಂದು ವಸ್ತುವನ್ನು ಅಳವಡಿಸುವುದು ಎಂಬುದು ಅಧ್ಯಾಹಾರ್ಯ. ಇದನ್ನು ಪರಿವೃತ್ತಿ ಅಲಂಕಾರವೆಂದು ಹೇಳಲಾಗಿದೆ. ಅದರಲ್ಲಿ

ಅನೇಕ ಬಗೆಗಳು ಸಾಧ್ಯ. ಯಾವುದೇ ವಸ್ತುವಿನ ಸಂಪೂರ್ಣ ಸ್ಥಾನವನ್ನು ಇನ್ನೊಂದು ವಸ್ತು ಸಂಪೂರ್ಣವಾಗಿ ವಶಮಾಡಿಕೊಳ್ಳಬಹುದು. ಉದಾ :

ಸ್ವಲ್ಪಂ ಜಲ್ಪ ಬೃಹಸ್ಪತೇ ಸುರಗುರೋ ನೈಷಾ ಸಭಾ ವಜ್ರಿಣಃ [೧೫೮]

ಓ ಬೃಹಸ್ಪತಿಯೆ, ಸುರುಗುರುವೆ
ಮೆಲ್ಲಗೆ ಮಾತಾಡು
ಇದು ಇಂದ್ರ ಸಭೆಯಲ್ಲ [೧೫೮]

ಅನೇಕ ಧರ್ಮಗಳನ್ನು ಹೊಂದಿರುವ ವಸ್ತುವಿನ ಒಂದೇ ಒಂದು ಧರ್ಮ ಮಾತ್ರ (ಲಕ್ಷಣ) ಕ್ರಮವಾಗಿ ಇನ್ನೊಂದು ಧರ್ಮವಾಗಿ ಬದಲಾಗಬಹುದು. ಉದಾ :

ವಿಸೃಷ್ಟರಾಗಾದಧರಾನ್ನಿವರ್ತಿತಃ
ಸ್ತನಾಂಗರಾಗಾರುಣಿತಾಚ್ಚ ಕಂದುಕಾತ್|
ಕುಶಾಂಕುರಾದಾನ ಪರಿಕ್ಷತಾಂಗುಲಿಃ
ಕೃತೋऽಕ್ಷಸೂತ್ರಪ್ರಣಯೀ ತಯಾ ಕರಃ [೧೫೯] [ಕುಮಾರ ಸಂಭವ 5-11]

ತುಟಿಗೆ ಲಾಕ್ಷಾರಸವ ತೊಡೆವುದನು ತೊರೆದ ಮತ್ತಾ
ಸ್ತನಲೇಪನದಿಂದ ಕೆಂಪಾದ ಚೆಂಡನು ಬಿಟ್ಟ
ಕುಶಾಂಕುರವ ಕೊಯ್ಯಂದು ಗಾಯಗೊಂಡಿಹ ಕೈಬೆರಳನು
ಜಪಮಣಿಯನೆಣಿಸಲಿಕೆ ಅಣಿಗೊಳಿಸಿಹಳು [೧೫೯]

ಇಲ್ಲಿ ಪಾರ್ವತಿಯ ಕರಕಮಲರೂಪದ ಧರ್ಮ ಪರಿವರ್ತಿತವಾಗಿದೆ [ಇದು ಧರ್ಮಾಂತರ ಪರಿವರ್ತನೆಗೆ ಉದಾ]. ಕೆಲವೊಮ್ಮೆ ವಸ್ತು ಅಪರಿವರ್ತಿತವಾಗಿ ಹಾಗೆಯೇ ಉಳಿದುಬಿಟ್ಟು, ಅದರ ಒಂದು ಧರ್ಮ ಇನ್ನೊಂದು ಧರ್ಮವಾಗಿ ಬದಲಾವಣೆ ಹೊಂದಬಹುದು. ಆ ಇನ್ನೊಂದು ಧರ್ಮ., ಅಗತ್ಯವಿರುವ ಅರ್ಹತೆಗಳನ್ನು ಅತ್ಯಧಿಕ ಪ್ರಮಾಣದಲ್ಲಿಯೇ ಪಡೆದಿರುತ್ತದೆ. ಉದಾ:

ಕಿಮಿತ್ಯಪಾಸ್ಯಾಭರಣಾನಿ ಯೌವನೇ
ತ್ವಯಾ ಧೃತಂ ವಾರ್ಧಕ ಶೋಭಿವಲ್ಕಲಮ್ [೧೬೦] [ಕುಮಾರ ಸಂಭವ 5-44]

ತಾರುಣ್ಯದೊಳು ನೀನಿಂತು
ಆಭರಣಗಳ ತ್ಯಜಿಸಿ
ಮುಪ್ಪಿನಲಿ ಶೋಭಿಸುವ
ನಾರುಡೆಯನೇಕೆ ತಳೆದಿಹೆ ಹೇಳು? [೧೬೦]

ಕೆಲವೊಮ್ಮೆ ಪರಿವರ್ತಿತವಾಗುವಲ್ಲಿ ಅನೇಕ ಧರ್ಮಿಗಳು (ವಸ್ತುಗಳು) ಒಂದರೊಡನೊಂದು ಸ್ಪರ್ಧಿಸಬಹುದು. ಹಿಂದಿನ ಲಕ್ಷಣಕಾರನೊಬ್ಬ ಇದನ್ನು ಉದಾಹರಣೆ ಸಮೇತ ಈಗಾಗಲೇ ಹೇಳಿದ್ದಾನೆ.

ಶಸ್ತ್ರಪ್ರಹಾರಂ ದದತಾ ಭುಜೇನ ತವ ಭೂಭುಜಾಮ್|
ಚಿರಾರ್ಜಿತಂ ಹೃತಂ ತೇಷಾಂ ಯಶಃ ಕುಮುದ ಪಾಂಡುರಮ್ [೧೬೧]

ನಿನ್ನ ಭುಜಬಲದಿಂದ ಭೂಪತಿಗಳಿಗೆ
ಶಸ್ತ್ರ ಪ್ರಹಾರವನು ಕೊಟ್ಟು
ಬಹುಕಾಲದಿಂದವರುಗಳಿಸಿದ್ದ
ಕುಮುದ ಪುಷ್ಪದ ತೆರನ ಧವಳ ಕೀರ್ತಿಯನು
ಅಪಹರಿಸಿರುವೆ ನೀನು [೧೬೧] [ದಂಡಿ 2 - 356] ಪುಟ 110 ಕೆ. ಕೆ

ಇದೀಗ ಪರಿವೃತ್ತಿಯನ್ನು ಬೇರೆ ಅಲಂಕಾರವೆಂದು ಪರಿಗಣಿಸಲು ಸಾಧ್ಯವಿಲ್ಲವೆಂಬುದು ನಿಶ್ಚಿತವಾದಂತಾಯಿತು.

ವಿನಿವರ್ತನ ಮೇಕಸ್ಯ ಯತ್ತದನ್ಯಸ್ಯ ವರ್ತನಮ್|
ತದಲಂಕರಣಂ ನ ಸ್ಯಾತ್ ಪೂರ್ವವತ್ ಪರಿವರ್ತನಾತ್ [43]

ಒಂದನ್ನು ತೆಗೆದು ಹಾಕಿ ಅದರ ಜಾಗದಲ್ಲಿ ಇನ್ನೊಂದನ್ನು ತರುವುದನ್ನು ಅಲಂಕಾರವೆಂದು ಪರಿಗಣಿಸಲಾಗುವುದಿಲ್ಲ. ಕಾರಣ ಮೊದಲಿನ ಹಾಗೆಯೇ ಇಲ್ಲಿಯೂ ಪರಿವರ್ತನೆ ಅದೇ ಆಗಿದೆ. [43]

ಇರುವ ಒಂದನ್ನು ತೆಗೆದುಹಾಕಿ, ಅದರ ಜಾಗದಲ್ಲಿ ಇನ್ನೊಂದನ್ನು ತಂದು ಸೇರಿಸುವುದು ಹೊಸ ಅಲಂಕಾರವಾಗುವುದಿಲ್ಲ. ಕಾರಣವೇನೆಂದರೆ, ಎರಡೂ ಕೂಡ ಸ್ಥಾನ ಬದಲಾಯಿಸುವುದರಲ್ಲಿ ಸಮನಾಗಿ ತೊಡಗಿಕೊಂಡಿವೆ ಮತ್ತು ವರ್ಣನೆಯಲ್ಲಿ ಪ್ರತಿಯೊಂದೂ ಒಂದೇ ರೀತಿಯಲ್ಲಿ ಮುಖ್ಯವಾಗುತ್ತದೆ. ಅದು ಹೇಗೆ? ಈಗಾಗಲೇ ಹೇಳಲಾದ ಉದಾಹರಣೆಗಳಲ್ಲಿರುವಂತೆ (ಉಪಮೇಯೋಪಮಾ) ಎರಡೂ ಸಮಾನ ರೀತಿಯಲ್ಲಿ ಪ್ರಧಾನವೆನ್ನುವುದಾದರೆ, ಅಥವಾ ಯಾವುದು ಪ್ರಧಾನ ಅಥವಾ ಯಾವುದು ಪ್ರಧಾನವಲ್ಲ ಎಂದು ನಿಶ್ಚಯಿಸಲು ಯಾವುದೇ ತತ್ವದ ಆಧಾರದವಿಲ್ಲದಿದ್ದಾಗ, ಎರಡರ ವಿಷಯದಲ್ಲೂ, ಯಾವುದು ಅಲಂಕಾರ್ಯ ಮತ್ತು ಯಾವುದು ಅಲಂಕಾರವೆಂದು ನಿರ್ಣಯಿಸಲಾಗುವುದಿಲ್ಲ. (ಪರಿವೃತ್ತಿ ಅಲಂಕಾರದಲ್ಲಿ ಆದದ್ದು ಹೀಗೆಯೇ). ಇಲ್ಲಿಗೂ ಅದೇ ಮಾನದಂಡ ಅನ್ವಯಿಸುತ್ತದೆ. ಜೊತೆಜೊತೆಯಲ್ಲಿದ್ದ ಮಾತ್ರಕ್ಕೆ, ಒಂದು ಅಲಂಕಾರ್ಯ ಮತ್ತೊಂದು ಅಲಂಕರಣವೆಂದು ಎರಡರ ಸಂಬಂಧವನ್ನು ಸಮರ್ಥಿಸಲು ಸಾಧ್ಯವಿಲ್ಲ. ಹಾಗಿದ್ದರೆ, ಪ್ರಾಧಾನ್ಯದ ವಿಚಾರವನ್ನೇ ಕೈಬಿಡಬೇಕಾಗುತ್ತದೆ. ಯಾವುದೇ ವಿಭಿನ್ನ ಸ್ವರೂಪವನ್ನು ಅದು ತಾಳಿದರೂ, ಈ ವಿಭಿನ್ನತೆ ಅದರ ಪ್ರಗತಿಗೆ ಬಾಧಕವಾಗದಿದ್ದರೆ, ಸಾದೃಶ್ಯದ ಅಸ್ತಿತ್ವವನ್ನೇ ಅದರ ಗುಣ ಲಕ್ಷಣವನ್ನು ನಿರ್ಧರಿಸುವ ನಿರ್ಣಯಾತ್ಮಕ ಆಧಾರವಾಗಿ ತೆಗೆದುಕೊಂಡು ಅದನ್ನೊಂದು ಅಲಂಕಾರವೆಂದು ಹೆಸರಿಸಬಹುದು. ಹಾಗಾಗಿ ಇಲ್ಲೂ ಕೂಡ

ಸಮುಚ್ಚಿತೋಪಮೆಯ ಸಂದರ್ಭದಲ್ಲಿ ನೋಡಿದಂತೆ, ಇರುವುದು ಉಪಮೆ ಮಾತ್ರ ಎಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ.

ಉದಾ :

ಸದಯಂ ಬುಭಜೇ ಮಹಾಭುಜಃ
ಸಹಸೋದ್ವೇಗಮಿಯಂ ವ್ರಜೇದಿತಿ|
ಅಚಿರೋಪನತಾಂ ಸ ಮೇದಿನೀಂ
ನವ ಪಾಣಿಗ್ರಹಣಾಂ ವಧೂಮಿವ [೧೬೨]

ಹೊಸದಾಗಿ ಕೈ ಹಿಡಿದ ವಧುವಿನಂತೆ
ಆಗಿನ್ನು ದೊರೆತ ವಸುಧೆಯನು
ನಯದಿಂದ ಭೋಗಿಸಿದನಾ ಮಹಾಬಾಹು
ಆತುರದ ನಡೆಯಿಂದ ಬೆದರದಿರಲವಳೆಂದು [೧೬೨] (ರಘುವಂಶ 8-7)

ಇಲ್ಲಿ ತನ್ನ ವಧು ರೂಪದ ಸಾಮ್ರಾಜ್ಯವನ್ನು ಪ್ರೀತಿಯಿಂದ ಮತ್ತುಅತ್ಯಂತ ನಯದಿಂದ ನೋಡಿಕೊಳ್ಳುವಲ್ಲಿ ರಾಜನ ಪ್ರಯತ್ನವಿರುವುದು ಧ್ವನಿತವಾಗಿದೆ. ಇಲ್ಲಿ ವರ್ಣಿತವಾಗಿರುವ ವಸ್ತುಗಳಾದ ವಧು ಮತ್ತು ಭೂಮಿ ಎರಡೂ ಸಮ ಸಮವಾಗಿ ಪ್ರಧಾನವಾದ ವಸ್ತುಗಳು. ಅಲ್ಲದೆ ಒಂದು ಇನ್ನೊಂದಕ್ಕೆ ಜಾಗ ಮಾಡಿಕೊಡುವುದರ ವರ್ಣನೆಯೂ ಇದೆ. ಸಾದೃಶ್ಯವು ಮೂಡಿಸುವ ಪ್ರಭಾವವೇ ಅನ್ಯಾದೃಶವಾದ್ದರಿಂದ, ಈ ಪರಿವೃತ್ತಿಯ (ವಿನಿಮಯ) ಹಿಂದೆ ಇರುವುದು ಉಪಮಾಲಂಕಾರವೆಂದೇ ನಾವು ಪರಿಗಣಿಸಬೇಕು; ಉದಾ :

ಅಯಂ ರಣಶ್ಚಾರಣಜೀವಿತಾಂತಕೃತ್
ನನಂದ (ತುಶ್ಚೈವ) ನರಸ್ಯ ಸೈನಿಕಾಃ|
ಇಹ ವ್ರತೋ ಶಕ್ತಿಶಿರೋಭಿರಾದರಾತ್
ನವಾಸಿಧಾರಾ ನ ಖಲೂತ್ಪಲ ಸ್ರಜಃ [೧೬೩]

ಚಾರಣರ ಮರಣವನು ಸಾರುತಿದೆ ರಣವು
ಫಲುಗುಣನ ಸೈನಿಕರು ಪರಿತೋಷಿಸುತಿಹರಲ್ಲಿ
ನಿಷ್ಠೆಯಿಂದಲಿ ಶಿರಗಳನು ಸಮರ್ಪಿಸುತಿಹರು
ನವ ಖಡ್ಗಧಾರೆಯು ಉತ್ಪಲದ ಮಾಲೆಯಲ್ಲ [೧೬೩]

ಮೇಲಿನದನ್ನು ಅಲಂಕಾರವೆಂದು ಪರಿಗಣಿಸಲು ನಮಗಿರುವ ಆಧಾರವೆಂದರೆ ಅಲ್ಲಿರುವ ಮನೋಹರವಾದ ಸಾಮ್ಯವೇ. ಅಂಥ ಸಂದರ್ಭಗಳಲ್ಲಿ ವಸ್ತುವನ್ನು ಅಲಂಕಾರದಿಂದ ಸಜ್ಜುಗೊಳಿಸಬೇಕಿದ್ದಾಗ, ಕವಿಗಳು ಕೇವಲ ಅಭಿಧೀಯಮಾನ ಉಪಮೆಗಳನ್ನಷ್ಟೇ ಅಲ್ಲದೆ ಪ್ರತೀಯಮಾನ ಉಪಮೆಗಳನ್ನೂ ಯೋಜಿಸುವುದು ಕಂಡುಬರುತ್ತದೆ.

ಪ್ರತೀಯ ಮಾನತ್ವವನ್ನು ಪರಿವೃತ್ತಿಯಲ್ಲಿ ಕಾಣಬಹುದು (ಪ್ರತೀಯಮಾನ ಪರಿವೃತ್ತಾಲಂಕಾರಕ್ಕೆ)

ನಿರ್ದಿಷ್ಟಾಂ ಕುಲಪತಿನಾ ಸ ಪರ್ಣಶಾಲಾ –
ಮಧ್ಯಾಸ್ಯ ಪ್ರಯತ ಪರಿಗ್ರಹ ದ್ವಿತೀಯಃ|
ತಚ್ಛಿಷ್ಯಾಧ್ಯಯನ ನಿವೇದಿತಾವಸಾನಾಂ
ಸಂವಿಷ್ಟಃ ಕುಶಶಯನೇ ನಿಶಾಂ ನಿನಾಯ [೧೬೪]

ಕುಲಪತಿಯು ತೋರಿದ ಪರ್ಣಶಾಲೆಯೊಳಂದು
ಕುಶತಲ್ಪದೊಳು ಕಾಂತೆಯೊಡ-
ನಿರುಳನು ಕಳೆದು ನಿಷ್ಠೆಯಿಂದ
ನಿಶೆಯು ಕೊನೆಗೊಂಡುದನು ನೃಪನು ತಿಳಿದನು
ವೇದ ಮಂತ್ರಗಳ ಪಠನದಲಿ [೧೬೪] [ರಘುವಂಶ 1-95]

ಇಲ್ಲಿ ವರ್ಣಿಸಲಾದ ಎಲ್ಲ ಪದಾರ್ಥಗಳೂ ಮಹಾರಾಜನ ದಿನನಿತ್ಯದ ರೂಢಿಗಳಲ್ಲಿ ಆಗಿರುವ ಪರಿವೃತ್ತಿಯನ್ನು ಪ್ರತೀಯಮಾನಗೊಳಿಸುತ್ತಿವೆ. ಪರಿವೃತ್ತಿಯನ್ನು ಎಷ್ಟರಮಟ್ಟಿಗೆ ಪ್ರತೀಯಮಾನಗೊಳಿಸಲಾಗಿದೆ ಎಂದರೆ, ಸಹೃದಯರ ಹೃದಯಾಹ್ಲಾದಕರವಾಗುವಂತೆ. ಒಂದು ವೇಳೆ ಪರಿವೃತ್ತಿ ಇಲ್ಲಿ ಸೇರಿಲ್ಲವೆಂದಾದರೆ ಇಡೀ ಮಹತ್ವವೇ ಇಲ್ಲವಾಗುತ್ತಿತ್ತೆ ಎಂದು ಕೇಳಬಹುದು. ಅದರ ಅಸ್ತಿತ್ವವನ್ನು ನಾವು ಒಪ್ಪುತ್ತೇವೆ. ಪರಿವೃತ್ತಿಯು ಇಲ್ಲವೇ ಇಲ್ಲವೆಂದು ನಾವು ಘೋಷಿಸಲು ಹೊರಟಿಲ್ಲ. ನಾವು ಮೊದಲಿಂದ ಹೇಳುತ್ತಿರುವುದೆಂದರೆ, ಪರಿವೃತ್ತಿಯು ವರ್ಣಿತ ಪದಾರ್ಥ (ಅಂದರೆ ಅಲಂಕಾರ್ಯ). ಆದ್ದರಿಂದ ತಾರ್ಕಿಕವಾಗಿ ಅದನ್ನು "ಅಲಂಕಾರ" ಎಂದು ಹೇಳಲು ಸಾಧ್ಯವಿಲ್ಲ. ಅಥವಾ ಅದರ ಪ್ರತೀಯಮಾನ ರೂಪವು ಅದನ್ನುಅಲಂಕಾರ ಎಂದು ಹೇಳುವುದನ್ನು ಸಮರ್ಥಿಸಲಾರದು. ಕಾರಣ ಯಾವುದೇ ಅಥವಾ ಎಲ್ಲ ಪದಾರ್ಥವೂ ಪ್ರತೀಯಮಾನ ರೂಪವನ್ನು ತಾಳ ಬಲ್ಲುದು ಮತ್ತು ಆ ಕಾರಣಕ್ಕಾಗಿಯೇ ಯಾವುದೊಂದು ಪದಾರ್ಥವನ್ನೂ ಅಲಂಕಾರವೆಂದು ಪರಿಗಣಿಸಲಾಗುವುದಿಲ್ಲ. ಪ್ರಸ್ತುತ ಉದಾಹರಣೆಯೇ ಅದಕ್ಕೆ ಉತ್ತಮ ನಿದರ್ಶನ. ಸಹೃದಯರಿಗೆ ಆಹ್ಲಾದವುಂಟು ಮಾಡುತ್ತದೆನ್ನುವ ಕಾರಣಕ್ಕೆ ಪ್ರತೀಯಮಾನವಾದದ್ದೆಲ್ಲವೂ ಅಲಂಕರಣ ಎಂದು ತಾರ್ಕಿಕವಾಗಿ ವಾದಿಸಲಾಗುವುದಿಲ್ಲ. ಅಲಂಕರಿಸಲಾದ ಪದಾರ್ಥದಲ್ಲೂ ಸಹೃದಯರಿಗೆ ಆಹ್ಲಾದ ವುಂಟು ಮಾಡುವ ಗುಣವಿರಬಹುದು. ಕಾವ್ಯವನ್ನು 'ವಸ್ತುಮಾತ್ರ' ಅಲಂಕರಣ, ಅಲಂಕೃತಗೊಂಡ ರಸಾದಿಗಳು ಎಂದು ಮೂಲತಃ ವಿಭಜಿಸುವುದೇ ಅದನ್ನು ಅರ್ಥರಹಿತ ಗೊಳಿಸುತ್ತದೆ.

ಒಂದು ವೇಳೆ ಪರಿವೃತ್ತಿಯೇ ಅಲಂಕಾರ ಎನ್ನುವುದಾದರೆ, ಅದರ ಶೋಭೆಯನ್ನು ಇನ್ನಷ್ಟು ಹೆಚ್ಚಿಸಲು ಇತರೆ ಅಲಂಕಾರಗಳನ್ನು ತಳೆಯುವ ಅಗತ್ಯವೇ ಇಲ್ಲ. ಆದರೆ ಈಗಾಗಲೇ ಉದ್ಧರಿಸಲಾದ ನಿದರ್ಶನಗಳಲ್ಲಿ ಪರಿವೃತ್ತಿಯ ಜೊತೆಯಲ್ಲೇ ಇತರೆ ಅಲಂಕಾರಗಳೂ ಇರುವುದನ್ನು ಕಾಣಬಹುದು. ಉದಾಹರಣೆಗೆ :

''ಕಿಮಿತ್ಯಪಸ್ಯಾಭರಣಾನಿಯೌವನೇ
ತ್ವಯಾಧೃತಂ ವಾರ್ಧಕ ಶೋಭಿವಲ್ಕಲಮ್''

ಕಾರಣ ಉಳಿದ ಸಾಲುಗಳು ಹೀಗಿವೆ

ಪದ ಪ್ರದೋಷೇ ಸ್ಫುಟಚಂದ್ರತಾರಕಾ ವಿಭಾವರೀ
ಯದ್ಯರುಣಾಯ ಕಲ್ಪತೇ-" [ಕು. ಸಂಭವ 5-44]

ಹರಯದೊಳಗಿಂತು ನೀನೊಡವೆಗಳ ತ್ಯಜಿಸಿ
ಮುಪ್ಪಿಂಗೆ ಯೋಗ್ಯವಹ ನಾರುಡೆಯನಾಂತೆ ಏಕೆ?
ಚಂದ್ರ ತಾರೆಗಳಿಂದ ಹೊಳೆಯುವ ಇರುಳು
ಮುಸ್ಸಂಜೆ ಹೊತ್ತಿನೊಳೆ ಅರುಣನನು ಬಯಸುವುದೆ?

ಯಾರಾದರೂ ಒಂದು ವೇಳೆ, ಅದು ಈಗಾಗಲೇ ಅಲಂಕೃತವಾಗಿದ್ದರೂ ಕನಿಷ್ಠ ಅಲಂಕಾರದಿಂದ ಸಂತೃಪ್ತರಾಗದ ಕವಿಗಳಿಗೆ ಅದನ್ನು ಇನ್ನೂ ಹೆಚ್ಚಿನ ಅಲಂಕಾರಗಳಿಂದ ಅಲಂಕೃತಗೊಳಿಸುವ ಆಸೆ ಎಂದು ವಾದಿಸುವುದಾದರೆ ಅದು ಯುಕ್ತಿಯುಕ್ತವಲ್ಲ. ಕಾರಣ ಕೆಲವು ಅಲಂಕಾರಗಳ ವಿಷಯಕ್ಕೆ ತೀವ್ರ ಇಚ್ಛೆ-ಇವು ಅಲಂಕೃತಗೊಳ್ಳಬೇಕಾದ ವಸ್ತು ಸ್ವತಂತ್ರ ಅಸ್ತಿತ್ವವನ್ನುಳಿಸಿಕೊಂಡಿದ್ದಾಗ ಮಾತ್ರ ಅರ್ಥಪೂರ್ಣವಾಗುತ್ತದೆ. ಅಲಂಕೃತಗೊಳ್ಳಬೇಕಾದ ಸ್ವತಂತ್ರ ವಸ್ತು ಇಲ್ಲದಿದ್ದಾಗ ಆ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಪೂರ್ವೋಕ್ತ ಪರಿಗಣನೆಗಳ ಮೇರೆಗೆ ಸಂಯುಕ್ತವಾಗಿಯಾಗಲಿ, ಅಥವಾ ಒಂದೊಂದೇ ಆಗಲಿ, ಪರಿವೃತ್ತ ವಿಷಯಗಳು ಅಲಂಕರಣವಾಗಲು ಸಾಧ್ಯವಾಗುವುದಿಲ್ಲ ಎಂದು ಖಂಡಿಸಿರುವುದರಿಂದ ಪರಿವೃತ್ತಿಗೇ ಹೊಸದೊಂದು ಅಲಂಕಾರವನ್ನು ಯೋಜಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಕಾರಣ ಆಗ ಪರಿವೃತ್ತಿಯು ಅಲಂಕರಣದ ಸಾಮರ್ಥ್ಯವನ್ನು ಹೊಂದಿರುತ್ತದೆಯೇ ಹೊರತು, ಅಲಂಕಾರ್ಯದ ಸಾಮರ್ಥ್ಯವನ್ನಲ್ಲ. ಆದ್ದರಿಂದ ನಾವು, ಉಪಮಾಲಂಕಾರವನ್ನು ಬಳಸುವುದರ ಮೂಲಕ ಪರಿವೃತ್ತಿಗೆ ಹೊಸದೊಂದು ಶೋಭೆಯನ್ನು ಕವಿ ತಂದುಕೊಟ್ಟಿದ್ದಾನೆಂದು ತೀರ್ಮಾನಿಸಬೇಕಾಗುತ್ತದೆ.

ಈ ಚರ್ಚೆಯ ವಾಕ್ಯಾರ್ಥವಿಷ್ಟೆ - ಪಾರ್ವತಿಯು ತನ್ನ ಯುವ ವಯಸ್ಸಿಗೆ ಯೋಗ್ಯವಾದ ಕಾಂತಿಯುಕ್ತವಾದ ಉಡುಪನ್ನು ತ್ಯಜಿಸಿ, ವಯಸ್ಸಾದವರಿಗೆ ಮಾತ್ರ ಒಪ್ಪುವಂಥ ನಾರುಮಡಿಯನ್ನು ಧರಿಸಿರುವುದು, ಚಂದ್ರ ಮತ್ತು ತಾರೆಗಳಿಂದ ಶೋಭಿಸುತ್ತಿರುವ ರಾತ್ರಿಯು ಇನ್ನೂ ಮುಸ್ಸಂಜೆ ಹೊತ್ತಿನಲ್ಲೇ (ಪ್ರದೋಷ ಕಾಲ) ಅರುಣನೊಂದಿಗೆ ಸಮಾಗಮ ಹೊಂದಿದಂತಾಗುತ್ತದೆ. ಈ ಅದ್ಭುತ ಉಪಮೆಯು ಕವಿಯ ಸ್ಫೂರ್ತಿಯ ಹೊಳಹಿನಿಂದ ಮೂಡಿ ಸಹೃದಯರ ಆಹ್ಲಾದಕ್ಕೆ ಕಾರಣವಾಗಿದೆ. ಇದರಿಂದ ಹೊರಪಡುವ ಮುಖ್ಯಾರ್ಥವೆಂದರೆ - ಅಲಂಕಾರಗಳನ್ನು (ಅಲಂಕರಣ) ಲಕ್ಷಣದಲ್ಲಿ ಹೇಳಿರುವ ರೀತಿಯಲ್ಲಿಯೇ ಬಳಸಬೇಕು. ಪ್ರತಿಭಾವಂತ ಕವಿಗೆ ಹೊಳೆಯುವ ಮಾತಿನ ವೈವಿಧ್ಯಪೂರ್ಣ ವಕ್ರತೆಯೊಂದಿಗೆ ಅವು ಕೂಡಿಕೊಂಡಿರಬಹುದು. ಉದಾ:

ಸಿವಿಣಾವಿಕ್ಕೇಣ..... [೧೬೫] ಪೂರ್ಣಪಾಠದೊರೆತಿಲ್ಲ
ಇದು ನಿದರ್ಶನಾಲಂಕಾರದ ಲಕ್ಷಣವನ್ನು ನಿರೂಪಿಸುತ್ತದೆ
(ಪ್ರಾಚೀನ ಆಲಂಕಾರಿಕರು ನೀಡಿರುವಂತೆ)

ಕ್ರಿಯಯೈವ ವಿಶಿಷ್ಟಸ್ಯ ತದರ್ಥಸ್ಯೋಪದರ್ಶನಾತ್|
ಜ್ಞೇಯಾ ನಿದರ್ಶ ನೈವಾಸೌ ಯಥೇವವತಿಭಿರ್ವಿನಾ [೧೬೬]

[ಭಾಮಹ - 3 - 33 - ಕಾವ್ಯಾಲಂಕಾರ II (K - K - 64)

'ಅಂತೆ' 'ಹಾಗೆ' ಮೊದಲಾದುವೊಂದೂ ಇಲ್ಲದೆ ಇರುವಂಥ ವಾಕ್ಯದ ಮೂಲಕ, ಕ್ರಿಯೆಯೊಂದರಿಂದಲೇ ವಿಶಿಷ್ಟವಾದ ಅದರ ಅಭಿಪ್ರಾಯವು ತಿಳಿದುಬರುತ್ತದೆಂದು ವರ್ಣಿಸಿದರೆ, ಅದು ನಿದರ್ಶನಾಲಂಕಾರವೆನಿಸುತ್ತದೆ [೧೬೬]

ನಿದರ್ಶನಾಲಂಕಾರಕ್ಕೆ ಅವರು ನೀಡಿರುವ ಉದಾಹರಣೆ
ಅಯಂ ಮಂದದ್ಯುತಿರ್ಭಾಸ್ವಾನಸ್ತಂ ಪ್ರತಿ ಯಿಯಾಸತಿ|
ಉದಯಃ ಪತನಾಯೇತಿ ಶ್ರೀಮತೋ ಬೋಧಯನ್ನರಾನ್ [೧೬೭]

(ಭಾಮಹ III - 34)

ಉದಯವು ಪತನಕೋಸುಗವೆ
ಎಂದು ಧನವಂತರಿಗೆಲ್ಲ ಬೋಧಿಸುತೆ
ಮಂದ ಕಾಂತಿಯ ಭಾಸ್ಕರನು ಮುಳುಗುತಿಹನು [೧೬೭]

ಕವಿಯ ವಿದಗ್ಧ ಪ್ರತಿಭಾವ್ಯಾಪಾರದ ಪರಿಣಾಮವಾಗಿ ಪರೋಕ್ಷ ರೀತಿಯಲ್ಲಿ ಅಭಿವ್ಯಕ್ತವಾಗಬೇಕಾದ ಸಾದೃಶ್ಯವು ಇಲ್ಲಿ "ಇದು ಅದರ ಹಾಗೆ ಇದೆ (ತದಿವ)" ಅಥವಾ "ಇದು ಅದೇ ಆಗಿದೆ (ತದೇವ) ಎಂಬ ಸಾದೃಶ್ಯ ಸೂಚಕಗಳನ್ನು ಬಳಸಿ, ಪ್ರಕಟವಾಗಿ ಹೇಳದೆ, ಪ್ರತೀಯಮಾನ ರೂಪದಲ್ಲಿ ಹೇಳಿದೆ. ಕವಿಯ ಕಲಾತ್ಮಕ ಶಕ್ತಿಯಿಂದ ಇದನ್ನು ಪ್ರತೀಯಮಾನ ಉತ್ಪ್ರೇಕ್ಷೆಯ ಉದಾಹರಣೆಯೆಂದು ಪರಿಗಣಿಸಬೇಕು. ಉದಾ

ಪವಾಣ ಚಲ ವಿಜ್ಜು ಚ ದುಲಿಅಂ ರಾಇಆಸು ಖಿನಅಂತಿ ಮೇ
ಅಆಸೋ ಉವಾಣ ಉರುಲಿಸಬ್ದ ಯಾಮಿ ಹಿಳಿಆಸುಕ
ಜಿಲ್ಲಾಇ ಬಿ ರಹವಿಪಿ [೧೬೮]

[ಇಲ್ಲಿಯ ಪ್ರಾಕೃತ ಶ್ಲೋಕದ ಪಾಠವು ಪೂರ್ಣವಾಗಿ ಕೆಟ್ಟಿರುವುದರಿಂದ, ಸಂಸ್ಕೃತ ಛಾಯೆ ಸಾಧ್ಯವಾಗುತ್ತಿಲ್ಲ]

ಗುಡುಗಿನ ಗರ್ಜನೆಯನ್ನು ಕೇಳಿದ ಪ್ರೇಮ ಪೀಡಿತ ಹೆಂಗಳೆಯರು, ಕಾಳರಾತ್ರಿಯಲ್ಲಿ ಕಣ್ಕೋರೈಸುವಂತೆ ಭಯಂಕರವಾಗಿ ಮಿಂಚುಗಳನ್ನು ಹೊಮ್ಮಿಸುತ್ತಿರುವ ಆಗಸದ ಮೋಡಗಳತ್ತ ನೋಡುತ್ತಿರುವಂತೆ ವರ್ಣಿಸಲಾಗಿದೆ. ಸ್ತ್ರೀಯರು ಯಾವುದೇ ನಿಶ್ಚಿತ ಅಭಿಪ್ರಾಯವುಳ್ಳವರಾಗಿರುವುದಿಲ್ಲ. ವಾಕ್ಯದ ಒಟ್ಟಾರೆ ಅರ್ಥವು ಅಪೂರ್ಣವೇ ಆಗಿದೆ. ನಿದರ್ಶನದ ಇನ್ನೊಂದು ಉದಾಹರಣೆ

ತಮಿಂದು ರರ್ಧೋದಿತ ಬಿಂಬಶೋಭಾ
.... ಶೋಪಿ|
ಮಂದ ಪ್ರಭಾಲಂಘಿತ ಕಾಮಪಾಲ–
ಲಲಾಟ ಪಟ್ಟ ಶ್ರಿಯಮಾಚಕರ್ಷ [೧೬೯]

ಅರ್ಧಬಿಂಬವು ಮೂಡಿ ಅದರಿಂದೆ
ಶೋಭಿತನಾದರು ಸರಿಯೆ
ಚಂದ್ರಮನು.......
ತನ್ನೊಂದು ಮಂದಕಾಂತಿಯಿಂದಲಿ
ಬಲದೇವನ ಹಣೆಯನಲಂಕರಿಸಿರುವ
ಪೇಟದ ಚೆಲುವನಪಹರಿಸಿದಂತಿದೆ [೧೬೯]

ಇಲ್ಲಿಯೂ ಕವಿಯ ಚಮತ್ಕಾರಕ್ಕೆ ಕಾರಣವಾಗಿರುವಂಥದು ಅರ್ಧ ಮಾತ್ರ ಉದಿಸಿರುವ ಚಂದ್ರ ಬಿಂಬದ ಚೆಲುವಿಗೆ ಸದೃಶವಾಗಿ ಅದನ್ನೂ ಮೀರಿಸುವಂತಿರುವ ಬಲರಾಮನ ಲಲಾಟಪಟ್ಟದ ಸೌಂದರ್ಯ ಸಂಪತ್ತು. ನಾನಾರ್ಥಗಳನ್ನು ಸೂಚಿಸುತ್ತಿರುವ ಕ್ರಿಯಾಪದವೇ ಅವ್ಯಕ್ತ ಉಪಮೆಯ ಸೂಚಕವಾಗಿದೆ. ಕವಿಯು ಚರ್ವಿತ ಚರ್ವಣವಾದ ಪದವೊಂದನ್ನು ನಿವಾರಿಸುವ ರೀತಿ ಇದೇ ಆಗಿದೆ. ವಾಸ್ತವವಾಗಿ ಇಲ್ಲಿ ಬಳಕೆಯಾಗಿರುವ 'ಚಕರ್ಷ' ಅಥವಾ 'ನೀಲೋತ್ಪಲ' ಶಬ್ದವು ನೇರವಾಗಿ ಕಣ್ಣು ಎಂಬ ಅರ್ಥದ ಪ್ರತೀತಿ ಉಂಟು ಮಾಡುತ್ತಿಲ್ಲ.

ಆದರೆ ಉಪಚಾರ ಪರಂಪರೆಯಿಂದ [ಒಂದರ ನಂತರ ಒಂದು ಬರುವ ರೂಪಕ ಪರಂಪರೆ] ಅದು ಅದರ ವಿಶೇಷಣವಾಗಿ ಬರುತ್ತದೆ. ಒಮ್ಮೆಗೆ ಈ ವಿಶೇಷಣ ವಿಶೇಷ್ಯಗಳ (ಧರ್ಮ ಧರ್ಮಿ) ಸಂಬಂಧ ಪ್ರಕಟವಾಯಿತೆಂದರೆ, ಲಕ್ಷಣಾವ್ಯಾಪಾರ ಪ್ರಾರಂಭವಾಗುತ್ತದೆ. (ಅಂದರೆ ಶಬ್ದಗಳ ಸೂಚಕ ವ್ಯಾಪಾರ). ಮೊತ್ತಮೊದಲಿಗೆ ಈ ಲಕ್ಷಣಾವ್ಯಾಪಾರ ವಸ್ತುವೊಂದರ ಗುಣವನ್ನು ಅಭಿವ್ಯಕ್ತಿಸುವಷ್ಟಕ್ಕೆ ಸೀಮಿತವಾಗಿರುತ್ತದೆ (ವಸ್ತು ಸೂಚನೆ ಪ್ರಾಥಮಿಕ ಕಾರ್ಯಗಳಲ್ಲಿ ಬರುವಂಥದು ಅಭಿಧಾ). ಅನಂತರ ಅದು ಉಪಮಾನ ಉಪಮೇಯಗಳಲ್ಲಿನ ಸಾದೃಶ್ಯದೊಂದಿಗೆ ಸಂಬಂಧವನ್ನು ಸ್ಥಾಪಿಸಿಕೊಳ್ಳುತ್ತದೆ. ಅಲ್ಲದೆ ವಿಶೇಷಣಗಳಲ್ಲಿಯ ಸಾದೃಶ್ಯಗ್ರಹಿಕೆಯು ಅದರ ಅನಂತಾಂಶದ ರಸಗ್ರಹಣದಲ್ಲಿ ಪರ್ಯವಸಾನವಾಗುತ್ತದೆ. ಪ್ರಸಕ್ತ ಉದಾಹರಣೆಯಲ್ಲಿ ಸೂಚಿತವಾಗಿರುವುದು ಕೇವಲ ಕಣ್ಣನೋಟವಷ್ಟೇ ಅಲ್ಲ. ಅದರ ಸೌಂದರ್ಯಾತಿಶಯ ಕೂಡ ಪ್ರತೀಯಮಾನವಾಗಿದೆ. 'ನೀಲೋತ್ಪಲ' ಎಂಬಂಥ ಸಮಾಸ ಶಬ್ದದಲ್ಲಿ ಅದು ವಿಶೇಷಣವಷ್ಟೇ ಆಗಿರುವುದರಿಂದ ವಿಶೇಷಣತ್ವವು ಮೊದಲು ಬರಬೇಕು. ಅಥವಾ ಬಹುವ್ರೀಹಿ ಸಮಾಸದಲ್ಲಾದರೆ, ಸಪ್ತಮೀಯಲ್ಲಿ ವಿಶೇಷಣವು ವಿಶೇಷ್ಯದೊಂದಿಗೆ ಸಂಬಂಧವೇರ್ಪಡಿಸಿಕೊಳ್ಳುತ್ತದೆ.

'ಇಂದು ಮುಖಿ' ಎಂಬ ಸಮಾಸ ಶಬ್ದದ ಅರ್ಥ ಇಂದುವಿನಂತೆ ಮುಖವು ಯಾರದೋ ಅವಳು ಇಂದುಮುಖಿ ಎಂದು. ಇಲ್ಲಿಯೂ ಕೂಡ ಈಗಾಗಲೇ ಪ್ರಸ್ತಾಪಿಸಿರುವ ಪರಿಗಣನೆಗಳ ರೀತ್ಯಾ ಚಂದ್ರನೇ ವಿಶೇಷಣ. ಕಾರಣ, ಸಮಸ್ತ ಲೋಕವೂ ಸಂತೋಷದಿಂದ ನೋಡುವ

ಚಂದ್ರಮಂಡಲಕ್ಕೂ ಮುಖಕ್ಕೂ ಅಸದೃಶವಾದ ಸಾಮ್ಯವನ್ನು ಪ್ರತೀತಗೊಳಿಸುತ್ತದಾದ ಕಾರಣದಿಂದ. ಈ ರೀತಿ ಈ ಸಮಾಸಪದವನ್ನು ಸಮರ್ಥಿಸಬಹುದು. ಅಥವಾ ಈ ಸಮಾಸ ಪದವನ್ನು ಸ್ವಲ್ಪ ಬೇರೆ ರೀತಿಯಲ್ಲೂ ಹೇಳಬಹುದು - 'ಇಂದುವಿನ' ಮುಖಕ್ಕೆ ಸದೃಶವಾದ ಮುಖವು ಯಾರದೋ ಅವಳು "ಇಂದುಮುಖಿ" ಎಂದು. ಇಲ್ಲಿ ಇಂದುವು ತನ್ನದೇ ಭಾಗವಾದ (ಏಕದೇಶದಲ್ಲಿರುವ) ಮುಖಕ್ಕೆ ವಿಶೇಷಣವಾಗುತ್ತದೆ. ಊರು ಹತ್ತಿ ಉರಿಯಿತು. (ಸುಟ್ಟು ಹೋಯಿತು) - ಎಂಬ ವಾಕ್ಯದಲ್ಲಿರುವಂತೆ (ಇಲ್ಲಿ ಊರು ಎಂದರೆ ಊರಿನಲ್ಲಿರುವ ಜನ ಮತ್ತು ವಸ್ತುಗಳು ಎಂದು). ಉಳಿದ ವಿವರಣೆ ಮೊದಲಿನದರ ಹಾಗೆಯೇ. 'ಪುರುಷವ್ಯಾಘ್ರ' ಎಂಬ ಸಮಾಸ ಶಬ್ದದಲ್ಲಿ ಎರಡೂ ಶಬ್ದಗಳಿಗಿರುವ ಸಾಧಾರಣ ಧರ್ಮಕೂಡ ಪ್ರತೀಯಮಾನವಾಗುತ್ತದೆ. ಎರಡರ ಮಧ್ಯೆ ಸಂಬಂಧ ಸ್ಥಾಪಿಸುವ ಸಾಧಾರಣ ಧರ್ಮವಿಲ್ಲದಿದ್ದರೆ ಉಪಮಾನ-ಉಪಮೇಯಗಳ ಸಂಬಂಧವನ್ನು ಸಮರ್ಥಿಸಲಾಗುವುದಿಲ್ಲ. ಸಂಬಂಧಪಟ್ಟ ಎರಡೂ ಶಬ್ದಗಳನ್ನು ಪಕ್ಕ ಪಕ್ಕದಲ್ಲಿ ಇಡುವುದರಿಂದ, ಸಾಧಾರಣ ಧರ್ಮವನ್ನು ಪ್ರಕಟವಾಗಿ ಹೇಳದೆಯೂ, ಅದು ಅಧ್ಯಾಹಾರವಾಗುತ್ತದೆ. ಅದರಿಂದಾಗಿಯೇ ಪಾಣಿನಿಯ ವ್ಯಾಕರಣದಲ್ಲಿ ಹೇಳಿರುವುದು-ಉಪಮಿತ ವ್ಯಾಘ್ರಾದಿಭಿಃ ಸಾಮಾನ್ಯ ಪ್ರಯೋಗೇ [ವ್ಯಾಘ್ರ ಎಂಬುದು ಉತ್ತರ ಪದವಾಗಿದ್ದಾಗ ಹಾಗೂ ಸಾಧಾರಣ ಧರ್ಮವು ಅನುಕ್ತವಾಗಿದ್ದಾಗ, ಸಮಾಸ ಶಬ್ದವು ಸಾದೃಶ್ಯದ ಮೇಲೆ ನಿಂತಿರುತ್ತದೆ] ಅದೇ 'ಇಂದುಕಾಂತ' ಮುಖಿ ಎಂಬ ಸಮಾಸ ಶಬ್ದದಲ್ಲಿ ಸಾಧಾರಣ ಧರ್ಮವನ್ನು ವಾಸ್ತವವಾಗಿ ಹೇಳಿಬಿಟ್ಟಿದೆ. [ಇಂದುವಿನ ಹಾಗೆ ಕಾಂತಿಯುಕ್ತವಾದ ಮುಖವು ಯಾರದೋ ಅವಳು ಇಂದುಮುಖಿ] ಈಗ ಅದನ್ನು ವಿವರಿಸಲಾಗುವುದು. ಮೊದಲಿಗೆ ಪ್ರಾರಂಭವಾದ ಎರಡು ಶಬ್ದಗಳಾದ ಇಂದು ಮತ್ತು ಕಾಂತ ಎಂಬವುಗಳು ಕೂಡಿ ಇಂದು ಕಾಂತ ಎಂದು [ಇಂದುವಿನ ಹಾಗೆ ಕಾಂತಿಯುಕ್ತವಾದ] ಸಮಾಸ ಶಬ್ದವಾಗುತ್ತದೆ. ಸಮಾನ ಧರ್ಮವನ್ನು ಹೇಳುವ ಶಬ್ದಗಳೊಂದಿಗೆ ಉಪಮಾನಗಳು ಸೇರಿ ಸಮಾಸವಾಗುತ್ತವೆ. ಅನಂತರ ಇಂದು ಕಾಂತ ಹಾಗೂ ಮುಖಿ ಎಂಬ ಶಬ್ದಗಳನ್ನು ಸೇರಿಸಿ, ಇಂದುವಿನ ಹಾಗೆ ಕಾಂತಿಯುಕ್ತವಾದ ಮುಖವುಳ್ಳವಳು ಎಂಬ ಅರ್ಥದಲ್ಲಿ 'ಇಂದು ಕಾಂತ ಮುಖಿ' ಎಂಬ ಇನ್ನೊಂದು ಸಮಾಸ ಪದವನ್ನು ಮಾಡುತ್ತೇವೆ. ಸಮಾನಧರ್ಮವನ್ನು ಅಭಿವ್ಯಕ್ತಿಸುವ ಶಬ್ದವನ್ನು 'ವೃತ್ತಿ' ಅಥವಾ ವಾಕ್ಯ ಅಥವಾ ವಾಕ್ಯಾರ್ಥ ಎಂದು ವಿವರಿಸಬಹುದು. ಆದ್ದರಿಂದ ಸಮಾನ ಧರ್ಮವನ್ನು ವ್ಯಕ್ತವಾಗಿ ನಿಯಮನಗೊಳಿಸುವ ಅಥವಾ ನಿಯಮನಗೊಳಿಸದಿರುವ ನಿಶ್ಚಿತ ಅಂಶ ಅಥವಾ ನಿಯಮವಾವುದೂ ಇಲ್ಲ. ಸಮಾನ ಧರ್ಮವನ್ನು ಅತ್ಯಂತ ವ್ಯಕ್ತವಾಗಿಯೇ ಅಭಿವ್ಯಕ್ತಿಸುವ ಶಬ್ದವನ್ನು ಬಳಸಿಕೊಂಡು ಸಮಾಸ ಮಾಡಿದಾಗ, ಅಲ್ಲಿ ಪ್ರತೀಯಮಾನತೆ ಇದೆಯೆಂದು ಹೇಳುವುದು ಹೇಗೆ ತಾನೆ ಯುಕ್ತಿಯುಕ್ತವಾಗುತ್ತದೆ?

ಆದ್ದರಿಂದ ವಕ್ತೃವಿನ ಇಚ್ಛೆಯ ಮೇರೆಗೆ, ಸಮಾನ ಧರ್ಮವು ಕೆಲವೊಮ್ಮೆ ಅಧ್ಯಾಹಾರ್ಯ ಅಥವಾ ಪ್ರತೀಯಮಾನವಾಗುತ್ತದೆ. ಇನ್ನು ಕೆಲವೊಮ್ಮೆ ವ್ಯಕ್ತವಾಗಿ ಹೇಳಲಾಗುತ್ತದೆ.

ಸಾದೃಶ್ಯವನ್ನಾಧರಿಸಿದ, ಪರಸ್ಪರ ಸಂಬದ್ಧವಾದ ಎರಡರ ನಡುವೆ ಇರುವ ಸಮಾನ ಧರ್ಮವು ಪ್ರತೀಯಮಾನವಾಗಿಯೇ ಇರುತ್ತದೆ. ಅದನ್ನು ವ್ಯಕ್ತರೂಪದಲ್ಲಿ ಹೇಳುವುದಿಲ್ಲ. ಅರ್ಥಪ್ರತ್ಯಯವಾಗಬೇಕೆಂದೇ ಶಬ್ದದ ಬಳಕೆಯಾಗುವುದು. ಕವಿಕೌಶಲದಿಂದಾಗಿ ಅರ್ಥವು ಪ್ರತೀಯಮಾನವಾಗುತ್ತದೆಂದಾದರೆ, ಅದನ್ನು ಬೇರೊಂದು ಶಬ್ದದಿಂದ ವ್ಯಕ್ತವಾಗಿ ಹೇಳಬೇಕೇಕೆ? ಆದ್ದರಿಂದ ವಾಕ್ಯದಲ್ಲಿ, ನ್ಯೂನಾತಿರೇಕಗಳಿಲ್ಲದ, ಅತ್ಯಂತ ಸೂಕ್ತವೂ ಸುಂದರವೂ ಆದ, ಸಮಾನ ಧರ್ಮದ ಮೂಲಕ, ವ್ಯಕ್ತವಾಗಿಯೋ ಅವ್ಯಕ್ತವಾಗಿಯೋ ಉಪಮಾನ ಉಪಮೇಯಗಳ ಸಂಬಂಧವನ್ನು ಸ್ಥಾಪಿಸಿರುವಂಥ ಕವಿಕೌಶಲವಿದೆಯೆಂದಾದರೆ, ಆಗ ಅದು ನಾವು ಅದನ್ನು ಕೇಳಿದ ಕೂಡಲೇ ಶ್ರೋತೃವಿನಲ್ಲಿ ಅಲಂಕಾರದ ಪ್ರತೀತಿ ಉಂಟು ಮಾಡುವುದರ ಜೊತೆ ಜೊತೆಗೆ ಶ್ರವಣ ಗೋಚರವಾದ ಸಮಾನ ಅಂತರದ ವರ್ಣಾನುಪೂರ್ವಿಯ ಪ್ರತೀತಿಯನ್ನೂ ಉಂಟು ಮಾಡುತ್ತದೆಂದು ಹೇಳಬಹುದು. ಅಂಥ ವಾಕ್ಯಗಳಲ್ಲಿ ಸಾದೃಶ್ಯ ಸೂಚಕವಾದ 'ಇವ' ಇತ್ಯಾದಿ ಶಬ್ದಗಳನ್ನು ವ್ಯಕ್ತರೂಪದಲ್ಲಿ ಬಳಸುವ ಅಗತ್ಯವೇ ಇರುವುದಿಲ್ಲ; ಕಾರಣ ಅವುಗಳ ಅರ್ಥ ಆಗಲೇ ಆಗಿರುತ್ತದೆ (ಅವುಗಳು ಅಧ್ಯಾಹಾರ್ಯ)

ಉದಾ :

ಮಹೀಭೃತಃ ಪುತ್ರವತೋಽಪಿ [೧೭೦] [iii-138]

ಆ ನರಪತಿಗೆ ಇನ್ನಿತರ ಪುತ್ರಸಂತಾನವಿದ್ದರೂ [೧೭೧]

ಇತರೆ ಉದಾಹರಣೆಗಳಲ್ಲೂ, ಬೇರೊಂದು ಅಲಂಕಾರವನ್ನು ಬಳಸಲು ಕವಿಯು ಹೆಚ್ಚು ಉತ್ಸುಕನಾಗಿಲ್ಲದೆ ಇರಬಹುದು. ಆದರೂ ಅವನು ಪದಾರ್ಥ ಪರಿವರ್ತನಾದಿಯನ್ನು ಬಳಸಿದಾಗ, ಉಪಮಾನ ಉಪಮೇಯಗಳಿಗಿರುವ ಅಪೂರ್ವ ಸಾಮ್ಯವನ್ನು ಅಭಿವ್ಯಕ್ತಿಸುವುದರಲ್ಲಿ ಕವಿಗಿರುವ ಅದ್ಭುತ ಕೌಶಲದಿಂದಾಗಿ ಗ್ರಹಿಸುತ್ತಾನೆ. ಅಭಿಧಾನ ಪ್ರಕಾರದ ವೈಚಿತ್ರ್ಯದ ದೆಸೆಯಿಂದಾಗಿ, ಅಲ್ಲಿಯ ಅಲಂಕಾರ ವಿಚ್ಛಿತ್ತಿಯನ್ನು ಸಹೃದಯನು ತೀವ್ರವಾಗಿ ಅನುಭವಿಸುತ್ತಾನೆ. ಆ ಎಲ್ಲ ಸಂದರ್ಭಗಳಲ್ಲಿ ಬಳಕೆಯಾಗಿರುವ ಅಲಂಕಾರವು (ಉಪಮಾಲಂಕಾರ) ಪ್ರತೀಯಮಾನವೆಂದು ಪರಿಗಣಿಸಬೇಕು. ಸಾದೃಶ್ಯಸೂಚಕಗಳಾದ 'ಇವ' ಇತ್ಯಾದಿಗಳ ವ್ಯಕ್ತಪ್ರಯೋಗವನ್ನು ನಿವಾರಿಸಿರುವುದಕ್ಕೆ ಉದಾ:

ನವಾಸಿಧಾರಾ ನ ಖಲೂತ್ಪಲಸ್ರಜಃ
ನವಖಡ್ಗಧಾರೆಯು ಉತ್ಪಲದ ಮಾಲೆಯಲ್ಲ [೧೭೧] [163-ನೋಡಿ]

ಉಪಮಾಲಂಕಾರವು ವಾಚ್ಯವಾಗಿರುವ ಇತರೆ ಉದಾಹರಣೆಗಳಲ್ಲೂ ಕವಿಯ ಪ್ರತಿಪಾದನ ವೈಚಿತ್ರ್ಯದ ಮೇರೆಗೆ ಉಪಮಾವಾಚಕಗಳಾದ ಇವಾದಿಗಳನ್ನು ಅನೇಕ ರೀತಿಯಲ್ಲಿ ಪ್ರಯೋಗಿಸಬಹುದು. ಉದಾಹರಣೆಗೆ ಪದಾರ್ಥ ವಿಷಯಕ್ಕೆ ಸಂಬಂಧಿಸಿದ ಉಪಮೆಯಲ್ಲಿ, ವಾಕ್ಯದ ಒಂದು ಭಾಗದಲ್ಲಿ ಬರುವ ಉಪಮಾನ, ಉಪಮೇಯಗಳನ್ನು ಜೋಡಿಸುವ ಉಪಮಾವಾಚಕವನ್ನು 'ವಾಚ್ಯ' ರೂಪದಲ್ಲಿಯೇ ಹೇಳಲಾಗಿದ್ದರೆ, ಅದೇ ವಾಕ್ಯದ ಇನ್ನೊಂದು

ಭಾಗದಲ್ಲಿ, ಇನ್ನೊಂದು ಜೊತೆ ಉಪಮಾನ ಉಪಮೇಯಗಳಿಗಿರುವ ಸಾದೃಶ್ಯ ಸಂಬಂಧ ಸೂಚಿಸಲು ವಾಚಕ 'ಇವಾದಿ'ಯನ್ನು ಬಳಸಲಾಗಿದೆ. ಪ್ರತಿ ಉಪಮಾನ ಉಪಮೇಯದ ಜೋಡಿಯೂ ಸ್ವಸಂಪೂರ್ಣವಾದ ಘಟಕವೆಂದು ವಾದಿಸಬಹುದಾದರೂ ವಾಕ್ಯಾರ್ಥ ನಿಷ್ಪತ್ತಿಯ ಉಪಮಾನ-ಉಪಮೇಯ ಭಾವದ ಸಮರ್ಪಕ ವ್ಯಾಖ್ಯಾನವನ್ನು ಈ ಮೊದಲಿನ ವಿವರಣೆಯೇ ನೀಡುತ್ತದೆ. ಉದಾ:

ತತಃ ಪ್ರತಸ್ಥೇ ಕೌಬೇರೀಂ ಭಾಸ್ವಾನಿವ ರಘುರ್ದಿಶಮ್|
ಶರೈರುಸ್ತ್ರೈರಿವೋದೀಚ್ಯಾನುದ್ಧರಿಷ್ಯನ್ ರಸಾನಿವ [೧೭೨] [ರಘುವಂಶ V - 66]

ಉತ್ತರ ದಿಕ್ಕಿನೆಡೆಗೆ ಕ್ರಮಿಸುವ
ಭಾಸ್ಕರನ ಹಾಗೆಯೆ ರಘುವು ನಡೆದನುತ್ತರಕೆ
ತನ್ನ ಕಿರಣಗಳಿಂದ ಅವನು
ಉದಕವನು ಹಿಂಗಿಸುವ ಹಾಗೆಯೆ
ಶರಗಳಿಂದರಿಗಳನು ತವಿಸೆ ಹೊರಟಿಹನು ರಘುವು [೧೭೨]

ಕೆಲವೊಮ್ಮೆ ಪದಾರ್ಥೋಪಮೆಯಲ್ಲಿಯೇ, ಉಪಮಾನ ಮತ್ತು ಉಪಮೇಯಗಳ ನಡುವೆ ಸಾದೃಶ್ಯವನ್ನು ವಾಚ್ಯವಾಗಿಯೇ ಹೇಳಲಾಗುತ್ತದೆ. ಆದರೆ ಯಾವ ವಾಕ್ಯದಲ್ಲಿ 'ಇವಾದಿ' ಉಪಮಾ ವಾಚಕಗಳಿರುತ್ತವೆಯೋ ಅದರಲ್ಲಿ ಅದೇ ರೀತಿಯ ಇನ್ನೊಂದು ಸಮಾನಧರ್ಮದಿಂದಾಗಿ (ಸಾದೃಶ್ಯಧರ್ಮ) ಒಂದನ್ನು ಇನ್ನೊಂದಾಗಿ ಪರಿಭಾವಿಸಬಹುದು. ಹಿಂದಿನ ಉದಾಹರಣೆಯ ಹಾಗೆಯೇ ಇನ್ನೊಂದು ಉಪಮಾವಾಚಕ ಇವಾದಿಯನ್ನು ಪುನಃ ಅಳವಡಿಸಲಾಗುವುದು. ಉದಾ:

ನಿರ್ಯಾಯ ವಿದ್ಯಾಥ ದಿನಾದಿರಮ್ಯಾ-
ದ್ಬಿಂಬಾದಿವಾರ್ಕಸ್ಯ ಮುಖಾನ್ಮಹರ್ಷೇ|
ಪಾರ್ಥಾನನಂ ವಹ್ನಿಕಣಾವದಾತಾ
ದೀಪ್ತಿಃ ಸ್ಫುರತ್ಪದ್ಮಮಿವಾಭಿಪೇದೇ [೧೭೩] [ಕಿರಾತಾರ್ಜುನೀಯ III - 25]

ಹೊಳೆವ ಹೊನ್ನೇಸರಿನ ಹೊಂಬೊಗರಿನಂತೆ
ಮಹರ್ಷಿಮುಖದಿಂದೊಲವು ಹೊಮ್ಮಿ
ಇದ್ದಕಿದ್ದೊಲೆ ಅರ್ಜುನನ ಆನನವ ಹೊಕ್ಕವು
ಅಗ್ನಿ ಕಣಗಳು
ನೇಸರಿನ ದೀಪ್ತಿಯದು ಕಮಲವನು ಅರಳಿಸಿದ ಹಾಗೆ [೧೭೩]

ಕೆಲವೊಮ್ಮೆ ಪದಾರ್ಥೋಪಮೆಯಲ್ಲಿಯೇ, ಅವುಗಳು ಹೊಂದಿರುವ ಘಟಕಗಳ ಸಂಖ್ಯೆಯ ದೃಷ್ಟಿಯಿಂದ ಪರಸ್ಪರ ಸಮನಾಗಿರುವ ಎರಡು ಜೊತೆ ವಸ್ತುಗಳು ಇರುವುದನ್ನು ನಾವು ಕಾಣಬಹುದು. ಪ್ರತಿಯೊಂದು ಜೊತೆಯನ್ನೂ ಒಟ್ಟಾರೆ ಒಂದೆಂದು ಪರಿಗಣಿಸಲಾಗುವುದು. ಹಾಗೂ ಪರಸ್ಪರ ಸಾಮ್ಯವನ್ನು ಹೊಂದಿರುವ ಸಮುದಾಯವಾಗಿರುವುದರಿಂದ, ಕೇವಲ ಒಂದು ಉಪಮಾವಾಚಕ (ಇವಾದಿಯಂಥ)ವನ್ನು ಮಾತ್ರ ಬಳಸಲಾಗುವುದು. ಮುಂದಿನ ಹಂತದಲ್ಲಿ

ಪ್ರತಿ ವರ್ಗ ಅಥವಾ ಸಮುದಾಯದಲ್ಲಿ ಸ್ವತಂತ್ರ ಘಟಕಗಳ ನಡುವಿನ ಸಾದೃಶ್ಯವನ್ನು ಗುರುತಿಸುವುದು ಸಾಧ್ಯವಾಗುತ್ತದೆ. ಕಾರಣ ಸಮುದಾಯದ (ವರ್ಗದ) ಜ್ಞಾನವು, ಅದರಲ್ಲಿ ಸೇರಿರುವ ಸ್ವತಂತ್ರ ಘಟಕಗಳ ಜ್ಞಾನಕ್ಕೆ ಪೂರ್ವಭಾವಿ ಸಿದ್ಧತೆ ಇದ್ದಂತೆ. ಉದಾ:

"ಚುಂಬನ್ ಕಪೋಲಮ್" [೧೭೪]*

ಪ್ರಿಯತಮೆಯ ಪುಲಕಿತ ಕಪೋಲವನು
ಚುಂಬಿಸುತೆ ಅವನು
ಮಿದುಸ್ಪರ್ಶದಿಂದುಲ್ಲಸಿತಳಾದ ತರುಣಿ
ಸಂತಸದಿ ಕಂಗಳನು ಮುಚ್ಚುವಂತೆಸಗಿದನು [೧೭೪]

ಇಲ್ಲಿ ವಿಶೇಷಣಗಳು ಮತ್ತು ಕ್ರಿಯಾವಿಶೇಷಣಗಳು, ಉಪಮಾನ ಮತ್ತು ಉಪಮೇಯ ಗಳನ್ನು ತಮ್ಮದೇ ಆದ ವಿಧಾನದಲ್ಲಿ ವಿಶ್ಲೇಷಿಸುತ್ತವೆ ಮತ್ತು ಅವೆರಡರ ನಡುವಿನ ಸಾಧಾರಣ ಧರ್ಮ ಸಂಬಂಧವು ಎರಡು ರೀತಿಗಳಲ್ಲಿ ಹೊರಹೊಮ್ಮುತ್ತದೆ.

ಅಲ್ಲದೆ, ಪದಾರ್ಥೋಪಮೆಯಲ್ಲಿ ಕವಿ ವಿವಕ್ಷಿತ ವಿಷಯ ಅಥವಾ ಉಪಮೇಯವೊಂದಕ್ಕೆ ಒಂದಕ್ಕಿಂತ ಹೆಚ್ಚು ವಿಶೇಷಣಗಳನ್ನು ಸೇರಿಸಿದ್ದಾಗ, ಅದನ್ನು ಸರಿದೂಗಿಸಲು ಅಷ್ಟೇ ಸಂಖ್ಯೆಯ ವಿಶೇಷಣಗಳಿಂದ ಕೂಡಿರುವ ಉಪಮಾನವನ್ನು ಆಯ್ದುಕೊಳ್ಳಲಾಗುವುದು. ಅಂಥ ಉದಾಹರಣೆಯಲ್ಲಿ ಎರಡೂ ವಿಶೇಷಣಗಳು ಸಮಾನತೆಯಲ್ಲಿ ಒಂದೇ ಆಗಿರುವುದರಿಂದ, ಅವರೆಡರ ನಡುವಿನ ಸಾದೃಶ್ಯವನ್ನೂ ಗಮನಿಸಬೇಕಾಗುತ್ತದೆ. ಅಂಥ ಒಂದು ಸಾದೃಶ್ಯವನ್ನು ಸೂಚಿಸಲು ಉಪಮಾವಾಚಕಗಳಾದ 'ಇವಾ'ದಿಗಳ ವಾಚ್ಯ ರೂಪದ ಪ್ರಯೋಗ ಅತ್ಯಂತ ಆವಶ್ಯಕ. ಅವೆರಡರ ವಿಶೇಷಣಗಳ ನಡುವಿನ ಪರಸ್ಪರ ಸಾದೃಶ್ಯಕ್ಕೆ ಸಂಬಂಧಿಸಿದಂತೆ ಈ ಮುಂಚೆ ಹೇಳಿದ ತತ್ವವನ್ನೇ ಇಲ್ಲಿಯೂ ಅನುಸರಿಸಬೇಕಾಗುತ್ತದೆ. ಉದಾ :

'ಪಾಂಡ್ಯೋsಯಮ್' ಇತ್ಯಾದಿ [೧೭೫] [ರಘುವಂಶ - VI - 60]

ಭುಜಗಳಲಿ ಒಲೆದಾಡುತಿರುವ
ಉದ್ದನೆಯ ಮುತ್ತಿನ ಹಾರದಿಂದ ಶೋಭಿತನು
ಪಾಂಡ್ಯರಾಜನಿವನು ಹರಿಚಂದನ ಲೇಪಿತನು
ಹೊಳೆವ ಹೊಂಬಿಸಿಲಿಂದ ಕೆಂಪಾದ ಶಿಖರಗಳ
ದುಮ್ಮಿಕ್ಕುವಬ್ಬಿಗಳ
ಅದ್ರಿರಾಜನವೋಲು ಕಾಣುತಿಹನು [131ನೇ ಉದಾಹರಣೆ]

ಈ ರೀತಿಯ ಉಪಮೆಯ ಎಲ್ಲ ಉದಾಹರಣೆಗಳಲ್ಲಿ ಸಾದೃಶ್ಯವು, ಅಭಿದಾಪ್ರಕಾರ ವೈಚಿತ್ರ್ಯದಿಂದ ಮಾತ್ರವಲ್ಲದೆ, ಕವಿಯ ವಾಚಕಶಕ್ತಿ ವೈಚಿತ್ರ್ಯದಿಂದಲೂ ಗ್ರಾಹ್ಯವಾಗುತ್ತದೆ.

ಉಪಮೆಯ ಲಕ್ಷಣವು ಹೀಗೆ ಸುಸಂಗತವಾಗಿ ಸ್ಥಾಪಿತವಾದ ಮೇಲೆ ಉಪಮೆಗೆ ಸಂಬಂಧಿಸಿದ

* 130ನೇ ಉದಾಹರಣೆ ನೋಡುವುದು

ದೋಷಗಳಾದ ನೇಯಾರ್ಥ ಮೊದಲಾದುವು ನಿವಾರಿತವಾಗುವುದರಿಂದ ಪರಿಗಣನೆಗೆ ಬರುವುದಿಲ್ಲ.

ವಿವಕ್ಷಾ ವಿಷಯೋ ಧರ್ಮಶ್ಚೇತೋಹಾರೀ ಯದೋಚ್ಯತೇ|
ತದಾ ದೋಷಾ ಭವಂತ್ಯೇತೇ ದೂರೋತ್ಸಾರಿತ ವೃತ್ತಯಃ [೧೭೬]

ಇದು ಅಂತರಶ್ಲೋಕ

ವಿವಕ್ಷಿತ ವಿಷಯವು ಚೇತೋಹಾರಿಯಾಗಿ ನಿರೂಪಿಸಲ್ಪಟ್ಟಾಗ, ಇತರೆ ಎಲ್ಲ ದೋಷಗಳೂ ತನಗೆ ತಾನೇ ದೂರವಾಗುತ್ತವೆ. ಮೇಲಿನ ಶ್ಲೋಕವು ಈ ವಿಷಯದಲ್ಲಿ ನಮ್ಮ ಅಭಿಪ್ರಾಯವನ್ನು ಕ್ರೋಢೀಕರಿಸುತ್ತದೆ.

ಪ್ರಸ್ತುತ ಮತ್ತು ಅಪ್ರಸ್ತುತ ವಿಷಯಗಳ ನಡುವಿನ ಸಾದೃಶ್ಯವನ್ನು ಜೀವಿತವನ್ನಾಗಿ ಉಳ್ಳ ಉಪಮಾಲಂಕಾರದ ಸ್ವರೂಪವನ್ನು ವಿವರಿಸಿದ ಮೇಲೆ, ಈಗ ಉಪಮೆಯೊಂದಿಗೆ ಆಕರ್ಷಣೆಯುಳ್ಳ ಶಬ್ದಗಳ ಸಾದೃಶ್ಯವನ್ನೇ ಜೀವಿತವಾಗಿ ಹೊಂದಿರುವ ಶ್ಲೇಷಾಲಂಕಾರವನ್ನು ವಿವರಿಸತೊಡಗುತ್ತಾನೆ.

ತದೇಕ ಶಬ್ದ ವಾಚ್ಯತ್ವ ಮರ್ಥಯೋರ್ಧಾರ್ಯತೇ ದ್ವಯೋಃ|
ಶ್ಲೇಷಾಭಿಧಾನೋಽಲಂಕಾರಃ ತಾದೃಗ್ವಾಚಕ ವಾಚ್ಯತಾ [44]

ಒಂದೇ ರೀತಿಯ ಶಬ್ದಗಳಿಂದ ಎರಡು ವಿಭಿನ್ನ ಅರ್ಥಗಳು ಹೊರಡುವಂತಿದ್ದರೆ, ಶಬ್ದಗಳ ಈ ದ್ವಂದ್ವಾರ್ಥ ಸೂಚನೆಗೆ ಶ್ಲೇಷಾಲಂಕಾರ ಎಂದು ಹೆಸರು.

ಒಂದೇ ರೀತಿಯ ಶಬ್ದಗಳು ಎರಡು ವಿಭಿನ್ನ ಅರ್ಥಗಳನ್ನು ನೀಡುವ ವಿಶಿಷ್ಟ ಸಾಮರ್ಥ್ಯವನ್ನು ಹೊಂದಿರಬೇಕು. ಕಾರಿಕೆಯ 'ತದ್' ಎಂಬ ಶಬ್ದ, ಶ್ಲೇಷಾಲಂಕಾರವನ್ನು ನಿಯಂತ್ರಿಸುವ ಭಿನ್ನಾರ್ಥಸೂಚಕ ಶಬ್ದಕ್ಕೆ ಅನ್ವಯಿಸುತ್ತದೆ. ಉಕ್ತ ಶಬ್ದಕ್ಕೆ ಭಿನ್ನಾರ್ಥಸೂಚಕ ಶಕ್ತಿ ಇರುತ್ತದೆ. ಅದರಿಂದ ಸೂಚಿತವಾದ ಅರ್ಥ ದ್ವಂದ್ವಾರ್ಥವನ್ನು ಹೊಂದಿರುತ್ತದೆ. ಏಕಕಾಲದಲ್ಲಿ ಕವಿ ವರ್ಣಿಸಲಿಚ್ಛಿಸುವ ಎರಡುವಸ್ತುಗಳು ಇರಬೇಕು. ಅಂದರೆ ಇಡೀ ವಾಕ್ಯದಲ್ಲಿ ಅವನ ಅತ್ಯಂತಿಕ ಅರ್ಥವನ್ನು ರೂಪಿಸುವಂತಿರಬೇಕು. ಸಮಾನ ರೀತಿಯಲ್ಲಿ ಪ್ರಸ್ತುತವಾಗಿರುವ, ಅಂಥ ಎರಡು ವಿಚಾರಗಳು [ಅರ್ಥಗಳು] ದ್ವಂದ್ವಾರ್ಥ. ವಾಚಕದಿಂದ ಒಟ್ಟಾಗಿ ಹಿಡಿದಿರಸಲ್ಪಟ್ಟಿದ್ದರೆ, ಅದಕ್ಕೆ ಶ್ಲೇಷಾಲಂಕಾರ ಎಂದು ಹೆಸರು. ಅದರ ಪ್ರಾಣ ಅಥವಾ ಜೀವಧಾತು ಇರುವುದೇ ವಿಶಿಷ್ಟವಾದ ದ್ವಂದ್ವಾರ್ಥಯುಕ್ತ ಶಬ್ದಗಳಿಂದ ಎರಡು ಅರ್ಥಗಳನ್ನು ಹೊರಡಿಸುವುದರಲ್ಲಿ. ದ್ವಂದ್ವಾರ್ಥದ ಒಂದು ಶಬ್ದದ ಮೂಲಕವಾಗಲಿ ಅಥವಾ ದ್ವಂದ್ವಾರ್ಥದ ಸದೃಶ ಶಬ್ದದ ಮೂಲಕವಾಗಲಿ ಎರಡು ಅರ್ಥಗಳು ಇರುವುದು, ಅದನ್ನು ಶ್ಲೇಷಾಲಂಕಾರವೆಂದು, ಪರಿಗಣಿಸಲುಸಾಕು. ಶಬ್ದಸಾದೃಶ್ಯವು ಶ್ರುತಿಸಾಮ್ಯಕ್ಕೂ ಸಂಬಂಧಿಸಿದ್ದಾಗಿದೆ. ಒಂದೇ ಶಬ್ದವನ್ನು ಧ್ವನಿಯ ಏರಿಳಿತದಿಂದ ಬೇರೆ ರೀತಿಯಲ್ಲಿ ಉಚ್ಚರಿಸಲು ಸಾಧ್ಯ. ಅಂಥ ಸಂದರ್ಭದಲ್ಲಿ ಶಬ್ದಗಳೇ ವಾಸ್ತವವಾಗಿ ವಿಭಿನ್ನವೆಂದು ಹೇಳಿಬಿಡಬಹುದು. ಎರಡಕ್ಕೂ ಇರುವ ಸಾದೃಶ್ಯವೆಂದರೆ ಪರಸ್ಪರ

ಅಪೇಕ್ಷತ್ವ. ವಾಕ್ಯದ ಯಾವುದಾದರೊಂದು ಭಾಗದಲ್ಲಿ, ಒಂದೇ ಶಬ್ದ ಎರಡೂ ಅರ್ಥಗಳನ್ನು ಅಭಿವ್ಯಕ್ತಿಸುತ್ತಿದ್ದರೆ, ಅದನ್ನು ಪದವನ್ನಾಧರಿಸಿರುವ ಶಬ್ದ ಶ್ಲೇಷವೆಂದುಕರೆಯಬಹುದು. ಒಂದೇ ದ್ವಂದ್ವಾರ್ಥಯುಕ್ತ ಶಬ್ದದಿಂದ ಎರಡು ವಿಚಾರಗಳು ಸೂಚಿತವಾಗುತ್ತಿರಬಹುದು. ಎರಡೂ ಅರ್ಥಗಳು ಒಂದೇ ಶಬ್ದದಿಂದ ಹೊರಡುತ್ತಿವೆ ಎಂಬ ಒಂದೇ ಕಾರಣಕ್ಕೆ, ಶ್ಲೇಷದಿಂದಲೇ ಆ ಅರ್ಥಗಳು ಸಿದ್ಧಿಸಿವೆಯೆಂದು ಹೇಗೆ ತಾನೆ ತೀರ್ಮಾನಕ್ಕೆ ಬರಲು ಸಾಧ್ಯ? ಹಾಗಾಗಿ ಶ್ಲೇಷವು ಮೂರು ವಿಧವಾಗಿ ಅನುಭವಕ್ಕೆ ಬರುತ್ತದೆಂದು ಹೇಳಲಾಗಿದೆ. ಅವುಗಳೆಂದರೆ (1) ಶಬ್ದಶ್ಲೇಷೆ, (2) ಅರ್ಥಶ್ಲೇಷೆ ಮತ್ತು ಉಭಯ ಶ್ಲೇಷೆ.

ಹಾಗಾದರೆ, ಅಂಥ ಶ್ಲೇಷದ ಸೂಚಕವಾವುದು? ಅದಕ್ಕೆ ಉತ್ತರ ಇದು.

ಪದಾರ್ಥಾಂತರ ಮೇತಸ್ಯ ಕವಯಃ ಪ್ರತಿಪಾದಕಮ್।
ವಾಚ್ಯಸಾಮರ್ಥ್ಯಮಪರಮಿವಾದಿ ಪ್ರತಿಜಾನತೇ[45]

ವಿದ್ವಾಂಸರು ಹೇಳುವುದೆಂದರೆ ಶ್ಲಿಷ್ಟ ಪದಕ್ಕಿಂತ ಬೇರೆಯದೇ ಆದದ್ದೊಂದು ಶ್ಲೇಷಾಲಂಕಾರದ ಪ್ರತಿಪಾದಕ (ಸೂಚಕ)ವಾಗಿರಬಹುದು. ಅಲ್ಲದೆ, ಇಡೀ ವಾಕ್ಯದ ವಿವಕ್ಷಿತ ಅರ್ಥದ್ಯೋತಕ ಶಕ್ತಿ, ಹಾಗೂ 'ಇವ ಮೊದಲಾದ ಅಲಂಕಾರವಾಚಕಗಳು ಕೂಡ ಶ್ಲೇಷದ ಸೂಚಕವಾಗಿರಬಹುದು. [45]

ಶ್ಲೇಷಾಲಂಕಾರದ ಸೂಚಕವು ಕೆಲವೊಮ್ಮೆ ವಾಸ್ತವ 'ಶ್ಲೇಷ ಶಬ್ದ'ಕ್ಕಿಂತದ ಬೇರೆಯದೇ ಆಗಿದ್ದೂ, ಶ್ಲೇಷಾಲಂಕಾರವನ್ನು ಪ್ರತಿಪಾದಿಸುತ್ತಿರಬಹುದೆಂದು ವಿದ್ವಾಂಸರ ಅಭಿಪ್ರಾಯ. ಕೆಲವೊಮ್ಮೆ 'ಇವ' ಮೊದಲಾದ ವಿಶಿಷ್ಟ ವಾಚಕಗಳೇ ಶ್ಲೇಷೆಯನ್ನು ಸೂಚಿಸಬಹುದು - ಎಂದು ಅವರು ಹೇಳುತ್ತಾರೆ. ಇನ್ನು ಕೆಲವೊಮ್ಮೆ ಇಡೀ ವಾಕ್ಯದ ವಿವಕ್ಷಿತ ಅರ್ಥದ್ಯೋತಕತ್ವವೇ ಶ್ಲೇಷಾಲಂಕಾರದ ಸೂಚಕವಾಗಬಹುದು. ಅಂದರೆ, ಶ್ಲೇಷಾರ್ಥವನ್ನು ಅಭಿವ್ಯಕ್ತಿಸುವ ಸಾಮರ್ಥ್ಯ, ಈ ಮೂರರಲ್ಲಿ ಯಾವುದರಲ್ಲಿ ಬೇಕಾದರೂ ಇರಬಹುದು. ಈ ಮೂರೂ ಪರ್ಯಾಯಗಳಲ್ಲಿ ಕೊನೆಯ ಎರಡರಲ್ಲೂ, ಅಲಂಕಾರವು ಕೇವಲ ಪ್ರತೀಯಮಾನವಾಗುತ್ತದೆ. (ಸೂಚಿತವಾಗುತ್ತದೆ) ಕಾರಣ, ಸೌಂದರ್ಯಕ್ಕೆ ಕಾರಣವಾದ ದ್ವಂದ್ವಾರ್ಥಸೂಚಕ ಶಬ್ದಗಳ ಸಾದೃಶ್ಯವು (ವಾಕ್ಯದ ಒಟ್ಟಾರೆ ಅರ್ಥದ) ಒಟ್ಟರ್ಥದ ಪ್ರತೀಯಮಾನತ್ವದಿಂದಾಗಿಯೇ ಸಾಧ್ಯವಾಗುತ್ತದೆ. ಕವಿಯೇ ಆ ಅರ್ಥವನ್ನು ಮೂಲತಃ ಸಂವಹನ ಮಾಡಿದ್ದಾನೆನಿಸುತ್ತಿರುತ್ತದೆ. (ಸಾದೃಶ್ಯ ಸೂಚಕ ಶಬ್ದಗಳು ಇರುವುದಿಲ್ಲ) ಒಂದು ವೇಳೆ ಅಲಂಕಾರ ವಾಚಕಗಳು ಉಕ್ತವಾಗಿಬಿಟ್ಟಿದ್ದರೆ ಶ್ಲೇಷಾಲಂಕಾರವನ್ನು ಅವೇ ತಿಳಿಸುತ್ತವೆ. (ಪ್ರತೀಯಮಾನ ಅಥವಾ ಸೂಚಕವಾಗುವುದಿಲ್ಲ). ಪ್ರಸ್ತುತ ಮತ್ತು ಅಪ್ರಸ್ತುತ ವಿಷಯಗಳಲ್ಲಿ ಒಂದು ಪ್ರಧಾನವೆಂದು ಇನ್ನೊಂದು ಗೌಣವೆಂದು ತೋರಿಬಂದಾಗ, ಎರಡರ ನಡುವಣ ಸಾದೃಶ್ಯ ಸಂಬಂಧವು, ಸಮಾನವಾಗಿಯೇ ಇರುತ್ತದೆ; ಪದಗಳ ದ್ವಂದ್ವಾರ್ಥ ಶಕ್ತಿಯಿಂದಾಗಿಯೇ ಎರಡೂ ಸಾಧ್ಯವಾಗುತ್ತವಾದ ಕಾರಣದಿಂದ. ಒಂದು ವೇಳೆ ಆ ಎರಡರಲ್ಲಿ, ಪ್ರಧಾನ ವಿಷಯವೆಂದು ವರ್ಣಿತವಾದ್ದು, ಆ ವಾಕ್ಯದಲ್ಲಿ ಉಪಮಾನ ಮಾತ್ರವಾಗಿದ್ದಲ್ಲಿ ಇನ್ನೊಂದನ್ನು (ಗೌಣವಾದ್ದು)

ಉಪಮೇಯ ಎಂದು ಪರಿಗಣಿಸಬೇಕು. (ಅಂಥ ಉದಾಹರಣೆ ಯಲ್ಲಿ, ಸಮುಚ್ಚಿತೋಪಮೆಯ ಸಂಬಂಧದಲ್ಲಿನ ತರ್ಕವನ್ನು ಇಲ್ಲಿಗೂ ಅನ್ವಯಿಸಬೇಕು)

ಅರ್ಥಯೋರೇಕ ಮುಲ್ಲೇಖಿ ಪದಂ ಶಬ್ದ ತದರ್ಥಯೋಃ|
ಏಕಾವಭಾಸಯೋಃ ಸಾಮ್ಯಂ ತಂತ್ರತ್ವಾದತ್ರ ಜೃಂಭತೇ[46]

ತುಲ್ಯ ಶಬ್ದ ಸ್ಮೃತೇರರ್ಥಃ ತಸ್ಮಾ ದನ್ಯಃ ಪ್ರತೀಯತೇ|
ಶಬ್ದ ಸ್ಯೋದ್ಭೂತ ನಷ್ಟತ್ವಾತ್ ಸ್ಮೃತಿಃ ಸರ್ವತ್ರ ವಾಚಿಕಾ[47]

ಇಲ್ಲಿ ಒಂದೇ ಶಬ್ದವು, ಎರಡೂ ಅರ್ಥಗಳನ್ನು ವ್ಯಕ್ತಪಡಿಸುತ್ತಿರುತ್ತದೆ. ಹಾಗೆ ತದ್ರೂಪಿಗಳೆಂಬಂತೆ ಅಭಿವ್ಯಕ್ತಿಸಲಾದ ಪದ ಮತ್ತು ಎರಡು ಅರ್ಥಗಳಲ್ಲಿ ಸಾಮ್ಯವೇ ಕವಿಯ ಆ ವಿಶಿಷ್ಟ, ತಂತ್ರದ ಹಿಂದಿರುವ ತತ್ವ [46]

ಶ್ರುತಿಸಾಮ್ಯವುಳ್ಳ ಶಬ್ದಗಳ ಸ್ಮೃತಿಯಿಂದ ಮೊದಲಿಗೆ ಒಂದರ ಅದರ ನಂತರ ಇನ್ನೊಂದರ ಅರ್ಥವು ಲಭಿಸುತ್ತದೆ. ಶಬ್ದವಾಗಲಿ ಅದರ ಧ್ವನಿಯಾಗಲಿ ಅದು ಹುಟ್ಟುತ್ತಿದ್ದಂತೆಯೇ ಸಾಯುವುದರಿಂದ ಶಬ್ದವು ಮೂಡಿಸಿದ ಅರ್ಥದ ಸ್ಮೃತಿಯೊಂದೇ ಅಂಥ ಎಲ್ಲ ದ್ವಂದ್ವಾರ್ಥ ಸೂಚಕಗಳಿಗೆ ಅನ್ವಯಿಸುತ್ತದೆಂದು ತಿಳಿಯಬೇಕು

ಅರ್ಥ ಶ್ಲೇಷಕ್ಕೆ ಉದಾಹರಣೆ [47]

ಸ್ವಾಭಿಪ್ರಾಯಸಮರ್ಪಣ ಪ್ರವಣಯಾ ಮಾಧುರ್ಯ ಮುದ್ರಾಂಕಯಾ
ವಿಚ್ಚಿತ್ಯಾ ಹೃದಯೇಽಭಿಜಾತ ಮನಸಾಮಂತಃ ಕಿಮಪ್ಯುಲ್ಲಿಖಿತ್|
ಆರೂಢಂ ರಸವಾಸನಾ ಪರಿಣತೇಃ ಕಾಷ್ಠಾಂ ಕವೀನಾಂ ಪರಂ
ಕಾಂತಾನಾಂ ಚ ವಿಲೋಕಿತಂ ವಿಜಯತೇ ವೈದಗ್ಧ್ಯ ವಕ್ರಂ ವಚಃ [೧೭೭]

ಮಧುರತೆಯಿಂದ ದೀಪ್ತವಾದ ರೀತಿಗಳಲಿ
ತಮ್ಮ ಇಂಗಿತವನು ಪ್ರಕಟಿಸುವುದರಲಿ
ರಸಿಕರೆದೆಯಲಿ ಅಪೂರ್ವ ಭಾವಗಳ ಬಿತ್ತುತೆ
ರಸಭಾವದ ಪರಿಪಾಕದ ಉತ್ತುಂಗದ ನೆಲೆಯ
ತಲುಪಿಹ ಕವಿಗಳ ವಿದಗ್ಧ ವಾಣಿಗಳು
ಮತ್ತಾ ಲಲನೆಯರ ವಿದಗ್ಧ ಬೆಡಗಿನ ನೋಟಗಳವು
ಅದ್ಭುತದಲಿ ಗೆಲುವುದು ದಿಟವು [೧೭೭]

ಶಬ್ದ ಶ್ಲೇಷೆಗೆ

ಯೇನ ಧ್ವಸ್ತಮನೋಭವೇನ ಬಲಿಜಿತ್ಕಾಯಃ ಪುರಾಸ್ತ್ರೀಕೃತಃ
ಯಶ್ಚೋದ್ವೃತ್ತ ಭುಜಂಗಹಾರ ವಲಯೋ ಗಂಗಾಂ ಚ ಯೋಽಧಾರಯತ್|
ಯಸ್ಯಾಹುಃ ಶಶಿಮಚ್ಛಿರೋಹರ ಇತಿ ಸ್ತುತ್ಯಂ ಚ ನಾಮಾಮರಾಃ
ಪಾಯಾತ್ಸ ಸ್ವಯುಮಂಧಕಕ್ಷಯಕರಸ್ತ್ವಾಂ ಸರ್ವದೋ– ಮಾಧವಃ [೧೭೮]

(ಧ್ವನ್ಯಾಲೋಕದ II 21ರಲ್ಲಿ ಉದ್ಧೃತ)

ಶಿವನ ಪರವಾದ ಅರ್ಥ :

ಯಾರಿಂದ ಮನ್ಮಥನ ಧ್ವಂಸವಾಯಿತೋ, (ಮನೋಭವ) ಯಾರಿಂದ ಬಲಿಯನ್ನು ಗೆದ್ದ ದೇಹವೇ ಹಿಂದೆ ಬಾಣವಾಗಿ ಮಾಡಿಕೊಳ್ಳಲ್ಪಟ್ಟಿತೋ (ಅಸ್ತ್ರೀಕೃತೋ) ದೊಡ್ಡ ಹಾವುಗಳೇ ಯಾರ ಹಾರ ಮತ್ತು ಬಳೆಗಳಾಗಿವೆಯೋ (ವಲಯ) ಯಾರು ಗಂಗೆಯನ್ನು ಧರಿಸಿರುವರೋ ಯಾರನ್ನು ಚಂದ್ರಶೇಖರನೆಂದೊ (ಶಶಿಮತ್ ಶಿರ) ಹರನೆಂದೂ ಅಮರರು ಸ್ತುತಿಸುತ್ತಾರೋ ಅಂಥ ಅಂಧಕಾಸುರ ಸಂಹಾರಕನೂ ಉಮಾಪತಿಯೂ (ತ್ವಾಂಸರ್ವದಾ + ಉಮಾ+ಧವಃ) ಆದ ಭಗವಂತನು ನಿನ್ನನ್ನು ರಕ್ಷಿಸಲಿ)

ವಿಷ್ಣುಪರವಾದ ಅರ್ಥ :

ಅಜಾತನೆನಿಸಿದ ಯಾರಿಂದ ಶಕಟಾಸುರನು ಧ್ವಸ್ತ (ನಾಶ)ನಾದನೋ, [ಯೇನ+ಅಭವೇನ+ಅನಃಧ್ವಸ್ತಂ] ಬಲಿಯನ್ನು ಗೆದ್ದ ಯಾರ ಕಾಯವು ಹಿಂದೆ ಸ್ತ್ರೀ ರೂಪವನ್ನು ಧರಿಸಿತ್ತೋ (ಸ್ತ್ರೀ+ಕೃತೋ) ಯಾರು ಕೊಬ್ಬಿದ ಕಾಳಿಂಗನನ್ನು (ಭುಜಂಗ) ಕೊಂದನೋ (ಹರ) ಯಾರಲ್ಲಿ 'ಶಿವ' ಅರ್ಥಾತ್ ವೇದವು 'ಲಯ'ವಾಗುತ್ತದೋ, ಯಾರು ಅಗ (ಗೋವರ್ಧನ ಪರ್ವತ)ವನ್ನು ಹಾಗೂ ಭೂಮಿಯನ್ನು (ಗೌ) [ಮಹಾವತಾರ ಸಮಯದಲ್ಲಿ] ಉದ್ಧರಿಸಿದನೋ, ರಾಹುವಿನ ಶಿರಸ್ಸನ್ನು ಕತ್ತರಿಸಿದನೆಂದು ಯಾರ (ಶಶಿಮತ್ + ಶಿರಹರ) ಪವಿತ್ರ ಹೆಸರನ್ನು ದೇವತೆಗಳು ಸ್ತುತಿಸುತ್ತಾರೋ, ಅಂಧಕ ಕುಲದವರಾದ ಯಾದವರಿಗೆ ಯಾರು ತಾನೇ ವಿನಾಶವನ್ನು ಉಂಟು ಮಾಡಿದನೋ ಸಕಲ ಇಚ್ಛೆಗಳನ್ನು ಈಡೇರಿಸುವ (ಸರ್ವದೋ) ಮಾ+ಧವನು ನಿನ್ನನ್ನು ರಕ್ಷಿಸಲಿ

ಉಭಯ ಶ್ಲೇಷೆಗೆ ಉದಾಹರಣೆ

ಮಾಲಾಮುತ್ಪಲ ಕಂದಲೈಶ್ಚ ವಿಕಚೈರಾಯೋಜಿತಾಂ ಬಿಭ್ರತೀ
ನೇತ್ರೇಣಾ ಸಮದೃಷ್ಟಿಪಾತ ಸುಭಗೇನೋದ್ದೀಪಯಂತೀ ಸ್ಮರಮ್|
ಕಾಂಚೀದಾಮ ನಿಬದ್ಧ ಭಂಗಿ ದಧತಿ ವ್ಯಾಲಂಬಿನಾ ವಾಸಸಾ
ಮೂರ್ತಿಃ ಕಾಮರಿಪೋಃ ಸಿತಾಂಬರಧರಾ ಪಾಯಾದಪಾಯಾಜ್ಜಗತ್ [೧೭೯]

ಕಾಮರಿಪುವಿನ ಮೂರ್ತಿ (ಶಿವನ ಮೂರ್ತಿಯು)ಯು ಜಗತ್ತನ್ನು ವಿನಾಶದಿಂದ ರಕ್ಷಿಸಲಿ ಎಂಬುದು ಶ್ಲೋಕದ ಮುಖ್ಯವಾಕ್ಯ. ಶಿವನಮೂರ್ತಿ ಶಿವನ ಅರ್ಧಾಂಗಿ 'ಉಮಾ' ಎಂದೂ ಅರ್ಥವಾಗುತ್ತದೆ. ಬಾಕಿಯವೆಲ್ಲಾ ವಿಶೇಷಣಗಳು. ಅವು ಶಬ್ದ ಶ್ಲೇಷೆ ಮತ್ತು ಅರ್ಥಶ್ಲೇಷೆಯಿಂದ ಎರಡಕ್ಕೂ ಅನ್ವಯವಾಗುತ್ತದೆ.

ಮೊದಲನೇ ಚರಣದಲ್ಲಿ ಬರುವ 'ವಿಕಚೈಃ ಕಂದಲೈಃ ಶ್ಚಃ ಉತ್ಪಲಮಾಲಾಮ್' ಎಂದರೆ ಕೇಶರಹಿತವಾದ ತಲೆಬುರುಡೆಗಳ ಉತ್ಪಲಮಾಲೆಯನ್ನು ಧರಿಸಿ ಎಂದು ಶಿವನ ಪರವಾಗಿ ಅರ್ಥೈಸಿದರೆ, ಉಮೆಯ ಪರವಾಗಿ ಚೆನ್ನಾಗಿ ಅರಳಿದ ಉತ್ಪಲಗಳ ಮಾಲೆಯನ್ನು ಧರಿಸಿ ಎಂದು ಅರ್ಥಮಾಡಬೇಕಾಗುತ್ತದೆ.

ಎರಡನೇ ಚರಣದ 'ನೇತ್ರೇ......... ಸ್ಮರಮ್' ಎಂಬುದನ್ನು ಶಿವನ ಪರವಾಗಿ

ಅರ್ಥೈಸಿದರೆ, ಮೂರನೇ ಕಣ್ಣಿನಿಂದ ಸ್ಮರನನ್ನು ಸುಡುತ್ತಾ ಎಂದು ಅರ್ಥವಾಗುತ್ತದೆ. ಅದೇ ಉಮೆಯ ಪರವಾಗಿ ಅರ್ಥ ಮಾಡಿದರೆ, ಓರೆಗಣ್ಣ ನೋಟದಿಂದ ಕಾಮವನ್ನು (ಕಟಾಕ್ಷದಿಂದ) ಪ್ರಜ್ವಲಗೊಳಿಸುತ್ತ ಎಂದು ಅರ್ಥೈಸಬೇಕಾಗುತ್ತದೆ. ಮೂರನೇ ಚರಣದ ಕಾಂಚೀದಾಮ ನಿಬದ್ಧ 'ವಾಸಸಾಬಿನಾ' ಎಂದರೆ ಶಿವನ ಪರವಾಗಿ ಧೋತಿ ಆದಿ ರೂಪ ವಸ್ತ್ರಗಳಿಲ್ಲದೆ, ಕಾಂಚಿಯ (ಒಡ್ಯಾಣದ ಹಾಗೆ) ಹಾಗೆ ಕಟ್ಟಿರುವ ವ್ಯಾಲ (ಸರ್ಪ)ಧಾರಿ ಪರಮೇಶ್ವರ ಎಂದರ್ಥವಾಗುತ್ತದೆ.

ಉಮೆಯ ಪರವಾಗಿ ಆದರೆ ಉದ್ದವಾಗಿ (ವ್ಯಾಲಂಬಿನಾ ವಾಸಸಾ) ಇಳಿಬಿಟ್ಟಿರುವ ಕಾಂಚೀದಾಮ ಎಂದರ್ಥ (ವ್ಯಾಲಂಬಿನಾ ವಾಸನಾ)ವಾಗುತ್ತಿದೆ.

ನಾಲ್ಕನೇ ಚರಣದಲ್ಲಿ ಬರುವ "ಸಿತಾಂಬರಧಾರಾ" -ಶಿವನ ಪರವಾಗಿ ಆದರೆ ಸೀತಾ+ಅಂಬರಧರಾ.... ಭಸ್ಮಧಾರಿಯಾದ ಶಿವನ ದಿಗಂಬರತ್ವ ಎಂದು ಅರ್ಥವಾಗುತ್ತದೆ. ಉಮೆಯ ಪರವಾಗಿ ಆದರೆ, ಶುಭ್ರವಸ್ತ್ರಧಾರಿ (ಸಿತ=ಶ್ವೇತ) ಎಂದರ್ಥವಾಗುತ್ತದೆ (ಸಿತಾಂಬರ - ಶ್ವೇತ + ಅಂಬರ)

ಅವಾಸ್ತವ (ಮಿಥ್ಯಾ) ಅರ್ಥಶ್ಲೇಷೆಗೆ ಉದಾಹರಣೆ

ದೃಷ್ಟ್ವಾ ಕೇಶವ ಗೋಪರಾಗ ಹೃತಯಾ ಕಿಂಚಿನ್ನ ದೃಷ್ಟಂ ಮಯಾ
ತೇನೈವ ಸ್ಖಲಿತಾಸ್ಮಿನಾಥ ಪತಿತಾಂ ಕಿಂ ನಾಮ ನಾಲಂಬಸೇ|
ಏಕಸ್ತ್ವಂ ವಿಷಮೇಷು ಖಿನ್ನಮನಸಾಂ ಸರ್ವಾಬಲಾನಾಂ ಗತಿ
ರ್ಗೋಪ್ಯೇವಂ ಗದಿತಃ ಸ ಲೇಶಮವತಾದ್ ಗೋಷ್ಠೇ ಹರಿರ್ವಶ್ಚಿರಮ್ [೧೮೦]

(ಧ್ವನ್ಯಾಲೋಕ II 41]

ಗೋಪರಾಗದಿ ಕಣ್ಣು ಕುರುಡಾಗಲೇನೊಂದು
ಕಾಣಿಸದೆ ಹೋದದ್ದರಿಂದಲೆ
ಜಾರಿಹೆನು ನಾಥ; ಪತಿತೆಯನು ನೀನೇಕೆ
ಕೈಗೊಳೆಯೊ? ತಿಳಿಯಲಾರೆನದನು
ವಿಷಮೇಷು ಖಿನ್ನೆಯರ ಚೆನ್ನೆಯರ ರಕ್ಷಣೆಗೆ
ನೀನೊಬ್ಬನೇ ಗತಿಯಲ್ಲವೆ?
ಇಂತೆಂದು ಸೂಕ್ಷ್ಮಾರ್ಥ ಸೂಚನೆಯು ತುಂಬಿದಾ
ಮಾತುಗಳ ಗೋಪಿ ಪೇಳುತಿರಲು|
ಗೊಟ್ಟಿಯೊಳು ರಾಜಿಸಿದ ಶ್ರೀಹರಿಯು ನಮ್ಮನ್ನು
ರಕ್ಷಿಸಲಿ ಸರ್ವಕಾಲ|| [೧೮೦]

[ಡಾ. ಕೆ. ಕೆ. ಎಂ. ಧ್ವನ್ಯಾಲೋಕ. ಲೋ. ಸಾರ. ಪು. 92-41ನೇ ಪದ್ಯ]

[ಗೋಪರಾಗ - ಗೋವುಗಳ ಕಾಲಿಂದೆದ್ದ ಧೂಳು ಅಥವಾ ಗೋಪನಲ್ಲಿ ಅನುರಾಗ,

ಪತಿತೆ ಬಿದ್ದಿರುವ ನನ್ನನ್ನು ಅಥವಾ 'ಪತಿ' ಭಾವವನ್ನು, ವಿಷಮೇಷು- ಏರುತಗ್ಗುಗಳಿರುವ ಭೂಮಿಯಲ್ಲಿ, ತಲ್ಲಣಗೊಳಿಸುವ ಮನ್ಮಥ ಬಾಣಗಳಿಂದ ಪೀಡಿತರಾದ]

ಇಲ್ಲಿಗೆ ಆಸ್ವಾದ್ಯಯೋಗ್ಯವಾದ ಶ್ಲೇಷಾಲಂಕಾರದ ವಿಚಾರವು ಮುಗಿಯಿತು. ವಾಕ್ಯಬಂಧ ವೈಚಿತ್ರ್ಯದಲ್ಲಿ ಸಮರ್ಥ ಧೀಶಕ್ತಿಯುಳ್ಳವರಿಂದ ಮಾತ್ರ ಇದನ್ನು ಇನ್ನಷ್ಟು ಅಭಿವೃದ್ಧಿಪಡಿಸಲು ಸಾಧ್ಯ. ಉಪಮಾ, ರೂಪಕ ಮತ್ತು ಶ್ಲೇಷಾಲಂಕಾರಗಳಿಂದ ಮೂಡಿ ಬರುವ ಕಾರಣದಿಂದಾಗಿ ಹಾಗೂ ಸಾಮ್ಯ ತತ್ವವನ್ನೇ ಆಧರಿಸಿರುವ ಕಾರಣದಿಂದಾಗಿ ವ್ಯತಿರೇಕವನ್ನು ಕೈಗೆತ್ತಿಕೊಳ್ಳಲಾಗುವುದು.

ಸತಿ ತಚ್ಛಬ್ದವಾಚ್ಯತ್ವೇ ಧರ್ಮಸಾಮ್ಯೇಽನ್ಯಥಾಸ್ಥಿತೇಃ|
ವ್ಯತಿರೇಚನಮನ್ಯಸ್ಮಾತ್ ಪ್ರಸ್ತುತೋತ್ಕರ್ಷಸಿದ್ಧಯೇ|
ಶಾಬ್ದಃ ಪ್ರತೀಯಮಾನೋ ವಾ ವ್ಯತಿರೇಕೋಽಭಿಧೀಯತೇ [48]

ಆ ವಿಶಿಷ್ಟ ಶಬ್ದವು ವಾಚ್ಯವಾದಾಗ [ಅಂದರೆ ಶ್ಲೇಷ ಸೂಚಕ ಶಬ್ದವು ವಾಚ್ಯವಾಗಿ ಅದು ಸೂಚಿಸುವ ಅರ್ಥಗಳಲ್ಲಿ ಸಾದೃಶ್ಯವಿದ್ದಾಗ] ಹಾಗೂ ಧರ್ಮಸಾಮ್ಯವಿದ್ದಾಗ [ಅಂದರೆ ಅವುಗಳ ಸ್ವರೂಪದಲ್ಲಿ ಸಾದೃಶ್ಯವಿದ್ದಾಗ] ಪ್ರಸ್ತುತ ಪದಾರ್ಥದ (ವಿಷಯದ) ಉತ್ಕರ್ಷದ ಸಿದ್ಧಿಯ ಸಲುವಾಗಿ, ಅನ್ಯಥಾ ಅರ್ಥಾತ್ ಭಿನ್ನ ರೀತಿಯಲ್ಲಿ ಇರುವ ಎರಡು ಪದಾರ್ಥಗಳಲ್ಲಿ ಅಪ್ರಸ್ತುತದಿಂದ ಪ್ರಸ್ತುತದ ಶಾಬ್ದ ಅಥವಾ ಪ್ರತೀಯಮಾನ ರೀತಿಯಲ್ಲಿ ಅಭಿವ್ಯಕ್ತಿ ಆದಾಗ ಅದು ವ್ಯತಿರೇಕಾಲಂಕಾರವೆನಿಸುತ್ತದೆ [48]

ಇಲ್ಲಿ 'ತಚ್ಛಬ್ದ' - ಎಂಬುದನ್ನು ವಿಗ್ರಹ ವಾಕ್ಯ ಮಾಡಿದಾಗ, 'ಶ್ಲೇಷ'ದಿಂದ ಮೂಡಿ ಬಂದ ವಿಶಿಷ್ಟ ಶಬ್ದ ಎಂದು ಅರ್ಥೈಸಲಾಗುವುದು. ಅದು ಅದರ ದ್ವಂದ್ವಾರ್ಥವನ್ನು ವ್ಯಕ್ತಪಡಿಸುವಂತಿರಬೇಕು. ಇದರ ಜೊತೆಗೆ ಪ್ರಸ್ತುತ ವಿಷಯಕ್ಕೆ ಸಂಬಂಧಪಟ್ಟ ಅರ್ಥಕ್ಕೂ, ಅಪ್ರಸ್ತುತ ವಿಷಯಕ್ಕೆ ಸಂಬಂಧಪಟ್ಟ ಅರ್ಥಕ್ಕೂ ಪರಸ್ಪರ ಸಾಮ್ಯವಿರಬೇಕು. ಈ ಎರಡೂ ಲಕ್ಷಣಗಳು, (ಗುಣಧರ್ಮಗಳು) ಎರಡು ಮುಖಗಳನ್ನು ಹೊಂದಿವೆಯಾದ ಕಾರಣ, ಎರಡೂ ಪ್ರಸ್ತುತಗಳೆಂಬಂತೆ ತೋರುತ್ತವೆ. ಆದರೆ ಕವಿ ಇವೆರಡರಲ್ಲಿ ಒಂದನ್ನು ಆಯ್ದುಕೊಂಡು, ತನ್ನ ಕಲ್ಪನೆ ಮುನ್ನಡೆಸಿದಂತೆ, ಅದಕ್ಕೊಂದು ಹೊಸದೇ ಆದ ಸ್ವರೂಪವನ್ನು ನೀಡುತ್ತಾನೆ. ಮತ್ತು ಈ ವಿಶಿಷ್ಟ ಸ್ವರೂಪದಿಂದಾಗಿ ಒಂದನ್ನು ಇನ್ನೊಂದರಿಂದ ಪೃಥಕ್ಕರಿಸುತ್ತಾನೆ. ಪ್ರಸ್ತುತವನ್ನು ಅಪ್ರಸ್ತುತದಿಂದ ಅಥವಾ ಅಪ್ರಸ್ತುತವನ್ನು ಪ್ರಸ್ತುತದಿಂದ ಬೇರ್ಪಡಿಸುತ್ತಾನೆ (ವ್ಯತಿರೇಕ) ಉಪಮೇಯದಿಂದ ಉಪಮಾನವನ್ನು ಹಾಗೂ ಉಪಮಾನದಿಂದ ಉಪಮೇಯವನ್ನು ವ್ಯತಿರೇಕಿಸುತ್ತಾನೆ. ಆಗ ನಾವು ಅದನ್ನು ವ್ಯತಿರೇಕಾಲಂಕಾರವೆಂದು ಕರೆಯುತ್ತೇವೆ. ಹೀಗೇಕೆ ವ್ಯತಿರೇಕ ತರುವುದು ಎಂದರೆ, ಉತ್ಕರ್ಷದ ಸಿದ್ಧಿಗಾಗಿ ವರ್ಣ್ಯಮಾನ ವಸ್ತುವಿನಲ್ಲಿ ಸೌಂದರ್ಯಾತಿಶಯತೆಯನ್ನು ತರುವ ಸಲುವಾಗಿ ವ್ಯತಿರೇಕಾಲಂಕಾರವು ಎರಡು ವಿಧ - ಶಬ್ದ ಮತ್ತು 2) ಪ್ರತೀಯಮಾನ. ಶಬ್ದವೆಂದರೆ, ಕವಿ ಪರಂಪರೆಯಲ್ಲಿ ಪ್ರಸಿದ್ಧವಾಗಿದ್ದು ಅದನ್ನು

ಪ್ರತಿಪಾದಿಸುವುದರಲ್ಲಿ ಸಮರ್ಥ ವಾಚಕ ಶಬ್ದದಿಂದ ವ್ಯಕ್ತಪಡಿಸುವಂಥದು.

(2) ಪ್ರತೀಯಮಾನ - ಇಡೀ ವಾಕ್ಯಾರ್ಥದ ಸಾಮರ್ಥ್ಯದಿಂದ ಮಾತ್ರ ಬೋಧಿತವಾಗುವಂಥದು.

ಉದಾ : ಉಪಮೆಯನ್ನು ಆಧರಿಸಿದ ಪ್ರಥಮ ರೀತಿಯ ವ್ಯತಿರೇಕಕ್ಕೆ

ಏಮೇಅ ಜಣೋ ತಿಸ್ಸಾ ದೇಇ ಕವೋಲೋವಮಾಇ ಸಸಿಬಿಂಬಂ
ಪರಮತ್ಥವಿಆರೇ ಉಣ ಚಂದೋ ಚಂದೋ ವಿಅ ವರಾವೋ [೧೮೧]

ಏವಮೇವ ಜನಸ್ತಸ್ಯಾ ದದಾತಿ ಕಪೋಲೋಪಮಾಯಾಂ ಶಶಿಬಿಂಬಮ್|
ಪರಮಾರ್ಥ ವಿಚಾರೇ ಪುನಶ್ಚಂದ್ರ ಇವ ವರಾಕಃ (ಸಂಸ್ಕೃತ ಛಾಯೆ)
ಅವಳ ಕೆನ್ನೆಗೆ ಉಪಮೆಯು
ಆ ಚಂದ್ರಬಿಂಬವದೊಂದೆ ಎಂಬರು
ನಿಜದಲಿ ನೋಡಿದರೆ
ಆ ಬಡಚಂದ್ರಮನು ಚಂದ್ರಮನಂತಿಹನು [೧೮೧]

ಅಥವಾ

ದಿದೃಕ್ಷವಃ ಪಕ್ಷ್ಮಲತಾವಿಲಾಸಮಕ್ಷ್ಣಾಂ ಸಹಸ್ರಸ್ಯ ಮನೋಹರಂ ತೇ
ವಾಪೀಷು ನೀಲೋತ್ಪಲಿನೀ - ವಿಕಾಸರಮ್ಯಾಸು ನಂದಂತಿ ನ ಷಟ್ಪದೌಘಾಃ [182]

ನಿನ್ನ ಕಂಗಳ ಭ್ರೂಲತೆಯ ಮನಸೆಳೆವ
ಸಹಸ್ರ ವಿಲಾಸವನು ಕಾಂಬ ಭರದೊಳು
ಮಧುಕರಂಗಳು ಸಂತಸವ ಕಾಣವು
ಅರಳಿದಂಬುಜವನದ ರಮ್ಯ ಸರಸಿಗಳೊಡೆಯೊಳು [೧೮೨]

ಅಥವಾ

ಪ್ರಾಪ್ತ ಶ್ರೀರೇಷ ಕಸ್ಮಾತ್ ಪುನರಪಿ ಮಯಿ ತೇ ಮಂಥಖೇದಂ ವಿದಧ್ಯಾತ್
ನಿದ್ರಾಮಪ್ಯಸ್ಯ ಪೂರ್ವಾಮನಲಸಮನಸೋ ನೈವ ಸಂಭಾವಯಾಮಿ|
ಸೇತುಂ ಬಧ್ನಾತಿ ಭೂಯಃ ಕಿಮಿತಿ ಚ ಸಕಲದ್ವೀಪ ನಾಥಾನುಯಾತಃ
ತ್ವಯ್ಯಾಯಾತೇ ವಿಕಲ್ಪಾನಿತಿ ದಧತ ಇವಾಭಾತಿ ಕಂಪಃ ಪಯೋಧೇಃ [೧೮೩]

ಲಕ್ಷ್ಮಿಯನಾಗಲೆ ಪಡೆದಿರುವೀತನು
ಮಂಥನದ ಪೀಡೆಯನು ಎನಗೇಕೆ ಮಾಳ್ಪನು?
ಆಲಸ್ಯ ಮನದವನು ಇವನಲ್ಲ
ಅದರಿಂದ ಮೊದಲ ಹಾಗೆ ಇವಗೆ
ನಿದ್ರೆಯಿಚ್ಚೆಯೆಂದೂಹಿಸೆನು ನಾನು
ದ್ವೀಪಕೆಲ್ಲಕು ನಾಥನಿವನು ಮತ್ತೆ

ಎನಗೇಕೆ ಸೇತುವೆಯ ಕಟ್ಟುವನು?
ಬಳಿಗೆ ನೀ ಬರಲಿಂತು ನಾನಾ ಸಂದೇಹಗಳ ತಳೆದು
ಕಂಪಿಸುವ ತೆರನಿಹುದು ಸಾಗರವು| [೧೮೩] (ಧ್ವನ್ಯಾಲೋಕ 11-27)

ಇಲ್ಲಿ ವರ್ಣ್ಯಮಾನ ವಿಷಯವಾದ ರಾಜನಲ್ಲಿ ನಾರಾಯಣತ್ವವನ್ನು ಸಮಾರೋಪಿಸದ ಹೊರತು, ಪ್ರಾರಂಭದ ಸಂಭಾವನೆಗಳಾವುವೂ (ಊಹೆ) ನಿಲ್ಲುವುದಿಲ್ಲ. ಆದ್ದರಿಂದಲೆ ಪೂರ್ವ ಸೂರಿಗಳು (ಆನಂದವರ್ಧನ) ರಾಜನಲ್ಲಿ ನಾರಾಯಣನನ್ನು ಅಧ್ಯಾರೋಪ ಮಾಡಿರುವುದು ಪ್ರತೀಯಮಾನ ರೂಪಕಕ್ಕೆ ಉದಾಹರಣೆಯಾಗಿದೆ ಎಂದು ಹೇಳಿದ್ದಾರೆ. ಹಾಗಿದ್ದರೆ ಅದನ್ನು ವಾಚ್ಯ ವ್ಯತಿರೇಕ ಎಂದು ಹೇಗೆ ಹೇಳಲಾಗುತ್ತದೆ ? ಅಂಥ ಒಂದು ಆಕ್ಷೇಪ ಸಾಧ್ಯ. ಅದಕ್ಕೆ ನನ್ನ ಉತ್ತರ ಹೀಗಿದೆ: ಇಲ್ಲಿ ಪ್ರತೀಯಮಾನ ವಸ್ತು ಎರಡು ವಿಧವಾಗಿದೆ.

(1) ವಾಚಕ ವ್ಯಾಪಾರಕ್ಕೆ ಗುಣೀಭೂತವಾಗಿರುವ ಪ್ರತೀಯಮಾನದ ಶಬ್ದ ಶಕ್ತಿಯಿಂದ ಬಂದುದು. (2) ಅರ್ಥದ ಧ್ವನಿಶಕ್ತಿಯಿಂದಾಗಿ ಬಂದುದು. ಪೂರ್ವಸೂರಿಗಳು ಈ ಉದಾಹರಣೆಯಲ್ಲಿ ಕಂಡು ಬರುವ ವಾಚಕ ಸಾಮರ್ಥ್ಯವು ಮುಖ್ಯವಾಗಿ, ಉಪಮಾನದಲ್ಲಿದೆ ಎಂದು ಹೇಳಿದ್ದಾರೆ (ಭಗವಾನ್ ನಾರಾಯಣ) ಕವಿಯ ವಿವಕ್ಷಿತ ಅರ್ಥವನ್ನು ಸಾಧ್ಯವಾಗಿಸಲು ಇದನ್ನು ತಿಳಿಯಬೇಕಾಗಿದೆ. ಅಲ್ಲದೆ ವಾಚ್ಯ ಸಾಮರ್ಥ್ಯದಿಂದಲೇ ಇದು ಗ್ರಹಿಕೆಗೆ ಬರುವುದು ಎಂದು ಅಭಿಪ್ರಾಯಿಸಿದ್ದಾರೆ. ಆದರೆ ನಮ್ಮ ಅಭಿಪ್ರಾಯದಲ್ಲಿ ವಾಚಕ ವ್ಯಾಪಾರವು ನಿಶ್ಚಿತವಾಗಿಯೂ ಬೇರೆಯೇ ಆಗಿದೆ. "ಲಕ್ಷ್ಮಿಯನಾಗಲೆ ಪಡೆದಿರುವೀತನು" ಎಂಬಂಥ ಉಕ್ತಿಗಳೆಲ್ಲ ಧ್ವನಿತವಾಗಿರುವುದರ ವಿರುದ್ಧ ಪ್ರಯೋಗಗಳು. ಅವೆಲ್ಲವೂ ವರ್ಣಿತವಾಗಿರುವ ವ್ಯಕ್ತಿಯು ವಿಶಿಷ್ಟ ದೈವೀಗುಣಲಕ್ಷಣಗಳಿಂದ ಕೂಡಿರುವನೆಂಬುದರ ಸೂಚಕಗಳು. ಆದ್ದರಿಂದ ಅವೆಲ್ಲವೂ ರೂಪಕ ವ್ಯತಿರೇಕಾಲಂಕಾರವನ್ನು ಸೂಚಿಸುತ್ತವೆ.

ಅವರು ಹೇಳಿರುವಂತೆ

ಯತ್ರಾರ್ಥಃ ಶಬ್ದೋವಾ
ತಮರ್ಥಮುಪಸರ್ಜನೀ ಕೃತ ಸ್ವಾರ್ಥೌ|
ವ್ಯಂಜ್ಕ್ತ : ಕಾವ್ಯವಿಶೇಷಃ
ಸ ಧ್ವನಿರಿತಿ ಸೂರಿಭಿ: ಕಥಿತಃ[1] [೧೮೪]

ಎಲ್ಲಿ ಅರ್ಥವಾಗಲಿ ಅಥವಾ ಶಬ್ದವಾಗಲಿ, (ಅನುಕ್ರಮವಾಗಿ) ತನ್ನನ್ನು ಅಥವಾ ತನ್ನ ಅರ್ಥವನ್ನು ಅಪ್ರಧಾನವಾಗಿಸಿಕೊಂಡು ಆ ವ್ಯಂಗ್ಯಾರ್ಥವನ್ನು ಸೂಚಿಸುವುದೋ ಆ ಕಾವ್ಯ ವಿಶೇಷವನ್ನು ಧ್ವನಿಯೆಂದು ಕರೆದಿದ್ದಾರೆ1 [184]

ಆದ್ದರಿಂದ ನಾವು ಹೇಳಿರುವುದರಲ್ಲಿ ಅತಾರ್ಕಿಕವಾದ್ದೇನೂ ಇಲ್ಲ.

ಈಗ ಶ್ಲೇಷವ್ಯತಿರೇಕಕ್ಕೊಂದು ಉದಾಹರಣೆ

1. ಧ್ವನ್ಯಾಲೋಕ 1-13 ಪು-25

ಶ್ಲಾಘ್ಯಾ ಶೇಷತನುಂ ಸುದರ್ಶನ ಕರಃ ಸರ್ವಾಂಗ ಲೀಲಾಜಿತ-
ತ್ರೈಲೋಕ್ಯಾಂ ಚರಣಾರವಿಂದ ಲಲಿತೇನಾಕ್ರಾಂತ ಲೋಕೋ ಹರಿಃ|
ವಿಭ್ರಾಣಾ ಮುಖಮಿಂದುರೂಪಮಖಿಲಂ ಚಂದ್ರಾತ್ಮ ಚಕ್ಷುರ್ದಧತ್
ಸ್ಥಾನೇ ಯಾಂ ಸ್ವತನೋರಪಶ್ಯದಧಿಕಾಂ ಸಾ ರುಕ್ಮಿಣೀವೋऽಪತಾತ್ [೧೮೫]

[ಧ್ವನ್ಯಾಲೋಕ ಪುಟ -90]

ರುಕ್ಮಿಣಿಯ ತನುವೆಲ್ಲ ಶ್ಲಾಘ್ಯತಾನಾಗಿರೆ
ಹರಿಯ ಕರಮಾತ್ರ ಸುದರ್ಶನವು
ಸರ್ವಾಂಗ ಸೌಂದರ್ಯದಿಂದವಳು ಲೋಕಮೂರನು ಗೆದ್ದಿರೆ
ಪಾದ ಕಮಲದಿಂದಿವನು ಲೋಕಗಳನಳೆದಿಹನು
ರುಕ್ಮಿಣಿಯ ಮುಖವೆಲ್ಲ ಪೂರ್ಣಚಂದ್ರನೆ ಆಗಿರೆ
ಇವನ ಕಂಗಳಷ್ಟೆ ಚಂದಿರನು!
ಇಂತಿರೆ ರುಕ್ಮಿಣಿಯ ತನುವೆ ತನ್ನ ತನುಗಿಂತ
ಮೇಲಾಗಿಹುದ ಅರಿತನಾ ಹರಿಯು
ಇಂಥ ರುಕ್ಮಿಣಿಯು ರಕ್ಷಿಸಲಿ ನಮ್ಮನೆಂದೂ!

ವ್ಯತಿರೇಕದ ಇತರೆ ಪ್ರಕಾರಗಳನ್ನು ನೋಡೋಣ.

ಲೋಕಪ್ರಸಿದ್ಧ ಸಾಮಾನ್ಯ ಪರಿಸ್ಪಂದಾದ್ವಿಶೇಷತಃ|
ವ್ಯತಿರೇಕೋ ಯದೇಕಸ್ಯ ಪರಸ್ತ ದವಿವಕ್ಷಯಾ[49]

ವಸ್ತುವೊಂದರ ಉತ್ಕರ್ಷವನ್ನು ಪ್ರತಿಪಾದಿಸುವ ಉದ್ದೇಶದಿಂದ ಅದಕ್ಕೆ ಸಂಬಂಧಿಸಿದ, ಲೋಕ ಪ್ರಸಿದ್ಧ ಸಾಮಾನ್ಯ ವ್ಯಾಪಾರಾದಿಗಳಿಗಿಂತ ಮಿಗಿಲಾಗಿ, ಆದರೆ ಉಪಮಾದಿ ಇತರೆ ಅಲಂಕಾರಗಳ ಪರಿಣಾಮವನ್ನು ಸ್ಪಷ್ಟವಾಗಿ ಉದ್ದೇಶಿಸದೆ, ಅದನ್ನು (ವಸ್ತುವನ್ನು) ವರ್ಣಿಸಿದಾಗ, ವ್ಯತಿರೇಕಾಲಂಕಾರದ ಇನ್ನೊಂದು ಪ್ರಕಾರ ಸಿದ್ಧಿಸುತ್ತದೆ.

ಈಗ ಇನ್ನೊಂದು ಪ್ರಕಾರದ ವ್ಯತಿರೇಕಾಲಂಕಾರವನ್ನು ವರ್ಣಿಸಲಾಗುವುದು. ಅದರ ವಿಶಿಷ್ಟತೆ ಇರುವುದು ಒಂದು ವಸ್ತುವನ್ನು ಪೃಥಕ್ಕರಿಸುವುದರಲ್ಲಿ. ಅದು ಹೇಗೆ? ಅದರ ಗುಣಲಕ್ಷಣಗಳು ಅಸಾಧಾರಣವಾಗಿ ವಿಶಿಷ್ಟವಾದುವು ಎಂದು ತೋರಿಸುವುದರಲ್ಲಿ. ಅರ್ಥಾತ್ ಅವು ಜಗತ್ತಿನಲ್ಲಿ ಅದರೊಂದಿಗೆ ಸೇರಿಕೊಂಡಿರುವ ಸಾಧಾರಣ ಗುಣಲಕ್ಷಣಗಳಲ್ಲ ಎಂದು. ಅದರ ಗುಣಲಕ್ಷಣಗಳೆಂದರೆ, ವ್ಯಾಪಾರಗಳೆಂದು ಅರ್ಥ. ಏಕೆ? ಅದರ ಉತ್ಕರ್ಷವನ್ನು ಹೊರಗೆಡಹುವ ಉದ್ದೇಶದಿಂದ. ಯಾವ ರೀತಿಯಲ್ಲಿ? ಉಪಮೆಯಲ್ಲಿ ಕಂಡುಬರುವುದಕ್ಕಿಂತ ವಿಭಿನ್ನವಾದ ರೀತಿಯಲ್ಲಿ. ಅಂದರೆ ಉಪಮಾದಿಗಳನ್ನು ಪ್ರಮುಖ ಅಲಂಕಾರಗಳೆಂದು ವಿವಕ್ಷಿಸದೆ, ಇದರ ಮಥಿತಾರ್ಥವೆಂದರೆ ಪ್ರಧಾನವಾಗಿ ವಿವಕ್ಷಿತವಾದ ಈ ವ್ಯತಿರೇಕಾಲಂಕಾರ ಮಾತ್ರ ತನ್ನೆಲ್ಲ ವೈಭವದಲ್ಲಿ ಕಾಣಿಸಿಕೊಳ್ಳುತ್ತದೆ. ಉಪಮಾದಿ ಇತರೆ ಅಲಂಕಾರಗಳೆಲ್ಲವೂ ಅವುಗಳ ಪರಿಮಿತ

1. ಧ್ವನ್ಯಾಲೋಕ ಲೋಚನಸಾರ ಪುಟ -26

ವ್ಯಾಪ್ತಿಯಲ್ಲಿ ವ್ಯತಿರೇಕಕ್ಕೆ ಸೇರಬೇಕಾದವು. ಉದಾಹರಣೆಗೆ -

ಚಾಪಂ ಪುಷ್ಪಿತ ಭೂತಲಂ ಸುರಚಿತಾ ಮೌರ್ವೀ ದ್ವಿರೇಫಾವಲೀ
ಪೂರ್ಣೇದೋರುದಯೇಽಭಿಯೋಗ ಸಮಯಃ ಪುಷ್ಪಾಕರೋಽಪ್ಯಾಸರಃ|
ಶಸ್ತ್ರಾಣ್ಯುತ್ಪಲ ಕೇತಕೀ ಸುಮನಸೋ ಯೋಧ್ಧಾತ್ಮನಃ ಕಾಮಿನಾಂ
ತ್ರೈಲೋಕ್ಯೇ ಮದನಸ್ಯ ಕೋಽಪಿ ಲಲಿತೋಲ್ಲೇಖೋ ಜಿಗೀಷಾಗ್ರಹಃ [೧೮೬]

ಅರಳಿನಿಂತ ಭೂಮಿ ಅವನ ಧನುವು
ದುಂಬಿಗಳ ಸಾಲೆ ಸುದೃಢ ಮೌರ್ವಿಯು
ವಿಜಯದ ಮುಹೂರ್ತವಾದರೊ
ಪೂರ್ಣಚಂದ್ರನ ಉದಯವು
ವಸಂತನವನ ಸಹಚರ
ಕೇದಗೆ ಉತ್ಪಲಗಳೆ ಶಸ್ತ್ರಗಳು
ಇಷ್ಟಾದರೂ ಈ ಕಲಿ ಕಾಮನಿಗೆ
ಜಗದೆಲ್ಲ ಕಾಮಿಗಳ ಗೆಲುವ ಬಯಕೆ
ನಿಜಕು ಅಪೂರ್ವ ಅವನ ಆಶೆಯು! [೧೮೬]

ಇಲ್ಲಿ ಮನ್ಮಥನು ಸುಕುಮಾರವಾದ ಉಪಕರಣಗಳೊಂದಿಗೆ ಜಯಸಾಧಿಸಲು ಹೊರಟಿದ್ದಾನೆಂದು ಹೇಳಲಾಗಿದೆ ಮತ್ತುಅದು ಸಕಲ ಲೋಕ ಪ್ರಸಿದ್ಧವಾದ ಶಸ್ತ್ರಾದಿ ಉಪಕರಣಗಳೊಂದಿಗೆ ತೊಡಗುವ ಜಯದ್ಯೋಗಕ್ಕಿಂತ ವಿಭಿನ್ನವಾದುದು ಮತ್ತು ಶ್ಲಾಘನೀಯವಾದ್ದು.

ಪುಷ್ಪಿತ ಭೂತಲವನ್ನು ಚಾಪಕ್ಕೆ ಆರೋಪಿಸಿರುವುದರಿಂದ ಇದು ರೂಪಕ ವ್ಯತಿರೇಕವೇ ಎಂದು ಸಾಧಿಸಬಹುದು. ಆದರೆ ಹಾಗಲ್ಲ. ರೂಪಕ ವ್ಯತಿರೇಕದಲ್ಲಿ ಮೊದಲು ಆರೋಪಣ ಮಾಡಿ ಅನಂತರ ಅದರಿಂದಲೇ ಪೃಥಕ್ಕರಿಸಲಾಗುತ್ತದೆ. ಇದರಲ್ಲಾದರೆ ಲೋಕ ಪ್ರಸಿದ್ಧವಾದ ಸರ್ವಸಾಧಾರಣ ವ್ಯವಹಾರದ ರೂಪದ ತಾತ್ಪಾರ್ಯದಿಂದ ವ್ಯತಿರೇಕ ಮಾಡಲಾಗುತ್ತದೆ [ಅರ್ಥಾತ್ ಮನ್ಮಥನ ಅಪೂರ್ವವಾದ ಜಗದ್ವಿಜಯದ ವ್ಯಾಪಾರವೇನಿದೆ ಅದನ್ನು ತೋರಿಸುವುದೇ ಕವಿಯ ಅಭಿಪ್ರಾಯವಾಗಿದೆ] ಪುಷ್ಪಿತ ಭೂತಲದ ಮೇಲೆ ಚಾಪವೇ ಮೊದಲಾದ ಅಸ್ತ್ರಗಳ ಆರೋಪ ಮಾಡಿರುವುದನ್ನು ವಿಶೇಷಣಗಳ ವೈಶಿಷ್ಟ್ಯಕ್ಕೆ ಪುಟಗೊಡುತ್ತಿವೆ ಯೆಂದೇ ಪರಿಗಣಿಸಬೇಕು. [ಮತ್ತುಅವು ನಿಮಿತ್ತ ಮಾತ್ರದವೆಂದೇ ಪರಿಗಣಿಸಬೇಕು] ಆದ್ದರಿಂದ ಇಲ್ಲಿರುವುದು ರೂಪಕ ವ್ಯತಿರೇಕವಲ್ಲ; ಕೇವಲ ವ್ಯತಿರೇಕಾಲಂಕಾರ. ವ್ಯತಿರೇಕಾಲಂಕಾರದ ವಿವೇಚನೆಯನ್ನು ಮುಗಿಸಿ, ಗ್ರಂಥ ಕರ್ತೃವು ಶ್ಲೇಷಕ್ಕೆ ಅತಿ ಸಮೀಪವಾಗಿರುವ ವಿರೋಧಾಲಂಕಾರದ ವಿವೇಚನೆಯನ್ನು ಕೈಗೆತ್ತಿಕೊಳ್ಳುತ್ತಾನೆ.

ವಿರೋಧೋ ಯೋ ವಿರುದ್ಧಾ ರ್ಥ ವಾಚಿನಾಂ ಸಂಗತಿಂ ಪುನಃ|
ಸಮರ್ಪಯನ್ನುಲ್ಲಿ ಖತಿ ಪ್ರತೀತೇರ್ಯುಕ್ತಿ ಯುಕ್ತ ತಾಮ್ [50]

ಪರಸ್ಪರ ವಿರುದಾರ್ಥ ದ್ಯೋತಕವಾದ ಎರಡು ವಿರುದ್ಧ ವಾಚಕಗಳ ನಡುವಿನ [ತೋರಿಕೆಯ] ವಿರೋಧವನ್ನು ಚಾತುರ್ಯಪೂರ್ಣವಾಗಿ ನಿವಾರಿಸಿ ಅಂತಿಮ ಅರ್ಥವು ಯುಕ್ತಯುಕ್ತವಾಗುವಂತೆ ಮಾಡಿದಾಗ ವಿರೋಧಾಲಂಕಾರವೆನಿಸುತ್ತದೆ [50]

ವಿರುದ್ಧಾರ್ಥವಾಚಿಯಾದ ಎರಡು ವಿರುದ್ಧ ವಸ್ತು ವಾಚಕಗಳನ್ನು (ಶ್ಲೇಷದಲ್ಲಿ ಮಾಡುವಂತೆ) ಬೇರೆಯೇ ಆದ ರೀತಿಯಲ್ಲಿ ಭಾವಿಸುವುದರಿಂದಾಗಲಿ ಅತವಾ ಆ ವಿರುದ್ಧಾರ್ಥಗಳಲ್ಲೇ ನಿಹಿತವಾಗಿರುವ ಪದಾರ್ಥಗಳ ಧ್ವನಿಸಾಮರ್ಥ್ಯದಿಂದಾಗಲಿ ವೈರುಧ್ಯವನ್ನು ಹೋಗಲಾಡಿಸಿ ಯುಕ್ತಿ ಯುಕ್ತವಾಗಿ ಸಮನ್ವಯ ಉಂಟಾಗುವಂತೆ ಮಾಡುವ ಅಲಂಕಾರವು ವಿರೋಧಾಲಂಕಾರವೆನಿಸುತ್ತದೆ. ಕಾರಣ ಉಪಮಾನವನ್ನೇ ಉಪಮೇಯವಾಗಿ ಪರಿಗಣಿಸುವ ವೈರುಧ್ಯವನ್ನು ಅದು ಹೋಗಲಾಡಿಸುತ್ತದೆ. ಉದಾ:

ಕುಪತಿಮಪಿ ಕಲತ್ರ ವಲ್ಲಭಮ್, ಮಹಾದೋಷಮಪಿ
ಸಕಲ ಕಲಾಧಿಷ್ಠಾನಮ್ [೧೮೭]

ಕುಪತಿಯಾದರೂ, ಹೆಂಡತಿಗೆ ಪತಿ. ಮಹಾದೋಷ
ಸಹಿತನಾದರೂ ಸಕಲ ಕಲೆಗಳ ಒಡೆಯ [೧೮೭]

ಇಲ್ಲಿ 'ಅಪಿ' ಶಬ್ದದಿಂದ ವಿರುದ್ಧಾರ್ಥ ಬೋಧೆಯಾಗುತ್ತಿದೆ. (ಇದು ತೋರಿಕೆಗಷ್ಟೇ ವಿರೋಧ. ಇಲ್ಲಿ ಕುಪತಿ ಎಂದರೆ 'ಭೂಪತಿ' (ಕು=ಭೂಮಿ) ಎಂದು ಅರ್ಥೈಸಿದರೆ ಹಾಗೂ ಮಹಾದೋಃ ಎಂದರೆ ಶಕ್ತಿಯುತವಾದ ತೋಳುಗಳು ಎಂದು ಅರ್ಥೈಸಿದರೆ ವಿರೋಧ ನಿವಾರಣೆಯಾಗುತ್ತದೆ)

ಕೆಲವೊಮ್ಮೆ ಪದದ ಅರ್ಥಸಾಮರ್ಥ್ಯದಿಂದ ವಿರುದ್ಧಾರ್ಥ ಪ್ರತೀತವಾಗುತ್ತದೆ ಉದಾ :

"ಗೌರ್ಯಾದಿ ಭವತಾ" [೧೮೮] [ತಾಡೋಲೆಯಲ್ಲಿ ಶ್ಲೋಕ ಹಾಳಾಗಿದೆ]

ಕೆಲವೊಮ್ಮೆ ಶ್ಲೇಷದೊಂದಿಗೆ ಸೇರಿಕೊಂಡು ವಿರೋಧ ಉಂಟಾಗುತ್ತದೆ(ಪ್ರಾಕೃತ ಶ್ಲೋಕ ಪುನಾರಚಿಸಲಾರದಷ್ಟು ಹಾಳಾಗಿದೆ)* ರೂಪಕಾದಿಗಳಿಗೆ ಸಂಬಂಧಿಸಿದಂತೆಯೂ ಇಂಥ ವಿರೋಧ ಪ್ರಭೇದಗಳು ಸಾಧ್ಯ. ಅವುಗಳಿಗೆ ಉದಾಹರಣೆಗಳನ್ನು ಸಹೃದಯರೇ ತಿಳಿಯಬೇಕು.

ವಿರೋಧಾಲಂಕಾರವನ್ನು ವಿವೇಚಿಸಿದ ನಂತರ, ಸಮಾಸೋಕ್ತಿ ಮತ್ತಿತರ ಅಲಂಕಾರಗಳ ವಿವೇಚನೆಯನ್ನು ಕೈಗೆತ್ತಿಕೊಳ್ಳುತ್ತಾನೆ. ಕಾರಣ ಅವು ಅನೇಕ ವೇಳೆ ವಿರೋಧದ ಛಾಯೆಯಿಂದೊಡಗೂಡಿರುತ್ತವೆ.

ಸಮಾಸೋಕ್ತಿಃ ಸಹೋಕ್ತಿಶ್ಚ ನಾಲಂಕಾರತಯಾ ಮತಾ!
ಅಲಂಕಾರಾಂತರತ್ವೇನ ಶೋಭಾಶೂನ್ಯತಯಾ ತಥಾ[51]

ಇತರೆ ಅಲಂಕಾರದ ಲಕ್ಷಣಗಳನ್ನು ಹೊಂದಿರುವುದರಿಂದ ಹಾಗೂ ಕಾವ್ಯ ಸೌಂದರ್ಯ

---

* ಮಉಲಾವರ್ತಾಂತಮತೇ ವಿಚಿತ್ತೋಯರೇ ಅಣಂ ಅಪರಿಹತ್ವೇನ ಪರಿಲಂಚಿತಕಮಂತಾ ವಿಸೇಸ ಸಾ ಹೋತಿ ಅಹಂ| (ಪ್ರಾಕೃತ - ೧೮೯)

ಶೂನ್ಯವಾಗಿರುವುದರಿಂದ ಸಮಾಸೋಕ್ತಿ ಮತ್ತು ಸಹೋಕ್ತಿಗಳನ್ನು ಅಲಂಕಾರಗಳೆಂದು ಪರಿಗಣಿಸಲಾಗುವುದಿಲ್ಲ [51]

'ಸಮಾಸೋಕ್ತಿ' ಎಂದು ಕರೆಯಲಾಗುವ ಅಲಂಕಾರವು ನಮ್ಮ ಅಭಿಪ್ರಾಯದಲ್ಲಿ ನಿಜವಾಗಿ ಅಲಂಕಾರವೇ ಅಲ್ಲ. ಕಾರಣ ಅದನ್ನು ಸ್ವತಂತ್ರ ಅಲಂಕಾರವೆಂದು ಒಪ್ಪಲಾಗದು. ಕಾರಣವೇನು? ಅದು ಇತರೆ ಹೆಸರಾಂತ ಅಲಂಕಾರಗಳ ಲಕ್ಷಣಗಳನ್ನು ಪಡೆದುಕೊಳ್ಳುವುದು ಹಾಗೂ ಶೋಭಾರಹಿತವಾಗಿರುವುದು. ಇದರ ಮಥಿತಾರ್ಥವಿಷ್ಟೆ. ಒಂದು ವೇಳೆ ಅದರಲ್ಲಿ ರಮಣೀಯತೆ ಉಂಟಾದರೆ, ಆಗ ಬೇರಾವುದಾದರೂ ಅಲಂಕಾರವೆಂದು ಪರಿಗಣಿತವಾಗುತ್ತದೆ. ಒಂದು ವೇಳೆ ರಮಣೀಯತೆ ಇಲ್ಲವೆಂದಾದರೆ, ಅದು ಅಲಂಕಾರವೆಂದು ಕರೆಸಿಕೊಳ್ಳಲು ಅನರ್ಹವಾಗುತ್ತದೆ. ಪ್ರಾಚೀನ ಆಲಂಕಾರಿಕರು ನೀಡಿರುವಂತೆ ಸಮಾಸೋಕ್ತಿಯ ಲಕ್ಷಣ ಮತ್ತು ಉದಾಹರಣೆ ಇಂತಿದೆ.

ಯತ್ರೋಕ್ತೇರ್ಗಮ್ಯತೇಽನ್ಯೋಽರ್ಥಸ್ತತ್ಸಮಾನ ವಿಶೇಷಣಃ|
ಸಾ ಸಮಾಸೋಕ್ತಿರುದಿತಾ ಸಂಕ್ಷಿಪ್ತಾರ್ಥತಯಾ ಯಥಾ [೧೯೦]*

ಒಂದರ ವರ್ಣನೆಯಿಂದ ಬೇರೊಂದು ಅರ್ಥವು ಪ್ರತೀತವಾದರೆ (ಎರಡಕ್ಕೂ ಸಮಾನವಾಗಿ ಅನ್ವಯಿಸುವ ವಿಶೇಷಣಗಳಿಂದಾಗಿ) ಅದು ತನ್ನ ಸಂಕ್ಷಿಪ್ತತೆಯ ಕಾರಣದಿಂದಾಗಿ ಸಮಾಸೋಕ್ತಿ ಎಂದು ಕರೆಯಲ್ಪಡುತ್ತದೆ [೧೯೦]

ಉದಾ:

ಸ್ಕಂಧವಾನ್ ಋಜುರವ್ಯಾಲಃ ಸ್ಥಿರೋಽನೇಕ ಮಹಾಫಲಃ|
ಜಾತಸ್ತರುರಯಂ ಚೋಚ್ಚೈಃ ಪಾತಿತಶ್ಚ ನಭಸ್ವತಾ [೧೯೧]

ನೇರ ಕಾಂಡದ, ಸರ್ಪವೊಂದಿಲ್ಲದ
ಸ್ಥಿರವಾಗಿ ನಿಂತು ಬಹುಫಲಗಳಿಂ ಕೂಡಿ
ಇನಿತೊಂದು ಎತ್ತರಕೆ ಬೆಳೆದು ನಿಂತಿದ್ದ
ಈ ತರುವು ಬಿರುಗಾಳಿ ಬೀಸಿ
ಉರುಳಿ ಬಿದ್ದಿಹುದು [೧೯೧]

ಇಲ್ಲಿ ವರ್ಣಿತವಾಗಿರುವ ಮುಖ್ಯ ವಿಷಯಗಳು ವೃಕ್ಷ ಮತ್ತು ಮಹಾಪುರುಷ ಇಬ್ಬರೂ ಮುಖ್ಯವಾದವು ಎಂದು ಭಾವಿಸುವುದಾದರೆ, ಎರಡಕ್ಕೂ ವಿಶೇಷಣಗಳನ್ನು ಸಮಾನವಾಗಿ ಹೇಳಿದ ಹಾಗೆಯೇ ವಿಶೇಷ್ಯ ವೃಕ್ಷವನ್ನು ವಾಚ್ಯವಾಗಿ (ಸ್ಪಷ್ಟವಾಗಿ) ಹೇಳಿದ ಹಾಗೆಯೇ ಇನ್ನೊಂದು ವಿಶೇಷ್ಯವಾದ ಮಹಾಪುರುಷನನ್ನು ಸೂಚಿಸುವ ಪದವನ್ನೂ ವಾಚ್ಯವಾಗಿಯೇ (ಸ್ಪಷ್ಟವಾಗಿಯೇ) ಹೇಳಬೇಕಿತ್ತು ಎನ್ನುವುದು ಯುಕ್ತವಾಗಿಯೇ ಇದೆ. ಅಥವಾ ಒಂದು ವೇಳೆ ವಿಶೇಷಣವು ಬೇರೆ ಯಾವುದೇ ರೀತಿಯಲ್ಲಿ ಸಂಗತವಾಗಿರುವುದರಿಂದ, ಪ್ರತೀಯಮಾನ ರೂಪದಿಂದ ವಿಶೇಷ್ಯವನ್ನು ಊಹಿಸಬೇಕಾಗಿ ಬರುತ್ತದೆಂದರೆ, ಈ ರೀತಿಯ ಕಲ್ಪನೆಯಲ್ಲಾಗಲಿ, ಅರ್ಥೈಸುವಿಕೆಯಲ್ಲಾಗಲಿ

* ಭಾಮಹನ ಕಾವ್ಯಾಲಂಕಾರ II - 79-80

ಏನೂ ಸ್ವಾರಸ್ಯವಿರುವುದಿಲ್ಲ. ಹಾಗಾಗಿ ಸೌಂದರ್ಯಹೀನತೆ ಸ್ಪಷ್ಟವಾಗಿ ಕಾಣುತ್ತದೆ. ಈ ಎರಡರ ಸ್ವಭಾವವೂ ಬೇರೆ ಬೇರೆಯಾದ್ದರಿಂದ ಒಂದೇ ವಾಕ್ಯದಲ್ಲಿ ಅಂಥ ಎರಡು ವಿಷಯಗಳನ್ನು ಏಕ ಕಾಲದಲ್ಲಿ ಸೇರಿಸಿದ್ದಕ್ಕೆ ಸಮರ್ಥವಾದ ಕಾರಣವನ್ನು ನೀಡಬೇಕಾಗುತ್ತದೆ. ಒಂದು ವೇಳೆ ಎರಡೂ ವಿಶೇಷ್ಯಗಳಿಗೆ ಪಾರಸ್ಪರಿಕ ಸಂಬಂಧವಿಲ್ಲದಿದ್ದರೆ, ಈ ಯಾವ ಪ್ರಕ್ರಿಯೆಯೂ ಅರ್ಥಪೂರ್ಣವಾಗುವುದಿಲ್ಲ. "ಕಾಮರಿಪೋರ್ಮೂರ್ತಿ" ಎಂಬ ಒಂದೇ ಪದ ಶಿವನ ಅಥವಾ ಉಮೆಯ ದೇಹವನ್ನು ಸೂಚಿಸುವಂತೆ ಹಾಗೂ "ಜಗತ್ತನ್ನು ರಕ್ಷಿಸಲಿ" ಎಂಬ ಕ್ರಿಯಾಪದವು ಎರಡಕ್ಕೂ ಸಮನಾಗಿಯೇ ಅನ್ವಯಿಸಬಹುದು. ಕಾರಣ ಇಬ್ಬರೂ ವ್ಯಕ್ತಿಗಳು ಸಮಸಮವಾಗಿಯೇ ಸರ್ವಶಕ್ತರು ಮತ್ತು ಜಗತ್ತನ್ನು ರಕ್ಷಿಸುವ ಸಾಮರ್ಥ್ಯವುಳ್ಳವರು. ಮೇಲಿನ (ವೃಕ್ಷದ) ಉದಾಹರಣೆಯಲ್ಲಿ ಅವುಗಳ ನಡುವಿನ ಯುಕ್ತತೆಯನ್ನು ಈ ಶ್ಲೇಷಸಾದೃಶ್ಯದಿಂದ ವಿವರಿಸಲಾಗುವುದಿಲ್ಲ. ಜಗತ್ತನ್ನು ರಕ್ಷಿಸುವ ಕಾರ್ಯದಲ್ಲಿ ಇಬ್ಬರೂ ತೊಡಗಬೇಕೆಂಬ ಅಭೀಪ್ಸೆ ಯುಕ್ತವೆಂದೇ ಅನಿಸುತ್ತದೆ ಮತ್ತು ಎರಡೂ ಒಂದೇ ಪದದಿಂದ ಅಭಿವ್ಯಕ್ತವಾಗಿವೆ. ಹಾಗಾಗಿ ಅದರಲ್ಲಿ ಅಲೌಕಿಕವಾದದ್ದೇನೂ ಇಲ್ಲ. ಈ ಉದಾಹರಣೆಯಲ್ಲಿ (ವೃಕ್ಷ) ಪರಸ್ಪರ ಸಂಬಂಧವಿರದ ಎರಡೂ ಒಂದೇ ವಾಕ್ಯದಲ್ಲಿ ಬಂದಿದ್ದು ಇವಕ್ಕೆ ಯಾವುದೇ ಸಮರ್ಥನೆ ಇಲ್ಲವಾದ್ದರಿಂದ ಸರಿಪಡಿಸಲಾಗದ್ದೆಂದು ಕಡೆಗಣಿಸಲರ್ಹವಾದದ್ದಾಗಿದೆ.

ಹೀಗೂ ವಾದಿಸಬಹುದು. ಬಿರುಗಾಳಿಯಿಂದ ಈ ವೃಕ್ಷ ಕೆಳಗುರುಳಿರುವಂತೆ ಮಹಾಪುರುಷನೂ ವಿಧಿಯಿಂದ ವಿನಾಶವಾಗಿದ್ದಾನೆಂದು. ಅಂಥ ವಿವರಣೆಯಲ್ಲಿ ಉಪಮಾನ ಮತ್ತು ಉಪಮೇಯಗಳ ಸಂಬಂಧ ಅತ್ಯಂತ ಸ್ಪುಟವಾಗಿಯೇ ವ್ಯಕ್ತವಾಗುತ್ತದೆ. ಆಗ ಅದು ಬೇರೊಂದು ಅಲಂಕಾರವಾಗಿ (ಉಪಮೆಯಾಗಿ) ಪರಿಗಣಿತವಾಗುವುದನ್ನು ಯಾರು ತಾನೆ ತಪ್ಪಿಸಲು ಸಾಧ್ಯ? ಅಥವಾ ಮಹಾಪುರುಷನನ್ನು ಪರೋಕ್ಷವಾಗಿ ಪ್ರತೀಯಮಾನ ರೂಪದಲ್ಲಿ ಅರ್ಥಮಾಡಿ ಕೊಳ್ಳಬೇಕಾಗುತ್ತದೆ; ವೃಕ್ಷವನ್ನು ಮಾತ್ರ ನೇರವಾಗಿ (ಪ್ರತ್ಯಕ್ಷ) ಹೇಳಲಾಗಿದೆ ಎಂದರೆ, ಅದು ಅಪ್ರಸ್ತುತ, ಪ್ರಶಂಸಾಲಂಕಾರಕ್ಕೆ ಸ್ಪಷ್ಟವಾದ ಉದಾಹರಣೆಯಾಗುತ್ತದೆ. ಇಲ್ಲಿಯೂ ಅದೇ ಸಂಭಾವ್ಯತೆ (ಬೇರೊಂದೇ ಅಲಂಕಾರವಾಗುವ) ಎದುರಾಗುತ್ತದೆ. ಕೊನೆಯ ಪಕ್ಷ ವಿಶೇಷಣಗಳಲ್ಲಿ ದ್ವಂದ್ವಾರ್ಥವಿದೆ ಎಂದಾದರೆ, ಶ್ಲೇಷಾಲಂಕಾರವಿಲ್ಲವೆಂದು ಹೇಳಲಾಗುವುದಿಲ್ಲ. ಮತ್ತೆ ಅದೇ ತೊಡಕಿನಲ್ಲಿ ಸಿಕ್ಕಿಕೊಳ್ಳುತ್ತೇವೆ. ಸಮಾಸೋಕ್ತಿ ಅಲಂಕಾರವೆಂದು ಹೇಳಲಾದ ಬೇರೊಂದು ಉದಾಹರಣೆಯನ್ನು ನೋಡೋಣ. ಅದರ ಹಿಂದಿರುವ ತತ್ತ್ವವಂತೂ ಅತ್ಯಂತ ಸ್ಪಷ್ಟ.

> **ಅನುರಾಗವತೀ ಸಂಧ್ಯಾ ದಿವಸಸ್ತತ್ ಪುರಃ ಸರಃ**
> **ಅಹೋ ದೈವಗತಿಃ ಕೀದೃಕ್ ತಥಾಪಿ ನ ಸಮಾಗಮಃ [೯೨]***
>
> ಸಂಧ್ಯೆ ಅನುರಾಗವತಿ, ಅವಳ ಮುಂದೆಯೇ ಹಗಲ ಚಲನೆ
> ಹಾ! ದೈವಗತಿಯೇ, ಸಂಗಮವೆ ಅವರಿಗಿಲ್ಲ [೯೨]

---

* ಧ್ವನ್ಯಾಲೋಕ & ಲೋಚನಸಾರ ಪುಟ - 30

ಇಲ್ಲಿ ಸಂಧ್ಯೆ ಮತ್ತು ಹಗಲು ಮುಖ್ಯವಾಗಿ ವರ್ಣಿತವಾಗಿರುವ ಪ್ರಸ್ತುತ ವಿಷಯಗಳು.

ಪ್ರಣಯ ಭಾವದಲ್ಲಿರುವ ಪ್ರೇಮಿನಿಯ ವಿಚಾರವನ್ನು ಸಮಾನ ವಿಶೇಷಣಗಳಿಂದ ವರ್ಣಿಸಿರುವುದನ್ನು ಪ್ರಸ್ತುತ ಮತ್ತು ಅಪ್ರಸ್ತುತಗಳಿಗಿರುವ ಸಾದೃಶ್ಯವನ್ನು ಪ್ರಸ್ತುತ ಪಡಿಸುವುದರಲ್ಲಿ ಪರ್ಯವಸಾನವಾಗುತ್ತಿದೆ. ಹಾಗಾಗಿ ಇದು ಪ್ರತೀಯಮಾನ ಉಪಮಾನಕ್ಕಿಂತ ಬೇರೆಯಲ್ಲ. ಇದಕ್ಕೆ ಬದಲಾಗಿ ಪ್ರೇಮಿಗಳ ವೃತ್ತಾಂತವು ಮುಖ್ಯವಾಗಿ ಪ್ರತೀಯಮಾನತ್ವರೂಪದಿಂದ ಅರಿವಿಗೆ ಬರುತ್ತದೆ; ಪರೋಕ್ಷ ವಿಷಯಗಳಾದ ಸಂಧ್ಯೆ ಮತ್ತು ಹಗಲುಗಳನ್ನು ಸ್ಫುಟವಾಗಿಯೇ ಹೆಸರಿಸಿದೆಯಾಗಿ. ಆಗ ಅದು ಅಪ್ರಸ್ತುತ ಪ್ರಶಂಸೆಯ ಉದಾಹರಣೆಯಾಗುತ್ತದೆ.

ಮೇಲೆ ಹೇಳಲಾದ ಎರಡು ಕಾರಣಗಳಿಂದಲೇ "ಸಹೋಕ್ತಿ"ಯನ್ನೂ ಅಲಂಕಾರವೆಂದು ಪರಿಗಣಿಸಲಾಗುವುದಿಲ್ಲ. ಪ್ರಾಚೀನ ಆಚಾರ್ಯರು ನೀಡಿರುವ ಅದರ ಲಕ್ಷಣ ಮತ್ತು ಉದಾಹರಣೆಗಳನ್ನು ನೋಡೋಣ.

ತುಲ್ಯಕಾಲಕ್ರಿಯೇ ಯತ್ರ ವಸ್ತುದ್ವಯ ಸಮಾಶ್ರಯೇ|
ವಾಕ್ಯೇನೈಕೇನ ಕಥ್ಯೇತೇ ಸಾ ಸಹೋಕ್ತಿರ್ಮತಾ ಯಥಾ [೯೩]

ಹಿಮ ಪಾತಾವಿಲ ದಿಶೋ ಗಾಢಾಲಿಂಗನ ಹೇತವಃ|
ವೃದ್ಧಿಮಾಯಾಂತಿ ಯಾಮಿನ್ಯಃ ಕಾಮಿನಾಂ ಪ್ರೀತಿಭಿಃ ಸಹ [೯೪]

[ಭಾಮಹ III 38-39]

ಎರಡು ಬೇರೆ ಬೇರೆ ವಸ್ತುಗಳಿಗೆ ಸಂಬಂಧಿಸಿದ ಹಾಗೂ ಏಕ ಕಾಲದಲ್ಲಿ ನಡೆಯುವ ಎರಡು ಕ್ರಿಯೆಗಳನ್ನು ಒಂದೇ ಪದದ ಮೂಲಕ ವ್ಯಕ್ತಪಡಿಸಿದಾಗ ಅದು ಸಹೋಕ್ತಿ ಅಲಂಕಾರವೆನಿಸುತ್ತದೆ [೯೩]

ಹಿಮಪಾತದಿ ದಿಕ್ಕುಗಳನು ಮಸುಳಿಸುವ
ಮತ್ತೆ ಬಿಗಿಯಪ್ಪುಗೆಯನು ಉತ್ತೇಜಿಪ
ಇರುಳಗಳವು ಉದ್ಧವಾಗುವುವು
ಕಾಮಿ ಜನರೊಲುಮೆಯಾಟದಲಿ [೯೪]

ಪ್ರಸ್ತುತ ಮತ್ತು ಅಪ್ರಸ್ತುತಗಳ ನಡುವಿನ ಪರಸ್ಪರ ಸಾಮ್ಯಸಮನ್ವಯವೆ ಇಲ್ಲಿಯ ಕಾವ್ಯ ಸೌಂದರ್ಯಕ್ಕೆ ಕಾರಣವಾಗಿರುವುದು. ಆದ್ದರಿಂದ ಇಲ್ಲಿರುವ ಅಲಂಕಾರ ಉಪಮೆಯೆ ಆಗಿದೆ. ಅಂಥ ಆಕರ್ಷಕವಾದ ಸಾಮ್ಯವಿಲ್ಲದಿದ್ದಾಗಲೂ "ಗುರು, ಶಿಷ್ಯನೊಂದಿಗೆ ಅಧ್ಯಯನ ಮಾಡುತ್ತಿದ್ದಾನೆ" "ತಂದೆಯು ಮಗನೊಂದಿಗೆ ನಿಂತಿದ್ದಾನೆ- ಎನ್ನುವಂಥ ಸರಳ ಉಕ್ತಿಗಳಲ್ಲಿಯೂ ಅವು ಸೌಂದರ್ಯವಿರಹಿತವಾಗಿದ್ದರೂ ಸಹೋಕ್ತಿ ಅಲಂಕಾರವಿದೆ ಎಂದು ಒಪ್ಪುವ ಅನಿವಾರ್ಯಕ್ಕೆ ಒಳಗಾಗುತ್ತೇವೆ.

[ಭಾಮಹನು ಅಲಂಕಾರವೆಂದು ಮಾನ್ಯ ಮಾಡಿದ 'ಸಹೋಕ್ತಿ'ಯ ಅಲಂಕಾರತ್ವವನ್ನು ಖಂಡಿಸಿ ಕುಂತಕನು ಅದರ ನೂತನ ಲಕ್ಷಣವನ್ನು ಪ್ರಸ್ತುತ ಪಡಿಸುತ್ತಾನೆ].

ಯತ್ರೈ ಕೇನೈವ ವಾಕ್ಯೇನ ವರ್ಣನೀಯಾರ್ಥಸಿದ್ಧಯೇ|
ಉಕ್ತಿರ್ಯುಗಪದರ್ಥಾನಾಂ ಸಾ ಸಹೋಕ್ತಿಃ ಸತಾಂ ಮತಾ [52]

ಎಲ್ಲಿ ವರ್ಣನೀಯ ವಸ್ತುವಿನ ಸೌಂದರ್ಯಸಿದ್ಧಿಗಾಗಿ, ಒಂದೇ ವಾಕ್ಯದಲ್ಲಿ ಏಕಕಾಲದಲ್ಲಿ ಎರಡು ವಸ್ತುಗಳನ್ನು ವರ್ಣಿಸಲಾಗುತ್ತದೆಯೋ ಆಗ ಅದನ್ನು 'ಸಹೋಕ್ತಿ' ಅಲಂಕಾರವೆಂದು ಸಹೃದಯರು ಮಾನ್ಯ ಮಾಡಿದ್ದಾರೆ [52]

ವಿದ್ವಾಂಸರು ಇದನ್ನು ಸಹೋಕ್ತಿ ಎಂದು ಹೇಳಿದ್ದಾರೆ. ಎಂಥದನ್ನು ? ಒಂದೇ ವಾಕ್ಯದಲ್ಲಿ ಅರ್ಥಾತ್ ಭಿನ್ನವಾದ ಪದಸಮೂಹದಲ್ಲಿ, ಎರಡು ವಸ್ತುಗಳನ್ನು. ಅರ್ಥಾತ್ ಎಲ್ಲಿ ಎರಡನ್ನೂ ಏಕಕಾಲದಲ್ಲಿ ಕವಿ ಮುಖ್ಯವಾಗಿ ತನ್ನ ವರ್ಣನೆಯ ಪದಾರ್ಥಗಳಾಗಿ ಮಾಡಿಕೊಂಡಿದ್ದಾನೋ ಅದು. ಉದ್ದೇಶ ತಾನು ಪ್ರಧಾನವೆಂದು ಉದ್ದೇಶಿಸಿರುವ ವಸ್ತುವಿಗೆ ಹೆಚ್ಚಿನ ಸೌಂದರ್ಯ ಸಂಪತ್ತನ್ನು ತಂದು ಕೊಡುವುದು. ಒಟ್ಟಾರೆ ಮಥಿತಾರ್ಥ- ಸಾಮಾನ್ಯವಾಗಿ ಇನ್ನೊಂದು ವಾಕ್ಯವನ್ನು ಬಯಸುವ ವಸ್ತುವೊಂದು ತನ್ನ ಸೌಂದರ್ಯ ಸಿದ್ಧಿಗಾಗಿ ಬೇರೊಂದು ವಾಕ್ಯದ ನೆರವಿಲ್ಲದೆ, ಅದೇ ವಾಕ್ಯದ ಮೂಲಕ ಪ್ರಸ್ತುತಗೊಂಡರೆ ಅದು ಸಹೋಕ್ತಿಗೆ ಸರಿಯಾದ ಉದಾಹರಣೆ ಯಾಗುತ್ತದೆ.

ಹೇ ಹಸ್ತ ದಕ್ಷಿಣ ಮೃತಸ್ಯ ಶಿಶೋರ್ದ್ವಿಜಸ್ಯ
ಜೀವಾತವೇ ವಿಸೃಜ, ಶೂದ್ರಮುನೌ ಕೃಪಾಣಮ್|
ರಾಮಸ್ಯ ಪಾಣಿರಸಿ ನಿರ್ಭರಗರ್ಭಖಿನ್ನ-
ದೇವೀವಿವಾಸನಪಟೋಃ ಕರುಣಾ ಕುತಸ್ತೇ [೧೯೫]

ಉತ್ತರ ರಾಮಚರಿತೆ **II - 10**

ಓ ನನ್ನ ಬಲಗೈಯೆ
ಗತಿಸಿರುವ ಬ್ರಾಹ್ಮಣ ಶಿಶುವ-
ನುಜ್ಜೀವಿಸಲು ಶೂದ್ರತವಸಿಯ
ಮೇಲೆ ಖಡ್ಗವನು ಹರಿಸು
ಪಾಡಳಿದ ತುಂಬುಗರ್ಭಿಣಿಯ ಜಾನಕಿಯ
ವನಕೆ ತೆರಳಿಸಿದ ಪಟು ನೀನು ರಾಮನ ಕೈಯಲ್ಲವೆ?
ನಿನಗೆಲ್ಲಿ ಕರುಣೆ? [೧೯೫]

ಇಲ್ಲಿ ಪ್ರಸ್ತುತ ಪ್ರಧಾನ ವಿಷಯದ ಅರ್ಥಸಿದ್ಧಿಗಾಗಿ, ಇನ್ನೊಂದು ವಾಕ್ಯದಲ್ಲಿ ನಿರ್ವಹಿಸಬಹುದಾಗಿದ್ದ ವಿಷಯವನ್ನು ಒಂದೇ ವಾಕ್ಯದ ವ್ಯಾಪ್ತಿಗೆ ಅಳವಡಿಸಲಾಗಿದೆ. ಶಂಬೂಕ ವಧೆಯ ಕೆಲಸ ಅವನ ಕೊರಳಿಗೆ ಅನಿವಾರ್ಯ ಕರ್ತವ್ಯದ ರೂಪದಲ್ಲಿ ಗಂಟುಬಿದ್ದಿದೆಯಾದರೂ, ಅದರ ಕರುಣಾಸ್ಪದ ಸ್ವರೂಪದಿಂದಾಗಿ ಅದು ಮಾಡಬಾರದಂಥ ನೃಶಂಸ ಕಾರ್ಯವಾಗಿದೆ. ಆದರೆ ಅದೇ ಸಮಯಕ್ಕೆ ಅದನ್ನು ನೆರವೇರಿಸುವುದನ್ನು ಕಡೆಗಣಿಸುವಂತಿಲ್ಲ. ಎಷ್ಟೇ ಆದರೂ ನೀನು, ಮುಗ್ಧಳೂ, ತುಂಬು ಗರ್ಭಿಣಿಯೂ ಆದ ಪತ್ನಿ ಜಾನಕಿಯನ್ನು ಅಡವಿಗೆ ಅಟ್ಟಿದ ರಾಮನ

ನಿರ್ದಯ ಹಸ್ತವಲ್ಲವೆ? ಆದ್ದರಿಂದ, ನಿನ್ನ ಸ್ವಭಾವಕ್ಕನುಗುಣವಾಗಿ ನೀನು ಮತ್ತೆ ನಿರ್ದಯನಾಗಬೇಕಾಗಿದೆ. ವಧೆಗೆ ಅರ್ಹನಲ್ಲದಿದ್ದರೂ ಬ್ರಾಹ್ಮಣ ಶಿಶುವಿನ ಪ್ರಾಣ ರಕ್ಷಣೆಯ ಸಲುವಾಗಿ ನೀನು ನಿನ್ನ ಖಡ್ಗವನ್ನು ಶೂದ್ರ ತಪಸ್ವಿಯ ಮೇಲೆ ಪ್ರಯೋಗಿಸು. ಇದು ಇಲ್ಲಿ ಅಭಿವ್ಯಕ್ತವಾಗಿರುವ ಒಂದು ವಸ್ತು ವಿಷಯ. ಇದರ ಜೊತೆ ಜೊತೆಯಲ್ಲೇ ಹೇಳ ಹೊರಟಿರುವ ಇನ್ನೊಂದು ವಿಷಯವೆಂದರೆ - ಎಲೈ ಹಸ್ತವೆ, ಈ ಕ್ರೂರ ಕೃತ್ಯವು ಪ್ರಶ್ನಿಸಲಾಗದ ಅನಿವಾರ್ಯ ಕರ್ತವ್ಯ ಕರ್ಮವಾಗಿ ನಿನಗೆ ಗಂಟು ಬಿದ್ದಿದೆಯಾಗಿದೆಯಾದರೂ ಕರುಣಾಳುವೂ ಉದಾರಿಯೂ ಆದ ನೀನು ಈ ಕೃತ್ಯವನ್ನು ಮಾಡತಕ್ಕುದಲ್ಲವೆಂದು ಭಾವಿಸಿದರೆ, ಆ ಮಾತೂ ನಿಲ್ಲುವುದಿಲ್ಲ. ಕಾರಣ ತುಂಬು ಗರ್ಭಿಣಿಯೂ ಮುಗ್ಧಳೂ ಆಗಿದ್ದ ಪತ್ನಿಯನ್ನು ಅಂಥ ದಯನೀಯ ಸ್ಥಿತಿಯಲ್ಲಿ ತ್ಯಜಿಸುವ ಮೂಲಕ ತಾನೆಷ್ಟು ನಿಷ್ಕರುಣಿಯಾಗಬಲ್ಲೆನೆಂಬುದನ್ನು ಈಗಾಗಲೇ ಸಿದ್ಧಮಾಡಿ ತೋರಿಸಿರುವಂಥ ರಾಮನ ಹಸ್ತ ನೀನು. ಹಾಗಾಗಿ ಮುನಿವಧೆಯಂಥ ಕೃತ್ಯ ನಿನ್ನ ಪಾಲಿಗೆ ತೀರಾ ಯಃಕಶ್ಚಿತ್ ಕೃತ್ಯ ಹಾಗೂ ನಿನಗಾವ ಸಂಕಟವನ್ನೂ ಉಂಟು ಮಾಡದು. ಈ ಎರಡೂ ವಸ್ತುಸಂದರ್ಭಗಳಲ್ಲಿ, 'ರಾಮ' ಶಬ್ದದ ಬಳಕೆಯಲ್ಲಿ ರೂಢಿ ವೈಚಿತ್ರ್ಯ ವಕ್ರತೆಯನ್ನು ಮನಗಾಣಬಹುದು. ಇಲ್ಲಂತೂ ಅದು (ರೂಢಿವೈಚಿತ್ರ್ಯವಕ್ರತೆ) ವಿಪ್ರಲಂಭಶೃಂಗಾರಕ್ಕೆ ಪೋಷಕವಾಗಿ ಬಂದಿದೆ.

ಇನ್ನೊಂದು ಉದಾಹರಣೆಯನ್ನು ನೋಡೋಣ

***ಉಚ್ಯತಾಂ ಸ ವಚನೀಯಮಶೇಷಂ ನೇಶ್ವರೇ ಪರುಷತಾ ಸಖಿ ಸಾಧ್ವೀ**
ಆನಯೈನಮನುನೀಯ ಕಥಂ ವಾ ವಿಪ್ರಿಯಾಣಿ ಜನಯನ್ನನುನೇಯಃ (೯೬)
ಕಿಂ ಗತೇನ ನ ಹಿ ಯುಕ್ತಮುಪೈತುಂ ಕಃ ಪ್ರಿಯೆ ಸುಭಗಮಾನಿನಿ ಮಾನಃ
ಯೋಷಿತಾಮಿತಿ ಕಥಾಸು ಸಮೇತ್ಯೈಃ ಕಾಮಿಭಿರ್ಬಹುರಸಾ ಧೃತಿರೂಹೆ [೯೭]
(ಕಿರಾತಾರ್ಜುನೀಯ 9-39-40)

ಅವನಿಗೆ ನೀ ಹೇಳಬೇಕೆಂದಿರುವುದನೆಲ್ಲ
ಹೇಳಿಬಿಡು ಸಖಿಯೆ
ಪತಿಯೊಡನೆ ಕಾಠಿಣ್ಯ ತಗದು ನಿನಗೆ
ಎಂತಾದರೂ ಸರಿಯೆ ಅವನನಿಲ್ಲಿಗೆ
ಕರೆಸೆ ಮನವೊಲಿಸು ಕೆಳದಿ
ಅಪ್ರಿಯವನೆ ನುಡಿವನನೆಂತು ಮನವೊಲಿಸಲಿ? [೯೬]
ಅವನ ಬಳಿ ತೆರಳುವುದರಿಂದುಪಯೋಗವೇನು?
ತೆರಳುವುದೆ ಸರಿಯಲ್ಲವು

* ಈ ಎರಡೂ ಶ್ಲೋಕಗಳಲ್ಲಿ ವಿಪ್ರಲಂಭ ಶೃಂಗಾರವನ್ನು ಪೋಷಿಸಲು ಕೋಪ ಮಾಡಿಕೊಳ್ಳುವ ಮತ್ತು ಕೋಪ ಬಿಡುವ ಮಾತುಗಳನ್ನು ಒಟ್ಟಿಗೆ ಹೇಳಲಾಗಿದೆ. ಆದ್ದರಿಂದ ಕುಂತಕನು ಇಲ್ಲಿ ಸಹೋಕ್ತಿಯನ್ನು ಒಪ್ಪಿದ್ದಾನೆ.

ಓ ಸುಭಗಮಾನಿನಿಯೆ
ಪತಿಯೊಡನೆ ಬಿಗುಮಾನವೆಂತು?
ಲಲನೆಯರ ಈ ತೆರನ ಸಲ್ಲಾಪವನು
ಕೇಳುತ್ತ ಕಾಮಿಗಳು ಬಹುರಸಭರಿತ
ಸಂತಸವ ತಾಳ್ದರಂದು [೧೯೭]

ಇಲ್ಲಿ ತಾತ್ಪರ್ಯಾರ್ಥವೇ ವಾಚಕವಾಗುವ ರೀತಿಯಲ್ಲಿ ಸೌಂದರ್ಯ ಯೋಜನೆ ಇದೆ. ನಾಯಕಿ ಮತ್ತುಅವಳ ಸಖಿ ಇವರಿಬ್ಬರ ಸ್ನೇಹ ಅತಿ ಗಾಢವಾದರೂ, ಇಬ್ಬರೂ ಪತಿಯೊಂದಿಗೆ ತಮ್ಮದೇ ಆದ ರೀತಿಯಲ್ಲಿ ಸಂಧಾನದ ಯೋಜನೆ ಹಾಕುತ್ತಿದ್ದಾರೆ. ಹಾಗಾಗಿ ಇಡೀ ವಾಕ್ಯವೆ ವಾಚಕದಂತೆ ಪ್ರತೀತವಾಗುತ್ತಿದೆ. ಅಥವಾ ಈ ಉದಾಹರಣೆಯನ್ನು ನೋಡಬಹುದು.

ಸರ್ವಕ್ಷಿತಿ ಭೃತಾಂ ನಾಥ ದೃಷ್ಟಾ ಸರ್ವಾಂಗಸುಂದರೀ|
ರಾಮಾ ರಮ್ಯಾ ವನೋದ್ದೇಶೇ ಮಯಾ ವಿರಹಿತಾ ತ್ವಯಾ [೧೯೮]

(ವಿಕ್ರಮೋರ್ವಶೀಯ 4-51)

ಸಕಲ ಪರ್ವತಗಳೊಡೆಯನೆ,
ಸರ್ವಾಂಗ ಸುಂದರಿಯ ನನ್ನೊಲುಮೆಯವಳ
ನನ್ನನಗಲಿರುವವಳನು
ಈ ರಮ್ಯವನದೆಡೆಗಳಲಿ
ನೀ ಕಂಡೆಯ? [೧೯೮]

[ಊರ್ವಶಿಯನ್ನು ಅಗಲಿರುವ ಪುರೂರವನು ಪರ್ವತ ರಾಜನನ್ನು ಹೀಗೆ ಕೇಳುತ್ತಾನೆ. ಕಾಳಿದಾಸನು ಇಲ್ಲಿ ಎಂಥ ರೀತಿಯ ವಾಕ್ಯ ಯೋಜನೆ ಮಾಡಿದ್ದಾನೆಂದರೆ, ಪರ್ವತದಿಂದ ಅದು ಪ್ರತಿಧ್ವನಿಸಿ, ಆ ಪ್ರಶ್ನೆಯೇ ರಾಜನಿಗೆ ಪರ್ವತದ ಉತ್ತರವಾಗುತ್ತದೆ. ಆಗ ಇದು ಈ ರೀತಿ ಆಗುತ್ತದೆ. ಸಂಸ್ಕೃತ ವ್ಯಾಕರಣದ ವಾಕ್ಯ ರಚನಾಕ್ರಮ ಮತ್ತು ಪದರಚನಾ ರೀತಿ ಇದಕ್ಕೆ ಇಂಬುಗೊಡುತ್ತದೆ]

ಸಕಲ ಭೂಪತಿಗಳೊಡೆಯನೆ,
ಸರ್ವಾಂಗ ಸುಂದರಿಯ ನಿನ್ನೊಲುಮೆಯವಳ
ನಿನ್ನನಗಲಿರುವವಳನು
ಈ ರಮ್ಯವನಡೆದೆಗಳಲಿ
ನಾ ಕಂಡೆನು [೧೯೮]

ಇಲ್ಲಿ ಪ್ರಧಾನ ರೂಪದಲ್ಲಿ ಯೋಜಿತವಾದ ವಿಪ್ರಲಂಭ ಶೃಂಗಾರದ ಪರಿಪುಷ್ಟಿಗಾಗಿ ಎರಡು ವಾಕ್ಯಾರ್ಥಗಳನ್ನು ಆಯೋಜಿಸಲಾಗಿದೆ.

ಇಲ್ಲಿ ಒಂದೇ ವಾಕ್ಯದಲ್ಲಿ ಅನೇಕಾರ್ಥಗಳು ಹೊರಡುತ್ತಿದ್ದರೂ ಈ ಸಹೋಕ್ತಿಯಲ್ಲಿ ಶ್ಲೇಷದ ಪ್ರವೇಶ ಹೇಗಾಗುತ್ತಿಲ್ಲ ಎಂದು ಕೇಳಬಹುದು. ಅದಕ್ಕೆ ನಮ್ಮ ಉತ್ತರ ಇಲ್ಲಿ

ಎರಡೂ ಅಥವಾ ಎರಡರಲ್ಲಿ ಒಂದು ಅರ್ಥ ಪ್ರಧಾನ ರೂಪದಲ್ಲಿ ನಿಂತರೆ, ಆಗ ಶ್ಲೇಷಾಲಂಕಾರ ವಾಗುತ್ತದೆ. ಆದರೆ ಪ್ರಸ್ತುತ ಉದಾಹರಣೆಯಲ್ಲಿ ಆ ರೀತಿ ಇಲ್ಲ. ಇಲ್ಲಿ ಬಹು ಅರ್ಥಗಳು ಅಥವಾ ಎರಡು ಅರ್ಥ ಎಲ್ಲವೂ ಬೇರೊಂದೇ ಪ್ರಧಾನಾರ್ಥಮುಖಿಯಾಗಿ ಪರ್ಯವಸಾಯಿ ಯಾಗುವುದರಿಂದ ಅವೆಲ್ಲವೂ ಗೌಣವಾಗಿ ಬಿಡುತ್ತವೆ. ಶ್ಲೇಷ ಮತ್ತು ಸಹೋಕ್ತಿಯಲ್ಲಿ ಎದ್ದು ಕಾಣುವಂಥ ಮೊದಲ ವ್ಯತ್ಯಾಸ, ಕೆಲವೊಮ್ಮೆ ಶ್ಲೇಷದಲ್ಲಿ ಎರಡರದ್ದೂ ಪ್ರಭಾವವಿದ್ದರೆ ಇನ್ನು ಕೆಲವೊಮ್ಮೆ ಒಂದರದ್ದು. ಆದರೆ ಸಹೋಕ್ತಿಯಲ್ಲಿ ಯಾವುದರದ್ದೂ ಪ್ರಧಾನಭಾವವಿರುವುದಿಲ್ಲ. ಅಲ್ಲದೆ ಶ್ಲೇಷದಲ್ಲಿ ಒಂದೇ ಶಬ್ದ, ದೀಪದ ಹಾಗೆ ಏಕಕಾಲದಲ್ಲಿ ಎರಡು ಶಬ್ದಗಳು ಮತ್ತು ಅರ್ಥಗಳನ್ನು ಹೊರಡಿಸುತ್ತಿರುತ್ತದೆ ಹಾಗೂ ಅದರ ಮಹಾನತೆ ಇರುವುದೇ ಈ ರೀತಿಯ ದ್ವಂದ್ವಾರ್ಥ ಪ್ರಕಾಶನದಲ್ಲಿ ಮತ್ತು ಅದರಲ್ಲಿ ಶಬ್ದವು ಸರ್ವಸಾಧಾರಣದ ಪ್ರತೀತಿಗಾಗಿಯೇ ಬರುತ್ತದೆ. ಆದರೆ ಸಹೋಕ್ತಿಯಲ್ಲಾದರೆ, ಶಬ್ದಕ್ಕೂ ಅದರ ದ್ವಂದ್ವಾರ್ಥಕ್ಕೂ ಇರುವ ಸಂಬಂಧ ಕೇವಲ ಗೌಣವಾದ್ದು. ಅಲ್ಲದೆ ಸಹೋಕ್ತಿಯಲ್ಲಿ ಇಡೀ ವಾಕ್ಯವೇ ಬೇರೆ ಬೇರೆ ಧ್ವನಿಗಳಲ್ಲಿ ಪುನರಾವೃತ್ತವಾಗಿ ಎರಡನೇ ಅರ್ಥವನ್ನು ಹೊರಡಿಸುತ್ತದೆ. ಹಾಗಾಗಿ ಇಲ್ಲಿ ಶಬ್ದದ ಪುನರಾವರ್ತನೆ ಪ್ರಾಧಾನ್ಯವನ್ನು ಪಡೆಯುತ್ತದೆ. "ಸರ್ವಕ್ಷಿತಿಭೃತಾಂನಾಥ" ಎಂಬ ಶ್ಲೋಕದಲ್ಲಿ ಕಡೆಯ ಪಕ್ಷ ವಾಕ್ಯದ ಒಂದು ಭಾಗದಲ್ಲಿ ಶ್ಲೇಷದ ಸ್ಪರ್ಷವಿದೆ ಎಂದಾದರೆ ಅದೇನೂ ದೋಷವಲ್ಲ.

ನಮ್ಮ ಅಭಿಪ್ರಾಯದಲ್ಲಿ ಒಂದು ಅಲಂಕಾರವು ಇನ್ನೊಂದು ಅಲಂಕಾರವು ತನಗೆ ಗೌಣವಾಗಿ ಅಂಗಭೂತವಾಗುವಂತೆ ಖಂಡಿತ ಮಾಡಬಹುದು. ಈ ಉದಾಹರಣೆಯಲ್ಲೂ ವಾಕ್ಯದ ಒಂದು ಭಾಗದಲ್ಲಿ ಶ್ಲೇಷವು ಅಂಗಭಾಗವಾಗಿ ಗೌಣವಾಗಿ, ಮುಖ್ಯಭಾವವು ಸಹೋಕ್ತಿಯದೇ ಆಗಿರುತ್ತದೆ. ಒಂದು ವೇಳೆ ವಾಕ್ಯದ ಪುನರಾವೃತ್ತಿಯಿಂದಲೇ ಇನ್ನೊಂದು ಅರ್ಥದ ಪ್ರತೀತಿ ಯಾಗುವುದರಿಂದ, ಸಹೋಕ್ತಿಯ ಶಬ್ದಾರ್ಥವಾದ 'ಸಹಭಾವ' ಎಂಬ ಅರ್ಥದ ಅನ್ವಯಕ್ಕೆ ಹಾನಿ ಉಂಟಾಗುತ್ತದಲ್ಲ ಎಂದು ಆಕ್ಷೇಪವೆತ್ತಬಹುದು. [ಅಂದರೆ, ಎರಡೂ ಪದಾರ್ಥ ಒಂದೇ ಸಲಕ್ಕೆ ಪ್ರತೀತವಾಗದಿರುವುದರಿಂದ, ಸಹಭಾವವಿಲ್ಲದಿರುವುದರಿಂದ, ಅದನ್ನು ಸಹೋಕ್ತಿ ಎಂದು ಹೇಗೆ ಹೇಳುವುದು] ಆದರೆ ಅದು ಹಾಗಲ್ಲ, 'ಸಹೋಕ್ತಿ'ಯೆಂದರೆ ಏಕಕಾಲದಲ್ಲಿ ಹೇಳುವುದು ಎಂದರ್ಥವೇ ಹೊರತು, ಏಕ ಕಾಲದಲ್ಲಿ (ಜೊತೆ ಜೊತೆಯಲ್ಲಿ) ಪ್ರತೀತವಾಗುವುದು ಎಂದಲ್ಲ. ಒಂದಕ್ಕೊಂದು ಅತ್ಯಂತ ಸನಿಹವಾಗಿರುವ ಎರಡು ಪುನರಾವರ್ತನೆಗಳು ಅರ್ಥದ ಉತ್ಕರ್ಷಕ್ಕೆ ಒಯ್ಯುವುದರಿಂದ ಅವುಗಳನ್ನು ಸಹೋಕ್ತಿ ಎಂಬ ಹೆಸರಿನಿಂದ ಕರೆಯುವುದು ಅಸಂಬದ್ಧವೇನಲ್ಲ.

ಕೈಶ್ಚಿದಶೇಷಾ ಸಮಾಸೋಕ್ತಿಃ ಸಹೋಕ್ತಿಃ ಕೈಶ್ಚಿದುಚ್ಯತೇ|
ಅರ್ಥಾನ್ವಯಾತ್ಸಾ ವಿದ್ವದ್ಭಿರನ್ಯೈರನ್ಯತ್ವಮೇತಯೋಃ [೧೯]

ಇದು ಅಂತರಶ್ಲೋಕ

ಕೆಲವರು ಇದನ್ನು ಸಮಾಸೋಕ್ತಿ ಎನ್ನುತ್ತಾರೆ ಇನ್ನು ಕೆಲವರು "ಸಹೋಕ್ತಿ" ಎನ್ನುತ್ತಾರೆ. ಅರ್ಥದ ಅನ್ವಯದಿಂದ ಇನ್ನುಕೆಲವು ವಿದ್ವಾಂಸರು ಇವೆರಡನ್ನು ಬೇರೆ ಬೇರೆ ಅಲಂಕಾರ ಗಳೆಂದು ಹೇಳುತ್ತಾರೆ [೧೯]

[ಇವರಲ್ಲಿ ಕುಂತಕನು ಭಾಮಹನ ಸಮಾಸೋಕ್ತಿ ಹಾಗೂ ಸಹೋಕ್ತಿಗಳೆರಡನ್ನೂ ಖಂಡಿಸುತ್ತ ಬಂದಿದ್ದಾನೆ. ಆದ್ದರಿಂದ ಅವನು ಅವೆರಡರ ಜಾಗದಲ್ಲಿ ಇದನ್ನೇ ಒಪ್ಪುತ್ತಾನೆ] [ಡಾ. ನಗೇಂದ್ರ ಸಂಪಾದಿತ ವ. ಜೀ. 466 ಪುಟ]

ಇದುವರೆಗೆ ವಿವರಿಸಲಾದ ಅಲಂಕಾರಗಳೆಲ್ಲಕ್ಕೂ ಒಂದು ಸಾಮಾನ್ಯ ಧರ್ಮ (ಲಕ್ಷಣ)ವಿದೆ. ಅವುಗಳದು ಗೌಣ ಕಾರ್ಯವೇ ಆದರೂ ಅವೆಲ್ಲವೂ ಸೌಂದರ್ಯ ಪರಿಣಾಮವನ್ನು ಪರಿಪುಷ್ಟ ಗೊಳಿಸುತ್ತವೆ.

[ಇದೀಗ ಗ್ರಂಥ ಕರ್ತೃ, ಸಹಜ ಅಲಂಕಾರಗಳಾಗಿದ್ದುಕೊಂಡೇ ರಮಣೀಯತೆಗೆ ಪುಟ ಕೊಡುವಂಥ ಇತರೆ ಅಲಂಕಾರಗಳನ್ನು ವಿಚಾರಣೆಗೆ ತೆಗೆದುಕೊಳ್ಳುತ್ತಾನೆ. ಇದರಲ್ಲಿ ಮೊದಲನೆಯದಾಗಿ ದೃಷ್ಟಾಂತ ಅಲಂಕಾರವನ್ನು ಕೈಗೆತ್ತಿಕೊಳ್ಳುತ್ತಾನೆ].

ದೃಷ್ಟಾಂತಾಲಂಕಾರದ ಲಕ್ಷಣ ಹೀಗಿದೆ:

ವಸ್ತುಸಾಮ್ಯಂ ಸಮಾಶ್ರಿತ್ಯ ಯದನ್ಯಸ್ಯೋಪದರ್ಶನಮ್|
ಇವಾದ್ಯಸಂಭವೇ ತತ್ರ ದೃಷ್ಟಾಂತಃ ಸೋಽಭಿಧೀಯತೇ[53]

'ಇವ' ಇತ್ಯಾದಿ ಅಲಂಕಾರ ವಾಚಕಗಳನ್ನು ಬಳಸದೆ, ವಸ್ತು ಸಾಮ್ಯವನ್ನು ಆಧರಿಸಿ, ಪ್ರಸ್ತುತ ವಸ್ತುವಿಗಿಂತ ಭಿನ್ನವಾದದ್ದನ್ನು (ಅನ್ಯ) ಪ್ರಸ್ತಾಪಿಸಿದಾಗ ಅದು ದೃಷ್ಟಾಂತಾಲಂಕಾರ ವೆನಿಸುತ್ತದೆ [53]

ಇಲ್ಲಿ ಹೇಳಲಾದ ಅನ್ಯವೆಂದರೆ, ವರ್ಣ್ಯಮಾನ ಪ್ರಸ್ತುತ ಪದಾರ್ಥಕ್ಕಿಂತ (ವಸ್ತು) ಭಿನ್ನವಾದ ಅಪ್ರಸ್ತುತ ವಸ್ತುವೆಂದು ಅರ್ಥ. ಅದನ್ನು ವರ್ಣಿಸುವುದು ಇಲ್ಲವೆ ಪ್ರಸ್ತಾಪಿಸುವುದು ದೃಷ್ಟಾಂತಾಲಂಕಾರವೆನಿಸುತ್ತದೆ 'ಹೇಗೆ'? ಎಂದರೆ ವಸ್ತುವಿನ ಸಾಮ್ಯ (ಸಮಾನತೆ)ವನ್ನು ಆಧರಿಸಿ ಅಂದರೆ 'ದೃಷ್ಟಾಂತ' ಮತ್ತು 'ದಾರ್ಷ್ಟಾಂತಿಕ' ರೂಪದ ಎರಡೂ ಪದಾರ್ಥಗಳಿಗೆ ಇರುವ ಸಾಮ್ಯ (ಸಾದೃಶ್ಯ)ವನ್ನೂ ಆಧರಿಸಿ 'ವಸ್ತುಸಾಮ್ಯ' ಎಂದು ಗುಣವಾಚಕ ಹೇಳಿರುವುದು, ಇತರೆ ಸಾಮ್ಯಗಳಾದ ಲಿಂಗ, ಸಂಖ್ಯೆ, ಮತ್ತು ವಿಭಕ್ತಿಗಳಲ್ಲದೆ, ಕೇವಲ ಯಥಾರ್ಥ ವಸ್ತುವಿನ ಸಾಮ್ಯದಲ್ಲಿಯೇ ದೃಷ್ಟಾಂತಾಲಂಕಾರವಾಗುತ್ತದೆ ಎಂದು ಸೂಚಿಸಲು ವಿಧಿಸಲಾಗಿರುವ ಇನ್ನೊಂದು ಷರತ್ತೆಂದರೆ, 'ಇವ' ಮುಂತಾದ ಅಲಂಕಾರ ವಾಚಕಗಳನ್ನು ವಾಕ್ಯದ ಕೊನೆಯಲ್ಲಿ ಬಳಸಬಾರದೆಂಬುದು. ಈ ರೀತಿ ದೃಷ್ಟಾಂತಾಲಂಕಾರದಲ್ಲಿ ಉಪಮಾವಾಚಕಗಳನ್ನು ಬಳಸುವುದಿಲ್ಲ.

ಉದಾ:

ಸರಸಿಜಮನುವಿದ್ಧಂ ಶೈವಲೇನಾಪಿ ರಮ್ಯಂ
ಮಲಿನಮಪಿ ಹಿಮಾಂಶೋರ್ಲಕ್ಷ್ಮ ಲಕ್ಷ್ಮೀಂ ತನೋತಿ|
ಇಯಮಧಿಕಮನೋಜ್ಞಾ ವಲ್ಕಲೇನಾಪಿ ತನ್ವೀ
ಕಿಮಿವ ಹಿ ಮಧುರಾಣಾಂ ಮಂಡನಂ ನಾಕೃತೀನಾಮ್| [೨೦೦]

ಹಾವಸೆಯ ಜೊತೆಜೊತೆಯೊಳೆ ಇದ್ದರು
ರಮ್ಯತಾನದು ತಾವರೆ
ಮಲಿನವಾದರು ಚಂದ್ರನ ಕಲೆಯು
ಕಾಂತಿಯನೀವುದವನಿಗೆ ನಿಶ್ಚಯ
ನಾರು ಮಡಿಯನೆ ಧರಿಸಿದ್ದರೂ
ಈ ಕೃಶಾಂಗಿ ಚೆಲುವು ಬಲ್ ಸೊಗಸು
ಮಧುರಾಕೃತಿಗಳಿಗೆ ಭೂಷಣವಾಗದಿರುವುದದಾವುದು? [೨೦೦] [ಶಾಕುಂತಲ 1-20]

ಈ ಉದಾಹರಣೆಯಲ್ಲಿ ಮೊದಲ ಮೂರು ಸಾಲುಗಳು ಮಾತ್ರ ದೃಷ್ಟಾಂತಾಲಂಕಾರಕ್ಕೆ ಉದಾಹರಣೆಗಳು. ನಾಲ್ಕನೆಯ ಸಾಲು ಬೇರೊಂದು ಅಲಂಕಾರಕ್ಕೆ ಉದಾಹರಣೆಯಾಗುತ್ತದೆ (ಬಹುಶಃ ಅರ್ಥಾಂತರನ್ಯಾಸ)

ದೃಷ್ಟಾಂತಾಲಂಕಾರದ ನಂತರ ಅದನ್ನು ಅತ್ಯಂತ ಸಮೀಪದಿಂದ ಹೋಲುವ ಅರ್ಥಾಂತರನ್ಯಾಸವನ್ನು ಕೈಗೆತ್ತಿಕೊಳ್ಳಲಾಗುವುದು.

ವಾಕ್ಯಾರ್ಥಾಂತರವಿನ್ಯಾಸೋ ಮುಖ್ಯತಾತ್ಪರ್ಯಸಾಮ್ಯತಃ।
ಜ್ಞೇಯಃ ಸೋऽರ್ಥಾಂತರನ್ಯಾಸಃ ಯಃ ಸಮರ್ಪಕತಯಾಹಿತಃ[54]

ಎರಡು ವಾಕ್ಯಗಳ ಮುಖ್ಯತಾತ್ಪರ್ಯಾರ್ಥಗಳಿಗೆ ಇರುವ ಸಾದೃಶ್ಯದ ಆಧಾರದ ಮೇಲೆ, ಪ್ರಸ್ತುತದ ಜೊತೆ ಜೊತೆಯಲ್ಲೇ, ಅಪ್ರಸ್ತುತವನ್ನೂ (ಇನ್ನೊಂದನ್ನೂ) ವರ್ಣಿಸಿದಾಗ, ಅದನ್ನು ಅರ್ಥಾಂತರನ್ಯಾಸವೆಂದು ತಿಳಿಯಬೇಕು. ಕಾರಣ ಅದು ಮೊದಲನೆಯದರ ವಿಚಾರವನ್ನು ಸಮರ್ಥಿಸುತ್ತದೆ [54]

ಅರ್ಥಾಂತರನ್ಯಾಸದ ಸ್ವರೂಪವನ್ನು ವಿವರಿಸಲಾಗುತ್ತದೆ. ಅರ್ಥಾಂತರ ನ್ಯಾಸವೆಂದರೆ ಇನ್ನೊಂದು ವಾಕ್ಯಾರ್ಥದ ವಿನ್ಯಾಸ. ವಾಕ್ಯದಲ್ಲಿ ಮುಖ್ಯವಸ್ತುವೆಂದು ಪರಿಗಣಿತವಾದದ್ದಕ್ಕೆ ಸಮಾನಂತರವಾದ ವಾಕ್ಯವನ್ನು ಪ್ರಸ್ತುತ ಪಡಿಸುವುದೇ ಅದರ ಮಥಿತಾರ್ಥ. ಅಂದರೆ ಸಮರ್ಥನೆಯ ವಾಕ್ಯವು ಅಪ್ರಸ್ತುತ. [ಅರ್ಥಾತ್ ಪರಸ್ಪರ ಸಂಬದ್ಧವಾದ ಪದ ಸಮುದಾಯದ ಮೂಲಕ ಪ್ರತಿಪಾದಿತವಾದ ವಸ್ತು ವಾಕ್ಯಾರ್ಥವೆನಿಸುತ್ತದೆ. ಪ್ರಕೃತವಾದ ಕಾರಣದಿಂದ ಇದು ಪ್ರಸ್ತುತ ವೆನಿಸುತ್ತದೆ. ಪ್ರಸ್ತುತಕ್ಕಿಂತ ಭಿನ್ನಾರ್ಥವುಳ್ಳ ಬೇರೆಯದು ಅಪ್ರಸ್ತುತ ವಾಕ್ಯಾರ್ಥ] ಈ ಅಪ್ರಸ್ತುತ ವನ್ನು ಸಹೃದಯರ ಹೃದಯಕ್ಕೆ ಆಹ್ಲಾದಕಾರಿಯಾಗುವಂತೆ ಯೋಜಿಸಿದಾಗ ಅರ್ಥಾಂತರನ್ಯಾಸ ಹುಟ್ಟುತ್ತದೆ. ಪ್ರಧಾನ ವಸ್ತುವಿನ ತಾತ್ಪರ್ಯಾರ್ಥವೇನಿದೆ. ಅದರೊಂದಿಗೆ ಸಾದೃಶ್ಯವುಳ್ಳ ರೀತಿ ಯಲ್ಲಿ ಸಮರ್ಪಕವಾಗಿ ಯೋಜಿಸಿದ ಉಕ್ತಿ. ಬೇರೆ ಮಾತಿನಲ್ಲಿ ಹೇಳಬೇಕೆಂದರೆ ಸಮರ್ಥನೆಯ ವಾಕ್ಯವು ಅಪ್ರಸ್ತುತ. ಅದರ ಚಾತುರ್ಯ ಪೂರ್ಣ ಬಳಕೆಯು ಹೃದಯಾಹ್ಲಾದಕರವಾಗಿರುತ್ತದೆ. ಕಾರಣ ಅದರ ಸಾದೃಶ್ಯದಿಂದಾಗಿ ಪ್ರಸ್ತುತಕ್ಕೆ ಸಮಾನಾಂತರವಾಗಿ ಎದ್ದು ಕಾಣುವ ರೀತಿಯಲ್ಲಿರುತ್ತದೆ. ಅದು ಪ್ರಸ್ತುತವನ್ನು ಪರಿಣಾಮಕಾರಿಯಾಗಿ ಪ್ರಸ್ತುತಪಡಿಸುವ ರೀತಿಯಲ್ಲಿರಬೇಕು.

ಸಾಮಾನ್ಯವನ್ನು ಸಮರ್ಥಿಸುವುದಿದ್ದಾಗ, ವಿಶೇಷವು ಅದರ ಸಮರ್ಥಕವಾಗಿ,

ವಿಶೇಷಾರ್ಥವನ್ನು ಸಮರ್ಥಿಸುವುದದಿದ್ದಾಗ, ಸಾಮಾನ್ಯವು ಅದರ ಸಮರ್ಥಕವಾಗಿ ಬರುತ್ತದೆ. ಅವು ಪರಸ್ಪರ ಆನುಷಂಗಿಕವಾಗಿರುತ್ತವೆ. ಉದಾ:

ಅಸಂಶಯಂ ಕ್ಷತ್ರಪರಿಗ್ರಹಕ್ಷಮಾ
ಯದಾರ್ಯ ಮಸ್ಯಾಮಭಿಲಾಷಿ ಮೇ ಮನಃ
ಸತಾಂ ಹಿ ಸಂದೇಹ ಪದೇಷು ವಸ್ತುಷು
ಪ್ರಮಾಣಮಂತಃ ಕರಣಪ್ರವೃತ್ತಯಃ [೨೦೧] **[ಅಭಿಜ್ಞಾನಶಾಕುಂತಲ 1-22]**

ಆರ್ಯಮೆನಿಸಿದ ನನ್ನ ಮನವಿಂದಿವಳ
ಬಯಸಿದ ಕತದಿ
ಕ್ಷತ್ರಿಯನು ಕೈ ಹಿಡಿಯೆ ತಕ್ಕಳಿವಳೆಂ-
ಬುದರೊಳಿನಿತು ಸಂಶಯವಿಲ್ಲವು
ಸಂಶಯದ ಎಡೆಗಳೊಳು ಸಂತರಿಗೆ
ತಮ್ಮ ಅಂತಃಕರಣ ಪ್ರವೃತ್ತಿಯೆ ಪ್ರಮಾಣವು [201]

ಅಥವಾ

'ಸುಂದರಾಕೃತಿಯವರಿಗೆ ಆಭರಣವಾಗದುದಾವುದು?' [೨೦೨]

ಅರ್ಥಾಂತರನ್ಯಾಸದ ನಂತರ, ವಿಶಿಷ್ಟ ವಿಷಯಗಳ ಸೌಂದರ್ಯಕ್ಕೆ ಸಂಬಂಧಿಸಿದಂತೆ ಅರ್ಥಾಂತರನ್ಯಾಸವನ್ನು ಹೋಲುವ 'ಆಕ್ಷೇಪ'ವನ್ನು ವಿವರಿಸುತ್ತಾನೆ.

ನಿಷೇಧಚ್ಛಾಯಯಾಕ್ಷೇಪಃ ಕಾಂತಿಂ ಪ್ರಥಯಿತುಂ ಪರಾಮ್।
ಆಕ್ಷೇಪ ಇತಿ ಸ ಜ್ಞೇಯಃ ಪ್ರಸ್ತುತಸ್ಯೈವ ವಸ್ತುನಃ[55]

ವರ್ಣ್ಯಮಾನ ಪ್ರಸ್ತುತ ವಸ್ತುವಿನ ಅತ್ಯಧಿಕ ಸೌಂದರ್ಯದ ವೃದ್ಧಿಗಾಗಿ
ನಿಷೇಧಾಭಾಸ ರೂಪದ ಆಕ್ಷೇಪವು (ನಿಷೇಧದ ಛಾಯೆಯ ಆಕ್ಷೇಪ)
ಆಕ್ಷೇಪಾಲಂಕಾರವೆನಿಸುತ್ತದೆ [55]

ಅದು ಪ್ರಸ್ತುತ ವಸ್ತುವಿನದೇ ಆಕ್ಷೇಪ. ಅಭಿಪ್ರೇತ ಅರ್ಥದ ನಿಷೇಧ. ಯಾವ ರೀತಿಯಲ್ಲಿ ಎಂದರೆ ಪ್ರತಿಷೇಧದ ಸೌಂದರ್ಯದ ಮೂಲಕ. ಯಾತರ ಸಲುವಾಗಿ ಎಂದರೆ ಪ್ರಸ್ತುತ ವಸ್ತುವಿನ ಉತ್ಕೃಷ್ಟ ಸೌಂದರ್ಯ ಪ್ರಕಟಣೆಗಾಗಿ. ಅದನ್ನು ಅಕ್ಷೇಪಾಲಂಕಾರವೆಂದು ತಿಳಿಯಬೇಕು. ಆದ್ದರಿಂದ ಇಲ್ಲಿ ನಿಷೇಧವೆಂಬುದು ಕವಿ ಅಳವಡಿಸಿಕೊಳ್ಳುವ ಒಂದು ಸೋಗು ಅಥವಾ ವೇಷ ಅಷ್ಟೆ ಉದಾ:

ಸುಹ ಅ ವಿಲಂಪಸು ಥೋಅಂ ಜಾವ ಇಮಂ ವಿರಹ ಕಾಅರಂ ಹಿಅಅಂ
ಸಂಠವಿಊಣ ಭಣಿಸ್ಸಂ ಅಹವಾ ವೋಲೇಸು ಕಿಂಭಣಿಮೋ [೨೦೩]

ಸುಭಗ ವಿಲಂಬಸ್ವ ಸ್ತೋಕಂ ಯಾವದಿದಂ ವಿರಹಕಾತರಂ ಹೃದಯಂ
ಸಂಸ್ಥಾಪ್ಯ ಭಣಿಷ್ಯಾಮ್ಯಥವಾಪಕ್ರಮ ಕಿಂ ಭಣಾಮಃ (ಸಂಸ್ಕೃತ ಛಾಯೆ)

ವಿರಹಕಾತರವಾದೀ ಹೃದಯವನು
ಸ್ತಿಮಿತಕ್ಕೆ ತಂದು ಕೊಳುವನಕ
ತಾಳು ಸುಭಗನೆ ತಾಳು!
ನುಡಿಗೊಡು ಅಥವಾ ಹೊರಟುಬಿಡು
ಹೇಳಲೆನಗುಳಿದಿರುವುದಾದರೂ ಏನು? [೨೦೩]

ಇಲ್ಲಿ 'ಸುಭಗ' ಎಂಬುದು ಬಹು ವಲ್ಲಭತ್ವವನ್ನು ಸೂಚಿಸುತ್ತದೆ (ಅನೇಕ ಪ್ರಿಯತಮೆಯರನ್ನುಳ್ಳವ). ನಾಯಕಿಯು ಉತ್ತರವನ್ನು ನೇರವಾಗಿ ಹೇಳಿಲ್ಲ. ಒಂದು ವೇಳೆ ಪ್ರಕಟವಾಗಿಯೇ ಹೇಳಿದ್ದರೆ, ಸಹೃದಯರಿಗೆ ಈಗಿನ ಹಾಗೆ ನಿಷೇಧಾತ್ಮಕ ರೂಪದಲ್ಲಿ ಪ್ರತೀಯಮಾನವಾಗಿ ಭಣಿತಿ ವೈಚಿತ್ರ್ಯದಿಂದ ಸೌಂದರ್ಯಾತ್ಮಕ ಪರಿಣಾಮವನ್ನುಂಟು ಮಾಡುತ್ತಿರಲಿಲ್ಲ. [ಆಕ್ಷೇಪದ ಸ್ವರೂಪವನ್ನು ವಿವರಿಸಿಯಾದ ಮೇಲೆ ಈ ಅಲಂಕಾರಗಳ ವಿಷಯದಲ್ಲಿ ಹೇಳದೆ ಉಳಿದಿರುವ ಅಂಶಗಳನ್ನು ಹೇಳಲುಪಕ್ರಮಿಸುತ್ತಾನೆ] .

ವಕ್ಷ್ಯಮಾಣೋಕ್ತ ವಿಷಯಾಃ ಸಂಭವಂತಿ ವಿವಕ್ಷಯಾ|
ದೃಷ್ಟಾಂತಾದ್ಯಾಸ್ತ್ರಯೋಪ್ಯೇತೇ ಹೇತೌ ಸತ್ಯಥವಾ ಸತಿ[56]

ಇದುವರೆಗೆ ವರ್ಣಿಸಲಾದ ದೃಷ್ಟಾಂತಾದಿ ಅಲಂಕಾರಗಳು(ದೃಷ್ಟಾಂತ, ಅರ್ಥಾಂತರನ್ಯಾಸ ಮತ್ತು ಆಕ್ಷೇಪ) ಕವಿಯ ಉದ್ದೇಶಕ್ಕನುಗುಣವಾಗಿ ಎರಡು ವಿಧದವು ಆಗಿರುತ್ತವೆ (1) ಇನ್ನು ಮುಂದೆ ಹೇಳಬೇಕಾಗಿರುವ ವಿಚಾರಕ್ಕೆ ಸಂಬಂಧಿಸಿದ್ದು ಮತ್ತು (2) ಈಗಾಗಲೇ ಹೇಳಲಾಗಿರುವ ವಿಚಾರಕ್ಕೆ ಸಂಬಂಧಿಸಿದ್ದು [ಅರ್ಥಾಂತರ ನ್ಯಾಸವು ಸಮರ್ಥನೀಯ ವಾಚಕಗಳನ್ನು ಹೊಂದಿರಬಹುದು. ಅಥವಾ ಹೊಂದಿಲ್ಲದೆಯೂ ಇರಬಹುದು] [56]

ಮೇಲೆ ವಿವರಿಸಲಾದ ದೃಷ್ಟಾಂತ, ಅಥಾಂತರನ್ಯಾಸ ಮತ್ತು ಆಕ್ಷೇಪ ಈ ಮೂರು ಅಲಂಕಾರಗಳು ಈಗಾಗಲೇ ಹೇಳಲಾದ ಅಥವಾ ಹೇಳಬೇಕಾಗಿರುವ ವಸ್ತುಗಳಿಗೆ ಸಂಬಂಧಿಸಿದಂತೆ ದ್ವಿಸ್ವರೂಪವನ್ನು ಹೊಂದಿವೆ. ಇದು ಸಂಪೂರ್ಣವಾಗಿ ಅದನ್ನು ಬಳಸುವ ಕವಿಯ ಉದ್ದೇಶ ವನ್ನವಲಂಬಿಸಿರುತ್ತದೆ. ಇದರ ತಾತ್ಪರ್ಯವೇನೆಂದರೆ, ಈ ಉಪವಿಭಾಗಗಳು ಸನ್ನಿವೇಶ ವೈಚಿತ್ರ್ಯದ ವೈವಿಧ್ಯಗಳನ್ನು ಎತ್ತಿ ತೋರುತ್ತವೆಯೋ ಹೊರತು, ಪ್ರತಿಯೊಂದರ ಲಕ್ಷಣವನ್ನೇನೂ ಅಪೇಕ್ಷಿಸುವುದಿಲ್ಲ. ಅರ್ಥಾಂತರ ನ್ಯಾಸಾಲಂಕಾರದ ವೈಶಿಷ್ಟ್ಯವಾದ ಅದರ ಸಮರ್ಥಕ ವಾಚಕಗಳು ಇರಬಹುದು ಅಥವಾ ಇಲ್ಲದಿರಬಹುದು ಎಂಬುದನ್ನು ಅದರ ಕೊನೆಯ ವಾಕ್ಯಾಂಶದಲ್ಲಿ ಹೇಳಲಾಗಿದೆ. ಸಮರ್ಥ ವಾಚಕವೆಂದರೆ ಇಲ್ಲಿ 'ಹಿ'ಗೆ ಅನ್ವಯಿಸುತ್ತದೆ. ಅದನ್ನು ವಾಚ್ಯವಾಗಿ ಹೇಳಬಹುದು ಅಥವಾ ಅಧ್ಯಾಹಾರ ಮಾಡಿಕೊಳ್ಳಲು ಬಿಟ್ಟು ಹೇಳದೆಯೂ ಇರಬಹುದು. ಇದರ ಮೇರೆಗೆ ಎರಡು ಪ್ರಕಾರದ ಅರ್ಥಾಂತರನ್ಯಾಸಗಳು ಹೊರಡುತ್ತವೆ. ಇವು ಅರ್ಥಾಂತರ ನ್ಯಾಸಕ್ಕೆ ಮಾತ್ರ ಅನ್ವಯಿಸುತ್ತವೆಯೇ ಹೊರತು ಉಳಿದವಕ್ಕಲ್ಲ. ಇದುವರೆಗೆ ಉಲ್ಲೇಖಿಸಲಾದ ಎಲ್ಲ ಉದಾಹರಣೆಗಳೂ ಇದಕ್ಕೆ ಅನುಗುಣವಾಗಿಯೇ ಇವೆ. ಹಾಗಾಗಿ ಇಲ್ಲಿ ಉದಾಹರಿಸಿರು

ವುದನ್ನು ಸಹೃದಯರೇ ಊಹಿಸಿಕೊಳ್ಳಬೇಕು. ಪ್ರತಿಷೇಧದ ಬೋಧೆಯಿಂದಾಗಿ ಸೌಂದರ್ಯಾತಿಶಯತೆಯನ್ನು ಪಡೆದುಕೊಳ್ಳುವ ಅಲಂಕಾರವನ್ನು ವಿವರಿಸಿಯಾದ ಮೇಲೆ, ಇದೀಗ ಕಾರಣ ಪ್ರತಿಷೇಧವನ್ನೊಳಗೊಂಡಿರುವ ಅಲಂಕಾರವನ್ನು ಪ್ರಸ್ತುತಪಡಿಸುತ್ತಾನೆ. ಮನೋಜ್ಞ ಸೌಂದರ್ಯಕ್ಕೆ ಕಾರಣವಾದ್ದೇ ಈ ಪ್ರತಿಷೇಧ.

ಸ್ವ ಕಾರಣ ಪರಿತ್ಯಾಗಪೂರ್ವಕಂ ಕಾಂತಿಪುಷ್ಟಯೇ।
ಭಾವನಾರ್ಥಸ್ಯ ಕೇನಾಪಿ ವಿಶೇಷೇಣ ವಿಭಾವನಾ [57]

ಪ್ರಸ್ತುತ ಪದಾರ್ಥದ ಸೌಂದರ್ಯ ಪುಷ್ಟಿಗಾಗಿ, ತನ್ನ ಕಾರಣವನ್ನು ಪರಿತ್ಯಜಿಸಿ, ಯಾವುದಾದರೊಂದು ವಿಶೇಷತೆಯಿಂದಾಗಿ ಅದನ್ನು (ವರ್ಣನೀಯವಸ್ತು) ವರ್ಣಿಸುವುದು 'ವಿಭಾವನಾ'ಲಂಕಾರವೆನಿಸುತ್ತದೆ [57]

ವರ್ಣನೀಯ ಪದಾರ್ಥದ-ಯಾವುದಾದರೊಂದು ವಿಶೇಷ ಕಾರಣದಿಂದ ಅಲೌಕಿಕವಾದ ರೂಪಾಂತರದಿಂದ ವಿಭಾವನಾಲಂಕಾರವುಂಟಾಗುತ್ತದೆ. ಇದರ ತಾತ್ಪರ್ಯ-ಏನೊಂದೂ ಇಲ್ಲದೆ ಭಾವಿಸುವಂಥದು. ಯಾವುದು ಏನೊಂದೂ ಇಲ್ಲದೆ? ಆ ಪರಿಣಾಮವನ್ನುಂಟು ಮಾಡಲು ಸಮರ್ಥವಾದ ಕಾರಣ ರೂಪಕದ ಪ್ರಯೋಗ ವ್ಯಾಪಾರವಿಲ್ಲದೆ. ಹೇಗೆ? ಎಂದರೆ ತನ್ನ ಎಂದಿನ ಸಹಜ ಕಾರಣವನ್ನು ಪರಿತ್ಯಜಿಸುವುದರ ಮೂಲಕ (ಸ್ವ ಕಾರಣ ಪರಿತ್ಯಾಗ ಪೂರ್ವಕ). ಈ ತ್ಯಾಗ ಅಥವಾ ನಿಷೇಧ ಅದರ ವರ್ಣನೆಗೆ ಜೀವ ಸಂಚಾರ ಉಂಟುಮಾಡುತ್ತದೆ. ಇದು ಏತಕ್ಕಾಗಿ? ಕಾಂತಿಯ ಪುಷ್ಟಿಗಾಗಿ, ಸೌಂದರ್ಯ ಪೋಷಣೆಗಾಗಿ (ವರ್ಣನೆಯ ಪರಿಣಾಮದ ಸೌಂದರ್ಯವೃದ್ಧಿಗಾಗಿ).

ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ, ಕವಿಯ ಈ ಕಾರ್ಯದಿಂದ ವರ್ಣನೀಯ ವಸ್ತುವಿಗೆ ಲೋಕೋತ್ತರ ವಿಶಿಷ್ಟವಾದ ಸೌಂದರ್ಯಪುಷ್ಟಿ ಉಂಟಾಗುತ್ತದೆ. ಉದಾ:

ಅಸಂಭೃತಂ ಮಂಡನಮಂಗಯಷ್ಟೇ-
ರನಾಸವಾಖ್ಯಂ ಕರಣಂ ಮದಸ್ಯ।
ಕಾಮಸ್ಯ ಪುಷ್ಪವ್ಯತಿರಿಕ್ತಮಸ್ತ್ರಂ
ಬಾಲ್ಯಾತ್ಪರಂ ಸಾಽಥ ವಯಃ ಪ್ರಪೇದೇ [೨೦೪] **[ಕುಮಾರಸಂಭವ 1-31]**

ಬಾಹ್ಯ ಅಲಂಕರಣವಿರದ ದೇಹದಲಂಕರಣಕೆ
ಮಧುವ ಸೇವಿಸದ ಮದಕರಣಕೆ
ಹೂವಿಲ್ಲದ ಮನುಮಥನ ಹೂ ಬಾಣಕೆ
ಬಾಲ್ಯೋತ್ತರದ ಆ ನವ ಯೌವನಕೆ ಅಡಿಯಿಟ್ಟಳು ಲಲನೆ [೨೦೪]

ಸೌಂದರ್ಯದ ಕೃತ್ರಿಮ ಕಾರಣಗಳನ್ನು ಪರಿತ್ಯಜಿಸಿ, ಯೌವನಕ್ಕೆ ಅಡಿಯಿಟ್ಟ ಪಾರ್ವತಿಯ ಲೋಕೋತ್ತರ ಸಹಜ ವಿಶೇಷ ವಿಶಿಷ್ಟತೆಯನ್ನು ವರ್ಣಿಸುವುದು ಇಲ್ಲಿ ಕವಿಯ ಉದ್ದೇಶವಾಗಿದೆ.

ಇದುವರೆಗೂ ಗ್ರಂಥಕರ್ತನು, ಕಲ್ಪನೆಗೂ ಮೀರಿದ ಸೌಂದರ್ಯದಿಂದ ಕೂಡಿದ ವಿಭಾವನಾಲಂಕಾರದ ಸ್ವರೂಪ ಲಕ್ಷಣವನ್ನು ವಿವರಿಸಿದ್ದಾನೆ. ಇದೀಗ ಸಸಂದೇಹಾಲಂಕಾರದ ಚರ್ಚೆಯನ್ನು ಕೈಗೆತ್ತಿಕೊಳ್ಳುತ್ತಾನೆ. ಸಸಂದೇಹದಲ್ಲಿ ಸೌಂದರ್ಯಕ್ಕೆ ಕಾರಣವಾದ್ದು ಅದರ

ಸಂದೇಹ ಸ್ವರೂಪ. ಇದು ಬೌದ್ಧಿಕ ತರ್ಕದ ಪರಿಧಿಯೊಳಗೆ ಬರುವಂಥದು.

ಯಸ್ಮಿನ್ನುತ್ಪ್ರೇಕ್ಷಿತಂ ರೂಪಮುತ್ಪ್ರೇಕ್ಷಾಂತರ ಸಂಭವಾತ್|
ಸಂದೇಹಮೇತಿ ವಿಚ್ಛಿತ್ತ್ಯೈ ಸಸಂದೇಹಂ ವದಂತಿ ತಮ್[58]

ಸೌಂದರ್ಯ ವಿಶೇಷವನ್ನುಂಟು ಮಾಡುವ ಸಲುವಾಗಿ ಬೇರೊಂದಾಗಿ ಉತ್ಪ್ರೇಕ್ಷಿತಗೊಂಡ ವಸ್ತು, ಇತರೆ ಉತ್ಪ್ರೇಕ್ಷೆಗಳಿಗೂ ಎಡೆಮಾಡಿ ಕೊಟ್ಟಾಗ ಸಸಂದೇಹಾಲಂಕಾರವೆನಿಸುತ್ತದೆ[58]

ಸೌಂದರ್ಯ ಸಾದೃಶ್ಯದಿಂದಾಗಿ ಮೊದಲಿಗೆ ವಸ್ತುವಿನ ಸ್ವರೂಪವನ್ನು ಉತ್ಪ್ರೇಕ್ಷಿಸಲಾಗುತ್ತದೆ. ಅದೇ ರೀತಿಯ ಇತರೆ ಉತ್ಪ್ರೇಕ್ಷೆಗಳು ಕೂಡ ಸಂಭವವೆನಿಸಿಬಿಡುವುದರಿಂದ ಸಂದೇಹಕ್ಕೆಡೆಯಾಗುತ್ತದೆ. ಅಂಥ ಸಂದೇಹವೇ ಸೌಂದರ್ಯಕ್ಕೆ ಕಾರಣವಾಗುತ್ತದೆ. ಹೀಗಾಗಿ ಸಂದೇಹದ ಈ ವೈಚಿತ್ರ್ಯ ಸಂವಹನೆಯನ್ನು ಸಸಂದೇಹಾಲಂಕಾರವೆಂದು ಹೇಳಲಾಗುತ್ತದೆ. ಉದಾ :

ರಂಜಿತಾ ನು ವಿವಿಧಾಸ್ತರು ಶೈಲಾಃ
ನಾಮಿತಂ ನು ಗಗನಂ ಸ್ಥಗಿತಂ ನು|
ಪೂರಿತಾ ನು ವಿಷಮೇಷು ಧರಿತ್ರೀ
ಸಂಹೃತಾ ನು ಕಕುಭಸ್ತಿಮಿರೇಣ [೨೦೫]*

ಗಿರಿಮರಗಳೆಲ್ಲವು ಕಪ್ಪಗಾದುವೊ ಹೇಗೆ?
ಗಗನ ತಾನದು ಬಾಗಿದುದೊ ಅಥವಾ
ಸ್ಥಿರವಾದುದೊ?
ತಿರೆಯ ಹಳ್ಳ ತಿಟ್ಟುಗಳೆಲ್ಲ ಸಮವಾದುವೊ?
ದಿಕ್ಕುಗಳೆಲ್ಲ ಕತ್ತಲೆಯಿಂದ ಒಟ್ಟಾದುವೊ? [೨೦೫]

ಅಥವಾ

ನಿಮೀಲದಾಕೇಕರ ಲೋಲ ಚಕ್ಷುಷಾಂ
ಪ್ರಿಯೋಪಕಂಠಂ ಕೃತಗಾತ್ರವೇಪಥುಃ|
ನಿಮಜ್ಜತೀನಾಂ ಶ್ವಸಿತೋದ್ಧತಸ್ತನಃ
ಶ್ರಮೋ ನು ತಾಸಾಂ ಮದನೋ ನು ಪಪ್ರಥೇ [೨೦೬]

(ಕಿರಾತಾರ್ಜುನೀಯ VIII - 53)

ಪ್ರಿಯರ ಬಳಿಯೊಳೆ ಮೀಯುತಿರೆ ಇರೆ
ಮುಚ್ಚಿದ ಕಂಗಳ ಲೋಲ ನಯನಗಳ
ಏರಿಳಿವ ಮೊಲೆಗಳ ಕಂಪಿತ ಗಾತ್ರೆಯರು
ಶ್ರಮವೊ ಕಾಮವೊ ತನುವನೆಲ್ಲವ ತುಂಬಿದೆ [೨೦೬]

* ಕಿರಾತಾರ್ಜುನೀಯ 1 x -15
ಕಿರಾತಾರ್ಜುನೀಯದಲ್ಲಿ ಬರುವ ಸಂಧ್ಯಾಕಾಲದ ವರ್ಣನೆ ಇಲ್ಲಿದೆ. ಸಾಯಂಕಾಲದ ಕತ್ತಲೆ ಆವರಿಸುತ್ತಿರುವ ದೃಶ್ಯ ಇದಾಗಿದೆ.

ಅಥವಾ

ಒಂದು ಪ್ರಾಕೃತ ಪದ್ಯವಿದೆ. ಅದರ ಪಾಠತೀರಕೆಟ್ಟಿದೆ [೨೦೭]

ಅಥವಾ

ಕಿಂ ಸೌಂದರ್ಯಮಹಾರ್ಥಸಂಚಿತ ಜಗತ್ಕೋಶೈಕ ರತ್ನಂ ವಿಧೇಃ
ಕಿಂ ಶೃಂಗಾರ ಸರಸ್ಸರೋರುಹಮಿದಂ ಸ್ಯಾತ್ಸೌಕುಮಾರ್ಯಾವಧಿ|
ಕಿಂ ಲಾವಣ್ಯಪಯೋನಿಧೇರಭಿನವಂ ಬಿಂಬಂ ಸುಧಾದೀಧಿತೇ-
ರ್ವಕ್ತುಂ ಕಾಂತತಮಾನನಂ ತವ ಮಯಾ ಸಾಮ್ಯಂ ನ ನಿಶ್ಚೀಯತೇ [೨೦೮]

ಸೌಂದರ್ಯ ಮಹಾಸಂಪದವೆಂಬ
ಜಗದ ಭಂಡಾರಗಳಿಂದಾ ವಿಧಿಯು
ಆಯ್ದಿಹ ಒಂದೆ ರತ್ನವೊ ನೀನು|
ಅಲ್ಲದಿರೆ ಸೌಕುಮಾರ್ಯದ ಚರಮಸೀಮೆಯೆನಿಪ
ಶೃಂಗಾರ ಸರಸಿಯೊಳು ಬೆಳೆದ ಕಮಲವೋ?
ಅಥವಾ ಲಾವಣ್ಯ ಸಾಗರದಿ ಮೂಡುವ
ಅಮೃತಕಿರಣನ ನವೀನ ಬಿಂಬವೊ ನೀನು?
ನಿನ್ನ ಮೊಗಕೆ ಸರಿಯಹ ಉಪಮೆಯ
ನಿಶ್ಚಯಿಸಲಾರದಾದೆನು ನಾನು! [೨೦೮]

ಕುಂತಕನ ಪ್ರಕಾರ ಸಸಂದೇಹ ಅಲಂಕಾರವು ಒಂದೇ ಪ್ರಕಾರದ್ದು. ಕಾರಣ ಅದು ಉತ್ಪ್ರೇಕ್ಷೆಯನ್ನಾಧರಿಸಿದ್ದಾದ್ದರಿಂದ. ತನ್ನ ವಾಸ್ತವ ಸ್ವರೂಪವಾದ ಸಂದೇಹದಿಂದ ಸುಂದರವಾಗಿರುವ ಸಸಂದೇಹಾಲಂಕಾರವನ್ನು ವಿವರಿಸಿದ ನಂತರ ಗ್ರಂಥ ಕರ್ತೃ ಮುಂದೆ, ತನ್ನ ವಾಸ್ತವಿಕ ಸ್ವರೂಪವನ್ನು ಮುಚ್ಚಿಡುವ ಅಪಹ್ನುತಿ ಅಲಂಕಾರವನ್ನು ವಿವರಿಸುತ್ತಾನೆ.

ಅನ್ಯದರ್ಪಯಿತುಂ ರೂಪಂ ವರ್ಣನೀಯಸ್ಯ ವಸ್ತುನಃ|
ಸ್ವರೂಪಾಪಹ್ನವೋ ಯಸ್ಯಾಮಪಹ್ನುತಿರಸೌ ಮತಾ [59]

ಯಾವುದರಲ್ಲಿ ವರ್ಣನೀಯ ವಸ್ತುವಿಗೆ ನೂತನ ಸ್ವರೂಪವನ್ನು ನೀಡುವ ಸಲುವಾಗಿ ಅದರ ವಾಸ್ತವಿಕ ಸ್ವರೂಪವನ್ನು ಮುಚ್ಚಿಡಲಾಗುತ್ತದೆಯೋ ಅದಕ್ಕೆ ಅಪಹ್ನುತಿ ಎಂದು ಹೆಸರು [59]

ಹಿಂದೆ ನಿರೂಪಿಸಲಾದ ಸಸಂದೇಹಾಲಂಕಾರ ಹಾಗೆಯೇ ಅಪಹ್ನುತಿಯೂ, ಉತ್ಪ್ರೇಕ್ಷೆಯನ್ನಾಧರಿಸಿದೆ. ಸಂಭಾವನೆಯ ಮೂಲಕವಾದ ಅನುಮಾನ ಹಾಗೂ ಸಾದೃಶ್ಯದಿಂದ, ವರ್ಣನೀಯ ವಸ್ತುವಿಗೆ ಇನ್ನಷ್ಟು ಅಧಿಕ ಅಪೂರ್ವ ಸೌಂದರ್ಯವನ್ನು ತಂದುಕೊಡುವ ಸಲುವಾಗಿ, ಅದನ್ನು ರೂಪಾಂತರಗೊಳಿಸಲು, ಪ್ರಸ್ತುತ ವಸ್ತುವಿನ ನಿಜಸ್ವರೂಪವನ್ನು ಮರೆಮಾಚಲಾಗುತ್ತದೆ. ಈ ರೀತಿಯ ಮಾತಿನ ರೀತಿಗೆ (ವರ್ಣನೆಯ ರೀತಿಗೆ) ಅಪಹ್ನುತಿ ಎಂದು ವಿದ್ವಾಂಸರು ಹೇಳುತ್ತಾರೆ.

ಉದಾ:

ಭಾಸ್ವಾನೇಷ ಜಗತ್ಯಶೇಷನಯನಂ ತೇಜಸ್ವಿನಾಮಗ್ರಣೀಃ
ನಾಯಂ ಕಾಂತತಮಾನನಾಪ್ತಸುರುಚಿ ರ್ನೇತ್ರೋತ್ಸವಶ್ಚಂದ್ರಮಾಃ|
ಪರ್ಯಾಯೇಣ ಮನೋಭುವಾ ವಿರಹಿಣಾಂ ವೇದ್ಧುಂ ಮನೋ ನಿರ್ದಯಂ
ಪುಷ್ಪೇಷೂನ್ನಿಶ್ಚಿತಾಗ್ರತಾಂ ವಿಜಯಿನೀಂ ನೇತುಂ ನಿಯುಕ್ತೋ ಮಮ [೨೦೯]

ಜಗದ ಕಣ್ಣಿವನು ಇವನೆ ಸೂರ್ಯ
ತೇಜಸ್ವಿಗಳೊಳಿವನಗ್ರಗಣ್ಯ|
ನನ್ನ ಪ್ರಿಯೆಯ ಚೆಲುಮೊಗವ ಹೋಲ್ವ
ಕಣ್ಗೆ ಹಬ್ಬವಹ ಚಂದಿರನು ಇವನಲ್ಲ
ಗೆಲುವ ನಿಶ್ಚಯದೆ ತನ್ನ ಹೂ ಬಾಣಗಳ
ಮಸೆಯಿಸಲು ಕರುಣೆಯಿಲ್ಲದಾ ಕಾಮ
ನೇಮಿಸಿಹ ಕಾರ್ಯವಾಹಿ ಇವನು! [೨೦೯]

ಧರ್ಮಿಬದಲಾಗದೆ ಧರ್ಮವನ್ನು ಮಾತ್ರ ಮರೆಮಾಚಿರುವುದಕ್ಕೆ ಉದಾ:

ತವ ಕುಸುಮಶರತ್ವಂ ಶೀತರಶ್ಮಿತ್ವಮಿಂದೋಃ
ದ್ವಯಮಿದಮಯಥಾರ್ಥಂ ದೃಶ್ಯತೇ ಮದ್ವಿಧೇಷು
ವಿಸೃಜತಿ ಹಿಮಗರ್ಭೈರಗ್ನಿಮಿಂದುರ್ಮಯೂಖೈಃ-
ಸ್ತ್ವಮಪಿ ಕುಸುಮಬಾಣಾನ್ ವಜ್ರಸಾರೀ ಕರೋಷಿ [೨೧೦]

(ಶಾಕುಂತಲ III - 55)

ನೀನು ಹೂ ಬಾಣಗಳ ಹೊಂದಿರುವುದು
ಆ ಚಂದಿರನು ಶೀತಳ ಕಿರಣನಾಗಿರುವುದು
ನನ್ನಂಥವರ ವಿಷಯದಲಿ ಎರಡೂ
ನಿರರ್ಥಕವೆಂದೆ ತೋರುತಿದೆ ಎನಗೆ
ಬೆಂಕಿಯ ಮಳೆಗರೆಯುವನಾ ಚಂದಿರ
ತನ್ನ ಹಿಮಶೀತಲಕಿರಣದೆ
ನೀನು ಕೂಡ ನಿನ್ನಹೂಬಾಣಗಳ ವಜ್ರಕಠಿಣವಾಗಿಸಿಹೆ! [೨೧೦]

ಇಲ್ಲಿ ಕವಿ ಭಣಿತಿವೈಚಿತ್ರ್ಯದ ಮೇಲೆ ದೃಷ್ಟಿ ಇಟ್ಟ ಕಾರಣದಿಂದ ಅಪಹ್ನವ (ಗೋಪನ ಮಾಡುವುದು)ವನ್ನು ನೇರ ಶಬ್ದಗಳಲ್ಲಿ ಹೇಳದೆ ಕೇವಲ ಸೂಚಿಸಿದ್ದಾನೆ. ಕುಸುಮ ಶರತ್ವದ ಲಕ್ಷಣಗಳಾದ ಸ್ವಭಾವಸಮುಚಿತ ಸೌಕುಮಾರ್ಯ, ಮೃದುತ್ವವೇ ಮೊದಲಾದ ಗುಣಗಳು ನಿವಾರಿತವಾಗಿ, ಅದಕ್ಕೆ ತದ್ವಿರುದ್ಧ ಧರ್ಮಗಳಾದ ಕಾಠಿಣ್ಯ ಮತ್ತು ಕರಾಳ ಕಾರ್ಯಗಳನ್ನು ಇಲ್ಲಿ ವರ್ಣಿಸಲಾಗಿದೆ.

ಕೆಲವೊಮ್ಮೆ ಸಾದೃಶ್ಯಸಮನ್ವಯವನ್ನಾಧರಿಸಿಯೂ ಅಪಹ್ನುತಿ ಬರಬಹುದು ಉದಾ:

ಪೂರ್ಣೇಂದೋಃ ಪರಿಪೋಷಕಾಂತವಪುಷಃ ಸ್ಫಾರ ಪ್ರಭಾಭಾಸುರಂ
ನೇದಂ ಮಂಡಲಮಭ್ಯುದೇತಿ ಗಗನಾಭೋಗೇ ಜಗೀಷೋರ್ಜಗತ್|
ಮಾರಸ್ಯೋಚಿತ ಮಾತಪತ್ರಮಧುನಾ ಪಾಂಡು ಪ್ರದೋಷ ಶ್ರಿಯಾ
ಮಾನೋನ್ನದ್ಧ ಜನಾಭಿಮಾನದಲನೋದ್ಯೋಗೈಕ ಹೇವಾಕಿನಃ [೨೧೧]

[ಅಲಂಕಾರಸರ್ವಸ್ವ]

ಹೊಳೆ ಹೊಳೆವ ಪೂರ್ಣ ಕಾಂತಿಯ ಪ್ರಭೆಯ
ಚಿಮ್ಮುತೆ ಬಿತ್ತರದ ಗಗನದೊಳು ಮೂಡಿಬಹ
ಚೆಲುವ ಚಂದಿರನ ಪೂರ್ಣಮಂಡಲವಿದಲ್ಲ
ರಾಗಿಗಳ ಅಭಿಮಾನ ಭಂಗಿಸಲು ವಿಜಯ ಯಾತ್ರೆಗೆ
ಹೊರಟಿರುವ ಜಗದ್ವಿಜಯಿ ಮನ್ಮಥನ
ಶಿರದ ಮೇಲೆ ಆ ಚೆಲುವ ಚೆನ್ನೆ ಪ್ರದೋಷ ಲಕ್ಷ್ಮಿ
ಎತ್ತಿ ಹಿಡಿದಿಹ ಬೆಳ್ಗೊಡೆಯೆ ಇದು ಖಂಡಿತ| [೨೧೧]

[ಇದುವರೆಗೆ ಗ್ರಂಥಕರ್ತೃ ಪ್ರತಿಯೊಂದು ಅಲಂಕಾರವೂ ಹೇಗೆ ತನ್ನದೇ ಆದ ಅಲಂಕಾರ್ಯಕ್ಕೆ ಶೋಭೆಯನ್ನು ತಂದು ಕೊಡುತ್ತದೆಂಬುದನ್ನು ತೋರಿಸಿಕೊಟ್ಟು, ಇದೀಗ ಅವು ಹೇಗೆ ಸಂಯುಕ್ತವಾಗಿ ಅದೇ ಅಲಂಕಾರ್ಯವನ್ನು ಪೋಷಿಸುತ್ತದೆಂಬುದನ್ನು ವಿವರಿಸುತ್ತಾನೆ].

ರಾಜಂತಿ ಯತ್ರಾಲಂಕಾರಾ ಅನ್ಯೋನ್ಯಾನ್ವಿತ ವೃತ್ತಯಃ|
ಯಥಾ ಪದಾರ್ಥಾ ವಾಕ್ಯಾರ್ಥೇ ಸಂಸೃಷ್ಟಿಃ ಸಾಭಿಧೀಯತೇ [60]

ಪದಗಳು ಒಟ್ಟಾಗಿ ಸೇರಿ ಹೇಗೆ ವಾಕ್ಯ ನಿರ್ಮಾಣ ಮಾಡುತ್ತವೆಯೋ ಅದೇ ರೀತಿ ಅಲಂಕಾರಗಳು ಒಟ್ಟಾರೆ ಸೌಂದರ್ಯ ನಿರ್ಮಿತಿಯ ಸಲುವಾಗಿ ಪರಸ್ಪರ ಒಟ್ಟಿಗೆ ಸೇರಿದಾಗ ಅದನ್ನು ಸಂಸೃಷ್ಟಿ ಅಲಂಕಾರ ಎಂದು ಕರೆಯಲಾಗುತ್ತದೆ [60]

ಹಲವಾರು ಕಣ್ಣಿಗೆ ಹೊಡೆಯುವ (ಎದ್ದುಕಾಣುವ) ಅಲಂಕಾರಗಳು ಒಟ್ಟಿಗೆ ಸೇರಿ ವರ್ಣನೀಯ ವಸ್ತುವಿಗೆ ರಮಣೀಯತೆಯನ್ನುಂಟು ಮಾಡುವಂಥ ಸಂದರ್ಭವಿದ್ದರೆ ಆ ರೀತಿಯಲ್ಲಿ ಅಲಂಕಾರಗಳು ಸಂಯುಕ್ತವಾಗುವುದನ್ನು ಸಂಸೃಷ್ಟಿ ಅಲಂಕಾರ ಎಂದು ಕರೆಯಲಾಗುತ್ತದೆ. ಅವುಗಳ ಕಾರ್ಯವನ್ನು ಒಂದು ಉಪಮೆಯ ಮೂಲಕ ವಿವರಿಸಲಾಗಿದೆ. ವಾಕ್ಯದಲ್ಲಿ ಸೇರಿರುವ ಪದಗಳೆಲ್ಲವೂ ಪರಸ್ಪರ ಅನ್ವಯ ಸಂಬಂಧದ ಮೂಲಕ ಒಟ್ಟಾಗಿ ಹೇಗೆ ವಾಕ್ಯಾರ್ಥವನ್ನು ನೀಡುತ್ತವೆಯೋ, ಪಾರತಂತ್ರ್ಯವನ್ನನುಭವಿಸುತ್ತ ಸಮುದಾಯಾತ್ಮಕವಾಗಿ ಒಂದು ವಾಕ್ಯಾರ್ಥವನ್ನು ಪ್ರತಿಪಾದಿಸುತ್ತವೆಯೋ ಅದೇ ರೀತಿ,

ಅಂಥ ಅಲಂಕಾರಗಳ ಪರಸ್ಪರ ಅನ್ವಯ ಸಂಬಂಧಗಳು ಸಾರ್ಥಕವಾಗುತ್ತವೆ. ವಾಕ್ಯದ ಬೇರೆ ಬೇರೆ ಭಾಗಗಳಲ್ಲಿ ಅವು ಕಂಡು ಬಂದರೂ, ಆ ಅಲಂಕಾರಗಳಿರುವ ವ್ಯತ್ಯಾಸವಾಗದ ಸಂಬಂಧಾನ್ವಿತಿಯು, ಒಟ್ಟಾರೆ ವಾಕ್ಯಾರ್ಥ ವಿಶಿಷ್ಟ ಸೌಂದರ್ಯವು ಸಹೃದಯ ಸಂವೇದ್ಯವಾಗುವಂತೆ ಮಾಡುತ್ತದೆ. ಪ್ರತಿಯೊಂದೂ ಪ್ರತ್ಯೇಕವಾಗಿ (ವಿವಿಕ್ತವಾಗಿ) ಇಡೀ ವಾಕ್ಯದ ಸೌಂದರ್ಯವು ಸಂವೇದ್ಯವಾಗುವಂತೆ ಮಾಡುತ್ತವೆ ಉದಾ:

ಆಶ್ಲಿಷ್ಟೋ ನವ ಕುಂಕುಮಾರುಣ ರವಿ ವ್ಯಾಲೋಕಿತೈರ್ವಿಸ್ತೃತೋ
ಲಂಬಾಂತಾಂಬರಯಾ ಸಮೇತ್ಯ ಭುವನೇ ಧ್ಯಾನಾಂತರೇ ಸಂಧ್ಯಯಾ|
ಚಂದ್ರಾಂಶೂತ್ಕರ ಕೋರಕಾಕುಲ ಪತಧ್ವಾಂತ ದ್ವಿರೇಫೋಽಧುನಾ
ದೇವ್ಯೇವಾರ್ಪಿತ ದೋಹದಃ ಕುರವಕೇ ಭಾತಿ ಪ್ರದೋಷಾಗಮಃ [೨೧೨]

ಅರ್ಚನೆಯ ವೇಳೆಯೊಳು ನೆಲವ
ಸೋಂಕುತಿಹ ನೀಳ ವಸ್ತ್ರದಿಂದ ಮತ್ತೆ
ಕುಂಕುಮದ ಹಾಗೆ ಕೆಂಪಾದ
ಮುಂಬೆಳಗಿನಂಥ ನೋಟವನು ಪಸರಿಸುತೆ
ಕುರವಕದ ತರುವ ದೋಹದ ಕ್ರಿಯೆಯಿಂದೆ
ಆ ಸಂಧ್ಯಾ ದೇವಿಯೆ ಪುಷ್ಪಿಸುತಿಹಳೆಂಬಂತೆ
ಹೊಳೆಯುತಿದೆ ಮುಸ್ಸಂಜೆಯಾಗಮನವು
ಕುರವಕವ ತಬ್ಬಿಕೊಂಡಿಹ
ಮುಗುಳುಗಳೆಂದೆ ಚಂದ್ರಕಿರಣಗಳ ಬಗೆದು
ಸಾಲುಗಟ್ಟಿಹವು ದುಂಬಿಗಳು [೨೧೩]

ಇಲ್ಲಿ ರೂಪಕವೇ ಮೊದಲಾದ ಹಲವಾರು ಅಲಂಕಾರಗಳು, ಪ್ರತ್ಯೇಕವಾಗಿ ಒಂದೊಂದೂ ರಮಣೀಯವೇ ಆದರೂ ಒಟ್ಟಾರೆ ವಾಕ್ಯಾರ್ಥ ವಕ್ರತಾ ಸೌಂದರ್ಯದ ಸಲುವಾಗಿ ಅವೆಲ್ಲ ಪರಸ್ಪರ ಒಂದಾಗುತ್ತವೆ.

ಉದಾ:

ಮ್ಲಾನಿಂ ವಾಂತವಿಷಾನಲೇನ ನಯನವ್ಯಾಪಾರಲಬ್ಧಾತ್ಮನಾ
ನೀತಾ ರಾಜಭುಜಂಗ ಪಲ್ಲವಮೃದು ರಂಭಾ ತಥೇಯಂ ತ್ವಯಾ
ಅದ್ಯಾಪೀಶ್ವರ ಶೇಖರೇಂದು ಕಿರಣಾಸ್ಮೇರಸ್ಥಲೀಲಾಂಛಿತೇ
ಕೈಲಾಸೋಪವನೇ ಯಥಾ ಸುಗಹನೇ ನೈತಿ ಪ್ರರೋಹಂ ಪುನಃ [೨೧೩]

ಹೇ ರಾಜ ಭುಜಂಗವೆ
ಚಿಗುರೆಲೆಯ ತಳೆದಿರುವ ಈ ಬಾಳೆ
ತಲುಪಿರುವ ದುಃಸ್ಥಿತಿಯ ನೇನೆಂಬೆ!

ಕೈಲಾಸ ಪರ್ವತದ ಘನ ಉಪವನದೊಳಿದ್ದರೂ
ಶಿವನ ಜೂಟದಲಿರುವ ಇಂದು ಕಿರಣದ
ಚೆಂಬೊಳಕೊಳೇ ಮೀಯುತಿದ್ದರು
ನಿನ್ನ ವಿಷದ ನೋಟವು ಕಾರಿದ
ಬೆಂಕಿಯುರಿ ತಾಕಿ ಮುರುಟಿರುವ ಇದು
ಅಂಕುರವನಿನ್ನೆಂದೂ ತಳೆಯಲಾರದು ತಾನು [೨೧೩]

ಇಲ್ಲಿಯೂ ಕೂಡ ಹಿಂದಿನ ಉದಾಹರಣೆಯಂತೆಯೇ ರೂಪಕಾದಿ ಅಲಂಕಾರಗಳ ಪರಸ್ಪರ ಸಂಸರ್ಗದಿಂದುಂಟಾದ ವಕ್ರತೆಯ ಸೌಂದರ್ಯವನ್ನು ಕಾಣಬಹುದು.

ಸಂಸೃಷ್ಟಿ ಅಲಂಕಾರದ ವಿವೇಚನೆಯನ್ನು ಮುಗಿಸಿ, ಇದೀಗ ಗ್ರಂಥ ಕರ್ತೃವು ಅದೇ ರೀತಿಯ ಸೌಂದರ್ಯವನ್ನುಂಟು ಮಾಡುವ 'ಸಂಕರ' ಅಲಂಕಾರದ ವಿವೇಚನೆಯನ್ನು ಕೈಗೆತ್ತಿ ಕೊಳ್ಳುತ್ತಾನೆ.

ಅಲಂಕಾರ ಕಲಾಪೋಽಯಮನ್ಯೈಃ ಸಂಕೀರ್ಣತಾಂ ಗತಃ|
ಸ್ಫುರನ್ನನೇಕಧಾ ವಾಕ್ಯೇ ಸಂಕರಃ ಸೋಽಭಿಧೀಯತೇ|| [61]

ಮೇಲೆ ಹೇಳಲಾದ ವಿವಿಧ ಬಗೆಯ ಅಲಂಕಾರಗಳು ಬೇರ್ಪಡಿಸಲಾಗದ ರೀತಿಯಲ್ಲಿ ಮಿಳಿತವಾಗಿ, ಒಂದೇ ವಾಕ್ಯದಲ್ಲಿ ಬೇರೆ ಬೇರೆ ರೀತಿಗಳಲ್ಲಿ ನಮಗೆ ಗೋಚರವಾದಾಗ, ಅಂಥ ಅಲಂಕಾರಗಳ ಸಂಕೀರ್ಣ ಸೌಂದರ್ಯಕ್ಕೆ 'ಸಂಕರ' ಅಲಂಕಾರ ಎಂದು ಕರೆಯಲಾಗಿದೆ [61]

ರಸವದಲಂಕಾರದಿಂದ ಮೊದಲುಗೊಂಡು ಇದುವರೆಗೆ ಪ್ರತ್ಯೇಕವಾಗಿ ವಿವರಿಸಲಾದ ಅಲಂಕಾರಗಳು ಪ್ರತ್ಯೇಕವಾಗಿ ಗುರುತು ಹಿಡಿಯಲಾರದ ರೀತಿಯಲ್ಲಿ ಪರಸ್ಪರ ಸಮ್ಮಿಶ್ರಗೊಂಡು ಬಿಟ್ಟಾಗ ಸಂಕರ ಅಲಂಕಾರವೆಂದು ಕರೆಯಲ್ಪಡುತ್ತವೆ. ಇಷ್ಟಾದರೂ ಅವು ವಾಕ್ಯದಲ್ಲಿ ಅವುಗಳ ಸಮ್ಮಿಶ್ರ ಸ್ಥಿತಿಯಲ್ಲೇ ಸ್ಪಷ್ಟವಾಗಿ ಹೊಳೆಯುತ್ತಿರುತ್ತವೆ. ಪ್ರತಿಯೊಂದು ಅಲಂಕಾರದ ವಿಶಿಷ್ಟ ಸೌಂದರ್ಯವು ಮರೆಯಾಗಿ, ವಿವಿಧ ಅಲಂಕಾರಗಳು ಸಂಯುಕ್ತವಾಗಿ ಮಿಶ್ರಣಗೊಂಡದ್ದ ರಿಂದಾಗಿ, ಮೂಡಿಬಂದ ಇಡೀ ವಾಕ್ಯದ ಒಟ್ಟಾರೆ ಅಲಂಕಾರಿಕ ಸೌಂದರ್ಯವೇ ಇವನ್ನು 'ಸಂಕರ' ಎಂದು ಕರೆಯುವುದಕ್ಕೆ ಕಾರಣವೆಂದು ತಿಳಿಯಬೇಕು. ಹಾಗಾಗಿ 'ಸಂಕರ' ಪದದ ವ್ಯಾಪ್ತಿಯಲ್ಲಿ ಎಲ್ಲ ಅಲಂಕಾರಗಳ ಸಮಗ್ರ ಸ್ವರೂಪವು ಸೇರುತ್ತದೆ. ಉದಾ :

ರೋಹನ್ಮೂಲಾತಿ ಗೌರೈರುರಗಪತಿ ಫಣೈಸ್ತತ್ರ ಪಾತಾಲಕುಕ್ಷೌ
ಪ್ರೋದ್ಯತ್‌ವಾಲಂ ಕುರಶ್ರೀಃ ದಿಶಿ ದಿಶಿ ದಶನೈರೇಭಿರಾಶಾ ಗಜಾನಾಂ|
ಅಸ್ಮಿನ್ನಾಕಾಶದೇಶೇ ವಿಕಸಿತ ಕುಸುಮಾ ರಾಶಿಭಿಸ್ತಾರಕಾಣಾಂ
ನಾಥ ತ್ವತ್ಕೀರ್ತಿವಲ್ಲೀ ಫಲತಿ ಫಲಮಿದಂ ಬಿಂಬಮಿಂದೋಃ ಸುಧಾರ್ದ್ರಮ್ [೨೧೪]*

---

* 'ಅಲಂಕಾರ ಮಹೋದಧಿ'ಯಲ್ಲಿ ಉದ್ಧೃತವಾಗಿದೆ.

ಪ್ರಭೂ,
ನಿನ್ನ ಕೀರ್ತಿಲತೆಗೆ ಪಾತಾಳಫಣಿಪತಿಯ
ಹೆಡೆಯಂಥ ಬಿಳಿಯ ಬೇರು
ದಿಕ್ಕುದಿಕ್ಕಿಗೆ ಚಾಚಿರುವ ದಿಗ್ಗಜಂಗಳ
ದಂತಗಳೆ ಅದರ ಅಂಕುರಗಳು
ಗಗನದಲಿ ಬೆಳಗುತಿಹ ನಕ್ಷತ್ರ ಪುಂಜಗಳೆ
ಅರಳಿ ನಿಂತಿರುವ ಅದರ ಅಲರುಗಳು
ದುಂಡನೆಯ ಚಂದ್ರಬಿಂಬ ಆ ಸುಧಾಸೂತಿಯೆ ಅದರ ಫಲವು [೨೧೪]

ಇಲ್ಲಿ 'ಕೀರ್ತಿಲತೆ' ಎಂಬುದು ರೂಪಕ. ಮೊದಲಿಗೆ ಸ್ವರ್ಗೀಯ ವಸ್ತುಗಳೊಂದಿಗೆ ಸಾಮ್ಯವನ್ನು ಸ್ಥಾಪಿಸಿಕೊಳ್ಳದ ಹೊರತು, ಈ ರೂಪಕ ಯುಕ್ತಿಯುಕ್ತವಾಗುವುದಿಲ್ಲ. ಹಾಗಾಗಿ ಇಲ್ಲಿ ಪ್ರಧಾನವಾಗಿ ಉತ್ಪ್ರೇಕ್ಷಾಲಂಕಾರವನ್ನು ಕವಿ ಉದ್ದೇಶಿಸಿದ್ದಾನೆ. ಅದು ಗಗನ ವೀಕ್ಷಕರ ಕಲ್ಪನೆಗಳನ್ನು ಬಡಿದೆಬ್ಬಿಸುತ್ತದೆ. ಮಹಾರಾಜನ ಕೀರ್ತಿಯ ವೈಭವ ಎಂಥದೆಂದರೆ, ಅದು ವಿವಿಧ ಸಾಧ್ಯತೆಗಳನ್ನು ಪೋಷಿಸುತ್ತ ಜಗತ್ತಿನೆಲ್ಲೆಡೆ ಪಸರಿಸಿದೆ. ಎರಡೂ ಅಲಂಕಾರಗಳು ಒಂದರ ಹೊರತು ಇನ್ನೊಂದಕ್ಕೆ ಅಸ್ತಿತ್ವವೆ ಇಲ್ಲವೆನ್ನುವಷ್ಟರ ಮಟ್ಟಿಗೆ ಒಂದರೊಳಗೊಂದು ಸಮ್ಮಿಳಿತವಾಗಿ ಬಿಟ್ಟಿವೆ. ಎರಡೂ ಸಂಯುಕ್ತವಾಗಿ ಸೇರಿಕೊಂಡಾಗಲೇ ಪರಿಣಾಮಕಾರಿಯಾಗುವುದು. ಆದ್ದರಿಂದ ಇಂಥ ಎಡೆಗಳಲ್ಲಿ ಇರುವ ಅಲಂಕಾರವನ್ನು 'ಸಂಕರ' ಅಲಂಕಾರವೆಂದು ಪರಿಗಣಿಸಬೇಕು.

ವಾಕ್ಯ ಭಾಗವೊಂದರಲ್ಲಿ 'ಸಂಕರ' ಬಂದಿರುವುದಕ್ಕೆ ಉದಾ:

''ನಿರ್ಮೋಕ ಮುಕ್ತಿರಿವ ಗಗನೋರಗಸ್ಯ''
''ಗಗನಫಣಿ ಬಿಟ್ಟ ಪರೆಯಂತೆ''
(ಉತ್ಪ್ರೇಕ್ಷಾಲಂಕಾರದಡಿ ನೋಡುವುದು)

ನೇರವಾಗಿ ಇಂಥ ಮಾತನ್ನು ಹೇಳುವುದು ಅಸಾಧ್ಯ. ಆದ್ದರಿಂದ ಉತ್ಪ್ರೇಕ್ಷಾಲಂಕಾರದ ಮೂಲಕ, ರೂಪಕವನ್ನು ಸಮರ್ಥಿಸಲಾಗಿದೆ. ಇದು ಉತ್ಪ್ರೇಕ್ಷೆಗೂ ಸಮನಾಗಿ ಅನ್ವಯಿಸುತ್ತದೆ. ಆದ್ದರಿಂದ ಈ ಉದಾಹರಣೆಯನ್ನು ಸಂಕರ ಅಲಂಕಾರದ ಉದಾಹರಣೆಯೆಂದು ಪರಿಗಣಿಸಬೇಕು. ಹಾಗಾದರೆ ಇದೇ ತರ್ಕದ ಆಧಾರದ ಮೇಲೆ, "ಅಸ್ಯಾಃ ಸರ್ಗವಿಧೌ" [ಮೂರನೇ ಉನ್ಮೇಷ 13ನೇ ಪದ್ಯ] "ಕಿಂ ತಾರುಣ್ಯತರೋಃ [ಮೊದಲನೇ ಉನ್ಮೇಷ 95ನೇ ಲಕ್ಷ್ಯಪದ್ಯ] ಈ ಮೊದಲಾದುವುಗಳನ್ನೂ 'ಸಂಕರ' ಅಲಂಕಾರದ ಉದಾಹರಣೆಗಳೆಂದೇಕೆ ಪರಿಗಣಿಸಬಾರದೆಂದು ಕೇಳಬಹುದು. ಆದರೆ ಹಾಗೆ ಪರಿಗಣಿಸುವಂತಿಲ್ಲ. ಕಾರಣ, ಮೊದಲಿನ ಉದಾಹರಣೆಯಲ್ಲಾದರೆ ಸಸಂದೇಹಾಲಂಕಾರದ ನೆರವಿಲ್ಲದೆ ಪ್ರತೀಯಮಾನ ಉತ್ಪ್ರೇಕ್ಷೆ ಸಾಧ್ಯವಾಗುವುದಿಲ್ಲ. ಹಾಗೂ ಮೊದಲ

ಉದಾಹರಣೆಯಲ್ಲಿಯ ಪ್ರತೀಯಮಾನ ಉತ್ಪ್ರೇಕ್ಷೆಯು ರೂಪಕದ ನೆರವಿಲ್ಲದೆ ಉದ್ಭವಿಸದು. ಇವೆರಡೂ ಮಣಿಖಚಿತವಾದ ಪದಕದಿಂದ ಕೂಡಿರುವ ಮುತ್ತಿನಹಾರದ ಸೌಂದರ್ಯವನ್ನು ಬಿಂಬಿಸುವ ಅಲಂಕಾರದ ರಮಣೀಯತೆಯನ್ನು ಪಡೆದುಕೊಳ್ಳುತ್ತವೆ. ಸಂಸೃಷ್ಟಿ ಅಲಂಕಾರವು ನಾನಾ ವಿಧವಾದ ಮಣಿಖಚಿತವಾದ ಮಾಲೆಯಂತೆ ಮನೋಹರವೆನಿಸುತ್ತದೆಂದಾದರೆ ಸಂಕರ ಅಲಂಕಾರದ ಸೌಂದರ್ಯವನ್ನು ಕಾಂತಿಯುಕ್ತವಾದ ಬಹುವಿಧದ ರತ್ನ ವಿನ್ಯಾಸಗಳಿಂದ ಕೂಡಿರುವ ಅತುಲ ಕಾಂತಿಯ ರತ್ನಹಾರದ ರಮಣೀಯತೆಗೆ ಹೋಲಿಸಬಹುದು. ಹಾಗಾಗಿ ಎಲ್ಲ ರೀತಿಯಲ್ಲೂ ಅವು ವಿಭಿನ್ನವಾದುವು.

[ಹೀಗೆ ಅಲಂಕಾರಗಳನ್ನು ಯುಕ್ತಿಯುಕ್ತವಾಗಿ ಪ್ರತಿಪಾದಿಸಿದ ನಂತರ, ಗ್ರಂಥ ಕರ್ತೃವು ಕೆಲವೊಂದನ್ನು ಲಕ್ಷಣಿಸದೆ ಕೈ ಬಿಡಲಾಗಿದೆಯಾಗಿ ಲಕ್ಷಣದ ಅವ್ಯಾಪ್ತಿ ದೋಷವನ್ನು ಪರಿಹರಿಸಲುಪಕ್ರಮಿಸುತ್ತಾನೆ].

ಭೂಷಣಾಂತರಭಾವೇನ ಶೋಭಾಶೂನ್ಯತಯಾ ತಥಾ|
ಅಲಂಕಾರಾಸ್ತು ಯೇ ಕೇಚಿನ್ನಾಲಂಕಾರ ತಯಾ ಮನಾಕ್ [62]

ಇದುವರೆಗೆ ಲಕ್ಷಣಿಸಲಾದ ಅಲಂಕಾರಗಳಲ್ಲಿ, ಲಕ್ಷಣಿಸದೆ ಬಿಟ್ಟ ಅಲಂಕಾರಗಳು, ಒಂದೋ ಶೋಭಾರಹಿತವಾಗಿ, ಚಮತ್ಕಾರಹೀನವಾಗಿದ್ದ ಕಾರಣದಿಂದ ಅಥವಾ ಈಗಾಗಲೇ ಹೇಳಲಾದ ಅಲಂಕಾರಗಳಿಗಿಂತ ಭಿನ್ನವಾದ ಅಲಂಕಾರಗಳಲ್ಲವಾದ್ದರಿಂದ, ಅವುಗಳನ್ನು ಎಷ್ಟರಮಟ್ಟಿಗೂ ಅಲಂಕಾರಗಳೆಂದು ಪರಿಗಣಿಸಲಾಗುವುದಿಲ್ಲ [62]

ಈಗಾಗಲೇ ಲಕ್ಷಣಿಸಲಾದ ಅಲಂಕಾರಗಳ ಹೊರತಾಗಿರುವ ಅಲಂಕಾರಗಳನ್ನು (ಭಾಮಹಾದಿಗಳು ಮಾನ್ಯ ಮಾಡಿರುವ) ಅಲಂಕಾರಗಳೆಂದು ನಾವು ಪರಿಗಣಿಸಿಲ್ಲ. ಕಾರಣ ಈಗಾಗಲೇ ವ್ಯಾಖ್ಯಾನಿಸಲಾದವುಗಳಿಗಿಂತ ವಾಸ್ತವವಾಗಿ ವಿಭಿನ್ನವಲ್ಲದ ಕಾರಣದಿಂದ, ಅಂದರೆ ಪೂರ್ವೋಕ್ತ ವಾದ ಅಲಂಕಾರಗಳಲ್ಲಿಯೇ ಒಂದಲ್ಲ ಒಂದು ಅಲಂಕಾರಗಳಲ್ಲಿ ಅವು ಸೇರಿಹೋಗುವುದರಿಂದ ಉಳಿದ ಅಲಂಕಾರಗಳನ್ನು ಬೇರೆಯಾಗಿ ಪರಿಗಣಿಸಬೇಕಾದ ಆವಶ್ಯಕತೆ ಇಲ್ಲ. ಅಲ್ಲದೆ, ಅವು ಶೋಭಾಶೂನ್ಯವಾದ್ದರಿಂದ, ಅವನ್ನು ಅಲಂಕಾರಗಳೆಂದು ಪರಿಗಣಿಸಿಲ್ಲ. ಇವಲ್ಲದೆ ಮೂರನೇ ಕಾರಣವೊಂದಿದೆ. ಅದೆಂದರೆ ಅವುಗಳಲ್ಲಿ ಕೆಲವು ಸ್ವತಃ ಅಲಂಕಾರ್ಯಗಳೇ ಆಗಿರುವುದರಿಂದ ಅವನ್ನು ಅಲಂಕಾರಗಳೆಂದು ಪರಿಗಣಿಸಲಾಗುವುದಿಲ್ಲ. ಹೇಗೆಂದರೆ

ಯಥಾ ಸಂಖ್ಯಮಲಂಕಾರಃ ಪೂರ್ವೈರಾಮ್ನಾತ ಏವ ಯಃ|
ಕಾರಣದ್ವಿತಯೇನಾಪಿ ನಾಲಂಕಾರಃ ಸ ಸಂಮತಃ[63]

---

1. ಭಾಮಹನು ಕಾವ್ಯಾಲಂಕಾರದಲ್ಲಿ ಯಥಾಸಂಖ್ಯೆಗೆ ಉದಾಹರಣೆಯಾಗಿ ಇದನ್ನು ನೀಡಿದ್ದಾನೆ. ಕಾವ್ಯಾಲಂಕಾರ II - 87 - ಪುಟ - 46

ಹಿಂದಿನ ಆಲಂಕಾರಿಕರು ಯಥಾ ಸಂಖ್ಯೆಯನ್ನು ಅಲಂಕಾರವೆಂದು ಪರಿಗಣಿಸಿದ್ದರೂ, ಮೇಲೆ ಹೇಳಲಾದ ಎರಡೂ ಕಾರಣಗಳಿಂದ, ನಾವು ಅದನ್ನೊಂದು (ಸ್ವತಂತ್ರ) ಅಲಂಕಾರವೆಂದು ಮಾನ್ಯ ಮಾಡಿಲ್ಲ [63]

ಹಿಂದಿನ ಆಲಂಕಾರಿಕರು, 'ಯಥಾಸಂಖ್ಯ' ಎಂಬ ಹೆಸರಿನಿಂದ ಕರೆದು ಅನೇಕ ಶಬ್ದಗಳಲ್ಲಿ ಹೇಳಿದ್ದರೂ, ಇತರೆ ಅಲಂಕಾರಗಳಿಂದ ಅದು ವಿಭಿನ್ನವಲ್ಲವೆಂಬ ಹಾಗೂ, ಶೋಭಾರಹಿತವೆಂಬ ಎರಡೂ ಕಾರಣಗಳಿಂದಾಗಿ ಅದನ್ನೊಂದು ಅಲಂಕಾರವೆಂದು ಪರಿಗಣಿಸಿಲ್ಲ. ಅವರು ನೀಡಿರುವ ಉದಾಹರಣೆ

ಪದ್ಮೇಂದು ಭೃಂಗಮಾತಂಗ ಪುಂಸ್ಕೋಕಿಲ ಕಲಾಪಿನಃ
ವಕ್ತ್ರ ಕಾಂತೀಕ್ಷಣ ಗತಿಸ್ವರಕೇಶೈಸ್ತ್ವಯಾ ಜಿತಾ [೨೧೫][1]

ಕಮಲ, ಚಂದ್ರ ದುಂಬಿ
ಗಜ ಕೋಗಿಲೆ ನವಿಲುಗಳನು
ನಿನ್ನ ಮೊಗ, ಕಾಂತಿ, ಕಣ್ಣು
ಗಮನ, ದನಿ, ಕೇಶಗಳಿಂದ ಜಯಿಸಿರುವೆ [೨೧೫]

ಸ್ವರಚಿತವಾದ ಈ ಲಕ್ಷ್ಯದಲ್ಲಿ ಯಾವುದೇ 'ಭಣಿತಿವೈಚಿತ್ರ್ಯ'ವಿಲ್ಲದಿರುವುದರಿಂದ ಕಾಂತಿಹೀನವಾಗಿದೆ; ನೀರಸವಾಗಿದ್ದು, ಸೌಂದರ್ಯ ಹೀನವಾಗಿದೆ. ಇಲ್ಲಿ ವೈಚಿತ್ರ್ಯವಿದೆ ಎಂದು ಪ್ರತಿಪಾದಿಸುವವರೂ, ಆ ವೈಚಿತ್ರ್ಯವು ಸಾಮ್ಯ ಅಥವಾ ವ್ಯತಿರೇಕದಿಂದ ಸಾಧ್ಯವಾಗಿದೆ ಎಂದು ಆರೋಪಿಸುವುದಿಲ್ಲ; ಆದರೆ ಸಮಾನ ಸಂಖ್ಯತ್ವವೇ ವಿಚ್ಛಿತ್ತಿಗೆ (ಸೌಂದರ್ಯಕ್ಕೆ) ಮೂಲ ಕಾರಣ ಎಂದು ಘೋಷಿಸುತ್ತಾರೆ. ಕೇವಲ ಸಮಾನಸಂಖ್ಯಾತ್ವವೇ ವೈಚಿತ್ರ್ಯವೆಂದು ಪರಿಗಣಿಸಬೇಕೆಂದಾದರೆ ಅಂತ ಹೇಳಿಗೆ "ಯಥಾಸಂಖ್ಯಮನುದೇಶಃ ಸಮಾನಮ್" ಎಂಬ ಪಾಣಿನಿ ಸೂತ್ರದ ಉದಾಹರಣೆಗಳೆಲ್ಲವೂ ಅಲಂಕಾರಗಳು ಎಂಬ ರೀತಿಯ ಹೇಳಿಕೆಗಿಂತ ಭಿನ್ನವೇನಲ್ಲ. ಆದರೆ ಇಂಥ ಹೇಳಿಕೆ ಮೇಲುನೋಟಕ್ಕೆ ಅಸಂಗತ. ಅದೇ ಪ್ರಾಚೀನ ಆಲಂಕಾರಿಕನು, - "ಕೆಲವರು ಆಶೀರ್ವಚನವನ್ನು ಅಲಂಕಾರವೆಂದು ಪರಿಗಣಿಸುತ್ತಾರೆಂದು ಹೇಳುತ್ತಾನೆ. ಆದರೆ ನಾವು ಈ ಅಲಂಕಾರದ ಲಕ್ಷಣ, ಉದಾಹರಣೆಗಳನ್ನು ನೀಡಲು ಹೋಗುವುದಿಲ್ಲ. ಅಲ್ಲಿ ಆಶಂಸನೀಯ ಅರ್ಥವೇ ಮುಖ್ಯರೂಪದಿಂದ ವರ್ಣನೆಯ ವಸ್ತುವಾಗಿವುದರಿಂದ ಅದೇ ಅಲಂಕಾರ್ಯವಾಗುತ್ತದೆ. ಆದ್ದರಿಂದ 'ಪ್ರೇಯಸ್' ಅನ್ನು ಅಲಂಕಾರವೆಂದು ಪರಿಗಣಿಸಲು ಇರುವ ಆಕ್ಷೇಪಗಳು ಆಶೀಗೂ ಅಷ್ಟೇ ಪ್ರಬಲವಾಗಿ ಅನ್ವಯಿಸುತ್ತವೆ.

ನ ಪ್ರೇಯಸೋ ವಿರುದ್ಧಃ ಸ್ಯಾದಲಂಕಾರಾಂತರೇ ಸತಿ|
ಸಂಸೃಷ್ಟಿ ಸಂಕರೌ ಸ್ಯಾತಾಮನ್ಯತ್ರಾದರ್ಶನಾದಪಿ [೨೧೬]

ಇದು ಅಂತರ ಶ್ಲೋಕ

ಆಶೀಯು ಸ್ವತಂತ್ರವಾದ ಅಲಂಕಾರವೆಂದಾದರೆ, ಅದು ಪ್ರೇಯಸ್‌ಗಿಂತ ಭಿನ್ನವಲ್ಲ. ಇತರೆ ಅಲಂಕಾರಗಳೊಂದಿಗೆ ಅದು ಸಂಸೃಷ್ಟಿ ಸಂಕರ ಅಲಂಕಾರಗಳ ಸಾಧ್ಯತೆಗಳನ್ನೂ ಒಳಗೊಳ್ಳಬೇಕಾಗುತ್ತದೆ. ಅದು ಇತರೆ ಉದಾಹರಣೆಗಳಲ್ಲೂ ಇರಬೇಕಾಗುತ್ತದೆ [೨೧೬]

ವಿಶೇಶೋಕ್ತಿಯೂ ಈಗಾಗಲೇ ಹೇಳಲಾದ ಅಲಂಕಾರಗಳಲ್ಲಿ ಅಂತರ್ಭಾವವಾಗುವುದರಿಂದ, ಹಾಗೂ ಅದೂ ಅಲಂಕಾರ್ಯವಾಗಿ ಬಿಡುವಂಥ ಸ್ವರೂಪದ್ದಾಗಿರುವುದರಿಂದ, ಅದನ್ನು ಪ್ರತ್ಯೇಕ ಅಲಂಕಾರವೆಂದು ಪರಿಗಣಿಸುವುದು ಯುಕ್ತಿ ಸಂಗತವಲ್ಲ. ಅದಕ್ಕಿ ಉದಾಹರಣೆಯಾಗಿ ನೀಡಿರುವುದು.

ಸ ಏಕಸ್ತ್ರೀಣಿ ಜಯತಿ ಜಗಂತಿ ಕುಸುಮಾಯುಧಃ|
ಹರತಾಪಿ ತನುಂ ಯಸ್ಯ ಶಂಭುನಾ ನ ಹೃತಂ ಬಲಮ್ [೨೧೭]

ಕುಸುಮ ಬಾಣನೊಬ್ಬನೆ
ಮೂಜಗವ ಗೆಲುವನು
ಅವನ ತನುವ ಕಳೆದ ಶಿವನಿಗು
ಅವನ ಬಲವ ಕಳೆಯಲಾಗಲಿಲ್ಲವು! [೨೧೭]

ಇತರೆ ವಿಜಯಿಗಳಿಗಿಂತ ವಿಭಿನ್ನವಾದ ರೀತಿಯಲ್ಲಿ ಸಕಲ ಲೋಕವನ್ನು ಗೆಲ್ಲಬಲ್ಲ ಮನ್ಮಥನ ವಿಶಿಷ್ಟ ಸ್ವಭಾವದ ವರ್ಣನೆಯೇ ಇಲ್ಲಿಯ ವಾಕ್ಯಾರ್ಥ [ಆದ್ದರಿಂದ ಇದನ್ನು ವ್ಯತಿರೇಕಾಲಂಕಾರದಲ್ಲಿ ವರ್ಗೀಕರಿಸಬಹುದು]

ಅದೇ ರೀತಿಯಲ್ಲಿ ಸೂಕ್ಷ್ಮ 'ಲೇಶ' ಮತ್ತು 'ಹೇತು'ಗಳು ಪ್ರತ್ಯೇಕ ಅಲಂಕಾರಗಳಲ್ಲ. ಭಾಮಹನೇ ಹೇಳಿರುವಂತೆ

ಹೇತುಶ್ಚ ಸೂಕ್ಷ್ಮೋ ಲೇಶೋऽಥ ನಾಲಂಕಾರತಯಾ ಮತಃ|
ಸಮುದಾಯಾಭಿಧೇಯಸ್ಯ ವಕ್ರೋಕ್ತ್ಯನಭಿಧಾನತಃ [೨೧೮][1]

ಕಾರಣ, ಸೂಕ್ಷ್ಮ, ಲೇಶ ಇವೊಂದನ್ನೂ ನಾವು ಅಲಂಕಾರವೆನ್ನುವುದಿಲ್ಲ. ಇಡಿಯ ವಾಕ್ಯಾರ್ಥದಲ್ಲಿ ವಕ್ರೋಕ್ತಿ ಅಥವಾ ಅತಿಶಯವನ್ನು ತರುವ ಸಾಮರ್ಥ್ಯವಿಲ್ಲದಿರುವುದರಿಂದ. "ಸೂಕ್ಷ್ಮ"ಕ್ಕೆ ನೀಡಿರುವ ಉದಾಹರಣೆ.

ಸಂಕೇತಕಾಲ ಮನಸಂ ವಿಟಂ ಜ್ಞಾತ್ವಾ ವಿದಗ್ಧಯಾ|
ಹಸನ್ನೇತ್ರಾರ್ಪಿತಾಕೂತಂ ಲೀಲಾ ಪದ್ಮಂ ನಿಮೀಲಿತಂ [೨೧೯][2]

ಸಂಕೇತ ಸಮಯವನು ತಿಳಿಯಲಿಚ್ಛಿಪ
ವಿಟನನರಿತ ಚದುರೆಯು

1. ಭಾಮಹನ ಕಾವ್ಯಾಲಂಕಾರ -2-86 (ಡಾ. ಕೆ. ಕೃಷ್ಣಮೂರ್ತಿ)
2. ಧ್ವನ್ಯಾಲೋಕ ಪುಟ 98 [ಕನ್ನಡ ಧ್ವನ್ಯಾಲೋಕ ಮತ್ತು ಲೋಚನಸಾರ]

ನಗುವ ಕಣ್ಣೊಳೆ ತನ್ನ ಮನದಿಂಗಿತವ
ಸೂಚಿಸುತೆ ಆಟದ ಕಮಲವನು ಮುಚ್ಚಿದಳು [೨೧೯]

ಇಲ್ಲಿಯ ವರ್ಣನೀಯ ವಸ್ತು ವಾಸ್ತವವಾಗಿ "ಸೂಕ್ಷ್ಮ". ಹಾಗಾಗಿ ಅದು ಅಲಂಕರಣವಾಗಲು ಸಾಧ್ಯವಿಲ್ಲ. ಅದು ಏಕೆ ಎಂದು ಕೇಳಿದರೆ, ಇಲ್ಲಿ ಮುಖ್ಯ ವಕ್ತ್ರವ್ಯಾರ್ಥವು ಆ ರೀತಿಯಲ್ಲಿ ಯುಕ್ತಿಯಿಂದ ಪರೋಕ್ಷವಾಗಿ ಸೂಕ್ಷ್ಮವಾಗಿ ಪ್ರತಿಪಾದಿತವಾಗಿದೆ. ಲೇಶಕ್ಕೆ ಕೊಟ್ಟಿರುವ ಉದಾಹರಣೆ

ರಾಜ ಕನ್ಯಾನುರಕ್ತಂ ಮಾಂ ರೋಮೋದ್ಭೇದೇನ ರಕ್ಷಕಾಃ|
ಅವಗಚ್ಛೇಯುರಾ ಜ್ಞಾತಮಹೋ ಶೀತಾನಿಲಂ ವನಮ್ [೨೨೦]

ನನ್ನ ಪುಲಕವ ನೆರೆಕಂಡು
ರಾಜಪುತ್ರಿಯೊಳೆನ್ನನುರಕ್ತಿಯನು
ರಕ್ಷಕರು ಅರಿಯಬಹುದು
ತಿಳಿದೆನಹ ತೋಟದೊಳು
ತಂಗಾಳಿ ತೀಡುತಿಹುದ! [೨೨೦] ದಂಡಿ II - 266

ಇಲ್ಲಿಯೂ ಅದೇ ಸ್ಥಿತಿ. ವರ್ಣನೀಯ ವಸ್ತುವೇ ಹೇಗೆ ಅಲಂಕರಣವಾಗಬಲ್ಲುದು ಎಂಬುದೇ ಪ್ರಶ್ನೆ. ಶಾಸ್ತ್ರಕಾರರ ಚಿರಪರಿಚಿತ ಉಕ್ತಿ ಎಂದರೆ ಯಾವುದು ಶಬ್ದಾರ್ಥವೋ ಅದೇ ಶಬ್ದವಾಗುತ್ತದೆ.

ಹೇತುವಿಗೆ ಉದಾಹರಣೆ

ಅಯಮಾಂದೋಲಿತ ಪ್ರೌಢ ಚಂದನದ್ರುಮ ಪಲ್ಲವಃ|
ಉತ್ಪಾದಯತಿ ಸರ್ವಸ್ಯ ಪ್ರೀತಿಂ ಮಲಯ ಮಾರುತಃ [೨೨೧]

(ಕಾವ್ಯಾದರ್ಶ 2-236)

ಮಲಯ ಮಾರುತವು
ಸಿರಿಗಂಧದ ತರುಗಳ ತಳಿರನು
ತೂಗಾಡಿಸುತೆಲ್ಲರಿಗಿದೊ
ಸಂತಸವನು ಬೀರುತಿದೆ

ಅದೇ ರೀತಿಯಲ್ಲಿ ಉಪಮಾರೂಪಕವೂ ಅಲಂಕಾರವಲ್ಲ ಉದಾ :

ಸಮಗ್ರ ಗಗನಾಯಾಮಮಾನದಂಡೋ ರಥಾಂಗಿನಃ
ಪಾದೋ ಜಯತಿ ಸಿದ್ಧಸ್ತ್ರೀ ಮುಖೇಂದು ನವದರ್ಪಣಃ [೨೨೨]

[ಭಾಮಹ - 3-36]

ಆಗಸದ ಬಲು ಬಿತ್ತರವನಳೆವ
ಮಾನದಂಡಕೆ ಮತ್ತಾ
ಸಿದ್ಧಲಲನೆಯರ ಮುಖಚಂದ್ರಮನ
ಬಿಂಬಿಪ ನವದರ್ಪಣಕೆ
ಆ ಹರಿಪಾದಕೆ ಜಯಮಕ್ಕೆ [೨೨೨]

ರಸವದಲಂಕಾರದ ಹಾಗೆ ಇಲ್ಲಿಯೂ ವಾಚ್ಯ ವಾಚಕಗಳ ನಡುವೆ, ಉಪಮಾರೂಪಕ ಎಂಬ ಆ ಹೆಸರಿನಲ್ಲೇ ಒಂದಕ್ಕೊಂದಕ್ಕೆ ಸಂಗತಿ ಇಲ್ಲ. ಉಪಮಾ-ರೂಪಕ ಎಂಬುದನ್ನು ನಾವು ವಿಗ್ರಹವಾಕ್ಯ ಮಾಡಿದರೆ, ದ್ವಂದ್ವ ಸಮಾಸವಾಗಿಯೋ ಇಲ್ಲ ವಿಶೇಷಣ ಸಮಾಸವಾಗಿಯೋ ತಿಳಿಯಬೇಕು. ಅಂದರೆ, ಉಪಮಾರೂಪಕವಾಗಿ ದ್ವಂದ್ವ ಸಮಾಸದ ಹಾಗೆ ವಿಗ್ರಹವಾಕ್ಯ ಮಾಡಿದರೆ ವಾಕ್ಯದ ಒಂದು ಭಾಗದಲ್ಲಿ ಉಪಮೆ ಇರುತ್ತದೆ ಎಂದು ಅರ್ಥ. ಅವರೆಡರ ಈ ಸಹ ಅಸ್ತಿತ್ವ ವಿದ್ವಾಕ್ಷಣಕ್ಕೆ ಅವೆರಡೂ ಒಂದಾಗಿ ಬಿಡಬೇಕೆಂದಿಲ್ಲ. ಜೊತೆ ಜೊತೆಯಲ್ಲಿರುತ್ತ ಪ್ರತಿಯೊಂದೂ ತನ್ನದೇ ಆದ ರೀತಿಯಲ್ಲಿ ರಮಣೀಯತೆಯಿಂದ ಕಂಗೊಳಿಸುವುದರಿಂದ ಅವು ಪರಸ್ಪರಾವಲಂಬಿಗಳೆಂಬ ಮಾತೇ ಇಲ್ಲ. ಇದೊಂದೇ ಸಂಗತಿ "ಸಮುದಾಯಾತ್ಮಕ ವಿಶೇಷ್ಯಕ್ಕೆ ಅವೆರಡೂ ಸಂಯುಕ್ತ ವಿಶೇಷಣಗಳಾಗಿ ಬರುತ್ತವೆಂಬುದನ್ನು ಸಮರ್ಥಿಸುತ್ತದೆ. ಅಂಥ ಸಮುದಾಯಾತ್ಮಕ ವಿಶೇಷ್ಯವಾವುದೂ ಇಲ್ಲಿ ಇಲ್ಲದಿರುವುದರಿಂದ ದ್ವಂದ್ವ ಸಮಾಸವಾಗಿ ಅದನ್ನು ತಿಳಿಯಬಹುದೆಂಬ ಇನ್ನೊಂದು ಪರ್ಯಾಯವು ಯುಕ್ತಿಯುಕ್ತವೆನಿಸುವುದಿಲ್ಲ. ಒಂದು ವೇಳೆ ಅದನ್ನು ವಿಶೇಷಣ ಸಮಾಸವೆಂದು ಭಾವಿಸಿದರೂ ಅವೆರಡೂ ಇಡೀ ವಾಕ್ಯದಲ್ಲಿ ಇಲ್ಲವೆ ವಾಕ್ಯದ ಕೆಲವೊಂದು ಭಾಗದಲ್ಲಿ ಜೊತೆ ಜೊತೆಯಾಗಿ ಇರುತ್ತವೆಂದು ಒಪ್ಪಬೇಕಾಗುತ್ತದೆ. ಬೆಳಕು ಮತ್ತು ನೆರಳಿನ ಹಾಗೆ ಪರಸ್ಪರ ತದ್ವಿರುದ್ಧವಾಗಿರುವ ಎರಡು ವಸ್ತುಗಳು ಹಾಗೆ ಒಂದೇ ಕಡೆ ಜೊತೆ ಜೊತೆಯಾಗಿ ಇರುತ್ತವೆಂಬುದು ಅತಾರ್ಕಿಕ. ಈ ಎರಡು ಪರ್ಯಾಯಗಳಲ್ಲಿಯೂ ಯಾವುದಾದರೊಂದು ಇರುತ್ತದೆಂದು ಹೇಳಿದರೆ, ಆಗ ಸ್ವತಂತ್ರ ವಾಚಕಗಳಿಂದ ವ್ಯಕ್ತವಾಗುವ ಅವುಗಳ ಸ್ಪಷ್ಟ ವೈಶಿಷ್ಟ್ಯವನ್ನು ಗುರುತಿಸಬಹುದು. ಹಾಗೂ ಆಗ ಇನ್ನೊಂದರ ಅಸ್ತಿತ್ವವನ್ನು ಅಲ್ಲಗಳೆಯುವ ಪ್ರಸಕ್ತಿಯೇ ಇರುವುದಿಲ್ಲ. ಹೀಗೆ ಅದು ಎರಡು ಅಲಂಕಾರಗಳು ಪರಸ್ಪರ ಅವಲಂಬಿತವೆಂಬ ತೀರ್ಮಾನಕ್ಕೆ ನಮ್ಮನ್ನು ಕೊಂಡೊಯ್ಯುವುದಿಲ್ಲವಾಗಿ ಇಡಿಯಾದ ಅರ್ಥಕೊಡುವ ಸಮುದಾಯಾತ್ಮಕ ವಿಶೇಷಣ ಸಮಾಸವೆಂದೂ ಅದನ್ನು ಪರಿಗಣಿಸಲು ಸಾಧ್ಯವಿಲ್ಲ. ಅವೆರಡರಲ್ಲಿ ಯಾವುದೊಂದನ್ನೂ ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲವಾದ್ದರಿಂದ, ಇನ್ನು ನಮಗುಳಿದಿರುವ ಏಕೈಕ ಮಾರ್ಗವೆಂದರೆ ಆ ಉದಾಹರಣೆಯನ್ನು ಎರಡು ಅಲಂಕಾರಗಳ ಸಂಕರವೆಂದು ಭಾವಿಸುವುದಷ್ಟೆ.

ಪ್ರಸ್ತುತ ಉದಾಹರಣೆಯಲ್ಲಿ ಎರಡು ಅಲಂಕಾರಗಳು ಮಿಳಿತವಾಗಿರುವಲ್ಲಿ ಸಂಕರಾಲಂಕಾರವಾಗಿರುವ ಸಾಧ್ಯತೆ ಇದೆ ಎಂದು ವಿವರಿಸಬಹುದಾದರೂ, ಸರಿಯಾಗಿ ಹೇಳಬೇಕೆಂದರೆ, ಎರಡು

ಅಲಂಕಾರಗಳ ನಡುವಿನ ಸಂದೇಹದ ತೂಗುಯ್ಯಾಲೆಯು ಅಂದರೆ ಪ್ರಧಾನ ಅಲಂಕಾರ ಯಾವುದೆಂದು ಕರಾರುವಾಕ್ಕಾಗಿ ನಿರ್ಧರಿಸುವಲ್ಲಿನ ನಮ್ಮ ಅಸಾಮರ್ಥ್ಯವು - ಖಂಡಿತವಾಗಿಯೂ ನಮ್ಮನ್ನು ಗೊಂದಲದಲ್ಲಿ ಕೆಡವುತ್ತದೆ. ಎರಡರ ಉಪಸ್ಥಿತಿಯನ್ನು ಒಪ್ಪಿದರೂ, ಅದರಿಂದಲೂ ಪ್ರತೀಯಮಾನ ರೂಪದಲ್ಲಿ ನಾವು ತಿಳಿಯುವುದು ಅನಿಶ್ಚಿತವೇ ಆಗಿರುತ್ತದೆ. ಆದ್ದರಿಂದ ಕಾವ್ಯದಲ್ಲಿ ವಾಕ್ಯ ವಕ್ರತೆಯ ಸಾರಸರ್ವಸ್ವ ಇರುವುದೇ ಸ್ಪಷ್ಟವಾಗಿ ಪ್ರತೀಯಮಾನವಾಗುವ ಉಳಿದೆರಡು ಪ್ರಕಾರಗಳಿಂದ ಹಾಗೂ ಮೇಲಿನಂತೆ ಸಂದೇಹಪೂರ್ವಕವಾಗಿ ಪ್ರತೀಯಮಾನವಾಗುವ ಸಂಕರ ಅಲಂಕಾರದಿಂದ ವಿಭಿನ್ನವಾದ ತೃತೀಯ ಪ್ರಕಾರದ ಅಲಂಕಾರಗಳ ರಮಣೀಯ ಪ್ರಯೋಗದಲ್ಲಿ. ಈಗ ಕಾವ್ಯದ ಸಮುದಾಯಾತ್ಮಸಮುರಾಯಾತ್ಮಕ ವಾಕ್ಯವಕ್ರತೆಯ ಸ್ವರೂಪವನ್ನು ಸೂತ್ರೀಕರಿಸಲಾಗುವುದು.

ಲಾವಣ್ಯಾದಿ ಗುಣೋಜ್ವಲಾ ಪ್ರತಿಪದನ್ಯಾಸೈರ್ವಿಲಾಸಾಂಚಿತಾ
ವಿಚ್ಛಿತ್ಯಾ ರಚಿತೈರ್ವಿಭೂಷಣ ಭರೈರಲ್ಪೈರ್ಮನೋಹಾರಿಣೀ
ಅತ್ಯರ್ಥ ರಸವತ್ತ ಯಾರ್ದ್ರ ಹೃದಯಾ[ಶಕ್ನೋತ್ಯುದಾರಾ ಭಿಧಾ
ವಾಗ್ವಕ್ರಾ ಸುಕವೇಸ್ತ ಥೈವಚ ಮನೋ ಹರ್ತುಂ ಯಥಾನಾಯಿಕಾ [64]

ಸತ್ಕವಿ ರಚಿತವಾದ ರಮಣೀಯ ಮಾತುಗಳು ನಾಯಿಕೆಯ ಹಾಗೆ ಸಹೃದಯರ ಮನಸ್ಸನ್ನು ವಶೀಕರಣಗೊಳಿಸುವ ಸಾಮರ್ಥ್ಯವನ್ನು ಹೊಂದಿವೆ. ಕಾವ್ಯವಾಣಿ ಮತ್ತು ನಾಯಿಕೆಯರು (ಪ್ರೇಮಿನಿಯರು) ಈ ಕೆಲವು ಸಮಾನ ಗುಣಗಳನ್ನು ಹೊಂದಿದ್ದಾರೆ. ಅವುಗಳೆಂದರೆ ಲಾವಣ್ಯಾದಿ ಗುಣಗಳಿಂದ ಉಜ್ವಲವಾದ ಪ್ರತಿಯೊಂದು ಪದವೂ(ಹೆಜ್ಜೆ) ಹಾವ ಭಾವ ವಿಲಾಸಗಳಿಂದ ಕೂಡಿದ, ಅಲ್ಪವಾದ ಆದರೆ, ಮನೋಹರವಾದ ಆಭರಣಗಳಿಂದ ಸುಂದರವಾಗಿ ಅಲಂಕೃತಗೊಂಡ, ಅತ್ಯಂತ ರಸಯುಕ್ತವಾದ(ಪ್ರೇಮದಿಂದ ಕೂಡಿದ) ಕಾರಣದಿಂದ ಆರ್ದ್ರ ಹೃದಯವುಳ್ಳ ನಾಯಿಕೆ(ಕಾವ್ಯವಾಣಿ) ಸಹೃದಯರ ಮನಸ್ಸನ್ನು ಅಪಹರಿಸಬಲ್ಲಳು [64]

[ಇದೀಗ ಗ್ರಂಥ ಕರ್ತೃ- ಆ ರೀತಿಯಲ್ಲಿ ನಾನಾ ವಿಧವಾಗಿ ಅಲಂಕರಿಸಲ್ಪಟ್ಟ ವಾಕ್ಯದ ಸೌಂದರ್ಯಕ್ಕೆ ಒಂದು ಶ್ರೇಷ್ಠ ಉಪಮಾನ ನೀಡುತ್ತಿದ್ದಾನೆ]. ವಾಕ್ಯವು ಅನೇಕ ಅಲಂಕರಣ ಸಾಮಗ್ರಿಗಳ ಸಮುದಾಯ. ನಾಯಿಕೆಯರು (ಪ್ರೇಮಿನಿಯರು) ಸೌಂದರ್ಯದಿಂದ ಪ್ರಿಯರ ಮನಸ್ಸನ್ನು ಸೂರೆಗೊಳ್ಳುವ ಹಾಗೆ ಕಾವ್ಯದ ವಾಕ್ಯವು ರಸಭಾವಗಳ ಆಧಿಕ್ಯದಿಂದ ಸಹೃದಯರ ಮನಸ್ಸನ್ನು ಸೂರೆಗೊಳ್ಳಲು ಶಕ್ತವಾಗುತ್ತದೆ. ಅಲ್ಲದೆ ಲಾವಣ್ಯಾದಿ ಉಜ್ವಲ ಗುಣಗಳಿಂದ, ಕಾವ್ಯವು ಕಾಂತಿಯುಕ್ತವಾಗುತ್ತದೆ. ಕಾವ್ಯವು ನಾಮ, ಕ್ರಿಯೆ, ಮುಂತಾದ ಪದಗಳ ಔಚಿತ್ಯಪೂರ್ಣ ಪ್ರಯೋಗದಿಂದ ಮನೋಹರವಾಗುತ್ತದೆ. ಅಲ್ಲದೆ ಕಾವ್ಯವು ಉಪಮೆಯೇ ಮೊದಲಾದ ಅಲಂಕಾರಗಳ ಪರಿಮಿತ ಬಳಕೆಯಿಂದ ಶೋಭಾತಿಶಯತೆಯನ್ನು ಪಡೆದುಕೊಂಡು ಸಹೃದಯರ ಹೃದಯಸಂವೇದ್ಯವಾಗುತ್ತದೆ. ಹಾಗೂ ಅಂಥ ವಾಕ್ಯವು ಔದಾರ್ಯ ಗುಣಯುಕ್ತವಾಗಿರುತ್ತದೆ. ಅದೇ ರೀತಿಯಲ್ಲಿ ಗಾಢಪ್ರೀತಿ ಮತ್ತು ಆರ್ದ್ರ ಹೃದಯದ ಪ್ರಿಯತಮೆಯು ಅತ್ಯಂತ ವಿಶಿಷ್ಟವೂ

ಅಪೂರ್ವವೂ ಆದ ಸೌಂದರ್ಯದಿಂದ ಮನಸೆಳೆಯುತ್ತಾಳೆ.

ನಾಯಿಕೆಯ ಸಂದರ್ಭದಲ್ಲಿ ಲಾವಣ್ಯಾದಿ ಗುಣಗಳೆಂದರೆ ಅವಳ ಸಹಜ ಸೌಂದರ್ಯ. ಪದನ್ಯಾಸವೆಂದರೆ ಅವಳ ನಡಿಗೆಯ ಭಂಗಿಗೆ ಅನ್ವಯಿಸುತ್ತದೆ. ವಿಲಾಸಲವೆಂದರೆ ಅವಳ ಮುಖ ಲಕ್ಷಣಗಳಿಗೆ ಅನ್ವಯಿಸುತ್ತದೆ. ಕಾವ್ಯವಾಣಿಗೆ ಸಂಬಂಧಿಸಿದಂತೆ, ವಿಚ್ಛಿತ್ತಿ ಎದರೆ, ಕವಿಯ ವಿದಗ್ಧತೆ (ಕಾವ್ಯಕೌಶಲ) 'ವಾಕ್' ಎಂದರೆ ಇಡೀ ವಾಕ್ಯ. ಭೂಷಣಗಳೆಂದರೆ, ಕಾವ್ಯಾಲಂಕಾರ ಗಳೆಂದು. ಅಭಿಧಾ ಎಂದರೆ ಕಾವ್ಯಾಭಿವ್ಯಕ್ತಿ ಮತ್ತು ಕಾವ್ಯರಚನಾ ಸಾಮರ್ಥ್ಯ ಎಂದು.

* * *

ಇಲ್ಲಿಗೆ ಶ್ರೀರಾಜಾನಕ ಕುಂತಕನು ವಿರಚಿಸಿದ
'ವಕ್ರೋಕ್ತಿ ಜೀವಿತ'ವೆಂಬ ಕಾವ್ಯಾಲಂಕಾರ
ಗ್ರಂಥದಲ್ಲಿ ಮೂರನೇ ಉನ್ಮೇಷ ಮುಗಿಯಿತು

ಕನ್ನಡ ವಕ್ರೋಕ್ತಿ ಜೀವಿತ

ನಾಲ್ಕನೆಯ ಉನ್ಮೇಷ

ಹೀಗೆ ಸಮಸ್ತ ಸಾಹಿತ್ಯ ಕಲೆಯ ಸರ್ವಸ್ವವೆನಿಸಿದ ವಾಕ್ಯವಕ್ರತೆಯನ್ನು ಪ್ರತಿಪಾದಿಸಿದ ನಂತರ, ಇದೀಗ ಪ್ರಕರಣ ವಕ್ರತೆಯನ್ನು ಪ್ರಾರಂಭಿಸುತ್ತೇವೆ.

ಯತ್ರ ನಿರ್ಯಂತ್ರಣೋತ್ಸಾಹ ಪರಿಸ್ಪಂದೋಪಶೋಭಿನೀ|
**ಪ್ರವೃತ್ತಿರ್ವ್ಯವಹರ್ತೃಣಾಂ ಸ್ವಾಶಯೋಲ್ಲೇಖ ಶಾಲಿನೀ [1]*

ಅಪ್ಯಾಮೂಲಾದನಾಶಂಕ್ಯ ಸಮುತ್ಥಾನೇ ಮನೋರಥೇ
ಕಾಪ್ಯುನ್ಮೀಲತಿ ನಿಃಸೀಮಾ ಸಾ ಪ್ರಬಂಧಾಂಶ ವಕ್ರತಾ [2]

ಅಪರಿಮಿತವಾದ ಉತ್ಸಾಹದ ಸೌಂದರ್ಯದಿಂದ ಶೋಭಿತವಾದ ತಮ್ಮ ಭಾವನೆಗಳಿಗೆ ಅಭಿವ್ಯಕ್ತಿ ಕೊಡುವ ಹಾಗೂ ತಮ್ಮ ಆಶಯಗಳನ್ನು ಪ್ರಬಲವಾಗಿ ಅಭಿವ್ಯಕ್ತಿಸುವ ಪ್ರವೃತ್ತಿ ವ್ಯವಹರಿಸುವವರಲ್ಲಿ (ಪಾತ್ರಗಳಲ್ಲಿ) ಕಂಡು ಬಂದಾಗ [1]

ಪಾತ್ರಗಳ ಮನೋಭೀಷ್ಟಗಳು ಮೊದಲಿನಿಂದ ಕಡೆಯವರೆಗೂ ನಿಗೂಢವಾಗಿಯೇ ಉಳಿದುಬಿಟ್ಟಾಗ [ಅಂದರೆ ಕೊನೆಯವರೆಗೂ ಕಾತರ ನಿರೀಕ್ಷೆಗಳು ಶಾಶ್ವತವಾಗಿ ಉಳಿದಿರುತ್ತವೆ] ಈ ಎಲ್ಲದರ ಹಿಂದಿರುವ ವಿಶಿಷ್ಟವೂ, ಅಸೀಮವೂ ಆದ ಕಾವ್ಯ ಕೌಶಲವು ಪ್ರಕರಣ ವಕ್ರತೆ ಎನಿಸುತ್ತದೆ [2]

ಪ್ರಕರಣವಕ್ರತೆಯು ಅಸೀಮವಾದುದು. ಅಂದರೆ, ಅದಕ್ಕೆ ಮಿತಿ ಇಲ್ಲ. ಕ್ರಿಯೆಯಲ್ಲಿ ತೊಡಗಿದ ಪಾತ್ರಗಳು (ವ್ಯವಹಾರಿಗಳು) ಅತ್ಯುತ್ತಮವಾದ ರೀತಿಯಲ್ಲಿ ಚಿತ್ರಿತಗೊಂಡಾಗ ಅದು (ಪ್ರಕರಣ ವಕ್ರತೆ)ಪ್ರಸ್ಫುಟಿತಗೊಳ್ಳುತ್ತದೆ. ಈ ಕೌಶಲವು ಅತ್ಯಂತ ಲೋಕೋತ್ತರವಾದದ್ದು. ಪಾತ್ರಗಳ ಕ್ರಿಯೆಗಳನ್ನು ಅಪರಿಮಿತವಾದ ಉತ್ಸಾಹದಿಂದ ಪ್ರೇರಿತವಾದಂತೆ ಚಿತ್ರಿಸುವುದರ ಮೂಲಕ ಅವನ್ನು ಶೋಭಾಯುಕ್ತವಾಗಿ ಮಾಡಲಾಗುತ್ತದೆ. ಇದರ ಪರಿಣಾಮವಾಗಿ ಅವರ ಪ್ರಯತ್ನವು ಅವರ ಆಂತರಂಗಿಕ ಗುಣ ಅಥವಾ ಸ್ವಭಾವವನ್ನು (ಆಶಯ) ಅಭಿವ್ಯಕ್ತಿಸುತ್ತದೆ. ಇದಕ್ಕಿರುವ ಒಂದು ನಿರ್ಬಂಧವೆಂದರೆ, ಕಥೆಯ ಪ್ರಾರಂಭದಿಂದ ಕಡೆಯವರೆಗೂ ಕುತೂಹಲ ನಿರೀಕ್ಷೆಗಳು ಅಬಾಧಿತವಾಗಿ ಉಳಿಯಬೇಕು. ಕಥೆಯ ಅಂತಿಮ ಪರಿಣಾಮವನ್ನು ಅದು ವಾಸ್ತವವಾಗಿ ಹೊರ ಬರುವವರೆಗೂ ಯಾರೂ ಗುರುತು ಮಾಡಿ ತೋರಿಸುವಂತಿರಬಾರದು.

---

* ವ್ಯಾವೃತ್ತಿ (S.K. De) 1 ಅಪ್ಯಾ (S.K. Dey)

ಇದರ ಮಥಿತಾರ್ಥವಿಷ್ಟೇ: ತಮ್ಮ ಉದಾತ್ತತೆಯಿಂದ ಅತ್ಯುನ್ನತವಾದದ್ದನ್ನು ಸಾಧಿಸುವ ಮಹಾನ್ ನಾಯಕರು, ಭೂಮಿಕೆಯಲ್ಲಿದ್ದಾಗ ಅವರ ಅಂತರಾಳದ ಆಳದ ಮನೋರಥವು ಕಥೆಯ ಮಧ್ಯದಲ್ಲಿ ವ್ಯಕ್ತವಾಗದೆ, ನಿಗೂಢವಾಗಿಯೇ ಉಳಿಯುವ ರೀತಿಯಲ್ಲಿ ಕುತೂಹಲ ನಿರೀಕ್ಷೆಗಳನ್ನು ಕಾಯ್ದುಕೊಳ್ಳಬೇಕು. ಅವರ ಅಂಥ ಕ್ರಿಯೆಗಳ ಸಮೃದ್ಧಿಯಿಂದ ಸಾಹಿತ್ಯಿಕ ಆಸಕ್ತಿ ಹಾಗೂ ಸೌಂದರ್ಯ ಎರಡೂ ಅಧಿಕವಾಗುತ್ತವೆ. ಇದು ಕೇವಲ ಪ್ರಕರಣ ಸೌಂದರ್ಯಕ್ಕಷ್ಟೇ ಅಲ್ಲದೆ, ಪ್ರಬಂಧ ಸೌಂದರ್ಯಕ್ಕೂ ಕಾರಣವಾಗುತ್ತದೆ.

ಉದಾಹರಣೆಗೆ "ಅಭಿಜ್ಞಾನ" ಜಾನಕಿ ಎಂಬ ನಾಟಕದ ಮೂರನೇ ಅಂಕವಾದ "ಸೇತು ಬಂಧ"ದಲ್ಲಿ ವಾನರ ಮುಖ್ಯರು ಸಮುದ್ರವನ್ನು ಕಂಡ ಕೂಡಲೇ ಅದಕ್ಕೆ ಸೇತುವೆಯನ್ನು ಕಟ್ಟುವ ಉತ್ಸಾಹ ತೋರುತ್ತಾರೆ; ಆ ಸಮಯದಲ್ಲಿ ರಾಮನ ದಿವ್ಯಾಸ್ತ್ರಗಳ ಅಸಾಮಾನ್ಯ ಪ್ರಭಾವದ ವಿಷಯದಲ್ಲಿ ಅವರು ಅಜ್ಞಾನಿಗಳೂ, ತಮ್ಮ ಶಕ್ತಿಯ ಪರಿಮಿತಿಗಳನ್ನು ಅರಿಯದವರೂ ಆಗಿದ್ದರು.

ಸೇನಾಧಿಪತಿ ನೀಲನು ಹೇಳುತ್ತಾನೆ–

ಶೈಲಾಃ ಸಂತಿ ಸಹಸ್ರಶಃ ಪ್ರತಿದಿಶಂ ವಲ್ಮೀಕ ಕಲ್ಪಾ ಇಮೇ
ದೋರ್ದಂಡಶ್ಚ ಕಠೋರ ವಿಕ್ರಮ ರಸಕ್ರೀಡಾ ಸಮುತ್ಕಂಠಿತಾಃ|
ಕರ್ಣಾಸ್ವಾದಿತ ಕುಂಭ ಸಂಭವ ಕಥಾಃ ಕಿಂ ನಾಮ ಕಲ್ಲೋಲಿನೀ -
ಕಾಂತೇ ಗೋಷ್ಪದ ಪೂರಣೇಽಪಿ ಕಪಯಃ ಕೌತೂಹಲಂ ನಾಸ್ತಿ ವಃ [೧]

ಸುತ್ತಲೂ ಪರ್ವತಗಳಿವೆ ಸಹಸ್ರಾರು
ನಿಮಗೊ ಅವು ಬರಿಯ ಹುತ್ತಗಳ ಹಾಗೆ|
ಘೋರ ಕದನದ ಕ್ರೀಡೆಯಾನಂದಕೆ
ತುಡಿಯುತಿವೆ ನಿಮ್ಮ ಬಾಹು ದಂಡಗಳು!
ಸಾಗರವನೇಕಾಪೋಶನಗೈದ
ಅಗಸ್ತ್ಯನ ಕತೆಯ ಕೇಳಿಹಿರಿ ನೀವು
ಈ ಸಾಗರದ್ದೇನು ಲೆಕ್ಕ?
ಗೋಷ್ಪಾದವ ತುಂಬಿದಂತೆ. ಹೇ ಕಪಿಮಿತ್ರರೆ
ಕಿಂಚಿತ್ ಕುತೂಹಲವು ನಿಮಗಿಲ್ಲವೆ? [೧]

ನೇಪಥ್ಯದ ಕಲಕಲ ಧ್ವನಿ ನಿಂತ ನಂತರ ಕಪಿಗಳ ಉತ್ತರ :

ಆಂದೋಲ್ಯಂತೇ ಕತಿ ನ ಗಿರಯಃ ಕಂದುಕಾನಂದ ಮುದ್ರಾಂ
ವ್ಯಾತನ್ವಾನಾಃ ಕಪಿಪರಿಸರೇ ಕೌತುಕೋತ್ಕರ್ಷ ತರ್ಷಾತ್|
ಲೋಪಾಮುದ್ರಾಪರಿವೃಢ ಕಥಾಭಿಜ್ಞತಾಪ್ಯಸ್ತಿ ಕಿಂತು
ವ್ರೀಡಾವೇಶಃ ಪವನತನಯೋಚ್ಛಿಷ್ಟ ಸಂಸ್ಪರ್ಶನೇನ [೨]

ಕಪಿಗಳಲಿ ಹಲವರೀಗಾಗಲೆ ಕೌತುಕಾನಂದದಿಂದೆ
ಗಿರಿಗಳನು ಬಳಸಿ ಚೆಂಡಾಟವಾಡಿಹರು

ಲೋಪಾಮುದ್ರೆಯ ಪತಿ ಅಗಸ್ತ್ಯನ
ಕತೆಯ ಕೇಳಿ ಬಲ್ಲರು ಅವರು
ಆದರೆ ಪವನ ತನಯನ ತಂಬುಲವ
ಸ್ಪರ್ಶಿಸುವ ಲಜ್ಜೆ ಕಾಡುತಿದೆ ಅವರನು| [೨]

ಇಲ್ಲಿ "ಪವನತನಯೋಚ್ಛಿಷ್ಟ" (ಪವನ ತನಯನ ಎಂಜಲು) ಎಂಬ ಸಮಾಸ ಪದ ಪ್ರಯೋಗದಲ್ಲಿ ಪರ್ಯಾಯ ವಕ್ರತೆ ಎಂಬ ಪ್ರಕಾರವನ್ನು ನೋಡಬಹುದು.

ಈ ಮಹಾಸಾಗರಕ್ಕೆ ಸೇತುವೆ ಕಟ್ಟುವ ಕೆಲಸ ಕಪಿಗಳ ಸಾಮರ್ಥ್ಯಕ್ಕೆ ಮೀರಿದ ಕೆಲಸ (ದುಷ್ಕರವಾದ್ದು) ಎಂದು ರಾಮಹೇಳಿದಾಗ ಅದಕ್ಕೆ (ಆ ನಾಟಕದಲ್ಲಿ) ಜಾಂಬವನ ಉತ್ತರವೂ ಅಂಥದೇ ಉತ್ಕೃಷ್ಟ ಉದಾಹರಣೆ :

ಅನಂಕುರಿತ ನಿಸ್ಸೀಮ ಮನೋರಥಪಥೇಷ್ವಪಿ|
ಕೃತಿನಃ ಕೃತ್ಯ ಸಂರಂಭ ಮಾರಭಂತೇ ಜಯಂತಿ ಚ [೩]

ಎಲ್ಲೆ ಇಲ್ಲದಿಹ ಮನೋರಥ ಪಥಗಳಲಿ
ಮೊಳಕೆದೋರದಿದ್ದರು ಕೂಡ
ಉತ್ಸಾಹಿಗಳು ಸಾರ್ಥಕ ಯತ್ನಗಳ ತೊಡಗುವರು
ಅದರೊಳು ಜಯವನೂ ಸಾಧಿಪರು [೩]

ಇದೇ ರೀತಿಯ ಇನ್ನೂ ಅನೇಕ ಅಪೂರ್ವವೂ, ಅದ್ಭುತವೂ ರಸಾಸ್ವಾದ ಭಂಗಿಯಲ್ಲಿ ರಮಣೀಯವೂ ಆದ ಉದಾಹರಣೆಗಳನ್ನು ಅದೇ ನಾಟಕದಲ್ಲಿ ನೋಡಬಹುದು. ಪ್ರಕರಣ ವಕ್ರತೆಗೆ ಅಭಿಜ್ಞಾನ ಜಾನಕಿಯಿಂದ ಉದಾಹರಣೆಗಳನ್ನು ನೀಡಿಯಾದ ಮೇಲೆ, ರಘುವಂಶ ಮಹಾಕಾವ್ಯದ ಐದನೇ ಸರ್ಗದಲ್ಲಿ ಬರುವ ರಘು ಮತ್ತು ಕೌತ್ಸರ ವೃತ್ತಾಂತವನ್ನು ಪ್ರಕರಣ ವಕ್ರತೆಗೆ ಉದಾಹರಣೆಯಾಗಿ ನೀಡುತ್ತಾನೆ.

ನಾಲ್ಕು ಸಮುದ್ರಗಳನ್ನೇ ಒಡ್ಯಾಣವಾಗುಳ್ಳ ಭೂಮಿಯನ್ನು ಆಳುತ್ತಿರುವ ರಘು ಮಹಾರಾಜನು ಆಗತಾನೆ ತನ್ನೆಲ್ಲ ವಿಪುಲ ಸಂಪತ್ತನ್ನು ವಿಶ್ವಜಿದ್ ಯಾಗದ ಕೊನೆಯಲ್ಲಿ ದಕ್ಷಿಣೆಯಾಗಿ ನೀಡಿ ಬರಿಗೈಯಾಗಿ ಕುಳಿತಿದ್ದಾನೆ. (ಸಹಜ ಔದಾರ್ಯದ ಆದರ್ಶ ಉದಾಹರಣೆಯಾಗಿದ್ದಾನೆ) ಅದೇ ಸಮಯಕ್ಕೆ ವರತಂತು ಮುನಿಯ ಶಿಷ್ಯ ಕೌತ್ಸನು ರಾಜನ ಸಮೀಪಕ್ಕೆ ಬರುತ್ತಾನೆ. ತನ್ನಬಳಿಗೆ ಬಂದ ಮುನಿಗೆ, ತನ್ನ ಬಳಿ ಏಕಮಾತ್ರ ವಸ್ತುವಾಗಿ ಉಳಿದಿದ್ದ ಮೃತ್ ಪಾತ್ರೆ (ಗಡಿಗೆ)ಯಿಂದ ಅರ್ಘ್ಯವನ್ನು ನೀಡಿದ್ದನ್ನು ನೋಡಿಯೇ ರಘುವಿನಿಂದ ದಕ್ಷಿಣೆ ಪಡೆಯಬೇಕೆಂಬ ಅವನ ಮನದಾಸೆಯೆಲ್ಲವೂ ಸಂಪೂರ್ಣ ಭಗ್ನವಾಗಿ ರಾಜನನ್ನು ಆಶೀರ್ವದಿಸಿ ಹೊರಡತೊಡಗುತ್ತಾನೆ. ಆದರೆ ಅವನನ್ನು ತಡೆದು ರಘು, ವಿನಯದಿಂದ ಕೇಳುತ್ತಾನೆ

ಕಿಂವಸ್ತು ವಿದ್ವನ್ ಗುರವೇ ಪ್ರದೇಯಂ ತ್ವಯಾ ಕಿಯದ್ವೇತಿ ತಮನ್ವಯುಂಕ್ತ [4]
[೪] [ರಘುವಂಶ 5-18]1

---

1 ರಘುವಂಶ 5 - 18

ಇನ್ನಾವ ವಸ್ತುವನು ಅಥವಾ ಹೊನ್ನೆನಿತನು
ಗುರುವಿಂಗೆ ನೀನೀಯ ಬೇಕೆಂಬುದನು
ಹೇಳು ವಿದ್ವನ್ಮಣಿ [೪]

ಅದಕ್ಕೆ ಉತ್ತರವಾಗಿ ವರತಂತು ಶಿಷ್ಯ (ಕೌತ್ಸ)ನು ತನ್ನ ಗುರುವಿಗೆ ಹದಿನಾಲ್ಕು ಕೋಟಿ ಚಿನ್ನದ ನಾಣ್ಯಗಳನ್ನು ಕೊಡಬೇಕಾಗಿದೆ ಎಂದು ಹೇಳುತ್ತಾನೆ. ಅದನ್ನು ಕೇಳಿ ರಾಜನು

ದ್ವಿತ್ರಾಣ್ಯಹಾನ್ಯರ್ಹಸಿ ಸೋಢುಮರ್ಹನ್
ಯಾವದ್ಯತೇ ಸಾಧಯಿತುಂ ತ್ವದರ್ಥಂ [೫] [ರಘುವಂಶ 5-25]

ಒಂದೆರಡು ದಿನ ನೀನು ತಾಳು ಗುಣವಂತನೆ
ಅಷ್ಟರಲಿ ನೀ ಬೇಡಿದರ್ಥವನು ಸಾಧಿಪೆನು ನಾನು [೫]

ಎಂದು ಹೇಳುವ ಮೂಲಕ ತನ್ನಅಂತರಂಗದ ಪೇಚನ್ನು ಎಷ್ಟು ಮಾತ್ರಕ್ಕೂ ತೋರಿಸಿಕೊಳ್ಳದೆ ಅಪಾರ ಉದಾತ್ತತೆ ಮತ್ತು ಔದಾರ್ಯಗಳನ್ನೇ ಮೆರೆಯುತ್ತಾನೆ. ಅಗ್ನಿಶಾಲೆಯಲ್ಲಿದ್ದಾಗ ಧನಾಧಿಪತಿ ಕುಬೇರನೂ ತನ್ನ ಸಾಮಂತನೇ ಎಂಬುದನ್ನು ನೆನೆದು ಕುಬೇರನ ಮೇಲೆ ದಂಡೆತ್ತಿಹೋಗಲು ನಿಶ್ಚಯಿಸುತ್ತಾನೆ. ಕುಬೇರನನ್ನು ಜಯಿಸಬೇಕೆಂಬ ರಘುವಿನ ವಿಚಾರವೇ ಸಹೃದಯರಿಗೆ ಅತ್ಯಂತ ಅಪ್ಯಾಯಮಾನತೆಯನ್ನು ಉಂಟುಮಾಡುತ್ತದೆ. ಆ ಸಂದರ್ಭದಲ್ಲಿ ಒಂದಾದ ಮೇಲೊಂದರಂತೆ ಕಂಡುಬರುವ "ಸೂಕ್ತಿ ಸುಧಾ ಲಹರಿ"ಗಳನ್ನು ಕೃತಿಯನ್ನು ಓದಿಯೇ ಸವಿಯಬೇಕು. ಅಲ್ಲಿ ಪ್ರಕರಣ ವಕ್ರತೆ ಹೇಗೆ ಸಾಧಿತವಾಗಿದೆ ಎಂದು ತಿಳಿಸಲು ಕೆಲವನ್ನು ಮಾತ್ರ ಉದ್ಧರಿಸಿಕೊಡಲಾಗಿದೆ. ಉದಾ:

ತಂ ಭೂಪತಿರ್ಭಾಸುರ ಹೇಮರಾಶಿಂ
ಲಬ್ಧಂ ಕುಬೇರಾದಭಿಯಾಸ್ಯಮಾನಾತ್||
ದಿದೇಶ ಕೌತ್ಸಾಯ ಸಮಸ್ತಮೇವ
ಪಾದಂ ಸುಮೇರೋರಿವ ವಜ್ರಭಿನ್ನಂ [೬] [ರಘು V - 30]

ಧಾಳಿಯಿಡುವ ಮುನ್ನವೆ
ಕುಬೇರನೊಪ್ಪಿಸಿದ ಹೊಳೆವ ಹೊನ್ನ ರಾಶಿಯನು
ವಜ್ರಿಯ ವಜ್ರಾಸ್ತ್ರದಿಂದೆ ಕಡಿದು ಬಿದ್ದ
ಸುಮೇರು ಪರ್ವತದ ತುಂಡೊ ಎನುವಂಥದನು
ನೀಡಿದನು ಕೌತ್ಸನಿಗೆ ನೃಪ ಅದೆಲ್ಲವನು [೬]

ಇಲ್ಲಿ ಅಗಾಧವಾದ ಹೊನ್ನಿನ ರಾಶಿಯನ್ನು, ಇಂದ್ರನ ವಜ್ರಾಯುಧ (ಸಿಡಿಲು)ದಿಂದ ಕಡಿದು ಬಿದ್ದ, ಬಂಗಾರದ ಪರ್ವತವಾದ ಸುಮೇರು ಪರ್ವತಕ್ಕೆ ಹೋಲಿಸಲಾಗಿದೆ. ಈ ಹೋಲಿಕೆ ಆ ಹೊನ್ನರಾಶಿ ಎಷ್ಟು ಅಪಾರವಾಗಿತ್ತೆಂಬುದನ್ನು ಪ್ರತೀಯಮಾನ ರೂಪದಿಂದ ಸೂಚಿಸುತ್ತದೆ. ಈ ಹೊನ್ನು ಸಮಸ್ತವನ್ನು ರಘು ಕೌತ್ಸನಿಗ ದಾನವಾಗಿ ನೀಡುತ್ತಾನೆ. ಅದೂ ಅವನು ದಟ್ಟ

ದರಿದ್ರ ಸ್ಥಿತಿಯಲ್ಲಿದ್ದಾಗ ಎಂಬುದರಿಂದ ಅದಕ್ಕೆ ಇನ್ನೂ ಹೆಚ್ಚಿನ ಮಹತ್ವ ಬರುತ್ತದೆ. ಇಲ್ಲಿಯ ಔದಾರ್ಯವು ಕಲ್ಪತರುವಿನ ಔದಾರ್ಯವನ್ನು ಮೀರಿಸಿದ್ದು. ಕಾರಣ ಅದು ಬೇಡಿದವರ ಅಗತ್ಯಗಳಷ್ಟನ್ನು ಮಾತ್ರ ಈಡೇರಿಸುವಂಥದಾದ್ದರಿಂದ ಪರಿಮಿತವಾದ್ದು. ಆದರೆ ರಘುವಿನ ಔದಾರ್ಯವಾದರೋ ಔದಾರ್ಯದ ಪರಾಕಾಷ್ಠೆ. ಇದು ಶಿಥಿಲಗೊಂಡ ತನ್ನ ಗರ್ವಗರಿಮೆಯನ್ನು ಅಂತರಂಗದಲ್ಲೇ ಅಡಗಿಸಿಕೊಂಡ ರಘುವಿನ ವ್ಯಕ್ತಿತ್ವ ಕುರಿತಾದ ಈ ಮೊದಲಿನ ಹೇಳಿಕೆಗಳನ್ನು ಇನ್ನಷ್ಟು ಶ್ರೀಮಂತಗೊಳಿಸುತ್ತಿದೆ. ಮರುಕ್ಷಣದಲ್ಲೇ ಅಸಮಾನವಾದ ಕೀರ್ತಿಯನ್ನು ಗಳಿಸಬೇಕೆಂಬ ತಾನೊಬ್ಬನೇ ಏಕಮೇವಾದ್ವಿತೀಯ ದಾನಿಯಾಗಬೇಕೆಂಬ ಇಚ್ಛೆಯುಳ್ಳ ಅವನ ವ್ಯಕ್ತಿತ್ವದ ಶೀಲವನ್ನು ವರ್ಣಿಸುವ ಹೇಳಿಕೆಯು ಸ್ಪಷ್ಟವೇ ಇದೆ (ಗುರ್ವರ್ಥಮ್ ಇತ್ಯಾದಿ)

ಅಲ್ಲದೆ ಮುಂದೆ

ಜನಸ್ಯ ಸಾಕೇತ ನಿವಾಸಿನ ಸ್ತೌ
ದ್ವಾವಪ್ಯಭೂತಾಮಭಿನಂದ್ಯಸತ್ವೌ|
ಗುರುಪ್ರದೇಯಾಧಿಕ ನಿಸ್ಪೃಹೋSರ್ಥೀ
ನೃ ಪೋSರ್ಥಕಾಮಾದಧಿಕ ಪ್ರದಶ್ಚ [೭] **[ರಘುವಂಶ II - 31]**

ಗುರುವಿಂಗೆ ನೀಡಬೇಕಾದುದಕಿಂತ
ಅಧಿಕವನು ಬಯಸದಿಹ ಯಾಚಕನು
ಯಾಚಕನು ಬೇಡಿದುದಕಿಂತ ಅಧಿಕವನೀವ ನೃಪನು
ಸಾಕೇತಪುರ ಜನರು ಆ ಇರ್ವರನು ಅಂದು
ಹೊಗಳಿದರು ಅಭಿನಂದನೀಯರೆಂದು [೭]

ಇಲ್ಲಿ ಮತ್ತೆ ಸಾಕೇತ ನಿವಾಸಿಗಳು ಅತ್ಯಪೂರ್ವವಾದ ದೃಶ್ಯವೊಂದನ್ನು ಕಣ್ಣಾರೆ ಕಂಡರು. ಅದೆಂದರೆ ತನ್ನ ಗುರುವಿಗೆ ನೀಡಬೇಕಾದ ಗುರುದಕ್ಷಿಣೆಯ ಹೊನ್ನಿಗಿಂತ ಕಿಂಚಿತ್ತನ್ನೂ ಹೆಚ್ಚಾಗಿ ತೆಗೆದುಕೊಳ್ಳ ಲಿಚ್ಛಿಸದ ಶಿಷ್ಯನೊಂದೆಡೆಯಾದರೆ ಯಾಚಕನು [ಅರ್ಥಿ-ಕೌತ್ಸನು] ಬೇಡಿದ್ದಕ್ಕಿಂತ, ನೂರ್ಪಟ್ಟು ಸಾವಿರಪಟ್ಟು, ಹೊನ್ನರಾಶಿಯನ್ನು ದಾನವಾಗಿ ನೀಡ ಹೊರಟಿರುವ ರಘು ಈ ಇಬ್ಬರೂ ಜಗಳಕ್ಕೆ ತೊಡಗಿದ್ದಾರೆ. ಈ ಇಡೀ ಪ್ರಸಂಗ ಹಿಂದೆಂದೂ ಕೇಳದ ಒಬ್ಬನ ನಿಸ್ಪೃಹತೆಯನ್ನೂ ಇನ್ನೊಬ್ಬನ ಔದಾರ್ಯ ಸಂಪತ್ತಿಯನ್ನೂ ಅತ್ಯಂತ ಸ್ಪಷ್ಟವಾಗಿ ಚಿತ್ರಿಸುತ್ತದೆ.

ಹೀಗೆ ರಸಸ್ಯಂದಿಯಾದ ಪ್ರಕರಣ ವಕ್ರತೆಯ ಸೌಂದರ್ಯವನ್ನು ಮಹಾಕವಿಗಳ ಕಾವ್ಯಗಳಲ್ಲಿ ಸಹೃದಯರು ತಾವೇ ಕಂಡುಕೊಳ್ಳಬೇಕು.

ಇದೇ ಪ್ರಕರಣವಕ್ರತೆಯ ಇನ್ನೊಂದು ಪ್ರಕಾರವನ್ನು ಬೇರೊಂದು ರೀತಿಯಿಂದ ಪ್ರಸ್ತುತ ಪಡಿಸಲಾಗುವುದು.

ಇತಿವೃತ್ತ ಪ್ರಯುಕ್ತೇ ಽಪಿ ಕಥಾವೈಚಿತ್ರ್ಯ ವರ್ತ್ಮನಿ|
ಉತ್ಪಾದ್ಯಲವಲಾವಣ್ಯಾದನ್ಯಾ ಲಸತಿ ವಕ್ರತಾ[3]

1 ರಘು V-31

ತಥಾ ಯಥಾ, ಪ್ರಬಂಧಸ್ಯ ಸಕಲಸ್ಯಾ ಪಿ ಜೀವಿತಮ್।
ಭಾತಿ ಪ್ರಕರಣಂ ಕಾಷ್ಠಾ ಧಿ ರೂಢ ರಸನಿರ್ಭರಮ್[4]

ಇತಿವೃತ್ತ (ಇತಿಹಾಸ)ವನ್ನಾಧರಿಸಿದ್ದರೂ, ಕವಿಯು ಕಥಾ ವೈಚಿತ್ರ್ಯವನ್ನು ನಿರ್ಮಿಸ ಹೊರಟಿದ್ದರೆ, ಅಲ್ಲಿ ಲಾವಣ್ಯದ ಕಿಂಚಿದಂಶವನ್ನು ಸೃಷ್ಟಿಸಿದ್ದರೂ ಸಾಕು, ಅದರಿಂದ ಹೊರಹೊಮ್ಮು ವ ಸೌಂದರ್ಯವು ಅಪೂರ್ವವೇ ಆಗಿಬಿಡುತ್ತದೆ [3]

ಪ್ರಕರಣವೊಂದು ರಸನಿರ್ಭರತೆಯಿಂದ ಕೂಡಿಕೊಂಡು ಪರಾಕಾಷ್ಠೆಯನ್ನು ಮುಟ್ಟುವುದರಿಂದ ಅದು ಸಮಗ್ರ ಪ್ರಬಂಧದ ಪ್ರಾಣ ಸ್ವರೂಪದಂತೆ ಶೋಭಿಸಬಹುದು. [4]

ಮುಂದಿನ ಪ್ಯಾರಾದಲ್ಲಿ ನೀಡಿರುವ ಉಮೆಯ ಮೇರೆಗೆ ಕವಿಯ ಮೌಲಿಕ ಕಾವ್ಯನಿರ್ಮಾಣ ಕಲೆ, ಕಥಾವಸ್ತುವಿನ ಕ್ಷೇತ್ರದಲ್ಲಿ ಸಹೃದಯರಿಗೆ ಆನಂದವುಂಟುಮಾಡಿ ಅಪೂರ್ವವೇ ಆದ ಅನುಭವವನ್ನು ತಂದುಕೊಡುತ್ತದೆ. ಇದು ಇತಿಹಾಸವನ್ನಾಧರಿಸಿದ ಕಥಾ ವಸ್ತುವಿಗೂ ಅನ್ವಯಿಸುತ್ತದೆ (ಸಾಂಪ್ರದಾಯಿಕ ಕಥೆಗಳಿಗೂ ಅನ್ವಯಿಸುತ್ತದೆ) ಇಲ್ಲಿ ನೀಡಲಾಗಿರುವ ಉಪಮೆ ಎಂದರೆ, ಪ್ರಕರಣವೊಂದು ಸಮಗ್ರ ಪ್ರಬಂಧ ಕಾವ್ಯದ ಪ್ರಾಣ ಸ್ವರೂಪವೆಂಬಂತೆ ಶೋಭಿಸಬಲ್ಲುದು. ಪ್ರಬಂಧ ಕಾವ್ಯಗಳೆಂದರೆ, ಹಲವಾರು ಸರ್ಗಗಳಿಂದ ಕೂಡಿದ ಮಹಾಕಾವ್ಯಗಳು. ರಸನಿರ್ಭರತೆಯ ಪರಾಕಾಷ್ಠೆ ಎಂಬುದು ಶೃಂಗಾರವೇ ಮೊದಲಾದ ರಸಗಳ ಪ್ರಕರ್ಷ ಸ್ಥಿತಿಯ ವಿವರಣೆ.

ಮಥಿತಾರ್ಥ: ಪ್ರಸಿದ್ಧವಾದ ಹಾಗೂ ವೈವಿಧ್ಯಮಯವಾದ ಸುಂದರ ರುಚಿರ ಕಥೆಗಳ ಭಂಡಾರವೆನಿಸಿರುವ ಹಾಗೂ ರಸಾರ್ಣವವೆನಿಸಿರುವ ಮಹಾಭಾರತದಂಥ ಮಹಾಕಾವ್ಯಗಳನ್ನು ಆಧರಿಸಿದ ಕಥಾನಕದಲ್ಲೂ, ಅದರಲ್ಲಿರುವ ಹಲವಾರು ಕಥೆಗಳ ಸೌಂದರ್ಯವನ್ನು ಸಾಪೇಕ್ಷವಾಗಿ ನಿರ್ಧರಿಸಲು ಯಾವುದೇ ಅನ್ಯಮಾನ ದಂಡಗಳಿಲ್ಲದಿರುವುದರಿಂದ, ಕವಿಯಾದವನು, ಸಹೃದಯರಲ್ಲಿ ವಿಸ್ಮಯ ಭಾವಗಳನ್ನು ಹೊಮ್ಮಿಸುವಂಥ ಮತ್ತು ರಸಭಾವಗಳನ್ನು ಜಾಗ್ರತಗೊಳಿಸುವಂಥ ವಸ್ತುಗಳನ್ನೇ ಆಯ್ದುಕೊಳ್ಳಬೇಕು ಹಾಗೆ ಆಯ್ದುಕೊಂಡ ವಸ್ತು ತನ್ನ ಅತಿಬಂಧುರವೂ, ಮೌಲಿಕವೂ, ಉಪಮಾತೀತವೂ ಆದ ಪ್ರತಿಭಾಶಕ್ತಿಯನ್ನು ಉನ್ಮೀಲನಗೊಳಿಸುವುದಕ್ಕೆ ಅವಕಾಶ ಕೊಡುವಂತದಾಗಿರಬೇಕು. ಅಂಥ ಅತಿಶಯವಾದ ವಕ್ರತಾಪ್ರಕಾರದಿಂದ ಕೂಡಿರುವ ಪ್ರಕರಣ ನಿರ್ಮಿತಿಯಿಂದಾಗಿ ಕವಿಯು ಸಕಲ ಕವಿಗಳು ಮತ್ತು ರಸಿಕರ ಸಮುದಾಯಕ್ಕೆ ಸಂತೋಷವನ್ನುಂಟು ಮಾಡುತ್ತಾನೆ.

ಪ್ರಬಂಧ ಕಾವ್ಯದಲ್ಲೂ, ಕವಿಯ ನವನಿರ್ಮಾಣ ಶಕ್ತಿಯೇ ಮೂಲವಾದ ಸೌಂದರ್ಯಾತ್ಮಕ ಪ್ರಭಾವವು, ಹಳೆಯ ತೃಟಿತ ಚಿತ್ರಕ್ಕೆ ಚಿತ್ರಕಾರನೊಬ್ಬ ನೂತನ ರೂಪವನ್ನು ನೀಡುವಂತೆ ಕಾವ್ಯಕ್ಕೆ ರಮಣೀಯಕಾಂತಿಯ ಪರಿಪೋಷಣೆಯನ್ನು ನೀಡುತ್ತದೆ.

[ಕುಂತಕನು ಇಲ್ಲಿ - ಇತಿಹಾಸ ಪ್ರಸಿದ್ಧ ಕಥೆಯಲ್ಲಿ ಕಿಂಚಿತ್ ಮಾತ್ರ ಮಾರ್ಪಾಟು ಮಾಡಿಕೊಂಡು ಕವಿ ಅದರಲ್ಲಿ ಎಂಥ ಒಂದು ಚಮತ್ಕಾರವನ್ನು ಸೃಷ್ಟಿಸಿಬಿಡುತ್ತಾನೆಂದರೆ, ಆ ಮಾರ್ಪಾಟು

ಆ ಕಥಾನಕಕ್ಕೆ ಜೀವ ಸಂಚಾರವುಂಟು ಮಾಡುತ್ತದೆ ಎಂದು ಹೇಳುತ್ತಾನೆ. ಈ ರೀತಿಯ ಮಾರ್ಪಾಟಿಗೆ ಉದಾಹರಣೆಯಾಗಿ ಕುಂತಕನು ಅಭಿಜ್ಞಾನ ಶಾಕುಂತಲದ ಪ್ರಕರಣವನ್ನು ಪ್ರಸ್ತುತ ಪಡಿಸುತ್ತಿದ್ದಾನೆ].

ಐದನೇ ಅಂಕದಲ್ಲಿ ಕಣ್ವಾಶ್ರಮದ ಶಾರ್ಙ್ಗರವ ಶಾರದ್ವತ ಮತ್ತು ಗೌತಮಿಯರು ಪೂರ್ಣಗರ್ಭಿಣಿಯಾಗಿದ್ದ ಶಕುಂತಲೆಯನ್ನು ರಾಜನಲ್ಲಿಗೆ ಕರೆತರುತ್ತಾರೆ. ಅವಳ ಮುಖದ ಪರದೆಯನ್ನು ಸರಿಸಿದ ಕೂಡಲೇ ಕಣ್ಣಿಗೆ ಬಿದ್ದ, ಲಾವಣ್ಯ ಲಕ್ಷ್ಮಿಯಂಥ ಅನುಪಮ ರೂಪ ಸಂಪತ್ತು ಅವನಲ್ಲಿ ಮಧುರಸ್ಮೃತಿಯೊಂದನ್ನು ಮೀಟಿದರೂ, ಪರಪತ್ನಿಯೆಂದು ತಿರಸ್ಕರಿಸುವ ಸಾಧ್ಯತೆಯೇ ಕಂಡು ಬಂದಿತು. ಶಕುಂತಲೆ ರಾಜನಿಗೆ ತನ್ನ ನೆನಪು ತಂದುಕೊಡುವ ಎಲ್ಲ ಪ್ರಯತ್ನ ಮಾಡುತ್ತಾಳೆ. ತನಗೆ ಮತ್ತು ರಾಜನಿಗೆ ಮಾತ್ರ ಗೊತ್ತಿರಬಹುದಾದ ಸೂಕ್ಷ್ಮ, ಆಪ್ತ, ಆತ್ಮೀಯ ಘಟನೆಗಳನ್ನು ನಿರೂಪಿಸುತ್ತಾಳೆ. ಆದರೂ ದುಷ್ಯಂತನಿಗೆ ಏನೊಂದು ನೆನಪಾಗುವುದಿಲ್ಲ. ಇದೆಲ್ಲವನ್ನು ಕೇಳಿಯೂ ದುಷ್ಯಂತನು ಶಕುಂತಲೆಯನ್ನು ಗುರುತಿಸದಿರಲೇನು ಕಾರಣ ಎಂಬುದನ್ನು ಮೂಲ ಮಹಾಭಾರತದ ಶಾಕುಂತಲೋಪಾಖ್ಯಾನದಲ್ಲಿ ಹೇಳಿಲ್ಲ. ಅದನ್ನು ಸಮರ್ಪಕವಾದ ಕಾರಣದೊಂದಿಗೆ ಸುಸಂಗತವಾಗಿ ನಿರೂಪಿಸುವ ಸಲುವಾಗಿ ಕಾಳಿದಾಸನು ದುರ್ವಾಸ ಶಾಪ ಪ್ರಸಂಗವನ್ನು ರೂಪಿಸಿದ್ದಾನೆ. ದುರ್ವಾಸ ಮಹರ್ಷಿಯಾದರೋ ಅತ್ಯಲ್ಪ ಅಪರಾಧ ಪ್ರವರ್ತನ ಮಾತ್ರದಿಂದಲೇ ಅತಿಯಾಗಿ ಕೋಪಗೊಳ್ಳುವವನೂ, ಕರುಣಾ ಪರಾಙ್ಮುಖನೂ, ಕೋಮಲ ಭಾವನೆಗಳಿಗೆಲ್ಲ ಕುರುಡಾದವನೂ ಆಗಿದ್ದಾನೆ. ದುರ್ವಾಸ ಪ್ರಸಂಗದಲ್ಲಿ ಶಕುಂತಲೆಯು ತನ್ನ ಪ್ರಿಯಕರನ ಪ್ರಥಮ ವಿಯೋಗದ ದುಃಸಹನೀಯ ದುಃಖದಿಂದ ಪೀಡಿತಳಾಗಿ, ವಿವಶಳಾಗಿ ತನ್ನ ಕುಟೀರದಲ್ಲಿ ಮಲಗಿದ್ದಾಳೆ. ಆ ಸಮಯಕ್ಕೆ ಬಾಗಿಲಿಗೆ ಬಂದ ದುರ್ವಾಸನು ತನ್ನನ್ನು ಶಕುಂತಲೆ ಕಡೆಗಣಿಸಿದಳೆಂದು ತೀವ್ರಾ ಕೋಪಾವಿಷ್ಟನಾಗಿ ಶಾಪ ಕೊಟ್ಟೇ ಬಿಡುತ್ತಾನೆ.

ವಿಚಿಂತಯಂತೀ ಯಮನನ್ಯಮನಸಾ
ತಪೋನಿಧಿಂ ವೇತ್ಸಿ ನ ಮಾಮುಪಸ್ಥಿತಮ್।
ಸ್ಮರಿಷ್ಯತಿ ತ್ವಾಂ ಸ ನ ಬೋಧಿತೋಽಪಿ ಸನ್
ಕಥಾಂ ಪ್ರಮತ್ತಃ ಪ್ರಥಮಂ ಕೃತಾಮಿವ[೮] [ಶಾಕುಂತಲ IV -1]

ಒಂದೆ ಚಿತ್ತದಿ ನೆನೆಯುತಾರನು
ಬಂದು ನಿಂತಿರುವೀ ತಪೋನಿಧಿಯೆನ್ನನೂ
ಲಕ್ಷ್ಯಕೆ ತಾರೆಯೋ, ನೆನಪಿತ್ತರೂ
ನೆನೆಯನಾತನು ನಿನ್ನನು
ತಾ ಮುನ್ನಗೈದುದನರಿಯದುನ್ಮತ್ತನಂತೆ [೮]

ಇಂಥ ಉಗ್ರ ಶಾಪವನ್ನು ಕೊಟ್ಟು ಕೂಡಲೇ ಮುನ್ನಡೆಯುತ್ತಾನೆ. ಶಕುಂತಲೆಯ ಸಖಿಯರಾದ ಅನಸೂಯೆ ಪ್ರಿಯಂವದೆಯರ ಪ್ರಾರ್ಥನೆಗೆ ಓಗೊಟ್ಟು ತನ್ನ ಪ್ರಿಯ ಶಕುಂತಲೆಗೆ

ರಾಜನು ನೀಡಿರುವ ಅಭಿಜ್ಞಾನಾಭರಣದರ್ಶನವಾಗುವವರೆಗೆ ಶಾಪದ ಅವಧಿ ಎಂದು ಮಿತಿಗೊಳಿಸುತ್ತಾನೆ. ಕಣ್ವ ಮಹರ್ಷಿಯ ಪುತ್ರಿ ತನ್ನ ಪ್ರಿಯತಮನನ್ನು ಸಂಧಿಸಲು ದುಷ್ಯಂತನ ಅರಮನೆಗೆ ಹೋಗುತ್ತಿದ್ದಾಗ ಅವಳ ಚಿಗುರಿನಂಥ ಬೆರಳನ್ನು ಅಲಂಕರಿಸಿದ್ದ ಅಂಗುಲೀಯಕವು ಮಾರ್ಗಮಧ್ಯದಲ್ಲಿ ಸ್ನಾನಕ್ಕೆಂದು ಇಳಿದಿದ್ದ ನದಿಯ ಸುಳಿಯಲ್ಲಿ ಅವಳಿಗರಿವಿಲ್ಲದೆ ಜಾರಿ ಬಿದ್ದಿತು. ಆ ಉಂಗುರದಲ್ಲಿದ್ದ ಫಳ ಫಳ ಹೊಳೆಯುತ್ತಿದ್ದ ರತ್ನದ ಪ್ರಭೆಯನ್ನು ಮಾಂಸದ ತುಣುಕೆಂದು ಭಾವಿಸಿ ಮೀನೊಂದು ನುಂಗಿ ಬಿಟ್ಟಿತು. ಕಾಲಾಂತರದಲ್ಲಿ ಬೇಟೆಗಾರನೊಬ್ಬನ ಬಲೆಗೆ ಸಿಕ್ಕು ಮೀನು ಸತ್ತಿತು. ಅದರ ಹೊಟ್ಟೆಯಲ್ಲಿದ್ದ ಉಂಗುರವನ್ನು ರಾಜನಿಗೆ ಸಮರ್ಪಿಸುತ್ತಾನೆ. ಇಂಥ ಕಥಾ ಸಂವಿಧಾನ ಕೌಶಲವನ್ನು ರಸನಿಧಿ ಕಲಶವೆದು ಪರಿಗಣಿಸಬಹುದು. ಇದರಿಂದ ಇಡೀ ನಾಟಕಕ್ಕೆ ಅಪೂರ್ವವಾದೊಂದು ಸೌಂದರ್ಯಪ್ರಾಪ್ತವಾಗಿದೆ. ಅಲ್ಲದೆ ಸರಿಯಾದ ಸಮಯದಲ್ಲಿ ದುಂಬಿಯನ್ನು ಏಳಿಸುವ ಹಂಸಪದಿಕಾಗೀತದ ಅಂತರಾರ್ಥವನ್ನು ದೊರೆಗ್ರಹಿಸುತ್ತಾನೆ. ಋಷಿ ಶಾಪದಿಂದ ಪ್ರೇಯಸಿಯ ವಿಸ್ಮೃತಿಯಾಗಿದ್ದರೂ, ಅವನ ಮನದಾಳದಲ್ಲಿ ಹಿಂದಿನ ಪ್ರೇಮದ ವಾಸನೆಯ ಆ ಕಣಗಳು ಉಳಿದಿರುವುದನ್ನು ನಾವು ಕಾಣಬಹುದು. ಅದರಿಂದ ಅವನು ಅತ್ಯಂತ ವಿಚಲಿತನಾಗಿದ್ದಾನೆ.

> **ರಮ್ಯಾಣಿ ವೀಕ್ಷ್ಯ ಮಧುರಾಂಶ್ಚ ನಿಶಮ್ಯ ಶಬ್ದಾನ್**
> **ಪರ್ಯುತ್ಸುಕೀ ಭವತಿ ಯತ್ಸುಖಿತೋऽಪಿ ಜಂತುಃ|**
> **ತಚ್ಚೇತಸಾ ಸ್ಮರತಿ ನೂನಮಬೋಧಪೂರ್ವಂ**
> **ಭಾವಸ್ಥಿರಾಣಿ ಜನನಾಂತರ ಸೌಹೃದಾನಿ [೯]**

[ಅಭಿಜ್ಞಾನಿ ಶಾಕುಂತಲ - 5-2]

> ರಮ್ಯ ವಸ್ತುಗಳ ನೋಡಿ ಇನಿದು ಶಬ್ದಗಳ ಕೇಳಿ
> ಸಂತೃಪ್ತನಾಗಿಹ ಜೀವಿಯೂ ವಿಚಲಿತನಹನದೇಕೆನೆ
> ತನಗೆ ಅರಿವಿಲ್ಲದೆಯೆ ಮನದೊಳು ನೆನೆವನು
> ಭವ ಭವಾಂತರಂಗಳಿಂ ಭಾವದಲಿ ನೆಟ್ಟಿಹ ಸೌಹೃದಂಗಳನು [೯]

ಇಲ್ಲಿಯ ದುಷ್ಯಂತನ [ಅಂತರಾಳದಲ್ಲಿ ಆಳವಾಗಿ ನೆಲೆಗೊಂಡಿದ್ದ] ನಿಷ್ಕಪಟವೂ (ಮುಗ್ಧವೂ) ಚಮತ್ಕಾರಕಾರಿಯೂ ಆದ ಶಕುಂತಲೆಯ ಸ್ಮೃತಿ ಸೌಂದರ್ಯ ಸಹೃದಯರಿಗೆ ಅತ್ಯಂತ ಆಪ್ಯಾಯಮಾನಕಾರಿಯಾಗಿದೆ ಇದಕ್ಕಿಂತ ಮಿಗಿಲಾಗಿ ಮುಂದೆ ರಾಜನು ಅವಳನ್ನು ತಿರಸ್ಕರಿಸುತ್ತಾನೆ. ಅವಳ ಕಥೆಯನ್ನೂ ಅಭಿಜ್ಞಾನಾಭರಣದ ವಿಚಾರವನ್ನು ಸುಳ್ಳೆಂದು ತಳ್ಳಿ ಹಾಕುತ್ತಾನೆ. ಕಣ್ವ ಶಿಷ್ಯನು ನಿರೂಪಿಸಿದ ಶಕುಂತಲೆಯೊಂದಿಗಿನ ಅವನ ವಿವಾಹದ ವಿಷಯ ಹಾಗೂ ಅವಳು ಗರ್ಭಿಣಿಯಾಗಿರುವ ಸಂಗತಿಯನ್ನು ಅಪಹಾಸ್ಯ ಮಾಡಿ ನಂಬಲರ್ಹವಲ್ಲವೆನ್ನುತ್ತಾನೆ. ರಾಜನು ಕುಪಿತನೂ ಆಗುತ್ತಾನೆ. ಕೂಡಲೇ ಸಹಜ ಲಜ್ಜೆಯ ಎಲ್ಲೆಯನ್ನೂ ಮೀರಿ ಅವಳ ಮುಖದ ಮೇಲಿನ ಅವಗುಂಠನವನ್ನು ಸರಿಸಲಾಗುತ್ತದೆ. ಇಷ್ಟಾದರೂ ರಾಜ ಆಕೆ ಪರ ಪತ್ನಿಯೆಂಬ

ಭ್ರಮೆಯಲ್ಲೇ ಇದ್ದಾನೆ. ಅದುವರೆಗೆ ತಾನು ನೋಡಿರುವ ಎಲ್ಲ ಲಲನೆಯರನ್ನೂ ಮೀರಿಸುವಂತಿರುವ ಅವಳ ಏರುಂಜವ್ವನದ ಸೌಂದರ್ಯವು ವೀಣಾನಾದದ ಹಾಗೆ ಇಂಪಾದ ಅವಳ ದನಿಯಂತೆಯೇ ಅವನನ್ನು ಮುಗ್ಧಗೊಳಿಸುತ್ತವೆ. ಅದೂ ಅವನ ನೆನಪನ್ನು ಮೀಟಲು ಅವಳೊಂದಿಗೆ ಅವನು ನಡೆಸಿದ ವನವಿಹಾರದ ಕಥನ ಇದೆಲ್ಲವೂ ಅವನನ್ನು ಪ್ರಭಾವಗೊಳಿಸಿದರೂ, ಅವಳನ್ನು ತಿರಸ್ಕರಿಸುವ ಕಾಠಿಣ್ಯವನ್ನು ತೋರುತ್ತಾನೆ. ಅನಂತರದಲ್ಲಿ ಶಾಪಾವಸಾನ ಸಮಯದಲ್ಲಿ ಅವನು ಪಡುವ ಪಶ್ಚಾತ್ತಾಪ-ಅವನ ಹೃದಯದಲ್ಲಿ ಶಕುಂತಲೆಯ ವಿಷಯಕ್ಕೆ ಅವನಿಗಿರುವ ಕುಂದದ ಅಗಾಧವಾದ ಪ್ರೀತಿಯನ್ನು ಬಿಂಬಿಸುವಂಥ ಪಶ್ಚಾತ್ತಾಪದ ತೀವ್ರತೆಯನ್ನು ನೋಡಿದಾಗ ಮಾತ್ರ ಅವನ ಆ ಕಾಠಿಣ್ಯವನ್ನು ಅರ್ಥಮಾಡಿಕೊಳ್ಳಬಲ್ಲೆವು. ದುಷ್ಯಂತನ ಈ ತೀವ್ರ ಪಶ್ಚಾತ್ತಾಪಪೂರ್ವಕವಾದ ಪ್ರೀತಿ ಸಹೃದಯರಿಗೆ ಅತ್ಯಂತ ಆಹ್ಲಾದಕಾರಿ. ಶಾಪಾವಸಾನವನ್ನು ಯೋಜಿಸುವಲ್ಲಿ, ಕವಿ, ಅದಕ್ಕೆ ಮುಂಚೆ ಮರೆತುಹೋದ ಘಟನೆಗಳ ಸ್ಮೃತಿ ಬಂದ ಮೇಲೆ ಶಕುಂತಲಾ ವಿರಹಜ್ವರ ಪೀಡಿತನಾಗಿರುವ ರಾಜನ ತೀವ್ರ ಮನೋ ವ್ಯಾಕುಲತೆಯ ವರ್ಣನೆಯನ್ನು ನೀಡುತ್ತಾನೆ. ಅದಕ್ಕೆ ಹೊಂದಿಕೆಯಾಗುವಂತೆ ಅದೇ ಸಮಯಕ್ಕೆ ಕಳೆದುಹೋಗಿದ್ದ ಅಭಿಜ್ಞಾನಾಭರಣವೂ ಪ್ರಾಪ್ತವಾಗಿ ಸಹೃದಯರ ಸಂತೋಷಕ್ಕೆ ಮೇರೆ ಇಲ್ಲದಾಗುತ್ತದೆ. ಮಹಾರಾಜನ ಕಂಚುಕಿ ಹೇಳುತ್ತಾನೆ.

ಪ್ರತ್ಯಾದಿಷ್ಟ ವಿಶೇಷ ಮಂಡನ ವಿಧಿರ್ವಾಮಪ್ರಕೋಷ್ಠಾರ್ಪಿತಂ
ವಿಭ್ರತ್ಕಾಂಚನಮೇಕಮೇವ ವಲಯಂ ಶ್ವಾಸೋಪರಕ್ತಾಧರಃ|
ಚಿಂತಾಜಾಗರಣಪ್ರತಾಂತ ನಯನಸ್ತೇಜೋಗುಣಾದಾತ್ಮನಃ
ಸಂಸ್ಕಾರೋಲ್ಲಿಖಿತೋ ಮಹಾಮಣಿರಿವ ಕ್ಷೀಣೋಽಪಿ ನಾ ಲಕ್ಷ್ಯತೇ [೧೦]1

ರಮ್ಯಂ ದ್ವೇಷ್ಟಿ ಯಥಾ ಪುರಾ ಪ್ರಕೃತಿಭಿರ್ನ ಪ್ರತ್ಯಹಂ ಸೇವ್ಯತೇ
ಶಯ್ಯಾ ಪ್ರಾಂತ ವಿವರ್ತನೈರ್ವಿಗಮಯತ್ಯುನ್ನಿದ್ರ ಏವ ಕ್ಷಪಾಃ|
ದಾಕ್ಷಿಣ್ಯೇನ ದದಾತಿ ವಾಚಮುಚಿತಾಮಂತಃ ಪುರೇಭ್ಯೋ ಯದಾ
ಗೋತ್ರೇಷು ಸ್ಖಲಿತಸ್ತದಾ ಭವತಿ ಚ ವ್ರೀಡಾವಿಲಕ್ಷಶ್ಚಿರಮ್ [೧೧]2

ಒಂದೆ ಚಿನ್ನದ ಬಳೆಯನೆಡದೋಳಿಗಿಟ್ಟವನು
ಮತ್ತಿನಾಭರಣಗಳ ಕಳಚಿ ತೆಗೆದವನು
ಚಿಂತೆ ಜಾಗರಗಳಿಂದಕ್ಷಿ ಕೆಂಪಾದವನು
ಬಿಸಿಯುಸಿರು ಬಿಟ್ಟು ತುಟಿ ಬಣ್ಣಗೆಟ್ಟವನು
ಕಡೆಹ ಕೊಡ್ಡಿಹ ಮಹಾಮಾಣಿಕ್ಯದಂತಿವನು
ಬಡವಾದರೂ ನೃಪನು ಕಳೆಗುಂದದಿಹನು [೧೦][3]

1. ಶಾಕುಂತಲ VI-4
2. ಅದೇ 5
3. ಅಭಿಜ್ಞಾನ ಶಾಕುಂತಲ S.V.P. ಪುಟ 592 (ಕನ್ನಡ ಕಾಳಿದಾಸ ಮಾಹಾಸಂಪುಟ)

ರಮ್ಯವನು ದ್ವೇಷಿಪನು
ಮೊದಲಂತೆ ಪ್ರತಿ ದಿನವು ಜನರ ಸಂಭಾವಿಸನು
ಶಯ್ಯೆಯೊಳು ಹೊರಳುತ್ತ ಎವೆ ಮುಚ್ಚದಿರುಳ ಕಳೆಯುವನು
ದಾಕ್ಷಿಣ್ಯದಿಂದ ರಾಣಿಯರೊಡನೆ ನುಡಿವಂದು
ಹೆಸರು ಪಲ್ಲಟಿಸಿದರೆ ಬಹುಕಾಲ ನಾಚಿ ಕುಗ್ಗಿದಪನು [೧೧]

ಇಲ್ಲಿ ರಾಜನಿಗೆ ಬಳಸಿರುವ ವಿಶೇಷಣಗಳೆಲ್ಲ ವಿಶೇಷಣ ವಕ್ರತೆಯ ಸೌಂದರ್ಯದಿಂದ ಕೂಡಿವೆ. "ಗೋತ್ರೇಷು" ಪದ ಪ್ರಯೋಗದಲ್ಲಿ ವಚನವಕ್ರತೆ ಇದೆ [ಒಂದು ಹೆಸರನ್ನು ಸೂಚಿಸಲು, 'ಗೋತ್ರ' ಶಬ್ದದ ಬಹುವಚನ ರೂಪವನ್ನು ಪಡೆನುಡಿಯಾಗಿ ಬಳಸಲಾಗಿದೆ]. ಇದೆಲ್ಲವೂ ಸಹೃದಯರ ಮನಸ್ಸಿಗೆ ಮುದ ನೀಡುವಂಥವಾಗಿವೆ. ತಾನೇ ಚಿತ್ರಿಸಿದ ತನ್ನ ಪ್ರಿಯತಮೆಯ ಚಿತ್ರವನ್ನು ನೋಡುತ್ತ ತನ್ನ ಹೃದಯದಲ್ಲಿ ಅಚ್ಚೊತ್ತಿರುವ ನಲ್ಲೆಯ ಗಾಢಸ್ಮರಣೆಯಿಂದ ಹೇಳುತ್ತಾನೆ.

ಅಕ್ಲಿಷ್ಟ ಬಾಲತರು ಪಲ್ಲವ ಲೋಭನೀಯಂ
ಪೀತಂ ಮಯಾ ಸದಯಮೇವ ರತೋತ್ಸವೇಷು-|
ಬಿಂಬಾಧರಂ ಸ್ಪೃಶಸಿ ಚೇತ್ ಭ್ರಮರ ಪ್ರಿಯಾಯಾಃ
ತ್ವಾಂ ಕಾರಯಾಮಿ ಕಮಲೋದರ ಬಂಧನಸ್ಥಮ್ [೧೨]

[ಶಾಕುಂತಲ VI-20]

ಬಾಡದಿರುವೆಳೆಬಳ್ಳಿ ಚಿಗುರಂತೆ
ಮನಗೆದ್ದುದನು
ರತಿಕೇಳಿಯೊಳು ಕೂಡ ಮೆಲುಮೆಲನೆ
ನಾನೀಂಟಿದೀ ತೊಂಡೆ ಹಣ್ ತುಟಿಯನು
ಮುಟ್ಟಿದೆಯಾದೊಡೆ ಎಲೆ ದುಂಬಿಯೆ
ಕಮಲ ಗರ್ಭದೊಳೆ ಸೆರೆಗೈವೆ ನಿನ್ನನು [೧೨]

ರಾಜನ ಬಾಯಿಂದ ಈ ಮಾತುಗಳು ಬರುತ್ತಿರುವಂತೆಯೇ ನಮ್ಮ ಹೃದಯಕ್ಕೆ ಆಸ್ವಾದ್ಯವಾಗಿ ಬಿಡುತ್ತವೆ.

ಕವಿಪ್ರತಿಭೆಯು ಸೃಜಿಸಿರುವ "ಉತ್ಪಾದ್ಯಲಾವಣ್ಯದ" ಈ ಪ್ರಕರಣವಿಲ್ಲದೆ ಇದ್ದರೆ ರಾಜನು ನಿಷ್ಕಾರಣವಾಗಿ ತನ್ನ ನಲ್ಲೆಯನ್ನು ಮರೆತ ಕಳಂಕ, ಮೂಲ ಶಾಕುಂತಲೋಪಾಖ್ಯಾನಕ್ಕೆ ಹತ್ತಿದ ಹಾಗೆ ನಾಟಕಕ್ಕೂ ಹತ್ತುತ್ತಿತ್ತು.

ಕಾರಿಕೆಯಲ್ಲಿ ಹೇಳಲಾಗಿರುವ ಉತ್ಪಾದ್ಯ ಲಾವಣ್ಯವನ್ನು ಎರಡು ರೀತಿಯಲ್ಲಿ ವ್ಯಾಖ್ಯಾನಿಸಬೇಕಾಗುತ್ತದೆ. ಮೊದಲನೆಯದು, ಈ ಮುಂಚೆ ಇಲ್ಲದೆ ಇದ್ದುದನ್ನು ಕಲ್ಪನೆಯಿಂದ ಹೊಸದಾಗಿ ಸೃಷ್ಟಿಸುವುದು, ಎರಡನೆಯದು ಮೂಲದಲ್ಲಿ ಅನೌಚಿತ್ಯದಿಂದ ಕೂಡಿರುವ ಪ್ರಕರಣವನ್ನು ಸಹೃದಯರ ಹೃದಯಕ್ಕೆ ಆಹ್ಲಾದವುಂಟಾಗುವ ರೀತಿಯಲ್ಲಿ ಔಚಿತ್ಯಪೂರ್ಣವಾಗಿ ಮಾರ್ಪಾಟು

ಮಾಡುವುದು.

ಇದಕ್ಕೆ ಉದಾಹರಣೆಯು ಉದಾತ್ತರಾಘವ ನಾಟಕದ ಮಾರೀಚವಧ ಪ್ರಕರಣದಲ್ಲಿ ಸಿಗುತ್ತದೆ. ಇದನ್ನು ಮೊದಲ ಉನ್ಮೇಷದಲ್ಲಿ ಈಗಾಗಲೇ ವ್ಯಾಖ್ಯಾನಿಸಲಾಗಿದೆ. ಈ ರೀತಿಯ ಪ್ರಕರಣ ವಕ್ರತೆಯ ಸೌಂದರ್ಯದ ಇತರೆ ಉದಾಹರಣೆಗಳನ್ನು, ಮಹಾಕವಿಗಳ ಕಾವ್ಯದಲ್ಲಿ ಸಹೃದಯರೇ ಕಂಡುಕೊಳ್ಳಬೇಕು.

> ನಿರಂತರ ರಸೋದ್ಗಾರಗರ್ಭ ಸಂದರ್ಭನಿರ್ಭರಾಃ|
> ಗಿರಃ ಕವೀನಾಂ ಜೀವಂತಿ ನ ಕಥಾಮಾತ್ರ ಮಾಶ್ರಿತಾಃ [೧೩]

ಇದು ಅಂತರಶ್ಲೋಕ

> ಮಹಾಕವಿಗಳ ವಾಣಿಯು, ನಿರಂತರವಾಗಿ ರಸಸ್ಯಂದಿಯಾದ ಪ್ರಕರಣ (ಸಂದರ್ಭ) ಗಳನ್ನೊಳಗೊಂಡಿರುವಂಥವುಗಳಿಂದ ಜೀವಂತವಾಗಿರುತ್ತದೆಯೇ ಹೊರತು ಕೇವಲ ಮೂಲ ಕಥೆಯನ್ನನುಸರಿಸುವುದರಿಂದ ಅಲ್ಲ. [೧೩]

ಪ್ರಕರಣ ವಕ್ರತೆಯ ಅನ್ಯ (ತೃತೀಯ) ಪ್ರಕಾರವನ್ನು ಪ್ರಕಾಶಿತಗೊಳಿಸಲಾಗುವುದು.

> *ಪ್ರಬಂಧಸ್ಯೈಕ ದೇಶಾನಾಂ ಫಲಬಂಧಾನುಬಂಧವಾನ್|*
> *ಉಪಕಾರ್ಯೋಪ ಕರ್ತೃತ್ವ ಪರಿಸ್ಪಂದಃ ಪರಿಸ್ಫುರನ್[5]*
>
> *ಅಸಾಮಾನ್ಯಸಮುಲ್ಲೇಖಿ ಪ್ರತಿಭಾ ಪ್ರತಿಭಾಸಿನಃ*
> *ಸೂತೇ ನೂತನ ವಕ್ರತ್ವರಹಸ್ಯಂ ಕಸ್ಯ ಚಿತ್ಕವೇಃ[6]*

ಆತ್ಯಂತಿಕ ಫಲ(ಗುರಿ) ಸಾಧನೆಯ ಉದ್ದೇಶದಿಂದ ಕೃತಿಯ ವಿವಿಧ ಭಾಗಗಳಲ್ಲಿ ವರ್ಣಿಸಲಾದ ವಿವಿಧ ಪ್ರಕರಣಗಳು ಪರಸ್ಪರ ಉಪಕಾರ್ಯೋಪ ಕರ್ತೃತ್ವ ಸಂಬಂಧದಿಂದ ಒಂದಕ್ಕೊಂದು ಬೆಸೆಯಲ್ಪಟ್ಟಿರುತ್ತವೆ. ಇಂಥ ಪ್ರಕರಣಗಳಲ್ಲಿ ಕಣ್ಣಿಗೆ ಹೊಡೆಯುವಂತೆ ಸಾವಯವ ಸಂಬಂಧ ಅಥವಾ ಅವಯವೈಕ್ಯತೆ ಇರುತ್ತದೆ.

ಇಂಥ ಸಾವಯವ ಸಂಬಂಧವು ಮೌಲಿಕ ಸೃಜನಶೀಲತೆಯ ತಿರುಳನ್ನು ಅಭಿವ್ಯಕ್ತಿಸುತ್ತದೆ. ಅಸಾಮಾನ್ಯ ನಿರ್ಮಾಣಶೀಲ ಪ್ರತಿಭಾಸಂಪನ್ನತೆಯನ್ನು ವರವಾಗಿ ಪಡೆದಿರುವ ಅದ್ಭುತ ಕಾವ್ಯ ಪ್ರತಿಭಾಸಂಪನ್ನ ಕವಿಯಲ್ಲಿ ಮಾತ್ರ ಈ ನೂತನ ವಕ್ರತ್ವವು ಹೊರಹೊಮ್ಮುವುದು. [5 ಮತ್ತು 6]

ಮೌಲಿಕ ಪ್ರತಿಭಾ ಸತ್ವವು ಔಚಿತ್ಯ ಪೂರ್ಣವಾದ ಸಂಗತಿಗಳಿಂದ ಕೂಡಿರುವ, ಕಥಾ ಸಂವಿಧಾನ ರಚನಾ ಕಲೆಯಲ್ಲಿ ನಿಷ್ಣಾತರಾದ ವಿರಳ ಕವಿ ಕೃತಿಗಳಲ್ಲಿ ಮಾತ್ರ ಕಂಡುಬರುವಂಥದು. ಕೃತಿಯಲ್ಲಿ ಸೇರಿರುವ ವಿವಿಧ ಸಂಗತಿಗಳ ನಡುವಿನ ಸಂಬಂಧ ಪರಸ್ಪರ ಸಹಾಯದ್ದು ಅಥವಾ ಬೆಂಬಲದ್ದು. ಇಡೀ ಕೃತಿಗೆ ಸಂಬಂಧಿಸಿದಂತೆ ಅವೆಲ್ಲವೂ (ಪ್ರಕರಣಗಳು) ಕೃತಿಯ ಉದ್ದಿಷ್ಟ ಗುರಿಯತ್ತ ಕ್ರಮಿಸಬೇಕು. ಕವಿಯು ಅಸಾಧಾರಣವೂ ಅತುಲನೀಯವೂ ಆದ ಸೃಜನಶೀಲ ಪ್ರತಿಭಾಶಕ್ತಿಯನ್ನು ಹೊಂದಿದ್ದಾಗ ಮಾತ್ರ ಇದು ಸಾಧಿತವಾಗುತ್ತದೆ. ಈ ಎಲ್ಲ ಸೌಂದರ್ಯವು ಸಾಹಿತ್ಯ ಕೃತಿಯೊಂದರಲ್ಲಿ ಸಂಭವಿಸುವ ವಿವಿಧ ಘಟನೆಗಳಿಗೆ (ಪ್ರಕರಣಗಳಿಗೆ)

ಸಂಬಂಧಿಸಿದ್ದಾಗಿದೆ.

ಇದರ ಒಟ್ಟಾರೆ ಮಥಿತಾರ್ಥವೆಂದರೆ, ಸಾಹಿತ್ಯ ಕೃತಿಯೊಂದರಲ್ಲಿ ಕಂಡುಬರುವ ಪ್ರತಿಯೊಂದು ಪ್ರಕರಣವೂ ಅದರದ್ದೇ ಆದ ವಿಶಿಷ್ಟ ಸೌಂದರ್ಯವನ್ನು ಹೊಂದಿರುತ್ತದೆ. ಆದರೆ ಇದೆಲ್ಲಕ್ಕಿಂತ ಮಿಗಿಲಾಗಿ ಕೆಲವೊಮ್ಮೆ ಈ ಎಲ್ಲ ಪ್ರಕರಣಗಳನ್ನೂ ಮುಕ್ತಾಯ ದೊಂದಿಗೆ ಸಮರಸವಾಗಿ ತಳುಕು ಹಾಕುವ ಹಾಗೂ ಅವುಗಳಲ್ಲೇ ಪರಸ್ಪರ ಸಹಾಯ ಅಥವಾ ಅಗತ್ಯತೆಗೆ ಅವಕಾಶವೀಯುವಂಥ ಸಜೀವ ಸಂಬಂಧ ಸೌಂದರ್ಯವು ಮಿಂಚುತ್ತದೆ. ಅದು ಎಲ್ಲ ಕವಿಗಳ ಕೃತಿಗಳ ಸಾಮಾನ್ಯ ಲಕ್ಷಣವಂತೂ ಅಲ್ಲ. ಅಸಾಮಾನ್ಯವಾದ ಕಾವ್ಯ ಶಕ್ತಿಯನ್ನು ದೈವದತ್ತವಾಗಿ ಪಡೆದಿರುವಂಥ ಹಾಗೂ ಸಹೃದಯರ ಸಂವೇದನೆಯ ರಹಸ್ಯವನ್ನು ಬಲ್ಲಂಥ ಕವಿಗಳಲ್ಲಿ ಮಾತ್ರ ಅಪೂರ್ವವಾಗಿ ಇದು ಕಂಡು ಬರುವಂಥದು. ಕಥೆಯನ್ನು ಹಾಗೆ ಸಾವಯವ ಸಂಬಂಧ ಇರುವಂತೆ ರಚಿಸುವುದರಲ್ಲೇ ಅವರ ಅಸಾಮಾನ್ಯ ಕಾವ್ಯ ಪ್ರತಿಭೆ ಅಥವಾ ಸ್ವೋಪಜ್ಞತೆ ಇರುವುದು. ಇದಕ್ಕೆ ಉದಾಹರಣೆಯನ್ನು ಪುಷ್ಪದೂಷಿತಕ*ದ ಎರಡನೇ ಅಂಕದಲ್ಲಿ ನೋಡಬಹುದು.

ಯಾತ್ರೆಯಿಂದ ಅನಿರೀಕ್ಷಿತವಾಗಿ ಹಿಂತಿರುಗಿದ ನಾಯಕ ಸಮುದ್ರಗುಪ್ತನು ತನ್ನ ಹೆಂಡತಿಯ ವಿಷಯಕ್ಕೆ ಪ್ರಬಲ ಮದನೋನ್ಮಾದದಿಂದ ಕೂಡಿದವನಾಗಿ ಆದಿನ ಅಪರಾತ್ರಿಯಲ್ಲಿ ಕಳ್ಳನಂತೆ ಅವಳ ಅಂತಃಪುರವನ್ನು ಪ್ರವೇಶಿಸುತ್ತಾನೆ. ಹಾಗೆ ಬಲವಂತವಾಗಿ ಒಳನುಗ್ಗುವಾಗ ನಿದ್ರಿಸುತ್ತಿದ್ದ ಅಂತಃಪುರದ ಕಾವಲುಗಾರ ಕುವಲಯನ ಮೈಗೆ ಭಯೋದ್ವೇಗ ದಿಂದ ರಂಜಿಸುತ್ತಿದ್ದ ತನ್ನ ಶರೀರವು ತಾಗಿ, ಅವನು ಎಚ್ಚರಗೊಳ್ಳುತ್ತಾನೆ. ಆಗ ಒಳಗೆ ಪ್ರವೇಶಿಸುವ ಸಲುವಾಗಿ ತನ್ನ ಉಂಗುರವನ್ನು ಲಂಚವಾಗಿ ನೀಡುತ್ತಾನೆ. ಮುಂದೆ ನಾಲ್ಕನೇ ಅಂಕದಲ್ಲಿ ತನ್ನ ಸೊಸೆ ಕಲಂಕಿತಳೆಂದು ಭಾವಿಸಿದ್ದ ನಂದಯಂತಿಯ ಮಾವ ಸಾರ್ಥವಾಹ ಸಾಗರದತ್ತನಿಗೆ, ಅವಳ ಶೀಲದ ಬಗೆಗಿನ ಸಂಶಯವನ್ನು ಹೋಗಲಾಡಿಸುವಲ್ಲಿ ಸಮುದ್ರ ದತ್ತನು ಹಿಂದೆ ತನ್ನ ಪತ್ನಿಯನ್ನು ಗುಪ್ತವಾಗಿ ಕೂಡಿದ್ದ ವೃತ್ತಾಂತವನ್ನು ಇದೇ ಸೇವಕನೇ ತಿಳಿಸುವ ಮೂಲಕ ಈ ಉಂಗುರದ ಪ್ರಕರಣವು ಸಹಾಯಕವಾಗಿ ಪರಿಣಮಿಸುತ್ತದೆ. ನಾಟಕದಲ್ಲಿ ಸಾಗರದತ್ತನು ಹೀಗೆ ಹೇಳುತ್ತಾನೆ.

ತದಂಗುಲೀಯಂ ಸುತನಾಮಚಿಹ್ನಂ
ಚರಿತ್ರ ಶುದ್ಧಿಂ ವಿಶದೀಕರೋತಿ|
ಮಮಾಪಿ ಸಾಮಾನ್ಯ ಸಮುದ್ಯತೋಽನು-
ತಾಪಸ್ತು ಪಾಪಸ್ಯ ಭವೇತ್ಸ ಶುದ್ಧಿಃ[೧೪]

---

*. ಕುಂತಕನು ಉಲ್ಲೇಖಿಸಿರುವ ಈ ಪುಷ್ಪದೂಷಿತಕವೆಂಬ ಪ್ರಕರಣ ಈಗ ದೊರೆಯುವುದಿಲ್ಲ. ಧನಂಜಯನ ದಶರೂಪಕದ ವ್ಯಾಖ್ಯಾನವಾದ "ದಶರೂಪಕಾವಲೋಕನ"ದಲ್ಲಿ ಇದರ ಚರ್ಚೆ ಇದೆ (3-42) ಸಾಹಿತ್ಯ ದರ್ಪಣಕಾರ ವಿಶ್ವನಾಥನೂ 6, 225ರಲ್ಲಿ ಇದರ ಹೆಸರನ್ನು ಉಲ್ಲೇಖಿಸಿದ್ದಾನೆ ಅದನ್ನವನು ಪುಷ್ಪಭೂತಿಷ" ಎನ್ನುತ್ತಾನೆ.

ಮಗನ ಹೆಸರನು ತಳೆದಿರುವ ಉಂಗುರವಿದುವು
ಸೊಸೆಯ ಚಾರಿತ್ರ ಶುದ್ಧಿಯನು ಸಾರುತಿದೆ ಸುಸ್ಪಷ್ಟ
ನನ್ನ ಅನುತಾಪವೇ ನನ್ನ ಪಾಪವನು ತೊಳೆದು
ಶುದ್ಧನ ಮಾಡುವುದಿದು ನಿಶ್ಚಯ [೧೪]

ಈ ಮುಂಚೆ ಏಕೆ ನನಗೀ ಸಂಗತಿಯನ್ನು ನೀನು ತಿಳಿಸಲಿಲ್ಲ ಎಂದು ಕಾವಲುಗಾರನನ್ನು ಆಕ್ಷೇಪಿಸಿದಾಗ, ಅವನ ಉತ್ತರ

ತದೋಪಣಿಕಮಂತೇ ರಾಮ ಪಣಿ ಯಾತ
ತಹಿಂ ಏವ್ವ ಪವಿಸಂತಿ| [೧೫]

ದಿಗ್ಧಾಚ್ಛಾದಿತಂ ಚ ಮಯೇ ಸ ಅಂ ಏವ್ವ ಪೇಕ್ಕಿ ಅಂ
ಭಸ್ಸಾಹನ ಸಂಪದಂ ಪುತನ ವೇದಣಿಸ್ಸದಿ [೧೫]

[ಈ ಪ್ರಾಕೃತ ಪಾಠ ಅನುವಾದಿಸಲು ಸಾಧ್ಯವಾಗದಷ್ಟು ಕೆಟ್ಟಿದೆ]. ಸಹೃದಯರು ಉಳಿದದ್ದನ್ನು ಮೂಲ ನಾಟಕ ನೋಡಿಯೇ ತಿಳಿಯಬೇಕು. ಅಥವಾ ಉತ್ತರರಾಮ ಚರಿತೆಯಿಂದ ಒಂದು ಉದಾಹರಣೆಯನ್ನು ನೋಡಬಹುದು.

ಅಲ್ಲಿ ಪೂರ್ಣ ಗರ್ಭಿಣ್ಯವಸ್ಥೆಯಲ್ಲಿರುವ ವೈದೇಹಿಗೆ, ಅವಳ ಮನರಂಜನೆಯ ಸಲುವಾಗಿ ಹಿಂದಿನ ರಾಜರುಗಳ ಸುಂದರ ಚಿತ್ರಪಟಗಳನ್ನು ತೋರಿಸುತ್ತಿದ್ದಾನೆ. ಹಾಗೆ ತೋರಿಸುತ್ತಿದ್ದಾಗ ನಿರ್ವ್ಯಾಜ ವಿಜಯದಿಂದ ವಿಜೃಂಭಿಸುತ್ತಿರುವ ಜೃಂಭಕಾಸ್ತ್ರವನ್ನು ಲಕ್ಷಿಸಿ ಹೇಳುತ್ತಾನೆ.

"ಸರ್ವಥೇದಾನೀಂ ತ್ವತ್ಪ್ರಸೂತಿಮುಪಸ್ಥಾಸ್ಯಂತಿ"
ಈಗ ಇವೆಲ್ಲವೂ ನಿನ್ನ ಮಕ್ಕಳ ಸೇವೆಗೂ ನಿಲ್ಲುವುವು

ರಾಮನ ಈ ಹೇಳಿಕೆ, ಮುಂದೆ ಐದನೇ ಅಂಕದಲ್ಲಿ ಸೀತೆಯ ಮಗ ಲವನನ್ನು ಗುರುತಿಸುವಲ್ಲಿ ಸಹಾಯಕವಾಗುತ್ತದೆ. ಅಲ್ಲಿ ಲವನು ವೀರಚರ್ಯೆಗಳಲ್ಲಿ ಚತುರನಾದ ಚಂದ್ರಕೇತುವನ್ನು ಕೆಲ ಕಾಲ ರಣಕ್ರೀಡೆಗೆ ಆಹ್ವಾನಿಸುತ್ತಿದ್ದಾನೆ. ಕಾರಣ ಅವನನ್ನು ದಮನಮಾಡಲು ಭಾರೀ ಗದ್ದಲ ಮಾಡುತ್ತ ವಿಜೃಂಭಿಸುತ್ತಿರುವ ಬೃಹತ್ ಸೈನ್ಯಗಳನ್ನು ಹಿಮ್ಮೆಟಿಸುವಲ್ಲಿ ಅವನಿಗಿರುವ ವಿಜಯದ ಉತ್ಕಂಠೆ. ಇಂಥ ಲವನಿಂದ ಜೃಂಭಕಾಸ್ತ್ರ ಪ್ರಯೋಗದ ಮೂಲಕ ಅಪೂರ್ವವಾದೊಂದು ಉಪಕಾರವನ್ನು ಸೃಷ್ಟಿಸುತ್ತಾನೆ.

ಲವ : **ಭವತು ಕಾಲ ಹರಣ ಪ್ರತಿಷೇಧಾಯ, ಜೃಂಭಕಾಸ್ತ್ರೇಣ, ತಾವತ್ ಸೈನ್ಯಾನಿ ಸಂಸ್ತಂಭಯಾಮಿ.**
ಕಾಲಹರಣವನ್ನು ತಪ್ಪಿಸಲೋಸುಗ ಜೃಂಭಕಾಸ್ತ್ರದಿಂದ ಸೇನೆಗಳನ್ನು ನಿಶ್ಚಲಗೊಳಿಸುತ್ತೇನೆ.

ಸುಮಂತ್ರ : **ತತ್ಕಿಮಕಸ್ಮಾದುಲ್ಲೋಲಾಃ ಸೈನ್ಯಯೋಧಾಃ ಪ್ರಶಾಮ್ಯಂತಿ**
ಅದು ಹೇಗೆ ಇದ್ದಕ್ಕಿದ್ದಂತೆ ನಮ್ಮ ಸೈನಿಕರ ಕೋಲಾಹಲವೆಲ್ಲ ತಣ್ಣಗಾಗಿದೆ?

ಲವ : ಪಶ್ಯಾಮ್ಯೇನಮಧುನಾ ಪ್ರಗಲ್ಭಮ್!
ಈಗ ಇವನ ಚಾತುರ್ಯವೆಷ್ಟಿದೆ ನೋಡುತ್ತೇನೆ

ಸುಮಂತ್ರ : (ಸಸಂಭ್ರಮಮ್) ವತ್ಸ, ಕುಮಾರೇಣಾನೇನ ಜೃಂಭಕಾಸ್ತ್ರಮಭಿಮಂತ್ರಿತಮ್|
ವತ್ಸ, ಈ ಹುಡುಗನು ಇದೀಗ ಜೃಂಭಕಾಸ್ತ್ರವನ್ನಭಿಮಂತ್ರಿಸಿದ್ದಾನೆ

ಚಂದ್ರಕೇತು: ಆರ್ಯ; ಕಃ ಸಂದೇಹ :-
ವ್ಯತಿಕರ ಇವ ಭೀಮೋ ವೈದ್ಯುತಸ್ತಾಮಸಶ್ಚ
ಪ್ರಣಿಹಿತಮಪಿ ಚಕ್ಷುರ್ಗ್ರಸ್ತಮುಕ್ತಂ ಹಿನಸ್ತಿ
ಅಭಿಲಿಖಿತಮಿವೈತತ್ ಸೈನ್ಯಮಸ್ಪಂದಮಾಸ್ತೇ
ನಿಯತಮಜಿತ ವೀರ್ಯಂ ಜೃಂಭತೇ ಜೃಂಭಕಾಸ್ತ್ರಮ್ [೧೬]

ಆಶ್ಚರ್ಯಮ್! ಆಶ್ಚರ್ಯಮ್
ಪಾತಾಲೋದರ ಕುಂಜ ಪುಂಜಿತ ತಮಃ ಶ್ಯಾಮೈರ್ನಭೋ ಜೃಂಭಕೈ-
ರುತ್ತಪ್ತಸ್ಫುರದಾರಕೂಟ ಕಪಿಲ ಜ್ಯೋತಿ ರ್ಜ್ವಲದ್ದೀಪ್ತಿಭಿಃ|
ಕಲ್ಪಕ್ಷೇಪ ಕಠೋರ ಭೈರವ ಮರುದ್ವ್ಯಸ್ತೈರ ವಸ್ತೀರ್ಯತೇ
ನೀಲಾಂಭೋದತಡಿತ್ಕಡಾರ ಕುಹರೈರ್ವಿಂಧ್ಯಾದ್ರಿಕೂಟೈರಿವ [೧೭]

ಚಂದ್ರಕೇತು: ಆರ್ಯ, ಇದರಲ್ಲಿ ಸಂದೇಹವೇನು?
ಮಿಂಚು ಕತ್ತಲೆಗಳೆರಡು ಸಂಧಿಸಿದ ಹಾಗೆ
ಭಯಾನಕವಾಗಿದೆ.
ತೆರೆಯದಿದ್ದರು ಕಣ್ಣು
ದೃಷ್ಟಿಯ ನೀಗಿಕೊಂಡು ನೋವುದು ನಿಶ್ಚಯ
ಸೈನ್ಯವೆಲ್ಲವು ಚಿತ್ರದಲಿ ಬರೆದಂತೆ ನಿಶ್ಚಲ
ನಿಜಕು ಇದು ವಿಜಯಿ ಜೃಂಭಕಾಸ್ತ್ರದ ವಿಜೃಂಭಣೆ [೧೬]

ಆಶ್ಚರ್ಯ! ಆಶ್ಚರ್ಯ
ಪಾತಾಳದಾಳ ಕುಹರಗಳಲ್ಲಿ ರಾಶಿಯಾಗಿಹ
ಅಂಧಕಾರವನು, ಕುದಿವ ಹಿತ್ತಳೆಯಂಥ
ಅರುಣ ಜ್ಯೋತಿಯನು ಅಡಿಗಡಿಗೆ
ಚಿಮ್ಮಿಸಿವೆ ಜೃಂಭಕಾಸ್ತ್ರಗಳು
ಕಲ್ಪಾಂತದ ಬಿರುಗಾಳಿಯು ಬೀಸಿ
ವಿಂಧ್ಯ ಶಿಖರಗಳು ಹಾರಿದಂತೆ
ಕಣ್ಕೋರೈಸುವ ಮಿಂಚನು ಚಿಮ್ಮುತೆ
ಕಪ್ಪು ಮೋಡಗಳು ಕವಿದಿವೆ ಬಾನನು [೧೭]- ಇತ್ಯಾದಿ

1 ಉತ್ತರ ರಾಮಚರಿತ - 5ನೇ ಅಂಕ

ಸಾಹಿತ್ಯ ಕೃತಿಯೊಂದರ ಕಥಾಸಂವಿಧಾನವೊಂದರಲ್ಲಿ ಹಲವು ಪ್ರಕರಣಗಳು ಒಟ್ಟಾಗಿ ಸೇರಿಕೊಂಡಿದ್ದರೂ ಪ್ರಕರಣ ರಚನಾ ವಿನ್ಯಾಸದಲ್ಲಿರುವ ನಿರ್ಮಾಣ ಕಲೆ ಒಂದೇ ಆಗಿದೆ. ಆದ್ದರಿಂದಲೇ ಕಾರಿಕೆಯಲ್ಲಿ 'ಏಕದೇಶಾನಾಮ್' ಎಂದು ಬಹುವಚನವನ್ನು ಪ್ರಯೋಗಿಸಲಾಗಿದೆ. ಎರಡು ಅಂಶಗಳ ಉಪಕಾರ್ಯ ಉಪಕಾರಕ ಭಾವದ ಉದಾಹರಣೆಗಳನ್ನು ಮೇಲೆ ನೀಡಲಾಗಿದೆ. ಬಹು ಅಂಶಗಳ ಉಪಕಾರ್ಯ, ಉಪಕಾರಕ ಭಾವವನ್ನು ಸಹೃದಯರು ಸ್ವಯಂ ಕಂಡುಕೊಳ್ಳಬೇಕು.

ಏಕಪ್ರಕರಣ ಪ್ರಾಪ್ತ ಪ್ರಕಾರಾಂತರ ಶೋಭಿತಃ|
ಪ್ರಬಂಧೋ ಭಾಸತೇ ನೂತ್ನ ಪರಿಸ್ಪಂದ ಇವೋದಿತಃ [೧೮]

ಇದು ಅಂತರಶ್ಲೋಕ

ಪ್ರಕರಣ ಸೌಂದರ್ಯವು ಕಾಣಿಸಿಕೊಳ್ಳುವ ಬಗೆಗಳು ವಿಧವಿಧವಾಗಿವೆ. ಅವುಗಳಲ್ಲಿ ಯಾವುದಾದರೊಂದನ್ನು ಅಳವಡಿಸಿಕೊಂಡಿರುವ ಪ್ರಬಂಧ ಕಾವ್ಯವು ಕವಿಯ ಮೌಲಿಕ ಪ್ರತಿಭೆಗೆ ಹಿಡಿದ ದರ್ಪಣದಂತೆ ಶೋಭಿಸುತ್ತದೆ. [೧೮]

ಪ್ರಕರಣ ವಕ್ರತೆಯ ಇನ್ನೊಂದು ಪ್ರಕಾರವನ್ನು ಈ ಮುಂದಿನ ಶ್ಲೋಕದಲ್ಲಿ ನೋಡಬಹುದು.

ಪ್ರತಿ ಪ್ರಕರಣಂ ಪ್ರೌಢ ಪ್ರತಿಭಾಭೋಗ ಯೋಜಿತಃ|
ಏಕ ಏವಾಭಿಧೇಯಾತ್ಮಾ ಬಧ್ಯಮಾನಃ ಪುನಃ ಪುನಃ[7]

ಅನ್ಯೂನ ನೂತನೋಲ್ಲೇಖರಸಾಲಂಕರಣೋಜ್ವಲಃ
ಬಧ್ನಾತಿ ವಕ್ರತೋದ್ಭೇದ ಭಂಗೀಮುತ್ಪಾದಿತಾದ್ಭುತಾಮ್[8]

ಒಂದೇ ವಸ್ತುವು ಪ್ರತಿ ಪ್ರಕರಣದಲ್ಲೂ ಮತ್ತೆ ಮತ್ತೆ ಕವಿಯ ಪ್ರೌಢ ಪ್ರತಿಭೆಯ ಸ್ಪರ್ಶದಿಂದ ವರ್ಣಿಸಲ್ಪಟ್ಟಾಗ [7]

ಹಾಗೂ ಅನ್ಯೂನವೂ (ಪರಿಪೂರ್ಣವೂ) ನೂತನವೂ ಆದ ರಸಾಲಂಕಾರಗಳ ಉಜ್ವಲತೆಯನ್ನು ಬಿಂಬಿಸುವಂತಾದಾಗ ಅದು ವಕ್ರತೆಯ ಅದ್ಭುತವಾದ ಭಂಗಿಯನ್ನು ಅಭಿವ್ಯಕ್ತಿಸುತ್ತದೆ. ಅಂಥ ಹೊಸಕ್ರಮವು, ವಕ್ರತೆಯ ಸೌಂದರ್ಯವನ್ನು ಪ್ರಭಾವಪೂರ್ಣವಾದ ರೀತಿಯಲ್ಲಿ ಅಳವಡಿಸಿಕೊಳ್ಳುತ್ತದೆ. [8]

ಇಲ್ಲಿ 'ಬಧ್ನಾತಿ' ಎನ್ನುವುದರ ಅರ್ಥ ಯಾವುದನ್ನು ನಿಯಂತ್ರಿಸುತ್ತದೋ, ಹಿಡಿದಿರಿಸುತ್ತದೋ ಅದನ್ನು. ಯಾವುದನ್ನು? ಗಂಭೀರವಾದ ವಕ್ರಭಾವದ ಆವಿರ್ಭಾವಾದಿಂದ ಉಂಟಾದ ಶೋಭೆಯನ್ನು. ಯಾವ ರೀತಿಯ ಶೋಭೆ? ಆಶ್ಚರ್ಯವನ್ನುಂಟುಮಾಡುವ ಅರ್ಥಾತ್ ಕುತೂಹಲ ಜನಕವಾದ. (ಭಂಗಿಮೆಯನ್ನು ಪೋಷಿಸುತ್ತದೆ). ಕಾವ್ಯವಸ್ತುವು ಪ್ರಮುಖವಾದ ಬದಲಾವಣೆಗಳಿಲ್ಲದೆ ಅದೇ ಆಗಿದ್ದಾಗ್ಯೂ. ಯಾವ ಸಂದರ್ಭಗಳಲ್ಲಿ? ಎಂದರೆ, ವರ್ಣಿತ ವಸ್ತುವಿಗನುಗುಣವಾಗಿ, ಔಚಿತ್ಯಪೂರ್ಣವಾಗಿ ಶೈಲಿಯನ್ನು ಅಳವಡಿಸಿದಾಗ ಹಾಗೂ ಅದು ತುಂಬ ಸುಂದರವಾಗಿದ್ದಾಗ. ಹೇಗೆ? ಮತ್ತೆ ಮತ್ತೆ. ಅಂದರೆ ಪುನಃ ಪುನಃ. ಎಲ್ಲೆಲ್ಲಿ? ಪ್ರತಿಯೊಂದು

ಪ್ರಕರಣದಲ್ಲೂ. ಅಥವಾ ಕೃತಿಯ ಪ್ರತಿಯೊಂದು ಭಾಗದಲ್ಲೂ. ಇದು ಪುನರುಕ್ತತೆಯ ದೋಷವನ್ನುಂಟುಮಾಡುವುದಿಲ್ಲವೆ? ಎಂದು ಕೇಳಬಹುದು. ಅಂಥ ಆರೋಪವನ್ನು ಹೋಗಲಾಡಿಸುವ ಸಲುವಾಗಿ, ಕವಿಯು, ಕಾವ್ಯವಸ್ತುವು ನೂತನವಾದ ಶೃಂಗಾರವೇ ಮೊದಲಾದ ರಸಗಳಿಂದ ಹಾಗೂ ರೂಪಕವೇ ಮೊದಲಾದ ಅಲಂಕಾರಗಳಿಂದ ಕಾಂತಿಯುಕ್ತವಾಗಿರಬೇಕು ಎನ್ನುತ್ತಾನೆ. ಇದು ಹೇಗೆ ಸಾಧ್ಯ ಎಂದರೆ, ಕವಿಯ ಪ್ರೌಢ ಪ್ರತಿಭಾ ಕೌಶಲದಿಂದ ಆಯೋಜಿತ ವಾಗಿರಬೇಕು. ಅಂದರೆ ರಸ ಮತ್ತು ಅಲಂಕಾರಗಳು ಕವಿಯ ಪರಿಣತ ಪ್ರತಿಭೆಯ ಫಲವಾಗಿ ಮೂಡಿ ಬಂದವಾಗಿದ್ದರೆ, ಒಂದೇ ವಸ್ತು ಮತ್ತೆ ಮತ್ತೆ ಪ್ರತಿಪ್ರಕರಣದಲ್ಲೂ ವರ್ಣಿತವಾದರೂ ಅದು ಹೊಸದೆಂಬಂತೆ ಅದ್ಭುತವಾಗಿಯೇ ತೋರುತ್ತದೆ.

ಇದರ ಸಾರಾಂಶವಿಷ್ಟೆ; ಕೃತಿಯೊಂದರಲ್ಲಿ 'ಚಂದ್ರೋದಯ ದಂಥ ವರ್ಣನೆಯ ಪ್ರಕರಣಗಳು ಒಂದಕ್ಕಿಂತ ಹೆಚ್ಚು ಬಾರಿ ಬರಬಹುದು. ಆದರೆ ಕಥಾ ವಸ್ತುವಿಗನುಗುಣವಾಗಿ ಮಾತ್ರ ಅವುಗಳ ವರ್ಣನೆ ಪುನಃ ಪುನಃ ಬಂದಿರಬಹುದು ಅಷ್ಟೆ. ಹಾಗಿದ್ದಾಗಲೂ, ಆ ವರ್ಣನೆಗಳು ಪರಿಪೂರ್ಣ ರಸಾಲಂಕಾರ ರಮಣೀಯತೆಯಿಂದ ಕೂಡಿದ್ದಾಗ ಮಾತ್ರವೇ ಅವು ರಮಣೀಯತೆಯ ಪರಾಕಾಷ್ಠೆಯನ್ನು ತಲುಪಿದ ವಕ್ರತೆಯನ್ನು ಪ್ರಸ್ತುತ ಪಡಿಸುತ್ತವೆ.

ಹರ್ಷಚರಿತೆಯಲ್ಲಿ ಒಂದಕ್ಕಿಂತ ಹಲವು ಬಾರಿ ಬರುವ ಪರ್ವತದ ವರ್ಣನೆಗಳು ನಿಶೆಯ ಅಂತ್ಯಗಳು ಇತ್ಯಾದಿಗಳು ಅಭಿನವ ಭಂಗಿಯಿಂದ ಕೂಡಿಕೊಂಡು ರಮಣೀಯವಾಗಿವೆ. ಸಹೃದಯರು ಮೂಲದಲ್ಲಿಯೇ ಓದಿ ಅವುಗಳ ಆನಂದವನ್ನನುಭವಿಸಬಹುದು. ಅವುಗಳು ಬಹಳವಾಗಿರುವುದರಿಂದ ಇಲ್ಲಿ ವಿಸ್ತೃತವಾಗಿ ವರ್ಣಿಸುವುದು ಅಶಕ್ಯ.

ಅದೇ ರೀತಿ ತಾಪಸವತ್ಸರಾಜ ನಾಟಕ. ಅದನ್ನು ನಾವು ರಸವಿಲಾಸ ಸರ್ವಸ್ವ ನಿವಾಸ ಎಂದು ಪರಿಗಣಿಸಬಹುದು. ಅದರಲ್ಲಿ ಕರುಣ ರಸವು ವಿಭಿನ್ನ ರೀತಿಯಲ್ಲಿ ಅಭಿವ್ಯಕ್ತವಾಗಿರುವುದನ್ನು ಕಾಣಬಹುದು.

ಉದಾಹರಣೆಗೆ ಎರಡನೇ ಅಂಕದಲ್ಲಿ

ರಾಜನು ಕರುಣೆಯಿಂದ ಮುಂದೆನೋಡಿ

ಹಾ! ದೇವಿ ಪಾದಪೈರಪ್ಯಪಗತಾಸಿ

ಹಾ! ದೇವಿ ನಿನ್ನ ಪ್ರೀತಿಯ ಮರಗಳಿಂದಲೂ ದೂರವಾದೆಯಾ

ಕುರವಕ ತರುರ್ಗಾಢ ಶ್ಲೇಷಂ ಮುಖಾಸವಲಾಲನಾಂ
ಬಕುಲವಿಟಪೀ, ರಕ್ತಾಶೋಕಸ್ತಥಾ ಚರಣಾಹಿತಮ್|
ತವ ಸುಕೃತಿನಃ ಸಂಭಾವ್ಯೈತೇ ಪ್ರಸಾದ ಮಹೋತ್ಸವಾನ್
ಅನುಗತ ದಶಾಃ ಸರ್ವೇ ಸರ್ವಶ್ಯಶೋ ನ ಯಥಾ ವಯಮ್ [೧೯]

ಕುರವಕ ತರುವು ನಿನ್ನ ಗಾಢಾಲಿಂಗನವ
ಬಕುಲ ವೃಕ್ಷವು ನಿನ್ನ ಮೊಗ ಮದಿರೆಯನು
ರಕ್ತಾಶೋಕವು ನಿನ್ನ ಚರಣ ಪ್ರಹಾರವನು ಪಡೆದು

ನಿನ್ನ ಪ್ರಸಾದವನು ಪಡೆದ ಮಹದಾನಂದಕೆ
ಭಾಗಿಗಳಾದ ಪುಣ್ಯಾತ್ಮಗಳೆಲ್ಲ
ನಿನ್ನ ಪಾಡನೆ ಹೊಂದಿದವು
ನನ್ನಂತೆ ಅವರಾರು ಶಠರಲ್ಲವು! [೧೯]

ಇಲ್ಲಿ ರಾಣಿಗೆ ಪ್ರೀತಿಪಾತ್ರಗಳಾದ ಗಿಡಬಳ್ಳಿಗಳೆಲ್ಲವೂ ಅಂತಃಪುರವನ್ನು ಸುಟ್ಟ ಬೆಂಕಿಯಲ್ಲಿಯೇ ಸುಟ್ಟು ಹೋದದ್ದನ್ನು ಕಂಡು ರಾಜನು ನೂತನ ಕೋಪಾವೇಶದಿಂದ ವಿವಶನಾಗಿದ್ದಾನೆ. ಅವೆಲ್ಲವೂ ಸಾವಿನಲ್ಲಿ ರಾಣಿಯನ್ನೇ ನಿಷ್ಠೆಯಿಂದ ಅನುಸರಿಸದವೆಂದು ರಾಜನ ಮನಸ್ಸಿಗೆ ಅನಿಸಿದೆ. ತಾನು ರಾಣಿಗೆ ನಿಷ್ಠೆ ತೋರುವಲ್ಲಿ ಅವುಗಳಿಗಿಂತ ತೀರಾ ನಿಕೃಷ್ಟನಾದೆನಲ್ಲ ಎಂಬ ಭಾವತೀವ್ರವಾಗಿ ಕಾಡುತ್ತಿದೆ. ಹಾಗೆ ನೋಡಿದರೆ ಅಚೇತನಗಳಾದ ಅವುಗಳೆಲ್ಲವೂ ಅವಳ ಶರೀರದ ಯಾವುದೋ ಒಂದು ಅಂಗದ ಕೃಪೆಯನ್ನನುಭವಿಸಿದವಾಗಿದೆ. ಇಷ್ಟಾದರೂ ಅವು ತಮ್ಮ ಸಾವಿನಿಂದ ರಾಣಿಯ ವಿಷಯಕ್ಕೆ ತಮಗಿರುವ ತೀವ್ರ ನಿಷ್ಠೆಯನ್ನು ತೋರಿವೆ. ಅದೇ ತಾನಾದರೋ, ಅವಳ ಪೂರ್ಣ ಕೃಪಾಕಟಾಕ್ಷಕ್ಕೆ ಪಾತ್ರನಾದವನು. ಅವಳ ಇಡೀ ದೇಹ ಸಮಸ್ತ ವನ್ನು, ಅವಳ ಸರ್ವಸ್ವವನ್ನು ಭರಪೂರ್ತಿಯಾಗಿ ಸವಿದವನು. ಇಷ್ಟಾದರೂ ಅವಳನ್ನನುಸರಿಸಿ, ಅವಳು ಬೆಂಕಿಯಲ್ಲಿ ದಗ್ಧಳಾಗಿ ಹೋದ ಕೂಡಲೇ ತಾನೂ ದಗ್ಧನಾಗಿ ಹೋಗಲಿಲ್ಲ. ಹಾಗಾಗಿ ತೀವ್ರ ನಾಚಿಕೆಯಲ್ಲಿ ರಾಜನು ತನ್ನನ್ನು ಅಧಮನೆಂದು ಭಾವಿಸುತ್ತ ನಿಂದಿಸಿಕೊಳ್ಳುತ್ತಾನೆ.

'ಧಾರಾವೇಶ್ಮ' ಇತ್ಯಾದಿ ಹಾಗೂ 'ಕರ್ಣ' ಇತ್ಯಾದಿ ಹಿಂದೆ ಉಲ್ಲೇಖಿಸಲಾದ ಶ್ಲೋಕಗಳೆರಡನ್ನೂ ಇಲ್ಲಿಗೆ ಹೊಂದಿಸಿಕೊಳ್ಳಬೇಕು. (3-27 & 3-29)

ಧಾರಾವೇಶ್ಮ ವಿಲೋಕ್ಯ ದೀನವದನೋ ಭ್ರಾಂತ್ವಾ ಚ ಲೀಲಾಗೃಹಾ-
ನ್ನಿಶ್ವಸ್ಯಾಯತಮಾಶು ಕೇಸರಲತಾ ವೀಥೀಷು ಕೃತ್ವಾ ದೃಶಃ |
ಕಿಂ ಮೇ ಪಾರ್ಶ್ವಮುಪೈಷಿ ಪುತ್ರಕ ಕೃತ್ಯೈಃ ಕಿಂ ಚಾಟುಭಿಃ ಕ್ರೂರಯಾ
ಮಾತ್ರಾ ತ್ವಂ ಪರಿವರ್ಜಿತಃ ಸಹ ಮಯಾ ಯಾಂತ್ಯಾತಿ ದೀರ್ಘಾಂ ಭುವಮ್
ಧಾರಾಗೃಹಗಳನು ನೋಡಿ ದೀನಮುಖನಾಗಿ
ಕ್ರೀಡಾಗೃಹಗಳೆಡೆ ಸುಳಿದಾಡಿ ತೇಕುತ್ತ
ಕೇಸರಲತೆಯ ಬೀದಿಗಳತ್ತ ಕಣ್ಣು ಹಾಯಿಸುತೆ
ನನ್ನಬಳಿಗೇಕೆ ಬರುತಿರುವೆ ಮುದ್ದು ಜಿಂಕೆಯೆ
ಮುದ್ದು ದನಿಗಳ ತೆಗೆಯೆ ಬರುವುದೇನೆಲೆ ವತ್ಸ ?
ನನ್ನನೆಂತೋ ಅಂತೆ ನಿನ್ನನೂ ತೊರೆದು
ದೂರದೇಶಕೆ ತೆರಳಿಹಳಾ ಕ್ರೂರ ಮಾತೆ[1]

ಮತ್ತು

1. III-27

ಕರ್ಣಾಂತ ಸ್ಥಿತ ಪದ್ಮರಾಗ ಕಲಿಕಾಂ ಭೂಯಃ ಸಮಾಕರ್ಷತಾ
ಚಂಚ್ವಾ ದಾಡಿಮ ಬೀಜಮಿತ್ಯಭಿಹತಾ ಪಾದೇನ ಗಂಡಸ್ಥಲೀ
ಯೇನಾಸೌ ತವ ತಸ್ಯ ನರ್ಮಸುಹೃದಃ ಖೇದಾನ್ಮುಹುಃ ಕ್ರಂದತೋ
ನಿಶ್ಯಂಕಂ ನ ಶುಕಸ್ಯ ಕಿಂ ಪ್ರತಿವಚೋ ದೇವಿ ತ್ವಯಾ ದೀಯತೇ
ನಿನ್ನ ಕಿವಿಯೊಳಗಿರ್ದ ಪದ್ಮರಾಗದ ಮಣಿಯ
ದಾಳಿಂಬೆ ಬೀಜವೆನೆ ಭ್ರಮಿಸಿ, ತನ್ನಯ
ಪಂಜದಿಂ ನಿನ್ನ ಕೆನ್ನೆಯನು ಉಜ್ಜುತ್ತ
ಒಂದೊಂದೆ ಬೀಜವನು ನಿಶ್ಯಂಕೆಯಿಂ ಕೊಕ್ಕಿನಿಂ
ಕುಕ್ಕಿ ತಿನಲೆತ್ನಿಸುತಿರ್ದ ನಿನ್ನ ನೇಹಿಗ ಮುದ್ದು ಗಿಳಿ
ವ್ಯಾಕುಲಗೊಂಡು ಬಾರಿ ಬಾರಿಗು ಚೀರುತಿದೆ
ಅದಕೆ ಮರುಮಾತುಗುಡದೆ ಸುಮ್ಮನೇಕಿರುವೆ ಎಲೆದೇವಿಯೆ[2]

ಅದೇ ನಾಟಕದ ಮೂರನೇ ಅಂಕದಲ್ಲಿ ರಾಜ (ನಿಟ್ಟುಸಿರುಬಿಡುತ್ತ ಕಣ್ಣೀರಿಡುತ್ತ ತನ್ನಲ್ಲಿಯೇ)

ಸರ್ವತ್ರ ಜ್ವಲಿತೇಷು ವೇಶ್ಮಸು ಭಯಾದಾಲೀಜನೇ ವಿದ್ರುತೇ
ತ್ರಾಸೋತ್ಕಂಪ ವಿಹಸ್ತಯಾ ಪ್ರತಿಪದಂ ದೇವ್ಯಾ ಪತಂತ್ಯಾ ತದಾ|
ಹಾ ನಾಥೇತಿ ಮುಹುಃ ಪ್ರಲಾಪಪರಯಾ ದಗ್ಧಂ ವರಾಕ್ಯಾ ತಥಾ
ಶಾಂತೇನಾಪಿ ವಯಂ ತು ತೇನ ದಹನೇನಾದ್ಯಾಪಿ ದಹ್ಯಾಮಹೇ [೨೦]

ಸುತ್ತೆಲ್ಲ ಮನೆಗಳು ಹತ್ತಿ ಉರಿಯುತಿರೆ
ಪರಿಜನರೆಲ್ಲ ಭಯದಿಂದ ಓಡುತಿರೆ
ಅತಿಭೀತಿಯಿಂ ಕೈ ಕಾಲುಗಳು ನಡುಗುತಿರೆ
ಹೆಜ್ಜೆ ಹೆಜ್ಜೆಗೆ ಬೀಳುತ್ತೆ ಹಾನಾಥ| ಹಾನಾಥ|
ಎಂದಡಿಗಡಿಗೆ ಚೀರುತ್ತೆ
ದೇವಿ ಅದೆನಿತು ಸುಟ್ಟುಹೋದಳೆನೆ
ಆ ಅಗ್ನಿ ಆರಿದ್ದರೂ ಇಂದು
ಈಗಲೂ ದಹಿಸಿಹೋಗುತಿಹೆ ನಾನು! [೨೦]

ಇಲ್ಲಿ - "ನವ ಮಲ್ಲಿಗೆಯ ಮೊಗ್ಗಿನ ಹಾಗೆ ಸುಕೋಮಲವಾದ ರಾಣಿಯ ಶರೀರವನ್ನು ಸುಟ್ಟು ಹಾಕಿದ ರೀತಿಯಿಂದಲೇ ಅದೆಷ್ಟು ನಿಷ್ಕರುಣವೆಂದು ತಿಳಿಯಬಹುದಾದ ಅಗ್ನಿಯು, ಶಾಂತವಾಗಿದ್ದರೂ, ಈಗಲೂ ನನ್ನನ್ನು ಸುಡುತ್ತಿದೆ (ಕಾರಣ ಆಗಲೂ ನನ್ನ ಇಂದ್ರಿಯಗಳು ಒಮ್ಮೆಗೇ ನಿಶ್ಚೇಷ್ಟವಾಗಲಿಲ್ಲ)." ಎಂಬ ರಾಜನ ಹೇಳಿಕೆ ಸೊಗಸಾದ ಸ್ವೋಪಜ್ಞ ವಿರೋಧಾಲಂಕಾರವಾಗಿದೆ. ಇದು ಈಗಾಗಲೇ ಇರುವ ಕರುಣ ರಸಕ್ಕೆ ಹೆಚ್ಚಿನ ಸೌಂದರ್ಯವನ್ನು

2. III-29

(ವಕ್ರತೆ) ತಂದುಕೊಟ್ಟಿದೆ. ಅಲ್ಲದೆ ರಾಣಿಯ ಅತಿಕೋಮಲತೆಯಿಂದಾಗಿಯೇ ಆ ಕ್ಷಣದಲ್ಲಿಯೇ ಅಗ್ನಿಯು ಆಕೆಯನ್ನು ಸುಟ್ಟುಬಿಟ್ಟಿತು ಹಾಗೂ ತನ್ನದು ವಜ್ರಕಠಿಣ ಹೃದಯವಾದ್ದರಿಂದಲೇ ಈಗಲೂ ಸುಡಲ್ಪಡುತ್ತಿದ್ದೇನೆಯೇ ಹೊರತು, ಸುಟ್ಟು ಭಸ್ಮವಾಗಲಿಲ್ಲ ಎಂಬ ಮಾತು ಸಂದರ್ಭದ ತೀಕ್ಷ್ಣತೆಗೆ ಪೋಷಕವಾಗಿದೆ (ಹೆಚ್ಚು ಮನೋವೇಧಕವಾಗಿದೆ). ನಾಲ್ಕನೇ ಅಂಕದಲ್ಲಿ

ರಾಜನು (ಕರುಣೆಯಿಂದ ತನ್ನಲ್ಲಿಯೇ)- ಹಾದೇವಿ
ಚಕ್ಷುರ್ಯಸ್ಯ ತವಾನನಾದಪಗತಂ ನಾಭೂತ್ಕ್ವಚಿನ್ನಿರ್ವೃತಂ
ಯೇನೈಷಾ ಸತತಂ ತ್ವದೇಕ ಶಯನಂ ವಕ್ಷಃಸ್ಥಲೀ ಕಲ್ಪಿತಾ|
ಯೇನೋಕ್ತಾಸಿ ವಿನಾ ತ್ವಯಾ ಬತ ಜಗಚ್ಛೂನ್ಯಂ ಕ್ಷಣಾಜ್ಜಾಯತೇ
ಸೋಽಯಂ ದಂಭ ಧೃತವ್ರತಃ ಪ್ರಿಯತಮೇ ಕರ್ತುಂ ಕಿಮಪ್ಯುದ್ಯತಃ [೨೧]

ಯಾರ ಕಂಗಳು ನಿನ್ನ ಮೊಗದೊಳಲ್ಲದೆ
ಇನ್ನಾವುದರೊಳೂ ಸಂತಸವನಿನಿತೂ ತಾಳವೋ
ಯಾರ ವಕ್ಷಸ್ಥಲವು ಯಾವಾಗಲೂ ನಿನಗೇಕಮಾತ್ರ
ಶಯನಸ್ಥಲವಾದುದೋ
ಯಾರು - "ನೀನಿಲ್ಲದೆ ಒಂದೆ ಕ್ಷಣದಲಿ
ಜಗವೆಲ್ಲ ಬರಿ ಶೂನ್ಯ" ಎಂದೊರೆದಿದ್ದನೋ
ಓ ಪ್ರಿಯೆ| ಆ ಮಿಥ್ಯಾವ್ರತಿ
ಇಂದದೇನನೋ ಮಾಡ ಹೊರಟಿಹನು! [೨೧]

ರಾಜನ ಉನ್ಮಾದಾವಸ್ಥೆ ಹೀಗಿದೆ. ಮೇಲಿನ ಪದ್ಯದಲ್ಲಿ "ಕ್ವಚಿದಿತಿ" (ಇನ್ನಾವುದರೊಳೂ) ಎಂಬುದರ ಮೂಲಕ, ರಾಜನು ತಮ್ಮಿಬ್ಬರ ಪ್ರಣಯ ಕೇಳಿಯ ಆಯಾಸವನ್ನು ನೀಗಿಕೊಳ್ಳಲು ಅರಮನೆಯ ಮಾಳಿಗೆಯ ಮೇಲೆ ವಿಹರಿಸುತ್ತಿದ್ದಾಗ ಆಹ್ಲಾದಕಾರಿಯೆನಿಸಿದ ದಿನನಿತ್ಯದ ದೃಶ್ಯವಾಗಿದ್ದ ಚಂದ್ರಮನ ನೋಟ ಕೂಡ ಅವಳ ಪೂರ್ಣ ಸೌಂದರ್ಯಕ್ಕೆ ಸಮನಾಗಲಾರದು ಎಂಬ ವಿಷಾದ ಭಾವವನ್ನು ವ್ಯಂಜಿಸುತ್ತಿದ್ದಾನೆ. ಹೆಚ್ಚೆಂದರೆ ಪೂರ್ಣಚಂದ್ರನ ಸೌಂದರ್ಯವು ಅವಳ ಮೊಗದ ಸೌಂದರ್ಯದ ಅಲ್ಪಾಂಶವನ್ನಷ್ಟೇ ಪ್ರಕಟಿಸುತ್ತದೆ. ಮುಂದಿನ ವಿಶೇಷಣವಾದ "ಯಾರ ವಕ್ಷಸ್ಥಲವು" (ಯೇನೈಷಾಂ) ಇತ್ಯಾದಿಯು ರಾಜನೊಡನೆ ಅರ್ಧಪರ್ಯಂಕ ಶಯನ ಕೂಡ ಅವನಿಂದ ಅಗಲಿಕೆಯ ಭಾವವನ್ನೇ ಬಿಂಬಿಸುತ್ತದೆಂಬ ಕಾರಣಕ್ಕೆ ಅದನ್ನು ನಿವಾರಿಸುತ್ತಿದ್ದಳಾಗಿ, ಆಕೆ ಅದೆಷ್ಟು ಗಾಢವಾಗಿ ಅವನನ್ನು ಪ್ರೇಮಿಸುತ್ತಿದ್ದಳೆಂಬುದನ್ನು ಸೂಚಿಸುತ್ತ "ಕರುಣ" ರಸವನ್ನೇ ವ್ಯಂಜಿಸುತ್ತದೆ.

'ಕ್ಷಣಾತ್' (ಒಂದೆ ಕ್ಷಣದಲಿ) ಎಂಬ ವಿಶೇಷಣ ತನ್ನ ಪ್ರಿಯತಮೆಯನ್ನು ಅಗಲಿದ ಮೇಲೂ, ಅಷ್ಟು ದೀರ್ಘಕಾಲದವರೆಗೆ ಅವನು ಬದುಕಿದ್ದಾನೆಂದರೆ, ಅವನೆಷ್ಟು ತೀರ ಕಠಿಣ ಹೃದಯನಾಗಿರಬೇಡ ಎಂಬುದನ್ನು ಒತ್ತಿ ಹೇಳುತ್ತಿದೆ. ಆದ್ದರಿಂದ ಅದುವರೆಗಿನ ಅವನ ಪ್ರೇಮದ ಭಾಷೆಗಳೆಲ್ಲವೂ ಸುಳ್ಳೆಂದೇ ಪರಿಗಣಿಸಲ್ಪಡಬೇಕೆಂದು ಅವನಾಸೆ. "ಆ ಮಿಥ್ಯಾವ್ರತಿ" (ಸೋಽಯಂ)

ಇತ್ಯಾದಿಯನ್ನು ಈ ಹಿಂದೆಯೇ ವ್ಯಾಖ್ಯಾನಿಸಲಾಗಿದೆ.

ಹೀಗೆ ಬೇರೆ ಬೇರೆ ವಾಕ್ಯಗಳಲ್ಲಡಗಿರುವ ಹೊಸ ಹೊಸ ಮತ್ತು ವಿಭಿನ್ನ ರೀತಿಯ ಅಭಿವ್ಯಕ್ತಿ ಭಂಗಿಗಳ ಮೂಲಕ ಕರುಣ ರಸವು ಪ್ರತಿಸಲವೂ ಹಿಂದಿನ ಸ್ವಾದವನ್ನು ಮೀರಿ ಬೇರೊಂದೇ ನೂತನ ಆಸ್ವಾದವನ್ನು ನೀಡುವಂತೆ ಮಾಡಲಾಗುತ್ತದೆ.

ಮತ್ತೆ 5ನೇ ಅಂಕದಲ್ಲಿ

(ಒಲವಿನ ತೀವ್ರವೇದನೆಯಿಂದ ನಿಟ್ಟುಸಿರಿಡುತ್ತ)

ಭ್ರೂಭಂಗಂ ರುಚಿರೇ ಲಲಾಟ ಫಲಕೇ ತಾರಂ ಸಮಾರೋಪಯೇತ್
ಬಾಷ್ಪಾಂಬುಪ್ಲುತ ಪೀತ ಪತ್ರರಚನಾಂ ಕುರ್ಯಾತ್ ಕಪೋಲಸ್ಥಲೀಮ್|
ವ್ಯಾವೃತ್ತೈರ್ವಿನಿಬದ್ಧ ಚಾಟು ಮಹಿಮಾಮಾಲೋಕ್ಯ ಲಜ್ಜಾನತಾ
ತಿಷ್ಠೇತ್ ಕಿಂ ಕೃತಕೋಪಚಾರ ಕರುಣೈರಾಶ್ವಾಸಯೈನಾಂ ಪ್ರಿಯಾಮ್ [೨೨]

ತನ್ನ ಚೆಲುವಾದ ಹಣೆಯಲ್ಲಿ ಹುಬ್ಬುಗಳ
ಬಲಿದು ಗಂಟಿಕ್ಕಿಹಳೆ?
ಅಥವಾ ಸುರಿವ ಕಣ್ಣೀರಿನಲಿ
ಕೆನ್ನೆ ಮೇಲಣ ಮಕರಿಕಾಪತ್ರವನು ತೊಡೆದಿಹಳೆ?
ಅಥವಾ ನನ್ನ ನಲ್ ನುಡಿಗಳನು ಕೇಳುತೆ
ನಾಚಿ ತಲೆವಾಗಿ ನಿಂತಿಹಳೆ
ಅಥವಾ ಇನಿತೆಲ್ಲ ಕೃತಕ ಉಪಚಾರದಿಂದೇನು
ಎಂತಾದರೂ ಇನಿಯಳನು ಸಂತವಿಡು ನೀನು [೨೨]

ವಾಸವದತ್ತೆಯೊಡನೆ ಪುನರ್ಮಿಲನ ಅಸಂಭವವೆನಿಸಿದ್ದರಿಂದ ವತ್ಸರಾಜನು ಈಗಾಗಲೇ ಪದ್ಮಾವತಿಯ ಕೈಹಿಡಿದಾಗಿದೆ. ಅವಳನ್ನು ಮತ್ತೊಮ್ಮೆ ಸಂಧಿಸುವ, ಕಿಂಚಿತ್ ಭರವಸೆಯೂ ಇಲ್ಲವಾಗಿದೆ. ಉನ್ಮಾದಾವಸ್ಥೆಯಲ್ಲಿರುವ ರಾಜನು, ಅವಳ ವಿಷಯಕ್ಕೆ ಒಂದು ಕ್ಷಣ ತೀವ್ರ ಉತ್ಕಂಠೆಗೆ ಒಳಗಾಗಿದ್ದಾನೆ. ಉನ್ಮಾದಕ್ಕೊಳಗಾದವನಂತೆ, ಪ್ರದ್ಯೋತನ ಮಗಳು ವಾಸವದತ್ತೆ ಮತ್ತೊಮ್ಮೆ ತನ್ನ ಬಳಿಗೆ ಹಿಂತಿರುಗಿದ್ದಾಳೆಂದೇ ನಂಬುತ್ತಾನೆ. ಹಾಗೂ ಅವಳ ಕೋಪವನ್ನು ಶಮನಗೊಳಿಸಿ ಮನ ಒಲಿಸುವ ಹಲವಾರು ಮಾರ್ಗಗಳನ್ನು ಕುರಿತು, ಮನಸ್ಸಿನಲ್ಲೇ ಪರಿಭಾವಿಸುತ್ತಿದ್ದಂತೆ ಕರುಣರಸವು ಪ್ರಕರ್ಷಸ್ಥಿತೆಗೇರುತ್ತದೆ. ಅದೇ ಅಂಕದಲ್ಲಿ ಕೆಳಗಿನ ಪದ್ಯಗಳಿಂದ ಪ್ರಾರಂಭವಾಗುವ

ಕಿಂ ಪ್ರಾಣಾ ನ ಮಯಾ ತವಾನುಗಮನಂ ಕರ್ತುಂ ಸಮುತ್ಸಾಹಿತಾ
ಬದ್ಧಾ ಕಿಂ ನ ಜಟಾ ನ ವಾ ಪ್ರರುದಿತಂ ಭ್ರಾಂತಂ ವನೇ ನಿರ್ಜನೇ|
ತ್ವತ್ಸಂಪ್ರಾಪ್ತಿವಿಲೋಭನೇನ ಪುನರಪ್ಯೂನೇನ ಪಾಪೇನ ಕಿಂ
ಕಿಂ ಕೃತ್ವಾ ಕುಪಿತಾ ಯದದ್ಯ ನ ವಚಸ್ತ್ವಂ ಮೇ ದದಾಸಿ ಪ್ರಿಯೇ [೨೩]

ನಿನ್ನ ಜೊತೆಯೊಳೆ ಅಂದು ನಾ
ಜೀವವನು ತೊರೆಯೆ ತುದಿಗಾಲೊಳಿರಲಿಲ್ಲವೆ?
ನಿನ್ನ ಪಡೆವಾಸೆಯಲಿ ಜಟಾಧಾರಿಯಾಗಳಲುತ್ತ
ನಿರ್ಜನ ವನದೊಳಗೆ ನಾನಲೆದಿರಲಿಲ್ಲವೆ?
ಭರವಸೆಯು ಅಳಿದುದಯ್ಯೋ!
ನನ್ನಾವ ಕೃತ್ಯವದು ಕುಪಿತ ಗೊಳಿಸಿತು
ನಿನ್ನ ನೆಲೆ ಪ್ರಿಯೆ, ಮರುಮಾತುಗುಡದಿರುವೆ? [೨೩]

ಇದರ ನಂತರ

"ಹೀಗೆ ಹೇಳುತ್ತ ರಾಜನು ಅಳತೊಡಗುತ್ತಾನೆ"

ಎನ್ನುವವರೆಗಿನ ಭಾಗ ಹಾಗೂ ಅವನ ಉನ್ಮಾದಾವಸ್ಥೆಯ ವರ್ಣನೆ ಇವೆಲ್ಲವೂ ಕರುಣರಸಕ್ಕೆ ಇನ್ನಷ್ಟು ಪೋಕಷವಾಗಿದೆ.

ಆರನೇ ಅಂಕದಲ್ಲಿ

ರಾಜ : ಹಾ| ದೇವಿ!
ತ್ವತ್ಸಂಪ್ರಾಪ್ತಿ ವಿಲೋಭನೇನ ಸಚಿವೈಃ ಪ್ರಾಣಾ ಮಯಾ ಧಾರಿತಾಃ
ತನ್ಮತ್ವಾಽತ್ಯಜತಃ ಶರೀರಕಮಿದಂ ಮೇ ನಾಸ್ತಿ ನಿಃಸ್ನೇಹಿತಾ|
ಆಸನ್ನೋಽವಸರಸ್ತದಾನುಗಮನೇ ಜಾತಾಧೃತಿಃ ಕಿಂ ತ್ವಯಂ
ಖೇದೋ ಯಚ್ಛತಧಾ ಗತಂ ನ ಹೃದಯಂ ತದ್ವತ್ ಕ್ಷಣೇದಾರುಣೇ [೨೪]

ನಿನ್ನ ಮರಳಿ ಪಡೆವೊಂದು ಪ್ರಲೋಭನೆಯ
ಸಚಿವರಿಂ ಪಡೆದಾನು ಜೀವವನು ಹಿಡಿದಿದ್ದೆನು
ನಾನಿನ್ನು ದೇಹವನು ತ್ಯಜಿಸದಿರೆ
ಹೃದಯಹೀನನೆಂದೆಣಿಸದಿರು ನನ್ನ
ಅಂದು ನಿನ್ನೊಡನೆ ಸಾವುದೇ ಅಮೃತ ಕ್ಷಣವಾಗಿತ್ತು
ಆದರಯ್ಯೊ! ಈ ತೆರನ ತೊಳಲಿಕೆಗೆ ನಾನೆ ತಲೆಗೊಟ್ಟೆನು
ಆ ದಾರುಣ ಕ್ಷಣದಲ್ಲೆ ಒಡೆದು ಚೂರಾಗಲಿಲ್ಲೇಕೆ
ಈ ನನ್ನ ಕಲ್ಲು ಹೃದಯ? [೨೪]

ಇಲ್ಲಿ ರಾಜನು ತನ್ನ ಪ್ರಿಯತಮೆಯ ಅಗಲಿಕೆಯ ವೇದನೆಯಿಂದ ಸುಡಲ್ಪಡುತ್ತಿದ್ದಾನೆ. ಅದುವರೆಗೆ ಮಡುಗಟ್ಟಿದ್ದ ಶೋಕವೆಲ್ಲ, ಕಾಳಿಂದಿಯ ಸಂಗಮವನ್ನು ಕಂಡ ಕೂಡಲೇ ಪರಾಕಾಷ್ಠೆಗೇರುತ್ತದೆ. ಕಾರಣ ಅದು ಅವನಿಗೆ ತನ್ನ ಬದುಕನ್ನು ಕೊನೆಗಾಣಿಸಲು ಒಂದು ದಾರಿಯನ್ನು ತೋರುತ್ತಿರುವಂತೆ ಅನಿಸುತ್ತದೆ. ತನ್ನ ಒಲಿದವಳ ಸಲುವಾಗಿ ಪ್ರಾಣತ್ಯಾಗ ಮಾಡುವ ರಾಜನ ಈ ವಿಚಾರವನ್ನು ಕವಿ ಇಷ್ಟೆಲ್ಲಾ ಮತ್ತೆ ಮತ್ತೆ ಒತ್ತಿ ಹೇಳಿರುವುದು ಈ ಪ್ರಕರಣಕ್ಕೆ ರತ್ನಪ್ರಾಯವಾಗಿದೆ.

[ಇನ್ನಷ್ಟು ವಿವರಿಸಲಾಗುವುದು ಎಂಬುದನ್ನು "ವಿವಿಧ ವಿಲಾಸಗಳಿಂದ" ಎಂಬುದರ ಜೊತೆ ಹಾಗೂ ಇಡೀ ಕಥಾವಸ್ತುವಿನ ಐಕ್ಯತೆಗೆ ಕಾರಣಗಳಾಗಿರುವ ಕಥೋಪಕಾರಕಗಳೊಂದಿಗೆ ಅನ್ವಯ ಮಾಡಿಕೊಳ್ಳಬೇಕು. ಮುಖ್ಯಕಥಾನಕದಲ್ಲಿ ವಿಚ್ಛಿತ್ತಿ ಉಂಟಾದಾಗ ಕಥೋಪಕಾರಕಗಳು ಅದರಲ್ಲಿ ಅಂತರ್ಗತವಾಗಿರುವ ಐಕ್ಯತೆಯನ್ನು ಕೂಡಿಸಿಕೊಡುವಂತಿರಬೇಕು]*

ಸಾರಾಂಶವಿಷ್ಟೆ: ಸಣ್ಣದೊಂದು ಸಂಗತಿಯೂ ಸಾಹಿತ್ಯದ ಸ್ಪರ್ಶವನ್ನು ಪಡೆದುಕೊಂಡಾಗ; ಅಂದರೆ ರಸಕವಾಟವೇ ತೆರೆಯಿಂತೆಂಬಂತೆ ಹೃದ್ಯವಾದ ರಸೋಕ್ತಿ ವಿಸರವನ್ನು ಉತ್ತೇಜಿಸುವಂಥ ಪ್ರಕರಣ ಸೌಂದರ್ಯದಿಂದ ಕೂಡಿದ್ದಾಗ, ಅದು ಅಪೂರ್ವವಾದ ವಕ್ರತೆಯಿಂದ ಶೋಭಿಸುತ್ತದೆ.

ಇದಕ್ಕೆ ಉದಾಹರಣೆಯಾಗಿ ರಘುವಂಶದ ಮೃಗಯಾಪ್ರಕರಣವನ್ನು ನೋಡಬಹುದು. ಇಲ್ಲಿ ದಶರಥನು ನದಿಯೊಂದರ ದಂಡೆಯ ಮೇಲೆ ಬೇಟೆಯ ಕ್ರೀಡೆಯಲ್ಲಿ ತೊಡಗಿದ್ದಾನೆ. ಹಾಗೆ ಬೇಟೆಯಾಡುತ್ತಿರಬೇಕಾದರೆ, ಪ್ರಮಾದ ವಶದಿಂದ ಅಂಧನಾದ ವೃದ್ಧ ತಪಸ್ವಿಯ ಮಗನನ್ನು ಕೊಲ್ಲುತ್ತಾನೆ. ಇದು ಸಣ್ಣ ವಾಕ್ಯವೊಂದರಲ್ಲಿ ಹೇಳಿ ಮುಗಿಸಬಹುದಾದ ಸಂಗತಿ. ಆದರೆ ಸರಸ ಸರಸ್ವತಿಯ ಸರ್ವಸ್ವವೇ ಮೂರ್ತಿವೆತ್ತಂತ ಕವಿ ಕಾಳಿದಾಸ ತನ್ನ ಅಪೂರ್ವ ಪ್ರತಿಭಾ ವಿಧಾನ ಕೌಶಲದಿಂದ ಸಹೃದಯಚೇತನರಿಗೆ ಚಮತ್ಕಾರಕಾರಿಯಾಗುವ (ಆಹ್ಲಾದಕಾರಿ) ರೀತಿಯಲ್ಲಿ ಪ್ರಕರಣ ಸೌಂದರ್ಯಪೂರ್ಣವನ್ನಾಗಿ ಮಾಡಿ, ಅದಕ್ಕೊಂದು ರಮಣೀಯವಾದ ತಿರುವು ಕೊಡುತ್ತಾನೆ. ವಿವರವಾಗಿ ಹೇಳಬೇಕೆಂದರೆ-ಹಗಲು ರಾತ್ರಿ ಇಡೀ ದಿನ ರಾಜನ ಸಂಪೂರ್ಣ ಗಮನವನ್ನು ಸೆರೆಹಿಡಿಯಬಲ್ಲಂಥ ಬಹುಮುಖೀ ಮೃಗಯಾವಿಹಾರದಲ್ಲೇ ಮಗ್ನನಾಗಿ ಬಿಟ್ಟಿರುವುದರಿಂದ ಅಭ್ಯಾಸ ಬಲದಿಂದ ಆಗೊಮ್ಮೆ ಈಗೊಮ್ಮೆ ಬರುವ ಕೆಲವು ಮಧುರ ನೆನಪುಗಳನ್ನು ಬಿಟ್ಟರೆ ಆ ಸಮಯಕ್ಕೆ ಉಳಿದೆಲ್ಲವೂ ಅವನಿಂದ ಮರವೆಯಾಗಿತ್ತೆಂದೂ ತನ್ನ ಬೇಟೆಯ ಕೌಶಲವನ್ನು ತೋರಲು ಅವನು ಯಾವ ಪ್ರಾಣಿಯನ್ನು ಬೇಕಾದರೂ ಕೊಲ್ಲಬಹುದು ಎಂದು ರಾಜನ ಪರವಾಗಿ ವಾದಿಸಿ ಸಮರ್ಥಿಸಲಾಗುವುದಿಲ್ಲ. ಕಾರಣ ರಾಜನು ಕೊಂದ ಪ್ರಾಣಿ ಬೇರಾವುದೂ ಅಲ್ಲದೆ ಒಬ್ಬ ಮನುಷ್ಯ ಎಂದಾಗ ಈ ವಾದ ನಿಲ್ಲುವುದಿಲ್ಲ. ಅದರಲ್ಲೂ ಇತರೆ ಎಲ್ಲರಿಗೂ ಸದಾಚಾರದಲ್ಲಿ ಆದರ್ಶಪ್ರಾಯನಾಗಿರಬೇಕೆಂಬ ಕಾಳಜಿಯ, ಮೂರೂ ಲೋಕಗಳಿಗೆ ಅಭಯ ದೀಕ್ಷೆ ನೀಡಲು ಅಧಿಕಾರಿಯೆನಿಸಿದ, ಸೂರ್ಯವಂಶಕ್ಕೆ ತಿಲಕಪ್ರಾಯ ನಾದಂಥ, ಸಕಲ ವಿದ್ಯಾಪಾರಂಗತನಾದ ಕೀರ್ತಿ ಸಂಪತ್ತನ್ನೇ ಎಲ್ಲಕ್ಕಿಂತ ಮಿಗಿಲಾದುದೆಂದು ಭಾವಿಸುವ ಸ್ವರ್ಗಾಧಿಪತಿಯಾದ ಇಂದ್ರನೊಡನೆ ಅರ್ಧಸಿಂಹಾಸನವೇರಿದ, ದಶರಥನೆಂಬ ಧನ್ಯ ನಾಮಧೇಯದ ವ್ಯಕ್ತಿಯ ವಿಷಯದಲ್ಲಿ ಇದು ನಿಲ್ಲುವುದಿಲ್ಲ. ಮಹರ್ಷಿಯೇ ಹೇಳಿದಂತೆ ಯಾರಿಗೇ ಆದರೂ ಮೇಲು ನೋಟಕ್ಕೆ ಅಂಥ ವ್ಯಕ್ತಿಯೊಬ್ಬ ಇಂಥ ಅಕೃತ್ಯವನ್ನೆಸಗಿದನೆಂದರೆ

---

* ಈ ಘಟ್ಟದಲ್ಲಿ ಕಳೆದು ಹೋಗಿರುವ ಅಂತರಶ್ಲೋಕಕ್ಕೋ ಕಾರಿಕೆಗೋ ಸಂಬಂಧಿಸಿದ ವಿವರ ಇದಾಗಿದೆ. ಅದರ ಪುನಾರಚನೆ - ಕಥೋಪಕಾರಕಂ ವಸ್ತು ಸವಿಶೇಷ ರಸಾಸ್ಪದಮ್|
ಪ್ರೋಚ್ಯತೇ ಕಿಯದುದ್ಭಿನ್ನಂ ಪ್ರಕರಣಾ ಭರಣೋಪಮಮ್ Dr. K. K-V.J-Page259 (FN)

ಅದು ಅತ್ಯಂತ ಅಸಮರ್ಥನೀಯವಾದ್ದು. ಇದೆಲ್ಲವನ್ನೂ ಅತ್ಯಂತ ಸೊಗಸಾಗಿ ಕಾವ್ಯದಲ್ಲಿಯೇ ನಿರೂಪಿಸಲಾಗಿದೆ. ಕೆಲವು ಶ್ಲೋಕಗಳನ್ನು ಉದಾಹರಿಸಲಾಗಿದೆ.

ವ್ಯಾಘ್ರಾನ ಭೀರಭಿಮುಖೋತ್ಪತಿತಾನ್ ಗುಹಾಭ್ಯಃ
ಫುಲ್ಲಾಸನಾಗ್ರ ವಿಟ ಪಾನಿವ ವಾಯುರುಗ್ಣಾನ್|
ಶಿಕ್ಷಾವಿಶೇಷಲಘು ಹಸ್ತ ತಯಾ ಸ ಧನ್ವೀ
ತೂಣೀಚಕಾರ ಶರಪೂರಿತ ವಕ್ತ್ರರಂಧ್ರಾನ್ [೨೫]1 **(ರಘುವಂಶ 9 - 63)**

ಗಾಳಿಯ ಹೊಡೆತಕೆ ಮುರಿದುಬೀಳುತಿಹ
ಅರಳಿದ ಆಸನ ವೃಕ್ಷದ ಹಲವು ಕೊಂಬೆಗಳ ಹೋಲುವ
ಹುಲಿಗಳು ಗುಹೆಯಿಂದೆರಗಿರೆ ರಾಜನ ಮೇಲೆ,
ಬಿಲ್ಲು ವಿದ್ಯೆಯಲಿ ಬಲ್ಲಹನೆನಿಸಿದ ನೃಪನು
ಕೈಯ ಚಳಕದಿಂದೊಂದೆ ಕ್ಷಣದೊಳಗೆ ಹುಲಿಗಳ ಬಾಯಲಿ
ಕಣೆಗಳ ತುಂಬಿ ದೊಣೆಯಗೈದಿದನು ಅವುಗಳನು [೨೫]

ಅಪಿ ತುರಗ ಸಮೀಪಾದುತ್ಪತಂತಂ ಮಯೂರಂ
ನ ಸ ರುಚಿರ ಕಲಾಪಂ ಬಾಣಲಕ್ಷೀ ಚಕಾರ|
ಸಪದಿ ಗತ ಮನಸ್ಕಶ್ಚಿನ್ನ ಮಾಲ್ಯಾನುಕೀರ್ಣೇ
ರತಿವಿಗಲಿತ ಬಂಧೇ ಕೇಶಹಸ್ತೇ ಪ್ರಿಯಾಯಾಃ [೨೬]2 **(ಅದೇ 9 - 67)**

ತನ್ನಯ ಕುದುರೆಯ ಬಳಿಯೊಳೆ ಸುಂದರ
ಶಿಖಾಕಲಾಪವ ಕೆದರುತೆ ಕುಣಿದರು ನವಿಲು
ಗುರಿಯ ಮಾಡನು ಬಾಣಕೆ ಅದನು ನೃಪನು
ರತಿಕೇಳಿಯೊಳು ಕಾಂತೆಯ ಕೆದರಿದ ಕೇಶದ
ಹರಿದ ಮಾಲೆಗಳ ಮುಡಿಯನು ನೆನೆದು [೨೬]

ಲಕ್ಷ್ಯೀ ಕೃತಸ್ಯ ಹರಿಣಸ್ಯ ಹರಿಪ್ರಭಾವಃ
ಪ್ರೇಕ್ಷ್ಯ ಸ್ಥಿತಾಂ ಸಹಚರೀಂ ವ್ಯವಧಾಯ ದೇಹಾತ್|
ಆಕರ್ಣಕೃಷ್ಟಮಪಿ ಕಾಮಿತಯಾ ಸ ಧನ್ವೀ
ಬಾಣಂ ಕೃಪಾ ಮೃದುಮನಾಃ ಪ್ರ ತಿಸಂಜಹಾರ [೨೭] **[9 - 57]**

ತಾನು ಗುರಿಯಿಟ್ಟ ಹರಿಣದ ಮೈಯನು
ಮರೆಮಾಡುತೆ ಸಹಚರಿಯೊಂದೊಡ್ಡಿರೆ ಮೈಯನು
ಇಂದ್ರನೊಲು ಶಕ್ತಿಯುತ ಬಿಲ್ಗಾರನೃಪನು
ಸೆಳೆದಿದ್ದರು ಕಿವಿವರೆಗೂ ಬಾಣವನು
ಮನ ಕರಗಿಯೆ ಹಿಂತೆಗೆದನು ಕಾಮಿ [೨೭]

ಇತ್ಯಾದಿ. ಇಂಥ ಅದ್ಭುತವಾದ ಶಬ್ದಾರ್ಥಗಳ ಔಚಿತ್ಯದಿಂದ ಸುಂದರವಾಗಿರುವ ವಾಕ್ಯ

ವಿಶೇಷಗಳಿಂದ ಬೇಟೆಯ ವಿವಿಧ ವ್ಯಾಪಾರಗಳಲ್ಲಿ ರಾಜನ ನಿಮಗ್ನತೆಯು ಸಂಪೂರ್ಣವಾಗಿ ಲಕ್ಷ್ಯಕ್ಕೆ ಬರುತ್ತದೆ.

ಅಲ್ಲದೆ -

ಸ ಲಲಿತ ಕುಸುಮ ಪ್ರವಾಲ ಶಯ್ಯಾಂ
ಜ್ವಲಿತ ಮಹೌಷಧಿ ದೀಪಿಕಾಸನಾಥಾಮ್|
ವನರತಿ ರತಿವಾಹಯಾಂ ಬಭೂವ
ಕ್ವಚಿದಸಮೇತ ಪರಿಚ್ಛದ ಸ್ತ್ರಿಯಾಮಾಮ್ [೨೮]

ಸುಂದರ ಹೂಗಳ ಚಿಗುರಿನ ಹಾಸೊಳು
ಉರಿವ ಓಷಧಿ ದೀಪದ ಬೆಳಕಿನೊಳು
ಪರಿಜನರಿಂದ ದೂರಾಗಿ ವನಪ್ರೇಮಿ ನೃಪನು
ಕಾಡಲ್ಲೆ ಮಲಗಿ ಇರುಳನು ಕಳೆದನು ತಾನು [೨೮] (ರಘು IX - 70)

ಇಲ್ಲಿ ರಾಜನಿಗೆ ಬಳಕೆಯಾಗಿರುವ 'ವನರತಿ' (ವನಪ್ರೇಮಿ) ಎಂಬ ವಿಶೇಷಣ, ವಿಶೇಷಣ ವಕ್ರತೆಗೆ ಉದಾಹರಣೆ. ದೊರೆಯು ಕಾಡಿನಲ್ಲೇ ಉಳಿದುದು, ಅರಮನೆಯ ಉಪಭೋಗಗಳಾದ ವಿಲಾಸಗೃಹದಲ್ಲಿ ಕ್ರೀಡೆ, ಪರ್ಯಂಕ ಶಯನ, ಪ್ರೇಯಸಿಯರ ಸಂಗ, ಮಧುಗೋಷ್ಠಿಯೇ ಮೊದಲಾದವುಗಳಿಗಿಂತ ಕಾಡನ್ನೇ ಇಷ್ಟು ಪಟ್ಟನೆಂಬುದನ್ನು ಸೂಚಿಸುತ್ತದೆ. ಇದು ಅವನ ಈಗಿನ ಆಸಕ್ತಿಯಾದ ಮೃಗಯಾಸಕ್ತಿಗೆ ಹೆಚ್ಚಿನ ಮೆರುಗು ನೀಡುತ್ತದೆ "ರಾತ್ರಿಗೆ" ಬಳಕೆಯಾಗಿರುವ "ತ್ರಿಯಾಮಾ" ಶಬ್ದದ 'ಏಕವಚನ' ರೂಪ ಕೂಡ ರಾಜನಿಗೆ ರಾತ್ರಿ ದೀರ್ಘವಾಯಿತೆಂದು ಅನಿಸಲಿಲ್ಲವೆಂಬುದನ್ನು ಧ್ವನಿಸುತ್ತದೆ. ಅಷ್ಟೇ ಅಲ್ಲ ಅದು ಅತ್ಯಲ್ಪ ಕಾಲದಲ್ಲೆ ಕಳೆದು ಹೋಯಿತೆನಿಸಿದೆ. ಹಾಗಾಗಿ ಅದು ವಚನ ವಕ್ರತೆಗೆ ಉದಾಹರಣೆಯಾಗಿದೆ. ಇದರಲ್ಲಿ ರೂಢಿ ವಕ್ರತೆಯ ಉದಾಹರಣೆಯೂ ಇದೆ ಫಲಿತಾಂಶವೆಂದರೆ ಅಂಧಕಾರ ಎಷ್ಟು ಅಗಾಧವಾಗಿತ್ತೆಂದರೆ ಅದು ಬೇರಾವುದೇ ರುಚಿಕರ ವ್ಯಾಪಾರದ ಸಾಧ್ಯತೆಯನ್ನು ಇಲ್ಲವಾಗಿಸಿತು. ಅದು ಅವೆಲ್ಲದಕ್ಕೆ ತಡೆಯಾಯಿತು.

'ಇರುಳ ಕಳೆದನು' (ಅತಿವಾಹಯಾಂಬಭೂವ) ಎಂಬ ಕ್ರಿಯಾವಕ್ರತ್ವ ವೈಚಿತ್ರ್ಯವು ಹಾಸಿಗೆಯಲ್ಲಿ ಮಲಗಿ ದಾರುಣ ದೇಹಾಯಾಸವನ್ನು ನೀಗಿಕೊಂಡನು ಎಂಬುದನ್ನು ಧ್ವನಿಸುತ್ತದೆ. ಅತಿಯಾದ ದೇಹಪರಿಶ್ರಮ ವಿಧಾನದಿಂದ ಹೇಗೆ ನಿದ್ರೆಯು ರಸದಾಯಿನಿಯಾಗುತ್ತದೆ ಎಂಬುದನ್ನು ಮೆಚ್ಚಿಕೊಂಡ. ಇದೇ ಸಂದರ್ಭದ ಇನ್ನೊಂದು ಉದಾಹರಣೆಯನ್ನೂ ನೋಡಬಹುದು.

ಇತಿ ವಿಸ್ಮೃತಾನ್ಯಕರಣೀಯಮಾತ್ಮನಃ
ಸಚಿವಾವಲಂಬಿತ ಧುರಂ ಧರಾಪತಿಮ್|
ಪರಿವೃದ್ಧರಾಗಮನು ಬಂಧಸೇವಯಾ
ಮೃಗಯಾ ಜಹಾರ ಚತುರೇವ ಕಾಮಿನೀ [೨೯]

ಇತರೆ ಕಾರ್ಯಗಳನೆಲ್ಲ ಮರೆತು
ಸಚಿವರಿಗೆ ಹೊರಿಸಿ ರಾಜಕಾರ್ಯವನೆಲ್ಲ
ಬನದೊಳಿಂತಿರುತಿರಲು ನೃಪನು
ನಿರುತ ಸೇವಾನುಬಂಧದೊಳು
ಬೆಳೆದ ಅನುರಾಗದೊಳು ಮೃಗಯೆ
ಸೆಳೆದವಳವನನು ಚತುರ ಕಾಮಿನಿಯ ಹಾಗೆ [೨೯] [ರಘು IX - 69]

ಇಲ್ಲಿ ಸೆಳೆದಳವನನು (ಜಹಾರ) ಎಂಬ ಕ್ರಿಯಾಪದದಲ್ಲಿ 'ಕ್ರಿಯಾ ವಕ್ರತ್ವ'ದ ಸುಂದರ ಪ್ರಯೋಗವಿದೆ. ಬೇಟೆಯ ಅಸೀಮ ಆಕರ್ಷಣೆಯಿಂದ ಇತರೆ ಎಲ್ಲ ಕರ್ತವ್ಯಗಳು, ಅವನಿಗೆ ಅಪಥ್ಯವಾದುವು ಎಂಬುದನ್ನು ಸೂಚಿಸುತ್ತಿದೆ. ನಂತರ ಈ ಪದ್ಯವನ್ನು ನೋಡಬಹುದು.

ಅಥ ಜಾತು ರುರೋರ್ಗೃಹೀತವರ್ತ್ಮಾ
ವಿಪಿನೇ ಪಾರ್ಶ್ವ ಚರೈರಲಕ್ಷ್ಯಮಾಣಃ|
ಶ್ರಮಫೇನಮುಚಾ ತಪಸ್ವಿಗಾಢಾಂ
ತಮಸಾಂ ಪ್ರಾಪ ನದೀಂ ತುರಂಗಮೇಣ [೩೦] **(ರಘು IX - 72)**

ಮೃಗವ ಹುಡುಕುತೆ ವನದೊಳು
ಬಳಿಯ ಚರರ ಲಕ್ಷ್ಯಕೆ ಬಾರದೊಲು
ದಣಿವಿನಲಿ ನೊರೆಗರೆವ ತುರಗವನು ಏರಿ
ತಲುಪಿದನು ತವಸಿಗಳಿಂ-
ದಿಡಿಕಿರಿದಿರ್ದ ತಮಸೆಯನು [೩೦]

"ತಪಸ್ವಿ ಗಾಢಾಂ" (ತವಸಿಗಳಿಂದಿಡಿಕಿರಿದಿರ್ದ) ಎಂಬುದು ಅತ್ಯಂತ ಮಹತ್ವಪೂರ್ಣವಾದ ವಿಶೇಷಣ ವಕ್ರತೆ. ತಮಸಾನದಿಯಲ್ಲಿ ವಿವಿಧ ಧರ್ಮಾನುಷ್ಠಾನಗಳಲ್ಲಿ ತೊಡಗಿದ್ದ ತಪಸ್ವಿ ಸಂಕುಲವನ್ನು ಕಣ್ಣಾರೆ ಕಂಡೂ, ಶಬ್ದ ಶ್ರವಣ ಮಾತ್ರದಿಂದಲೇ ಆ ದಿಕ್ಕಿನಲ್ಲಿ ಹಿಂದು ಮುಂದೆ ನೋಡದೆ ಅಂತಃಕರಣ ಶೂನ್ಯವಾಗಿ ಹೇಗೆ ಬಾಣವನ್ನು ಹೂಡಿದನೆಂಬುದು ಅತ್ಯಂತ ಆಶ್ಚರ್ಯಕರ ಎಂಬುದನ್ನು ಈ ವಿಶೇಷಣ ಸೂಚಿಸುತ್ತದೆ.

"ಅಪಥೇ ಪದಮರ್ಪಯಂತಿ ಹಿ ಶ್ರುತವಂತೋಽಪಿ ರಜೋ
ನಿಮೀಲಿತಾಃ" [ರಜೋಗುಣದಿಂದ (ರಾಗದಿಂದ) ಅಂಧರಾದಾಗ, ತಿಳಿದವರೂ ದಾರಿ ತಪ್ಪುತ್ತಾರೆ]!

ತಾರಕಕ್ಕೇರಿದ ಅನಿಯಂತ್ರಿತ ರಾಗದ ಗಾಢ ಅಂಧಕಾರದಿಂದ ಕುರುಡಾದ ಪಕ್ಷಪಾತದ ಕಣ್ಣುಗಳಿಂದ ಅಂಥ ವ್ಯಕ್ತಿಗಳೂ ತಪ್ಪುದಾರಿಯನ್ನು ತುಳಿಯಬಹುದು ಎಂಬುದೂ ಈ ವಿಶೇಷಣದಿಂದ ಪರೋಕ್ಷವಾಗಿ ಧ್ವನಿತವಾಗುತ್ತದೆ. ಕಥೆಯ ಮುಂದಿನ ಬೆಳವಣಿಗೆಗೂ ಇದು ದಾರಿ ಮಾಡಿಕೊಡುತ್ತದೆ. ಅನಂತರ ಋಷಿಯ ಶಾಪದ ವಿಚಾರವಿದೆ.

ದಿಷ್ಟಾಂತಮಾಪ್ಸ್ಯತಿ ಭವಾನಪಿ ಪುತ್ರಶೋಕಾ-
ದಂತೇ ವಯಸ್ಯಹಮಿವೇತಿ ತಮುಕ್ತವಂತಮ್ [31] (ಅದೇ-74)

ಎನ್ನವೊಲು ನಿನಗು ಪುತ್ರ ಶೋಕದೊಳಳಿವು
ಬರಲಿ ಮುಪ್ಪಿನೊಳು [೩೧]

ಹಾಗೆ ಸಾವಿನಂಚಿನಲ್ಲಿದ್ದ ವೃದ್ಧ ತಪಸ್ವಿಯ ಶಾಪಕ್ಕೀಡಾದ ದಶರಥನ ಉತ್ತರ

ಶಾಪೋಽಪ್ಯದೃಷ್ಟ ತನಯಾನನ ಪದ್ಮಶೋಭೇ
ಸಾನುಗ್ರಹೋ ಭಗವತಾ ಮಯಿ ಪಾತಿತೋಽಯಮ್
ಕೃಷ್ಯಾಂ ದಹನ್ನಪಿ ಖಲು ಕ್ಷಿತಿಮಿಂಧನೇದ್ಧಃ
ಬೀಜ ಪ್ರರೋಹಜನನೀಂ ದಹನಃ ಕರೋತಿ [೩೨] (IX - 79) ದಹನಃ)

ಮಗನ ಮುಖ ಕಮಲವನು ಕಾಣದಿರುವೆನಗೀಶಾಪ
ಅನುಗ್ರಹವೆ ದಿಟ ಭಗವನ್
ಸೌದೆಯಿಂದುರಿದೇಳುವಗ್ನಿ ತಾನದು
ಸುಟ್ಟರೇನಾ ಹೊಲವನು
ಬೀಜ ಮೊಳೆವಡೆವಂತೆ ಮತ್ತದ
ಫಲವತಿಯ ಮಾಳ್ಪುದು [೩೨]

ಇಲ್ಲಿ 'ಶಾಪ' ಎಂಬ ಶಬ್ದ, ತಾನು ಮಾಡಿದ ಗುರುತರ ಅಪರಾಧಕ್ಕೆ ಅದು ತಕ್ಕ ಶಿಕ್ಷೆ ಎಂದು ರಾಜ ಒಪ್ಪುತ್ತಿದ್ದಾನೆ ಎಂಬುದನ್ನು ಸೂಚಿಸುತ್ತದೆ. ಆದರೆ "ಅನುಗ್ರಹ" ಎಂಬ ಮಾತು ಈ ಸಂದರ್ಭಕ್ಕೆ ಅತ್ಯಂತ 'ಅನಿರೀಕ್ಷಿತ' ಅಥವಾ 'ಸಕಾರಣವಲ್ಲ' ಎಂದು ಒತ್ತಿ ಹೇಳುತ್ತಿದೆ. 'ಭಗವನ್' ಎಂಬ ಶಬ್ದ ಎಂಥ ಒಂದು ಅನರ್ಥವನ್ನೇ ಕಾಣಲಿ, ಸ್ವಭಾವ ಸಹಜವಾಗಿಯೇ ಆತನೆಷ್ಟು ದಯಾಳು ಎಂಬುದನ್ನು ವ್ಯಂಜಿಸುತ್ತದೆ. ಇದನ್ನು ಬೇರೊಂದು ರೀತಿಯಲ್ಲೂ ಅರ್ಥೈಸಬಹುದು. ಶಾಪ ಮತ್ತು 'ಭಗವತಾ' ಎಂಬ ಶಬ್ದಗಳೆರಡನ್ನೂ ಅಕ್ಕಪಕ್ಕದಲ್ಲಿ ಜೊತೆಯಾಗಿಟ್ಟಿರುವುದು ಸಾಮಾನ್ಯವಾಗಿ ಶಾಪ ಕೊಡುವ ಮತ್ತು ಶುಭ ಕೋರುವ ಗುಣಗಳೆರಡೂ ನೀರು ಬೆಂಕಿಗಳಂತೆ ಪರಸ್ಪರ ತದ್ವಿರುದ್ಧವಾದ ಗುಣಗಳಾಗಿದ್ದರೂ, ಈ ವ್ಯಕ್ತಿಯಲ್ಲಿ ಅವೆರಡೂ ಏಕಕಾಲದಲ್ಲಿ ಜೊತೆಜೊತೆಯಾಗಿರುವುದು ಆ ವ್ಯಕ್ತಿಯ ಅಪೂರ್ವ ದೈವೀ ಗುಣ ಸ್ವಭಾವ ಸಂಪತ್ತಿನಿಂದಾಗಿ ಮಾತ್ರ ಸಾಧ್ಯವಾಗಿದೆ ಎಂಬುದನ್ನು ಧ್ವನಿಸುತ್ತಿದೆ. "ಇಷ್ಟು ಕಾಲದವರೆಗೂ, ಸುತನ ಮೊಗದಾವರೆಯನ್ನು ಕಾಣುವ ಮಹದಾನಂದ ನನ್ನದಲ್ಲವಾಗಿ, ಇದೀಗ ಬಹುಕಾಲದಿಂದ ಅಪೇಕ್ಷಿಸಿದ್ದ ನನ್ನ ಬದುಕಿನ ಸಾರ್ಥಕ್ಯವೆನಿಸಿದ, ಪುತ್ರ ಜನನದ ಆ ಸಂತಸವು ಈ ಅನುಗ್ರಹದಿಂದ ಅವಶ್ಯಂ ಭಾವಿಯಾಗಿ ಪ್ರಾಪ್ತವಾಗಲಿದೆ" ಇದರ ವ್ಯಾಖ್ಯಾನವನ್ನು ಇಲ್ಲಿ ನಿಲ್ಲಿಸೋಣ.

ಇದೇ ಪ್ರಕರಣ ವಕ್ರತೆಯ ಇನ್ನೊಂದು ಪ್ರಭೇದವನ್ನು ಈಗ ನೋಡಬಹುದು.

ಕಥಾ ವೈಚಿತ್ರ್ಯ ಪಾತ್ರಂ ತದ್ವಕ್ರಿಮಾಣಂ ಪ್ರಪದ್ಯತೇ।
ಯದಂಗಂ ಸರ್ಗಬಂಧಾದೇಃ ಸೌಂದರ್ಯಾಯ ನಿಬಧ್ಯತೇ[9]

ಮಹಾ ಕಾವ್ಯಾದಿಗಳ(ಸರ್ಗಬಂಧಾದೇಃ) ಸೌಂದರ್ಯದ ಸಲುವಾಗಿ ಯೋಜಿಸಲಾಗುವ ಸಾಂಪ್ರದಾಯಿಕಗಳೆನಿಸಿದ ಪ್ರಕರಣಗಳೂ ಕಥಾ ಸಂವಿಧಾನ ವೈಚಿತ್ರ್ಯದ ಅವಿಭಾಜ್ಯ ಅಂಗವಾಗಿ ಬಂದಾಗ, ವಕ್ರತೆಯನ್ನು ಪಡೆದುಕೊಳ್ಳುತ್ತವೆ [9]

ಜಲಕ್ರೀಡೆಯೇ ಮೊದಲಾದ ಸಾಂಪ್ರದಾಯಿಕ ವಸ್ತುಗಳು, ಕಥಾ ಸಂವಿಧಾನ ವೈಚಿತ್ರ್ಯದ ಸಮಗ್ರ ಭಾಗವಾಗಿ ವರ್ಣಿತವಾದಾಗ ಅವು ನೂತನ ವಕ್ರತೆಯನ್ನು ಪಡೆದುಕೊಳ್ಳುತ್ತವೆ.

ಇದರ ಮಥಿತಾರ್ಥವೆಂದರೆ ಜಲಕ್ರೀಡೆ, ಪುಷ್ಪಾಪಚಯವೇ ಮೊದಲಾದ ವಸ್ತುಗಳು ಅಥವಾ ಪ್ರಕರಣಗಳು, ರಮಣೀಯ ಸಂಪತ್ತಿನ ಭಂಡಾರವೆನಿಸಬೇಕಿದ್ದರೆ, ಅವು ಇಡೀ ಕಥಾಸಂವಿಧಾನ ವೈಚಿತ್ರ್ಯದ ಅಂಗವಾಗಿಯೇ, ಅದರ ಸಮಗ್ರ ಭಾಗವಾಗಿಯೇ ವರ್ಣಿತವಾಗಬೇಕು. ಇದಕ್ಕೆ ಉದಾಹರಣೆ ರಘು ವಂಶದದಲ್ಲಿದೆ-

ಅಥೋರ್ಮಿಮಾಲೋಲೋನ್ಮದರಾಜಹಂಸೇ
ರೋಧೋಲತಾ ಪುಷ್ಪವಹೇ ಸರಯ್ವಾಃ|
ವಿಹರ್ತುಮಿಚ್ಛಾ ವನಿತಾ ಸಖಸ್ಯ
ತಸ್ಯಾಂಭಸಿ ಗ್ರೀಷ್ಮಸುಖೇ ಬಭೂವ [೩೩] **[ರಘು 16-54]**

ಮಾಲೆಮಾಲೆಯಾದಲೆಗಳಲಿ ಈಸುತಿಹ
ಉನ್ಮತ್ತ ರಾಜಹಂಸಗಳಿರುವ
ದಡದಲ್ಲಿ ಬೆಳೆದ ಹೂಬಳ್ಳಿಗಳು ತೇಲುತಿರುವ
ಗ್ರೀಷ್ಮದಲಿ ತಂಪೆನಿಸಿ ಹಿತವಾಗಿರುವ
ಸರಯೂ ನದಿಯೊಳು ಜಲಕ್ರೀಡೆಗೆಳಸಿದನು
ನೃಪನು ತನ್ನಿಚ್ಛೆಗಾರ್ತಿಯರೊಡನೆ [೩೩] ರಘುವಂಶ-16-54

ಇತ್ಯಾದಿ. ಕುಶ ಮಹಾರಾಜನು, ಮದಿರೋನ್ಮತ್ತರಾದ ಲಲನೆಯರ ನಯವಾದ ಮಾತುಕತೆಗಳಿಂದ ಉತ್ತೇಜಿತನಾಗಿ ಜಲಕ್ರೀಡೆಯಲ್ಲಿ ಅದೆಷ್ಟು ಮೈಮರೆತನೆಂದರೆ, ಅವನ ಭುಜದ ದಿವ್ಯಾಭರಣ ಕಳೆದು ಹೋದದ್ದು ಅವನ ಲಕ್ಷ್ಯಕ್ಕೆ ಬರಲೇ ಇಲ್ಲ. ಜಲಕ್ರೀಡೆಯ ಅಂತ್ಯದಲ್ಲಿ ಮಾತ್ರ ಅದು ಕಳೆದು ಹೋದದ್ದು ತಿಳಿಯಿತು. ಈ ಘಟನೆ ಮುಂದಿನ ಘಟನೆಯಾದ, ನಾಗರಾಜ ಕುಮುದನ ಸೋದರಿಯ ಕಂದುಕ ಕ್ರೀಡೆಯೊಂದಿಗೆ ಸಂಬಂಧ ಕಲ್ಪಿಸುವಲ್ಲಿ ತುಂಬ ಸಹಾಯಕವಾಗುತ್ತದೆ. ಈ ಕಲಾತ್ಮಕ ಸಂಬಂಧ ಸಹೃದಯರಿಗೆ ಅತ್ಯಂತ ಆಹ್ಲಾದಕಾರಿಯಾಗಿದೆ. ವಿವರವಾಗಿ ಹೇಳಬೇಕೆಂದರೆ - ಕುಶ ಮಹಾರಾಜನು, ಜಲಕ್ರೀಡೆಯ ಆಮೋದದಲ್ಲಿ ಮಗ್ನನಾಗಿ, ತನ್ನ ಸುತ್ತಮುತ್ತ ಇದ್ದ ಲಲನೆಯರ ಮೇಲೆ ಕೈಗಳಿಂದ ನೀರೆರಚುವಾಟದಲ್ಲಿ ತೊಡಗಿದ್ದಾಗ, ಅವನ ಗಮನಕ್ಕೆ ಬರದೆ, ಅವನ ತೋಳಬಂದಿ (ದಿವ್ಯಾಲಂಕರಣ) ತೋಳಿನಿಂದ ಜಾರಿ ಹೋಯಿತು. ನಾಗರಾಜನ ಮಗಳಾದ ಕುಮುದ್ವತಿ ಎಂಬುವಳು ಕುತೂಹಲದಿಂದ ಅದು ಬೀಳುತ್ತಿದ್ದಂತೆಯೇ ಹಿಡಿದುಕೊಂಡಳು. ರಾಜನಿಗೆ ಅದು ಅತ್ಯಂತ ಅಮೂಲ್ಯವೆನಿಸಿದ್ದರಿಂದ, ನೀರಿನಲ್ಲೆಲ್ಲಾ ಆಮೂಲಾಗ್ರವಾಗಿ ಹುಡುಕಿಸಿದ. ಆದರೆ ಅದು ಸಿಗಲಿಲ್ಲ. ಅದರ ಹುಡುಕಾಟದಲ್ಲಿ

ತೊಡಗಿದ್ದ ಬೆಸ್ತರು ನೀರಿನಲ್ಲಿರುವ ಪಾತಾಳಲೋಕದ ಪ್ರಭು ಕುಮುದ ಎಂಬುವನು ತೆಗೆದುಕೊಂಡಿರಬೇಕು ಎಂಬ ಸುದ್ದಿಯನ್ನು ಮುಟ್ಟಿಸಿದರು. ಕೂಡಲೇ ಮಹಾನ್ ಬಿಲ್ಗಾರನೆನಿಸಿದ ದಶಾನನಾಂತಕ ನಂದನನಾದ ಕುಶನು, ಗರುಡಾಸ್ತ್ರವನ್ನು ತನ್ನ ಧನುಸ್ಸಿಗೆ ಹೂಡಿ ಕುಮುದನ ಮೇಲೆ ಪ್ರಯೋಗಿಸಿದ. ಕೂಡಲೇ ಕುಮುದನು ತುಂಬ ಆಕುಲಗೊಂಡು, ಹೇಗಾದರೂ ತನ್ನನ್ನು ರಕ್ಷಿಸಿಕೊಳ್ಳಲು ಕುಶನ ಸಮೀಪಕ್ಕೆ ಬಂದು, ಶರಣಾಗತನಾಗಿ, ಆತನ ಕರಕಮಲಗಳಲ್ಲಿ ತನ್ನ ತಂಗಿ ಕುಮುದ್ವತಿಯನ್ನಷ್ಟೇ ಅಲ್ಲ; ಕಳೆದು ಹೋಗಿದ್ದ ತೋಳಬಂದಿಯನ್ನು ಒಪ್ಪಿಸಿದ.

ಅವೈಮಿ ಕಾರ್ಯಾಂತರ ಮಾನುಷಸ್ಯ
ವಿಷ್ಣೋಃ ಸುತಾಖ್ಯಾಮಪರಾಂ ತನುಂ ತ್ವಾಮ್|
ಸೋಹಂ ಕಥಂ ನಾಥ ತವಾಚರೇಯ -
ಮಾರಾಧನೀಯಸ್ಯ ಧೃತೇರ್ವಿಘಾತಮ್ [೩೪]

ಕರಾಭಿಘಾತೋತ್ಥಿತ ಕಂದುಕೇಯ-
ಮಾಲೋಕ್ಯ ಬಾಲಾತಿ ಕುತೂಹಲೇನ|
ಹೃದಾತ್ಪತ ಜ್ಯೋತಿರಿವಾಂತರಿಕ್ಷಾ-
ದದತ್ತ ಚೈತ್ರಾಭರಣಂ ತ್ವದೀಯಮ್ [೩೫]

ತದೇತದಾಜಾನು ವಿಲಂಬಿನಾ ತೇ
ಜ್ಯಾಘಾತರೇಖಾಕಿಣ ಲಾಂಛನೇನ|
ಭುಜೇನ ರಕ್ಷಾಪರಿಘೇಣ ಭೂಮೇ-
ರುಪೈತು ಯೋಗಂ ಪುನರಂಸಲೇನ [೩೬]

ಇಮಾಂ ಸ್ವಸಾರಂ ಚ ಯವೀಯಸೀಂ ಮೇ
ಕುಮುದ್ವತೀಂ ನಾರ್ಹಸಿ ನಾನುಮಂತುಮ್|
ಆತ್ಮಾಪರಾಧಂ ನುದತೀಂ ಚಿರಾಯ
ಶುಶ್ರೂಷಯಾ ಪಾರ್ಥಿವ ಪಾದಯೋಸ್ತೇ [೩೭]

ದೇವ ಕಾರ್ಯಕ್ಕೆಂದೆ ನರರೂಪವನಾಂತ
ವಿಷ್ಣುವಿನ ಸುತ ನೀನು
ಅವನಿನ್ನೊಂದೆ ರೂಪವೆಂದರಿವೆ ನಾನು
ಆರಾಧ್ಯ ನೀನೆನಗೆ, ನಿನಗೆಂತು ನಾ
ಮುಳಿಸ ತರಬಲ್ಲೆನು? [೩೪] [XVI-82-85]

ಕೈ ತಾಗಿ ಪುಟನೆಗೆದು ಮೇಲಕ್ಕೆ ಹಾರಿದಾ
ಚೆಂಡನು ಕೌತುಕದಿ ಮೊಗವೆತ್ತಿ ನೋಡುತಿರೆ ಬಾಲೆ
ಹೊಳೆವ ನಕ್ಷತ್ರದಂತೆ ನಿನ್ನ ಚೈತ್ರಾಭರಣ
ಆಕಾಶದಿಂ ಬೀಳುತಿರೆ ಕಂಡದನು ಕೈಲಾಂತಳು [೩೫]

ಮೊಳಕಾಲ್‌ವರೆಗೆ ಚಾಚಿ ನೀಳವಾಗಿರುವ
ಭೂಮಂಡಲವ ರಕ್ಷಿಸುವ ಪರಿಘವುನಿಸಿರುವ
ಹೆದೆಯ ಸೆಳೆವಂದು ಆದ ಗಾಯಗಳಿಂದ ಜಡ್ಡುಗಟ್ಟಿರುವ
ಆ ನಿನ್ನ ಬಾಹುದಂಡವು ಧರಿಸಲೀ ಒಡವೆಯ! [೩೬]

ನಿನ್ನ ಚರಣಸೇವೆಯಲಿ
ತನ್ನ ಅಪರಾಧವನು ನೀಗಿಕೊಳಬಯಸಿರುವ
ಈ ನನ್ನ ಜವ್ವನಿಗೆ ತಂಗಿ ಕುಮುದ್ವತಿಯ-
ನೊಪ್ಪಿಸಿಕೊಳ್ಳುದನು ಇಲ್ಲೆನ್ನದಿರು ನೃಪನೆ ನೀನು [೩೭]

[ರಘುವಂಶ 16-82-85]

ನಾಗರಾಜನ ಈ ಮಾತುಗಳಲ್ಲಿ ವಕ್ರತೆಯ ಹಲವಾರು ಪ್ರಭೇದಗಳನ್ನು ನೋಡಬಹುದು. ಮೊದಲ ಪದ್ಯದಲ್ಲಿ "ವಿಷ್ಣೋಃ" ಎಂಬ ಪದದಲ್ಲಿ ರೂಢಿವಕ್ರತೆಯ ಸೌಂದರ್ಯವಿದೆ. ವಕ್ತೃವಿನ ವಿಶೇಷ ಸ್ವರೂಪವಾದ ತಾನು ನಾಗನಾಗಿರುವುದು ಭಗವಾನ್ ವಿಷ್ಣುವಿಗೂ ಪ್ರಿಯನಾದವನು, ಭೂಮಂಡಲದ ಭಾರವನ್ನೆಲ್ಲ ಹೊರುವವನೂ, ಮೃದು ಪರ್ಯಂಕವಾಗಿ ಸುತ್ತಿಕೊಂಡು ವಿಷ್ಣುವನ್ನು ಸೇವಿಸುತ್ತಿರುವನೂ, ಅವನೆಲ್ಲ ಆಜ್ಞೆಗಳನ್ನು ಪಾಲಿಸುತ್ತಿರುವವನೂ ಅನಂತನೆಂಬ ಇನ್ನೊಬ್ಬನಾಗನೇ ಎಂಬುದನ್ನು ಸೂಚಿಸುತ್ತಿದೆ.

"ಸೋ" "ಹಂ" ಎಂಬ ಸರ್ವನಾಮ ಸಂವೃತಿ ವಕ್ರತೆಯಿಂದ, ಅವನ ಅಧಿಕಾರ ವ್ಯಾಪ್ತಿಯಲ್ಲಿ ಬಹುಕಾಲದಿಂದಲೂ ವಾಸಮಾಡಿಕೊಂಡಿರುವ "ವ್ಯಕ್ತಿಯೇ ನಾನು" ಎಂಬುದನ್ನು ಸೂಚಿಸುತ್ತದೆ. "ಕಥಂ" ಎಂಬುದು ಪದ ವಕ್ರತೆಯ ಮೂಲಕ, ದೊರೆಯಲ್ಲಿ ತನಗಿರುವ ಭಕ್ತಿ ಮತ್ತು ನಿಷ್ಠೆಯನ್ನು ದೃಢಪಡಿಸುತ್ತದಷ್ಟೇ ಅಲ್ಲದೆ, ರಾಜನಲ್ಲಿರುವ ವಿಧೇಯತೆಯು ತನ್ನನ್ನು ಸಂಪೂರ್ಣವಾಗಿ ನಿಯಂತ್ರಿಸುತ್ತಿರುವುದರಿಂದ, ತಾನು ಯಾವುದೇ ದುಷ್ಕೃತ್ಯವನ್ನು ಮಾಡುತ್ತೇನೆಂಬ ಬಗ್ಗೆ ಯಾವುದೇ ಅನುಮಾನ ಬೇಡವೆಂಬುದನ್ನು ಸೂಚಿಸುತ್ತದೆ.

ಎರಡನೇ ಪದ್ಯದಲ್ಲಿರುವ ತೋಳಬಂದಿಗೆ ಸಂಬಂಧಿಸಿದ ಉಪಮೆ - "ಆಕಾಶದಿಂದ ಬೀಳುತ್ತಿರುವ ಹೊಳೆವ ನಕ್ಷತ್ರದಂತೆ (ಹ್ರದಾತ್ಪತ ಜ್ಯೋತಿರಿವಾಂತ ರಿಕ್ಷಾತ್) ತೋಳ ಬಂದಿಯನ್ನು ಆವರಿಸಿದ್ದ ಪ್ರಭಾ ಮಂಡಲ ಮತ್ತು ದಿಕ್ಕುಗಳನ್ನೆಲ್ಲ ದೀಪ್ತಗೊಳಿಸುವ ಅದರ ಪ್ರಭೆ ತನ್ನಂಥವರಲ್ಲೂ ಇದ್ದಕ್ಕಿದ್ದಂತೆ ಭಯ ಸಂಶಯಗಳನ್ನು ಮೂಡಿಸುವಷ್ಟು ತೀಕ್ಷ್ಣವಾಗಿತ್ತು ಎಂಬುದನ್ನು ಧ್ವನಿಸುತ್ತದೆ.

ಮೂರನೇ ಪದ್ಯದಲ್ಲಿ ಬರುವ - "ತದೇತದ್" ಎಂಬ ನಿರ್ದೇಶಕ ಸರ್ವನಾಮವು ಸಂವೃತಿ ವಕ್ರತೆಯ ಮೂಲಕ, ಕೌಸ್ತುಭ ರತ್ನವು ನಿಮ್ಮ ತಂದೆಯ ವಕ್ಷಸ್ಥಲವನ್ನು ಅಲಂಕರಿಸುತ್ತಿದ್ದ ಹಾಗೆಯೇ ನಿನ್ನ ಈ ಚೈತ್ರಾಭರಣವೂ ಭುಜದ ಅವಿಭಾಜ್ಯ ಆಭರಣವಾಗಿತ್ತು ಎಂಬುದನ್ನು ಧ್ವನಿಸುತ್ತದೆ. "ಭೂಮಂಡಲವ ರಕ್ಷಿಸುವ ಪರಿಘ" ಎಂಬ ರೂಪಕವು, ದೊರೆಯು ವಸುಂಧರೆಯ ದುಃಖ ಸಮಸ್ತವನ್ನೂ ಸಾರ್ಥಕವಾಗಿ ನಿವಾರಿಸಿದ್ದಾನಾಗಿ, ಅಂಥ ವ್ಯಕ್ತಿಯ ಬಾಹುವು,

ಅಲಂಕರಿಸಲ್ಪಡಲು ಸಕಲ ರೀತಿಯಲ್ಲಿ ಅರ್ಹವಾದದ್ದೆಂಬುದನ್ನು ವ್ಯಂಜಿಸುತ್ತಿದೆ.

ಶುಶ್ರೂಷಯ ಪಾದಯೋಃ (ನಿನ್ನ ಚರಣ ಸೇವೆಯಲ್ಲಿ.....) ಎಂಬುದು ನೃಪನ ಪಾದಗಳಲ್ಲಿ ಸೇವೆ ಸಲ್ಲಿಸುವ ಪುಣ್ಯದಿಂದಾಗಿ, ವಿವಾಹದಲ್ಲಿ ಅವನ ಕೈ ಹಿಡಿವ ಅಪೂರ್ವ ಭಾಗ್ಯಕ್ಕೆ ಭಾಜನಳಾಗುವಳು ಎಂಬುದನ್ನು ಧ್ವನಿಸುತ್ತದೆ. ಜವ್ವನಿಗೆ ತಂಗಿ (ಯವೀಯಸೀ) ಎಂಬ ವಿಶೇಷಣವು ಆಕೆ ದ್ರುತಗತಿಯಲ್ಲಿ ತಾರುಣ್ಯಾವಸ್ಥೆಗೆ ಕಾಲಿಟ್ಟಿದ್ದರಿಂದಾಗಿ, ನೃಪನ ವಿಷಯಕ್ಕೆ ಅನುರಾಗವು ಪ್ರಾರಂಭವಾಗಿರುವುದನ್ನು ಸೂಚಿಸುತ್ತದೆ. ಆದ್ದರಿಂದ ಇವೆಲ್ಲವೂ (ನಾರ್ಹಸಿನಾನುಮಂತುಮ್) ಒಪ್ಪಿಸಿಕೊಳ್ಳುದನು ಇಲ್ಲೆನ್ನದಿರು" ಎಂಬ ಪ್ರಾರ್ಥನೆಗೆ ಪೋಷಕವಾಗಿವೆ. ಅದರ ಧ್ವನಿತಾರ್ಥ ನಿನಗೆ ಗತ್ಯಂತರವಿಲ್ಲದಿರುವುದರಿಂದ, ನಮ್ಮ ಪ್ರಾರ್ಥನೆಯನ್ನು ಅಂಗೀಕರಿಸಲೇಬೇಕು"- ಎಂದು

"ಅತಿಥಿಂ ನಾಮ ಕಾಕುತ್ಸ್ಥಾತ್ ಪುತ್ರಮಾಪ ಕುಮುದ್ವತೀ" [೩೮]

ಅತಿಥಿ ಎಂಬ ಹೆಸರಿನ ಮಗನ ಪಡೆದಳು
ಕುಮುದ್ವತಿಯು ಕಾಕುತ್ಸ್ಥನಿಂದ [೩೮] [ರಘು 17-1]

ಎಂಬ ಕವಿಯ ಹೇಳಿಕೆಯಿಂದ, ಕಥೆಯ ಮುಂದಿನ ಪ್ರಕರಣದಲ್ಲೂ ಮುಂದಿನ ಜಲಕ್ರೀಡಾ ಪ್ರಕರಣವು ಕಥೆಯ ಅನಂತರದ ಪ್ರಕರಣಗಳೊಂದಿಗೆ ಹೇಗೆ ಸಾವಯವ ಸಂಬಂಧವನ್ನು ಹೊಂದಿದೆ ಎಂಬುದನ್ನು ನೋಡಬಹುದು. ಅಷ್ಟೇ ಅಲ್ಲ; ಅದೇ ಸರ್ಗದಲ್ಲಿ ಬರುವ ನಿದಾಘ ವರ್ಣನೆಯು, ಇದರೊಂದಿಗೆ ಘನಿಷ್ಠ ಸಂಬಂಧವನ್ನು ಹೊಂದಿದೆ. ಕಾರಣ, ನಿದಾಘವು ಜಲಕ್ರೀಡೆಗೆ ದಾರಿಮಾಡಿಕೊಡುತ್ತದೆ ಉದಾ:

ಅಥಾಸ್ಯ ರತ್ನಗ್ರಥಿತೋತ್ತರೀಯ-
ಮೇಕಾಂತ ಪಾಂಡುಸ್ತನಲಂಬಿಹಾರಮ್|
ನಿಶ್ವಾಸ ಹಾರ್ಯಾಂಶುಕಮಾ ಜಗಾಮ
ಘರ್ಮಃ ಪ್ರಿಯಾವೇಷಮಿವೋಪದೇಷ್ಟುಮ್ [೩೯] **(ರಘು 16-43)**

ರನ್ನದ ಮೇಲುಡೆಗಳನು
ಬೆಳ್ಮೊಲೆಗಳ ತಾಕುವ ಮುತ್ತಿನ ಹಾರಗಳ
ನಿಶ್ವಾಸಕೆ ಹಾರಾಡುವ ರೇಷಿಮೆ ಉಡುಪುಗಳನು
ಧರಿಸುವುದೆಂತೆನುವುದನುಪದೇಶಿಸುವೊಲು
ಬಂದುದು ಬೇಸಗೆಯು [೩೯]

ಈ ರೀತಿಯ ವರ್ಣನೆಗಳಿಂದ ನಿಬದ್ಧವಾದ ಕಥಾ ವೈಚಿತ್ರ್ಯವು ಮೀರಿ ಹೋಗುವುದಿಲ್ಲ. ಕಥೆಯ ವೈವಿಧ್ಯ ಪೂರ್ಣವಾದ ಆಸಕ್ತಿಗಳನ್ನು ವರ್ಧಿಸುವ ಕೆಲಸವನ್ನು ಇವು ಮಾಡುತ್ತವೆ. ಇಡಿಯಾದ ಪ್ರಬಂಧ ಕಾವ್ಯದಲ್ಲಿ ಇದು ಒಂದು ಸಂಗತಿಗೆ ಸಂಬಂಧಿಸಿದ ಪ್ರಕರಣವೇ ಆದರೂ, ಕಥೆಯ ಬಿಡಿ ಬಿಡಿಯಾದ ಎಳೆಗಳನ್ನು ಏಕ ಸೂತ್ರತೆಗೆ ತರುವ ಉದ್ದೇಶವನ್ನು ಸಾಧಿಸುವುದನ್ನು ನೋಡಬಹುದು. ಪ್ರಕರಣ ನಿರ್ಮಾಣದ ವಕ್ರತೆಯ ಇನ್ನಿತರೆ ನಿದರ್ಶನಗಳನ್ನು ಸಹೃದಯರೇ

ಊಹಿಸಿಕೊಳ್ಳಬೇಕು.

ಜಲಕ್ರೀಡಾದಿಕಾಖ್ಯಾನಮಪಿ ಸಂದರ್ಭ ಸುಂದರಮ್|
ಪ್ರಬಂಧಸ್ಯ ಕಥಾ ಪ್ರಾಣ ಪರಿಸ್ಪಂದಪರಂ ಸುಖಮ್ [೪೦]

ಸಹೃದಯರಿಗೆ ಹೆಚ್ಚಿನ ಸಂತೋಷವನ್ನುಂಟು ಮಾಡಬೇಕಿದ್ದರೆ, ಜಲಕ್ರೀಡೆಯೇ ಮೊದಲಾದ ಪ್ರಕರಣಗಳ ವರ್ಣನೆಗಳು ತಮ್ಮದೇ ಆದ ಸಾಂದರ್ಭಿಕ ಸೌಂದರ್ಯವನ್ನು ಹೊಂದಿರುವುದೇ ಅಲ್ಲದೆ, ಇಡೀ ಪ್ರಬಂಧದೊಂದಿಗೆ ಜೀವಂತ ಸಂಬಂಧವನ್ನು ಹೊಂದಿರಬೇಕು. [೪೦]

ಇದು ಅಂತರಶ್ಲೋಕ

ಪ್ರಕರಣ ವೈಚಿತ್ರ್ಯದ ಇನ್ನೊಂದು ಪ್ರಭೇದವನ್ನು ವಿವರಿಸಲಾಗುವುದು.

ಯತ್ರಾಂಗಿರಸ ನಿಷ್ಯಂದ ನಿಕಷಃ ಕೋಽ ಪಿ ಲಕ್ಷ್ಯತೇ|
ಪೂರ್ವೋತ್ತರೈರಸಂಪಾದ್ಯಃ ಸಾಂಕಾದೇಃ ಕಾಪಿ ವಕ್ರತಾ [10]

ಅಂಕಾದಿಗಳಿಗೆ ಸಂಬಂಧಿಸಿದ ಅಲೌಕಿಕ ವಕ್ರತೆಯು ಅಂಕವೊಂದಕ್ಕೆ ವಿಶಿಷ್ಟವಾಗಿದ್ದು, ನಾಟಕದಲ್ಲಿ ಅದರ ಹಿಂದಿನ ಅಥವಾ ಮುಂದಿನ ಅಂಕದಿಂದ ಆ ಅಲೌಕಿಕತೆ ಸಿದ್ಧಿಸುವುದಿಲ್ಲ. ಹೀಗಾಗಿ ಆ ಅಂಕವು ತನ್ನದೇ ಆದ ರೀತಿಯಲ್ಲಿ ನಾಟಕದ ಪ್ರಧಾನ ರಸಪ್ರವಾಹದ ನಿಕಷವಾಗಿರುತ್ತದೆ [10]

ನಾಟಕದಲ್ಲಿ ಅಂಕವೊಂದಕ್ಕೆ ಸಂಬಂಧಿಸಿದ ವಕ್ರತೆ ಅಥವಾ ಮಹಾಕಾವ್ಯದಲ್ಲಿ ಸರ್ಗವೊಂದಕ್ಕೆ ಸಂಬಂಧಿಸಿದ ವಕ್ರತೆಯು - ಎರಡೂ ಕೃತಿಯ ಪ್ರಕರಣಗಳು ಅಥವಾ ಭಾಗ ಗಳಾಗಿವೆಯಾಗಿ - ಅಲೌಕಿಕ ಅಥವಾ ವಿಶಿಷ್ಟವಾದ್ದು. ಹಾಗೆ ಸುಯೋಜಿತವಾದ ಅಂಕ ಅಥವಾ ಸರ್ಗವು ಪ್ರಧಾನ ರಸಪ್ರವಾಹದ ಒರೆಗಲ್ಲಿನ ವಿಶಿಷ್ಟಗುಣವನ್ನು ಹೊಂದಿದ್ದು - ಒರೆಗಲ್ಲಿನ ಪರೀಕ್ಷೆಗೊಳಗಾದ ಚಿನ್ನದ ಪರಿಶುದ್ಧತೆ ಅಥವಾ ಅಪರಿಶುದ್ದತೆ ವ್ಯಕ್ತವಾಗುವ ಹಾಗೆ, ರಸದ ಪರಿಶುದ್ಧತೆಯು ಈ ಅಂಕದಿಂದ ಪ್ರಕಾಶಕ್ಕೆ ಬರುತ್ತದೆ ಮತ್ತು ಈ ಒಂದು ವಿಶಿಷ್ಟ ಗುಣವು ಆ ಅಂಕಕ್ಕಷ್ಟೇ ಮೀಸಲಾಗಿದ್ದು, .ಅದೇ ನಾಟಕ ಕೃತಿಯ ಇತರೆ ಅಂಕಗಳಲ್ಲಿ (ಹಿಂದಿನ ಅಥವಾ ಮುಂದಿನ) ಕಂಡು ಬರುವುದಿಲ್ಲ.

ಇದರ ಒಟ್ಟಾರೆ ಮಥಿತಾರ್ಥ ಇಷ್ಟೆ. ಎಲ್ಲ ಅಂಕಗಳೂ ಸಮಾನವಾಗಿ (ಒಂದೇ ರೀತಿಯಲ್ಲಿ) ಸುಂದರವಾಗಿರುವುದಿಲ್ಲ. ಕೆಲವೊಂದು ವಿಶಿಷ್ಟ ಅಂಕಗಳು ಮಾತ್ರ ಪ್ರಧಾನ ರಸ ಸರ್ವಸ್ವದ ಕ್ರೀಡಾ ನಿಕೇತನವಾಗಿರುತ್ತವೆ. ಮತ್ತು ಆ ಅಂಕದ ವಕ್ರತಾವಿಚ್ಛಿತ್ತಿ ಮಾತ್ರ ನಮಗೆ ಮೋಹಕವಾಗಿ ಕಾಣುತ್ತದೆ. ಅದರ ಲಾವಣ್ಯಾತಿಶಯವು ಅದೇ ನಾಟಕದ ಹಿಂದಿನ ಅಥವಾ ಮುಂದಿನ ಬೇರಾವುದೇ ಅಂಕದಲ್ಲಿ ಪುನರಾವರ್ತನೆ ಮಾಡುವಂತಾಗಲಿ, ಅನುಕರಿಸುವಂತಾಗಲಿ ಇರದೆ, ಅದಕ್ಕೆ ಮಾತ್ರ ವಿಶಿಷ್ಟವಾದುದಾಗಿರುತ್ತದೆ ಇದಕ್ಕೆ ಉದಾಹರಣೆಯಾಗಿ,

ವಿಕ್ರಮೋರ್ವಶೀಯ ನಾಟಕದ ನಾಲ್ಕನೇ ಅಂಕವನ್ನು ನೋಡಬಹುದು. ಇದರಲ್ಲಿ

ನಾಯಕನು ಉನ್ಮತ್ತನ ಹಾಗೆ ಕಾಣಿಸಿಕೊಳ್ಳುತ್ತಾನೆ.

ಇಲ್ಲಿ ಪ್ರಧಾನರಸವಾದ ವಿಪ್ರಲಂಭ ಶೃಂಗಾರಕ್ಕೇ ವಿಶಿಷ್ಟವಾದ ವಿಭಾವಾನುಭಾವವೇ ಮೊದಲಾದ ಮಾಧುರ್ಯ ಸಂಪತ್ತಿನಿಂದ ಪ್ರಕರ್ಷ ಸ್ಥಿತಿಗೇರಿರುವ ಪ್ರಧಾನ ರಸವು ಸಹೃದಯರ ಹೃದಯವನ್ನು ಸೂರೆಗೊಳ್ಳುವುದನ್ನು ನೋಡಬಹುದು. ಇದು ಬೇರೆ ಪ್ರಬಂಧದಲ್ಲಾಗಲಿ, ಪ್ರಕರಣದಲ್ಲಾಗಲಿ ಸ್ವಲ್ಪವೂ ಅನುಕರಿಸಲು ಸಾಧ್ಯವಾಗದ್ದು.

ಅಂಕದ ಪ್ರಾರಂಭದಲ್ಲೇ ರಾಜನು ಉನ್ಮತ್ತನಾಗಿ ಮಾತಾಡುವ ಈ ದೃಶ್ಯವನ್ನು ನೋಡಬಹುದು.

ರಾಜ (ಉನ್ನತ್ತತೆಯಿಂದ) ಎಲವೆಲವೋ ದುರಾತ್ಮ! ನಿಲ್ಲು ನಿಲ್ಲು! ನನ್ನ ಪ್ರಿಯತಮೆಯನ್ನು ಎತ್ತಿಕೊಂಡು ಎಲ್ಲಿಗೆ ಹೋಗುತ್ತಿರುವೆ? (ನೋಡಿ) ಏನು? ಪರ್ವತ ಶಿಖರದಿಂದ ಆಕಾಶಕ್ಕೆ ನೆಗೆದು ನನ್ನ ಮೇಲೆ ಬಾಣಗಳನ್ನು ಬಿಡುತ್ತಿರುವನೇನು? (ಚೆನ್ನಾಗಿ ದಿಟ್ಟಿಸಿ ನೋಡಿ, ಕಣ್ಣಲ್ಲಿ ನೀರು ತಂದುಕೊಂಡು) ಅಯ್ಯೋ| ಹೇಗೆ ನಾನು ಮೋಸಹೋದೆ!

ನವಜಲಧರಃ ಸನ್ನದ್ಧೋಽಯಂ ನ ದೃಪ್ತನಿಶಾಚರಃ
ಸುರಧನುರಿದಂ ದೂರಾಕೃಷ್ಟಂ ನ ನಾಮ ಶರಾಸನಮ್|
ಅಯಮಪಿ ಪಟುರ್ಧಾರಾಸಾರೋ ನ ಬಾಣಪರಂಪರಾ
ಕನಕನಿಕಷ ಸ್ನಿಗ್ಧಾ ವಿದ್ಯುತ್ ಪ್ರಿಯಾ ನ ಮಮೋರ್ವಶೀ [೪೧]

ಹೊಸ ಕಾರ್ಮುಗಿಲಿದು
ಶಸ್ತ್ರ ಹಿಡಿದ ಗರ್ವಿರಕ್ಕಸನಲ್ಲ!
ದೂರಕೆ ಚಾಚಿದ ಕಾಮನ ಬಿಲ್ಲಿದು
ದನುಜನ ಧನುವಲ್ಲ!
ಸುರಿಯುತಲಿರುವಿದು ವರ್ಷಧಾರೆ
ಬಾಣ ಪರಂಪರೆಯಲ್ಲ!
ಒರೆಗಲ್ಲ ಮೇಲೆಳೆದ ಹೊನ್ನಗೆರೆಯೊಲು
ಹೊಳೆವ ಇದು ಮಿಂಚು
ನನ್ನ ಪ್ರಿಯೆ ಊರ್ವಶಿಯಲ್ಲ! [೪೧] ವಿಕ್ರಮೋವಣೀಯ IV - 1

ಇದರಿಂದ ಪ್ರೇಮದಲ್ಲಿ ಉನ್ಮಾದಾವಸ್ಥೆಯಿನ್ನು ತಲುಪಿರುವ ರಾಜನ ಸ್ಥಿತಿ ಸುವ್ಯಕ್ತ. ಪೂರ್ಣಶಸ್ತ್ರ ಸಜ್ಜಿತನಾಗಿ ಧನುಸ್ಸಿಗೆ ಹೆದೆಯೇರಿಸಿ ಗರ್ವದಿಂದ ಆಶ್ರಯಿಸಲು ಬಂದ ರಾಕ್ಷಸನ ಆಕ್ರಮಣವನ್ನು ತಾನು ತಡೆದುಕೊಳ್ಳಬಲ್ಲೆ ಅಷ್ಟೇ ಅಲ್ಲ; ಪ್ರತೀಕಾರ ಮಾಡಲೂಬಲ್ಲೆ, ಎಂದು ರಾಜನಿಗೆ ಅನಿಸುತ್ತದೆ; ಆದರೆ ಹೊಸ ಕಾರ್ಮುಗಿಲಿನ ಆಕ್ರಮಣವನ್ನು ಎದುರಿಸುವಷ್ಟು ಶಕ್ತನಲ್ಲ. ಈ ವರ್ಷಧಾರೆಯು ಮರ್ಮಾಘಾತ ಮಾಡುವ ಹಾಗೆ ಹರಿತವಾದ ಬಾಣ ಸಮೂಹವೂ ತನ್ನ ಹೃದಯವನ್ನು ಭೇದಿಸಲಾರವು. ನೋಡು ನೋಡುತ್ತಿದ್ದಂತೆಯೇ ಅದೃಶ್ಯವಾಗಿ ಬಿಡುವ ಆಗಸದ ಮಿಂಚು ಕೂಡ ಒಂದರೆಕ್ಷಣ ಸ್ಥಿರವಾಗಿದ್ದು ದರ್ಶನ ಕೊಡಬಹುದು. ಆದರೆ ನನ್ನ ಪ್ರಿಯ

ಊರ್ವಶಿಯ ವಿಷಯದಲ್ಲಿ ಮಿಂಚಿನ ಆ ಕ್ಷಣಿಕ ಸ್ಥಿರತೆಯನ್ನೂ ಊಹಿಸಲಾಗದು. ನಾನೇನು ಮಾಡಲಿ? ರಾಜನ ಈ ಎಲ್ಲ ಮಾತಿನ ಒಟ್ಟಾರೆ ಅಂತರಾರ್ಥ ಇದರಲ್ಲಿ ಧ್ವನಿತವಾಗುತ್ತಿದೆ. ಈ ಸಂಬಂಧದಲ್ಲಿ ಈಗಾಗಲೇ ಉದಾಹರಿಸಿ ವ್ಯಾಖ್ಯಾನಿಸಲಾದ ಈ ಶ್ಲೋಕಗಳನ್ನು ಜೊತೆಯಲ್ಲಿ ಓದಿ ಸವಿಯಬೇಕು - ಅವುಗಳೆಂದರೆ

1) ತಿಷ್ಠೇತ್ಕೋಪವಶಾದಿ[1]
2) ಪದ್ಭ್ಯಾಮಿತಿ[2]
3) ತರಂಗೇsತ್ಯಾದಿಕ[3]

ಇನ್ನೊಂದು ಉದಾಹರಣೆಯಾಗಿ, ಕಿರಾತಾರ್ಜುನೀಯ ಕಾವ್ಯದಲ್ಲಿ ಬರುವ ಅರ್ಜುನ-ಶಿವರ ಬಾಹುಯುದ್ಧ ಪ್ರಕರಣವನ್ನು ಹೆಸರಿಸಬಹುದು. ಅಲ್ಲಿಯೂ ಅರ್ಜುನನು, ತನ್ನ ಶರೀರವನ್ನು ರಕ್ಷಿಸಬಲ್ಲ ಕವಚವೇ ಮೊದಲಾದ ಯಾವುದೇ ಉಪಕರಣಗಳಿಲ್ಲದಿದ್ದರೂ ಶತ್ರುವನ್ನೆದುರಿಸುವಲ್ಲಿ ತನ್ನ ಏಕೈಕ ಸಹಜ ಬಾಹುಬಲದ ಶಕ್ತಿ ಸಾಮರ್ಥ್ಯವನ್ನು ಪ್ರದರ್ಶಿಸುವಂಥ ಅಪೂರ್ವ ಅವಕಾಶ ಒದಗಿ ಬಂದದ್ದಕ್ಕಾಗಿ ಮನದಲ್ಲಿ ಮುದ ತಾಳಿ, ತನ್ನ ಶತ್ರುವನ್ನೆದುರಿಸುವ ಅನುಪಮ ಯುದ್ಧದಲ್ಲಿ ತನಗೆ ಏಕಮಾತ್ರ ಆಧಾರವಾಗಿದ್ದ ತನ್ನ ಅಸೀಮ ಸಾಹಸ ಪರಾಕ್ರಮಗಳನ್ನು ಪ್ರದರ್ಶಿಸುವುದನ್ನು ಕಾಣುತ್ತೇವೆ. ಇದರ ಫಲವಾಗಿ ವೀರರಸವು ಉತ್ಕರ್ಷ ಸ್ಥಿತಿಯನ್ನು ತಲುಪುವುದನ್ನು ಕಾಣುತ್ತೇವೆ. ಸಹೃದಯರು ಅದಕ್ಕಾಗಿ ಬೇರೆಲ್ಲವನ್ನೂ ಕಡೆಗಣಿಸುತ್ತಾರೆ. ಕೇವಲ ಮನುಷ್ಯ ಮಾತ್ರದವನೊಬ್ಬನ ಬಾಹುಬಲವಷ್ಟರಿಂದಲೇ ಸಾಕ್ಷಾತ್ ಪರಮೇಶ್ವರನೂ ಎತ್ತರಕ್ಕೆ ಚಿಮ್ಮಲ್ಪಟ್ಟು, ಆಕಾಶದಲ್ಲಿ ತೂಗಾಡುವಂತಾದನೆಂಬ ಕವಿ ಕಲ್ಪಿತ ಚಮತ್ಕಾರವೂ ಸಹೃದಯರ ಆನಂದಕ್ಕೆ ಕಾರಣವೆಂಬುದು ಸ್ಪಷ್ಟವೇ ಇದೆ. ಇತರೆ ಉದಾಹರಣೆಗಳನ್ನು ಇದೇ ಆಧಾರದ ಮೇಲೆ ಸಹೃದಯರು ಊಹಿಸಿಕೊಳ್ಳಬೇಕು.

ಪ್ರಕರಣ ವಕ್ರತೆಯ ಇನ್ನೂ ಒಂದು ಪ್ರಭೇದವನ್ನು ಈಗ ವಿವರಿಸಲಾಗುವುದು.

ಪ್ರಧಾನ ವಸ್ತು ನಿಷ್ಪತ್ತ್ಯೈ ವಸ್ತ್ವಂತರ ವಿಚಿತ್ರತಾ|
ಯತ್ರೋಲ್ಲಸತಿ ಸೋಲ್ಲೇಖಾ ಸಾ ಪರಾಪ್ಯಸ್ಯ ವಕ್ರತಾ [11]

ಬೇರೊಂದು ಪ್ರಕರಣವನ್ನು ಯೋಜಿಸುವಲ್ಲಿಯ ಕವಿಯ ನೂತನ ಚಮತ್ಕಾರವು ಅಂತಿಮವಾಗಿ ಪ್ರಧಾನ ವಸ್ತುವನ್ನು ಆಧರಿಸಿದ ಪ್ರಕರಣಕ್ಕೆ ಹೆಚ್ಚಿನ ವೈಚಿತ್ರ್ಯ ಸಿದ್ಧಿಯನ್ನು ತಂದುಕೊಟ್ಟಾಗ ಅದನ್ನು ಬೇರೊಂದೇ ಪ್ರಕರಣ ವಕ್ರತೆಯೆಂದು ಬಗೆಯಬೇಕು.[11]

ಮೇಲುನೋಟಕ್ಕೆ ಸ್ವತಂತ್ರವೆಂಬಂತೆ ತೋರುವ ಸಣ್ಣ ಸಂಗತಿಯೊಂದು ಅಂತಿಮವಾಗಿ ಮುಖ್ಯ ಕಥಾ ಸಂವಿಧಾನಕ್ಕೆ ಹೆಚ್ಚಿನ ಮಹತ್ವವನ್ನು ತಂದುಕೊಡುವ ರೀತಿಯಲ್ಲಿ ಕವಿ ಕಲ್ಪಿಸಿದಾಗ, ಪ್ರಕರಣ ವಕ್ರತೆಯ ಇನ್ನೊಂದು ಪ್ರಕಾರವು ಕಂಡುಬರುತ್ತದೆ. ಮುಖ್ಯ ಕಥೆಗೆ ಸರಿಜೋಡಿಯಾದ

---

1. IV 2 - III - 7 p - 138 2. IV - 6 - III - 7 P - 139
3. IV - 28 - III- II - P - 148

ಅದರ ರಮಣೀಯ ನಿರ್ಮಿತಿಯು ಹೃದ್ಯವಾಗಿರುತ್ತದೆ. ಗೌಣ ಸಂಗತಿ ಅಥವಾ ಪ್ರಕರಣದ ಇಂಥ ಸಂಯೋಜನೆಯಿಂದಾದ ಸಂಕೀರ್ಣತೆಯಿಂದ ಮುಖ್ಯ ಕಥಾ ಸಂವಿಧಾನ ಕೂಡ ವಕ್ರತೆಯನ್ನು ಪಡೆದುಕೊಂಡು ಹೃದ್ಯವಾಗುತ್ತದೆ.

ಮುದ್ರಾರಾಕ್ಷಸ ನಾಟಕದ 6ನೇ ಅಂಕದಲ್ಲಿ ಇದರ ಉದಾಹರಣೆಯನ್ನು ನೋಡಬಹುದು. ಅಂಕದ ಪ್ರಾರಂಭದಲ್ಲೇ ಹಗ್ಗವೊಂದನ್ನು ಕೈಯಲ್ಲಿ ಹಿಡಿದುಕೊಂಡು ವ್ಯಕ್ತಿಯೊಬ್ಬನು ಪ್ರವೇಶಿಸುತ್ತಿರುವ ಪ್ರಕರಣವನ್ನು ನೋಡಬಹುದು. ಈ ಪ್ರಕರಣವು ಒಂದು ಸಣ್ಣ ಸಂಗತಿಯ ಸ್ವರೂಪದ್ದಾಗಿದೆ. ಆ ಮನುಷ್ಯನಾದರೋ ಕೌಟಿಲ್ಯನಿಂದ ನೇಮಿಸಲ್ಪಟ್ಟ ರಾಜನೀತಿ ನಿಪುಣನೂ, ಸ್ವತಃ ಅತಿ ಬುದ್ಧಿವಂತನೂ ಆದ ಗುಪ್ತಚರ. ಈ ಮುಂಚಿನ ಮುದ್ರಾಭಂಗದ ಸೋಲಿನ ಪರಿಣಾಮ ದಿಂದ ತನ್ನ ಯಜಮಾನನು ತ್ಯಜಿಸಿದ್ದರಿಂದಾಗಿ ರೂಕ್ಷನಾಗಿ ಕಾಣುತ್ತಿರುವ, ಹಾಗೂ ಹಳೆಯ ಜೀರ್ಣೋದ್ಯಾನದಲ್ಲಿ ಕತ್ತಿಯೊಂದನ್ನು ಹಿಡಿದು ಅತ್ತಿಂದಿತ್ತ ಓಡಾಡುತ್ತಿರುವ ರಾಕ್ಷಸನನ್ನು ಅವನು ನೋಡಿದರೂ ನೋಡದವನಂತೆ ನಟಿಸುತ್ತಾನೆ. ಕುತ್ತಿಗೆಗೆ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಳ್ಳಲುಜ್ಜಿಗಿಸುತ್ತಾನೆ. ಇದನ್ನು ನೋಡಿ ರಾಕ್ಷಸನಿಗೆ ಕರುಣೆ, ಕುತೂಹಲಗಳುಂಟಾಗಿ, ಅವನ ಸಮೀಪಕ್ಕೆ ಹೋಗಿ, "ಅಯ್ಯ ಏನಿದೆಲ್ಲ?" ಎಂದು ಕೇಳುತ್ತಾನೆ. ಆಗ ಆ ಮನುಷ್ಯನು - "ನನ್ನ ಮಹಾದುಃಖದ ಏಕೈಕ ನಿವಾರಕವಾದ ನನ್ನ ಆತ್ಮಹತ್ಯಾ ಪ್ರಯತ್ನಕ್ಕೆ ನೀವೇಕೆ ಅಡಚಣೆ ಮಾಡುತ್ತೀರಿ?" ಎನ್ನುತ್ತಾನೆ. ಆದರೆ ರಾಕ್ಷಸನು ಮತ್ತೆ ಮತ್ತೆ ಒತ್ತಾಯ ಮಾಡಿದ ಮೇಲೆ ತಾನು ಆತ್ಮಹತ್ಯೆಗೆ ಯತ್ನಿಸಲು ಕಾರಣವಾದ ಸನ್ನಿವೇಶವನ್ನು ಹೀಗೆ ವಿವರಿಸುತ್ತಾನೆ.

"ನನ್ನ ಪ್ರಾಣಸ್ನೇಹಿತ ವಿಷ್ಣುದಾಸನು ಅಗ್ನಿಪ್ರವೇಶ ಮಾಡಲು ಹೊರಟಿದ್ದಾನೆ. ಕಾರಣ ವಧ್ಯಸ್ಥಾನಕ್ಕೆಳೆದೊಯ್ಯಲ್ಪಡುತ್ತಿರುವ ಅವನ ಜೀವನದ ಗೆಳೆಯನೂ, ಮಹಾಸತ್ವನೂ, ಮಣಿಕಾರಶ್ರೇಷ್ಠಿ ಮುಖ್ಯನೂ ಆದ ಚಂದನದಾಸನಿಗೊದಗಿ ಬಂದಿರುವ ಮಹಾ ಆಪತ್ತನ್ನು ಅವನು ಸಹಿಸದಾಗಿದ್ದಾನೆ. ನಾನು ಕೂಡಾ ನನ್ನ ಮಿತ್ರನ ಸಾವಿನ ಪರಿಣಾಮವಾದ ಶೋಕಾವೇಗವನ್ನು ಸಹಿಸಲಾರದವನಾಗಿ, ಈ ನನ್ನನ್ನೇ ನಾನು ಕೊಂದುಕೊಳ್ಳಲು ಹೊರಟಿದ್ದೇನೆ" ಇನ್ನು ಹೆಚ್ಚು ಹೇಳುವುದೇನು? ಆ ಮನುಷ್ಯನ ಕಥೆ ಅದೆಷ್ಟು ಪರಿಣಾಮಕಾರಿಯಾಗಿತ್ತೆಂದರೆ, ಗಹನವೂ, ಗೋಜಲು ಗೋಜಲೂ ಆದ ರಾಜನೀತಿ ಕೌಶಲದಲ್ಲಿ ಸ್ವಯಂ ವಿಚಕ್ಷಣನೆನಿಸಿದ ಅಮಾತ್ಯ ರಾಕ್ಷಸನೂ ಬಹು ಸುಲಭವಾಗಿ ಭ್ರಮೆಗೊಳಗಾಗಿ, ತನ್ನ ಸಲುವಾಗಿ ಸ್ನೇಹಿತನೊಬ್ಬನ ಸಾವಿನ ವೇದನೆಯನ್ನು ಮನಸ್ಸಿಗೆ ತಂದುಕೊಂಡು, ಚಂದನದಾಸನ ಬದಲಿಗೆ ತನ್ನ ದೇಹ ತ್ಯಾಗ ಮಾಡಿ, ಚಂದನ ದಾಸನನ್ನು ಬಿಡಿಸಲು ಆಗಿಂದಾಗಲೇ ಹೊರಡುತ್ತಾನೆ. ಈ ಸಂದರ್ಭದಲ್ಲಿ ಈ ಪದ್ಯವನ್ನು ಉದಾಹರಿಸಬಹುದು.

ಷಡ್ಗುಣ ಸಂಯೋಗದೃಢಾ ಉಪಾಯ ಪರಿಪಾಟಿ ಘಟಿತಪಾಶಮುಖೀ
ಚಾಣಕ್ಯ ನೀತಿರಜ್ಜೂ ರಿಪು ಸಂಯಮನೋದ್ಯತಾ ಜಯತಿ [೪೩] [ಸಂಸ್ಕೃತ ಛಾಯೆ]

ಹುರಿಗಳಾರರಿಂದ ಬಲಯುತವಾಗಿ
ರಿಪುಗಳನು ಸಿಲುಕಿಸುವ,
ಕುಟಿಲೋಪಾಯ ಕುಣಿಕೆಯಿಂದ ಸಜ್ಜಾಗಿ
ಚಾಣಕ್ಯನ ನೀತಿ-ನೇಣದು ಗೆಲುವುದು! [೪೩]

ವಿಶೇಷಣ ವಕ್ರತೆಯ ವಿಶಿಷ್ಟತೆಯಿಂದ ಕೂಡಿದ ರೂಪಕದ ಮೂಲಕ ಆ ವ್ಯಕ್ತಿಯು ಹೇಳುತ್ತಿರುವುದು:

ಗುಣಗಳೂ ಅವೇ, ಉಪಾಯಗಳೂ ಅವೇ ಮತ್ತು ನೀತಿ ತಂತ್ರವೂ ಎಲ್ಲರಿಗೂ ಒಂದೇ. ಇಷ್ಟಾದರೂ ಅಪೂರ್ವಸಂದರ್ಭಗಳಲ್ಲಿ ಮಾತ್ರ ಅಸಾಧಾರಣ ನೀತಿ ತಂತ್ರಜ್ಞರು, ಅತ್ಯಂತ ಕೌಶಲದಿಂದ ಶತ್ರು ಸಮೂಹವನ್ನು ಹಿಡಿಯಲು ಅವುಗಳನ್ನು ಬಳಸಿದಾಗ ಅವರೆಷ್ಟೇ ತಿಳಿದವರಾಗಿದ್ದರೂ ಅವು ಅವರಿಗೆ ಅರ್ಥವಾಗದೆ ಭ್ರಮೆ ಉಂಟುಮಾಡುತ್ತವೆ. ಅದರಿಂದಾಗಿಯೇ ಅಂಥ ನೀತಿನೇಣಿಗೆ ಗೆಲುವು!

ರಾಕ್ಷಸ : ಅಯ್ಯಾ ಮಾನ್ಯ, ನಿನ್ನ ಮಿತ್ರನ ಅಗ್ನಿ ಪ್ರವೇಶಕ್ಕೇನು ಕಾರಣ?
ಔಷಧಿಗಳಿಗೂ ಮೀರಿದ ಮಹಾ ವ್ಯಾಧಿಗಳಿಂದ ಅವನು ಬಳಲುತ್ತಿರುವನೇನು?

ಪುರುಷ : ಓ ಆರ್ಯ! ಇಲ್ಲ; ಇಲ್ಲ

ರಾಕ್ಷಸ : ನರಪತಿಯ ಬೆಂಕಿಯಂಥ, ವಿಷ ಸದೃಶ ಕೋಪದಿಂದ ಉಚ್ಚಾಟಿಸಲ್ಪಟ್ಟನೆ?

ಪುರುಷ : ಶಾಂತಂ ಪಾಪಂ! ಶಾಂತಂ ಪಾಪಂ! ಚಂದ್ರ ಗುಪ್ತನ ಆಳ್ವಿಕೆಯಲ್ಲಿ ಅಕೃತ್ಯಗಳಿಗೆಡೆಯಿಲ್ಲ!

ರಾಕ್ಷಸ : ಕೈಗೆಟುಕದ ಹೆಣ್ಣಿನಲ್ಲಿ ಅನುರಕ್ತನಾದನೆ?

ಪುರುಷ : ಶಾಂತಂ ಪಾಪಂ! ಶಾಂತಂ ಪಾಪಂ! ಇಂಥ ಅವಿನಯಗಳಿಗೆ ಅವನಲ್ಲಿ ಆಸ್ಪದವಿಲ್ಲ.

ರಾಕ್ಷಸ : ನಿನಗಾದಂತೆ ಮಿತ್ರನ ಮರಣವೇ ಅವನಿಗೆ ವಿಷವಾಯಿತೋ*

ಪುರುಷ : ಆರ್ಯ ಅದಲ್ಲದೆ ಮತ್ತಿನ್ನೇನು?

ಇಲ್ಲಿ ಮಹಾವ್ಯಾಧಿಗಳಿಂದ (ಮಹಾವ್ಯಾಧಿಭಿಃ) ಎನ್ನುವಲ್ಲಿ ಬಹುವಚನ ವಕ್ರತ್ವ ಬೆಂಕಿಯಂಥ ವಿಷ ಸದೃಶ (ಅಗ್ನಿ ವಿಷಕಲ್ಪಯೇತಿ) - ಎಂಬಲ್ಲಿ ವಿಶೇಷಣ ವಕ್ರತ್ವವಿದೆ. ಇದೆಲ್ಲವೂ ಚಂದನದಾಸನು ಇಂಥ ರಾಜದ್ರೋಹದ ಕೃತ್ಯವನ್ನೆಸಗಿ, ವಧ್ಯಸ್ಥಾನಕ್ಕೊಯ್ಯಲ್ಪಟ್ಟಿದ್ದರೂ, ರಾಜನು ಎಷ್ಟೇ ಒತ್ತಾಯಿಸಿದರೂ ರಾಕ್ಷಸನ ಪತ್ನಿಯನ್ನು ಒಪ್ಪಿಸಲು ಸಿದ್ಧನಿಲ್ಲ ಮತ್ತು ತತ್ಫಲವಾಗಿ ವಧಿಸಲ್ಪಡುತ್ತಾನೆ ಎಂಬ ಆ ಪುರುಷನ ಪ್ರಧಾನ ವಿಚಾರವನ್ನೇ ಇನ್ನಷ್ಟು ಬಲಪಡಿಸುತ್ತಿದೆ. ಅವನಿಗೆ (ಅಸ್ಯ) ಎಂಬ ಸರ್ವನಾಮವು ತನ್ನ ಈ ಒಳ್ಳೆಯ ಗುಣಗಳ ಕಾರಣದಿಂದಾಗಿ ಸಾಯ

* ಮುದ್ರಾರಾಕ್ಷಸ VI - 16

ಬೇಕಾಗಿ ಬಂದಿರುವ ಚಂದನದಾಸನ ಅಸಾಧಾರಣ ಉದಾತ್ತ ಮತ್ತು ತ್ಯಾಗಗುಣಗಳನ್ನು ಧ್ವನಿಸುತ್ತಿದೆ. 'ನಿನಗಾದಂತೆ' (ಭವತೋ ಯಥಾ) ಎಂಬುದು ಆತ್ಮಹತ್ಯೆಗೆ ಬೇಕಾದ ವಿವಿಧ ಸಾಧನಗಳನ್ನು ಒಟ್ಟುಗೂಡಿಸಿಕೊಂಡು ಆತ್ಮಹತ್ಯೆ ಮಾಡಿಕೊಳ್ಳಲು ತುದಿಗಾಲ ಮೇಲೆ ನಿಂತಿರುವವನ ಕಾತರತೆಯನ್ನು ಸೂಚಿಸುತ್ತದೆ (ಧ್ವನಿಸುತ್ತದೆ) ಈ ಎಲ್ಲ ವಿವಿಧ ಮಾರ್ಗಗಳ ಮೂಲಕ ಸೂಚಿತವಾಗಬೇಕಾಗಿರುವ ಮುಖ್ಯಾರ್ಥದ ಮೇಲೆ ಹೊಸಬೆಳಕು ಚೆಲ್ಲಿದಂತೆ ಹಾಗೂ ಹೊಸದೊಂದು ಅಲಂಕಾರ ಪ್ರಾಪ್ತವಾದಂತಾಗುತ್ತದೆ. ಅದೇ ರೀತಿಯಲ್ಲಿ ಅದೇ ನಾಟಕದಿಂದಲೇ ಇತರೆ ಉದಾಹರಣೆಗಳನ್ನು ಆಯ್ದುಕೊಳ್ಳಬಹುದು ಮತ್ತು ಸಹೃದಯರು ಅದನ್ನು ಸವಿಯಬಹುದು. ಮುಖ್ಯ ಸಂವಿಧಾನದ ಪ್ರಧಾನ ಫಲಸಿದ್ಧಿಯೂ, ರಾಕ್ಷಸನ ಈ ಹೇಳಿಕೆಯಲ್ಲಿ

"ಮಿತ್ರನ ಜೀವಕ್ಕಿರುವ ಅಪಾಯವನ್ನರಿತ ಬಳಿಕ
ಅವನ ಬಿಡುಗಡೆಗಾಗಿ ನನ್ನೀ ದೇಹವನು ಸಮರ್ಪಿಸಿ ಬಿಡುವೆ"

ಅಭಿವ್ಯಕ್ತವಾಗಿದೆ ಮತ್ತು ಮುಂದಿನ ಪ್ರಕರಣದಲ್ಲಿ ರಾಕ್ಷಸನ ಈ ಮಾತುಗಳಲ್ಲಿ ಇನ್ನೂ ವಿಸ್ತಾರವಾಗಿ ವ್ಯಕ್ತವಾಗಿದೆ.

ಸಾವನ್ನು ಸೂಚಿಸುವ ಈ ವಧ್ಯ ಮಾಲಿಕೆಯನ್ನು
ನನ್ನ ಕೊರಳಿಗೆ ಹಾಕು (VII-4)

ಅದೇ ಪ್ರಕರಣ ವಕ್ರತೆಯ ಇನ್ನೊಂದು ಪ್ರಕಾರವನ್ನು ಗ್ರಂಥ ಕರ್ತೃ ಇದೀಗ ವಿವರಿಸುತ್ತಾನೆ.

ಸಾಮಾಜಿಕಜನಾಹ್ಲಾದನಿರ್ಮಾಣನಿಪುಣೈರ್ನಟೈಃ|
ತದ್‌ಭೂಮಿಕಾಂ ಸಮಾಸ್ಥಾಯ ನಿರ್ವರ್ತಿತನಟಾಂತರಮ್[12]

ಕ್ವಚಿತ್ಪ್ರಕರಣಸ್ಯಾಂತಃ ಸ್ಮೃತಂ ಪ್ರಕರಣಾಂತರಮ್|
ಸರ್ವಪ್ರಬಂಧ ಸರ್ವಸ್ವಕಲ್ಪಾಂ ಪುಷ್ಣಾತಿ ವಕ್ರತಾಮ್[13]

ಸಾಮಾಜಿಕರಿಗೆ ಆಹ್ಲಾದವನ್ನುಂಟು ಮಾಡುವುದರಲ್ಲಿ ನೈಪುಣ್ಯವನ್ನು ಹೊಂದಿದ ನಟರು, ರಂಗದ ಮೇಲೆ, ಇತರೆ ನಟರು, ನಿರ್ವಹಿಸುತ್ತಿರುವ ಅಭಿನಯಕ್ಕೆ ಸ್ವಯಂ ಸಾಮಾಜಿಕರಾಗಿ ಪಾತ್ರ ವಹಿಸಿದಾಗ, ಅಂಥ "ನಾಟಕ"ದಲ್ಲಿ (ಪ್ರಕರಣ) ಇನ್ನೊಂದು ನಾಟಕ" (ಪ್ರಕರಣ) ದಂಥ ಸಂದರ್ಭವು, ಇಡೀ ನಾಟಕದ ಪ್ರಾಣ ಸ್ವರೂಪವಾದ ಅಲೌಕಿಕ ವಕ್ರತೆಯನ್ನು ಪೋಷಿಸುತ್ತದೆ (12 & 13)

ಒಂದು ನಾಟಕದಲ್ಲೊಂದು ನಾಟಕದಂಥ (ಪ್ರಕರಣಗಳಲ್ಲೊಂದು ಪ್ರಕರಣ) ಸಂದರ್ಭವು ಇಡೀ ನಾಟಕದ (ಪ್ರಬಂಧದ)ಸಾರಭೂತವೆನಿಸಿದ ವಕ್ರತೆಯನ್ನು ಶ್ರೀಮಂತಗೊಳಿಸುತ್ತದೆ. ಅಂಥದೊಂದು ರಚನೆ, ಉನ್ಮೇಷ ಶಾಲಿನಿಯಾದ ಕವಿಕೌಶಲದಿಂದ ರಚಿತವಾದ ಅಪೂರ್ವ ನಾಟಕದಲ್ಲಿ ಮಾತ್ರ ಸಾಧ್ಯ. ಎಲ್ಲೆಡೆಯಲ್ಲೂ ಸುಲಭವಾಗಿ ಕಾಣಸಿಗುವಂಥದಲ್ಲ. ಅಂಥ ಲಘುನಾಟಕವು ಅಂಕವೊಂದರ ಮಧ್ಯದಲ್ಲಿ ಇರುತ್ತದೆ. ಆ ರೀತಿಯಲ್ಲಿ ನಾಟಕದ ಅಂಕದೊಳಗೆ ಅಂತರ್ಗತವಾಗಿರುವ ಪ್ರಕರಣವನ್ನು ಗರ್ಭಾಂಕವೆಂದು ಕರೆಯಲಾಗುತ್ತದೆ. ಅದರಲ್ಲಿ ಇತರೆ

ನಟರನ್ನು ನಾಟಕದ ರಂಗವೊಂದರ ಮೇಲೆ ತರುತ್ತದೆ. ಹಾಗೆ ನಟರು ರಂಗದ ಮೇಲೆ ನಿಷ್ಕ್ರಿಯ ಸಾಮಾಜಿಕರ ಪಾತ್ರವನ್ನು ನಿರ್ವಹಿಸುತ್ತಿದ್ದರೂ ಸಹೃದಯರಿಗೆ (ಸಾಮಾಜಿಕರಿಗೆ) ಆಹ್ಲಾದವನ್ನುಂಟು ಮಾಡುವುದರಲ್ಲಿ ನಿಪುಣರಾಗಿರುತ್ತಾರೆ

ಇದರ ಸಾರಾಂಶ (ಮಥಿತಾರ್ಥ) ವಿಷ್ಟು : ಅಪರಿಮಿತ ಕೌಶಲವುಳ್ಳ ನಟರು, ರಂಗದ ಮೇಲೆ ಸಾಮಾಜಿಕರ ಪಾತ್ರವನ್ನು ನಿರ್ವಹಿಸುತ್ತ, ಬೇರೆ ನಟರು ಅದೇ ರಂಗದ ಮೆಲೆ ಅಭಿನಯಿಸುತ್ತಿರುವ ನಾಟಕವೊಂದನ್ನು ನೋಡುತ್ತಿರುವಂಥ 'ನಾಟಕದಲ್ಲೊಂದು ನಾಟಕದ' - ವಿರಳ ಉದಾಹರಣೆಗಳಿವೆ. ಮುಖ್ಯ ನಾಟಕದ ಗರ್ಭದಲ್ಲಿದ್ದುಕೊಂಡು ಪ್ರಧಾನ ನಾಟಕದ ಅತ್ಯುತ್ತಮ ಸಾರವನ್ನೊಳಗೊಂಡಿದೆಯೆಂಬ ಭಾವನೆಯನ್ನುಂಟು ಮಾಡುವಷ್ಟು ವಕ್ರತೆಯಿಂದ ಕೂಡಿರುತ್ತದೆ. ರಂಗದ ಮೇಲೆ ನಟರು ಸಾಮಾಜಿಕರ ಪಾತ್ರವನ್ನು ನಿರ್ವಹಿಸುತ್ತಿದ್ದರೂ ತಮ್ಮ ವಿವಿಧ ಭಾವಭಂಗಿಗಳಿಂದ ಪ್ರಧಾನ ನಾಟಕದ ನಿಜವಾದ ಸಾಮಾಜಿಕರಿಗೆ ಚಿತ್ತಚಮತ್ಕಾರ ವನ್ನುಂಟು ಮಾಡುತ್ತಾರೆ.

ಇದರ (ನಾಟಕದಲ್ಲೊಂದು ನಾಟಕದ) ಉತ್ಕೃಷ್ಟ ಉದಾಹರಣೆ ಬಾಲ ರಾಮಾಯಣ ನಾಟಕದ ನಾಲ್ಕನೇ ಅಂಕದಲ್ಲಿ ಕಾಣ ಸಿಗುತ್ತದೆ. ಇಲ್ಲಿ ರಾವಣನ ಪಾತ್ರವನ್ನು ನಿರ್ವಹಿಸುತ್ತಿರುವ ನಟನು, ಪ್ರಹಸ್ತನ ಪಾತ್ರವನ್ನು ನಿರ್ವಹಿಸುತ್ತಿರುವ ನಟನೊಂದಿಗೆ ಪ್ರವೇಶಿಸುತ್ತಾನೆ. ಮತ್ತು ಈ ಗರ್ಭನಾಟಕ ಈ ಸ್ತುತಿ ಪದ್ಯದೊಂದಿಗೆ ಪ್ರಾರಂಭವಾಗುತ್ತದೆ.

> **ಕರ್ಪೂರ ಇವ ದಗ್ಧೋಪಿ ಶಕ್ತಿಮಾನ್ ಯೋ ಜನೇ ಜನೇ |**
> **ನಮಃ ಶೃಂಗಾರ ಬೀಜಾಯ ತಸ್ಮೈ ಕುಸುಮಧನ್ವನೇ [೪೪]**
>
> [ಬಾಲರಾಮಾಯಣ III-II]

> ಕರ್ಪೂರದ ಹಾಗೆ ಉರಿದು ಹೋದರು ಕೂಡ
> ಒಬ್ಬೊಬ್ಬರಲು ಇರುವ ಶಕ್ತಿವಂತನಿಗೆ
> ಶೃಂಗಾರ ಬೀಜನಿಗೆ ಕುಸುಮ ಬಾಣನಿಗೆ
> ಆ ಮನ್ಮಥನಿಗೆ ನಮೋ [೪೪][1]

ಅನಂತರ ಅವನು ಇತರೆ ನಟರಿಂದ ಅಭಿನಯಿಸಲ್ಪಡುತ್ತಿರುವ, ಅನೇಕ ಭಾವ ಭಂಗಿಗಳಿಂದ ಅತ್ಯಂತ ರಮಣೀಯವಾಗಿರುವ ನಾಟಕದೊಳಗಿನ ನಾಟಕಕ್ಕೆ ['ಸೀತಾ ಸ್ವಯಂವರದ ಸಂದರ್ಭದಲ್ಲಿ] ಪ್ರೇಕ್ಷಕನಾಗುತ್ತಾನೆ. ಅವನ ದರ್ಶನದಿಂದ ಅವರಲ್ಲಿ ಹೊರಹೊಮ್ಮಿದ ವಿವಿಧ ಭಾವ ಛಾಯೆ (ಭಂಗಿ)ಗಳನ್ನು ಸೀತೆಯ ಸಖಿಯರು ಚೆನ್ನಾಗಿ ಅಭಿನಯಿಸುತ್ತಾರೆ. ಇದೆಲ್ಲವೂ ಅವರು (ಪ್ರೇಕ್ಷಕರು) ಅಪೇಕ್ಷಿಸಿದ್ದಕ್ಕಿಂತ ಹೆಚ್ಚಿನ ಸಂತೋಷವನ್ನು ಲವರಲ್ಲಿ ಉಂಟುಮಾಡುತ್ತದೆ. ಸಂಬಂಧಿಸಿದ ಸೂಕ್ತಿಗಳೆಲ್ಲದರ ಸೌಂದರ್ಯವನ್ನು ನೇರವಾಗಿ ನಾಟಕದಿಂದಲೇ ಸಹೃದಯರು ಓದಿ ಅನುಭವಿಸಬೇಕು. ನಾಟಕದೊಳಗಿನ ನಾಟಕದ ವಿಶಿಷ್ಟ ವಕ್ರತೆಯನ್ನು ನಾಟಕಕಾರನು

---

1. ಬಾಲರಾಮಾಯಣ IV - 2

ಈ ಮಾತುಗಳಲ್ಲಿ ಘೋಷಿಸಿಯೇ ಇದ್ದಾನೆ.

ಶ್ರವಣ್ಯೈಃ ಪೇಯಮನೇಕೈರ್ದೃಶ್ಯಂ ದೀರ್ಘಶ್ಚ ಲೋಚನೈರ್ಬಹುಭಿಃ|
ಭವದರ್ಥಮಿವ ನಿಬದ್ಧಂ ನಾಟ್ಯಂ ಸೀತಾಸ್ವಯಂವರಣಂ [೪೫]

ಸೀತಾಸ್ವಯಂವರವೆಂಬೀ ನಾಟ್ಯವನು
ಬಹುಕಿವಿಗಳಿಂದಾಸ್ವಾದಿಸಿ ವಿಶಾಲ ಕಂಗಳಿಂ
ನೋಡಿ ತಣಿಯಬೇಕಿಹುದು [೪೫]

ಇದರ ಇನ್ನೊಂದು ನಿದರ್ಶನ ಉತ್ತರ ರಾಮಚರಿತೆ ನಾಟಕದ ಏಳನೇ ಅಂಕದಲ್ಲಿ ಕಂಡುಬರುತ್ತದೆ. ರಾಮನ ಪಾತ್ರಧಾರಿ ಮತ್ತು ಲಕ್ಷ್ಮಣನ ಪಾತ್ರಧಾರಿಗಳಿಬ್ಬರೂ ರಂಗದ ಮೇಲೆ ನಡೆಯುವ ಇನ್ನಂದು ನಾಟಕಕ್ಕೆ ಪ್ರೇಕ್ಷಕರಾಗುತ್ತಾರೆ.

(ತೆರೆಯ ಹಿಂದೆ)

**[ಹಾ! ಆರ್ಯಪುತ್ರ, ಹಾ ಕುಮಾರ ಲಕ್ಷ್ಮಣ,
ಏಕಾಕಿನೀಂ ಮಂದಭಾಗಿನೀಮಶರಣಾಮರಣ್ಯೇ ಆಸನ್ನ
ಪ್ರಸವವೇದನಾಂ ಹತಾಶಾಂ ಶ್ವಾಪದಾ ಮಾಮಭಿಲಷಂತಿ. ಸಾಹಮಿ-
ದಾನೀಂ ಮಂದ ಭಾಗಿನೀಂ ಭಾಗೀರಥ್ಯಾಮಾತ್ಮಾನಂ ನಿಕ್ಷಿಪಾಮಿ] [೪೬]**

ಹಾ! ಆರ್ಯಪುತ್ರ! ಹಾ! ಕುಮಾರ ಲಕ್ಷ್ಮಣ! ಏಕಾಕಿನಿಯೂ ಅದೃಷ್ಟಹೀನಳೂ, ನಿರ್ಗತಿಕಳೂ ಪ್ರಸವವೇದನೆಯನ್ನನುಭವಿಸುತ್ತಿರುವವಳೂ ಹತಾಶಳೂ ಆದ ನನ್ನನ್ನು ಕಾಡುಮೃಗಗಳು ತಿನ್ನಲು ಹೇಗೆ ಆತುರದಿಂದಿವೆ ನೋಡು. ಮಂದಭಾಗಿನಿಯಾದ ನಾನು, ಈ ಭಾಗೀರಥಿಯಲ್ಲಿ ಮುಳುಗಿ ಅಸುನೀಗಿಕೊಳ್ಳುತ್ತೇನೆ [೪೬]

ಇತ್ಯಾದಿ. ಇದನ್ನು ಇತರೆ ನಟರು ಅಭಿನಯಿಸುತ್ತಾರೆ.

ಪ್ರಕರಣ ವಕ್ರತೆಯ ಇನ್ನೂ ಒಂದು ಪ್ರಕಾರವನ್ನು ಮುಂದೆ ವಿವೇಚಿಸಲಾಗಿದೆ

*ಮುಖಾಭಿಸಂಧಿ ಸಂಹ್ಲಾದಿ ಸಂವಿಧಾನಕ ಬಂಧುರಮ್|
ಪೂರ್ವೋತ್ತರಾದಿಸಾಂಗತ್ಯಾದಂಗಾನಾಂ ವಿನಿವೇಶನಮ್ [14]*

*ನ ತ್ವಮಾರ್ಗಗ್ರಹಗ್ರಸ್ತ ವರ್ಣಕಾಂಗೈಃ ಕದರ್ಥಿತಮ್|
ವಕ್ರತೋಲ್ಲೇಖ ಲಾವಣ್ಯಮುಲ್ಲಾಸಯತಿ ನೂತನಮ್[15]*

ನಾಟಕದ ಸಂವಿಧಾನ ಕೌಶಲವು ಮುಖ, ಪ್ರತಿಮುಖ, ಸಂಧಿಯೇ ಮೊದಲಾದವುಗಳ ಆಹ್ಲಾದಪೂರ್ಣ ರಚನೆಯಿಂದ ಬಂಧುರವಾಗಿರಬೇಕು. ಮುಂದಿನದು ಹಿಂದಿನದರ ಅರ್ಥಪೂರ್ಣ ಮುಂದುವರಿಕೆಯಾಗಿ, ಅಂಗಗಳಲ್ಲಿ ಪರಸ್ಪರ ಸುಸಂಬದ್ಧತೆಯಿರಬೇಕು (14)

ಅನುಚಿತವಾದ ಮಾರ್ಗರೂಪಿ ಗ್ರಹದಿಂದ ಗ್ರಸ್ತವಾದ ವರ್ಣಕಾಂಗಗಳಿಂದ ದೂಷಿತವಾಗದಿದ್ದಾಗ ಮಾತ್ರ ಪ್ರಕರಣಗಳು ವಕ್ರತೆಯ ಉಲ್ಲೇಖದಿಂದ ಕೂಡಿದ ನೂತನ ಸೌಂದರ್ಯವನ್ನು (ಲಾವಣ್ಯವನ್ನು) ಹೊರಹೊಮ್ಮಿಸುತ್ತವೆ [15]

ಬೇರೆ ಬೇರೆ ಪ್ರಕರಣಗಳೆಲ್ಲವೂ ಪರಸ್ಪರ ಸುಸಂಬದ್ಧತೆಯಿಂದ ಕೂಡಿದ್ದಾಗ ಕವಿ ಕಲ್ಪಿತವಾದ ಪ್ರಕರಣಗಳು ವಕ್ರತೆಯ ಉನ್ಮೇಷದಿಂದ ಕೂಡಿದ ನೂತನ ಲಾವಣ್ಯವನ್ನು ಮೆರೆಯುತ್ತವೆ. ಪ್ರತಿ ಹಿಂದಿನ ಪ್ರಕರಣವೂ ಆಂತರಿಕವಾಗಿ ಅದರ ಮುಂದಿನ ಪ್ರಕರಣದೊಂದಿಗೆ, ಮುಂದಿನದು ಹಿಂದಿನದರ ಅರ್ಥಪೂರ್ಣ ಮುಂದುವರಿಕೆ ಎನ್ನುವ ರೀತಿಯಲ್ಲಿ ಸಂಬಂಧವನ್ನು ಹೊಂದಿದ್ದು, ಆ ಸಂಬಂಧವು ಬಲಯುತವೂ, ಅನಿವಾರ್ಯವೂ ಆದದ್ದಾಗಿರಬೇಕು. ಸಂವಿಧಾನದ ಭಾಗಗಳಾದ ಮುಖ, ಪ್ರತಿಮುಖ, ಸಂಧಿಯೇ ಮೊದಲಾದುವು ಸಾಮಾಜಿಕರ ಹೃದಯಕ್ಕೆ ಆಹ್ಲಾದವನ್ನುಂಟು ಮಾಡುವ ರೀತಿಯಲ್ಲಿ ಒಂದಕ್ಕೊಂದು ಬೆಸೆದುಕೊಂಡಿರಬೇಕು. ಅಲ್ಲದೆ ಪ್ರಕರಣದಲ್ಲಿ ವ್ಯಕ್ತವಾಗಿರುವ ಸಂವಿಧಾನ ರಚನಾ ಕೌಶಲದ ಪರಿಣಾಮವಾಗಿ ಆಹ್ಲಾದಕಾರಿ (ಬಂಧುರ) ಯಾಗಿರಬೇಕು.

<u>ಇದರ ಒಟ್ಟಾರೆ ಮಥಿತಾರ್ಥ</u> : ಕಲಾಕೃತಿಗಳಲ್ಲಿ ಪ್ರತಿ ಹಿಂದಿನ ಪ್ರಕರಣವೂ ಪ್ರತಿ ಮುಂದಿನ ಪ್ರಕರಣದೊಂದಿಗೆ ನಿಕಟ ಸಂಬಂಧವನ್ನು (ಘನಿಷ್ಠ) ಹೊಂದಿರಬೇಕು. ಹಾಗೆ ಬೇರೆ ಬೇರೆ ಸಂಧಿಗಳಿಂದ ಕೂಡಿ ಸುಸಂಬದ್ಧತೆಯಿಂದ ಕೂಡಿರುವ ರಚನೆಯು ಪ್ರೌಢವಾದ ವಕ್ರತೆಯ ಉನ್ಮೇಷವನ್ನು ಹೊರಸೂಸುತ್ತ ಸಹೃದಯರಿಗೆ ಆಹ್ಲಾದವನ್ನುಂಟುಮಾಡುತ್ತದೆ.

ಪುಷ್ಪದೂಷಿತಕೆ ನಾಟಕದಲ್ಲಿ ಇದರ ಉದಾಹರಣೆಯನ್ನು ನೋಡಬಹುದು. ಅದರಲ್ಲಿ ಮೊದಲನೇ ಪ್ರಕರಣದಲ್ಲಿ, ನಾಯಕ ಸಮುದ್ರದತ್ತನು ತನ್ನ ಪ್ರಿಯೆ ನಂದಯಂತಿಯ ಅಸಹನೀಯ ವಿರಹ ವೇದನೆಯಿಂದ ಸಂತಸಹೀನನಾಗಿರುವುದನ್ನು ನೋಡುತ್ತೇವೆ. ತನ್ನ ಪ್ರಿಯೆಯಿಂದ ಸರಿಯಾದ ರೀತಿಯಲ್ಲಿ ಬೀಳ್ಕೊಳ್ಳದೆ, ಸಮುದ್ರ ತೀರಕ್ಕೆ ಬಂದು ತನ್ನ ಉತ್ಕಂಠೆಯನ್ನು ಹೊರಗೆಡಹುತ್ತಾನೆ. ಎರಡನೇ ಪ್ರಕರಣದಲ್ಲಿ ಯಾತ್ರೆಯಿಂದ ಹಿಂತಿರುಗಿ ಬಂದು ರಾತ್ರಿ ವೇಳೆಯಲ್ಲಿ ದ್ವಾರಪಾಲಕ ಕುವಲಯನಿಗೆ ಉಂಗುರವನ್ನು ಲಂಚವಾಗಿ ಕೊಟ್ಟು ಅವನ ಬಾಯಿ ಮುಚ್ಚಿಸಿ, ಪುಷ್ಪೋದ್ಯಾನದಲ್ಲಿ ಪ್ರಿಯೆಯೊಂದಿಗೆ ಸೇರುತ್ತಾನೆ. ಕತ್ತಲೆಯಿಂದಾಗಿ ಅವನ ಮುಖದ ಗುರುತು ಹತ್ತುವುದಿಲ್ಲ. ಮೂರನೇ ಪ್ರಕರಣದಲ್ಲಿ ನಂದಯಂತಿಯ ಮಾವನು ಅವಳ ಶೀಲವನ್ನು ಶಂಕಿಸಿ ಅವಳನ್ನು ಮನೆಯಿಂದೆ ನಿರ್ವಸಿತಳನ್ನಾಗಿ ಮಾಡಿ ವಿಪತ್ತಿಗೆ ಗುರಿಮಾಡುವ ವೃತ್ತಾಂತವಿದೆ. ನಾಲ್ಕನೇ ಪ್ರಕರಣದಲ್ಲಿ ಸಮುದ್ರದತ್ತನ ತಂದೆಯಾದ ಸಾಗರದತ್ತನು ಮಧುರೆಯಿಂದ ಹಿಂತಿರುಗಿದ ಕುವಲಯನು ತೋರಿಸಿದ ಉಂಗುರದ ಪ್ರಮಾಣದಿಂದ ನಂದಯಂತಿಯ ನಿರ್ಮಲ ಚಾರಿತ್ರ್ಯ ತಿಳಿದು ಬಂದು ತನ್ನ ಅಮಾಯಕಳಾದ ಸೊಸೆಯನ್ನು ಪೂರ್ಣ ಗರ್ಭಿಣ್ಯವಸ್ಥೆಯಲ್ಲಿ ನಿಷ್ಕಾರಣವಾಗಿ ಮನೆಯಿಂದ ಹೊರದೂಡಿದ ಅಪರಾಧ ಮಾಡಿದ ಮಹಾಪಾಪಿ ತಾನೆಂದು ತನ್ನನ್ನೇ ನಿಂದಿಸಿಕೊಂಡು ಪಶ್ಚಾತ್ತಾಪಪಟ್ಟು, ತೀರ್ಥಯಾತ್ರೆಗ ಹೊರಡುವ ಸನ್ನಿವೇಶವಿದೆ. ಐದನೇ ಪ್ರಕರಣದಲ್ಲಿ ಕುವಲಯನು ನಂದಯಂತಿಗೆ ಸಮುದ್ರದತ್ತನು ಕಾಡಿನಲ್ಲಿ ವನಪಾಲನ ಆಶ್ರಯದಲ್ಲಿ ಕ್ಷೇಮವಾಗಿರುವ ಸಮಾಚಾರವನ್ನು ತಿಳಿಸುತ್ತಿರುವ ಸಂದರ್ಭವಿದೆ. ಆರನೇ ಪ್ರಕರಣದಲ್ಲಿ ವಿಚಿತ್ರ ಸರಣಿಗಳ ಮೂಲಕ ಎಲ್ಲರ ಪುನಃ ಸಮಾಗಮದ ಸನ್ನಿವೇಶವಿದೆ.

ಹೀಗೆ ಘಟನೆಗಳ ವಿವಿಧ ಎಳೆಗಳನ್ನೆಲ್ಲಾ ಕಥೆಯ ಉದ್ದೇಶಿತ ಸುಖಾಂತ್ಯದ ಕಡೆಗೆ ಸೇರಿಸುವ ಹಾಗೆ ಒಟ್ಟಾಗಿ ಹೆಣೆಯಲಾಗಿದೆ. ಇದರಿಂದ ಇಡೀ ಕಥೆಯೇ ರಸನಿಷ್ಯಂದತೆಯಿಂದ ಕೂಡಿಕೊಂಡು ಅಪೂರ್ವ ರೀತಿಯಲ್ಲಿ ಚಮತ್ಕಾರಪೂರ್ಣವೂ ಹೃದ್ಯವೂ ಆಗುವಂತೆ ಮಾಡಲಾಗಿದೆ. ಅಥವಾ ಕುಮಾರಸಂಭವದಲ್ಲಿರುವಂತೆ ಮೊದಲಿಗೆ ಪಾರ್ವತಿಯಲ್ಲಿ ಪ್ರಪ್ರಥಮವಾಗಿ ತಾರುಣ್ಯವು ಆವಿರ್ಭವಿಸುತ್ತಿರುವುದರ ವಣನೆ, ನಂತರ ಪಾರ್ವತಿಯ ಶಿವಸೇವೆ, ತಾರಕಾಸುರ ಪರಾಜಯವೆಂಬ ದುಸ್ತರ ಸಾಗರವನ್ನು ದಾಟುವ ಉಪಾಯದ ಬಗ್ಗೆ ಬ್ರಹ್ಮನ ಉಪದೇಶ. ಅನಂತರ ವಸಂತ ಸಖನಾದ ಕಾಮದೇವನು ಇಂದ್ರನ ಉದ್ದೇಶದ ಪೂರ್ತಿಗಾಗಿ, ಗೌರಿಯ ಸೌಂದರ್ಯದ ಶಕ್ತಿಯನ್ನವಲಂಬಿಸಿ ಹರನ ಮೇಲೆ ಬಾಣ ಪ್ರಯೋಗಿಸಿ, ಹರನೇತ್ರವಹ್ನಿ ಜ್ವಾಲೆಯಿಂದ ಭಸ್ಮೀಭೂತನಾಗುವುದು, ದುಃಖೋದ್ವೇಗದಿಂದ ವಿವಶಳಾಗಿ ರತಿಶೋಕಿಸುವುದು, ವಿಹ್ವಲ ಹೃದಯಳಾದ, ವಿಕ್ಷತ ಮನಸಳಾದ ಪಾರ್ವತಿಯ ಘೋರ ತಪಶ್ಚರ್ಯೆ, ಪಾರ್ವತಿಯ ಚರನಿಗೂ ಶಿವನಿಗೂ ನಡೆದ ಸಂವಾದದ ವರ್ಣನೆ, ಚಿತ್ರ ಮತ್ತು ಶಿಖಂಡಿಗಳೆಂಬ ಋಷಿಗಳು ಪರ್ವತ ರಾಜನನ್ನು ಪಾರ್ವತಿಯನ್ನು ನೀಡಲು ಪ್ರಾರ್ಥಿಸುವುದು, ಅಂತಿಮವಾಗಿ ನಿರರ್ಗಳವಾದ ಅನುರಾಗದಿಂದ ಹೃದಯ ತುಂಬಿ ಬಂದಿರುವ ಶಿವನೊಂದಿಗೆ ಅವಳ ವಿವಾಹ. ಈ ಎಲ್ಲ ಪ್ರಕರಣಗಳೂ ಪರಸ್ಪರವಾಗಿ ಘಸಿಷ್ಠವೂ ಸಯುಕ್ತಿಕವೂ ಆದ ಸಂಬಂಧದಿಂದ ಕೂಡಿದ್ದು, ಹಿಂದಿನದು ಮುಂದಿನದರೊಂದಿಗೆ ಅನಿವಾರ್ಯವೂ ಅಪ್ರತಿಮವೂ ಆದ ರೀತಿಯಲ್ಲಿ ಸರಣಿ ಸಂಬಂಧ ಹೊಂದಿದ್ದು ರಮಣೀಯತೆಯ ಪರಾಕಾಷ್ಠೆಯನ್ನು ತಲುಪುತ್ತವೆ. ಇದೇ ರೀತಿಯಲ್ಲಿ ಮಹಾಕವಿಗಳ ಇತರೆ ಪ್ರಬಂಧ ಕಾವ್ಯಗಳಲ್ಲೂ, ಇದೇ ರೀತಿಯಲ್ಲಿ ಪ್ರಕರಣ ವೈಚಿತ್ರ್ಯವನ್ನು ವಿವೇಚಿಸಬೇಕು.

ಇದರ ನಂತರ ಕುಂತಕನು, ಇದರ ಮೇಲೆ ಅವಧಾರಣೆ ಹಾಕುವ ಸಲುವಾಗಿ, "ನ ತ್ವಮಾರ್ಗಗ್ರಹಗ್ರಸ್ತ ವರ್ಣಕಾಂಗೈಃ ಕದರ್ಥಿತಮ್" ಎಂಬ ಷರತ್ತನ್ನೂ (ಋಣಾತ್ಮಕ) ಹಾಕುತ್ತಾನೆ. ಅನುಚಿತವಾದ ಮಾರ್ಗರೂಪೀ ಗ್ರಹದಿಂದ ಗ್ರಸ್ತವಾದ ವರ್ಣಕಾಂಗಗಳಿಂದ ದೂಷಿತವಾಗಕೂಡದು. ಅಂದರೆ ಯಾವುದೇ ಪ್ರಕರಣಗಳನ್ನು (ಘಟನೆ) ಅವು ಅನುಚಿತವೇ ಆಗಿದ್ದರೂ ಕೂಡ ಪೇರಿಸುತ್ತ ಹೋಗಬಾರದು. ಹಾಗೆ ಪೇರಿಸುತ್ತ ಹೋದರೆ ಅವು ದೂಷಿತವಾಗುತ್ತವೆ. ಅದರಿಂದ ಕಾವ್ಯ ಸೌಂದರ್ಯ ಸಾಧಿತವಾಗುವುದಿಲ್ಲ. ಕವಿಯಾದವನು ಕೃತಿಯ ಪ್ರತಿಯೊಂದು ಭಾಗವೂ ಇತರೆ ಭಾಗಗಳೊಂದಿಗೆ ಆಂತರಿಕವಾಗಿ ಅವಿಚ್ಛಿನ್ನ ಸಂಬಂಧ ಹೊಂದಿರುವ ತನ್ನ ಕೃತಿಯ ಒಟ್ಟಾರೆ ಉದ್ದೇಶವೇನೆಂದು ನಿರ್ಧರಿಸುವ ಬಗ್ಗೆ ಮೂಲಭೂತವಾಗಿ ಸಕಾರಣ ವಿವೇಚನೆ ಹೊಂದಿರಬೇಕು. ಗ್ರಹಿಕೆಯಂಥ ತಿಳಿವಿನ ಅರ್ಥಪೂರ್ಣ ಸಾಧನದ ಆಧಾರದ ಮೇಲೆ, ಸಂಬಂಧವು ಔಚಿತ್ಯಪೂರ್ಣವಾಗಿದೆಯೆ ಇಲ್ಲವೆ ಎಂದು ನಿರ್ಧರಿತವಾಗಬೇಕು. ಸಾಮಾನ್ಯ ಪ್ರಮಾಣಗಳು, ಅಥವಾ ಅನುಭವೈಕ ಜ್ಞಾನ ಸಾಧನಗಳಿಗೆ ಕೊಡುವ ಸರಿಯಾದ ಮಾನ್ಯತೆಯಿಂದಲೇ ಯುಕ್ತಿಯುಕ್ತತೆ ಪ್ರಾಪ್ತವಾಗುವುದು. ಇದನ್ನು ಕಡೆಗಣಿಸುವುದರಿಂದ ಭರತ

ಮುನಿಯ ನಾಟ್ಯಶಾಸ್ತ್ರದ ಲಕ್ಷಣಗಳನ್ನು ಕೇವಲ ಲಕ್ಷಣಗಳಿಗಾಗಿ ಪಾಲಿಸುವ ಗೀಳು ಹಿಡಿಯುತ್ತದೆ. ಇದು ಕಥೆಯ ಅವಿಭಾಜ್ಯ ಅಂಗವಲ್ಲದ ಸಂಧ್ಯಂಗಗಳ ರಚನೆಯತ್ತ ನಾಟಕಕಾರನನ್ನು ಕೊಂಡೊಯ್ಯುತ್ತದೆ.

ಇಂಥ ಅಸಂಬದ್ಧ ರೀತಿಯ ಪ್ರಕರಣ ರಚನೆಯನ್ನು "ವೇಣೀ ಸಂಹಾರ"ದ ಎರಡನೇ ಅಂಕದಲ್ಲಿಯ ಪ್ರತಿಮುಖ ಸಂಧಿಯಲ್ಲಿ ನೋಡಬಹುದು. ಅಲ್ಲಿ ಭಾನುಮತಿಯ ಸ್ವಪ್ನ ವೃತ್ತಾಂತವನ್ನು ಹೊಂಚುಹಾಕಿ ಕೇಳಿಸಿಕೊಂಡ ದುರ್ಯೋಧನನನ್ನು, ತನ್ನ ಪತ್ನಿಯ ಶೀಲವನ್ನು ಶಂಕಿಸುವ ದುರ್ಬುದ್ಧಿಯ ವ್ಯಕ್ತಿಯನ್ನಾಗಿ ಚಿತ್ರಿಸಲಾಗಿದೆ. ಅದೂ ಆ ಸಮಯವಾದರೂ ಎಂಥದು? ಹೊರಗಡೆ ಕುರುಕ್ಷೇತ್ರ ಯುದ್ಧ ಭೂಮಿಯಲ್ಲಿ ದುರ್ಜೇಯರಾದ ಶತ್ರುಪಕ್ಷದ ವೀರರೊಂದಿಗೆ ಘೋರ ಯುದ್ಧ ನಡೆದಿದೆ. ಪಿತಾಮಹ ಭೀಷ್ಮನು ಶರಶಯ್ಯಾಗತನಾಗಿದ್ದಾನೆ. ದುರ್ಯೋಧನನ ಮಗ, ಸೋದರ, ಮಿತ್ರರು, ಬಂಧುಗಳೆಲ್ಲ ಹತರಾಗಿದ್ದಾರೆ. ಅಂಥ ಸಂದರ್ಭದಲ್ಲಿ ವೀರನೂ ಮಹಾ ಸ್ವಾಭಿಮಾನಿಯೂ ಆದ ದುರ್ಯೋಧನನು, ರಾಗರಹಿತನೇ ಆದ ಸ್ಥಿತಿಯಲ್ಲಾದರೂ ಅಂತಃಪುರದಲ್ಲಿರುವುದೇ ಅನುಚಿತ. ಅಂಥದ್ದರಲ್ಲಿ ಭಾನುಮತಿಯೊಂದಿಗೆ ವೇಶ್ಯೆಯೊಂದಿಗೆ ಎಂಬಂತೆ ಪ್ರಣಯ ಲೀಲೆಯಲ್ಲಿ ತೊಡಗುವುದನ್ನು ಚಿತ್ರಿಸುವುದೆಂದರೆ? ಅಲ್ಲದೆ, ಅವಳ ಮನದ ನಿಜವನ್ನು ಅರಿಯುವ ಪ್ರಯತ್ನ ಮಾಡದೆ, ಶೀಲವನ್ನು ಶಂಕಿಸುವುವೆಂದರೆ - ಇವೆಲ್ಲವೂ ಅತ್ಯಂತ ಅನುಚಿತವೂ ಅಸಮಂಜಸವೂ ಆಗಿದ್ದು ಖಂಡನಾರ್ಹವಾಗಿದೆ.

ಶಿಶುಪಾಲವಧ ಕಾವ್ಯದಲ್ಲೂ ಇದೇ ರೀತಿಯ ಆಭಾಸವನ್ನು (ದೋಷವನ್ನು) ಕಾಣುತ್ತೇವೆ. ಇಂದ್ರ ಪ್ರಸ್ಥಕ್ಕೆ ಹೊರಟಿರುವ ಕೃಷ್ಣನಿಂದ ದ್ವಾರಕೆಯ ಸುದೀರ್ಘ ವರ್ಣನೆ.

ಔಚಿತ್ಯಚಾರುವಚನೈರನ್ಯೈಃ ಪ್ರಕರಣೈಃ ಕವೇಃ|
ರತ್ನೈರಲಂಕಾರ ಇವ ಪ್ರಬಂಧಃ ಪುಷ್ಯತಿ ಶ್ರಿಯಮ್ [೪೭]

ವಿಚಿತ್ರ ಭಂಗೀ ಸಂಚಾರಕಥಾ ಮೂರ್ತ್ಯೇಕ ಜೀವಿತಮ್|
ರಸಾಯನಂ ರಸಸ್ಯೇವ ಸ್ವಾನುಪ್ರಕರಣಂ ವಿದುಃ [೪೮]

ಇವೆರಡೂ ಅಂತರ ಶ್ಲೋಕಗಳು

ರತ್ನಗಳಿಂದ ಕೂಡಿರುವ ಹಾರವು ಸುಂದರವಾಗಿ ಕಂಗೊಳಿಸುವ ಹಾಗೆ, ಔಚಿತ್ಯ ಪೂರ್ಣವೂ, ರಮಣೀಯವೂ ಆದ ಪ್ರಕರಣಗಳಿಂದ ಕೂಡಿರುವ ಕವಿಯ ಪ್ರಬಂಧವು ಉಜ್ವಲ ಕಾಂತಿಯಿಂದ ಕಂಗೊಳಿಸುತ್ತದೆ. [೪೭]

ಪ್ರಕರಣವು ಕಥೆಯು ವಿವಿಧ ವಿಚಿತ್ರ ಭಂಗಿಗಳನ್ನು ತಾಳಲು ಏಕೈಕ ಕಾರಣವೆಂದಾದಾಗ ವಿದ್ವಾಂಸರು ಅಂಥ ಪ್ರಕರಣವನ್ನು ರಸಗಳ ರಸಾಯನವೆಂದು ಪರಿಗಣಿಸುತ್ತಾರೆ [೪೮]

ಇದುವರೆಗೆ ಪ್ರಕರಣ ವಕ್ರತೆಯ ವಿವಿಧ ಪ್ರಕಾರಗಳನ್ನು ಪ್ರತಿಪಾದಿಸಿದ ನಂತರ ಈಗ ಲೇಖಕನು ಪ್ರಬಂಧ ವಕ್ರತೆಯ ವಿಚಾರವನ್ನು ಕೈಗೆತ್ತಿಕೊಳ್ಳುತ್ತಾನೆ.

ಇತಿವೃತ್ತಾನ್ಯಥಾವೃತ್ತ ರಸಸಂಪದುಪೇಕ್ಷಯಾ।
ರಸಾಂತರೇಣ ರಮ್ಯೇಣ ಯತ್ರ ನಿರ್ವಹಣಂ ಭವೇತ್ [16]

ತಸ್ಯಾ ಏವ ಕಥಾಮೂರ್ತೇರಾಮೂಲೋನ್ಮೀಲಿತಶ್ರಿಯಃ।
ವಿನೇಯಾನಂದ ನಿಷ್ಪತ್ತ್ಯೈ ಸಾ ಪ್ರಬಂಧಸ್ಯ ವಕ್ರತಾ [17]

ಸಹೃದಯರಿಗೆ ಆನಂದವುಂಟು ಮಾಡುವ ಸಲುವಾಗಿ, ಕಥಾ ಶರೀರವು ಪ್ರಾರಂಭದಿಂದಲೂ ಮೂಲದಲ್ಲಿರುವಂತೆ ಶಬ್ದಾರ್ಥವೈಚಿತ್ರ್ಯ ಸಂಪತ್ತಿನಿಂದ ಕೂಡಿದ್ದರೂ, ಮೂಲ ಇತಿವೃತ್ತದಲ್ಲಿ ಚಿತ್ರಿತವಾಗಿರುವ ರಸಸಂಪತ್ತಿಗಿಂತ ಭಿನ್ನವಾಗಿ, ಕೃತಿಯ ಉಪಸಂಹಾರ ಭಾಗದಲ್ಲಿ ರಮ್ಯವಾದ ಬೇರೊಂದು ರಸದ ಚಿತ್ರಣವಿದ್ದಾಗ ಅದನ್ನು ಪ್ರಬಂಧ ವಕ್ರತೆ ಎಂದು ಪರಿಗಣಿಸಬೇಕು [16&17]

ಬೇರೆಯದೇ ಆದ ರಸದ ಕಾರಣದಿಂದಾಗಿ ಅಂದರೆ ಮೂಲ ಇತಿವೃತ್ತದಲ್ಲಿ ಚಿತ್ರಿತವಾಗಿರುವ ಶೃಂಗಾರಾದಿ ರಸಗಳಿಗಿಂತ ಭಿನ್ನವಾದ ರಸದ ಕಾರಣದಿಂದಾಗಿ - ಕೃತಿಯ ನೂತನವಾದ ಉಪಸಂಹಾರವು ರಮಣೀಯತೆಯನ್ನು ಪಡೆದುಕೊಂಡರೆ, ಅದನ್ನು ಪ್ರಬಂಧ ವಕ್ರತೆ ಎಂದು ಪರಿಗಣಿಸಲಾಗುವುದು. ಕಥಾಶರೀರವು ಮೂಲದಲ್ಲಿರುವಂತೆ ವಸ್ತು, ರೀತಿ ರಚನಾ ವಿಧಾನಗಳೆಲ್ಲದರಲ್ಲೂ ಮೂಲದ ಸೊಗಸನ್ನೇ ಹೊಂದಿದ್ದರೂ, ಅಂಥ ವ್ಯತ್ಯಾಸ ತರುವುದರ ಉದ್ದೇಶವೇ ಸಾಹಿತ್ಯದ ಮೂಲಕ ಶಿಕ್ಷಿತರಾಗಬೇಕಾಗಿರುವ ರಾಜ ಕುಮಾರರಂಥ ಸಹೃದಯರಿಗೆ ಆಹ್ಲಾದ ಉಂಟು ಮಾಡುವುದು.

ಇದರ ಸಾರಾಂಶ (ಮಥಿತಾರ್ಥ) ಇಷ್ಟೆ : ಮೂಲ ಇತಿವೃತ್ತದಿಂದ ತನ್ನ ಕೃತಿಗೆ ಆರಿಸಿಕೊಂಡಿರುವ ಕಥೆಯು ಯಾವುದೋ ಒಂದು ಧ್ವನಿ ಅಥವಾ ರಸದಲ್ಲಿ ಮುಕ್ತಾಯ ಕಂಡುಕೊಳ್ಳುತ್ತಿರಬಹುದು; ಆದರೆ ಕವಿಯಾದವನು ಉದ್ದೇಶಪೂರ್ವಕವಾಗಿಯೇ ಅದನ್ನು ತ್ಯಜಿಸಿ, ಬೇರೊಂದು ರಸವನ್ನು ಅದರ ಜಾಗದಲ್ಲಿ ತರುತ್ತಾನೆ. ಸುಸಂಸ್ಕೃತ ಸಹೃದಯರಿಗೆ ಹೆಚ್ಚಿನ ಸಂತೋಷವನ್ನು ಉಂಟುಮಾಡಿ, ಆ ಮೂಲಕ ತನ್ನ ಕೃತಿಗೆ ಅದರದೇ ಆದೊಂದು ಸೌಂದರ್ಯವನ್ನು ತಂದುಕೊಡುವುದೇ ಈ ಬದಲಾವಣೆಯ ಹಿಂದಿರುವ ಗುರಿ.

ಇದಕ್ಕೆ ಉದಾಹರಣೆಯನ್ನು ವೇಣೀ ಸಂಹಾರ ನಾಟಕದಲ್ಲಿ ನೋಡಬಹುದು. ಅದರ ಕಥೆ ಮೂಲ ಮಹಾಕಾವ್ಯ ಮಹಾಭಾರತವನ್ನು ಆಧರಿಸಿದೆ. ಇತರೆ ಎಲ್ಲ ಆಸಕ್ತಿಗಳನ್ನೂ ಆಹುತಿ ತೆಗೆದುಕೊಂಡು ಬಹುಮಟ್ಟಿಗೆ ಕೊನೆಯಿಲ್ಲದ ಆಸೆಗಳಿಂದ ಆವೃತವಾಗಿರುವ ಲೌಕಿಕ ಬದುಕಿನ ನಿರರ್ಥಕತೆಯನ್ನು ಸಾರುವ 'ಶಾಂತ' ರಸವೇ ಮಹಾಭಾರತದ ಪ್ರಧಾನ ರಸ. ನಾಟಕಕಾರನು ತನ್ನ ಕೃತಿಯ ಅಂತಿಮ ಘಟ್ಟದಲ್ಲಿ ಈ ಶಾಂತ ರಸವನ್ನು ತ್ಯಜಿಸಿ ಅದರ ಜಾಗದಲ್ಲಿ ಪಾಂಡವರ ಕಥೆಗೆ ಚೆನ್ನಾಗಿ ಹೊಂದಿಕೆಯಾಗುವ ವೀರ ಮತ್ತು ಅದ್ಭುತ ರಸಗಳನ್ನು ತಂದಿದ್ದಾನೆ. ಈ ನವತ್ವವನ್ನು, ಅವನು ಎಷ್ಟು ಅದ್ಭುತವಾದ ರೀತಿಯಲ್ಲಿ ಸಾಧಿಸುತ್ತಾನೆಂದರೆ, ಪಾಂಡವರ ಶತ್ರುಗಳೆಲ್ಲಾ ರಣಾಂಗಣದಲ್ಲಿ ಹತರಾಗಿ ಧರ್ಮರಾಯನು ಅಖಿಲ ರಾಜ ಧರ್ಮದಲ್ಲಿ

ಅಧಿಷ್ಠಿತನಾಗಿ, ಅಂತ್ಯದಲ್ಲಿ ಅದ್ಭುತ ಅಭ್ಯುದಯ ಸಂಪತ್ತಿಯನ್ನು ಪಡೆಯುತ್ತಾನೆ. ಈ ಹೊಸ ರೀತಿಯ ಮುಕ್ತಾಯವು ಇಡೀ ಪ್ರಬಂಧ ವಕ್ರತೆಯಿಂದ ಬೇರೆಯಾಗಿದ್ದು ಅಭಿಜಾತ ಸಹೃದಯರಿಗೆ ಅಪರಿಮಿತವಾದ ಆಹ್ಲಾದವನ್ನುಂಟು ಮಾಡುತ್ತದೆ. ಅಷ್ಟೆಲ್ಲಾ ವಿಪತ್ಪರಂಪರೆಗಳಿಗೆ ಗುರಿಯಾದರೂ, ತಮ್ಮ ಶಕ್ತಿಯನ್ನು ಕ್ರಮಕ್ರಮೇಣ ಹೆಚ್ಚಿಸಿಕೊಂಡು ಪಾಂಡವರು ತಮ್ಮ ಶತ್ರುಗಳನ್ನು ಕಿತ್ತೊಗೆಯಲು ಸಮರ್ಥರಾಗಿ, ಅಂತಿಮವಾಗಿ ರಾಜ್ಯವೈಭವವನ್ನು ಗಳಿಸಿಕೊಂಡರೆಂದು ಸಹೃದಯರು ಯೋಚಿಸುತ್ತಾರೆ. ಅಂಥ ಯೋಚನೆಯು ಅವರನ್ನು ಸಂಕಷ್ಟದ ಸಮಯದಲ್ಲೂ ದೃಢತೆ ಮತ್ತು ವಿಪುಲೋತ್ಸಾಹವನ್ನು ತಾಳುವಂತೆ ಮಾಡುತ್ತದೆ. ಅಥವಾ 'ಉತ್ತರ ರಾಮ ಚರಿತೆ'ಯನ್ನು ನೋಡಬಹುದು. ಮೂಲ ರಾಮಾಯಣದ ಕಥೆಯೂ, ತನ್ನ ಪ್ರಿಯಪತಿ ರಾಮನ ದಾರುಣ ವಿರಹವೇದನೆಯನ್ನು ಸಹಿಸಲಾರದೆ, ಸೀತೆಯ ಪಾತಾಳ ಪ್ರವೇಶದಿಂದಾಗಿ ಅಂಗಿರಸವಾದ (ಪ್ರಧಾನರಸ) ಕರುಣದಲ್ಲಿ ಪರ್ಯವಸಾನ ಹೊಂದುತ್ತದೆ. ಪ್ರಭು ಶ್ರೀರಾಮನು ತನ್ನ ಸೋದರನೊಂದಿಗೆ ನದಿಗೆ ಬೀಳುತ್ತಾನೆ. ಆದರೆ ನಾಟಕದಲ್ಲಾದರೋ, ಅದನ್ನು ಪೂರ್ತಿ ಬದಲಾಯಿಸಲಾಗಿದೆ. ಅದರ ಉಪಸಂಹಾರವಾದರೋ, ಪ್ರೇಮಮಯಿ ಸೀತೆಯೊಂದಿಗೆ ಅವಳ ಪತಿ ರಾಮನ ಪುನರ್ಮಿಲನದ ಪರಿಣಾಮವಾಗಿ ಸಂಯೋಗ ಶೃಂಗಾರಕ್ಕಾಸ್ಪದವಾಗುವ ಸನ್ನಿವೇಶದಿಂದ ಸಕಲ ದಿವ್ಯಾಸ್ತ್ರಗಳ ಪ್ರಯೋಗದಲ್ಲಿ ಕುಶಲನಾದ ತನ್ನ ಪುತ್ರ ಲವನ ಬಲ ಸಾಹಸಗಳನ್ನು ನೋಡುವುದೊಂದೇ ರಾಮನ ಕಂಗಳಿಗೆ ಹಬ್ಬ. ಹೀಗೆ ಈ ನಾಟಕದ ಅಂತಿಮ ಭಾಗದಲ್ಲಿ ಚಿತ್ರಿತವಾಗಿರುವ ಸಂಯೋಗ ಶೃಂಗಾರವು ವಿಚ್ಛಿತ್ತಿ ವಿಶೇಷದಿಂದ ಪುಷ್ಟವಾಗಿ ಸಹೃದಯರ ಮೆಚ್ಚುಗೆಯನ್ನು ಪಡೆದುಕೊಂಡು ಬಿಡುತ್ತದೆ. ಇದೇ ರೀತಿ ಇತರೆ ಉದಾಹರಣೆಗಳನ್ನು ಓದುಗರೇ ಊಹಿಸಿಕೊಳ್ಳಬೇಕು.

ವಿಧ್ವಸ್ತ ವ್ಯಸನಾನಾಂ ಯೋ ನಾಯಕಾಭ್ಯುದಯಾಹವಃ
ಪ್ರಬಂಧಃ ಪ್ರತಿಪಾದ್ಯಾನಾಂ ಪ್ರೀತಿ ಬಂಧಾಯ ಜಾಯತೇ [೪೯]

ಮಹಾಕಾವ್ಯಗಳಲ್ಲಿ ವ್ಯಸನಗಳಿಂದ ಪಾರಾದ ನಾಯಕನ ಜಯ ಮತ್ತು ಅಭ್ಯುದಯಗಳ ಚಿತ್ರಣ ಸಾಮಾಜಿಕರಿಗೆ ಅಪಾರವಾದ ಆನಂದವನ್ನುಂಟು ಮಾಡುತ್ತದೆ [೪೯]

ಇದು ಅಂತರ ಶ್ಲೋಕ

ರಾಮಾಯಣ ಮಹಾಭಾರತಗಳ ಪ್ರಧಾನ ರಸವು ಕರುಣ ಮತ್ತು ಶಾಂತ ಎಂದು ಪೂರ್ವಸೂರಿಗಳು ಈಗಾಗಲೇ ನಿರೂಪಿಸಿದ್ದಾರೆ. ಪ್ರಬಂಧ ವಕ್ರತೆಯ ಇನ್ನೊಂದು ಪ್ರಕಾರವನ್ನು ಈಗ ವಿವರಿಸಲಾಗುವುದು.

ತ್ರೈಲೋಕ್ಯಾಭಿನವೋಲ್ಲೇಖ ನಾಯಕೋತ್ಕರ್ಷಪೋಷಿಣಾ|
ಇತಿಹಾಸೈಕದೇಶೇನ ಪ್ರಬಂಧಸ್ಯ ಸಮಾಪನಮ್[18]

ತದುತ್ತರಕಥಾವರ್ತಿ ವಿರಸತ್ವ ಜಿಹಾಸಯಾ|
ಕುರ್ವೀತ ಯತ್ರ ಸುಕವಿಃ ಸಾ ವಿಚಿತ್ರಾಸ್ಯ ವಕ್ರತಾ[19]

ಇತಿವೃತ್ತದ ಮೂಲಕಥೆಯ ನೀರಸತೆಯನ್ನು ನಿವಾರಿಸುವ ಸಲುವಾಗಿ, ಶ್ರೇಷ್ಠ ಕವಿಯೊಬ್ಬ ಮೂರು ಲೋಕಗಳಲ್ಲಿ ಆದರ್ಶ ಪಾತ್ರವೆಂಬಂತೆ ಚಿತ್ರಿಸಲಾಗಿರುವ ನಾಯಕನ ಉತ್ಕರ್ಷವನ್ನು ಪೋಷಿಸುವಂಥ ಘಟನೆಯೊಂದನ್ನು ಮೂಲಕಥೆಯಿಂದ ಆಯ್ದು ಅದರಿಂದ. ಕೃತಿಯನ್ನು ಸಮಾಪ್ತಗೊಳಿಸಿದಾಗ ಅದನ್ನು ಪ್ರಬಂಧ ವಕ್ರತೆಯ ವೈಚಿತ್ರ್ಯವೆಂದು ತಿಳಿಯಬೇಕು [18 & 19]

ಈ ಪ್ರಕಾರದ ಪ್ರಬಂಧ ವಕ್ರತೆಯು, ಅದರಲ್ಲಿ ಚಿತ್ರಿಸಿರುವ ವಿವಿಧ ಘಟನೆ (ಪ್ರಕರಣ)ಗಳಿಂದಾಗಿ ಹೃದ್ಯವಾಗುತ್ತದೆ. ಒಬ್ಬ ಶ್ರೇಷ್ಠ ಕವಿ ಅರ್ಥಾತ್, ಔಚಿತ್ಯ ಪದ್ಧತಿಯಲ್ಲಿ ದಕ್ಷನಾದ ಕವಿಯು ತನ್ನ ಕೃತಿಯನ್ನು (ಪ್ರಬಂಧವನ್ನು) ಮೂಲ ಇತಿವೃತ್ತದ ಆಯ್ದ ಒಂದು ಘಟನೆ (ಪ್ರಕರಣ)ಯಿಂದ ಸಮಾಪ್ತಗೊಳಿಸಬೇಕು. ಎಂಥ ಘಟನೆ ಎಂದರೆ ಮೂರೂ ಲೋಕಗಳಲ್ಲಿ ಅಭಿನವ ಉಲ್ಲೇಖದ ಕಾರಣ, ನಾಯಕನ ಉತ್ಕರ್ಷವನ್ನು ಪೋಷಿಸುವಂಥ ಘಟನೆ ಅಥವಾ ಪ್ರಕರಣದಿಂದ ಉಪಸಂಹರಿಸಬೇಕು. ಆ ರೀತಿಯ ಪ್ರಕರಣದ ಆಯ್ಕೆ ಏಕೆ ಎಂದರೆ, ಮೂಲ ಕೃತಿಯ ಈ ಘಟನೆ ಅಥವಾ ಪ್ರಕರಣದ ನಂತರ ಬರುವ ನೀರಸವಾದ ಭಾಗವನ್ನು ನಿವಾರಿಸುವ ಸಲುವಾಗಿ. ಇದರ ಮಥಿತಾರ್ಥವಿಷ್ಟೇ: ಮಹಾಕವಿಯೊಬ್ಬ, ಇತಿಹಾಸದಲ್ಲಿರುವಂತೆಯೇ (ಮೂಲ ಮಹಾಕಾವ್ಯದಲ್ಲಿರುವಂತೆಯೇ) ತನ್ನ ಕೃತಿಯನ್ನು ಪ್ರಾರಂಭಿಸಿದ್ದರೂ, ಮೂರೂ ಲೋಕಗಳು ಅದ್ಭುತವಾಗಿ ಮೆಚ್ಚುವಂಥ ನಾಯಕನ ಕೀರ್ತಿಯನ್ನು ಪೋಷಿಸುವ ಘಟನೆಯಿಂದ ಕೃತಿಯನ್ನು ಮುಕ್ತಾಯಗೊಳಿಸಬೇಕು ಮತ್ತು ಮೂಲದಲ್ಲಿರಬಹುದಾದ ಇದಕ್ಕೆ ವಿರುದ್ಧ ರೀತಿಯ ಮುಕ್ತಾಯವನ್ನು ನಿವಾರಿಸಬೇಕು. ಇಂಥ ನೂತನ ರೀತಿಯು, ಕೃತಿಗೆ ಕಮನೀಯ ಸೌಂದರ್ಯವನ್ನುಂಟು ಮಾಡುವುದು.

'ಕಿರಾತಾರ್ಜುನೀಯ' ಮಹಾಕಾವ್ಯದಲ್ಲಿ ಕಂಡುಬರುವ ಈ ಉದಾಹರಣೆಯನ್ನು ನೋಡಬಹುದು.

ದ್ವಿಷಾಂ ವಿಘಾತಾಯ ವಿಧಾತುಮಿಚ್ಛತೋ
ರಹಸ್ಯನುಜ್ಞಾಮಧಿಗ ಮ್ಯ ಭೂಭೃತಃ [೫೦]
....ರಿಪುತಿಮಿರ ಮುದಸ್ಯೋದೀಯ ಮಾನಂ ದಿನಾದೌ
ದಿನಕೃತಮಿವ ಲಕ್ಷ್ಮೀಸ್ತ್ವಾಂ ಸಮಭ್ಯೇತು ಭೂಯಃ [೫೧]
ಏತೇ ದುರಾಪಂ ಸಮವಾಪ್ಯ ವೀರ್ಯ-
ಮುನ್ಮೂಲಿತಾರಃ ಕಪಿಕೇತನೇನ [೫೨]
ಶತ್ರುಗಳ ನಾಶಗೈಯಲಿಚ್ಛಿಸಿದ ಫಲುಗುಣನು
ರಹಸ್ಯದಲಿ ಧರ್ಮಜನನುಮತಿಯ ಪಡೆದ [೫೦]
ಶತ್ರುತಿಮಿರನ ಕಿತ್ತೊಗೆದು
ದಿನದಾರಂಭದಲಿ ಉದಯಿಸುವ ದಿ ನಕರನಂತೆ
ರಾಜ್ಯಲಕ್ಷ್ಮಿಯು ನಿನಗೆ ಸಮನಿಸಲಿ [೫೧]

ದುರ್ಲಭ ಮಹಾಸ್ತ್ರವ ಪಡೆದು ಕಪಿಧ್ವಜನು
ವೀರಯೋಧರನೆಲ್ಲ ನಿರ್ಮೂಲ ಮಾಡುವನು [೫೨]

ಮೇಲಿನ ಶ್ಲೋಕಗಳಿಂದ ದುರ್ಯೋಧನನ ಸಾವಿನವರೆಗಿನ ಹಾಗೂ ಧರ್ಮರಾಜನ ಅಭ್ಯುದಯ ಪ್ರಾಪ್ತಿವರೆಗಿನ ಇಡೀ ಕಥೆಯನ್ನು ಈ ಕಥೆಯಲ್ಲಿ ಅಳವಡಿಸುವುದು ಕವಿಯ ಉದ್ದೇಶವಾಗಿದೆ ಎಂಬುದು ತಿಳಿದುಬರುತ್ತದೆ. ಈ ಕಥೆಯಲ್ಲಿ ಪಾಂಡುಪುತ್ರನೂ ಗಾಂಡೀವ ಧನ್ವಿಯೂ ದೇವತೆಗಳಂತೆ ತೇಜಸ್ವಿಯೂ ಆದ ಅರ್ಜುನನು ದ್ಯೂತ ಪ್ರಕರಣದಲ್ಲಿ ಸೋತು ಸಂಪತ್ತನ್ನೆಲ್ಲ ಕಳೆದುಕೊಂಡು, ದ್ರೌಪದಿಗಾದ ಅಪಮಾನದಿಂದ ಕ್ರೋಧೋದ್ದೀಪಿತನಾಗಿ ಕೃಷ್ಣದ್ವೈಪಾಯನನಿಂದ ಉಪದೇಶ ಹೊಂದಿ, ದಿವ್ಯಾಸ್ತ್ರಗಳನ್ನು ಸಂಪಾದಿಸುವ ವಿದ್ಯೆಯನ್ನು ಪಡೆದು, ಅದರಂತೆ ಪಾಶುಪತವೇ ಮೊದಲಾದ ದಿವ್ಯಾಸ್ತ್ರಗಳ ಪ್ರಾಪ್ತಿಗಾಗಿ ತಪದಲ್ಲಿ ತೊಡಗುವುದನ್ನು ಚಿತ್ರಿಸಲಾಗಿದೆ. ಅದರಲ್ಲಿ ಕವಿ ಯೋಜಿಸಿರುವ ಮುಕ್ತಾಯವೆಂದರೆ ಕಿರಾತವೇಷದ ಶಿವನಿಗೂ ಅರ್ಜುನನಿಗೂ ನಡೆವ ಯುದ್ಧ. ಮತ್ತು ಈ ಯುದ್ಧದ ಮೂಲಕ ಅರ್ಜುನನ ಅನುಪಮ ಪರಾಕ್ರಮ ಪ್ರಕಾಶಿತವಾದುದರ ಜೊತೆಗೆ, ಕವಿಯ ಯಾವುದೋ ಅಪೂರ್ವವಾದೊಂದು ಅಭಿಪ್ರಾಯವೂ ಪ್ರಕಾಶಿತವಾಗುತ್ತಿದೆ.

ಅದೆಂದರೆ, ಪಾಶುಪತವೇ ಮೊದಲಾದ ಪರಮ ದಿವ್ಯಾಸ್ತ್ರಗಳನ್ನು ಸಂಪಾದಿಸುವುದಕ್ಕೆ ಮುನ್ನವೇ, ಅರ್ಜುನನು ಏಕಾಕಿಯಾಗಿದ್ದಾಗಲೇ, ಪಿನಾಕಿಯೊಂದಿಗೆ ಮಹಾಯುದ್ಧಕ್ಕೆ ತೊಡಗುವುದನ್ನು ಕಾಣುತ್ತೇವೆ. ಬಾಹುಯುದ್ಧದಲ್ಲಿ, ಮುಕ್ಕಣ್ಣನೆನಿಸಿದ ಶಿವನನ್ನೂ ಅರ್ಜುನನು ತನ್ನ ಬಾಹುಬಂಧದಲ್ಲಿ ಸಿಗಿಸಿ ಆಕಾಶದಲ್ಲಿ ತೂಗಾಡುವಂತೆ ಮಾಡಬಲ್ಲ. ಇಂಥ ಅನುಭವ ಶಿವನಿಗೂ ಇದೇ ಪ್ರಥಮ. ಅರ್ಜುನನ ಈ ಸಾಹಸದಿಂದ ಮುಕ್ಕಣ್ಣನೂ ವಿಸ್ಮಯಾವೇಶದಿಂದ ಸ್ತಂಭೀಭೂತನಾಗುತ್ತಾನೆ. ಅರ್ಜುನನ ವಿಷಯಕ್ಕೆ ಅಪಾರ ಮೆಚ್ಚಿಗೆಯೂ ಉಂಟಾಗುತ್ತದೆ. ದೈವಕೃಪೆಯಾಗುವ ಮುನ್ನವೇ ಅವನ ಮಹಿಮೆ ಇಂಥದು. ಶಿವನನ್ನು ಪ್ರತ್ಯಕ್ಷವಾಗಿ ಕಂಡು, ಅವನ ಕೃಪೆಯಿಂದ ದಿವ್ಯಾಸ್ತ್ರಗಳನ್ನು ಪಡೆದ ಮೇಲೆ, ಅದರಲ್ಲೂ ಸುದರ್ಶನ ಚಕ್ರಧಾರಿಯಾದ ಕೃಷ್ಣನನ್ನು, ಎಲ್ಲ ವಿಪತ್ತುಗಳಿಂದ ತನ್ನನ್ನು ಪಾರುಮಾಡಬಲ್ಲವನನ್ನು, ಸಾರಥಿಯಾಗಿ ಮಾಡಿಕೊಂಡು, ದಿವ್ಯರಥದಲ್ಲಿ ಕುಳಿತು, ಸುತ್ತಲೂ ಇರುವ ಮಹಾಪರಾಕ್ರಮಶಾಲಿ ಸೇನಾನಾಯಕರಿಂದ ರಕ್ಷಿತನಾಗಿ, ಪಿತಾಮಹ ಭೀಷ್ಮನನ್ನು, ಶಿಖಂಡಿಯನ್ನು ಮುಂದಿಟ್ಟುಕೊಂಡು ಅರ್ಜುನನು ಸೋಲಿಸುತ್ತಾನೆ. ಭೀಷ್ಮನೇ ಅರ್ಜುನನ್ನು ನೃಶಂಸನೆಂದು ನಿಂದಿಸುತ್ತಾನೆ ಮತ್ತು "ಇವು ಅರ್ಜುನನ ಬಾಣಗಳು, ಖಂಡಿತಾ ಶಿಖಂಡಿಯವಲ್ಲ" ಎಂದು ಅವನು ಉದ್ಗರಿಸುವಂತೆ ಮಾಡುತ್ತಾರೆ ವ್ಯಾಸರು. ಅರ್ಜುನನು ಇಲ್ಲಿ ಶ್ವಪಚನಿಗಿಂತ ಕೀಳಾಗಿ ವರ್ತಿಸುತ್ತಾನೆ. ಹಾಗೆಯೇ ರಾಜಾಭೂರಿಶ್ರವಸನು ಬೇರಾವುದರಲ್ಲೋ ವ್ಯಸ್ತನಾಗಿದ್ದಾಗ, ಅವನ ಭುಜ ದಂಡವನ್ನು ಛೇದಿಸುವಂಥ, ಧೀರನಿಗೆ ಯೋಗ್ಯವಲ್ಲದ ಕೃತ್ಯವೂ, ಔಚಿತ್ಯಪ್ರಧಾನ ಪದ್ಧತಿಯ ಮೇರೆಗೆ ವೀರರಸ ಪ್ರವರ್ಧನವನ್ನು ಗುರಿಯಾಗುಳ್ಳ ಪ್ರಬಂಧ ಕಾವ್ಯಕ್ಕೆ ಕೀರ್ತಿ ತರುವಂಥದಲ್ಲ. ಕರ್ಣನು

ರಕ್ತದ ಕೆಸರಿನಲ್ಲಿ ಹೂತುಹೋಗಿದ್ದ ರಥದ ಚಕ್ರವನ್ನು ಮೇಲೆತ್ತಲು ಕೆಳಗಿಳಿದಿದ್ದ ಸಮಯದಲ್ಲಿ, ಆಗ ಬಾಣ ಪ್ರಯೋಗಿಸುವುದು ಯುದ್ಧನಿಯಮಕ್ಕೆ ವಿರುದ್ಧವಾದುದೆಂದು ಹೇಳಿದರೂ ಕೇಳದೆ ಅರ್ಜುನನು ಅಂಗರಾಜನ ಶಿರಸ್ಸನ್ನು ಛೇದಿಸುವ ವರ್ಣನಾ ಪ್ರಸಂಗವೂ ಅಷ್ಟೇ ಅಯೋಗ್ಯವಾದದ್ದು. ಮೂಲ ಕಾವ್ಯದಲ್ಲಿ ಇರುವ ಇಂಥ ಅನುಚಿತ ಪ್ರಸಂಗಗಳನ್ನೆಲ್ಲ ಭಾರವಿ ತನ್ನ ಕಾವ್ಯದಲ್ಲಿ ನಿವಾರಿಸಿದ್ದಾನೆ. ಇಂಥ ಇತರೆ ಕಾವ್ಯನಿರ್ಮಿತಿಗಳನ್ನು ಸಹೃದಯರೇ ಊಹಿಸಿಕೊಳ್ಳಬಹುದು.

ಸಾತಿರೇಕ ರಸೋತ್ಸೇಕ ಕರ್ಮನಿರ್ಮಾಣ ಕರ್ಮಣಃ||
ಪ್ರತ್ಯೂಹದೂರೀಕರಣಾತ್ ಕಾಂತಿಂ ಪುಷ್ಣಾತಿ ನಾಯಕಃ [೫೩]

ಇದು ಅಂತರಶ್ಲೋಕ

ನಾಯಕನ ಉತ್ಸಾಹಪೂರ್ಣವೂ, ಶಕ್ತಿಯುತವೂ ಆದ ಸಾಹಸ ಕೃತ್ಯಗಳ ದಾರಿಯಲ್ಲಿರುವ ಅಡ್ಡಿಗಳನ್ನು ದೂರೀಕರಿಸಿದಾಗ, ನಾಯಕನ ಪಾತ್ರವು ಅತ್ಯುಜ್ವಲ ಕಾಂತಿಯಿಂದ ಬೆಳಗುತ್ತದೆ. [೫೩]

ಪ್ರಬಂಧ ವಕ್ರತೆಯ ಇನ್ನೊಂದು ಪ್ರಕಾರವನ್ನು ಮುಂದೆ ಹೇಳಲಾಗುವುದು.

ಪ್ರಧಾನ ವಸ್ತು ಸಂಬಂಧತಿರೋಧಾನ ವಿಧಾಯಿನಾ|
ಕಾರ್ಯಾಂತರಾಂತರಾಯೇಣ ವಿಚ್ಛಿನ್ನ ವಿರಸಾ ಕಥಾ [20]

ತತ್ರೈವ ತಸ್ಯ ನಿಷ್ಪತ್ತೇರ್ನಿರ್ನಿಬಂಧ ರಸೋಜ್ವಲಾಮ್|
ಪ್ರಬಂಧಸ್ಯಾನುಬಧ್ನಾತಿ ನವಾಂ ಕಾಮಪಿ ವಕ್ರತಾಮ್ [21]

ಪ್ರಧಾನ ವಸ್ತುವಿನೊಂದಿಗೆ ಸಂಬಂಧವೇ ಇಲ್ಲದಿರುವ ಬೇರೊಂದು ಪ್ರಸಂಗದ ಸೇರ್ಪಡೆಯಿಂದ, ಪ್ರಧಾನ ಕಥೆಯ ರಸಪ್ರವಾಹವು ಕಡಿದು ಹೋಗುವಂತಾದಾಗ - [20]

ಕವಿಯು ಅಲ್ಲಿಯೇ, ಆ ಪ್ರಸಂಗವು ಪ್ರಧಾನ ಕಥೆಯ ಫಲಸಿದ್ಧಿಗೆ ಅನಿವಾರ್ಯವೆಂಬಂಥ ತಿರುವನ್ನು ತಂದುಕೊಟ್ಟು, ಪ್ರಬಂಧದ ರಸಪ್ರವಾಹವು ಅಬಾಧಿತವಾಗಿ, ಉಜ್ವಲವಾಗಿ ಮುಂದುವರಿಯುವಂತೆ ಮಾಡುವ ಮೂಲಕ ತನ್ನ ಕೃತಿಗೆ ನೂತನವಾದೊಂದು ವಕ್ರತೆಯನ್ನು ತಂದುಕೊಡಬಹುದು [21]

ಸಂಬಂಧ ಪಡದೆ ಇರುವ ಇತರೆ ಪ್ರಸಂಗಗಳ ಸೇರ್ಪಡೆಯಿಂದ ಕಾವ್ಯದ ಪ್ರಧಾನ ಕಥಾ ಪ್ರವಾಹಕ್ಕೆ ಬಾಧೆ ಉಂಟಾಗುವಂಥ ಸಂದರ್ಭವಿರಬಹುದು. ಆಗಲೂ ಅದರ ಅಪೂರ್ವತೆಯನ್ನುಬೇರೊಂದು ರೀತಿಯಲ್ಲಿ ಸಾಧಿಸಬಹುದು. ಅನ್ಯಪ್ರಸಂಗದ ಸೇರ್ಪಡೆಯಿಂದ ಕಾವ್ಯದ ಫಲಸಿದ್ಧಿಯಲ್ಲುಂಟಾಗುವ ವಿರಸತೆಯನ್ನು ಉದ್ದಿಷ್ಟಫಲ ಸಿದ್ಧಿಯನ್ನು ಸಾಧಿಸಲು ಆ ಪ್ರಸಂಗವು ಅತ್ಯಂತ ಅನಿವಾರ್ಯವೆನ್ನುವಂಥ ತಿರುವನ್ನು ತಂದುಕೊಡುವುದರ ಮೂಲಕ ನಿವಾರಿಸಬಹುದು. ಈ ರೀತಿಯಲ್ಲಿ ಮೂಲ ಕಥೆಗೆ ಒದಗಿದ ವಿಘ್ನವನ್ನು ನಿವಾರಿಸಿ ಉದ್ದಿಷ್ಟ ರಸಪ್ರವಾಹವು ಅಬಾಧಿತವಾಗಿ ಮುಂದುವರಿಯುವಂತೆ ಮಾಡಬಹುದು.

ಇದರ ಸಾರಾಂಶವೆಂದರೆ, ಪ್ರದಾನ ಕಥಾಧಾರೆಯಲ್ಲಿ ಮೊದಲಿಗೆ ಬಾಧಕವೆಂದು ಕಂಡು ಬಂದ ಪ್ರಸಂಗಕ್ಕೂ ಮೇಲು ನೋಟಕ್ಕೆ ಬಾಧಕವೆಂದು ಕಂಡು ಬಂದ ಪ್ರಸಂಗವೇ ಉದ್ದೇಶಿತ ಫಲ ಸಿದ್ಧಿಯನ್ನು ಆಗಗೊಳಿಸುವಲ್ಲಿ ಕಾರ್ಯ ತತ್ಪರವಾಗುವಂತೆ ಹಾಗೂ ರಸಭರಿತ ಶ್ವೇತ ಕಮಲದ ಹಾಗೆ ಉದ್ದಿಷ್ಟ ರಸವು ವಿಕಸಿತವಾಗುವಂತೆ ಉತ್ಕೃಕ್ಷ್ಮವಕ್ರತಾ ರಮಣೀಯತೆಯನ್ನು ಕವಿಯು ಉಂಟುಮಾಡಬಲ್ಲ.

ಶಿಶುಪಾಲವಧ ಮಹಾಕಾವ್ಯದ ಉದಾಹರಣೆಯನ್ನು ನೋಡಬಹುದು. ಅಲ್ಲಿ ಮೂರು ಲೋಕಗಳ ರಕ್ಷಣಾ ಭಾರವನ್ನು ತನ್ನ ಬಾಹುಗಳ ಮೇಲೆ ಹೊತ್ತ ವಾಸುದೇವನೇ ಕಾವ್ಯ ನಾಯಕ. ದೇವರ್ಷಿನಾರದರ ಮೂಲಕ ಇಂದ್ರನ ಸಂದೇಶವನ್ನು ಕೇಳಿದ.

"ತದಿಂದ್ರ ಸಂದಿಷ್ಟ ಮುಪೇಂದ್ರ ಯದ್ವಚಃ
ಕ್ಷಣಂ ಮಯಾ ವಿಶ್ವಜನೀನ ಮುಚ್ಯತೇ1 " [೫೪]

ಇತ್ಯಾದಿನಾ ಪುರಂದರ ಸಂದೇಶಂ "ಓಮಿತ್ಯುಕ್ತವತೋsಥ
ಶಾರ್ಙ್ಗಿಣಃ2 [೫೫]

ಓ ಉಪೇಂದ್ರನೇ ಕೇಳು
ಇಂದ್ರ ಕಳಿಸಿರುವ ಸಂದೇಶವನು
ನಿನ್ನ ಮುಂದಿದೊ ಬಹಿರಂಗಪಡಿಸುವೆನು [೫೪]

ಆ ಸಂದೇಶವನ್ನು ಕೇಳುತ್ತಿದ್ದಂತೆ ಶತ್ರುವಾದ ಮಾಹಿಷ್ಮತಿಯ ಅರಸ ಶಿಶುಪಾಲನ ಮೇಲೆ ಸಾತ್ವಿಕ ಕ್ರೋಧ ಉಂಟಾಯಿತು. ಕ್ರೋಧದ ಎಲ್ಲ ಭಾವಭಂಗಿಗಳನ್ನು ಬಳಸಿ, ಶಿಶುಪಾಲನನ್ನು ಕೊಲ್ಲುವುದೇ ತನ್ನ ಅತ್ಯಂತ ಮುಖ್ಯ ಕಾರ್ಯವೆಂದು ಹೇಳುತ್ತ

ಇರಲಿ ಬಿಡು ಅದು ಹಾಗೆ
ಎಂದನಾ ವಾಸುದೇವ [೫೫]

ತನ್ನ ಎಲ್ಲಕ್ಕಿಂತ ಮುಖ್ಯ ಕಾರ್ಯವಿದೆಂದು ಹೇಳಿದವನು, ಅದನ್ನು ಕಡೆಗಣಿಸಿದಂತೆ ತೋರುತ್ತದೆ. ಕಾರಣ ಶತ್ರುವನ್ನು ನಿಗ್ರಹಿಸಲು ಮಾಹಿಷ್ಮತಿಗೆ ಹೊರಡುವ ಬದಲು, ಧರ್ಮ ರಾಜನ ರಾಜಸೂಯ ಯಾಗದಲ್ಲಿರುವ ಸಲುವಾಗಿ ಇಂದ್ರಪ್ರಸ್ಥಕ್ಕೆ ಹೊರಡುತ್ತಾನೆ. ಈ ಘಟನೆ ತತ್ಕಾಲಕ್ಕೆ ಶತ್ರುವಿನ ವಿರುದ್ಧದ ನಾಯಕನ ಪ್ರಗತಿಯ ಹೆಜ್ಜೆಗೆ ತಡೆ ಹಾಕುತ್ತದೆ. ಆದರೆ ಧರ್ಮರಾಯನು ಆ ರಾಜಸೂಯ ಯಾಗಕ್ಕೆ ಸೇರಿದ್ದ ರಾಜರುಗಳ ಪೈಕಿ ಚೇದಿ ದೇಶದ ಅರಸು ಶಿಶುಪಾಲನೂ ಒಬ್ಬ. ಶ್ರೀಕೃಷ್ಣನಿಗೆ (ವಾಸುದೇವ) ಅಗ್ರಪೂಜೆ ನೀಡಿದ್ದನ್ನು ಸಹಿಸದ ಶಿಶುಪಾಲನು ಶ್ರೀಕೃಷ್ಣನನ್ನು ಪರುಷವೂ ಅಸಹನೀಯವೂ ಆದ ಮಾತುಗಳಿಂದ ಕಟುವಾಗಿ ನಿಂದಿಸುತ್ತಾನೆ [ಹೀಗೆ ಮೊದಲಿಗೆ ವಿರುದ್ಧ ದಿಕ್ಕಿಗೆ ತಿರುಗಿಸಿದ್ದ ಕಥೆಯ ಎಳೆಯನ್ನೇ (ಧಾರೆ) ಉದ್ದೇಶಿತ ಗುರಿಸಾಧನೆಯನ್ನು ಸಾಧಿಸುವ ಸಲುವಾಗಿ ಇನ್ನೊಮ್ಮೆ ಪರಿಣಾಮಕಾರಿಯಾಗಿ ಬಳಸಿಕೊಳ್ಳಲಾಗಿದೆ]

ಪ್ರಬಂಧ ವಕ್ರತೆಯ ಇನ್ನೊಂದು ಪ್ರಕಾರವನ್ನು ಈಗ ಹೇಳಲಾಗುವುದು.

---

1 ಶಿಶುಪಾಲವಧ - 1 - 41 1.75 b

ಯತ್ರೈಕ ಫಲಸಂಪತ್ತಿ ಸಮುದ್ಯುಕ್ತೋಽಪಿ ನಾಯಕಃ|
ಫಲಾಂತರೇಷ್ವನಂತೇಷು ತತ್ತುಲ್ಯ ಪ್ರತಿಪತ್ತಿಷು[22]
ಧತ್ತೇ ನಿಮಿತ್ತತಾಂ ಸ್ಫಾರಯಶಃ ಸಂಭಾರ ಭಾಜನಮ್|
ಸ್ವಮಾಹಾತ್ಮ್ಯ ಚಮತ್ಕಾರಾತ್ ಸಾ ಪರಾಪ್ಯಸ್ಯ ವಕ್ರತಾ[23]

ನಾಯಕನು ಪ್ರಧಾನವಾಗಿ ಒಂದು ಫಲಸಾಧನೆಯಲ್ಲಿ ತೊಡಗಿದ್ದರೂ, ಅವನ ಯಶಸ್ಸನ್ನು ಬಹುವಾಗಿ ಬೆಳಗಲು ಒಟ್ಟಾಗುವಂಥ, ಇತರೆ ಅಂಥದೇ ಮಹತ್ ಫಲಗಳ ಸಾಧನೆಗೆ ಅವನು ನಿಮಿತ್ತನಾಗುವಂತೆ ಕಂಡುಬಂದಾಗ, ಅಂಥ ಅವನ ಮಹತ್ ಸಾಧನೆಗಳ ನೆರವಿಯು ಬೇರೊಂದೇ ರೀತಿಯಲ್ಲಿ ಪ್ರಬಂಧ ವಕ್ರತೆಗೆ ಕಾರಣವಾಗುತ್ತದೆ. [22&23]

ಈಗಾಗಲೇ ನಿರೂಪಿಸಲಾದ ಪ್ರಬಂಧ ವಕ್ರತೆಯ ಪ್ರಕಾರಗಳ ಜೊತೆಗೆ ಪ್ರಬಂಧ ವಕ್ರತೆಯ ಇನ್ನೊಂದು ವಿಧವನ್ನು (ನಾಟಕಗಳಿಗೆ ಸಂಬಂಧಿಸಿದಂತೆ) ಈಗ ನಿರೂಪಿಸಲಾಗುವುದು. ನಾಯಕನು ತನ್ನೆಲ್ಲ ಚಟುವಟಿಕೆಗಳಿಗೆ ಏಕೈಕ ಗುರಿಯನ್ನು ಹೊಂದಿರುವಂತೆ ಚಿತ್ರಿತನಾಗಿರಬಹುದು. ಆದರೆ ಅಂತಿಮವಾಗಿ ಅವನು ಸಾಧಿಸಿದಂಥದೇ ಇತರೆ ಅನಂತ ಸಾಧನೆಗಳಿಗೆ ಭಾಜನನಾಗಿಬಿಡಬಹುದು. ಅವೆಲ್ಲವೂ ಅವನ ಫಲಸಾಧನೆಯಿಂದ ಹೊರಹೊಮ್ಮಿದವೇ ಆಗಿರಬಹುದು. ಇದು ಅವನಿಗೆ ಅಪಾರವಾದ ಯಶಸ್ಸನ್ನು, ಬ್ರಹ್ಮಾಂಡವನ್ನೇ ಮೀರಿಸಿದಂಥ ಯಶಸ್ಸನ್ನು ತಂದುಕೊಡಬಹುದು. ನಾಯಕನ ಅಪೂರ್ವವೂ ಅಸಾಮಾನ್ಯವೂ ಆದ ಮಹಾತ್ಮೆಯಿಂದ ಇಂಥ ಕೀರ್ತಿ ಬರುತ್ತದೆ.

ಇದರ ಮಥಿತಾರ್ಥವೆಂದರೆ, ಮುಖ್ಯ ಗುರಿಯೊಂದನ್ನು ಸಾಧಿಸುವುದರಲ್ಲಿಯೇ ನಾಯಕನ ಮನಸ್ಸು ಮಗ್ನವಾಗಿದ್ದರೂ ಅದನ್ನು ಅವನು ಸಾಧಿಸಿದರೂ, ಅವನು ಉದ್ದೇಶಿಸಿರದ ಇತರೆ ಅನೇಕ ಸತ್‌ಫಲಗಳು ಅವನ ಔನ್ನತ್ಯದಿಂದಾಗಿ ಅವನನ್ನಾಶ್ರಯಿಸುತ್ತವೆ. ನಾಯಕನ ಇಂಥ ಸರ್ವಮುಖೀ (ಬಹುಮುಖೀ) ಸಾಧನೆಯು, ಪ್ರಬಂಧ ವಕ್ರತೆಯ ಪರಾಕಾಷ್ಠೆಗೆ ಕಾರಣವಾಗುತ್ತದೆ.

ನಾಗಾನಂದ ನಾಟಕದಲ್ಲಿ ಇದರ ಉದಾಹರಣೆಯನ್ನು ನೋಡಬಹುದು. ಅದರಲ್ಲಿ ಸಕಲ ಕಾರುಣಿಕ ಶಿರೋಮಣಿಯೆನಿಸಿದ ನಾಯಕ ಜೀಮೂತವಾಹನನು, ತನ್ನ ದೇಹದಾನ ಮಾಡಿ ದುರ್ನಿವಾರವಾದ ವೈರಿಯೆನಿಸಿದ ಗರುಡನ ಮೃತ್ಯು ಮುಖದಿಂದ ಶಂಖ ಚೂಡನೆಂಬ ನಾಗನನ್ನು ಉಳಿಸಿದ್ದಷ್ಟೇ ಅಲ್ಲ; ಇಡೀ ನಾಗಕುಲವನ್ನೇ ಉಳಿಸಿದ.

ಆಸ್ತಾಂ ವಸ್ತುಷು ವೈದಗ್ಧೀ ಕಾವ್ಯೇ ಕಾಮಪಿ ವಕ್ರತಾಮ್|
ಪ್ರಧಾನ ಸಂವಿಧಾನಾಂಕನಾಮ್ನಾಪಿ ಕುರುತೇ ಕವಿಃ[24]

[ನಾಮಕರಣ ವಕ್ರತೆ]

ಕಾವ್ಯವಸ್ತುವನ್ನು ಮೂಲ ಘಟನೆ ಅಥವಾ ಪ್ರಸಂಗಗಳನ್ನು ಯೋಜಿಸುವುದರಲ್ಲಿ ಕವಿ ತೋರುವ ವಿದಗ್ಧತೆಯ ಮಾತು ಹಾಗಿರಲಿ, ತನ್ನ ಪ್ರಧಾನ ಕಥಾ ವಿಧಾನಕ್ಕೆ ತಕ್ಕುದಾದ ಮಹತ್ವ ಪೂರ್ಣವಾದ ಶೀರ್ಷಿಕೆಯನ್ನು "ನೀಡುವುದರಲ್ಲೂ" ತನ್ನ ವಿಶಿಷ್ಟ ವಕ್ರತಾ ನೈಪುಣ್ಯ ತೋರ ಬಹುದು. [24]

ಈಗಾಗಲೇ ನಾವು ನೋಡಿದಂತೆ ಕೃತಿಯ ವಿವಿಧ ಪ್ರಸಂಗಗಳ ರಚನೆಯಲ್ಲಿ ಕವಿಯ ಕೌಶಲ (ವಿದಗ್ಧತೆ) ಕಂಡು ಬರುತ್ತದೆ ಇದಲ್ಲದೆ, ತನ್ನಪ್ರಬಂಧ ಕಾವ್ಯ ಇಲ್ಲವೆ ನಾಟಕ ಕೃತಿಗೆ ಅರ್ಥಪೂರ್ಣವಾಗಿ ನಾಮಕರಣ ಮಾಡುವುದರಲ್ಲೂ ಅವನು ತನ್ನ ಅದ್ಭುತ ವಕ್ರತಾ ನೈಪುಣ್ಯ ತೋರಬಹುದು. ಕೃತಿಯ ಹೆಸರೇ (ಅಂಕಿತನಾಮವೇ) ಕವಿಯ ಅಪಾರ ನಿರ್ಮಾಣ ಶಕ್ತಿಯನ್ನು ಅಭಿವ್ಯಕ್ತಿಸುತ್ತದೆ. ಕಾರಣ ಇಡೀ ಕೃತಿಯ ಸಾರ ಸರ್ವಸ್ವವೆನಿಸಿದ ಇಡೀ ಕಥಾವಸ್ತುವಿನ ಬಹುಮುಖ್ಯವೂ ಕುತೂಹಲ ಪೂರ್ಣವೂ ಆದ ಅಂಶವನ್ನು ಅದು ಅರ್ಥಪೂರ್ಣವಾಗಿ ಎತ್ತಿ ತೋರುತ್ತದೆ. ಅಂಥ ಕೌಶಲವು ನಿಜಕ್ಕೂ ವಿಸ್ಮಯಕಾರಿಯಾದ್ದು ಎನ್ನುವುದನ್ನು 'ನೀಡುವುದರಲ್ಲೂ' ಎಂಬ ಪದ ಸೂಚಿಸುತ್ತದೆ. ಇದರ ಮಥಿತಾರ್ಥವೆಂದರೆ, ಕವಿಯು ಸೂಕ್ತ ಪ್ರಸಂಗಗಳನ್ನು ಎಚ್ಚರಿಕೆಯಿಂದ ಆಯ್ದು ಯೋಜಿಸುವ ಮೂಲಕ ತನ್ನ ಕೃತಿಗೆ ರಮಣೀಯತೆಯನ್ನು ತಂದುಕೊಡುವುದೇನೂ ಆಶ್ಚರ್ಯವಲ್ಲ. ಆದರೆ ತನ್ನ ಕೃತಿಗೆ ಆನಂದದಾಯಕವೂ ಅರ್ಥಪೂರ್ಣವೂ ಆದ ಶೀರ್ಷಿಕೆಯನ್ನು ನೀಡುವುದರಲ್ಲೂ ಅವನು ತನ್ನ ಅತ್ಯುನ್ನತ ಸೃಜನಾತ್ಮಕ (ರಚನಾತ್ಮಕ) ಕೌಶಲವನ್ನು ಮೆರೆಯುತ್ತಾನೆಂಬುದೇ ನಮಗೆ ವಿಸ್ಮಯವನ್ನುಂಟು ಮಾಡುವ ಅಂಶ. ಉದಾಹರಣೆಗೆ ಅಭಿಜ್ಞಾನ ಶಾಕುಂತಲ, ಮುದ್ರಾರಾಕ್ಷಸ ಪ್ರತಿಮಾನಿರುದ್ಧ, ಮಾಯಾಪುಷ್ಪಕ, ಕೃತ್ಯಾ ರಾವಣ, ಛಲಿತರಾಮ, ಪುಷ್ಪದೂಷಿತಕವೇ ಮೊದಲಾದ ನಾಟಕಗಳ ಶೀರ್ಷಿಕೆಗಳನ್ನು ಹೆಸರಿಸಬಹುದು. ಸಾಹಿತ್ಯ ಕೃತಿಗಳಿಗೆ ನೀಡಿರುವ ಇಂಥ ಅರ್ಥಪೂರ್ಣ ಶೀರ್ಷಿಕೆಗಳು ಆ ಕೃತಿಗಳ ಏಕೀಕೃತ ಕಥಾಬಂಧದ ಹಿಂದಿರುವ ವಿಶಿಷ್ಟ ಎಳೆಗಳನ್ನು ಅಭಿವ್ಯಕ್ತಿಸುವುದರಲ್ಲಿ ಅನುಪಮವೆನಿಸಿವೆ. ಅವು ನಿಜಕ್ಕೂ ಕೃತಿಯ ಸೌಂದರ್ಯಕ್ಕೆ ಕಳೆಗೊಡುತ್ತವೆ. ಆದರೆ 'ಹಯಗ್ರೀವವಧ' ಶಿಶುಪಾಲವಧ, ಪಾಂಡವಾಭ್ಯುದಯ, ರಾಮಾನಂದ ಮತ್ತು ರಾಮಚರಿತ ಈ ಮೊದಲಾದ ಕೃತಿಗಳ ಸರಳವೂ ನೇರವೂ ಆದ ಶೀರ್ಷಿಕೆಗಳು ಕುತೂಹಲಕರವೆನಿಸುವುದಿಲ್ಲ.

ಪ್ರಬಂಧ ವಕ್ರತೆಯ ಇನ್ನೊಂದು ಪ್ರಕಾರವನ್ನು ಹೇಳಲಾಗುವುದು.

ಅಪ್ಯೇಕಕಕ್ಷ್ಯಯಾ ಬದ್ಧಾಃ ಕಾವ್ಯಬಂಧಾಃ ಕವೀಶ್ವರೈಃ|
ಪುಷ್ಣಾಂತ್ಯನರ್ಘಾಮನ್ಯೋನ್ಯವೈಲಕ್ಷಣ್ಯೇನ ವಕ್ರತಾಮ್[25]

ಮಹಾಕವಿಗಳು ಒಂದೇ ಕಥಾವಸ್ತುವನ್ನಾಧರಿಸಿ, ರಚಿಸಿದ ಕಾವ್ಯನಾಟಕಾದಿಗಳು, ಪರಸ್ಪರ ವೈಲಕ್ಷಣ್ಯದಿಂದಾಗಿ [ಒಂದು ಮತ್ತೊಂದರಿಂದ ವಿಭಿನ್ನವೆನಿಸಿರುವುದರಿಂದ] ಅಪೂರ್ವವಾದ ಅಪಾರ ವಕ್ರತೆಯನ್ನು ಪಡೆದುಕೊಂಡಿರುತ್ತದೆ [25]

"ಪುಷ್ಣಾಂತಿ" ಎಂದರೆ ಉಲ್ಲಾಸಗೊಳಿಸುತ್ತವೆ ಎಂದು ಅರ್ಥ. 'ಅನರ್ಘ್ಯಮ್' ಎಂದರೆ, ಅನಂತ ಅಪರಿಮಿತ. ಅನ್ಯೋನ್ಯ ವೈಲಕ್ಷಣ್ಯವೆಂದರೆ, ಪರಸ್ಪರ ವಿಸದೃಶ. 'ಏಕಕಕ್ಷ್ಯಾ' ಎಂದರೆ ಒಂದೇ ಕಥಾವಸ್ತುವನ್ನು ಆಧರಿಸಿದ ಎಂದು. ಆದರೆ ಒಂದೇ ವಸ್ತುವನ್ನಾಧರಿಸಿದ್ದರೂ, ಪರಸ್ಪರವಾಗಿ ವಿಭಿನ್ನತೆಯಿಂದ ಕೂಡಿರುವುದು ಅಂಥ ಕೃತಿಗಳ ವೈಶಿಷ್ಟ್ಯ. ವಿವಿಧ ಕೃತಿಗಳೆಂದರೆ ಕಾವ್ಯನಾಟಕಾದಿ ಗಳು. ಆ ಕೃತಿಗಳು ಒಂದೊಂದೂ ವಿಶಿಷ್ಟವೆನಿಸುವುದು ಮಹಾಕವಿಗಳಿಂದಾಗಿ.

ಕಾರಣ ಕೆಲವೇಳೆ ಅವರು ತಮ್ಮದೇ ಸ್ವೋಪಜ್ಞ ರೀತಿಯಲ್ಲಿ ವಿಸ್ತೃತವಾದ್ದನ್ನು ಸಂಕ್ಷಿಪ್ತಗೊಳಿಸುತ್ತಾರೆ. ಸಂಕ್ಷಿಪ್ತವಾದ್ದನ್ನು ವಿಸ್ತಾರಗೊಳಿಸುತ್ತಾರೆ. ಎಲ್ಲಕ್ಕಿಂತ ಹೆಚ್ಚಾಗಿ ಶಬ್ದ ಮತ್ತು ಅರ್ಥಾಲಂಕಾರಗಳಿಂದ ಅವುಗಳನ್ನು ಅಲಂಕೃತಗೊಳಿಸುವಲ್ಲಿ ತಮ್ಮ ವ್ಯಕ್ತಿ ವಿಶಿಷ್ಟತೆಯನ್ನು ತೋರುತ್ತಾರೆ.

ಇದರ ಅಭಿಪ್ರಾಯವೆಂದರೆ, ಸುಂದರವಾದ ಒಂದೇ ಮೂಲ ಕಥಾವಸ್ತುವನ್ನಾಧರಿಸಿ, ಬೇರೆ ಬೇರೆ ಮಹಾಕವಿಗಳು ಅನೇಕ ಕಾವ್ಯ ಕೃತಿಗಳನ್ನು ರಚಿಸಿದ್ದಾಗ್ಯೂ ಒಂದೊಂದೂ ಇನ್ನೊಂದಕ್ಕಿಂತ ವಿಭಿನ್ನವಾಗಿ ತಮ್ಮದೇ ಆದ ವೈಶಿಷ್ಟ್ಯದಿಂದ ಕೂಡಿದ್ದು, ಪರಸ್ಪರವಾಗಿ ಯಾವುದೇ ಹೋಲಿಕೆ ಕಿಂಚಿತ್ತೂ ಇಲ್ಲದಿದ್ದರೂ ಮತ್ತೆ ಮತ್ತೆ ಓದಿದಾಗಲೂ ಸಹೃದಯರಿಗೆ ಸಮಾನವಾಗಿ ಆಹ್ಲಾದವುಂಟುಮಾಡುತ್ತವೆ. ಉದಾಹರಣೆಗೆ ರಾಮನ ಮೂಲ ಕಥೆಯನ್ನೇ ತೆಗೆದುಕೊಳ್ಳಬಹುದು. ರಾಮಾಭ್ಯುದಯ, ಉದಾತ್ತರಾಘವ, ವೀರಚರಿತ, ಬಾಲರಾಮಾಯಣ, ಕೃತ್ಯಾರಾವಣ, ಮಾಯಾಪುಷ್ಪಕ-ಈ ಮೊದಲಾದವುಗಳಲ್ಲೆವೂ ರಾಮಾಯಣದ ಕಥಾವಸ್ತುವನ್ನೇ ಆಧರಿಸಿವೆ. ನಿಜಕ್ಕೂ ಅವೆಲ್ಲವೂ ಪ್ರಥಮ ಶ್ರೇಣಿಯ ಕೃತಿಗಳು. ಅವೆಲ್ಲವೂ ಸಮಾನಕಥೆಯ ತಳಹದಿಯ ಮೇಲೆ ನಿರ್ಮಿತವಾಗಿದ್ದರೂ ಪ್ರತಿ ಪದ, ಪ್ರತಿವಾಕ್ಯ, ಮತ್ತು ಪ್ರತಿಯೊಂದು ಪ್ರಕರಣವೂ ಪ್ರಕಾಶಮಾನವಾದ ಅಭಿನವ ಶೈಲಿಯ ರಮಣೀಯತೆಯನ್ನು ಸೂಸುವ ರೀತಿಯಲ್ಲಿ ನಿರರ್ಗಳವಾದ ರಸ ಸಂಪತ್ತಿಯಿಂದ ಕೂಡಿರುತ್ತವೆ. ಪ್ರತಿಸಲವೂ ನಾವು ನಾಯಕನ ನವನವೋನ್ಮೀತವಾದ ಗುಣೋತ್ಕರ್ಷದಿಂದ ಆಕೃಷ್ಟರಾಗುತ್ತೇವೆ ಹಾಗೂ ಮತ್ತೆ ಮತ್ತೆ ಓದಿದಾಗ್ಯೂ ಅವು ಸಹೃದಯರಿಗೆ ಒಂದೇ ಸಮನಾದ ಹರ್ಷಾತಿರೇಕವನ್ನುಂಟು ಮಾಡುತ್ತವೆ. ಇದೇ ರೀತಿಯ ಇತರೆ ಉದಾಹರಣೆಗಳನ್ನು ಸಹೃದಯರು ಕಲ್ಪಿಸಿಕೊಳ್ಳಬಹುದು.

ಕಥೋನ್ಮೇಷೇ ಸಮಾನೇऽಪಿ ವಪುಷೀವ ನಿಜೈರ್ಗುಣೈಃ|
ಪ್ರಬಂಧಾಃ ಪ್ರಾಣೀನ ಇವ ಪ್ರಭಾಸಂತೇ ಪೃಥಕ್ ಪೃಥಕ್|| [೨೬]

ಇದೊಂದು ಅಂತರಶ್ಲೋಕ

ಒಂದೇ ಜಾತಿಗೆ ಸೇರಿದ ಪ್ರಾಣಿಗಳ ಶರೀರ ಒಂದೇ ರೀತಿ ಇದ್ದರೂ, ಪ್ರತಿಯೊಂದೂ ತಮ್ಮ ತಮ್ಮ ಗುಣಗಳಿಂದ ವಿಭಿನ್ನವೆನಿಸುವ ಹಾಗೆ, ಹಲವಾರು ಕಾವ್ಯ ಪ್ರಬಂಧಗಳಿಗೆ ಪ್ರಧಾನ ಕಥೆಯು ಒಂದೇ ಆಗಿದ್ದರೂ, ಪ್ರತಿಯೊಂದೂ ತಮ್ಮ ಗುಣ ವಿಶೇಷದಿಂದ ವಿಭಿನ್ನವಾಗಿ ಹೊಳೆಯುತ್ತವೆ [೨೬]

ಮಹಾಕವಿ ಪ್ರಬಂಧಾನಾಂ ಸರ್ವೇಷಾಮಸ್ತಿ ವಕ್ರತಾ|
ನೂತನೋಪಾಯನಿಷ್ಪನ್ನ ನಯವತ್ಮೋಪದೇಶಿನಾಮ್[26]

ಹೊಸ ಹೊಸ ಉಪಾಯಗಳಿಂದ ಕೂಡಿದ ನೀತಿಮಾರ್ಗದ ಉಪದೇಶವನ್ನು ನೀಡುವ ಮಹಾಕವಿಗಳ ಎಲ್ಲ ಪ್ರಬಂಧಗಳಲ್ಲೂ ವಕ್ರತೆಯು ಇರುತ್ತದೆ [26]

ಮಹಾಕವಿಗಳೆಂದರೆ ಅಪೂರ್ವವಾದದ್ದನ್ನು ಸೃಷ್ಟಿಸುವ ಕೌಶಲದಲ್ಲಿ ಅದ್ವಿತೀಯರಾದವರು.

ಅಂಥವರು ರಚಿಸಿದ ಸಕಲ ಗ್ರಂಥಗಳಲ್ಲಿ ವಕ್ರತೆ ಇರುತ್ತದೆ. ಸಕಲ ಗ್ರಂಥಗಳೆಂದರೆ ಯಾವುವು? ನವೀನ ಉಪಾಯಗಳು, ಅಂದರೆ ಸಾಮವೇ ಮೊದಲಾದ ಉಪಾಯಗಳಿಂದ ಸಿದ್ಧವಾದ ನೀತಿ ಮಾರ್ಗವನ್ನು ಉಪದೇಶಿಸುವ ಗ್ರಂಥಗಳಲ್ಲಿ ವಕ್ರತೆ ಇರುತ್ತದೆ.

ಇದರ ಮಥಿತಾರ್ಥವೆಂದರೆ, ಸತ್ಕವಿ ಕೃತಿಗಳು ಯಾವಾದರೂ ಆಗಿರಲಿ ಅವೆಲ್ಲವೂ ಬದುಕಿನ ಫಲ ಸಿದ್ಧಿಗಾಗಿ ಅಭಿನವ ಶೈಲಿಯಲ್ಲಿ ರಚಿತವಾದ ನೂತನ ನೀತಿಯನ್ನು ಅಳವಡಿಸಿಕೊಂಡಾಗ ಮಾತ್ರ ನಮ್ಮ ಗಾಢವಾದ ಆಸಕ್ತಿಯನ್ನು ಸೆಳೆಯಬಲ್ಲವು.

ಉದಾಹರಣೆಗೆ ಮುದ್ರಾರಾಕ್ಷಸ ನಾಟಕ. ಅಲ್ಲಿಯ ಪಾತ್ರಗಳು (ಚಾಣಕ್ಯ & ರಾಕ್ಷಸ) ತಮ್ಮ ಪ್ರಖರವಾದ ಬುದ್ಧಿ ಶಕ್ತಿಯಿಂದ, ನೂತನ ರೀತಿಯ ನೀತಿ ವ್ಯಾಪಾರಗಳನ್ನು ಯೋಜಿಸುವುದರಲ್ಲಿ ಪ್ರಗಲ್ಭತೆಯನ್ನು ತೋರುತ್ತಾರೆ. ತಾಪಸ ವತ್ಸರಾಜ ನಾಟಕದ ಸಂಬಂಧದಲ್ಲಿ ಮಾಡಿದ ವ್ಯಾಖ್ಯಾನ ಈ ನಾಟಕಕ್ಕೂ ಸಂಗತವಾಗುತ್ತದೆ. ಇದೇ ರೀತಿಯ ಇತರೆ ಉದಾಹರಣೆಗಳನ್ನು ಸಹೃದಯರು ತಾವೇ ಊಹಿಸಿಕೊಳ್ಳಬೇಕು.

ವಕ್ರತೋಲ್ಲೇಖ ವೈಕಲ್ಯಮಸತ್ಕಾವ್ಯೇ ವಿಲೋಕ್ಯತೇ|
ಪ್ರಬಂಧೇಷು ಕವೀಂದ್ರಾಣಾಂ ಕೀರ್ತಿ ಕಂದೇಷು ಕಿಂ ಪುನಃ [೫೭]

ಇದು ಒಂದು ಅಂತರ ಶ್ಲೋಕ

ಅಸತ್ಕಾವ್ಯದಲ್ಲಿ (ಕೆಟ್ಟಕಾವ್ಯ) ಮಾತ್ರ ವಕ್ರತೆಯ ಗೈರು ಹಾಜರಿ ಕಂಡು ಬರಬಹುದೇ ಹೊರತು, ಮಹಾಕವಿಗಳ ಅಮರಕೀರ್ತಿಯ ಅಂಕುರಗಳೆನಿಸಿರುವ ಮಹಾಕಾವ್ಯಗಳಲ್ಲಿ ಅದರ ಗೈರುಹಾಜರಿಗೆ ಎಡೆ ಎಲ್ಲಿ? [೫೭]

* * *

ಇಲ್ಲಿಗೆ ಶ್ರೀರಾಜಾನಕ ಕುಂತಕನು ವಿರಚಿಸಿದ
'ವಕ್ರೋಕ್ತಿ- ಜೀವಿತ'ವೆಂಬ ಕಾವ್ಯಾಲಂಕಾರ
ಗ್ರಂಥದಲ್ಲಿ ನಾಲ್ಕನೇ ಉನ್ಮೇಷ ಮುಗಿಯಿತು

ಅನುಬಂಧಗಳು

ಕಾರಿಕೆಗಳ ಸೂಚಿಕೆ

ಅ	ಅಧ್ಯಾಯ ಸಂಖ್ಯೆ	ಕಾರಿಕೆ ಸಂಖ್ಯೆ	ಪುಟ ಸಂಖ್ಯೆ
ಅಕ್ಲೇಶ ವ್ಯಂಜಿತಾಕೂತಂ	1	31	74
ಅತ್ರಾರೋಚಕಿನಃ ಕೇಚಿತ್	1	52	102
ಅತ್ರಾಲುಪ್ತ ವಿಸರ್ಗಾಂತ್ಯೆ	1	47	97
ಅನ್ಯದರ್ಪಯಿತುಂ ರೂಪಂ	3	59	336
ಅನ್ಯೂನ ನೂತನೋಲ್ಲೇಖ	4	8	363
ಅಪರಾ ಸಹಜಾಹಾರ್ಯ	3	2	195
ಅಪರಂ ತ್ರಿಪ್ರಕಾರಂ ಚ	3	19	256
ಅಪ್ಯಾಮೂಲಾದನಾಶಂಕ್ಯ	4	2	349
ಅಪ್ಯೇಕಕಕ್ಷ್ಯಾ ಬದ್ಧಾಃ	4	25	397
ಅಪ್ರಸ್ತುತೋಽಪಿ ವಿಚ್ಛಿತ್ತಿಂ	3	25	266
ಅಭಿಧಾಯಾಃ ಪ್ರಕಾರೌಸ್ತಃ	3	14	243
ಅಭಿಧೇಯಾಂತರತಮಃ	2	10	134
ಅಮ್ಲಾನ ಪ್ರತಿಭೋದ್ಭಿನ್ನ	1	25	66
ಅರ್ಥಯೋರೇಕ ಮುಲ್ಲೇಖಿ	3	46	314
ಅಲಂಕಾರಕಲಾಪೋ	3	61	340
ಅಲಂಕಾರ ಕೃತಾಂ ಯೇಷಾಂ	1	11	31
ಅಲಂಕಾರಸ್ಯಕವಯೋ	1	35	80
ಅಲಂಕಾರೋ ನ ರಸವತ್	3	11	214
ಅಲಂಕಾರೋಪಸಂಸ್ಕಾರ	2	12	134
ಅಲಂಕೃತಿರಲಂಕಾರ್ಯಂ	1	6	8
ಅವಿಭಾವಿತ ಸಂಸ್ಥಾನ	1	27	66

ಸಂಸ್ಕೃತ ಉದಾಹೃತ ಭಾಗಗಳ ಸೂಚಿಕೆ

ಆ

ಸಂಸ್ಕೃತ ಲಕ್ಷ್ಯ ಪದ್ಯಗಳ ಕನ್ನಡ ಅವತರಣಿಕೆಗಳ ಸೂಚಿಕೆ

ಮ

ಪಾರಿಭಾಷಿಕ ಶಬ್ದಗಳ ಸೂಚಿಕೆ

ಲ

ವ

ವಕ್ರೋಕ್ತಿ ಜೀವಿತದಲ್ಲಿ ಉಲ್ಲೇಖಗೊಂಡಿರುವ ಪ್ರಮುಖ ಕವಿಗಳು ಮತ್ತು ಕೃತಿಗಳ ಸೂಚಿಕೆ

(ಅಂಕೆಗಳು ಪುಟ ಸಂಖ್ಯೆ ಸೂಚಿಸುತ್ತವೆ)

ಕನ್ನಡ ವಕ್ರೋಕ್ತಿ ಜೀವಿತ ಕುರಿತು

ಇಲ್ಲಿಯ ತನಕ ಇದು ಕನ್ನಡಕ್ಕೆ ಅನುವಾದವಾಗಿರಲಿಲ್ಲ. ಆರ್. ಲಕ್ಷ್ಮೀನಾರಾಯಣ ಅವರು ಶ್ರಮ ಸಾಧ್ಯವಾದ ಈ ಕೆಲಸವನ್ನು ಶ್ರದ್ಧೆಯಿಂದಲೂ ಪರಿಣತಿಯಿಂದಲೂ ಪೂರೈಸಿ ಕನ್ನಡ ವಿದ್ಯಾರ್ಥಿಗಳಿಗೂ ವಿದ್ವಾಂಸರಿಗೂ ಉಪಕಾರವನ್ನು ಮಾಡಿದ್ದಾರೆ.

- ಪ್ರೊ. ಜಿ. ವೆಂಕಟಸುಬ್ಬಯ್ಯ

(ಪ್ರಜಾವಾಣಿ ವಿಮರ್ಶೆ-ನವೆಂಬರ್ - 2004)

ಸದ್ಯಕ್ಕೆ ತುಂಬ ಅಗತ್ಯವೆನಿಸಿದ ಕುಂತಕನ ವಿಚಾರಗಳನ್ನು ಯಥಾವತ್ತಾಗಿ ಕನ್ನಡಕ್ಕೆ ತಂದ ಲಕ್ಷ್ಮೀನಾರಾಯಣ ಅವರು ಸರ್ವಥಾ ಅಭಿನಂದನೀಯರು.

- ಡಾ. ಶ್ರೀರಾಮಭಟ್ಟ

(ಕನ್ನಡ ಪ್ರಭ, ಡಿಸೆಂಬರ್, 2004)

This First time translation, in a way completes the onerous work of translation of all important Sanskrit classics on poetics Kannada, Started and so ably expressed by K.Krishana Murthy

– The Hindu

ಸಂಸ್ಕೃತದ ಪ್ರಮುಖ ಅಲಂಕಾರಿಕರಲ್ಲಿ ಒಬ್ಬನಾದ ಕುಂತಕನ ಪ್ರಸಿದ್ಧ 'ವಕ್ರೋಕ್ತಿ ಜೀವಿತ'ವನ್ನು ಕನ್ನಡಕ್ಕೆ ತಂದು ಕಾವ್ಯಾಮಿಮಾಂಸೆಯ ವಿಸ್ತೃತ ಚರ್ಚೆಗೆ ಅನುವುಮಾಡಿಕೊಡುವ ಮೌಲಿಕ ಆಕರ ಗ್ರಂಥವಾಗಿ ಈ ಕೃತಿ ವಿಶಿಷ್ಟಸ್ಥಾನ ಪಡೆದಿದೆ. ಶುಷ್ಕ ಪಾಂಡಿತ್ಯ ಪ್ರದರ್ಶನದ ಎಲ್ಲಾ ಸವಾಲುಗಳನ್ನು ಸಮರ್ಥವಾಗಿ ಎದುರಿಸಿದ ಸಾರ್ಥಕ ಅನುವಾದ ಇದಾಗಿದೆ. ಅಪಾರ ಶ್ರಮ, ಪಾಂಡಿತ್ಯ, ವಿಮರ್ಶಾ ಜ್ಞಾನ ಈ ಅನುವಾದದ ಹಿಂದಿದೆ. ಪದಶಃ ಅನುವಾದವಾಗದೆ ಟಿಪ್ಪಣಿ, ವ್ಯಾಖ್ಯಾನ ಸಹಿತ ಲಕ್ಷ್ಯ ಪದ್ಯಗಳ ಕನ್ನಡಾನುವಾದವೂ ಸೇರಿರುವ ಈ ಕೃತಿ ಅತ್ಯಂತ ವೈಶಿಷ್ಟ್ಯಪೂರ್ಣ ಅನುವಾದವಾಗಿದ್ದು, ನಿಜಕ್ಕೂ ಒಂದು ಸ್ತುತ್ಯರ್ಹ ಪ್ರಯತ್ನವಾಗಿದೆ. ಮೂಲ

ಗ್ರಂಥವನ್ನು ಅರ್ಥೈಸಿಕೊಳ್ಳಲು ಅನುವಾದಕರು ಈ ಕೃತಿಯ ಹಿಂದಿ/ಇಂಗ್ಲೀಷ್ ಅನುವಾದಗಳನ್ನೂ ಗಂಭೀರವಾಗಿ ಅಭ್ಯಸಿಸಿ, ತಮ್ಮ ಅನುವಾದದ ಶ್ರೀಮಂತಿಕೆಯನ್ನು ಹೆಚ್ಚಿಸಿದ್ದಾರೆ.

ಕಾವ್ಯಾಸಕ್ತರೆಲ್ಲರಿಗೂ ಉಪಯುಕ್ತವಾಗುವ ಒಂದು ಮಹತ್ವಪೂರ್ಣ ಅನುವಾದ ಇದು ಹಾಗೂ ಕನ್ನಡದ ಸಂದರ್ಭದಲ್ಲಿ ಇದ್ದ ಕೊರತೆಯೊಂದನ್ನು ಸಮರ್ಥವಾಗಿ ಪರಿಹರಿಸಿದೆ ಎಂದರೆ ಅತಿಶಯೋಕ್ತಿಯೇನೂ ಅಲ್ಲ!

- ಡಾ. ಲಕ್ಷ್ಮೀನಾರಾಯಣ ಭಟ್. ಪಿ.,

ಮಂಗಳೂರು

ಭಾರತೀಯ ಕಾವ್ಯಮಿಮಾಂಸೆಯ ಇತಿಹಾಸದಲ್ಲಿ ಕುಂತಕನಿಗೆ ವಿಶೇಷ ಸ್ಥಾನವಿದೆ. ಸಮರ್ಪಕವಾದ ಕಾವ್ಯಸೂತ್ರವನ್ನು ಕಟ್ಟಿಕೊಟ್ಟ ಮೊದಲ ಲಾಕ್ಷಣಿಕ ಗ್ರಂಥ ಎಂಬ ಕೀರ್ತಿಗೆ ಪಾತ್ರವಾದ ಕುಂತಕನ ವಕ್ರೋಕ್ತಿ ಜೀವಿತದ ಕನ್ನಡ ಅನುವಾದ ಪ್ರಸ್ತುತ ಕೃತಿ ಶಾಸ್ತ್ರಗ್ರಂಥವನ್ನು ಅನುವಾದಿಸುವಾಗ ಭಾಷಾ ಪರಿಜ್ಞಾನವೊಂದೇ ಸಾಲದು ಪ್ರಗಾಢ ಪಾಂಡಿತ್ಯ, ಆಳವಾದ [illegible]ಭ್ಯಾಸ, ಸೃಜನಶೀಲ ಪ್ರತಿಭೆ ಮತ್ತು ಕಠಿಣ ಪರಿಶ್ರಮಗಳೆಲ್ಲವೂ ಅತ್ಯಗತ್ಯ. ಅದು ಪ್ರಸ್ತುತ ಅನುವಾದದಲ್ಲಿ ನಿಚ್ಚಳವಾಗಿ ಪ್ರತಿಬಿಂಬಿಸಿದೆ. ಶಾಸ್ತ್ರ ಗ್ರಂಥಗಳ ಬಗ್ಗೆ ಒಂದು ರೀತಿಯ ಅವಜ್ಞೆ ಕಂಡು ಬರುತ್ತಿರುವ ಸಮಕಾಲೀನ ಸಂದರ್ಭದಲ್ಲಿ ವಕ್ರೋಕ್ತಿ ಜೀವಿತವನ್ನು ಕನ್ನಡಕ್ಕೆ ತಂದಿರುವುದು ಅನುವಾದಕರ ಸಾಹಸವೇ ಸರಿ. ಇದೊಂದು ಯಶಸ್ವೀ ಸಾಹಸ. ಕನ್ನಡದ ಕಾವ್ಯ ಚಿಂತನೆಗೆ ಒಂದು ಉತ್ತಮ ಆಕರ ಗ್ರಂಥವನ್ನು ಒದಗಿಸಿಕೊಟ್ಟ ಅನುವಾದಕರ ಪ್ರಯತ್ನ ಅಭಿನಂದನೀಯ.

- ಡಾ. ಕೆ.ಆರ್. ಸಂಧ್ಯಾರೆಡ್ಡಿ

ಬೆಂಗಳೂರು

ಇದೇ ಲೇಖಕರ ಇತರ ಕೃತಿಗಳು

ಚಿನ್ನದ ಕಳಶ (ಚೀಣಾದ ಜನಪದ ಕಥೆಗಳು)	-	1979
ಮಾಸ್ತಿ - (ಸಾಹಿತ್ಯ ಅಕಾಡೆಮಿ ಪ್ರಕಟಣೆ)	-	1994
ಮೂರನೇ ಮುದ್ರಣ	-	2004
ಬರ್ಟೋಲ್ಟ್ ಬ್ರೆಕ್ಟ್ - (ಕ್ರೈಸ್ಟ್ ಕಾಲೇಜ್ ಪ್ರಕಟಣೆ)	-	1997
ರುದ್ರ ಭಟ್ಟ (ಜಗನ್ನಾಥ ವಿಜಯ ಸಂಗ್ರಹ) (ಸಾಹಿತ್ಯ ಅಕಾಡೆಮಿ ಪ್ರಕಟಣೆ)	-	
ಆಹ್ಲಾದ (ವಿಮರ್ಶಾತ್ಮಕ ಲೇಖನಗಳ ಸಂಕಲನ) (ಇಳಾ ಪ್ರಕಾಶನ)	-	2000

'ಮಾಸ್ತಿ' ಕುರಿತ ಅಭಿಪ್ರಾಯಗಳು

ಮಾಸ್ತಿಯವರು ನನಗೆ ತುಂಬ ಪ್ರಿಯರಾದ ಲೇಖಕರು. ಅವರ ಸಾಹಿತ್ಯದ ಹರವು ಬಹಳ ದೊಡ್ಡದು. ಅದನ್ನು ಇಲ್ಲಿನ 98 ಪುಟಗಳಲ್ಲಿ ಸೊಗಸಾಗಿ ಪರಿಚಯಿಸಿದ್ದೀರಿ. ಸರಳತೆಯಲ್ಲಿ ಏನೆಲ್ಲವನ್ನೂ ಸೃಷ್ಟಿಸಬಹುದೆಂಬುದಕ್ಕೆ ಮಾಸ್ತಿಯವರೇ ಸಾಕ್ಷಿ ಅವರ ಬದುಕಿನ ಕೊನೆಗೆ ನಮ್ಮ ಜನರು ಸಾಕಷ್ಟು ತೊಂದರೆ ಕೊಟ್ಟರು. ಈ ಪುಸ್ತಕ ಬರೆದು ನೀವು ಕನ್ನಡ ಜನರಿಗೆ ಉಪಕಾರ ಮಾಡಿದ್ದೀರಿ. ಸಮರ್ಥ ಪರಿಚಯಕ್ಕಾಗಿ ನಿಮಗೆ ಅಭಿನಂದನೆಗಳು.

ಹಾ. ಮಾ. ನಾಯಕ
13-12-95

This is a delightful presentation of one of the most vibrant writers in the galaxy of the great, the late Masthi. Reading masthi is one thing and to be initiated in to his philosophy, his urges and the goals

is quite another. In the able hands of the author, all these aspects have been dealt with admirably so as to endear Masti to readers hearts............. Almost the whole gamut of Masti's works has come under the cirtical scruriny of the author.

C. M. R.
The Hindu
3-2-1998

ನಿಮ್ಮ ಮಾಸ್ತಿ ಓದಿದೆ. It is fine ; No it is Fantastic......... It is a matured writing.

ನೊಸಂತಿ
4-2-95

'ಆಹ್ಲಾದ' ಕುರಿತು

ಯಾವುದೇ ಕೃತಿಯ ಲೋಪದೋಷಗಳನ್ನು ಎತ್ತಿ ತೋರಿಸುವುದನ್ನು ಮುಖ್ಯ ಮಾಡಿಕೊಳ್ಳದೆ, ಅದರ ಇತ್ಯಾತ್ಮಕ ಅಂಶಗಳನ್ನು ಎತ್ತಿ ಹಿಡಿಯುವುದರ ಮೂಲಕ ಲೇಖಕರು, ಕೃತಿಗಳ ಬಗೆಗೆ ಪ್ರೀತಿ ಮತ್ತು ಗೌರವ ಮೂಡಿಸುವ ವಾತಾವರಣವನ್ನು ಸೃಷ್ಟಿಮಾಡಿರುವುದು ಎಲ್ಲ ಬರಹಗಳ ಆರೋಗ್ಯಕಾರಿ ಲಕ್ಷಣವಾಗಿದೆ. ಯಾವುದೇ ವಿಮರ್ಶನ ನಿಲುವುಗಳನ್ನು ತಾಳುವಾಗ ಯಾವುದೇ ಪಂಥ'ದ ವಿಮರ್ಶನ ಧೋರಣೆಗಳಿಗೆ ಜೋತು ಬೀಳದೆ, ಓದುಗರನ್ನು ದಿಕ್ಕು ತಪ್ಪಿಸದೆ ಸಹೃದಯ ಓದುಗರಿಗೆ ಬೇಕಾದುದನ್ನು ಉಣಬಡಿಸುವ ರೀತಿಯಲ್ಲಿ ಎಲ್ಲ ಬರಹಗಳ ವಿನ್ಯಾಸ ರೂಪುಗೊಂಡಿದೆ.

ಡಾ. ಜಿ. ಆರ್. ತಿಪ್ಪೇಸ್ವಾಮಿ
ಕನ್ನಡ ಪ್ರಭ
22-7-2001

ಲಕ್ಷ್ಮೀನಾರಾಯಣ ಅವರು ಪ್ರತಿಯೊಂದು ಕೃತಿಯನ್ನು ಚರ್ಚಿಸುವಾಗ, ಮೊದಲಿಗೆ ಆ ಕೃತಿಯ ವಿಶಿಷ್ಟ ಅಂಶಗಳ ಬಗ್ಗೆ ತಮ್ಮ ವಿಚಾರಗಳನ್ನು ಮಂಡಿಸಿ ನಂತರ ತಮ್ಮ ಈ ವಿಚಾರಗಳ

ಸಮರ್ಥನೆಗೆ ಹಲವಾರು ನಿದರ್ಶನಗಳನ್ನು ಕೊಟ್ಟು ಅವುಗಳ ಬಗ್ಗೆ ವಿವರವಾದ ವ್ಯಾಖ್ಯಾನಗಳನ್ನು ನೀಡುತ್ತಾರೆ.

ಗಿರೀಶ ವಿ. ವಾಘ್

ಕನ್ನಡ ಪ್ರಭ

27-10-2002

ಆಹ್ಲಾದ ಶೀರ್ಷಿಕೆ ಸೂಚಿಸುವಂತೆ ಲಕ್ಷ್ಮೀನಾರಾಯಣ ಅವರು ಸಹೃದಯರಾಗಿ ಕೃತಿಗಳ ರಸ, ಸಾರಗಳನ್ನು ಸಂಗ್ರಹಿಸಿ, ಓದುಗರಿಗೆ ತನ್ನ ಆನಂದವನ್ನು ಹಂಚುತ್ತಾರೆ. ಜತೆಗೆಯೇ ಮೌಲ್ಯಮಾಪನ ಮಾಡುತ್ತ ಸರಿ ತಪ್ಪುಗಳನ್ನು ಕೂಡ ಗುರುತಿಸುತ್ತಾರೆ.................. ಇಂಥ ಅರಿವನ್ನು ಹೆಚ್ಚಿಸುವ ಪ್ರಬಂಧಗಳು ಈ ಸಂಕಲನದಲ್ಲಿ ಸೇರಿರುವುದರಿಂದ ಇದು ಕನ್ನಡದ ವಿಮರ್ಶನ ಸಾಹಿತ್ಯಕ್ಕೆ ಉತ್ತಮ ಕೊಡುಗೆಯಾಗಿದೆ.

ತರಂಗ

22-8-2002



ಸುಮಾರು ಒಂದೂವರೆ ಸಾವಿರ ವರ್ಷಗಳಿಗೂ ಮೀರಿದ ಸುದೀರ್ಘವಾದ ಇತಿಹಾಸವಿರುವ ಭಾರತೀಯ ಕಾವ್ಯಚಿಂತನೆಯ ಸಂದರ್ಭದಲ್ಲಿ 'ವಕ್ರೋಕ್ತಿ ಜೀವಿತ' ಎಂಬ ಕೃತಿಯನ್ನು ಬರೆದ ಕುಂತಕನಿಗೆ ವಿಶಿಷ್ಟವಾದ ಸ್ಥಾನವಿದೆ. ನಿಜವಾದ ಸಾಹಿತ್ಯ ಚರ್ಚೆ ನಡೆಯಬೇಕಾದದ್ದು ಈಗಾಗಲೆ ಇರುವ ಸಾಹಿತ್ಯ ಪರಂಪರೆಯೊಂದರ ಅರಿವು ಮತ್ತು ಹಿನ್ನೆಲೆಯಲ್ಲಿ – ಎಂಬ ಬಹುಮುಖ್ಯವಾದ ಸಂಗತಿಯ ಬಗೆಗೆ, ಬಹುಮಟ್ಟಿಗೆ ಅವಜ್ಞೆಯನ್ನು ತಾಳಿದ ಆಲಂಕಾರಿಕರ ನಡುವೆ, ಆನಂದವರ್ಧನ ಮತ್ತು ಅಭಿನವಗುಪ್ತರನ್ನು ಬಿಟ್ಟರೆ, ಅವರೆಲ್ಲರಿಗಿಂತ ಭಿನ್ನವಾದ ನಿಲುವಿನಲ್ಲಿ ನಿಂತು, ಕುಂತಕ ತನ್ನ ಕೃತಿ ರಚನೆಯ ಸಂದರ್ಭದಲ್ಲಿ, ತನಗೆ ಹಿಂದಿನ ಪ್ರಾಚೀನ ಕಾವ್ಯ ಪರಂಪರೆಯನ್ನು ಇಂದಿನ ಅರ್ಥದ ಪ್ರಾಯೋಗಿಕ ವಿಮರ್ಶೆಗೆ ಗುರಿಪಡಿಸುವ ತನ್ನ ಸೂಕ್ಷ್ಮ ಸಂವೇದನಾಶೀಲತೆಯಿಂದ ನಮ್ಮ ವರ್ತಮಾನಕ್ಕೆ ಅತ್ಯಂತ ಪ್ರಸ್ತುತನಾಗುತ್ತಾನೆ. ಅಷ್ಟೇ ಅಲ್ಲ; ಅದುವರೆಗಿನ ಸಹೃದಯ ಕೇಂದ್ರಿತ ಕಾವ್ಯಾನುಭವದ ಚರ್ಚೆಯನ್ನು ಕವಿ ಕೇಂದ್ರಿತ ನೆಲೆಗೆ ತಂದು, ಕವಿ ಪ್ರತಿಭೆಯಲ್ಲಿ ಕಾವ್ಯವು ಹೇಗೆ ರೂಪುಗೊಳ್ಳುವುದೆಂಬ ಸೃಜನ ಪ್ರಕ್ರಿಯೆಯನ್ನು 'ವಕ್ರೋಕ್ತಿ ಜೀವಿತ'ದ ಪುಟ ಪುಟದಲ್ಲೂ ವಿವರಿಸುತ್ತ, ಆ ಮೂಲಕ ಉಳಿದೆಲ್ಲರಿಗಿಂತ ಹೆಚ್ಚು ಸಮರ್ಪಕವಾದ ಕಾವ್ಯ ಸೂತ್ರವೊಂದನ್ನು ಕಟ್ಟಿಕೊಟ್ಟ ಮೊದಲ ಲಾಕ್ಷಣಿಕನಾಗಿದ್ದಾನೆ.

'ಜತೆಗೆ, ಸ್ವಭಾವೋಕ್ತಿ, ಮಾರ್ಗ, ಗುಣ, ರಸಾದಿ-ಇಂಥ ಪರಿಕಲ್ಪನೆಗಳನ್ನು ಮರು ವ್ಯಾಖ್ಯಾನಕ್ಕೆ ಗುರಿಪಡಿಸುತ್ತ ವಕ್ರೋಕ್ತಿ ಸಿದ್ಧಾಂತವನ್ನು ಪ್ರತಿಪಾದಿಸುವ ಕುಂತಕನ ಚಿಂತನೆಗಳು ಹೊಚ್ಚ ಹೊಸವಾಗಿವೆ.'

ಇಂಥ ಮೌಲಿಕವಾದ ಕೃತಿಯನ್ನು ಮೊಟ್ಟ ಮೊದಲ ಬಾರಿಗೆ ತಕ್ಕ ಶ್ರದ್ಧೆ, ಶ್ರಮ ಹಾಗೂ ಅಧ್ಯಯನಗಳಿಂದ ಕನ್ನಡಕ್ಕೆ ತಂದ ಡಾ. ಆರ್. ಲಕ್ಷ್ಮೀನಾರಾಯಣ ಅವರು, ಈ ಕ್ಷೇತ್ರದಲ್ಲಿ ಈಗಾಗಲೆ ಕೆಲಸ ಮಾಡಿ ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗಿರುವ, ದಿವಂಗತ ಡಾ. ಕೆ. ಕೃಷ್ಣಮೂರ್ತಿಯವರ ಪರಂಪರೆಯನ್ನು ಸಮರ್ಥವಾಗಿ ಮುಂದುವರಿಸಿರುವುದರ ಜತೆಗೆ, ಕನ್ನಡದ ಕಾವ್ಯ ಚಿಂತನೆಗೆ ಅತ್ಯಗತ್ಯವಾದ ಆಕರ ಗ್ರಂಥವೊಂದನ್ನು ಒದಗಿಸಿದ್ದಾರೆ. ಡಾ. ಆರ್. ಲಕ್ಷ್ಮೀನಾರಾಯಣ ಅವರ ಈ ವಿದ್ವತ್ ಸಾಹಸ ಅತ್ಯಂತ ಅಭಿನಂದನೀಯವಾದದ್ದು.

-ಜಿ. ಎಸ್. ಶಿವರುದ್ರಪ್ಪ

ಸಂವಹನ
೧೨/೧ಎ, ಈವನಿಂಗ್ ಬಜಾರ್ ಹಿಂಭಾಗ
ಶಿವರಾಂಪೇಟೆ, ಮೈಸೂರು. ೫೭೦೦೦೧